ಶ್ರೀರಾಮಕಥಾಮಂಜರಿ

(ಸಂಪೂರ್ಣರಾಮಾಯಣ)

- ವಿದ್ವಾನ್ ಎನ್. ರಂಗನಾಥಶರ್ಮಾ

ರಾಮಾಯಣ ಪ್ರಕಾಶನ ಸಮಿತಿ
ನರಸಿಂಹರಾಜಕಾಲೊನಿ, ಬೆಂಗಳೂರು - 560 019

|| ಶ್ರೀಃ ||

ಶ್ರೀರಾಮಕಥಾಮಂಜರಿ

ವಿದ್ವಾನ್ ಎನ್. ರಂಗನಾಥಶರ್ಮಾ

ಪ್ರಕಾಶಕರು :

ರಾಮಾಯಣ ಪ್ರಕಾಶನ ಸಮಿತಿ

ನರಸಿಂಹರಾಜಕಾಲೋನಿ, ಬೆಂಗಳೂರು–560 019

SREE RAMAKATAMANJARI - By **Vidwan N. Ranganatha Sharma,** Published by **Ramayana Prakashana Samithi,** Narasimharaja Colony, Bangalore-560 019

© ಲೇಖಕರದು

ಪುಟಗಳು : 524

ಮೊದಲ ಮುದ್ರಣ : ಅಕ್ಟೋಬರ್ 2000

ಬೆಲೆ : **ರೂ. 160/–**

ಪ್ರಕಾಶಕರು :
ರಾಮಾಯಣ ಪ್ರಕಾಶನ ಸಮಿತಿ
ನರಸಿಂಹರಾಜ ಕಾಲೋನಿ,
ಬೆಂಗಳೂರು–560 019

ಮುದ್ರಕರು :
ಪರಿಮಳ ಮುದ್ರಣಾಲಯ
ಹನುಮಂತನಗರ, ಬೆಂಗಳೂರು–19
ದೂರವಾಣಿ : 6525516

ನಿವೇದನೆ

ಶ್ರೀರಾಮ–ಸೀತೆ–ರಾಮಾಯಣ ಈ ಶಬ್ದಗಳು ಕಿವಿಗೆ ಬೀಳುತ್ತಿದ್ದಂತೆಯೇ ಬಹು ಮಂದಿ ಭಾರತೀಯರ ಮನಸ್ಸು ಭಕ್ತಿಯ ಸಂವೇದನೆಗೆ ಒಳಗಾಗುತ್ತದೆ. ಅಷ್ಟೇ ಅಲ್ಲ! ರಾಮ–ರಾಮಾಯಣಗಳ ಹೆಸರು ಭಾರತೀಯರ ದೈನಂದಿನ ವ್ಯವಹಾರಗಳಲ್ಲಿ ಕೂಡ ಹಾಸುಹೊಕ್ಕಾಗಿ ಸೇರಿಹೋಗಿದೆ. ಅನೇಕ ಮಂದಿ ಭಾವುಕರು ಆಗಿಂದಾಗ್ಯೆ ರಾಮಸ್ಮರಣೆ ಮಾಡುತ್ತಿರುವುದುಂಟು. ಯಾವುದೋ ಉದ್ವೇಗದ ಸ್ಥಿತಿ ಕಳೆದು ಮನಸ್ಸಿಗೆ ನಿರಾಳವೆನಿಸಿದಾಗ ರಾಮನ ಸ್ಮರಣೆ ಉಂಟಾಗುತ್ತದೆ. ಅತಿರೇಕ–ಅಚಾತುರ್ಯದ ಘಟನೆಗಳ ವಿಷಯ ತಿಳಿದಾಗ ''ರಾಮ! ರಾಮ!'' ಹೀಗೂ ಉಂಟೇ? ಎಂದುಕೊಳ್ಳುವುದು; ಮಕ್ಕಳು ಯಾವುದಾದರೂ ವಿಷಯಕ್ಕಾಗಿ ಒಂದೇ ಸಮನೆ ರಚ್ಚೆ ಹಿಡಿದಾಗ ತಾಯಿಯು ''ನಿಂದೊಳ್ಳೆ ರಾಮಾಯಣವಾಯಿತಲ್ಲ?'' ಎನ್ನುವುದು; ಯಾರಾದರೂ ತನ್ನ ಗೋಳಿನ ಕತೆಯ ಕೊರೆತವನ್ನು ಪ್ರಾರಂಭಿಸಿದಾಗ ''ನಿನ್ನ ರಾಮಾಯಣ ಯಾವಾಗಲೂ ಇದ್ದದ್ದೇ ಬಿಡು'' ಎಂದು ಮಾತಿಗೆ ಮುಕ್ತಾಯ ಸೂಚಿಸುವುದು ಇವೆಲ್ಲವೂ ಜನಮನದ ಮೇಲೆ ಮೂಡಿಸಿರುವ ಪ್ರಭಾವದ ದ್ಯೋತಕಗಳು.

ರಾಮಾಯಣದ ಜನಪ್ರಿಯತೆ ಭಾರತಕ್ಕಷ್ಟೇ ಸೀಮಿತವಲ್ಲ. ಅದು ವಿಶ್ವವ್ಯಾಪಿ ಯಾದುದು. ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಲ್ಲಿ ರಾಮಾಯಣ ಮುದ್ರಣಗೊಂಡಿದೆ. ಆಗ್ನೇಯ ಏಷ್ಯಾದಲ್ಲಿಯಂತೂ ಕಥಾನಕ–ಚಿತ್ರ–ರೂಪಕ–ನಾಟಕ–ಪುರಾತನ ಶಿಲ್ಪಗಳಲ್ಲಿ ರಾಮಾಯಣವು ಪಡೆದಿರುವ ಸ್ಥಾನ ತುಂಬಾ ಹಿರಿದಾದುದು.

ರಾಮಾಯಣವನ್ನು ವಾಲ್ಮೀಕಿ ಮಹರ್ಷಿಗಳ ಮಹಾಕಾವ್ಯ ಕಥಾನಕದ ಆಧಾರದಿಂದ ರಚಿಸಿದ ಕವಿಗಳ ಸಂಖ್ಯೆ ಬಹು ದೊಡ್ಡದು. 14ನೇ ಶತಮಾನದ ಕನ್ನಡದ ಖ್ಯಾತ ಕವಿ ಕುಮಾರವ್ಯಾಸನು ಅದನ್ನು ಅರ್ಥಪೂರ್ಣ ಅಲಂಕಾರಿಕ ಭಾಷೆಯಲ್ಲಿ :– ''ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ! ತಿಂತಿಣಿಯ ರಘುವರ ಚರಿತದಲಿ ಕಾಲಿಡಲು ತೆರಪಿಲ್ಲ''........ (ಕು.ವ್ಯಾ. ಭಾರತ 1–17) ಭೂಮಂಡಲವನ್ನು ಹೊತ್ತುಕೊಂಡಿರುವ ಆದಿಶೇಷನೇ ''ರಾಮಾಯಣದ ಕವಿಗಳ ಭಾರ ಹೆಚ್ಚುತ್ತಿರುವುದರಿಂದ ಭೂಭಾರವನ್ನು ಹೊರಲು ತಿಣುಕಾಡುತ್ತಿದ್ದಾನೆ''. ಅವನು ಈ ಮಾತು ಹೇಳಿ 600

ವರ್ಷಗಳೇ ಸಂದು ಹೋಗಿವೆ. ಅಲ್ಲಿಂದ ಈಚೆಗೆ ಆ ಭಾರವು ಮತ್ತಷ್ಟು ಹೆಚ್ಚಿದೆ. ಹೆಚ್ಚುತ್ತಲೇ ಇದೆ. ನಮ್ಮ ಸಂಸ್ಥೆಯೂ ಸಹ ಕಳೆದ ಸುಮಾರು 35 ವರ್ಷಗಳಿಂದ ಇದಕ್ಕೆ ತನ್ನ ಕೊಡುಗೆಯನ್ನು ಸಲ್ಲಿಸುತ್ತಲೇ ಬಂದಿದೆ.

ನಮ್ಮ ಈ ಕಾರ್ಯಕ್ಕೆ ಮುಖ್ಯ ಪ್ರೇರಕರು **ದಿ|| ಪೂಜ್ಯ ಡಿ.ವಿ.ಜಿ.ಯವರು.** ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವನ್ನು ಪ್ರಕಟಿಸುವುದು ಸ್ತುತ್ಯವೂ, ಅಗತ್ಯವೂ ಆದ ಕೆಲಸೆಂದು ಪ್ರೇರಣೆ ನೀಡಿದ ಅವರು ಅನುವಾದ ಕಾರ್ಯಕ್ಕೆ **ವಿದ್ವಾನ್ ರಂಗನಾಥ ಶರ್ಮಾರ** ಹೆಸರನ್ನು ಸೂಚಿಸಿದರು. ಆ ಕಾಲಕ್ಕೆ (1965) ಮೂಲ ಸಂಸ್ಕೃತ ಶ್ಲೋಕ ಸಹಿತವಾದ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಲಭ್ಯವೇ ಇರಲಿಲ್ಲ.

ವಿದ್ವಾನ್ ರಂಗನಾಥ ಶರ್ಮಾರ ಅನುವಾದ – ಪೂಜ್ಯ ಡಿ.ವಿ.ಜಿ.ಯವರ ಮುನ್ನುಡಿ ಸಹಿತವಾದ ರಾಮಾಯಣದ ಸುಂದರಕಾಂಡವನ್ನು ಮೊದಲಿಗೆ ಪ್ರಕಟಿಸಿದೆವು. ಅದು ಎಷ್ಟೊಂದು ಜನಪ್ರಿಯವಾಯಿತೆಂದರೆ ಸಮಗ್ರ ವಾಲ್ಮೀಕಿ ರಾಮಾಯಣವನ್ನೇ 8 ಸಂಪುಟಗಳಲ್ಲಿ ಪ್ರಕಟಿಸಬೇಕಾಯಿತಲ್ಲದೆ ಪ್ರತಿಗಳು ಬೇಗ–ಬೇಗ ಖರ್ಚಾಗುತ್ತ ಇದೀಗ **5ನೇ ಮುದ್ರಣವನ್ನು ಕಂಡಿವೆ.**

ಇದೀಗ ನಾವು ಹೊರತರುತ್ತಿರುವ **''ಶ್ರೀರಾಮಕಥಾಮಂಜರಿ''** ಗದ್ಯಗ್ರಂಥ ಕೂಡಾ **ವಿದ್ವಾನ್ ರಂಗನಾಥ ಶರ್ಮಾರ** ಸಮರ್ಥ ಲೇಖನಿಯಿಂದಲೇ ರಚಿತವಾಗಿದೆ. ಸಂಸ್ಕೃತ ಮತ್ತು ಕನ್ನಡ ಹಾಗೂ ವ್ಯಾಕರಣ – ಅಲಂಕಾರಾದಿ ಶಾಸ್ತ್ರಗಳಲ್ಲಿ ಶರ್ಮಾ ಅವರದು ತಲಸ್ಪರ್ಶಿಯಾದ ಪಾಂಡಿತ್ಯ. ಆದ್ದರಿಂದಲೇ ಇಂದಿನ ಬರಹಗಾರರಲ್ಲಿ ಅವರು ಸವ್ಯಸಾಚಿಯಂತೆ ಮಿಂಚುತ್ತಿದ್ದಾರೆ. ವಿವಿಧ ವಿಷಯಗಳ ಮೇಲೆ ಉಪಯುಕ್ತವಾದ ಹಲವು ಗ್ರಂಥಗಳನ್ನು ಬಿಡಿಲೇಖನಗಳನ್ನೂ ಬರೆಯುತ್ತಿರುವ **ಶ್ರೀ ಶರ್ಮಾ** ಅವರು ಪಂಡಿತ–ಪಾಮರ ವರ್ಗಗಳೆರಡರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ.

ದಿ|| ಪ್ರೊ|| ಎ. ಆರ್. ಕೃಷ್ಣಶಾಸ್ತ್ರಿಗಳು ಮಹಾಭಾರತವನ್ನು ಗದ್ಯರೂಪದಲ್ಲಿ ರಚಿಸಿ ''ವಚನಭಾರತ'' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದು ಅದು ಬಹಳಷ್ಟು ಜನಮೆಚ್ಚುಗೆ ಗಳಿಸಿದೆ. ಈಚೆಗೆ ಒಮ್ಮೆ ಆ ಪುಸ್ತಕವನ್ನು ಓದುತ್ತಿದ್ದಾಗ ''ರಾಮಾಯಣವನ್ನು ಇದೇ ರೀತಿ ಗದ್ಯ ಕಥಾರೂಪದಲ್ಲಿ ಪ್ರಕಟಿಸಬಾರದೇಕೆ?'' ಎಂಬ ವಿಷಯ ನನ್ನ ಮನಸ್ಸಿಗೆ ಹೊಳೆಯಿತು. ಕಥೆ–ಕಾದಂಬರಿಗಳಿಗೆ ಪ್ರಾಶಸ್ತ್ಯವಿರುವ ಕಾಲ ಇದು. ಯಾವ ಅಡೆ–ತಡೆ ಇಲ್ಲದೆ ಸಲೀಸಾಗಿ ಓದಿಕೊಂಡು ಹೋಗುತ್ತ ಕಥೆಯ ರಸಾಸ್ವಾದನೆ ಮಾಡಬಯಸುವ ಬಹು ಮಂದಿ ಓದುಗರ ಆಶಯಕ್ಕೆ ಅನುಗುಣವಾಗಿ ರಚಿತವಾಗಿದೆ ಈ **''ಶ್ರೀರಾಮಕಥಾಮಂಜರಿ''.** ರಾಮಾಯಣದ ದಿವ್ಯರಸವನ್ನು ನರ–ನಾಡಿಗಳಲ್ಲಿ ತುಂಬಿಸಿಕೊಂಡಿರುವ ಶ್ರೀರಂಗನಾಥ **ಶರ್ಮಾರು ಎಲ್ಲಿಯೂ ಮೂಲಘಟನೆಗಳಿಗೆ ಲೋಪಬಾರದಂತೆ** – ಕಾವ್ಯದ ಸೌರಭಕ್ಕೆ ಭಂಗವುಂಟಾಗದ **ರೀತಿಯಲ್ಲಿ** ಕಥಾನಕವನ್ನು ಜಾಣ್ಮೆಯಿಂದ ಹೆಣೆದುಕೊಂಡು ಹೋಗಿದ್ದಾರೆ.

ರಾಮಾಯಣವನ್ನು ಅನುವಾದ ಸಹಿತ ಪ್ರಕಟಿಸಿದಾಗ ಪ್ರತಿಯೊಂದು ಕಾಂಡಕ್ಕೂ ಪೂಜ್ಯ ಡಿ.ವಿ.ಜಿ.ಯವರ ಅನುಭವ–ಅಧ್ಯಯನಪೂರ್ಣ–ಸಾರಭೂತ ಮುನ್ನುಡಿಯನ್ನು ಪಡೆಯುವ ಭಾಗ್ಯ ನಮ್ಮದಾಗಿತ್ತು, ಆ ಮುನ್ನುಡಿಗಳು ಎಷ್ಟು ಮಟ್ಟಿಗೆ ಗ್ರಂಥದ ತೂಕವನ್ನು ಹೆಚ್ಚಿಸಿ ಜನಪ್ರಿಯತೆ ತಂದುಕೊಟ್ಟಿವೆಯೆಂಬುದು ಓದುಗರಿಗೆ ತಿಳಿದೇ ಇದೆ. ಆ ಮಹಾದಿಗ್ಗಜ ಡಿ.ವಿ.ಜಿ.ಯವರ ಪೂರ್ಣಪ್ರಶಂಸೆಗೆ ಪಾತ್ರರಾದ ಶ್ರೀರಂಗನಾಥ ಶರ್ಮರು ಈಗ ತಾವು ರಚಿಸಿರುವ ಈ ಶ್ರೀರಾಮಕಥಾಮಂಜರಿಗೆ ವಿಸ್ತಾರವಾದ ಪ್ರಸ್ತಾವನೆಯನ್ನೂ ಬರೆದುಕೊಟ್ಟು, ವಾಚಕ ವೃಂದಕ್ಕೆ ಮಹೋಪಕಾರ ಮಾಡಿದ್ದಾರೆ. ಶ್ರೀರಾಮಕಥಾಮಂಜರಿಯನ್ನು ಓದುವವರು ತಪ್ಪದೆ ಪ್ರಸ್ತಾವನೆಯನ್ನು ಓದಿಕೊಳ್ಳುವುದು ಅಗತ್ಯ. ಪ್ರಸ್ತಾವನೆಯಲ್ಲಿ ಅನೇಕ ಸ್ವಾರಸ್ಯಗಳನ್ನು ಎಳೆ–ಎಳೆಯಾಗಿ ತೆರೆದಿಡಲಾಗಿದೆ ಮತ್ತು ಮುಖ್ಯವಾಗಿ ಹಲವು ಕುಹಕ ಟೀಕೆ–ಸಂದೇಹಗಳಿಗೆ ಸೂಕ್ತ ಸಮಾಧಾನಗಳು ಅಲ್ಲಿ ದೊರೆಯುತ್ತವೆ.

1965ರಲ್ಲಿ ಮೊಟ್ಟಮೊದಲಿಗೆ ನಾವು ಸುಂದರಕಾಂಡವನ್ನು ಹೊರತಂದಾಗ ನಾಡಿನ ಜನಸಮುದಾಯದ ಮುಖವಾಣಿಯಂತಿರುವ ತಾಯಿನಾಡು, ಜನವಾಣಿ, ವಾರ್ತಾ ಸಾಪ್ತಾಹಿಕ, ಪ್ರಜಾಮತ, ಸಂಯುಕ್ತಕರ್ನಾಟಕ, ವಿಕ್ರಮ ಕನ್ನಡ ಪತ್ರಿಕೆಗಳು, ದಿ ಹಿಂದೂ, ಸಂಡೇ ಸ್ಟ್ಯಾಂಡರ್ಡ್, ಡೆಕ್ಕನ್ ಹೆರಾಲ್ಡ್ ಆಂಗ್ಲ ಪತ್ರಿಕೆಗಳಲ್ಲದೆ ಹರಿಹರಪುರ ಶ್ರೀಮಠಾಧೀಶ ಶ್ರೀ ಶ್ರೀ ಸ್ವಾಮೀಜಿಯವರೇ ಮೊದಲಾದ ರಾಮಾಯಣದ ಅಭಿಜ್ಞರೂ ಸಹ ಪುಸ್ತಕದ ವಿನ್ಯಾಸ – ಶ್ರೀ ರಂಗನಾಥ ಶರ್ಮರ ಸರಳ–ಸುಂದರ ಸಾರಗರ್ಭಿತ ಅನುವಾದ ಶೈಲಿ–ಪೂಜ್ಯ ಡಿ.ವಿ.ಜಿ.ಯವರ ಮುನ್ನುಡಿಯ ವೈಖರಿ, ಗ್ರಂಥದ ಬೆಲೆ ಮುಂತಾದ ಬಗ್ಗೆ ಮೆಚ್ಚುಗೆ ಸೂಚಿಸಿ ಸಮಗ್ರ ರಾಮಾಯಣವು ಇದೇ ರೀತಿಯಲ್ಲಿ ಅನುವಾದ ಸಹಿತ ನಮ್ಮಿಂದ ಪ್ರಕಟಿಸಲ್ಪಟ್ಟು ಜನರಿಗೆ ಲಭ್ಯವಾಗಬೇಕೆಂದು ಆಶಿಸಿದ್ದರು. ಶ್ರೀರಾಮಚಂದ್ರನ ಕೃಪೆಯಿಂದ ನಾವು ಮಹಾಜನರ ಈ ಆಶಯವನ್ನು ಪೂರ್ಣಗೊಳಿಸಿದ್ದೇವೆ ಮತ್ತೆ ಇದುವರೆಗಿನ ಅವಧಿಯಲ್ಲಿ ಶ್ರೀ ಭಾಗವತದ 10–11–12ನೇ ಸ್ಕಂಧಗಳು – ಭಾಗವತ ಮಹಾತ್ಮ್ಯಗಳನ್ನು ಶ್ರೀ ಶರ್ಮರ ಅನುವಾದ ಸಹಿತ ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದೇವೆ. **ಭಗವನ್ನಾಮಾವಳಿ, ಸಂಧ್ಯಾವಂದನೆ, ವಿಷ್ಣುಸಹಸ್ರನಾಮ, ಲಲಿತಾನಾಮಾವಳಿ, ಪವಮಾನಸೂಕ್ತ (ಹೋಮವಿಧಿ ಸಹಿತ) ಅಷ್ಟೋತ್ತರ ಶತನಾಮಾವಳಿ, ವಾಲಿವಧಾ ಪ್ರಸಂಗ, ಧರ್ಮಾವತಾರ ಶ್ರೀ ರಾಮಚಂದ್ರ,** ಹೀಗೆ ಅಗತ್ಯವಿರುವ ಹಲವು ಪ್ರಕಟಣೆಗಳನ್ನು ನಿರ್ವಹಿಸಿದ್ದೇವೆ. ಧರ್ಮಾಭಿಮಾನೀ ಜನತೆಯ ಉಪಯೋಗಕ್ಕಾಗಿ ಪುಸ್ತಕ ಭಂಡಾರದ ಸೌಕರ್ಯವನ್ನೂ ಕಲ್ಪಿಸಲಾಗಿದೆ.

ಈ ಸಂಸ್ಥೆಯು ಪ್ರಾರಂಭವಾದಾಗಿನಿಂದ ಪ್ರತಿವರ್ಷವೂ **ಶ್ರೀ ರಾಮೋತ್ಸವವನ್ನು** ವೈಶಿಷ್ಟ್ಯಪೂರ್ಣವಾಗಿ ಆಚರಿಸುತ್ತ **ರಜತ ಮಹೋತ್ಸವ – ಸುವರ್ಣ ಮಹೋತ್ಸವಗಳನ್ನು** ನಡೆಸಿ **1998ರಲ್ಲಿ ವಜ್ರ ಮಹೋತ್ಸವವನ್ನು** ಅತ್ಯಂತ ಆಕರ್ಷಕವಾಗಿ ದೊಡ್ಡ

ಪ್ರಮಾಣದಲ್ಲಿ ಉಪಯುಕ್ತ ಕಾರ್ಯಕ್ರಮಗಳೊಡನೆ ಪೂರೈಸಿದ ವಿಷಯ ಎಲ್ಲರಿಗೂ ತಿಳಿದೇ ಇದೆ.

ಈ ಶ್ರೀರಾಮಕಥಾಮಂಜರಿಯನ್ನು ಪ್ರಕಟಿಸಲು ನಮಗೆ ಅವಕಾಶ ಕಲ್ಪಿಸಿಕೊಟ್ಟ ಬರಹಗಾರ **ವಿದ್ವಾನ್ ಶ್ರೀ ರಂಗನಾಥಶರ್ಮಾರಿಗೆ ನಮ್ಮ ಹಾರ್ದಿಕ ಗೌರವಪೂರ್ಣ ಅಭಿವಂದನೆಗಳನ್ನು ಸಮರ್ಪಿಸುತ್ತಿದ್ದೇವೆ.** ಪುಸ್ತಕವನ್ನು ಅಚ್ಚುಕಟ್ಟಾದ ವಿನ್ಯಾಸದೊಂದಿಗೆ ಮುದ್ರಿಸಿಕೊಟ್ಟಿರುವ **ಪರಿಮಳ ಮುದ್ರಣಾಲಯದ ಶ್ರೀ ಚಿದಂಬರಯ್ಯನವರು** ಮತ್ತು **ಮಕ್ಕಳಿಗೆ** ನಮ್ಮ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ. **ಗ್ರಂಥದ ಮುದ್ರಣಕ್ಕೆ ಸಹಾಯ ಮಾಡಿದ ಮಹನೀಯರೆಲ್ಲರಿಗೂ** ಶ್ರೀ ಸೀತಾರಾಮಚಂದ್ರರು ಆಯುರಾರೋಗ್ಯ ಐಶ್ವರ್ಯವನ್ನು ನೀಡಿ ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

ಸಹೃದಯರಾದ ವಾಚಕರು ಎಂದಿನಂತೆ ನಮ್ಮ ಈ ನೂತನ ಪ್ರಕಟಣೆಯನ್ನು ಕೊಂಡು ಪ್ರೋತ್ಸಾಹಿಸುವರೆಂದು ನಂಬಿ ಅಭಿನಂದನೆ ಸಲ್ಲಿಸುತ್ತಿದ್ದೇವೆ.

ಎಸ್. ಎನ್. ಮೂರ್ತಿ
ಅಧ್ಯಕ್ಷರು
ಶ್ರೀ ನರಸಿಂಹರಾಜಕಾಲೋನಿ ಅಸೋಸಿಯೇಷನ್
ನರಸಿಂಹರಾಜಕಾಲೋನಿ, ಬೆಂಗಳೂರು–560 019
ದೂರವಾಣಿ : 6520231

ಬೆಂಗಳೂರು
ದಿನಾಂಕ : 4.10.2000

‘‘ಶ್ರೀರಾಮಕಥಾಮಂಜರಿ’’ ಮುದ್ರಣಕ್ಕೆ ಸಹಾಯ ಮಾಡಿದ ಭಕ್ತಾದಿಗಳು

	ರೂ.
ಶ್ರೀಮತಿ ಮಹಾಲಕ್ಷ್ಮಮ್ಮ, ಶ್ರೀ ಎಸ್ ಎನ್ ಮೂರ್ತಿ, ಬೆಂಗಳೂರು	5,000.00
ಶ್ರೀಮತಿ ಅನಸೂಯ, ಡಾ|| ಹೆಚ್. ಕೆ. ನರಹರಿ, ಬೆಂಗಳೂರು	5,000.00
ಶ್ರೀಮತಿ ಸಂಧ್ಯಾ, ಶ್ರೀ ಎನ್. ಮಂಜುನಾಥ್, ಬೆಂಗಳೂರು	5,000.00
ಶ್ರೀಮತಿ ಶಾರದ, ಎಸ್. ಶ್ರೀನಿವಾಸರಾವ್, ಬೆಂಗಳೂರು	5,000.00
ಗಂಗವಾರದ ಶ್ರೀ ಅಶ್ವತ್ಥನಾರಾಯಣರಾವ್, ಬೆಂಗಳೂರು	3,000.00
ಶ್ರೀಮತಿ ಶಾಂತ, ಶ್ರೀ ಬಿ. ಎಸ್ ನಾರಾಯಣರಾವ್, ಬೆಂಗಳೂರು	1,000.00
ಶ್ರೀಮತಿ ಅಹಲ್ಯಾ, ಶ್ರೀ ಜಿ. ವಿ. ಸೋಮಶೇಖರ್, ಬೆಂಗಳೂರು	1,000.00
ಶ್ರೀಮತಿ ಚಂದ್ರಕಲಾ, ಶ್ರೀ ಕೆ. ಎನ್. ವೆಂಕಟನಾರಾಯಣ, ಬೆಂಗಳೂರು	1,000.00
ಶ್ರೀಮತಿ ಉಷಾ, ಶ್ರೀ ಎಸ್. ಎನ್. ಉಮಾಶಂಕರ್, ಬೆಂಗಳೂರು	1,000.00
ಶ್ರೀಮತಿ ಲಲಿತಮ್ಮ, ಶ್ರೀ ಎ. ಎಸ್. ನಂಜುಂಡರಾವ್, ಬೆಂಗಳೂರು	1,000.00
ಶ್ರೀಮತಿ ರಮಾ, ಶ್ರೀ ಪಿ. ಎ. ಮಾಧವರಾವ್, ಬೆಂಗಳೂರು	1,000.00
ಶ್ರೀಮತಿ ಪುಟ್ಟಗೌರಮ್ಮ, ಶ್ರೀ ಹೆಚ್. ಎಸ್. ಶಂಕರನಾರಾಯಣ್, ಬೆಂಗಳೂರು	1,000.00
ಶ್ರೀಮತಿ ಲಕ್ಷ್ಮೀ, ಶ್ರೀ ಹೆಚ್. ಎಸ್. ಶಿವಶಂಕರ್, ಬೆಂಗಳೂರು	1,000.00
ಶ್ರೀಮತಿ ಶಶಿಕಲಾ, ಶ್ರೀ ಎಸ್. ವಾಸುದೇವಮೂರ್ತಿ, ವಾಷಿಂಗ್‌ಟನ್ ಡಿ.ಸಿ.	1,000.00
ಶ್ರೀಮತಿ ಸರ್ವಮಂಗಳ, ಶ್ರೀ ಮೈಸೂರು ಎನ್. ಆರ್. ಕುಮಾರ್	1,000.00
ಶ್ರೀಮತಿ ಜಯಲಕ್ಷ್ಮೀ, ಡಾ|| ಎನ್. ಎಸ್. ಸತ್ಯನಾರಾಯಣ, ಬೆಂಗಳೂರು	500.00
ಶ್ರೀಮತಿ ಪ್ರೇಮ, ಶ್ರೀ ಎ. ಕೃಷ್ಣಮೂರ್ತಿ, ಬೆಂಗಳೂರು	500.00

ಮೇಲ್ಕಂಡ ಸರ್ವರಿಗೂ ಶ್ರೀ ಸೀತಾರಾಮಚಂದ್ರರು ಆಯುರಾರೋಗ್ಯ ಐಶ್ವರ್ಯವನ್ನು ನೀಡಿ ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

– **ರಾಮಾಯಣ ಪ್ರಕಾಶನ ಸಮಿತಿ**

ವಿಷಯಾನುಕ್ರಮಣಿಕೆ

ವಿಭಾಗ	ವಿಷಯ	ಪುಟ
	ಬಾಲಕಾಂಡ	
೧.	ನಾರದರು ಸಂಕ್ಷೇಪವಾಗಿ ಶ್ರೀರಾಮಚರಿತೆಯನ್ನು ವಾಲ್ಮೀಕಿ ಮುನಿಗಳಿಗೆ ಹೇಳುವುದು. ವ್ಯಾಧನಿಂದ ಕ್ರೌಂಚಪಕ್ಷಿಯ ಹನನ. ಬ್ರಹ್ಮನ ಆಜ್ಞೆಯಂತೆ ಶ್ರೀಮದ್ರಾಮಾಯಣದ ರಚನೆ.	1
೨.	ಪುತ್ರಕಾಮೇಷ್ಟಿಯಾಗ. ಶ್ರೀರಾಮಾದಿಗಳ ಜನನ.	5
೩.	ವಿಶ್ವಾಮಿತ್ರರೊಡನೆ ಶ್ರೀರಾಮಲಕ್ಷ್ಮಣರ ಗಮನ. ತಾಟಕಾವಧ. ಯಜ್ಞಸಂರಕ್ಷಣೆ	11
೪.	ಕುಶನಾಭನ ಕನ್ಯೆಯರ ವೃತ್ತಾಂತ.	17
೫.	ಕುಮಾರಸ್ವಾಮಿಯ ಜನನ. ಸಗರಪುತ್ರರ ಕಥೆ. ಗಂಗಾವತರಣ.	20
೬.	ಕ್ಷೀರಸಾಗರಮಥನ. ಸಪ್ತಮರುತ್ತುಗಳ ವೃತ್ತಾಂತ.	28
೭.	ಅಹಲ್ಯೋದ್ಧಾರ.	32
೮.	ವಿಶ್ವಾಮಿತ್ರರ ಪೂರ್ವವೃತ್ತಾಂತ. ವಸಿಷ್ಠಾಶ್ರಮಕ್ಕೆ ಗಮನ. ವಿಶ್ವಾಮಿತ್ರರ ಪರಾಜಯ.	35
೯.	ತ್ರಿಶಂಕುವಿನ ವೃತ್ತಾಂತ.	40
೧೦.	ಅಂಬರೀಷನ ಯಾಗ. ಶುನಃಶೇಫನ ವೃತ್ತಾಂತ. ಮೇನಕಾ ಪ್ರಸಂಗ.	44
೧೧.	ರಂಭೆಗೆ ಶಾಪ. ವಿಶ್ವಾಮಿತ್ರರು ಬ್ರಹ್ಮರ್ಷಿಗಳಾದದ್ದು.	47
೧೨.	ಶ್ರೀರಾಮನಿಂದ ಶಿವಧನುರ್ಭಂಗ. ದಶರಥನಿಗೆ ಆಹ್ವಾನ.	51
೧೩.	ಶ್ರೀ ರಾಮಾದಿಗಳ ವಿವಾಹ. ಪರಶುರಾಮಪರಾಜಯ. ಅಯೋಧ್ಯೆಗೆ ಪ್ರಯಾಣ	54
	ಅಯೋಧ್ಯಾಕಾಂಡ	
೧೪.	ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ದಶರಥನ ಸಂಕಲ್ಪ.	62
೧೫.	ಮಂಥರೆಯ ದುರ್ಬೋಧನೆ.	67
೧೬.	ಕೈಕೇಯಿಯ ಎರಡು ವರಗಳು. ವನವಾಸಕ್ಕೆ ಹೋಗಲು ಶ್ರೀರಾಮನ ನಿಶ್ಚಯ.	72
೧೭.	ಶ್ರೀರಾಮನೊಡನೆ ಸೀತೆಯೂ ಲಕ್ಷ್ಮಣನೂ ಅರಣ್ಯಕ್ಕೆ ಹೋಗಲು ನಿಶ್ಚಯಿಸುವುದು.	78

ವಿಭಾಗ	ವಿಷಯ	ಪುಟ
೧೮.	ಸೀತಾ, ರಾಮ, ಲಕ್ಷ್ಮಣರು ದಶರಥನನ್ನು ಕಾಣಲು ಹೋಗುವುದು. ವನವಾಸಕ್ಕೆ ಸಿದ್ಧತೆ.	85
೧೯.	ಅಯೋಧ್ಯೆಯಿಂದ ನಿರ್ಗಮನ. ಗುಹನ ಭೇಟಿ. ಗಂಗಾನದಿಯನ್ನು ದಾಟುವುದು.	92
೨೦.	ಸುಮಂತ್ರನು ಅಯೋಧ್ಯೆಗೆ ಹಿಂದಿರುಗಿ ಬಂದು ದಶರಥನಿಗೆ ವರದಿಯನ್ನೊಪ್ಪಿಸುವುದು.	99
೨೧.	ದಶರಥನ ಮರಣ. ಭರತನ ಆಗಮನ.	104
೨೨.	ಕೈಕೇಯಿಯನ್ನು ಭರತನು ದೂಷಿಸುವುದು. ದಶರಥನ ಉತ್ತರಕ್ರಿಯೆ.	107
೨೩.	ಚಿತ್ರಕೂಟಕ್ಕೆ ಭರತನ ಪ್ರಯಾಣ. ಶ್ರೀರಾಮದರ್ಶನ – ಪಾದುಕಾಗ್ರಹಣ.	112
೨೪.	ಪಾದುಕಾಪಟ್ಟಾಭಿಷೇಕ.	120

ಅರಣ್ಯಕಾಂಡ

೨೫.	ದಂಡಕಾರಣ್ಯದಲ್ಲಿ ಸಂಚಾರ. ವಿರಾಧಪ್ರಸಂಗ. ಶರಭಂಗ, ಸುತೀಕ್ಷ್ಣಮುನಿಗಳ ಸಂದರ್ಶನ.	125
೨೬.	ಅಗಸ್ತ್ಯಾಶ್ರಮಕ್ಕೆ ಪ್ರಯಾಣ. ಪಂಚವಟಿಯಲ್ಲಿ ಪರ್ಣಶಾಲೆಯ ನಿರ್ಮಾಣ.	129
೨೭.	ಶೂರ್ಪಣಖಾಪ್ರಸಂಗ. ಖರ, ದೂಷಣ, ತ್ರಿಶಿರರ ಸಂಹಾರ.	132
೨೮.	ಮಾಯಾಮೃಗವಾಗಿ ಬಂದ ಮಾರೀಚನಿಂದ ವಂಚನೆ. ಲಕ್ಷ್ಮಣನು ಸೀತೆಯನ್ನು ಪರ್ಣಶಾಲೆಯಲ್ಲಿ ಬಿಟ್ಟು ತೆರಳುವುದು.	138
೨೯.	ರಾವಣನಿಂದ ಸೀತಾಪಹರಣ. ಜಟಾಯುವಿನ ಪರಾಜಯ.	144
೩೦.	ಸೀತಾನ್ವೇಷಣೆ. ಶ್ರೀರಾಮನ ಕ್ರೋಧ.	149
೩೧.	ಜಟಾಯುವಿನ ಅಂತ್ಯಸಂಸ್ಕಾರ. ಕಬಂಧನ ವೃತ್ತಾಂತ. ಶಬರಿಯ ಆತಿಥ್ಯ. ಪಂಪಾದರ್ಶನ.	153

ಕಿಷ್ಕಿಂಧಾಕಾಂಡ

೩೨.	ಹನುಮಂತನು ಶ್ರೀರಾಮಲಕ್ಷ್ಮಣರೊಡನೆ ಸಂಭಾಷಿಸುವುದು. ಶ್ರೀರಾಮಸುಗ್ರೀವರ ಸಖ್ಯ. ಸೀತೆಯ ಒಡವೆಗಳ ದರ್ಶನ.	158
೩೩.	ವಾಲಿಸುಗ್ರೀವರ ವೈರಕ್ಕೆ ನಿಮಿತ್ತ, ವಾಲಿಸಂಹಾರ ಪ್ರತಿಜ್ಞೆ.	162
೩೪.	ವಾಲಿಯ ಮೇಲೆ ಬಾಣ ಪ್ರಯೋಗ. ವಾಲಿಯು ಶ್ರೀರಾಮನನ್ನು ನಿಂದಿಸುವುದು. ಶ್ರೀರಾಮನ ಸಮಾಧಾನ.	166

ವಿಭಾಗ	ವಿಷಯ	ಪುಟ
೩೫.	ತಾರೆಯ ಶೋಕ. ವಾಲಿಯ ಅಂತ್ಯಸಂಸ್ಕಾರ. ಸುಗ್ರೀವನ ಪಟ್ಟಾಭಿಷೇಕ.	172
೩೬.	ಪ್ರಸ್ರವಣಗಿರಿಯಲ್ಲಿ ಶ್ರೀರಾಮಲಕ್ಷ್ಮಣರ ವಾಸ. ಸುಗ್ರೀವನ ಆದೇಶದಂತೆ ಕಪಿಸೇನೆಗಳ ಆಗಮನ.	175
೩೭.	ಸೀತಾನ್ವೇಷಣೆಗಾಗಿ ವಾನರರನ್ನು ಕಳಿಸುವುದು.	181
೩೮.	ದಕ್ಷಿಣ ದಿಕ್ಕಿಗೆ ಅಂಗದ, ಹನುಮಂತ ಮೊದಲಾದವರ ಪ್ರಯಾಣ. ಸ್ವಯಂಪ್ರಭೆಯ ದರ್ಶನ. ಸಂಪಾತಿ ವೃತ್ತಾಂತ.	184
೩೯.	ಸಮುದ್ರಲಂಘನಕ್ಕೆ ಜಾಂಬವಂತನು ಹನುಮಂತನನ್ನು ಪ್ರೋತ್ಸಾಹಿಸುವುದು. ಹನುಮಂತನ ಉತ್ಸಾಹ, ಸಿದ್ಧತೆ.	190

ಸುಂದರಕಾಂಡ

೪೦.	ಸಮುದ್ರಲಂಘನ.	195
೪೧.	ಲಂಕೆಯಲ್ಲಿ ಸೀತಾನ್ವೇಷಣೆ. ಅಶೋಕವನಗಮನ	198
೪೨.	ಹನುಮಂತನು ಸೀತೆಯನ್ನು ಕಾಣುವುದು. ರಾವಣನ ಆಗಮನ. ಸೀತೆಯ ಧಿಕ್ಕಾರ. ಅವಳನ್ನು ಬೆದರಿಸಿ ರಾವಣನು ನಿರ್ಗಮಿಸುವುದು.	202
೪೩.	ನೇಣುಹಾಕಿಕೊಳ್ಳಲು ಸೀತಾದೇವಿಯ ಪ್ರಯತ್ನ. ತ್ರಿಜಟಾಸ್ವಪ್ನ. ಹನುಮಂತನಿಂದ ಶ್ರೀರಾಮವೃತ್ತಾಂತ ಕಥನ.	207
೪೪.	ಹನುಮಂತನು ತನ್ನ ಪರಿಚಯವನ್ನು ಹೇಳಿ ಶ್ರೀರಾಮನ ಅಂಗುಲೀಯಕವನ್ನು ಸೀತೆಗೆ ಕೊಡುವುದು.	211
೪೫.	ಸೀತೆಗೂ ಹನುಮಂತನಿಗೂ ಮುಂದುವರಿದ ಸಂಭಾಷಣೆ ವಾಯಸವೃತ್ತಾಂತ. ಚೂಡಾಮಣಿಪ್ರದಾನ.	215
೪೬.	ಅಶೋಕವನ ಭಂಗ. ಇಂದ್ರಜಿತು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಹನುಮಂತನನ್ನು ಬಂಧಿಸುವುದು.	219
೪೭.	ರಾವಣ ದರ್ಶನ. ಹನುಮಂತನ ಬಾಲಕ್ಕೆ ಬೆಂಕಿ ಹಚ್ಚುವುದು. ಲಂಕಾದಹನ. ಲಂಕೆಯಿಂದ ಹಿಂದಿರುಗಲು ಹನುಮಂತನ ಸಿದ್ಧತೆ.	224
೪೮.	ಹನುಮಂತನು ಸಮುದ್ರವನ್ನು ಲಂಘಿಸಿ ಹಿಂದಕ್ಕೆ ಬರುವುದು. ಕಪಿಗಳ ಆನಂದ. ಮಧುವನ ಪ್ರವೇಶ. ಸುಗ್ರೀವನ ಬಳಿಗೆ ಆಗಮನ.	229
೪೯.	ಶ್ರೀರಾಮನಿಗೆ ಸೀತಾ ವೃತ್ತಾಂತವನ್ನು ತಿಳಿಸಿ ಚೂಡಾಮಣಿಯನ್ನು ಕೊಡುವುದು. ಸೀತೆಗೆ ಹೇಳಿದ ಸಮಾಧಾನವನ್ನು ಹನುಮಂತನು ಶ್ರೀರಾಮನಿಗೆ ನಿವೇದಿಸುವುದು.	232

ವಿಭಾಗ	ವಿಷಯ	ಪುಟ
	ಯುದ್ಧಕಾಂಡ	
೫೦.	ಶ್ರೀರಾಮನಿಂದ ಹನುಮಂತನ ಪ್ರಶಂಸೆ. ವಾನರಸೇನೆಯು ಸಮುದ್ರತೀರಕ್ಕೆ ಬಂದು ಸೇರುವುದು.	236
೫೧.	ರಾವಣನು ಮಂತ್ರಾಲೋಚನೆಗಾಗಿ ಸಭೆಯನ್ನು ಕರೆಯುವುದು. ವಿಭೀಷಣನ ಹಿತೋಪದೇಶ.	239
೫೨.	ರಾವಣನ ಎರಡನೆಯ ಮಂತ್ರಾಲೋಚನಾ ಸಭೆ. ಕುಂಭಕರ್ಣನ ಹೇಳಿಕೆ. ವಿಭೀಷಣನ ಬುದ್ಧಿವಾದ. ರಾವಣನ ಧಿಕ್ಕಾರ. ವಿಭೀಷಣನು ಶ್ರೀರಾಮನ ಬಳಿಗೆ ಬರುವುದು.	242
೫೩.	ವಿಭೀಷಣನ ಶರಣಾಗತಿ. ಸಮುದ್ರಜಲದಿಂದ ವಿಭೀಷಣನಿಗೆ ಪಟ್ಟಾಭಿಷೇಕ.	246
೫೪.	ಶ್ರೀರಾಮನ ಶರತಲ್ಪಶಯನ. ಸಮುದ್ರರಾಜನು ಪ್ರತ್ಯಕ್ಷನಾಗುವುದು. ಸೇತುವೆಯ ನಿರ್ಮಾಣ.	250
೫೫.	ಸೇತುವೆಯ ಮೂಲಕ ಸಮುದ್ರವನ್ನು ದಾಟುವುದು. ಮಾಯಾಶಿರಸ್ಸಿನಿಂದ ಸೀತೆಯನ್ನು ವಂಚಿಸಲು ರಾವಣನ ಪ್ರಯತ್ನ.	255
೫೬.	ಸರಮೆಯು ಸೀತೆಯನ್ನು ಸಂತೈಸುವುದು. ಯುದ್ಧಸಿದ್ಧತೆ. ಸುಗ್ರೀವನು ರಾವಣನನ್ನು ಭಂಗಿಸಿ ಹಿಂದಿರುಗುವುದು.	259
೫೭.	ಅಂಗದಸಂಧಾನ. ಯುದ್ಧಾರಂಭ.	262
೫೮.	ಇಂದ್ರಜಿತುವು ಸರ್ಪಾಸ್ತ್ರಗಳಿಂದ ಶ್ರೀರಾಮಲಕ್ಷ್ಮಣರನ್ನು ಬಂಧಿಸುವುದು. ಸೀತಾದೇವಿಯ ದುಃಖ. ತ್ರಿಜಟೆಯ ಸಮಾಧಾನ.	265
೫೯.	ಗರುತ್ಮಂತನ ಆಗಮನ. ಸರ್ಪಾಸ್ತ್ರಗಳಿಂದ ವಿಮೋಚನೆ. ಹನುಮಂತನಿಂದ ಧೂಮ್ರಾಕ್ಷನ ವಧೆ.	268
೬೦.	ಅಂಗದನಿಂದ ವಜ್ರದಂಷ್ಟ್ರನ ಸಂಹಾರ. ಹನುಮಂತನಿಂದ ಅಕಂಪನನ ವಧೆ.	271
೬೧.	ಪ್ರಹಸ್ತನ ಯುದ್ಧ. ನೀಲನಿಂದ ಅವನ ವಧೆ.	273
೬೨.	ಯುದ್ಧರಂಗಕ್ಕೆ ರಾವಣನ ಪ್ರವೇಶ. ಶಕ್ತ್ಯಾಯುಧದಿಂದ ಲಕ್ಷ್ಮಣನ ಮೂರ್ಛೆ. ಶ್ರೀರಾಮನಿಂದ ರಾವಣನ ಪರಾಜಯ.	275
೬೩.	ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುವುದು. ಅವನು ಯುದ್ಧಭೂಮಿಗೆ ತೆರಳುವುದು.	279
೬೪.	ಕುಂಭಕರ್ಣನ ಘೋರಯುದ್ಧ. ಶ್ರೀರಾಮನಿಂದ ಅವನ ಸಂಹಾರ.	282

ವಿಭಾಗ	ವಿಷಯ	ಪುಟ
೬೫.	ಕುಂಭಕರ್ಣನ ಮರಣವನ್ನು ಕೇಳಿ ರಾವಣನ ಶೋಕ. ತ್ರಿಶಿರ, ನರಾಂತಕ, ಅತಿಕಾಯಾದಿಗಳ ವಧೆ.	288
೬೬.	ಇಂದ್ರಜಿತುವಿನ ಬ್ರಹ್ಮಾಸ್ತ್ರಪ್ರಯೋಗದಿಂದ ಶ್ರೀರಾಮಲಕ್ಷ್ಮಣರ ಮೂರ್ಛೆ. ಹನುಮಂತನು ಓಷಧಿಪರ್ವತವನ್ನು ತರುವುದು.	291
೬೭.	ಕುಂಭ, ನಿಕುಂಭಾದಿಗಳ ಸಂಹಾರ. ಮಾಯಾಸೀತೆಯನ್ನು ಇಂದ್ರಜಿತು ಸಂಹರಿಸುವುದು. ವಿಭೀಷಣನು ಶ್ರೀರಾಮನನ್ನು ಸಂತೈಸುವುದು.	295
೬೮.	ಲಕ್ಷ್ಮಣನಿಗೂ ಇಂದ್ರಜಿತುವಿಗೂ ಘೋರಯುದ್ಧ. ಇಂದ್ರಜಿತುವಿನ ಸಾವು.	300
೬೯.	ರಾವಣನು ಸೀತಾದೇವಿಯನ್ನು ಕೊಲ್ಲಲು ಹವಣಿಸುವುದು. ಶ್ರೀರಾಮನ ಅತ್ಯದ್ಭುತವಾದ ಯುದ್ಧಸಾಮರ್ಥ್ಯ.	304
೭೦.	ರಾವಣನ ಶಕ್ತ್ಯಾಯುಧದಿಂದ ಲಕ್ಷ್ಮಣನ ಮೂರ್ಛೆ. ರಾಮರಾವಣ ಯುದ್ಧ. ರಾವಣನ ಪಲಾಯನ.	308
೭೧.	ಮೂರ್ಛಿತನಾದ ಲಕ್ಷ್ಮಣನನ್ನು ನೋಡಿ ಶ್ರೀರಾಮನ ಶೋಕ. ಓಷಧಿಪರ್ವತವನ್ನು ತರುವುದು. ಲಕ್ಷ್ಮಣನು ಚೇತರಿಸಿಕೊಳ್ಳುವುದು.	311
೭೨.	ಆದಿತ್ಯಹೃದಯ. ರಾವಣನ ಸಂಹಾರ	315
೭೩.	ರಣಭೂಮಿಗೆ ಅಂತಃಪುರಸ್ತ್ರೀಯರ ಆಗಮನ. ಮಂಡೋದರಿಯ ಶೋಕ. ರಾವಣನ ಅಂತ್ಯಕ್ರಿಯೆ.	318
೭೪.	ವಿಭೀಷಣನ ಪಟ್ಟಾಭಿಷೇಕ. ಶ್ರೀರಾಮನ ಬಳಿಗೆ ಸೀತಾದೇವಿಯ ಆಗಮನ.	320
೭೫.	ಶ್ರೀರಾಮನು ಸೀತಾದೇವಿಗೆ ಕಟುವಚನಗಳನ್ನಾಡುವುದು. ಸೀತಾದೇವಿಯ ಅಗ್ನಿಪ್ರವೇಶ.	326
೭೬.	ಬ್ರಹ್ಮಾದಿದೇವತೆಗಳ ಆಗಮನ. ಅಗ್ನಿದೇವನು ಸೀತಾದೇವಿಯನ್ನು ಶ್ರೀರಾಮನಿಗೆ ಅರ್ಪಿಸುವುದು. ಸ್ವರ್ಗದಿಂದ ಬಂದ ದಶರಥನ ಹಿತೋಕ್ತಿ	330
೭೭.	ಇಂದ್ರನ ವರದಾನ. ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಪ್ರಯಾಣ. ಭರದ್ವಾಜಾಶ್ರಮ.	333
೭೮.	ಭರದ್ವಾಜಮುನಿಗಳಿಂದ ಸತ್ಕಾರ. ಹನುಮಂತನು ಭರತನಿಗೆ ಶ್ರೀರಾಮಾದಿಗಳ ಆಗಮನ ವೃತ್ತಾಂತವನ್ನು ತಿಳಿಸುವುದು.	338
೭೯.	ಭರತಸಮಾಗಮ. ನಂದಿಗ್ರಾಮಕ್ಕೆ ಆಗಮನ.	341
೮೦.	ಶ್ರೀರಾಮನ ಪಟ್ಟಾಭಿಷೇಕ. ಮಂಗಳ.	344

ವಿಭಾಗ	ವಿಷಯ	ಪುಟ
	ಉತ್ತರಕಾಂಡ	
೧.	ಶ್ರೀರಾಮನ ಕೋರಿಕೆಯಂತೆ ಅಗಸ್ತ್ಯರು ರಾವಣಾದಿಗಳ ಪೂರ್ವವೃತ್ತಾಂತವನ್ನು ಹೇಳಲಾರಂಭಿಸುವುದು. ಲಂಕೆಯಲ್ಲಿ ಕುಬೇರನ ವಾಸ.	351
೨.	ರಾವಣಾದಿಗಳ ಜನನ. ಅವರ ತಪಸ್ಸು.	354
೩.	ರಾವಣ, ಕುಂಭಕರ್ಣ, ವಿಭೀಷಣರಿಗೆ ಬ್ರಹ್ಮನಿಂದ ವರಪ್ರಾಪ್ತಿ ಲಂಕಾನಿವಾಸ.	358
೪.	ರಾವಣನೇ ಮೊದಲಾದವರ ವಿವಾಹ. ಪುಷ್ಪಕವಿಮಾನದ ಅಪಹರಣ. ವೇದವತಿಯಿಂದ ಶಾಪ.	361
೫.	ಮರುತ್ತನ ಜಯ. ಅನರಣ್ಯನಿಂದ ಶಾಪ. ಯಮಲೋಕಕ್ಕೆ ಧಾಳಿ.	368
೬.	ಶೂರ್ಪಣಖಿಯ ಆಕ್ರೋಶ. ರಂಭೆಯನಿಮಿತ್ತವಾಗಿ ನಳಕೂಬರನಿಂದ ಶಾಪ.	372
೭.	ಸ್ವರ್ಗದ ಮೇಲೆ ಆಕ್ರಮಣ. ಇಂದ್ರನ ಸೆರೆ. ಇಂದ್ರಜಿತುವಿಗೆ ಬ್ರಹ್ಮನಿಂದ ವರಪ್ರಾಪ್ತಿ	377
೮.	ಕಾರ್ತವೀರ್ಯನು ರಾವಣನನ್ನು ಸೆರೆಯಲ್ಲಿಡುವುದು. ವಾಲಿರಾವಣರ ಸಖ್ಯ.	380
೯.	ಹನುಮಂತನ ಪೂರ್ವವೃತ್ತಾಂತ.	386
೧೦.	ಜನಕರಾಜನೇ ಮೊದಲಾದವರು ತಮ್ಮ ಸ್ಥಳಗಳಿಗೆ ಹಿಂದಿರುಗುವುದು.	390
೧೧.	ಶ್ರೀರಾಮನು ಸೀತಾದೇವಿಯೊಂದಿಗೆ ವಿಹರಿಸುವುದು. ಗುಪ್ತಚಾರನಿಂದ ಲೋಕಾಪವಾದದ ಕಥನ.	392
೧೨.	ಸೀತಾವಿಸರ್ಜನೆ.	396
೧೩.	ಸೀತಾದೇವಿಯಿಂದ ಶ್ರೀರಾಮನಿಗೆ ಸಂದೇಶ. ವಾಲ್ಮೀಕಿ ಮುನಿಗಳ ಆಶ್ರಮವನ್ನು ಸೇರಿಕೊಳ್ಳುವುದು.	401
೧೪.	ದುರ್ವಾಸರು ಹೇಳಿದ ಭವಿಷ್ಯದ ಕಥನ. ಶ್ರೀರಾಮನಿಗೆ ಲಕ್ಷ್ಮಣನ ಸಮಾಧಾನ.	404
೧೫.	ತಪಸ್ವಿಗಳು ಲವಣಾಸುರನ ಪೀಡೆಯನ್ನು ಹೇಳಿಕೊಳ್ಳುವುದು. ಲವಣಾಸುರನ ನಿಗ್ರಹಕ್ಕೆ ಶತ್ರುಘ್ನನನ್ನು ಕಳಿಸುವುದು.	407
೧೬.	ಲವಕುಶರ ಜನನ. ಶತ್ರುಘ್ನನು ವಾಲ್ಮೀಕಿ ಮುನಿಗಳ ಆಶ್ರಮದಿಂದ ತೆರಳುವುದು. ಲವಣಾಸುರನ ವಧೆ.	413
೧೭.	ಶತ್ರುಘ್ನನಿಂದ ಮಧುಪುರಿಯ ನಿರ್ಮಾಣ.	417

ವಿಭಾಗ	ವಿಷಯ	ಪುಟ
೧೮.	ಶಂಬೂಕವಧೆ.	420
೧೯.	ಅಶ್ವಮೇಧಯಾಗಕ್ಕೆ ಸಿದ್ಧತೆ.	424
೨೦.	ಯಾಗಕ್ಕೆ ವಾಲ್ಮೀಕಿ ಮುನಿಗಳ ಆಗಮನ. ಕುಶಲವರಿಂದ ರಾಮಾಯಣದ ಗಾನ.	426
೨೧.	ಸೀತಾದೇವಿಯು ಶ್ರೀರಾಮನೆದುರಿಗೆ ಪ್ರತಿಜ್ಞೆ ಮಾಡುವುದು. ಭೂಗರ್ಭ ಪ್ರವೇಶ.	430
೨೨.	ಶ್ರೀರಾಮನ ಕ್ರೋಧ. ಯಾಗ ಪರಿಸಮಾಪ್ತಿ	435
೨೩.	ಭರತನ ಪುತ್ರರಾದ ತಕ್ಷಪುಷ್ಕಲರಿಗೆ ಮತ್ತು ಲಕ್ಷ್ಮಣನ ಪುತ್ರರಾದ ಅಂಗದ ಚಂದ್ರಕೇತುಗಳಿಗೆ ರಾಜ್ಯನಿರ್ಮಾಣ.	437
೨೪.	ಕಾಲಪುರುಷನ ಆಗಮನ. ಲಕ್ಷ್ಮಣನ ಪರಿತ್ಯಾಗ.	439
೨೫.	ಮಹಾಪ್ರಸ್ಥಾನ. ಮಂಗಳ.	443

ಪರಿಶಿಷ್ಟ

ಉತ್ತರಕಾಂಡದಲ್ಲಿ ಬರುವ ಕೆಲವು ಕಥೆಗಳು

೧.	ನೃಗರಾಜನಿಗೆ ಶಾಪ ಬಂದ ವೃತ್ತಾಂತ.	448
೨.	ನಿಮಿರಾಜನ ವೃತ್ತಾಂತ; ಅವನ ಮಗ ಜನಕ.	449
೩.	ಯಯಾತಿ.	451
೪.	ಅಗಸ್ತ್ಯರಿಗೆ ದಿವ್ಯಾಭರಣವು ದೊರಕಿದ ಬಗೆ.	454
೫.	ದಂಡಕಾರಣ್ಯ.	455
೬.	ವೃತ್ರಾಸುರ ವಧೆ.	456
೭.	ಇಲ, ಪುರೂರವ – ಇವರಿಬ್ಬರ ವೃತ್ತಾಂತ.	457

ಪ್ರಸ್ತಾವನೆ

ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಮ್ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್ ॥

ವಾಲ್ಮೀಕಿ ಮುನಿಗಳು ರಚಿಸಿರುವ ಶ್ರೀಮದ್ರಾಮಾಯಣವು ಆದಿಕಾವ್ಯವೆಂದು ಪ್ರಸಿದ್ಧವಾಗಿದೆ. ಅವರು ನಾರದ ಮಹರ್ಷಿಗಳಿಂದ ಮೊದಲು ಶ್ರೀರಾಮಕಥೆಯನ್ನು ಕೇಳಿದರೆಂದೂ ಅನಂತರ ಬ್ರಹ್ಮದೇವನ ಆಜ್ಞೆಯಂತೆ ಈ ಮಹಾಕಾವ್ಯವನ್ನು ವಿರಚಿಸಿದರೆಂದೂ ಈ ಗ್ರಂಥದ ಆದಿಯಲ್ಲಿಯೇ ಬಂದಿದೆ. ವಾಲ್ಮೀಕಿಮುನಿಗಳು ಈ ಆದಿಕಾವ್ಯವನ್ನಾರಂಭಿಸುವುದಕ್ಕೆ ಮೊದಲು ಶುದ್ಧಾಚಮನ ಮಾಡಿ, ಪ್ರಾಚೀನಾಗ್ರವಾಗಿ ದರ್ಭೆಗಳನ್ನು ಹರಡಿ, ಅದರಲ್ಲಿ ಕುಳಿತು ಕೈಮುಗಿದುಕೊಂಡು ಶ್ರೀರಾಮಚರಿತೆಯನ್ನು ಜ್ಞಾನದೃಷ್ಟಿಯಿಂದ ವೀಕ್ಷಿಸಿದರು. ಅವರ ತಪೋಬಲದಿಂದ ಸರ್ವವೂ ಕಣ್ಣಿಗೆ ಕಟ್ಟಿದಂತೆ ಕಾಣಿಸಿತು. ಶ್ರೀರಾಮನು ನಕ್ಕದ್ದು, ನುಡಿದದ್ದು, ಸರ್ವವೂ ತಿಳಿಯಿತು. ನಾರದರು ಸಂಕ್ಷೇಪವಾಗಿ ರಾಮಾಯಣ ಕಥೆಯನ್ನು ಹೇಳಿದ್ದರು. ಈಗ ವಾಲ್ಮೀಕಿ ಮುನಿಗಳಿಗೆ ಶ್ರೀರಾಮಚರಿತೆಯ ಸಕಲ ವಿವರಗಳೂ ಪ್ರತ್ಯಕ್ಷವಾಗಿ ಕಾಣಿಸಿದವು. ಅನಂತರ ಆದಿಕಾವ್ಯದ ರಚನೆಯಾಯಿತು. **'ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ'** = ಈ ಕಾವ್ಯದಲ್ಲಿ ನಿನ್ನ ಒಂದು ನುಡಿಯೂ ಸುಳ್ಳಾಗಿರುವುದಿಲ್ಲ ಎಂದು ಬ್ರಹ್ಮನು ಹೇಳಿದ್ದನು.

ಈ ವಿವರಗಳನ್ನು ಪರಿಶೀಲಿಸಿದರೆ, ವಾಲ್ಮೀಕಿ ರಾಮಾಯಣವೇ ಶ್ರೀರಾಮಚರಿತೆಯನ್ನು ಸರಿಯಾಗಿ ತಿಳಿಸುವ ಪ್ರಾಮಾಣಿಕ ಗ್ರಂಥವೆಂದೂ ಇದಕ್ಕೆ ಪೂರ್ವದಲ್ಲಿ ರಾಮಾಯಣವೆಂಬ ಇನ್ನೊಂದು ಗ್ರಂಥವೇ ಇರಲಿಲ್ಲವೆಂದೂ ಗೊತ್ತಾಗುತ್ತದೆ. ಇದರಲ್ಲಿ ಹೇಳಿರುವ ಪ್ರಕಾರ ಶ್ರೀರಾಮನು ಇದ್ದ ಕಾಲದಲ್ಲಿಯೇ ಇದರ ರಚನೆಯಾಗಿದೆ. ಶ್ರೀರಾಮನ ಮಕ್ಕಳಾದ ಕುಶಲವರೇ ಇದನ್ನು ಕುರಿತು ಗಮಕ ಶೈಲಿಯಲ್ಲಿ ಮೊದಲು ಹಾಡಿದವರೆಂದು ತಿಳಿದು ಬರುತ್ತದೆ. ಆಧುನಿಕ ಪರಿಶೋಧಕರು ಈ ಸಂಗತಿಗಳನ್ನೆಲ್ಲ ಒಪ್ಪುವುದಿಲ್ಲವೆಂಬುದು ನಿಶ್ಚಯವೇ. ಕ್ರಿ.ಪೂ. 8ನೆಯ ಶತಕದಿಂದ 1ನೆಯ ಶತಕದವರೆಗೆ ಇದು ಕ್ರಮವಾಗಿ ಹುಟ್ಟಿಬೆಳೆದಿದೆ ಎಂಬುದಾಗಿ ಅವರ ಅಭಿಪ್ರಾಯವಿದೆ. ಅನ್ಯತ್ರ ಚರ್ವಿತವಾದ ಅದನ್ನು ಮತ್ತೆ ಇಲ್ಲಿ ಚರ್ವಣ ಮಾಡುವುದು ಅನಾವಶ್ಯಕ. ಆದರೆ ಈ ವಾಲ್ಮೀಕಿ ರಾಮಾಯಣವು ಆನಂದರಾಮಾಯಣ, ಅದ್ಭುತರಾಮಾಯಣ, ಅಗ್ನಿವೇಶ್ಯ ರಾಮಾಯಣ ಇತ್ಯಾದಿ ಸಕಲ ರಾಮಾಯಣ ಗ್ರಂಥಗಳಿಗಿಂತ ಪ್ರಾಚೀನವೆಂಬುವುದನ್ನು ಮಾತ್ರ ಒಪ್ಪಲೇಬೇಕಾಗುತ್ತದೆ.

ಶ್ರೀಮದ್ರಾಮಾಯಣವನ್ನವಲಂಬಿಸಿ ಸಂಸ್ಕೃತ ವಾಙ್ಮಯದಲ್ಲಿ ನಿರ್ಮಿತ ವಾಗಿರುವ ಕಾವ್ಯನಾಟಕಗಳು ಲೆಕ್ಕವಿಲ್ಲದಷ್ಟಿವೆ. ರಾಮಾಯಣಮಂಜರೀ, ಚಂಪೂರಾಮಾಯಣ, ಅನರ್ಘರಾಘವ, ಉತ್ತರ ರಾಮ ಚರಿತೆ, ಪ್ರತಿಮಾನಾಟಕ, ಪ್ರಸನ್ನ ರಾಘವ –

ಮೊದಲಾದವು ಅವುಗಳಲ್ಲಿ ವಿಖ್ಯಾತವಾದವು. ಹೀಗೆಯೇ ಪ್ರಾಕೃತ ಭಾಷೆಯಲ್ಲಿಯೂ ಕನ್ನಡ, ಹಿಂದಿ, ಮರಾಠಿ, ಬಂಗಾಳಿ – ಮುಂತಾದ ಸಮಸ್ತ ದೇಶಭಾಷೆಗಳಲ್ಲಿಯೂ ಶ್ರೀರಾಮಕಥೆಯನ್ನು ಅವಲಂಬಿಸಿ ಅಸಂಖ್ಯಾತವಾದ ಸಾಹಿತ್ಯರಾಶಿಯೇ ರಚಿತವಾಗಿದೆ. ವಾಲ್ಮೀಕಿ ರಾಮಾಯಣವು ''ಪರಂಕವೀನಾಮಾಧಾರಂ' ಆಗುವುದೆಂದು ನುಡಿದ ಭವಿಷ್ಯವು ಸತ್ಯವಾಗಿದೆ. ಆದ್ದರಿಂದಲೇ ಕ್ಷೇಮೇಂದ್ರನು ವಾಲ್ಮೀಕಿಮಹರ್ಷಿಗಳನ್ನು – **ನಮಃ ಸರ್ವೋಪಜೀವ್ಯಂ ತಂ ಕವೀನಾಂ ಚಕ್ರವರ್ತಿನಂ** ''ಸರ್ವಕವಿಗಳಿಗೂ ಅವಲಂಬನೆ ಯಾಗಿರುವ ಕವಿಚಕ್ರವರ್ತಿ ವಾಲ್ಮೀಕಿಯನ್ನು ಸ್ತುತಿಸುತ್ತೇವೆ'' ಎಂದಿದ್ದಾನೆ.

ವಿದೇಶಗಳಲ್ಲಿ ರಾಮಾಯಣದ ಪ್ರಸಾರ

ಪ್ರಾಚೀನ ಕಾಲದಲ್ಲಿಯೇ ಭಾರತೀಯರು ಏಷ್ಯಾಖಂಡದ ಆಗ್ನೇಯರಾಷ್ಟ್ರಗಳಿಗೆ ಪ್ರಯಾಣ ಮಾಡಿ ವಾಣಿಜ್ಯಾದಿ ವ್ಯವಹಾರಗಳನ್ನು ನಡೆಸುತ್ತಿದ್ದರೆಂದು ಇತಿಹಾಸವು ಸ್ಪಷ್ಟಪಡಿಸಿದೆ. ಆಗ ರಾಮಾಯಣ ಕಥೆಯೂ ಅಲ್ಲಿ ಪ್ರಚುರವಾಗಿ ಖ್ಯಾತಿಯನ್ನು ಗಳಿಸಿಕೊಂಡಿತು. ಥೈಲ್ಯಾಂಡ್‌ನಲ್ಲಿ 'ನಾಂಗ್' ಎಂಬ ಬೊಂಬೆಯಾಟದಲ್ಲಿ ರಾಮಾಯಣ ಕಥೆಯನ್ನು ಪ್ರದರ್ಶಿಸುತ್ತಾರೆ. ಈ ಆಟವನ್ನು ಪ್ರಾರಂಭಿಸುವಾಗ ಮೊದಲು ದಶರಥನಿಗೂ ಶ್ರೀರಾಮನಿಗೂ ವಂದನೆಗಳನ್ನು ಅರ್ಪಿಸುತ್ತಾರೆ. ಅಲ್ಲಿಯೂ ದಶರಥನ ರಾಜಧಾನಿ ಅಯೋಧ್ಯೆ. ರಾಮಾಯಣದ ಕಥೆಯನ್ನು ಆ ದೇಶದ ಭಾಷೆಯಲ್ಲಿ ರಚಿಸಿಕೊಂಡು, ಅದನ್ನು ಹಾಡುತ್ತಾ ಕೊನ್ ಎಂಬ ನೃತ್ಯವನ್ನು ಅಭಿನಯಿಸಿ ಪ್ರದರ್ಶಿಸುತ್ತಾರೆ. ರಾಮಕೀನ್ ಎಂಬ ನಾಟಕವನ್ನು ರಾಮ ಎಂಬ ಹೆಸರಿನ ಅಲ್ಲಿಯ ರಾಜನೇ ಬರೆದಿದ್ದಾನೆ. ರಾಮಕೀನ್ ಎಂದರೆ ರಾಮಕೀರ್ತಿ ಎಂದರ್ಥ. ರಾವಣನಿಗೆ ''ಥೊಸಕನತ್'' ಎಂದು ಹೆಸರು. ದಶಕಂಠ ಎಂಬ ಶಬ್ದದ ಅಪಭ್ರಂಶರೂಪವದು. ಜಾವಾದ್ವೀಪದಲ್ಲಿ ಒಂದು ದೊಡ್ಡ ಶಿವಾಲಯವಿದೆ. ಅದರ ಶಿಲಾಫಲಕಗಳ ಮೇಲೆ ಶ್ರೀರಾಮಕಥೆಯನ್ನು ಬಹು ಸುಂದರವಾಗಿ ಚಿತ್ರಿಸಿದ್ದಾರೆ. ಸಿಂಡಕ್ ಎಂಬ ರಾಜನು ಜಾವಾಭಾಷೆಯಲ್ಲಿ ರಾಮಾಯಣವನ್ನು ಬರೆದಿದ್ದಾನೆ. ಬಾಲಿದ್ವೀಪದಲ್ಲಿ ಶ್ರೀರಾಮಕಥೆ ತುಂಬ ಪ್ರಸಿದ್ಧಿಯನ್ನು ಗಳಿಸಿಕೊಂಡಿದೆ. ಇಂಡೋನೇಷಿಯದಲ್ಲಿ ಮುಸ್ಲಿಮರಿಗೂ ಸಹ ರಾಮಾಯಣವು ಪ್ರಿಯವಾದ ಪವಿತ್ರಗ್ರಂಥವೆನಿಸಿದೆ. ರಾಮಾಯಣ ಎಷ್ಟು ಜನಪ್ರಿಯವಾದ ಮಹಾಕಾವ್ಯವೆನ್ನುವುದನ್ನು ಇದರಿಂದ ತಿಳಿಯಬಹುದು.

ಮಹಾಕಾವ್ಯ

ಮಹಾಕಾವ್ಯದಲ್ಲಿ ನಗರಾರ್ಣವ ಶೈಲರ್ತು – ಪಟ್ಟಣ, ಸಮುದ್ರ , ಪರ್ವತ, ವಸಂತಾದಿ ಋತು. ಮೊದಲಾದ ಹದಿನೆಂಟು ವಸ್ತುಗಳ ವರ್ಣನೆಯಿರಬೇಕೆಂದೂ ಚತುರ್ವರ್ಗಫಲಾಯತ್ತವಾಗಿರಬೇಕೆಂದೂ ಉದಾತ್ತನಾಯಕನಿದ್ದು ರಸಭಾವನಿರಂತರ ವಾಗಿರಬೇಕೆಂದೂ ದಂಡಿಯೇ ಮೊದಲಾದ ಆಲಂಕಾರಿಕರು ಹೇಳಿದ್ದಾರೆ. ಈ ಎಲ್ಲ ಲಕ್ಷಣ ಗಳೂ ಶ್ರೀಮದ್ರಾಮಾಯಣದಲ್ಲಿ ಸಂಪೂರ್ಣವಾಗಿವೆ. ನಗರಾರ್ಣವಾದಿ

ಅಷ್ಟಾದಶವರ್ಣನೆಗಳಂತೂ ಔಚಿತ್ಯದಿಂದ ಹೊಂದಿಕೊಂಡು ಬಂದಿವೆ. ಶಿಶುಪಾಲವಧ ಮುಂತಾದ ಇತರ ಕಾವ್ಯಗಳಲ್ಲಿ ಈ ಎಲ್ಲ ಲಕ್ಷಣಗಳೂ ಪೂರ್ಣವಾಗಿ ಬಂದಿಲ್ಲ. ಬಂದರೂ ಬಲಾತ್ಕಾರವಾಗಿ ಲಕ್ಷಣ ಪೂರ್ತಿಗೋಸ್ಕರ ಎಳೆದು ತಂದವು. ವಾಲ್ಮೀಕಿ ರಾಮಾಯಣದಲ್ಲಿ ಈ ವರ್ಣನೆಗಳು ಕಥಾ ಸಂನಿವೇಶಕ್ಕೆ ಹೊಂದಿಕೊಂಡು ಔಚಿತ್ಯಪೂರ್ಣವಾಗಿ ನಿರೂಪಿತವಾಗಿವೆ. ಉದಾಹರಣೆಗೆ, ಆರಂಭದಲ್ಲಿ ಅಯೋಧ್ಯಾನಗರ, ಹನುಮಂತನು ಸೀತಾನ್ವೇಷಣೆಗಾಗಿ ಹೋದಾಗ ಲಂಕಾನಗರ – ಇವುಗಳ ವರ್ಣನೆ ಸಹಜವಾದದ್ದು. ಸಮುದ್ರಲಂಘನವು ವಾನರ ಸೇನೆಗೆ ಅಶಕ್ಯವೆಂಬುದನ್ನು ಮನಗಾಣಿಸಲು ಸಮುದ್ರದ ಅಗಾಧತೆಯನ್ನು ವರ್ಣಿಸ ಬೇಕಾಯಿತು. ಶ್ರೀರಾಮನು ಸಮಯಪ್ರತೀಕ್ಷೆಗಾಗಿ ಋಷ್ಯಮೂಕದಲ್ಲಿ ನೆಲೆಸಿದಾಗ ವರ್ಷರ್ತುವಿನ ವರ್ಣನೆಯೂ ಅದು ಕಳೆದ ಮೇಲೆ ಬಂದ ಶರದೃತುವಿನ ವರ್ಣನೆಯೂ ಆವಶ್ಯಕವಾದದ್ದೇ. ಹನುಮಂತನು ಕತ್ತಲಲ್ಲಿ ಸೀತೆಯನ್ನು ಹುಡುಕುತ್ತಿದ್ದಾಗ ಚಂದ್ರೋದಯದ ವರ್ಣನೆ ಬರುತ್ತದೆ. ಕಪಿಗಳು ಮಧು ವನವನ್ನು ಪ್ರವೇಶಿಸಿದಾಗ ಮಧುಪಾನದ ವಿಷಯವು ಪ್ರಸ್ತುತವಾಗುತ್ತದೆ. ಹೀಗೆ ವಸ್ತುವರ್ಣನೆಗಳೂ ರಸಭಾವಾಭಿ ವ್ಯಂಜನೆಗಳೂ ಎಷ್ಟು ಔಚಿತ್ಯದಿಂದ ಹೊಂದಿಕೊಂಡಿವೆಯೆಂಬುದನ್ನು ರಾಮಾಯಣದ ವಾಚಕರು ಸುಲಭವಾಗಿ ಗುರುತಿಸಬಹುದು. ವಸ್ತುತಃ ವಾಲ್ಮೀಕಿ ರಾಮಾಯಣವನ್ನು ಎದುರಿಗಿಟ್ಟುಕೊಂಡೇ ಆಲಂಕಾರಿಕರು ಮಹಾಕಾವ್ಯದ ಲಕ್ಷಣಗಳನ್ನು ನಿರ್ಮಿಸಿಕೊಂಡಿದ್ದಾರೆ–ಎನ್ನುವುದು ಯುಕ್ತ

ಶ್ರೀಮದ್ರಾಮಾಯಣದಲ್ಲಿ ಶೃಂಗಾರಾದಿ ನವರಸಗಳು ನಿರಂತರವಾಗಿ ತುಂಬಿ ತುಳುಕುತ್ತವೆ. ಆಲಂಕಾರಿಕರು ಹೇಳುವ ನಿರ್ವೇದ, ಗ್ಲಾನಿ, ಶಂಕ–ಮುಂತಾದ ಮೂವತ್ತುಮೂರು ಭಾವಗಳನ್ನೂ ಈ ಗ್ರಂಥದಲ್ಲಿ ವಿಶದವಾಗಿ ಗುರುತಿಸಬಹುದು. ಕರುಣರಸವು ಪ್ರಧಾನವಾದದ್ದು. ವೀರರೌದ್ರಗಳಿಗೆ ಎರಡನೆಯ ಸ್ಥಾನ. ನಾಯಕನ ವಿಷಯವಾಗಿ ಹೇಳುವುದಾದರೆ, ಶ್ರೀರಾಮನಿಗಿಂತ ಶ್ರೇಷ್ಠನಾದ ಧೀರೋದಾತ್ತನಾಯಕನು ಜಗತ್ತಿನ ಇತಿಹಾಸ ಪುರಾಣಗಳಲ್ಲಿ ಯಾವನಿದ್ದಾನೆ? ರಾವಣನಿಗಿಂತ ಧೀರೋದ್ಧತನಾದ ಪ್ರತಿನಾಯಕನಾದರೂ ಯಾರು? ಒಳ್ಳೆಯದರಲ್ಲಾಗಲಿ ಕೆಟ್ಟದರಲ್ಲಾಗಲಿ ಯಾವ ಯಾವ ಗುಣಸ್ವಭಾವಗಳುಳ್ಳ ಸ್ತ್ರೀಪುರುಷರು ಲೋಕದಲ್ಲಿದ್ದಾರೋ ಅವರೆಲ್ಲರಿಗೂ ಪ್ರತಿನಿಧಿಗಳಾದ ಸ್ತ್ರೀಪುರುಷ ಪಾತ್ರಗಳು ಈ ರಾಮಾಯಣ ಲೋಕದಲ್ಲಿದ್ದಾರೆ. ಮಗುವಿನಂತೆ ನಿರ್ಮಾಯನಾದ ಋಷ್ಯಶೃಂಗನಿದ್ದಾನೆ. ಮಹಾಮಾಯಾವಿಯಾದ ಮಾರೀಚನೂ ಇದ್ದಾನೆ. ಸ್ವಾರ್ಥಲೇಶವೂ ಇಲ್ಲದ ಸುಮಿತ್ರೆಯೂ ಇದ್ದಾಳೆ. ಸ್ವಾರ್ಥಿಯಾದ ಕೈಕೇಯಿಯೂ ಇದ್ದಾಳೆ. ಪರಮ ಸಾಧ್ವಿ ಯಾದ ಸೀತಾದೇವಿಯನ್ನೂ ಇಲ್ಲಿ ಕಾಣಬಹುದು. ಗಯ್ಯಾಳಿಯಾದ ಶೂರ್ಪಣಖೆಯನ್ನು ಕಾಣಬಹುದು. ಸೋದರನಿಗಾಗಿ ಸರ್ವಸ್ವವನ್ನೂ ಅರ್ಪಿಸುವ ಭರತನಿದ್ದರೆ, ಸೋದರನಿಂದ ಸರ್ವಸ್ವವನ್ನು ಅಪಹರಿಸುವ ವಾಲಿಯೂ ಇದ್ದಾನೆ. ಮಾನವರು, ದಾನವರು, ಋಷಿಗಳು,

* 'ವಾಲ್ಮೀಕಿಮುನಿಗಳ ಹಾಸ್ಯಪ್ರವೃತ್ತಿ' – ಎಂಬ ಒಂದು ಚಿಕ್ಕಪುಸ್ತಕದಲ್ಲಿ ನಾನು ಹಾಸ್ಯರಸದ ಅಭಿವ್ಯಕ್ತಿಯನ್ನು ಎತ್ತಿ ತೋರಿಸಿದ್ದೇನೆ.

ದೇವತೆಗಳು, ವಾನರಭಲ್ಲೂಕಗಳು, ಜಟಾಯು, ಸಂಪಾತಿ ವೈನತೇಯರೆಂಬ ಪಕ್ಷಿಗಳು – ಹೀಗೆ ನಾನಾ ಜಾತಿಯ ಚೇತನಗಳು ಒಂದಾಗಿ ಕಥೆಯನ್ನು ಮುಂದೆ ಮುಂದಕ್ಕೆ ಸಾಗಿಸುವಂತೆ ಹೆಣೆದ ಸಂವಿಧಾನ ವೈಖರೀಚಾತುರಿಯು ವಾಲ್ಮೀಕಿ ಮುನಿಗಳ ಅಪೂರ್ವಸಾಧನೆ.

ಗ್ರಂಥ ಪರಿಮಾಣ

ಈ ವಾಲ್ಮೀಕಿ ರಾಮಾಯಣದಲ್ಲಿಯೇ –

ಚತುರ್ವಿಂಶತ್ ಸಹಸ್ರಾಣಿ ಶ್ಲೋಕಾನಾಮುಕ್ತವಾನೃಷಿಃ ।
ತಥಾ ಸರ್ಗಶತಾನ್ ಪಂಚ ಷಟ್ ಕಾಂಡಾನಿ ತಥೋತ್ತರಮ್ ॥

ಬಾಲ 1–4–2

ಎಂದು ಹೇಳಿದೆ.

''ವಾಲ್ಮೀಕಿ ಋಷಿಗಳು ಬಾಲಕಾಂಡವೇ ಮೊದಲಾದ ಆರು ಕಾಂಡಗಳನ್ನೂ ಹಾಗೆಯೇ ಉತ್ತರಕಾಂಡವನ್ನೂ ರಚಿಸಿದರು. ಇವುಗಳಲ್ಲಿ ಒಟ್ಟು 500 ಸರ್ಗಗಳೂ 24,000 ಶ್ಲೋಕಗಳೂ ಇವೆ. ಇವೆಲ್ಲವನ್ನೂ ಆ ಋಷಿಗಳು ಹೇಳಿದರು'' ಎಂದು ಇದರ ಅಭಿಪ್ರಾಯ. ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳಲ್ಲಿ ಗಾಯತ್ರೀಮಂತ್ರದ ಇಪ್ಪತ್ತುನಾಲ್ಕು ಅಕ್ಷರಗಳನ್ನು ಒಂದಾನೊಂದು ಕ್ರಮದಿಂದ ಸೇರಿಸಿದ್ದಾರೆಂದು, ಸಾಂಪ್ರದಾಯಕರ ವಿಶ್ವಾಸವಿದೆ. ಸರ್ಗಗಳ ಮತ್ತು ಶ್ಲೋಕಗಳ ಸಂಖ್ಯೆ ಈಗ ಉಪಲಬ್ಧವಾದ ಯಾವ ಪ್ರತಿಗಳಲ್ಲಿಯೂ ಸರಿಯಾಗಿ ಕಂಡುಬರುವುದಿಲ್ಲ. ಕೆಲವು ಪ್ರತಿಗಳಲ್ಲಿ ಸಂಖ್ಯೆ ನ್ಯೂನವಾಗಿದೆ, ಕೆಲವು ಪ್ರತಿಗಳಲ್ಲಿ ಅಧಿಕವಾಗಿದೆ. ಸಾವಿರಾರು ವರ್ಷಗಳ ಹಿಂದೆ ರಚಿತವಾದ ಈ ಬೃಹದ್ಗ್ರಂಥದಲ್ಲಿ ಹಸ್ತಪ್ರತಿಗಳನ್ನು ಬರೆದು ರಕ್ಷಿಸುವಾಗ ಅನೇಕ ಲೋಪದೋಷಗಳಾಗುವ ಸಂಭವ ಇದ್ದೇ ಇರುತ್ತದೆ. ಕೆಲವು ಸರ್ಗಗಳೂ ಶ್ಲೋಕಗಳೂ ಅಲ್ಲಲ್ಲಿ ಪ್ರಕ್ಷಿಪ್ತವಾಗಿರುವುದೂ ಉಂಟು.

ಉತ್ತರಕಾಂಡ

ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧಕಾಂಡ – ಇವು ರಾಮಾಯಣದ ಆರು ಕಾಂಡಗಳು. ಯುದ್ಧಕಾಂಡದ ಕಡೆಯಲ್ಲಿ ಶ್ರೀರಾಮಪಟ್ಟಾಭಿಷೇಕವು ಮಂಗಳಾಂತವಾಗಿ ಬರುವಂತೆ ಕಥೆ ಇದೆ. ಅನಂತರದ ಉತ್ತರಕಾಂಡವು ಏಳನೆಯದು. ಇದರಲ್ಲಿ ಸೀತಾಪರಿತ್ಯಾಗವೂ ಶ್ರೀರಾಮಾದಿಗಳ ಸ್ವರ್ಗಾರೋಹಣ ವೃತ್ತಾಂತವೂ ಬಂದಿದೆ. ಈ ಉತ್ತರಕಾಂಡವನ್ನು ವಾಲ್ಮೀಕಿಮುನಿಗಳು ಬರೆಯಲಿಲ್ಲವೆಂದೂ ಇದು ಪ್ರಕ್ಷಿಪ್ತವೆಂದೂ ಕೆಲವು ವಿಮರ್ಶಕರು ಹೇಳುತ್ತಾರೆ. ಅವರು ಹೇಳುವ ಯಾವ ಕಾರಣವೂ ಸಮಂಜಸವಾಗಿ ತೋರುವುದಿಲ್ಲ.

ರಾಮಾಯಣದ ಆರಂಭದಲ್ಲಿಯೇ ಬಂದಿರುವ 'ಷಟ್ಕಾಂಡಾನಿ ತಥೋತ್ತರಮ್' ಎಂಬ ಮಾತನ್ನು ಹಿಂದೆ ಉದಾಹರಿಸಿದೆ. ಅದೇ ಪ್ರಸಂಗದಲ್ಲಿ 'ತಚ್ಚಕಾರೋತ್ತರೇ ಕಾವ್ಯೇ

ವಾಲ್ಮೀಕಿರ್ಭಗವಾನ್ನೃಷಿಃ' ಎಂಬುದಾಗಿ ಬಾಲಕಾಂಡದ ಮೂರನೆಯ ಸರ್ಗದ ಕಡೆಯಲ್ಲಿ ಉತ್ತರಕಾಂಡವನ್ನು ವಾಲ್ಮೀಕಿ ಋಷಿಗಳು ಬರೆದರೆಂದು ಸ್ಪಷ್ಟವಾದ ನಿರ್ದೇಶವಿದೆ. ಕುಶಲವರು ಈ ರಾಮಾಯಣವನ್ನು ಶ್ರೀರಾಮನೆದುರಿಗೆ ಹಾಡಿದರೆಂದು ಬಾಲಕಾಂಡದಲ್ಲಿ ಬಂದಿದೆ. ಉತ್ತರಕಾಂಡವಿಲ್ಲದಿದ್ದರೆ 'ಈ ಕುಶಲವರು ಯಾರು? ರಾಮಾಯಣವನ್ನು ಅವರಿಗೆ ಕಲಿಸಿದವರು ಯಾರು? ಅವರು ಎಲ್ಲಿಂದ ಬಂದರು?' ಎಂಬ ಪ್ರಶ್ನೆಗಳಿಗೆ ಉತ್ತರವೇ ಇಲ್ಲವಾದೀತು. ಉತ್ತರಕಾಂಡದಲ್ಲಿ ಕೆಲವು ಪ್ರಕ್ಷಿಪ್ತ ಕಥೆಗಳಿರುವುದು ನಿಜ. ಅದನ್ನು ವ್ಯಾಖ್ಯಾನ ಕಾರರೇ ಒಪ್ಪಿಕೊಂಡಿದ್ದಾರೆ. ಅಷ್ಟು ಮಾತ್ರದಿಂದ ಉತ್ತರಕಾಂಡವೇ ಪ್ರಕ್ಷಿಪ್ತವೆನ್ನಲಾದೀತೆ? ಶ್ರೀ ಗೋವಿಂದರಾಜೀಯ ಮೊದಲಾದ ಎಲ್ಲ ವ್ಯಾಖ್ಯಾನಗಳನ್ನು ಬರೆದವರೂ ಉತ್ತರಕಾಂಡಕ್ಕೆ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅದು ಪ್ರಕ್ಷಿಪ್ತವೆಂದು ಯಾರೂ ಹೇಳಿಲ್ಲ ಮತ್ತು ಉತ್ತರಕಾಂಡವಿಲ್ಲದಿದ್ದರೆ ರಾಮಾಯಣ ಕಥೆಯೇ ಅಪೂರ್ಣವಾಗುತ್ತದೆ. ಕೆಲವು ಶಂಕೆಗಳಿಗೆ ಉತ್ತರವೇ ಇಲ್ಲದೆ ಹೋಗುತ್ತದೆ. ರಾವಣಾದಿಗಳು ಯಾರು, ಅವರು ಲಂಕೆಯಲ್ಲಿ ವಾಸವಾಗಿರಲು ಕಾರಣವೇನು, ರಾವಣನಿಗೆ ಪುಷ್ಪಕವಿಮಾನ ಹೇಗೆ ದೊರಕಿತು, ಕುಂಭಕರ್ಣನ ಅತಿನಿದ್ರೆಗೆ ಕಾರಣವೇನು, ವಿಭೀಷಣನು ರಾಕ್ಷಸನಾದರೂ ಧರ್ಮಾತ್ಮನಾದದ್ದೇಕೆ, ಇಂದ್ರಜಿತುವಿಗೆ ಅಷ್ಟು ಮಾಯಾಶಕ್ತಿಗಳು ಲಭಿಸಿದ್ದು ಹೇಗೆ, ಹನುಮಂತನು ವಜ್ರಕಾಯನಾಗಿ ಬ್ರಹ್ಮಾಸ್ತ್ರವನ್ನು ಎದುರಿಸುವ ಸಾಮರ್ಥ್ಯವನ್ನು ಗಳಿಸಿದ್ದು ಎಂತು, ಸಾಗರ ಲಂಘನ ಪ್ರಸ್ತಾವದಲ್ಲಿ ಅವನು ಮಾತಾಡದೆ ಸುಮ್ಮನೆ ಕುಳಿತುಕೊಂಡು ಜಾಂಬವಂತನು ಕರೆದೆಬ್ಬಿಸಿದಾಗ ಮಾತ್ರ ತನ್ನ ಪೌರುಷವನ್ನು ಹೇಳಿಕೊಂಡದ್ದೇಕೆ, ಅವನ ಮರೆವಿಗೆ ಕಾರಣವೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳೇ ಇಲ್ಲದೆ ವಾಚಕರಿಗೆ ನಿರಾಸೆಯಾಗುವುದಿಲ್ಲವೆ? ಈ ಶಂಕೆಗಳಿಗೆ ಕವಿಯಿಂದ ಉತ್ತರ ಬರಬೇಡವೆ? ಅಲ್ಲದೆ ಕಾಳಿದಾಸ, ಭವಭೂತಿ, ಕ್ಷೇಮೇಂದ್ರ – ಮೊದಲಾದ ಮಹಾಕವಿಗಳು ತಮ್ಮ ಕಾವ್ಯಗಳಲ್ಲಿ ಸೀತಾಪರಿತ್ಯಾಗದ ಕಥೆಯನ್ನು ಹೇಳಿದ್ದಾರೆ. ವಾಲ್ಮೀಕಿ ರಾಮಾಯಣವನ್ನು ಅನುಸರಿಸಿದ ಆ ಮಹಾಕವಿಗಳು ಉತ್ತರಕಾಂಡದ ಕಥೆಯನ್ನು ಹೇಗೆ ನಿರೂಪಿಸಿದರು? ಎಂಬ ಪ್ರಶ್ನೆಗೂ ಉತ್ತರವಿಲ್ಲದೆ ಹೋದೀತು.

ಉತ್ತರಕಾಂಡದಲ್ಲಿ ಶ್ಲೋಕಗಳು ಕಾವ್ಯಶೈಲಿಯಲ್ಲಿ ಭಿನ್ನವಾಗಿವೆಯೆಂಬುದೂ ಒಪ್ಪತಕ್ಕದ್ದಲ್ಲ. ಪಟ್ಟಾಭಿಷೇಕದ ಕಡೆಯಲ್ಲಿ ಬಂದಿರುವ ಫಲಶ್ರುತಿಯು ನಿರ್ಣಾಯಕವಲ್ಲ. ರಾಮಾಯಣದ ಆದಿಯಲ್ಲಿಯೂ ಫಲಶ್ರುತಿಯಿದೆ. ಉತ್ತರಕಾಂಡದ ಕಡೆಯಲ್ಲಿಯೂ ಫಲಶ್ರುತಿ ಇದೆ. ''ಮಂಗಲಾದೀನಿ ಮಂಗಲಮಧ್ಯಾನಿ ಮಂಗಲಾಂತಾನಿ ಚ ಶಾಸ್ತ್ರಾಣಿ ಪ್ರಥಂತೇ'' ಎಂದು ವ್ಯಾಕರಣ ಮಹಾಭಾಷ್ಯಕಾರರಾದ ಪತಂಜಲಿಮುನಿಗಳು ಹೇಳಿದ್ದಾರೆ. ಆದ್ದರಿಂದ ಪಟ್ಟಾಭಿಷೇಕದ ಕಡೆಯಲ್ಲಿ ಮಂಗಳವಿದ್ದರೆ ಮಂಗಳಮಧ್ಯವೇ ಆಯಿತು.

ಉತ್ತರ ಕಾಂಡವನ್ನು ಪಾರಾಯಣ ಮಾಡಬಾರದೆಂಬುದೂ ನಿರಾಧಾರವಾದ ನುಡಿ. ಋಷಿಪ್ರಣೀತವಾದದ್ದು ಏಕೆ ಪಾರಾಯಣ ಯೋಗ್ಯವಲ್ಲ? ಉತ್ತರ ಕಾಂಡದ ಕಡೆಯಲ್ಲಿ ಈ ಸಮಗ್ರರಾಮಾಯಣದ ಪಠನ ವಾಚನ ಪಾರಾಯಣಗಳಿಗೆ ಫಲವನ್ನು ಹೇಳಿದ್ದಾರೆ.

ಪಠನಯೋಗ್ಯವೇ ಅಲ್ಲದಿದ್ದರೆ ಅದು ಹೇಗೆ ಸಂಗತವಾಗುತ್ತದೆ? ಮಹಾಭಾರತದ ಸಮಾಪ್ತಿಯಲ್ಲಿ ಸ್ವರ್ಗಾರೋಹಣ ಪರ್ವವಿರುವುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

ಈ ಬಹಿರಂಗ ವಿಚಾರಗಳಿರಲಿ. ರಾಮಾಯಣದ ಅಂತರಂಗವನ್ನು ಯಥಾಮತಿ ಯಾಗಿ ಅವಲೋಕಿಸೋಣ. ಮೊದಲು ಪಾತ್ರಾವಲೋಕನ. ವಾಲ್ಮೀಕಿಮುನಿಗಳು ಚಿತ್ರಿಸಿದ ಪಾತ್ರಗಳೆಲ್ಲವೂ ಪ್ರಭಾವಶಾಲಿಯಾದವು. ಅವು ತಮ್ಮ ಗುಣಸ್ವಭಾವಗಳಿಂದ ನಮ್ಮ ಅಂತರಂಗದ ಮೇಲೆ ಗಾಢವಾದ ಮುದ್ರೆಯನ್ನೊತ್ತಿಬಿಡುತ್ತವೆ. ಒಂದು ವೇಳೆ ವಿವರಗಳು ನಮ್ಮ ನೆನಪಿನಿಂದ ಮರೆಯಾದರೂ ಆ ವ್ಯಕ್ತಿಯ ಒಂದಾನೊಂದು ಸ್ವರೂಪ ವಿಶೇಷವು ಮಾತ್ರ ಎಂದಿಗೂ ಅಳಿಸಿಹೋಗುವುದಿಲ್ಲ. ಕವಿಯು ಆ ವ್ಯಕ್ತಿಗಳಲ್ಲಿ ತುಂಬಿರುವ ಜೀವಕಳೆ ಅಂತಹದು. ಪಾತ್ರಾವಲೋಕನ ಪದ್ಧತಿಯು ನಮ್ಮ ಭಾರತೀಯ ಕಾವ್ಯ ಮೀಮಾಂಸಾ ಪದ್ಧತಿಗೆ ಹೊಸದಾದರೂ ಅದು ರುಚಿರವಾದದ್ದು, ಗ್ರಾಹ್ಯವಾದದ್ದು.

ರಾಮಾಯಣ ಮಹಾಭಾರತಗಳು ಆರ್ಷಗ್ರಂಥಗಳು. ಋಷಿ ಪ್ರಣೀತವಾದವುಗಳು. ಗಟ್ಟಿಯಾದ ಧಾರ್ಮಿಕ ಹಿನ್ನೆಲೆಯಲ್ಲಿ ರಚಿತವಾದವು. ದಾರ್ಶನಿಕ ತತ್ತ್ವಗಳಿಂದ ಪ್ರಚೋದಿತವಾದವು. ಅವುಗಳನ್ನಾಗಲಿ ತದವಲಂಬಿತ ಕಾವ್ಯಗಳನ್ನಾಗಲಿ ವಿಮರ್ಶಿಸುವಾಗ ಈ ಹಿನ್ನೆಲೆಯನ್ನೂ ಕವಿಯ ಮನೋಭಾವವನ್ನೂ ಗ್ರಂಥದ ಉದ್ದೇಶವನ್ನೂ ಸರಿಯಾಗಿ ವಿಮರ್ಶಕನು ಗಮನಿಸುವುದು ಆವಶ್ಯಕ. ಆ ಗ್ರಂಥಗಳ ವಿಷಯದಲ್ಲಿ ಜನತೆಯ ವಿಶ್ವಾಸವೇನೆಂಬುದೂ ಗಣನೀಯವಾದದ್ದು. ಆಗ ವಿಮರ್ಶಕನು ತನ್ನ ಕಾರ್ಯದಲ್ಲಿ ಯಶಸ್ವಿಯಾದಾನು. ಅವು ಈ ಕಾಲದ ನವ್ಯನವ್ಯೋತ್ತರ ಕಥೆ ಕಾದಂಬರಿಗಳಲ್ಲವೆಂಬುದೂ ಸ್ಮರಣೆಯಲ್ಲಿರಬೇಕು. ದೇಶ ಕಾಲ ಪರಿಸ್ಥಿತಿ ವಿಶ್ವಾಸಗಳ ಪರಿವೆಯಿಲ್ಲದ ಪರಿಶೀಲನೆ ಕತ್ತಲೆಯಲ್ಲಿ ತಡವರಿಸಿದಂತೆಯೇ ಸರಿ.

ವಾಲ್ಮೀಕಿ ಮುನಿಗಳು ರಾಮಾಯಣದಲ್ಲಿ ವರ್ಣಿಸಿದ ವ್ಯಕ್ತಿಗಳನ್ನು ಸಹೃದಯರಾದ ಅನೇಕ ವಿದ್ವಾಂಸರು ಉತ್ತಮ ರೀತಿಯಲ್ಲಿ ಪರಿಶೀಲಿಸಿ ಚಿತ್ರಿಸಿದ್ದಾರೆ. ಈಗ ವಿಶೇಷವಾಗಿ ಹೇಳಬೇಕಾದ ಹೊಸ ಅಂಶವೇನೂ ಇಲ್ಲವಾದರೂ ವಾಚಕರ ಸೌಕರ್ಯಕ್ಕಾಗಿ ಕೆಲವು ಪಾತ್ರಗಳನ್ನಿಲ್ಲಿ ಅವಲೋಕಿಸಬೇಕಾದುದು ಯುಕ್ತವೆನಿಸುತ್ತದೆ.

1. ದಶರಥ

ಇವನು ಉತ್ತರಕೋಸಲೇಶ್ವರ. ಅಯೋಧ್ಯೆ ಈತನ ರಾಜಧಾನಿ. ಸರಯೂ ನದಿಯ ಉತ್ತರದಲ್ಲಿದ್ದ ಈ ಉತ್ತರಕೋಸಲರಾಜ್ಯವು ಚಿಕ್ಕದಾದರೂ ದಶರಥನು ಚಕ್ರವರ್ತಿಯೆನಿಸಿ ಕೊಂಡು ಮಹಾವೈಭವದಿಂದ ರಾಜ್ಯಭಾರ ಮಾಡುತ್ತಿದ್ದನು. ಆ ಕಾಲದಲ್ಲಿ ಚಕ್ರವರ್ತಿಯು ನೇರವಾಗಿ ಅಧೀನರಾಜ್ಯಗಳನ್ನು ಆಳುತ್ತಿರಲಿಲ್ಲ. ಆತನು ಇತರ ರಾಜರನ್ನು ಗೆದ್ದು ಕಪ್ಪಕಾಣಿಕೆಗಳನ್ನು ವಸೂಲು ಮಾಡುತ್ತಿದ್ದನೇ ಹೊರತು ಅವರನ್ನು ಪದಚ್ಯುತಿಗೊಳಿಸುತ್ತಿರಲಿಲ್ಲ. ಮಹಾಕವಿ ಕಾಳಿದಾಸನ ರಘುವಂಶದಲ್ಲಿ ರಘುರಾಜನ ದಿಗ್ವಿಜಯ ವರ್ಣನೆಯನ್ನು

ನೋಡಿದರೆ ಇದು ಗೊತ್ತಾಗುತ್ತದೆ.

ದಶರಥನು ಮಹಾರಥನೂ ಸಾರ್ವಭೌಮನೂ ಆದ್ದರಿಂದಲೇ ಅವನ ಆಸ್ಥಾನದಲ್ಲಿ ಸಾಮಂತರಾಜರು ನೆರೆದಿರುತ್ತಿದ್ದರೆಂದು ರಾಮಾಯಣದಲ್ಲಿಯೇ ವರ್ಣನೆ ಇದೆ. ಇಂದ್ರನಿಗೂ ಶಂಬರಾಸುರನಿಗೂ ಯುದ್ಧವು ನಡೆದಾಗ ದೇವೇಂದ್ರನಿಗೆ ಸಹಾಯ ಮಾಡುವುದಕ್ಕಾಗಿ ದಶರಥನು ಹೋಗಿ ಯುದ್ಧ ಮಾಡಿದ್ದಾನೆ. ಆಗಲೇ ಕೈಕೇಯಿಗೆ ಎರಡು ವರಗಳನ್ನು ಕೊಡುವ ಪ್ರಸಂಗ ಬಂದಿದೆ. ಶ್ರೀರಾಮನು ವನವಾಸಕ್ಕೆ ತೆರಳಿ ಚಿತ್ರಕೂಟದಲ್ಲಿ ನೆಲೆಸಿದ್ದಾಗ, ದಶರಥನ ಮರಣ ವೃತ್ತಾಂತವನ್ನು ಭರತನಿಂದ ತಿಳಿದು ಶ್ರೀರಾಮನು ಲಕ್ಷ್ಮಣನೊಡನೆ ಪಿತೃಶ್ರಾದ್ಧವನ್ನು ಮಾಡುತ್ತಾನೆ. ಆಗ ಕಾಡು ಹಣ್ಣುಗಳನ್ನು ಪಿಂಡೀಕರಿಸಿ ಪಿಂಡವೆಂದು ತಂದೆಗೆ ಅರ್ಪಿಸಿ ಪರ್ಣಶಾಲೆಗೆ ಹಿಂದಿರುಗಿ ಬರುತ್ತಾನೆ. ಅದೇ ದಾರಿಯಲ್ಲಿ ಕೌಸಲ್ಯೆ ಸುಮಿತ್ರೆಯೊಡನೆ ಬರುವಾಗ ಆ ಪಿಂಡಗಳನ್ನು ನೋಡಿದೊಡನೆ ಅವು ಶ್ರೀರಾಮನಿಂದ ಅರ್ಪಿತವಾದವುಗಳೆಂದು ಅವಳಿಗೆ ಹೊಳೆಯುತ್ತದೆ. ಆಗ ಶೋಕಿಸುತ್ತ ಕೌಸಲ್ಯೆ ಹೇಳುವ ಮಾತಿದು –

ಚತುರಂತಾಂ ಮಹೀಂ ಭುಕ್ತ್ವಾ ಮಹೇಂದ್ರಸದೃಶೋ ಭುವಿ ।
ಕಥಮಿಂಗದಿಪಿಣ್ಯಾಕಂ ಸ ಭುಂಕ್ತೇ ವಸುಧಾಧಿಪಃ ॥

– ಅಯೋಧ್ಯಾ 103–12

''ಚತುಃಸಮುದ್ರಪರ್ಯಂತವಾದ ರಾಜ್ಯವನ್ನಾಳಿ ಭೂಲೋಕದ ಇಂದ್ರನಂತೆ ವೈಭವದಲ್ಲಿ ಮೆರೆಯುತ್ತಿದ್ದ ಆ ಮಹಾರಾಜನು ಇಂಗುದೀಬೀಜದ ಈ ಮುದ್ದೆಯನ್ನು ಹೇಗೆ ತಿಂದಾನು?'' ಆದ್ದರಿಂದಲೇ ಶ್ರೀರಾಮನು ತನ್ನನ್ನು ನಿಂದಿಸಿದ ವಾಲಿಗೆ ಉತ್ತರವನ್ನು ಹೇಳುವಾಗ –

''ಇಕ್ಷ್ವಾಕೂಣಾಮಿಯಂ ಭೂಮಿಃ ಸಶೈಲವನಕಾನನಾ''

– ಕಿಷ್ಕಿಂಧಾ 18–6

ಎನ್ನುತ್ತಾನೆ ''ಪರ್ವತಾರಣ್ಯಸಹಿತವಾಗಿ ಈ ಭೂಭಾಗವೆಲ್ಲವೂ ಇಕ್ಷ್ವಾಕು ವಂಶದವರಾದ ನಮಗೆ ಸೇರಿದ್ದು''. ಇದೇನೂ ಗೊತ್ತಿಲ್ಲದ ಒಬ್ಬ ವಿಮರ್ಶಕನು ಶ್ರೀರಾಮನ ನುಡಿಯನ್ನೇ ಟೀಕಿಸುತ್ತ ''ಇವನೊಬ್ಬ ದೊಡ್ಡ Colonist'' ಎಂದು ಹಂಗಿಸಿದ್ದಾನೆ. ಶ್ರೀರಾಮನು ಕಾಲನಿಷ್ಟ್ ಆದರೆ ಸುಗ್ರೀವನಿಗೆ ಕಿಷ್ಕಿಂಧೆಯನ್ನೂ ವಿಭೀಷಣನಿಗೆ ಲಂಕಾರಾಜ್ಯವನ್ನೂ ಕೊಟ್ಟು ಪಟ್ಟಾಭಿಷೇಕ ಮಾಡಿದ್ದು ಹೇಗೆ ? ಎಂಬುದೂ ಈ ವಿಮರ್ಶಕನಿಗೆ ಹೊಳೆಯಲಿಲ್ಲ.

ದಶರಥನ ಪತ್ನಿಯರಲ್ಲಿ ಕೌಸಲ್ಯೆ ದಕ್ಷಿಣ ಕೋಸಲ ರಾಜನ ಮಗಳು. ಸರಯೂ ನದಿಯ ದಕ್ಷಿಣ ಭಾಗದಲ್ಲಿದ್ದುದು ದಕ್ಷಿಣ ಕೋಸಲ. ಕೋಸಲದ ರಾಜ ಕೋಸಲ. ಅವನ ಮಗಳು ಕೌಸಲ್ಯಾ ಎಂದು ವ್ಯುತ್ಪತ್ತಿ. ಇದು ಯೌಗಿಕ ನಾಮ. ತಾಯಿತಂದೆಗಳಿಟ್ಟ ಅಂಕಿತನಾಮ ತಿಳಿಯದು. ಸುಮಿತ್ರೆಯು ಮಗಧರಾಜನ ಸುತೆಯೆಂದು ಕಾಳಿದಾಸನು ರಘುವಂಶದಲ್ಲಿ ಹೇಳಿದ್ದಾನೆ. (9–17). ಕೈಕೇಯಿಯು ಕೇಕಯ ರಾಜನಾದ ಅಶ್ವಪತಿಯ ಮಗಳು. ಇವಳ

ಅಂಕಿತನಾಮವೂ ತಿಳಿಯದು.

ದಶರಥನ ರಾಜ್ಯವು ಬಹುವಿಸ್ತೃತವಾಗಿತ್ತೆಂದೂ ಅವನು ಚಕ್ರವರ್ತಿ ಯಾಗಿದ್ದನೆಂದೂ ಹಿಂದೆ ತಿಳಿಸಿದೆ. ಆದ್ದರಿಂದಲೇ ಅವನಿಗೆ ಎಂಟು ಜನ ಅಮಾತ್ಯರಿದ್ದರು. ಧೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧಕ, ಅಶೋಕ, ಮಂತ್ರಪಾಲ ಮತ್ತು ಸುಮಂತ್ರ. ಇವರಲ್ಲಿ ಸುಮಂತ್ರನು ದಶರಥನಿಗೆ ಅತ್ಯಂತ ಆಪ್ತನಾಗಿದ್ದನೆಂದು ತಿಳಿದುಬರುತ್ತದೆ. ಆತನು ಸಾರಥಿಯಾಗಿ ರಥವನ್ನು ನಡೆಸುತ್ತಿದ್ದನೆಂಬುದು ಸ್ವಲ್ಪ ವಿಚಿತ್ರವಾಗಿಯೇ ತೋರುತ್ತದೆ. ದಶರಥನು ಮೃತನಾದನೆಂಬ ಸುದ್ದಿಯನ್ನು ತಿಳಿದು ವಸಿಷ್ಠ, ಮಾರ್ಕಂಡೇಯ, ಮೌದ್ಗಲ್ಯ, ವಾಮದೇವ, ಕಾಶ್ಯಪ, ಕಾತ್ಯಾಯನ, ಗೌತಮ ಮತ್ತು ಜಾಬಾಲಿ – ಎಂಬ ಋಷಿಗಳು ಬಂದರೆಂದೂ ಇವರು ''ರಾಜಕರ್ತಾರ''ರೆಂದೂ ಅಯೋಧ್ಯಾ ಕಾಂಡದಲ್ಲಿದೆ (ಸರ್ಗ 67). ಈ ಎಂಟು ಜನರೂ ಮಂತ್ರಾಲೋಚನೆಯಲ್ಲಿ ದಶರಥನಿಗೆ ಸಲಹೆ ಮಾಡುತ್ತಿದ್ದ ಮಂತ್ರಿಗಳೆಂದು ಕಾಣುತ್ತದೆ. ''ರಾಜಕರ್ತಾರ'' ಎಂಬ ವಿಶೇಷಣವು ಈ ಮಾತಿಗೆ ಪುಷ್ಟಿಯನ್ನೀಯುತ್ತದೆ. ಹಿಂದೆ ಹೇಳಿದ ಧೃಷ್ಟಿ, ಜಯಂತ – ಮೊದಲಾದವರು ಕಾರ್ಯನಿರ್ವಾಹಕರಾದ ಅಮಾತ್ಯರೆಂದೂ ಈ ಎಂಟು ಜನ ಋಷಿಗಳು ಮಂತ್ರಾಲೋಚನೆಗೆ ನೆರವು ನೀಡುತ್ತಿದ್ದ ಮಂತ್ರಿಗಳೆಂದೂ ಊಹಿಸಬೇಕಾಗುತ್ತದೆ. ಇವರಲ್ಲಿ ವಸಿಷ್ಠ, ವಾಮದೇವ – ಇವರಿಬ್ಬರು ಮುಖ್ಯಪುರೋಹಿತರಾಗಿಯೂ ಇದ್ದರು. ಅಲ್ಲದೆ ಶ್ರೀರಾಮನಿಗೆ ಯೌವರಾಜ್ಯ ಪಟ್ಟಾಭಿಷೇಕವನ್ನು ಮಾಡಲು ಉದ್ದೇಶಿಸಿದಾಗ ದಶರಥನೇ ರಾಜ್ಯಭಾರವು ಅತ್ಯಂತ ಕಠಿನವಾದ ಕಾರ್ಯವೆಂದು ಹೇಳುತ್ತಾನೆ. ಭರತನೂ ಸಹ ರಾಜ್ಯಪಾಲನೆಯೆಂಬ ದುರ್ಭರವಾದ ಕಾರ್ಯವನ್ನು ನಾನು ನಿರ್ವಹಿಸಲು ಶಕ್ತನಲ್ಲವೆನ್ನುತ್ತಾನೆ. ಇದರಿಂದ ದಶರಥನ ಚಕ್ರಾಧಿಪತ್ಯ ವಿಸ್ತೃತವಾಗಿತ್ತೆಂದು ಸ್ಫುಟವಾಗುತ್ತದೆ.

ದಶರಥನು ಸತ್ಯವ್ರತನೂ ಧರ್ಮನಿಷ್ಠನೂ ಆಗಿ ದಕ್ಷತೆಯಿಂದ ರಾಜ್ಯಪಾಲನೆ ಮಾಡುತ್ತ ಪ್ರಜೆಗಳ ಪ್ರೀತಿವಿಶ್ವಾಸಗಳನ್ನು ಗಳಿಸಿದ್ದನೆಂಬುದು ನಿಜ. ವಿಚಾರ ಮಾಡದೆ ದುಡುಕುವುದು ಅವನ ದೌರ್ಬಲ್ಯವೆಂದು ಹೇಳಬಹುದು. ಶಬ್ದವೇಧಿಯಾದ ಬಾಣವನ್ನು ಪ್ರಯೋಗಿಸಿ ಋಷಿಬಾಲಕನನ್ನು ಕೊಂದದ್ದು ಅದಕ್ಕೊಂದು ಉದಾಹರಣೆ. ಅದರಿಂದಾಗಿ ''ಪುತ್ರಶೋಕದಿಂದಲೇ ನಿನಗೆ ಮರಣವಾಗಲಿ'' ಎಂದು ಋಷಿಯ ಶಾಪಕ್ಕೆ ಗುರಿಯಾದ. ಯಜ್ಞಸಂರಕ್ಷಣೆಗಾಗಿ ಶ್ರೀರಾಮನನ್ನು ಕಳಿಸುವಂತೆ ಕೇಳಲು ವಿಶ್ವಾಮಿತ್ರರು ಬಂದಾಗ ಎಷ್ಟು ಸಂಭ್ರಮದ ಮಾತುಗಳು! ''ಋಷಿಗಳೆ, ನೀವು ಬಂದದ್ದು ನನ್ನ ಭಾಗ್ಯ. ''ಅದ್ಯ ಮೇ ಸಫಲಂ ಜನ್ಮ''. ನಿಮ್ಮ ಬಯಕೆ ಏನಿದೆ? ಹಿಂದೆ ಮುಂದೆ ನೋಡದೆ ಹೇಳಿಬಿಡಿರಿ. ಅದನ್ನು ನಿಶ್ಚಯವಾಗಿ ಸಲ್ಲಿಸುತ್ತೇನೆ'' ಎಂದು ಮತ್ತೆಮತ್ತೆ ಹೇಳಿದವನು, ''ರಾಮನನ್ನು ನನ್ನ ಜೊತೆಗೆ ಕಳಿಸು'' ಎಂದು ವಿಶ್ವಾಮಿತ್ರರು ಹೇಳಿದೊಡನೆ ಭೂಮಿಗೆ ಕುಸಿದು ಹೋಗುತ್ತಾನೆ. ''ಇದೊಂದು ಸಾಧ್ಯವಿಲ್ಲ! ಇನ್ನೇನು ಬೇಕಾದರೂ ಮಾಡುತ್ತೇನೆ'' ಎಂದು ಹಲುಬುತ್ತಾನೆ. ವಸಿಷ್ಠರು ಬುದ್ಧಿವಾದ ಹೇಳಿದ ಮೇಲೆ ಶ್ರೀರಾಮನನ್ನು ಕಳಿಸುವುದು ಅನಿವಾರ್ಯವಾಗುತ್ತದೆ.

ಮಂಥರೆಯ ಚಾಡಿಯ ಮಾತನ್ನು ಕೇಳಿ ಕೋಪಬಂದಂತೆ ನಟಿಸುತ್ತಿದ್ದ ಕೈಕೇಯಿಗೆ ದಶರಥನು ಹೇಳಿದ ಸಾಂತ್ವನ ವಾಕ್ಯಗಳೆಷ್ಟು! ದುಡುಕಿನ ಮಾತುಗಳೆಷ್ಟು!

ಅವಧ್ಯೋ ವಧ್ಯತಾಂ ಕೋ ವಾ ವಧ್ಯಃ ಕೋ ವಾ ವಿಮುಚ್ಯತಾಮ್ ।
ದ್ರವ್ಯವಾನ್ ವಾಪ್ಯಕಿಂಚನಃ ॥

– ಅಯೋಧ್ಯಾ 10–33

''ವಧೆಗೆ ಅರ್ಹನಲ್ಲದ ಯಾವನನ್ನು ಕೊಲ್ಲಿಸಬೇಕು? ವಧಾರ್ಹನಾದ ಯಾವ ಅಪರಾಧಿಯನ್ನು ಬಿಡುಗಡೆ ಮಾಡಬೇಕು? ಯಾವ ಶ್ರೀಮಂತನನ್ನು ಕಾಸಿಲ್ಲದ ದರಿದ್ರನನ್ನಾಗಿ ಮಾಡಬೇಕು? ಹೇಳು. ಅದನ್ನು ಕೂಡಲೇ ನಡೆಸುತ್ತೇನೆ'' ಎಂದು ಹೇಳಿ ಖಂಡಿತವಾಗಿ ನಡೆಸುತ್ತೇನೆಂದು ಮಾತು ಕೊಡುತ್ತಾನೆ. ಧರ್ಮಬಾಹಿರವಾದ ಕಾರ್ಯವನ್ನಾದರೂ ಮಾಡುತ್ತೇನೆಂದು ರಾಜನಾದವನು ಹೇಳಬಹುದೆ? ''ನನ್ನ ಸವತಿಯಾದ ಕೌಸಲ್ಯೆಯನ್ನು ಕೊಲ್ಲಿಸಬೇಕು''! ಎಂದು ಕೈಕೇಯಿ ವರವನ್ನು ಬೇಡಿದ್ದರೆ ಏನು ಮಾಡುತ್ತಿದ್ದ!

ಶ್ರೀರಾಮನ ಪಟ್ಟಾಭಿಷೇಕವನ್ನು ಇದ್ದಕ್ಕಿದ್ದಂತೆ ನಿಶ್ಚಯಿಸಿದ್ದೂ ಸಹ ದುಡುಕಿನಿಂದಲೇ. ಭರತ ಶತ್ರುಘ್ನರೂ ಇಲ್ಲದಾಗ ಅಷ್ಟು ತ್ವರೆಯಿಂದ ನಿರ್ಣಯಿಸಬೇಕಾದ ಆವಶ್ಯಕತೆ ಏನಿತ್ತು? ಯಾವ ಮಂತ್ರಿಗಳ ಸಲಹೆಯನ್ನೂ ಪಡೆಯಲಿಲ್ಲ. ಅರಮನೆಯಲ್ಲಿ ಕೌಸಲ್ಯೆಗೂ ತಿಳಿಸಲಿಲ್ಲ. ಪ್ರಿಯತಮೆಯಾದ ಕೈಕೇಯಿಗೂ ಹೇಳಲಿಲ್ಲ. ಕೈಕೇಯಿಗೆ ಮೊದಲೇ ಈ ಉದ್ದೇಶವನ್ನು ತಿಳಿಸಿದ್ದರೆ, ಮುಂದಿನ ಅನರ್ಥಗಳು ಸಂಭವಿಸುತ್ತಿರಲಿಲ್ಲ. ಹೀಗೆ ದುಡುಕಿ ದುರ್ಭರವಾದ ಕಷ್ಟಕ್ಕೆ ಸಿಕ್ಕಿದವನು ದಶರಥ.

ದಶರಥನ ಮೇಲೊಂದು ಆರೋಪ

ಕೈಕೇಯಿಯನ್ನು ಮದುವೆಯಾಗುವಾಗ ದಶರಥನು ''ಇವಳಲ್ಲಿ ಜನಿಸುವ ನನ್ನ ಪುತ್ರನಿಗೆ ರಾಜ್ಯವನ್ನಿತ್ತು ಪಟ್ಟಗಟ್ಟುವೆನು'' ಎಂದು ಅವಳ ತಂದೆಯಾದ ಅಶ್ವಪತಿಗೆ ಮಾತುಕೊಟ್ಟಿದ್ದನೆಂದೂ ಅದರಂತೆ ನಡೆದುಕೊಳ್ಳಲಿಲ್ಲವೆಂದೂ ದಶರಥನ ಮೇಲೆ ಒಂದು ಆರೋಪ ಉಂಟು. ಶ್ರೀರಾಮನು ಚಿತ್ರಕೂಟದಲ್ಲಿ ಭರತನಿಗೆ ಸಮಾಧಾನ ಹೇಳುವಾಗ

ಪುರಾ ಭ್ರಾತಃ ಪಿತಾ ನಃ ಸ ಮಾತರಂ ತೇ ಸಮುದ್ವಹನ್ ।
ಮಾತಾಮಹೇ ಸಮಾಶ್ರೌಷೀದ್ರಾಜ್ಯಶುಲ್ಕಮನುತ್ತಮಮ್ ॥

– ಅಯೋಧ್ಯೆ 107–3

ಎಂದು ಹೇಳಿರುವುದೇ ಇದಕ್ಕೆ ಆಧಾರ. ''ಭರತ, ನಮ್ಮ ತಂದೆಯು ಹಿಂದೆ ನಿನ್ನ ತಾಯಿಯನ್ನು ಮದುವೆಯಾಗುವಾಗ ಆಕೆಯ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ರಾಜ್ಯವನ್ನು ಕೊಡುತ್ತೇನೆಂದು ನಿನ್ನ ಮಾತಾಮಹನಿಗೆ ಮಾತುಕೊಟ್ಟಿದ್ದನು''. ಅಲ್ಲದೆ ದಶರಥನು ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಲಿಚ್ಛಿಸಿ ''ರಾಮ, ಭರತನು ಈ ನಗರದಿಂದ

ಹೊರಗೆ ಹೋಗಿರುವ ಈ ಸಮಯದಲ್ಲಿ ನಿನಗೆ ಪಟ್ಟಾಭಿಷೇಕ ಮಾಡುವುದು ಸರಿಯೆಂದು ನನ್ನ ಅಭಿಪ್ರಾಯ'' ಎನ್ನುತ್ತಾನೆ (ಅಯೋಧ್ಯಾ 4–25, 26, 27). ದಶರಥನ ಮನಸ್ಸಿನಲ್ಲಿದ್ದ ಈ ಕಳವಳವೂ ಈ ಆರೋಪವನ್ನು ಸಮರ್ಥಿಸುವಂತೆಯೇ ಇದೆ.

ಸತ್ಯಾಂಶವು ಹೀಗಿರಬಹುದು. ಕೌಸಲ್ಯಾ, ಸುಮಿತ್ರೆಯರಲ್ಲಿ ಸಂತತಿಯಾಗದೇ ಹೋದಾಗ ದಶರಥನು ಕೈಕೇಯಿಯನ್ನು ಮದುವೆಯಾಗಲಿಚ್ಛಿಸಿ ಅಶ್ವಪತಿಯ ಬಳಿಗೆ ಹೋಗಿ ತನ್ನ ಅಪೇಕ್ಷೆಯನ್ನು ತಿಳಿಸಿದ್ದಾನೆ. ದಶರಥನಿಗೆ ವಯಸ್ಸಾಗಿರುವುದನ್ನೂ ಇಬ್ಬರು ಪತ್ನಿಯರಿರುವುದನ್ನೂ ಗಮನಿಸಿ ಅಶ್ವಪತಿಯು ಅದಕ್ಕೆ ಮೊದಲು ಒಪ್ಪಲಿಲ್ಲ. ಆಗ ದಶರಥನು ತನಗೆ ಸಂತತಿ ಇಲ್ಲದಿರುವುದನ್ನು ತಿಳಿಸಿ ''ಅಶ್ವಪತಿ, ನಿನ್ನ ಮಗಳನ್ನು ನನಗೆ ಮದುವೆ ಮಾಡಿಕೊಡು. ಅವಳಲ್ಲಿ ಹುಟ್ಟುವ ಪುತ್ರನಿಗೆ ಮಹತ್ತರವಾದ ನನ್ನ ಸಾಮ್ರಾಜ್ಯವೇ ದೊರೆಯುವುದು'' ಎಂದು ಸ್ವಾಭಾವಿಕವಾಗಿ ಹೇಳಿರಬೇಕು. ಅದೇನೂ ಗಟ್ಟಿಯಾದ ಪ್ರತಿಜ್ಞೆಯಲ್ಲ! ಆದರೆ ಕೈಕೇಯಿಯಲ್ಲಿಯೂ ಸಂತತಿಯಾಗದೇ ಹೋದ್ದರಿಂದ ದಶರಥನು ಪುತ್ರಕಾಮೇಷ್ಟಿಯನ್ನು ಮಾಡಬೇಕಾಯಿತು. ದೈವಸಂಕಲ್ಪದಂತೆ ಶ್ರೀರಾಮನು ಹಿರಿಯ ಮಗನಾಗಿ ಕೌಸಲ್ಯೆಯ ಗರ್ಭದಲ್ಲಿ ಜನಿಸಿದ.

ಶ್ರೀರಾಮನ ಸದ್ಗುಣಗಳನ್ನೂ ನಾಲ್ವರೂ ಸೋದರರೂ ಅನ್ಯೋನ್ಯ ಪ್ರೀತಿಯಿಂದಿರು ವುದನ್ನೂ ಕಂಡು ಸಕಲರೂ ಮೆಚ್ಚಿಕೊಂಡಿದ್ದರು. ಅಶ್ವಪತಿಗಾಗಲಿ ಭರತನ ಸೋದರಮಾವ ನಾದ ಯುಧಾಜಿತನಿಗಾಗಲಿ ದಶರಥನು ಹೇಳಿದ್ದ ಮಾತು ಸ್ಮರಣೆಯಲ್ಲೇ ಇರಲಿಲ್ಲವೆಂದು ಹೇಳಬಹುದು. ಕೈಕೇಯಿಗೂ ಗೊತ್ತಿಲ್ಲ. ಮಂಥರೆಗೂ ತಿಳಿದಿಲ್ಲ.

ಅಶ್ವಪತಿಯು ಕೈಕೇಯೀಪುತ್ರನಿಗೇ ರಾಜ್ಯವನ್ನು ಕೊಡಬೇಕೆಂದು ದಶರಥನಿಂದ ಮಾತನ್ನು ತೆಗೆದುಕೊಂಡಿದ್ದನೆಂದು ಊಹಿಸುವುದೂ ಸರಿಯಾಗದು. ದಶರಥನಿಗೆ ಬೇರೆ ಪುತ್ರನೇ ಇಲ್ಲದಿರುವಾಗ ಮಾತು ತೆಗೆದುಕೊಳ್ಳಲು ಕಾರಣವೇ ಇಲ್ಲ. ದಶರಥನು ಪ್ರರೋಚನಾರ್ಥವಾಗಿ, ತಾನೇ ಈ ಮಾತನ್ನು ಸ್ವಾಭಾವಿಕವಾಗಿ ತಿಳಿಸಿರಬೇಕು. ಹಾಗಲ್ಲದೆ ಕೈಕೇಯೀಪುತ್ರನಿಗೇ ಪಟ್ಟಾಭಿಷೇಕವನ್ನು ಮಾಡುತ್ತೇನೆಂದು ದಶರಥನು ಶಪಥ ಪೂರ್ವಕವಾಗಿ ಹೇಳಿದ್ದರೆ ಹೀಗೆ ಅವನು ದುಡುಕುತ್ತಿರಲಿಲ್ಲ. ಅವನು ಎಂದಿಗೂ ತಪ್ಪಿ ನಡೆಯುವ ಮನುಷ್ಯನಲ್ಲ. ಅವನು ಸತ್ಯಪ್ರತಿಜ್ಞನೆಂದೂ ಅವನ ಮಾತನ್ನು ನಡೆಸಲೇಬೇಕೆಂದೂ ಶ್ರೀರಾಮನು ಮತ್ತೆ ಮತ್ತೆ ಹೇಳಿದ್ದಾನೆ. ಅವನು ಮಾತಿಗೆ ತಪ್ಪುವವನಾಗಿದ್ದರೆ ಕೈಕೇಯಿಯ ಮಾತನ್ನು ನಡೆಸುತ್ತಿದ್ದನೆ? ಒಂದು ವೇಳೆ ಭರತನಿಗೆ ರಾಜ್ಯವನ್ನಿತ್ತರೂ ಶ್ರೀರಾಮನನ್ನು ವನವಾಸಕ್ಕೆ ಕಳಿಸಲು ಎಂದಿಗೂ ಒಪ್ಪುತ್ತಿರಲಿಲ್ಲ.

ಅಶ್ವಪತಿಗೆ ದಶರಥನು ಹೇಳಿದ್ದ ಮಾತು ಶ್ರೀರಾಮನಿಗೆ ಗೊತ್ತಿದ್ದ ಮೇಲೆ, ತನ್ನ ಪಟ್ಟಾಭಿಷೇಕಕ್ಕೆ ಅವನು ಒಪ್ಪಿಕೊಂಡದ್ದೇಕೆ? ತಂದೆಯ ಎದುರಿಗೆ ಈ ವಿಚಾರವನ್ನು ಪ್ರಸ್ತಾವಿಸಬಹುದಾಗಿತ್ತಲ್ಲವೆ? ಎಂಬ ಶಂಕೆ ಹುಟ್ಟಬಹುದು. ಮೊದಲು ಈ ವಿಷಯವು ಶ್ರೀರಾಮನಿಗೆ ಗೊತ್ತಿರಲಿಲ್ಲವೆಂಬುದೇ ನಿಶ್ಚಿತ. ಗೊತ್ತಿರಲು ಕಾರಣವೇ ಇಲ್ಲ. ಭರತನಿಗೆ ಸಹ

ಈ ವಿಷಯ ತಿಳಿದಿರಲಿಲ್ಲ. ಕೈಕೇಯಿಯ ಪ್ರಸಂಗ ನಡೆದ ಮೇಲೆ ವನವಾಸಕ್ಕೆ ಹೊರಟು ಬರುವಾಗ ಬಹುಶಃ ಈ ಮಾತನ್ನು ಸುಮಂತ್ರನು ಶ್ರೀರಾಮನಿಗೆ ತಿಳಿಸಿರಬೇಕು. ದಶರಥನಿಗೆ ತುಂಬ ಆಪ್ತನಾಗಿದ್ದ ಆತನು ದಶರಥನೊಡನೆ ಅಶ್ವಪತಿಯ ಬಳಿಗೆ ಹೋಗಿದ್ದನೆಂದೂ ಆಗ ದಶರಥನಾಡಿದ ಮಾತು ಸುಮಂತ್ರನಿಗೆ ತಿಳಿದಿತ್ತೆಂದೂ ಊಹಿಸಬಹುದು.

ಒಂದು ವೇಳೆ ದಶರಥನು ಅಶ್ವಪತಿಗೆ ಮಾತುಕೊಟ್ಟಿದ್ದರೂ ತಾನು ಪಟ್ಟಾಭಿಷಿಕ್ತನಾಗಲು ಭರತನು ಯಾವ ಸಂದರ್ಭದಲ್ಲಿಯೂ ಒಪ್ಪುತ್ತಲೇ ಇರಲಿಲ್ಲ. ದಶರಥನು ಅವಸರ ಪಡದೆ ಭರತ ಶತ್ರುಘ್ನರನ್ನು ಮೊದಲು ಅಯೋಧ್ಯೆಗೆ ಕರೆಸಿಕೊಂಡು ಬಿಟ್ಟಿದ್ದರೆ, ಯಾವ ಗೊಂದಲವೂ ಆಗುತ್ತಲೇ ಇರಲಿಲ್ಲ. ಮಂಥರೆಯ ಚಾಡಿಮಾತೂ ನಡೆಯುತ್ತಿರಲಿಲ್ಲ.

ಋಷ್ಯಶೃಂಗನ ಪತ್ನಿ ಶಾಂತಾ ಯಾರ ಮಗಳು ?

ದಶರಥನು ಶಾಂತಾಪತಿಯಾದ ಋಷ್ಯಶೃಂಗನನ್ನು ಕರೆದುಕೊಂಡು ಬಂದು ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿದನೆಂದು ಬಾಲಕಾಂಡದಲ್ಲಿ ಹೇಳಿದೆಯಷ್ಟೆ. ಋಷ್ಯಶೃಂಗನ ಪತ್ನಿಯಾದ ಶಾಂತಾ ರೋಮಪಾದರಾಜನ ಮಗಳೆಂದು ಅಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಆದರೆ ಅವಳು ದಶರಥನ ಔರಸಪುತ್ರಿಯೆಂದೂ ಮಿತ್ರನಾದ ರೋಮಪಾದನಿಗೆ ದಶರಥನು ಸಾಕುವುದಕ್ಕಾಗಿ ಕೊಟ್ಟಿದ್ದನೆಂದೂ ಶಾಂತಾದೇವಿಯು ರೋಮಪಾದನ ಸಾಕುಮಗಳೆಂದೂ ಕೆಲವರು ಬರೆದಿದ್ದಾರೆ. ಇದಕ್ಕೆ ಆಧಾರವಿದು–

ಭಾಗವತದಲ್ಲಿ ಈ ಶ್ಲೋಕವಿದೆ –

ರೋಮಪಾದ ಇತಿ ಖ್ಯಾತಸ್ತಸ್ಮೈ ದಶರಥಃ ಸಖಾ ।
ಶಾಂತಾಂ ಸ್ವಕನ್ಯಾಂ ಪ್ರಾಯಚ್ಛತ್ ಋಷ್ಯಶೃಂಗ ಉವಾಹ ತಾಮ್ ॥

9–23–7

ವಿಷ್ಣುಪುರಾಣದ ಚತುರ್ಥಾಂಶದ ಹದಿನೆಂಟನೆಯ ಅಧ್ಯಾಯದಲ್ಲಿ ''ರೋಮಪಾದನಿಗೆ ದಶರಥನು ಮಿತ್ರನಾಗಿದ್ದನು. ಅವನು ತನ್ನ ಪುತ್ರಿಯಾದ ಶಾಂತಾಯೆಂಬುವಳನ್ನು ಸಂತತಿಹೀನನಾದ ರೋಮಪಾದನಿಗೆ ದತ್ತುಮಗಳನ್ನಾಗಿ ಕೊಟ್ಟನು'' ಎಂದು ಹೇಳಿದೆ.

ಭವಭೂತಿಯು ಉತ್ತರರಾಮ ಚರಿತೆಯ ಪ್ರಥಮಾಂಕದಲ್ಲಿಯೇ ನಟನಿಂದ –

ಕನ್ಯಾಂ ದಶರಥೋ ರಾಜಾ ಶಾಂತಾಂ ನಾಮ ವ್ಯಜೀಜನತ್ ।
ಅಪತ್ಯಕೃತಿಕಾಂ ರಾಜ್ಞೇ ರೋಮಪಾದಾಯ ತಾಂ ದದೌ ॥

ಎಂದು ಹೇಳಿಸಿದ್ದಾನೆ. ಈ ಮೂರು ಪ್ರಮಾಣಗಳಿಂದ ಶಾಂತಾದೇವಿಯು ದಶರಥನ ಔರಸಪುತ್ರಿಯೆಂದೂ ರೋಮಪಾದನಿಗೆ ದತ್ತಪುತ್ರಿಯೆಂದೂ ಹೇಳಬೇಕಾಗುತ್ತದೆ. ಆದರೆ ಅವಳು ರೋಮಪಾದನ ಔರಸಪುತ್ರಿಯೇ ಸರಿ, ದಶರಥನ ಮಗಳಲ್ಲ ಎಂಬುದಕ್ಕೆ ಹರಿವಂಶದ

ಆಧಾರ ಉಂಟು. ಲೋಮಪಾದ ಅಥವಾ ರೋಮಪಾದನಿಗೆ ದಶರಥನೆಂದು ಹೆಸರಿತ್ತು. ಅಂಗರಾಜನಾದ ಆ ದಶರಥನ ಮಗಳು ಶಾಂತಾ, ಶ್ರೀರಾಮನ ತಂದೆಯಾದ ದಶರಥನ ಮಗಳಲ್ಲ.

ಅಥ ಚಿತ್ರರಥಸ್ಯಾಪಿ ಪುತ್ರೋ ದಶರಥೋಽಭವತ್ ।
ಲೋಮಪಾದ ಇತಿ ಖ್ಯಾತೋ ಯಸ್ಯ ಶಾಂತಾ ಸುತಾಽಭವತ್ ॥

– ಹರಿವಂಶ 1–31–46

ರೋಮಪಾದನು ತನ್ನ ಮಗಳಾದ ಶಾಂತೆಯನ್ನು ಋಷ್ಯಶೃಂಗನಿಗೆ ಕೊಟ್ಟು ವಿವಾಹ ಮಾಡಿದನೆಂದು ಮಹಾಭಾರತದಲ್ಲಿಯೇ ಇದೆ.

ಸ ರೋಮಪಾದಃ ಪರಿಪೂರ್ಣಕಾಮಃ
ಸುತಾಂ ದದೌ ಋಷ್ಯಶೃಂಗಾಯ ಶಾಂತಾಮ್ ॥

– ವನಪರ್ವ 113 – 11

ಹೀಗೆ ಉಭಯತ್ರ ಪ್ರಮಾಣಗಳಿವೆ. ರಾಮಾಯಣ, ಮಹಾಭಾರತಗಳಲ್ಲಿ ಶಾಂತಾ ದಶರಥನ ಔರಸಪುತ್ರಿಯೆಂಬುದಕ್ಕೆ ಆಧಾರವಿಲ್ಲ. ಹರಿವಂಶದಲ್ಲಿ ಅವಳು ರೋಮಪಾದನ ಪುತ್ರಿಯೆಂದು ಸ್ಪಷ್ಟವಾದ ಉಲ್ಲೇಖ ಉಂಟು. ಇನ್ನೊಂದು ಪ್ರಶ್ನೆ ಏಳುತ್ತದೆ. ತನಗೆ ಸಂತತಿಯಿಲ್ಲವೆಂದು ಗೋಳಾಡುತ್ತಿದ್ದ ದಶರಥನು ತನಗಿದ್ದ ಒಬ್ಬಳೇ ಮಗಳನ್ನು ರೋಮಪಾದನಿಗೆ ಸಾಕುಮಗಳನ್ನಾಗಿ ಕೊಟ್ಟನೆಂಬ ಮಾತು ಯುಕ್ತವಾದೀತೆ? ಹಾಗಿದ್ದರೆ ಅವಳ ತಾಯಿ ಯಾರು? ಕೌಸಲ್ಯೆಯೆ? ಒಂದು ಸ್ಥಳದಲ್ಲಿಯೂ ಅದರ ಸುಳಿವಿಲ್ಲ. ತಾಯಿಯಾದವಳು ಇರುವ ಒಬ್ಬ ಮಗಳನ್ನು ದತ್ತು ಕೊಡಲು ಒಪ್ಪುತ್ತಾಳೆಯೆ? ಋಷ್ಯಶೃಂಗನ ವೃತ್ತಾಂತವು ದಶರಥನಿಗೆ ಗೊತ್ತೇ ಇರಲಿಲ್ಲವೆಂಬುದು ಸುಮಂತ್ರನ ಮಾತಿನಿಂದ ತಿಳಿಯುತ್ತದೆ. ಅಷ್ಟು ಮಿತ್ರನಾಗಿದ್ದ ರೋಮಪಾದನು ದಶರಥನ ಔರಸ ಪುತ್ರಿಯಾಗಿದ್ದ ಶಾಂತಾದೇವಿಯ ವಿವಾಹ ವೃತ್ತಾಂತವನ್ನು ದಶರಥನಿಗೆ ತಿಳಿಸಲೇ ಇಲ್ಲವೆ ? ಪುರಾಣ ವಾಕ್ಯಗಳಿಗೆ ಏಕವಾಕ್ಯತೆಯನ್ನು ಸರ್ವತ್ರ ತರಲಾಗುವುದಿಲ್ಲ. ಶಾಂತಾ ದಶರಥನ ಮಗಳಲ್ಲವೆಂದೇ ನಮಗೆ ತೋರುತ್ತದೆ. ರೋಮಪಾದನಿಗೆ ದಶರಥನೆಂಬ ಇನ್ನೊಂದು ಹೆಸರಿದ್ದುದೇ ಈ ಗೊಂದಲಕ್ಕೆ ಕಾರಣವಾಗಿರಬೇಕು.

2. ಕೌಸಲ್ಯೆ

ಈಕೆ ದಶರಥನ ಹಿರಿಯ ಪತ್ನಿ. ಪಟ್ಟದ ರಾಣಿ. ದಶರಥನು ಕೈಕೇಯಿಯನ್ನು ಮದುವೆಯಾದ ಮೇಲೆ, ಅವಳ ಬೆಡಗಿಗೆ ವಶನಾಗಿ, ಕೌಸಲ್ಯೆಯನ್ನು ಉಪೇಕ್ಷಿಸಿದ್ದ ನೆಂದು ಕಾಣುತ್ತದೆ. ಇವಳು ಶ್ರೇಷ್ಠ ಗುಣಶಾಲಿನಿಯೂ ದೈವಭಕ್ತಳೂ ಆಗಿದ್ದಳು. ಆದ್ದರಿಂದಲೇ ಶ್ರೀರಾಮನಂತಹ ಮಹಾಪುರುಷನ ತಾಯಿಯಾಗುವ ಭಾಗ್ಯವು ಇವಳಿಗೆ ಕೂಡಿ ಬಂದಿತು. ಶ್ರೀರಾಮನು ಜನಿಸಿದ ಮೇಲೆ ಮಗನ ಗುಣಸೌಂದರ್ಯಾದಿಗಳಿಂದ ಹಿಗ್ಗುತ್ತಾ ಸಂತೋಷದಿಂದಿದ್ದಳು. ಅವನು ಕೌಸಲ್ಯಾನಂದವರ್ಧನನಾಗಿದ್ದನು. ಸೀತೆ ಸೊಸೆಯಾಗಿ ಬಂದ

ಮೇಲಂತೂ ಕೌಸಲ್ಯೆಯ ಆನಂದವು ಇನ್ನೂ ಹಿಗ್ಗಿತು. ಮಗನಿಗೆ ಯುವರಾಜ ಪಟ್ಟಾಭಿಷೇಕ ವಾಗುವುದೆಂಬುದನ್ನು ಕೇಳಿದಾಗ ಆನಂದವು ಪರಮಾವಧಿಯನ್ನು ಮುಟ್ಟಿತು. ಅದು ಹಾಗೆ ಉಳಿದದ್ದು ಒಂದೇ ರಾತ್ರಿ. ಬ್ರಾಹ್ಮಣರಿಂದ ಮಂಗಳ ಕಾರ್ಯಗಳನ್ನು ಮಾಡಿಸುತ್ತ ''ಧ್ಯಾಯಮಾನಾ ಜನಾರ್ದನಂ'' ಕುಳಿತಿದ್ದಳು. ರಾತ್ರಿ ನಿದ್ರೆ ಮಾಡಿದಂತೆ ಕಾಣಿಸುವುದಿಲ್ಲ. ಪ್ರಾತಃಕಾಲ ಶ್ರೀರಾಮನು ತನ್ನ ವನವಾಸದ ಸುದ್ದಿಯನ್ನು ತಂದನು. ಆನಂದದ ಕಟ್ಟೆ ಧಡಿಲ್ ಎಂದು ಕುಸಿದುಬಿತ್ತು. ಗೌರೀಶಂಕರ ಶಿಖರದಿಂದ ರಸಾತಳಕ್ಕೆ ತಳ್ಳಿದಂತೆ ಕೌಸಲ್ಯೆಗೆ ಅನ್ನಿಸಿತು. ಸಂಸಾರದ ಅಸಾರತೆಯನ್ನು ಕವಿ ಎಷ್ಟು ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾನೆ! ''ಕಸ್ಯಾತ್ಯಂತಂ ಸುಖಮುಪನತಮ್? ನೀಚೈರ್ಗಚ್ಛತ್ಯುಪರಿ ಚ ದಶಾ ಚಕ್ರನೇಮಿ ಕ್ರಮೇಣ'' (ಮೇಘ 2–46).

ಸುಮಂತ್ರನು ಸೀತಾರಾಮಲಕ್ಷ್ಮಣರನ್ನು ರಥದಲ್ಲಿ ಕುಳ್ಳಿರಿಸಿಕೊಂಡು ವನವಾಸಕ್ಕಾಗಿ ನಗರದಿಂದ ತೆರಳುತ್ತಿರುವಾಗ ರಥದ ಹಿಂದೆ ಕೌಸಲ್ಯೆ ಓಡುತ್ತ ಹೋದಳಂತೆ. ರಾಮಾ, ರಾಮಾ, ಸೀತೇ ಸೀತೇ ಲಕ್ಷ್ಮಣಾ! ಎಂದು ಕೂಗುತ್ತ ಅಳುತ್ತ ಮುಗ್ಗರಿಸುತ್ತ ಕೈಬೀಸುತ್ತ ಬೀದಿಯಲ್ಲಿ ಧಾವಿಸುತ್ತಿದ್ದ ಕೌಸಲ್ಯೆ ನೃತ್ಯಮಾಡುವಳೋ ಎಂಬಂತೆ ಕಾಣಿಸಿದಳಂತೆ! ಕವಿಯ ಕಲ್ಪನಾಶಕ್ತಿಗೆ ಸಾಟಿಯುಂಟೆ ?

ಕೌಸಲ್ಯೆ ದೊಡ್ಡ ಸ್ವಭಾವದವಳು. ಸಾಧ್ವಿ; ಪತಿವ್ರತೆ. ಪತ್ನೀಧರ್ಮವನ್ನು ಚೆನ್ನಾಗಿ ಬಲ್ಲವಳು. ಸೀತಾರಾಮ ಲಕ್ಷ್ಮಣರು ಕಾಡಿಗೆ ಹೋದಮೇಲೆ ಅವಳ ಶೋಕಕ್ಕೆ ಪಾರವಿಲ್ಲದೆ ಹೋಯಿತು. ಅದನ್ನು ತಡೆದುಕೊಳ್ಳಲಾರದೆ, ಮೊದಲೇ ಕಂಗೆಟ್ಟು ಹೋಗಿದ್ದ ದಶರಥನನ್ನು ಹಂಗಿಸಿಬಿಡುತ್ತಾಳೆ. ಸರ್ವನಾಶಕ್ಕೂ ನೀನೇ ಕಾರಣನಾದೆಯೆನ್ನುತ್ತಾಳೆ. ಬಡಪಾಯಿ ದಶರಥನು ದುಃಖದಿಂದ ನಡುಗುತ್ತ ಕೌಸಲ್ಯೆಗೆ ಕೈಮುಗಿದು ''ಕೌಸಲ್ಯೆ, ನಿನ್ನನ್ನು ಬೇಡಿಕೊಳ್ಳುತ್ತೇನೆ. ನನ್ನನ್ನು ಕ್ಷಮಿಸು'' ಎಂದು ಬಿಡುತ್ತಾನೆ. ಕೌಸಲ್ಯೆಗೆ ತನ್ನ ತಪ್ಪಿನ ಅರಿವಾಯಿತು. ಅವಳು ಹೆದರಿ ಹೋದಳು. ಕೈಮುಗಿದ ಗಂಡನ ಕೈಗಳನ್ನು ತನ್ನ ತಲೆಯ ಮೇಲಿಟ್ಟುಕೊಂಡು ''ಪ್ರಭು, ಪ್ರಸನ್ನನಾಗು. ನೆಲದ ಮೇಲೆ ಬಿದ್ದು ಬೇಡುವೆನು. ನೀನು ಹೀಗೆ ನನ್ನಲ್ಲಿ ಬೇಡಿಕೊಳ್ಳುವುದಾದರೆ, ನಾನು ಹಾಳಾಗಿ ಹೋದೆ. ನನ್ನನ್ನು ಅಧೋಗತಿಗೆ ತಳ್ಳಬೇಡ. ಪುತ್ರಶೋಕದಿಂದ ಕಂಗೆಟ್ಟು ಏನೇನೋ ಆಡಿಬಿಟ್ಟೆನು'' ಎಂದು ಹಲುಬುತ್ತ ಅಳುತ್ತಾಳೆ. ಮಾತೃವಾತ್ಸಲ್ಯ, ಸೌಜನ್ಯ, ಭಾರತೀಯ ಸ್ತ್ರೀಧರ್ಮಗಳ ಪ್ರತ್ಯಕ್ಷ ಮೂರ್ತಿ ಕೌಸಲ್ಯೆ.

3. ಸುಮಿತ್ರಾ

ಸುಮಿತ್ರೆಯು ಕಾಣಿಸಿಕೊಳ್ಳುವ ಸಂದರ್ಭವು ಪರಿಮಿತವಾದರೂ ಅವಳ ಗುಣಶೀಲಗಳು ಸ್ಪಷ್ಟವಾಗಿ ತಿಳಿದುಬಿಡುತ್ತವೆ. ಅವಳ ಪ್ರಜ್ಞೆ, ವಿವೇಕ, ಧೀರತೆ, ಚಿತ್ತಸ್ವಾಸ್ಥ್ಯ, ಸ್ವಾರ್ಥತ್ಯಾಗ, ಶಾಂತಿ, ಸುಹೃದ್ಭಾವ, ಸಾರವತ್ತಾದ ಭಾಷಣ ಶಕ್ತಿ–ನಮ್ಮನ್ನು ವಿಸ್ಮಯಗೊಳಿಸತಕ್ಕವು. ಶ್ರೀರಾಮನೊಡನೆ ತಾನೂ ಅರಣ್ಯಕ್ಕೆ ಹೋಗುತ್ತೇನೆಂದು ಲಕ್ಷ್ಮಣನು ಹೇಳಿದಾಗ ಅವಳು

ಬೇಡವೆನ್ನಲಿಲ್ಲ. ಬೇಡವೆಂದರೆ ಅವನು ಕೇಳತಕ್ಕವನೂ ಅಲ್ಲ. ರಾಮಲಕ್ಷ್ಮಣರ ಭ್ರಾತೃವಾತ್ಸಲ್ಯವೆಂತಹದೆಂಬುದು ಅವಳಿಗೆ ತಿಳಿದಿತ್ತು. ಆ ಸಮಯದಲ್ಲಿ ಸುಮಿತ್ರೆಯು ಮಗನಿಗೆ ಹೇಳಿದ ಬುದ್ಧಿವಾದವು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಯೋಗ್ಯವಾದದ್ದು.

ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್ ।
ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್ ॥

''ರಾಮನು ತಂದೆಯಾದ ದಶರಥನೆಂದು ತಿಳಿದಿರು. ಜಾನಕಿಯೇ ನಾನು ಎಂದು ತಿಳಿ. ಅಡವಿಯೇ ಅಯೋಧ್ಯೆಯೆಂದು ಭಾವಿಸು ! ಮಗು, ಸುಖವಾಗಿ ಹೋಗಿ ಬಾ''. ಎಷ್ಟು ಅರ್ಥವತ್ತಾದ ನುಡಿಗಳನ್ನಾಡುತ್ತ ಅವಳು ಕೌಸಲ್ಯೆಯನ್ನು ಸಂತೈಸುತ್ತಿದ್ದಳು ! ಅವಳು ಕುಸಿದು ಬೀಳದಂತೆ ನೋಡಿಕೊಳ್ಳುವ ಊರುಗೋಲಾಗಿ ಸುಮಿತ್ರೆ ವರ್ತಿಸಿದಳು. ತನ್ನ ಮಗನೂ ರಾಮನ ಕಷ್ಟವನ್ನೇ ಅನುಭವಿಸುತ್ತಿದ್ದಾನೆ, ತಾನೂ ಕೌಸಲ್ಯೆಯಂತೆ ಶೋಚನೀಯಳಾಗಿದ್ದೇನೆ ಎಂಬುದನ್ನು ಅವಳು ಗಣಿಸಲೇ ಇಲ್ಲ. ರಾಮನ ಸೇವೆ ಲಕ್ಷ್ಮಣನ ಕರ್ತವ್ಯ, ದಶರಥ ಕೌಸಲ್ಯೆಯರ ಸೇವೆ ತನ್ನ ಕರ್ತವ್ಯವೆಂಬ ನಿಷ್ಕಾಮ ಕರ್ಮದ ಬುದ್ಧಿಯೇ ಅವಳಲ್ಲಿ ಜಾಗೃತವಾಗಿತ್ತು. ದಶರಥನನ್ನಾಗಲಿ, ಕೈಕೇಯಿಯನ್ನಾಗಲಿ ಅಥವಾ ಮಂಥರೆಯನ್ನಾಗಲಿ ನಿಂದಿಸುವ ಒಂದು ಮಾತನ್ನೂ ಅವಳು ಆಡಲಿಲ್ಲ. ಸುಮಿತ್ರೆಯು ಮಹಾಪ್ರಜ್ಞಳಾದ ವನಿತೆಯೇ ಹೌದು.

4. ಕೈಕೇಯಿ

ಇವಳು ತನ್ನ ಯೌವನ ಸೌಂದರ್ಯಗಳಿಂದ ವೃದ್ಧನಾದ ದಶರಥನನ್ನು ವಶಪಡಿಸಿ ಕೊಂಡಿದ್ದಳು. ಕೌಸಲ್ಯೆ ಪಟ್ಟದರಸಿಯಾದ್ದರಿಂದ ಕೈಕೇಯಿಗೆ ಅವಳ ಮೇಲೆ ಹೊಟ್ಟೆಕಿಚ್ಚು ಇತ್ತೆಂದು ತೋರುತ್ತದೆ. ತನ್ನ ಮೋಡಿಯಿಂದ ದಶರಥನು ಕೌಸಲ್ಯೆಯನ್ನು ಉಪೇಕ್ಷಿಸುವಂತೆ ಮಾಡಿಕೊಂಡಿದ್ದಳು. ಸುಮಿತ್ರೆ ಅವಳಿಗೆ ಲೆಕ್ಕದಲ್ಲಿಯೇ ಇರಲಿಲ್ಲ. ಭರತನಿಗೆ ತನ್ನ ತಾಯಿಯ ಗುಣವು ಚೆನ್ನಾಗಿ ತಿಳಿದಿತ್ತು. 'ಆತ್ಮಕಾಮಾ ಸದಾ ಚಂಡೀ ಕ್ರೋಧನಾ ಪ್ರಾಜ್ಞಮಾನಿನೀ. ನನ್ನ ತಾಯಿ ಸ್ವಾರ್ಥಿ. ಹಠಮಾರಿ, ಕೋಪಿಷ್ಠೆ, ತಾನೇ ಬುದ್ಧಿಶಾಲಿಯೆಂದು ತಿಳಿದುಕೊಂಡಿದ್ದಾಳೆ' ಇದು ಭರತನು ಆಡುವ ಮಾತು.

ಶ್ರೀ ರಾಮನಿಗೆ ಪಟ್ಟಾಭಿಷೇಕವಾಗುವುದೆಂಬುದನ್ನರಿತೊಡನೆ ಮಂಥರೆ ಸಿಟ್ಟಿನಿಂದ ಹೋಗಿ ಕೈಕೇಯಿಗೆ ಆ ಸುದ್ದಿಯನ್ನು ಹೇಳಿ ಅವಳನ್ನು ಎತ್ತಿಗಟ್ಟಲು ಪ್ರಯತ್ನಿಸುತ್ತಾಳೆ. ಮನೆಗೆ ಬೆಂಕಿ ಹತ್ತಿಕೊಂಡಿತೋ ಎಂಬಂತೆ ಎಚ್ಚರಿಕೆ ಕೊಡುತ್ತಾಳೆ. ಶ್ರೀರಾಮನ ಪಟ್ಟಾಭಿಷೇಕದ ವಾರ್ತೆಯಿಂದ ಕೈಕೇಯಿಗೆ ಮೊದಲು ಹರ್ಷವೇ ಆಗುತ್ತದೆ. ಸಂತೋಷದ ಸುದ್ದಿಯನ್ನು ತಂದಳೆಂದು ಮಂಥರೆಗೆ ಒಂದು ಆಭರಣವನ್ನೇ ಬಹುಮಾನವಾಗಿ ಕೊಡುತ್ತಾಳೆ. ''ಮಂಥರೆ, ರಾಮನಲ್ಲಾಗಲಿ, ಭರತನಲ್ಲಾಗಲಿ ನನಗೆ ವಿಶೇಷವೇನೂ ಕಾಣುವುದಿಲ್ಲ. ಕೌಸಲ್ಯೆಗಿಂತ ಹೆಚ್ಚಾಗಿ ರಾಮನು ನನ್ನನ್ನು ಸೇವಿಸುತ್ತಿದ್ದಾನೆ. ರಾಮನು ಧರ್ಮಜ್ಞ, ವಿನೀತ, ಸತ್ಯಸಂಧ.

ಹಿರಿಯಮಗನಾದ್ದರಿಂದ ಅವನೇ ಯುವರಾಜ ಪದವಿಗೆ ಅರ್ಹನಾದವನು. ಕುಬ್ಜೆ, ಅವನಿಗೆ ಪಟ್ಟಾಭಿಷೇಕವಾಗುವುದನ್ನು ಕೇಳಿ ನೀನೇಕೆ ಉರಿದು ಬೀಳುತ್ತೀಯೆ ?'' ಎಂದು ಹೇಳುತ್ತಾಳೆ. ಹೀಗೆ ಹೇಳಿದವಳು ಆ ಗೂನಿಯ ಚಾಡಿಮಾತನ್ನು ಕೇಳುತ್ತ ಕೇಳುತ್ತ ಎಷ್ಟು ಬದಲಾಯಿಸಿ ಬಿಟ್ಟಳು ! ಪ್ರೀತಿಪಾತ್ರನಾಗಿದ್ದ ರಾಮನಲ್ಲಿ ಎಷ್ಟು ಕಠೋರವಾಗಿ ವರ್ತಿಸಿಬಿಟ್ಟಳು ! ಇದು ವಿಸ್ಮಯಕಾರಿಯೇ ಸರಿ. ಕುಬ್ಜೆಯ ವಾದವೈಖರಿ, ಬುದ್ಧಿಗೆಡಿಸುವ ಮಾತಿನ ಮೋಡಿ ಎಷ್ಟು ಪ್ರಬಲವಾಗಿರಬಹುದು ! ದಶರಥನ ಗೋಳಾಟ ರೋದನಗಳು ಅವಳ ಕಿವಿಗೆ ಕೇಳಿಸುವುದೇ ಇಲ್ಲ. ಸುಮಂತ್ರನು ಹೇಳಿದಂತೆ ಕೈಕೇಯಿಯ ತಾಯಿ ಕಠೋರ ಹೃದಯದವಳಾಗಿದ್ದಳು. ತಾಯಿಯಂತೆ ಮಗಳು ಎಂಬ ಗಾದೆ ಸತ್ಯವಾಯಿತು.

ತನ್ನ ಗಂಡ ಸತ್ತು ತಾನು ವಿಧವೆಯಾದರೂ ಕೈಕೇಯಿಗೆ ಪಶ್ಚಾತ್ತಾಪವಾಗಲಿಲ್ಲ. ಭರತನು ಸೋದರಮಾವನ ಮನೆಯಿಂದ ಬಂದಾಗ ಅವನನ್ನು ಪ್ರೀತಿಯಿಂದ ಸ್ವಾಗತಿಸಿ ತವರುಮನೆಯ ಕುಶಲವನ್ನು ವಿಚಾರಿಸುತ್ತಾಳೆ. ದಶರಥನ ಸಾವನ್ನು ಹೇಳಬೇಕಾಗಿ ಬಂದಾಗ ''ಎಲ್ಲ ಪ್ರಾಣಿಗಳಿಗೂ ಆಗುವ ಗತಿ ಅವನಿಗೂ ಆಯಿತು !'' ಎಂದು ತೇಲಿಸಿ ಹಗುರವಾಗಿ ಹೇಳಿಬಿಡುತ್ತಾಳೆ. ಎಲ್ಲ ವೃತ್ತಾಂತಗಳನ್ನೂ ಕೇಳಿ ತಿಳಿದ ಮೇಲೆ ಭರತನು ರೋಷಾವಿಷ್ಟನಾಗಿ ತಾಯಿಯನ್ನು ಧಿಕ್ಕರಿಸಿ ಬಯ್ದು ಯಾವಾಗ ತಾನೆಂದಿಗೂ ರಾಜನಾಗುವುದಿಲ್ಲವೆಂದೂ ಶ್ರೀರಾಮನನ್ನೇ ವಾಪಸು ಕರೆತರುವುದಾಗಿಯೂ ನಿಶ್ಚಯಿಸಿ ಹೇಳಿಬಿಡುತ್ತಾನೋ ಆಗ ಕೈಕೇಯಿಗೆ ಪಶ್ಚಾತ್ತಾಪವಾಗಿರಬೇಕು. ತನ್ನ ಪ್ರಯತ್ನವೆಲ್ಲವೂ ವ್ಯರ್ಥವಾಯಿತೆಂದೂ ಸರ್ವಾನರ್ಥಗಳಿಗೂ ತಾನು ಕಾರಣಳಾದಳೆಂದೂ ತೋರಿರಬೇಕು. ಆಮೇಲೆ ಅವಳು ಒಂದು ಮಾತನ್ನೂ ಆಡುವುದಿಲ್ಲ. ಎಲ್ಲರ ಜೊತೆಗೆ ತಾನು ಚಿತ್ರಕೂಟಕ್ಕೆ ಹೋದಳು. ಶ್ರೀರಾಮನು ಹಿಂದಿರುಗಿ ಬಂದು ಪಟ್ಟಾಭಿಷಿಕ್ತನಾಗಲೆಂದು ಅವಳ ಮನಸ್ಸಿಗೆ ಅನ್ನಿಸಿರಬೇಕು. ಕಡೆಗೆ ಭರತನು ನಂದಿಗ್ರಾಮದಲ್ಲಿಯೇ ಉಳಿದು ಜಟಾಧಾರಿಯಾಗಿ ವ್ರತನಿಷ್ಠನಾದ ಮೇಲೆ ಕೈಕೇಯಿಯ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಯಿತು. ಅರಮನೆಯಲ್ಲಿ ದಾಸಿಯರೂ ಅವಳನ್ನು ಲೆಕ್ಕಿಸದೇ ಹೋದರೆಂದು ಕಾಣುತ್ತದೆ. ಎಷ್ಟು ಬೇಗನೆ ಎಷ್ಟು ಬದಲಾವಣೆ ! ಎಲ್ಲವೂ ತನ್ನಿಂದ !

5. ಭರತ

''ಪುಷ್ಯೇ ಜಾತಸ್ತು ಭರತೋ ಮೀನಲಗ್ನೇ ಪ್ರಸನ್ನಧೀಃ – ಪುಷ್ಯನಕ್ಷತ್ರ ಮೀನಲಗ್ನದಲ್ಲಿ ಭರತನು ಹುಟ್ಟಿದನು. ಅವನು ಪ್ರಸನ್ನ ಬುದ್ಧಿಯವನು'' ಇದು ಕವಿವಾಣಿ. ಪ್ರಸನ್ನ ಬುದ್ಧಿಯೆಂದರೆ ಶಾಂತ ಸ್ವಭಾವದ ತಿಳಿಯಾದ ಬುದ್ಧಿ. ಕಪಟವನ್ನರಿಯದ ಬುದ್ಧಿ. ರಾಮ, ಲಕ್ಷ್ಮಣ, ಭರತ, ಶತ್ರುಘ್ನ–ಇವರು ದಶರಥನ 'ಚತ್ವಾರ ಇವ ಬಾಹವಃ' ನಾಲ್ಕು ಬಾಹುಗಳಂತಿದ್ದರು. ಇದು ಉತ್ಪ್ರೇಕ್ಷಾಲಂಕಾರವಾದರೂ ಉಪಮಾಮೂಲಕವಾದದ್ದು. ಇದರಲ್ಲೊಂದು ಸೊಬಗುಂಟು. ಒಬ್ಬನ ಕೈಗಳಿಗೆ ಪರಸ್ಪರ ಜಗಳವಾಗದು. ಅವುಗಳಿಗೆ ಕಾರ್ಯದಲ್ಲಿ ಹೊಂದಾಣಿಕೆಯೂ ಅನ್ಯೋನ್ಯವಾಗಿ ನೆರವೂ ಇರುತ್ತವೆ. ಹಾಗಿದ್ದವರು ಈ

ಸಹೋದರರು. ದಶರಥನ ಹೆಗ್ಗಳಿಕೆಯನ್ನು ಈ ಹೋಲಿಕೆ ಸೂಚಿಸುತ್ತದೆ.

ಭರತನು 'ಆಕಾಶ ಇವ ನಿರ್ಮಲಃ'. ಅಷ್ಟು ಸ್ವಚ್ಛವಾದ ಮನಸ್ಸು ಅವನದು. ಕೋಸಲರಾಜ್ಯವನ್ನು ಕನಸಿನಲ್ಲಿಯೂ ಅವನು ಬಯಸಿದವನಲ್ಲ. ವೃಥಾ ತನಗೆ ಅಪವಾದ ಬಂದಿತೆಂದು ಅವನ ಕೊರಗು. ತಂದೆಯ ಮರಣ, ಶ್ರೀರಾಮಾದಿಗಳ ವನವಾಸ–ಇವೆರಡಕ್ಕೂ ತನ್ನ ತಾಯಿಯೇ ಕಾರಣಳಾದಳೆಂದೂ ಈ ಪಾಪಕಾರ್ಯದಲ್ಲಿ ತನ್ನ ಹೆಸರು ನಿಷ್ಕಾರಣವಾಗಿ ಸೇರಿಕೊಂಡಿತೆಂದೂ ಅವನಿಗಾದ ಶೋಕ ರೋಷ ಸಂಕಟಗಳಿಗೆ ಮಿತಿಯಿಲ್ಲವಾಯಿತು. ಭರತನ ಕಣ್ಣೀರು ಹೊಳೆಯಾಗಿ ಹರಿಯಿತು. ರೋಷವು ಉರಿಯಾಗಿ ಸುಟ್ಟಿತು. ಸಂಕಟ ಪಶ್ಚಾತ್ತಾಪಗಳು ಮುಳ್ಳುಗಳಾಗಿ ಅವನನ್ನು ಚುಚ್ಚಿದವು. ''ರಾಜ್ಯಾದ್ ಭ್ರಂಶಸ್ವ ಕೈಕೇಯಿ'' ಎಂದು ಕೂಗಾಡಿದ. ಅವಳನ್ನು ತಾಯಿಯೆಂದು ಕರೆಯಲು ಸಹ ಅವನಿಗೆ ಇಷ್ಟವಾಗಲಿಲ್ಲ. 'ಕೈಕೇಯಿ, ಪಾಪದರ್ಶಿನಿ, ಪಾಪಿ, ಕುಲಪಾಂಸನಿ – ಎಂಬಿವೇ ಅವನು ಬಳಸಿದ ಶಬ್ದಗಳು. ರೋಷಾವೇಶ ದಲ್ಲಿ ಕೈಕೇಯಿಯನ್ನು ಕೊಂದು ಬಿಡುತ್ತಿದ್ದನೋ ಏನೋ ! ''ಶ್ರೀರಾಮನು ನನ್ನ ಮೇಲೆ ಕೋಪಿಸಿಕೊಂಡಾನು. ಮಾತೃಘಾತುಕನೆಂದು ನನ್ನೊಡನೆ ಮಾತಾಡುವುದನ್ನೇ ಬಿಟ್ಟಾನು!'' ಎಂದು ಹಿಂಜರಿಯುತ್ತಾನೆ.

ದಶರಥನ ಮರಣೋತ್ತರಕ್ರಿಯೆಗಳೆಲ್ಲವೂ ಮುಗಿದಮೇಲೆ ರಾಜ್ಯವು ಅನಾಯಕ ವಾಯಿತೆಂದು ವಸಿಷ್ಠರು ಬಂದು ''ಭರತ, ಇನ್ನು ನೀನು ರಾಜನಾಗಿ ಮುಂದಿನ ಕರ್ತವ್ಯವನ್ನು ನಡೆಸಬೇಕು'' ಎಂದು ಸಹಜವಾಗಿ ಹೇಳುತ್ತಾರೆ. ಭರತನಿಗೆ ವಸಿಷ್ಠರ ಮಾತನ್ನೂ ಸಹಿಸಿಕೊಳ್ಳಲಾಗಲಿಲ್ಲ. ''ನನ್ನ ಅಣ್ಣನಿರುವಾಗ ರಾಜನಾಗೆಂದು ಅಧರ್ಮದ ಮಾತನ್ನು ನೀವು ಆಡಬಹುದೆ?'' ಎಂದು ವಸಿಷ್ಠರನ್ನೇ ನಿಂದಿಸಿಬಿಡುತ್ತಾನೆ. ''ಜಗರ್ಹೇ ಚ ಪುರೋಹಿತಮ್''. ಶ್ರೀರಾಮನನ್ನು ಅರಣ್ಯದಿಂದ ಕರೆತಂದು ಪಟ್ಟಾಭಿಷೇಕ ಮಾಡಿಯೇ ತೀರುವೆನೆಂದು ಘೋಷಿಸಿ ಸೇನಾಸಮೇತನಾಗಿ ಆಪ್ತಪರಿವಾರದೊಡನೆ ಅರಣ್ಯಕ್ಕೆ ಹೋದನು. ಶ್ರೀರಾಮನೊಡನೆ ವಿನಯ, ಪ್ರಾರ್ಥನೆ, ಹಠ, ಸತ್ಯಾಗ್ರಹ, ಒತ್ತಾಯ – ಎಲ್ಲವೂ ನಡೆದವು. ಯಾವ ಮಾರ್ಗವೂ ಫಲಿಸಲಿಲ್ಲ. ಅವನ ಎಲ್ಲ ಒತ್ತಡದ ಪ್ರಾರ್ಥನೆಗೂ ಶ್ರೀರಾಮನು ಶಾಂತಿಪೂರ್ವಕವಾಗಿಯೇ ಉತ್ತರಿಸುತ್ತ ಹೋದನು. ''ಭರತ, ಒಂದು ವೇಳೆ ಚಂದ್ರನಿಂದ ಬೆಳದಿಂಗಳು ಬೇರೆ ಹೋದೀತು. ಹಿಮವಂತನು ಹಿಮವನ್ನು ತ್ಯಜಿಸಿಯಾನು. ಸಮುದ್ರವು ತನ್ನ ಮೇರೆಯನ್ನು ಅತಿಕ್ರಮಿಸೀತು. ನಾನು ಮಾತ್ರ ತಂದೆಗೆ ಮಾಡಿಕೊಟ್ಟ ಪ್ರತಿಜ್ಞೆಯನ್ನು ಎಂದಿಗೂ ಮೀರಿ ನಡೆಯುವುದಿಲ್ಲ'' ಎಂದು ಅಣ್ಣನು ತಮ್ಮನಿಗೆ ಹೇಳಿಬಿಟ್ಟನು. ಕಡೆಗೆ ವನವಾಸ ಮುಗಿದ ಮೇಲೆ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗುತ್ತೇನೆ ಎಂದು ಶ್ರೀರಾಮನು ಮಾತುಕೊಟ್ಟಾಗ ಭರತನಿಗೆ ಇದ್ದುದರಲ್ಲಿ ಸಮಾಧಾನವಾಯಿತು. ''ಶ್ರೀರಾಮನ ಪಾದುಕೆಗಳೇ ರಾಜನ ಕಾರ್ಯವನ್ನು ನಿರ್ವಹಿಸುತ್ತವೆ'' ಎಂದು ಪಾದುಕೆಗಳಿಗೆ ನಂದಿಗ್ರಾಮದಲ್ಲಿ ಭರತನು ಪಟ್ಟಾಭಿಷೇಕ ಮಾಡಿದ. ತಾನು ಶತ್ರುಘ್ನನೊಡನೆ ಜಟೆಯನ್ನು ಬೆಳೆಸಿ ತಣ್ಣೀರು ಸ್ನಾನ ಮಾಡುತ್ತ ವನ್ಯಾಹಾರವನ್ನೇ ಸೇವಿಸುತ್ತ ಶ್ರೀರಾಮಾದಿಗಳಂತೆ ಇದ್ದು ಹದಿನಾಲ್ಕು ವರ್ಷಗಳನ್ನು ಕಳೆದ. ಹನುಮಂತನು ಶ್ರೀರಾಮಾದಿಗಳ ಆಗಮನ ವೃತ್ತಾಂತವನ್ನು ತಿಳಿಸಿದಾಗ

ಭರತನಿಗಾದ ಆನಂದವೆಷ್ಟು ! 'ಭರತನ ಭ್ರಾತೃವಾತ್ಸಲ್ಯ' ಎಂಬ ಶಬ್ದವು ಶಾಶ್ವತವಾಗಿ ಮನೆಮಾತಾಗಿ ಹೋಯಿತು.

6. ವಿಶ್ವಾಮಿತ್ರ

ರಾಮಾಯಣದ ವ್ಯಕ್ತಿಗಳನ್ನು ಪರಿಚಯ ಮಾಡಿಕೊಡುವ ಲೇಖಕರು ವಿಶ್ವಾಮಿತ್ರ ಮುನಿಗಳನ್ನು ಕೈಬಿಡುವುದುಂಟು. ರಾಮಾಯಣದಲ್ಲಿ ಅವರ ಪಾತ್ರ ವಿಶೇಷವೇನೂ ಇಲ್ಲ ಎಂದು ಆ ವಿಮರ್ಶಕರ ಅಭಿಪ್ರಾಯವಾಗಿರಬಹುದು. ಆದರೆ ಈ ಗ್ರಂಥದಲ್ಲಿ ಪ್ರಮುಖ ವ್ಯಕ್ತಿಗಳಾಗಿ ಆದ್ಯಂತಗಳಲ್ಲೆಲ್ಲಿಯೂ ಶೋಭಿಸತಕ್ಕ ಶ್ರೀರಾಮಲಕ್ಷ್ಮಣರನ್ನು ಮುಂದಿನ ಕಾರ್ಯಾಚರಣೆಗಳಿಗೆ ಸಿದ್ಧಪಡಿಸಿದ ಮಹಾ ಪುರುಷರು ವಿಶ್ವಾಮಿತ್ರರೇ. ಅವರಿಬ್ಬರ ಭವಿಷ್ಯತ್ತನ್ನರಿತು ವನವಾಸವನ್ನು ಪರಿಚಯ ಮಾಡಿಸಿ ರಾಕ್ಷಸರ ವ್ಯವಹಾರ ಎಂತಹದೆಂಬುದನ್ನು ತೋರಿಸಿ ಮುಂದಿನ ಮಹತ್ತರವಾದ ಯುದ್ಧಕ್ಕೆ ಆವಶ್ಯಕವೆಂದು ನಿಶ್ಚಯಿಸಿ ಈ ಲೋಕದಲ್ಲಿ ಇನ್ನಾರಿಗೂ ಗೊತ್ತಿಲ್ಲದ ದಿವ್ಯಮಂತ್ರಾಸ್ತ್ರಗಳನ್ನು ಪದೇಶಿಸಿ ಶ್ರೀರಾಮನನ್ನು ಜಗದೇಕವೀರ ನನ್ನಾಗಿ ಮಾಡಿದವರು ವಿಶ್ವಾಮಿತ್ರರು. ಅರಣ್ಯದಲ್ಲಿ ಹೋಗುವಾಗ ರಾಮಲಕ್ಷ್ಮಣರಿಗೆ ವಿವಿಧ ಪ್ರಾಚೀನ ಕಥೆಗಳನ್ನು ಹೇಳಿ ಚರಿತ್ರೆಯನ್ನೂ ಭೂಗೋಳವನ್ನೂ ಕಲಿಸಿ, ಅರಮನೆಯ ಹೊರಗಿನ ಪ್ರಪಂಚ ಹೇಗಿರುತ್ತದೆಯೆಂಬುದನ್ನು ಅವರಿಗೆ ತೋರಿಸಿಕೊಟ್ಟವರು ಈ ಮಹರ್ಷಿಗಳು. ಅಹಲ್ಯೆಯನ್ನು ಶ್ರೀರಾಮನಿಂದ ಉದ್ಧಾರ ಮಾಡಿಸಿ, ಜನಕನಗರಿಗೆ ಕರೆದೊಯ್ದು ಶಿವಧನುಸ್ಸನ್ನು ಮುರಿಸಿ, ಶ್ರೀರಾಮನ ಪರಾಕ್ರಮವನ್ನು ಮೆರೆಸಿ, ಆತನಿಗೆ ಸರ್ವವಿಧದಲ್ಲಿಯೂ ಅನುರೂಪಳಾದ, ಗುಣಶೀಲರೂಪಗಳಲ್ಲಿ ಅನುಪಮಳಾದ ಜನಕಸುತೆಯೊಡನೆ ಪಾಣಿಗ್ರಹಣ ಮಾಡಿಸಿದ ಕಾರ್ಯಸಾಧಕರೂ ಕಾರ್ಯಯೋಜಕರೂ ಆದ ವಿಶ್ವಾಮಿತ್ರರ ಕಾರ್ಯಕೌಶಲ ಸಾಧಾರಣವಾದ್ದಲ್ಲ. ಆ ಸಮಯದಲ್ಲಿಯೇ ಸೋದರರಾದ ಭರತ, ಲಕ್ಷ್ಮಣ, ಶತ್ರುಘ್ನರಿಗೂ ಅನುರೂಪರಾದ ಕನ್ಯೆಯರನ್ನು ಕೊಡಿಸಿ ಮದುವೆ ಮಾಡಿಸಿ, ದಶರಥನ ಒಂದು ಉಪಕಾರಕ್ಕೆ ನೂರರಷ್ಟು ಪ್ರತಿಫಲವನ್ನಿತ್ತು ತೀರಿಸಿ, ಮತ್ತೆ ಕಾಣದಂತೆ ಕಣ್ಮರೆಯಾಗಿ, ತಪಸ್ಸಿಗಾಗಿ ಕೌಶಿಕೀನದೀತೀರಕ್ಕೆ ಆ ಮಹರ್ಷಿಗಳು ಹೊರಟು ಹೋಗುತ್ತಾರೆ. ವಿಶ್ವಾಮಿತ್ರರ ಹಿರಿಯ ಸೋದರಿ ಸತ್ಯವತೀ. ಕುಶವಂಶದಲ್ಲಿ ಹುಟ್ಟಿದ್ದರಿಂದ ಕೌಶಿಕೀ. ಪತಿವ್ರತೆಯಾದ ಅವಳು ಪತಿಯಾದ ಋಚೀಕನನ್ನು ಹಿಂಬಾಲಿಸಿ ಸ್ವರ್ಗಕ್ಕೆ ಹೋದಳಂತೆ. ಅವಳು ಲೋಕಹಿತಕ್ಕಾಗಿ ಕೌಶಿಕೀ ನದಿಯಾಗಿ ಹರಿಯತೊಡಗಿದಳು. ''ರಾಮ, ನಾನು ಅಕ್ಕನ ಮೇಲಿನ ಪ್ರೀತಿಯಿಂದ ಕೌಶಿಕೀತೀರದಲ್ಲಿಯೇ ಹೆಚ್ಚಾಗಿ ವಾಸಮಾಡುತ್ತೇನೆ. ಅಲ್ಲಿ ನನಗೆ ಸುಖವೆನಿಸುತ್ತದೆ'' ಎನ್ನುತ್ತಾರೆ ವಿಶ್ವಾಮಿತ್ರರು. (ಬಾಲಕಾಂಡ 34–10). ಸೋದರೀಪ್ರೀತಿ ಋಷಿಗಳನ್ನೂ ಆಕರ್ಷಿಸುತ್ತದೆ. ಇದು ವಿಶ್ವಾಮಿತ್ರರ ಮನುಷ್ಯತ್ವ.

ವಿಶ್ವಾಮಿತ್ರರ ರೋಮಾಂಚಕಾರಿಯಾದ ಪೂರ್ವಚರಿತೆಯನ್ನು ಶತಾನಂದರು ರಾಮಲಕ್ಷ್ಮಣರಿಗೆ ಹೇಳುತ್ತಾರೆ. ಅದು ಎಷ್ಟು ವಿಸ್ಮಯಕಾರಿಯೋ ಅಷ್ಟು ಬೋಧಪ್ರದವೂ ಆಗಿತ್ತು. ಮಾನುಷಪ್ರಯತ್ನದಿಂದ ದೈವವನ್ನೂ ಗೆಲ್ಲಬಹುದೆಂಬುದಕ್ಕೆ ಅದು ಉದಾಹರಣೆ

ಯಾಗಿತ್ತು. ದೈವವು ಕೊಟ್ಟ ಕ್ಷತ್ರಿಯ ಜನ್ಮವನ್ನು ಕಳೆದುಕೊಂಡು ವಿಶ್ವಾಮಿತ್ರರು ಬ್ರಹ್ಮರ್ಷಿಗಳೆನಿಸಿದ್ದು ಮಾನುಷ ಪ್ರಯತ್ನದಿಂದಲೇ.

ವಿಶ್ವಾಮಿತ್ರೇಣ ಮುನಿನಾ ದೈವಮುತ್ಸೃಜ್ಯ ದೂರತಃ ।
ಪೌರುಷೇಣೈವ ಸಂಪ್ರಾಪ್ತಂ ಬ್ರಾಹ್ಮಣ್ಯಂ ರಾಮ ನಾನ್ಯಥಾ ॥

– ಯೋಗ ವಾಸಿಷ್ಠ .

''ಧಿಗ್ ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ ಬಲಂ ಬಲಂ'' ಎಂದು ಘೋಷಿಸಿದವರು ವಿಶ್ವಾಮಿತ್ರರೇ. ಹೋಲಿಸಿ – ಶ್ರೀರಾಮನ ಹೇಳಿಕೆ,

ದೈವಸಂಪಾದಿತೋ ದೋಷೋ ಮಾನುಷೇಣ ಮಯಾ ಜಿತಃ ॥

–ಯುದ್ಧಕಾಂಡ 118–5

7. ಅಹಲ್ಯಾ

ಇವಳು ಗೌತಮ ಋಷಿಯ ಪತ್ನಿ. ಪರಮ ಸುಂದರಿ. ಇವಳ ಸೌಂದರ್ಯಕ್ಕೆ ಮರುಳಾಗಿ ದೇವೇಂದ್ರನು ಬಂದು ಅಹಲ್ಯೆಯ ಶೀಲವನ್ನು ಕೆಡಿಸಿದನೆಂದು ಬಾಲಕಾಂಡದಲ್ಲಿ ಹೇಳಿದೆ. ಅದನ್ನರಿತು ಗೌತಮ ಋಷಿಯು ಇವಳಿಗೆ ಕ್ರೂರವಾದ ಶಾಪವನ್ನಿತ್ತನು. ಕೆಲವು ವಿಮರ್ಶಕರು ಹೇಳುವುದೇನೆಂದರೆ, ಗೌತಮನು ಸದಾ ತಪಸ್ಸಿನಲ್ಲಿ ನಿರತನಾಗಿ ತನ್ನ ಪತ್ನಿಯ ಯೌವನದ ಆಕಾಂಕ್ಷೆಗಳನ್ನು ಪೂರೈಸಲಿಲ್ಲ. ಆದ್ದರಿಂದ ದೇವೇಂದ್ರನ ಆಕರ್ಷಣೆಗೆ ಒಳಗಾದಳು ಎಂದು ಅವರ ಅಭಿಪ್ರಾಯವಿದೆ.ಇದೇನೂ ಅಷ್ಟು ಯುಕ್ತವಾಗಿ ಕಾಣುವುದಿಲ್ಲ. ಗೌತಮನಂತೆ ಎಷ್ಟೋ ಋಷಿಗಳಿದ್ದರು. ಅವರೆಲ್ಲರು ಗೃಹಸ್ಥರು. ಗೃಹಸ್ಥನು 'ಋತು ಕಾಲಾಭಿಗಾಮೀ ಸ್ಯಾತ್'–ಇತ್ಯಾದಿ ಧರ್ಮಶಾಸ್ತ್ರದ ವಿಧಿಗಳನ್ನು ಮೀರುವುದಕ್ಕಾಗುವುದಿಲ್ಲ. ಗೌತಮನು ಆ ವಿಧಿಗಳನ್ನು ಮೀರಿ ಜಡಪ್ರಾಯನಾಗಿದ್ದನೆಂಬುದಕ್ಕೆ ಆಧಾರವಿಲ್ಲ. ಜನಕ ಪುರೋಹಿತನಾದ ಶತಾನಂದನು ಅಹಲ್ಯೆಯ ಮಗ. ಅಷ್ಟು ದೊಡ್ಡವನಾದ ಮಗನಿರುವಾಗ ಅವಳ ಯೌವನದ ಆಕಾಂಕ್ಷೆಗಳನ್ನು ಗೌತಮನು ಪೂರೈಸಲಿಲ್ಲವೆಂಬ ಆಪಾದನೆ ನಿಲ್ಲುವುದಿಲ್ಲ. ರಾಮಾಯಣ ದಲ್ಲಿಯೇ 'ಮತಿಂ ಚಕಾರ ದುರ್ಮೇಧಾ ದೇವರಾಜ ಕುತೂಹಲಾತ್'

– ಬಾಲ. 48–20

ಎಂದು ಹೇಳಿದೆ. ''ದೇವೇಂದ್ರನ ಸಮಾಗಮವಾಗುವುದೆಂದು ಅಹಲ್ಯೆಯು ಬುದ್ಧಿಗೆಟ್ಟು ಒಪ್ಪಿದಳು.'' ಕಡೆಯಲ್ಲಿ ಸಂತುಷ್ಟಳಾಗಿ ಅವಳೇ ''ಕೃತಾರ್ಥಾಸ್ಮಿ ಸುರಶ್ರೇಷ್ಠ'' ಎಂದು ಹೇಳುತ್ತಾಳೆ. ಆದ್ದರಿಂದ ಅಹಲ್ಯೆಯು ದೇವೇಂದ್ರನ ಕರೆಗೆ ಒಪ್ಪಿಕೊಂಡದ್ದು ಮನುಷ್ಯ ಸಹಜವಾದ ಒಂದು ದೌರ್ಬಲ್ಯವೆಂದು ಹೇಳುವುದೇ ಯುಕ್ತ

ಈ ಏಳು ಪಾತ್ರಗಳ ವಿಷಯವಾಗಿ ಅವಶ್ಯ ಹೇಳಬೇಕೆನಿಸಿದ ಕೆಲವು ವೈಶಿಷ್ಟ್ಯಗಳನ್ನು ನಿರೂಪಿಸಿದ್ದಾಯಿತು. ಈಗ ಕಥಾನಾಯಕನಾದ ಶ್ರೀರಾಮನ ಪಾತ್ರವನ್ನು ವಿಶದವಾಗಿ

ಪರಿಶೀಲಿಸಬೇಕಾದ್ದಿದೆ. ಆದ್ದರಿಂದ ಸೀತಾಲಕ್ಷ್ಮಣಾದಿ ಪಾತ್ರಗಳ ವಿಸ್ತೃತ ಪರಿಶೀಲನೆಗೆ ಕೈಹಾಕಿದರೆ, ಈ ಪ್ರಸ್ತಾವನೆ ಅತಿ ವಿಸ್ತೃತವಾಗುತ್ತದೆ. ಅವರ ವಿಷಯದಲ್ಲಿ ಹೇಳಬೇಕಾದ ವೈಶಿಷ್ಟ್ಯವು ಶ್ರೀರಾಮಾವಲೋಕನದಲ್ಲಿಯೇ ಸೇರಿ ಹೋಗುತ್ತದೆಯೆಂದು ತಿಳಿಯಬೇಕು.

ಶ್ರೀರಾಮ.

ರಾಮಾಯಣದ ನಾಯಕ ಶ್ರೀರಾಮ. ರಾಮ + ಅಯನ ರಾಮಾಯಣ ಎಂದು ಶಬ್ದದ ವ್ಯುತ್ಪತ್ತಿ. ಇದು ಸಂಜ್ಞಾ ಶಬ್ದವಾದ್ದರಿಂದ ಅಯನದ ನಕಾರಕ್ಕೆ ಣಕಾರಬಂದಿದೆ. ಅಯನವೆಂದರೆ ಚರಿತೆ. ಶ್ರೀರಾಮನ ಚರಿತೆಯಿರುವ ಗ್ರಂಥವೆಂದರ್ಥ. ಇದು ಅನ್ವರ್ಥವಾದ ಸಂಜ್ಞೆ.

ಕಾವ್ಯಂ ರಾಮಾಯಣಂ ಕೃತ್ಸ್ನಂ ಸೀತಾಯಾಶ್ಚರಿತಂ ಮಹತ್ ।
ಪೌಲಸ್ತ್ಯವಧಮಿತ್ಯೇವ ಚಕಾರ ಚರಿತವ್ರತಃ ॥

ವ್ರತನಿಷ್ಠರಾದ ವಾಲ್ಮೀಕಿ ಮುನಿಗಳು ಶ್ರೀರಾಮನ ಎಲ್ಲ ಚರಿತೆಯುಳ್ಳ ರಾಮಾಯಣ ಕಾವ್ಯವನ್ನು ರಚಿಸಿದರು. ಶ್ರೀರಾಮನ ಸಂಬಂಧದಿಂದ ಸೀತೆಯ ಚರಿತೆ ಮಹತ್ತ್ವವನ್ನು ಪಡೆದಿದೆ. ಸೀತಾನಿಮಿತ್ತದಿಂದ ಪೌಲಸ್ತ್ಯನ ವಧೆಯಾಯಿತೆಂದು ಈ ಶ್ಲೋಕದ ತಾತ್ಪರ್ಯವಾಗಿದೆ.

ವಾಲ್ಮೀಕಿ ಮುನಿಗಳು ರಾಮಾಯಣವನ್ನು ರಚಿಸಲು ಕಾರಣವಾದ ಸಂನಿವೇಶವು ಗಮನಾರ್ಹವಾದದ್ದು. ಧರ್ಮಶಾಸ್ತ್ರಗಳೂ, ನೀತಿಶಾಸ್ತ್ರಗಳೂ ಮಾನವನಲ್ಲಿರಬೇಕಾದ ಸದ್ಗುಣ ಸದಾಚಾರಗಳನ್ನು ಪಟ್ಟಿ ಮಾಡಿ ಹೇಳುತ್ತವೆ. ಗೌರವಾನ್ವಿತನಾದ ಯಾವ ಮಾನವನನ್ನು ನೋಡಿದರೂ ಆ ಪಟ್ಟಿಯಲ್ಲಿರುವ ಕೆಲವು ಗುಣಗಳು ಕಾಣಿಸುತ್ತವೆಯೇ ಹೊರತು ಸಕಲ ಗುಣಗಳು ಏಕತ್ರ ಸೇರಿದ ಒಬ್ಬ ಪುರುಷಶ್ರೇಷ್ಠನು ಈ ಜಗತ್ತಿನಲ್ಲಿದ್ದಿರಬಹುದೆ? – ಎಂಬುದನ್ನರಿಯಲು ವಾಲ್ಮೀಕಿ ಮುನಿಗಳ ಮನಸ್ಸು ಬಯಸಿತ್ತು. ಒಂದು ದಿನ ನಾರದರ ದರ್ಶನವಾದಾಗ ಈ ಬಯಕೆ ತಲೆದೋರಿತು. ಲೋಕ ಸಂಚಾರಿಗಳೂ ದೇವರ್ಷಿಗಳೂ ಆದ ನಾರದರನ್ನು ಕೇಳಿದರೆ, ಈ ಕುತೂಹಲವು ತಣಿದೀತೆಂದು ಆಶಿಸಿ ವಾಲ್ಮೀಕಿ ಮುನಿಗಳು ನಾರದರನ್ನು ಕುರಿತು –

ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥

ಎಂದು ಕೆಲವು ಸದ್ಗುಣಗಳನ್ನು ಪಟ್ಟಿ ಮಾಡಿ ಅಂತಹವನು ಲೋಕದಲ್ಲಿ ಸಾಂಪ್ರತಂ – ಈಗ ಇದ್ದಾನೆಯೆ? ಎಂದು ಕೇಳುತ್ತಾರೆ. 'ಸಾಂಪ್ರತಂ' ಎಂದು ಹೇಳಿರುವುದು ಅರ್ಥಪೂರ್ಣ ವಾಗಿದೆ. ವಾಲ್ಮೀಕಿ ಮುನಿಗಳಿಗೆ ಶ್ರೀರಾಮನ ಚರಿತೆಯೆಲ್ಲವೂ ತಿಳಿದಿತ್ತು. ಅವನಿಂದ ಪರಿತ್ಯಕ್ತಳಾದ ಸೀತಾದೇವಿಗೆ ತಮ್ಮ ಆಶ್ರಮದಲ್ಲಿ ಆಶ್ರಯವನ್ನಿತ್ತು ಅವಳನ್ನು ತಮ್ಮ ಮಗಳಂತೆ ವಾತ್ಸಲ್ಯದಿಂದ ಪೋಷಿಸುತ್ತಿದ್ದರು. ಅವರ ಮನಸ್ಸಿನಲ್ಲಿ ಶ್ರೀರಾಮನೊಬ್ಬನೇ ಈಗ

ಧರ್ಮನಿಷ್ಠನಾದವನೆಂಬ ನಂಬಿಕೆ ಇತ್ತು. ಅದನ್ನು ದೃಢ ಪಡಿಸಿಕೊಳ್ಳುವುದಕ್ಕಾಗಿ ಅವರು ನಾರದರ ಅಭಿಪ್ರಾಯವನ್ನು ಕೇಳಿದ್ದಾರೆ. ಅಲ್ಲದೆ ಯಾವಾಗಲೋ ಒಬ್ಬ ಅಂತಹ ಧರ್ಮಾತ್ಮ ನಿದ್ದನೆಂದರೆ ಅದು ಪರೋಕ್ಷವಾಗಿ ಬಿಡುತ್ತದೆ. ಪ್ರತ್ಯಕ್ಷವಾಗಿ ಆತನು ಕಣ್ಣು ಮುಂದಿದ್ದರೆ ವಿಶ್ವಾಸವು ದೃಢವಾಗಿ ನೆಲೆಯೂರುತ್ತದೆ. ಅದೆಲ್ಲವೂ ಈಗ ಕೂಡಿ ಬಂದಿತು. ಶ್ರೀರಾಮನು ಪ್ರತ್ಯಕ್ಷನಾಗಿ ರಾಜನಾಗಿದ್ದಾನೆ. ತಮ್ಮ ಅಭಿಪ್ರಾಯವನ್ನೇ ನಾರದರು ದೃಢ ಪಡಿಸಿದರು. ಇದೇ ಸಾಲದೋ ಎಂಬಂತೆ ಬ್ರಹ್ಮನು ಪ್ರತ್ಯಕ್ಷನಾಗಿ ಶ್ರೀರಾಮನ ಧರ್ಮನಿಷ್ಠೆಯನ್ನು ಪ್ರಶಂಸಿಸಿ ಆತನ ಚರಿತೆಯನ್ನು ಬರೆಯಬೇಕೆಂದು ಆದೇಶಿಸಿದ್ದಾನೆ. ಆತನ ಅನುಗ್ರಹದಿಂದಲೂ ತಮ್ಮ ತಪೋನಿಷ್ಠೆಯಿಂದಲೂ ಶ್ರೀರಾಮನ ಮಾತು, ಆಚರಣೆ ಎಲ್ಲವೂ ಕರತಲಾಮಲಕವಾಗಿ ತಿಳಿಯಿತು. ಅನಂತರ ಶ್ರೀಮದ್ರಾಮಾಯಣವನ್ನು ವಾಲ್ಮೀಕಿ ಮುನಿಗಳು ರಚಿಸಿದರು. ನಮ್ಮ ಇನ್ನಾವ ಇತಿಹಾಸ ಪುರಾಣಗಳಲ್ಲಿಯೂ ಯಾವ ಕಥಾನಾಯಕನಿಗೂ ಇಷ್ಟೊಂದು ಉಚ್ಚಮಟ್ಟದ ಪ್ರಶಂಸೆ ಲಭ್ಯವಾಗಲಿಲ್ಲ.

ಅನರ್ಘರಾಘವ – ಎಂಬ ಒಂದು ಪ್ರೌಢವಾದ ಸಂಸ್ಕೃತ ನಾಟಕವಿದೆ. ರಾಮಾಯಣ ವನ್ನವಲಂಬಿಸಿ ಎಷ್ಟೋ ಕಾವ್ಯ ನಾಟಕಗಳಿರುವಾಗ ಅದೇ ಕಥೆಯನ್ನು ಈ ನಾಟಕದಲ್ಲಿ ಚಿತ್ರಿಸುವುದೇಕೆ ? ಎಂಬ ಪ್ರಶ್ನೆಗೆ ಮುರಾರಿ ಕವಿಯ ಉತ್ತರ ಇದು –

ಯದಿ ಕ್ಷುಣ್ಣಂ ಪೂರ್ವೈರಿತಿ ಜಹತಿ ರಾಮಸ್ಯ ಚರಿತಮ್
ಗುಣೈರೇತಾವದ್ಭಿರ್ಜಗತಿ ಪುನರನ್ಯೋ ಜಯತಿ ಕಃ ॥

''ಪೂರ್ವಕವಿಗಳಿಂದ ಸಾಕಷ್ಟು ವರ್ಣಿತವಾಗಿದೆಯೆಂದು ತಿಳಿದು ನಾವೂ ಶ್ರೀರಾಮ ಚರಿತೆಯನ್ನು ಬಿಟ್ಟು ಬಿಡುವುದಾದರೆ, ಇಷ್ಟೊಂದು ಸದ್ಗುಣಗಳಿಂದ ಶ್ರೀರಾಮನಂತೆ ವಿರಾಜಿಸುವ ಇನ್ನೊಬ್ಬ ವ್ಯಕ್ತಿ ಈ ಜಗತ್ತಿನಲ್ಲಿ ಯಾವನಿದ್ದಾನೆ?''

ವಾಲ್ಮೀಕಿ ಮುನಿಗಳಿಗಂತೂ ಶ್ರೀರಾಮನನ್ನು ಧರ್ಮಾತ್ಮ, ಸತ್ಯಸಂಧ, ಮಹಾತ್ಮ – ಎಂದು ಎಷ್ಟು ಸಲ ಹೇಳಿದರೂ ತೃಪ್ತಿ ಇಲ್ಲ. ಧರ್ಮವನ್ನು ಪಾಲಿಸತಕ್ಕವನಿಗೆ ಎದುರಾಗುವ ಸಮಸ್ಯೆಗಳೂ ಕಷ್ಟ ನಷ್ಟಗಳೂ ಅಲ್ಪವಲ್ಲ. ಅವೆಲ್ಲವನ್ನೂ ಎದುರಿಸಿ ಅಂಜದೆ, ಹಿಂಜರಿಯದೆ ಜೀವನದುದ್ದಕ್ಕೂ ದುಃಖವನ್ನನುಭವಿಸಿದ ಮಹಾಚೇತನವೇ ಶ್ರೀರಾಮ. ಭವಭೂತಿಯು ಉತ್ತರರಾಮಚರಿತೆಯಲ್ಲಿ ''ದುಃಖಸಂವೇದನಾಯೈವ ರಾಮೇ ಚೈತನ್ಯಮಾಗತಂ'' ಎಂದು ಆತನಿಂದಲೇ ಹೇಳಿಸಿರುವುದು ಅತಿಶಯೋಕ್ತಿಯಲ್ಲ. ಧರ್ಮಸಂಕಟದ ಪ್ರಶ್ನೆಯೊದಗಿ ದಾಗಲೂ ತಾನು ಕಷ್ಟವನ್ನೇ ಆರಿಸಿಕೊಂಡು ಆ ಪ್ರಶ್ನೆಯನ್ನು ಶ್ರೀರಾಮನು ಬಗೆಹರಿಸಿ ಕೊಂಡಿದ್ದಾನೆ. ಇದೆಲ್ಲವನ್ನೂ ವಾಲ್ಮೀಕಿ ಮುನಿಗಳು ಅಳುಕದೆ ಚಿತ್ರಿಸಿ ಶ್ರೀರಾಮನು 'ಮರ್ಯಾದಾ ಪುರುಷೋತ್ತಮ' ನೆಂಬುದನ್ನು ತೋರಿಸಿಕೊಟ್ಟಿದ್ದಾರೆ. ''ಎಲೈ ಮಾನವರೆ, ಶ್ರೀರಾಮನ ಎಲ್ಲ ಸದ್ಗುಣಗಳನ್ನೂ ನೀವು ಪಾಲಿಸಲಾರಿರಿ. ಕೆಲವನ್ನಾದರೂ ಪಾಲಿಸಿ ಧನ್ಯರಾಗಿರಿ'' ಎಂಬುದು ಆ ಮಹರ್ಷಿಗಳ ಸಂದೇಶ.

ಶ್ರೀಚಾಮರಾಜೋಕ್ತಿವಿಲಾಸವೆಂಬ ಕನ್ನಡ ರಾಮಾಯಣದ ಎರಡನೆಯ ಭಾಗದಲ್ಲಿ

ನಾನೇ ಬರೆದ ಪಾತ್ರಾವಲೋಕನದಿಂದ ಮುಂದಿನ ಅಂಶವು ಉದ್ಧೃತವಾಗಿದೆ.

ಚಲದೊಳ್ ದೈತ್ಯೇಶ್ವರಂ ನನ್ನಿಯೊಳಿನತನಯಂ ಗಂಡಿನೊಳ್ ವಾಯುಪುತ್ರಂ
ಬಲದೊಳ್ ಶಕ್ರಾರಿಯತ್ಯುನ್ನತಿಯ ಮಹಿಮೆಯೊಳ್ ಕೌಶಿಕಂ ಚಾಪವಿದ್ಯಾ ।
ಬಲದೊಳ್ ಸೌಮಿತ್ರಿ ಸೌಶೀಲ್ಯದೊಳವನಿಜೆ ಸೌಭ್ರಾತ್ರದೊಳ್ ಕೈಕಯೀಜಂ
ಲಲಿತಂ ಕಾರುಣ್ಯಪೂರಂ ಮಿಗಿಲಮಿತಬಲಂ ಧರ್ಮದೊಳ್ ರಾಮಚಂದ್ರಮ್ ॥

ಲಲಿತಂ

ಲಲಿತಶಬ್ದವು ಸೌಂದರ್ಯ, ಸೌಲಭ್ಯ – ಎಂಬ ಎರಡು ಅರ್ಥಗಳನ್ನು ಒಳಗೊಳ್ಳುತ್ತದೆ. ಅರ್ಥದ್ವಯವೂ ಇಲ್ಲಿ ವಿವಕ್ಷಿತ.

ಸೌಂದರ್ಯ : ಒಬ್ಬ ಮನುಷ್ಯನನ್ನು ನೋಡಿದಾಗ ಪ್ರೇಕ್ಷಕನ ಮನಸ್ಸಿನ ಮೇಲೆ ಮೊದಲು ಪ್ರಭಾವವನ್ನು ಬೀರತಕ್ಕದ್ದು ಅವನ ಆಕೃತಿ. ವಿದ್ಯೆ, ಅಧಿಕಾರ, ಸದಾಚಾರ, ಸಂಪತ್ತು – ಎಲ್ಲವೂ ವ್ಯಕ್ತಿಯಲ್ಲಿ ಒಂದು ತೇಜಸ್ಸನ್ನು ಆಧಾನಮಾಡುತ್ತವೆ. ಶಾಕುಂತಲನಾಟಕದಲ್ಲಿ ದುಷ್ಯಂತನು ಕಣ್ವಾಶ್ರಮಕ್ಕೆ ಬಂದಾಗ ಅವನನ್ನು ನೋಡಿದೊಡನೆ ಪ್ರಿಯಂವದೆಯು ''ಅನುಸೂಯೆ, ಚತುರ ಗಂಭೀರಾಕೃತಿಯಾದ ಈತನು ಬಹಳ ಪ್ರಭಾವಶಾಲಿಯಾಗಿ ಕಾಣುವನಲ್ಲ, ಇವನು ಯಾರಿರಬಹುದು?'' ಎಂದು ತನ್ನ ಸಖಿಯನ್ನು ಕೇಳುತ್ತಾಳೆ. ರಘುವಂಶದ ಆರಂಭದಲ್ಲಿ ದಿಲೀಪನನ್ನು ವರ್ಣಿಸುವಾಗ ಕಾಳಿದಾಸನು–

ವ್ಯೂಢೋರಸ್ಕೋ ವೃಷಸ್ಕಂಧಃ ಸಾಲಪ್ರಾಂಶುರ್ಮಹಾಭುಜಃ ।
ಆತ್ಮಕರ್ಮಕ್ಷಮಂ ದೇಹಂ ಕ್ಷಾತ್ರೋ ಧರ್ಮ ಇವ ಶ್ರಿತಃ ॥

ಎಂದು ಹೇಳುತ್ತ ದಿಲೀಪನ ಆಕೃತಿಯನ್ನು ಪರಿಚಯ ಮಾಡಿಸುತ್ತಾನೆ.

ಶ್ರೀಮದ್ರಾಮಾಯಣದ ಕಥಾನಾಯಕನೂ ಸಕಲಮಹಾಗುಣಗಳಿಗೆ ಆಕರನೂ ಆದ ಶ್ರೀರಾಮಚಂದ್ರನ ಆಕೃತಿ ಹೇಗಿದ್ದಿರಬಹುದು?

ದಿವ್ಯಸುಂದರ ವಿಗ್ರಹ, ಪುಂಸಾಂ ಮೋಹನರೂಪಾಯ, ಭವ್ಯರೂಪಾಯ ಎಂದು ಕವಿಗಳು ಹಾಡಿದ್ದುಂಟು. ಆ ಮಗುವಿನ ರಮಣೀಯವಾದ ಸೌಂದರ್ಯದಿಂದ ಮುಗ್ಧರಾದ ವಸಿಷ್ಠರು ''ರಾಮ'' ಎಂದು ನಾಮಕರಣ ಮಾಡಿದರಂತೆ :

ರಾಮ ಇತ್ಯಭಿರಾಮೇಣ ವಪುಷಾ ತಸ್ಯ ಚೋದಿತಃ ।
ನಾಮಧೇಯಂ ಗುರುಶ್ಚಕ್ರೇ ಜಗತ್ಪ್ರಥಮಮಂಗಲಮ್ ॥

– ರಘುವಂಶ, 10–67

ಶ್ರೀರಾಮನ ದಿವ್ಯಸೌಂದರ್ಯವನ್ನೂ ಧೀರಗಂಭೀರವಾದ ಕ್ಷತ್ರಿಯೋಚಿತವಾದ ಮೈಕಟ್ಟನ್ನೂ ಎಷ್ಟು ಸಲ ಎಷ್ಟು ಬಗೆಯಲ್ಲಿ ವರ್ಣಿಸಿದರೂ ವಾಲ್ಮೀಕಿ ಮುನಿಗಳಿಗೆ ತೃಪ್ತಿ ಇಲ್ಲ. ಮತ್ತೆ ಮತ್ತೆ ಅದರ ಪ್ರಸ್ತಾವ ಬರುತ್ತಲೇ ಇರುತ್ತದೆ. ಶ್ರೀರಾಮನು 'ಸೋಮವತ್

ಪ್ರಿಯದರ್ಶನಃ' ನೋಡಲು ಚಂದ್ರನಂತೆ ಆಹ್ಲಾದಕಾರಿ ಎಂಬುದು ಎಷ್ಟು ಸಲವೋ ! ರಾಮಚಂದ್ರ ಎಂಬ ಶಬ್ದದ ಈಚಿನ ಬಳಕೆಗೆ ಈ ವರ್ಣನೆಯೇ ನಿಮಿತ್ತವಾಗಿರಬೇಕು.

ರಾಮಲಕ್ಷ್ಮಣರು ವಿಶ್ವಾಮಿತ್ರರೊಡನೆ ವಿಶಾಲಾನಗರಕ್ಕೆ ಬಂದಾಗ ರಾಜನಾದ ಸುಮತಿಗೆ ವಿಸ್ಮಯವನ್ನುಂಟು ಮಾಡಿದ್ದು ಆ ಬಾಲಕರ ಸೌಂದರ್ಯ. ಅವರು ಅಶ್ವಿನೀ ದೇವತೆಗಳಂತೆ ಆ ರಾಜನಿಗೆ ಕಣಿಸಿದರು. ''ಪದ್ಮಪತ್ರವಿಶಾಲಾಕ್ಷರಾದ ಇವರು ಯಾರು?'' – ಎಂದು ಸುಮತಿಯು ವಿಶ್ವಾಮಿತ್ರರನ್ನು ಕೇಳಿದನು. ಜನಕರಾಜನೂ ಹಾಗೆಯೇ ವಿಸ್ಮಿತನಾಗಿ ಅದೇ ಮಾತನ್ನು ಪುನರುಚ್ಚರಿಸಿದನು.

ಶ್ರೀರಾಮನನ್ನು ಎಷ್ಟು ಸಲ ನೋಡಿದರೂ ಹೇಗೆ ಹೇಗೆ ನೋಡಿದರೂ ದಶರಥನಿಗೆ ತೃಪ್ತಿ ಇಲ್ಲ. ಕಣ್ಣಿನ ಬಯಕೆ ತಣಿಯಲಿಲ್ಲ :

ಗಂಧರ್ವರಾಜಪ್ರತಿಮಂ ಲೋಕೇ ವಿಖ್ಯಾತಪೌರುಷಮ್ ।
ದೀರ್ಘಬಾಹುಂ ಮಹಾಸತ್ತ್ವಂ ಮತ್ತಮಾತಂಗಗಾಮಿನಮ್ ॥
ಚಂದ್ರಕಾಂತಾನನಂ ರಾಮಮತೀವ ಪ್ರಿಯದರ್ಶನಮ್ ।
ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಮ್ ॥
ಘರ್ಮಾಭಿತಪ್ತಾಃ ಪರ್ಜನ್ಯಂ ಹ್ಲಾದಯಂತಮಿವ ಪ್ರಜಾಃ ।
ನ ತತರ್ಪ ಸಮಾಯಾಂತಂ ಪಶ್ಯಮಾನೋ ನರಾಧಿಪಃ ॥

– ಅಯೋಧ್ಯಾ 3–21, 29, 30

''ಶ್ರೀರಾಮನು ಗಂಧರ್ವರಾಜನಂತೆ ಸುಂದರನೂ ವೀರಾಗ್ರಣಿಯೆಂದು ಲೋಕ ವಿಖ್ಯಾತನೂ ಆಗಿದ್ದನು. ಅವನು ಆಜಾನುಬಾಹು. ಸತ್ತ್ವಗುಣಸಂಪನ್ನ. ಮದ್ದಾನೆಯಂತೆ ಗಂಭೀರವಾಗಿ ನಡೆಯತಕ್ಕವನು. ಚಂದ್ರನಂತೆ ರಮಣೀಯವಾದ ಮುಖ. ಅವನನ್ನು ನೋಡಿ ದಷ್ಟೂ ಆನಂದವು ಹೆಚ್ಚುವುದು. ಶ್ರೀರಾಮನು ತನ್ನ ಸೌಂದರ್ಯ ಔದಾರ್ಯಾದಿಗುಣ ಗಳಿಂದ ನೋಡುವವರ ಕಣ್ಮನಗಳನ್ನು ಸೂರೆಗೊಳ್ಳುತ್ತಿದ್ದನು. ಬೇಸಿಗೆಯಲ್ಲಿ ಬಳಲಿದವರಿಗೆ ಮೇಘವಿದ್ದಂತೆ ಪ್ರೇಕ್ಷಕರೆಲ್ಲರಿಗೂ ಅವನು ಆಹ್ಲಾದವನ್ನುಂಟು ಮಾಡುತ್ತಿದ್ದನು. ಆ ಪುತ್ರನನ್ನು ಎಷ್ಟು ನೋಡಿದರೂ ದಶರಥನಿಗೆ ತೃಪ್ತಿಯಾಗಲಿಲ್ಲ.''

ಶೂರ್ಪಣಖೆಯು ''ಕಂದರ್ಪಸದೃಶನಾದ ಶ್ರೀರಾಮನ ಸುಂದರಾಕೃತಿಯನ್ನು'' ಕಂಡು ಕಾಮಮೋಹಿತಳಾದಳು. ಅವಳು ಅವಮಾನಗೊಂಡು ಕುಪಿತಳಾಗಿ ಶ್ರೀರಾಮನಮೇಲೆ ಚಾಡಿ ಹೇಳಲು ರಾವಣನ ಬಳಿಗೆ ಹೋದಳಷ್ಟೆ. ಶ್ರೀರಾಮನನ್ನು ದೂರುವಾಗಲೂ ಅವನ ಸೌಂದರ್ಯ ಅವಳ ಕಣ್ಣಿಗೆ ಕಟ್ಟಿದಂತಾಗಿತ್ತು. ಅವಳು ಹೀಗೆಂದಳು :

ದೀರ್ಘಬಾಹುರ್ವಿಶಾಲಾಕ್ಷಶ್ಚೀರಕೃಷ್ಣಾಜಿನಾಂಬರಃ ।
ಕಂದರ್ಪಸಮರೂಪಶ್ಚ ರಾಮೋ ದಶರಥಾತ್ಮಜಃ ॥

– ಅರಣ್ಯ. 34–5

''ರಾವಣ, ರಾಮನು ದಶರಥರಾಜನ ಪುತ್ರ; ಆಜಾನುಬಾಹು; ವಿಶಾಲನೇತ್ರ; ನಾರುಬಟ್ಟೆ ಕೃಷ್ಣಾಜಿನಗಳನ್ನು ಧರಿಸಿದ್ದರೂ ಮನ್ಮಥನಂಥ ಸುಂದರಾಕೃತಿ !''

ಅಶೋಕವನದಲ್ಲಿ ಸೀತೆಯು ಹನುಮಂತನನ್ನು ಕಂಡಾಗ ಅವನು ರಾಮದೂತನೆಂದು ಮೊದಲು ನಂಬಿಕೆಯಾಗಲಿಲ್ಲ. ಸೀತೆಯು ''ವಾನರ, ನೀನು ಶ್ರೀರಾಮನನ್ನು ನೋಡಿರುವುದಾದರೆ, ಅವನ ಆಕೃತಿ ಹೇಗಿದೆ? ಹೇಳು'' ಎಂದು ಕೇಳಿದಳು. ಆಗ ಹನುಮಂತನು ಶ್ರೀರಾಮನ ಸೌಂದರ್ಯವನ್ನೂ ಮೈಕಟ್ಟನ್ನೂ ದೀರ್ಘವಾಗಿ ವರ್ಣಿಸುತ್ತ ಹೀಗೆಂದನು :

ರಾಮಃ ಕಮಲಪತ್ರಾಕ್ಷಃ ಸರ್ವಸತ್ತ್ವ ಮನೋಹರಃ ।
ರೂಪದಾಕ್ಷಿಣ್ಯ ಸಂಪನ್ನಃ ಪ್ರಸೂತೋ ಜನಕಾತ್ಮಜೇ ॥
– ಸುಂದರ 35–8

''ಜನಕತನಯೆ, ಶ್ರೀರಾಮನ ಕಣ್ಣುಗಳು ತಾವರೆಯ ದಳದಂತೆ ಚೆಲುವಾಗಿವೆ. ಸಕಲ ಪ್ರಾಣಿಗಳಿಗೂ ಅವನನ್ನು ನೋಡಿದರೆ ಆನಂದವಾಗುತ್ತದೆ. ಅವನು ಜನಿಸುವಾಗಲೇ ಸೌಂದರ್ಯ ದಾಕ್ಷಿಣ್ಯಗಳು ಕೂಡಿ ಬಂದಿವೆ.''

ಸೌಲಭ್ಯ :– ಭಗವಂತನು ಅಪಾರಮಹಿಮನೂ ಸರ್ವಶಕ್ತನೂ ಸರ್ವಜ್ಞನೂ ಆದರೂ ಭಕ್ತಿಗೆ ಒಲಿಯುವನೆಂದೂ ಭಕ್ತರಿಗೆ ಸುಲಭನೆಂದೂ ಭಕ್ತಿಮಾರ್ಗದವರು ಹೇಳುತ್ತಾರೆ. ''ಯೋ ಮದ್ಭಕ್ತಃ ಸ ಮೇ ಪ್ರಿಯಃ, ಭಕ್ತಿಮಾನ್ ಮೇ ಪ್ರಿಯೋ ನರಃ, ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ'' ಎಂದು ಶ್ರೀ ಕೃಷ್ಣನು ಹೇಳಿದ್ದಾನಲ್ಲವೆ?

ಸೌಲಭ್ಯವೆಂದರೆ ಸರಳತೆ, ಗರ್ವರಹಿತವಾದ ವರ್ತನೆ, ಬಿಗುಮಾನವಿಲ್ಲದಿರುವಿಕೆ, ಅಧಿಕಾರಾದಿ ಪ್ರಯುಕ್ತವಾದ ದರ್ಪದ ರಾಹಿತ್ಯ. ಇದು ಶ್ರೀ ರಾಮನಲ್ಲಿ ಕಂಡುಬರುವ ಒಂದು ದೊಡ್ಡ ಗುಣ. ಅಯೋಧ್ಯಾ ಕಾಂಡದ ಪ್ರಥಮಸರ್ಗದಲ್ಲಿ ಇದೇ ಗುಣಗಾನ :–

ಸ ತು ನಿತ್ಯಂ ಪ್ರಶಾಂತಾತ್ಮಾ ಮೃದುಪೂರ್ವಂ ಚ ಭಾಷತೇ ।
ಉಚ್ಯಮಾನೋಽಪಿ ಪರುಷಂ ನೋತ್ತರಂ ಪ್ರತಿಪದ್ಯತೇ ॥

ಶ್ರೀರಾಮನು ಯಾವಾಗಲೂ ಶಾಂತಸ್ವಭಾವದವನು. ಜನರೊಡನೆ ಮೃದುವಾಗಿ ಮಾತನಾಡತಕ್ಕವನು. ತನಗೆ ಕಠಿಣವಾಗಿ ನುಡಿದರೂ ಪ್ರತಿಯಾಗಿ ಹೇಳತಕ್ಕವನಲ್ಲ.

ಬುದ್ಧಿಮಾನ್ ಮಧುರಾಭಾಷೀ ಪೂರ್ವಾಭಾಷೀ ಪ್ರಿಯಂವದಃ ।
ವೀರ್ಯವಾನ್ ನ ಚ ವೀರ್ಯೇಣ ಮಹತಾ ಸ್ವೇನ ವಿಸ್ಮಿತಃ ॥

ಅವನು ಮೇಧಾವಿ, ಸರ್ವದಾ ಮಧುರವಾಗಿ ಪ್ರಿಯವಾದ ಮಾತನಾಡತಕ್ಕವನು. ಜನರನ್ನು ಕಂಡಾಗ ತಾನೇ ಮೊದಲು ಮಾತನಾಡಿಸುವನು. ಮಹಾಶೂರನಾದರೂ ತಾನು ಶೂರನೆಂಬ ಜಂಭವಿಲ್ಲ.

ಅನುರಕ್ತಃ ಪ್ರಜಾಭಿಶ್ಚ ಪ್ರಜಾಶ್ಚಾಪ್ಯನುರಂಜತೇ ||

ಪ್ರಜೆಗಳೆಲ್ಲರಿಗೂ ಅವನಲ್ಲಿ ಅನುರಾಗ. ಅವನಿಗೆ ಪ್ರಜೆಗಳಲ್ಲಿ ಅನುರಾಗ.

ದೀನಾನುಕಂಪೀ ಧರ್ಮಜ್ಞೋ ನಿತ್ಯಂ ಪ್ರಗ್ರಹವಾನ್ ಶುಚಿಃ ||

ಶ್ರೀರಾಮನಿಗೆ ದೀನರಲ್ಲಿ ಕಾರುಣ್ಯ. ಅವನು ಧರ್ಮಜ್ಞನೂ ನಿಯಮವಂತನೂ ಪರಧನವನ್ನು ಎಂದಿಗೂ ಬಯಸದ ಶುದ್ಧಮನಸ್ಕನೂ ಆಗಿದ್ದನು.

ದಶರಥನು ತುಂಬಿದ ರಾಜಸಭೆಯಲ್ಲಿ ''ನನ್ನ ಜ್ಯೇಷ್ಠಪುತ್ರನಾದ ರಾಮನಿಗೆ ಯುವರಾಜ ಪದವಿಯನ್ನು ಕೊಡಲು ಉದ್ದೇಶಿಸಿದ್ದೇನೆ'' – ಎಂದು ಪ್ರಕಟಿಸಿದನು. ಸಭೆಯು ಹರ್ಷೋದ್ಗಾರದಿಂದ ಮೊಳಗಿತು. ದಶರಥನು ಆನಂದಚಕಿತನಾಗಿ ''ಪ್ರಜೆಗಳೆ, ನಾನು ಧರ್ಮದಿಂದ ಪ್ರಜಾಪಾಲನೆಯನ್ನು ಮಾಡಿಕೊಂಡು ಬರುತ್ತಿರುವಾಗ, ನನ್ನ ಮಗನು ಯುವರಾಜನಾಗಲೆಂದು ಏಕೆ ಬಯಸುವಿರಿ? ನನಗೆ ಸಂಶಯವಾಗುತ್ತಿದೆ !'' – ಎಂದು ಕೇಳಿದನು. ಆಗ ಸಭೆಯಲ್ಲಿ ನೆರೆದವರು ಹೀಗೆ ನುಡಿದರಂತೆ :

''ಮಹಾರಾಜ, ಶ್ರೀರಾಮನು ಪ್ರಜೆಗಳನ್ನು ಕಂಡಾಗ ತನ್ನ ಬಂಧುಗಳಂತೆ ಭಾವಿಸಿ ಕ್ಷೇಮವನ್ನು ವಿಚಾರಿಸುತ್ತಾನೆ. ನಮ್ಮ ಮಡದಿಯರು, ಮಕ್ಕಳು, ಶಿಷ್ಯರು, ಸೇವಕರು, ನಮ್ಮ ಅಗ್ನಿಹೋತ್ರ – ಇವೆಲ್ಲವನ್ನೂ ಕುರಿತು ಒಂದೊಂದಾಗಿ, ತಂದೆಯು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ವಿಚಾರಿಸಿಕೊಳ್ಳುವಂತೆ ವಿಚಾರಿಸಿಕೊಳ್ಳುತ್ತಾನೆ. 'ನಿಮ್ಮ ಶಿಷ್ಯರೂ ಸೇವಕರೂ ಕರ್ತವ್ಯ ನಿರತರಾಗಿ ನಿಮ್ಮನ್ನು ಸೇವಿಸುತ್ತಿರುವರೆ ?' ಎಂದು ಕೇಳುತ್ತಾನೆ. ನಮಗೆ ಆಕಸ್ಮಿಕವಾಗಿ ಬಂದ ಕಷ್ಟಗಳನ್ನು ಕೇಳಿ ಆ ಪುರುಷಶ್ರೇಷ್ಠನು ಬಹಳ ಮರುಕಪಡುತ್ತಾನೆ. ಜನರು ತಮಗೆ ಸಂತೋಷಕರವಾದ ವಿಷಯವನ್ನು ತಿಳಿಸಿದರೆ ತಂದೆಯಂತೆ ತಾನೂ ಸಂತೋಷಪಡುತ್ತಾನೆ. ಆತನು ನಗು ನಗುತ್ತ ನಮ್ಮೊಡನೆ ಮಾತನಾಡುತ್ತಾನೆ. ರಾಜ್ಯದಲ್ಲಿರುವ ಹುಡುಗಿಯರು, ಮುದುಕಿಯರು ಮೊದಲಾಗಿ ಸಕಲರೂ ಶ್ರೀರಾಮನಿಗೆ ಒಳ್ಳೆಯದಾಗಲೆಂದು ಪ್ರತಿದಿನ ಪ್ರಾತಃಕಾಲ ಸಾಯಂಕಾಲಗಳಲ್ಲಿ ದೇವತೆಗಳನ್ನು ಭಕ್ತಿಯಿಂದ ಪ್ರಾರ್ಥಿಸುತ್ತಿದ್ದಾರೆ. ಇವರೆಲ್ಲರ ಪ್ರಾರ್ಥನೆಯು, ಮಹಾರಾಜ, ನಿನ್ನ ಅನುಗ್ರಹದಿಂದ ನೆರವೇರಲಿ !''

ಸಾರಥಿಯಾದ ಸುಮಂತ್ರನಲ್ಲಿ, ಸಾಮಂತನಾದ ಗುಹನಲ್ಲಿ, ಜಟಾಯುವಿನಲ್ಲಿ, ಮುಗ್ಧ ಭಕ್ತಳಾದ ಶಬರಿಯಲ್ಲಿ, ಕಪಿಸೇನೆಯಲ್ಲಿ, ರಾಕ್ಷಸರಲ್ಲಿ, ಉತ್ತರಕಾಂಡದ ವಿವಿಧ ಪ್ರಸಂಗಗಳಲ್ಲಿ ಶ್ರೀರಾಮನ ಕಾರುಣ್ಯಪೂರ್ಣವಾದ ವರ್ತನೆ ಸೌಲಭ್ಯದ ಪರಮ ನಿದರ್ಶನಗಳು.

ಕಾರುಣ್ಯಪೂರಂ

ಭಗವಂತನನ್ನು ಕರುಣಾನಿಧಿಯೆನ್ನುತ್ತಾರೆ. ಕರುಣೆ ಪ್ರೇಮದ ಒಂದು ರೂಪಾಂತರ. ತಿಳಿಯಾದ ನೀರು ಬಣ್ಣ ಬಣ್ಣದ ಶೀಸೆಗಳಲ್ಲಿ ಬೇರೆಬೇರೆ ಬಣ್ಣವನ್ನು ತಳೆದಂತೆ ಕಾಣುತ್ತದೆ. ಬಣ್ಣದ ಶೀಸೆ ಉಪಾಧಿ. ಹಾಗೆ ಒಂದೇ ಪ್ರೇಮವು ವಿವಿಧ ಉಪಾಧಿಗಳಲ್ಲಿ ರೂಪಾಂತರವನ್ನು

ತಳೆದಂತೆ ಕಂಡು ನಾಮಾಂತರವನ್ನು ಪಡೆಯುತ್ತದೆ ಭಗವಂತನಲ್ಲಿ – ಗುರುಹಿರಿಯರಲ್ಲಿ ಇರಿಸಿದ ಪ್ರೇಮವು ಭಕ್ತಿಯೆನಿಸುತ್ತದೆ. ಪುತ್ರರಲ್ಲಿ – ಶಿಷ್ಯರಲ್ಲಿ ಇರುವ ಪ್ರೇಮವೇ ವಾತ್ಸಲ್ಯ. ಸಮಾನಸ್ಕಂಧರಲ್ಲಿ ಸ್ನೇಹ, ದಂಪತಿಗಳಲ್ಲಿ ಪ್ರಣಯ, ದೀನದಲಿತರಲ್ಲಿ ಕಾರುಣ್ಯ – ಎಲ್ಲವೂ ಅದೇ. ಭಗವಂತನೆದುರಿಗೆ ಸಕಲ ಜೀವಿಗಳೂ ದೀನದಲಿತರೇ ; ಪುತ್ರರಲ್ಲಿ, ಶಿಷ್ಯಕೋಟಿಯಲ್ಲಿ ಸೇರಿದವರೇ.

ಶ್ರೀರಾಮನು ಕಾರುಣ್ಯಪೂರ. ಕರುಣೆಯು ಪ್ರವಾಹವಾಗಿ ಉಕ್ಕಿ ಹರಿಯುತ್ತದೆ ಅವನಿಂದ. ಅದು ಸರ್ವತೋಮುಖವಾಗಿ ಹರಿಯುತ್ತದೆ. ಸರ್ವರೂ ಅದಕ್ಕೆ ಭಾಗಿಗಳು. ಬಂಧುಮಿತ್ರರಿಗೆ ಮಾತ್ರವಲ್ಲ, ಶತ್ರುಗಳಿಗೂ ಅದು ಲಭ್ಯ. ಬೆಲ್ಲದ ಮುದ್ದೆಯನ್ನು ಯಾರು ಯಾವ ದಿಕ್ಕಿನಿಂದ ತಿಂದರೂ ಸಿಹಿಯಾಗಿಯೇ ಇರುತ್ತದೆ.

ಶ್ರೀರಾಮನಿಗೆ ತಂದೆಯಲ್ಲಿ ಬಾಲ್ಯದಿಂದಲೂ ಅತಿಶಯವಾದ ಭಕ್ತಿ. ವಿಶ್ವಾಮಿತ್ರರು ತಾಟಕೆಯನ್ನು ಸಂಹರಿಸೆಂದು ಹೇಳಿದಾಗ ಸ್ತ್ರೀವಧೆಯನ್ನು ಹೇಗೆ ಮಾಡಲೆಂದು ಶ್ರೀರಾಮನಿಗೆ ಸಂಕೋಚವಾಯಿತು. ಮತ್ತೆ ಅದೇ ಮಾತನ್ನು ಆ ಋಷಿಗಳು ಹೇಳಿದಾಗ ''ಋಷಿಗಳೆ, ವಿಶ್ವಾಮಿತ್ರರು ಹೇಳಿದಂತೆ ನಡೆದುಕೋ ಎಂದು ನನ್ನ ತಂದೆಯು ಗುರುಗಳೆದುರಿಗೆ ಆಜ್ಞಾಪಿಸಿದ್ದಾನೆ. ಆದ್ದರಿಂದ ನಿಮ್ಮ ಆಜ್ಞೆಯಂತೆ ನಡೆಯುತ್ತೇನೆ'' – ಎಂದು ನುಡಿದು ತಾಟಕಾವಧೆಗೆ ಸಿದ್ಧನಾಗುತ್ತಾನೆ. ತನ್ನ ಪರಾಕ್ರಮದಿಂದಲೇ ಸೀತೆಯನ್ನು ಗೆದ್ದಿದ್ದರೂ ಅವಳನ್ನು ಮದುವೆಯಾಗಲು ತಂದೆಯ ಅನುಮತಿ ಆವಶ್ಯಕವೆಂದು ತಿಳಿಸಿಬಿಡುತ್ತಾನೆ. ಮದುವೆಯಾದ ಮೇಲೆ ಸಾಧ್ವೀಶಿರೋಮಣಿಯೂ ದಿವ್ಯಸುಂದರಿಯೂ ಆದ ಜಾನಕಿಯಲ್ಲಿ ಅವನ ಪ್ರೇಮವು ಬೆಳೆಯುತ್ತ ಹೋಗುವುದು ಸಹಜವೇ. ಆದರೆ ಆ ಪ್ರೇಮಕ್ಕೆ ಬೇರೊಂದು ಕಾರಣವನ್ನು ವಾಲ್ಮೀಕಿಗಳು ಹೇಳುತ್ತಾರೆ. 'ಈ ಸೀತೆ ನನ್ನ ತಂದೆಯು ಗೊತ್ತುಮಾಡಿ ಮದುವೆ ಮಾಡಿಸಿದ ಹೆಂಡತಿ' ಎಂದು ಶ್ರೀರಾಮನಿಗೆ ಪ್ರೀತಿಪಾತ್ರಳಾದಳಂತೆ !

ಪ್ರಿಯಾ ತು ಸೀತಾ ರಾಮಸ್ಯ ದಾರಾಃ ಪಿತೃಕೃತಾ ಇತಿ ॥

– ಬಾಲ. 77–28

ತಂದೆಯ ಮಾತನ್ನು ಯಾವ ಸಂದರ್ಭದಲ್ಲಿಯೂ ಮೀರಿ ನಡೆಯುವುದಿಲ್ಲವೆಂಬುದು ಅವನ ದೃಢವಾದ ನಿಲುವು. ತಂದೆಯನ್ನು ತನ್ನ ಗುರುವೆಂದೂ ದೇವತೆಯೆಂದೂ ಅವನು ತಿಳಿದಿದ್ದನು. ತನ್ನನ್ನು ವನಕ್ಕೆ ಕಳಿಸಿದನೆಂದು ಅವನಿಗೆ ದುಃಖವಾಗಲೇ ಇಲ್ಲ. ತಾನಿಲ್ಲದಾಗ ಕೈಕೇಯಿಯಿಂದ ದಶರಥನಿಗೆ ಹಿಂಸೆಗಳು ಸಂಭವಿಸಬಹುದೆಂದು ಅವನಿಗೆ ಚಿಂತೆ. ದಶರಥನ ಮರಣವಾರ್ತೆಯು ಮುಟ್ಟಿದಾಗ ಅವನಿಗಾದ ದುಃಖ ಅಸಾಧಾರಣ. ''ಆಹಾ ! ಆ ಮಹಾತ್ಮನಿಗೆ ನನ್ನಂಥವನು ಮಗನಾಗಿ ಹುಟ್ಟಬಾರದು. ಅವನ ಮರಣಕ್ಕೆ ನಾನೇ ನಿಮಿತ್ತವಾದೆನಲ್ಲ ! ಅವನಿಗೆ ಉತ್ತರ ಸಂಸ್ಕಾರವನ್ನು ಮಾಡುವ ಪುಣ್ಯವೂ ನನಗಿಲ್ಲವಾಯಿತೆ!''– ಎಂಬ ಅನುತಾಪ ಹೃದಯಾಂತರಾಳದಿಂದ ಬಂದದ್ದು.

ಕೌಸಲ್ಯೆಯಲ್ಲಿ ಅವನಿಗಿದ್ದ ಮಾತೃಭಕ್ತಿಯೆಷ್ಟು ! ವನವಾಸಕ್ಕೆ ಹೊರಡುವಾಗ ಕೌಸಲ್ಯೆಗೆ

ಹೇಳುವ ಸಮಾಧಾನದ ಬಗೆ ಅವನ ಮಾತೃಭಕ್ತಿಗೆ ಪರಮನಿದರ್ಶನ. ತಾನು ವನಕ್ಕೆ ಹೋದಮೇಲೆ ಕೌಸಲ್ಯೆಯ ಸ್ಥಿತಿ ಅತ್ಯಂತ ಶೋಚನೀಯವಾಗುವುದೆಂದು ಶ್ರೀರಾಮನಿಗೆ ಸ್ಪಷ್ಟವಾಗಿತ್ತು. ಇವನು ವನಕ್ಕೆ ಹೊರಡುವಾಗ ದಶರಥನನ್ನು ಕುರಿತು ''ಮಹಾರಾಜ, ನನ್ನ ತಾಯಿ ವೃದ್ಧೆಯಾಗಿದ್ದಾಳೆ, ಶೀಲವಂತೆಯಾಗಿ ನಿನ್ನ ಶುಶ್ರೂಷೆ ಮಾಡುತ್ತ ಬಂದಿದ್ದಾಳೆ. ನಿನ್ನನ್ನು ಒಂದುಸಲವೂ ಇವಳು ನಿಂದಿಸಿದವಳಲ್ಲ. ನಾನಿರುವುದಿಲ್ಲವೆಂದು ದುಃಖಮಗ್ನಳಾಗಿದ್ದಾಳೆ. ಇವಳ ಯೋಗಕ್ಷೇಮದ ಕಡೆಗೆ ನಿನ್ನ ಚಿಂತೆ ಇರಲಿ. ನನ್ನ ದುಃಖದಿಂದ ಇವಳು ದೇಹವನ್ನು ಬಿಡದಂತೆ ನೋಡಿಕೊಳ್ಳಬೇಕು'' – ಎಂದು ಹೇಳಿದನು.

ವನಕ್ಕೆ ಹೋದಮೇಲೂ ಅವನಿಗೆ ತಾಯಿಯ ಚಿಂತೆಯೇ. ಒಂದುಸಲ ಲಕ್ಷ್ಮಣನೊಡನೆ –

ಮಾ ಸ್ಮ ಸೀಮಂತಿನೀ ಕಾಚಿಜ್ಜನಯೇತ್ ಪುತ್ರಮೀದೃಶಮ್ ।
ಸೌಮಿತ್ರೇ ಯೋಽಹಮಂಬಾಯಾ ದದ್ಮಿ ಶೋಕಮನಂತಕಮ್ ॥

– ಅಯೋಧ್ಯಾ. 53–21

''ಲಕ್ಷ್ಮಣ, ಯಾವ ಗೃಹಿಣಿಯೂ ನನ್ನಂಥ ಮಗನನ್ನು ಹಡೆಯಬಾರದು ! ನಾನು ಅಮ್ಮನಿಗೆ ನಿರಂತರವಾದ ಶೋಕವನ್ನು ತಂದೊಡ್ಡಿದೆನು'' – ಎಂದು ವಿಲಪಿಸಿದನು.

ತಂದೆತಾಯಿಗಳ ಉಪಕಾರದ ಋಣವನ್ನು ತೀರಿಸುವುದು ಅಶಕ್ಯವೆಂದು ಶ್ರೀರಾಮನು ಹೇಳುತ್ತಾನೆ :

ಯನ್ಮಾತಾಪಿತರೌ ವೃತ್ತಂ ತನಯೇ ಕುರುತಃ ಸದಾ ।
ನ ಸುಪ್ರತಿಕರಂ ತತ್ತು ಮಾತ್ರಾ ಪಿತ್ರಾ ಚ ಯತ್ಕೃತಮ್ ॥
ಯಥಾಶಕ್ತಿ ಪ್ರದಾನೇನ ಸ್ನಾಪನಾಚ್ಛಾದನೇನ ಚ ।
ನಿತ್ಯಂ ಚ ಪ್ರಿಯವಾದೇನ ತಥಾ ಸಂವರ್ಧನೇನ ಚ ॥
ಸ ಹಿ ರಾಜಾ ಜನಯಿತಾ ಪಿತಾ ದಶರಥೋ ಮಮ ।
ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ ॥

– ಅಯೋಧ್ಯಾ. 111–9.10. 11

''ತಂದೆತಾಯಿಗಳು ಮಕ್ಕಳ ಪೋಷಣೆಗಾಗಿ ಏನು ಮಾಡಿರುವರೋ ಅದನ್ನು ತೀರಿಸಲು ಸಾಧ್ಯವಿಲ್ಲ. ತಮಗೆ ಶಕ್ತಿಯಿರುವಷ್ಟನ್ನೂ ವಿನಿಯೋಗಿಸಿ ಮಕ್ಕಳಿಗೆ ಬೇಕಾದ್ದನ್ನು ತಂದು ಕೊಡುತ್ತಾರೆ. ಅವರನ್ನು ಮೈತೊಳಿಸಿ ಬಟ್ಟೆಯುಡಿಸಿ ಮುದ್ದು ಮಾತಾಡಿ ಆಹಾರವನ್ನು ಕೊಟ್ಟು ಬೆಳೆಸಿರುತ್ತಾರೆ. ದಶರಥಮಹಾರಾಜನು ನನಗೆ ದೇಹವನ್ನು ಕೊಟ್ಟು ಪೋಷಿಸಿದ ತಂದೆ. ಅವನ ಎದುರಿಗೆ ನಾನು ಯಾವ ಮಾತು ಕೊಟ್ಟೆನೋ ಅದು ಎಂದಿಗೂ ಸುಳ್ಳಾಗಲಿಕ್ಕಿಲ್ಲ.''

ಗುರುಗಳಲ್ಲಿ–ತಪಸ್ವಿಗಳಲ್ಲಿ ಶ್ರೀರಾಮನಿಗೆ ನಿರತಿಶಯವಾದ ಭಕ್ತಿ ಇತ್ತು. ವಸಿಷ್ಠ ವಿಶ್ವಾಮಿತ್ರರೊಡನೆಯೂ ದಂಡಕಾರಣ್ಯದಲ್ಲಿರುವಾಗ ಅಗಸ್ತ್ಯಾದಿ ಮುನಿಗಳೊಡನೆಯೂ

ಅವನು ನಡೆದುಕೊಂಡ ರೀತಿ, ಗುರುಹಿರಿಯರಲ್ಲಿ ಹೇಗೆ ವರ್ತಿಸಬೇಕೆಂಬುದಕ್ಕೆ ಒಂದು ಪಾಠವಾಗಿದೆ.

ಅವನು ಚಿತ್ರಕೂಟದಲ್ಲಿ ಸೀತಾಲಕ್ಷ್ಮಣರೊಡನೆ ವಾಸವಾಗಿದ್ದನಷ್ಟೆ. ಸುತ್ತಲೂ ಇದ್ದ ಋಷಿಗಳು ಒಂದು ದಿನ ಗಂಟುಮೂಟೆಗಳನ್ನು ಕಟ್ಟಿ ಮುಂದೆ ಹೊರಡುವ ಸಂನಾಹ ದಲ್ಲಿದ್ದುದು ಶ್ರೀರಾಮನಿಗೆ ಗೋಚರಿಸಿತು. ತಮ್ಮಿಂದ ಆ ಋಷಿಗಳಿಗೆ ಏನಾದರೂ ಅಪಚಾರ ವಾಗಿರಬಹುದೆ? ಎಂದು ಅವನಿಗೆ ಸಂದೇಹವಾಯಿತು. ಶ್ರೀರಾಮನು ಕುಲಪತಿಯನ್ನು ಸಮೀಪಿಸಿ ''ಭಗವನ್, ನನ್ನಲ್ಲಿ ಯಾವುದಾದರೂ ತಪ್ಪು ನಡತೆಯು ತಮಗೆ ಗೋಚರಿಸಿತೆ? ಋಷಿಗಳೆಲ್ಲರೂ ಇಲ್ಲಿಂದ ಹೊರಡುವ ಸಂನಾಹದಲ್ಲಿರುವುದೇಕೆ? ಲಕ್ಷ್ಮಣನಿಂದ ಏನಾದರೂ ಪ್ರಮಾದವಾಯಿತೆ? ಅಥವಾ ಸೀತೆಯು ನನ್ನ ಶುಶ್ರೂಷೆಯಲ್ಲಿಯೇ ನಿರತಳಾಗಿ ತಮ್ಮ ಸೇವೆಯಲ್ಲಿ ಉಪೇಕ್ಷೆಯನ್ನು ತೋರಿದಳೆ?'' ಎಂದು ಕೇಳಿದನು. ಋಷಿಗಳ ಪ್ರಯಾಣಕ್ಕೆ ಕಾರಣವೇ ಬೇರೆಯಾಗಿತ್ತು.

ಶ್ರೀರಾಮನೆಂದೊಡನೆ ಸೀತಾವಿಶಿಷ್ಟನಾದ ಶ್ರೀರಾಮನೇ ನಮ್ಮ ಹೃದಯಕ್ಕೆ ಗೋಚರನಾಗುತ್ತಾನೆ. ಸೀತಾರಹಿತನಾದ ಶ್ರೀರಾಮನು ಕಥೆಯಲ್ಲಿದ್ದರೂ ಜನರ ಹೃದಯ ದಲ್ಲಿಲ್ಲ. ಸೀತೆಯಿಲ್ಲದ ಶ್ರೀರಾಮನನ್ನು ಊಹಿಸಿಕೊಳ್ಳುವುದು ಕಷ್ಟ, ಊಹಿಸಿಕೊಂಡರೂ ಮನಸ್ಸಿಗೆ ದುಃಖವಾಗುವುದೇ ವಿನಾ ಸುಖವಾಗದು. ಶ್ರೀರಾಮನು ಜಾನಕಿಯನ್ನು ''ಪ್ರಾಣೇಭ್ಯೋಽಪಿ ಗರೀಯಸೀ''– ''ನನ್ನ ಪ್ರಾಣಕ್ಕಿಂತ ಹೆಚ್ಚು ನನಗೆ ಪ್ರೀತಿಪಾತ್ರಳು'' – ಎಂದು ಅನೇಕಸಲ ಹೇಳಿದ್ದಾನೆ.

ಅವಳು ತನ್ನೊಡನೆ ವನಕ್ಕೆ ಬರಬಾರದೆಂದು ಬಹುವಿಧದಲ್ಲಿ ಶ್ರೀರಾಮನು ಹೇಳಿದ್ದು ಅವಳಲ್ಲಿದ್ದ ಪ್ರೀತಿಯಿಂದಲೇ. ಆ ಕೋಮಲೆಗೆ ಅರಣ್ಯದಲ್ಲಿ ಕಷ್ಟವಾದೀತೆಂದು ಹೇಳಿ ನೋಡಿದನು. ಅದು ಶಕ್ಯವಾಗಲಿಲ್ಲ. ಕಡೆಗೆ ಸೀತೆಯನ್ನಾಲಿಂಗಿಸಿಕೊಂಡು –

ಸಾ ಹಿ ಸೃಷ್ಟಾನವದ್ಯಾಂಗೀ ವನಾಯ ಮದಿರೇಕ್ಷಣೇ ।
ಅನುಗಚ್ಛಸ್ವ ಮಾಂ ಭೀರು ಸಹಧರ್ಮಚರೀ ಭವ ॥

– ಅಯೋಧ್ಯಾ. 30–40

''ಕಾಂತೆ, ಸುಕುಮಾರಿಯಾದ ನೀನು ವನವಾಸದ ಕಷ್ಟವನ್ನನುಭವಿಸುವುದಕ್ಕಾಗಿಯೇ ಜನಿಸಿದಂತಾಯಿತೆ? ನನ್ನೊಡನೆ ಬರಬಹುದು. ಬಂದು ನನ್ನ ಸಹಧರ್ಮಚಾರಿಣಿಯಾಗಿರು'' – ಎಂದನು.

ಅರಣ್ಯದಲ್ಲಿ ಸೀತೆಗೆ ಬೇಸರವಾಗಬಾರದು, ಕಷ್ಟವು ತೋರಬಾರದು ಎಂದು ಶ್ರೀರಾಮನು ಜಾಗೃತನಾಗಿದ್ದನು. ಅವಳಿಗೆ ವನಸೌಂದರ್ಯವನ್ನು ವರ್ಣಿಸುತ್ತ, ಮೃಗಪಕ್ಷಿಗಳ ಚೆಲ್ಲಾಟವನ್ನು ತೋರಿಸುತ್ತ, ಸರೋವರದಲ್ಲಿ ವಿಹರಿಸುತ್ತ, ಒಳ್ಳೆಯ ಆಹಾರವನ್ನು ತಂದುಕೊಡುತ್ತ, ಸರಸಸಲ್ಲಾಪಗಳಲ್ಲಿ ವನವಾಸವನ್ನು ಕಳೆಸಿದನು. ವನದಲ್ಲಿ ಹೋಗುವಾಗ

''ಲಕ್ಷ್ಮಣ, ಸೀತೆಯು ಆಸೆಯಿಂದ ನೋಡಿದ ಹೂವನ್ನೂ ಹಣ್ಣನ್ನೂ ತಂದುಕೊಡು'' ಎಂದು ಹೇಳುವುದನ್ನು ಯಾವಾಗಲೂ ಮರೆಯಲಿಲ್ಲ.

ರಾವಣನು ಸೀತೆಯನ್ನು ಅಪಹರಿಸಿದ ಮೇಲೆ ಶ್ರೀರಾಮನ ಶೋಕವು ಹೊನಲಾಗಿ ಹರಿಯಿತು. ಅರಣ್ಯವು ಕಣ್ಣೀರಿಂದ ನೆನೆಯಿತು.

ಋಷ್ಯಮೂಕಗಿರಿಯ ಮೇಲೆ ಸೀತಾದೇವಿಯು ಬೀಳಿಸಿದ್ದ ಆಭರಣಗಳನ್ನೂ ಉತ್ತರೀಯವನ್ನೂ ಸುಗ್ರೀವನು ತೋರಿಸಿದಾಗ ಶ್ರೀರಾಮನು ಕಣ್ಣೀರು ತುಂಬಿದನು :

ಅಭವದ್ಬಾಷ್ಪಸಂರುದ್ಧೋ ನೀಹಾರೇಣೇವ ಚಂದ್ರಮಾಃ ।
ಸೀತಾಸ್ನೇಹಪ್ರವೃತ್ತೇನ ಸ ತು ಬಾಷ್ಪೇಣ ದೂಷಿತಃ ॥
ಹಾ ಪ್ರಿಯೇತಿ ರುದನ್ ಧೈರ್ಯಮುತ್ಸೃಜ್ಯ ನ್ಯಪತತ್ ಕ್ಷಿತೌ ।
ಹೃದಿ ಕೃತ್ವಾ ತು ಬಹುಶಸ್ತಮಲಂಕಾರಮುತ್ತಮಮ್ ॥

– ಕಿಷ್ಕಿಂಧಾ. 6–16, 13

''ಸೀತಾಸ್ನೇಹದಿಂದ ಕಣ್ಣೀರು ತುಳುಕಿತು. ಮುಖವು ಒದ್ದೆಯಾಗಿ ಮಂಜು ಮುಸುಕಿದ ಚಂದ್ರನಂತಾಯಿತು. ಶ್ರೀರಾಮನು ಆ ಒಡವೆಗಳನ್ನು ಎದೆಗೆ ಒತ್ತಿಕೊಂಡು 'ಹಾ ಪ್ರಿಯೇ' ಎನ್ನುತ್ತ ನೆಲದ ಮೇಲೆ ಬಿದ್ದನು.''

ಅನಂತರ ಸುಗ್ರೀವನ ಕಡೆಗೆ ತಿರುಗಿ, ''ಮಿತ್ರ–ಸುಗ್ರೀವ, ಹಸು ತನ್ನ ಕರುವನ್ನು ಕಂಡಾಗ ಕೆಚ್ಚಲು ಸ್ರವಿಸುವಂತೆ, ಈ ಮಣಿರತ್ನವನ್ನು ಕಂಡು ನನ್ನ ಹೃದಯವು ಕರಗಿಹೋಗುತ್ತಿದೆ. ನನ್ನ ಮಾವನು ಈ ರತ್ನವನ್ನು ಸೀತೆಗೆ ಮದುವೆಯ ಕಾಲದಲ್ಲಿ ಕೊಟ್ಟಿದ್ದನು. ಅವಳ ತಲೆಯಲ್ಲಿ ಇದು ಬಹಳ ಚೆನ್ನಾಗಿ ಒಪ್ಪುತ್ತಿತ್ತು. ಈ ರತ್ನವನ್ನು ನೋಡಿದರೆ ನನ್ನ ಕಾಂತೆಯೇ ಎದುರಿಗೆ ಬಂದು ನಿಂತಂತೆ ತೋರುತ್ತದೆ.... ಲಕ್ಷ್ಮಣ, ಇದಕ್ಕಿಂತಲೂ ದುಃಖ ಇನ್ನಾವುದು? ಚೂಡಾಮಣಿ ಇದೆ, ಸೀತೆ ಇಲ್ಲ.... ಹನುಮಂತ, ನನ್ನ ಸೀತೆ ಏನೇನು ಹೇಳಿದ್ದಾಳೆ – ಎಲ್ಲವನ್ನೂ ಹೇಳಿಬಿಡು. ಅವಳ ಮಾತನ್ನು ಕೇಳಿದರೆ, ಹೇಗಾದರೂ ನನ್ನ ಜೀವ ಉಳಿದೀತು'' – ಎಂದನು.

ಶ್ರೀರಾಮನಭ್ರಾತೃವಾತ್ಸಲ್ಯವೂ ಮಿಗಿಲಾದದ್ದು. ಭರತ ಲಕ್ಷ್ಮಣ ಶತ್ರುಘ್ನರು ಅವನಲ್ಲಿರಿಸಿದ್ದ ಸ್ನೇಹವು ಏಕಮುಖವಾದ್ದಲ್ಲ. ಅದು ದ್ವಿಗುಣವಾಗಿ ಪುನಃ ಅವರೆಲ್ಲರಿಗೂ ಸಲ್ಲುತ್ತಿತ್ತು. ದಶರಥನು ಅವನಿಗೆ ಪಟ್ಟಾಭಿಷೇಕಮಾಡಬೇಕೆಂದು ಸಂಕಲ್ಪಿಸಿದಾಗ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದ್ದೇನು? ''ಲಕ್ಷ್ಮಣ, ಈ ರಾಜ್ಯವನ್ನು ನನ್ನೊಡನೆ ನೀನೂ ಆಳಬಹುದು. ನೀನು ನನ್ನ ಎರಡನೆಯ ಹೃದಯವಾಗಿದ್ದೀಯೆ. ಈ ರಾಜ್ಯಲಕ್ಷ್ಮಿಯು ನಿನ್ನದೇ. ನಿನಗೆ ಬೇಕಾದ ರಾಜಭೋಗಗಳನ್ನನುಭವಿಸು.''

ಜೀವಿತಂ ಚ ಹಿ ರಾಜ್ಯಂ ಚ ತ್ವದರ್ಥಮಭಿಕಾಮಯೇ ॥

''ನನ್ನ ಬದುಕು, ಈ ರಾಜ್ಯ–ಇದೆಲ್ಲವನ್ನೂ ನಿನಗಾಗಿ ನಾನು ಬಯಸುತ್ತೇನೆ''– ಎಂದನು.

ಚಿತ್ರಕೂಟದಲ್ಲಿದ್ದಾಗ ಶ್ರೀರಾಮನ ದರ್ಶನಕ್ಕಾಗಿ ಭರತನು ಸೇನಾಸಮೇತನಾಗಿ ಬಂದನಷ್ಟೆ. ದೂರದಲ್ಲಿ ಬರುತ್ತಿದ್ದ ಸೇನೆಯನ್ನು ಕಂಡು ಲಕ್ಷ್ಮಣನು ಸಿಟ್ಟಿನಿಂದ ಉರಿದೆದ್ದನು. ತಮ್ಮನ್ನು ಸಂಹರಿಸುವುದಕ್ಕಾಗಿ ಭರತನು ಬರುತ್ತಿದ್ದಾನೆಂದು ಅವನ ಕಲ್ಪನೆ. ಅವನು ಭರತನನ್ನು ದೂರಿದಾಗ. ಭರತನ ಉದ್ದೇಶವೇನಿದೆಯೆಂದು ಇನ್ನೂ ತಿಳಿಯದಿದ್ದಾಗ ಶ್ರೀರಾಮನು ಹೇಳುವ ಮಾತು ಮನಸ್ಸನ್ನು ಸೂರೆಗೊಳ್ಳುವಂತಹದು :

ಧರ್ಮಮರ್ಥಂ ಚ ಕಾಮಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ಇಚ್ಛಾಮಿ ಭವತಾಮರ್ಥೆ ಏತತ್ ಪ್ರತಿಶೃಣೋಮಿ ತೇ ॥
ಯದ್ವಿನಾ ಭರತಂ ತ್ವಾಂ ಚ ಶತ್ರುಘ್ನಂ ಚಾಪಿ ಮಾನದ ।
ಭವೇನ್ಮಮ ಸುಖಂ ಕಿಂಚಿದ್ ಭಸ್ಮ ತತ್ ಕುರುತಾಂ ಶಿಖೀ ॥

– ಅಯೋಧ್ಯಾ 93–5, 8

''ಲಕ್ಷ್ಮಣ, ಆಣೆಮಾಡಿ ಹೇಳುತ್ತೇನೆ, ಕೇಳು. ಧರ್ಮಾರ್ಥಕಾಮಗಳನ್ನಾಗಲಿ ಈ ಪೃಥ್ವಿಯನ್ನೇ ಆಗಲಿ, ನಾನು ಬಯಸುವುದು ನಿಮ್ಮೆಲ್ಲರಿಗೋಸ್ಕರವಾಗಿ. ನಿನಗೆ, ಭರತನಿಗೆ, ಶತ್ರುಘ್ನನಿಗೆ ಇಲ್ಲದ ಸುಖವೇನಾದರೂ ನನಗೆ ದೊರಕುವುದಾದರೆ – ಅದು ಬೆಂಕಿಯಲ್ಲಿ ಬಿದ್ದು ಬೂದಿಯಾಗಲಿ !''

''ಲಕ್ಷ್ಮಣ, ನಾನು ಭರತನನ್ನು ಎದುರಿಸಿ ಯುದ್ಧಮಾಡಲೆ? ಎಂತಹ ವಿಪತ್ತು ಬಂದರೂ ಮಕ್ಕಳು ತಂದೆಯನ್ನು ಕೊಲ್ಲಬಹುದೆ? ಅವರೆಲ್ಲರೂ ನಮ್ಮ ಪ್ರಾಣವೇ ಅಲ್ಲವೆ? ನನಗೆ ರಾಜ್ಯದಲ್ಲಿ ಅಪೇಕ್ಷೆಯೇನೋ ಉಂಟು. ಏತಕ್ಕಾಗಿ? ನನ್ನ ತಮ್ಮಂದಿರ ಜೊತೆಯಲ್ಲಿರೋಣ. ಅವರು ಸುಖವಾಗಿರಲಿ – ಎಂದು.''

ರಣರಂಗದಲ್ಲಿ ಲಕ್ಷ್ಮಣನು ಮೂರ್ಛಿತನಾಗಿ ಬಿದ್ದಾಗ ಶ್ರೀರಾಮನ ಶೋಕವು ಪರಮಾವಧಿಯನ್ನು ಮುಟ್ಟಿತು. ಅವನ ವಿಲಾಪದಲ್ಲಿ ಸೌಭ್ರಾತ್ರದ ಆಳವನ್ನು ಊಹಿಸಬಹುದು.

ಶಕ್ಯಾ ಸೀತಾಸಮಾ ನಾರೀ ಮರ್ತ್ಯಲೋಕೇ ವಿಚಿನ್ವತಾ ।
ನ ಲಕ್ಷ್ಮಣಸಮೋ ಭ್ರಾತಾ ಸಚಿವಃ ಸಾಂಪರಾಯಿಕಃ ॥

– ಯುದ್ಧ. 46–6

ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾಂಧವಾಃ ।
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ ॥

– ಯುದ್ಧ. 102–12,13

''ಭೂಲೋಕದಲ್ಲಿ ಹುಡುಕಿದರೆ ಸೀತೆಯಂಥ ಇನ್ನೊಬ್ಬ ನಾರಿಯು ದೊರೆಯಬಹುದು. ಕಾರ್ಯನಿಷ್ಠನಾಗಿ ಸಹಾಯಮಾಡುವ ಇನ್ನೊಬ್ಬ ತಮ್ಮನು ಮಾತ್ರ ನನಗೆ ದೊರೆಯುವುದಿಲ್ಲ.

ಯಾವ ದೇಶಕ್ಕೆ ಹೋದರೂ ಮಡದಿಯರು ಸಿಗುತ್ತಾರೆ; ಬಂಧುಗಳು ಲಭಿಸುತ್ತಾರೆ. ಆದರೆ ಒಡಹುಟ್ಟಿದ ತಮ್ಮನು ಎಲ್ಲಿ ದೊರೆಯುವನೋ ನನಗೆ ಕಾಣದು.

ಯುದ್ಧ ಮುಗಿಯಿತು. ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕವಾಯಿತು. ಶ್ರೀರಾಮನು ಬಹಳ ದಣಿದಿದ್ದಾನೆ. ಅವನು ಅಭ್ಯಂಜನ ಸ್ನಾನಮಾಡಲಿ. ಕೆಲವುಕಾಲ ಸುಖ ವಾಗಿ ವಿಶ್ರಮಿಸುತ್ತಲಿರಲಿ – ಎಂದು ವಿಭೀಷಣನಿಗೆ ಇಚ್ಛೆಯಾಯಿತು. ಅದನ್ನು ಶ್ರೀರಾಮ ನಿಗೆ ನಿವೇದಿಸಿದನು. ಆದಕ್ಕೆ ಲಭಿಸಿದ ಉತ್ತರವೇನು?

''ವಿಭೀಷಣ, ಸುಗ್ರೀವನೇ ಮೊದಲಾದ ಯೋಧರು ಬಹಳ ದಣಿದಿದ್ದಾರೆ. ಅವರನ್ನು ಉಪಚರಿಸು. ನಾನು ಮೊದಲು ಭರತನನ್ನು ನೋಡಬೇಕಾಗಿದೆ. ಆ ಸುಕುಮಾರನು ನನಗೋಸ್ಕರ ಬಹಳ ಕಷ್ಟದಲ್ಲಿ ತೊಳಲುತ್ತಿದ್ದಾನೆ. ಧರ್ಮಾತ್ಮನಾದ ಭರತನನ್ನು ಕಂಡಲ್ಲದೆ, ನನಗೆ ಸ್ನಾನ ವಸ್ತ್ರ ಆಭರಣ ಯಾವುದೂ ಬೇಡವಾಗಿದೆ'' – ಎಂದು ಶ್ರೀರಾಮನ ಉತ್ತರ ವಾಗಿತ್ತು.

ಮಿತ್ರರಾದ ಗುಹ, ಸುಗ್ರೀವ ಮುಂತಾದವರಲ್ಲಿ ಶ್ರೀರಾಮನಿಗಿದ್ದ ಸ್ನೇಹವು ಅಪಾರ ವಾದದ್ದು. ಯುದ್ಧಾರಂಭಕ್ಕೆ ಮೊದಲು ಸುವೇಲಪರ್ವತದಲ್ಲಿ ಸುಗ್ರೀವನ ಸೇನೆ ನಿಂತಿತ್ತು. ಶ್ರೀರಾಮ, ಸುಗ್ರೀವ ಮೊದಲಾದವರು ಅಲ್ಲಿ ನಿಂತು ಲಂಕೆಯ ಕಡೆಗೆ ನೋಡುತ್ತಿದ್ದರು. ಆ ಸಮಯದಲ್ಲಿ ರಾವಣನು ಒಂದು ಎತ್ತರವಾದ ಸ್ಥಳದಲ್ಲಿ ನಿಂತು ವಾನರಸೇನೆಯನ್ನು ಅವಲೋಕಿಸುತ್ತಿದ್ದನು. ಸುಗ್ರೀವನಿಗೆ ಅವನು ರಾವಣನೆಂದು ಗೊತ್ತಾಯಿತು. ಕೂಡಲೇ ಅವನು ಛಂಗನೆ ನೆಗೆದು ರಾವಣನೆದುರಿಗೆ ಹೋಗಿ ನಿಂತನು ! ರಾವಣ ಸುಗ್ರೀವರಿಗೆ ದೊಡ್ಡ ಹೊಡೆದಾಟವೇ ನಡೆಯಿತು. ಸುಗ್ರೀವನು ಹೇಗೋ ತಪ್ಪಿಸಿಕೊಂಡು ಹಾರಿಬಂದು ಶ್ರೀರಾಮನ ಬಳಿಯಲ್ಲಿ ನಿಂತನು. ಶ್ರೀರಾಮನು ಸುಗ್ರೀವನನ್ನು ಗಾಢವಾಗಿ ಅಪ್ಪಿಕೊಂಡು, ''ಮಿತ್ರ, ನೀನು ಇಂತಹ ಸಾಹಸವನ್ನು ಮಾಡಬಹುದೆ? ಏಕಾಕಿಯಾಗಿ ಶತ್ರುಮಧ್ಯದಲ್ಲಿ ಧುಮುಕಬಹುದೆ? ನನಗೆ ತಿಳಿಸದೆ ಹೀಗೆ ಮಾಡಿದೆಯಲ್ಲ. ಇನ್ನೊಮ್ಮೆ ಈ ಸಾಹಸವನ್ನು ಮಾಡಬೇಡ. ನಿನಗೆ ಏನಾದರೂ ಆಗಿಬಿಟ್ಟಿದ್ದರೆ, ಆಗ ನನಗೆ ಸೀತೆಯಿಂದ ಯಾವ ಸೌಖ್ಯ ದೊರೆಯುತ್ತಿತ್ತು? ನನ್ನ ತಮ್ಮಂದಿರೊಡನೆ ನಾನು ಹೇಗೆ ನೆಮ್ಮದಿಯಲ್ಲಿ ಇರಲು ಸಾಧ್ಯವಾಗುತ್ತಿತ್ತು? ಸತ್ಯವಾಗಿ ಹೇಳುತ್ತೇನೆ, ಕೇಳು. ಅ ಸಂದರ್ಭದಲ್ಲಿ ನಾನು ರಾವಣನನ್ನು ಸಂಹರಿಸಿ, ಸೀತೆಯನ್ನು ಸೆರೆಯಿಂದ ಬಿಡಿಸಿ, ವಿಭೀಷಣನಿಗೆ ಲಂಕೆಯಲ್ಲಿ ಪಟ್ಟಗಟ್ಟಿ, ಕೋಸಲರಾಜ್ಯವನ್ನು ಭರತನಿಗೆ ಒಪ್ಪಿಸಿ ಈ ದೇಹವನ್ನು ಬಿಡುತ್ತಿದ್ದೆ !'' – ಎಂದು ಮರುಕದಿಂದ ಹೇಳಿದನು.

ಭಕ್ತಾಗ್ರಗಣ್ಯನೆನಿಸಿದ ಹನುಮಂತನು ಲಂಕೆಯಿಂದ ಬಂದು ಸೀತಾದೇವಿಯು ಕಳಿಸಿದ ಚೂಡಾಮಣಿಯನ್ನು ಶ್ರೀರಾಮನ ಕೈಗೆ ಅರ್ಪಿಸಿದ್ದಾನೆ. ''ಹನುಮಂತನು ಸಾಧಿಸಿದ ಅದ್ಭುತವಾದ ಮಹಾಕಾರ್ಯಕ್ಕೆ ಸರಿದೂಗಬಲ್ಲ ಪಾರಿತೋಷಿಕವು ಯಾವುದಿದ್ದೀತು? ಯಾವುದನ್ನಿತ್ತು ತನ್ನ ಕೃತಜ್ಞತೆಯನ್ನು ತೋರಿಸಲಿ'' – ಎಂದು ಶ್ರೀರಾಮನಿಗೆ ಚಿಂತೆಯಾಯಿತು. ಪಾರಿತೋಷಿಕವನ್ನೀಯಲು ಶ್ರೀರಾಮನ ಬಳಿಯಲ್ಲೇನಿದೆ?

ಏಷ ಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ ।
ಮಯಾ ಕಾಲಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ ॥
ಇತ್ಯುಕ್ತ್ವಾ ಪ್ರೀತಿಹೃಷ್ಟಾಂಗೋ ರಾಮಸ್ತಂ ಪರಿಷಸ್ವಜೇ ॥

– ಯುದ್ಧ. 1–14, 15

''ಈ ಸಮಯದಲ್ಲಿ ಆಲಿಂಗನ ಒಂದೇ ನಾನು ಕೊಡಬಹುದಾದ ನನ್ನ ಸರ್ವಸ್ವ. ಮಹಾತ್ಮನಾದ ಹನುಮಂತನಿಗೆ ಇದನ್ನು ಸಲ್ಲಿಸುತ್ತೇನೆ'' ಎಂದು ಹೇಳುತ್ತ ಶ್ರೀರಾಮನು ಪ್ರೀತಿಯಿಂದ ಮೈಯುಬ್ಬಿ ಹನುಮಂತನನ್ನು ಅಪ್ಪಿಕೊಂಡನು.

ಶ್ರೀರಾಮನ ಆಲಿಂಗನಕ್ಕಿಂತ ಹೆಚ್ಚಿನ ಪಾರಿತೋಷಿಕ ಯಾವುದಿದ್ದೀತು ! ಹನುಮಂತನು ಇನ್ನು ಯಾವುದನ್ನು ಬಯಸಿಯಾನು !

ಇಂದ್ರಜಿತು ಪ್ರಯೋಗಿಸಿದ ನಾಗಪಾಶಗಳಿಂದ ರಾಮಲಕ್ಷ್ಮಣರು ಮೂರ್ಛಿತ ರಾಗಿದ್ದಾಗ ಗರುಡನು ಬಂದು ಅವರನ್ನು ನಾಗಪಾಶಗಳಿಂದ ಬಿಡಿಸಿದನು. ಅವನು ಶ್ರೀರಾಮನೊಡನೆ ಸಂಭಾಷಿಸುತ್ತ,

ಸಖೇ ರಾಘವ ಧರ್ಮಜ್ಞ ರಿಪೂಣಾಮಪಿ ವತ್ಸಲ ॥

– ಯುದ್ಧ. 50–56

ಎನ್ನುತ್ತಾನೆ. ರಾಘವನು ರಿಪುಗಳನ್ನೂ ವಾತ್ಸಲ್ಯದಿಂದ ಕಾಣತಕ್ಕವನು !

ಕೈಕೇಯಿ ಶ್ರೀರಾಮನ ವಿಷಯದಲ್ಲಿ ಅಷ್ಟು ಕಠೋರವಾಗಿ ನಡೆದುಕೊಂಡಳು. ಭರತನು ಶ್ರೀರಾಮನ ಬಳಿಗೆ ಬಂದಾಗ ಮತ್ತೆ ಮತ್ತೆ ತನ್ನ ತಾಯಿಯನ್ನು ದೂಷಿಸುತ್ತಲೇ ಇದ್ದನು. ಅದು ಶ್ರೀರಾಮನಿಗೆ ಸಹ್ಯವಾಗಲಿಲ್ಲ. ಅವನು ಕೈಕೇಯಿಯನ್ನು ಮೊದಲಿನಿಂದಲೂ ತಾಯಿಯೆಂದೇ ಗೌರವಿಸಿದ್ದನಲ್ಲದೆ ಮಲತಾಯಿಯೆಂದು ಎಳ್ಳಷ್ಟೂ ಅಲಕ್ಷಿಸಿದವನಲ್ಲ. ಅವನು ಭರತನಿಗೆ ''ಭರತ, ತಾಯಿಯನ್ನು ಹೀಗೆ ಅವಿವೇಕದಿಂದ ದೂರಬೇಡ. ತಾಯಿ ತಂದೆಗಳಿಗೆ ಮಕ್ಕಳ ವಿಷಯದಲ್ಲಿ ಸರ್ವಾಧಿಕಾರ ಉಂಟು. ಅವರು ನನ್ನನ್ನು ರಾಜಪದವಿಯಲ್ಲಾದರೂ ಸ್ಥಾಪಿಸ ಬಹುದು, ಕಾಡಿಗಾದರೂ ಕಳಿಸಬಹುದು. ಅದು ಪ್ರಶ್ನಿಸತಕ್ಕ ವಿಷಯವಲ್ಲ'' – ಎಂದು ಬಿಟ್ಟನು. ಭರತನನ್ನು ಅಯೋಧ್ಯೆಗೆ ಕಳಿಸುತ್ತ –

ಮಾತರಂ ರಕ್ಷ ಕೈಕೇಯೀಂ ಮಾ ರೋಷಂ ಕುರು ತಾಂ ಪ್ರತಿ ।
ಮಯಾ ಚ ಸೀತಯಾ ಚೈವ ಶಪ್ತೋಽಸಿ ರಘುಸತ್ತಮ ॥

– ಅಯೋಧ್ಯಾ. 112–27, 28

''ಭರತ, ತಾಯಿಯಾದ ಕೈಕೇಯೀದೇವಿಯ ಯೋಗಕ್ಷೇಮಗಳನ್ನು ನೋಡಿಕೊ, ಅವಳಲ್ಲಿ ಸಿಟ್ಟು ತೋರಿಸಬೇಡ. ನನ್ನ ಆಣೆ, ಸೀತೆಯ ಆಣೆ'' – ಎಂದು ಬುದ್ಧಿವಾದ ಹೇಳಿದನು.

ಶ್ರೀರಾಮನಿಗೆ ರಾವಣನಿಗಿಂತ ಮಹಾಶತ್ರುವಿನ್ನಾರು? ರಾವಣನು ಹತನಾದಾಗ ಅವನ ಸಂಸ್ಕಾರವನ್ನು ಮಾಡಲು ವಿಭೀಷಣನು ಹಿಂಜರಿದನು. ಆಗ ಶ್ರೀರಾಮನು ಹೇಳುವ ಮಾತು ಮನನೀಯವಾದದ್ದು : ''ಅಪ್ಪಾ-ವಿಭೀಷಣ, ಈ ರಾವಣನು ಅಧರ್ಮ ಅನೃತಗಳಲ್ಲಿ ಮುಳುಗಿದವನೇನೋ ಹೌದು. ಆದರೆ ಇವನು ಎಷ್ಟು ತೇಜಸ್ವಿಯಾಗಿ ಮೆರೆದವನು! ಎಂತಹ ಪರಾಕ್ರಮಿ ! ಇವನು ಮಹಾತ್ಮನೇ ಸರಿ.

ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥

– ಯುದ್ಧ. 114 – 101, 102

ಶತ್ರುವಿನ ಮರಣವಾದೊಡನೆ ವೈರವು ಕೊನೆಗಾಣುತ್ತದೆ. ನಮ್ಮ ಕಾರ್ಯವು ಸಿದ್ಧಿಸಿತು. ಈತನ ಸಂಸ್ಕಾರವನ್ನು ಮಾಡು. ಈತನು ನಿನಗೆ ಹೇಗೆ ಅಣ್ಣನೋ ನನಗೂ ಹಾಗೆಯೇ'' ಎಂತಹ ಧೀರೋದಾತ್ತವಾದ ಗಂಭೀರವರ್ತನೆ ! ''ನೀನು ರಾವಣನ ಸಂಸ್ಕಾರ ಮಾಡದಿದ್ದರೆ ನಾನು ಮಾಡುತ್ತೇನೆ'' – ಎಂಬುದು ಈ ಮಾತಿನ ಧ್ವನಿ.

ಇವೆಲ್ಲವೂ ಶ್ರೀರಾಮನ ಪ್ರೀತಿಯ ವಿವಿಧ ಪ್ರಕಾರಗಳು ; ಕಾರುಣ್ಯದ ವಿವರ್ತಗಳು. ಆ ಮಹಾಪುರುಷನ ಪ್ರಸಿದ್ಧವಾದ ಉದ್ಘೋಷವಿದು :

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥

– ಯುದ್ಧ. 18–33

''ಯಾರಾದರೂ ಚಿಂತೆಯಿಲ್ಲ – ಒಂದು ಸಲ ನನಗೆ ಶರಣಾಗಿ 'ನಾನು ನಿನ್ನವನು' ಎಂದು ಹೇಳಿ ಬೇಡಿಕೊಂಡರೆ ಸಾಕು. ಅವನಿಗೆ ಯಾವ ಜೀವರಾಶಿಯಿಂದಲೂ ಕಷ್ಟವಾಗದಂತೆ ಅಭಯವನ್ನು ನೀಡಿಯೇ ತೀರುತ್ತೇನೆ. ಇದು ನನ್ನ ವ್ರತ.''

ಅಮಿತಬಲಂ

ಈ ಅಂಶವನ್ನು ವಿಸ್ತರಿಸಬೇಕಾಗಿಲ್ಲ. ಶ್ರೀರಾಮನ ಬಲಪರಾಕ್ರಮಗಳು ಲೋಕವಿದಿತ. ಖರದೂಷಣ ತ್ರಿಶಿರರನ್ನೂ ಅವರ ಹದಿನಾಲ್ಕು ಸಾವಿರ ಬಲವನ್ನೂ ಅರ್ಧಾಧಿಕ ಮುಹೂರ್ತದಲ್ಲಿ ಏಕಾಕಿಯಾಗಿ ವಿಧ್ವಂಸಗೊಳಿಸಿದ ಕೀರ್ತಿ ಅವನದು. 'ರಾಮ ಎಂಬುದಿರಲಿ, ರತ್ನ ರಥ ಮುಂತಾದ ರೇಫಾದಿ ಶಬ್ದವನ್ನು ಕೇಳಿದರೆ ಕೂಡ ತನಗೆ ಭಯವಾಗುವುದು' ಎಂದು ಮಾರೀಚನು ಹೇಳುತ್ತಾನೆ. ಯಾರಿಗೂ ಅಳುಕದ ಶಿವಧನುಸ್ಸನ್ನು ಹಿಡಿದೆತ್ತಿ ಮುರಿದು ಜಾಮದಗ್ನ್ಯನ ಆಟೋಪವನ್ನು ಮೊಟಕು ಗೊಳಿಸಿದ ವಿಖ್ಯಾತಿ ಬಾಲ್ಯದಲ್ಲಿಯೇ ಶ್ರೀರಾಮನಿಗೆ ಸಂದಿತ್ತು. ವಿಶ್ವಾಮಿತ್ರಮುನಿಗಳಿಂದ ನಿಖಿಲ ದಿವ್ಯಾಸ್ತ್ರಗಳೂ ಅವನ ವಶವಾಗಿದ್ದವು. ತಾನೊಬ್ಬನೇ ಸಕಲ ಪೃಥ್ವಿಯನ್ನು ಜಯಿಸಬಲ್ಲೆನೆಂಬ ಆತ್ಮವಿಶ್ವಾಸ ದೃಢವಾಗಿತ್ತು. ವನವಾಸದ ಆರಂಭದಲ್ಲಿ ಒಮ್ಮೆ ಅವನು ಸಂಕ್ಷುಬ್ಧನಾಗಿ ಲಕ್ಷ್ಮಣನಿಗೆ,

ಏಕೋ ಹ್ಯಹಮಯೋಧ್ಯಾಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ತರೇಯಮಿಷುಭಿಃ ಕ್ರುದ್ಧೋ ನನು ವೀರ್ಯಮಕಾರಣಮ್ ॥

– ಅಯೋಧ್ಯಾ. 53–25

''ನಾನು ಕ್ರುದ್ಧನಾದರೆ ಒಬ್ಬನೇ ಅಯೋಧ್ಯೆಯನ್ನೂ ಸಮಸ್ತ ಭೂಮಂಡಲವನ್ನೂ ಗೆಲ್ಲಬಲ್ಲೆ. ಈ ಬಾಣಗಳಿಂದ ಜಯಿಸಬಲ್ಲೆ. ಆದರೆ ಪರಾಕ್ರಮವನ್ನು ಮೆರೆಸುವ ಸಂದರ್ಭವಿದಲ್ಲ. ಅದಕ್ಕೆ ಕಾರಣವಿಲ್ಲ'' – ಎನ್ನುತ್ತಾನೆ.

ಒಮ್ಮೆ ಸುಗ್ರೀವನನ್ನು ಕುರಿತು

ಅಂಗುಲ್ಯಗ್ರೇಣ ತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ ॥

– ಯುದ್ಧ. 18–24

ವಾನರೇಂದ್ರ, ನಾನು ಮನಸ್ಸು ಮಾಡಿದರೆ ಈ ಪೃಥ್ವಿಯಲ್ಲಿರುವ ಯಕ್ಷರಾಕ್ಷಸರೆಲ್ಲರನ್ನೂ ಒಂದು ಬೆರಳಿನಿಂದ ಕೊಂದೆಸೆದೇನು'' – ಎಂದು ಹೇಳುತ್ತಾನೆ.

ಸಮುದ್ರರಾಜನು ಸಾಮಕ್ಕೆ ಮಣಿಯದಾಗ –

ಚಾಪಮಾನಯ ಸೌಮಿತ್ರೇ ಶರಾಂಶ್ಚಾಶೀವಿಷೋಪಮಾನ್ ।
ಸಮುದ್ರಂ ಶೋಷಯಿಷ್ಯಾಮಿ ಪದ್ಭ್ಯಾಂ ಯಾಂತು ಪ್ಲವಂಗಮಾಃ ॥

– ಯುದ್ಧ. 20–22

''ಲಕ್ಷ್ಮಣ, ನನ್ನ ಕೋದಂಡವನ್ನೂ ಘೋರಾಸ್ತ್ರಗಳನ್ನೂ ಇತ್ತ ತಾ. ಈ ಸಮುದ್ರವನ್ನು ಒಣಗಿಸಿಬಿಡುವೆನು. ವಾನರಸೇನೆಯು ಕಾಲ್ನಡಿಗೆಯಿಂದಲೇ ಸಮುದ್ರವನ್ನು ದಾಟಲಿ !'' – ಎಂದು ಹೇಳಿ ಬ್ರಹ್ಮಾಸ್ತ್ರವನ್ನು ಹೂಡಿ ನಿಂತಾಗ ಸಮುದ್ರರಾಜನು ನಡುಗುತ್ತ ಕೈಜೋಡಿಸಿಕೊಂಡು ಬಂದನೆಂದು ವರ್ಣನೆ ಇದೆ.

ಶ್ರೀರಾಮನ ರಣಪಾಂಡಿತ್ಯವನ್ನು ಕಂಡು ವಾನರರು ಬೆಕ್ಕಸ ಬೆರಗಾದಾಗ – ಅವನು ಹಿಡಿದ ಧನುಸ್ಸು ಚಕ್ರಾಕಾರವಾಗಿ ಬಾಗಿ ಶರವೃಷ್ಟಿಯನ್ನು ಸುರಿಸುತ್ತಿರುವಾಗ – ''ಇದೇನು ರಾಮಚಕ್ರವೋ ಕಾಲಚಕ್ರವೋ !'' ಎಂದು ಸಮಸ್ತರೂ ದಿಗ್ಭ್ರಾಂತರಾದಾಗ,

ಏತದಸ್ತ್ರಬಲಂ ದಿವ್ಯಂ ಮಮ ವಾ ತ್ರ್ಯಂಬಕಸ್ಯ ವಾ ॥

''ಈ ದಿವ್ಯಾಸ್ತ್ರಬಲವು ನನಗೊಬ್ಬನಿಗುಂಟು. ಮುಕ್ಕಣ್ಣನಾದ ಈಶ್ವರನೊಬ್ಬನಿಗುಂಟು'' ಎನ್ನುತ್ತಾನೆ.

ಶಾಂತಮೂರ್ತಿಯಾಗಿ ದಿವ್ಯಸುಂದರವಿಗ್ರಹನಾದ ಶ್ರೀರಾಮನು ರಣರಂಗದಲ್ಲಿ ಪ್ರಳಯ ಭೈರವನಾಗುತ್ತಾನೆ. ''ವಾನರರೆ, ಇನ್ನು ನೀವು ವಿಶ್ರಮಿಸಿಕೊಳ್ಳಿ. ರಾಮನಲ್ಲಿರುವ ರಾಮತ್ತ್ವವೆಂದರೇನೆಂಬುದನ್ನು ಈ ದಿನ ಜಗತ್ತು ನೋಡಲಿ ! ಈ ದಿವಸ ಜಗತ್ತಿನಲ್ಲಿ

ರಾಮನೊಬ್ಬನಿರಬೇಕು. ಇಲ್ಲವೆ, ರಾವಣನೊಬ್ಬನಿರಬೇಕು. ರಾಮರಾವಣರಿಬ್ಬರೂ ಒಟ್ಟಿಗೆ ಬದುಕಿರುವುದಿಲ್ಲ'' ಎಂದು ಸಾರಿಹೇಳುತ್ತಾನೆ. ಮೂರು ಲೋಕಗಳನ್ನು ಜಯಿಸಿ ದರ್ಪೋದ್ಧತನಾದ ರಾವಣನು – ''ಅಂಗುಲ್ಯಾ ನ ಸಮೋ ರಾಮಃ'' ಎಂದು ಹೇಳಿಕೊಂಡ ರಾವಣನು – ''ಅಹೋ ನು ಬಲವಾನ್ ರಾಮಃ'' ಎಂದು ಹೇಳಬೇಕಾದ ಕಾಲ ಬರುತ್ತದೆ.

ಧರ್ಮದೊಳ್ ಮಿಗಿಲ್ ರಾಮಚಂದ್ರಂ

ಇದುವರೆಗಿನ ಪ್ರಸ್ತಾವದಿಂದ ಶ್ರೀರಾಮನ ಧರ್ಮನಿಷ್ಠತೆಯನ್ನು ಕೆಲವಟ್ಟಿಗೆ ಅವಲೋಕಿಸಿದಂತಾಗಿದೆ. ವಾಲ್ಮೀಕಿಮುನಿಗಳು ಶ್ರೀರಾಮನ ಹೆಸರೆತ್ತಿದಾಗ ಸತ್ಯಪರಾಕ್ರಮ, ಧರ್ಮಜ್ಞ, ಧರ್ಮಾತ್ಮ, ಧರ್ಮಭೃತಾಂ ವರಃ ಇತ್ಯಾದಿ ವಿಶೇಷಣಗಳನ್ನು ಬಳಸುತ್ತಲೇ ಇರುತ್ತಾರೆ. ಮನುಷ್ಯ ವರ್ಗದ ಹಿತಕ್ಕಾಗಿ ಒಬ್ಬ ಆದರ್ಶಪುರುಷನನ್ನು ಚಿತ್ರಿಸಬೇಕೆಂದು ಅವರು ಸಂಕಲ್ಪಿಸಿದಂತೆ ತೋರುತ್ತದೆ. ಅವರು –

ಲೋಕೇ ಪುರುಷಸಾರಜ್ಞಃ ಸಾಧುರೇಕೋ ವಿನಿರ್ಮಿತಃ ||

''ಈ ಲೋಕದಲ್ಲಿ ಮನುಷ್ಯನ ಸಾರವತ್ತಾದ ಗುಣವಾವುದೆಂಬುದನ್ನು ಬಲ್ಲ ಸತ್ಪುರುಷನೊಬ್ಬನಿರಲೆಂದು ಬ್ರಹ್ಮನು ಶ್ರೀರಾಮನನ್ನು ಸೃಷ್ಟಿಸಿದ್ದನು'' ಎಂದು ಹೇಳುತ್ತಾರೆ.

ಮನುಷ್ಯನ ಧರ್ಮಪರತೆಯನ್ನು ಮೂರು ಬಗೆಯಿಂದ ಅಳೆಯಬಹುದು : ಅವನ ಮನೋವ್ಯಾಪಾರದಿಂದ, ನುಡಿಯಿಂದ ಮತ್ತು ನಡೆಯಿಂದ. ಲೋಕದಲ್ಲಿ ಇನ್ನೊಬ್ಬರ ಮನೋ ವ್ಯಾಪಾರವನ್ನು ತಿಳಿಯುವುದು ಕಠಿಣವಾದರೂ ಕಾವ್ಯದಲ್ಲಿ ಕವಿಯ ಮಾತಿನಿಂದ ತಿಳಿಯಲಾಗುತ್ತದೆ.

ಶ್ರೀರಾಮನು ವನಕ್ಕೆ ಹೊರಡಬೇಕೆಂದೂ ತಡಮಾಡಬಾರದೆಂದೂ ಕೈಕೇಯಿಯು ಹೇಳಿದಾಗ, ಶ್ರೀರಾಮನು ಹೇಳುವ ಮಾತಿದು :

ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಮ್ ||
– ಅಯೋಧ್ಯಾ 19–20

''ದೇವಿ, ನಾನು ಐಶ್ವರ್ಯಕಾಮನೆಯಿಂದ ಈ ಲೋಕದಲ್ಲಿ ಜೀವನವನ್ನು ಸಾಗಿಸಲು ಬಯಸುತ್ತಿಲ್ಲ. ಋಷಿಗಳಂತೆ ನಾನು ಕೇವಲ ಧರ್ಮವನ್ನು ನಂಬಿದ್ದೇನೆಂದು ತಿಳಿದುಕೊ''

ಇದು ಆತ್ಮಪ್ರಶಂಸೆಯಲ್ಲ. ಮುಂದಿನ ರಾಮಚರಿತೆಯಲ್ಲಿ ಧರ್ಮನಿಷ್ಠತೆ ಅನುಸ್ಯೂತ ವಾಗಿದೆ. ಆತನು ತಂದೆತಾಯಿಗಳ ಇಚ್ಛೆಗೆ ತಲೆಬಾಗಿ ವನವಾಸಕ್ಕೆ ಹೊರಟನು. ದಶರಥನು ಕಾಮಾರ್ತನಾಗಿ ಹೆಂಡತಿಯ ಮಾತನ್ನು ಮೀರಲಾರದೆ ಈ ಸಂಕಟವನ್ನು ತಂದಿಟ್ಟನೆಂಬುದು ಸರಿಯಲ್ಲ. ಕೈಕೇಯಿಯಲ್ಲಿದ್ದ ಅವನ ಪ್ರೀತಿ ಮರುಕ್ಷಣದಿಂದ ದ್ವೇಷವಾಗಿ ಪರಿಣಮಿಸಿತು. ಕೊಟ್ಟಮಾತಿಗೆ ಪ್ರತಿಯಾಗಿ ಹೇಳಲಾರದೆ ದೊಡ್ಡ ಇಕ್ಕಟ್ಟಿನಲ್ಲಿ ಅವನು ಪೇಚಾಡುತ್ತಿದ್ದನು. ಈ

ಪೇಚಿನಿಂದ ಅವನನ್ನು ಪಾರುಮಾಡುವುದೇ ಶ್ರೀರಾಮನ ಪರಮಧ್ಯೇಯವಾಗಿತ್ತು.

ಭರತನು ಚಿತ್ರಕೂಟಕ್ಕೆ ಬಂದು, ಶ್ರೀರಾಮನು ಅಯೋಧ್ಯೆಗೆ ಹಿಂತಿರುಗಬೇಕೆಂದು ಬೇಡಿಕೊಂಡು ಸತ್ಯಾಗ್ರಹವನ್ನೇ ಹೂಡಿದನು. ''ಸಾಂತ್ವಿತಾ ಮಾಮಿಕಾ ಮಾತಾ'' – ನನ್ನ ತಾಯಿಯನ್ನು ಸಮಾಧಾನಗೊಳಿಸಿದ್ದೇನೆ. ನೀನು ರಾಜನಾಗಲು ಅವಳು ಒಪ್ಪಿದ್ದಾಳೆ ಎಂದು ಹೇಳಿದನು. ಅದಕ್ಕೆ ಸಾಕ್ಷಿಯಾಗಿ ಕೈಕೇಯಿಯೇ ಅಲ್ಲಿಗೆ ಬಂದಿದ್ದಳು. ಆದರೆ ಶ್ರೀರಾಮನ ನಿಲುವು ಅಚಲ, ''ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ'' – ತಂದೆಗೆ ನಾನು ಯಾವ ಮಾತು ಕೊಟ್ಟೆನೋ ಅದು ಎಂದಿಗೂ ಸುಳ್ಳಾಗದು. ''ರಾಮೋ ದ್ವಿರ್ನಾಭಿಭಾಷತೇ''।

ಹದಿನಾಲ್ಕು ವರ್ಷ ಕಳೆದ ಮೇಲೂ ಶ್ರೀರಾಮನ ಅಂತರಂಗ ಹೇಗಿತ್ತು? ಒಂದು ವೇಳೆ ಭರತನಿಗೆ ರಾಜ್ಯಾಭಿಲಾಷೆ ಉಂಟಾಗಿದ್ದರೆ ?

ಸಂಗತ್ಯಾ ಭರತಃ ಶ್ರೀಮಾನ್ ರಾಜ್ಯಾರ್ಥೀ ಚೇತ್ ಸ್ವಯಂ ಭವೇತ್ ।
ಪ್ರಶಾಸ್ತು ವಸುಧಾಂ ಕೃತ್ಸ್ನಾಮಖಿಲಾಂ ರಘುನಂದನಃ ॥

– ಯುದ್ಧ. 128–15

''ದೀರ್ಘಕಾಲದ ರಾಜ್ಯನಿರ್ವಹಣೆಯಿಂದ ಭರತನಿಗೆ ರಾಜ್ಯಬೇಕೆಂಬ ಇಚ್ಛೆಯಾಗಿದ್ದರೆ, ಅವನೇ ಸಮಸ್ತಪೃಥ್ವಿಯನ್ನೂ ಆಳಲಿ !'' ಎಂದು ಹೇಳಿದನು. ''ರಘುನಂದನಃ'' ಎಂಬುದರಲ್ಲಿ ಒಂದು ಅರ್ಥಸ್ವಾರಸ್ಯ ಉಂಟು. ಭರತನೂ ನನ್ನಂತೆ ರಘುಕುಲೋತ್ತಮ ನಲ್ಲವೆ? ಅವನು ಪ್ರಜಾರಂಜಕನಾದ ರಾಜನಾಗಬಲ್ಲನು ಎಂಬ ಮನಃಶುದ್ಧಿಯು ಅಭಿವ್ಯಕ್ತವಾಗುತ್ತದೆ.

ವಾಲಿಯ ಕಿಷ್ಕಿಂಧೆಯಾಗಲಿ ರಾವಣನ ಲಂಕೆಯಾಗಲಿ ರಾಮನ ಭುಜಬಲಕ್ಕೆ ವಶವಾಗಿತ್ತು. ಆ ರಾಜ್ಯಗಳನ್ನು ಸುಗ್ರೀವ ವಿಭೀಷಣರಿಗೆ ವಹಿಸಿಕೊಟ್ಟನೇ ಹೊರತು ಕೋಸಲರಾಜ್ಯಕ್ಕೆ ಸೇರಿಸಿಕೊಳ್ಳಲಿಲ್ಲ. ಅಮೂಲ್ಯ ಆಸ್ತಿಯಾದ ಪುಷ್ಪಕವಿಮಾನವನ್ನು ಕುಬೇರನಿಗೆ ಹಿಂದಿರುಗಿಸಿದನೇ ಹೊರತು ತನ್ನ ವಶದಲ್ಲಿ ಇಟ್ಟುಕೊಳ್ಳಲಿಲ್ಲ. ಅದನ್ನು ವಿಭೀಷಣನಿಗೂ ಕೊಡಲಿಲ್ಲ.

ಶ್ರೀರಾಮನು ಪಟ್ಟಾಭಿಷಿಕ್ತನಾದ ಮೇಲೆ –

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ ।
ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ ॥

– ಯುದ್ಧ. 131–102

''ಪ್ರಜೆಗಳು ಎಲ್ಲಿ ನೋಡಿದರೂ ರಾಮಕಥೆಯನ್ನು – ರಾಮನ ಸುದ್ದಿಯನ್ನು ಹೇಳಿಕೊಳ್ಳುತ್ತಿದ್ದರು. ಎಲ್ಲೆಲ್ಲಿಯೂ ರಾಮ ರಾಮ ರಾಮ ! ಅವನು ರಾಜ್ಯಭಾರವನ್ನು ನಡೆಸುತ್ತಿರಲು, ಜಗತ್ತು ರಾಮಮಯವಾಯಿತು'' !

ಶ್ರೀರಾಮನು ಅವತಾರಪುರುಷನಾದರೂ ಮನುಷ್ಯಭಾವದಿಂದಲೇ ನಡೆದುಕೊಂಡಿದ್ದಾನೆ. ಮನುಷ್ಯ ಸಹಜವಾದ ಪರಿಮಿತಿಗಳನ್ನು ಜೀವನದಲ್ಲಿ ಅನುಭವಿಸಿದ್ದಾನೆ. ಅವನು ಮನುಷ್ಯನೆಂದುಕೊಂಡರೆ, ರಾಮಾಯಣಕಾವ್ಯದ ಸೊಗಸು ಹೃದಯಕ್ಕೆ ಅರ್ಪಿತವಾಗಿ ಆಪ್ಯಾಯನವೆನಿಸುತ್ತದೆ; ಶ್ರೀರಾಮನ ಗುಣಗಳು ಸಜ್ಜನರಿಗೆ ಮಾರ್ಗದರ್ಶಕವಾಗಿ ಅನುಕರಣೀಯವಾಗುತ್ತವೆ. ಜೀವನ ಪಥದಲ್ಲಿ ದೇವತೆಯನ್ನು ಅನುಕರಿಸುವುದು ಸಾಧ್ಯವಲ್ಲ. ಶ್ರೀರಾಮನಲ್ಲಿ ಸಕಲಭಾವಗಳೂ ಧರ್ಮಕ್ಕೆ ಅವಿರುದ್ಧವಾಗಿ ಸೇರಿಕೊಂಡಿದ್ದವು.

ಶೃಂಗಾರಂ ಕ್ಷಿತಿನಂದಿನೀವಿಹರಣೇ ವೀರಂ ಧನುರ್ಭಂಜನೇ
ಕಾರುಣ್ಯಂ ಬಲಿಭೋಜನೇಽದ್ಭುತರಸಂ ಸಿಂಧೌ ಗಿರಿಸ್ಥಾಪನೇ ।
ಹಾಸ್ಯಂ ಶೂರ್ಪಣಖಾಮುಖೇ ಭಯಮಘೇ ಬೀಭತ್ಸಮನ್ಯಾಮುಖೇ
ರೌದ್ರಂ ರಾವಣಭಂಜನೇ ಮುನಿಜನೇ ಶಾಂತಂ ವಪುಃ ಪಾತು ನಃ ।

ಈ ಶ್ಲೋಕದ ಭಾವಾರ್ಥವು ಮಧುರವಾಗಿದೆ.

''ಜಾನಕಿಯೊಡನೆ ವಿಹರಿಸುವಾಗ ಶೃಂಗಾರ, ಶಿವಧನುಸ್ಸನ್ನು ಮುರಿಯುವಾಗ ವೀರ, ಕಾಕಾಸುರನ ವಿಷಯದಲ್ಲಿ ಕಾರುಣ್ಯ, ಸಮುದ್ರದಲ್ಲಿ ಬೆಟ್ಟಗಳನ್ನು ತೇಲಿಸಿ ಸೇತುವೆಯನ್ನು ಕಟ್ಟುವಾಗ ಅದ್ಭುತ, ಶೂರ್ಪಣಖೆಯ ಪ್ರಸಂಗದಲ್ಲಿ ಹಾಸ್ಯ, ಪಾಪಕಾರ್ಯದಲ್ಲಿ ಭಯ, ಪರಸ್ತ್ರೀವಿಷಯದಲ್ಲಿ ಬೀಭತ್ಸ, ರಾವಣನನ್ನು ಸಂಹರಿಸುವಾಗ ರೌದ್ರ, ಮುನಿಗಳ ಸಂನಿಧಿಯಲ್ಲಿ ಶಾಂತ – ಹೀಗೆ ನವರಸಗಳಿಗೆ ಆಕರನಾದ ಶ್ರೀರಾಮಚಂದ್ರ ಮೂರ್ತಿಯು ನಮ್ಮನ್ನು ಕಾಪಾಡಲಿ.''

ಶ್ರೀರಾಘವೋ ಧರ್ಮಮಯೋ ಮಹಾದ್ರುಮಃ
ಸ್ಕಂಧಃ ಸೌಮಿತ್ರಿರ್ಭರತಸ್ತಸ್ಯ ಶಾಖಾ ।
ಸೀತಾ ಪುಷ್ಪಂ ಪತ್ರಫಲೇ ಹನೂಮಾನ್
ಮೂಲಂ ವಾಲ್ಮೀಕಿಃ ಸಂಶ್ರಿತಃ ಸಜ್ಜನೌಘಃ ॥

ತನ್ನಯ ಮುಖದಾಕೃತಿಯಂ
ಕನ್ನಡಿಯೊಳ್ ಸಾಜಮಾಗಿ ಕಾಣುವ ತೆರದಿಂ ।
ಉನ್ನತರಾಘವಚರಿತದಿ
ತನ್ನಯ ಗುಣದೋಷದಿರವನರಿಯಲ್ ಬರ್ಕುಂ ॥

— ★ —

ಧರ್ಮದ ಸ್ವರೂಪವನ್ನು ನಾವು ನಿರ್ಣಯಿಸಲಾರೆವು. ಅದು ಅತಿಸೂಕ್ಷ್ಮವಾದದ್ದು. ಪರಮದುರ್ಜ್ಞೇಯವಾದದ್ದು. ತಪಸ್ವಿಗಳೂ ವಿರಕ್ತರೂ ಜ್ಞಾನಿಗಳೂ ಆದ ಋಷಿಗಳಿಗೆ ಮಾತ್ರ ಗೋಚರವಾದದ್ದು ಧರ್ಮ. ದೇಶಕಾಲಾನುರೋಧವಾಗಿ ಬಾಹ್ಯಾಚರಣೆಯು ಬೇರೆ ಆಕೃತಿಯನ್ನು ತಳೆದೀತು. ಧರ್ಮದ ಅಂತಃಸತ್ತ್ವವು ಮಾತ್ರ ಏಕರೂಪವಾಗಿಯೇ ಇರುತ್ತದೆ.

ನಮ್ಮ ವೇದವಾಙ್ಮಯ, ರಾಮಾಯಣ, ಮಹಾಭಾರತಾದಿ ಪವಿತ್ರಗ್ರಂಥಗಳು ಪ್ರತಿಪಾದಿಸಿದ ಧರ್ಮದ, ದರ್ಶನದ, ಸಂಸ್ಕೃತಿಯ, ಜೀವನಮೌಲ್ಯದ ಅರಿವಿಲ್ಲದವರು ತಮ್ಮ ಟೀಕೆಗಳನ್ನು ಈಗಿನ ಕಥೆ, ಕಾದಂಬರಿ, ರಾಜಕೀಯ – ಇವುಗಳಿಗೆ ಸೀಮಿತಗೊಳಿಸಿಕೊಂಡರೆ ಅವರಿಂದ ಮಹತ್ತರವಾದ ಲೋಕೋಪಕಾರವಾದೀತು. ಅಪಕಾರವಾಗುವುದಾದರೂ ತಪ್ಪೀತು. ವಿಮರ್ಶೆ ಎಂದರೇನು ? ಒಳ್ಳೆಯದರಲ್ಲಿ ಕೆಟ್ಟದ್ದನ್ನೂ ಕೆಟ್ಟದ್ದರಲ್ಲಿ ಒಳ್ಳೆಯದನ್ನೂ ಹಠದಿಂದ ಆರೋಪಿಸಿ ಪ್ರಮಾಣವಿರುದ್ಧವಾದ ಕಪೋಲಕಲ್ಪನೆಗಳನ್ನು ತರುವುದು ಈ ಜನರಿಗೆ ವಿಮರ್ಶೆಯೆನಿಸುತ್ತದೆ.

''ಭಾರತ ಯುದ್ಧದಲ್ಲಿ ಭೀಷ್ಮಾದಿಗಳನ್ನು ಕೊಲ್ಲುವುದು ಅಧರ್ಮವೆಂದು ಹಿಂಜರಿದು ವಿರಕ್ತನಾದ ಅರ್ಜುನನಿಗೆ ದುರ್ಬೋಧನೆಯನ್ನು ಮಾಡಿ ಯುದ್ಧಕ್ಕೆ ಹುರಿದುಂಬಿಸಿ ಲಕ್ಷಾಂತರ ಜನರನ್ನು ಕೊಲ್ಲಿಸಿದ ಕಟುಕ ಕೃಷ್ಣ'' ಎಂದು ಒಬ್ಬ ವಿಮರ್ಶಕನು ಬರೆದದ್ದುಂಟು. ಇದು ಈ ಕಾಲದ ವಿಮರ್ಶೆ ಸಾಗುತ್ತಿರುವ ದಾರಿ. ಅಂಗೈಯಲ್ಲಿರುವ ನೆಲ್ಲಿಕಾಯಿಯಂತೆ ಧರ್ಮದ ಸ್ವರೂಪವನ್ನು ನಿಶ್ಚಯಿಸಿ ಹೇಳಬಲ್ಲ ಈ ವಿಮರ್ಶಕರು 'ಚಾತುರ್ವರ್ಣ್ಯಸ್ಯ ರಕ್ಷಿತಾ' ಎಂದು ಹೊಗಳಿಸಿಕೊಂಡ ಶ್ರೀರಾಮನನ್ನು ಬಿಡುವುದುಂಟೆ ?

1. ಶೂರ್ಪಣಖಿಯ ಮೂಗನ್ನು ಕೊಯ್ದು ವಿರೂಪಗೊಳಿಸಿದ್ದು ರಾಮನ ಕ್ರೂರಕೃತ್ಯ. ಯಾರು ಏನು ಹೇಳಿದರೂ ಅದು ಸರಿಯೆಂದು ಒಪ್ಪುವುದಕ್ಕಾಗುವುದಿಲ್ಲ – ಇದು ಒಬ್ಬ ವಿಮರ್ಶಕರ ಆಪಾದನೆ.

ಶೂರ್ಪಣಖಿಯು ದಂಡಕಾರಣ್ಯದಲ್ಲಿ ಅಲೆದಾಡುತ್ತಿದ್ದ ರಾಕ್ಷಸಿ. ಶ್ರೀರಾಮನನ್ನು ನೋಡಿದೊಡನೆ ಕಾಮಮೋಹಿತಳಾದಳು. ವಾಲ್ಮೀಕಿ ಮುನಿಗಳು ವರ್ಣಿಸುವಂತೆ ಅವಳು ದುರಾಚಾರನಿರತೆ. ಸೊಟ್ಟಮೋರೆಯ ದೊಡ್ಡಹೊಟ್ಟೆಯ ಭೀಕರಧ್ವನಿಯ ಹೆಂಗಸು. ಶ್ರೀರಾಮನು ಅವಳ ಬೇಡಿಕೆಯನ್ನು ನಿರಾಕರಿಸುತ್ತ ಮೃದುವಾಗಿಯೇ ''ಆರ್ಯೆ, ನನಗೆ ಮದುವೆಯಾಗಿದೆ. ಈ ಸೀತೆ ನನ್ನ ಪ್ರಿಯಪತ್ನಿ. ನನ್ನ ತಮ್ಮ ಲಕ್ಷ್ಮಣನನ್ನು ಕೇಳು'' ಎಂದಾಗ ಲಕ್ಷ್ಮಣನ ಬಳಿಗೆ ಹೋಗಿ ತನ್ನ ಕಾಮುಕತೆಯನ್ನು ಹೇಳಿಕೊಳ್ಳುತ್ತಾಳೆ. ಅವನೂ ಒಪ್ಪದಿದ್ದಾಗ ಮತ್ತೆ ಶ್ರೀರಾಮನ ಬಳಿಗೆ ಬಂದು ''ಹೇ ಕಾಂತ, ಈ ಕುರೂಪಿಯಾದ ಸೀತೆ ನಿನಗೆ ಅನುರೂಪಳಲ್ಲ. ಇವಳನ್ನೂ ನಿನ್ನ ತಮ್ಮನನ್ನೂ ಒಟ್ಟಿಗೆ ತಿಂದು ಬಿಡುತ್ತೇನೆ. ಆಮೇಲೆ ನಾವು ಮನಬಂದಂತೆ ವಿಹರಿಸೋಣ'' ಎನ್ನುತ್ತಾಳೆ. ಆಮೇಲೆ ಸೀತೆಯನ್ನು ಭಕ್ಷಿಸುವುದಕ್ಕಾಗಿ ಮೃತ್ಯುಪಾಶದಂತೆ ಸೀತೆಯ ಕಡೆಗೆ ನುಗ್ಗುತ್ತಾಳೆ. ಶ್ರೀರಾಮನು ಅವಳನ್ನು ಥಟ್ಟನೆ ಹಿಡಿದು ನಿಲ್ಲಿಸಿ ''ಲಕ್ಷ್ಮಣ, ಈ ಕುರೂಪಿ ರಾಕ್ಷಸಿಯಳನ್ನು ವಿರೂಪಗೊಳಿಸಿಬಿಡು'' ಎನ್ನುತ್ತಾನೆ. ಲಕ್ಷ್ಮಣನು ಶೂರ್ಪಣಖಿಯ ಕಿವಿಮೂಗುಗಳನ್ನು ಕತ್ತರಿಸುತ್ತಾನೆ. ಆ ರಾಕ್ಷಸಿ ಹೆದರಿ ಓಡಿಹೋಗುತ್ತಾಳೆ.

ಇಂತಹ ಸಂದರ್ಭದಲ್ಲಿ ಶ್ರೀರಾಮನು ಏನು ಮಾಡಬೇಕಾಗಿತ್ತು? ಸೀತೆಯನ್ನು ರಾಕ್ಷಸಿಗೆ ಒಪ್ಪಿಸಿ ಬಿಡಬೇಕಾಗಿತ್ತೆ? ಅಥವಾ ಅವಳೊಡನೆ ಕುಸ್ತಿಯಾಡಿ ಸೋಲಿಸಬೇಕಾಗಿತ್ತೆ? ಹಗ್ಗದಿಂದ ಅವಳನ್ನು ಮರಕ್ಕೆ ಕಟ್ಟಿಹಾಕಬೇಕಾಗಿತ್ತೆ? ರಾಕ್ಷಸಿಯನ್ನು ಕಟ್ಟಿಹಾಕುವ ಹಗ್ಗ ಯಾವುದು? ಅಥವಾ 'ಅಮ್ಮ ತಾಯಿ, ನನ್ನ ಸೀತೆಯನ್ನು ತಿನ್ನಬೇಡಮ್ಮ' ಎಂದು ಬೇಡಿಕೊಳ್ಳಬೇಕಾಗಿತ್ತೆ?

ಕರುಣಾತ್ಮನಾದ ಶ್ರೀರಾಮನು ಶೂರ್ಪಣಖಿಯನ್ನು ಕೊಲ್ಲದೆ ಬಿಟ್ಟಿದ್ದಾನೆ. ಸ್ತ್ರೀವಧೆ ಮಾಡಲು ಹಿಂಜರಿದಿದ್ದಾನೆ. ಅವಳನ್ನು ವಧಿಸಿ ಬಿಟ್ಟಿದ್ದರೆ ಮುಂದಿನ ಅನರ್ಥಗಳೆಲ್ಲವೂ ತಪ್ಪುತ್ತಿದ್ದವು. ಅವನ ಕಾರುಣ್ಯವೆಲ್ಲ ಅವನಿಗೇ ಮುಳುವಾಯಿತು.

2. ವಾಲಿಯನ್ನು ಕೊಲ್ಲುತ್ತೇನೆಂದು ಹೇಳಿ ಸುಗ್ರೀವನನ್ನು ಹುರಿದುಂಬಿಸಿ ರಾಮನು ಅವನನ್ನು ವಾಲಿಯೊಡನೆ ಹೋರಾಡಲು ಮೊದಲನೆಯ ಸಲ ಕಳಿಸಿದನಷ್ಟೆ. ಸುಗ್ರೀವನು ವಾಲಿಯಿಂದ ಪೆಟ್ಟುತಿಂದು ಋಷ್ಯಮೂಕಕ್ಕೆ ಓಡಿ ಹೋಗಬೇಕಾಯಿತು. ರಾಮನು ವಾಲಿಯ ಮೇಲೆ ಬಾಣವನ್ನು ಹೊಡೆಯಲೇ ಇಲ್ಲ. ಆಮೇಲೆ ವಾಲಿಗೆ ''ಸುಗ್ರೀವ, ನೀನೂ ವಾಲಿಯೂ ಒಂದೇ ರೀತಿ ಕಾಣುತ್ತೀರಿ. ವಾಲಿ ಯಾರೆಂದು ಗುರುತಿಸಲಾಗಲಿಲ್ಲ. ಆದ್ದರಿಂದ ಬಾಣವನ್ನು ನಾನು ಹೊಡೆಯಲಿಲ್ಲ'' ಎನ್ನುತ್ತಾನೆ. ಯಾಕೆ ಗುರುತಿಸಲಾಗಲಿಲ್ಲ? ಇದು ಸುಳ್ಳು ಮಾತು – ಎಂದು ಇನ್ನೊಬ್ಬರ ಆರೋಪ.

ಸುಳ್ಳು ಹೇಳಬೇಕಾದರೆ ಒಂದು ಪ್ರಯೋಜನವಿರಬೇಕು. ಶ್ರೀರಾಮನು ಹೇಳಿದ್ದು ಸುಳ್ಳಾದರೆ ಅವನಿಗಾದ ಪ್ರಯೋಜನವೇನು? ವಾಲಿಯನ್ನು ಸ್ಪಷ್ಟವಾಗಿ ಗುರುತಿಸುವುದಕ್ಕಾಗಿ ಸುಗ್ರೀವನ ಕೊರಳಿಗೆ ನಾಗಪುಷ್ಪೀ ಮಾಲೆಯನ್ನು ಹಾಕಿಸಿ ಮತ್ತೆ ಯುದ್ಧಕ್ಕೆ ಕರೆದುಕೊಂಡು ಹೋಗಿ ವಾಲಿಯನ್ನು ಸಂಹರಿಸಲಿಲ್ಲವೆ? ವಾಲಿಸುಗ್ರೀವರು ಅಣ್ಣತಮ್ಮಂದಿರು. ಅವರು ಎಲ್ಲವಿಧದಲ್ಲಿಯೂ ಒಂದೇ ರೀತಿ ಕಾಣುತ್ತಿದ್ದರೆಂಬುದು ಸಹಜವಾದದ್ದು. ಅದರಲ್ಲಿಯೇ ಕಪಿಜಾತಿಯವರಲ್ಲಿ ಭೇದವನ್ನು ಕಂಡು ಹಿಡಿಯುವುದು ಕಷ್ಟ. ವಾಲಿ ಸುಗ್ರೀವರದು ಮಲ್ಲಯುದ್ಧ ; ಕುಸ್ತಿಯಾಡತಕ್ಕವರು ಒಂದೇ ಬಣ್ಣದ ಕಾಚವನ್ನು ತೊಟ್ಟಿರುತ್ತಾರೆ. ಇಷ್ಟಾಗಿ ರಾಮನಿಗೆ ಸುಗ್ರೀವನ ಪರಿಚಯವಾದದ್ದು ಅದೇ ದಿನ ಸ್ವಲ್ಪ ಹೊತ್ತಿನ ಮೊದಲು ಕುಸ್ತಿಯಾಡುವಾಗ ''ಅಚ್ಚಳಿಯದೆ ಒಬ್ಬರನ್ನೊಬ್ಬರು ಹೋಲುತ್ತಿದ್ದರು. ಆದ್ದರಿಂದ ರಾಘವನು ಆ ವೀರರಲ್ಲಿ 'ಸುಗ್ರೀವನಾರು? ವಾಲಿಯಾರು? – ಎಂಬುದನ್ನು ಕಂಡು ಹಿಡಿಯಲಾರದೆ ಹೋದನು'' ಎಂದು ವಾಲ್ಮೀಕಿ ಮುನಿಗಳೇ ಹೇಳಿದ್ದಾರೆ.

3. ಮರೆಯಲ್ಲಿ ನಿಂತು ರಾಮನು ವಾಲಿಯ ಮೇಲೆ ಬಾಣವನ್ನು ಪ್ರಯೋಗಿಸಿ ವಧಿಸಿದ್ದಾನೆ. ಇದು ಅಕ್ಷಮ್ಯವಾದ ಅಪರಾಧ. ಯಾರು ಏನು ಹೇಳಿದರೂ ರಾಮನಲ್ಲಿ ತಪ್ಪಿಲ್ಲವಿಲ್ಲವೆಂಬುದನ್ನು ಒಪ್ಪಲಾಗುವುದಿಲ್ಲ – ಇದು ಬಹುಮಂದಿ ವಿಮರ್ಶಕರ ಆರೋಪ.

ಈ ಆರೋಪವನ್ನು ವಿಸ್ತಾರವಾಗಿ ವಾಲಿಯೇ ಮಾಡಿದ್ದಾನೆ. ಅವನು ಹೇಳಿದ್ದಕ್ಕಿಂತ ಹೆಚ್ಚಾಗಿ ಒಂದು ಮಾತನ್ನೂ ಸೇರಿಸಬೇಕಾಗಿಲ್ಲ. ಈ ವಿಮರ್ಶಕರು ಆಡಂಬರದಿಂದ ಹೇಳುವುದಷ್ಟೂ ವಾಲ್ಮೀಕಿ ಮುನಿಗಳು ವಾಲಿಯಿಂದ ಹೇಳಿಸಿದ್ದೇ ಸರಿ. ಇದಕ್ಕೆ ಉತ್ತರವಾಗಿ ಶ್ರೀರಾಮನು ಹೇಳಿರುವುದನ್ನೂ ಸಹನೆಯಿಂದ ಆಲಿಸಬೇಕು.

1. ವಾಲಿ, ನೀನು ಸುಗ್ರೀವನ ಹೆಂಡತಿಯಾದ ರುಮೆಯನ್ನು ಅಂತಃಪುರಕ್ಕೆ

ಸೇರಿಸಿಕೊಂಡು ಘೋರವಾದ ಅಪರಾಧವನ್ನು ಮಾಡಿದ್ದೀಯೆ. ತಮ್ಮನ ಹೆಂಡತಿಯನ್ನು ಸೊಸೆಯಂತೆ – ಮಗಳಂತೆ ಕಾಣಬೇಕೆಂದು ಧರ್ಮಶಾಸ್ತ್ರವು ವಿಧಿಸಿದೆ. ಅವಳ ಮೇಲೆ ಅತ್ಯಾಚಾರವನ್ನೆಸಗಿದ್ದಕ್ಕೆ ಮರಣದಂಡನೆಯನ್ನು ಶಾಸ್ತ್ರವು ಹೇಳಿದೆ. ರಾಜನಾದವನೇ ಇಂತಹ ಘೋರವಾದ ಪಾಪಕೃತ್ಯವನ್ನು ಮಾಡುವುದು ಅಕ್ಷಮ್ಯವಾದದ್ದು. ಅದಕ್ಕಾಗಿ ಕ್ಷತ್ರಿಯನಾದ ನಾನು ನಿನಗೆ ಮರಣದಂಡನೆಯನ್ನು ವಿಧಿಸಿ ಜಾರಿಗೊಳಿಸಿದ್ದೇನೆ. ನಾನು ನಿನ್ನೊಡನೆ ಯುದ್ಧಕ್ಕೆ ಬರಲಿಲ್ಲ. ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡಬಾರದೆಂಬುದು ಯುದ್ಧ ಧರ್ಮ. ಅಪರಾಧಿಗೆ ಶಿಕ್ಷೆಯನ್ನು ನಾನಾ ವಿಧದಲ್ಲಿ ಕೊಡಬಹುದು. ವಿಷಕೊಡಬಹುದು. ನೇಣುಹಾಕಬಹುದು. ಬಾಣದಿಂದಲೋ ಕತ್ತಿಯಿಂದಲೋ ಕೊಲ್ಲಬಹುದು. ಇಲ್ಲಿ ಅಧರ್ಮದ ಪ್ರಶ್ನೆ ಹುಟ್ಟುವುದೇ ಇಲ್ಲ. ಇಲ್ಲಿ ''ದಂಡಾರ್ಥವಧೇ ದರ್ಶಿನಾನಪೇಕ್ಷಣಾತ್'' ಎಂದು ತಿಲಕ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಧರ್ಮದ ಸ್ವರೂಪವು ಸೂಕ್ಷ್ಮವಾದದ್ದು ಪರಮ ದುರ್ಜ್ಞೇಯವಾದದ್ದು. ಇದು ಯುದ್ಧವಲ್ಲ. 'ದಂಡಃ, ದಂಡಃ' ಎಂದು ಶ್ರೀರಾಮನು ಮತ್ತೆ ಮತ್ತೆ ಹೇಳಿದ್ದಾನೆ. ಶ್ರೀರಾಮನು ದಿಟ್ಟತನದಿಂದ ವಾಲಿಗೆ ಉತ್ತರ ಹೇಳಿದನೇ ಹೊರತು ಸಂಕೋಚ ಪಡಲೇ ಇಲ್ಲ.

ಅನಂತರ ವಾಲಿಯು ''ನ ದೋಷಂ ರಾಘವೇ ದಧ್ಯೌ ಧರ್ಮೇಽಧಿಗತ ನಿಶ್ಚಯಃ ಧರ್ಮದ ಸ್ವರೂಪವೇನೆಂಬುದು ಸ್ಫುಟವಾಗಿ ತಿಳಿದಮೇಲೆ ರಾಘವನಲ್ಲಿ ಯಾವದೋಷವನ್ನೂ ಎಣಿಸಲಿಲ್ಲ'' ತಾನು ಆಕ್ಷೇಪಿಸಿದ್ದು ತಪ್ಪೆಂದೂ ತನ್ನನ್ನು ಕ್ಷಮಿಸಬೇಕೆಂದೂ ವಾಲಿಯು ಕೇಳಿಕೊಂಡಿದ್ದಾನೆ. ವಾಲಿಯೇ ಶ್ರೀರಾಮನಲ್ಲಿ ದೋಷವಿಲ್ಲವೆಂದು ಹೇಳಿರುವಾಗ ಈ ವಿಮರ್ಶಕರ ಕೂಗಾಟ ಅರ್ಥವಿಲ್ಲದ್ದು.

ಇದೆಲ್ಲವನ್ನೂ ವಿವರವಾಗಿ ತಿಳಿಸಿದರೂ ಒಬ್ಬ ಮಹನೀಯರು ''ಈ ಸಮಾಧಾನವು ತೃಪ್ತಿಕರವಾಗಿಲ್ಲ. ವಾಲಿಯನ್ನು ಯುದ್ಧಕ್ಕೇ ಕರೆಯಬಹುದಾಗಿತ್ತು. ಏಕೆ ಕರೆಯಲಿಲ್ಲ?'' ಎಂದು ಕೇಳುತ್ತಾರೆ.

ಇದು ರಾಜನೀತಿಯನ್ನವಲಂಬಿಸಿದ ವಿಚಾರ. ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ್ದಲ್ಲ. ರಾಜನೀತಿಯಲ್ಲಿ ಯಾವುದು ಸುಲಭವಾದದ್ದು, ಯಾವುದು ಅನರ್ಥಗಳನ್ನೊಡ್ಡತಕ್ಕದ್ದಲ್ಲ, ಯಾವುದು ಅಸಂದಿಗ್ಧವಾದದ್ದು – ಇತ್ಯಾದಿ ವಿಚಾರಗಳನ್ನು ಮಾಡಿ ಯೋಗ್ಯವಾದ್ದನ್ನು ಕೈಗೊಳ್ಳಬೇಕಾಗುತ್ತದೆ. ಯುದ್ಧಕ್ಕೆ ವಾಲಿಯನ್ನು ಆಹ್ವಾನಿಸಿದ್ದರೆ ಸಂಭಾವ್ಯವಾದ ದೋಷಗಳು ಇವು –

1. ಯುದ್ಧದಲ್ಲಿ ಜಯವು ಯಾರಿಗೆಂಬುದು ನಿಶ್ಚಿತವಲ್ಲ. ಅಲ್ಲದೆ ಅದು ಬಹಳ ಕಾಲವನ್ನೆಳೆಯಬಹುದು.

2. ವಾಲಿಯ ಕಡೆಯವರನ್ನೆಲ್ಲ ಯುದ್ಧದಲ್ಲಿ ಸಂಹರಿಸಬೇಕಾದೀತು. ಆಗ ಸೀತೆಯನ್ನು ಹುಡುಕಲು ಸುಗ್ರೀವನಿಗೆ ಸಹಾಯಕರಾದ ಕಪಿವೀರರೆಲ್ಲಿರುತ್ತಾರೆ?

3. ಅಷ್ಟು ಜನರೊಡನೆ ವಿರೋಧವನ್ನು ಕಟ್ಟಿಕೊಂಡು ಕಿಷ್ಕಿಂಧೆಯನ್ನು ಸರ್ವನಾಶ ಮಾಡಿದರೆ ಸುಗ್ರೀವನಿಗೆ ಉಳಿಯುವುದೇನು?

4. ಮುಂದೆ ಮಾಡಬೇಕಾದ ಕಾರ್ಯಗಳು ಹೊರೆ ಹೊರೆಯಾಗಿವೆ. ಅಷ್ಟರಲ್ಲಿ ಸೀತೆಯ ಗತಿ ಏನಾದೀತು? ಮೊದಲು ಮಾಡಬೇಕಾದದ್ದು ಸೀತಾನ್ವೇಷಣೆ. ಅದಕ್ಕೆ ಬೇಕಾದದ್ದು ಸುಗ್ರೀವನ ಸಹಾಯ. ಅದನ್ನು ಆದಷ್ಟು ಬೇಗನೆ ಗಳಿಸಿಕೊಳ್ಳುವುದನ್ನು ಬಿಟ್ಟು ಗುರುತರವಾದ ಕಾರ್ಯದಲ್ಲಿ ಕೈ ಹಾಕುವುದು ನೀತಿಯಲ್ಲ. ಇಂತಹ ಅಸಹಾಯಕಪರಿಸ್ಥಿತಿಯಲ್ಲಿ ಯಾವ ವಿವೇಕಿಯೂ ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸುವುದಿಲ್ಲ.

5. ರಾತ್ರಿಯ ಹೊತ್ತು ರಾಮನು ಲಂಕಾನಗರದೊಳಗೆ ವಾನರರನ್ನು ಕಳಿಸಿ ಬೆಂಕಿ ಹೊತ್ತಿಸಿ ಪಟ್ಟಣವನ್ನು ಸುಡಿಸಿದ್ದಾನೆ. ನಾಗರಿಕರನ್ನು ಕೊಲ್ಲಿಸಿದ್ದಾನೆ. ಅವನನ್ನು ಧರ್ಮಾತ್ಮನೆನ್ನಬಹುದೆ? ಎಂದು ಇನ್ನೊಬ್ಬರ ಆಕ್ರೋಶ.

ಲಂಕಾನಗರವನ್ನು ಸುಡಬೇಕೆಂದು ವಾನರರನ್ನು ಕಳಿಸಿದವನು ಸುಗ್ರೀವ, ಶ್ರೀರಾಮನಲ್ಲ. ಇಂದ್ರಜಿತು ಮಾಯಾ ಯುದ್ಧವನ್ನು ನಡೆಸಿ ಅದೃಶ್ಯನಾಗಿ ಆಕಾಶದಲ್ಲಿ ತಿರುಗುತ್ತ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ರಾಮಲಕ್ಷ್ಮಣರನ್ನೂ ಸಕಲ ವಾನರರನ್ನೂ ಮೂರ್ಛೆಗೊಳಿಸಿ ಹೊರಟುಹೋದನು. ಹನುಮಂತನು ಮತ್ತೆ ಹಿಮಾಲಯಕ್ಕೆ ಹೋಗಿ ಓಷಧಿ ಪರ್ವತವನ್ನು ತಂದ ಮೇಲೆ ವಾನರರೂ ರಾಮಲಕ್ಷ್ಮಣರೂ ಚೇತರಿಸಿಕೊಂಡರು. ಆಗ ಸುಗ್ರೀವನು ಇಂದ್ರಜಿತುವಿನ ಮಾಯಾಯುದ್ಧದಿಂದ ರುಷ್ಟನಾಗಿ ವಾನರರನ್ನು ಲಂಕೆಯೊಳಗೆ ಹನುಮಂತನೊಡನೆ ಕಳಿಸಿ ಬೆಂಕಿ ಹತ್ತಿಸುತ್ತಾನೆ. ಇದು ಶ್ರೀರಾಮನಿಗೆ ಬಹುಶಃ ತಿಳಿದಿಲ್ಲ. ಒಂದು ವೇಳೆ ತಿಳಿದಿದ್ದರೂ ಇದರಲ್ಲಿ ದೋಷವಿಲ್ಲ. ಲಂಕೆಯಲ್ಲಿರತಕ್ಕ ರಾಕ್ಷಸರೆಲ್ಲರೂ ಯೋಧರೇ. ಅಲ್ಲಿ ನಾಗರಿಕರೆಂಬ ಇನ್ನೊಂದು ವರ್ಗವೇ ಇರಲಿಲ್ಲ. ಸುಂದರ ಕಾಂಡದಲ್ಲಿ ಹನುಮಂತನು ಲಂಕಾದಹನ ಮಾಡಿ ಬರಲಿಲ್ಲವೆ? ಹನುಮಂತನನ್ನು ಆಕ್ಷೇಪಿಸದೇ ಇರತಕ್ಕವರು ಈಗ ತಟಸ್ಥನಾಗಿದ್ದ ಶ್ರೀರಾಮನನ್ನಾಕ್ಷೇಪಿಸುವುದು ಯುಕ್ತವಾದ ನಡತೆಯಲ್ಲ.

5. ರಾವಣನು ಹತನಾದ ಮೇಲೆ ಮಂಡೋದರಿಯೇ ಮೊದಲಾದವರು ರಣರಂಗಕ್ಕೆ ಬಂದು ಶೋಕಿಸುತ್ತಾರೆ. ಅವರಿಗೆ ಒಂದೇ ಒಂದು ಸಮಾಧಾನದ ಮಾತನ್ನೂ ಆಡದ ಕ್ರೂರಿ ಈ ರಾಮ – ಎಂದು ಒಬ್ಬ ಮಹನೀಯರ ಹೇಳಿಕೆ.

ಯುದ್ಧ ಮಾಡಿ ಮಾಡಿ ಸಾಕಾಗಿ ಬಳಲಿ ಹೋಗಿದ್ದವನು ಶ್ರೀರಾಮ. ಅವನನ್ನು ಸಂತೈಸತಕ್ಕವರು ಯಾರು? ರಾವಣನ ಮಡದಿಯರು ನೂರಾರು ಮಂದಿ. ಯಾರಿಗೆ ಸಮಾಧಾನ ಹೇಳುತ್ತ ಹೋಗಬೇಕು? ಮತ್ತು ಪರಸ್ತ್ರೀಯರೊಡನೆ ಮಾತಾಡುವುದು ಶ್ರೀರಾಮನ ಸ್ವಭಾವವೇ ಅಲ್ಲ. ಶ್ರೀರಾಮನು ಆ ಸ್ತ್ರೀಯರಿಗೆ ಸಮಾಧಾನ ಹೇಳುವ ವಿಧಾನವಾದರೂ ಯಾವುದು? ಆದ್ದರಿಂದ ಆ ಕಾರ್ಯವನ್ನು ವಿಭೀಷಣನಿಗೆ ವಹಿಸಿದನು. ಪರಮ ವೈರಿಯಾದ ರಾವಣನಿಗೆ ವಿಭೀಷಣನನ್ನು ಒತ್ತಾಯಿಸಿ ಉತ್ತರಕ್ರಿಯೆಯನ್ನು ಮಾಡಿಸಿದ ರಾಘವನು ಈ ಮಹನೀಯರಿಗೆ ಕ್ರೂರಿಯಾಗಿ ಕಾಣಿಸಿದ್ದು ಅಚ್ಚರಿಯ ಸಂಗತಿ.

ರಾವಣ ಸಂಹಾರವಾದ ಮೇಲೆ, ಸೀತಾದೇವಿಯನ್ನು ಲಂಕೆಯಿಂದ ಕರೆತರುವ ಪ್ರಸಂಗದಲ್ಲಿ, ಅವಳು ಸ್ನಾನ ಮಾಡಿ ವಸ್ತ್ರಾಲಂಕಾರಭೂಷಿತೆಯಾಗಿ ಬರಬೇಕೆಂದು ಶ್ರೀರಾಮನು ವಿಭೀಷಣನಿಗೆ ಹೇಳಿದ್ದಾನೆ. ಶ್ರೀರಾಮನ ಉದ್ದೇಶವೇನಿರಬಹುದು? ದೇವಿಯು ಕಳೆದ ಒಂದು ವರ್ಷದಿಂದಲೂ ಮಲಿನಾಂಬರವನ್ನುಟ್ಟು ಕೊಳೆಯಾಗಿ ದುರವಸ್ಥೆಯಲ್ಲಿರುವುದನ್ನು ನೋಡಲಾರದೆ ಮತ್ತು ಆ ಸ್ಥಿತಿಯಲ್ಲಿರುವಾಗ ಸುಗ್ರೀವಾದಿಗಳು ಅವಳನ್ನು ನೋಡುವುದು ಯುಕ್ತವಲ್ಲವೆಂದು ಶ್ರೀರಾಮನು ಭಾವಿಸಿರಬೇಕು ಮತ್ತು ಸೀತೆಯುಡುತ್ತಿದ್ದ ಹಿಂದಿನ ವಸ್ತ್ರಗಳೆಲ್ಲವೂ ದಂಡಕಾರಣ್ಯದ ಆಶ್ರಮದಲ್ಲಿಯೇ ಉಳಿದು ಹೋಗಿವೆ. ಮುಂದೆ ವಿಭೀಷಣನು ಕೊಡಬಹುದಾದ ಸೀರೆಯನ್ನುಡಲು ದೇವಿಯು ಎಂದಿಗೂ ಒಪ್ಪಲಾರಳು. ಆ ಸ್ಥಿತಿಯಲ್ಲಿ ಅಯೋಧ್ಯೆಗೆ ಕರೆದೊಯ್ಯುವುದು ಸರಿಯಲ್ಲವೆಂದು ಸೂಕ್ಷ್ಮದರ್ಶಿಯಾದ ಶ್ರೀರಾಮನು ಊಹಿಸಿರಬಹುದು. ಸೀತೆಯನ್ನು ಪರೀಕ್ಷಿಸಬೇಕೆಂಬ ಉದ್ದೇಶವಂತೂ ಸರ್ವಥಾ ಅಲ್ಲ. ಅಂತಹ ಅಲ್ಪಬುದ್ಧಿಯು ಆ ಮಹಾನುಭಾವನ ಹತ್ತಿರವೂ ಸುಳಿಯವಂತಹುದಲ್ಲ. ಅನಂತರ ಸೀತಾದೇವಿಯನ್ನು ತಿರಸ್ಕರಿಸಿದ್ದು, ಅವಳ ಅಗ್ನಿಪ್ರವೇಶ – ಮೊದಲಾದವೆಲ್ಲವೂ ಸಕಲರಿಗೂ ತಿಳಿದಿರುವಂತಹುದೇ. ಒಟ್ಟಿನಲ್ಲಿ ಆ ಪ್ರಕರಣವು ಮಂಗಳಾಂತವಾದ್ದರಿಂದ ಪುನಃ ಇಲ್ಲಿ ಚರ್ಚಿಸುವುದಿಲ್ಲ.

ಇನ್ನು ಶಂಬೂಕನೆಂಬ ಶೂದ್ರ ತಪಸ್ವಿಯ ಸಂಹಾರದ ವಿಷಯ. ಸಾಹಿತ್ಯ ದಿಗ್ಗಜವೆಂದು ಕೀರ್ತಿಶಾಲಿಗಳಾದ ಡಾ|| ಡಿ.ವಿ. ಗುಂಡಪ್ಪನವರ ಪ್ರಬುದ್ಧವಾದ ಹೇಳಿಕೆಯನ್ನಿಲ್ಲಿ ಉಲ್ಲೇಖಿಸುವುದು ಉತ್ತಮವೆಂದು ನನಗೆ ತೋರುತ್ತಿದೆ. ಪ್ರಾಚ್ಯ – ಪಾಶ್ಚಾತ್ಯ ಸಾಹಿತ್ಯಗಳನ್ನೂ ತತ್ತ್ವ ಶಾಸ್ತ್ರಗಳನ್ನೂ ಕೂಲಂಕಷವಾಗಿ ಅಭ್ಯಾಸ ಮಾಡಿದವರೂ ಸ್ವತಂತ್ರಚಿಂತಕರೂ ಮಹಾಪ್ರಾಜ್ಞರೂ ಧೀಮಂತರೂ ಆದ ಆ ಮಹಾನುಭಾವರ ನಿರ್ಣಯಾತ್ಮಕವಾದ ಹೇಳಿಕೆಯು ಸರ್ವಗ್ರಾಹ್ಯವಾದದ್ದೆಂದು ನನ್ನ ಅಭಿಪ್ರಾಯ. ನಾನು ಬರೆದ ಉತ್ತರಕಾಂಡದ ಅನುವಾದ ಗ್ರಂಥದ ಮುನ್ನುಡಿಯಲ್ಲಿ ಶ್ರೀಮಾನ್ ಡಿ.ವಿ.ಜಿ. ಯವರು ಬರೆದಿರುವುದನ್ನು ಇಲ್ಲಿ ಉಲ್ಲೇಖಿಸುತ್ತೇನೆ –

''ಶ್ರೀರಾಮಚಂದ್ರನ ನಿರ್ಮಲಕೀರ್ತಿಗೆ ಕಳಂಕವಂಟಿಸುವ ಪ್ರಯತ್ನಕ್ಕೆ ಎರಡನೆಯ ವ್ಯಾಜವಿರುವುದು ಶಂಬೂಕನ ಕಥೆಯಲ್ಲಿ.

ಶಂಬೂಕನ ಅಪರಾಧವೇನು? ಸಂಪ್ರದಾಯ ವಿರೋಧ; ಸಮಾಜ ಸಂಕ್ಷೋಭೆ; ವ್ಯವಸ್ಥಾ ಭಂಗ; ಈ ಕಾಲದ ಭಾಷೆಯಲ್ಲಿ ಕ್ರಾಂತಿ (Revolution). ಒಬ್ಬ ಪ್ರಜೆ ತನಗೆ ಅಧಿಕಾರವಿಲ್ಲದ ಕಾರ್ಯಕ್ಕೆ ಕೈಯಿಟ್ಟು ತಪಸ್ಸಿಗೆ ಅರ್ಹನಲ್ಲದವನು ತಪಸ್ಸು ಮಾಡ ಹೊರಟ.

'ಅಬ್ರಾಹ್ಮಣಸ್ತದಾ ರಾಜನ್ನ ತಪಸ್ವೀ ಕಥಂಚನ'

ಅದರಿಂದ ಆ ಸಮಾಜ ಅಲುಗಿತು. ಒಬ್ಬ ಬ್ರಾಹ್ಮಣನ ಮಗ ತೀರಿಕೊಂಡ. ಆದುದರಿಂದ ಶ್ರೀರಾಮನು ಆ ಅಕ್ರಮಕ್ಕೆ ದಂಡನೆ ಮಾಡಬೇಕಾದದ್ದು ವಿಹಿತವಾಯಿತು.

ಇದೇನೂ ಸಂತೋಷದ ಕೆಲಸವಲ್ಲ. ಶ್ರೀರಾಮನು ಕ್ರೂರಿಯಲ್ಲ. ಕರುಣಾಳು. ಆದರೆ ಕರ್ತವ್ಯದ ಮುಂದೆ ಅವನ ವೈಯಕ್ತಿಕ ಹೃದಯಾವೇದನೆ ಕೆಲಸ ಮಾಡತಕ್ಕದ್ದಲ್ಲ. ಶ್ರೀರಾಮನು ತನಗೆ ಇಷ್ಟವಿಲ್ಲದಿದ್ದರೂ ಕರ್ತವ್ಯವನ್ನು ಮಾಡಬೇಕಾಯಿತೆಂಬುದು ಭವಭೂತಿಯ ಈ ಕೆಳಗಿನ ರಾಮವಾಕ್ಯದಿಂದ ನಮಗೆ ಹೃದಯವೇಧಕವಾಗುವಂತೆ ಇದೆ :

ಹೇ ! ಹಸ್ತದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ
ಜೀವಾತವೇ ವಿಸೃಜ ಶೂದ್ರಮುನೌ ಕೃಪಾಣಮ್ ।
ರಾಮಸ್ಯ ಬಾಹುರಸಿ ನಿರ್ಭರಗರ್ಭಖಿನ್ನ
ಸೀತಾ ವಿವಾಸನ ಪಟೋಃ ಕರುಣಾ ಕುತಸ್ತೇ ॥

— ಉತ್ತರರಾಮಚರಿತೆ, II – 9

(ಎಲೈ ಬಾಹುವೇ ! ಬ್ರಾಹ್ಮಣ ಸುತನನ್ನು ಪುನಃ ಬದುಕಿಸುವುದಕ್ಕಾಗಿ ಶೂದ್ರ ಮುನಿಯನ್ನು ಕತ್ತಿಯಿಂದ ಹೊಡೆ. ರಾಮನ ತೋಳಲ್ಲವೇ ನೀನು? ರಾಮನಾದರೋ ಗರ್ಭಭಾರದಿಂದ ನೊಂದಿರುವ ಸೀತೆಯನ್ನು ಕಾಡಿಗೆ ಕಳಿಸಿದವನಲ್ಲವೆ? ಅಂಥವನಿಗೆ ಕರುಣೆಯುಂಟೆ? ನಿನಗೆಲ್ಲಿಯದು ಕರುಣೆ !)

ಶ್ರೀರಾಮಚಂದ್ರನು ಕರುಣಿಯೂ ಹೌದು, ನಿಷ್ಕರುಣಿಯೂ ಹೌದು; ಸಂದರ್ಭಕ್ಕೆ ತಕ್ಕ ನ್ಯಾಯವಾಗುವಂತೆ, ಅದಕ್ಕೆ ಸಂಬಂಧ ಪಟ್ಟವರಿಗೆ ಹಿತವಾಗುವಂತೆ. ಮೂವತ್ತು ವರ್ಷದವನಿಗೆ ಸಲ್ಲತಕ್ಕದ್ದು ಮೂರು ವರ್ಷದವನಿಗೆ ಸಲ್ಲತಕ್ಕದಲ್ಲ; ಮೂರು ವರ್ಷದವನಿಗೆ ಪ್ರಯೋಜಕವಾಗತಕ್ಕದ್ದು ಮೂವತ್ತು ವರ್ಷದವನಿಗಲ್ಲ. ಹೀಗೆ ವಿವೇಚಿಸುತ್ತಾನೆ ಧರ್ಮಿಷ್ಠ.

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।
ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತುಮರ್ಹತಿ ॥

ಇದು ಶ್ರೀರಾಮಚಂದ್ರನ ತತ್ತ್ವ. ಮೃದುವೋ ಕಟುವೋ ಹಿತ ಮುಖ್ಯ. ನ್ಯಾಯಮುಖ್ಯ.

ಮೇಲೆ ಹೇಳಿದ ಶಂಬೂಕ ವೃತ್ತಾಂತಕ್ಕೆ ಸಂಬಂಧಪಟ್ಟ ಶಾಸ್ತ್ರವಾಕ್ಯವು ತ್ರೇತಾಯುಗಕ್ಕೆ ಅನ್ವಯಿಸತಕ್ಕದ್ದು.

ಅಬ್ರಾಹ್ಮಣಸ್ತದಾ ರಾಜನ್ನ ತಪಸ್ವೀ ಕಥಂಚನ ।

— ಉತ್ತರಕಾಂಡ, ಸರ್ಗ 74.

ಇದರ ತತ್ತ್ವ ಸರಿಯಾದದ್ದೇ ? – ಎಂಬುದು ನಾವು ಚರ್ಚಿಸಬೇಕಾದ ವಿಷಯವಲ್ಲ. ಪ್ರಜಾಜನ ಈ ವಿಧಿಯನ್ನಂಗೀಕರಿಸಿದ್ದರು ಎಂಬುದಷ್ಟೇ ನಮಗೆ ಇಲ್ಲಿ ಪ್ರಯುಕ್ತವಾದದ್ದು" (ಮೂಲದಲ್ಲಿ ಇನ್ನೂ ವಿವರಣೆ ಇದೆ).

ರಾಮಾಯಣವು ನಡೆದದ್ದು ತ್ರೇತಾಯುಗದಲ್ಲಿ. ಆಗ ಶೂದ್ರನು ತಪಸ್ಸು ಮಾಡಿದ್ದು

ಅಧರ್ಮವೆಂದೂ ಕಲಿಯುಗದಲ್ಲಿ ಶೂದ್ರನಿಗೂ ಸಹ ತಪಸ್ಸಿನಲ್ಲಿ ಅಧಿಕಾರವಿದೆಯೆಂದೂ ಅದು ಶೂದ್ರನಿಗೆ ಧರ್ಮವೇ ಆಗುತ್ತದೆಯೆಂದೂ ನಾರದರೇ ಹೇಳಿದ್ದಾರೆ.

ಭವಿಷ್ಯಚ್ಛೂದ್ರಯೋನ್ಯಾಂ ಹಿ ತಪಶ್ಚರ್ಯಾ ಕಲೌ ಯುಗೇ ॥

– ಉತ್ತರಕಾಂಡ 74–26

''ಕಲಿಯುಗದಲ್ಲಿ ಮಾತ್ರ ಮುಂದೆ ಜನಿಸುವ ಶೂದ್ರ ಜಾತಿಯವರಿಗೆ ತಪಶ್ಚರ್ಯೆಯು ಧರ್ಮವೆಂದು ವಿಹಿತವಾಗಿದೆ''.

ಜಾತಿಯ ಹೆಸರಿನಲ್ಲಿ ಆಕ್ಷೇಪಿಸುವ ವಿಮರ್ಶಕರು ಇದನ್ನು ಗಮನಿಸಬೇಕು.

ಶಂಬೂಕನ ತಪಸ್ಸಿನಲ್ಲಿ ಇನ್ನೂ ಕೆಲವು ತಪ್ಪುಗಳಿವೆ –

1. ನಿಯಮ ಪೂರ್ವಕವಾಗಿ ಒಂದು ನಾಮಮಂತ್ರವನ್ನು ಸತತವಾಗಿ ಜಪಿಸುತ್ತಿರುವುದು ತಪಸ್ಸು. ಆ ನಾಮ ಮಂತ್ರವನ್ನು ಗುರುವು ಉಪದೇಶಿಸಿರಲೇಬೇಕು. ಶಂಬೂಕನಿಗೆ ಅದನ್ನು ಉಪದೇಶಿಸಿದ ಗುರು ಯಾರು?

2. ಆತನ ತಪಸ್ಸು ಸಶರೀರನಾಗಿ ಸ್ವರ್ಗವನ್ನು ಪಡೆಯುವುದಕ್ಕಾಗಿ. ಸತ್ತಮೇಲೆ ತಾನು ಇರುತ್ತೇನೋ ಇಲ್ಲವೋ ಎಂಬ ಸಂದೇಹ ಇದಕ್ಕೆ ಕಾರಣ. ಶ್ರದ್ಧಾರಹಿತವಾದ ತಾಮಸ ಪ್ರವೃತ್ತಿ ಇದು.

3. ಶಂಬೂಕನು ತಪಸ್ಸು ಮಾಡುವಾಗ ಒಂದು ಮರದ ಕೊಂಬೆಯಲ್ಲಿ ತಲೆ ಕೆಳಗಾಗಿ ನೇತಾಡುತ್ತಿದ್ದನಂತೆ. ಸಶರೀರಸ್ವರ್ಗವು ಶಾಸ್ತ್ರವಿಹಿತವೂ ಅಲ್ಲ. ತ್ರಿಶಂಕುವಿಗೆ ಸಶರೀರ ಸ್ವರ್ಗವನ್ನು ಕೊಡಿಸಲು ವಿಶ್ವಾಮಿತ್ರಮುನಿಗಳಿಗೇ ಸಾಧ್ಯವಾಗಲಿಲ್ಲ. ಶಂಬೂಕನು ಮಾಡುತ್ತಿದ್ದುದು ಶಾಸ್ತ್ರವಿರುದ್ಧವಾದ ಅಸುರನಿಶ್ಚಯದ ತಪಸ್ಸು. ಶಿಷ್ಟ ದೂಷಿತವಾದದ್ದು.

ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾಃ ।
ದಂಭಾಹಂಕಾರ ಸಂಯುಕ್ತಾಃ ಕಾಮರಾಗಬಲಾನ್ವಿತಾಃ ॥
ಕರ್ಶಯಂತಃ ಶರೀರಸ್ಥಂ ಭೂತಗ್ರಾಮಮಚೇತಸಃ ।
ಮಾಂ ಚೈವಾಂತಃ ಶರೀರಸ್ಥಂ ತಾನ್ ವಿದ್ಧ್ಯಾಸುರನಿಶ್ಚಯಾನ್ ॥

– ಗೀತಾ 17–5, 6

ಇನ್ನು ಜನಾಪವಾದಕ್ಕೆ ಅಂಜಿ ಶ್ರೀರಾಮನು ತನ್ನ ಪತ್ನಿಯಾದ ಸೀತಾದೇವಿಯನ್ನು ಪರಿತ್ಯಜಿಸಿದ್ದು ಸರ್ವವಿದಿತ. ಗರ್ಭಿಣಿಯಾಗಿದ್ದ ಆ ಸಾಧ್ವಿಗೆ ಸಿಡಿಲಿನಂತೆ ಎರಗಿದ ಆ ವಿಪತ್ತನ್ನು ಕೇಳಿ ಕಣ್ಣೀರು ಸುರಿಸದ ಮನುಷ್ಯನಿಲ್ಲ. ಕಣ್ಣೀರು ಸುರಿಸದವನು ಮನುಷ್ಯನೂ ಅಲ್ಲ. ಆ ತಾಯಿಯ ಪರವಾಗಿ ಅನುಕಂಪೆಯ ಪ್ರವಾಹವು ಹರಿದದ್ದು ಸಹಜವೇ. ಆದರೆ ಶ್ರೀರಾಮನ ಪರಿಸ್ಥಿತಿಯನ್ನು ಚಿಂತಿಸಿ ಮರುಗಿದವರು ವಿರಳ. ತನ್ನ ಪ್ರಿಯಪತ್ನಿಯನ್ನು , ಕಳಂಕಲೇಶವೂ ಇಲ್ಲದ ಕಾಂತೆಯನ್ನು ಅರಣ್ಯವಾಸದ ಸಹಭಾಗಿನಿಯನ್ನು ತಾನೇ ಹೊರದೂಡಬೇಕಾದ

ದುರವಸ್ಥೆಯಿಂದ ಅವನು ಅನುಭವಿಸುತ್ತಿದ್ದ ಮನೋವ್ಯಥೆಯನ್ನೂ ಅವನ ನಿತ್ಯದ ಬಾಳನ್ನೂ ಅವನ ಕೊರಗನ್ನೂ ಪರ್ಯಾಲೋಚಿಸಿದವರು ಎಷ್ಟು ಜನರಿದ್ದಾರು? ಸಂಸಾರದ ಆಕರ್ಷಣೆ–ವಿಕರ್ಷಣೆಗಳಲ್ಲಿ, ಅನುರಾಗದ ಎಳೆದಾಟ ಪರದಾಟಗಳಲ್ಲಿ ಶೋಕ–ಸಂವೇದನೆಗಳಲ್ಲಿ ಗಂಡಸು ಹೆಂಗಸೆಂಬ ಭೇದವುಂಟೇನು? ತನ್ನದಾದ ಯಾವ ತಪ್ಪೂ ಇಲ್ಲದೆ ಒದಗಿಬಂದ ಹದಿನಾಲ್ಕು ವರ್ಷಗಳ ವನವಾಸವನ್ನು ಹೂಮಾಲೆಯೋ ಎಂಬಂತೆ ಲೀಲೆಯಿಂದ ಪರಿಗ್ರಹಿಸಿದ ಧೀರೋದಾತ್ತನಾದ ಆ ಮಹಾಪುರುಷನು, ರಾವಣನಿಂದ ಸೀತಾಪಹಾರವಾದ ಮೇಲೆ ಶೋಕಿಸಿದ ಪರಿ ಎಷ್ಟು? ಬಾಲಕನಂತೆ ಅಳುತ್ತ, ಹುಚ್ಚನಂತೆ ವನದಲ್ಲಿ ಸೀತೆಯನ್ನು ಹುಡುಕುತ್ತ, ಉನ್ಮತ್ತನಂತೆ ವಿಲಪಿಸಿದ್ದಕ್ಕೆ ಮಿತಿಯುಂಟೆ? ''ಅಪಿ ಗ್ರಾವಾ ರೋದಿತ್ಯಪಿ ದಲತಿ ವಜ್ರಸ್ಯ ಹೃದಯಂ' ಎಂದ ಮಹಾಕವಿ ಭವಭೂತಿಯ ವಾಣಿಯಲ್ಲಿ ಉತ್ಪ್ರೇಕ್ಷೆಯಿಲ್ಲ. ಭೋಜರಾಜನಂತೂ ಶ್ರೀರಾಮನ ಶೋಕಾವಸ್ಥೆಯನ್ನು ವರ್ಣಿಸಲಾರದೆ ಅದನ್ನು ವರ್ಣಿಸಿದ ವಾಲ್ಮೀಕಿಯೇ ಕಠೋರಚಿತ್ತ – ವಲ್ಮೀಕಜನ್ಮಮುನಿರೇವ ಕಠೋರಚೇತಾಃ – ಎಂದು ಬಿಟ್ಟಿದ್ದಾನೆ. ಅಂತಹ ಮೃದುಹೃದಯವು ಗರ್ಭಿಣಿಯಾದ ಪತ್ನಿಯನ್ನು ತಾನೇ ಪರಿತ್ಯಜಿಸುವಾಗ ಇದ್ದಕ್ಕಿದ್ದಂತೆ ಕರಗದ ಕಬ್ಬಿಣವಾಗಿಬಿಟ್ಟಿತೆ?

ರಾಜಕಾರ್ಯದ ಹೊರೆಯಿಂದ ಶ್ರೀರಾಮನಿಗೆ ಹಗಲು ಹೇಗೋ ಕಳೆದು ಹೋಗುತ್ತಿದ್ದಿರ ಬಹುದು. ರಾತ್ರಿ ಒಂಟಿಯಾಗಿ ಮಲಗಿದಾಗ ಅವನ ತಲೆದಿಂಬು ಕಣ್ಣೀರಿಂದ ಒದ್ದೆಯಾಗದೆ ಇದ್ದೀತೆ? ತನ್ನ ಸೋದರರಾದ ಭರತ ಲಕ್ಷ್ಮಣ ಶತ್ರುಘ್ನರಲ್ಲಿ ಒಬ್ಬೊಬ್ಬರಿಗೂ ಇಬ್ಬರು ಪುತ್ರರು ಜನಿಸುತ್ತಾರೆ. ಆ ಮಕ್ಕಳನ್ನು ಮುದ್ದಿಸುವಾಗಲೂ ಸೀತಾದೇವಿಯ ನೆನಪು ಶೂಲವಾಗಿ ಆತನ ಹೃದಯವನ್ನು ಇರಿಯದೆ ಇದ್ದೀತೆ? ತನ್ನ ಮಕ್ಕಳಾದ ಕುಶಲವರನ್ನು ಲಾಲಿಸುವ ಕ್ಷಣಿಕಸುಖವಾದರೂ ಸೀತಾದೇವಿಗೆ ದೊರೆಯಿತು. ಹತಭಾಗ್ಯನಾದ ರಾಘವನಿಗೆ ಅದೂ ಇಲ್ಲವಾಯಿತು.

ಅನಂತರವಾದರೂ ಶ್ರೀರಾಮಚಂದ್ರನು ಇನ್ನೊಬ್ಬಳನ್ನು ಮದುವೆಯಾದನೇನು? ಬಹುಪತ್ನೀಕನಾದ ತಂದೆ ದಶರಥನೇ ಇದಕ್ಕೆ ಆದರ್ಶನಾಗಿದ್ದನಲ್ಲವೆ? ಒಂದೊಂದು ಯಾಗ ಮಾಡುವಾಗಲೂ ಕರ್ಮವಿಧಿಯ ಪೂರೈಕೆಗಾಗಿ ಚಿನ್ನದ ಸೀತಾವಿಗ್ರಹವನ್ನೇ ಮಾಡಿಸಿ ತನ್ನ ಪಾರ್ಶ್ವದಲ್ಲಿಟ್ಟುಕೊಂಡು ಯಾಗಮಾಡುತ್ತಿದ್ದನೆಂದು ವಾಲ್ಮೀಕಿ ಮುನಿಗಳೇ ಬರೆದಿದ್ದಾರೆ. 'ರಾಜಾನೋ ಬಹುವಲ್ಲಭಾಃ' ಎಂಬುದು ಗಾದೆಯ ಮಾತು. ಆದರೂ ಏಕಪತ್ನೀವ್ರತ ವೆಂಬುದನ್ನು ತನ್ನ ಮೇಲೆ ಹೇರಿಕೊಂಡು ಒಂದು ಮಹತ್ತರವಾದ ಆದರ್ಶವನ್ನು ಸ್ಥಾಪಿಸಿದ ಮರ್ಯಾದಾಪುರುಷೋತ್ತಮ ಶ್ರೀರಾಮಚಂದ್ರ.

'ಕೀರ್ತಿ–ಪತ್ನೀ ಪರಿತ್ಯಾಗ ಎಂಬ ಧರ್ಮಸಂಕಟವು ಪ್ರಾಪ್ತವಾದಾಗ ರಾಮನು ಕೀರ್ತಿ ಯನ್ನು ಆರಿಸಿಕೊಂಡ' ಎಂದು ಒಬ್ಬ ವಿದ್ವಾಂಸರ ಅಭಿಪ್ರಾಯ. ಶ್ರೀರಾಮನು ಆರಿಸಿ ಕೊಂಡದ್ದು ರಾಜಧರ್ಮವನ್ನು, ರಾಜನ ಕರ್ತವ್ಯವನ್ನು ; ಕೀರ್ತಿಯನ್ನಲ್ಲ. ಕೀರ್ತಿಯು ಅವನಿಗೆ ದಕ್ಕಿತೇನು ? ಅವನು ಕಠೋರ ಹೃದಯನೆಂಬ ಅಪಕೀರ್ತಿಯ ಮಾಲೆಗಳನ್ನೇ ಅವನ ಕೊರಳಿಗೆ

ತೊಡಿಸಿದ್ದೇವಲ್ಲವೆ?

ಶ್ರೀರಾಮನ ಹೃದಯ ವೇದನೆಯನ್ನರಿತು ಸ್ಪಂದಿಸಿದ ಕವಿಗಳು ಯಾರು? ವಿಮರ್ಶಕರು ಯಾರು? ಸೂಕ್ಷ್ಮಸಂವೇದಿಯಾದ ಕಾಳಿದಾಸನು 'ಬುಭುಜೇ ಪೃಥಿವೀಪಾಲಃ ಪೃಥಿವೀಮೇವ ಕೇವಲಾಂ' ಎಂದು ರಘುವಂಶದಲ್ಲಿ ಉದ್ಗರಿಸಿದ್ದಾನೆ. ಏವ, ಕೇವಲಾಂ – ಎಂಬೆರಡು ಶಬ್ದಗಳಿಂದ ಪೃಥಿವೀಪಾಲನ ವೈಯಕ್ತಿಕ ದುಃಖವನ್ನು ಅಭಿವ್ಯಂಜಿಸಿ ಸುಮ್ಮನಾಗಿದ್ದಾನೆ. ಅದನ್ನು ವಿಶದವಾಗಿ ವರ್ಣಿಸಿ ನಮ್ಮ ಹೃದಯದ ಆಳಕ್ಕೆ ತಟ್ಟಿಸಿ ಧನ್ಯನಾದವನು ಮಹಾಕವಿ ಭವಭೂತಿ. ಆತನು ಕರುಣರಸಾರ್ದ್ರವಾದ ಉತ್ತರರಾಮಚರಿತೆಯನ್ನು ರಚಿಸಿ 'ಕಾವ್ಯರಸಿಕ'ರ ಮಾನವನ್ನು ಉಳಿಸಿದ್ದಾನೆ.

ವಾಲ್ಮೀಕಿರಾಮಾಯಣದಷ್ಟು ಆನಂದಜನಕವಾದ ಪರಮಸುಂದರ ಮಹಾಕಾವ್ಯವು ಇನ್ನೊಂದಿಲ್ಲ. ಕಾಂತಾಸಂಮಿತೆಯಿಂದ ಇದು ನೀಡುವ ಜೀವನ ಮೌಲ್ಯದ ಅಪರಿಮಿತ ಉಪದೇಶಗಳೂ ಇನ್ನೊಂದರಲ್ಲಿಲ್ಲ. ಆದಿಯಿಂದ ಅಂತ್ಯದವರೆಗೂ ಓದುಗರ ಕುತೂಹಲವನ್ನು ಕೆರಳಿಸುತ್ತ, ಸಹೃದಯರ ಹೃದಯವನ್ನು ಸೂರೆಗೊಳ್ಳದ ಕಥಾ ಪ್ರಪಂಚವಿರುವ ಮಹಾಗ್ರಂಥವೂ ಮತ್ತೊಂದಿಲ್ಲ. ಮಹಾಭಾರತವು ಕಾವ್ಯರೂಪದ ಶಾಸ್ತ್ರ. ಭಾರತೀಯರು ತಮ್ಮ ಆದಿಕಾವ್ಯದಲ್ಲಿಯೇ ಕಾವ್ಯಸಾಹಿತ್ಯದ ಸಿದ್ಧಿಗಾಗಿ ಹೆಮ್ಮೆಯಿಂದ ತಲೆಯೆತ್ತಿ ನಿಲ್ಲುವಂತೆ ಮಾಡಿರುವುದು ವಾಲ್ಮೀಕಿರಾಮಾಯಣ. ಆದರೆ 'ಅತಿಪರಿಚಯಾದವಜ್ಞಾ' ಎಂಬ ಸತ್ಯವಾದ ಗಾದೆಯೂ ಉಂಟು.

ಕೃತಜ್ಞತಾಸಮರ್ಪಣೆ

ಶ್ರೀಮದ್ವಾಲ್ಮೀಕಿ ರಾಮಾಯಣಕ್ಕೆ ನಾನು ಬರೆದ ಕನ್ನಡ ಅನುವಾದವನ್ನು ಮೂಲಶ್ಲೋಕ ಸಹಿತವಾಗಿ ಬೆಂಗಳೂರು ನರಸಿಂಹರಾಜ ಕಾಲೋನಿಯ ಶ್ರೀರಾಮಮಂದಿರ ದವರು ಎಂಟು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಸುವಿದ್ಯಾಪ್ರಕಾಶನದ ಸಂಚಾಲಕರಾದ ಮಾನ್ಯಮಿತ್ರರು ಶ್ರೀ ಜಿ.ವಿ. ಸತ್ಯನಾರಾಯಣ ಅವರು ಮತ್ತೆ ಈ ಗದ್ಯಗ್ರಂಥವನ್ನು ಬರೆಯಬೇಕೆಂದು ನನ್ನನ್ನು ಪ್ರೇರಿಸಿದರು. ಈ ಬಗೆಯ ಅನೇಕ ರಾಮಾಯಣ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿರುವಾಗ, ಪುನಃ ಈ ರಚನೆಯಲ್ಲಿ ಕೈ ಹಾಕಲು ನನಗೆ ಇಷ್ಟವಿರಲಿಲ್ಲ. ಬರವಣಿಗೆಯ ಕ್ರಮವೂ ಲೇಖನ ಶೈಲಿಯೂ ಭಿನ್ನವಾಗುವುದರಿಂದ ನಾನು ಇದನ್ನು ಬರೆಯಲೇಬೇಕೆಂಬ ಅವರ ಸ್ನೇಹ ಪೂರ್ವಕವಾದ ಆಗ್ರಹವನ್ನು ನಿರಾಕರಿಸಲಾರದೆ ಈ ಕಾರ್ಯದಲ್ಲಿ ನಾನು ಮತ್ತೆ ತೊಡಗಬೇಕಾಯಿತು.

ಇದರಲ್ಲಿ ಶ್ರೀಮದ್ರಾಮಾಯಣದ ಯಾವ ಕಥಾಭಾಗವನ್ನೂ ಬಿಟ್ಟಿಲ್ಲ. ಅಧ್ಯಾತ್ಮ ರಾಮಾಯಣ ಮುಂತಾದ ಇತರ ರಾಮಾಯಣಗಳಿಂದ ಯಾವ ಅಂಶವನ್ನೂ ತೆಗೆದು ಕೊಂಡಿಲ್ಲ. ಸ್ವಯಂ ಕಲ್ಪಿತವಾದ್ದನ್ನು ಸೇರಿಸಿಯೂ ಇಲ್ಲ. ಅನ್ಯಕವಿಗಳ ಒಂದೆರಡು ಸುಂದರ ಭಾವಗಳು ಮಾತ್ರ ಸೇರಿರಬಹುದು. ವಾಲ್ಮೀಕಿ ರಾಮಾಯಣದ ಕ್ಷೀರ ಸಾಗರದಿಂದ

ಶ್ರೀರಾಮ ಕಥಾಮೃತವನ್ನು ಕಡೆದು ತೆಗೆದು ರಸಜ್ಞರಾದ ಶ್ರೀ ರಾಮಭಕ್ತರಿಗೆ ಯಥಾಶಕ್ತಿಯಾಗಿ ಹಂಚಲು ಪ್ರಯತ್ನಿಸಿದ್ದೇನೆ. ವಿಸ್ತಾರವಾದ ಪ್ರಕೃತಿವರ್ಣನೆಯನ್ನು ಸಂಗ್ರಹಿಸಿ ಬರೆದಿದ್ದೇನೆ. ಯುದ್ಧಕಾಂಡದಲ್ಲಿರುವ ರಾಕ್ಷಸರ ಯುದ್ಧ ಪ್ರಕಾರವು ಸಂಕ್ಷಿಪ್ತವಾಗಿದೆ. ಉತ್ತರ ಕಾಂಡದಲ್ಲಿಯ ಕೆಲವು ಉಪಕಥೆಗಳು ಅನಾವಶ್ಯಕವಾದವೆಂದು ಭಾವಿಸಿ ಕಥೆಯ ಹಂದರದಲ್ಲಿ ಸೇರಿಸಿಲ್ಲ. ಆದರೆ ವಾಚಕರಿಗೆ ಉಪಯುಕ್ತವಾಗಬಹುದೆಂದು ಅವನ್ನು ಪರಿಶಿಷ್ಟದಲ್ಲಿ ಸಂಕ್ಷೇಪವಾಗಿ ಗುರುತಿಸಿದ್ದೇನೆ.

ಶ್ರೀಚಾಮರಾಜೋಕ್ತಿವಿಲಾಸವೆಂಬ ಕನ್ನಡ ರಾಮಾಯಣದ ಪ್ರಧಾನ ಸಂಪಾದಕನಾಗಿಯೂ ನಾನು ಯಥಾಶಕ್ತಿ ಶ್ರೀರಾಮನ ಸೇವೆಯನ್ನು ಸಲ್ಲಿಸಿದ್ದೆನು. ಮತ್ತೆ ಈ ಪ್ರಕಾರವಾಗಿ ಆತನ ಸೇವೆಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟು ಅನುಗ್ರಹಿಸಿರುವ ಶ್ರೀರಾಮಚಂದ್ರ ಪ್ರಭುವಿನ ಪವಿತ್ರ ಪಾದಪದ್ಮಗಳಲ್ಲಿ ಈ ಗ್ರಂಥವನ್ನು ಭಕ್ತಿಯಿಂದ ಸಮರ್ಪಿಸಿದ್ದೇನೆ.

ಶ್ರೀ ಶಂಕರ ದಿಗ್ವಿಜಯದ ಅನುವಾದ ಕಾರ್ಯವನ್ನು ನಾನು ಕೈಗೊಂಡಾಗ ಶ್ರೀಮತಿ ಸರೋಜ ಗಣಪತಿ, ಎಂ.ಎ. ಅವರು ಬರವಣಿಗೆಯ ಕಾರ್ಯದಲ್ಲಿ ನನಗೆ ತುಂಬ ಸಹಾಯ ಮಾಡಿದ್ದರು. ಈ ಗ್ರಂಥದ ಬರವಣಿಗೆಯಲ್ಲಿಯೂ ಅವರು ಉತ್ಸಾಹದಿಂದ ಮುಂದೆ ಬಂದು ಸಹಾಯ ಮಾಡಿದ್ದಾರೆ. ಡಾ|| ಬಿ.ಎಸ್. ರಾಮಕೃಷ್ಣರಾವ್ ಅವರು ಇದರ ಪ್ರಕಟನ ಕಾರ್ಯದಲ್ಲಿಯೂ ಕರಡು ಶೋಧನೆಯ ಕಾರ್ಯದಲ್ಲಿಯೂ ನನಗೆ ಮಾಡಿರುವ ಉಪಕಾರವು ಬಹುದೊಡ್ಡದು.

ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವನ್ನು ಪ್ರಕಾಶನಗೊಳಿಸಿದ ಶ್ರೀರಾಮ ಮಂದಿರದ ಅಧ್ಯಕ್ಷರಾದ ಶ್ರೀ ಎಸ್. ಎನ್. ಮೂರ್ತಿಯವರು ನನಗೆ ಆಪ್ತಮಿತ್ರರು. ಶ್ರೀರಾಮಸೇವಾಕಾರ್ಯದಲ್ಲಿ ಅಧಿಕವಾದ ಭಕ್ತಿಶ್ರದ್ಧೆಯುಳ್ಳವರು. ಅವರು ಪ್ರೀತಿವಿಶ್ವಾಸಗಳಿಂದ ಮುಂದೆ ಬಂದು ಈ ಶ್ರೀರಾಮಕಥಾಮಂಜರಿಯನ್ನು ಶ್ರೀರಾಮಮಂದಿರ ಸಂಸ್ಥೆಯ ಪರವಾಗಿ ಪ್ರಕಾಶನಗೊಳಿಸಿದ್ದಾರೆ. ಹನುಮಂತನಗರದಲ್ಲಿರುವ ಪರಿಮಳ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ. ಚಿದಂಬರಯ್ಯನವರು ಇದನ್ನು ಅಲ್ಪಕಾಲದಲ್ಲಿಯೇ ಸುಂದರವಾಗಿ ಮುದ್ರಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕವಾದ ಹಾರ್ದಿಕ ವಂದನೆಗಳು ಸಲ್ಲುತ್ತವೆ.

ವಿಕ್ರಮ ಸಂವತ್ಸರದ ಶ್ರೀರಾಮನವಮೀ
ಬೆಂಗಳೂರು. ತಾ|| 6-4-2000

ಇತಿ ಸಜ್ಜನ ವಿಧೇಯ
ಎನ್. ರಂಗನಾಥಶರ್ಮಾ

॥ ಶ್ರೀಃ ॥

ಶ್ರೀ ರಾಮಕಥಾಮಂಜರಿ

॥ ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ ॥

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಮ್ ॥

ಬಾಲಕಾಂಡ

೧

ನಾರದರು ಸಂಕ್ಷೇಪವಾಗಿ ಶ್ರೀರಾಮ ಚರಿತೆಯನ್ನು ವಾಲ್ಮೀಕಿ ಮುನಿಗಳಿಗೆ ಹೇಳುವುದು. ವ್ಯಾಧನಿಂದ ಕ್ರೌಂಚಪಕ್ಷಿಯ ಹನನ. ಬ್ರಹ್ಮನ ಆಜ್ಞೆಯಂತೆ ವಾಲ್ಮೀಕಿ ಮುನಿಗಳು ಶ್ರೀಮದ್ರಾಮಾಯಣವನ್ನು ರಚಿಸುವುದು.

ಒಂದು ದಿನ ವಾಲ್ಮೀಕಿ ಮುನಿಗಳಿಗೆ ನಾರದ ಮಹರ್ಷಿಗಳ ದರ್ಶನವಾಯಿತು. ಅವರಿಬ್ಬರೂ ಸಂಭಾಷಿಸುತ್ತಿರುವಾಗ ವಾಲ್ಮೀಕಿ ಮುನಿಗಳು ''ನಾರದರೆ, ನೀವು ತ್ರಿಲೋಕ ಸಂಚಾರಿಗಳಾದ ದೇವರ್ಷಿಗಳು. ನಿಮಗೆ ತಿಳಿಯದೇ ಇರತಕ್ಕದ್ದು ಯಾವುದೂ ಇಲ್ಲ. ಒಂದು ವಿಚಾರವನ್ನು ಕೇಳಬೇಕೆಂದಿದ್ದೇನೆ'' ಎಂದರು. ನಾರದರು ''ಅದೇನು ಹೇಳಿರಿ, ನನಗೆ ಗೊತ್ತಿದ್ದರೆ ತಿಳಿಸುವೆನು'' ಎಂದರು. ಆಗ ವಾಲ್ಮೀಕಿ ಮುನಿಗಳು ''ಧರ್ಮಶಾಸ್ತ್ರದಲ್ಲಿಯೂ, ನೀತಿ ಶಾಸ್ತ್ರದಲ್ಲಿಯೂ ಸಜ್ಜನರ ಲಕ್ಷಣಗಳನ್ನು ವಿಶೇಷವಾಗಿ ವರ್ಣಿಸಿದ್ದಾರೆ. ಆ ಎಲ್ಲ ಸದ್ಗುಣಗಳೂ ಒಬ್ಬ ಪುರುಷನಲ್ಲಿ ಇರಲು ಸಾಧ್ಯವೆ? ಕಾಡಿನಲ್ಲಿರುವ ಋಷಿಗಳಲ್ಲಿ ಕೆಲವರು ಹಾಗೆ ಇದ್ದಾರು. ಆದರೆ ಜನಸಂಸರ್ಗದಲ್ಲಿದ್ದು ಲೋಕದ ವ್ಯವಹಾರದಲ್ಲಿ ನಿರತನಾದವನಿಗೆ ಆ ಎಲ್ಲ ಗುಣಗಳನ್ನೂ ಅಳವಡಿಸಿಕೊಳ್ಳಲು ಆದೀತೆ? ಈ ಚಿಂತೆಯು ನನ್ನನ್ನು ಬಾಧಿಸುತ್ತಿದೆ'' ಎಂದರು. ಅದಕ್ಕೆ ನಾರದರು ''ಯಾವ ಯಾವ ಗುಣಗಳನ್ನು ಒಬ್ಬ ಮನುಷ್ಯನಲ್ಲಿ ನೀವು ನಿರೀಕ್ಷಿಸುತ್ತೀರಿ?'' ಎಂದರು. ವಾಲ್ಮೀಕಿ ಮುನಿಗಳು ''ಆತನು ಧರ್ಮಜ್ಞನೂ, ಕೃತಜ್ಞನೂ, ಸತ್ಯವಾದಿಯೂ ಆಗಿರಬೇಕು. ಸರ್ವಪ್ರಾಣಿಗಳಿಗೂ ಹಿತವನ್ನು ಬಯಸಬೇಕು. ವಿದ್ವಾಂಸನೂ, ಸುಂದರನೂ, ಜಿತೇಂದ್ರಿಯನೂ, ಮಹಾವೀರನೂ ಆಗಿರಬೇಕು. ತನ್ನ ಜೀವನದಲ್ಲಿ ಯಾವ ಸಂದರ್ಭದಲ್ಲಿಯೂ ಧರ್ಮಕ್ಕೆ ವಿರುದ್ಧವಾಗಿ ನಡೆಯದೆ ಎಲ್ಲ ಕಷ್ಟಗಳನ್ನೂ ತಾಳ್ಮೆಯಿಂದ ಸಹಿಸಿಕೊಳ್ಳತಕ್ಕವನಾಗಿರಬೇಕು. ಯಾರ

ವಿಷಯದಲ್ಲಿಯೂ ಮಾತ್ಸರ್ಯವನ್ನಿಡದೆ ಅನ್ಯರ ಹಿತಕ್ಕಾಗಿ ತನ್ನ ಸುಖವನ್ನು ತ್ಯಾಗ ಮಾಡಲು ಸಿದ್ಧನಾಗಿರಬೇಕು. ಆಸ್ತಿಕನೂ ಕರ್ಮಫಲದಲ್ಲಿ ನಂಬಿಕೆಯುಳ್ಳವನೂ ಆಗಿರಬೇಕು. ಆತನಲ್ಲಿ ಯಾವ ಕಳಂಕವೂ ಇರಕೂಡದು'' ಎಂದರು. ಆಗ ನಾರದರು ಸ್ವಲ್ಪ ಹೊತ್ತು ಆಲೋಚಿಸಿ ''ಮುನಿಗಳೆ, ನೀವು ಸಕಲ ಸದ್ಗುಣಗಳನ್ನೂ ಒಬ್ಬನಲ್ಲಿ ನಿರೀಕ್ಷಿಸುತ್ತೀರಿ. ಅಂತಹ ವ್ಯಕ್ತಿಗಳು ದುರ್ಲಭರೇ ಸರಿ. ಆದರೂ ಒಬ್ಬ ಮಹಾಪುರುಷನ ಸ್ಮರಣೆ ನನಗೆ ಬರುತ್ತಿದೆ. ಆತನಲ್ಲಿ ನೀವು ನಿರೀಕ್ಷಿಸುವ ಸಮಸ್ತ ಸದ್ಗುಣಗಳೂ ನೆಲೆಸಿವೆ ಎಂದು ಧೈರ್ಯದಿಂದ ಹೇಳುತ್ತೇನೆ. ಆತನೇ ಅಯೋಧ್ಯಾಧಿಪತಿಯಾದ ಶ್ರೀರಾಮ'' ಎಂದು ನುಡಿದರು. ಅನಂತರ ಶ್ರೀರಾಮನ ಚರಿತೆಯನ್ನು ಸಂಕ್ಷೇಪವಾಗಿ ವಾಲ್ಮೀಕಿ ಮುನಿಗಳಿಗೆ ಹೇಳಿ ಹೊರಟುಹೋದರು.

ವಾಲ್ಮೀಕಿ ಮುನಿಗಳಿಗೆ ಶ್ರೀರಾಮನ ಪರಿಚಯವಿತ್ತು. ಆತನ ಪತ್ನಿಯೂ ಗರ್ಭಿಣಿಯೂ ಆದ ಸೀತಾದೇವಿಯನ್ನು ತಮ್ಮ ಆಶ್ರಮದಲ್ಲಿ ಮಗಳಂತೆ ವಾತ್ಸಲ್ಯದಿಂದ ಪೋಷಿಸಿದ್ದರು. ಅಲ್ಲದೆ ಶ್ರೀರಾಮನು ವನವಾಸದಲ್ಲಿದ್ದಾಗ ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಹೋಗಿದ್ದನು. ಅವರ ಮನಸ್ಸಿನಲ್ಲಿ ಶ್ರೀರಾಮನೇ ಸಕಲ ಸದ್ಗುಣಭರಿತನೆಂದು ಹೊಳೆದಿತ್ತು. ಆದರೂ ನಾರದರಂತಹ ಮಹಾತ್ಮರ ಸಮ್ಮತಿಯು ಅದಕ್ಕಿದೆಯೆ? ಎಂಬುದನ್ನು ತಿಳಿಯುವುದು ಅವರ ಉದ್ದೇಶವಾಗಿತ್ತು. ಅನಂತರ ಅದೇ ವಿಷಯವನ್ನು ಚಿಂತಿಸುತ್ತ ತಮ್ಮ ಆಶ್ರಮಕ್ಕೆ ಹೋದರು. ಮಧ್ಯಾಹ್ನದ ಸ್ನಾನಕ್ಕೆ ಸಮಯವಾದ್ದರಿಂದ ಹತ್ತಿರದಲ್ಲಿದ್ದ ತಮಸಾನದಿಗೆ ಸ್ನಾನಕ್ಕಾಗಿ ಹೊರಟರು. ಅವರ ಶಿಷ್ಯನಾದ ಭರದ್ವಾಜನು ಸ್ನಾನಾಹ್ನಿಕ ಸಾಮಗ್ರಿಗಳನ್ನು ತೆಗೆದುಕೊಂಡು ಅವರ ಹಿಂದೆ ನಡೆದನು.

ತಮಸಾ ನದಿಯ ಸಮೀಪಕ್ಕೆ ಹೋಗಿ ಸ್ನಾನಯೋಗ್ಯವಾದ ಒಂದು ಸ್ಥಳವನ್ನು ಕಂಡು ವಾಲ್ಮೀಕಿ ಮುನಿಗಳು ''ವತ್ಸ-ಭರದ್ವಾಜ, ಇಲ್ಲಿ ನೋಡು. ಈ ಮಡುವಿನಲ್ಲಿ ನೀರು ಸತ್ಪುರುಷರ ಮನಸ್ಸಿನಂತೆ ತಿಳಿಯಾಗಿದೆ. ಸ್ನಾನ ಸಾಮಗ್ರಿಗಳನ್ನು ಇಲ್ಲಿಡು. ನಾನು ಇಲ್ಲಿಯೇ ಸ್ನಾನ ಮಾಡುವೆನು'' ಎಂದರು. ಆಮೇಲೆ ತಮಸಾ ನದಿಯ ತೀರದಲ್ಲಿ ಪ್ರಕೃತಿ ಸೌಂದರ್ಯವನ್ನು ನೋಡುತ್ತಾ ಸ್ವಲ್ಪ ಕಾಲ ತಿರುಗಾಡಿದರು. ಅಲ್ಲೊಂದು ಮರದ ಮೇಲೆ ಎರಡು ಕ್ರೌಂಚಪಕ್ಷಿಗಳು ಚಿಲಿಪಿಲಿ ಗುಟ್ಟುತ್ತ ವಿಹರಿಸುತ್ತಿದ್ದವು. ಅವು ಗಂಡು ಹೆಣ್ಣು ಕ್ರೌಂಚಪಕ್ಷಿಗಳು. ಅವುಗಳ ಮನೋಹರವಾದ ಲೀಲೆಯನ್ನು ನೋಡುತ್ತಿರುವಾಗ, ಒಬ್ಬ ಬೇಡನು ಗಂಡು ಹಕ್ಕಿಗೆ ಬಾಣವನ್ನು ಹೊಡೆದು ಉರುಳಿಸಿದನು. ಅದು ದೊಪ್ಪನೆ ನೆಲದ ಮೇಲೆ ಬಿದ್ದಿತು. ರಕ್ತ ಹರಡಿತು. ಹೆಣ್ಣು ಹಕ್ಕಿಯು ಅದರ ಸುತ್ತಲೂ ಹಾರಾಡುತ್ತ ದುಃಖದಿಂದ ಗೋಳಿಡುತ್ತಾ

ಕೂಗತೊಡಗಿತು. ವಾಲ್ಮೀಕಿ ಮುನಿಗಳು ಅದನ್ನು ನೋಡಿ ಶೋಕಾವಿಷ್ಟರಾಗಿ, ಹಕ್ಕಿಯನ್ನು ಹೊಡೆದವನು ಯಾರೆಂದು ನೋಡಿದಾಗ ಒಬ್ಬ ಬೇಡನು ಕಾಣಿಸಿದನು. ಅವರು ಸಿಟ್ಟಿನಿಂದ ''ಎಲೈ ಬೇಡನೆ, ಸಂತೋಷದಿಂದ ಹಾರಾಡುತ್ತಿದ್ದ ಈ ಹಕ್ಕಿಯನ್ನು ಹೊಡೆದು ಹೆಣ್ಣು ಹಕ್ಕಿಯನ್ನು ನೋಯಿಸಿದ್ದೀಯೆ. ನೀನು ಬಹಳ ಕಾಲ ಬದುಕಬಾರದು!'' ಎಂದುಬಿಟ್ಟರು. ಅವರ ಮುಖದಿಂದ ಬಂದ ಮಾತು ಇದು –

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ ।
ಯತ್ ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥

ಅನಂತರ ಆ ದೃಶ್ಯವನ್ನು ನೋಡಲಾರದೆ ಮುನಿಗಳು ಸ್ನಾನಕ್ಕಾಗಿ ಹಿಂದಿರುಗಿದರು. ಅವರ ಮನಸ್ಸಿನಲ್ಲಿ ''ಇದೇನು? ನನ್ನ ಬಾಯಿಯಿಂದ ಹೊರಟ ಮಾತು ಸರಿಯಾದ ಒಂದು ಶ್ಲೋಕವೇ ಆಗಿಬಿಟ್ಟಿತಲ್ಲ!'' ಎಂದು ವಿಸ್ಮಯವಾಯಿತು. ಆ ಶ್ಲೋಕವನ್ನು ಶಿಷ್ಯನಾದ ಭರದ್ವಾಜನಿಗೆ ಹೇಳಿದರು. ಆತನು ಅಚ್ಚರಿಯಿಂದ ಆ ಶ್ಲೋಕವನ್ನು ಹೇಳಿಕೊಳ್ಳತೊಡಗಿದನು.

ಆಮೇಲೆ ಋಷಿಗಳು ತಮಸಾ ನದಿಯಲ್ಲಿ ಸ್ನಾನ ಮಾಡಿ ಮಾಧ್ಯಾಹ್ನಿಕವನ್ನು ಮುಗಿಸಿ ಶಿಷ್ಯನೊಡನೆ ಆಶ್ರಮಕ್ಕೆ ಹಿಂದಿರುಗಿ ಬಂದರು. ಬರುವಾಗ ತಾವು ನಾರದರೊಡನೆ ಮಾತನಾಡಿದ್ದು, ಕ್ರೌಂಚಪಕ್ಷಿಯಲ್ಲೊಂದನ್ನು ಬೇಡನು ಹೊಡೆದದ್ದು, ತಮ್ಮ ಬಾಯಿಯಿಂದ ಹೊರಟ ಮಾತು ಶ್ಲೋಕವೇ ಆಗಿಬಿಟ್ಟಿದ್ದು–ಇದನ್ನೇ ಗುಣಿಸುತ್ತಿದ್ದರು. ತಮ್ಮ ಆಶ್ರಮಕ್ಕೆ ಬಂದು ವಿಶ್ರಮಿಸುತ್ತಿದ್ದಾಗ ಇನ್ನೊಂದು ಆಶ್ಚರ್ಯದ ಘಟನೆ ನಡೆಯಿತು. ಸಾಕ್ಷಾತ್ ಬ್ರಹ್ಮದೇವನೇ ಪ್ರತ್ಯಕ್ಷನಾಗಿ ಆಶ್ರಮದಲ್ಲಿ ಕಾಣಿಸಿಕೊಂಡನು. ಮುನಿಗಳು ಸಂಭ್ರಮದಿಂದ ಎದ್ದು ಬ್ರಹ್ಮನಿಗೆ ನಮಸ್ಕಾರ ಮಾಡಿ ಕುಳಿತುಕೊಳ್ಳಲು ಪೀಠವನ್ನಿತ್ತರು. ಬ್ರಹ್ಮನು ಅದರಲ್ಲಿ ಕುಳಿತು ಮುಗುಳ್ನಗೆ ಬೀರುತ್ತಾ ''ವಾಲ್ಮೀಕಿ, ನೀನು 'ಮಾ ನಿಷಾದ' ಎಂಬ ಶ್ಲೋಕವನ್ನೇ ಚಿಂತಿಸುತ್ತಿದ್ದೀಯಲ್ಲವೆ ? ಛಂದೋರೂಪವಾದ ಆ ಸರಸ್ವತಿಯು ನನ್ನ ಇಚ್ಛೆಯಂತೆಯೇ ಪ್ರವೃತ್ತವಾಗಿದೆ. ನೀನು ನಾರದರಿಂದ ಶ್ರೀರಾಮನ ವಿಷಯವನ್ನು ಕೇಳಿದ್ದೀಯೆ. ನಿನ್ನಿಂದ ಒಂದು ಮಹಾಕಾರ್ಯವಾಗಬೇಕಾಗಿದೆ. ಆ ಮಹಾಪುರುಷನ ಚರಿತ್ರೆಯನ್ನು ನೀನು ವಿಸ್ತಾರವಾಗಿ ನಿರೂಪಿಸಬೇಕು. ಅದೊಂದು ಮಹಾಕಾವ್ಯವೇ ಆಗಬೇಕು. ಕಾವ್ಯವಾಗಿದ್ದರೆ, ನಾನಾ ವಿಧ ಸುಂದರ ವರ್ಣನೆಗಳಿರುವುದರಿಂದ ಅದನ್ನೋದಲು ಜನರಿಗೆ ಅಪೇಕ್ಷೆಯುಂಟಾಗುತ್ತದೆ. ಜನರು ಆ ರಾಮಾಯಣ ಮಹಾಕಾವ್ಯವನ್ನೋದಿ ಅಲ್ಲಿ ಚಿತ್ರಿತವಾಗುವ ಸದ್ಗುಣಗಳನ್ನು ತಮ್ಮಲ್ಲಿಯೂ ಅಳವಡಿಸಿಕೊಳ್ಳಲಿ. ಶ್ರೀರಾಮನ

ದಿವ್ಯಕಥೆಯನ್ನು ಓದಿ ಶ್ರೇಯೋಭಾಗಿಗಳಾಗಲಿ ಎಂದು ನನ್ನ ಇಚ್ಛೆಯಾಗಿದೆ. ಅದಕ್ಕೆ ಸಂಬಂಧಿಸಿದ ಸಮಸ್ತ ವೃತ್ತಾಂತಗಳೂ ನಿನಗೆ ಹೊಳೆಯಲಿ. ನೀನು ಶ್ರೀಮದ್ರಾಮಾಯಣ ಮಹಾಕಾವ್ಯವನ್ನು ವಿರಚಿಸಿ ಕೃತಕೃತ್ಯನಾಗು. ಅದು ಆದಿಕಾವ್ಯವೆಂದು ಪ್ರಸಿದ್ಧವಾಗಲಿ. ಇದು ನನ್ನ ಆಜ್ಞೆ'' ಎಂದು ತಿಳಿಸಿ ಅಂತರ್ಧಾನ ಹೊಂದಿದನು.

ವಾಲ್ಮೀಕಿ ಮುನಿಗಳು ಬ್ರಹ್ಮದೇವನ ಆ ನುಡಿಯನ್ನು ಕೇಳಿ ವಿಸ್ಮಿತರಾದರು. ಹೃದಯದಲ್ಲಿ ಒಂದು ಬಗೆಯ ಆನಂದವು ಉಕ್ಕಿತು. ''ಈ ದಿನ ಎಂತಹ ಆಶ್ಚರ್ಯಕರವಾದ ಪ್ರಸಂಗಗಳು ಸಂಭವಿಸಿದವು! ಸಾಕ್ಷಾತ್ ಬ್ರಹ್ಮದೇವನೇ ನನ್ನ ಆಶ್ರಮಕ್ಕೆ ಬಂದು ಹೀಗೆ ನುಡಿದನಲ್ಲ. ಅವನ ಆಜ್ಞೆಯನ್ನು ನಾನು ಅವಶ್ಯವಾಗಿ ಪಾಲಿಸಬೇಕು'' ಎಂದು ನಿಶ್ಚಯಿಸಿಕೊಂಡರು.

ಮಾರನೆಯ ದಿನ ಪ್ರಾತಃಕಾಲದಲ್ಲಿ ಆಹ್ನಿಕಗಳನ್ನು ಮುಗಿಸಿ ರಾಮಾಯಣ ಕಥೆಯನ್ನು ಆರಂಭಿಸಬೇಕೆಂದು ವಾಲ್ಮೀಕಿ ಮುನಿಗಳು ಸಿದ್ಧರಾದರು. ನಾರದರು ಸಂಕ್ಷೇಪವಾಗಿ ಹೇಳಿದ್ದಲ್ಲದೆ ಇನ್ನೂ ವಿಶೇಷವಾದದ್ದು ಏನಿದೆ ಎಂದು ತಿಳಿಯುವ ಇಚ್ಛೆಯುಂಟಾಯಿತು. ಆಗ ಅವರು ಆಚಮನ ಮಾಡಿ ಪೂರ್ವಾಭಿಮುಖವಾಗಿ ಹರಡಿದ ದರ್ಭೆಗಳ ಮೇಲೆ ನಿಂತು ಕೈಮುಗಿದುಕೊಂಡು ತಪೋಬಲದಿಂದ ಲಭಿಸಿದ ಜ್ಞಾನದೃಷ್ಟಿಯಿಂದ ಶ್ರೀರಾಮನ ವಿಷಯವನ್ನು ವಿಶದವಾಗಿ ನೋಡಿದರು. ಶ್ರೀರಾಮ, ಲಕ್ಷ್ಮಣ, ಸೀತೆ, ದಶರಥ ಮಹಾರಾಜ, ಅವನ ಪತ್ನಿಯರು ಮತ್ತು ಪ್ರಜೆಗಳಿಗೆ ಸಂಬಂಧಿಸಿದ ಎಲ್ಲ ವೃತ್ತಾಂತಗಳೂ ಅವರಿಗೆ ಗೋಚರಿಸಿದವು. ಶ್ರೀರಾಮನೇ ಮೊದಲಾದವರು ನಕ್ಕದ್ದು, ಮಾತನಾಡಿದ್ದು, ಹೋದದ್ದು, ಮಾಡಿದ್ದು – ಇವೆಲ್ಲವೂ ಯಥಾವತ್ತಾಗಿ ಅವರ ಜ್ಞಾನದೃಷ್ಟಿಗೆ ಹೊಳೆಯಿತು. ಶ್ರೀರಾಮನ ವನವಾಸ, ಸೀತಾಪಹರಣ, ಸುಗ್ರೀವ ಸಖ್ಯ, ರಾವಣ ಸಂಹಾರ, ಅಯೋಧ್ಯೆಯಲ್ಲಿ ಪಟ್ಟಾಭಿಷೇಕ – ಇವೆಲ್ಲವೂ ಅಂಗೈಯಲ್ಲಿರುವ ನೆಲ್ಲಿಕಾಯಿಯಂತೆ ಅವರಿಗೆ ಕಾಣಿಸಿದವು. ಅನಂತರ 'ಮಾ ನಿಷಾದ' ಎಂಬ ಶ್ಲೋಕವು ನೆನಪಿಗೆ ಬಂದಿತು. ಅದರಂತೆಯೇ ಶ್ಲೋಕಬದ್ಧವಾಗಿ ರಾಮಾಯಣ ಕಥೆಯನ್ನು ರಚಿಸಬೇಕೆಂದು ನಿರ್ಣಯಿಸಿ, ಭಗವಂತನನ್ನು ಧ್ಯಾನಿಸಿ ಬರೆಯಲಾರಂಭಿಸಿದರು. ಶ್ರೀರಾಮನ ಜನನದಿಂದ ಪಟ್ಟಾಭಿಷೇಕದವರೆಗೆ ಗ್ರಂಥ ರಚನೆಯಾಯಿತು. ಅನಂತರ ಭವಿಷ್ಯತ್ತನ್ನು ಒಳಗೊಂಡ ಉತ್ತರ ಕಾಂಡದ ರಚನೆಯಾಯಿತು. ಒಟ್ಟು ಶ್ರೀಮದ್ರಾಮಾಯಣವನ್ನು ಇಪ್ಪತ್ತು ನಾಲ್ಕು ಸಾವಿರ ಶ್ಲೋಕಗಳಿಂದ ವಿರಚಿಸಿದರು.

೨

ದಶರಥನು ಪುತ್ರಕಾಮೇಷ್ಟಿ ಯಾಗವನ್ನು ಮಾಡುವುದು. ಶ್ರೀರಾಮ, ಭರತ, ಲಕ್ಷ್ಮಣ ಮತ್ತು ಶತ್ರುಘ್ನರ ಜನನ.

ಈ ಸಮಸ್ತ ಭೂಮಂಡಲವನ್ನೂ ಮಹಾತ್ಮರಾದ ಇಕ್ಷ್ವಾಕು ವಂಶದ ಮಹಾರಾಜರು ವೈಭವದಿಂದ ಆಳಿಕೊಂಡು ಬರುತ್ತಿದ್ದರು. ಸರಯೂ ನದೀ ತೀರದಲ್ಲಿ ಧನ ಧಾನ್ಯ ಸಮೃದ್ಧವಾದ ಕೋಸಲವೆಂಬ ದೊಡ್ಡ ರಾಜ್ಯವಿತ್ತು, ಅಯೋಧ್ಯೆಯು ಅದರ ರಾಜಧಾನಿ. ಇಕ್ಷ್ವಾಕು ವಂಶದ ರಾಜರು ಈ ನಗರದಲ್ಲಿದ್ದು ರಾಜ್ಯಭಾರವನ್ನು ನಡೆಸುತ್ತಿದ್ದರು. ಲೋಕಪ್ರಸಿದ್ಧವಾದ ಆ ನಗರವು ಹನ್ನೆರಡು ಯೋಜನ ಉದ್ದವಾಗಿಯೂ ಮೂರು ಯೋಜನ ಅಗಲವಾಗಿಯೂ ಇತ್ತು, ನಗರದಲ್ಲಿ ದೊಡ್ಡ ದೊಡ್ಡ ರಸ್ತೆಗಳಿದ್ದವು. ರಾಜಬೀದಿಗಳನ್ನು ನಿತ್ಯವೂ ಸ್ವಚ್ಛಮಾಡಿ ನೀರನ್ನು ಚಿಮುಕಿಸಿ ಹೂಗಳನ್ನು ಹರಡುತ್ತಿದ್ದರು. ದಶರಥ ಮಹಾರಾಜನು ಆ ದೊಡ್ಡ ರಾಜ್ಯವನ್ನು ಪರಿಪಾಲಿಸುತ್ತಾ ಸ್ವರ್ಗದಲ್ಲಿ ದೇವೇಂದ್ರನಿರುವಂತೆ ಆ ನಗರದಲ್ಲಿ ವಾಸವಾಗಿದ್ದನು. ಪ್ರಜೆಗಳಿಂದ ನಿಬಿಡವಾದ ಆ ಪಟ್ಟಣವನ್ನು ಹಳ್ಳತಿಟ್ಟುಗಳಿಲ್ಲದ ಸಮಭೂಮಿಯಲ್ಲಿ ಕಟ್ಟಲಾಗಿತ್ತು.

ಆ ದಶರಥ ಮಹಾರಾಜನು ವಿದ್ವಾಂಸರೂ, ಶೂರನೂ, ತೇಜಸ್ವಿಯೂ ಆಗಿ ರಾಜ್ಯಭಾರ ಮಾಡುತ್ತಾ ಸಕಲ ಪ್ರಜೆಗಳಿಗೆ ಪ್ರೀತಿಪಾತ್ರನಾಗಿದ್ದನು. ಧರ್ಮಾತ್ಮನಾದ ಆತನು ರಾಜರ್ಷಿ ಎಂದು ಖ್ಯಾತಿಯನ್ನು ಪಡೆದಿದ್ದನು. ತನಗೆ ಪೂರ್ವಜರಾದ ಇಕ್ಷ್ವಾಕು, ಕಕುತ್ಸ್ಥ, ರಘು, ತಂದೆಯಾದ ಅಜಮಹಾರಾಜ ಇವರಿಗೆ ಸಮಾನನಾದ ಮಹಾರಾಜನೆನಿಸಿದ್ದನು. ಅವನ ಪ್ರಜೆಗಳೆಲ್ಲರೂ ರಾಜನಲ್ಲಿ ಅನುರಕ್ತನಾಗಿ ತಮ್ಮ ತಮ್ಮ ಕರ್ತವ್ಯಗಳನ್ನು ಶ್ರದ್ಧೆಯಿಂದ ಮಾಡುತ್ತಾ ಸಂತೋಷದಿಂದ ಇದ್ದರು. ಎಲ್ಲರೂ ಸಂತೃಪ್ತರು. ಯಾರೂ ಧರ್ಮಮಾರ್ಗವನ್ನು ಬಿಟ್ಟು ಹೋಗತಕ್ಕವರಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಎಂಬ ಚಾತುರ್ವರ್ಣ್ಯದವರೂ ಯಥೋಚಿತವಾದ ತಮ್ಮ ಕರ್ತವ್ಯಗಳನ್ನು ಆಸಕ್ತಿಯಿಂದ ನೆರವೇರಿಸುತ್ತಿದ್ದರು.

ಆ ದಶರಥನಿಗೆ ಬುದ್ಧಿಶಾಲಿಗಳೂ ಕರ್ತವ್ಯದಕ್ಷರೂ ಆದ ಎಂಟು ಮಂದಿ ಅಮಾತ್ಯರಿದ್ದರು. ಅವರು ಯಾರೆಂದರೆ – ಧೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧಕ, ಅಶೋಕ, ಮಂತ್ರಪಾದ ಮತ್ತು ಸುಮಂತ್ರ. ಅವರಲ್ಲಿ ಸುಮಂತ್ರನು ದಶರಥನಿಗೆ ಅತ್ಯಂತ ಆಪ್ತನಾದ ಮಂತ್ರಿಯಾಗಿದ್ದನು. ದಶರಥನಿಗೆ ವಸಿಷ್ಠ, ವಾಮದೇವ – ಎಂಬ ಇಬ್ಬರು ಮುಖ್ಯಪುರೋಹಿತರಾಗಿದ್ದರು.

ಅವನು ಸ್ವದೇಶ ಮತ್ತು ಪರದೇಶಗಳ ವೃತ್ತಾಂತವನ್ನು ಗೂಢಚಾರರ ಮೂಲಕ ತಿಳಿದುಕೊಳ್ಳುತ್ತಾ ಧರ್ಮದಿಂದ ರಾಜ್ಯವಾಳುತ್ತಿದ್ದನು. ಆತನ ಆಸ್ಥಾನದಲ್ಲಿ ಸಾಮಂತರಾಜರು ರಾಜದರ್ಶನಕ್ಕಾಗಿ ಬಂದು ಕಾದಿರುತ್ತಿದ್ದರು.

ದಶರಥನಿಗೆ ಕೌಸಲ್ಯೆ, ಸುಮಿತ್ರೆ, ಕೈಕೇಯಿ – ಎಂಬ ಮೂವರು ಪತ್ನಿಯರು. ಅವರಲ್ಲಿ ಹಿರಿಯಳಾದ ಕೌಸಲ್ಯೆ ಪಟ್ಟದ ರಾಣಿ. ಹೀಗಿದ್ದರೂ ತನಗೆ ಸಂತತಿಯಾಗಲಿಲ್ಲವೆಂಬ ಒಂದು ಕೊರತೆ ದಶರಥನನ್ನು ಬಾಧಿಸುತ್ತಿತ್ತು. ದೈವ ಸಹಾಯವಿಲ್ಲದೆ ತನಗೆ ಸಂತತಿಯಾಗದೆಂದು ತಿಳಿದು ಅದಕ್ಕಾಗಿ ಅಶ್ವಮೇಧ ಯಾಗವನ್ನು ಮಾಡಬೇಕೆಂದು ಅವನಿಗೆ ಇಚ್ಛೆಯಾಯಿತು. ಇದನ್ನು ವಸಿಷ್ಠ ಮುನಿಗಳಿಗೆ ತಿಳಿಸಲಾಗಿ ಅವರು ಅನುಮೋದಿಸಿದರು. ಆ ಸಮಯದಲ್ಲಿ ಸುಮಂತ್ರನೆಂಬ ಆಪ್ತ ಮಂತ್ರಿಯು ದಶರಥನಿಗೆ ಈ ರೀತಿಯಾಗಿ ನಿವೇದಿಸಿದನು. ''ಮಹಾರಾಜ, ಒಂದು ಸಂಗತಿಯನ್ನು ನಿನಗೆ ತಿಳಿಸಬೇಕೆಂದಿದ್ದೇನೆ. ನಿನಗೆ ಮಿತ್ರನಾದ ರೋಮಪಾದ ರಾಜನಿದ್ದಾನಷ್ಟೆ. ಆತನ ರಾಜ್ಯದಲ್ಲಿ ಒಂದು ಸಲ ದೊಡ್ಡ ದುರ್ಭಿಕ್ಷವುಂಟಾಯಿತು. ಆತನ ಪುರೋಹಿತರು ''ಋಷ್ಯಶೃಂಗನೆಂಬ ಋಷಿಕುಮಾರನನ್ನು ಕರೆಸಬೇಕು. ಆತನು ಇರುವ ಕಡೆಯಲ್ಲಿ ಸದಾ ಸುವೃಷ್ಟಿ ಸಮೃದ್ಧಿಗಳು ಇರುತ್ತವೆ. ಆತನು ವಿಭಾಂಡಕ ಮುನಿಯ ಪುತ್ರನು. ತಂದೆಯ ಆಜ್ಞೆಯಂತೆ ಯಾವಾಗಲೂ ಆಶ್ರಮದಲ್ಲಿಯೇ ಇದ್ದು ತಪಸ್ಸನ್ನಾಚರಿಸುತ್ತಾ ಮಹಾತೇಜಸ್ವಿಯಾಗಿದ್ದಾನೆ. ಅವನು ಬ್ರಹ್ಮಚರ್ಯದಿಂದ ವಿಖ್ಯಾತನು. ಸ್ತ್ರೀಯರ ಮುಖವನ್ನೇ ನೋಡದವನು. ಆ ಋಷ್ಯಶೃಂಗನನ್ನು ಉಪಾಯದಿಂದ ನಿನ್ನ ರಾಜ್ಯಕ್ಕೆ ಕರೆಸು'' ಎಂದರು. ಆಗ ದಶರಥನು ಋಷ್ಯಶೃಂಗನನ್ನು ರೋಮಪಾದನು ಹೇಗೆ ಬರಮಾಡಿಕೊಂಡನು ಎಂದು ಕೇಳಲಾಗಿ ಸುಮಂತ್ರನು ಹೇಳಿದನು. ''ಮಹಾರಾಜ, ಋಷ್ಯಶೃಂಗನು ತಂದೆಯ ಆಜ್ಞೆಯಂತೆ ಆಶ್ರಮದಲ್ಲಿಯೇ ಇರತಕ್ಕವನು. ಅವನ ಬ್ರಹ್ಮಚರ್ಯಕ್ಕೆ ವಿಘ್ನಬಂದೀತೆಂದು ವಿಭಾಂಡಕ ಮುನಿಯು ಮಗನನ್ನು ಹೊರಗೆ ಕಳಿಸುತ್ತಿರಲಿಲ್ಲ. ಅದಕ್ಕಾಗಿ ರೋಮಪಾದನು ತನ್ನ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿ ಋಷ್ಯಶೃಂಗನು ಬರುವಂತೆ ಉಪಾಯ ಮಾಡಬೇಕೆಂದು ಹೇಳಿದನು. ಮಂತ್ರಿಗಳಿಗೆ ವಿಭಾಂಡಕನ ನಿಯಮವು ಅರಿವಿನಲ್ಲಿತ್ತು. ಆದ್ದರಿಂದ ಕೆಲವು ವೇಶ್ಯೆಯರನ್ನು ಈ ಕಾರ್ಯಕ್ಕಾಗಿ ನಿಯೋಜಿಸಿದರು. ಆ ಸ್ತ್ರೀಯರು ಯಾವ ತಂತ್ರವನ್ನು ಅನುಸರಿಸಬೇಕೆಂಬುದನ್ನೂ ಹೇಳಿಕೊಟ್ಟರು. ಅದಕ್ಕೆ ಆ ವೇಶ್ಯೆಯರು ಸಮ್ಮತಿಸಿ ತಮ್ಮ ಚಾತುರ್ಯವನ್ನು ಬಳಸಿ ಆ ಕಾರ್ಯದಲ್ಲಿ ಪ್ರವೃತ್ತರಾದರು. ಆ ಮುನಿಯ ಆಶ್ರಮದ ಬಳಿಗೆ ಹೋಗಿ ವಿಭಾಂಡಕ ಋಷಿ ಇಲ್ಲದ ವೇಳೆಯಲ್ಲಿ ಆಶ್ರಮವನ್ನು ಪ್ರವೇಶಿಸಿದರು. ಸ್ತ್ರೀಯರನ್ನೇ ಕಂಡರಿಯದ ಋಷ್ಯಶೃಂಗನು ಅವರು

ಯಾರೋ ಅತಿಥಿಗಳೆಂದೂ ತಪಸ್ವಿಗಳೆಂದೂ ಭಾವಿಸಿ ಸತ್ಕರಿಸಿದನು. ಆ ವನಿತೆಯರು ಸಂಗೀತವನ್ನು ಹಾಡಿ ಮಧುರವಾಗಿ ಮಾತನಾಡುತ್ತಾ ತಾವು ತಂದಿದ್ದ ಲಾಡು ಮೊದಲಾದ ಭಕ್ಷ್ಯಗಳನ್ನು ಆತನಿಗೆ ಕೊಟ್ಟರು. ಮುಗ್ಧನಾದ ಆ ಋಷಿಕುಮಾರನು ಅವೆಲ್ಲವೂ ಹಣ್ಣುಗಳೆಂದು ಭಾವಿಸಿ, ಇವು ಎಲ್ಲಿ ಸಿಗುತ್ತವೆ ಎಂದು ಕೇಳಿದನು. ಆ ಸ್ತ್ರೀಯರು ಮುಗುಳ್ನಗೆ ಬೀರುತ್ತಾ ಇಂತಹ ಹಣ್ಣುಗಳು ನಮ್ಮ ಆಶ್ರಮದಲ್ಲಿ ಯಥೇಚ್ಛವಾಗಿ ದೊರೆಯುತ್ತವೆ ಎಂದು ಹೇಳಿದರು. ಋಷಿಕುಮಾರನು ಅದು ಸತ್ಯವೆಂದೇ ತಿಳಿದುಕೊಂಡನು. ವಿಭಾಂಡಕ ಮುನಿಯು ಬಂದಾನೆಂದು ಹೆದರಿ ಆ ಸ್ತ್ರೀಯರೆಲ್ಲರೂ ಬೇಗ ಬೇಗನೆ ಆಶ್ರಮದಿಂದ ನಿರ್ಗಮಿಸಿದರು. ಹೀಗೆ ಕೆಲವು ದಿನ ಗುಟ್ಟಾಗಿ ಆಶ್ರಮಕ್ಕೆ ಬಂದು ಮುಗ್ಧನಾದ ಋಷಿ ಕುಮಾರನನ್ನು ಮೋಹಗೊಳಿಸಿ ತಮ್ಮ ಆಶ್ರಮಕ್ಕೆ ಬರಬೇಕೆಂದು ಕರೆದರು. ಅದೇನನ್ನೂ ಅರಿಯದ ಆ ಋಷಿಕುಮಾರನು ಅವರ ಮಾತಿಗೆ ಒಪ್ಪಿಕೊಂಡು ಒಂದು ದಿನ ಅವರೊಡನೆ ಹೊರಟುಬಿಟ್ಟನು. ಆತನ ತಂದೆಯಾದ ವಿಭಾಂಡಕ ಮುನಿಯು ಯಾವುದೋ ಕಾರ್ಯನಿಮಿತ್ತವಾಗಿ ದೂರದ ಸ್ಥಳಕ್ಕೆ ಹೋಗಿದ್ದನು.

ಈ ಪ್ರಕಾರ ಆ ವೇಶ್ಯೆಯರು ಆ ಮುಗ್ಧಕುಮಾರನನ್ನು ರೋಮಪಾದನ ರಾಜಧಾನಿಗೆ ಕರೆತಂದರು. ಆತನು ರಾಜ್ಯದೊಳಗೆ ಕಾಲಿಡುತ್ತಲೇ ಸುವೃಷ್ಟಿಯಾಯಿತು. ದುರ್ಭಿಕ್ಷವು ತೊಲಗಿತು. ರಾಜನು ಸಂತೋಷದಿಂದ ಆ ಋಷಿಕುಮಾರನನ್ನು ಅರಮನೆಗೆ ಕರೆದುಕೊಂಡು ಹೋದನು. ಅಲ್ಲಿ ಋಷ್ಯಶೃಂಗನು ಕೆಲವು ದಿನಗಳವರೆಗೆ ಇದ್ದನು. ರೋಮಪಾದನು ತನ್ನ ಮಗಳಾದ ಶಾಂತಾ ಎಂಬ ಕನ್ಯೆಯನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡಿದನು. ಇದಿಷ್ಟೂ ಸಂಕ್ಷಿಪ್ತವಾದ ಕಥನ. ಈಗ ಋಷ್ಯಶೃಂಗನು ತನ್ನ ಪತ್ನಿಯೊಡನೆ ರೋಮಪಾದನ ಅರಮನೆಯಲ್ಲಿದ್ದಾನೆ'' ಎಂದನು.

ಅದನ್ನು ಕೇಳಿ ದಶರಥ ಮಹಾರಾಜನಿಗೆ ಪರಮಾನಂದವಾಯಿತು. ಆ ಋಷಿಯು ತನ್ನ ಅರಮನೆಗೆ ಬಂದರೆ ಇಷ್ಟಾರ್ಥವು ನೆರವೇರುವುದೆಂದು ಭಾವಿಸಿ ತನ್ನ ಪರಿವಾರದೊಡನೆ ರೋಮಪಾದನ ನಗರಕ್ಕೆ ಹೋಗಿ ಆ ರಾಜನನ್ನು ಕಂಡನು. ರೋಮಪಾದನು ದಶರಥನ ಮಿತ್ರನೇ ಆದ್ದರಿಂದ ಈತನ ಆಗಮನದಿಂದ ರೋಮಪಾದನಿಗೆ ಹರ್ಷವಾಯಿತು. ನಾಲ್ಕಾರು ದಿನಗಳವರೆಗೆ ಅವನ ಆತಿಥ್ಯವನ್ನು ಸ್ವೀಕರಿಸುತ್ತಾ ಇರಲಾಗಿ ರೋಮಪಾದನು ದಶರಥನನ್ನು ಋಷ್ಯಶೃಂಗನಿಗೂ ಶಾಂತಾದೇವಿಗೂ ಪರಿಚಯ ಮಾಡಿಸಿದನು. ಆಮೇಲೆ ತಾನು ಬಂದ ಉದ್ದೇಶವನ್ನು

ದಶರಥನು ರೋಮಪಾದನಿಗೆ ತಿಳಿಸಿ ತನ್ನ ನಗರಕ್ಕೆ ಬರುವಂತೆ ಋಷ್ಯಶೃಂಗನನ್ನು ಪ್ರಾರ್ಥಿಸಿಕೊಂಡನು. ಒಪ್ಪಿಗೆ ದೊರೆಯಿತು. ಋಷ್ಯಶೃಂಗನು ಪತ್ನಿಯಾದ ಶಾಂತಾದೇವಿಯೊಡನೆ ಹೊರಟು, ದಶರಥನ ಜೊತೆಗೆ ಅಯೋಧ್ಯಾ ನಗರಕ್ಕೆ ಆಗಮಿಸಿದನು. ಅವನ ಆಗಮನದಿಂದ ದಶರಥನಿಗೆ ಪರಮ ಹರ್ಷವಾಯಿತು. ಆ ದಂಪತಿಗಳನ್ನು ಅರಮನೆಗೆ ಸ್ವಾಗತಿಸಿ ಮುನಿಯ ಅನುಷ್ಠಾನಗಳಿಗೆ ಯೋಗ್ಯವಾದ ಏರ್ಪಾಡನ್ನು ಮಾಡಿದನು. ಶಾಂತಾದೇವಿಯು ದಶರಥನ ಅಂತಃಪುರಕ್ಕೆ ಹೋಗಿ ಕೌಸಲ್ಯೆ ಮೊದಲಾದವರನ್ನು ಕಂಡಳು. ಶಾಂತೆಯ ಆಗಮನದಿಂದ ಅವರೆಲ್ಲರೂ ಆನಂದತುಂದಿಲರಾದರು. ಅಂತಃಪುರವು ದೊಡ್ಡ ಸಂಭ್ರಮದಿಂದ ತುಂಬಿತು.*

ಹೀಗೆ ಸ್ವಲ್ಪ ದಿನಗಳಾದ ಮೇಲೆ ವಸಂತ ಕಾಲವು ಬಂದಿತು. ಆಗ ದಶರಥನಿಗೆ ಅಶ್ವಮೇಧ ಯಾಗವನ್ನು ನಡೆಸಬೇಕೆಂದು ಮನಸ್ಸಾಯಿತು. ಆತನು ತೇಜಸ್ವಿಯಾದ ಋಷ್ಯಶೃಂಗನಿಗೆ ತಲೆಬಾಗಿ ವಂದಿಸಿ ''ಮಹರ್ಷಿಯೇ ನನಗೆ ಸಂತತಿಯಾಗಿ ಕುಲವು ಉದ್ಧಾರವಾಗಬೇಕೆಂದು ಅಶ್ವಮೇಧ ಯಾಗವನ್ನು ಮಾಡಲು ಬಯಕೆಯಾಗಿದೆ. ಈ ಕಾರ್ಯದಲ್ಲಿ ನೀನು ಋತ್ವಿಜನಾಗಿ ಇದನ್ನು ನಡೆಸಿಕೊಡಬೇಕು'' ಎಂದು ಹೇಳಿದನು. ಋಷ್ಯಶೃಂಗನು ಅದಕ್ಕೆ ಒಪ್ಪಿದನು. ಆಮೇಲೆ ದಶರಥನು ವಸಿಷ್ಠ, ವಾಮದೇವ, ಮುಂತಾದ ಋಷಿಗಳಿಗೂ ಈ ವಿಷಯವನ್ನು ತಿಳಿಸಿ ಅವರ ಒಪ್ಪಿಗೆಯನ್ನು ಪಡೆದು ಯಾಗಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿದನು. ಸರಯೂ ನದೀತೀರದಲ್ಲಿ ಯಜ್ಞಶಾಲೆಯ ನಿರ್ಮಾಣವಾಯಿತು. ಎಲ್ಲ ಕಡೆಗೂ ಯಾಗಕ್ಕೆ ಬರಲು ಆಹ್ವಾನ ಪತ್ರಗಳು ಹೋದವು. ನಾನಾ ದೇಶಗಳಿಂದ ರಾಜರೂ ಇತರ ಆಹ್ವಾನಿತರೂ ಆಗಮಿಸಿದರು. ಸುಮುಹೂರ್ತದಲ್ಲಿ ಯಜ್ಞವು ವಿಜೃಂಭಣೆಯಿಂದ ನಡೆಯಿತು. ಆಮೇಲೆ ಎಲ್ಲ ಜಾತಿಯವರಿಗೂ ವೃಷ್ಟಾನ್ನದ ಸಂತರ್ಪಣೆಯಾಯಿತು. ಅಶ್ವಮೇಧ ಯಾಗವು ಸಾಂಗವಾಗಿ ನೆರವೇರಿತು.

ಆಮೇಲೆ ಋಷ್ಯಶೃಂಗನು ದಶರಥನನ್ನು ಕುರಿತು ''ರಾಜ, ನಿನ್ನ ಸಂತತಿಗೆ ಅಡ್ಡಿಯಾದ ವಿಘ್ನಗಳೆಲ್ಲವೂ ಹೋದವು. ಈಗ ನೀನು ಪುತ್ರಕಾಮೇಷ್ಟಿ ಎಂಬ ಇನ್ನೊಂದು ಯಜ್ಞವನ್ನು ಮಾಡಬೇಕು'' ಎಂದನು. ದಶರಥನು ಸಂತೋಷದಿಂದ ಒಪ್ಪಿ ಆ ಯಾಗಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿದನು.

---

* ಶಾಂತಾದೇವಿಯು ದಶರಥನ ಮಗಳೆಂದೂ ರೋಮಪಾದನ ಸಾಕುಮಗಳೆಂದೂ ಹೇಳಿಕೆ ಇದೆ. ಅವಳು ರೋಮಪಾದನ ಮಗಳೇ ಎಂದು ಇನ್ನು ಕೆಲವರ ಅಭಿಪ್ರಾಯವಿದೆ.

ಈ ಸಮಯದಲ್ಲಿ ದೇವತೆಗಳು ಮಹಾವಿಷ್ಣುವಿನ ಬಳಿಗೆ ಹೋಗಿ ವಿನಯದಿಂದ ''ಸ್ವಾಮಿ, ಲಂಕೇಶ್ವರನಾದ ರಾವಣನು ಬ್ರಹ್ಮನ ವರಬಲದಿಂದ ಕೊಬ್ಬಿ ಜಗತ್ತನ್ನೇ

ಬಾಧಿಸುತ್ತಿದ್ದಾನೆ. ಯಾವ ದೇವ–ಗಂಧರ್ವಾದಿಗಳಿಂದಲೂ ತನಗೆ ಮರಣವಾಗ ಬಾರದೆಂದು ಬ್ರಹ್ಮನಿಂದ ವರವನ್ನು ಪಡೆದಿದ್ದಾನೆ. ಈಗ ನಮ್ಮ ಕಷ್ಟವನ್ನು ನೀನೇ ಪರಿಹರಿಸಬೇಕು'' ಎಂದು ಪ್ರಾರ್ಥಿಸಿದರು. ಆಗ ವಿಷ್ಣುವು, ''ದೇವತೆಗಳೆ, ಹೆದರಬೇಡಿರಿ. ರಾವಣನು ಮನುಷ್ಯರನ್ನು ಅಲಕ್ಷಿಸಿ ಅವರಿಂದ ಮರಣವಾಗ ಬಾರದೆಂದು ವರವನ್ನು ಕೇಳಿಲ್ಲ. ಆದ್ದರಿಂದ ನಾನು ಮನುಷ್ಯನಾಗಿ ಅವತರಿಸಿ ರಾವಣನನ್ನು ಸಂಹರಿಸುತ್ತೇನೆ. ನೀವು ನನಗೆ ಸಹಾಯ ಮಾಡುವುದಕ್ಕಾಗಿ ವಾನರ ರೂಪದಿಂದ ಭೂಮಿಯಲ್ಲಿ ಅವತರಿಸಿರಿ'' ಎಂದು ಸಂತೈಸಿ ಅವರನ್ನು ಕಳಿಸಿದನು. ಭೂಮಿಯಲ್ಲಿ ಅತ್ಯಂತ ಗುಣಶಾಲಿಯೂ ಧರ್ಮನಿಷ್ಠನೂ ಆದ ದಶರಥನಿಗೆ ತಾನು ಪುತ್ರನಾಗಿ ಜನಿಸಬೇಕೆಂದು ವಿಷ್ಣುವು ಸಂಕಲ್ಪಿಸಿದನು.

ಇತ್ತ ದಶರಥನ ಪುತ್ರಕಾಮೇಷ್ಟಿಯು ವಿಧಿವತ್ತಾಗಿ ನಡೆಯಿತು. ಪೂರ್ಣಾಹುತಿ ಯನ್ನು ಅಗ್ನಿಯಲ್ಲಿ ಹಾಕಲು ಜ್ವಾಲೆಯು ಪ್ರಜ್ವಲಿಸಿತು. ಆಗ ಒಬ್ಬ ದಿವ್ಯಪುರುಷನು ಜ್ವಾಲೆಯ ಮಧ್ಯದಲ್ಲಿ ಮೇಲೆದ್ದು ಕಾಣಿಸಿಕೊಂಡನು. ಮಹಾತೇಜಸ್ವಿಯಾದ ಆತನ ಕೈಯಲ್ಲಿ ಒಂದು ಚಿನ್ನದ ಕಲಶವಿತ್ತು. ಆತನು ದಶರಥನನ್ನು ನೋಡಿ ''ರಾಜ, ನಾನು ಬ್ರಹ್ಮನಿಂದ ಕಳಿಸಲ್ಪಟ್ಟ ದೇವತೆ. ಈ ಕಲಶದಲ್ಲಿ ದಿವ್ಯವಾದ ಪಾಯಸವಿದೆ. ಇದನ್ನು ಅನುರೂಪರಾದ ನಿನ್ನ ಪತ್ನಿಯರಿಗೆ ಕೊಡು. ಈ ಯಾಗದ ಫಲವಾಗಿ ಆ ಪತ್ನಿಯರಲ್ಲಿ ಪುತ್ರರನ್ನು ಪಡೆಯುತ್ತೀಯೆ'' ಎಂದು ಹೇಳಿದನು. ದಶರಥನು ಆನಂದದಿಂದ ಹಿಗ್ಗಿ ಆ ಪ್ರಾಜಾಪತ್ಯ ಪುರುಷನಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ದಿವ್ಯಪಾಯಸದಿಂದ ತುಂಬಿದ್ದ ಆ ಕಲಶವನ್ನು ತಲೆಬಾಗಿ ಸ್ವೀಕರಿಸಿದನು. ಒಡನೆಯೇ ತೇಜಸ್ವಿಯಾದ ಆ ದಿವ್ಯಪುರುಷನು ಹೋಮಾಗ್ನಿಯಲ್ಲಿ ಅಂತರ್ಧಾನ ಹೊಂದಿದನು.

ಬಳಿಯಲ್ಲಿದ್ದ ಕೌಸಲ್ಯೆ ಮೊದಲಾದವರ ಮುಖವು ಹರ್ಷದಿಂದ ಅರಳಿತು. ಯಜ್ಞವು ಮುಗಿದ ಮೇಲೆ ದಶರಥನು ಅಂತಃಪುರಕ್ಕೆ ಹೋಗಿ ತನ್ನ ಮೂವರು ಪತ್ನಿಯರನ್ನೂ ಕರೆದು ಈ ಪಾಯಸವನ್ನು ಭಕ್ಷಿಸಿರಿ ಎಂದನು. ಪಟ್ಟದ ರಾಣಿಯಾದ ಕೌಸಲ್ಯೆಗೆ ಅರ್ಧಭಾಗವನ್ನಿತ್ತನು. ಎರಡನೆಯವಳಾದ ಸುಮಿತ್ರೆಗೆ ಉಳಿದ ಅರ್ಧದಲ್ಲಿ ಅರ್ಧವನ್ನಿತ್ತು ಉಳಿದದ್ದನ್ನು ಮೂರನೆಯವಳಾದ ಕೈಕೇಯಿಗೆ ಕೊಟ್ಟನು. ಆಮೇಲೆ ಅವನು ತನ್ನ ಮನಸ್ಸಿನಲ್ಲಿ ಕೈಕೇಯಿಗಿಂತ ಸುಮಿತ್ರೆ ಹಿರಿಯಳು ಎಂದು ಆಲೋಚಿಸಿ ಕೈಕೇಯಿಗೆ ಕೊಟ್ಟ ಪಾಯಸದಲ್ಲಿ ಅರ್ಧವನ್ನು ಮತ್ತೆ ಸುಮಿತ್ರೆಗೆ ಕೊಟ್ಟನು.

ಅವರೆಲ್ಲರೂ ತಮ್ಮ ಸ್ಥಾನಮಾನಗಳಿಗೆ ತಕ್ಕಂತೆ ಪಾಯಸವು ದೊರಕಿತೆಂದು ಸಂತೃಪ್ತಿಯಿಂದ ಅದನ್ನು ಭಕ್ಷಿಸಿದರು.*

ಹೀಗೆ ಅಶ್ವಮೇಧ ಮತ್ತು ಪುತ್ರಕಾಮೇಷ್ಟಿಗಳು ಮುಗಿದ ಮೇಲೆ ದಶರಥ ಮಹಾರಾಜನು ಯಜ್ಞದೀಕ್ಷೆಯನ್ನು ಮುಗಿಸಿ ಬಂದ ಅತಿಥಿಗಳನ್ನೆಲ್ಲಾ ಗೌರವದಿಂದ ಸತ್ಕರಿಸಿ ಕಳಿಸಿಕೊಟ್ಟನು. ಋಷ್ಯಶೃಂಗನು ಶಾಂತಾದೇವಿಯೊಡನೆ ತನ್ನ ಸ್ಥಳಕ್ಕೆ ಹಿಂದಿರುಗಿದನು.

ಯಜ್ಞಕಾರ್ಯವು ಮುಗಿದು ಎಲ್ಲವೂ ತನ್ನ ಇಷ್ಟದಂತೆ ನೆರವೇರಿದ್ದರಿಂದ ದಶರಥನು ಆನಂದಿಸಿದನು. ತನಗೆ ಪುತ್ರೋತ್ಪತ್ತಿಯಾಗುವುದೆಂದು ಅವನ ಮನಸ್ಸಿಗೆ ನಿಶ್ಚಯವಾಯಿತು. ಹಾಗೆಯೇ ಮೂವರು ರಾಣಿಯರೂ ಗರ್ಭಿಣಿಯರಾದರು. ಒಂದು ಸುಮುಹೂರ್ತದಲ್ಲಿ ಕೌಸಲ್ಯಾದೇವಿಯ ಗರ್ಭದಿಂದ ಸರ್ವಲೋಕ ನಮಸ್ಕೃತನೂ ದಿವ್ಯ ಲಕ್ಷಣ ಸಂಯುತನೂ ಜಗನ್ನಾಥನೂ ಆದ ಶ್ರೀ ರಾಮಚಂದ್ರನು ಪುತ್ರನಾಗಿ ಅವತರಿಸಿದನು. ಅಂದು ಚೈತ್ರಮಾಸದಲ್ಲಿ ಶುಕ್ಲಪಕ್ಷದ ನವಮೀ ತಿಥಿ. ಪುನರ್ವಸು ನಕ್ಷತ್ರ. ರವಿ, ಕುಜ, ಶನಿ, ಗುರು, ಶುಕ್ರ – ಈ ಐದು ಗ್ರಹಗಳೂ ತಮ್ಮ ಉಚ್ಚ ರಾಶಿಯಲ್ಲಿದ್ದರು. ಕರ್ಕಾಟಕ ಲಗ್ನವು ಚಂದ್ರ ಬೃಹಸ್ಪತಿಗಳೊಡನೆ ಉದಯ ಹೊಂದುತ್ತಿತ್ತು, ಮಧ್ಯಾಹ್ನ ಕಾಲ. ಮಾರನೆಯ ದಿನ ಸೂರ್ಯೋದಯಕ್ಕೆ ಮೊದಲು ಮೀನ ಲಗ್ನದಲ್ಲಿ ಕೈಕೇಯಿಗೆ ಶಾಂತಸ್ವಭಾವದ ಭರತನು ಜನಿಸಿದನು. ಆಗ ಪುಷ್ಯ ನಕ್ಷತ್ರ. ಆ ದಿನವೇ ಮಧ್ಯಾಹ್ನ ಕಾಲದಲ್ಲಿ ಆಶ್ಲೇಷಾ ನಕ್ಷತ್ರ, ಕರ್ಕಾಟಕ ಲಗ್ನದಲ್ಲಿ ಸುಮಿತ್ರೆಗೆ ಲಕ್ಷ್ಮಣನೂ ಶತ್ರುಘ್ನನೂ ಜನಿಸಿದರು.

ಹೀಗೆ ದಶರಥಮಹಾರಾಜನಿಗೆ ಗುಣಶಾಲಿಗಳೂ ಅನುರೂಪರೂ ಆದ ನಾಲ್ವರು ಪುತ್ರರಾದರು. ದೇವದುಂದುಭಿಗಳು ಮೊಳಗಿದವು. ಆಕಾಶದಲ್ಲಿ ಪುಷ್ಪವೃಷ್ಟಿಯಾಯಿತು. ಅಯೋಧ್ಯೆಯಲ್ಲಿ ದೊಡ್ಡ ಜನಸಂದಣಿಯು ಸೇರಿತಲ್ಲದೆ ವೈಭವದ ಉತ್ಸವ ನಡೆಯಿತು. ದಶರಥನ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಹನ್ನೆರಡನೆಯ ದಿನ ರಾಜನು ವಸಿಷ್ಠರಿಂದ ಮಕ್ಕಳಿಗೆ ನಾಮಕರಣ ಮಾಡಿಸಿದನು.

---

* ಒಂದು ರೂಪಾಯಿಯಲ್ಲಿ ಎಂಟಾಣೆಯ ಭಾಗ ಕೌಸಲ್ಯೆಗೆ ಸಂದಿತು. ಆರು ಆಣೆಯ ಭಾಗ ಸುಮಿತ್ರೆಗೂ, ಎರಡು ಆಣೆಯ ಭಾಗ ಕೈಕೇಯಿಗೂ ಸಂದಿತು. ಸುಮಿತ್ರೆಗೆ ಎರಡು ಸಲ ಕೊಟ್ಟದ್ದರಿಂದ ಲಕ್ಷ್ಮಣ ಶತ್ರುಘ್ನರು ಅವಳಿ ಜವಳಿಗಳಾಗಿ ಹುಟ್ಟಿದರೆಂದು ತಿಳಿಯಬೇಕು. ಪಾಯಸವು ಕೇವಲ ದೇವತಾಪ್ರಸಾದ. ಅದೇ ಗರ್ಭವಾಯಿತೆಂದು ತಿಳಿಯಬಾರದು.

ಕೌಸಲ್ಯೆಯ ಗರ್ಭದಲ್ಲಿ ಜನಿಸಿದ ಜ್ಯೇಷ್ಠಪುತ್ರನಿಗೆ ರಾಮ ಎಂದೂ, ಕೈಕೇಯೀ ಪುತ್ರನಿಗೆ ಭರತ ಎಂದೂ, ಸುಮಿತ್ರೆಯ ಇಬ್ಬರು ಮಕ್ಕಳಿಗೆ ಲಕ್ಷ್ಮಣ, ಶತ್ರುಘ್ನ ಎಂದೂ ವಸಿಷ್ಠರು ನಾಮಕರಣ ಮಾಡಿದರು. ದಶರಥನು ಎಲ್ಲ ಪ್ರಜೆಗಳಿಗೂ ಸಂತರ್ಪಣೆಯನ್ನು ನಡೆಸಿ ಬೇಕಾದಷ್ಟು ಐಶ್ವರ್ಯವನ್ನು ದಾನ ಮಾಡಿದನು. ಕಾಲಕ್ರಮದಲ್ಲಿ ವಸಿಷ್ಠರು ಆ ಬಾಲಕರಿಗೆ ಜಾತಕರ್ಮ ಮೊದಲುಗೊಂಡು ಉಪನಯನದವರೆಗೆ ಎಲ್ಲ ಸಂಸ್ಕಾರಗಳನ್ನೂ ನೆರವೇರಿಸಿದರು. ಅವರೆಲ್ಲರೂ ಕ್ರಮವಾಗಿ ವೇದಶಾಸ್ತ್ರಗಳನ್ನು ಅಧ್ಯಯನ ಮಾಡಿ ಯುದ್ಧ ವಿದ್ಯೆಯಾದ ಧನುರ್ವೇದದಲ್ಲಿ ನಿಷ್ಣಾತರಾದರು. ಎಲ್ಲರೂ ವಿದ್ಯಾವಂತರು. ಎಲ್ಲರೂ ಗುಣವಂತರು. ಅವರಲ್ಲಿ ಶ್ರೀರಾಮನು ಮಹಾತೇಜಸ್ವಿಯೂ ಸುಂದರನೂ ಗುಣಶಾಲಿಯೂ ಆಗಿದ್ದನು. ರಾಮನೂ ಲಕ್ಷ್ಮಣನೂ ಜೊತೆಯಾಗಿರುತ್ತಿದ್ದರು. ಭರತನೂ ಶತ್ರುಘ್ನನೂ ಜೊತೆಯಾಗಿ ಬೆಳೆದರು. ನಿಸರ್ಗದಿಂದ ಹಾಗೆ ಜೊತೆಯಾಗಿ ಆಟಪಾಠಗಳಲ್ಲಿ ತೊಡಗುತ್ತಿದ್ದರಲ್ಲದೆ ವಿಶೇಷವೇನೂ ಇಲ್ಲ. ನಾಲ್ವರೂ ಅನ್ಯೋನ್ಯ ಪ್ರೀತಿಯುಳ್ಳವರಾಗಿದ್ದರು. ರಾಮನಿಗೆ ಲಕ್ಷ್ಮಣನನ್ನು ಕಂಡರೆ ತನ್ನ ಶರೀರಕ್ಕಿಂತಲೂ ಅಧಿಕವಾದ ಪ್ರೀತಿ. ಅವನು ಜೊತೆಯಲ್ಲಿ ಮಲಗಿಕೊಳ್ಳದಿದ್ದರೆ ಶ್ರೀರಾಮನಿಗೆ ನಿದ್ರೆಯೇ ಬಾರದು. ಎಂತಹ ರುಚಿಕರವಾದ ತಿನಿಸನ್ನೂ ಲಕ್ಷ್ಮಣನಿಲ್ಲದೆ ತಿನ್ನುತ್ತಿರಲಿಲ್ಲ. ಹಾಗೆಯೇ ಭರತನಿಗೆ ಶತ್ರುಘ್ನನಲ್ಲಿ ಅಧಿಕವಾದ ಪ್ರೀತಿ ಇತ್ತು. ಅವರೆಲ್ಲರೂ ತಂದೆ ತಾಯಿಗಳಿಗೂ, ಸಕಲ ಪ್ರಜೆಗಳಿಗೂ ಪರಮಾನಂದವನ್ನುಂಟು ಮಾಡುತ್ತ ಬೆಳೆಯುತ್ತಿದ್ದರು.

೩

ವಿಶ್ವಾಮಿತ್ರರು ಶ್ರೀರಾಮ ಲಕ್ಷ್ಮಣರನ್ನು ತಮ್ಮ ಆಶ್ರಮಕ್ಕೆ ಕರೆದೊಯ್ಯುವುದು. ತಾಟಕಾ ವಧೆ. ಯಜ್ಞಸಂರಕ್ಷಣೆ.

ಒಂದು ದಿನ ದಶರಥಮಹಾರಾಜನು ರಾಜಸಭೆಯಲ್ಲಿ ಕುಳಿತಿರುವಾಗ ವಿಶ್ವಾಮಿತ್ರ ಮಹರ್ಷಿಗಳು ಆಗಮಿಸಿದರು. ಅವರನ್ನು ವಿನಯಪೂರ್ವಕವಾಗಿ ಸ್ವಾಗತಿಸಿ ಅರ್ಘ್ಯಪಾದ್ಯಾದಿಗಳನ್ನಿತ್ತು ರಾಜನು ಉಪಚರಿಸಿದನು. ವಿಶ್ವಾಮಿತ್ರರು ಸಂತುಷ್ಟರಾಗಿ ತಮ್ಮ ಪೀಠದಲ್ಲಿ ಕುಳಿತು ದಶರಥನ ಯೋಗಕ್ಷೇಮಗಳನ್ನು ವಿಚಾರಿಸಿದರು. ದಶರಥನು ''ಮಹರ್ಷಿಗಳೆ, ತಮ್ಮ ಆಶೀರ್ವಾದದಿಂದ ನಾವು ಕ್ಷೇಮವಾಗಿದ್ದೇವೆ. ನಿಮ್ಮ ಆಗಮನವು ಮನುಷ್ಯನಿಗೆ ಅಮೃತವು ದೊರಕಿದಂತೆ,

ನೀರಿಲ್ಲದಾಗ ಮಳೆ ಬಂದಂತೆ ಹರ್ಷವನ್ನು ನೀಡುತ್ತದೆ. ನಿಮ್ಮ ಸಂದರ್ಶನದಿಂದ ನಾನಿದ್ದ ಸ್ಥಳವೇ ಪವಿತ್ರವಾಯಿತು. ನಿಮಗೆ ನನ್ನಿಂದ ಏನಾಗಬೇಕು?'' ಎಂದು ಕೇಳಿದನು. ಆಗ ವಿಶ್ವಾಮಿತ್ರರು ''ರಾಜಶ್ರೇಷ್ಠ, ಮಹಾವಂಶದಲ್ಲಿ ಜನಿಸಿ, ವಸಿಷ್ಠ ಮುನಿಗಳ ಶಿಷ್ಯನಾಗಿರುವ ನೀನು ಸತ್ಯಸಂಧನೂ ಧರ್ಮಾತ್ಮನೂ ಆಗಿದ್ದೀಯೆ. ನನಗೆ ನಿನ್ನಿಂದ ಒಂದು ಸಹಾಯ ಬೇಕಾಗಿದೆ'' ಎಂದರು. ಆಗ ದಶರಥನು ''ಪೂಜ್ಯರೇ, ನನ್ನಿಂದ ಏನಾಗಬೇಕೆಂಬುದನ್ನು ಹೇಳಿರಿ. ನಿಸ್ಸಂದೇಹವಾಗಿ ಅದನ್ನು ನಡೆಸಿಕೊಡುತ್ತೇನೆ. ಯಾವ ಸಂಕೋಚವೂ ಬೇಡ'' ಎಂದನು. ಆಗ ವಿಶ್ವಾಮಿತ್ರರು ಹೇಳಿದರು : ''ರಾಜ, ನಾನು ಒಂದು ಯಜ್ಞದೀಕ್ಷೆಯನ್ನು ಸ್ವೀಕರಿಸಿದ್ದೇನೆ. ಅದಕ್ಕೆ ಕಾಮರೂಪಿಗಳಾದ ಇಬ್ಬರು ರಾಕ್ಷಸರು ವಿಘ್ನವನ್ನೊಡ್ಡುತ್ತಿದ್ದಾರೆ. ಮಾರೀಚ, ಸುಬಾಹುಗಳೆಂಬ ಆ ರಾಕ್ಷಸರು ಯಜ್ಞಕುಂಡದಲ್ಲಿ ರಕ್ತವನ್ನು ಸುರಿದು ಯಜ್ಞವನ್ನು ಕೆಡಿಸಿದರು. ನಾನು ದೀಕ್ಷಿತನಾದ್ದರಿಂದ ಕ್ರೋಧವನ್ನು ತಳೆಯಲಿಲ್ಲ. ಶಾಪವನ್ನು ಕೊಡಲಿಲ್ಲ. ಈಗ ಹೊಸದಾಗಿ ಯಜ್ಞವನ್ನು ಪೂರ್ತಿ ಮಾಡಬೇಕಾಗಿದೆ. ಮಹಾರಾಜ, ನಿನ್ನ ಮಗನಾದ ರಾಮನನ್ನು ನನ್ನೊಡನೆ ಕಳಿಸು. ಅವನ ಪರಾಕ್ರಮ ನನಗೆ ಗೊತ್ತಿದೆ. ಅವನು ರಾಕ್ಷಸರನ್ನು ನಾಶಮಾಡಬಲ್ಲನು. ನಾನು ರಾಮನಿಗೆ ಬಹುವಿಧವಾದ ಶ್ರೇಯಸ್ಸನ್ನು ದೊರಕಿಸಿಕೊಡುವೆನು'' ಎಂದರು.

ಅವರ ಮಾತನ್ನು ಕೇಳಿ ದಶರಥನು ಶೋಕದಲ್ಲಿ ಮುಳುಗಿ ಹೋದನು. ಮೈಯಲ್ಲಿ ನಡುಕ ಹುಟ್ಟಿತು. ಅವನು ಮೆಲ್ಲಗೆ ಸುಧಾರಿಸಿಕೊಂಡು ''ಮುನಿಗಳೆ, ನನ್ನ ರಾಮನು ಇನ್ನೂ ಚಿಕ್ಕವನು. ರಾಕ್ಷಸರೊಡನೆ ಯುದ್ಧ ಮಾಡುವ ಯೋಗ್ಯತೆ ಅವನಿಗಿಲ್ಲ'' ಎಂದನು. ವಿಶ್ವಾಮಿತ್ರರು ''ದಶರಥ, ನೀನು ಪುತ್ರವಾತ್ಸಲ್ಯದಿಂದ ಹೀಗೆ ಮಾತಾಡುತ್ತೀಯೆ. ರಾಮನ ತೇಜಸ್ಸು ಏನೆಂಬುದು ನನಗೆ ಗೊತ್ತು, ವಸಿಷ್ಠ ಮುನಿಗಳಿಗೆ ಗೊತ್ತು, ಈ ತಪಸ್ವಿಗಳೂ ತಿಳಿದಿದ್ದಾರೆ. ನೀನು ತಿಳಿದಿಲ್ಲ. ಯಾವ ಸಂದೇಹವೂ ಇಲ್ಲದೆ ಅವನು ರಾಕ್ಷಸರನ್ನು ನಿರ್ಮೂಲ ಮಾಡುವನು. ಕೊಟ್ಟ ಮಾತಿನಂತೆ ನಡೆದುಕೊ'' ಎಂದರು. ದಶರಥನು ತುಂಬ ಪೇಚಿಗೆ ಒಳಗಾದನು. ಆಗ ವಸಿಷ್ಠ ಮುನಿಗಳು ''ದಶರಥ, ನೀನು ಹೆದರಬೇಡ. ಈ ವಿಶ್ವಾಮಿತ್ರ ಮುನಿಗಳು ಸಾಮಾನ್ಯರಲ್ಲ. ಸಾಕ್ಷಾತ್ ಧರ್ಮಪುರುಷರು. ಇವರು ವಿದ್ಯಾನಿಧಿ. ತಪಸ್ಸಿನ ಪರಾಕಾಷ್ಠೆ. ಸಕಲ ಮಂತ್ರಾಸ್ತ್ರಗಳನ್ನೂ ಬಲ್ಲರು. ವಿಶ್ವಾಮಿತ್ರರಿಗೆ ತಿಳಿಯದಿರುವುದು ಯಾವುದೂ ಇಲ್ಲ, ನೀನು ಧೈರ್ಯದಿಂದ ರಾಮನನ್ನು ಕಳಿಸು. ನಿನ್ನ ಸತ್ಯವನ್ನು ಕಾಪಾಡಿಕೊ. ಹಿಂಜರಿಯಬೇಡ'' ಎಂದು ಬುದ್ಧಿವಾದವನ್ನು ಹೇಳಿದರು. ಆಗ ದಶರಥನು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡು ರಾಮನನ್ನು ಬರಹೇಳಿದನು.

ಶ್ರೀರಾಮನಿದ್ದಲ್ಲಿ ಲಕ್ಷ್ಮಣನಿದ್ದೇ ಇರುತ್ತಾನೆ. ಅವರಿಬ್ಬರೂ ರಾಜಸಭೆಗೆ ಬಂದು

ತಂದೆಗೂ ವಿಶ್ವಾಮಿತ್ರಾದಿ ಮುನಿಗಳಿಗೂ ನಮಸ್ಕಾರ ಮಾಡಿದರು. ದಶರಥನು ರಾಮಲಕ್ಷ್ಮಣರಿಗೆ ಮುಂದಿನ ಕರ್ತವ್ಯವೇನೆಂಬುದನ್ನು ತಿಳಿಸಿ, ಅವರಿಗೆ ಮಂಗಳವನ್ನು ಕೋರಿ ವಿಶ್ವಾಮಿತ್ರರ ವಶಕ್ಕೆ ಒಪ್ಪಿಸಿದನು. ವಸಿಷ್ಠರು ಮಂಗಳ ಸೂಕ್ತವನ್ನು ಪಠಿಸಿ ರಾಮಲಕ್ಷ್ಮಣರನ್ನು ಆಶೀರ್ವದಿಸಿದರು. ರಾಮಲಕ್ಷ್ಮಣರು ಧನುಸ್ಸು, ಬಾಣ, ಬತ್ತಳಿಕೆ, ಖಡ್ಗಾದಿಗಳನ್ನು ಹಿಡಿದು ವಿಶ್ವಾಮಿತ್ರರೊಡನೆ ಪ್ರಯಾಣ ಮಾಡಲು ಸಜ್ಜಾದರು. ವಿಶ್ವಾಮಿತ್ರರು ಸಂತುಷ್ಟರಾಗಿ ದಶರಥನನ್ನು ಪ್ರಶಂಸಿಸಿ ವಸಿಷ್ಠಾದಿಗಳನ್ನು ಬೀಳ್ಕೊಂಡು ರಾಮಲಕ್ಷ್ಮಣರೊಡನೆ ಹೊರಟರು.

ವಿಶ್ವಾಮಿತ್ರ ಮುನಿಗಳ ಹಿಂದೆ ರಾಮಲಕ್ಷ್ಮಣರು, ಬ್ರಹ್ಮನ ಹಿಂದೆ ಅಶ್ವಿನೀ ದೇವತೆಗಳು ಹೋಗುವಂತೆ ಕಾಣಿಸಿದರು. ಅಯೋಧ್ಯೆಯಿಂದ ಒಂದೂವರೆ ಯೋಜನ ದೂರ ಸಾಗಿತು. ಅದು ಸರಯೂ ನದಿಯ ತಟ. ವಿಶ್ವಾಮಿತ್ರರು ಮಧುರವಾದ ಧ್ವನಿಯಿಂದ, ''ರಾಮ, ನಿಮ್ಮಿಬ್ಬರಿಗೂ ಬಲಾ, ಅತಿಬಲಾ ಎಂಬ ಮಂತ್ರವಿದ್ಯೆಗಳನ್ನು ಉಪದೇಶಿಸುತ್ತೇನೆ. ಈ ಮಂತ್ರ ಬಲದಿಂದ ನಿಮಗೆ ಶ್ರಮವಾಗಲಿ, ಜ್ವರ ಬಾಧೆಯಾಗಲಿ ಆಗುವುದಿಲ್ಲ. ನಿದ್ರಿಸುವಾಗ ರಾಕ್ಷಸರೂ ಸಹ ನಿಮ್ಮನ್ನು ಬಾಧಿಸಲಾರರು. ಈ ಎರಡು ವಿದ್ಯೆಗಳು ಸರ್ವಜ್ಞಾನಕ್ಕೂ ಮಾತೃದೇವತೆಗಳು. ಇವನ್ನು ಜಪಿಸುತ್ತಿದ್ದರೆ ಹಸಿವು ಬಾಯಾರಿಕೆಗಳ ಬಾಧೆಯೂ ಇರುವುದಿಲ್ಲ. ನದಿಯಲ್ಲಿ ಕೈ ಕಾಲು ತೊಳೆದು ಆಚಮನ ಮಾಡಿ ಶುದ್ಧರಾಗಿರಿ'' ಎಂದರು. ಅನಂತರ ವಿಶ್ವಾಮಿತ್ರ ಮುನಿಗಳು ಬಲಾ, ಅತಿಬಲಾ ಎಂಬ ಎರಡು ವಿದ್ಯೆಗಳನ್ನು ಅವರಿಬ್ಬರಿಗೂ ಉಪದೇಶಿಸಿದರು. ಆ ರಾತ್ರಿಯನ್ನು ಮೂವರೂ ಸರಯೂ ತಟದಲ್ಲಿ ಕಳೆದರು.

ರಾತ್ರಿ ಕಳೆದು ಬೆಳಗಾಗುತ್ತ ಬಂದಿತು. ಸೊಪ್ಪಿನ ಹಾಸಿಗೆಯ ಮೇಲೆ ಮಲಗಿದ್ದ ಆ ರಾಜಕುಮಾರರನ್ನು ನೋಡಿ ವಿಶ್ವಾಮಿತ್ರರು ''ಮಕ್ಕಳೆ, ಬೆಳಗಾಗುತ್ತ ಬಂದಿತು. ಏಳಿರಿ'' ಎಂದು ಎಬ್ಬಿಸಿದರು. ಆ ರಾಜಕುಮಾರರು ಎದ್ದು ನದಿಯಲ್ಲಿ ಸ್ನಾನಮಾಡಿ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಆಚರಿಸಿದರು. ಆ ತಪೋಧನರಿಗೆ ಅಭಿವಾದನೆ ಮಾಡಿ ಮುಂದಿನ ಪ್ರಯಾಣಕ್ಕೆ ಸಿದ್ಧರಾದರು. ಮುಂದೆ ಹೋಗುವಾಗ ಸರಯೂ ನದಿಯು ಗಂಗಾನದಿಯನ್ನು ಸೇರುವ ಸಂಗಮ ಸ್ಥಳವು ಕಾಣಿಸಿತು. ಅಲ್ಲಿ ಒಂದು ಪುಣ್ಯಾಶ್ರಮವನ್ನು ಕಂಡು ರಾಮನು ''ಪೂಜ್ಯರೇ, ಈ ಆಶ್ರಮ ಯಾವುದು?''ಎಂದು ಕೇಳಿದನು. ವಿಶ್ವಾಮಿತ್ರರು ನಕ್ಕು ಹೀಗೆ ಹೇಳಿದರು. ''ಇಲ್ಲಿ ಈಶ್ವರನು ನಿಯಮಸ್ಥನಾಗಿ ತಪಸ್ಸನ್ನಾಚರಿಸುತ್ತಿದ್ದನು. ಅವಿವೇಕಿಯಾದ ಕಾಮನು ಅವನಿಗೆ ಕಾಮವಿಕಾರವನ್ನುಂಟು ಮಾಡಬೇಕೆಂದು ಅವನ ಮೇಲೆ ತನ್ನ ಬಾಣಗಳನ್ನೆಸೆದನು. ಆಗ ಪರಮೇಶ್ವರನು ಹುಂಕಾರ ಮಾಡಿ ಕಾಮನನ್ನು ಕೆಂಗಣ್ಣಿನಿಂದ ನೋಡಲು, ಆ

ದುರ್ಬುದ್ಧಿಯ ಅಂಗಗಳೆಲ್ಲವೂ ಸುಟ್ಟು ಬೂದಿಯಾದವು. ಕಾಮನು ಅನಂಗನೆನಿಸಿದನು. ಇಲ್ಲಿ ಪರಮೇಶ್ವರನು ತಪಸ್ಸು ಮಾಡಿದ್ದರಿಂದ ಇದೊಂದು ಪುಣ್ಯಾಶ್ರಮವಾಯಿತು. ಇಲ್ಲಿ ಅನೇಕ ಋಷಿಗಳು ತಪಸ್ಸನ್ನಾಚರಿಸಿ ಕೊಂಡಿದ್ದಾರೆ. ಈ ದಿನ ನಾವು ಈ ಆಶ್ರಮದಲ್ಲಿ ಉಳಿದುಕೊಳ್ಳೋಣ'' ಎಂದರು. ಅಷ್ಟರಲ್ಲಿ ವಿಶ್ವಾಮಿತ್ರರು ಬಂದಿದ್ದಾರೆಂದು ತಿಳಿದು ಆಶ್ರಮದಲ್ಲಿದ್ದ ತಪಸ್ವಿಗಳು ಬಂದು ವಿಶ್ವಾಮಿತ್ರರನ್ನೂ ರಾಮಲಕ್ಷ್ಮಣರನ್ನೂ ಕರೆದೊಯ್ದು ಸತ್ಕರಿಸಿದರು. ಆ ಆಶ್ರಮಕ್ಕೆ ಕಾಮಾಶ್ರಮ ಎಂದು ಹೆಸರು.

ಮಾರನೆಯ ದಿನ ಪ್ರಾತಃಕಾಲ ವಿಶ್ವಾಮಿತ್ರರೂ ರಾಮಲಕ್ಷ್ಮಣರೂ ಪ್ರಾತಃಕೃತ್ಯಗಳನ್ನು ಮುಗಿಸಿ ಮುಂದಕ್ಕೆ ಪ್ರಯಾಣ ಮಾಡಿದರು. ಅವರು ದೋಣಿಯಿಂದ ಗಂಗಾನದಿಯನ್ನು ದಾಟಿ ದಕ್ಷಿಣ ದಿಕ್ಕಿಗೆ ಹೊರಟರು. ಎದುರಿಗೆ ಘೋರವಾದ ಅರಣ್ಯ ಸಿಕ್ಕಿತು. ಮಹರ್ಷಿಗಳು ರಾಮಲಕ್ಷ್ಮಣರನ್ನು ಕುರಿತು ''ಹಿಂದೆ ಈ ಸ್ಥಳದಲ್ಲಿ ಮಲದಾ, ಕರೂಷ ಎಂಬ ಎರಡು ರಾಜ್ಯಗಳಿದ್ದವು. ಇಂದ್ರನು ವೃತ್ರಾಸುರನನ್ನು ವಧಿಸಿದಾಗ ಅವನಿಗೆ ಬ್ರಹ್ಮಹತ್ಯಾದೋಷವು ತಗುಲಿತು. ಆಗ ದೇವತೆಗಳೂ ಋಷಿಗಳೂ ಸೇರಿ ಮಂತ್ರಪೂತ ಜಲದಿಂದ ಇಂದ್ರನಿಗೆ ಅಭಿಷೇಕ ಮಾಡಿದರು. ಇಂದ್ರನ ಮಲವೂ (ಅಶುಚಿತ್ವ) ಕರೂಷವೂ (ಹಸಿವು) ದೇಹದಿಂದ ತೊಲಗಿ ಇಂದ್ರನು ಪರಿಶುದ್ಧನಾದನು. ಆದ್ದರಿಂದ ಈ ದೇಶಗಳಿಗೆ ಮಲದಾ, ಕರೂಷ ಎಂಬ ಹೆಸರುಗಳಾದವು. ರಾಮ, ಈ ರಾಜ್ಯಗಳು ಧನ ಧಾನ್ಯ ಭರಿತಗಳಾಗಿ ಬೆಳೆದವು. ಕೆಲವು ಕಾಲದ ಮೇಲೆ ಒಬ್ಬ ಯಕ್ಷಿಯು ಇಲ್ಲಿ ಸೇರಿಕೊಂಡು ಈ ರಾಜ್ಯಗಳನು ಕೊಳ್ಳೆ ಹೊಡೆಯಲಾರಂಭಿಸಿದಳು. ಅವಳ ಹೆಸರು ತಾಟಕಾ. ಮಾರೀಚ ಎಂಬ ರಾಕ್ಷಸನು ಅವಳ ಮಗ. ಅವನೂ ತಾಟಕೆಯೂ ಸೇರಿ ಈ ಎರಡೂ ರಾಜ್ಯ ಗಳನ್ನೂ ನಾಶ ಮಾಡಿಬಿಟ್ಟರು. ಈಗ ಇದು ಗೊಂಡಾರಣ್ಯವಾಗಿದೆ. ಆ ತಾಟಕೆಯು ಇಲ್ಲಿಗೆ ಒಂದೂವರೆ ಯೋಜನ ದೂರದಲ್ಲಿ ಇದ್ದಾಳೆ. ನಾವು ಈಗ ಆ ಅರಣ್ಯಕ್ಕೆ ಹೋಗುತ್ತೇವೆ. ರಾಮ, ನೀನು ನಿನ್ನ ಬಾಹುಬಲದಿಂದ ಆ ದುಷ್ಟ ಸ್ತ್ರೀಯನ್ನು ಸಂಹಾರ ಮಾಡು. ಅವಳು ಇಲ್ಲಿ ವಿಧ್ವಂಸಕೃತ್ಯವನ್ನು ಮಾಡುತ್ತಿದ್ದಾಳೆ'' ಎಂದರು.

ಆಗ ಶ್ರೀರಾಮನು ''ಮುನಿಗಳೆ, ಯಕ್ಷರು ಅಲ್ಪಬಲರೆಂದು ಕೇಳಿದ್ದೇನೆ. ಈ ಯಕ್ಷಿಗೆ ಇದೆಲ್ಲವನ್ನೂ ನಾಶ ಮಾಡುವ ಶಕ್ತಿ ಹೇಗೆ ಬಂದಿತು?'' ಎಂದು ಕೇಳಿದನು. ವಿಶ್ವಾಮಿತ್ರರು ''ರಾಮಲಕ್ಷ್ಮಣರೆ, ಅದನ್ನು ಹೇಳುತ್ತೇನೆ. ಸುಕೇತುವೆಂಬ ವೀರನಾದ ಯಕ್ಷನಿಗೆ ಬ್ರಹ್ಮನ ವರದಿಂದ ತಾಟಕೆ ಎಂಬ ಕನ್ಯೆ ಹುಟ್ಟಿದಳು. ಬ್ರಹ್ಮನು ಆ ತಾಟಕೆಗೆ ಹತ್ತು ಸಾವಿರ ಆನೆಗಳ ಬಲವನ್ನು ಅನುಗ್ರಹಿಸಿದನು. ಸುಕೇತುವು ತಾಟಕೆಯನ್ನು

ಸುಂದನಿಗೆ ಮದುವೆಮಾಡಿಕೊಟ್ಟನು. ಕೆಲವು ಕಾಲದ ಮೇಲೆ ಆ ಯಕ್ಷಿಗೆ ಮಾರೀಚನೆಂಬ ಮಗನು ಹುಟ್ಟಿದನು. ಒಂದು ಸಲ ಸುಂದನು ಅಗಸ್ತ್ಯ ಮುನಿಗಳನ್ನು ಕೆಣಕಿ ಅವರ ಶಾಪದಿಂದ ಸತ್ತು ಹೋದನು. ಆಗ ತಾಟಕೆಯೂ ಮಾರೀಚನೂ ಅಗಸ್ತ್ಯರ ಮೇಲೆ ನುಗ್ಗಿ ಬಂದರು. ಅಗಸ್ತ್ಯ ಮುನಿಗಳು ರೋಷದಿಂದ ಮಾರೀಚನನ್ನು ರಾಕ್ಷಸನಾಗುವಂತೆ ಶಪಿಸಿ ಯಕ್ಷಿಗೆ ನೀನು ನರಭಕ್ಷಕಳಾಗು, ನಿನಗೆ ಕರಾಳವಾದ ರೂಪವು ಬರಲಿ ಎಂದು ಶಪಿಸಿಬಿಟ್ಟರು. ಅಬಲೆಯಾದ ತಾಟಕೆಗೆ ಬ್ರಹ್ಮನ ವರದಿಂದ ಅಷ್ಟು ಬಲ ಬಂದಿದೆ'' ಎಂದರು. ಅನಂತರ ''ರಾಮ, ಶಾಪಕ್ಕೆ ಗುರಿಯಾದ ಇವಳನ್ನು ಕೊಲ್ಲುವುದಕ್ಕೆ ನೀನು ಹಿಂಜರಿಯಬೇಡ. ಪ್ರಜಾರಕ್ಷಣೆಗಾಗಿ ಮಾಡುವ ಕಾರ್ಯವು ದೋಷಯುಕ್ತವಾದರೂ ಮಾಡಲೇಬೇಕು. ಕ್ಷತ್ರಿಯರಿಗೆ ಇದು ಸನಾತನ ಧರ್ಮ. ಹೆಂಗಸನ್ನು ಹೇಗೆ ಕೊಲ್ಲುವುದೆಂದು ಹಿಂಜರಿಯಬೇಡ. ಅಧರ್ಮ ನಿರತಳಾದ ಈ ಸ್ತ್ರೀಯನ್ನು ಕೊಲ್ಲುವುದು ನಿನ್ನ ಕರ್ತವ್ಯವೇ ಸರಿ. ಮರುಕವನ್ನು ಬದಿಗೊತ್ತಿ ನನ್ನ ಆಜ್ಞೆಯಂತೆ ಇವಳನ್ನು ಸಂಹರಿಸು'' ಎಂದರು. ಆಗ ಶ್ರೀರಾಮನು ಕೈಮುಗಿದುಕೊಂಡು ''ಮುನಿಗಳೆ, ನಮ್ಮ ತಂದೆಯು ತಮ್ಮ ಮಾತನ್ನು ನಡೆಸಲೇ ಬೇಕೆಂದು ನಮಗೆ ಆಜ್ಞೆ ಮಾಡಿದ್ದಾನೆ. ಆದ್ದರಿಂದ ಬ್ರಹ್ಮಜ್ಞಾನಿಗಳಾದ ತಮ್ಮ ಆಜ್ಞೆಯಂತೆ ತಾಟಕೆಯನ್ನು ಸಂಹರಿಸುತ್ತೇನೆ. ಗೋಬ್ರಾಹ್ಮಣರಿಗೂ, ಈ ರಾಷ್ಟ್ರಕ್ಕೂ ಮಂಗಳಕರವಾದ ಈ ಕಾರ್ಯವನ್ನು ನಡೆಸಲು ನಾನು ಸಿದ್ಧನಾಗಿದ್ದೇನೆ'' ಎಂದು ನುಡಿದು, ತನ್ನ ಧನುಸ್ಸಿನ ಹೆದೆಯನ್ನು ಮೀಟಿ ಝೇಂಕಾರ ಮಾಡಿದನು. ಆ ಶಬ್ದವು ಎಲ್ಲ ದಿಕ್ಕುಗಳಲ್ಲಿಯೂ ಮೊಳಗಿತು. ಆ ಶಬ್ದವನ್ನು ಕೇಳಿ ತಾಟಕೆಯು ಕ್ರೋಧದಿಂದ ಅಲ್ಲಿಗೆ ಧಾವಿಸುತ್ತ ಬಂದಳು. ಆ ಯಕ್ಷಿಯ ಭೀಕರವಾದ ರೂಪ, ವಿಕಾರವಾದ ಮೋರೆ, ಬೃಹದಾಕಾರದ ಶರೀರಗಳನ್ನು ರಾಮಲಕ್ಷ್ಮಣರು ನೋಡಿ ವಿಸ್ಮಿತರಾದರು. ಅಷ್ಟರಲ್ಲಿ ತಾಟಕೆಯು ಕೈಯೆತ್ತಿಕೊಂಡು ಗರ್ಜಿಸುತ್ತಾ ರಾಮನಿದ್ದೆಡೆಗೆ ಓಡಿ ಬಂದಳು. ವಿಶ್ವಾಮಿತ್ರರು ಅವಳನ್ನು ದಿಟ್ಟಿಸಿ ನೋಡಿ ''ರಾಮಲಕ್ಷ್ಮಣರಿಗೆ ಮಂಗಳವಾಗಲಿ – ಜಯವಾಗಲಿ'' ಎಂದರು. ಆ ಯಕ್ಷಿಯು ರಾಮ ಲಕ್ಷ್ಮಣರ ಮೇಲೆ ಧೂಳನ್ನೆರಚಿ ಕಲ್ಲುಗಳ ಮಳೆಗರೆದಳು. ರಾಮನು ಬಾಣಗಳಿಂದ ಅವೆಲ್ಲವನ್ನೂ ನಿವಾರಿಸಿ ತಾಟಕೆಯ ಎರಡು ಕೈಗಳನ್ನು ಕತ್ತರಿಸಿದನು. ಒಡನೆಯೇ ಅವಳು ಅಂತರ್ಧಾನ ಹೊಂದಿ ತನ್ನ ಮಾಯೆಯಿಂದ ಮತ್ತೆ ಕಲ್ಲುಗಳನ್ನು ತೂರಿದಳು. ಅನಂತರ ಪ್ರತ್ಯಕ್ಷಳಾಗಿ ಗರ್ಜಿಸುತ್ತಾ ರಾಮಲಕ್ಷ್ಮಣರ ಮೇಲೆ ಸಿಡಿಲಿನಂತೆ ಎರಗಿದಳು. ಶ್ರೀರಾಮನು ಅವಳ ಎದೆಗೆ ಗುರಿಯಿಟ್ಟು ಒಂದು ಬಾಣವನ್ನು ಹೊಡೆಯಲು ತಾಟಕೆಯು ಉರುಳಿಬಿದ್ದು ಸತ್ತು ಹೋದಳು. ದೇವತೆಗಳು ವಿಶ್ವಾಮಿತ್ರರನ್ನೂ ಶ್ರೀರಾಮನನ್ನೂ ಕೊಂಡಾಡಿದರು.

ಸಂಜೆಯಾಯಿತು. ವಿಶ್ವಾಮಿತ್ರರು ಸಂತುಷ್ಟರಾಗಿ ಪ್ರೀತಿಯಿಂದ ಶ್ರೀರಾಮನನ್ನು ಆಲಿಂಗಿಸಿ, ''ರಾಮ, ಈ ರಾತ್ರಿ ಇಲ್ಲಿಯೇ ಇರೋಣ. ನಾಳೆ ಪ್ರಾತಃಕಾಲ ನನ್ನ ಆಶ್ರಮಕ್ಕೆ ಹೋಗೋಣ'' ಎಂದರು. ತಾಟಕೆಯು ಸತ್ತದ್ದರಿಂದ ಆ ವನಕ್ಕೆ ಬಂದಿದ್ದ ಉಪದ್ರವವು ತೊಲಗಿಹೋಯಿತು.

ಬೆಳಗಾಯಿತು. ಅವರೆಲ್ಲರೂ ಪ್ರಾತಃಕಾಲದ ಆಹ್ನಿಕಗಳನ್ನು ಮುಗಿಸಿದರು. ಆಮೇಲೆ ವಿಶ್ವಾಮಿತ್ರರು ಮುಗುಳ್ನಗೆ ಬೀರುತ್ತಾ ರಾಘವನನ್ನು ಕುರಿತು ''ರಾಜಪುತ್ರ, ನಿನಗೆ ಮಂಗಳವಾಗಲಿ. ನನಗೆ ಆನಂದವಾಯಿತು. ಈಗ ಎಲ್ಲಾ ಬಗೆಯ ಮಂತ್ರಾಸ್ತ್ರಗಳನ್ನೂ ನಿಮ್ಮಿಬ್ಬರಿಗೂ ಉಪದೇಶಿಸುತ್ತೇನೆ'' ಎಂದರು. ಅನಂತರ ದಂಡಚಕ್ರ, ಕಾಲಚಕ್ರ, ರುದ್ರಶಕ್ತಿ ವಿಷ್ಣುಶಕ್ತಿ ಮೊದಲಾದ ಒಂದು ನೂರು ದಿವ್ಯಾಸ್ತ್ರಗಳನ್ನು ಉಪದೇಶಿಸಿ ಆ ಮಂತ್ರಗಳನ್ನು ಜಪಿಸುವಂತೆ ಹೇಳಿದರು. ಮಂತ್ರಾಸ್ತ್ರ ದೇವತೆಗಳು ಪ್ರಸನ್ನರಾಗಿ ''ನೀವು ಸ್ಮರಿಸಿಕೊಂಡಾಗ ನಾವು ಸಮೀಪಿಸಿ ಸಹಾಯ ಮಾಡುತ್ತೇವೆ'' – ಎಂದು ಹೇಳಿ ಹೊರಟುಹೋದರು. ಅನಂತರ ಆ ಮಂತ್ರಾಸ್ತ್ರಗಳ ಉಪಸಂಹಾರ ಕ್ರಮವನ್ನು ವಿಶ್ವಾಮಿತ್ರರು ತಿಳಿಸಿಕೊಟ್ಟರು. ಆಮೇಲೆ ಅವರೆಲ್ಲರೂ ಆ ಕಾಡನ್ನು ದಾಟಿ ಮುಂದೆ ಹೋದರು. ಅಲ್ಲಿ ವಿಶ್ವಾಮಿತ್ರರ ಸಿದ್ಧಾಶ್ರಮವು ಗೋಚರಿಸಿತು. ಆಶ್ರಮದಲ್ಲಿದ್ದ ಮುನಿಗಳು ವಿಶ್ವಾಮಿತ್ರರನ್ನು ಕಂಡೊಡನೆ ಆನಂದದಿಂದ ಬಂದು ಅವರಿಗೆ ವಂದಿಸಿ ಆಶ್ರಮಕ್ಕೆ ಕರೆದೊಯ್ದರು. ಅಲ್ಲಿ ವಿಶ್ವಾಮಿತ್ರರನ್ನೂ, ರಾಮಲಕ್ಷ್ಮಣರನ್ನೂ ಯಥೋಚಿತವಾಗಿ ಉಪಚರಿಸಿದರು.

ಮರುದಿನ ಪ್ರಾತಃಕಾಲದಲ್ಲಿ ವಿಶ್ವಾಮಿತ್ರ ಮುನಿಗಳು ನಿಯಮ ಬದ್ಧರಾಗಿ ಯಜ್ಞದೀಕ್ಷೆಯನ್ನು ಸ್ವೀಕರಿಸಿದರು. ರಾಮಲಕ್ಷ್ಮಣರು ಪ್ರಾತಃಕೃತ್ಯವನ್ನು ಮುಗಿಸಿ ಅಲ್ಲಿಗೆ ಬಂದರು. ಅಲ್ಲಿದ್ದ ಮುನಿಗಳು ''ರಾಮ, ಲಕ್ಷ್ಮಣ – ವಿಶ್ವಾಮಿತ್ರರು ದೀಕ್ಷೆಯಲ್ಲಿದ್ದಾರೆ. ಅವರು ಮಾತನ್ನಾಡುವುದಿಲ್ಲ. ಇಂದಿನಿಂದ ಆರು ರಾತ್ರಿಗಳವರೆಗೆ ಸಂತತವಾಗಿ ನೀವು ಕಾವಲಾಗಿರಿ'' ಎಂದರು. ಅದರಂತೆ ಆ ರಾಜಪುತ್ರರು ಆರು ಹಗಲು ಆರು ರಾತ್ರಿ ನಿದ್ರೆಯನ್ನು ತೊರೆದು ತಪೋವನವನ್ನು ಕಾಯಲಾರಂಭಿಸಿದರು. ಆ ವೀರರು ಕವಚವನ್ನು ಧರಿಸಿ, ಧನುರ್ಧಾರಿಗಳಾಗಿ ಯಜ್ಞಭೂಮಿಯ ಸುತ್ತಲೂ ತಿರುಗುತ್ತ ಎಚ್ಚರಿಕೆಯಿಂದ ಕಾವಲಾಗಿದ್ದರು. ಐದು ದಿನಗಳು ಕಳೆದವು. ಆರನೆಯ ದಿನ ಯಜ್ಞದ ಪೂರ್ಣಾಹುತಿಯು ಸಲ್ಲಬೇಕಾಗಿತ್ತು. ಶ್ರೀರಾಮನು ಲಕ್ಷ್ಮಣ, ಇಂದು ಯಜ್ಞವು ಪೂರ್ಣವಾಗುತ್ತದೆ. ನಾವು ತುಂಬ ಎಚ್ಚರಿಕೆಯಲ್ಲಿರಬೇಕು. ಸಜ್ಜಾಗಿರು ಎಂದನು. ಇತ್ತ ಯಜ್ಞಕುಂಡದ ಬಳಿ ಋತ್ವಿಜರು ವಿಧಿವತ್ತಾಗಿ ಮಂತ್ರಗಳನ್ನು

ಹೇಳುತ್ತಿದ್ದರು. ಇದ್ದಕ್ಕಿದ್ದಂತೆ ಆಕಾಶದಲ್ಲಿ ಗುಡುಗಿದಂತೆ ದೊಡ್ಡ ಶಬ್ದವಾಯಿತು. ಮಾರೀಚ, ಸುಬಾಹು ಎಂಬ ಇಬ್ಬರು ರಾಕ್ಷಸರು ಇತರ ರಾಕ್ಷಸರೊಡನೆ ಆಕಾಶದಲ್ಲಿ ನುಗ್ಗಿ ಬಂದರು. ಶ್ರೀರಾಮನು ಒಡನೆಯೇ ಪ್ರಜ್ವಲಿಸುವ ಮಾನವಾಸ್ತ್ರವನ್ನು ಧನುಸ್ಸಿಗೆ ಹೂಡಿ ಮಾರೀಚನ ಎದೆಗೆ ಗುರಿಯಿಟ್ಟು ಹೊಡೆದನು. ಅದು ಆತನನ್ನು ನೂರು ಯೋಜನ ದೂರ ಹಾರಿಸಿ ಸಮುದ್ರದಲ್ಲಿ ಕೆಡವಿತು! ಆಮೇಲೆ ರಾಮನು ಆಗ್ನೇಯಾಸ್ತ್ರದಿಂದ ಸುಬಾಹುವನ್ನು ಕೊಂದು ವಾಯವ್ಯಾಸ್ತ್ರದಿಂದ ಉಳಿದ ರಾಕ್ಷಸರನ್ನು ವಿಧ್ವಂಸಗೊಳಿಸಿದನು. ಯಜ್ಞವು ನಿರ್ವಿಘ್ನವಾಗಿ ಸಮಾಪ್ತವಾಯಿತು. ವಿಶ್ವಾಮಿತ್ರ ಮುನಿಗಳು ಸಂತೋಷದಿಂದ ಶ್ರೀರಾಮನನ್ನು ಹತ್ತಿರ ಕರೆದು ಪ್ರೀತಿಯಿಂದ ''ರಾಮ, ನನ್ನ ಉದ್ದೇಶವು ನೆರವೇರಿತು. ಗುರ್ವಾಜ್ಞೆಯನ್ನು ನಡೆಸಿದ್ದೀಯೆ. ಈ ಸಿದ್ಧಾಶ್ರಮವು ನಿಜವಾಗಿ ಸಿದ್ಧಾಶ್ರಮವೇ ಆಯಿತು'' ಎಂದು ಹೊಗಳಿದರು. ಮರುದಿನ ಬೆಳಗಾಗಲು ರಾಮಲಕ್ಷ್ಮಣರು ಬಂದು ವಿಶ್ವಾಮಿತ್ರ ಮಹರ್ಷಿಗಳ ಪಾದಕ್ಕೆ ಅಭಿವಾದನ ಮಾಡಿದರು. ಶ್ರೀರಾಮನು ''ಮಹರ್ಷಿಗಳೆ, ತಮ್ಮ ಸೇವಕರಾದ ನಾವು ಬಂದಿದ್ದೇವೆ. ನಾವೇನು ಮಾಡಬೇಕು, ಅಪ್ಪಣೆಯಾಗಲಿ'' ಎಂದನು. ವಿಶ್ವಾಮಿತ್ರರು ಬಳಿಯಲ್ಲಿ ಕುಳಿತಿದ್ದ ಇತರ ಮುನಿಗಳನ್ನು ನೋಡಿ ಶ್ರೀರಾಮನನ್ನು ಕುರಿತು ಇಂತೆಂದರು : ''ರಾಮ, ಮಿಥಿಲಾಧಿಪತಿಯಾದ ಜನಕ ರಾಜನು ಒಂದು ಯಜ್ಞವನ್ನು ಮಾಡಲು ಉದ್ದೇಶಿಸಿದ್ದಾನೆ. ನಾವೆಲ್ಲರೂ ಅಲ್ಲಿಗೆ ಹೋಗುತ್ತೇವೆ. ಆತನ ಬಳಿ ಒಂದು ಅದ್ಭುತವಾದ ಧನುಸ್ಸಿದೆ. ನೀವಿಬ್ಬರೂ ನೋಡಬೇಕಾದ ಧನುಸ್ಸು ಅದು. ಅದು ಶಿವಧನುಸ್ಸು. ವಂಶಪರಂಪರೆಯಿಂದ ಆ ಜನಕರಾಜನ ವಶಕ್ಕೆ ಬಂದಿದೆ. ನೀವೂ ಬನ್ನಿರಿ. ಅಲ್ಲಿಗೆ ಹೋಗೋಣ'' ಎಂದರು. ಅದರಂತೆ ರಾಮಲಕ್ಷ್ಮಣರು ಪ್ರಯಾಣಕ್ಕೆ ಸಿದ್ಧರಾದರು. ವಿಶ್ವಾಮಿತ್ರ ಮುನಿಗಳು ಅವರಿಬ್ಬರನ್ನೂ ಕರೆದುಕೊಂಡು ಇತರ ಮುನಿಗಳೊಡನೆ ಮಿಥಿಲಾನಗರಕ್ಕೆ ಹೊರಟರು.

೪

ಕುಶನಾಭನ ಕನ್ಯೆಯರ ವೃತ್ತಾಂತ

ಅವರೆಲ್ಲರೂ ಬಹಳ ದೂರ ಹೋಗಿ ಶೋಣಾ ನದಿಯ ತೀರವನ್ನು ಸೇರಿದರು. ಸಾಯಂಕಾಲವಾದ್ದರಿಂದ ಸಾಯಂಸಂಧ್ಯೆಯನ್ನು ಆಚರಿಸಿ ಅಗ್ನಿಕಾರ್ಯವನ್ನು ಮಾಡಿ ಎಲ್ಲರೂ ವಿಶ್ವಾಮಿತ್ರರ ಎದುರಿಗೆ ಕುಳಿತರು. ಆಗ ಶ್ರೀರಾಮನು ವಿಶ್ವಾಮಿತ್ರ ಮಹರ್ಷಿಗಳನ್ನು ಕುರಿತು ''ಪೂಜ್ಯರೆ, ಸಮೃದ್ಧ ವನಗಳಿಂದ ಶೋಭಿಸುವ ಈ ದೇಶ

ಯಾವುದು? ಇದರ ವೃತ್ತಾಂತವೇನು?'' ಎಂದು ಕೇಳಿದನು. ಆಗ ವಿಶ್ವಾಮಿತ್ರರು ಹೇಳಿದರು : ''ಹಿಂದೆ ಕುಶನೆಂಬ ಧರ್ಮನಿಷ್ಠನಾದ ಒಬ್ಬ ಮಹಾತ್ಮನಿದ್ದನು. ಆತನಿಗೆ ಕುಶಾಂಬ, ಕುಶನಾಭ, ಅಧೂರ್ತರಜಸ, ವಸು – ಎಂಬ ವೀರರಾದ ನಾಲ್ವರು ಪುತ್ರರು ಹುಟ್ಟಿದರು. ಅವರೆಲ್ಲರೂ ತೇಜಸ್ವಿಗಳು. ಕುಶನು ಅವರನ್ನು ಕುರಿತು ''ಮಕ್ಕಳಿರಾ, ನೀವು ಕ್ಷತ್ರಿಯರು. ಪ್ರಜಾಪಾಲನೆಯನ್ನು ಮಾಡಿ ಧರ್ಮವನ್ನು ಸಂಪಾದಿಸಿರಿ'' ಎಂದು ತಿಳಿಸಿದನು. ಅದರಂತೆ ನಾಲ್ವರು ಮಕ್ಕಳು ನಾಲ್ಕು ನಗರಗಳನ್ನು ಸ್ಥಾಪಿಸಿಕೊಂಡರು. ಕುಶಾಂಬನು ಕೌಶಾಂಬಿ, ಕುಶನಾಭನು ಮಹೋದಯ, ಅಧೂರ್ತರಜಸನು ಧರ್ಮಾರಣ್ಯ, ವಸುವು ಗಿರಿವ್ರಜ – ಎಂಬ ನಗರಗಳನ್ನು ನಿರ್ಮಿಸಿಕೊಂಡರು. ಗಿರಿವ್ರಜಕ್ಕೆ ವಸುಮತಿ ಎಂದು ಇನ್ನೊಂದು ಹೆಸರು. ಇದೇ ವಸುವಿಗೆ ಸೇರಿದ ವಸುಮತಿ.

ಆ ನಾಲ್ವರಲ್ಲಿ ಕುಶನಾಭನು ತಪಸ್ವಿಯೆಂದು ವಿಖ್ಯಾತನಾಗಿದ್ದನು. ರಾಜರ್ಷಿಯಾದ ಆತನಿಗೆ ಘೃತಾಚಿ ಎಂಬ ಪತ್ನಿಯಲ್ಲಿ ನೂರು ಮಂದಿ ಹೆಣ್ಣುಮಕ್ಕಳು ಜನಿಸಿದರು. ಅತ್ಯಂತ ಸುಂದರಿಯರಾದ ಆ ಕನ್ಯೆಯರು ಒಂದು ದಿನ ಉದ್ಯಾನವನದಲ್ಲಿ ವಿಹರಿಸುತ್ತಿದ್ದರು. ವಾಯುದೇವನು ಅವರನ್ನು ಕಂಡು ಮೋಹಿಸಿ ''ಎಲೌ ತರುಣಿಯರೆ, ನೀವೆಲ್ಲರೂ ನನ್ನ ಪತ್ನಿಯರಾಗಿರಿ. ದೇವಸ್ತ್ರೀಯರಾಗಿ ಯೌವನವನ್ನು ಪಡೆಯಿರಿ'' ಎಂದು ಹೇಳಿದನು. ವಾಯುವಿನ ಮಾತನ್ನು ಕೇಳಿ ಆ ಹುಡುಗಿಯರು ನಕ್ಕು ಅವನನ್ನು ಕುರಿತು ''ಎಲೈ ದೇವೋತ್ತಮ, ನಮ್ಮನ್ನೇಕೆ ಅವಮಾನ ಪಡಿಸುತ್ತೀಯೆ? ನಾವು ಕುಶನಾಭನ ಮಕ್ಕಳು. ನಮ್ಮ ತಂದೆಯು ನಮ್ಮನ್ನು ಯಾರಿಗೆ ಕೊಡುವನೋ ಆತನೇ ನಮ್ಮ ಪತಿ. ಎಲೈ ದುರ್ಬುದ್ಧಿಯವನೆ, ನಮ್ಮ ತಂದೆಯನ್ನು ಬಿಟ್ಟು ನಮ್ಮನ್ನೇ ಹೀಗೆ ಕೇಳಬಹುದೆ?'' ಎಂದರು. ಆಗ ವಾಯುದೇವನು ಕೋಪಗೊಂಡು ಆ ಕನ್ನಿಕೆಯರ ದೇಹವನ್ನು ಹೊಕ್ಕು ಅವರನ್ನು ಕುಬ್ಜರನ್ನಾಗಿ ಮಾಡಿಬಿಟ್ಟನು. ಅವರು ಅತ್ಯಂತ ದುಃಖಿತರಾಗಿ ಕಣ್ಣೀರು ಸುರಿಸುತ್ತಾ ಅರಮನೆಗೆ ಹಿಂದಿರುಗಿ ಹೋದರು. ಕುಶನಾಭನು ತನ್ನ ಪ್ರೀತಿಯ ಪುತ್ರಿಯರು ಆ ವಿಕಾರ ರೂಪದಲ್ಲಿ ಬಂದಿರುವುದನ್ನು ಕಂಡು ''ಮಕ್ಕಳೆ, ಏನಿದು? ಯಾವನು ನಿಮ್ಮನ್ನು ಹೀಗೆ ಮಾಡಿದನು?'' ಎಂದು ಕೇಳಿದನು. ಆ ಹುಡುಗಿಯರು ತಂದೆಯ ಪಾದಗಳಿಗೆ ನಮಸ್ಕರಿಸಿ 'ಮಹಾರಾಜ, ಸರ್ವಾತ್ಮಕನಾದ ವಾಯುವು ನಮ್ಮನ್ನು ಬಲಾತ್ಕರಿಸಲು ಇಚ್ಛಿಸುತ್ತಾನೆ. ನಾವು ಆತನಿಗೆ ''ನಮಗೆ ತಂದೆ ಇದ್ದಾನೆ. ನಾವು ಸ್ವಚ್ಛಂದವಾಗಿ ನಡೆಯತಕ್ಕವರಲ್ಲ. ನಮ್ಮ ತಂದೆಯನ್ನು ಕೇಳಿನೋಡು'' ಎಂದೆವು. ಇಷ್ಟು ಮಾತ್ರದಿಂದ ಅವನು ಕೋಪಗೊಂಡು ದುರ್ಬುದ್ಧಿಯಿಂದ ಹೀಗೆ ಮಾಡಿಬಿಟ್ಟನು

ಎಂದು ದೂರಿದರು. ಪರಮಧಾರ್ಮಿಕನಾದ ಕುಶನಾಭನು 'ಮಕ್ಕಳೆ, ನೀವೆಲ್ಲರೂ ಕುಲೋಚಿತವಾದ ನನ್ನ ಮರ್ಯಾದೆಯನ್ನು ಕಾಪಾಡಿದ್ದೀರಿ. ದೊಡ್ಡ ಕ್ಷಮಾಗುಣವನ್ನು ಪ್ರದರ್ಶಿಸಿದ್ದೀರಿ. ತಾಳ್ಮೆಯೇ ಸತ್ಯ. ತಾಳ್ಮೆಯೇ ಧರ್ಮ. ತಾಳ್ಮೆಯಿಂದಲೇ ಈ ಜಗತ್ತು ಉಳಿದಿದೆ' ಎಂದು ನುಡಿದು ಅವರನ್ನು ಸಂತೈಸಿದನು. ಅನಂತರ ತನ್ನ ಮಂತ್ರಿಗಳೊಡನೆ ಮುಂದೆ ಏನು ಮಾಡಬೇಕೆಂದು ಸಮಾಲೋಚಿಸಿದನು.

ಆ ಸಮಯದಲ್ಲಿ ಬ್ರಹ್ಮದತ್ತನೆಂಬ ಮಹಾತೇಜಸ್ವಿಯಾದ ರಾಜನು ಕಾಂಪಿಲ್ಯ ನಗರವನ್ನು ಪಾಲಿಸುತ್ತಿದ್ದನು. ಆತನು ಪರಮ ಧಾರ್ಮಿಕ. ಬ್ರಹ್ಮತೇಜಸ್ಸಿನಿಂದ ವಿರಾಜಿಸುತ್ತಿದ್ದನು. ಮಂತ್ರಿಗಳ ಸಲಹೆಯಂತೆ ಕುಶನಾಭನು ತನ್ನ ನೂರು ಮಂದಿ ಪುತ್ರಿಯರನ್ನು ಬ್ರಹ್ಮದತ್ತನಿಗೆ ಕೊಟ್ಟು ಮದುವೆ ಮಾಡಿದನು. ಪಾಣಿಗ್ರಹಣ ಸಮಯದಲ್ಲಿ ಬ್ರಹ್ಮದತ್ತನು ಒಬ್ಬೊಬ್ಬ ವಧುವಿನ ಕೈಯನ್ನು ಹಿಡಿದೊಡನೆ ಅವರ ಕುಬ್ಜತ್ವವು ತೊಲಗಿ ಮೊದಲಿನಂತೆ ಮನೋಹರವಾದ ಆಕೃತಿಯನ್ನು ಧರಿಸಿದರು. ಅದನ್ನು ನೋಡಿ ಕುಶನಾಭನಿಗೆ ಪರಮಾನಂದವಾಯಿತು.

ಇತ್ತಲಾಗಿ ಕುಶನಾಭನಿಗೆ ಗಂಡುಮಕ್ಕಳಿಲ್ಲದ್ದರಿಂದ ಪುತ್ರಕಾಮೇಷ್ಟಿಯನ್ನು ಮಾಡಿದನು. ಆಗ ಬ್ರಹ್ಮನ ಮಾನಸ ಪುತ್ರನೂ, ಕುಶನಾಭನ ತಂದೆಯೂ ಆದ ಕುಶನು ಆಗಮಿಸಿ ''ಮಗನೆ, ಈ ಯಾಗದಿಂದ ಧಾರ್ಮಿಕನಾದ ಒಬ್ಬ ಮಗನು ನಿನಗೆ ಹುಟ್ಟುವನು. ಅವನಿಗೆ ಗಾಧಿ ಎಂದು ಹೆಸರಿಡು. ಆತನಿಂದ ನಿನಗೆ ಶಾಶ್ವತವಾದ ಕೀರ್ತಿಯು ಲಭಿಸುವುದು'' ಎಂದು ಹೇಳಿ ಹೊರಟುಹೋದನು. ಕೆಲವು ಕಾಲದ ಮೇಲೆ ಕುಶನಾಭನಿಗೆ ಒಬ್ಬ ಪುತ್ರನು ಜನಿಸಿದನು. ಆತನಿಗೆ ಗಾಧಿ ಎಂದು ನಾಮಕರಣವಾಯಿತು. ಅವನು ಪರಮ ಧರ್ಮಿಷ್ಠ. ರಾಮ, ಅವನೇ ನನ್ನ ತಂದೆ. ನಾನು ಕುಶವಂಶದಲ್ಲಿ ಹುಟ್ಟಿದ್ದರಿಂದ ನನ್ನನ್ನು ಕೌಶಿಕ ಎನ್ನುತ್ತಾರೆ. ನನಗೆ ಒಬ್ಬ ಹಿರಿಯ ಸೋದರಿ ಇದ್ದಳು. ಅವಳ ಹೆಸರು ಸತ್ಯವತಿ. ಅವಳನ್ನು ಋಚೀಕನೆಂಬ ಮುನಿಗೆ ಕೊಟ್ಟು ಮದುವೆಯಾಯಿತು. ಅವನು ವಿಧಿಯೋಗದಿಂದ ಮೃತನಾಗಲು, ಪತಿವ್ರತೆಯಾದ ಅವಳು ಪತಿಯನ್ನು ಹಿಂಬಾಲಿಸಿ ಸ್ವರ್ಗಸ್ಥಳಾದಳು. ಅವಳು ತನ್ನ ಮಹಿಮೆಯಿಂದ ಕೌಶಿಕಿ ಎಂಬ ಮಹಾನದಿಯಾಗಿ ಹಿಮಾಲಯ ಪರ್ವತದ ಬಳಿ ಹರಿಯುತ್ತಿದ್ದಾಳೆ. ಲೋಕ ಹಿತಕ್ಕಾಗಿ ನನ್ನ ಅಕ್ಕನು ನದಿಯಾಗಿ ಪ್ರವಹಿಸಿದಳು. ರಾಮ, ನಾನು ಅಕ್ಕನ ಮೇಲಿನ ಪ್ರೀತಿಯಿಂದ ಹಿಮಾಲಯ ಪರ್ವತದ ತಪ್ಪಲಿನಲ್ಲಿ ಕೌಶಿಕೀ ನದಿಯ ತೀರದಲ್ಲಿಯೇ ಹೆಚ್ಚಾಗಿ ವಾಸ ಮಾಡುತ್ತೇನೆ. ಅಲ್ಲಿ ನನಗೆ ಸುಖವೆನಿಸುತ್ತದೆ. ನಾನು ಒಂದು ನಿಯಮ ಪಾಲನೆಗಾಗಿ ಅಲ್ಲಿಂದ ಸಿದ್ಧಾಶ್ರಮಕ್ಕೆ ಬಂದೆ. ಇದಿಷ್ಟೂ ನನ್ನ

ವಂಶದ ಕಥೆ. ಕಥೆ ಹೇಳುವುದರಲ್ಲಿ ಅರ್ಧರಾತ್ರಿಯಾಗಿ ಹೋಯಿತು. ಒಳ್ಳೆಯದು, ಇನ್ನು ಎಲ್ಲರೂ ನಿದ್ರೆ ಮಾಡಿರಿ. ಇಲ್ಲದಿದ್ದರೆ ನಾಳೆ ದಾರಿಯಲ್ಲಿ ತೊಂದರೆಯಾದೀತು'' ಎಂದರು. ಇದೆಲ್ಲವನ್ನೂ ಕೇಳುತ್ತಿದ್ದ ಋಷಿಗಳು ವಿಶ್ವಾಮಿತ್ರರನ್ನು ಕೊಂಡಾಡಿದರು. ವಿಶ್ವಾಮಿತ್ರರು ಅಸ್ತಂಗತನಾದ ಸೂರ್ಯನಂತೆ ನಿದ್ರಾವಶರಾದರು. ರಾಮಲಕ್ಷ್ಮಣರು ಮುನಿಗಳ ಮಹಿಮೆಯನ್ನು ಹೊಗಳುತ್ತ ನಿದ್ರಿಸಿದರು.

ಬೆಳಗಾಯಿತು. ಎಲ್ಲರೂ ಪ್ರಾತಃಕೃತ್ಯಗಳನ್ನು ನೆರವೇರಿಸಿ ವಿಶ್ವಾಮಿತ್ರರು ತೋರಿಸಿದ ದಾರಿಯಲ್ಲಿ ಶೋಣಾನದಿಯನ್ನು ದಾಟಿ ಮಧ್ಯಾಹ್ನದ ಹೊತ್ತಿಗೆ ಗಂಗಾನದಿಯ ಬಳಿಗೆ ಬಂದರು. ಎಲ್ಲರೂ ಗಂಗಾತೀರದಲ್ಲಿ ಪ್ರಯಾಣವನ್ನು ನಿಲ್ಲಿಸಿ ಸ್ನಾನ ಮಾಡಿ ಮಾಧ್ಯಾಹ್ನಿಕಗಳನ್ನು ನೆರವೇರಿಸಿ ಅಮೃತ ಸಮಾನವಾದ ಹವಿಸ್ಸನ್ನು ಭುಂಜಿಸಿದರು. ಆಮೇಲೆ ಎಲ್ಲರೂ ಸಂತೋಷದಿಂದ ಗಂಗಾತೀರದಲ್ಲಿ ವಿಶ್ವಾಮಿತ್ರರ ಸುತ್ತಲೂ ಬಂದು ಕುಳಿತರು. ಆಗ ಶ್ರೀರಾಮನು ವಿಶ್ವಾಮಿತ್ರರನ್ನು ಕುರಿತು 'ಮಹಾತ್ಮರೆ, ಈ ಗಂಗಾನದಿಯ ವಿಷಯವನ್ನು ತಿಳಿದುಕೊಳ್ಳಬೇಕೆಂದಿದ್ದೇನೆ. ಈ ನದಿಗೆ ತ್ರಿಪಥಗಾ ಎಂಬ ಹೆಸರು ಏಕೆ ಬಂದಿತು? ಹೇಳಬೇಕು?' ಎಂದು ಪ್ರಾರ್ಥಿಸಿದನು. ವಿಶ್ವಾಮಿತ್ರರು ಅದೆಲ್ಲವನ್ನೂ ವಿವರಿಸಲಾರಂಭಿಸಿದರು.

೫

ಕುಮಾರಸ್ವಾಮಿಯ ಜನನ. ಸಗರಪುತ್ರರ ಕಥೆ. ಭಗೀರಥನಿಂದ ಗಂಗಾವತರಣ.

''ಹಿಮವಂತನೆಂಬ ಪರ್ವತರಾಜನಿಗೆ ಮೇನೆ ಎಂಬವಳು ಪತ್ನಿ. ಅವಳ ಗರ್ಭದಲ್ಲಿ ಗಂಗಾ, ಉಮಾ ಎಂಬ ಇಬ್ಬರು ಪುತ್ರಿಯರು ಉದಿಸಿದರು. ಹಿಮವಂತನ ಹಿರಿಯ ಮಗಳು ಗಂಗೆ. ಒಮ್ಮೆ ದೇವತೆಗಳು ದೇವಕಾರ್ಯಕ್ಕಾಗಿ ಗಂಗೆಯನ್ನು ಸಮರ್ಪಿಸಬೇಕೆಂದು ಹಿಮವಂತನನ್ನು ಬೇಡಿಕೊಂಡರು. ಹಿಮವಂತನು ತ್ರಿಲೋಕ ಹಿತಕ್ಕಾಗಿ ಲೋಕಪಾವನಿಯಾದ ಗಂಗೆಯನ್ನು ಸಮರ್ಪಿಸಿದನು. ಅವಳು ನದೀರೂಪದಲ್ಲಿ ಹರಿಯುತ್ತಿದ್ದಾಳೆ. ಅವಳೇ ಈ ಗಂಗಾನದಿ. ಹಿಮವಂತನ ಇನ್ನೊಬ್ಬ ಮಗಳಾದ ಉಮಾ ಎಂಬವಳು ಉಗ್ರವಾದ ತಪಸ್ಸನ್ನಾಚರಿಸಿ ಮಹಾಮಹಿಮನಾದ ಶಿವನನ್ನು ಮದುವೆಯಾಗಿ ಸರ್ವಲೋಕ ನಮಸ್ಕೃತಳಾದಳು'' ಎಂದು ವಿಶ್ವಾಮಿತ್ರರು ಹೇಳಿದರು.

ರಾಮಲಕ್ಷ್ಮಣರಿಗೆ ಗಂಗೆಯ ಕಥೆಯನ್ನು ವಿಸ್ತಾರವಾಗಿ ಕೇಳಬೇಕೆಂದು ಕುತೂಹಲವಾಯಿತು. ಅವರು ''ಮುನಿಗಳೆ, ಈ ಲೋಕಪಾವನಿಯಾದ ಗಂಗೆ ಮೂರು ಪಥಗಳನ್ನು ವ್ಯಾಪಿಸಿದ್ದು ಹೇಗೆ? ತ್ರಿಪಥಗಾ ಎಂಬ ಹೆಸರು ಹೇಗೆ ಪ್ರಸಿದ್ಧವಾಯಿತು?'' ಎಂದು ಕೇಳಿದರು. ಆಗ ವಿಶ್ವಾಮಿತ್ರರು ಎಲ್ಲವನ್ನೂ ವಿಸ್ತಾರವಾಗಿ ಹೇಳಲಾರಂಭಿಸಿದರು. ''ಪರಮೇಶ್ವರನು ಉಮಾದೇವಿಯನ್ನು ಮದುವೆಯಾದ ಮೇಲೆ ಅವಳೊಡನೆ ಕ್ರೀಡಿಸಲಾರಂಭಿಸಿದನು. ನೂರು ದಿವ್ಯ ವರ್ಷಗಳು ಕಳೆದವು. ಉಮಾದೇವಿಯಲ್ಲಿ ಪುತ್ರನು ಜನಿಸಲಿಲ್ಲ. ಬ್ರಹ್ಮಾದಿ ದೇವತೆಗಳು ಹೋಗಿ ಶಿವನಿಗೆ ನಮಸ್ಕರಿಸಿ 'ಮಹಾದೇವ, ನೀನು ಲೋಕಹಿತಕ್ಕಾಗಿ ಉದ್ಯುಕ್ತನಾಗಿದ್ದೀಯೆ. ಪ್ರಸನ್ನನಾಗು. ನಿನ್ನ ತೇಜಸ್ಸನ್ನು ಧರಿಸಲು ಈ ಲೋಕದಲ್ಲಿ ಯಾರಿಗೂ ಸಾಮರ್ಥ್ಯವಿಲ್ಲ. ತ್ರಿಲೋಕ ಹಿತಕ್ಕಾಗಿ ತೇಜಸ್ಸನ್ನು ತೇಜೋಮಯವಾದ ನಿನ್ನ ದೇಹದಲ್ಲಿಯೇ ಧರಿಸು. ಈ ಲೋಕವನ್ನು ರಕ್ಷಿಸು'' ಎಂದು ಪ್ರಾರ್ಥಿಸಿದರು. ಆಗ ಪರಮೇಶ್ವರನು 'ಒಳ್ಳೆಯದು; ದೇವತೆಗಳೆ, ನನ್ನ ತೇಜಸ್ಸನ್ನು ನನ್ನಲ್ಲಿಯೇ ಧರಿಸುವೆನು. ಉಮೆಯೂ ಸಹಕರಿಸುವಳು. ಆದರೆ ಈಗಾಗಲೇ ಸ್ಖಲಿತವಾದ ನನ್ನ ತೇಜೋಽಂಶವನ್ನು ಧರಿಸತಕ್ಕವರಾರು? ಹೇಳಿರಿ' ಎಂದು ಕೇಳಿದನು. ದೇವತೆಗಳು 'ಅದನ್ನು ಪೃಥ್ವಿಯು ಧರಿಸುವಳು' ಎಂದರು. ಪರಮೇಶ್ವರನು ತನ್ನ ತೇಜೋಽಂಶವನ್ನು ವಿಸರ್ಜಿಸಿದನು. ಅದು ಸಮಸ್ತ ಪೃಥ್ವಿಯನ್ನು ವ್ಯಾಪಿಸಿತು. ಪೃಥ್ವಿಯು ಅದನ್ನು ತಡೆದುಕೊಳ್ಳಲಾರಳೆಂಬ ಭಯದಿಂದ ದೇವತೆಗಳು ಅಗ್ನಿಯನ್ನು ಕರೆದು 'ನೀನು ತೇಜಸ್ಸನ್ನು ಧರಿಸು' ಎಂದರು. ಪ್ರಜ್ವಲಿಸುತ್ತಿದ್ದ ಆ ತೇಜೋಂಶವನ್ನೇ ಅಗ್ನಿಯು ಧರಿಸಿದಾಗ ಅದರ ಒಂದಂಶವು ಶ್ವೇತಪರ್ವತವಾಯಿತು. ಅದರ ಸಮೀಪದಲ್ಲಿ ಒಂದು ದಿವ್ಯವಾದ ದರ್ಭೆಯ ವನವು ಉತ್ಪನ್ನವಾಯಿತು. ಅಗ್ನಿಯು ಧರಿಸಲಾರದೆ ಉಗುಳಿದ ಇನ್ನೊಂದು ತೇಜೋಽಂಶದಿಂದ ಆ ದರ್ಭೆಯ ವನದಲ್ಲಿ ಕಾರ್ತಿಕೇಯನು ಉದ್ಭವಿಸಿದನು. ಶರವಣ (ದರ್ಭೆಯ ವನ)ದಲ್ಲಿ ಉದ್ಭವಿಸಿದ್ದರಿಂದ ಕಾರ್ತಿಕೇಯನಿಗೆ ಶರವಣಭವನೆಂದೂ, ಅಗ್ನಿ ಮುಖದಿಂದ ಜನಿಸಿದ ಕಾರಣ ಅಗ್ನಿಸಂಭವನೆಂದೂ ಹೆಸರಾಯಿತು. ಕೃತ್ತಿಕೆಯರು ಆ ಮಗುವನ್ನು ಪೋಷಿಸಿದ್ದರಿಂದ ಕಾರ್ತಿಕೇಯ ಎಂಬ ಹೆಸರು ಬಂದಿತು. ದೇವತೆಗಳೂ ಋಷಿಗಳೂ ಉಮಾಮಹೇಶ್ವರರನ್ನು ಸ್ತೋತ್ರ ಮಾಡಿದರು. ಆದರೆ, ರಾಮ, ಹಿಮವಂತನ ಮಗಳಾದ ಉಮೆಗೆ ಮಾತ್ರ ಶಿವನ ತೇಜಸ್ಸನ್ನು ಧರಿಸುವ ಅವಕಾಶವು ತಪ್ಪಿದ್ದರಿಂದ ಕೋಪ ಬಂದಿತು.

ಅವಳು ''ದೇವತೆಗಳೆ, ನಾನು ಪುತ್ರಾರ್ಥಿಯಾಗಿರುವಾಗ ನೀವು ನನಗೆ ವಿಘ್ನ

ಮಾಡಿದಿರಿ. ಇದರ ಫಲವನ್ನನುಭವಿಸಿರಿ. ನಿಮಗೆ ಇನ್ನು ಮುಂದೆ ಸಂತಾನವಾಗದೇ ಹೋಗಲಿ'' ಎಂದು ಅವರನ್ನು ಶಪಿಸಿಬಿಟ್ಟಳು. ದೇವತೆಗಳೆಲ್ಲರೂ ದುಃಖಿತರಾದರು. ಪರಮೇಶ್ವರನು ಅವರನ್ನು ಮರುಕದಿಂದ ನೋಡಿ ಇನ್ನೊಂದು ಶಿಖರಕ್ಕೆ ಹೋಗಿ ಪಾರ್ವತಿಯೊಡನೆ ತಪೋನಿಷ್ಠನಾದನು.''

ಹೀಗೆ ಕುಮಾರೋತ್ಪತ್ತಿಯ ಕಥೆಯನ್ನು ಕೌಶಿಕ ಮುನಿಗಳು ತಿಳಿಸಿ ಮತ್ತೆ ಹೇಳತೊಡಗಿದರು. ''ರಾಮ, ಹಿಂದೆ ಸಗರನೆಂಬ ಒಬ್ಬ ಧರ್ಮಾತ್ಮನು ನಿಮ್ಮ ವಂಶವನ್ನು ಜನಿಸಿ ಅಯೋಧ್ಯೆಗೆ ಅಧಿಪತಿಯಾಗಿದ್ದನು. ಅವನಿಗೆ ಕೇಶಿನಿ, ಸುಮತಿ ಎಂಬ ಇಬ್ಬರು ಮಡದಿಯರಿದ್ದರು. ಆದರೂ ಸಂತತಿಯಾಗದೇ ಹೋದ್ದರಿಂದ ಸಗರನು ತನ್ನ ಪತ್ನಿಯರೊಂದಿಗೆ ಹಿಮವತ್ಪರ್ವತದ ಭೃಗುಪ್ರಸ್ರವಣವೆಂಬ ಉಪ ಪರ್ವತದಲ್ಲಿ ತಪಸ್ಸನ್ನಾರಂಭಿಸಿದನು. ಭೃಗು ಮುನಿಗಳು ತಪಸ್ಸಿಗೆ ಸಂತುಷ್ಟರಾಗಿ ''ರಾಜ, ನಿನಗೆ ಸಂತಾನ ಲಾಭವಾಗುವುದು. ನಿನ್ನ ಪತ್ನಿಯರಲ್ಲಿ ಒಬ್ಬಳಿಗೆ ವಂಶವನ್ನು ನಡೆಸುವ ಒಬ್ಬ ಪುತ್ರನು ಹುಟ್ಟುವನು. ಇನ್ನೊಬ್ಬಳಿಗೆ ಅರವತ್ತು ಸಾವಿರ ಪುತ್ರರು ಜನಿಸುವರು'' ಎಂಬ ವರವನ್ನು ಕೊಟ್ಟರು. ಸಂತೋಷಗೊಂಡ ರಾಜಪತ್ನಿಯರು ಭೃಗುಮುನಿಗಳಿಗೆ ಕೈ ಮುಗಿದು ''ಮಹರ್ಷಿಗಳೆ, ಯಾರಿಗೆ ಒಬ್ಬ ಪುತ್ರನು ಜನಿಸುವನು? ಯಾರಿಗೆ ಬಹುಮಂದಿ ಪುತ್ರರು?'' ಎಂದು ಕೇಳಿದರು. ಭೃಗು ಮಹರ್ಷಿಗಳು 'ನಿಮ್ಮ ಇಷ್ಟವಿದ್ದಂತಾಗುವುದು. ವಂಶವನ್ನು ನಡೆಸುವ ಒಬ್ಬನು ಯಾರಿಗೆ ಬೇಕು? ಕೀರ್ತಿಶಾಲಿಗಳಾದ ಮಕ್ಕಳು ಯಾರಿಗೆ ಬೇಕು?' ಎಂದು ಕೇಳಿದರು. ಆಗ ಕೇಶಿನಿಯು ತನಗೆ ಒಬ್ಬ ಪುತ್ರನಿರಲೆಂದೂ ಸುಮತಿಯು ತನಗೆ ಅರವತ್ತು ಸಹಸ್ರ ಪುತ್ರರಾಗಲೆಂದೂ ಹೇಳಿದರು. ಮುನಿಗಳು 'ತಥಾಸ್ತು' ಎಂದರು.

ಕೆಲವು ಕಾಲ ಕಳೆಯಿತು. ಹಿರಿಯಳಾದ ಕೇಶಿನಿಯು ಒಬ್ಬ ಮಗನನ್ನು ಹಡೆದಳು. ಅವನಿಗೆ ಅಸಮಂಜನೆಂದು ಹೆಸರಾಯಿತು. ಸುಮತಿಯ ಗರ್ಭದಿಂದ ಸೋರೇಕಾಯಿ ಯಂತಿರುವ ಒಂದು ಗರ್ಭಪಿಂಡವು ಹುಟ್ಟಿತು. ಆಮೇಲೆ ಪಿಂಡವು ಒಡೆದು ಅರವತ್ತು ಸಾವಿರ ಶಿಶುಗಳು ಹೊರಕ್ಕೆ ಬಂದವು. ದಾದಿಯರು ಅವುಗಳನ್ನು ಘೃತಪೂರ್ಣವಾದ ಕುಂಭದಲ್ಲಿಟ್ಟು ಸಾಕಿದರು. ಕಾಲಕ್ರಮದಲ್ಲಿ ಅವರೆಲ್ಲರೂ ಬೆಳೆದು ಯೌವನಶಾಲಿ ಗಳಾದರು.

ಸಗರನ ಹಿರಿಯ ಮಗನಾದ ಅಸಮಂಜನ ನಡತೆ ಚೆನ್ನಾಗಿ ಇರಲಿಲ್ಲ. ಅವನು ಅಯೋಧ್ಯೆಯಲ್ಲಿರುವ ಚಿಕ್ಕ ಬಾಲಕರನ್ನು ಕಂಡಾಗ ಅವರನ್ನು ಎತ್ತಿಕೊಂಡು ಹೋಗಿ ಸರಯೂ ನದಿಗೆ ಎಸೆದು, ಅವರು ಮುಳುಗಿ ಹೋಗುವುದನ್ನು ನೋಡಿ ಕೈಬಡಿದು

ನಗುತ್ತಿದ್ದನು. ಹೀಗೆ ಕೆಟ್ಟ ನಡತೆಯವನೂ ಪ್ರಜಾಪೀಡಕನೂ ಆದ ಅವನನ್ನು ತಂದೆಯು ದೇಶಭ್ರಷ್ಟನನ್ನಾಗಿ ಮಾಡಿ ಓಡಿಸಿದನು. ಅಸಮಂಜನಿಗೆ ಅಂಶುಮಂತನೆಂಬ ಮಗನಿದ್ದನು. ಅವನು ಪರಾಕ್ರಮಿಯೂ ಒಳ್ಳೆಯ ಗುಣವಂತನೂ ಆಗಿ ಸಕಲರಿಗೂ ಪ್ರೀತಿ ಪಾತ್ರನಾಗಿದ್ದನು. ಬಹಳ ಕಾಲದ ಮೇಲೆ ಸಗರ ಮಹಾರಾಜನಿಗೆ ಅಶ್ವಮೇಧ ಯಾಗವನ್ನು ಮಾಡಬೇಕೆಂದು ಇಚ್ಛೆಯಾಯಿತು. ಅವನು ಯಜ್ಞವನ್ನಾರಂಭಿಸಿದನು. ಸಗರನ ಆಜ್ಞೆಯಂತೆ ಅವನ ಮೊಮ್ಮಗನಾದ ಅಂಶುಮಂತನು ಧನುರ್ಧಾರಿಯಾಗಿ ಯಜ್ಞಾಶ್ವವನ್ನು ರಕ್ಷಿಸುತ್ತ ಹೊರಟನು. ಇಂದ್ರನು ಮಾಯೆಯಿಂದ ಆ ಯಜ್ಞಾಶ್ವವನ್ನು ಅಪಹರಿಸಿಬಿಟ್ಟನು. ಅದನ್ನು ತಿಳಿದ ಋತ್ವಿಜರು ಯಜ್ಞದೀಕ್ಷಿತನಾಗಿ ಕುಳಿತಿದ್ದ ಸಗರನನ್ನು ನೋಡಿ 'ಮಹಾರಾಜ, ಯಜ್ಞಾಶ್ವವನ್ನು ಯಾರೋ ಅಪಹರಿಸಿದ್ದಾರಂತೆ. ಅದಿಲ್ಲದಿದ್ದರೆ ಯಜ್ಞಭಂಗವಾಗಿ ನಮ್ಮೆಲ್ಲರಿಗೂ ಕೇಡು ಸಂಭವಿಸುತ್ತದೆ. ಆದ್ದರಿಂದ ಅದನ್ನು ಹುಡುಕಿಸಿ ತರಿಸು' ಎಂದರು. ಸಗರನು ದೀಕ್ಷೆಯನ್ನು ವಹಿಸಿ ಕುಳಿತಿದ್ದರಿಂದ ತನ್ನ ಅರವತ್ತು ಸಾವಿರ ಮಕ್ಕಳನ್ನು ಕರೆದು 'ಮಕ್ಕಳೇ, ಆ ಯಜ್ಞಾಶ್ವವನ್ನು ಹುಡುಕಿ ತನ್ನಿರಿ. ಬಹುಶಃ ದೇವೇಂದ್ರನು ಅದನ್ನು ಅಪಹರಿಸಿರಬೇಕು. ಆ ಕುದುರೆಯು ದೊರಕುವವರೆಗೂ ಸಕಲ ಪ್ರಯತ್ನಗಳನ್ನೂ ಮಾಡಿರಿ. ನಾನೂ ಅಂಶುಮಂತನೂ ಋತ್ವಿಜರೊಡನೆ ಇಲ್ಲಿಯೇ ಇರುತ್ತೇವೆ. ನಿಮಗೆ ಮಂಗಳವಾಗಲಿ' ಎಂದು ಆಜ್ಞಾಪಿಸಿದನು.

ಅನಂತರ ಆ ಸಗರಪುತ್ರರು ಪೃಥ್ವಿಯಲ್ಲಿ ಎಲ್ಲ ಕಡೆಯೂ ಹುಡುಕಿದರು. ಕಡೆಗೆ ಅದು ಪಾತಾಳದಲ್ಲಿರಬಹುದೆಂಬ ಶಂಕೆಯಿಂದ ಅವರೆಲ್ಲರೂ ಭೂಮಿಯನ್ನು ಅಗೆಯತೊಡಗಿದರು. ಹರಿತವಾದ ಆಯುಧಗಳಿಂದ ಭೂತಳವನ್ನು ಭೇದಿಸಿದರು. ಭೂಮಿಯಲ್ಲಿ ದೊಡ್ಡ ರಂಧ್ರವನ್ನು ಕೊರೆದು ರಸಾತಳಕ್ಕೆ ಹೋದರು. ಅಲ್ಲಿ ತಪಸ್ಸು ಮಾಡುತ್ತಿದ್ದ ಕಪಿಲ ಮಹರ್ಷಿಗಳನ್ನು ನೋಡಿದರು. ಕಪಿಲರು ವಿಷ್ಣುವಿನ ಅವತಾರ. ಅವರಿಗೆ ಹತ್ತಿರದಲ್ಲಿ ಯಜ್ಞಾಶ್ವವು ಮೇಯುತ್ತಿತ್ತು. ಸಗರ ಪುತ್ರರಿಗೆ ಪರಮಾನಂದವಾಯಿತು. ಯಜ್ಞಾಶ್ವವನ್ನು ಅಪಹರಿಸಿದವನು ಈತನೇ ಎಂದು ಭ್ರಮಿಸಿ ಕಪಿಲನನ್ನು ದೂಷಿಸುತ್ತಾ ನುಗ್ಗಿ ಬಂದರು. ಅವರ ಮಾತನ್ನು ಕೇಳಿ ಕಪಿಲ ಋಷಿಗೆ ಮಹಾರೋಷ ಉಂಟಾಯಿತು. ಆ ಮಹಾತ್ಮನು ಇವರನ್ನು ನೋಡುತ್ತಾ ಹೂಂಕರಿಸಿದನು. ಸಗರಪುತ್ರರೆಲ್ಲರೂ ಸುಟ್ಟು ಬೂದಿಯಾದರು !

ರಾಮ, ಇತ್ತ ಸಗರನು ತನ್ನ ಪುತ್ರರು ನೆಲವನ್ನಗೆದು ರಸಾತಳಕ್ಕೆ ಹೋದರೆಂದು ಸುದ್ದಿಯನ್ನು ಕೇಳಿ, ಮೊಮ್ಮಗನಾದ ಅಂಶುಮಂತನನ್ನು ಕರೆದು ಹೀಗೆಂದನು. ''ನೀನು

ಶೂರನೂ ವಿದ್ಯಾವಂತನೂ ಆಗಿದ್ದೀಯೆ. ನಮ್ಮ ಪೂರ್ವಿಕರಂತೆ ತೇಜಸ್ವಿಯಾಗಿದ್ದೀಯೆ. ನಿನ್ನ ಚಿಕ್ಕಪ್ಪಂದಿರ ಗತಿ ಏನಾಯಿತು? ಯಜ್ಞಾಶ್ವವನ್ನು ಯಾರು ಅಪಹರಿಸಿದರು? ಎಂಬುದನ್ನು ಅನ್ವೇಷಣೆ ಮಾಡು. ಭೂಮಂಡಲದ ಕೆಳಗಿರತಕ್ಕವರು ಮಹಾಶೂರರು. ಆಯುಧ ಧಾರಿಯಾಗಿ ಹೋಗು. ಈ ಕಾರ್ಯವನ್ನು ಸಾಧಿಸಿಕೊಂಡು ಬಾ. ನನ್ನ ಯಜ್ಞವನ್ನು ನೀನೇ ಪಾರುಗಾಣಿಸಬೇಕು?'' ಎಂದನು. ಅಂಶುಮಂತನು ಧನುರ್ಧಾರಿಯಾಗಿ ಖಡ್ಗವನ್ನು ಹಿಡಿದು ತ್ವರೆಯಿಂದ ಹೊರಟನು. ತನ್ನ ಚಿಕ್ಕಪ್ಪಂದಿರು ಅಗೆದಿದ್ದ ಭೂಮಾರ್ಗದಲ್ಲಿ ಬಹುದೂರ ಹೋದಮೇಲೆ ದೇವದಾನವ ಪೂಜಿತವಾದ ದಿಗ್ಗಜವು ಗೋಚರಿಸಿತು. ಅಂಶುಮಂತನು ಅದಕ್ಕೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ತನ್ನ ಪಿತೃಗಳ ಗತಿ ಏನಾಯಿತೆಂದೂ, ಅಶ್ವವನ್ನು ಅಪಹರಿಸಿದವನು ಯಾರೆಂದೂ ವಿಚಾರಿಸಿದನು. ಆ ದಿಗ್ಗಜವು 'ಅಸಮಂಜಪುತ್ರ, ನಿನಗೆ ಅಶ್ವವು ದೊರೆಯುವುದು. ನಿನ್ನ ಕಾರ್ಯವು ಸಿದ್ಧಿಸುವುದು' ಎಂದಿಷ್ಟೇ ಹೇಳಿತು. ಅಂಶುಮಂತನು ಮನಸ್ಸಿನಲ್ಲಿ ತಳಮಳಗೊಳ್ಳುತ್ತಾ ಬೇಗ ಬೇಗನೆ ಮುಂದೆ ಹೋದನು. ಅವನ ಚಿಕ್ಕಪ್ಪಂದಿರು ಭಸ್ಮರಾಶಿಯಾಗಿ ಬಿದ್ದಿದ್ದ ಸ್ಥಳಕ್ಕೆ ಬಂದನು. ಅವರೆಲ್ಲರೂ ಸುಟ್ಟು ಬೂದಿಯಾದರೆಂದು ತಿಳಿದಾಗ ಅಂಶುಮಂತನ ದುಃಖಕ್ಕೆ ಪಾರವೇ ಇರಲಿಲ್ಲ. ಅವನು ಆರ್ತಸ್ವರದಿಂದ ಗಟ್ಟಿಯಾಗಿ ಅತ್ತನು. ಅಳುತ್ತಿರುವಾಗ ಸ್ವಲ್ಪ ದೂರದಲ್ಲಿ ಯಜ್ಞಾಶ್ವವು ಗೋಚರಿಸಿತು. ಮೃತರಾದ ಸಗರಪುತ್ರರಿಗೆ ಮೊದಲು ತರ್ಪಣವನ್ನು ಕೊಡಬೇಕೆಂದು ಆಲೋಚಿಸಿ ಅಂಶುಮಂತನು ನೀರಿಗಾಗಿ ಹುಡುಕಾಡಿದನು. ಎಲ್ಲಿಯೂ ನೀರು ಕಾಣಿಸಲಿಲ್ಲ. ಅಷ್ಟರಲ್ಲಿ ಗರುತ್ಮಂತನು ವೇಗದಿಂದ ಹಾರಿ ಬರುತ್ತಿರುವುದು ಕಾಣಿಸಿತು. ಆತನು ಅಂಶುಮಂತನನ್ನು ನೋಡಿ ''ವತ್ಸ, ದುಃಖಿಸಬೇಡ; ಇವರ ವಧೆಯು ಲೋಕಹಿತಕ್ಕಾಗಿ ನಡೆದಿದೆ. ಮಹಾತ್ಮನಾದ ಕಪಿಲ ಮುನಿಯಿಂದ ಇವರು ದಗ್ಧರಾಗಿದ್ದಾರೆ. ಇವರಿಗೆ ಸಾಮಾನ್ಯವಾದ ಜಲದಿಂದ ತರ್ಪಣವನ್ನು ಕೊಡಬೇಡ. ದಿವ್ಯವಾದ ಗಂಗಾಜಲದಿಂದ ತರ್ಪಣವನ್ನು ಕೊಡು. ಆ ಗಂಗೆಯು ಈ ಭಸ್ಮರಾಶಿಯ ಮೇಲೆ ಪ್ರವಹಿಸಿದರೆ ಈ ಅರವತ್ತುಸಾವಿರ ಜನರಿಗೂ ಸದ್ಗತಿಯಾಗುವುದು. ನಿನಗೆ ಸಾಧ್ಯವಾದರೆ ದೇವಲೋಕದಿಂದ ಗಂಗಾವತರಣವನ್ನು ಮಾಡಿಸು. ಈ ಯಜ್ಞಾಶ್ವವನ್ನು ತೆಗೆದುಕೊಂಡು ಹೋಗಿ ನಿನ್ನ ಪಿತಾಮಹನ ಯಜ್ಞವು ಪರಿಸಮಾಪ್ತಿಯಾಗುವಂತೆ ನೋಡಿಕೋ'' ಎಂದು ಹೇಳಿದನು. ಪರಾಕ್ರಮಿಯಾದ ಅಂಶುಮಂತನು ಅಶ್ವವನ್ನು ಹಿಡಿದುಕೊಂಡು ಶೀಘ್ರವಾಗಿ ಹಿಂತಿರುಗಿ ಬಂದನು. ದೀಕ್ಷಿತನಾಗಿದ್ದ ಸಗರನಿಗೆ ನಡೆದ ವೃತ್ತಾಂತವನ್ನೂ ಗರುಡನು ಹೇಳಿದ ಮಾತನ್ನೂ ತಿಳಿಸಿದನು. ಆ ಘೋರವಾರ್ತೆಯನ್ನು ಕೇಳಿ ಸಗರನು ದುಃಖಿತನಾದರೂ ಯಜ್ಞವನ್ನು ವಿಧಿವತ್ತಾಗಿ ಸಮಾಪ್ತಿ ಗೊಳಿಸಿದನು. ಗಂಗೆಯನ್ನು

ಭೂಮಿಗೆ ತರುವುದು ಹೇಗೆಂದು ಸಗರನಿಗೆ ನಿಶ್ಚಯಿಸಲಾಗಲಿಲ್ಲ. ಕೆಲವು ವರ್ಷಗಳವರೆಗೆ ರಾಜ್ಯಭಾರ ಮಾಡಿ ಸಗರನು ಸ್ವರ್ಗಸ್ಥನಾದನು.

ರಾಮ, ಸಗರನು ಕಾಲವಶನಾದ ಮೇಲೆ ಪ್ರಜೆಗಳು ಧರ್ಮನಿಷ್ಠನಾದ ಅಂಶುಮಂತನನ್ನು ರಾಜನನ್ನಾಗಿ ಆರಿಸಿದರು. ಅವನು ರಾಜನಾಗಿ ಮಹಾಕೀರ್ತಿಶಾಲಿ ಯಾದನು. ಅವನಿಗೆ ದಿಲೀಪನೆಂಬ ಪುತ್ರನಿದ್ದನು. ಅಂಶುಮಂತನು ದಿಲೀಪನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಗಂಗಾವತರಣಕ್ಕಾಗಿ ತಪಸ್ಸು ಮಾಡಲು ಹಿಮಾಲಯಕ್ಕೆ ಹೋದನು. ಅದರ ಒಂದು ಶಿಖರದಲ್ಲಿ ಕಠೋರವಾದ ತಪಸ್ಸನ್ನಾಚರಿಸಿ ಅಲ್ಲಿಯೇ ಸ್ವರ್ಗಸ್ಥನಾದನು. ಅವನ ಮಗನಾದ ದಿಲೀಪನಿಗೆ ತನ್ನ ಅಜ್ಜಂದಿರಾದ ಸಗರ ಪುತ್ರರಿಗೆ ಒದಗಿದ ಅಪಮೃತ್ಯುವಿನ ವಿಷಯವು ತಿಳಿದಿತ್ತು. ಅದನ್ನು ಚಿಂತಿಸುತ್ತಾ ಮುಂದೆ ಏನು ಮಾಡಬೇಕೆಂದು ತಿಳಿಯದೆ ದುಃಖಿತ ನಾಗುತ್ತಿದ್ದನು. ಅವನಿಗೆ ಭಗೀರಥನೆಂಬ ಪುತ್ರನು ಜನಿಸಿದನು. ದಿಲೀಪನು ಅನೇಕ ಯಜ್ಞಗಳನ್ನು ಮಾಡಿ ಕಡೆಗೆ ಪುತ್ರನಾದ ಭಗೀರಥನಿಗೆ ರಾಜ್ಯಾಭಿಷೇಕ ಮಾಡಿದನು. ತನ್ನ ಪಿತೃಗಳ ಉದ್ಧಾರವು ಹೇಗೆಂದು ಚಿಂತಿಸುತ್ತಲೇ ವ್ಯಾಧಿಗ್ರಸ್ತನಾಗಿ ಕಾಲವಶ ನಾದನು.

ಅವನ ಪುತ್ರನಾದ ಭಗೀರಥನು ಧರ್ಮನಿಷ್ಠನೂ ಧೀರನೂ ಕಾರ್ಯದಕ್ಷನೂ ಆಗಿದ್ದನು. ಅವನಿಗೆ ಮಕ್ಕಳಿರಲಿಲ್ಲ. ಹೇಗಾದರೂ ಮಾಡಿ ಗಂಗೆಯನ್ನು ಭೂಮಿಗೆ ಇಳಿಸಿ ಪಾತಾಳಕ್ಕೆ ಒಯ್ದು ತನ್ನ ಪಿತೃಗಳನ್ನು ಉದ್ಧರಿಸಲೇಬೇಕೆಂದು ಸಂಕಲ್ಪ ಮಾಡಿದನು. ಅವನು ರಾಜ್ಯಭಾರವನ್ನು ಮಂತ್ರಿಗಳಿಗೆ ಒಪ್ಪಿಸಿ ಗೋಕರ್ಣ ಕ್ಷೇತ್ರಕ್ಕೆ ಹೋಗಿ ಕಠೋರವಾದ ತಪಸ್ಸನ್ನಾರಂಭಿಸಿದನು. ಮಹಾತ್ಮನಾದ ಭಗೀರಥನು ಪಂಚಾಗ್ನಿ*ಗಳ ಮಧ್ಯದಲ್ಲಿ ಊರ್ಧ್ವಬಾಹುವಾಗಿ ನಿಂತು ತಿಂಗಳಿಗೊಮ್ಮೆ ಆಹಾರವನ್ನು ಸೇವಿಸುತ್ತಾ ಘೋರವಾದ ತಪಸ್ಸಿನಲ್ಲಿ ಮಗ್ನನಾದನು. ಹೀಗೆ ಒಂದು ಸಾವಿರ ವರ್ಷಗಳು ಕಳೆದವು. ಬ್ರಹ್ಮದೇವನು ಸುಪ್ರೀತನಾಗಿ ಭಗೀರಥನನ್ನು ಕುರಿತು ''ಭಗೀರಥ, ನಿನ್ನ ತಪಸ್ಸಿಗೆ ಪ್ರಸನ್ನನಾಗಿದ್ದೇನೆ. ನಿನಗೇನು ಬೇಕು?'' ಎಂದು ಕೇಳಿದನು. ಭಗೀರಥನು ಕೈಮುಗಿದುಕೊಂಡು ''ಭಗವನ್, ನೀನು ಪ್ರಸನ್ನನಾದರೆ ಸಗರ ಪುತ್ರರು ನನ್ನಿಂದ ತರ್ಪಣವನ್ನು ಪಡೆಯುವರು. ಅವರ ಭಸ್ಮರಾಶಿಯ ಮೇಲೆ

---

* ಪಂಚಾಗ್ನಿ – ತನ್ನ ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿ, ಆಕಾಶದಲ್ಲಿ ಸೂರ್ಯ. ಈ ಅಗ್ನಿಗಳ ಮಧ್ಯದಲ್ಲಿ ನಿಂತು ಸೂರ್ಯನ ತಾಪಕ್ಕೆ ಒಳಗಾಗಿ ತಪಸ್ಸು ಮಾಡುವುದಕ್ಕೆ ಪಂಚಾಗ್ನಿ ಮಧ್ಯದ ತಪಸ್ಸು ಎಂದು ಹೆಸರು.

ಗಂಗಾಪ್ರವಾಹವು ಹರಿದು ಅವರಿಗೆ ಸ್ವರ್ಗಪ್ರಾಪ್ತಿಯಾಗಲಿ. ದೇವ, ಇನ್ನೊಂದು ವರವನ್ನು ಕೇಳಿಕೊಳ್ಳುತ್ತೇನೆ. ನಮ್ಮ ವಂಶವು ವಿಲಯವಾಗದಂತೆ ನನಗೆ ಪುತ್ರಲಾಭವಾಗಲೆಂದು ಕರುಣಿಸು'' ಎಂದು ಬೇಡಿಕೊಂಡನು. ಆಗ ಬ್ರಹ್ಮದೇವನು ಮಧುರವಾದ ವಾಣಿಯಿಂದ ''ಭಗೀರಥ, ನಿನ್ನ ಪ್ರಾರ್ಥನೆ ಬಹುದೊಡ್ಡದು. ಆಗಲಿ; ಅವಳ ವೇಗವನ್ನು ನಿನಗೆ ಪುತ್ರಸಂತಾನವಾಗುವುದು. ಆದರೆ ಈ ಗೆಯು ಭೂಮಿಗೆ ಧುಮುಕುವಾಗ ಪರಮೇಶ್ವರನೊಬ್ಬನೇ ತಡೆದು ಧರಿಸಬಲ್ಲನು. ಅದಕ್ಕಾಗಿ ನೀನು ಶಿವನ ಕರುಣೆಯನ್ನು ಸಂಪಾದಿಸು'' ಎಂದು ನುಡಿದನು ಮತ್ತು ಗಂಗಾದೇವಿಗೆ ''ವತ್ಸೆ, ಸರಿಯಾದ ಸಮಯದಲ್ಲಿ ಈ ರಾಜನ ಪ್ರಾರ್ಥನೆಯನ್ನು ನಡೆಸಿಕೊಡು'' ಎಂದು ತಿಳಿಸಿ ಅಂತರ್ಧಾನ ಹೊಂದಿದನು.

''ರಾಘವ, ಬ್ರಹ್ಮನು ಹೋದಮೇಲೆ ಭಗೀರಥನು ನೆಲದ ಮೇಲೆ ತುದಿಗಾಲಿನಲ್ಲಿ ನಿಂತು ಶಿವನನ್ನು ಕುರಿತು ತಪಸ್ಸಿನಲ್ಲಿ ತೊಡಗಿದನು. ಅಹೋರಾತ್ರವೂ ಏಕಾಗ್ರತೆಯಿಂದ ಒಂದು ವರ್ಷದವರೆಗೆ ತಪಸ್ಸು ಸಾಗಿತು. ಆಗ ಸರ್ವಲೋಕ ವಂದಿತನಾದ ಶಿವನು ಪ್ರತ್ಯಕ್ಷನಾಗಿ ''ಭಗೀರಥ, ನಾನು ಸಂಪ್ರೀತನಾದೆ. ನಿನ್ನ ಮನಸ್ಸಿನಲ್ಲಿರುವುದು ನನಗೆ ಗೊತ್ತಿದೆ. ನಿನ್ನ ಇಷ್ಟದಂತೆ ಹಿಮಾಲಯ ಪುತ್ರಿಯಾದ ಗಂಗೆಯು ರಭಸದಿಂದ ಧುಮುಕಿದಾಗ, ನಾನು ಅವಳ ವೇಗವನ್ನು ತಡೆದು ಶಿರಸ್ಸಿನಲ್ಲಿ ಧರಿಸುತ್ತೇನೆ'' ಎಂದು ನುಡಿದನು. ಆಮೇಲೆ ಭಗೀರಥನು ಭೂಮಿಗೆ ಬರುವಂತೆ ಗಂಗಾದೇವಿಯನ್ನು ಪ್ರಾರ್ಥಿಸಿದನು. ಬ್ರಹ್ಮನ ಆದೇಶದಂತೆ ಅವಳು ಒಪ್ಪಿ ಮಹಾರಭಸದಿಂದ ಶಿವನ ಶಿರಸ್ಸಿನ ಮೇಲೆ ಧುಮುಕಿದಳು. ರಾಮ, ಗಂಗೆಯು ತನ್ನ ಮನಸ್ಸಿನಲ್ಲಿ ''ನನ್ನ ವೇಗವನ್ನು ಶಿವನೂ ಧರಿಸಲಾರ. ಪ್ರವಾಹ ವೇಗದಿಂದ ಅವನನ್ನೂ ಪಾತಾಳಕ್ಕೆ ಸೆಳೆದುಕೊಂಡು ಹೋಗುತ್ತೇನೆ !'' ಎಂದು ಗುಣಿಸಿ ಕೊಂಡಿದ್ದಳು. ಭಗವಾನ್ ತ್ರಿಯಂಬಕನು ಅವಳ ಗರ್ವವನ್ನರಿತು ಕ್ರುದ್ಧನಾಗಿ ನಿಂತಿದ್ದನು. ಗಂಗೆಯು ಪವಿತ್ರವಾದ ಶಿವ ಶಿರಸ್ಸಿನ ಮೇಲೆ ವೇಗದಿಂದ ಧುಮುಕಿ ದಳು. ಆದರೆ ಆತನ ಜಟಾಜೂಟದಲ್ಲಿ ಸಿಕ್ಕಿಕೊಂಡಳು. ಹೊರಗೆ ಬರಲು ಸಾಧ್ಯವೇ ಆಗಲಿಲ್ಲ ! ಶಿವನ ಜಟೆಯಲ್ಲಿಯೇ ಸುತ್ತುತ್ತಿದ್ದಳು. ತನ್ನ ಇಷ್ಟವು ನೆರವೇರಲಿಲ್ಲವೆಂದು ಮತ್ತೆ ಭಗೀರಥನು ತಪಸ್ಸನ್ನಾಚರಿಸಿ ಹರನನ್ನು ಮೆಚ್ಚಿಸಿದನು. ಹರನು ಪ್ರಸನ್ನನಾಗಿ ಗಂಗೆಯನ್ನು ಹೊರಗೆ ಬಿಟ್ಟನು. ಅವಳು ಏಳು ಪ್ರವಾಹಗಳಾಗಿ ಭೂಮಿಗೆ ಹರಿದಳು. ಅವುಗಳಲ್ಲಿ ಹ್ಲಾದನಿ, ಪಾವನಿ, ನಲಿನಿ ಎಂಬ ಮೂರು ಪ್ರವಾಹಗಳು ಪೂರ್ವದಿಕ್ಕಿಗೆ ಹರಿದವು ಸುಚಕ್ಷು, ಸೀತಾ, ಸಿಂಧು – ಎಂಬ ಮೂರು ನದಿಗಳು ಪಶ್ಚಿಮ ದಿಕ್ಕಿಗೆ ಹರಿದವು. ಅಲಕನಂದಾ ಎಂಬ ಏಳನೆಯ ಗಂಗಾಪ್ರವಾಹವು ಭಗೀರಥನನ್ನು

ಅನುಸರಿಸಿ ಹರಿಯತೊಡಗಿತು. ಗಂಗಾನದಿಯು ಸ್ವರ್ಗ, ಆಕಾಶ, ಭೂಮಿಗಳಿಗೆ ಪ್ರವಹಿಸಿದ್ದರಿಂದ ಅಥವಾ ಪೂರ್ವ ಪಶ್ಚಿಮ ದಿಕ್ಕುಗಳಿಗೆ ಹರಿದು ಮೂರನೆಯದಾಗಿ ಭಗೀರಥನ ಹಿಂದೆ ಬಂದದ್ದರಿಂದ ತ್ರಿಪಥಗಾ ಎಂಬ ಹೆಸರು ಬಂದಿತು.

ಈ ಅದ್ಭುತವನ್ನು ನೋಡಲು ದೇವ ಗಂಧರ್ವಾದಿಗಳು ಸಂಭ್ರಮದಿಂದ ಆಕಾಶದಲ್ಲಿ ನೆರೆದರು. ಈಶ್ವರನ ಶಿರಸ್ಸಿನ ಮೇಲೆ ಧುಮುಕಿ ಭೂತಳವನ್ನು ಸೇರಿದ ಗಂಗಾವಾರಿಯು ಪಾಪಹಾರಿಯಾದ್ದೆಂದು ಋಷಿಗಳೇ ಮೊದಲಾದವರು ಅದನ್ನು ತಮ್ಮ ಮೇಲೆ ಪ್ರೋಕ್ಷಿಸಿಕೊಂಡರು. ಶಾಪಗ್ರಸ್ತರಾದ ಜನರು ಗಂಗಾಜಲದಲ್ಲಿ ಸ್ನಾನ ಮಾಡಿ ಶಾಪದಿಂದ ವಿಮುಕ್ತರಾದರು. ಭೂಲೋಕದಲ್ಲಿದ್ದವರಿಗೆಲ್ಲಾ ಪರಮಾನಂದ ವಾಯಿತು. ಭಗೀರಥನು ಅವಳಿಗೆ ದಾರಿಯನ್ನು ತೋರುತ್ತಾ ಮುಂದೆ ಹೋಗುತ್ತಿದ್ದನು. ದಾರಿಯಲ್ಲಿ ಜಹ್ನುವೆಂಬ ಮಹರ್ಷಿಯು ಯಾಗಮಾಡುತ್ತಿದ್ದನು. ಗಂಗೆಯು ಆತನ ಯಜ್ಞಶಾಲೆಗೆ ನುಗ್ಗಿ ಅದನ್ನು ತೇಲಿಸಿಬಿಟ್ಟಳು ! ರಾಮ, ಆಗ ಜಹ್ನು ಮಹರ್ಷಿಯು ಕ್ರುದ್ಧನಾಗಿ ಗಂಗೆಯ ಸಕಲ ಜಲವನ್ನೂ ಕುಡಿದು ಬಿಟ್ಟನು. ವಿಸ್ಮಿತರಾದ ದೇವ ಗಂಧರ್ವಾದಿಗಳೂ ಭಗೀರಥನೂ ಜಹ್ನುವನ್ನು ಸ್ತೋತ್ರ ಮಾಡಿ ಗಂಗೆಯನ್ನು ಮಗಳಂತೆ ಕಾಣಬೇಕೆಂದು ಬೇಡಿಕೊಂಡರು. ಆ ಮಹಾತ್ಮನು ಪ್ರಸನ್ನನಾಗಿ ಗಂಗೆಯನ್ನು ತನ್ನ ಕಿವಿಗಳ ಮೂಲಕ ಹೊರಗೆ ಬಿಟ್ಟನು. ಆದ್ದರಿಂದ ಗಂಗೆಯು ಜಹ್ನು ಪುತ್ರಿಯೆಂದೂ ಜಾಹ್ನವಿ ಎಂದೂ ಪ್ರಸಿದ್ಧಳಾದಳು. ಆಮೇಲೆ ಭಗೀರಥನ ಕಾರ್ಯಸಿದ್ಧಿಗಾಗಿ ಅವನ ಹಿಂದೆಯೇ ಹೋಗುತ್ತ ರಸಾತಳವನ್ನು ಸೇರಿದಳು. ತನ್ನ ಮುತ್ತಾತಂದಿರು ಸುಟ್ಟು ಭಸ್ಮರಾಶಿಯಾಗಿರುವುದನ್ನು ಕಂಡು ಭಗೀರಥನಿಗೆ ಬಹಳ ವ್ಯಥೆಯಾಯಿತು. ಆಮೇಲೆ ಗಂಗೆಯು ಭಸ್ಮರಾಶಿಯ ಮೇಲೆ ಪ್ರವಹಿಸಲು ಆ ಸಗರಪುತ್ರರು ಪರಿಶುದ್ಧರಾಗಿ ಸದ್ಗತಿಯನ್ನು ಪಡೆದರು.

ಆಗ ಬ್ರಹ್ಮದೇವನು ಪ್ರತ್ಯಕ್ಷನಾಗಿ ಭಗೀರಥನನ್ನು ಕುರಿತು ''ನರಶ್ರೇಷ್ಠ, ಸಗರನ ಅರವತ್ತು ಸಾವಿರ ಪುತ್ರರು ನಿನ್ನಿಂದ ಉದ್ಧಾರವಾಗಿ ಸ್ವರ್ಗವನ್ನು ಸೇರಿದರು. ಈ ಗಂಗೆಯು ನಿನ್ನ ಹಿರಿಯ ಮಗಳಂತಾದಳು. ಈಕೆಗೆ ಭಾಗೀರಥಿ ಎಂಬ ಹೆಸರು ಸ್ಥಿರವಾಗಿ ನಿಲ್ಲಲಿ. ಮೂರು ಮಾರ್ಗಗಳಲ್ಲಿ ಹರಿದದ್ದರಿಂದ ಇವಳು ತ್ರಿಪಥಗಾ ಎಂದು ಕೀರ್ತಿಯನ್ನು ಪಡೆಯಲಿ. ಈಗ ನಿನ್ನ ಪಿತಾಮಹರಿಗೆ ತರ್ಪಣವನ್ನು ಕೊಟ್ಟು ನಿನ್ನ ಪ್ರತಿಜ್ಞೆಯನ್ನು ಸಮಾಪ್ತಿಗೊಳಿಸು. ನಿನ್ನ ಪೂರ್ವಜರು ಮಹಾಪುರುಷರಾದರೂ ಈ ಕಾರ್ಯವನ್ನು ಸಾಧಿಸಲು ಶಕ್ತರಾಗಲಿಲ್ಲ, ಅಂತಹ ಅಸಾಧ್ಯವಾದ ಮಹಾಕಾರ್ಯವನ್ನು ನೀನು ಸಾಧಿಸಿದ್ದೀಯೆ. ಕೀರ್ತಿಶಾಲಿಯಾದೆ. ಗಂಗಾವತರಣವನ್ನು ಮಾಡಿಸಿದೆ. ನನಗೆ ತುಂಬ ಸಂತೋಷವಾಯಿತು. ಸರ್ವಕಾಲದಲ್ಲಿಯೂ ಈ ಗಂಗಾಜಲವು ಸ್ನಾನಯೋಗ್ಯ

ವಾಗಿರುವುದು. ನೀನು ಇದರಲ್ಲಿ ಸ್ನಾನ ಮಾಡಿ ಹಿರಿಯರಿಗೆ ತರ್ಪಣವನ್ನಿತ್ತು ರಾಜಧಾನಿಗೆ ಹೋಗು. ನಿನಗೆ ಮಂಗಳವಾಗಲಿ'' ಎಂದು ನುಡಿದು ತನ್ನ ಲೋಕಕ್ಕೆ ಹೊರಟು ಹೋದನು.

ಅನಂತರ ಭಗೀರಥನು ಗಂಗೆಯಲ್ಲಿ ಸ್ನಾನಮಾಡಿ ತರ್ಪಣವನ್ನಿತ್ತು ರಾಜಧಾನಿಗೆ ಹಿಂದಿರುಗಿದನು. ಅವನ ರಾಜ್ಯದಲ್ಲಿದ್ದ ಪ್ರಜೆಗಳೆಲ್ಲರಿಗೂ ಸಂತೋಷವಾಯಿತು. ಧರ್ಮಿಷ್ಠನಾದ ಭಗೀರಥನು ರಾಜ್ಯವನ್ನಾಳುತ್ತಿರಲು ಯಾವ ಕಷ್ಟ ನಷ್ಟಗಳೂ ಇಲ್ಲದೆ ಪ್ರಜೆಗಳು ಸಂತುಷ್ಟರಾಗಿದ್ದರು'' ಎಂದು ವಿಶ್ವಾಮಿತ್ರರು ಹೇಳಿದರು. ಅದನ್ನು ಕೇಳಿದ ರಾಮ ಲಕ್ಷ್ಮಣರು ವಿಸ್ಮಿತರಾದರು. ಶ್ರೀರಾಮನು ''ಮಹರ್ಷಿಗಳೆ, ಅತ್ಯದ್ಭುತವಾದ ಕಥೆಯನ್ನು ಹೇಳಿದಿರಿ. ಗಂಗಾವತರಣದ ಈ ಕಥೆಯನ್ನಾಲಿಸುತ್ತಿದ್ದ ನಮಗೆ ಒಂದು ಕ್ಷಣದಂತೆ ಕಾಲವು ಕಳೆದು ಹೋಯಿತು. ರಾತ್ರಿಯಾಗಿ ಬಿಟ್ಟಿದೆ'' ಎಂದನು.

೬

ಕ್ಷೀರ ಸಾಗರ ಮಥನ. ಅಮೃತೋದ್ಭವ. ಸಪ್ತ ಮರುತ್ತುಗಳ ಉತ್ಪತ್ತಿ ವಿಶಾಲನಗರಕ್ಕೆ ಆಗಮನ.

ಮಾರನೆಯ ದಿನ ಪ್ರಾತಃಕಾಲ ಆಹ್ನಿಕಗಳನ್ನು ತೀರಿಸಿ ವಿಶ್ವಾಮಿತ್ರರು ಶ್ರೀರಾಮ, ಲಕ್ಷ್ಮಣ ಮತ್ತು ಋಷಿಗಣಗಳೊಡನೆ ನೌಕೆಗಳಲ್ಲಿ ಕುಳಿತು ಗಂಗಾನದಿಯನ್ನು ದಾಟಿದರು. ಮುಂದೆ ಹೋಗುತ್ತಿರುವಾಗ ವಿಶಾಲವೆಂಬ ನಗರವು ಅವರಿಗೆ ಗೋಚರಿಸಿತು. ದಾರಿಯಲ್ಲಿ ಶ್ರೀರಾಮನು ವಿಶ್ವಾಮಿತ್ರರನ್ನು ಕುರಿತು, ''ಪೂಜ್ಯರೆ, ಆ ನಗರವು ಯಾವುದು? ಅದನ್ನು ತಿಳಿಯಲು ನನಗೆ ಕುತೂಹಲವಾಗಿದೆ'' ಎಂದನು. ಆಗ ವಿಶ್ವಾಮಿತ್ರರು ಆ ಪಟ್ಟಣದ ಪ್ರಾಚೀನ ವೃತ್ತಾಂತವನ್ನು ಆರಂಭಿಸಿದರು. ''ರಾಮ, ಇದೊಂದು ದೊಡ್ಡ ಕಥೆ. ಇದಕ್ಕೆ ಸಂಬಂಧಿಸಿದ ಇಂದ್ರನ ಕಥೆಯನ್ನು ಮೊದಲು ಕೇಳು. ಇದು ಕೃತಯುಗದ ವಿಷಯ. ಕಶ್ಯಪ ಮುನಿಗೆ ದಿತಿ ಮತ್ತು ಅದಿತಿ ಎಂಬ ಪತ್ನಿಯರಲ್ಲಿ ಬಲಶಾಲಿಗಳಾದ ಬಹುಮಂದಿ ಪುತ್ರರು ಜನಿಸಿದ್ದರು. ಅವರಲ್ಲಿ ಅದಿತಿಯ ಮಕ್ಕಳು ಧಾರ್ಮಿಕರು. ಅವರೇ ದೇವತೆಗಳು. ದಿತಿಯ ಮಕ್ಕಳು ಧರ್ಮನಿಷ್ಠರಲ್ಲ, ಅವರನ್ನು ದೈತ್ಯರೆನ್ನುತ್ತಾರೆ. ಹೀಗಿರುವಾಗ ಅವರೆಲ್ಲರೂ ಮನಸ್ಸಿನಲ್ಲಿ ನಾವು ಮರಣ, ಮುಪ್ಪು, ರೋಗ – ಈ ಮೂರನ್ನು ಜಯಿಸಬೇಕು. ಇದು ಹೇಗೆ ಸಾಧ್ಯ?'' ಎಂದು ಆಲೋಚಿಸುತ್ತಿದ್ದರು.

ಕ್ಷೀರ ಸಮುದ್ರವನ್ನು ಕಡೆದರೆ ಅಮೃತವೆಂಬ ರಸಾಯನವು ದೊರೆಯುವು

ದೆಂದೂ ಅದನ್ನು ಕುಡಿದವರು ಈ ಮೂರನ್ನೂ ಜಯಿಸುವರೆಂದೂ ತಿಳಿದು ಬಂದಿತು. ವಾಸುಕಿಯನ್ನು ಹಗ್ಗವಾಗಿ ಮತ್ತು ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿಕೊಂಡು ಆ ಪರಾಕ್ರಮಿಗಳು ಕ್ಷೀರಸಮುದ್ರವನ್ನು ಕಡೆಯಲಾರಂಭಿಸಿದರು. ಹಗ್ಗವಾಗಿದ್ದ ವಾಸುಕಿ ಸರ್ಪವು ಸೆಳೆತದಿಂದಾದ ಘರ್ಷಣೆಯನ್ನು ತಡೆಯಲಾಗದೆ ಘೋರವಾದ ವಿಷವನ್ನು ಕಕ್ಕಿತು. ಅದನ್ನು ಹಾಲಾಹಲವೆನ್ನುತ್ತಾರೆ. ಉಗ್ರವಾದ ಹಾಲಾಹಲವು ಮೂರು ಲೋಕಗಳನ್ನೂ ಸುಡಲಾರಂಭಿಸಿತು. ದೇವತೆಗಳು ಭಗವಾನ್ ಶಂಕರನನ್ನು ಮರೆಹೊಕ್ಕರು. ಶಂಕರನು ಕಾರುಣ್ಯದಿಂದ ಘೋರವಾದ ಆ ವಿಷವನ್ನು ಅಮೃತದಂತೆ ಕುಡಿದು ಅಂತರ್ಹಿತನಾದನು. ದೇವಾಸುರರು ಮತ್ತೆ ಸಮುದ್ರವನ್ನು ಕಡೆಯಲಾರಂಭಿಸಿದರು. ಮಂದರ ಪರ್ವತವು ಪಾತಾಳಕ್ಕೆ ಇಳಿದು ಹೋಯಿತು. ದೇವಾದಿಗಳು ವಿಷ್ಣುವನ್ನು ಪ್ರಾರ್ಥಿಸಿದರು. ಆಗ ವಿಷ್ಣುವು ಕೂರ್ಮರೂಪವನ್ನು ಧರಿಸಿ ಮಂದರಗಿರಿಯನ್ನು ಬೆನ್ನ ಮೇಲೇರಿಸಿ ಸಮುದ್ರದಲ್ಲಿ ನಿಂತನು. ತನ್ನ ಮಾಯಾಶಕ್ತಿಯಿಂದ ದೇವತೆಗಳ ಮಧ್ಯದಲ್ಲಿಯೂ ನಿಂತು ಅವರ ನೆರವಿಗಾಗಿ ತಾನೂ ಸಮುದ್ರವನ್ನು ಕಡೆಯುತ್ತಿದ್ದನು. ಹೀಗೆ ಬಹಳ ಕಾಲದವರೆಗೆ ಕ್ಷೀರಸಮುದ್ರವನ್ನು ಕಡೆದ ಮೇಲೆ ಆಯುರ್ವೇದಕ್ಕೆ ಅಧಿಪುರುಷನಾದ ಧನ್ವಂತರಿಯು ದಂಡಕಮಂಡಲುಗಳನ್ನು ಧರಿಸಿ ಉದ್ಭವಿಸಿದನು. ಆಮೇಲೆ ಅಪ್ಸರ ಸ್ತ್ರೀಯರು ಹುಟ್ಟಿದರು. ಅವರು ದೇವದಾನವರಿಗೆ ಸಾಧಾರಣ ಸ್ತ್ರೀಯರಾಗಿ ವೇಶ್ಯೆಯರೆನಿಸಿದರು. ಅನಂತರ ವಾರುಣಿ ಎಂದು ಪ್ರಸಿದ್ಧಳಾದ ಸುರಾಧಿದೇವತೆಯು ಜನಿಸಿದಳು. ಅವಳನ್ನು ದೇವತೆಗಳು ವರಿಸಿ ಸುರರೆಂದು ಖ್ಯಾತರಾದರು. ಆಮೇಲೆ ಉಚ್ಚೈಃಶ್ರವಸ್ ಎಂಬ ಶ್ರೇಷ್ಠವಾದ ಅಶ್ವವೂ ಕೌಸ್ತುಭವೆಂಬ ರತ್ನವೂ ಹುಟ್ಟಿದವು. ಕಡೆಯಲ್ಲಿ ದಿವ್ಯವಾದ ಅಮೃತವು ಹುಟ್ಟಿತು. ಆಗ ದೇವತೆಗಳಿಗೂ ದೈತ್ಯರಿಗೂ ಅಮೃತಕ್ಕಾಗಿ ಕಲಹವುಂಟಾಗಿ ಯುದ್ಧವೇ ನಡೆಯಿತು. ಎರಡು ಪಕ್ಷಗಳೂ ನಾಶವಾಗತೊಡಗಿದವು. ಆಗ ಮಹಾವಿಷ್ಣುವು ಮಾಯೆಯಿಂದ ಮೋಹಿನೀ ರೂಪವನ್ನು ಧರಿಸಿ ಅಮೃತವನ್ನು ಅಪಹರಿಸಿದನು. ಅವನೊಡನೆ ಯುದ್ಧಕ್ಕೆ ಬಂದ ದೈತ್ಯರನ್ನು ಮಹಾವಿಷ್ಣುವು ತನ್ನ ಸಾಮರ್ಥ್ಯದಿಂದ ಸಂಹರಿಸಿದನು. ಕಡೆಗೆ ಅಮೃತವು ದೇವತೆಗಳಿಗೆ ದೊರಕಿತು. ದೇವತೆಗಳು ಅದನ್ನು ಕುಡಿದು ಅಮರರಾದರು. ದೇವೇಂದ್ರನು ನಿರಾತಂಕವಾಗಿ ಸ್ವರ್ಗವನ್ನು ಆಳುತ್ತಿದ್ದನು.

ಈ ಯುದ್ಧದಲ್ಲಿ ತನ್ನ ಮಕ್ಕಳು ಹತರಾದ್ದರಿಂದ ದಿತಿಗೆ ಬಹಳ ದುಃಖವಾಯಿತು. ಅವಳು ತನ್ನ ಪತಿಯಾದ ಕಶ್ಯಪ ಮುನಿಗಳನ್ನು ಕುರಿತು ''ಸ್ವಾಮಿ, ನಿನ್ನ ಅದಿತಿಯ ಮಕ್ಕಳು ನನ್ನ ಪುತ್ರರನ್ನು ಕೊಂದು ಹಾಕಿದರು. ಈ ದುರಂತಕ್ಕೆ ಇಂದ್ರನೇ ಮೂಲ. ಅವನನ್ನು ಕೊಲ್ಲತಕ್ಕ ಒಬ್ಬ ಪುತ್ರನು ಬೇಕೆಂದು ನನಗೆ ಅಪೇಕ್ಷೆಯಾಗಿದೆ. ನಾನು

ದೀರ್ಘಕಾಲ ತಪಶ್ಚರಣೆ ಮಾಡಲು ಸಿದ್ಧಳಾಗಿದ್ದೇನೆ. ಇಂದ್ರನನ್ನು ಕೊಲ್ಲುವ ಸಾಮರ್ಥ್ಯವುಳ್ಳ ಒಬ್ಬ ಪುತ್ರನು ನನಗೆ ಜನಿಸಲಿ'' ಎಂದು ಪ್ರಾರ್ಥಿಸಿದಳು. ಆಗ ಕಶ್ಯಪರು ತಮ್ಮ ಪತ್ನಿಯು ಶೋಕತಪ್ತಳಾಗಿದ್ದಾಳೆಂಬುದನ್ನು ತಿಳಿದು ''ಒಳ್ಳೆಯದು, ತಪಸ್ಸನ್ನಾಚರಿಸುತ್ತಾ ಸದಾ ಶುಚಿಯಾಗಿರು. ಶುಚಿಯಾಗಿ ಬಹಳ ಕಾಲ ತಪಸ್ಸು ಮಾಡುತ್ತಿದ್ದರೆ ತ್ರಿಲೋಕಾಧಿಪತಿಯನ್ನು ಗೆಲ್ಲುವ ಪುತ್ರನು ಜನಿಸುವನು'' ಎಂದರು. ಅನಂತರ ತಪೋನಿಧಿಗಳಾದ ಕಶ್ಯಪರು ದಿತಿಯನ್ನು ಕೈಯಿಂದ ಮೈದಡವಿ 'ಸ್ವಸ್ತಿ' ಎಂದು ಹೇಳಿ ತಪಸ್ಸಿಗೆ ಹೊರಟುಹೋದರು. ರಾಮ, ದಿತಿಯು ಹರ್ಷದಿಂದ ಈ ವಿಶಾಲ ನಗರವಿರುವ ಸ್ಥಳಕ್ಕೆ ಬಂದು ಕಠೋರವಾದ ತಪಶ್ಚರ್ಯೆಯನ್ನು ಆರಂಭಿಸಿದಳು. ಈ ಸ್ಥಳಕ್ಕೆ ಹಿಂದೆ ಕುಶಪ್ಲವ ಎಂದು ಹೆಸರಿತ್ತು. ದಿತಿಯ ಉದ್ದೇಶವನ್ನು ತಿಳಿದುಕೊಂಡ ದೇವೇಂದ್ರನು ಇಲ್ಲಿಗೆ ಬಂದು ವಿನಯಾದಿ ಸದ್ಗುಣಗಳನ್ನು ಪ್ರದರ್ಶಿಸುತ್ತಾ ದಿತಿಯ ಸೇವೆಯಲ್ಲಿ ತೊಡಗಿದನು. ಬೆಂಕಿಯನ್ನು ಹೊತ್ತಿಸುವುದು, ದರ್ಭೆ ಸಮಿತ್ತುಗಳನ್ನು ತರುವುದು, ನೀರನ್ನು ಹೊರುವುದು, ಫಲಮೂಲಗಳನ್ನು ತಂದುಕೊಡುವುದು – ಇತ್ಯಾದಿ ಸೇವೆಯನ್ನು ಮಾಡುತ್ತಾ ದಿತಿಯ ಪ್ರೀತಿ ವಿಶ್ವಾಸಗಳನ್ನು ಗಳಿಸಿದನು. ಅವಳ ಕಾಲುಗಳನ್ನು ನೀವುತ್ತಾ, ಗಾಳಿ ಹಾಕಿ ಆಯಾಸವನ್ನು ಪರಿಹರಿಸುತ್ತಾ ಸದಾ ಅವಳ ಶುಶ್ರೂಷೆಯಲ್ಲಿ ನಿರತನಾಗಿದ್ದನು.

ಕಶ್ಯಪರ ಆದೇಶದಂತೆ ದಿತಿಯು ಒಂದು ಸಾವಿರ ವರ್ಷದವರೆಗೆ ತಪಸ್ಸು ಮಾಡಬೇಕಾಗಿತ್ತು. ಅವಧಿಯು ಪೂರ್ಣವಾಗಲು ಇನ್ನೂ ಹತ್ತು ವರ್ಷಗಳು ಉಳಿದಿದ್ದವು. ದಿತಿಯು ಇಂದ್ರನ ಸೇವೆಗೆ ಮೆಚ್ಚಿ ಒಂದು ದಿನ ವತ್ಸ – ''ಇಂದ್ರ, ನನ್ನ ತಪಸ್ಸು ಮುಗಿಯಲು ಇನ್ನೂ ಹತ್ತು ವರ್ಷಗಳಿವೆ. ಆಮೇಲೆ ನಿನಗೊಬ್ಬ ತಮ್ಮನು ಹುಟ್ಟುತ್ತಾನೆ. ನಿನ್ನನ್ನು ಜಯಿಸುವ ಮಗನನ್ನು ಪಡೆಯಬೇಕೆಂದು ನನ್ನ ಆಸೆಯಿತ್ತು. ಒಳ್ಳೆಯದು, ಅವನು ನಿನಗೆ ಮಿತ್ರನಾಗುವಂತೆ ಏರ್ಪಡಿಸುತ್ತೇನೆ. ನೀನು ಅವನೊಡನೆ ತ್ರಿಲೋಕಾಧಿಪತಿಯಾಗಿ ಒಟ್ಟಿಗೆ ಬಾಳಬಹುದು. ಇದಕ್ಕಾಗಿ ನಿನ್ನ ತಂದೆಯನ್ನು ನಾನು ಬೇಡಿಕೊಂಡಿದ್ದೆ. ಒಂದು ಸಾವಿರ ವರ್ಷ ತಪಸ್ಸು ಮಾಡಿದ ಮೇಲೆ ಅಂತಹ ಮಗನು ಹುಟ್ಟುವನೆಂದು ನಿನ್ನ ತಂದೆ ವರವನ್ನು ದಯಪಾಲಿಸಿದರು'' ಎಂದು ಹೇಳಿದಳು. ಒಂದು ದಿನ ಮಧ್ಯಾಹ್ನ ದಿತಿಗೆ ಗರ್ಭಾಲಸ್ಯದಿಂದ ನಿದ್ರೆ ಬಂದಿತು. ಅವಳು ಕೃಷ್ಣಾಜಿನದ ಮೇಲೆ ಕಾಲುಚಾಚಿ ಮಲಗಿ ಬಿಟ್ಟಳು. ತಲೆಯನ್ನಿಡುವ ಕಡೆಗೆ ಕಾಲುಗಳನ್ನು ಚಾಚಿದ್ದಳು. ಕಾಲುಗಳನ್ನಿಡುವ ಕಡೆಗೆ ಅವಳ ತಲೆಕೂದಲುಗಳು ಹರಡಿದ್ದವು. ಅವಳಿಗೆ ನಿದ್ರೆ ಬಂದಿತು. ಹೀಗೆ ಹಗಲು ಹೊತ್ತಿನಲ್ಲಿ ನಿದ್ರಿಸಿದ್ದರಿಂದಲೂ, ಹಿಂದುಮುಂದಾಗಿ ತಲೆಯನ್ನಿಟ್ಟು ಮಲಗಿದ್ದರಿಂದಲೂ ಅವಳು ಅಶುಚಿಯಾದಳು.

ಅದನ್ನು ಕಂಡು ದೇವೇಂದ್ರನಿಗೆ ಆನಂದವಾಯಿತು. ಅವನು ಧೈರ್ಯಮಾಡಿ ತನ್ನ ದಿವ್ಯಶಕ್ತಿಯಿಂದ ದಿತಿಯ ಗರ್ಭವನ್ನು ಪ್ರವೇಶಿಸಿ ಗರ್ಭವನ್ನು ಏಳು ತುಂಡುಗಳಾಗಿ ಕತ್ತರಿಸಿದನು. ವಜ್ರಾಯುಧದಿಂದ ಕತ್ತರಿಸುವಾಗ ಶಿಶುವು ಅಳತೊಡಗಿತು. ಅಳುವಿನ ಶಬ್ದದಿಂದ ದಿತಿಗೆ ಎಚ್ಚರವಾಯಿತು. ಇಂದ್ರನು 'ಮಾ ರುದಃ ಮಾರುದಃ (ಅಳಬೇಡ, ಅಳಬೇಡ) ಎನ್ನುತ್ತಲೇ ಕತ್ತರಿಸುತ್ತಿದ್ದನು. ಅಷ್ಟರಲ್ಲಿ ದಿತಿಯು 'ಕೊಲ್ಲಬೇಡ, ಕೊಲ್ಲಬೇಡ' ಎಂದು ಅರಚಿದಳು. ಅವಳ ಮಾತನ್ನು ಗೌರವಿಸಿ ಇಂದ್ರನು ಹೊರಗೆ ಬಂದನು. ಅವನು ಕೈಮುಗಿದುಕೊಂಡು ವಿನಯದಿಂದ ''ಅಮ್ಮಾ, ನೀನು ಕಾಲುಕಡೆಗೆ ತಲೆಯಿಟ್ಟು, ಅದರಲ್ಲಿಯೂ ಹಗಲಿನಲ್ಲಿ ಮಲಗಿದ್ದರಿಂದ ಅಶುಚಿಯಾದೆ. ಇದೇ ಸಮಯವೆಂದರಿತು ನಾನು ಈ ಶಿಶುವನ್ನು ಏಳು ತುಂಡುಗಳಾಗಿ ಕತ್ತರಿಸಿದೆನು. ಇವನು ಮುಂದೆ ನನ್ನನ್ನು ಕೊಲ್ಲುತ್ತಿದ್ದನು. ಅದಕ್ಕಾಗಿ ಹೀಗೆ ಮಾಡಿದೆ. ದಯವಿಟ್ಟು ನನ್ನನ್ನು ಮನ್ನಿಸು'' ಎಂದು ಹೇಳಿ ದಿತಿಯ ಪಾದಗಳಿಗೆ ನಮಸ್ಕರಿಸಿದನು.

ತನ್ನ ಗರ್ಭವು ಏಳು ತುಂಡುಗಳಾಯಿತೆಂಬುದನ್ನು ಅರಿತು ದಿತಿಗೆ ಅತ್ಯಂತ ದುಃಖವಾಯಿತು. ''ಇಂದ್ರನು ಅಜೇಯನೇ ಸರಿ. ಇದೆಲ್ಲವೂ ದೈವೇಚ್ಛೆ'' ಎಂದು ತನ್ನನ್ನೇ ಸಂತೈಸಿಕೊಂಡಳು. ಆಮೇಲೆ ''ದೇವೇಂದ್ರ, ನನ್ನ ಗರ್ಭದ ಗತಿ ಈ ರೀತಿ ಯಾಗಲು ನನ್ನ ತಪ್ಪೇ ಕಾರಣ. ನಿನ್ನ ತಪ್ಪಿಲ್ಲ. ಆದದ್ದು ಆಗಿಹೋಯಿತು. ಈ ಗರ್ಭಕ್ಕೆ ಇಂತಹ ವಿಪತ್ತು ಬಂದಿತು. ನೀನು ಒಂದು ಉಪಕಾರವನ್ನು ಮಾಡು. ಈ ಏಳು ಗರ್ಭ ಖಂಡಗಳೂ ಏಳು ವ್ಯಕ್ತಿಗಳಾಗಿ ಜನಿಸುವರು. ಇವರು ಸಪ್ತ ವಾಯುಸ್ಕಂಧಗಳಿಗೆ ಅಧಿಪತಿಗಳಾಗಲಿ. ನೀನು 'ಮಾರುದಃ' ಎಂದು ಹೇಳಿದ್ದರಿಂದ ಇವರು ಮಾರುತ ರೆಂದು ಹೆಸರನ್ನು ಪಡೆದು ದಿವ್ಯ ರೂಪದಲ್ಲಿ ಸಂಚರಿಸಲಿ. ಇವರು ನಿನ್ನ ಶಾಸನಕ್ಕೆ ಒಳಪಟ್ಟಿರಲಿ. ಮಾರುತರೆಂದು ನೀನೇ ನಾಮಕರಣ ಮಾಡಿದಂತಾಯಿತು. ಇಂದ್ರ, ನಿನಗೆ ಮಂಗಳವಾಗಲಿ'' ಎಂದು ಹೇಳಿದಳು. ಆಗ ಇಂದ್ರನು ಕೈಮುಗಿದುಕೊಂಡು ''ಅಮ್ಮಾ, ಎಲ್ಲವೂ ನೀನು ಹೇಳಿದಂತೆ ನಡೆಯುವುದು. ಸಂದೇಹಬೇಡ. ನಿನ್ನ ಪುತ್ರರು ಸಪ್ತ ಮಾರುತರೆನಿಸಿ ದೇವತಾರೂಪದಿಂದ ಸಂಚರಿಸುವರು'' ಎಂದು ಅರಿಕೆ ಮಾಡಿದನು. ಈ ಪ್ರಕಾರ ತಾಯಿ ಮಕ್ಕಳು ಮಾತಾಡಿಕೊಂಡು ತಪೋವನದಿಂದ ನಿರ್ಗಮಿಸಿದರು. ಇದೆಲ್ಲವೂ ನಾನು ಕೇಳಿದ ಸಂಗತಿ. ಇದು ದಿತಿಯು ತಪಸ್ಸು ಮಾಡುತ್ತಿದ್ದ ಸ್ಥಳ.

ಇಕ್ಷ್ವಾಕುವಿಗೆ ಅಲಂಬುಸೆಯಲ್ಲಿ ವಿಶಾಲನೆಂಬ ಮಗನು ಹುಟ್ಟಿದನು. ಅವನು ಈ ಪ್ರದೇಶದಲ್ಲಿ ಕಟ್ಟಿದ ನಗರಿಗೆ ವಿಶಾಲಾ ಎಂದು ಹೆಸರಾಯಿತು. ಅವನ ವಂಶದಲ್ಲಿ ಕಾಕುತ್ಸ್ಥನ ಪುತ್ರನಾದ ಸುಮತಿಯು ಈಗ ಈ ಪಟ್ಟಣವನ್ನಾಳುತ್ತಿದ್ದಾನೆ. ಅವನು

ಕೀರ್ತಿಶಾಲಿಯೂ ಪರಾಕ್ರಮಿಯೂ ಆದ ರಾಜ. ಈ ದಿವಸ ರಾತ್ರಿ ಇಲ್ಲಿ ಉಳಿದು ಕೊಳ್ಳೋಣ. ನಾಳೆ ಪ್ರಾತಃಕಾಲ ಜನಕಮಹಾರಾಜನ ಮಿಥಿಲಾನಗರಿಗೆ ಹೋಗಬಹುದು'' ಎಂದರು. ಇವರು ಬಂದ ಸುದ್ದಿಯನ್ನು ಕೇಳಿ ಸುಮತಿ ರಾಜನು ತನ್ನ ಪುರೋಹಿತರನ್ನೂ ಬಾಂಧವರನ್ನೂ ಕರೆದುಕೊಂಡು ಬಂದು ಎಲ್ಲರನ್ನೂ ಸ್ವಾಗತಿಸಿದನು. ಆದರದಿಂದ ಅತಿಥಿ ಸತ್ಕಾರವನ್ನು ಮಾಡಿ ಎಲ್ಲರ ಕುಶಲವನ್ನೂ ವಿಚಾರಿಸಿದನು. ಅನಂತರ ''ವಿಶ್ವಾಮಿತ್ರ ಮಹರ್ಷಿಗಳೆ, ಇಂದು ನಾನು ಧನ್ಯನಾದೆ. ನನಗೆ ದರ್ಶನವನ್ನು ಕೊಟ್ಟಿದ್ದೀರಿ. ನನಗಿಂತ ಪುಣ್ಯವಂತನಿಲ್ಲ'' ಎಂದು ನುಡಿದನು. ಹೀಗೆ ಪರಸ್ಪರ ಕುಶಲ ಸಂಭಾಷಣೆ ನಡೆದ ಮೇಲೆ ಸುಮತಿ ರಾಜನು ಶ್ರೀರಾಮ ಲಕ್ಷ್ಮಣರನ್ನು ನೋಡಿ ವಿಸ್ಮಯ ಪಡುತ್ತಾ ಕೇಳಿದನು. ''ಮಹರ್ಷಿಗಳೆ, ಈ ಕುಮಾರರು ಯಾರು? ದೇವತೆಗಳಂತೆ ಕಾಣುತ್ತಾರಲ್ಲ ! ರೂಪದಲ್ಲಿ ಅಶ್ವಿನೀ ದೇವತೆ ಗಳಂತೆ ಇದ್ದಾರೆ. ನಿಲುವು, ನಡೆ, ನುಡಿಗಳಲ್ಲಿ ಒಬ್ಬರಂತೆ ಒಬ್ಬರಿದ್ದಾರೆ. ಆಯುಧ ಧಾರಿಗಳಾದ ಈ ಕುಮಾರರು ಕಾಡುದಾರಿಯಲ್ಲಿ ನಿಮ್ಮೊಡನೆ ಏಕೆ ಬಂದಿರಬಹುದು? ನಿಜವಾಗಿ ಇವರು ಯಾರಿರಬಹುದೆಂದು ತಿಳಿಯಲು ನನಗೆ ಕುತೂಹಲವಾಗಿದೆ'' ಎಂದನು. ಆಗ ವಿಶ್ವಾಮಿತ್ರರು ರಾಮಲಕ್ಷ್ಮಣರ ಎಲ್ಲ ವೃತ್ತಾಂತವನ್ನೂ ತಿಳಿಸಿದರು. ದಶರಥ ಮಹಾರಾಜನ ಪುತ್ರರು ತನ್ನ ಮನೆಗೆ ಬಂದರೆಂದು ಸುಮತಿ ರಾಜನಿಗೆ ಪರಮಾನಂದವಾಯಿತು. ರಾಜನ ಆತಿಥ್ಯವನ್ನು ಸ್ವೀಕರಿಸಿ ಎಲ್ಲರೂ ಅರಮನೆಯಲ್ಲಿ ಉಳಿದು ಮಾರನೆಯ ದಿನ ಮಿಥಿಲೆಗೆ ಪ್ರಯಾಣ ಮಾಡಿದರು.

೭

ಅಹಲ್ಯೋದ್ಧಾರ. ಮಿಥಿಲೆಗೆ ಪ್ರಯಾಣ

ದಾರಿಯಲ್ಲಿ ವಿಶ್ವಾಮಿತ್ರರು ಅವರೊಡನೆ ಒಂದು ಅರಣ್ಯಕ್ಕೆ ಬಂದರು. ಅಲ್ಲಿ ನಿರ್ಜನವಾಗಿದ್ದ ಒಂದು ಆಶ್ರಮವು ಗೋಚರಿಸಿತು. ರಾಮನು ''ಮುನಿಗಳೆ, ಇದು ಆಶ್ರಮದಂತೆ ತೋರುತ್ತದೆ. ಆದರೆ ಇಲ್ಲಿ ಯಾರೂ ಇರುವಂತೆ ಕಾಣುವುದಿಲ್ಲ. ಇದು ಯಾರ ಆಶ್ರಮ?'' ಎಂದು ಕೇಳಿದನು. ಆಗ ವಿಶ್ವಾಮಿತ್ರ ಮುನಿಗಳು ಹೇಳ ಲಾರಂಭಿಸಿದರು : ''ಆಹಾ ! ಇದರ ವಿಷಯವನ್ನು ಹೇಳುತ್ತೇನೆ. ಇದು ಗೌತಮ ಋಷಿಯ ಆಶ್ರಮವಾಗಿತ್ತು, ದೇವತೆಗಳೂ ಇದನ್ನು ಗೌರವಿಸುತ್ತಿದ್ದರು. ಗೌತಮ ಋಷಿಯು ಪತ್ನಿಯಾದ ಅಹಲ್ಯೆಯೊಡನೆ ಈ ಆಶ್ರಮದಲ್ಲಿ ಬಹಳ ಕಾಲ ತಪಸ್ಸನ್ನು ಆಚರಿಸುತ್ತಿದ್ದನು. ಅಹಲ್ಯೆಯು ಪರಮ ಸುಂದರಿ. ಒಂದು ಸಲ ಗೌತಮನು ಇಲ್ಲದ ಸಮಯದಲ್ಲಿ ದೇವೇಂದ್ರನು ಗೌತಮ ಮುನಿಯ ವೇಷದಲ್ಲಿ ಬಂದು ಅಹಲ್ಯೆಯನ್ನು

ಕುರಿತು ''ಸುಂದರಿ,ನಾನು ನಿನ್ನ ಸಂಗವನ್ನು ಬಯಸುತ್ತೇನೆ'' ಎಂದನು. ಇಂದ್ರನೇ ಮುನಿಯ ವೇಷದಲ್ಲಿ ಬಂದಿದ್ದಾನೆಂದು ಅಹಲ್ಯೆಗೆ ತಿಳಿಯಿತು. ಅವಳು ದೇವೇಂದ್ರನೊಡನೆ ಸಮಾಗಮವಾಗುವುದೆಂಬ ಆಸೆಯಿಂದ ಬುದ್ಧಿಗೆಟ್ಟು ಒಪ್ಪಿದಳು. ಕಡೆಯಲ್ಲಿ ಸಂತುಷ್ಟಳಾಗಿ ''ದೇವೇಂದ್ರ, ನಾನು ಕೃತಾರ್ಥಳಾದೆ. ಬೇಗನೆ ಇಲ್ಲಿಂದ ಹೊರಡು. ನನ್ನನ್ನೂ ನಿನ್ನನ್ನೂ ಗೌತಮ ಮುನಿಗಳಿಂದ ರಕ್ಷಿಸಿಕೊಳ್ಳುವ ಭಾರ ನಿನಗೆ ಸೇರಿದ್ದು'' ಎಂದಳು. ಇಂದ್ರನು ಪರ್ಣಶಾಲೆಯಿಂದ ಹೊರಗೆ ಬಂದನು. ಎದುರಿಗೆ ಸಾಕ್ಷಾತ್ ಗೌತಮ ಮಹರ್ಷಿಯೇ ಬಂದುಬಿಟ್ಟನು! ಆತನು ತೀರ್ಥೋದಕದಲ್ಲಿ ಸ್ನಾನ ಮಾಡಿ ದರ್ಭೆ, ಸಮಿತ್ತುಗಳನ್ನು ಹಿಡಿದುಕೊಂಡು ಅಗ್ನಿಯಂತೆ ಪ್ರಜ್ವಲಿಸುತ್ತ ಬರುತ್ತಿದ್ದನು. ಮುನಿಯನ್ನು ಕಂಡೊಡನೆ ಇಂದ್ರನಿಗೆ ನಡುಕ ಹುಟ್ಟಿ ಮುಖವು ಬಾಡಿಹೋಯಿತು. ಮಹಾತಪಸ್ವಿಯಾದ ಗೌತಮ ಮುನಿಗೆ ಇಂದ್ರನ ದುರಾಚಾರವು ತಿಳಿಯಿತು. ಆತನು ಸಿಟ್ಟಿನಿಂದ ''ಎಲೈ ದುಷ್ಟ, ನನ್ನ ರೂಪವನ್ನು ಧರಿಸಿ ಇಂತಹ ದುಷ್ಕೃತ್ಯವನ್ನು ನಡೆಸಿದೆಯಾ? ನಿನ್ನ ವೃಷಣಗಳು ಬಿದ್ದು ಹೋಗಲಿ'' ಎಂದು ಶಪಿಸಿದನು. ಒಡನೆಯೇ ಇಂದ್ರನ ವೃಷಣಗಳು ಬಿದ್ದುಹೋದವು. ಆಮೇಲೆ ತನ್ನ ಹೆಂಡತಿಯನ್ನುದ್ದೇಶಿಸಿ ''ನೀನು ಆಹಾರವಿಲ್ಲದೆ ಸಾವಿರಾರು ವರ್ಷಗಳವರೆಗೆ ಬೂದಿಯಲ್ಲಿ ಹೊರಳುತ್ತ ಬಿದ್ದಿರು. ಈ ಆಶ್ರಮದಲ್ಲಿಯೇ ಇದ್ದರೂ ಯಾರಿಗೂ ಕಾಣಿಸದೇ ಇರು'' ಎಂದು ಶಪಿಸಿದರು. ಪಶ್ಚಾತ್ತಾಪದಿಂದ ಅಹಲ್ಯೆಯು ಶೋಕಿಸುತ್ತಾ ಪತಿಯ ಪಾದಗಳಿಗೆರಗಿ ತನ್ನನ್ನು ಕ್ಷಮಿಸಬೇಕೆಂದು ಬೇಡಿದಳು. ಗೌತಮ ಮುನಿಯು ''ಕೆಟ್ಟ ನಡತೆಯವಳೆ, ಮುಂದೆ ದಶರಥ ಪುತ್ರನಾದ ಶ್ರೀರಾಮನು ಇಲ್ಲಿಗೆ ಬರುವನು. ನೀನು ಆತನಿಗೆ ಅತಿಥಿ ಸತ್ಕಾರವನ್ನು ಮಾಡಿ ಉಪಚರಿಸಿದಾಗ ಶುದ್ಧಳಾಗಿ ಮತ್ತೆ ನಿನ್ನ ನಿಜದೇಹವನ್ನು ಧರಿಸುವೆ. ಆಗ ಪವಿತ್ರಳಾಗುವೆ'' ಎಂದು ಹೇಳಿ ಹಿಮವತ್ಪರ್ವತದ ಒಂದು ಶಿಖರಕ್ಕೆ ತಪಸ್ಸಿಗಾಗಿ ಹೊರಟುಹೋದನು.

ರಾಘವ, ವೃಷಣಹೀನನಾದ ದೇವೇಂದ್ರನು ದೇವತೆಗಳ ಬಳಿಗೆ ಹೋಗಿ ''ಗೌತಮ ಮುನಿಯ ತಪಸ್ಸಿಗೆ ವಿಘ್ನವನ್ನುಂಟು ಮಾಡಲು ನಾನು ಈ ಅಪಚಾರವನ್ನು ಮಾಡಿ ವೃಷಣ ಹೀನನಾದೆನು. ಆತನ ಶಾಪದಿಂದ ತಪಸ್ಸಿನ ಬಹುಭಾಗವನ್ನು ಹಾಳು ಮಾಡಿದ್ದೇನೆ. ಇದು ದೇವಕಾರ್ಯ. ನೀವೆಲ್ಲರೂ ಸೇರಿ ನಾನು ಮೊದಲಿನಂತಾಗುವಂತೆ ಕಾರ್ಯವನ್ನು ಸಾಧಿಸಬೇಕು'' ಎಂದನು. ಆಗ ಅಗ್ನಿಪ್ರಮುಖರಾದ ದೇವತೆಗಳು ಮರುದ್ಗಣಗಳೊಡನೆ ಪಿತೃದೇವತೆಗಳ ಬಳಿಗೆ ಹೋದರು. ಅವರ ಪ್ರಾರ್ಥನೆಯನ್ನು ಕೇಳಿ ಪಿತೃದೇವತೆಗಳು ಮರುಕದಿಂದ ಇಂದ್ರನನ್ನು ಮೊದಲಿನಂತೆ ವೃಷಣಯುಕ್ತನನ್ನಾಗಿ ಮಾಡಿದರು. ಈ ರೀತಿಯಾಗಿ ಹೇಳಿ ವಿಶ್ವಾಮಿತ್ರರು ''ರಾಮ, ಆ ಪುಣ್ಯಾತ್ಮನ

ಆಶ್ರಮದೊಳಗೆ ಹೋಗೋಣ ಬಾ. ಅದೃಶ್ಯ ದೇವತೆಯಂತೆ ಇಲ್ಲಿರುವ ಮಹಾತ್ಮಳಾದ ಅಹಲ್ಯೆಯನ್ನು ಉದ್ಧಾರ ಮಾಡು'' ಎಂದರು. ಆ ಶ್ರೀರಾಮನು ವಿಶ್ವಾಮಿತ್ರರನ್ನು ಮುಂದೆ ಮಾಡಿಕೊಂಡು ಲಕ್ಷ್ಮಣನೊಡನೆ ಆಶ್ರಮವನ್ನು ಪ್ರವೇಶಿಸಿದನು.

ಅಲ್ಲಿ ದೇವಾಸುರ ಮಾನವರಿಗೂ ಅಗೋಚರಳಾಗಿದ್ದ ಅಹಲ್ಯೆಯು ಕಾಣಿಸಿದಳು. ದೀರ್ಘಕಾಲದ ತಪಸ್ಸಿನಿಂದ ಅವಳ ಸುತ್ತಲೂ ದಿವ್ಯ ಕಾಂತಿಯು ಹರಡಿತ್ತು. ಬ್ರಹ್ಮನು ಶ್ರಮದಿಂದ ಸೃಷ್ಟಿಸಿದ ಮಾಯಾಮಯಳಾದ ದೇವತೆಯಂತೆ ಅವಳು ಬೆಳಗುತ್ತಿದ್ದಳು. ಭಸ್ಮದಿಂದ ಆವೃತಳಾದ ಪ್ರಯುಕ್ತ ಹೊಗೆ ಮುಚ್ಚಿದ ಅಗ್ನಿಜ್ವಾಲೆಯಂತೆ ಪ್ರಕಾಶಿಸುತ್ತಿದ್ದಳು. ಶ್ರೀರಾಮನು ಆಶ್ರಮವನ್ನು ಪ್ರವೇಶಿಸಿದೊಡನೆ, ಗೌತಮ ಮುನಿಗಳ ಶಾಪದಿಂದ ಅವಳಿಗೆ ಬಿಡುಗಡೆಯಾಯಿತು. ರಾಮಲಕ್ಷ್ಮಣರು ಮುಂದೆ ಹೋಗಿ ಅಹಲ್ಯೆಯ ಪಾದಗಳನ್ನು ಮುಟ್ಟಿ ನಮಸ್ಕರಿಸಿದರು. ಅಹಲ್ಯೆ ಎದ್ದು ಕುಳಿತಳು. ಗೌತಮ ಮುನಿಗಳ ನುಡಿಯು ನೆನಪಿಗೆ ಬಂದಿತು. ಅದರಂತೆ ಅರ್ಘ್ಯಪಾದ್ಯಾದಿಗಳನ್ನಿತ್ತು ನಿಷ್ಠೆಯಿಂದ ರಾಮಲಕ್ಷ್ಮಣರನ್ನೂ ವಿಶ್ವಾಮಿತ್ರ ಮುನಿಗಳನ್ನೂ ಉಪಚರಿಸಿದಳು. ಶ್ರೀರಾಮನು ವಿಧಿವತ್ತಾಗಿ ಅವಳ ಸತ್ಕಾರವನ್ನು ಸ್ವೀಕರಿಸಲು ಆಕಾಶದಿಂದ ಹೂವಿನ ಮಳೆ ಸುರಿಯಿತು. ದೇವ ದುಂದುಭಿಗಳು ಮೊಳಗಿದವು. ಗಂಧರ್ವರು ಹಾಡಿದರು. ಅಪ್ಸರೆಯರು ನರ್ತಿಸಿದರು. ಇದೆಲ್ಲವೂ ಗೌತಮ ಮುನಿಗಳಿಗೆ ತಪೋಬಲದಿಂದ ತಿಳಿದು ಒಡನೆಯೇ ತಮ್ಮ ಪೂರ್ವಾಶ್ರಮಕ್ಕೆ ಆಗಮಿಸಿದರು. ತಪೋಬಲದಿಂದ ಪರಿಶುದ್ಧಳಾದ ಅಹಲ್ಯೆಯನ್ನು ಸ್ವೀಕರಿಸಿದರು. ವಿಶ್ವಾಮಿತ್ರ ಮುನಿಗಳಿಗೂ, ರಾಮ ಲಕ್ಷ್ಮಣರಿಗೂ, ಇತರ ಋಷಿಗಳಿಗೂ ಆನಂದವಾಯಿತು. ಅನಂತರ ಗೌತಮರು ವಿಧಿವತ್ತಾಗಿ ಶ್ರೀರಾಮನನ್ನು ಪೂಜಿಸಿ ತಮ್ಮ ನಿತ್ಯಕರ್ಮದಲ್ಲಿ ಮಗ್ನರಾದರು. ಶ್ರೀರಾಮನು ಅವರನ್ನು ಬೀಳ್ಕೊಂಡು ವಿಶ್ವಾಮಿತ್ರಾದಿಗಳೊಡನೆ ಮಿಥಿಲೆಗೆ ಪ್ರಯಾಣ ಮಾಡಿದನು.

ಅವರೆಲ್ಲರೂ ಈಶಾನ್ಯ ದಿಕ್ಕಿಗೆ ಪ್ರಯಾಣ ಮಾಡಿ ಮಿಥಿಲೆಯನ್ನು ಸೇರಿ ಜನಕ ಮಹಾರಾಜನ ಯಜ್ಞಶಾಲೆಯ ಸಮೀಪಕ್ಕೆ ಬಂದರು. ವಿಶ್ವಾಮಿತ್ರರು ಒಂದು ಸರಸ್ಸಿನ ಸಮೀಪದಲ್ಲಿ ತಮ್ಮ ನಿವಾಸವನ್ನು ಗೊತ್ತು ಮಾಡಿದರು. ಅಷ್ಟರಲ್ಲಿ ಇವರ ಆಗಮನದ ಸುದ್ದಿಯು ಜನಕ ಮಹಾರಾಜನಿಗೆ ಮುಟ್ಟಿತು. ಗೌತಮರ ಪುತ್ರರಾದ ಶತಾನಂದರು ಜನಕರಾಜನ ಪುರೋಹಿತರು. ಜನಕರು ಶತಾನಂದರನ್ನು ಮುಂದೆ ಮಾಡಿಕೊಂಡು ಪೂಜಾ ಸಾಮಗ್ರಿಯನ್ನು ಹಿಡಿದು ಋತ್ವಿಜರೊಡನೆ ಬಂದು ವಿಶ್ವಾಮಿತ್ರರನ್ನು ಸ್ವಾಗತಿಸಿದನು. ವಿಶ್ವಾಮಿತ್ರರೇ ಮೊದಲಾದವರು ಜನಕರಾಜನ ಸತ್ಕಾರವನ್ನು

ಸ್ವೀಕರಿಸಿದರು. ಕುಶಲ ಪ್ರಶ್ನೆಗಳಾದ ಮೇಲೆ ಜನಕರಾಜನು ವಿಶ್ವಾಮಿತ್ರರಿಗೆ ಒಂದು ಉನ್ನತವಾದ ಪೀಠವನ್ನಿತ್ತು ಕುಳಿತುಕೊಳ್ಳುವಂತೆ ಪ್ರಾರ್ಥಿಸಿದನು. ಎಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡರು. ಜನಕನು ವಿಶ್ವಾಮಿತ್ರರಿಗೆ ಕೈಮುಗಿದು ''ಬ್ರಹ್ಮರ್ಷಿಗಳೇ, ಇಂದು ನನ್ನ ಯಜ್ಞವು ಸಮೃದ್ಧವಾಯಿತು. ಈ ಮುನಿಗಳೊಡನೆ ನೀವು ಯಜ್ಞಶಾಲೆಗೆ ದಯಮಾಡಿಸಿದ್ದರಿಂದ ನಾನು ಧನ್ಯನಾದೆ. ಮುನಿಗಳೆ, ಬಹಳ ಒಳ್ಳೆಯದಾಯಿತು. ಈ ಕುಮಾರರು ಯಾರು? ದೇವತೆಗಳಂತೆ ಕಾಣುತ್ತಾರಲ್ಲ. ಅಶ್ವಿನೀ ದೇವತೆಗಳಂತಿರುವ ಈ ತರುಣರು ಯಾರಿರಬಹುದೆಂದು ವಿಸ್ಮಿತನಾಗಿದ್ದೇನೆ. ಇವರು ಆಗಮಿಸಿದ್ದರಿಂದ ನನ್ನ ದೇಶವೇ ಅಲಂಕೃತವಾಯಿತು'' ಎಂದನು. ವಿಶ್ವಾಮಿತ್ರ ಮುನಿಗಳು ಜನಕನಿಗೆ ಅವರು ದಶರಥ ಮಹಾರಾಜನ ಮಕ್ಕಳೆಂದು ತಿಳಿಸಿದರು. ಅವರು ತಮ್ಮೊಡನೆ ಸಿದ್ಧಾಶ್ರಮಕ್ಕೆ ಬಂದಿದ್ದ ವಿಚಾರ, ರಾಕ್ಷಸವಧೆ, ಅಹಲ್ಯಾದರ್ಶನ, ಗೌತಮರ ಆಗಮನ – ಇವೆಲ್ಲವನ್ನೂ ತಿಳಿಸಿ ಶಿವಧನುಸ್ಸನ್ನು ನೋಡುವುದಕ್ಕೋಸ್ಕರ ಮಿಥಿಲೆಗೆ ಬಂದಿದ್ದಾರೆಂದು ಹೇಳಿದರು.

೮

ಶತಾನಂದರು ವಿಶ್ವಾಮಿತ್ರರ ಪೂರ್ವವೃತ್ತಾಂತವನ್ನು ಹೇಳುವುದು. ರಾಜನಾಗಿದ್ದ ವಿಶ್ವಾಮಿತ್ರರಿಗೂ ವಸಿಷ್ಠ ಮುನಿಗಳಿಗೂ ನಡೆದ ಕಲಹ. ವಿಶ್ವಾಮಿತ್ರರ ಪರಾಜಯ

ವಿಶ್ವಾಮಿತ್ರರು ಹೇಳಿದ ಅಹಲ್ಯೋದ್ಧಾರದ ವೃತ್ತಾಂತವನ್ನು ಕೇಳಿ ಮಹಾತಪಸ್ವಿಗಳಾದ ಶತಾನಂದರಿಗೆ ಸಂತೋಷದಿಂದ ರೋಮಾಂಚವಾಯಿತು. ಅವರು ಆನಂದದಿಂದ ಹಿಗ್ಗುತ್ತಾ ವಿಶ್ವಾಮಿತ್ರ ಮುನಿಗಳನ್ನು ಕುರಿತು, ''ಮಹರ್ಷಿಗಳೆ, ಬಹುಕಾಲದಿಂದ ತಪಸ್ಸಿನಲ್ಲಿ ನಿರತಳಾಗಿದ್ದ ನನ್ನ ತಾಯಿಯನ್ನು ಈ ರಾಜಪುತ್ರರಿಗೆ ತೋರಿಸಿದಿರಾ? ನನ್ನ ತಾಯಿ ಶ್ರೀರಾಮನಿಗೆ ಫಲಪುಷ್ಪಗಳಿಂದ ಸತ್ಕರಿಸಿದಳೆ ? ಇಂದ್ರನು ಮಾಡಿದ ದುರಾಚಾರವನ್ನು ಹೇಳಿದಿರಾ? ಶ್ರೀರಾಮನ ಸಂದರ್ಶನವಾದ ಮೇಲೆ ನನ್ನ ತಂದೆ ಆಶ್ರಮಕ್ಕೆ ಹಿಂದಿರುಗಿದನೆ? ನನ್ನ ತಂದೆ ಶ್ರೀರಾಮನಿಗೆ ಸತ್ಕಾರ ಮಾಡಿದನೆ? ನನ್ನ ತಂದೆಯ ಮನಸ್ಸು ಶಾಂತವಾಗಿತ್ತೆ? ನನ್ನ ತಂದೆಯು ನನ್ನ ಮಾತೆಯನ್ನು ಸ್ವೀಕರಿಸಿ ಅನುಗ್ರಹಿಸಿದನೆ? ಅವನು ಶ್ರೀರಾಮನಿಗೆ ಆಶೀರ್ವಾದ ಮಾಡಿದನೆ?'' ಎಂದು ಕೇಳಿದನು. ಆಗ ವಿಶ್ವಾಮಿತ್ರರು ''ಶತಾನಂದರೆ, ಎಲ್ಲವೂ ಸರಿಯಾಗಿ ನಡೆಯಿತು. ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ಗೌತಮರು ತಮ್ಮ ಪತ್ನಿಯೊಡನೆ ಇದ್ದಾರೆ'' ಎಂದು ನುಡಿದರು.

ಅನಂತರ ಸಂತುಷ್ಟರಾದ ಶತಾನಂದರು ಶ್ರೀರಾಮನೊಡನೆ ಮಾತನಾಡಲಾರಂಭಿಸಿದರು. ''ರಘುನಂದನ, ನಿನಗೆ ಸ್ವಾಗತ. ಮಹಾಮಹಿಮರಾದ ಈ ಮಹರ್ಷಿಗಳು ನನ್ನ ಭಾಗ್ಯದಿಂದ ನಿನ್ನನ್ನು ಇಲ್ಲಿಗೆ ಕರೆತಂದಿದ್ದಾರೆ. ಈ ಮಹಾತ್ಮರು ಏನೇನು ಮಾಡಬಲ್ಲರೆಂಬುದು ಯಾರಿಗೂ ತಿಳಿಯದು. ಅಸಾಧಾರಣ ತಪಸ್ವಿಗಳಾದ ಈ ಬ್ರಹ್ಮರ್ಷಿಗಳ ಅನುಗ್ರಹವನ್ನು ಸಂಪಾದಿಸಿದ ನಿನಗಿಂತಲೂ ಹೆಚ್ಚಿನ ಪುಣ್ಯಾತ್ಮರಿಲ್ಲ. ಇವರ ಸಾಮರ್ಥ್ಯವೇನೆಂಬುದನ್ನು ನಾನು ಹೇಳುತ್ತೇನೆ, ಕೇಳು.

ಕುಶನಾಭನ ಪುತ್ರ ಗಾಧಿ ಮಹಾರಾಜ. ಗಾಧಿಯ ಪುತ್ರರೇ ಈ ಮಹಾತ್ಮರು. ಇವರು ರಾಜನಾಗಿ ದಕ್ಷತೆಯಿಂದ ರಾಜ್ಯಭಾರ ಮಾಡುತ್ತಿದ್ದರು. ಒಂದು ಸಲ ಚತುರಂಗ ಬಲವನ್ನು ತೆಗೆದುಕೊಂಡು ಭೂಪರ್ಯಟನೆ ಮಾಡುತ್ತ ವಸಿಷ್ಠ ಮುನಿಗಳ ಆಶ್ರಮಕ್ಕೆ ಬಂದರು. ಅವರ ಆಶ್ರಮವು ಮಹಾತೇಜಸ್ವಿಗಳಾದ ಋಷಿಗಳಿಗೆ ವಾಸಸ್ಥಾನವಾಗಿ ಬ್ರಹ್ಮಲೋಕದಂತೆ ಕಂಗೊಳಿಸುತ್ತಿತ್ತು. ಅನಂತರ ವಿಶ್ವಾಮಿತ್ರರು ವಸಿಷ್ಠ ಮಹರ್ಷಿಗಳನ್ನು ಕಂಡು ವಿನಯದಿಂದ ನಮಸ್ಕರಿಸಿದರು. ವಸಿಷ್ಠರು ಫಲಮೂಲಾದಿಗಳಿಂದ ರಾಜನನ್ನು ಸತ್ಕರಿಸಿದರು. ಅವರಿಬ್ಬರೂ ಬಹಳ ಹೊತ್ತು ಕುಶಲ ಸಂಭಾಷಣೆಯನ್ನು ನಡೆಸಿದರು. ಇಬ್ಬರಿಗೂ ಸಂತೋಷವಾಯಿತು. ಆಮೇಲೆ ವಸಿಷ್ಠರು ಹರ್ಷದಿಂದ ಪ್ರಸನ್ನರಾಗಿ ''ಮಹಾರಾಜ, ನಿನ್ನ ಚತುರಂಗ ಸೇನೆಗೂ ನಿನಗೂ ಯೋಗ್ಯವಾದ ಆತಿಥ್ಯವನ್ನು ನೀಡಬೇಕೆಂದು ನನಗೆ ಇಚ್ಛೆಯಾಗಿದೆ. ಶ್ರೇಷ್ಠನಾದ ಅತಿಥಿಯಾಗಿ ಬಂದಿರುವೆ. ನಿನ್ನನ್ನು ಗೌರವಿಸಿ ಸತ್ಕರಿಸುವುದು ನನ್ನ ಕರ್ತವ್ಯ, ಸ್ವೀಕರಿಸು'' ಎಂದು ನುಡಿದರು. ಆಗ ವಿಶ್ವಾಮಿತ್ರರು ''ಭಗವನ್, ತಾವು ಆದರದಿಂದ ನುಡಿದ ಈ ಪ್ರಿಯವಚನದಿಂದಲೇ ನನಗೆ ಆತಿಥ್ಯವನ್ನು ಮಾಡಿದಂತಾಯಿತು. ಫಲಮೂಲಗಳನ್ನು ಸ್ವೀಕರಿಸಿದ್ದೇನೆ. ಮುಖ್ಯವಾಗಿ ತಮ್ಮ ದರ್ಶನವಾಯಿತು. ತಮಗೆ ಅನಂತ ಪ್ರಣಾಮಗಳು. ಹೋಗಿ ಬರುತ್ತೇನೆ. ನನ್ನ ಮೇಲೆ ಹೀಗೆಯೇ ಸ್ನೇಹಪೂರ್ಣವಾದ ದೃಷ್ಟಿ ಇರಲಿ'' ಎಂದರು. ವಸಿಷ್ಠರು ವಿಶ್ವಾಮಿತ್ರರನ್ನು ಮತ್ತೆ ಮತ್ತೆ ಒತ್ತಾಯಪಡಿಸಲಾಗಿ ಇವರು ''ಆಗಲಿ ಮಹರ್ಷಿಗಳೆ, ನಿಮ್ಮ ಇಚ್ಛೆಯಂತಾಗಲಿ'' ಎಂದು ಹೇಳಿದರು.

ಅನಂತರ ವಸಿಷ್ಠ ಮುನಿಗಳು ದಿವ್ಯಧೇನುವಾದ ಶಬಲೆಯನ್ನು ಕರೆದು ''ಶಬಲೆ, ಈ ರಾಜರ್ಷಿಯು ಸೇನಾಸಮೇತನಾಗಿ ಬಂದಿದ್ದಾನೆ. ಇವನಿಗೆ ಯೋಗ್ಯವಾದ ರಾಜಭೋಜನವನ್ನು ಒದಗಿಸಿ ಸತ್ಕರಿಸಬೇಕೆಂದು ಸಂಕಲ್ಪಿಸಿದ್ದೇನೆ. ನೀನು ದಿವ್ಯಶಕ್ತಿಯುಳ್ಳ ಕಾಮಧೇನು. ಇವರೆಲ್ಲರಿಗೂ ಉತ್ತಮೋತ್ತಮವಾದ ಭೋಜನವನ್ನೇರ್ಪಡಿಸು'' ಎಂದು ತಿಳಿಸಿದರು.

ಶ್ರೀರಾಮ, ಹೀಗೆ ಹೇಳಿದೊಡನೆ ಆ ಕಾಮಧೇನುವು ವಿಶ್ವಾಮಿತ್ರರ ಪರಿವಾರಕ್ಕೆ ಬೇಕಾದ ಭೋಜನ ಸಾಮಗ್ರಿಯನ್ನು ಸಿದ್ಧ ಪಡಿಸಿತು. ನಾನಾ ಬಗೆಯ ಭಕ್ಷ್ಯಗಳು ಸಿದ್ಧವಾದವು. ಬಿಸಿಬಿಸಿಯಾದ ಅನ್ನದ ರಾಶಿಗಳು ಬೆಟ್ಟಗಳಂತೆ ಕಂಗೊಳಿಸಿದವು. ತೊವ್ವೆ, ಗೊಜ್ಜು, ನಾನಾ ವ್ಯಂಜನಗಳು, ಮೊಸರು – ಎಲ್ಲವೂ ಬೆಳ್ಳಿಯ ಪಾತ್ರೆಗಳಲ್ಲಿ ಸಿದ್ಧವಾದವು. ಆಮೇಲೆ ರಾಜರ್ಷಿಗಳಾದ ವಿಶ್ವಾಮಿತ್ರರೂ ಅವರೊಡನೆ ಬಂದಿದ್ದ ಅಂತಃಪುರ ಸ್ತ್ರೀಯರೂ ಸಕಲ ಸೇನಾ ಪರಿವಾರದವರೂ ಭೋಜನವನ್ನು ಮಾಡಿ ಸಂತೃಪ್ತರಾದರು. ಇವೆಲ್ಲವೂ ಶಬಲೆಯೆಂಬ ಕಾಮಧೇನುವಿನ ಮಾಹಾತ್ಮ್ಯದಿಂದ ನಡೆಯಿತೆಂಬುದು ವಿಶ್ವಾಮಿತ್ರರಿಗೆ ತಿಳಿಯಿತು.

ಅವರಿಗೆ ಶಬಲೆಯನ್ನು ಪಡೆಯಬೇಕೆಂಬ ಆಸೆ ತಲೆದೋರಿತು. ಆಮೇಲೆ ವಸಿಷ್ಠರ ಬಳಿಗೆ ಹೋಗಿ ''ಮಹರ್ಷಿಗಳೆ, ಪೂಜ್ಯರಾದ ನೀವು ನನ್ನನ್ನು ಆದರದಿಂದ ಉಪಚರಿಸಿದ್ದೀರಿ. ಈಗ ಒಂದು ಮಾತನ್ನು ಹೇಳುತ್ತೇನೆ, ಲಾಲಿಸಬೇಕು. ಪೂಜ್ಯರೆ, ಈ ಶಬಲೆಯೆಂಬ ಧೇನು ಒಂದು ರತ್ನವೇ ಸರಿ. ರತ್ನವು ರಾಜನ ಬಳಿ ಇರಬೇಕಾದದ್ದು ಯುಕ್ತವಾದದ್ದು. ಈ ಶಬಲೆಯನ್ನು ನನಗೆ ಒಪ್ಪಿಸಿರಿ. ಇದಕ್ಕೆ ಬದಲಾಗಿ ಒಂದು ಲಕ್ಷ ಗೋವುಗಳನ್ನಾದರೂ ಒಪ್ಪಿಸುತ್ತೇನೆ'' ಎಂದರು. ಆಗ ವಸಿಷ್ಠರು ''ರಾಜ, ಲಕ್ಷ ಹಸುಗಳು ಮಾತ್ರವಲ್ಲ, ಕೋಟಿ ಹಸುಗಳನ್ನು ಕೊಟ್ಟರೂ ನಾನು ಶಬಲೆಯನ್ನು ಕೊಡುವುದಿಲ್ಲ. ಈ ಧೇನುವು ಕ್ರಯಕ್ಕೆ ಕೊಡುವ ವಸ್ತುವಲ್ಲ. ನನ್ನ ಹವ್ಯಕವ್ಯಗಳು, ಆಹಾರ–ಮೊದಲಾದವುಗಳಿಗೆಲ್ಲಾ ಶಬಲೆಯೇ ಆಧಾರ. ಶಿಷ್ಯರ ಅಧ್ಯಯನ, ಅಧ್ಯಾಪನಗಳಿಗೆ ಇವಳಿಂದ ತುಂಬ ನೆರವು ದೊರೆಯುತ್ತಿದೆ. ಆಹಾರವನ್ನು ಒದಗಿಸುವುದರ ಮೂಲಕ ಶಬಲೆಯೇ ನಮಗೆ ಪರಮೋಪಕಾರವನ್ನು ಮಾಡುತ್ತಿದ್ದಾಳೆ. ಈ ಧೇನುವನ್ನು ಕೊಟ್ಟರೆ ನನ್ನ ಕಾರ್ಯವೆಲ್ಲವೂ ನಿಂತು ಹೋದೀತು. ಆದ್ದರಿಂದ ಶಬಲೆಯನ್ನು ಕೊಡಲಾರೆ'' ಎಂದು ನುಡಿದರು. ವಿಶ್ವಾಮಿತ್ರರು ಇನ್ನೂ ನಾನಾ ಬಗೆಯ ಆಸೆಗಳನ್ನು ತೋರಿಸಿದರೂ ವಸಿಷ್ಠರು ಒಪ್ಪಲಿಲ್ಲ. ''ರಾಜ, ಎಷ್ಟು ಹೇಳಿದರೇನು? ಈ ಶಬಲೆಯೇ ನನ್ನ ಸರ್ವಸ್ವ. ಇದೇ ನನ್ನ ಪ್ರಾಣ. ಈ ಕಾಮಧೇನುವನ್ನು ಎಂದಿಗೂ ಕೊಡುವುದಿಲ್ಲ'' ಎಂದು ದೃಢವಾಗಿ ನುಡಿದರು.

ವಿಶ್ವಾಮಿತ್ರರು ಕುಪಿತರಾಗಿ ಅಲ್ಲಿಂದ ಹೊರಟುಹೋದರು. ತಮ್ಮ ಸೈನಿಕರನ್ನು ಕುರಿತು ''ಇಲ್ಲಿ ಶಬಲೆಯೆಂಬ ಧೇನುವಿದೆ. ಅದನ್ನು ಬಲಾತ್ಕಾರವಾಗಿ ಎಳೆದುಕೊಂಡು ಬನ್ನಿರಿ'' ಎಂದು ಆಜ್ಞಾಪಿಸಿದರು. ಆ ಯೋಧರು ಧೇನುವನ್ನು ಹಗ್ಗದಿಂದ ಕಟ್ಟಿ ಎಳೆಯತೊಡಗಿದರು. ಆಗ ಶಬಲೆಯು ''ಅಯ್ಯೋ, ವಸಿಷ್ಠ ಮಹರ್ಷಿಗಳು ನನ್ನನ್ನು ತ್ಯಜಿಸಿಬಿಟ್ಟರೋ ಹೇಗೆ? ನಾನು ಏನು ತಪ್ಪು ಮಾಡಿದೆ?'' ಎಂದು ಪರಿತಪಿಸುತ್ತಾ ಆ

ಯೋಧರನ್ನು ತಳ್ಳಿಹಾಕಿ ವಸಿಷ್ಠರೆದುರಿಗೆ ನಡೆದ ಸಂಗತಿಯನ್ನು ತಿಳಿಸಿ ಗೋಳಾಡುತ್ತಾ ''ಮಹಾತ್ಮರೆ, ಈ ರಾಜಭಟರು ನನ್ನನ್ನು ಎಳೆದುಕೊಂಡು ಹೋಗುತ್ತಿದ್ದಾರೆ. ನೀವು ನನ್ನನ್ನು ತ್ಯಜಿಸಿದಿರೋ ಹೇಗೆ?'' ಎಂದು ಕೇಳಿತು. ವಸಿಷ್ಠರು ಶೋಕ ಸಂತಪ್ತರಾಗಿ ''ಶಬಲೆ, ನಿನ್ನನ್ನು ನಾನು ತ್ಯಜಿಸಿಲ್ಲ, ನೀನು ಯಾವ ತಪ್ಪನ್ನೂ ಮಾಡಿಲ್ಲ. ಈ ರಾಜನು ನಿನ್ನನ್ನು ಕೊಡಬೇಕೆಂದು ಕೇಳಿದಾಗ ನಾನು ಒಪ್ಪಲಿಲ್ಲ. ಅವನು ಈಗ ಬಲಾತ್ಕರಿಸು ತ್ತಿರಬೇಕು. ಎಷ್ಟಾದರೂ ರಾಜನು ಬಲಶಾಲಿ'' ಎಂದರು. ಆಗ ಶಬಲೆಯು ನಮ್ರತೆ ಯಿಂದ ''ಬ್ರಹ್ಮರ್ಷಿಗಳೇ, ಬ್ರಾಹ್ಮಣನಿಗಿಂತ ಕ್ಷತ್ರಿಯನು ಬಲಶಾಲಿಯೆಂದು ಯಾರೂ ಹೇಳಲಾರರು. ನಿಮ್ಮ ತಪೋಬಲವು ಊಹಾತೀತವಾದದ್ದು. ಅದರೆದುರಿಗೆ ಈ ರಾಜನ ಬಲ ಏನು ಮಾಡೀತು? ನೀವು ನನಗೆ ಅನುಜ್ಞೆಯನ್ನು ಕೊಟ್ಟರೆ ನಿಮ್ಮ ಅನುಗ್ರಹ ದಿಂದ ಈ ದುರಾತ್ಮನ ದರ್ಪವನ್ನು ಅಡಗಿಸುತ್ತೇನೆ'' ಎಂದು ಹೇಳಿತು. ರಾಮ, ಶಬಲೆಯ ಮಾತನ್ನು ಕೇಳಿ ವಸಿಷ್ಠರು ''ಆಗಲಿ, ಈತನ ದರ್ಪವನ್ನಡಗಿಸು'' ಎಂದರು. ಆಗ ಶಬಲೆಯು ''ಹುಂಬಾ'' ಎಂದು ಕೂಗಿತು. ಒಡನೆಯೇ ಯವನ, ಕಾಂಬೋಜ ಮುಂತಾದ ನಾನಾ ಬಗೆಯ ಸೈನಿಕರು ಶಬಲೆಯ ದಿವ್ಯಶಕ್ತಿಯಿಂದ ಆವಿರ್ಭವಿಸಿ ವಿಶ್ವಾಮಿತ್ರ ರಾಜನ ಸೈನ್ಯವನ್ನು ಧ್ವಂಸಮಾಡತೊಡಗಿದರು. ವಿಶ್ವಾಮಿತ್ರರು ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಆ ಸೈನಿಕರನ್ನು ಓಡಿಸಿದರು. ಆಗ ಶಬಲೆಯು ಮತ್ತಷ್ಟು ಸೈನಿಕರನ್ನು ತನ್ನ ದಿವ್ಯಶಕ್ತಿಯಿಂದ ಸೃಷ್ಟಿಸಿತು. ಅವರು ವಿಶ್ವಾಮಿತ್ರರ ಸೈನ್ಯವನ್ನು ನಾಶಮಾಡತೊಡಗಿದರು. ವಿಶ್ವಾಮಿತ್ರರ ಮಕ್ಕಳು ಆಯುಧಧಾರಿಗಳಾಗಿ ಕ್ರೋಧದಿಂದ ವಸಿಷ್ಠರ ಮೇಲೆ ನುಗ್ಗಿ ಬಂದರು. ವಸಿಷ್ಠರು ಒಂದು ಸಲ ಹುಂಕರಿಸಲು ಅವರೆಲ್ಲರೂ ಸುಟ್ಟು ಬೂದಿಯಾದರು. ವಿಶ್ವಾಮಿತ್ರರಿಗೆ ದೊಡ್ಡ ಚಿಂತೆ ಆವರಿಸಿತು. ಮಕ್ಕಳೆಲ್ಲರೂ ಹತರಾದರು. ಸೈನ್ಯವು ನಾಶವಾಯಿತು ಎಂದು ಅವರಿಗೆ ನಾಚಿಕೆಯಾಯಿತು. ಹಲ್ಲು ಮುರಿದ ಹಾವಿನಂತಾದರು.

ಅನಂತರ ಹಟಮಾರಿಗಳಾದ ಈ ವಿಶ್ವಾಮಿತ್ರರು ತಪೋಬಲದಿಂದ ವಿಶಿಷ್ಟ ಸಾಮರ್ಥ್ಯವನ್ನು ಪಡೆಯುವುದಕ್ಕಾಗಿ ಹಿಮಾಲಯಕ್ಕೆ ಹೋಗಿ ಪರಮೇಶ್ವರನನ್ನು ಕುರಿತು ಉಗ್ರವಾದ ತಪಸ್ಸನ್ನು ಆರಂಭಿಸಿದರು. ಆ ಕಠೋರ ತಪಸ್ಸಿಗೆ ಮೆಚ್ಚಿ ಪರಮೇಶ್ವರನು ಪ್ರಸನ್ನನಾಗಿ ''ರಾಜರ್ಷಿ, ಪ್ರಸನ್ನನಾಗಿದ್ದೇನೆ. ನಿನಗೆ ಏನು ಬೇಕು?'' ಎಂದು ಕೇಳಿದನು. ವಿಶ್ವಾಮಿತ್ರರು ''ಮಹಾದೇವ, ಸಮಸ್ತ ಧನುರ್ವೇದವನ್ನು ನನಗೆ ಅನುಗ್ರಹಿಸು. ಧನುರ್ವೇದದ ಎಲ್ಲ ರಹಸ್ಯವನ್ನೂ ನನಗೆ ತಿಳಿಸು. ದೇವ ದಾನವಾದಿ ಗಳಲ್ಲಿ ಯಾವ ಯಾವ ಮಂತ್ರಾಸ್ತ್ರಗಳಿವೆಯೋ ಅವೆಲ್ಲವೂ ನಿನ್ನ ಅನುಗ್ರಹದಿಂದ ನನಗೆ ಗೋಚರಿಸಲಿ. ಇದೇ ನನ್ನ ಪ್ರಾರ್ಥನೆ'' ಎಂದು ಹೇಳಿದರು. ಮಹಾದೇವನು

''ತಥಾಸ್ತು'' ಎಂದು ಹೇಳಿ ಅಂತರ್ಧಾನ ಹೊಂದಿದನು. ವಿಶ್ವಾಮಿತ್ರರು ಸಕಲ ಮಂತ್ರಾಸ್ತ್ರಗಳನ್ನೂ ಪಡೆದು ಮಹಾಬಲಶಾಲಿಗಳಾದರು. ಅವರಿಗೆ ಹಿಡಿಸಲಾರದಷ್ಟು ದರ್ಪವು ಮನಸ್ಸಿನಲ್ಲಿ ತುಂಬಿತು. ಇನ್ನು ವಸಿಷ್ಠರು ಸತ್ತರೆಂದೇ ಭಾವಿಸಿ ನೇರವಾಗಿ ಅವರ ಆಶ್ರಮಕ್ಕೆ ಹೋಗಿ ಬಾಣಗಳ ಮಳೆಗರೆದು ತಪೋವನವನ್ನು ಸುಟ್ಟು ಹಾಕಲಾರಂಭಿಸಿದರು. ಮೃಗಪಕ್ಷಿಗಳು ಕಂಗೆಟ್ಟು ದಿಕ್ಕುದಿಕ್ಕಿಗೆ ಪಲಾಯನ ಮಾಡಿದವು. ಶಿಷ್ಯರು ಗೋಳಾಡುತ್ತಾ ಅತ್ತಿತ್ತ ಓಡತೊಡಗಿದರು. ಆಗ ವಸಿಷ್ಠರು ಆಶ್ರಮದಿಂದ ಹೊರಕ್ಕೆ ಬಂದು ''ಹೆದರಬೇಡಿರಿ, ಹೆದರಬೇಡಿರಿ. ಈ ಗಾಧಿಪುತ್ರನ ದುರಹಂಕಾರ ವನ್ನು ಅಡಗಿಸಿ ಬಿಡುತ್ತೇನೆ'' ಎಂದು ಹೇಳುತ್ತಾ ವಿಶ್ವಾಮಿತ್ರರ ಎದುರಿಗೆ ಬಂದರು. ಆ ಮಹಾತ್ಮರು ''ಎಲೈ ಮೂಢ, ನಿಷ್ಕಾರಣವಾಗಿ ಈ ಆಶ್ರಮವನ್ನು ನಾಶ ಮಾಡಿದೆಯಾ? ದುಷ್ಟ, ನೀನಿನ್ನು ಉಳಿಯಲಾರೆ'' ಎಂದು ಹೇಳಿ ಮಹಾಕ್ರೋಧ ದಿಂದ ತಮ್ಮ ಬ್ರಹ್ಮದಂಡವನ್ನು ಎತ್ತಿ ಹಿಡಿದರು. ವಸಿಷ್ಠರು ಬ್ರಹ್ಮ ತೇಜಸ್ಸಿನಿಂದ ಬೆಳಗುತ್ತ ಪ್ರಳಯಕಾಲಾಗ್ನಿಯಂತೆ ಗೋಚರಿಸಿದರು. ಅವರು ಹಿಡಿದಿದ್ದ ದಂಡವು ಯಮದಂಡದಂತೆ ಕಾಣಿಸಿತು.

ರಾಮ, ಆಗ ಈ ಗಾಧಿಪುತ್ರರು ಆಗ್ನೇಯಾಸ್ತ್ರವನ್ನು ಧನುಸ್ಸಿಗೆ ಹೂಡಿ ''ನಿಲ್ಲು, ನಿಲ್ಲು'' ಎಂದು ಗರ್ಜಿಸಿದರು. ವಸಿಷ್ಠರು ''ಕ್ಷತ್ರಿಯಾಧಮ, ನಿಂತೇ ಇದ್ದೇನೆ, ನೋಡು. ನಿನ್ನ ಬಲವೇನೆಂಬುದನ್ನು ತೋರಿಸು'' ಎಂದರು. ವಿಶ್ವಾಮಿತ್ರರ ಆಗ್ನೇಯಾಸ್ತ್ರವು ಪ್ರಜ್ವಲಿಸುತ್ತ ಬಂದು ಬ್ರಹ್ಮದಂಡದೆದುರಿಗೆ ತಣ್ಣಗಾಗಿ ಕೆಳಗೆ ಬಿದ್ದಿತು. ಅನಂತರ ವಿಶ್ವಾಮಿತ್ರರು ಕ್ರುದ್ಧರಾಗಿ ವಾರುಣ, ರೌದ್ರ, ಐಂದ್ರ, ಪಾಶುಪತ – ಇವೇ ಮೊದಲಾದ ನಾನಾ ಮಂತ್ರಾಸ್ತ್ರಗಳನ್ನು ಒಂದಾದ ಮೇಲೆ ಒಂದರಂತೆ ವಸಿಷ್ಠರ ಮೇಲೆ ಪ್ರಯೋಗಿಸಿದರು. ರಾಘವ, ಏನಾಶ್ಚರ್ಯ! ಆ ಸಕಲ ದಿವ್ಯಾಸ್ತ್ರಗಳನ್ನೂ ವಸಿಷ್ಠರ ಬ್ರಹ್ಮದಂಡವು ನುಂಗಿ ಹಾಕಿತು. ವಿಶ್ವಾಮಿತ್ರರು ದಿಗ್ಭ್ರಾಂತರಾಗಿ ಬ್ರಹ್ಮಾಸ್ತ್ರವನ್ನು ಧನುಸ್ಸಿಗೆ ಹೂಡಿದರು. ಅದರ ವಿಜೃಂಭಣೆಯನ್ನು ಕಂಡು ದೇವಗಂಧರ್ವರು ಹೆದರಿ ಕಂಗಾಲಾದರು. ಮೂರು ಲೋಕವೂ ನಡುಗಿ ಹೋಯಿತು. ಬ್ರಹ್ಮಾಸ್ತ್ರವು ಕಿಡಿಗೆದರುತ್ತ ನುಗ್ಗಿ ಬಂದಿತು. ಅತಿ ಭೀಕರವಾದ ಆ ಬ್ರಹ್ಮಾಸ್ತ್ರವನ್ನೂ ಸಹ ವಸಿಷ್ಠರು ಬ್ರಹ್ಮದಂಡದ ಮೂಲಕ ತಮ್ಮ ಬ್ರಹ್ಮ ತೇಜೋಬಲದಿಂದ ನುಂಗಿಬಿಟ್ಟರು! ಆ ಬ್ರಹ್ಮಾಸ್ತ್ರವನ್ನು ನುಂಗುವಾಗ ಅಗ್ನಿ ಜ್ವಾಲೆಯಿಂದ ಕಿಡಿಗಳು ಸಿಡಿಯುವಂತೆ ವಸಿಷ್ಠರ ರೋಮಕೂಪಗಳಿಂದ ಕಿಡಿಗಳು ಸಿಡಿದವು! ಅವರ ಕೈಯಲ್ಲಿದ್ದ ಬ್ರಹ್ಮದಂಡವು ಯಮದಂಡವೋ ಅತ್ಯುಗ್ರವಾದ ಕಾಲಚಕ್ರವೋ ಎಂಬಂತೆ ಪ್ರಜ್ವಲಿಸಿತು. ಆಗ ದೇವರ್ಷಿಗಳು ವಸಿಷ್ಠರನ್ನು ಸ್ತುತಿಸಿ,

''ಬ್ರಹ್ಮರ್ಷಿಗಳೇ, ನಿಮ್ಮ ಬಲವು ನಮ್ಮ ಊಹೆಗೆ ನಿಲುಕದು. ಈ ಉಗ್ರತೇಜಸ್ಸನ್ನು ತಡೆಹಿಡಿದು ಶಾಂತರಾಗಿರಿ. ಲೋಕಕ್ಕೆ ಒದಗಿದ ಭಯವು ದೂರವಾಗಲಿ. ಈ ವಿಶ್ವಾಮಿತ್ರನು ಸೋತನು'' ಎಂದು ಘೋಷಿಸಿದರು. ಅವರ ಪ್ರಾರ್ಥನೆಯಂತೆ ವಸಿಷ್ಠರು ಕ್ರಮವಾಗಿ ಶಾಂತರಾದರು. ಪರಾಜಿತರಾದ ವಿಶ್ವಾಮಿತ್ರರು ವ್ಯಥೆಯಿಂದ ನಿಟ್ಟುಸಿರು ಬಿಡುತ್ತಾ ''ಧಿಗ್ ಬಲಂ ಕ್ಷತ್ರಿಯಬಲಂ, ಬ್ರಹ್ಮತೇಜೋಬಲಂ ಬಲಂ–ಈ ಕ್ಷತ್ರಿಯ ಬಲಕ್ಕೆ ಧಿಕ್ಕಾರ. ಬ್ರಹ್ಮತೇಜೋಬಲವೇ ಬಲ. ಈ ಒಂದು ಬ್ರಹ್ಮದಂಡವು ನನ್ನ ಸಕಲ ಮಂತ್ರಾಸ್ತ್ರಗಳನ್ನು ನುಂಗಿ ನೊಣೆಯಿತು! ಇನ್ನು ನಾನು ಮಹತ್ತರವಾದ ತಪಸ್ಸನ್ನಾಚರಿಸಿ ಬ್ರಹ್ಮತೇಜಸ್ಸನ್ನು ಸಂಪಾದಿಸಬೇಕು!'' ಎಂದುಕೊಂಡರು.

೯

ವಿಶ್ವಾಮಿತ್ರರ ತಪಸ್ಸು. ತ್ರಿಶಂಕುವಿನ ವೃತ್ತಾಂತ

ಅನಂತರ ವಿಶ್ವಾಮಿತ್ರರು ತಮಗಾದ ಸೋಲಿಗಾಗಿ ಬಹಳ ವ್ಯಥೆಪಟ್ಟು ತಮ್ಮ ನಿಶ್ಚಯದಂತೆ ದಕ್ಷಿಣ ದಿಕ್ಕಿಗೆ ಹೋಗಿ ಘೋರವಾದ ತಪಸ್ಸನ್ನಾರಂಭಿಸಿದರು. ಬಹು ವರ್ಷಗಳವರೆಗೆ ತಪಸ್ಸನ್ನಾಚರಿಸಿದ ಮೇಲೆ ಬ್ರಹ್ಮನು ಪ್ರತ್ಯಕ್ಷನಾಗಿ ''ವಿಶ್ವಾಮಿತ್ರ, ನೀನು ತಪಸ್ಸಿನಿಂದ ಎಲ್ಲ ರಾಜರ್ಷಿಗಳನ್ನೂ ಮೀರಿಸಿದ್ದೀಯೆ. ನೀನು ರಾಜರ್ಷಿಯೆಂದು ಪರಿಗಣಿಸುತ್ತೇನೆ'' ಎಂದು ಹೇಳಿ ಅಂತರ್ಧಾನ ಹೊಂದಿದನು. ಬ್ರಹ್ಮನ ಮಾತನ್ನು ಕೇಳಿ ವಿಶ್ವಾಮಿತ್ರರಿಗೆ ನಾಚಿಕೆಯಾಯಿತು. ಅವರು ಬಹಳ ಖಿನ್ನರಾಗಿ ಸಿಟ್ಟಿನಿಂದ ''ಎಲಾ! ಇಷ್ಟು ಘೋರವಾದ ತಪಸ್ಸನ್ನಾಚರಿಸಿದರೂ ನನ್ನನ್ನು ಇವರು ರಾಜರ್ಷಿ ಎಂದೇ ಭಾವಿಸುತ್ತಾರೆ! ಇದು ನನ್ನ ತಪಸ್ಸಿಗೆ ಫಲವಲ್ಲ'' ಎಂದುಕೊಳ್ಳುತ್ತಾ ಇನ್ನೂ ಮಹತ್ತರವಾದ ತಪಸ್ಸಿನಲ್ಲಿ ನಿರತರಾದರು.

ರಾಘವ, ಈ ಸಮಯದಲ್ಲಿ ತ್ರಿಶಂಕುವೆಂಬ ಇಕ್ಷ್ವಾಕು ವಂಶದ ರಾಜನಿಗೆ ಸಶರೀರನಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಆಸೆ ಹುಟ್ಟಿತು. ಅದಕ್ಕಾಗಿ ಒಂದು ಯಾಗವನ್ನು ಮಾಡಬೇಕೆಂದು ಉದ್ದೇಶಿಸಿ ಪುರೋಹಿತರಾದ ವಸಿಷ್ಠರಿಗೆ ತನ್ನ ಅಭಿಲಾಷೆಯನ್ನು ತಿಳಿಸಿದನು. ವಸಿಷ್ಠರು 'ಇದು ನಿನ್ನಿಂದ ಸಾಧ್ಯವಿಲ್ಲ' ಎಂದು ಹೇಳಿ ತಿರಸ್ಕರಿಸಿದರು. ಆಗ ತ್ರಿಶಂಕುವು ತನ್ನ ಕಾರ್ಯಸಾಧನೆಗಾಗಿ ದಕ್ಷಿಣದೇಶಕ್ಕೆ ಹೋಗಿ ವಸಿಷ್ಠರ ನೂರುಮಂದಿ ಪುತ್ರರನ್ನು ಕಂಡನು. ಅವರು ದೀರ್ಘಕಾಲದಿಂದ ತಪಸ್ಸನ್ನಾಚರಿಸುತ್ತಿದ್ದರು. ತ್ರಿಶಂಕುವು ಅವರಿಗೆ ಅಭಿವಾದನೆ ಮಾಡಿ ಕೈಮುಗಿದುಕೊಂಡು ''ಮಹಾತ್ಮರೆ, ನಾನು ನಿಮಗೆ ಶರಣಾಗತನಾಗಿದ್ದೇನೆ.

ಸಶರೀರನಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಅಭಿಲಾಷೆಯಿಂದ ಒಂದು ಯಾಗವನ್ನು ಮಾಡಬೇಕೆಂದು ಸಂಕಲ್ಪಿಸಿದೆನು. ಅದನ್ನು ಮಾಡಿಸಲು ವಸಿಷ್ಠ ಮಹರ್ಷಿಗಳು ನಿರಾಕರಿಸಿದರು. ನೀವು ಗುರುಪುತ್ರರೂ, ತಪೋನಿಷ್ಠರೂ ಆದ ಬ್ರಾಹ್ಮಣರಾಗಿದ್ದೀರಿ. ನನ್ನ ಅಭಿಲಾಷೆಯನ್ನು ನಡೆಸಿಕೊಡಬೇಕು'' ಎಂದು ಪ್ರಾರ್ಥಿಸಿದನು.

ತ್ರಿಶಂಕುವಿನ ಮಾತನ್ನು ಕೇಳಿ ಆ ವಸಿಷ್ಠ ಪುತ್ರರಿಗೆ ಕೋಪವು ಬಂದಿತು. ಅವರು ರಾಜನನ್ನು ಕುರಿತು ''ರಾಜ, ನೀನು ಬುದ್ಧಿಹೀನನು. ಸತ್ಯವಾದಿಗಳಾದ ವಸಿಷ್ಠರ ಮಾತನ್ನು ಅತಿಕ್ರಮಿಸಲು ಎಂದಿಗಾದರೂ ಶಕ್ಯವಾದೀತೆ? ನಾವು ಈ ಯಾಗವನ್ನು ಮಾಡಿಸಿದರೆ ಆ ಮಹಾತ್ಮರಿಗೆ ಅವಮಾನವನ್ನು ಮಾಡಿದಂತಾಗುವುದಿಲ್ಲವೆ? ಆದ್ದರಿಂದ ನಾವು ಇದನ್ನು ನಡೆಸಲು ಒಪ್ಪುವುದಿಲ್ಲ'' ಎಂದರು. ಆಗ ತ್ರಿಶಂಕುವು ''ತಪೋಧನರೆ, ಗುರುಗಳೂ ಯಾಗವನ್ನು ತಿರಸ್ಕರಿಸಿದರು. ಗುರುಪುತ್ರರಾದ ನೀವೂ ಸಹ ಯಾಗವನ್ನು ಮಾಡಿಸುವುದಿಲ್ಲವೆನ್ನುತ್ತೀರಿ. ಆಗಲಿ, ನಾನು ಸಮರ್ಥರಾದ ಇನ್ನು ಯಾರನ್ನಾದರೂ ಹುಡುಕಿಕೊಂಡು ಹೋಗುತ್ತೇನೆ'' ಎಂದನು. ವಸಿಷ್ಠಪುತ್ರರು ರಾಜನ ಮಾತಿನಿಂದ ಅತ್ಯಂತ ಕ್ರುದ್ಧರಾಗಿ ''ನೀನು ಗುರುದ್ರೋಹಿ, ಚಂಡಾಲನಾಗು'' ಎಂದು ಶಪಿಸಿ ಆಶ್ರಮದೊಳಗೆ ಹೋದರು.

ಒಂದು ರಾತ್ರಿ ಕಳೆಯಿತು. ಬೆಳಗಾದಾಗ ರಾಜನು ಚಂಡಾಲನಾಗಿದ್ದನು. ಉಟ್ಟಿದ್ದ ವಸ್ತ್ರ ಕಪ್ಪು, ಮೈ ಬಣ್ಣ ಕಪ್ಪು, ಒರಟು ಚರ್ಮ, ಹರಕು ಹರಕು ತಲೆಗೂದಲು, ಅಲ್ಲದೆ ತೊಟ್ಟಿದ್ದ ಆಭರಣವೆಲ್ಲವೂ ಕಬ್ಬಿಣವಾಗಿದ್ದವು. ಆ ರೂಪವನ್ನು ಕಂಡು ರಾಜನ ಜೊತೆಗೆ ಬಂದಿದ್ದ ಮಂತ್ರಿಗಳೂ ಪೌರರು ಹೆದರಿ ಓಡಿಹೋದರು. ರಾಜನು ಒಂಟಿಯಾದನು. ಆದರೂ ಅವನು ತನ್ನ ನಿಶ್ಚಯವನ್ನು ಬಿಡದೆ ಅಲ್ಲಿ ಇಲ್ಲಿ ಅಲೆಯುತ್ತಾ ದೈವವಶದಿಂದ ವಿಶ್ವಾಮಿತ್ರರ ಬಳಿಗೆ ಬಂದನು. ತನಗಾದ ಪರಿಸ್ಥಿತಿಯನ್ನು ವಿವರವಾಗಿ ವಿಶ್ವಾಮಿತ್ರರಿಗೆ ತಿಳಿಸಿದನು. ಅವರು ಮರುಕದಿಂದ ''ರಾಜ, ಇಕ್ಷ್ವಾಕುವಂಶ ಕುಲೋತ್ಪನ್ನನಾದ ನೀನು ಚಂಡಾಲನಾಗಿ ಬಿಟ್ಟೆಯಾ?'' ಎಂದು ವ್ಯಥೆಯನ್ನು ಪ್ರಕಟಿಸಿದರು. ತ್ರಿಶಂಕುವು ''ಪೂಜ್ಯರೆ, ನಾನು ಹೇಳುತ್ತಿರುವುದು ಸತ್ಯ. ವಸಿಷ್ಠರೂ ವಸಿಷ್ಠಪುತ್ರರೂ ಈ ಯಾಗವನ್ನು ಮಾಡಿಸಲು ನಿರಾಕರಿಸಿಹನು. ಇದುವರೆಗೆ ನೂರು ಯಾಗವನ್ನು ಮಾಡಿದ್ದೇನೆ. ಪ್ರಜೆಗಳನ್ನು ಧರ್ಮದಿಂದ ಪಾಲಿಸಿದ್ದೇನೆ. ಈ ಒಂದು ಯಾಗವನ್ನು ಮಾಡಲು ಬಯಸಿದರೆ ಗುರುಗಳು ಒಪ್ಪದೇ ಹೋದರು. ದೈವವೇ ಅಧಿಕ. ಪುರುಷ ಪ್ರಯತ್ನವು ವ್ಯರ್ಥವೆಂದು ತೋರುತ್ತದೆ. ಆದರೂ ತಮ್ಮ ಅನುಗ್ರಹ ವನ್ನು ಬಯಸಿ ಬಂದಿದ್ದೇನೆ. ನನಗೆ ಬೇರೆ ಗತಿಯಿಲ್ಲ. ತಮ್ಮ ಪೌರುಷದಿಂದ ಈ ದೈವ ವನ್ನು ಗೆಲ್ಲಬೇಕು. ನಿಮಗೆ ಶರಣಾಗತನಾಗಿದ್ದೇನೆ'' ಎಂದು ದೈನ್ಯದಿಂದ ನುಡಿದನು.

ರಾಮ, ವಿಶ್ವಾಮಿತ್ರರಿಗೆ ಮೊದಲೇ ವಸಿಷ್ಠರ ಮೇಲೆ ಕ್ರೋಧವಿತ್ತು, ತ್ರಿಶಂಕುವಿನ ಪ್ರಾರ್ಥನೆಯಿಂದ ಅದೀಗ ಇಮ್ಮಡಿಸಿತು. ಹೇಗಾದರೂ ವಸಿಷ್ಠರಿಗೆ ವಿರುದ್ಧವಾಗಿ ಈ ಕಾರ್ಯವನ್ನು ಸಾಧಿಸಬೇಕೆಂಬ ಛಲ ಉಂಟಾಯಿತು. ಅವರು ತ್ರಿಶಂಕುವನ್ನು ಕುರಿತು ''ರಾಜ, ನೀನು ಧಾರ್ಮಿಕನೆಂಬುದನ್ನು ನಾನು ಬಲ್ಲೆನು. ನಾನು ನಿನಗೆ ಆಶ್ರಯವನ್ನು ಕೊಡುತ್ತೇನೆ. ಸಕಲ ಮಹರ್ಷಿಗಳನ್ನು ಯಜ್ಞಕ್ಕೆ ಆಮಂತ್ರಿಸುತ್ತೇನೆ. ಯಜ್ಞವು ನಡೆಯುವುದು. ವಸಿಷ್ಠ ಪುತ್ರರು ಅನುಗ್ರಹಿಸಿದ ಈ ಚಂಡಾಲರೂಪದಿಂದಲೇ ನೀನು ಸ್ವರ್ಗಕ್ಕೆ ಹೋಗಬಹುದು!'' ಎಂದರು. ತ್ರಿಶಂಕುವಿಗೆ ಸಂತೋಷವಾಯಿತು.

ವಿಶ್ವಾಮಿತ್ರರು ಈ ಪ್ರಕಾರವಾಗಿ ನಿಶ್ಚಯಿಸಿ ಧಾರ್ಮಿಕರಾದ ತಮ್ಮ ಪುತ್ರರನ್ನು ಕರೆದು ಯಜ್ಞಸಂಭಾರವನ್ನು ಸಿದ್ಧಪಡಿಸುವಂತೆ ತಿಳಿಸಿದರು. ತಮ್ಮ ಶಿಷ್ಯರನ್ನು ಕರೆದು ''ಪ್ರಿಯಶಿಷ್ಯರೆ, ನೀವೆಲ್ಲರೂ ಹೋಗಿ ಸಕಲಋಷಿಗಳಿಗೂ ಶಿಷ್ಯಸಮೇತರಾಗಿ ಯಜ್ಞಕ್ಕೆ ಬರುವಂತೆ ಆಹ್ವಾನಿಸಿರಿ. ಋತ್ವಿಜರನ್ನೂ ವಿದ್ವಾಂಸರನ್ನೂ ಬರುವಂತೆ ಕರೆಯಿರಿ. ಯಾವನಾದರೂ ಅನಾದರದಿಂದ ಉತ್ತರ ಹೇಳಿದರೆ ಅದನ್ನೂ ನನಗೆ ತಿಳಿಸಿರಿ! ಇದು ನನ್ನ ಆಜ್ಞೆ'' ಎಂದರು. ಅದರಂತೆ ಯಜ್ಞಸಂಭಾರವು ಸಿದ್ಧವಾಯಿತು. ಆಹ್ವಾನವನ್ನು ಪಡೆದ ಋಷಿಗಳು ನಾನಾ ದೇಶಗಳಿಂದ ಆಗಮಿಸಿದರು. ಶಿಷ್ಯರು ಹಿಂದಿರುಗಿ ಬಂದು ವಿಶ್ವಾಮಿತ್ರರಿಗೆ ಎಲ್ಲವನ್ನೂ ವಿವರಿಸಿದರು. ''ಮುನಿಶ್ರೇಷ್ಠರೆ, ತಮ್ಮ ಆಹ್ವಾನವನ್ನು ಮನ್ನಿಸಿ ಎಲ್ಲ ಕಡೆಯಿಂದಲೂ ಋಷಿಗಳೂ ಋತ್ವಿಜರೂ ವಿದ್ವಾಂಸರೂ ಆಗಮಿಸುತ್ತಿದ್ದಾರೆ. ಮಹೋದಯನೆಂಬ ಒಬ್ಬ ಋಷಿಯೂ, ವಸಿಷ್ಠರ ಪುತ್ರರೂ ಈ ಆಹ್ವಾನವನ್ನು ನಿರಾಕರಿಸಿದರು'' ಎಂದರು. ಆಗ ವಿಶ್ವಾಮಿತ್ರರು ''ಅವರು ಏನು ಹೇಳಿದರು?'' ಎಂದು ಕೇಳಲಾಗಿ ಶಿಷ್ಯರು ಇಂತೆಂದರು. ''ವಸಿಷ್ಠರ ಮಕ್ಕಳು ಹೀಗೆಂದರು : ವಿಶ್ವಾಮಿತ್ರನು ಈ ಯಾಗವನ್ನು ಮಾಡಿಸುತ್ತಾನೋ? ಕ್ಷತ್ರಿಯನ ಪೌರೋಹಿತ್ಯ, ಚಂಡಾಲನ ಯಜ್ಞ! ಅಂತಹ ಸದಸ್ಸಿಗೆ ಬಂದು ದೇವತೆಗಳು ಹವಿಸ್ಸನ್ನು ಸ್ವೀಕರಿಸುತ್ತಾರೋ? ಬಂದ ಅತಿಥಿಗಳು ಚಂಡಾಲ ಭೋಜನವನ್ನು ಒಪ್ಪಿಕೊಳ್ಳುತ್ತಾರೋ? ವಿಶ್ವಾಮಿತ್ರನು ರಕ್ಷಿಸುತ್ತಾನೆಂದು ಅವರೆಲ್ಲರೂ ಸ್ವರ್ಗಕ್ಕೆ ಹೋಗಿಬಿಡುತ್ತಾರೋ! ಎಂದು ಹಾಸ್ಯ ಮಾಡಿದರು'' ಎಂದರು. ಆ ಮಾತನ್ನು ಕೇಳಿ ವಿಶ್ವಾಮಿತ್ರ ಮುನಿಗಳ ಕಣ್ಣು ಕೆಂಪಾಯಿತು. ಅವರು ರೋಷದಿಂದ ''ನಾನು ಉಗ್ರವಾದ ತಪಸ್ಸನ್ನಾಚರಿಸಿದ್ದೇನೆ. ನನ್ನನ್ನು ನಿಂದಿಸಿದ ಆ ದುರಾತ್ಮರು ಸುಟ್ಟು ಬೂದಿಯಾಗುತ್ತಾರೆ. ಆ ದುರ್ಬುದ್ಧಿಯ ಮಹೋದಯನು ಬೇಡನಾಗಿ ಹುಟ್ಟಿ ಸಕಲ ನಿಂದೆಗೂ ಪಾತ್ರನಾಗಲಿ'' ಎಂದು ಆರ್ಭಟಿಸಿದರು.

ರಾಘವ, ಮಹಾತೇಜಸ್ವಿಗಳಾದ ವಿಶ್ವಾಮಿತ್ರರು ಆಗಮಿಸಿದ ಋಷಿಗಳನ್ನು ನೋಡಿ ''ಋಷಿಗಳೆ, ಈತನು ಇಕ್ಷ್ವಾಕು ವಂಶದಲ್ಲಿ ಜನಿಸಿದ ತ್ರಿಶಂಕುವೆಂಬ ಕೀರ್ತಿಶಾಲಿಯಾದ ರಾಜ. ಇವನು ಬಹಳ ಧರ್ಮಿಷ್ಠ, ಉದಾರಿ. ಇವನು ಸಶರೀರನಾಗಿ ಸ್ವರ್ಗಕ್ಕೆ ಹೋಗಬೇಕೆಂಬ ಅಭಿಲಾಷೆಯಿಂದ ನನ್ನನ್ನು ಆಶ್ರಯಿಸಿದ್ದಾನೆ. ಇವನ ಅಭಿಲಾಷೆಯು ಕೈಗೂಡುವಂತೆ ನಾವೆಲ್ಲರೂ ಸೇರಿ ಯಾಗವನ್ನು ಆಚರಿಸಬೇಕು'' ಎಂದರು. ಆಮೇಲೆ ಆ ಋಷಿಗಳು ಒತ್ತಟ್ಟಿಗೆ ಗುಂಪುಕೂಡಿ ತಮ್ಮಲ್ಲಿಯೇ ಮಾತಾಡಿಕೊಂಡರು. ''ಈ ಕೌಶಿಕ ಮುನಿಯು ಮಹಾಕೋಪಿಷ್ಠ. ಈತನ ಮಾತನ್ನು ನಾವು ನಡೆಸಬೇಕು. ಇಲ್ಲದಿದ್ದರೆ ಇವನು ನಮಗೆ ಶಾಪವನ್ನೇ ಕೊಡುತ್ತಾನೆ. ಆದ್ದರಿಂದ ಈ ಯಾಗವನ್ನು ನಡೆಸೋಣ. ವಿಶ್ವಾಮಿತ್ರನ ತೇಜಸ್ಸಿನಿಂದ ಈ ರಾಜನಿಗೆ ಸ್ವರ್ಗವು ಒಂದು ವೇಳೆ ದೊರಕಬಹುದು'' ಎಂದುಕೊಂಡರು.

ಅನಂತರ ಒಂದು ಶುಭಮುಹೂರ್ತದಲ್ಲಿ ಯಜ್ಞವು ಆರಂಭವಾಯಿತು. ವಿಶ್ವಾಮಿತ್ರ ಮುನಿಗಳು ಅಧ್ವರ್ಯುಗಳಾದರು. ಬಂದ ಋಷಿಗಳು ಋತ್ವಿಜರಾಗಿ ಸಮಸ್ತ ಯಜ್ಞಕಾರ್ಯಗಳನ್ನು ಅನುಷ್ಠಾನ ಮಾಡಿದರು. ಹೀಗೆ ಬಹಳ ದಿನಗಳವರೆಗೆ ಯಾಗದ ವಿಧಿಗಳೆಲ್ಲವನ್ನು ನಡೆಸಿ ವಿಶ್ವಾಮಿತ್ರ ಮಹರ್ಷಿಗಳು ಹವಿರ್ಭಾಗವನ್ನು ಸ್ವೀಕರಿಸಲೆಂದು ಇಂದ್ರಾದಿ ದೇವತೆಗಳನ್ನು ಆಹ್ವಾನಿಸಿದರು. ಯಾವ ದೇವತೆಯೂ ಬರಲಿಲ್ಲ. ಕೌಶಿಕ ಮುನಿಗಳು ಕಿಡಿಕಿಡಿಯಾದರು. ಅವರು ಸ್ರುವವನ್ನು (ಹವಿಸ್ಸನ್ನು ಹಾಕುವ ಸೌಟು) ಎತ್ತಿಕೊಂಡು ರೋಷದಿಂದ ''ತ್ರಿಶಂಕು ಮಹಾರಾಜ, ನನ್ನ ತಪೋಬಲವನ್ನಾದರೂ ನೋಡು. ಈ ಬಲದಿಂದ ನಿನ್ನನ್ನು ಸಶರೀರನನ್ನಾಗಿಯೇ ಸ್ವರ್ಗಕ್ಕೆ ಕಳುಹಿಸುತ್ತೇನೆ. ನಾನು ಸಂಪಾದಿಸಿದ ತಪಃಫಲವು ಯಥೇಷ್ಟವಾಗಿದೆ. ಅದರ ಮಹಿಮೆಯಿಂದ ನಿನ್ನನ್ನು ಸ್ವರ್ಗಕ್ಕೆ ಏರಿಸುತ್ತೇನೆ'' ಎಂದು ನುಡಿದರು. ಶ್ರೀರಾಮ, ಮುನಿಗಳೆಲ್ಲರೂ ಸಂಭ್ರಮದಿಂದ ಕಣ್ಣುಬಿಟ್ಟು ನೋಡುತ್ತಿರಲು, ಆ ಕ್ಷಣದಲ್ಲಿ ತ್ರಿಶಂಕುವು ಶರೀರ ಸಹಿತನಾಗಿಯೇ ಮೇಲಕ್ಕೆ ಏರುತ್ತ ಸ್ವರ್ಗದವರೆಗೆ ಹೋದನು! ಆಗ ದೇವೇಂದ್ರನು ಸ್ವರ್ಗದ ಬಾಗಿಲಿನ ಬಳಿ ದೇವತೆಗಳೊಡನೆ ಬಂದು ಅಡ್ಡನಿಂತು ತ್ರಿಶಂಕುವನ್ನು ಕುರಿತು, ''ಎಲೈ ಮೂಢ, ನಿನಗೆ ಸ್ವರ್ಗದಲ್ಲಿ ಸ್ಥಳ ಸಿಗದು. ಗುರುಶಾಪದಿಂದ ಭ್ರಷ್ಟನಾದವನು ನೀನು. ಬಂದ ದಾರಿ ಹಿಡಿದು ಹಿಂದಿರುಗು. ತಲೆ ಕೆಳಗಾಗಿ ಬೀಳು'' ಎಂದನು. ಒಡನೆಯೇ ತ್ರಿಶಂಕುವು ಇಂದ್ರನ ಆಜ್ಞಾಬಲದಿಂದ ತಲೆಕೆಳಗಾಗಿ ಭೂಮಿಗೆ ಬೀಳುತ್ತಾ ''ವಿಶ್ವಾಮಿತ್ರ ಮುನಿಗಳೇ, ಕಾಪಾಡಿ, ಕಾಪಾಡಿ'' ಎಂದು ಕೂಗಿಕೊಂಡನು. ಅವನ ಅರಚಾಟವನ್ನು ಕೇಳಿದ ಕೂಡಲೇ ವಿಶ್ವಾಮಿತ್ರರು ಸಿಟ್ಟಿನಿಂದ ಸಿಡಿದೆದ್ದು 'ಅಲ್ಲಿಯೇ ನಿಲ್ಲು, ನಿಲ್ಲು' ಎಂದು ಕೂಗಿ ಹೇಳಿದರು. ಕೆಳಗೆ

ಬೀಳುತ್ತಿದ್ದ ತ್ರಿಶಂಕುವು ಆಕಾಶದಲ್ಲಿ ತಲೆಕೆಳಕಾಗಿ ನಿಂತನು. ವಿಶ್ವಾಮಿತ್ರರು ''ಇನ್ನೊಂದು ಸ್ವರ್ಗವನ್ನೇ ಸೃಷ್ಟಿಮಾಡುತ್ತೇನೆ'' ಎಂದು ನುಡಿಯುತ್ತಾ ದಕ್ಷಿಣ ದಿಕ್ಕಿನಲ್ಲಿ ಮತ್ತೊಂದು ಸಪ್ತರ್ಷಿಮಂಡಲವನ್ನೂ ನಕ್ಷತ್ರ ಪುಂಜವನ್ನೂ ನಿರ್ಮಿಸಿದರು. ಅನಂತರ 'ಇನ್ನೊಬ್ಬ ಇಂದ್ರನನ್ನೇ ಸೃಷ್ಟಿಸುತ್ತೇನೆ ಅಥವಾ ಲೋಕದಲ್ಲಿ ಇಂದ್ರನೇ ಇಲ್ಲದಂತೆ ಮಾಡುತ್ತೇನೆ !' ಎಂದು ಅಬ್ಬರಿಸಿ, ದೇವತೆಗಳನ್ನು ಸೃಜಿಸಲಾರಂಭಿಸಿದರು. ಆಗ ದೇವರ್ಷಿಗಳೂ ದೇವತೆಗಳೂ ಭಯಗೊಂಡು ವಿಶ್ವಾಮಿತ್ರರನ್ನು ಸಮೀಪಿಸಿ 'ಮಹಾತ್ಮ, ಈ ರಾಜನು ಗುರುಶಾಪಕ್ಕೆ ಒಳಗಾಗಿದ್ದಾನೆ. ಸ್ವರ್ಗಕ್ಕೆ ಹೋಗಲು ಇವನು ಅನರ್ಹ' ಎಂದರು. ಅದಕ್ಕೆ ವಿಶ್ವಾಮಿತ್ರರು ''ಅದೇನೋ ಸರಿ; ಆದರೆ ಈ ತ್ರಿಶಂಕು ಮಹಾರಾಜನಿಗೆ ನಾನು ಮಾತುಕೊಟ್ಟಿದ್ದೇನೆ. ಸಶರೀರನಾಗಿ ಸ್ವರ್ಗಕ್ಕೆ ಹೋಗುವಂತೆ ಮಾಡುತ್ತೇನೆ ಎಂದಿದ್ದೇನೆ. ನನ್ನ ಮಾತು ಸುಳ್ಳಾಗದು. ಈ ರಾಜನಿಗೆ ಸಶರೀರ ಸ್ವರ್ಗ ದೊರೆಯಲೇಬೇಕು. ಈಗ ನಾನು ಸೃಜಿಸಿರುವ ನಕ್ಷತ್ರಗಳು ಈ ಜಗತ್ತು ಇರುವವರೆಗೆ ಸ್ಥಿರವಾಗಿ ಇರಬೇಕು'' ಎಂದರು. ಆಗ ದೇವತೆಗಳು ''ಮುನಿಶ್ರೇಷ್ಠ, ಹಾಗೆಯೇ ಆಗಲಿ. ಈ ನಕ್ಷತ್ರಗಳು ಜ್ಯೋತಿಶ್ಚಕ್ರದ ಬಾಹ್ಯಾವರಣದಲ್ಲಿ ಸ್ಥಿರವಾಗಿರುತ್ತವೆ. ಇದೇ ಒಂದು ಸ್ವರ್ಗ. ಇಲ್ಲಿ ತ್ರಿಶಂಕುರಾಜನು ಕೀರ್ತಿಶಾಲಿಯಾಗಿ ದೇವತೆಗಳಂತೆ ಸುಖಿಸುತ್ತ ಇರಲಿ. ಅವನ ಇಷ್ಟವು ಸಿದ್ಧಿಸಿತಷ್ಟೆ'' ಎಂದು ನುಡಿದರು. ವಿಶ್ವಾಮಿತ್ರರು ಅದಕ್ಕೆ ಸಮ್ಮತಿಸಿದರು. ಯಜ್ಞವು ಸಮಾಪ್ತವಾಯಿತು.

ಯಜ್ಞಕ್ಕೆ ಬಂದ ಋಷಿಗಳೆಲ್ಲರೂ ವಿಸ್ಮಿತರಾಗಿ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು. ವಿಶ್ವಾಮಿತ್ರರು ''ಇಲ್ಲಿ ತಪಸ್ಸಿಗೆ ಈ ಪ್ರಕಾರ ವಿಘ್ನವುಂಟಾಯಿತು. ನಾನು ಪುಷ್ಕರ ತೀರ್ಥಕ್ಕೆ ಹೋಗಿ ನಿರ್ವಿಘ್ನವಾಗಿ ತಪಸ್ಸನ್ನಾಚರಿಸುವೆನು'' ಎಂದುಕೊಂಡು ಪುಷ್ಕರತೀರ್ಥಕ್ಕೆ ಹೋದರು. ಅದರ ಸಮೀಪದಲ್ಲಿದ್ದ ಅರಣ್ಯದಲ್ಲಿ ಫಲಮೂಲಗಳನ್ನು ಮಾತ್ರ ಭಕ್ಷಿಸುತ್ತ ಕಠೋರವಾದ ತಪಶ್ಚರ್ಯೆಯಲ್ಲಿ ನಿರತರಾದರು.

೧೦

ಅಂಬರೀಷನ ಯಾಗ. ಶುನಃಶೇಫನ ವೃತ್ತಾಂತ. ಮೇನಕಾ ಪ್ರಸಂಗ

ಈ ಸಮಯದಲ್ಲಿ ಅಯೋಧ್ಯೆಯ ರಾಜನಾದ ಅಂಬರೀಷನೆಂಬವನು ಒಂದು ಯಾಗವನ್ನಾರಂಭಿಸಿದನು. ಯಾಗಪಶುವನ್ನು ದೇವೇಂದ್ರನು ಅಪಹರಿಸಿದನು. ಋತ್ವಿಜರು ''ರಾಜ, ನಿನ್ನ ಅಜಾಗರೂಕತೆಯಿಂದ ಯಜ್ಞಪಶುವನ್ನು ಯಾರೋ ಅಪಹರಿಸಿದರು. ನೀನು ಆ ಯಜ್ಞಪಶುವನ್ನಾದರೂ ತರಬೇಕು. ಇಲ್ಲವೇ ಅದಕ್ಕೆ

ಪ್ರತಿಯಾಗಿ ಒಬ್ಬ ನರಪಶುವನ್ನು ತರಬೇಕು'' ಎಂದರು. ಅಂಬರೀಷನು ಯಜ್ಞಪಶುವನ್ನು ಕಾಣಲಾರದೆ ಅದರ ಸ್ಥಾನದಲ್ಲಿ ಪಶುವಾಗಲು ಒಬ್ಬ ಮನುಷ್ಯನನ್ನು ಹುಡುಕುತ್ತಾ ಬಂದನು. ಋಚೀಕನೆಂಬ ಒಬ್ಬ ಋಷಿಗೆ ಮೂವರು ಗಂಡು ಮಕ್ಕಳಿದ್ದರು. ಬಡತನದಿಂದ ಬೇಯುತ್ತಿದ್ದ ಅವರನ್ನು ಅಂಬರೀಷನು ಕಂಡು ಯಥೇಷ್ಟವಾಗಿ ಧನವನ್ನು ಕೊಡುವುದಾಗಿಯೂ ಮೂವರಲ್ಲೊಬ್ಬನನ್ನು ಯಜ್ಞಪಶುವಾಗಿ ಕೊಡಬೇಕೆಂದೂ ಕೇಳಿದನು. ಋಚೀಕನು ಹಿರಿಯ ಮಗನನ್ನು ಕೊಡಲು ಒಪ್ಪಲಿಲ್ಲ. ಅವನ ಮಡದಿಯು ಕಿರಿಯ ಮಗನನ್ನು ತಾನು ಕೊಡುವುದಿಲ್ಲ ಎಂದಳು. ಇದರಿಂದ ನಡುವಿನ ಮಗನಾದ ಶುನಃಶೇಫನು ''ರಾಜ, ನನ್ನನ್ನು ಕ್ರಯಕ್ಕೆ ಮಾರುತ್ತೇವೆ ಎಂದು ಇವರಿಬ್ಬರ ಅಭಿಪ್ರಾಯ! ಆಗಲಿ; ನಾನು ನಿನ್ನೊಡನೆ ಬರುತ್ತೇನೆ'' ಎಂದು ಆ ಬಾಲಕನು ಹೊರಡಲು ಸಿದ್ಧನಾದನು. ಅಂಬರೀಷನು ಅವನ ತಂದೆ ತಾಯಿಗಳಿಗೆ ವಿಪುಲವಾಗಿ ಧನವನ್ನಿತ್ತು ಶುನಃಶೇಫನನ್ನು ಕರೆದುಕೊಂಡು ತನ್ನ ರಾಜಧಾನಿಗೆ ಹೊರಟನು. ದೈವವಶದಿಂದ ಮಾರ್ಗಮಧ್ಯದಲ್ಲಿ ಅವರಿಬ್ಬರೂ ವಿಶ್ವಾಮಿತ್ರರ ತಪೋವನಕ್ಕೆ ಬಂದರು. ಶುನಃಶೇಫನು ಚಿಂತೆಯಿಂದಲೂ ಮಾರ್ಗಾಯಾಸದಿಂದಲೂ ಕಂಗೆಟ್ಟು ಹೋಗಿದ್ದನು. ಮುಖವು ಬಾಡಿತ್ತು. ಆತನು ವಿಶ್ವಾಮಿತ್ರರನ್ನು ಕಂಡೊಡನೆ ದುಃಖವು ಉಮ್ಮಳಿಸಿ ಓಡಿಹೋಗಿ ವಿಶ್ವಾಮಿತ್ರರ ತೊಡೆಯ ಮೇಲೆ ಬಿದ್ದು ''ಮುನಿಗಳೇ, ನನ್ನ ಪಾಲಿಗೆ ತಂದೆ ಇಲ್ಲ, ತಾಯಿ ಇಲ್ಲ, ನನ್ನನ್ನು ನರಪಶುವನ್ನಾಗಿ ಅವರು ಈ ರಾಜನಿಗೆ ಮಾರಿದ್ದಾರೆ. ನೀವೇ ನನ್ನನ್ನು ಕಾಪಾಡಬೇಕು. ಮಹರ್ಷಿಗಳೇ, ನಾನು ನಿಮ್ಮ ಮಗನೆಂದು ತಿಳಿದು ನನ್ನನ್ನು ಈ ವಿಪತ್ತಿನಿಂದ ಪಾರು ಮಾಡಿರಿ'' ಎಂದು ಗೋಳಾಡಿದನು. ಮುನಿಗಳ ಮನಸ್ಸು ಕರಗಿತು. ಅವರು ಮರುಕದಿಂದ ಆತನನ್ನು ನೋಡಿ ಸಂತೈಸಿದರು. ಆಮೇಲೆ ಮಧುಷ್ಯಂದನೇ ಮೊದಲಾದ ತಮ್ಮ ಮಕ್ಕಳನ್ನು ಕರೆದು ''ಪುತ್ರರೆ, ಅನಾಥನಾದ ಈ ಬಾಲಕನನ್ನು ರಕ್ಷಿಸಬೇಕೆಂದು ನಿರ್ಧರಿಸಿದ್ದೇನೆ. ಇವನು ನನ್ನನ್ನು ಮೊರೆಹೊಕ್ಕಿದ್ದಾನೆ. ನೀವೆಲ್ಲರೂ ಧರ್ಮನಿಷ್ಠರು. ನಿಮ್ಮಲ್ಲಿ ಒಬ್ಬನು ಯಾಗಕ್ಕೆ ಪಶುವಾಗಿ ಈ ರಾಜನೊಡನೆ ಹೋಗಿರಿ'' ಎಂದರು. ಯಾರೂ ಒಪ್ಪಲಿಲ್ಲ. ಅವರು ತಂದೆಯನ್ನು ಗೇಲಿ ಮಾಡುತ್ತಾ ''ಮಕ್ಕಳನ್ನು ಬಲಿಕೊಟ್ಟು ಇನ್ನೊಬ್ಬರ ಮಗನನ್ನು ಕಾಪಾಡುತ್ತೀರಾ? ಒಳ್ಳೆ ಆಹಾರವನ್ನು ಬಿಟ್ಟು ನಾಯಿಯ ಮಾಂಸವನ್ನು ತಿಂದ ಹಾಗೆ ಇದು!'' ಎಂದು ಹೇಳಿಬಿಟ್ಟರು. ವಿಶ್ವಾಮಿತ್ರರ ಕಣ್ಣು ಕೋಪದಿಂದ ಕೆಂಡವಾಯಿತು. ''ನನ್ನೆದುರಿಗೆ ಇಂತಹ ಮಾತನ್ನಾಡುವಿರಾ? ಕೆಟ್ಟ ಮಾತಿನಿಂದ ನನ್ನನ್ನು ಹಂಗಿಸುವಿರಾ? ನೀವೆಲ್ಲರೂ ಶ್ವಪಚರಾಗಿ ನಾಯಿ ಮಾಂಸವನ್ನು ತಿನ್ನುತ್ತಿರಿ'' ಎಂದು ಶಪಿಸಿದರು. ಅನಂತರ ಶುನಃಶೇಫನಿಗೆ ಸಕಲ ಕಷ್ಟಗಳನ್ನೂ ಪರಿಹರಿಸುವ

ಮಂತ್ರದಿಂದ ರಕ್ಷೆಯನ್ನು ಮಾಡಿ 'ಮಗು, ಅಂಬರೀಷನ ಯಾಗಕಾಲದಲ್ಲಿ ನಿನ್ನನ್ನು ಯೂಪಸ್ತಂಭಕ್ಕೆ ಕಟ್ಟುತ್ತಾರೆ. ಆಗ ನೀನು ಅಗ್ನಿಗೆ ಅಭಿಮುಖನಾಗಿ ನಿಂತು ಈ ಎರಡು ಮಂತ್ರಗಳನ್ನು ಜಪಿಸು. ನಿನಗೆ ಯಾವ ಅಡ್ಡಿಯೂ ಆಗದೆ ಕಾರ್ಯಸಿದ್ಧಿಯಾಗುವುದು' ಎಂದು ಹೇಳಿ ಆ ಮಂತ್ರಗಳನ್ನು ಶುನಃಶೇಫನಿಗೆ ಉಪದೇಶಿಸಿದರು. ಶುನಃಶೇಫನು ಏಕಾಗ್ರತೆಯಿಂದ ಆ ಮಂತ್ರಗಳ ಉಪದೇಶವನ್ನು ಮರೆಯದಂತೆ ಜಪಿಸಿಕೊಳ್ಳುತ್ತಾ ಅಂಬರೀಷನ ಬಳಿಗೆ ಹೋದನು. ಆಮೇಲೆ ಅಂಬರೀಷನು ಶುನಃಶೇಫನೊಡನೆ ತನ್ನ ಯಾಗಭೂಮಿಗೆ ಬಂದನು. ಯಜ್ಞವು ಮುಂದುವರೆಯಿತು. ಆ ಬಾಲಕನನ್ನು ಯೂಪಸ್ತಂಭಕ್ಕೆ ಕಟ್ಟಿದರು. ಆಗ ವಿಶ್ವಾಮಿತ್ರರು ನುಡಿದಂತೆ ಶುನಃಶೇಫನು ಆ ಎರಡು ದಿವ್ಯ ಮಂತ್ರಗಳನ್ನು ಭಕ್ತಿಯಿಂದ ಉಚ್ಚರಿಸಿದನು. ಇಂದ್ರ, ಉಪೇಂದ್ರರು ಸುಪ್ರಸನ್ನ ರಾದರು. ಇಂದ್ರನು ಶುನಃಶೇಫನಿಗೆ ದೀರ್ಘವಾದ ಆಯುಸ್ಸನ್ನು ಅನುಗ್ರಹಿಸಿದನು. ಅಲ್ಲದೆ ಅಂಬರೀಷನನ್ನು ಕುರಿತು ''ರಾಜ, ಇಷ್ಟರಿಂದಲೇ ನಿನ್ನ ಯಾಗವು ಪೂರ್ಣಗೊಂಡಿತು. ನಾವೆಲ್ಲರೂ ಪ್ರಸನ್ನರಾಗಿದ್ದೇವೆ. ನಿನಗೆ ಯಾಗದ ಫಲವು ಲಭಿಸುತ್ತದೆ'' ಎಂದು ಹೇಳಿ ಇತರ ದೇವತೆಗಳೊಡನೆ ಅಂತರ್ಧಾನ ಹೊಂದಿದನು.

ಇತ್ತ ವಿಶ್ವಾಮಿತ್ರರ ತಪಸ್ಸಿಗೆ ವಿಘ್ನವುಂಟಾದ್ದರಿಂದ ಅವರು ಮತ್ತೆ ಪುಷ್ಕರ ಕ್ಷೇತ್ರದಲ್ಲಿ ಮಹತ್ತರವಾದ ತಪಸ್ಸನ್ನು ದೀರ್ಘಕಾಲದವರೆಗೆ ಆಚರಿಸಿದರು. ಶ್ರೀರಾಮ, ಅವರ ತಪೋನಿಯಮವು ಪೂರ್ಣವಾದ ಮೇಲೆ ವ್ರತಸ್ನಾನವನ್ನು ಮಾಡಿದರು. ಆ ತಪಸ್ಸಿಗೆ ಫಲವನ್ನು ನೀಡುವುದಕ್ಕಾಗಿ ಬ್ರಹ್ಮಾದಿ ದೇವತೆಗಳು ಪ್ರತ್ಯಕ್ಷರಾದರು. ಬ್ರಹ್ಮನು ''ವಿಶ್ವಾಮಿತ್ರ, ನೀನು ಮಾಡಿದ ಶುಭಕರ್ಮಗಳಿಂದ ಈಗ ಋಷಿಯಾಗಿದ್ದೀಯೆ. ನಿನಗೆ ಮಂಗಳವಾಗಲಿ'' ಎಂದು ನುಡಿದು ಅಂತರ್ಹಿತ ನಾದನು. ವಿಶ್ವಾಮಿತ್ರರಿಗೆ ಸ್ವಲ್ಪವೂ ಸಮಾಧಾನವಾಗಲಿಲ್ಲ. ಅವರಿಗೆ ತಾವು ಬ್ರಹ್ಮರ್ಷಿಯಾಗಬೇಕಾಗಿತ್ತು. ಆದ್ದರಿಂದ ಮತ್ತೆ ಘೋರವಾದ ತಪಸ್ಸಿನಲ್ಲಿ ಮುಳುಗಿ ದರು. ದೀರ್ಘಕಾಲವು ಕಳೆಯಿತು. ಒಂದು ದಿನ ಮೇನಕೆ ಎಂಬ ಅಪ್ಸರಸ್ತ್ರೀಯು ಬಂದು ಪುಷ್ಕರ ತೀರ್ಥದಲ್ಲಿ ಸ್ನಾನ ಮಾಡುತ್ತಿದ್ದಳು. ಅವಳು ಅಪ್ರತಿಮ ಸುಂದರಿ. ನೀರಿನಲ್ಲಿಳಿದು ಸ್ನಾನ ಮಾಡುತ್ತಿರುವಾಗ ವಿಶ್ವಾಮಿತ್ರರು ಕಾಮವಶರಾದರು. ಮೇನಕೆಯನ್ನು ಕುರಿತು 'ಸುಂದರಿ, ನಿನಗೆ ಸ್ವಾಗತ. ನೀನು ನನ್ನ ಆಶ್ರಮದಲ್ಲಿ ಇರಬಹುದಲ್ಲ! ನಿನ್ನ ಸೌಂದರ್ಯವನ್ನು ಕಂಡು ನಾನು ಕಾಮಮೋಹಿತನಾಗಿದ್ದೇನೆ. ನಿನಗೆ ಒಳ್ಳೆಯದಾಗಲಿ' ಎಂದರು. ಅಪ್ಸರೆಯು ಬಂದದ್ದು ಅವರ ತಪಸ್ಸನ್ನು ಕೆಡಿಸುವುದಕ್ಕಾಗಿಯೇ. ಕೂಡಲೇ ಅವಳು ಒಪ್ಪಿ ವಿಶ್ವಾಮಿತ್ರರ ಆಶ್ರಮದಲ್ಲಿ ನೆಲೆಸಿದಳು. ವಿಶ್ವಾಮಿತ್ರರು ಮೇನಕೆಯೊಡನೆ ಹತ್ತು ವರ್ಷಗಳನ್ನು ಕಳೆದರು.

ಆಮೇಲೆ ಒಂದು ದಿನ ತಮ್ಮ ಕೃತ್ಯವನ್ನು ಚಿಂತಿಸುತ್ತಿದ್ದಾಗ ಅವರಿಗೆ ಲಜ್ಜೆಯಾಯಿತು. ಹಾಗೆಯೇ ಶೋಕವೂ ಉಂಟಾಗಿ ಅವರು ಚಿಂತಾಕುಲರಾದರು. ತಮ್ಮ ಮನಸ್ಸಿನಲ್ಲಿ ''ಆಹಾ, ನಾನು ಎಂತಹ ಅವಿವೇಕವನ್ನು ಮಾಡಿದೆನು ! ಕಾಮ ಮೋಹಗಳಿಗೆ ಒಳಗಾಗಿ ತಪಸ್ಸಿಗೆ ವಿಘ್ನವನ್ನು ತಂದುಕೊಂಡೆನು. ಒಂದು ಹಗಲು – ಒಂದು ರಾತ್ರಿ ಎನ್ನುತ್ತಾ ಹತ್ತು ವರ್ಷಗಳೇ ಕಳೆದುಹೋದವು! ಇದೆಲ್ಲವೂ ದೇವತೆಗಳ ಚೇಷ್ಟೆ!'' ಎಂದುಕೊಂಡು ನಿಟ್ಟುಸಿರು ಬಿಡುತ್ತಾ ಪಶ್ಚಾತ್ತಾಪದಿಂದ ತಳಮಳಿಸಿದರು. ಅವರ ಮನೋಗತವನ್ನರಿತು ಮೇನಕೆಯು ಹೆದರಿದಳು ಕೈಮುಗಿದುಕೊಂಡು ನಡುಗುತ್ತ ನಿಂತಳು. ವಿಶ್ವಾಮಿತ್ರ ಮುನಿಗಳು ಮೃದುವಾದ ಮಾತುಗಳಿಂದ ಅವಳಿಗೆ ಸಮಾಧಾನ ಹೇಳಿ ಕಳಿಸಿದರು. ಮೇನಕೆಯು ದೇವಲೋಕಕ್ಕೆ ಹೊರಟುಹೋದಳು.

೧೧

ರಂಭೆಗೆ ಶಾಪ, ವಿಶ್ವಾಮಿತ್ರ ಮುನಿಗಳು ಬ್ರಹ್ಮರ್ಷಿಗಳಾದದ್ದು.

ರಾಘವ, ವಿಶ್ವಾಮಿತ್ರರು ಇನ್ನು ಮೇಲೆ ಕಾಮವನ್ನು ಗೆಲ್ಲುತ್ತೇನೆಂದು ದೃಢವಾದ ನಿಶ್ಚಯವನ್ನು ತಾಳಿ ಕೌಶಿಕೀ ನದಿಯ ತೀರದಲ್ಲಿ ಮತ್ತೆ ಕಠೋರವಾದ ತಪಸ್ಸನ್ನು ಆರಂಭಿಸಿದರು. ಬಹಳ ವರ್ಷಗಳು ಸಂದುಹೋದವು. ಅವರ ಘೋರವಾದ ತಪಸ್ಸನ್ನು ಕಂಡು ಭೀತರಾದ ದೇವತೆಗಳು ಬ್ರಹ್ಮನ ಸಮೀಪಕ್ಕೆ ಹೋಗಿ ಅರಿಕೆ ಮಾಡಿಕೊಂಡರು. ಆಗ ಬ್ರಹ್ಮದೇವನು ವಿಶ್ವಾಮಿತ್ರರಿಗೆ ಪ್ರತ್ಯಕ್ಷನಾಗಿ ''ವತ್ಸ– ವಿಶ್ವಾಮಿತ್ರ, ನಿನ್ನ ಉಗ್ರವಾದ ತಪಸ್ಸಿಗೆ ಮೆಚ್ಚಿದ್ದೇನೆ. ನಿನ್ನನ್ನು ಮಹರ್ಷಿ ಎಂದು ಗಣಿಸುತ್ತೇನೆ'' ಎಂದನು. ಅದನ್ನು ಕೇಳಿ ಈ ಮುನಿಗಳಿಗೆ ಆನಂದವೂ ಆಗಲಿಲ್ಲ, ವಿಷಾದವೂ ಆಗಲಿಲ್ಲ. ಅವರು ಬ್ರಹ್ಮದೇವನಿಗೆ ಭಕ್ತಿಯಿಂದ ನಮಸ್ಕರಿಸಿ ''ಸ್ವಾಮಿ, ನನ್ನನ್ನು ಬ್ರಹ್ಮರ್ಷಿ ಎಂದು ಪರಿಗಣಿಸಿದರೆ ಮಾತ್ರ ನಾನು ಜಿತೇಂದ್ರಿಯನಾದೆನೆಂದು ತಿಳಿಯುತ್ತೇನೆ'' ಎಂದರು. ಬ್ರಹ್ಮದೇವನು ''ಓ ಮಹರ್ಷಿ, ನೀನು ಇನ್ನೂ ಜಿತೇಂದ್ರಿಯನಾಗಲಿಲ್ಲ. ಪ್ರಯತ್ನ ಮಾಡು'' ಎಂದು ಹೇಳಿ ತನ್ನ ಲೋಕಕ್ಕೆ ಹೊರಟುಹೋದನು. ವಿಶ್ವಾಮಿತ್ರರು ಮತ್ತೆ ತಪಶ್ಚರಣೆಯಲ್ಲಿ ನಿರತರಾದರು. ಯಾವ

* ವಿಶ್ವಾಮಿತ್ರರಿಗೆ ಮೇನಕೆಯಲ್ಲಿ ಒಂದು ಹೆಣ್ಣು ಮಗು ಜನಿಸಿತೆಂದೂ ಅವಳೇ ಶಕುಂತಲೆ ಎಂದೂ ಮಹಾಭಾರತದಲ್ಲಿ ಹೇಳಿದೆ. ಶಕುಂತಲೆಯನ್ನು ಆಧರಿಸಿ ಮಹಾಕವಿ ಕಾಳಿದಾಸನು ಅಭಿಜ್ಞಾನ ಶಾಕುಂತಲವೆಂಬ ಮನೋಜ್ಞವಾದ ನಾಟಕವನ್ನು ರಚಿಸಿದ್ದಾನೆ.

ಆಲಂಬನವೂ ಇಲ್ಲದೆ ಊರ್ಧ್ವಬಾಹುಗಳಾಗಿ ನಿಂತರು. ವಾಯುವೇ ಆಹಾರ ವಾಯಿತು. ಬೇಸಿಗೆಯಲ್ಲಿ ಪಂಚಾಗ್ನಿ ಮಧ್ಯದಲ್ಲಿಯೂ, ಮಳೆಗಾಲದಲ್ಲಿ ಬಯಲಿನಲ್ಲಿಯೂ ಚಳಿಗಾಲದಲ್ಲಿ ನೀರಿನಲ್ಲಿಯೂ ನಿಂತು ಅಹೋರಾತ್ರವೂ ತಪಸ್ಸಿನಲ್ಲಿ ಮುಳುಗಿದರು.

ಮತ್ತೆ ದೇವತೆಗಳಲ್ಲಿ ಭಯ ಅಂಕುರಿಸಿತು. ಅವರು ಇಂದ್ರನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು. ದೇವೇಂದ್ರನು ರಂಭೆಯೆಂಬ ಅಪ್ಸರೆಯನ್ನು ಕರೆದು ''ರಂಭೆ, ನೀನು ದೇವತೆಗಳಿಗಾಗಿ ಒಂದು ಉಪಕಾರವನ್ನು ಮಾಡಬೇಕು. ಆ ಕೌಶಿಕ ಮುನಿಯು ತಪಸ್ಸಿನಲ್ಲಿ ನಿರತನಾಗಿದ್ದಾನೆ. ಅವನಿಗೆ ಕಾಮವಿಕಾರವನ್ನುಂ ಟು ಮಾಡಿ ಮನಸ್ಸನ್ನು ಕೆಡಿಸಬೇಕು'' ಎಂದನು. ರಂಭೆಯು ಕಳವಳದಿಂದ ''ಸುರೇಶ್ವರ, ಆ ಮುನಿಯು ಭಯಂಕರ ಸ್ವಭಾವದವನು. ನಾನು ಎದುರಿಗೆ ಹೋಗಿ ಕಾಣಿಸಿಕೊಂಡರೆ ತನ್ನ ಕ್ರೋಧವನ್ನು ನನ್ನ ಮೇಲೆ ಕಾರುವುದು ನಿಶ್ಚಯ. ನನಗೆ ಹೆದರಿಕೆಯಾಗುತ್ತದೆ. ಸ್ವಾಮಿ, ನನ್ನನ್ನು ಕ್ಷಮಿಸಬೇಕು'' ಎಂದಳು. ಆಗ ದೇವೇಂದ್ರನು ''ರಂಭೆ, ಹೆದರಬೇಡ, ನಾನೂ ಮನ್ಮಥನೂ ನಿನಗೆ ಸಹಾಯಕರಾಗಿ ಬರುತ್ತೇವೆ. ನಾನು ಕೋಗಿಲೆಯಾಗಿ ಮರದ ಮೇಲೆ ಕುಳಿತು ಮಧುರವಾಗಿ ಹಾಡುತ್ತೇನೆ. ಮನ್ಮಥನು ವಿಶ್ವಾಮಿತ್ರನಿಗೆ ಕಾಮವಿಕಾರವನ್ನುಂಟು ಮಾಡುವನು. ನೀನು ಹಾವಭಾವಗಳನ್ನು ಪ್ರಕಟಿಸುತ್ತಾ ಅವನನ್ನು ಮೋಹಗೊಳಿಸು'' ಎಂದನು. ಅವನ ಆಜ್ಞೆಯನ್ನು ಮೀರಲಾರದೆ ರಂಭೆಯು ಮನೋಹರವಾದ ವೇಷವನ್ನು ಧರಿಸಿ ವಿಶ್ವಾಮಿತ್ರರ ಎದುರಿಗೆ ಹಾವಭಾವಗಳನ್ನು ಪ್ರಕಟಿಸುತ್ತಾ ಸುಳಿದಾಡಿದಳು. ತಪಸ್ಸಿನಲ್ಲಿದ್ದ ವಿಶ್ವಾಮಿತ್ರರಿಗೆ ಕೋಗಿಲೆಯ ಇಂಚರವು ಕೇಳಿಸಿತು. ಮನಸ್ಸು ಉಲ್ಲಾಸಗೊಂಡಿತು. ಅವರು ಕಣ್ತೆರೆದು ನೋಡಿದಾಗ ಎದುರಿಗೆ ರಂಭೆಯು ಹಾಡುತ್ತ ನಿಂತಿದ್ದಳು! ಆಗ ವಿಶ್ವಾಮಿತ್ರರು 'ಇದೇನಿರಬಹುದು?' ಎಂದು ಚಿಂತಿಸಿ ಜ್ಞಾನದೃಷ್ಟಿಯಿಂದ ಎಲ್ಲವನ್ನೂ ತಿಳಿದರು. ತಮ್ಮ ತಪಸ್ಸನ್ನು ಕೆಡಿಸುವ ದುರುದ್ದೇಶವು ನಡೆದಿದೆ ಎಂದರಿತರು. ಅವರು ಕ್ರುದ್ಧರಾಗಿ 'ಎಲೌ ರಂಭೆ, ಇಂದ್ರಿಯಗಳನ್ನು ಜಯಿಸಬೇಕೆಂದು ನಿಶ್ಚಯಿಸಿರುವ ನನಗೆ ಚಿತ್ತಚಾಂಚಲ್ಯವನ್ನುಂಟು ಮಾಡಲು ಬಂದಿರುವೆಯಾ? ದುಷ್ಟೆ! ನೀನು ಕಲ್ಲಾಗಿ ಹೋಗು! ಹತ್ತು ಸಾವಿರ ವರ್ಷ ಹಾಗೆಯೇ ಇರು' ಎಂದರು. ಆಗ ರಂಭೆಯು ಹೆದರಿ ನಡುಗುತ್ತಾ ಕ್ಷಮೆಯನ್ನು ಬೇಡಿದಳು. ಕೌಶಿಕ ಮುನಿಗಳು ''ರಂಭೆ, ಇಂದ್ರನ ಪ್ರೇರಣೆಯಿಂದ ನೀನು ಬಂದಿದ್ದೀಯೆ. ಇರಲಿ; ತಪಸ್ವಿಯಾದ ಒಬ್ಬ ಬ್ರಾಹ್ಮಣನು ನಿನ್ನನ್ನು ಉದ್ಧರಿಸುತ್ತಾನೆ'' ಎಂದರು. ರಂಭೆಯು ಕಲ್ಲಾಗಿ ಹೋದಳು. ಕೋಗಿಲೆಯಾಗಿ ಕುಳಿತಿದ್ದ ಇಂದ್ರನು ಓಡಿಹೋದನು.

ಆಮೇಲೆ ವಿಶ್ವಾಮಿತ್ರರಿಗೆ ಪಶ್ಚಾತ್ತಾಪವಾಯಿತು. 'ಎಲಾ, ಇಂದ್ರಿಯ ನಿಗ್ರಹಕ್ಕಾಗಿ ತಪಸ್ಸನ್ನು ಮಾಡುವ ನನಗೆ ಕೋಪವನ್ನು ತಡೆಯಲಾರದೇ ಹೋಯಿತಲ್ಲ. ನನ್ನ ತಪಸ್ಸಿನಲ್ಲಿ ಬಹುಭಾಗವು ಶಾಪದಿಂದ ವ್ಯಯವಾಯಿತು'' ಎಂದು ಶೋಕದಿಂದ ಸಂತಪ್ತರಾದರು. ಮನಸ್ಸಿಗೆ ಶಾಂತಿ ದೊರೆಯಲಿಲ್ಲ. ''ಇನ್ನು ಮೇಲೆ ನಾನು ಎಂತಹ ಸನ್ನಿವೇಶದಲ್ಲಿಯೂ ಕೋಪವನ್ನು ತಾಳುವುದಿಲ್ಲ! ಮಾತನ್ನೇ ಆಡುವುದಿಲ್ಲ. ಉಸಿರಾಡುವುದನ್ನೇ ನಿಲ್ಲಿಸಿಬಿಡುತ್ತೇನೆ! ನನಗೆ ಬ್ರಾಹ್ಮಣ್ಯವು ಇಂದ್ರಿಯ ನಿಗ್ರಹದಿಂದ ದೊರಕುವವರೆಗೂ ತಪಸ್ಸನ್ನಾಚರಿಸುತ್ತಾ ಶರೀರವನ್ನು ಶೋಷಿಸುವೆನು. ಆಹಾರವಿಲ್ಲದಿದ್ದರೂ ತಪೋನಿರತನಾದ ನನ್ನ ಅಂಗಗಳು ಕುಂದಲಾರವು, ಕುಗ್ಗಲಾರವು' ಎಂದುಕೊಂಡು ಆ ಮುನಿಶ್ರೇಷ್ಠರು ಮತ್ತೆ ತಪಸ್ಸು ಮಾಡಲು ನಿಶ್ಚಯಿಸಿದರು. ಅವರು ಉತ್ತರ ದಿಕ್ಕನ್ನು ತ್ಯಜಿಸಿ ಪೂರ್ವದಿಕ್ಕಿಗೆ ಹೋಗಿ ಮೌನವ್ರತವನ್ನು ಸ್ವೀಕರಿಸಿ ದಾರುಣವಾದ ತಪಸ್ಸನ್ನು ಕೈಗೊಂಡರು. ಮಧ್ಯದಲ್ಲಿ ನಾನು ವಿಘ್ನಗಳು ಬಂದವು. ಅವರು ಕಟ್ಟಿಗೆಯಂತೆ ಅಲ್ಲಾಡದೆ ಮೌನವಾಗಿ ತಪಸ್ಸನ್ನು ಅವಿಚ್ಛಿನ್ನವಾಗಿ ನಡೆಸಿದರು. ಒಂದು ಸಾವಿರ ವರ್ಷಗಳು ಕಳೆದವು. ಆ ವ್ರತವು ಪೂರ್ಣವಾಗಲು ಆಹಾರವನ್ನು ತೆಗೆದುಕೊಳ್ಳಬೇಕೆಂದು ಊಟಕ್ಕೆ ಕುಳಿತರು. ಆ ಸಮಯಕ್ಕೆ ಸರಿಯಾಗಿ ಇಂದ್ರನು ಬ್ರಾಹ್ಮಣವೇಷದಲ್ಲಿ ಬಂದು ಅನ್ನವನ್ನು ಯಾಚಿಸಿದನು. ಈ ಮಹರ್ಷಿಗಳು ಹಿಂದೆ ಮುಂದೆ ನೋಡದೆ ಒಂದೇ ಮನಸ್ಸಿನಿಂದ ಅನ್ನವನ್ನು ಆ ಬ್ರಾಹ್ಮಣನಿಗೆ ಸಮರ್ಪಿಸಿದರು. ತಾವು ಊಟ ಮಾಡಲಿಲ್ಲ. ಮತ್ತೆ ಮೌನ ವ್ರತವನ್ನು ಧರಿಸಿ ಉಚ್ಛ್ವಾಸ ನಿಃಶ್ವಾಸಗಳನ್ನು ನಿಲ್ಲಿಸಿ ತಪೋನಿರತರಾದರು. ರಾಮ, ಹೀಗೆ ಬಹಳ ಕಾಲ ಕಳೆಯಲು ಆ ಮಹಾತ್ಮರ ಶಿರಸ್ಸಿನಿಂದ ಹೊಗೆಯು ಮೇಲೆದ್ದಿತು. ತಪೋಬಲದ ಅಗ್ನಿಯಿಂದ ಲೋಕವೆಲ್ಲವೂ ಸುಡುವಂತಾಗಲು ದೇವಗಂಧರ್ವಾದಿಗಳಿಗೆ ಮಂಕು ಹಿಡಿದಂತಾಯಿತು. ಅವರೆಲ್ಲರೂ ಪಿತಾಮಹನ ಬಳಿಗೆ ಹೋಗಿ ಕೈಮುಗಿದು ''ದೇವ, ವಿಶ್ವಾಮಿತ್ರನು ಘೋರತಪಸ್ಸನ್ನು ಮಾಡುತ್ತಿದ್ದಾನೆ. ಅವನಿಗೆ ಕಾಮಕ್ರೋಧಗಳುಂಟಾಗುವಂತೆ ಎಷ್ಟೋ ಪ್ರಯತ್ನ ಮಾಡಿದೆವು. ಏನೂ ಫಲ ದೊರೆಯಲಿಲ್ಲ. ಎಷ್ಟು ಪರೀಕ್ಷಿಸಿದರೂ ಅವನಿಗೆ ಕಾಮಕ್ರೋಧಗಳನ್ನುಂಟುಮಾಡಲು ಸಾಧ್ಯವಾಗಲಿಲ್ಲ. ಆತನು ಜಿತೇಂದ್ರಿಯನೇ ಸರಿ. ಈಗ ವಿಶ್ವಾಮಿತ್ರನ ಮನೋರಥವನ್ನು ಸಲ್ಲಿಸದಿದ್ದರೆ ಏನಾಗುವುದೋ ಊಹಿಸಲಾರೆವು. ಚರಾಚರಾತ್ಮಕವಾದ ಈ ಜಗತ್ತನ್ನೇ ಅವನು ನಾಶ ಮಾಡಿದರೂ ಆಶ್ಚರ್ಯವಿಲ್ಲ!'' ಎಂದು ವಿಜ್ಞಾಪಿಸಿದರು. ಬ್ರಹ್ಮದೇವನು ಸಂಪ್ರೀತನಾಗಿ ದೇವಗಣ

ಗಳೊಡನೆ ವಿಶ್ವಾಮಿತ್ರರ ಬಳಿಗೆ ಬಂದು ಮಧುರವಾದ ನುಡಿಯಿಂದ ''ಓ ಬ್ರಹ್ಮರ್ಷಿ, ನಿನಗೆ ಶುಭವಾಗಲಿ! ನಿನ್ನ ತಪಸ್ಸಿನಿಂದ ನಾವೆಲ್ಲರೂ ಪ್ರಸನ್ನರಾದೆವು. ವಿಶ್ವಾಮಿತ್ರ, ನೀನು ಬ್ರಾಹ್ಮಣ್ಯವನ್ನು ಪಡೆದೆ. ಬ್ರಾಹ್ಮಣ, ನಿನಗೆ ದೀರ್ಘಾಯುಸ್ಸನ್ನು ಕೊಟ್ಟಿದ್ದೇನೆ. ಇದಕ್ಕೆ ದೇವತೆಗಳು ಸಮ್ಮತಿಸಿದ್ದಾರೆ. ನಿನಗೆ ಶುಭವಾಗಲಿ; ಸ್ವಸ್ತಿ'' ಎಂದು ನುಡಿದನು. ಆಗ ವಿಶ್ವಾಮಿತ್ರ ಮುನಿಗಳು ಅವರೆಲ್ಲರಿಗೂ ನಮಸ್ಕರಿಸಿ ''ಓ ದೇವತೆಗಳೆ, ನನಗೆ ಬ್ರಹ್ಮರ್ಷಿ ಪದವಿಯು ಲಭಿಸಿರುವುದಾದರೆ ವೇದವೇದಾಂಗ ಗಳೆಲ್ಲವೂ ನನಗೆ ಹೃದ್ಗತವಾಗಲಿ. ಅಧ್ಯಾಪನ ಯಾಜನಗಳಿಗೆ ಅಧಿಕಾರವು ಲಭಿಸಲಿ. ಬ್ರಹ್ಮನ ಮಾನಸಪುತ್ರರಾದ ವಸಿಷ್ಠರು ನನ್ನನ್ನು ಬ್ರಹ್ಮರ್ಷಿ ಎಂದು ಒಪ್ಪಿಕೊಳ್ಳಬೇಕು! ಇದೇ ನನ್ನ ಪರಮ ಧ್ಯೇಯ. ಈ ಧ್ಯೇಯವನ್ನು ನೆರವೇರಿಸಿಕೊಟ್ಟು, ನೀವು ತೆರಳಬಹುದು'' ಎಂದರು. ಅನಂತರ ದೇವತೆಗಳ ಪ್ರಾರ್ಥನೆಯಂತೆ ವಸಿಷ್ಠ ಮುನಿಗಳು ಅಲ್ಲಿಗೆ ಆಗಮಿಸಿ ''ವಿಶ್ವಾಮಿತ್ರರೆ, ನೀವು ಬ್ರಹ್ಮರ್ಷಿಗಳಾಗಿದ್ದೀರಿ; ಸಂಶಯವಿಲ್ಲ, ನಿಮ್ಮ ಇಷ್ಟಾರ್ಥವೆಲ್ಲವೂ ನೆರವೇರುವುದು'' ಎಂದರು. ಅನಂತರ ವಸಿಷ್ಠರೂ ವಿಶ್ವಾಮಿತ್ರರು ಅನ್ಯೋನ್ಯವಾಗಿ ಮಿತ್ರರಾದರು. ಬ್ರಹ್ಮನೂ ದೇವತೆಗಳೂ ಹೊರಟುಹೋದರು.

ರಾಮ, ಈ ಮಹಾತ್ಮರು ಈ ಪ್ರಕಾರವಾಗಿ ಕಠಿಣವಾದ ತಪಸ್ಸನ್ನು ದೀರ್ಘ ಕಾಲದವರೆಗೆ ಆಚರಿಸಿ ಬ್ರಾಹ್ಮಣ್ಯವನ್ನು ಸಂಪಾದಿಸಿದರು. ಇವರು ದೇಹಧಾರಿಯಾದ ಸಾಕ್ಷಾತ್ ತಪಸ್ಸು, ಪರಮ ಧರ್ಮಸ್ವರೂಪರು. ತಪೋಬಲದ ಪರಾಕಾಷ್ಠೆ'' – ಎಂದು ಹೇಳಿ ಶತಾನಂದರು ಈ ಚರಿತೆಯನ್ನು ಮುಗಿಸಿದರು. ಈ ಕಥೆಯನ್ನು ಶ್ರದ್ಧೆಯಿಂದ ಆಲಿಸುತ್ತಿದ್ದ ಜನಕರಾಜನು ವಿಶ್ವಾಮಿತ್ರರನ್ನು ಕುರಿತು ಕೈಮುಗಿದು ಕೊಂಡು ''ಮಹರ್ಷಿಗಳೆ, ತಾವು ಈ ರಾಜಪುತ್ರರನ್ನು ಕರೆದುಕೊಂಡು ನನ್ನ ಯಜ್ಞಕ್ಕೆ ದಯಮಾಡಿಸಿದ್ದೀರಿ. ನಾನು ಧನ್ಯನಾದೆ. ತಮ್ಮ ದರ್ಶನದಿಂದ ನಾನು ಪವಿತ್ರನಾದೆ. ಮಹಾತ್ಮರೆ, ಶತಾನಂದರು ವಿಸ್ತಾರವಾಗಿ ಹೇಳಿದ ತಮ್ಮ ಪಾವನ ಚರಿತ್ರೆಯಿಂದ ನಮ್ಮೆಲ್ಲರಿಗೂ ದೊಡ್ಡ ಲಾಭವೇ ಆಯಿತು. ಬ್ರಹ್ಮರ್ಷಿಗಳೆ, ಆಶ್ಚರ್ಯಕರವಾದ ಚರಿತ್ರೆ ನಿಮ್ಮದು. ಈಗ ಸಾಯಂಕಾಲವಾಗುತ್ತಿದೆ. ಸಾಯಂತನ ಕರ್ಮವನ್ನಾಚರಿಸಲು ಸಮಯವಾಯಿತು. ನನಗೆ ಹೋಗಲು ಅನುಜ್ಞೆಯನ್ನು ಕೊಡಬೇಕು'' ಎಂದು ಹೇಳಿ ವಿಶ್ವಾಮಿತ್ರರ ಅಪ್ಪಣೆಯನ್ನು ಪಡೆದು ಹೊರಟು ಹೋದನು.

೧೨

ಶ್ರೀರಾಮನು ಶಿವಧನುಸ್ಸನ್ನೆತ್ತುವುದು. ಧನುರ್ಭಂಗ. ಸೀತಾವಿವಾಹ ನಿಶ್ಚಯ. ದಶರಥನಿಗೆ ಆಹ್ವಾನ.

ಮಾರನೆಯ ದಿನ ಪ್ರಾತಃಕಾಲದಲ್ಲಿ ಜನಕರಾಜನು, ಶ್ರೀರಾಮಲಕ್ಷ್ಮಣರೊಡನೆ ಬರುವಂತೆ ವಿಶ್ವಾಮಿತ್ರ ಮುನಿಗಳಿಗೆ ಹೇಳಿಕಳಿಸಿದನು. ವಿಶ್ವಾಮಿತ್ರರು ಆ ರಾಜಪುತ್ರರೊಡನೆ ಜನಕರಾಜನ ಯಜ್ಞಮಂಟಪಕ್ಕೆ ಆಗಮಿಸಿದರು. ಜನಕರಾಜನು ಅವರೆಲ್ಲರನ್ನೂ ಸ್ವಾಗತಿಸಿ ವಿಶ್ವಾಮಿತ್ರರಿಗೆ ''ಮಹರ್ಷಿಗಳೆ, ನಿಮಗೆ ಸ್ವಾಗತವನ್ನು ಬಯಸುತ್ತೇನೆ. ನಾನು ಏನಾದರೂ ಮಾಡಬೇಕಾಗಿದ್ದರೆ ಆಜ್ಞಾಪಿಸಬೇಕು. ನಿಮ್ಮ ಆಜ್ಞೆಗೆ ನಾನು ಬದ್ಧನು'' ಎಂದು ಹೇಳಿದನು. ಆಗ ವಿಶ್ವಾಮಿತ್ರರು ''ಜನಕ ಮಹಾರಾಜ, ದಶರಥ ರಾಜನ ಪುತ್ರರಾದ ಈ ರಾಮಲಕ್ಷ್ಮಣರು ಶ್ರೇಷ್ಠವಾದ ಕ್ಷತ್ರಿಯ ಕುಲದಲ್ಲಿ ಜನಿಸಿದ್ದಾರೆ. ಸದಾಚಾರದಿಂದಲೂ ಅಸಾಧಾರಣ ಪರಾಕ್ರಮ ದಿಂದಲೂ ವಿಖ್ಯಾತರಾಗಿದ್ದಾರೆ. ನಿನ್ನ ಬಳಿ ಇರುವ ಶಿವಧನುಸ್ಸನ್ನು ನೋಡಬೇಕೆಂದು ಇವರಿಗೆ ಕುತೂಹಲ ಹುಟ್ಟಿದೆ. ಅದನ್ನು ತೋರಿಸು. ಒಂದು ಸಲ ಆ ಧನುಸ್ಸನ್ನು ನೋಡಿ ತೃಪ್ತರಾಗಿ ಹೋಗಬೇಕೆಂದಿದ್ದಾರೆ'' ಎಂದು ಹೇಳಿದರು. ಜನಕರಾಜನು ಹೀಗೆಂದು ವಿಜ್ಞಾಪಿಸಿದನು : ''ಮಹರ್ಷಿಗಳೆ, ಈ ಶಿವಧನುಸ್ಸು ನಮ್ಮ ವಂಶದ ದೇವರಾತನೆಂಬ ಭೂಪಾಲನಿಗೆ ಸಾಕ್ಷಾತ್ ಶಿವನಿಂದಲೇ ದೊರಕಿತು. ಮಹಾದೇವನ ಆ ಧನುಸ್ಸು ನಮ್ಮ ಹಿರಿಯರಲ್ಲಿ ನ್ಯಾಸವಾಗಿ ಉಳಿದಿದೆ. ನಾನು ಯಜ್ಞಾರ್ಥವಾಗಿ ಭೂಮಿಯನ್ನು ಶೋಧಿಸುತ್ತಿರಲು, ನನಗೆ ಆಶ್ಚರ್ಯಕರವಾದ ರೀತಿಯಲ್ಲಿ ಒಬ್ಬ ಕನ್ಯೆಯು ದೊರಕಿದಳು. ಅವಳಿಗೆ ನಾನು ಸೀತಾ ಎಂದು ನಾಮಕರಣ ಮಾಡಿ ಪ್ರೀತಿಯಿಂದ ಸಾಕಿದ್ದೇನೆ. ಅವಳು ಅಯೋನಿಜೆ. ರೂಪ, ಲಾವಣ್ಯ, ಗುಣಶೀಲಗಳಲ್ಲಿ ಪರಮ ಶ್ರೇಷ್ಠಳು. ಅವಳಿಗೆ ಈಗ ಮದುವೆಯ ವಯಸ್ಸು. ಸೀತೆಯು ವೀರ್ಯ ಶುಲ್ಕಳೆಂದು ನಿಶ್ಚಯಿಸಿ ಈ ಶಿವಧನುಸ್ಸನ್ನು ಹೆದೆಯೇರಿಸಿದವನಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುವೆನು ಎಂದು ಘೋಷಿಸಿದೆನು. ಇದುವರೆಗೆ ನಾನಾದೇಶ ಗಳಿಂದ ರಾಜಪುತ್ರರು ಬಂದು ಈ ಧನುಸ್ಸನ್ನೆತ್ತಲು ಪ್ರಯತ್ನಿಸಿದರು. ಹೆದೆಯೇರಿಸು ವುದಿರಲಿ, ಇದನ್ನು ನೆಲದಿಂದ ಮೇಲಕ್ಕೆ ಎತ್ತಲು ಕೂಡ ಅವರಿಗೆ ಸಾಧ್ಯವಾಗಲಿಲ್ಲ. ಮುನಿಗಳೆ, ತಮ್ಮ ಆಜ್ಞೆಯಂತೆ ಶಿವಧನುಸ್ಸನ್ನು ಇವರಿಗೆ ತೋರಿಸುತ್ತೇನೆ. ಈ ರಾಜಪುತ್ರರಲ್ಲಿ ಹಿರಿಯನಾದ ರಾಮನಿಗೆ ಈ ಧನುಸ್ಸನ್ನೆತ್ತಿ ಹೆದೆ ಏರಿಸಲು ಸಾಧ್ಯವಾದರೆ, ನನ್ನ ಮಗಳಾದ ಸೀತೆಯನ್ನು ಈತನಿಗೆ ವಿವಾಹ ಮಾಡಿಕೊಡುತ್ತೇನೆ'' ಎಂದನು.

ಅನಂತರ ವಿಶ್ವಾಮಿತ್ರ ಮುನಿಗಳು ಶ್ರೀರಾಮನಿಗೆ ಧನುಸ್ಸನ್ನು ತೋರಿಸಬೇಕೆಂದು ಜನಕರಾಜನಿಗೆ ಹೇಳಿದರು. ಆಗ ರಾಜನು ಆ ದಿವ್ಯಧನುಸ್ಸನ್ನು ಸಭೆಗೆ ತರಿಸುವಂತೆ ಸಚಿವರಿಗೆ ಆದೇಶಿಸಿದನು. ಜನಕರಾಜನ ಆಜ್ಞೆಯಂತೆ ಸಚಿವರು ನಗರಕ್ಕೆ ಹೋಗಿ ಧನುಸ್ಸನ್ನು ತೆಗೆಸಿಕೊಂಡು ಬಂದರು. ಆ ಧನುಸ್ಸನ್ನು ಒಂದು ದೊಡ್ಡ ಪೆಟ್ಟಿಗೆಯಲ್ಲಿ ಇರಿಸಿದ್ದರು. ಅದಕ್ಕೆ ಎಂಟು ಚಕ್ರಗಳಿದ್ದವು. ಬಲಶಾಲಿಗಳಾದ ಕಟ್ಟಾಳುಗಳು ಆ ಪೆಟ್ಟಿಗೆಯನ್ನು ಬಹುಶ್ರಮದಿಂದ ತಳ್ಳಿಕೊಂಡು ಬಂದರು. ಆಗ ಜನಕರಾಜನು ವಿಶ್ವಾಮಿತ್ರರಿಗೆ ಕೈಮುಗಿದು ''ಮಹರ್ಷಿಗಳೆ, ನಮ್ಮ ಜನಕವಂಶದ ರಾಜರು ಈ ಮಹಾಧನುಸ್ಸನ್ನು ಪೂಜಿಸಿಕೊಂಡು ಬಂದಿದ್ದಾರೆ. ಇದನ್ನೆತ್ತಿ ಹೆದೆಯೇರಿಸಲು ಯಾವ ರಾಜರಿಗೂ ಇದುವರೆಗೂ ಸಾಧ್ಯವಾಗಲಿಲ್ಲ. ದೇವತೆಗಳು, ರಾಕ್ಷಸರು, ಗಂಧರ್ವರು ಮೊದಲಾದವರಿಗೂ ಆಗಲಿಲ್ಲ. ಇನ್ನು ಮನುಷ್ಯರಿಗೆ ಅಂತಹ ಸಾಮರ್ಥ್ಯವು ಎಲ್ಲಿ ಬರಬೇಕು? ಇದನ್ನು ಯಾರಾದರೂ ಅಲ್ಲಾಡಿಸಿಯಾರೆ? ಮುನಿಗಳೆ, ನಿಮ್ಮ ಆಜ್ಞೆಯಂತೆ ಈ ಮಹಾಧನುಸ್ಸನ್ನು ತರಿಸಿದ್ದೇನೆ. ಈ ರಾಜಪುತ್ರರಿಗೆ ತೋರಿಸಬಹುದು'' ಎಂದನು. ವಿಶ್ವಾಮಿತ್ರರು ಶ್ರೀರಾಮನ ಕಡೆಗೆ ತಿರುಗಿ ''ವತ್ಸ–ರಾಮ, ಧನುಸ್ಸನ್ನು ನೋಡು'' ಎಂದು ನುಡಿದರು. ರಾಘವನು ಹೋಗಿ ಆ ಪೆಟ್ಟಿಗೆಯ ಮುಚ್ಚಳವನ್ನು ತೆರೆದು ಶಿವಧನುಸ್ಸನ್ನು ಒಮ್ಮೆ ನೋಡಿದನು. ಆಮೇಲೆ ವಿಶ್ವಾಮಿತ್ರರ ಕಡೆಗೆ ತಿರುಗಿ ''ಮಹರ್ಷಿಗಳೆ, ಈ ಧನುಸ್ಸನ್ನು ಮುಟ್ಟಿನೋಡಿ ಅಲ್ಲಾಡಿಸುವುದಕ್ಕಾಗಲಿ, ಬಗ್ಗಿಸುವುದಕ್ಕಾಗಲಿ, ಸಾಧ್ಯವೇ – ಎಂದು ಪ್ರಯತ್ನಿಸುವೆನು'' ಎಂದನು. ಆಗ ಜನಕನೂ ವಿಶ್ವಾಮಿತ್ರರೂ ''ಓಹೋ! ಆಗಬಹುದು'' ಎಂದರು. ಶ್ರೀರಾಮನು ಧನುಸ್ಸಿನ ಮಧ್ಯವನ್ನು ಹಿಡಿದು ಮೇಲೆತ್ತಿದನು. ನೆರೆದವರೆಲ್ಲವೂ ಚಕಿತರಾಗಿ ಕಣ್ಣರಳಿಸಿ ನೋಡುತ್ತಿದ್ದರು. ಶ್ರೀರಾಮನು ಅನಾಯಾಸವಾಗಿ ಹೆದೆಯನ್ನು ಜಗ್ಗಿ ಧನುಸ್ಸಿನ ಇನ್ನೊಂದು ತುದಿಗೆ ಸಿಕ್ಕಿಸಿದನು. ಆ ವೀರನು ಧನುಸ್ಸು ಬಗ್ಗುವಂತೆ ಹೆದೆಯನ್ನು ಆಕರ್ಣಾಂತವಾಗಿ ಜಗ್ಗಿದನು. ಒಡನೆಯೇ ಸಿಡಿಲು ಹೊಡೆದಂತೆ ಘೋರ ಶಬ್ದವಾಯಿತು. ಪರ್ವತವು ಸೀಳಿತೋ, ಭೂಮಿ ನಡುಗಿತೋ ಎಂದು ತೋರಿತು. ಧನುಸ್ಸಿನ ಮಧ್ಯವು ಮುರಿದು ಹೋಗಿತ್ತು! ಎಲ್ಲರೂ ಆಶ್ಚರ್ಯದಿಂದ ಜಯಕಾರ ಮಾಡಿದರು. ಜನಕಮಹಾರಾಜನಿಗೆ ವಿಸ್ಮಯವೂ ಆನಂದವೂ ಏಕಕಾಲದಲ್ಲಿ ಉಂಟಾದವು. ಅವನು ವಿಶ್ವಾಮಿತ್ರರಿಗೆ ಕೈಮುಗಿದು ''ಭಗವನ್, ಈ ದಶರಥಪುತ್ರನ ಪರಾಕ್ರಮವನ್ನು ಕಣ್ಣಾರೆ ಕಂಡೆನು. ಇದು ಅದ್ಭುತಗಳಲ್ಲೊಂದು ಅಸಾಧಾರಣ ಅದ್ಭುತ – ನನ್ನ ಊಹೆಗೆ ಮೀರಿದ್ದು – ಈ ರಾಜಪುತ್ರನಲ್ಲಿ ಎಷ್ಟು ಬಲ. ಪರಾಕ್ರಮಗಳಿವೆ ಎಂದು ನಾನು ಊಹಿಸಿರಲಿಲ್ಲ. ನನ್ನ ಮಗಳಾದ ಸೀತೆಯನ್ನು ಶ್ರೀರಾಮನಿಗೆ ಮದುವೆ ಮಾಡಿಕೊಡುವೆನು. ಜನಕ ವಂಶಕ್ಕೆ ಇವಳು ಕೀರ್ತಿಯನ್ನು ತರುವಳು. ನನ್ನ

ಮಗಳನ್ನು ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಯಿಂದ ಸಾಕಿದ್ದೇನೆ. ಅವಳು ವೀರ್ಯಶುಲ್ಕಳೆಂಬ ನನ್ನ ಪ್ರತಿಜ್ಞೆ ಇಂದು ಸಾರ್ಥಕವಾಯಿತು. ಬ್ರಹ್ಮರ್ಷಿಗಳೇ, ನಿಮ್ಮ ಆಗಮನವು ಮಂಗಳಕರವಾಯಿತು'' ಎಂದು ವಿಜ್ಞಾಪಿಸಿದನು. ವಿಶ್ವಾಮಿತ್ರರು ನಗುತ್ತ ಶ್ರೀರಾಮನನ್ನು ಬಳಿಗೆ ಕರೆದು ''ವತ್ಸ–ರಾಮ, ಜನಕರಾಜನು ತನ್ನ ಪುತ್ರಿಯಾದ ಸೀತೆಯನ್ನು ನಿನಗೆ ಕೊಟ್ಟು ವಿವಾಹಮಾಡುತ್ತೇನೆ'' ಎನ್ನುತ್ತಾನೆ. ಇದು ಒಳ್ಳೆಯ ಸಂಬಂಧ. ನೀನು ಒಪ್ಪಬಹುದು' ಎಂದರು. ಆಗ ಶ್ರೀರಾಮನು ವಿನಯದಿಂದ ಕೈಜೋಡಿಸಿ ''ಮಹರ್ಷಿಗಳೆ, ನಿಮ್ಮ ಆಜ್ಞೆಗೆ ನಾನು ಎದುರು ಹೇಳತಕ್ಕವನಲ್ಲ. ಆದರೆ ವಿವಾಹದ ವಿಷಯದಲ್ಲಿ ನಾನು ನಮ್ಮ ತಂದೆಗೆ ಅಧೀನನು. ನನ್ನ ತಂದೆ ದಶರಥ ಮಹಾರಾಜನು ಒಪ್ಪುವುದಾದರೆ ನಾನು ಅಂಗೀಕರಿಸುತ್ತೇನೆ'' ಎಂದು ಹೇಳಿದನು. ಆತನ ವಿನಯ ಸಂಪತ್ತನ್ನು ಕಂಡು ವಿಶ್ವಾಮಿತ್ರರೂ ಜನಕರಾಜನೂ ತಲೆದೂಗಿದರು. ವಿಶ್ವಾಮಿತ್ರರ ಆಜ್ಞೆಯಂತೆ ಜನಕರಾಜನು ತನ್ನ ಮಂತ್ರಿಗಳೊಡನೆ ಮಾತನಾಡಿ ನೀವು ಈಗಲೇ ಅಯೋಧ್ಯೆಗೆ ಹೋಗಿ ಇಲ್ಲಿ ನಡೆದ ಸಂಗತಿ ಎಲ್ಲವನ್ನೂ ತಿಳಿಸಿ ವಿವಾಹಕ್ಕಾಗಿ ದಶರಥ ಮಹಾರಾಜನನ್ನು ಆಹ್ವಾನಿಸಿ ಕರೆತರಬೇಕು'' ಎಂದನು.

ಆಮೇಲೆ ಜನಕರಾಜನ ಸಂದೇಶವನ್ನು ಹೊತ್ತು ಕೆಲವು ಮಂತ್ರಿಗಳು ವಾಹನವನ್ನೇರಿ ಅಯೋಧ್ಯಾ ನಗರಕ್ಕೆ ಪ್ರಯಾಣ ಮಾಡಿದರು. ದಾರಿಯಲ್ಲಿ ಮೂರು ರಾತ್ರಿಗಳು ಕಳೆದವು. ಆ ಮಂತ್ರಿಗಳು ಅಯೋಧ್ಯೆಯನ್ನು ಸೇರಿ ರಾಜಭವನಕ್ಕೆ ಹೋಗಿ ತಾವು ಜನಕರಾಜನ ದೂತರಾಗಿ ಬಂದಿದ್ದೇವೆಂದು ದಶರಥನಿಗೆ ತಿಳಿಸುವಂತೆ ದ್ವಾರಪಾಲಕರಿಗೆ ಹೇಳಿದರು. ಆಮೇಲೆ ದಶರಥನ ಆಜ್ಞೆಯಂತೆ ದಿವ್ಯವಾದ ಆ ರಾಜಭವನದೊಳಗೆ ಪ್ರವೇಶಿಸಿ ದಶರಥ ಮಹಾರಾಜನನ್ನು ಕಂಡು ವಂದಿಸಿದರು. ಅವರು ಮೃದು ಮಧುರವಾದ ನುಡಿಗಳಿಂದ ಇಂತೆಂದರು. ''ಮಹಾರಾಜ, ಮಿಥಿಲಾಧೀಶ್ವರನಾದ ಜನಕ ಮಹಾರಾಜನು ನಿನ್ನ ಕ್ಷೇಮವನ್ನು ವಿಚಾರಿಸಿದ್ದಾನೆ. ನಿನಗೂ ನಿಮ್ಮ ಪರಿವಾರದವರಿಗೂ ಕುಶಲವೆ? – ಎಂಬುದಾಗಿ ಪ್ರೀತಿಯಿಂದ ಕೇಳಿದ್ದಾನೆ. ನಾವು ತಂದಿರುವ ಸಂದೇಶವಿದು – ಮಹರ್ಷಿಗಳಾದ ವಿಶ್ವಾಮಿತ್ರರು ಶ್ರೀರಾಮ ಲಕ್ಷ್ಮಣರೊಡನೆ ಮಿಥಿಲೆಗೆ ಆಗಮಿಸಿದ್ದಾರೆ. ಅವರೆಲ್ಲರೂ ಕ್ಷೇಮವಾಗಿ ದ್ದಾರೆ. ನಮ್ಮ ಮಹಾರಾಜನ ಬಳಿ ಇದ್ದ ಶಿವಧನುಸ್ಸಿನ ವಿಷಯವನ್ನು ನೀನು ಕೇಳಿರಬಹುದು. ಆ ಧನುಸ್ಸನ್ನೆತ್ತಿ ವೀರ್ಯಶುಲ್ಕಳಾದ ರಾಜಪುತ್ರಿ ಸೀತೆಯನ್ನು ಮದುವೆಯಾಗಲು ಬಹುಮಂದಿ ರಾಜಪುತ್ರರು ಹಿಂದೆ ಯತ್ನಿಸಿದರು. ಯಾರಿಗೂ ಧನುಸ್ಸನ್ನು ಅಲ್ಲಾಡಿಸಲು ಸಹ ಸಾಧ್ಯವಾಗಲಿಲ್ಲ. ನಿನ್ನ ಪುತ್ರನಾದ ಶ್ರೀರಾಮನು ಆ ಧನುಸ್ಸನ್ನು ಲೀಲೆಯಿಂದ ಎತ್ತಿ ಸಮಸ್ತ ಜನರೆದುರಿಗೆ ಹೆದೆಯನ್ನು ಜಗ್ಗಿದಾಗ ಧನುಸ್ಸು

ಮುರಿದುಹೋಯಿತು! ನೆರೆದಿದ್ದವರೆಲ್ಲರೂ ವಿಸ್ಮಿತರಾದರು.

ಆದ್ದರಿಂದ ನನ್ನ ಪುತ್ರಿಯೂ, ವೀರ್ಯಶುಲ್ಕಳೂ ಆದ ಸೀತೆಯನ್ನು ಶ್ರೀರಾಮನಿಗೆ ಕೊಟ್ಟು ವಿವಾಹ ಮಾಡಲು ಸಂಕಲ್ಪಿಸಿದ್ದೇನೆ. ವಿಶ್ವಾಮಿತ್ರ ಮುನಿಗಳು ಈ ಸಂಬಂಧವನ್ನು ಒಪ್ಪಿದ್ದಾರೆ. ಈ ಸಂಬಂಧವನ್ನು ನೀನು ಅಂಗೀಕರಿಸಿ ಮುಂದಿನ ವಿವಾಹ ವಿಧಿಯನ್ನು ನಡೆಸುವುದಕ್ಕಾಗಿ ನಿನ್ನ ರಾಜಪರಿವಾರದೊಡನೆ ಬೇಗನೆ ಮಿಥಿಲೆಗೆ ಆಗಮಿಸಬೇಕು ಎಂದು ನಮ್ಮ ಜನಕ ಮಹಾರಾಜನು ಸಂದೇಶವನ್ನು ಕಳಿಸಿದ್ದಾನೆ. ಮಹಾರಾಜ, ಈ ಉತ್ತಮವಾದ ಸಂಬಂಧವನ್ನು ನೀನು ಒಪ್ಪಿ ಕೂಡಲೇ ಆಗಮಿಸಬೇಕೆಂಬುದೇ ನಮ್ಮ ಜನಕ ಮಹಾರಾಜನ ಅಭಿಲಾಷೆ'' ಎಂದು ಹೇಳಿದರು. ಆ ಮಾತನ್ನು ಕೇಳಿ ದಶರಥನಿಗೆ ಪರಮಾನಂದವಾಯಿತು. ಅವನು ತನ್ನ ಪುರೋಹಿತರಾದ ವಸಿಷ್ಠರನ್ನೂ, ವಾಮದೇವರನ್ನೂ ಮತ್ತಿತರ ಮಂತ್ರಿಗಳನ್ನೂ ಕುರಿತು ಇಂತೆಂದನು–''ಮಾನ್ಯರೆ, ನನ್ನ ಮುದ್ದುಮಗನಾದ ರಾಮನು ತಮ್ಮನಾದ ಲಕ್ಷ್ಮಣನೊಡನೆ ವಿದೇಹ ರಾಜ್ಯದ ಮಿಥಿಲೆಗೆ ಹೋಗಿದ್ದಾನೆ. ವಿಶ್ವಾಮಿತ್ರ ಮುನಿಗಳ ದಿವ್ಯರಕ್ಷಣೆಯಲ್ಲಿ ಕ್ಷೇಮವಾಗಿದ್ದಾನೆ. ಆತನ ಪರಾಕ್ರಮವನ್ನು ಕಂಡು ಜನಕ ಮಹಾರಾಜನು ತನ್ನ ಮಗಳನ್ನು ರಾಮನಿಗೆ ಮದುವೆ ಮಾಡಿಕೊಡಬೇಕೆಂದಿದ್ದಾನೆ. ಜನಕರಾಜನ ಆಚಾರವೂ, ವ್ಯವಹಾರವೂ ಉತ್ತಮವಾಗಿದೆಯೆಂದೂ ಈ ಸಂಬಂಧವು ಯೋಗ್ಯವೆಂದೂ ನೀವು ಹೇಳುವುದಾದರೆ ನಾನೂ ಸಮ್ಮತಿಸುತ್ತೇನೆ'' ಎಂದನು. ಆಗ ವಸಿಷ್ಠ ವಾಮದೇವಾದಿ ಋಷಿಗಳೂ, ಮಂತ್ರಿಗಳೂ ಜನಕರಾಜನ ಗುಣಶೀಲಗಳನ್ನು ಹೊಗಳಿ ಈ ವಿವಾಹ ಸಂಬಂಧಕ್ಕೆ ಏಕಾಭಿಪ್ರಾಯದಿಂದ ಒಪ್ಪಿಗೆಯನ್ನು ನೀಡಿದರು. ದಶರಥನು ಸಂತೋಷದಿಂದ ''ನಾಳೆ ಪ್ರಯಾಣದ ಏರ್ಪಾಡು ನಡೆಯಲಿ. ನಾವೆಲ್ಲರೂ ಪ್ರಯಾಣಕ್ಕೆ ಸಿದ್ಧರಾಗೋಣ'' ಎಂದು ನುಡಿದನು. ಜನಕರಾಜನ ಮಂತ್ರಿಗಳು ಅರಮನೆಯಲ್ಲಿ ದಶರಥನು ನೀಡಿದ ಸತ್ಕಾರಗಳನ್ನು ಸ್ವೀಕರಿಸುತ್ತಾ ಆ ರಾತ್ರಿ ಅಲ್ಲಿಯೇ ವಿಶ್ರಮಿಸಿದರು.

೧೫

ಶ್ರೀರಾಮಾದಿಗಳ ವಿವಾಹ. ಪರಶುರಾಮ ಪರಾಜಯ. ಅಯೋಧ್ಯೆಗೆ ಪ್ರಯಾಣ

ಮಾರನೆಯ ದಿನ ಪ್ರಾತಃಕಾಲ ದಶರಥನು ಮಿಥಿಲೆಗೆ ಪ್ರಯಾಣ ಮಾಡಲು ಸಿದ್ಧನಾಗಿ ಆಪ್ತಮಂತ್ರಿಯಾದ ಸುಮಂತ್ರನನ್ನು ಕರೆದು ''ಸುಮಂತ್ರ, ಈಗ

ಕೋಶಾಧಿಕಾರಿಗಳು ಪುಷ್ಕಳಧನವನ್ನೂ ರತ್ನಗಳನ್ನೂ ವಿವಾಹೋಚಿತ ಸಾಮಗ್ರಿಗಳನ್ನೂ ತೆಗೆದುಕೊಂಡು ಹೊರಡಲಿ. ಚತುರಂಗ ಸೈನ್ಯವೂ ಪ್ರಯಾಣಕ್ಕೆ ಸಿದ್ಧವಾಗಿ ನಿಲ್ಲಲಿ. ವಸಿಷ್ಠ ವಾಮದೇವಾದಿಗಳೂ ಮುಂದುಗಡೆ ಪ್ರಯಾಣ ಮಾಡಲಿ. ನನ್ನ ರಥವನ್ನು ಸಿದ್ಧಪಡಿಸು'' ಎಂದು ಹೇಳಿದನು. ಎಲ್ಲವೂ ಸಿದ್ಧವಾಗಲು ವಸಿಷ್ಠಾದಿ ಮಹರ್ಷಿಗಳನ್ನು ಕರೆದುಕೊಂಡು ದಶರಥನು ಪರಿವಾರ ಸಹಿತನಾಗಿ ಪ್ರಯಾಣ ಮಾಡಿ ಮಿಥಿಲೆಯನ್ನು ಸೇರಿದನು. ಭರತ ಶತ್ರುಘ್ನರೂ ದಶರಥನ ಜೊತೆಗೆ ಮಿಥಿಲೆಗೆ ಬಂದರು. ಜನಕರಾಜನು ದಶರಥನ ಆಗಮನವನ್ನು ಕೇಳಿ ಅವನನ್ನು ಎದುರುಗೊಂಡು ಸ್ವಾಗತಿಸಿ ಸತ್ಕರಿಸಿದನು. ದಶರಥನನ್ನು ಕುರಿತು ''ಮಹಾರಾಜ, ನೀನು ದಯಮಾಡಿಸಿರುವುದು ನನ್ನ ಭಾಗ್ಯ. ನಿನ್ನ ಮಕ್ಕಳ ಪರಾಕ್ರಮವನ್ನು ಕಂಡು ನೀನು ಆನಂದಿಸುವೆ. ಮುನಿಶ್ರೇಷ್ಠರೆಲ್ಲರೂ ಆಗಮಿಸಿದ್ದಾರೆ. ನನ್ನ ಕುಲವು ಧನ್ಯವಾಯಿತು. ವಿವಾಹವನ್ನು ನಡೆಸಬಹುದೆಂದು ಋಷಿಗಳು ಹೇಳುತ್ತಿದ್ದಾರೆ. ಈ ಕಾರ್ಯವನ್ನು ನೀನು ನಡೆಸಿಕೊಡಬೇಕು'' ಎಂದು ಹೇಳಿದನು. ಸಂಭಾಷಣ ಚತುರನಾದ ದಶರಥನು ''ಜನಕ ಮಹಾರಾಜ, ನೀನು ಕೊಡತಕ್ಕವನು, ನಾವು ತೆಗೆದುಕೊಳ್ಳತಕ್ಕವರು. ತೆಗೆದುಕೊಳ್ಳುವುದು ಕೊಡತಕ್ಕವನಿಗೆ ಅಧೀನ! ಧರ್ಮಜ್ಞನಾದ ನೀನು ಹೇಳಿದಂತೆ ನಾವು ಮಾಡುತ್ತೇವೆ'' ಎಂದು ನುಡಿದನು.

ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ಕರೆದುಕೊಂಡು ದಶರಥನ ಬಳಿಗೆ ಬಂದರು. ಆ ರಾಜಪುತ್ರರು ತಂದೆಯ ಪಾದಗಳನ್ನು ಮುಟ್ಟಿ ವಿನಯದಿಂದ ನಮಸ್ಕರಿಸಿದರು. ದಶರಥನು ಮಕ್ಕಳನ್ನು ಆಲಿಂಗಿಸಿಕೊಂಡು ಅವರ ಕುಶಲವನ್ನು ಕೇಳಿದನು. ವಿಶ್ವಾಮಿತ್ರ ಮುನಿಗಳಿಂದಾದ ಉಪಕಾರಗಳನ್ನು ಹೃದಯಪೂರ್ವಕವಾಗಿ ಸ್ಮರಿಸಿಕೊಂಡು ಅವರನ್ನು ಸ್ತುತಿಸಿದನು.

ಇತ್ತಲಾಗಿ ವಿಶ್ವಾಮಿತ್ರರು ವಸಿಷ್ಠ ಮುನಿಗಳೊಡನೆ ಸಂಭಾಷಿಸಿ, ಅವರ ಅನುಮೋದನೆಯನ್ನು ಪಡೆದು ಜನಕರಾಜನಿಗೆ ಈ ರೀತಿಯಾಗಿ ಹೇಳಿದರು. ''ರಾಜ, ಈಗ ನಾನು ನಿನಗೊಂದು ಸಲಹೆಯನ್ನು ಮಾಡುತ್ತೇನೆ. ದಶರಥನಿಗೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಎಂಬ ನಾಲ್ವರು ಪುತ್ರರಿದ್ದಾರೆ. ಅವರೆಲ್ಲರೂ ಮಹಾಪರಾಕ್ರಮಿಗಳೂ, ಸದಾಚಾರ ತತ್ಪರರೂ, ಧರ್ಮಾತ್ಮರೂ ಆಗಿದ್ದಾರೆ. ನೀನು ಶ್ರೀರಾಮನಿಗೆ ಸೀತೆಯನ್ನು ಮದುವೆ ಮಾಡಿಕೊಡುವೆಯಷ್ಟೆ. ಅಂತೆಯೇ ನಿನ್ನ ಮಗಳಾದ ಊರ್ಮಿಳೆಯನ್ನು ಲಕ್ಷ್ಮಣನಿಗೆ ಕೊಟ್ಟು ಮದುವೆಮಾಡು. ನಿನ್ನ ತಮ್ಮನಾದ ಕುಶಧ್ವಜ ರಾಜನಿಗೆ ಮಾಂಡವಿ, ಶ್ರುತಕೀರ್ತಿ ಎಂಬ ಇಬ್ಬರು ಪರಮ ಸುಂದರಿಯರಾದ ಹೆಣ್ಣುಮಕ್ಕಳಿದ್ದಾರೆ. ಭರತನು ಮಾಂಡವಿಯನ್ನೂ ಶತ್ರುಘ್ನನು ಶ್ರುತಕೀರ್ತಿಯನ್ನು

ವಿವಾಹವಾಗಲಿ. ಈ ಸಂಗತಿಯನ್ನು ಕುಶಧ್ವಜನಿಗೆ ತಿಳಿಸು. ದಶರಥನೂ ನೀನೂ, ಪರಸ್ಪರ ಯೋಗ್ಯರಾದ ಬಂಧುಗಳಾಗುತ್ತೀರಿ'' ಎಂದರು. ಜನಕರಾಜನಿಗೆ ಬಹಳ ಸಂತೋಷವಾಯಿತು. ಅವನು ತಮ್ಮನಾದ ಕುಶಧ್ವಜನಿಗೂ ಪುರೋಹಿತರಾದ ಶತಾನಂದರಿಗೂ ಈ ವಿಷಯವನ್ನು ತಿಳಿಸಿದನು. ಅವರೆಲ್ಲರೂ ಒಪ್ಪಿದರು. ಇದನ್ನರಿತು ವಿಶ್ವಾಮಿತ್ರರು ದಶರಥನ ಬಳಿಗೆ ಹೋಗಿ ವಸಿಷ್ಠರೆದುರಿಗೆ ಈ ಸಂಗತಿಯನ್ನು ಪ್ರಸ್ತಾವಿಸಿದರು. ದಶರಥನು ಪರಮ ಸಂತೋಷದಿಂದ ಈ ಸಂಬಂಧಗಳನ್ನು ಅಂಗೀಕರಿಸಿದನು. ವಸಿಷ್ಠರು ಅನುಮೋದಿಸಿದರು.

ಆಮೇಲೆ ಜನಕರಾಜನು ಕುಶಧ್ವಜನೊಡನೆ ದಶರಥನ ಬಳಿಗೆ ಬಂದು ಹೀಗೆ ನುಡಿದನು. ''ಮಹಾರಾಜ, ಈತನು ನನ್ನ ತಮ್ಮ ಕುಶಧ್ವಜ. ಇವನಿಗೆ ಸಾಂಕಾಶ್ಯದಲ್ಲಿ ರಾಜ್ಯಾಭಿಷೇಕವನ್ನು ಮಾಡಿದ್ದೇನೆ. ಇವನೀಗ ಸಾಂಕಾಶ್ಯದ ರಾಜ. ಈತನ ಮಕ್ಕಳೇ ಮಾಂಡವಿ ಮತ್ತು ಶ್ರುತಕೀರ್ತಿ. ನನ್ನ ಮಗಳಾದ ಸೀತೆಯನ್ನು ಶ್ರೀರಾಮನಿಗೂ, ಊರ್ಮಿಳೆಯನ್ನು ಲಕ್ಷ್ಮಣನಿಗೂ, ಮಾಂಡವಿಯನ್ನು ಭರತನಿಗೂ, ಶ್ರುತಕೀರ್ತಿಯನ್ನು ಶತ್ರುಘ್ನನಿಗೂ ಕೊಟ್ಟು ವಿವಾಹ ಮಾಡಬೇಕೆಂದು ನಿಶ್ಚಿತವಾಗಿದೆಯಷ್ಟೆ. ಗುರುಗಳ ಆಜ್ಞೆಯಂತೆ ಈ ಕಾರ್ಯವನ್ನು ನಡೆಸಿಕೊಡುತ್ತೇವೆ. ನಿನ್ನ ನಾಲ್ವರು ಮಕ್ಕಳಿಗೂ ಸಮಾವರ್ತನೆಯನ್ನು ಮಾಡಿಸು. ನಾಂದಿಯನ್ನು ಇಟ್ಟುಕೊ. ಇಂದು ಮಘಾ ನಕ್ಷತ್ರ. ಇಂದಿಗೆ ಮೂರನೆಯ ದಿನ ಉತ್ತರಾಫಲ್ಗುನೀ ನಕ್ಷತ್ರದಲ್ಲಿ ವಿವಾಹವು ನಡೆಯಲಿ. ಸರ್ವರಿಗೂ ಶುಭವಾಗಲಿ'' ಎಂದು ಹೇಳಿ ಕುಶಧ್ವಜನೊಡನೆ ಅರಮನೆಗೆ ತೆರಳಿದನು.

ಇತ್ತ ಜನಕ ಮಹಾರಾಜನು ತಾನು ಆರಂಭಿಸಿದ್ದ ಯಜ್ಞವನ್ನು ಪೂರೈಸಿ ಮದುವೆ ಗಾಗಿ ನಾಂದಿಯನ್ನಿಟ್ಟುಕೊಂಡು ಸಿದ್ಧನಾದನು. ಗೊತ್ತಾದಂತೆ ಶುಭ ಮುಹೂರ್ತದಲ್ಲಿ ನಾಲ್ವರ ವಿವಾಹ ಕಾರ್ಯಗಳೂ ವಿಧಿಪೂರ್ವಕವಾಗಿ ನಡೆದವು. ಜನಕರಾಜನು ಸೀತಾದೇವಿಯ ಕೈಯನ್ನು ಶ್ರೀರಾಮನ ಕೈಯಿಂದ ಹಿಡಿಸಿ ''ರಾಮ, ಇವಳು ನನ್ನ ಮಗಳಾದ ಸೀತೆ. ಅತ್ಯಂತ ಸುಶೀಲೆಯೂ, ಮಹಾಭಾಗ್ಯ ಶಾಲಿನಿಯೂ ಆದ ಇವಳ ಪಾಣಿಗ್ರಹಣವನ್ನು ಮಾಡಿಕೊ. ಪತಿವ್ರತೆಯಲ್ಲಿ ಅತ್ಯಂತ ಶ್ರೇಷ್ಠಳೆನಿಸಿ ನೆರಳಿನಂತೆ ಸದಾ ನಿನ್ನನ್ನು ಅನುಸರಿಸಿಕೊಂಡಿರುತ್ತಾಳೆ'' ಎಂದು ಹೇಳಿ ವಿಧಿಪೂರ್ವಕ ವಾಗಿ ಧಾರೆಯೆರೆದು ಕೊಟ್ಟನು. ಹೀಗೆಯೇ ಊರ್ಮಿಳೆ ಮೊದಲಾದ ರಾಜಪುತ್ರಿಯ ರಿಗೂ, ಲಕ್ಷ್ಮಣಾದಿ ರಾಜಪುತ್ರರಿಗೂ ಶಾಸ್ತ್ರೋಕ್ತವಾಗಿ ವಿವಾಹ ಮಂಗಳವು ನಡೆಯಿತು.

ವಿಶೇಷವೇನೆಂದರೆ, ಭರತನ ಸೋದರಮಾವನಾದ ಯುಧಾಜಿತನು ಮದುವೆಗೆ ಆಗಮಿಸಿದ್ದನು. ಅವನು ಭರತನನ್ನು ತನ್ನ ನಗರಕ್ಕೆ ಕರೆದುಕೊಂಡು ಹೋಗುವುದಕ್ಕಾಗಿ

ಮೊದಲು ಅಯೋಧ್ಯೆಗೆ ಹೋಗಿದ್ದನು. ಅಲ್ಲಿ ದಶರಥಾದಿಗಳೆಲ್ಲರೂ ಮಿಥಿಲೆಗೆ ಹೋಗಿರುವರೆಂದು ತಿಳಿಯಿತು. ಶ್ರೀರಾಮನ ವಿವಾಹಕಾರ್ಯದಲ್ಲಿ ತಾನೂ ಉಪಸ್ಥಿತನಾಗಬೇಕೆಂದು ಮಿಥಿಲೆಗೆ ಬಂದಿದ್ದನು. ಆಗ ಅವನ ಪ್ರೀತಿಪಾತ್ರನೂ ಸೋದರಳಿಯನೂ ಆದ ಭರತನಿಗೂ ವಿವಾಹವು ನಡೆಯಿತು.

ಅತ್ಯಂತ ವೈಭವದಿಂದ ನಡೆದ ಈ ವಿವಾಹ ಮಹೋತ್ಸವದಲ್ಲಿ ನೆರೆದ ಸಕಲ ಋಷಿಗಳಿಗೂ, ಬಂಧುಗಳಿಗೂ ಪೌರ ಪ್ರಜೆಗಳಿಗೂ ಪರಮಾನಂದವುಂಟಾಯಿತು. ಮಿಥಿಲಾನಗರದಲ್ಲಿ ಎಲ್ಲೆಲ್ಲಿಯೂ ಹರ್ಷ ಸಂಭ್ರಮಗಳ ನೋಟವೇ ಕಾಣಿಸಿತು.

ಆ ರಾತ್ರಿ ಕಳೆಯಿತು. ಮಾರನೆಯ ದಿನ ವಿಶ್ವಾಮಿತ್ರ ಮುನಿಗಳು ಶ್ರೀರಾಮನಿಗೂ ಇತರ ರಾಜಕುಮಾರರಿಗೂ ಆಶೀರ್ವಾದವನ್ನು ಮಾಡಿ ದಶರಥನನ್ನೂ ಜನಕರಾಜನನ್ನೂ ಬೀಳ್ಕೊಂಡು ಹಿಮಾಲಯ ಪರ್ವತದ ಕಡೆಗೆ ಹೊರಟುಹೋದರು. ಆ ಮಹಾತ್ಮರ ಅನುಗ್ರಹದಿಂದ ಶ್ರೀರಾಮಲಕ್ಷ್ಮಣರಿಗೆ ದಿವ್ಯಮಂತ್ರಾಸ್ತ್ರಗಳು ದೊರೆತವು. ಅಹಲ್ಯೆಯ ಉದ್ಧಾರವಾಯಿತು. ಶ್ರೀರಾಮನಿಗೂ ಸೀತೆಗೂ ಪರಿಣಯವು ನಡೆಯಿತು. ಉಳಿದ ಮೂವರು ರಾಜಪುತ್ರರಿಗೂ ವಿವಾಹವು ನೆರವೇರಿತಲ್ಲದೆ ದಶರಥ ಜನಕರಾಜನ ಸ್ನೇಹ ಬಾಂಧವ್ಯಗಳು ದೃಢಗೊಂಡವು.

ಅನಂತರ ದಶರಥನು ಜನಕರಾಜನ ಅನುಜ್ಞೆಯನ್ನು ಪಡೆದು ಅಯೋಧ್ಯೆಗೆ ಹೊರಡಲು ಸಿದ್ಧನಾದನು. ಆ ಸಮಯದಲ್ಲಿ ಜನಕನು ತನ್ನ ಹೆಣ್ಣುಮಕ್ಕಳಿಗೆ ಬಹುಸಂಖ್ಯೆಯಲ್ಲಿ ಗೋವುಗಳನ್ನೂ, ಉತ್ತಮವಾದ ಉಣ್ಣೆ ಮತ್ತು ರೇಶ್ಮೆ ಬಟ್ಟೆಗಳನ್ನೂ, ಅನೇಕ ಮಂದಿ ಸೇವಕರನ್ನೂ, ನಾನಾರತ್ನ ಖಚಿತವಾದ ಒಡವೆಗಳನ್ನೂ, ಆನೆ, ರಥ, ಕುದುರೆ ಮುಂತಾದುವನ್ನೂ, ಸಂತೋಷದಿಂದ ಬಳುವಳಿಯಾಗಿಕೊಟ್ಟನು. ಆಮೇಲೆ ದಶರಥನನ್ನೂ ಶ್ರೀರಾಮನೇ ಮೊದಲಾದ ಅಳಿಯಂದಿರನ್ನೂ ಹೆಣ್ಣುಮಕ್ಕಳನ್ನೂ ಪ್ರೀತ್ಯಾದರಗಳಿಂದ ಸತ್ಕರಿಸಿ ಕಳಿಸಿಕೊಟ್ಟು, ತನ್ನ ಅರಮನೆಗೆ ಹಿಂದಿರುಗಿದನು.

ದಶರಥನ ಪರಿವಾರವು ಪ್ರಯಾಣ ಮಾಡುತ್ತಿರುವಾಗ ಅನೇಕ ದುರ್ನಿಮಿತ್ತಗಳಾದವು. ದಶರಥನು ಚಿಂತಾಕ್ರಾಂತನಾಗಿ ಹೀಗೇಕಾಗುತ್ತಿರಬಹುದೆಂದು ವಸಿಷ್ಠ ಮುನಿಗಳನ್ನು ಕೇಳಿದನು. ಆ ಮಹರ್ಷಿಗಳು ಅವನನ್ನು ಸಮಾಧಾನ ಪಡಿಸುತ್ತ ''ಈ ನಿಮಿತ್ತಗಳನ್ನು ಪರೀಕ್ಷಿಸಿದರೆ ಒಂದು ಪ್ರಬಲವಾದ ವಿಪತ್ತು ಒದಗುವುದೆಂದೂ ಅದು ಸುಲಭವಾಗಿ ಪರಿಹಾರವಾಗುತ್ತದೆ ಎಂದೂ ಸೂಚಿತವಾಗುತ್ತದೆ'' ಎಂದು ಸಮಾಧಾನ ಹೇಳಿದರು. ಅಷ್ಟರಲ್ಲಿ ಒಂದು ಸುಂಟರಗಾಳಿ ಬೀಸಿತು. ನೆಲವೆಲ್ಲ ನಡುಗಿದಂತಾಯಿತು.

ದೊಡ್ಡ ದೊಡ್ಡ ಮರಗಳು ಉರುಳಿದವು. ಕತ್ತಲು ಕವಿದು ಸೂರ್ಯನು ಕಾಣದಂತಾದನು. ದೂರದಲ್ಲಿ ಜಟಾಮಂಡಲ ಧಾರಿಯೂ, ಭೀಮಾಕಾರನೂ ಆದ ಒಬ್ಬ ವ್ಯಕ್ತಿಯು ಗೋಚರಿಸಿದನು. ಅವನೇ ಜಮದಗ್ನಿ ಪುತ್ರನಾದ ಪರಶುರಾಮ! ತೇಜಸ್ಸಿನಿಂದ ಜ್ವಲಿಸುತ್ತಿದ್ದ ಆತನು ಹೆಗಲಿನ ಮೇಲೆ ಒಂದು ಕೊಡಲಿಯನ್ನು ಹೇರಿಕೊಂಡು ಸಾಕ್ಷಾತ್ ರುದ್ರನೋ ಎಂಬಂತೆ ಎದುರಿಗೆ ಬಂದನು.

ಅವನನ್ನು ಕಂಡು ಕೆಲವು ಮುನಿಗಳು ಭಯದಿಂದ ಜಪವನ್ನಾರಂಭಿಸಿದರು! ಕೆಲವರು "ಈತನು ಹಿಂದೆ ಕ್ಷತ್ರಿಯರನ್ನು ಕೊಂದು ಸೇಡನ್ನು ತೀರಿಸಿಕೊಂಡಿದ್ದನು. ಅನಂತರ ಶಾಂತವಾಗಿದ್ದನು. ಪುನಃ ಈ ವೇಷದಲ್ಲಿ ಕೋಪೋದ್ದೀಪಿತನಾಗಿ ಏಕೆ ಬರುತ್ತಿರಬಹುದು?" ಎಂದು ಮಾತನಾಡಿಕೊಂಡರು. ಕೆಲವು ಋಷಿಗಳು ಪೂಜಾಸಾಮಗ್ರಿಯನ್ನು ತೆಗೆದುಕೊಂಡು ಆ ಭಾರ್ಗವ ಮುನಿಯನ್ನು ಸ್ವಾಗತಿಸಿ ಗೌರವಿಸಿದರು. ಪರಶುರಾಮನು ಆ ಪೂಜೆಯನ್ನು ಸ್ವೀಕರಿಸಿ ಎಡಬಲಕ್ಕೆ ನೋಡುತ್ತ ನೇರವಾಗಿ ಶ್ರೀರಾಮನೆದುರಿಗೆ ಬಂದು ನಿಂತು ಇಂತೆಂದನು "ಎಲೈ ದಶರಥ ಪುತ್ರ, ನಿನ್ನ ಹೆಸರು ರಾಮನೆಂದೂ ಪರಾಕ್ರಮಿಯೆಂದೂ ಕೇಳಿದ್ದೇನೆ. ಜನಕನ ಬಳಿಯಲ್ಲಿದ್ದ ಶಿವಧನುಸ್ಸನ್ನು ನೀನು ಮುರಿದೆ–ಎಂದು ಕೇಳಿದೆನು. ಪರಮೇಶ್ವರನು ನನ್ನ ಅಸ್ತ್ರವಿದ್ಯಾಗುರು. ಅವನನ್ನು ಲಕ್ಷಿಸದೆ ನೀನು ಈ ದುಷ್ಕೃತ್ಯವನ್ನು ಮಾಡಿದ್ದೀಯೆ! ಇದನ್ನು ನಾನು ಸಹಿಸಲಾರೆ. ಇದೋ ಇಲ್ಲಿ ನೋಡು. ಇದು ವೈಷ್ಣವ ಧನುಸ್ಸು. ನನ್ನ ತಂದೆಯಾದ ಜಮದಗ್ನಿ ಮುನಿಗಳಿಂದ ಇದು ನನ್ನ ವಶಕ್ಕೆ ಬಂದಿದೆ. ಇದನ್ನು ಹೆದೆಯೇರಿಸಿ ಬಾಣವನ್ನು ಹೂಡು, ನೋಡೋಣ. ಅದು ನಿನಗೆ ಸಾಧ್ಯವಾದರೆ ನಿನ್ನೊಡನೆ ಘೋರವಾದ ದ್ವಂದ್ವ ಯುದ್ಧವನ್ನಾರಂಭಿಸುವೆನು!" ಎಂದನು.

ಪರಶುರಾಮನ ಮಾತನ್ನು ಕೇಳಿ ದಶರಥನ ಮುಖವು ಕಳೆಗುಂದಿತು. ಅವನು ದೈನ್ಯದಿಂದ ಕೈಮುಗಿದು "ಮಹರ್ಷಿ, ನೀನು ಕ್ಷತ್ರಿಯರ ಮೇಲೆ ರೋಷವನ್ನು ತ್ಯಜಿಸಿ ಶಾಂತನಾದವನು. ತಪಸ್ವಿಯೂ, ಕೀರ್ತಿ ಸಂಪನ್ನನಾದ ಬ್ರಾಹ್ಮಣನೂ ಆಗಿದ್ದೀಯೆ. ಭೂಮಿಯನ್ನೆಲ್ಲಾ ಕಶ್ಯಪಮುನಿಗೆ ದಾನ ಮಾಡಿ ಮಹೇಂದ್ರ ಪರ್ವತದಲ್ಲಿ ನೆಲಸಿದ್ದೀಯಲ್ಲವೆ? ನನ್ನ ಮಕ್ಕಳು ಇನ್ನೂ ಬಾಲಕರು. ಈಗಷ್ಟೇ ವಿವಾಹ ಮಾಡಿಕೊಂಡು ತಮ್ಮ ಪತ್ನಿಯರೊಡನೆ ಬರುತ್ತಿದ್ದಾರೆ. ಇವರು ಬ್ರಾಹ್ಮಣರಿಗೆ ಯಾವ ಅಪಚಾರವನ್ನೂ ಮನಸ್ಸಿನಿಂದಲೂ ಬಯಸಿದವರಲ್ಲ. ನನ್ನ ಮಗ ರಾಮನು ನಿನಗೆ ಯಾವ ಅಪರಾಧವನ್ನೂ ಮಾಡಿಲ್ಲ. ದಯವಿಟ್ಟು ಕ್ಷಮಿಸಬೇಕಾಗಿ ಬೇಡುತ್ತೇನೆ" ಎಂದನು. ಪರಶುರಾಮನು ಅವನ ಮಾತನ್ನು ಲೆಕ್ಕಿಸದೆ ಶ್ರೀರಾಮನ ಕಡೆಗೆ ತಿರುಗಿ

“ರಾಮ, ಕಾರ್ತವೀರ್ಯಾರ್ಜುನನು ತಪೋನಿಷ್ಠನಾದ ನನ್ನ ತಂದೆಯನ್ನು ನಿಷ್ಕಾರಣ ವಾಗಿ ಸಂಹರಿಸಿದನು. ಆದರಿಂದ ನನ್ನ ರೋಷ ಉಕ್ಕಿತು. ಕಾರ್ತವೀರ್ಯಾರ್ಜುನ ನನ್ನು ಇದೇ ಕೊಡಲಿಯಿಂದ ವಧಿಸಿದೆನು! ಕ್ಷತ್ರಿಯಕುಲವನ್ನೇ ನಿರ್ನಾವು ಮಾಡಬೇಕೆಂದು ಭರತಖಂಡವನ್ನೆಲ್ಲ ಸುತ್ತಿ ಕಂಡ ಕಂಡ ಕ್ಷತ್ರಿಯರನ್ನು ತುಂಡರಿಸಿ ದ್ದೇನೆ. ಈ ವೃತ್ತಾಂತವನ್ನು ನೀನು ಕೇಳಿರಬಹುದು. ನಿನ್ನ ಸುದ್ದಿಯನ್ನು ಕೇಳಿದ ಮೇಲೆ ಮತ್ತೆ ಈ ಕ್ಷತ್ರಿಯ ಜಾತಿಯು ತಲೆಯೆತ್ತಿತೆಂದು ರೋಷಾವಿಷ್ಟನಾಗಿ ಬಂದಿದ್ದೇನೆ. ಈ ಧನುಸ್ಸನ್ನು ಕೈಯ್ಯಲ್ಲಿ ಹಿಡಿದು ಶರವನ್ನು ಹೂಡು. ಆಮೇಲೆ ದ್ವಂದ್ವ ಯುದ್ಧದಲ್ಲಿ ನನ್ನ ಪರಾಕ್ರಮದ ರೀತಿ ಏನೆಂಬುದನ್ನಾದರೂ ನೋಡು” ಎಂದನು.

ಜಾಮದಗ್ನ್ಯನ ದರ್ಪದ ನುಡಿಗಳನ್ನು ಕೇಳುತ್ತಿದ್ದ ಶ್ರೀರಾಮನು, ಬಳಿಯಲ್ಲಿಯೇ ತಂದೆಯಿರುವನೆಂಬ ಗೌರವದಿಂದ ಮಾತಾಡದೆ, ಸುಮ್ಮನಿದ್ದನು. ಈಗ ತನ್ನ ಮಾತನ್ನು ಸಂಕ್ಷೇಪಿಸಿ ಅರ್ಥವತ್ತಾಗಿ ನುಡಿದನು. “ಭಾರ್ಗವ, ನಿನ್ನ ಶೌರ್‍ಯದ ವೃತ್ತಾಂತವನ್ನೆಲ್ಲಾ ಕೇಳಿದ್ದಾನೆ. ಪಿತೃ ಋಣದಿಂದ ಮುಕ್ತನಾಗುವುದಕ್ಕಾಗಿ ಕಾರ್ತವೀರ್ಯನನ್ನು ವಧಿಸಿರು ವುದನ್ನು ಮೆಚ್ಚುತ್ತೇನೆ. ಆದರೆ ಕ್ಷತ್ರಿಯ ಜಾತಿಯ ಹೆಸರನ್ನೆತ್ತಿ ಎಲ್ಲ ಕ್ಷತ್ರಿಯರೂ ಧರ್ಮ ವಿರೋಧಿಗಳೆಂದು ಹಗುರವಾದ ಮಾತನ್ನಾಡುತ್ತಿದ್ದೀಯೆ.ಇದನ್ನು ನಾನು ಸಹಿಸಲಾರೆ. ನನ್ನ ಪರಾಕ್ರಮವನ್ನಾದರೂ ನೋಡು” ಎಂದನು. ಒಡನೆಯೇ ಪರಶುರಾಮನ ಕೈಯಿಂದ ವೈಷ್ಣವ ಧನುಸ್ಸನ್ನೂ, ಶರವನ್ನೂ ತಟ್ಟನೆ ಸೆಳೆದುಕೊಂಡನು. ಅನಂತರ ಧನುಸ್ಸಿಗೆ ಸುಲಭವಾಗಿ ಹೆದೆಯೇರಿಸಿ ಶರವನ್ನು ಹೂಡಿ “ಜಾಮದಗ್ನ್ಯ, ಈ ಶರವು ನಿನ್ನ ಪ್ರಾಣವನ್ನೇ ಹೀರಬಲ್ಲದು. ಆದರೆ ನೀನು ಬ್ರಾಹ್ಮಣನೆಂದೂ ವಿಶ್ವಾಮಿತ್ರ ಮುನಿಗಳ ಸೋದರಿಯಾದ ಸತ್ಯವತೀ ದೇವಿಯ ಪೌತ್ರನೆಂದೂ ಕೇಳಿದ್ದೇನೆ. ಆದ್ದರಿಂದ ನಿನ್ನಲ್ಲಿ ಪೂಜ್ಯಭಾವವನ್ನು ತಳೆದು ಈ ಶರವನ್ನು ನಿನ್ನ ಮೇಲೆ ಬಿಡಲಾರೆನು” ಎಂದನು. ಆಗ ಪರಶುರಾಮನು ಶ್ರೀರಾಮನ ಅಸಾಧಾರಣ ಸಾಮರ್ಥ್ಯವನ್ನು ಕಂಡು ವಿಸ್ಮಿತನಾದನು. ಅವನ ಮನಸ್ಸಿನಲ್ಲಿ ಕಳವಳವು ತಲೆದೋರಿತು. ಮುಖವು ಬಾಡಿತು. ಶ್ರೀರಾಮನು ಅವನನ್ನು ನೋಡಿ “ಭಾರ್ಗವ, ಈ ವೈಷ್ಣವಾಸ್ತ್ರವು ಎಂದಿಗೂ ವ್ಯರ್ಥವಾಗತಕ್ಕದಲ್ಲ. ಇದನ್ನು ಯಾರ ಮೇಲೆ ಪ್ರಯೋಗಿಸಲಿ, ಹೇಳು” ಎಂದನು. ಶ್ರೀರಾಮನ ತೇಜಸ್ಸಿನೆದುರಿಗೆ ಜಡನಂತಾದ ಪರಶುರಾಮನು “ರಾಮ, ನಾನು ಮನೋವೇಗದಿಂದ ಮಹೇಂದ್ರ ಪರ್ವತಕ್ಕೆ ಹೋಗಬೇಕಾಗಿದೆ. ಈ ಭೂಮಿಯಲ್ಲಿ ಒಂದು ರಾತ್ರಿಯೂ ನಾನು ಇರಕೂಡದು. ಇರುವುದಿಲ್ಲವೆಂದು ಕಶ್ಯಪ ಮುನಿಗೆ ಮಾತುಕೊಟ್ಟದ್ದೇನೆ. ಆದ್ದರಿಂದ ನನ್ನ ಪ್ರಯಾಣವನ್ನು ತಡೆಯಬೇಡ. ನಾನು ಸಂಪಾದಿಸಿರುವ ತಪೋಲೋಕವನ್ನು

ಘಾತಿಸು'' ಎಂದು ನುಡಿದನು. ಆಗ ಪ್ರತಾಪಶಾಲಿಯಾದ ದಾಶರಥಿಯು ಆ ದಿವ್ಯಾಸ್ತ್ರವನ್ನು ಬಿಡಲಾಗಿ ಪರಶುರಾಮನ ತಪೋಜನ್ಯವಾದ ಪುಣ್ಯವನ್ನು ಅದು ನಾಶಪಡಿಸಿತು. ಪರಶುರಾಮನು ಶಾಂತನಾಗಿ ''ಶ್ರೀರಾಮ, ನಿನಗೆ ಕಲ್ಯಾಣವಾಗಲಿ. ನಿನ್ನಿಂದ ನಾನು ಪರಾಜಿತನಾದೆನು. ಇದಕ್ಕಾಗಿ ನಾನು ಲಜ್ಜಿಸಬೇಕಾಗಿಲ್ಲ. ನೀನು ತ್ರಿಲೋಕೇಶ್ವರನಾದ ವಿಷ್ಣುವೆಂಬುದು ನನಗೆ ತಿಳಿಯಿತು'' ಎಂದು ಹೇಳಿ ಶ್ರೀರಾಮನಿಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಅವರೆಲ್ಲರನ್ನು ಬೀಳ್ಕೊಂಡು ಮಹೇಂದ್ರ ಪರ್ವತಕ್ಕೆ ಹೋದನು. ಎಲ್ಲ ದಿಕ್ಕುಗಳಲ್ಲಿಯೂ ಕತ್ತಲೆಯು ಹರಿದು ಬೆಳಕು ಮೂಡಿತು. ದೇವತೆಗಳೂ ಋಷಿಗಳೂ ಶ್ರೀರಾಮನನ್ನು ಸ್ತುತಿಸಿದರು.*

ಅನಂತರ ಶ್ರೀರಾಮನು ದಶರಥನ ಬಳಿಗೆ ಹೋಗಿ ''ಮಹಾರಾಜ, ಜಾಮದಗ್ನ್ಯನು ಹೊರಟು ಹೋದನು. ಪ್ರಭುವಾದ ನಿನ್ನ ಆಜ್ಞೆಯಂತೆ ಚತುರಂಗ ಸೇನೆಯು ಅಯೋಧ್ಯಾಭಿಮುಖವಾಗಿ ಪ್ರಯಾಣ ಮಾಡಬಹುದು'' ಎಂದು ನಿವೇದಿಸಿದನು. ದಿಕ್ಕು ತೋರದೆ ಕುಳಿತಿದ್ದ ದಶರಥನಿಗೆ ಮಗನ ಮಾತನ್ನು ಕೇಳಿ ಪರಮಾನಂದವಾಯಿತು. ಅವನು ಶ್ರೀರಾಮನನ್ನು ಎರಡು ಕೈಗಳಿಂದಲೂ ಬಿಗಿಯಾಗಿ ಅಪ್ಪಿಕೊಂಡು ಶಿರಸ್ಸನ್ನು ಆಘ್ರಾಣಿಸಿದನು. ತಾನೂ ತನ್ನ ಮಗನೂ ಪುನರ್ಜನ್ಮವನ್ನು ಪಡೆದೆವೋ ಎಂಬಂತೆ ಹರ್ಷದಿಂದ ಉಬ್ಬಿದನು. ಆಮೇಲೆ ಪರಿವಾರವೆಲ್ಲವೂ ಅಯೋಧ್ಯೆಗೆ ಪ್ರಯಾಣ ಮಾಡಲೆಂದು ಆಜ್ಞಾಪಿಸಿ ಎಲ್ಲರೊಡನೆ ಅಯೋಧ್ಯಾ ನಗರಕ್ಕೆ ಬಂದು ಸೇರಿದನು. ಅಯೋಧ್ಯೆಯಲ್ಲಿದ್ದ ನಾಗರಿಕರು ನಗರವನ್ನು ಸುಂದರವಾಗಿ ಅಲಂಕರಿಸಿ ಧ್ವಜಸ್ತಂಭಗಳನ್ನು ನೆಟ್ಟು ಪಟಾಕಿಗಳನ್ನು ಹಾರಿಸಿದರು. ರಾಜ ಬೀದಿಗಳಲ್ಲಿ ನೀರನ್ನೆರಚಿ ಹೂಗಳನ್ನು ಚೆಲ್ಲಿದ್ದರು. ವಿಜಯಿಯಾದ ರಾಜಕುಮಾರನೊಡನೆ ತಮ್ಮ ಮಹಾರಾಜನು ಹಿಂದಿರುಗುತ್ತಿದ್ದಾನೆಂಬುದನ್ನು ಕೇಳಿ ಪ್ರಜೆಗಳ ಮುಖವು ಸಂತೋಷದಿಂದ ಅರಳಿತ್ತು. ಪೌರರೂ, ದ್ವಿಜೋತ್ತಮರೂ ಮಂಗಳ ಶ್ಲೋಕಗಳನ್ನು ಹೇಳುತ್ತಾ ಪಟ್ಟಣಕ್ಕೆ ದೂರದಲ್ಲಿಯೇ ದಶರಥನನ್ನು ಸ್ವಾಗತಿಸಿ ಕರೆತಂದರು. ದಶರಥ ಮಹಾರಾಜನು ತೇಜಸ್ವಿಗಳಾದ ತನ್ನ ಪುತ್ರರೊಂದಿಗೆ ಸೊಸೆಯರನ್ನೂ ಕರೆದುಕೊಂಡು ಇಂದ್ರಭವನದಂತಿದ್ದ ತನ್ನ ಅರಮನೆಯನ್ನು ಪ್ರವೇಶಿಸಿದನು. ರಾಜಪತ್ನಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೇಯಿಯರೂ ಇತರ ಸ್ತ್ರೀಯರೂ ಸೊಸೆಯರನ್ನು ಸ್ವಾಗತಿಸಲು ಬಂದರು. ಅವರು ಸೀತೆ, ಊರ್ಮಿಳೆ, ಮಾಂಡವಿ ಮತ್ತು ಶ್ರುತಕೀರ್ತಿಯರನ್ನು ಕಂಡು

---

* ಪರಶುರಾಮನು ಮಹಾವಿಷ್ಣುವಿನ ಅವತಾರವೇ ಹೌದು. ಅವನು ತನ್ನ ಪ್ರತಿರೂಪನಾದ ಶ್ರೀರಾಮನಿಗೆ ವೈಷ್ಣವ ಧನುಸ್ಸನ್ನು ಕೊಟ್ಟು ಮುಂದಿನ ಕಾರ್ಯವನ್ನು ಕ್ಷತ್ರಿಯನಾದ ನೀನೇ ನಿರ್ವಹಿಸಬೇಕೆಂದು ತಿಳಿಸುವುದಕ್ಕಾಗಿ ಬಂದಿದ್ದನೆಂದು ತಾತ್ಪರ್ಯ.

ಮಾತನಾಡಿ ಪ್ರೀತ್ಯಾದರಗಳಿಂದ ಬರಮಾಡಿಕೊಂಡರು. ಅನಂತರ ಆ ಸ್ತ್ರೀಯರೆಲ್ಲರೂ ಶ್ರೇಷ್ಠವಾದ ವಸ್ತ್ರಗಳನ್ನು ಧರಿಸಿ ಮಂಗಳ ಘೋಷದೊಡನೆ ದೇವಸ್ಥಾನಕ್ಕೆ ಹೋಗಿ ದೇವತಾರ್ಚನೆ ಮಾಡಿದರು. ಅರ್ಚನೆಯಾದ ಮೇಲೆ ಆ ರಾಜಕುಮಾರಿಯರೆಲ್ಲರೂ ಗುರುಹಿರಿಯರಿಗೆ ನಮಸ್ಕಾರ ಮಾಡಿ ಅವರ ಆಶೀರ್ವಾದಗಳನ್ನು ಪಡೆದು ಸಂಪದ್ಭರಿತವಾದ ತಮ್ಮ ತಮ್ಮ ಭವನಗಳಿಗೆ ಹೋದರು. ಅಲ್ಲಿ ಗೋವುಗಳನ್ನೂ, ಧನಧಾನ್ಯಗಳನ್ನೂ ತಮ್ಮ ಗಂಡಂದಿರೊಡನೆ ಸೇರಿ ಬ್ರಾಹ್ಮಣೋತ್ತಮರಿಗೆ ದಾನ ಮಾಡಿದರು. ಈ ಪ್ರಕಾರದಲ್ಲಿ ದಶರಥನ ಪುತ್ರರಾದ ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನರು ಪತ್ನೀಸಮೇತರಾಗಿ ಸರ್ವರನ್ನೂ ಹರ್ಷಗೊಳಿಸಿದರು. ಆ ರಾಜಪುತ್ರರು ಮಹಾವೀರರು. ಧನುರ್ವಿದ್ಯಾ ಪಾರಂಗತರು. ತಂದೆ ತಾಯಿ ಮೊದಲಾದವರಿಗೆ ವಿಧೇಯರಾಗಿ ಅವರ ಶುಶ್ರೂಷೆಯನ್ನು ಮಾಡಿಕೊಂಡಿದ್ದರು. ಅವರ ಪತ್ನಿಯರೂ ಸಹ ಉತ್ತಮ ಗುಣಗಳಿಂದ ವಿರಾಜಿಸುತ್ತಾ ಅತ್ತೆ ಮಾವಂದಿರಿಗೂ ಗುರುಹಿರಿಯರಿಗೂ ವಿಧೇಯರಾಗಿ ನಡೆದುಕೊಳ್ಳುತ್ತಾ ಎಲ್ಲರ ಪ್ರಶಂಸೆಗೆ ಪಾತ್ರರಾದರು.

ಇತ್ತ ಸೋದರಳಿಯನಾದ ಭರತನನ್ನು ಕರೆದುಕೊಂಡು ಹೋಗಲು ಕೇಕಯ ದೇಶದಿಂದ ಯುಧಾಜಿತನು ಬಂದಿದ್ದನಷ್ಟೆ. ಅವನ ಅಪೇಕ್ಷೆಯನ್ನು ಮನ್ನಿಸಿ ಕೇಕಯ ದೇಶಕ್ಕೆ ಹೋಗಲು ದಶರಥನು ಭರತನಿಗೆ ಅನುಜ್ಞೆಯನ್ನಿತ್ತನು. ಭರತನೊಡನೆ ಶತ್ರುಘ್ನನೂ ಹೋಗುವುದು ಸ್ವತಃ ಸಿದ್ಧವಾದದ್ದು. ಭರತ ಶತ್ರುಘ್ನರು ತಮ್ಮ ತಂದೆಗೂ ತಾಯಂದಿರಿಗೂ ಶ್ರೀರಾಮನಿಗೂ ಈ ಸಂಗತಿಯನ್ನು ತಿಳಿಸಿ ಎಲ್ಲರ ಶುಭವಚನಗಳನ್ನು ಪಡೆದು ಯುಧಾಜಿತನೊಡನೆ ಕೇಕಯರಾಜಧಾನಿಗೆ ತೆರಳಿದರು. ಅವರೊಡನೆ ಅವರ ಪತ್ನಿಯರಾದ ಮಾಂಡವಿ, ಶ್ರುತಕೀರ್ತಿ ಇವರೂ ಸಹ ಪ್ರಯಾಣ ಮಾಡಿದರು. ಶ್ರೀರಾಮ ಲಕ್ಷ್ಮಣರು ತಂದೆಯನ್ನು ದೇವರೆಂದೇ ಭಾವಿಸಿ ಅವನ ಸೇವೆಯನ್ನು ಮಾಡಿಕೊಂಡಿದ್ದರು. ತಂದೆಯ ಆಜ್ಞೆಯ ಪ್ರಕಾರ ಪ್ರಜೆಗಳಿಗೆ ಪ್ರಿಯವೂ ಹಿತಕರವೂ ಆದ ಸಕಲ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದರು. ಹಾಗೆಯೇ ತಾಯಂದಿರ ಮತ್ತು ಗುರುಹಿರಿಯರ ಸೇವೆ ಮಾಡಿಕೊಂಡು ವಿಧೇಯತೆಯಿಂದ ಸರ್ವರಿಗೂ ಪ್ರಿಯ ರಾದರು. ದಶರಥನ ನಾಲ್ವರು ಪುತ್ರರಲ್ಲಿ ಧರ್ಮಾತ್ಮನಾದ ಶ್ರೀರಾಮನ ಕೀರ್ತಿಯು ಎಲ್ಲೆಲ್ಲಿಯೂ ಅಧಿಕವಾಗಿ ಹರಡಿತು. ಅವನು ಉತ್ತಮ ಗುಣ ಸಂಪನ್ನನಾಗಿ ಸಮಸ್ತ ಪ್ರಜೆಗಳ ಪ್ರೀತಿ ಗೌರವಗಳನ್ನೂ ಗಳಿಸಿದನು. ಶ್ರೀರಾಮನು ಸಾಧ್ವಿಯಾದ ಸೀತೆಯೊಡನೆ ವಿಹರಿಸುತ್ತ ಸುಖವಾಗಿದ್ದನು. ಸೀತೆಗಾದರೋ ಸದಾ ಹೃದಯದಲ್ಲಿ ಶ್ರೀರಾಮನೇ ಸುಳಿಯುತ್ತಿದ್ದನು. ಅವಳ ಸದ್ಗುಣಗಳಿಗೂ, ರೂಪಸೌಂದರ್ಯಾದಿ ಗಳಿಗೂ ಮುಗ್ಧನಾದ ಶ್ರೀರಾಮನು ಅವಳಲ್ಲಿ ಅನುರಕ್ತನಾದನು. ಅನ್ಯೋನ್ಯ ಪ್ರೇಮವು ಆ ದಂಪತಿಗಳಲ್ಲಿ ಬೆಳೆಯುತ್ತಲೇ ಹೋಯಿತು.

ಅಯೋಧ್ಯಾಕಾಂಡ

೧೪

ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ದಶರಥನು ಸಂಕಲ್ಪ.

ದಶರಥ ಮಹಾರಾಜನ ಪುತ್ರರಾದ ಶ್ರೀರಾಮಾದಿಗಳ ವಿವಾಹ ಮಂಗಳವು ನಡೆದ ಮೇಲೆ ಕೆಲವು ವರ್ಷಗಳು ಸಂದವು. ದಶರಥನಿಗೆ ತನ್ನ ಮಕ್ಕಳು ಅನ್ಯೋನ್ಯ ಸ್ನೇಹದಿಂದ ಪತ್ನೀಸಮೇತರಾಗಿ ಸುಖದಿಂದ ಇರುವುದನ್ನು ಕಂಡು ಪರಮಾನಂದ ವಾಗಿತ್ತು. ಆ ನಾಲ್ವರು ಪುತ್ರರು ತನ್ನ ನಾಲ್ಕು ತೋಳುಗಳೆಂಬ ಅಭಿಮಾನವು ಅವನಿಗಿತ್ತು. ಅವರಲ್ಲಿಯೂ ಮಹಾತೇಜಸ್ವಿಯಾದ ಶ್ರೀರಾಮನಲ್ಲಿ ತಂದೆಗೆ ಅತ್ಯಂತ ವ್ಯಾಮೋಹ. ಶ್ರೀರಾಮನಾದರೋ ರೂಪವಂತನೂ, ಗುಣಾಢ್ಯನೂ, ಶೀಲವಂತನೂ ಆಗಿದ್ದನು. ಅವನಿಗೆ ಯಾರ ಮೇಲೂ ಅಸೂಯೆ ಇರಲಿಲ್ಲ. ಪರಮೋತ್ತಮ ಸದ್ಗುಣ ಗಳೆಲ್ಲವೂ ಅವನಲ್ಲಿ ಮೂಡಿಬಂದಿದ್ದವು. ಪ್ರಜೆಗಳೊಡನೆ ಮೃದುವಾಗಿ ಮಾತನಾಡ ತಕ್ಕವನು. ಯಾರಾದರೂ ತನಗೆ ಕಠಿಣವಾದ ಮಾತನ್ನಾಡಿದರೂ ಪ್ರತಿಯಾಗಿ ಹೇಳುತ್ತಿರಲಿಲ್ಲ. ಅನ್ಯರು ಮಾಡಿದ ಚಿಕ್ಕ ಉಪಕಾರವನ್ನು ದೊಡ್ಡದಾಗಿ ಗಣಿಸುವ ದೊಡ್ಡತನ ಅವನಲ್ಲಿತ್ತು. ಶ್ರೀರಾಮನು ಪ್ರತಿದಿನವೂ ಶಸ್ತ್ರ ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದನಲ್ಲದೆ ಜ್ಞಾನಿಗಳೂ, ವಯೋವೃದ್ಧರೂ ಆದ ಸಜ್ಜನರೊಡನೆ ಕಲೆತು ನಾನಾ ಶಾಸ್ತ್ರಗಳಲ್ಲಿ ಚರ್ಚೆ ಮಾಡಿ ತನ್ನ ಜ್ಞಾನಸಂಪತ್ತನ್ನು ಹೆಚ್ಚಿಸಿ ಕೊಳ್ಳುತ್ತಿದ್ದನು. ತಾನು ಮಹಾಶೂರನಾದರೂ, ವಿದ್ವಾಂಸನಾದರೂ ಎಂದಿಗೂ ಗರ್ವಪಡತಕ್ಕವನಲ್ಲ. ಪ್ರಜೆಗಳ ಯೋಗಕ್ಷೇಮಗಳನ್ನು ವಿಚಾರಿಸಿ ಅವರ ಕೊರತೆಗಳನ್ನು ಮೊದಲು ನೀಗಿಸು ತ್ತಿದ್ದನು. ಮಂದಹಾಸದಿಂದ ಅವರೊಡನೆ ಸಂಭಾಷಿಸಿ ಅವರೆಲ್ಲರ ಅನುರಾಗವನ್ನೂ ಪಡೆದಿದ್ದನು. ಕುತ್ಸಿತವಾದ ಯಾವ ವಿಷಯದಲ್ಲಿಯೂ ಅವನಿಗೆ ಸ್ವಲ್ಪವೂ ಆಸಕ್ತಿ ಇರಲಿಲ್ಲ. ಆರೋಗ್ಯಶಾಲಿಯೂ, ತರುಣನೂ, ವಾಗ್ಮಿಯೂ ಆದ ಶ್ರೀರಾಮನನ್ನು ಕಂಡು ಎಲ್ಲರಿಗೂ ಸಂತೋಷವೇ ಆಗುತ್ತಿತ್ತು. ಸಕಲ ಸದ್ಗುಣೋಪೇತನಾದ ಸತ್ಪುರುಷನನ್ನು ಸೃಷ್ಟಿಸಬೇಕೆಂದು ಬ್ರಹ್ಮನು ಶ್ರೀರಾಮನನ್ನು ಸೃಜಿಸಿದನೋ ಎಂಬಂತೆ ತೋರುತ್ತಿತ್ತು. ಆತನಿಗೆ ಎಲ್ಲ ಶಾಸ್ತ್ರಗಳಲ್ಲಿಯೂ,ಕಾವ್ಯ ನಾಟಕಾದಿ ಸಾಹಿತ್ಯದಲ್ಲಿಯೂ ಉತ್ತಮವಾದ ವೈದುಷ್ಯವಿತ್ತು. ಧರ್ಮಕ್ಕೆ ವಿರುದ್ಧವಾಗದಂತೆ ಅರ್ಥಕಾಮಗಳನ್ನು ಸೇವಿಸುತ್ತ ಎಲ್ಲ ಶ್ರೇಷ್ಠ ಗುಣಗಳನ್ನೂ ಅಳವಡಿಸಿಕೊಂಡಿದ್ದ ಈ ಹಿರಿಯ ಮಗನನ್ನು ನೋಡಿ ನೋಡಿ ದಶರಥನು ಹಿಗ್ಗುತ್ತಿದ್ದನು.

ಹೀಗಿರಲು ದಶರಥ ಮಹಾರಾಜನಿಗೆ ಒಂದು ದಿನ ಈ ಆಲೋಚನೆ ಹುಟ್ಟಿತು. ''ನಾನು ವೃದ್ಧನಾದೆನು. ಬಹುಕಾಲ ರಾಜ್ಯಭಾರವನ್ನು ಮಾಡಿ ದಣಿದು ಹೋಗಿದ್ದೇನೆ. ಅಲ್ಲದೆ ಈಚೆಗೆ ಕೆಲವು ದಿನಗಳಿಂದ ಅನೇಕ ದುಃಶಕುನಗಳೂ, ಉತ್ಪಾತಗಳೂ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಬಹುಶಃ ನನ್ನ ಅಂತ್ಯಕಾಲವು ಸಮೀಪಿಸಿತೋ ಏನೋ. ಈ ಸಮಯದಲ್ಲಿ ರಾಜ್ಯಭಾರವನ್ನು ಜ್ಯೇಷ್ಠಪುತ್ರನಾದ ರಾಮನಿಗೆ ವಹಿಸಿ ಕೊಡುವುದು ಉತ್ತಮವೆನಿಸಿದೆ. ರಾಜಯೋಗ್ಯವಾದ ಎಲ್ಲ ಗುಣಗಳೂ ಅವನಲ್ಲಿ ಮಿಳಿತವಾಗಿವೆ. ನನಗಿಂತಲೂ ಅವನು ರಾಜಕಾರ್ಯಗಳನ್ನು ಚೆನ್ನಾಗಿ ನಿರ್ವಹಿಸಿ ಕೀರ್ತಿಶಾಲಿಯಾಗುವನೆಂದು ನನಗೆ ನಂಬಿಕೆ ಇದೆ. ಈ ವಿಷಯದಲ್ಲಿ ಪ್ರಜೆಗಳೊಡನೆ ಸಮಾಲೋಚಿಸಿ ಮುಂದೆ ಹೆಜ್ಜೆ ಇಡುವುದು ನನ್ನ ಕರ್ತವ್ಯ. ಪ್ರಜೆಗಳಿಗಾಗಿ ರಾಜನೇ ಹೊರತು, ರಾಜನಿಗಾಗಿ ಪ್ರಜೆಗಳಲ್ಲ'' ಎಂದು ಆಲೋಚಿಸಿ ಪ್ರಜೆಗಳ ಒಂದು ದೊಡ್ಡ ಸಭೆಯನ್ನು ಕರೆದನು.

ಅರಮನೆಯ ಸಭಾಂಗಣದಲ್ಲಿ ಸಭೆ ಸೇರಿತು. ನಗರದ ಎಲ್ಲ ಗಣ್ಯರೂ, ಸ್ತ್ರೀ–ಪುರುಷರೇ ಮೊದಲಾದ ಪ್ರಜೆಗಳೂ ರಾಜಾಜ್ಞೆಯಂತೆ ಬಂದು ಸೇರಿದರು. ಎಲ್ಲ ಮಂತ್ರಿಗಳೂ ಉಪಸ್ಥಿತರಾಗಿದ್ದರು. ಮಹಾರಾಜನು ಈ ಸಭೆಯನ್ನೇಕೆ ಕರೆದಿರಬಹುದೆಂದು ತಿಳಿಯಲು ಸರ್ವರೂ ಕುತೂಹಲಿಗಳಾಗಿದ್ದರು. ದಶರಥನು ಆ ಸಭೆಯನ್ನುದ್ದೇಶಿಸಿ ಹೀಗೆಂದನು ''ನನ್ನ ಪ್ರೀತಿಯ ಪ್ರಜೆಗಳೆ, ಒಂದು ಮುಖ್ಯವಾದ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ತಿಳಿಯಲು ಈ ಸಭೆಯನ್ನು ಕರೆದಿದ್ದೇನೆ. ನಾನು ಇಷ್ಟು ವರ್ಷಗಳವರೆಗೆ ಯಥಾಶಕ್ತಿಯಾಗಿ ರಾಜ್ಯಭಾರವನ್ನು ನಿರ್ವಹಿಸಿದ್ದೇನೆ. ನಮ್ಮ ಇಕ್ಷ್ವಾಕು ವಂಶದ ಅರಸರು ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆಯಲು ಪ್ರಯತ್ನಿಸಿದ್ದೇನೆ. ಧರ್ಮಮಾರ್ಗಕ್ಕೆ ಚ್ಯುತಿಯಾಗದಂತೆ ರಾಜ್ಯಪಾಲನೆಯನ್ನು ಮಾಡಿದ್ದೇನೆಂದು ನನ್ನ ನಂಬಿಕೆ. ಈಗಲಾದರೋ ನಾನು ವೃದ್ಧನಾಗಿದ್ದೇನೆ. ಮೊದಲಿನಂತೆ ಈ ಮಹಾಕಾರ್ಯವನ್ನು ನಿರ್ವಹಿಸಲು ನನಗೆ ಶಕ್ತಿಯಿಲ್ಲ. ನನಗೆ ಈಗ ವಿಶ್ರಾಂತಿ ಬೇಕಾಗಿದೆ. ಆದ್ದರಿಂದ ನನ್ನ ಹಿರಿಯ ಮಗನಾದ ರಾಮನಿಗೆ ಯುವರಾಜ ಪಟ್ಟಾಭಿಷೇಕವನ್ನು ಮಾಡಿ ವಿಶ್ರಮಿಸಬೇಕೆಂದು ನನ್ನ ಸಂಕಲ್ಪವಿದೆ. ರಾಜ್ಯಭಾರ ವೆಂಬುದು ಬಹಳ ಕಠಿಣವಾದದ್ದು. ಅಜಿತೇಂದ್ರಿಯರಿಗೆ ಇದು ಶಕ್ಯವಾದದ್ದಲ್ಲ. ನನ್ನ ಜ್ಯೇಷ್ಠ ಪುತ್ರನಾದ ರಾಮನಾದರೋ ಜಿತೇಂದ್ರಿಯನೂ, ಸಮರ್ಥನೂ ಆಗಿದ್ದಾನೆಂದು ನನ್ನ ಭಾವನೆ. ಆದರೆ ಪ್ರಜೆಗಳ ಒಪ್ಪಿಗೆ ಇಲ್ಲದೆ ಈ ಕಾರ್ಯದಲ್ಲಿ ತೊಡಗಲು ನನಗೆ ಇಷ್ಟವಿಲ್ಲ. ಆದ್ದರಿಂದ ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು? ನಿರ್ದಾಕ್ಷಿಣ್ಯವಾಗಿ ಧೈರ್ಯದಿಂದ ತಿಳಿಸಿರಿ'' ಎಂದನು. ದಶರಥನು ಹೀಗೆ

ನುಡಿಯುತ್ತಿರುವಾಗ ಅಲ್ಲಿ ನೆರೆದಿದ್ದ ಸಾಮಂತರಾಜರೂ ಇತರ ಪ್ರಜೆಗಳೂ ಸಹ, ಮಳೆ ಸುರಿಸುವ ಮೋಡವನ್ನು ಕಂಡು ಕೇಕೆ ಹಾಕುವ ನವಿಲುಗಳಂತೆ, ಹರ್ಷೋದ್ಗಾರಗಳನ್ನು ಮಾಡಿದರು. ಪೌರಮುಖ್ಯರು ಮಹಾರಾಜನನ್ನು ಕುರಿತು ''ಮಹಾರಾಜ, ನೀನು ವೃದ್ಧನಾಗಿದ್ದೀಯೆ. ಶ್ರೀರಾಮನಿಗೆ ಯುವರಾಜಪಟ್ಟಾಭಿಷೇಕವನ್ನು ನೆರವೇರಿಸು. ಅವನು ಪಟ್ಟಾಭಿಷಿಕ್ತನಾಗಿ ಪಟ್ಟದಾನೆಯ ಮೇಲೆ ಕುಳಿತು ಮೆರವಣಿಗೆಯಲ್ಲಿ ಬರುವುದನ್ನು ನೋಡಲು ನಮಗೆ ತುಂಬ ಆಸೆಯಾಗಿದೆ'' ಎಂದರು. ಪ್ರಜೆಗಳ ಆ ಮಾತನ್ನು ಕೇಳಿ ದಶರಥನಿಗೆ ಮನಸ್ಸಿನಲ್ಲಿ ತುಂಬ ಸಂತೋಷವಾಯಿತು. ಅವರ ಮುಖದಿಂದಲೇ ರಾಮನ ಸದ್ಗುಣಗಳನ್ನು ಕೇಳಬೇಕೆಂಬ ಆಸೆಯಿಂದ ಏನೂ ತಿಳಿಯದವನಂತೆ ನಟಿಸುತ್ತ ''ಎಲೈ ಸಾಮಂತರಾಜರೆ ಮತ್ತು ಪ್ರಜೆಗಳೆ, ನಾನು ಹೀಗೆಂದು ಹೇಳಿದೊಡನೆಯೇ ರಾಮನು ರಾಜನಾಗಲೆಂದು ಅಪೇಕ್ಷಿಸುತ್ತಿದ್ದೀರಲ್ಲ? ನನಗೆ ಸಂದೇಹವಾಗಿದೆ. ನಾನು ಧರ್ಮದಿಂದ ಸರಿಯಾಗಿ ರಾಜ್ಯವನ್ನು ಪಾಲಿಸುತ್ತಿಲ್ಲವೆ? ನನ್ನ ಮಗನು ರಾಜನಾಗಲಿ ಎಂದು ಬಯಸಲು ಕಾರಣವೇನು? ಸತ್ಯವನ್ನು ಹೇಳಿರಿ!'' ಎಂದನು. ಆಗ ಸಭಾಸದರೆಲ್ಲರೂ ಏಕಕಂಠದಿಂದ ಹೀಗೆಂದರು. ''ಮಹಾರಾಜ, ನಿನ್ನ ಪುತ್ರನಾದ ಶ್ರೀರಾಮನು ಸಮಸ್ತ ಸದ್ಗುಣಗಳಿಂದ ಭೂಷಿತನಾಗಿದ್ದಾನೆ. ಸತ್ಯಧರ್ಮಗಳನ್ನು ಎಂದಿಗೂ ತಪ್ಪಿ ನಡೆಯುವವನಲ್ಲ. ಮೃದುಸ್ವಭಾವದವನು. ಅವನ ಮನಸ್ಸು ಚಂಚಲವಲ್ಲ. ನಿಮ್ಮ ಇಕ್ಷ್ವಾಕು ವಂಶದಲ್ಲಿ ಇಂತಹ ಪುರುಷೋತ್ತಮನು ಇದುವರೆಗೆ ಹುಟ್ಟಿರಲಿಕ್ಕಿಲ್ಲ. ಮಹಾವೀರನೂ ಪ್ರಜೆಗಳನ್ನು ಬಹಳ ಪ್ರೀತಿಯಿಂದ ನೋಡತಕ್ಕವನೂ ಧೀಮಂತನೂ ಆದ ಶ್ರೀರಾಮನನ್ನು ಪ್ರೀತಿಸಿ ಗೌರವಿಸದಿರುವ ಯಾವ ಪ್ರಜೆ ಈ ಲೋಕದಲ್ಲಿದ್ದಾನೆ? ಈ ನಗರದಲ್ಲಿ ಇರುವ ಸಕಲ ಸ್ತ್ರೀಯರೂ ಪ್ರತಿದಿನ ಸಂಧ್ಯಾಕಾಲಗಳಲ್ಲಿ ರಾಜಕುಮಾರನಾದ ಶ್ರೀರಾಮನಿಗೆ ಒಳ್ಳೆಯದಾಗಲೆಂದು ದೇವರನ್ನು ಪ್ರಾರ್ಥಿಸುತ್ತಿದ್ದಾರೆ. ನೀನು ವೃದ್ಧನಾಗಿರುವೆಯೆಂದೂ, ವಿಶ್ರಾಂತಿ ಬೇಕಾಗಿದೆ ಎಂದೂ ಸ್ವತಃ ಹೇಳಿದ್ದರಿಂದ ಅದು ನಮಗೆ ಯೋಗ್ಯವಾಗಿ ತೋರಿತು. ನಿನ್ನ ರಾಜ್ಯಭಾರದಲ್ಲಿ ನಾವು ಯಾವ ಕಷ್ಟವನ್ನೂ ಅನುಭವಿಸಲಿಲ್ಲ, ಇದು ಸತ್ಯವಾದ ಮಾತು. ನಿನ್ನ ಅನಂತರ ಈ ಕೋಸಲ ರಾಜ್ಯಕ್ಕೆ ಶ್ರೀರಾಮನು ದೊರೆಯಾಗಿ ರಾಜ್ಯಭಾರ ಮಾಡಲೆಂದು ನಮ್ಮೆಲ್ಲರ ಅಭಿಪ್ರಾಯ. ನೀನು ಅನ್ಯಥಾ ಭಾವಿಸಬಾರದು'' ಎಂದರು. ಅವರ ಆಶಯವು ದಶರಥನಿಗೆ ಮೊದಲೇ ತಿಳಿದಿತ್ತು. ಆಗ ಸಮಾಧಾನಗೊಂಡಂತೆ ಆತನು ಸಂತೋಷಪಟ್ಟನು.

ಪ್ರಜೆಗಳೆಲ್ಲರಿಗೂ ರಾಮನ ಪಟ್ಟಾಭಿಷೇಕವು ಸಂಮತವಾಗಿದೆಯೆಂದು ತಿಳಿದು ದಶರಥನಿಗೆ ಆನಂದವಾಯಿತು. ಒಡನೆಯೇ ಅವನು ಕಾರ್ಯಪ್ರವೃತ್ತನಾದನು. ತನ್ನ

ಗುರುಗಳಾದ ವಸಿಷ್ಠ ಮಹರ್ಷಿಗಳನ್ನುದ್ದೇಶಿಸಿ ''ಭಗವನ್, ರಾಮನ ಪಟ್ಟಾಭಿಷೇಕಕ್ಕೆ ಒಂದು ಮುಹೂರ್ತವನ್ನು ಗೊತ್ತು ಮಾಡಬೇಕಾಗಿದೆ. ಆದಷ್ಟು ಬೇಗನೆ ಈ ಕಾರ್ಯವು ನಡೆಯಬೇಕೆಂದು ನನ್ನ ಅಭಿಲಾಷೆ'' ಎಂದನು. ಆಗ ವಸಿಷ್ಠಾದಿಗಳು ಇತರ ಬ್ರಾಹ್ಮಣರೊಡನೆ ಪರ್ಯಾಲೋಚಿಸಿ ಒಂದು ಮುಹೂರ್ತವನ್ನು ಗೊತ್ತು ಮಾಡಿದರು. ''ಮಹಾರಾಜ, ಈಗ ನಡೆಯುತ್ತಿರುವ ಚೈತ್ರಮಾಸವು ಮಂಗಳ ಕಾರ್ಯಕ್ಕೆ ಪ್ರಶಸ್ತವಾಗಿದೆ. ನಾಳೆ ಪುಷ್ಯನಕ್ಷತ್ರದಲ್ಲಿ ಈ ಶುಭ ಕಾರ್ಯವನ್ನು ಮಾಡಬಹುದು. ಆದರೆ ತುಂಬ ಅವಸರವಾಗುತ್ತದೆ'' ಎಂದರು. ದಶರಥನು ''ಮಹಾತ್ಮರೆ, ಚಿಂತೆ ಇಲ್ಲ, ನನ್ನ ಮನಸ್ಸಿನಲ್ಲಿ ಆದಷ್ಟು ಬೇಗನೆ ಈ ಕಾರ್ಯವನ್ನು ನಡೆಸಬೇಕೆಂದು ನಿಶ್ಚಯಿಸಿಕೊಂಡಿದ್ದೇನೆ. ಬಂಧುಗಳನ್ನೂ ಮಿತ್ರರನ್ನೂ ಈ ಉತ್ಸವಕ್ಕೆ ಆಹ್ವಾನಿಸುವುದು ಯುಕ್ತವೇ ಆದರೂ ಅದೀಗ ಸಾಧ್ಯವಾಗದು. ಈ ಶುಭಕಾರ್ಯವನ್ನು ಕೇಳಿ ಅವರೆಲ್ಲರೂ ಸಂತೋಷ ಪಡುವರು. ಆದ್ದರಿಂದ ನಾಳೆಯೇ ತಾವೆಲ್ಲರೂ ಕೃಪೆಯಿಟ್ಟು ಈ ಕಾರ್ಯವನ್ನು ನಡೆಸಿಕೊಡಬೇಕು. ನನ್ನನ್ನು ಅನುಗ್ರಹಿಸಬೇಕು'' ಎಂದು ಬೇಡಿಕೊಂಡನು. ರಾಜನ ಅಪೇಕ್ಷೆಗೆ ವಿರುದ್ಧವಾಗಿ ನುಡಿಯುವುದು ಸರಿಯಲ್ಲವೆಂದು ವಸಿಷ್ಠರು ಸಮ್ಮತಿಸಿದರು. ಆಮೇಲೆ ವಸಿಷ್ಠ ಮಹರ್ಷಿಗಳು ರಾಜಾಧಿಕಾರಿಗಳನ್ನು ಕರೆಸಿ ಪಟ್ಟಾಭಿಷೇಕಕ್ಕೆ ಬೇಕಾದ ಸಾಮಗ್ರಿಗಳೆಲ್ಲವನ್ನೂ ಕಲ್ಯಾಣ ಮಂಟಪದ ಎದುರಿಗಿರುವ ಅರಮನೆಯ ಅಂಗಳದಲ್ಲಿ ಸಿದ್ಧಪಡಿಸಿರಬೇಕೆಂದು ತಿಳಿಸಿದರು. ಪಟ್ಟಾಭಿಷೇಕಕ್ಕೆ ಸಂಬಂಧಿಸಿದಂತೆ ಆಚರಿಸಬೇಕಾದ ಇತರ ಶಾಸ್ತ್ರೀಯ ವಿಧಿಗಳನ್ನು ಮಹಾರಾಜನಿಗೆ ತಿಳಿಸಿ ವಸಿಷ್ಠರು ತೆರಳಿದರು. ದಶರಥನು ಸುಮಂತ್ರನನ್ನು ಕರೆದು 'ನೀನು ಹೋಗಿ ಧರ್ಮಶೀಲನಾದ ರಾಮನನ್ನು ಈಗಲೇ ಕರೆದುಕೊಂಡು ಬಾ' ಎಂದು ಹೇಳಿದನು. ರಾಜಾಜ್ಞೆಯಂತೆ ಈ ವಿಷಯವನ್ನು ಸುಮಂತ್ರನು ರಾಮನಿಗೆ ತಿಳಿಸಲಾಗಿ ಅವನು ತನ್ನ ಅರಮನೆಯಿಂದ ರಥವನ್ನೇರಿ ತಂದೆಯ ದರ್ಶನಕ್ಕಾಗಿ ಆಗಮಿಸಿದನು. ಇಷ್ಟು ಹೊತ್ತಿಗೆ ಪಟ್ಟಾಭಿಷೇಕದ ಸುದ್ದಿ ನಗರದಲ್ಲೆಲ್ಲಾ ಹರಡಿ ಪೌರರು ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದರು. ಶ್ರೀರಾಮನನ್ನು ಕಂಡು ಅವರೆಲ್ಲರೂ ಹರ್ಷೋದ್ಗಾರ ಮಾಡುತ್ತಿದ್ದರು. ರಥದಿಂದ ಇಳಿದು ಬರುತ್ತಿದ್ದ ಮಗನನ್ನು ಎಷ್ಟು ನೋಡಿದರೂ ದಶರಥನಿಗೆ ತೃಪ್ತಿಯಾಗಲಿಲ್ಲ. ಶ್ರೀರಾಮನು ದಶರಥನ ಪಾದಗಳಿಗೆ ಅಭಿವಾದನೆ ಮಾಡಿದನು. ದಶರಥನು ತನ್ನ ಪ್ರಿಯ ಪುತ್ರನನ್ನು ಕೈಹಿಡಿದು ತನ್ನ ಬಳಿಗೆ ಸೆಳೆದು ಆಲಿಂಗಿಸಿದನು. ತಂದೆಯ ಸೂಚನೆಯಂತೆ ಶ್ರೀರಾಮನು ಒಂದು ಸುವರ್ಣಪೀಠದಲ್ಲಿ ಕುಳಿತುಕೊಳ್ಳಲು, ದಶರಥನು ನಸುನಗುತ್ತ ಇಂತೆಂದನು. ''ವತ್ಸ–ರಾಮ, ನನ್ನ ಜ್ಯೇಷ್ಠಪತ್ನಿಯಾದ ಕೌಸಲ್ಯೆಯಲ್ಲಿ ನಮಗೆ ಅನುರೂಪನಾದ

ಮಗನಾಗಿ ಜನಿಸಿದ್ದೀಯೆ. ನಿನ್ನ ಸದ್ಗುಣಗಳಿಂದ ಪ್ರಜೆಗಳು ಸಂತುಷ್ಟರಾಗಿದ್ದಾರೆ. ನನಗೆ ವಯಸ್ಸಾಯಿತು. ನಾಳೆ ಪುಷ್ಯ ನಕ್ಷತ್ರದಲ್ಲಿ ನೀನು ಯುವರಾಜ ಪದವಿಯನ್ನು ವಹಿಸಿಕೊಳ್ಳಬೇಕು. ನಾನು ಅದಕ್ಕೆ ಎಲ್ಲ ಏರ್ಪಾಡುಗಳನ್ನೂ ಮಾಡಿದ್ದೇನೆ'' ಎಂದು ತಿಳಿಸಿ ಸಮಯೋಚಿತವಾದ ಅನೇಕ ರಾಜನೀತಿಗಳನ್ನು ಅವನಿಗೆ ಬೋಧಿಸಿದನು. ಮಹಾರಾಜನ ಸಮೀಪದಲ್ಲಿದ್ದ ಸೇವಕರೇ ಮೊದಲಾದವರು ಈ ಸಂಗತಿಯನ್ನು ಕೇಳಿ ಸಂಭ್ರಮದಿಂದ ಬೇಗ ಬೇಗನೆ ಹೋಗಿ ಕೌಸಲ್ಯಾದೇವಿಗೆ ಈ ಪಟ್ಟಾಭಿಷೇಕ ವೃತ್ತಾಂತವನ್ನು ತಿಳಿಸಿದರು. ಕೌಸಲ್ಯೆಯ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಅವಳು ಸಂತೋಷ ಸಂಭ್ರಮಗಳಿಂದ, ಆ ವೃತ್ತಾಂತವನ್ನು ತಿಳಿಸಿದವರಿಗೆಲ್ಲಾ ಬೆಲೆ ಬಾಳುವ ಪಾರಿತೋಷಕಗಳನ್ನಿತ್ತಳು. ಇತ್ತ ಶ್ರೀರಾಮನು ತಂದೆಗೆ ಅಭಿವಾದನೆ ಮಾಡಿ ರಥವನ್ನೇರಿ ತನ್ನ ಭವನಕ್ಕೆ ಹೋದನು. ರಾಜಸಭೆಯಲ್ಲಿದ್ದ ಸಕಲ ಪ್ರಜೆಗಳು ತಮ್ಮ ಆನಂದವನ್ನು ದಶರಥನಿಗೆ ನಿವೇದಿಸಿ ತಮ್ಮ ಮನೆಗಳಿಗೆ ತೆರಳಿದರು. ಮರುದಿನವೇ ರಾಜಪುತ್ರನಾದ ಶ್ರೀರಾಮನಿಗೆ ನಡೆಯುವ ಪಟ್ಟಾಭಿಷೇಕೋತ್ಸವವನ್ನು ನೋಡುವ ಕುತೂಹಲದಿಂದ ಎಲ್ಲರೂ ಅದೇ ವಿಷಯವನ್ನು ಮಾತಾಡುತ್ತ ಸಂಭ್ರಮೋಲ್ಲಾಸಗಳಿಂದ ಹರ್ಷಿಸುತ್ತಿದ್ದರು.

ಇತ್ತ ದಶರಥನಿಗೆ ಉತ್ಸಾಹ ಭರದಲ್ಲಿ ಇನ್ನೂ ಕೆಲವು ಮಾತುಗಳನ್ನು ಹೇಳಲಿಲ್ಲವೆಂದು ಆಲೋಚನೆ ಬಂದಿತು. ಆದ್ದರಿಂದ ಮತ್ತೆ ರಾಘವನನ್ನು ಕರೆಸಿ ಏಕಾಂತದಲ್ಲಿ ಹೇಳಿದನು. ''ವತ್ಸ, ನಾಳೆ ನೀನು ಪಟ್ಟಾಭಿಷಿಕ್ತನಾಗುವುದರಿಂದ ಈಗಿನಿಂದಲೇ ಸಪತ್ನೀಕನಾಗಿ ವ್ರತನಿಷ್ಠನಾಗಿರಬೇಕು. ಈ ರಾತ್ರಿ ಉಪವಾಸವಿದ್ದು ದರ್ಭೆಯ ಚಾಪೆಯ ಮೇಲೆ ಮಲಗಬೇಕು. ನಿನ್ನ ಆಪ್ತಸೇವಕರು ಸುತ್ತಲೂ ಎಚ್ಚರಿಕೆಯಿಂದ ನಿನ್ನನ್ನು ರಕ್ಷಿಸುತ್ತಿರಲಿ. ನಿನ್ನ ತಮ್ಮಂದಿರಾದ ಭರತ ಶತ್ರುಘ್ನರು ದೂರದಲ್ಲಿದ್ದಾರೆ. ಆದರೂ ಈ ಶುಭಕಾರ್ಯವು ನಡೆದು ಹೋಗಲಿ. ಧರ್ಮಾತ್ಮನೂ ವಿಧೇಯನೂ ಆದ ಭರತನಾಗಲಿ, ಶತ್ರುಘ್ನನಾಗಲಿ ಅನ್ಯಥಾ ಭಾವಿಸುವುದಿಲ್ಲ. ಒಳ್ಳೆಯ ಕಾರ್ಯವು ನಡೆದುಹೋಯಿತೆಂದು ಸಂತೋಷ ಪಡುವರು'' ಎಂದನು. ಶ್ರೀರಾಮನು ನಿನ್ನ ಇಚ್ಛೆಯಂತೆ ನಡೆಯಲೆಂದು ತಂದೆಗೆ ಹೇಳಿ ನಮಸ್ಕರಿಸಿ ಮತ್ತೆ ತನ್ನ ಭವನಕ್ಕೆ ತೆರಳಿದನು. ಅಲ್ಲಿ ಸೀತೆ ಇರಲಿಲ್ಲ. ತನ್ನ ತಾಯಿಗೆ ಈ ವೃತ್ತಾಂತವನ್ನು ತಿಳಿಸಬೇಕೆಂದು ಒಡನೆಯೇ ಕೌಸಲ್ಯೆಯ ಅಂತಃಪುರಕ್ಕೆ ಹೋದನು. ಅಲ್ಲಿ ಕೌಸಲ್ಯೆಯು ಪಟ್ಟೆ ಮಡಿಯನ್ನುಟ್ಟು, ದೇವರೆದುರಿಗೆ ಮೌನದಿಂದ ಕುಳಿತು ಮಗನಿಗೆ ಶ್ರೇಯಸ್ಸನ್ನು ಹಾರೈಸುತ್ತಿದ್ದಳು. ಅಷ್ಟರಲ್ಲಿ ಸೀತೆಯೂ, ಸುಮಿತ್ರೆಯೂ, ಲಕ್ಷ್ಮಣನೂ ಅಲ್ಲಿಗೆ ಬಂದು ಬಿಟ್ಟಿದ್ದರು. ಕೌಸಲ್ಯೆಯು ದೇವರ ಧ್ಯಾನದಲ್ಲಿ ತಲ್ಲೀನಳಾಗಿದ್ದಾಗ ಶ್ರೀರಾಮನು

ಅವಳಿಗೆ ನಮಸ್ಕಾರ ಮಾಡಿದನು. ಅವಳು 'ರಾಮ' ಎನ್ನುತ್ತ ಕಣ್ಣರಳಿಸಿ ಮಗನನ್ನು ನೋಡಿದಳು. ಶ್ರೀರಾಮನು ''ಅಮ್ಮಾ ಇನ್ನು ಮುಂದೆ ಪ್ರಜಾಪಾಲನೆಯ ಕಾರ್ಯ ವನ್ನು ನೋಡಿಕೊಳ್ಳಬೇಕೆಂದು ತಂದೆಯು ನನಗೆ ಆಜ್ಞಾಪಿಸಿದ್ದಾನೆ. ನಾಳೆ ನನಗೆ ಪಟ್ಟಾಭಿಷೇಕವು ನಡೆಯುವುದು. ಈ ದಿನ ರಾತ್ರಿಯೆಲ್ಲಾ ನಾನು ಉಪವಾಸವಿರ ಬೇಕೆಂದೂ ವ್ರತನಿಯಮವನ್ನು ಪಾಲಿಸಬೇಕೆಂದೂ ಮಹಾರಾಜನ ಆಜ್ಞೆಯಾಗಿದೆ. ಅದಕ್ಕೆ ಯೋಗ್ಯವಾದ ಮಂಗಳ ಕಾರ್ಯವನ್ನು ನನಗೂ ಸೀತೆಗೂ ಮಾಡಿಸು'' ಎಂದನು. ಬಹುಕಾಲದ ತನ್ನ ಬಯಕೆ ಕೈಗೂಡುವುದೆಂಬುದನ್ನು ತಿಳಿದು ಉಲ್ಲಾಸ ಗೊಂಡ ಕೌಸಲ್ಯೆಯ ಕಣ್ಣುಗಳಿಂದ ಆನಂದಬಾಷ್ಪಗಳು ತುಳುಕಿದವು. ಅವಳು ತೊದಲುತ್ತ ''ಮಗು–ರಾಮ, ಚಿರಂಜೀವಿಯಾಗು, ನಿನ್ನ ತಂದೆಯಾದ ದಶರಥ ಮಹಾರಾಜನನ್ನು ಸದ್ಗುಣಗಳಿಂದ ತೃಪ್ತಿಪಡಿಸಿದ್ದೀಯೆ. ಭಗವಂತನಲ್ಲಿ ನಾನು ಮಾಡಿದ ಸೇವೆ ಇಂದು ಫಲಿಸಿತು. ಮಗು, ಇಕ್ಷ್ವಾಕು ವಂಶದ ರಾಜ್ಯಲಕ್ಷ್ಮಿಯು ನಿನ್ನನ್ನು ಬಂದು ಸೇರುವಳು'' ಎಂದು ಹೇಳಿದಳು. ರಾಮನು ತನ್ನ ಬಳಿಯಲ್ಲಿ ಹರ್ಷದಿಂದ ನಿಂತಿದ್ದ ಲಕ್ಷ್ಮಣನ ಕೈಹಿಡಿದು ನಸುನಗುತ್ತ ''ಲಕ್ಷ್ಮಣ, ನನ್ನ ಜೊತೆಯಲ್ಲಿ ನೀನೂ ಈ ರಾಜ್ಯವನ್ನು ಆಳಬಹುದು! ನನಗೆ ಎರಡನೆಯ ಪ್ರಾಣವಾಗಿದ್ದೀಯೆ. ನನ್ನ ರಾಜ್ಯ, ರಾಜಭೋಗಗಳು ಎಲ್ಲವೂ ನಿನ್ನವೇ'' ಎಂದು ನುಡಿದು ತಾಯಂದಿರಿಗೆ ನಮಸ್ಕರಿಸಿ ಸೀತೆಯೊಡನೆ ತನ್ನ ಭವನಕ್ಕೆ ಹೋದನು.

ಇತ್ತಲಾಗಿ ದಶರಥನ ಪ್ರಾರ್ಥನೆಯಂತೆ ವಸಿಷ್ಠರು ಶ್ರೀರಾಮನ ಭವನಕ್ಕೆ ಹೋಗಿ ಅವನೂ ಸೀತೆಯೂ ಆ ರಾತ್ರಿಯಲ್ಲಿ ಮಾಡಬೇಕಾದ ಶಾಸ್ತ್ರೀಯ ವಿಧಿಗಳನ್ನು ತಿಳಿಸಿ ಹಿಂದಿರುಗಿದರು. ಬರುವಾಗ ರಾಜಬೀದಿಯಲ್ಲಿ ಪೌರರೆಲ್ಲರೂ ಸಂತೋಷದಿಂದ ನಲಿಯುತ್ತ ಮನೆ ಬಾಗಿಲುಗಳನ್ನು ಅಲಂಕರಿಸುತ್ತಿರುವುದನ್ನು ಕಂಡರು. ಅರಮನೆಯಲ್ಲಿ ಸಂಭ್ರಮ ಕೋಲಾಹಲಗಳು ತುಂಬಿದವು. ಕಲ್ಯಾಣ ಮಂಟಪದ ಬಳಿ ಮರುದಿನ ಪಟ್ಟಾಭಿಷೇಕಕ್ಕೆ ಬೇಕಾದ ಸಾಮಗ್ರಿಗಳು ಬಂದು ಸೇರುತ್ತಿದ್ದವು.

೧೫

ಮಂಥರೆಯ ದುರ್ಬೋಧನೆ

ಹೀಗೆ ಅರಮನೆಯಲ್ಲಿಯೂ ನಗರದ ಬೀದಿಗಳಲ್ಲಿಯೂ ಸಂಭ್ರಮದ ಏರ್ಪಾಡುಗಳು ನಡೆಯುತ್ತಿರುವಾಗ ಕೈಕೇಯಿಯ ದಾಸಿಯಾದ ಮಂಥರೆಯು ಮೇಲ್ಮಹಡಿಯನ್ನು ಅಕಸ್ಮಾತ್ತಾಗಿ ಹತ್ತಿಹೋದಳು. ಅವಳು ಕೈಕೇಯಿಯ ತವರು

ಮನೆಯಿಂದ ಬಂದ ದಾಸಿ. ಆದ್ದರಿಂದ ಕೈಕೇಯಿಯೊಡನೆ ತುಂಬ ಸಲಿಗೆಯಿಂದ ಮಾತಾಡಿಕೊಂಡಿದ್ದಳು. ಮುದುಕಿಯಾಗಿ ಗೂನು ಬೆನ್ನು ಇದ್ದುದರಿಂದ ಎಲ್ಲರೂ ಕುಬ್ಜೆ ಎಂದು ಕರೆಯುತ್ತಿದ್ದರು. ಮಹಡಿಯ ಮೇಲಿಂದ ಅವಳು ಸುತ್ತಲೂ ನೋಡಲಾಗಿ ಅರಮನೆಯ ರಾಜಬೀದಿಗಳಲ್ಲಿ ಜನರು ಸೇರಿರುವುದನ್ನೂ ತೋರಣಾದಿಗಳಿಂದ ಬೀದಿಗಳನ್ನು ಅಲಂಕರಿಸುತ್ತಿರುವುದನ್ನೂ ಕಂಡಳು. ಎಲ್ಲಿ ನೋಡಿದರೂ ಧ್ವಜಸ್ತಂಭ ಗಳನ್ನು ನಿಲ್ಲಿಸಿ ಬಾವುಟಗಳನ್ನು ಹಾರಿಸಿದ್ದರು. ಹಾಗೆಯೇ ಅರಮನೆಯ ಒಂದು ಭಾಗದಲ್ಲಿ ಮಂಗಳವಾದ್ಯಗಳು ಮೊಳಗುತ್ತಿದ್ದವು. ವೈದಿಕರು ವೇದಘೋಷವನ್ನು ಮಾಡುತ್ತಿದ್ದರು. ಇದೇನಿರಬಹುದೆಂದು ತಿಳಿಯಲು ಅವಳಿಗೆ ಕುತೂಹಲವಾಯಿತು. ಅಷ್ಟರಲ್ಲಿ ಇನ್ನೊಬ್ಬ ದಾಸಿಯು ಬಿಳಿಯ ದುಕೂಲವನ್ನುಟ್ಟು ಹರ್ಷವನ್ನು ಸೂಸುತ್ತ ಬರುತ್ತಿರುವುದನ್ನು ಕಂಡಳು. ಮಂಥರೆಯು ಆ ದಾಸಿಯನ್ನು ಕುರಿತು ''ಏನಮ್ಮಾ! ಜನರು ಏಕೆ ಹೀಗೆ ಹಿಡಿಸಲಾರದಷ್ಟು ಸಂತೋಷದಿಂದ ನಲಿಯುತ್ತಿದ್ದಾರೆ? ಅರಮನೆ ಯಲ್ಲಿಯೂ ಮಂಗಳ ವಾದ್ಯ ನಡೆಯುತ್ತಿದೆ. ಬೀದಿಯಲ್ಲಿಯೂ ಪ್ರಜೆಗಳು ಉಲ್ಲಾಸ ದಿಂದಿದ್ದಾರೆ. ಏನು ವಿಶೇಷ?'' ಎಂದು ಕೇಳಿದಳು. ಆ ದಾಸಿಯು ಆನಂದದಿಂದ ಹಿಗ್ಗುತ್ತ ಈ ಗೂನು ಬೆನ್ನಿನ ಮಂಥರೆಗೆ ಶ್ರೀರಾಮನ ಪಟ್ಟಾಭಿಷೇಕ ವೃತ್ತಾಂತವನ್ನು ತಿಳಿಸಿದಳು. ನಾಳೆ ಪುಷ್ಯ ನಕ್ಷತ್ರದಲ್ಲಿ ಪಟ್ಟಾಭಿಷೇಕವಾಗುವುದೆಂದು ಹೇಳಿ ಹೊರಟುಹೋದಳು. ಆ ಮಾತನ್ನು ಕೇಳಿದೊಡನೆ ಆ ಗೂನಿಗೆ ಸಹನೆ ತಪ್ಪಿಹೋಯಿತು. ಮೋರೆಯನ್ನು ಗಂಟಿಕ್ಕಿ ತಟ್ಟನೆ ಮಹಡಿಯಿಂದ ಕೆಳಗಿಳಿದು ಸಿಟ್ಟಿನಿಂದ ಉರಿಯುತ್ತ ಕೈಕೇಯಿ ಇರುವ ಸ್ಥಳಕ್ಕೆ ಹೋದಳು. ಕೈಕೇಯಿ ಹಾಸಿಗೆಯಲ್ಲಿ ಒರಗಿ ವಿಶ್ರಮಿಸುತ್ತಿದ್ದಳು. ಈ ಗೂನಿಯು ಕೋಣೆಯೊಳಗೆ ಹೋಗುತ್ತಲೇ ''ಅಯ್ಯೋ ಮೂಢೆ! ಏಳು ಏಳು, ಇನ್ನೂ ಮಲಗಿದ್ದೀಯಾ? ನಿನ್ನ ಕನಸಿನ ಗೋಪುರಕ್ಕೆ ಬೆಂಕಿ ಬಿದ್ದಿದೆ! ಕಷ್ಟದ ರಾಶಿಗಳು ನಿನ್ನನ್ನು ಮುತ್ತಿಕೊಂಡವು!'' ಎಂದು ಕೂಗಿದಳು. ಕೈಕೇಯಿಯು ಎದ್ದು ಕುಳಿತು, ''ಮಂಥರೆ, ಏನಾಯಿತು?'' ಎಂದು ಕೇಳಿದಳು. ಗೂನಿಯು ''ನನ್ನ ಗಂಡನಿಗೆ ನನ್ನ ಮೇಲೆ ಪರಮ ಪ್ರೀತಿ!'' ಎಂದು ಹೇಳಿಕೊಳ್ಳುತ್ತ ಮೆರೆಯುತ್ತಿದ್ದೆಯಲ್ಲಾ, ನಿನ್ನ ಜಂಬಕ್ಕೆ ಕಲ್ಲುಬಿದ್ದಿತು'' ಎಂದು ಕೈಕುಣಿಸುತ್ತ ನುಡಿದಳು. ಕೈಕೇಯಿಯು ಸ್ವಲ್ಪ ವಿಷಾದ ಪಡುತ್ತಾ ಮಂಥರೆ ''ಇದೇನು? ನಿನಗೆ ಆರೋಗ್ಯವಿಲ್ಲವೆ? ಬಹಳ ದುಃಖಿತಳಾಗಿರುವಂತೆ ಕಾಣುತ್ತೀಯಲ್ಲ'' ಎಂದಳು. ಆ ಗೂನಿಯು ಮಾತಾಡುವುದರಲ್ಲಿ ನಿಪುಣೆ. ಅವಳು ಮತ್ತಷ್ಟು ಮುಖ ವಿಕಾರಗಳನ್ನು ಮಾಡಿ ಕೈ ಹಿಸುಕಿಕೊಂಡು ''ರಾಣಿ, ನಿನ್ನನ್ನು ಶಾಶ್ವತವಾಗಿ ಹಾಳು ಮಾಡುವುದಕ್ಕಾಗಿ ಒಂದು ಭಾರೀ ಸಂಚು ನಡೆದಿದೆ. ದಶರಥ ರಾಜನು ರಾಮನಿಗೆ ಯುವರಾಜ ಪದವಿಯನ್ನಿತ್ತು ಪಟ್ಟಾಭಿಷೇಕ ಮಾಡುವನಂತೆ. ಇದು ನಾಳೆಯೇ ನಡೆಯುವುದಂತೆ''

ಎಂದಳು. ರಾಮನಿಗೆ ಪಟ್ಟಾಭಿಷೇಕವಾಗುವುದೆಂಬ ವೃತ್ತಾಂತವನ್ನು ಕೇಳಿ ಕೈಕೇಯಿಗೆ ಸಂತೋಷವೇ ಆಯಿತು. ಅವಳ ಮುಖವು ಅರಳಿತು. ಸಂತೋಷದ ಸುದ್ದಿಯನ್ನು ಹೇಳಿದಳೆಂದು ತನ್ನ ಕೊರಳಲ್ಲಿದ್ದ ಒಂದು ಹಾರವನ್ನು ಕುಬ್ಜೆಗೆ ಬಹುಮಾನವಾಗಿ ಕೊಟ್ಟಳು.

ಆಗ ಮಂಥರೆಯು ಆ ಮುತ್ತಿನ ಹಾರವನ್ನು ಸಿಟ್ಟಿನಿಂದ ತೆಗೆದು ಬಿಸಾಡಿದಳು. ''ಎಲೈ ಮೂಢಳೆ, ಇಂತಹ ಘೋರ ವಿಪತ್ತಿನ ಸಮಯದಲ್ಲಿ ಸಂತೋಷ ಪಡುವೆಯಾ? ನಿನ್ನ ಬುದ್ಧಿಗೇಡಿತನಕ್ಕೆ ನನಗೆ ದುಃಖವಾಗುತ್ತಿದೆ. ಸವತಿಯ ಮಗನೆಂದರೆ ಶತ್ರುವೇ ಸರಿ. ನಿನ್ನ ಮಗನಾದ ಭರತನಿಗೆ ರಾಜ್ಯದಲ್ಲಿ ಸಮಾನವಾದ ಅಧಿಕಾರವಿದೆ. ಮುಂದೆ ಭರತನಿಗೆ ರಾಮನಿಂದ ಕೇಡಾಗಬಹುದು. ರಾಮನು ಬುದ್ಧಿವಂತ. ಲಕ್ಷ್ಮಣನು ಬೇರೆ ಅವನಿಗೆ ಬೆಂಬಲವಾಗಿದ್ದಾನೆ. ಮುಂದೆ ಭರತನ ಗತಿ ಏನೆಂದು ಚಿಂತಿಸಿದರೆ, ನನಗೆ ಭಯವಾಗುತ್ತದೆ. ಇಂಥ ಸಮಯದಲ್ಲಿ ಸಂತೋಷದಿಂದ ನನಗೆ ಮುತ್ತಿನ ಸರವನ್ನು ಕೊಡುತ್ತೀಯಾ?'' ಎಂದು ಕೈಕೇಯಿಗೆ ಹೇಳಿದಳು. ಮಂಥರೆಯ ಈ ಕೆಟ್ಟ ಮಾತುಗಳು ಕೈಕೇಯಿಯ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ. ಅವಳು ಕುಬ್ಜೆಯನ್ನು ಕುರಿತು ಹೀಗೆಂದಳು : ''ಎಲೈ ಕುಬ್ಜೆ, ರಾಮನಿಗೆ ಅಭಿಷೇಕವಾಗುವುದೆಂಬುದನ್ನು ಕೇಳಿ ನೀನೇಕೆ ಉರಿದು ಬೀಳುತ್ತೀಯೆ? ರಾಮನು ಧರ್ಮಾತ್ಮನು. ಸತ್ಯಸಂಧ, ಕೃತಜ್ಞ, ಮಹಾರಾಜನಿಗೆ ಅವನು ಹಿರಿಯ ಮಗನಾದ್ದರಿಂದ ಯುವರಾಜ ಪದವಿಗೆ ಅರ್ಹನಾಗಿದ್ದಾನೆ. ನನ್ನನ್ನು ಬಹಳ ವಿನಯದಿಂದ, ಪ್ರೀತಿಯಿಂದ ಸೇವಿಸುತ್ತಿದ್ದಾನೆ. ತನ್ನ ಹಡೆದ ತಾಯಿಯಾದ ಕೌಸಲ್ಯೆಯಲ್ಲಿಯೂ ಸಹ ಇಷ್ಟು ಆದರವನ್ನು ಇಟ್ಟಿದ್ದಾನೋ ಇಲ್ಲವೋ ಹೇಳಲಾಗದು. ಸರ್ವರಿಗೂ ಅತ್ಯಂತ ಪ್ರಿಯನಾದ ರಾಜಪುತ್ರ ಅವನು. ಅವನು ಎಂದಿಗೂ ಭರತನಿಗೆ ಕೇಡನ್ನು ಬಯಸುವುದಿಲ್ಲ. ನಾನು ''ರಾಮ, ನನ್ನ ಮಗ ಭರತನಿಗೆ ರಾಜ್ಯವನ್ನೊಪ್ಪಿಸು'' ಎಂದು ಹೇಳಿದರೆ ಅವನೆಂದಿಗೂ ಹಿಂದು ಮುಂದೆ ನೋಡತಕ್ಕವನಲ್ಲ. ಅಂಥ ಗುಣಶಾಲಿಗೆ ಪಟ್ಟಾಭಿಷೇಕವಾದರೆ ನನಗೆ ಬರುವ ವಿಪತ್ತೇನು? ರಾಜ್ಯವು ರಾಮನಿಗೆ ಸೇರಿದರೂ ಒಂದೇ ಭರತನಿಗೆ ಸೇರಿದರೂ ಒಂದೇ'' ಎಂದಳು. ಆಗ ಅತ್ಯಂತ ಚಾಡಿಕೋರಳಾದ ಕುಬ್ಜೆಗೆ ಆ ಮಾತನ್ನು ಸಹಿಸಲಾಗಲಿಲ್ಲ. ಅವಳು ಕೈಗಳನ್ನು ಕುಣಿಸುತ್ತ ಕೈಕೇಯಿಯನ್ನು ಹಂಗಿಸಿ ಹೀಗೆಂದಳು. ''ಕೈಕೇಯಿ, ನೀನು ಚಿಕ್ಕವಳು. ಲೋಕವನ್ನೇನು ಬಲ್ಲೆ? ಯಾವ ಹೊತ್ತಿಗೆ ಯಾರು ಹೇಗೆ ಬದಲಾಯಿಸುತ್ತಾರೆಂಬುದು ನಿನಗೆ ತಿಳಿಯದು. ನಿನ್ನ ಮೂರ್ಖತನದಿಂದ ಮುಂದೆ ಬರುವ ಅನರ್ಥವು ನಿನಗೆ ಹೊಳೆಯುವುದಿಲ್ಲ. ಕಷ್ಟಪರಂಪರೆಯೇ ನಿನಗೆ ಕಾದಿದೆ. ರಾಮನು ರಾಜನಾದರೆ ಮುಂದೆ ಅವನ ಮಗನೇ ರಾಜನಾಗುತ್ತಾನೆ. ನಿನ್ನ

ಸಂತತಿಗೆ ರಾಜ್ಯವು ಕೈತಪ್ಪಿಹೋಗುವುದು. ರಾಮನ ಮಗ ಹೇಗಿರುತ್ತಾನೋ ಯಾರು ಬಲ್ಲರು? ನಿನ್ನ ಮಕ್ಕಳು ಮೊಮ್ಮಕ್ಕಳು ಅವರ ಸೇವಕರಾಗಿರಬೇಕು, ಇಲ್ಲವೇ ದೇಶವನ್ನು ಬಿಟ್ಟು ಹೋಗಬೇಕು – ಎಂಬ ಪರಿಸ್ಥಿತಿ ಬರುತ್ತದೆ. ಅಧಿಕಾರವೇನೂ ಇಲ್ಲದ್ದರಿಂದ ರಾಮನು ಒಳ್ಳೆಯವನಂತೆ ನಟಿಸುತ್ತಿದ್ದಾನೆ. ಅವನಿಗೆ ಪಟ್ಟಾಭಿಷೇಕವಾದ ಮೇಲೆ ನಿನ್ನನ್ನು ಸೇವಿಸಲು ಬರುತ್ತಾನೋ? ನಿನ್ನನ್ನು ಕಣ್ಣೆತ್ತಿಯೂ ಅವನು ನೋಡುವುದಿಲ್ಲ! ನೀನು ಕೌಸಲ್ಯೆಯನ್ನೂ ದೂರವಿಟ್ಟಿದ್ದೀಯೆ. ಅವಳಿಗೂ ನಿನ್ನನ್ನು ಕಂಡರಾಗದು. ಆದರೆ ಏನು ಮಾಡಲೂ ಕೈಲಾಗದೆ ಸುಮ್ಮನಿದ್ದಾಳೆ. ಮಹಾರಾಜನು ನಿನ್ನಲ್ಲಿ ಅನುರಕ್ತನಾಗಿದ್ದಾನೆಂದು ತೆಪ್ಪಗಿದ್ದಾಳೆ. ಅವಳ ಮಗನು ರಾಜನಾದರೆ ಆಗ ಈ ಸೇಡನ್ನು ತೀರಿಸಿಕೊಳ್ಳದೆ ಬಿಡುವುದಿಲ್ಲ. ದಶರಥನಾದರೋ ಮುದುಕ. ಅವನನ್ನು ಕೇಳುವವರು ಯಾರು? ಇಷ್ಟಾಗಿ ಅವನು ನಿನ್ನಲ್ಲಿ ಪ್ರೀತಿಯಿಟ್ಟಿದ್ದಾನೆಂಬುದೂ ಸುಳ್ಳು. ನಿನ್ನನ್ನು ಸಂತೋಷ ಪಡಿಸುವುದಕ್ಕಾಗಿ ಹಾಗೆ ನಟಿಸುತ್ತಿದ್ದಾನೆ. ಪ್ರೀತಿ ಇರುವುದೇ ಹೌದಾದರೆ ರಾಮನ ಅಭಿಷೇಕ ವಾರ್ತೆಯನ್ನು ನಿನಗೇಕೆ ತಿಳಿಸಲಿಲ್ಲ? ಭರತನು ದೂರದೇಶದಲ್ಲಿರುವಾಗಲೇ ಪಟ್ಟಾಭಿಷೇಕ ಮಾಡಲು ನಿರ್ಣಯಿಸಿದ್ದೇಕೆ? ನಾಳೆಯೇ ಪಟ್ಟಾಭಿಷೇಕ ಎಂಬ ಹಟ ಏಕೆ? ಆದ್ದರಿಂದ ಕೌಸಲ್ಯೆಯೊಡನೆ ಆಲೋಚನೆ ಮಾಡಿ ಭರತನು ಇಲ್ಲದಿರುವಾಗಲೇ ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ನಿರ್ಣಯಿಸಿದ್ದಾನೆ. ಬುದ್ಧಿಯಿರುವ ಯಾರಿಗಾದರೂ ಇದು ಹೊಳೆಯುತ್ತದೆ. ಇದು ನಿನ್ನನ್ನು ದೂರವಿಡಲು ಮಾಡಿದ ಸಂಚು. ಈ ಸಮಯದಲ್ಲಿ ರಾಜನು ಭರತನನ್ನೇಕೆ ಕರೆಸಿಕೊಳ್ಳಬಾರದು? ಅಂಥ ಅವಸರವೇನು? ರಾಮನಿಗೆ ರಾಜ್ಯವು ಸಿಕ್ಕಿದರೆ ಭರತನಿಗೆ ಕಷ್ಟವು ನಿಶ್ಚಿತ. ಈ ಕಂಟಕವು ತೊಲಗಿ ಹೋಗಲೆಂದು ರಾಮನು ಭರತನನ್ನು ದೇಶಭ್ರಷ್ಟನನ್ನಾಗಿ ಮಾಡಿದರೂ ಆಶ್ಚರ್ಯವಿಲ್ಲ! ಇಲ್ಲವೇ ಗೂಢವಾಗಿ ಕೊಲ್ಲಿಸಿದರೂ ಕೊಲ್ಲಿಸಬಹುದು. ಆ ಲಕ್ಷ್ಮಣನು ರಾಮನಿಗೆ ತುಂಬ ಅನುಕೂಲವಾಗಿದ್ದಾನೆ. ಅವರಿಬ್ಬರ ಸ್ನೇಹ ಲೋಕ ಪ್ರಸಿದ್ಧವಾಗಿದೆ. ನೀನೂ ಕಣ್ಣಲ್ಲಿ ನೋಡುತ್ತಿದ್ದೀಯೆ. ಅವನ ತಮ್ಮ ಶತ್ರುಘ್ನ. ಆದ್ದರಿಂದ ಲಕ್ಷ್ಮಣ ಶತ್ರುಘ್ನರಿಗೆ ಯಾವ ಕೇಡೂ ಒದಗುವುದಿಲ್ಲ. ಎಲ್ಲ ಕಷ್ಟವೂ ಒದಗುವುದು ನಿನ್ನ ಮಗನಿಗೆ. ನೀನು ಆಗಾಗ ಭರತನನ್ನು ಸೋದರ ಮಾವನ ಮನೆಗೆ ಕಳಿಸಿಬಿಡುತ್ತೀಯೆ. ಅವನು ಅಲ್ಲಿಯೇ ಸುಖವಾಗಿದ್ದು ಬಿಡುತ್ತಾನೆ. ಹೀಗಾಗಿ ನಿನ್ನ ಗಂಡನಿಗೂ ಭರತನಲ್ಲಿ ಹೆಚ್ಚು ಪ್ರೀತಿ ಉಂಟಾಗಲೇ ಇಲ್ಲ. ಹತ್ತಿರದಲ್ಲಿದ್ದರಲ್ಲವೇ ಪ್ರೀತಿ ಬೆಳೆಯುತ್ತದೆ. ಪ್ರಜೆಗಳಿಗೆ ಸಹ ಭರತನು ಅಪರಿಚಿತನಾಗಿದ್ದಾನೆ. ಪ್ರಜಾನುರಾಗವಿಲ್ಲದವರನ್ನು ಯಾರು ಬೆಂಬಲಿಸುತ್ತಾರೆ? ಇಷ್ಟೂ ನಿನಗೆ ತಿಳಿಯದೇ ಹೋಯಿತಲ್ಲ? ಎಂತಹ ಮೂರ್ಖಳು ನೀನು!'' ಇತ್ಯಾದಿಯಾಗಿ ನಾನಾ ಪ್ರಕಾರದಲ್ಲಿ ದುರ್ಬೋಧನೆ ಮಾಡಿದಳು. ಅವಳ

ಮಾತುಗಳನ್ನು ಕೇಳುತ್ತ ಹೋದಂತೆ ಕೈಕೇಯಿಯ ಮನಸ್ಸು ಕದಡಿತು. ಆ ಗೂನಿಯು ಹೇಳಿದುದೆಲ್ಲಾ ಸರಿ ಎನ್ನಿಸಿತು. ಅವಳಿಗೆ ಸ್ವತಂತ್ರವಾಗಿ ವಿಚಾರ ಮಾಡುವ ಶಕ್ತಿ ಇಲ್ಲದ್ದರಿಂದ ಕುಬ್ಜೆಯ ಚಾಡಿ ಮಾತನ್ನು ನಂಬಿ ಚಿಂತಾಕ್ರಾಂತಳಾದಳು. ಅವಳ ಮಾತಿನ ಪ್ರಭಾವಕ್ಕೆ ಒಳಗಾಗಿ ದುಃಖಿತಳಾದಳು. ಹಾಗೆಯೇ ದಶರಥನ ಮೇಲೆ ಅವಳಿಗೆ ಕೋಪ ಹುಟ್ಟಿತು. ಮುಖವು ಕೆಂಪೇರಿತು. ಅವಳು ಮಂಥರೆಯನ್ನು ಕುರಿತು ''ಮಂಥರೆ, ನೀನು ಹೇಳುತ್ತಿರುವುದು ನಿಜ. ಮಹಾರಾಜನು ನನ್ನನ್ನು ಕಡೆಗಣಿಸಿ ಈ ಕೆಲಸದಲ್ಲಿ ತೊಡಗಿದ್ದಾನೆ. ಭರತನಿಗೆ ರಾಜ್ಯದಲ್ಲಿ ಯುವರಾಜ ಪಟ್ಟಾಭಿಷೇಕವಾಗ ಬೇಕು. ರಾಮನೇ ಇಲ್ಲಿಂದ ತೊಲಗಿ ಹೋಗಬೇಕು. ಆದರೆ ಇದಕ್ಕೆ ಉಪಾಯವೇನು? ಈ ಸಮಯದಲ್ಲಿ ಏನು ಮಾಡಬೇಕೆಂಬುದು ನನಗೆ ಹೊಳೆಯುವುದಿಲ್ಲ'' ಎಂದಳು. ಒಡತಿಯ ಮಾತನ್ನು ಕೇಳಿ ಪಾಪಿಷ್ಠೆಯಾದ ಮಂಥರೆಗೆ ಸಮಾಧಾನವಾಯಿತು. ಇವಳು ದಾರಿಗೆ ಬಂದಳು – ಎಂದು ತಿಳಿದು ರಾಮನ ಪಟ್ಟಾಭಿಷೇಕವನ್ನು ತಪ್ಪಿಸುವುದಕ್ಕಾಗಿ ಒಂದು ಉಪಾಯವನ್ನು ಹೇಳಿದಳು. ''ಕೈಕೇಯಿ, ನನ್ನನ್ನು ಕೇಳಿದ್ದರಿಂದ ಹೇಳುತ್ತೇನೆ. ನಿನಗೇ ಅದು ಹೊಳೆಯಬೇಕಾಗಿತ್ತು, ನನ್ನ ಬಾಯಿಯಿಂದ ಹೇಳಿಸಿಕೊಳ್ಳಬೇಕೆಂದು ನಿನ್ನ ಇಚ್ಛೆಯಾಗಿರಬೇಕು'' ಎಂದಳು. ಒಡನೆಯೇ ಕೈಕೇಯಿಯು ಹಾಸಿಗೆಯಿಂದ ಎದ್ದು ಸರಿಯಾಗಿ ಕುಳಿತು ''ಅದು ಯಾವ ಉಪಾಯ ಮಂಥರೆ? ಭರತನಿಗೆ ರಾಜ್ಯ ಸಿಗಬೇಕು. ರಾಮನಿಗೆ ಸಿಗಬಾರದು'' ಎಂದಳು.

ಆಗ ಮಂಥರೆಯು ಹಿಂದೆ ನಡೆದ ಒಂದು ಸಂದರ್ಭವನ್ನು ನೆನಪು ಮಾಡಿದಳು. ''ಕೈಕೇಯಿ, ಹಿಂದೆ ದೇವಾಸುರ ಸಂಗ್ರಾಮದಲ್ಲಿ ದೇವೇಂದ್ರನಿಗೆ ಸಹಾಯ ಮಾಡುವುದಕ್ಕಾಗಿ ದಶರಥನು ಅಸುರರೊಡನೆ ಯುದ್ಧ ಮಾಡಲು ಹೋಗಿದ್ದನಷ್ಟೆ. ಅವನ ಜೊತೆಗೆ ನೀನೂ ಹೋಗಿದ್ದೆ. ಯುದ್ಧದಲ್ಲಿ ಗಾಯಗೊಂಡು ಮೂರ್ಛಿತನಾದ ದಶರಥನ ರಥವನ್ನು ಸುರಕ್ಷಿತವಾದ ಸ್ಥಳಕ್ಕೆ ನೀನು ತೆಗೆದುಕೊಂಡು ಹೋಗಿ ಅವನ ಶುಶ್ರೂಷೆ ಮಾಡಿದ್ದೀಯೆ. ಆದರಿಂದ ಸಂತುಷ್ಟನಾದ ನಿನ್ನ ಗಂಡನು ''ಎರಡು ವರಗಳನ್ನು ಕೇಳಿಕೊ, ಕೊಡುತ್ತೇನೆ'' ಎಂದು ನಿನಗೆ ಹೇಳಿದನು. ನೀನು ''ಮಹಾರಾಜ, ನನಗೀಗ ಯಾವುದಕ್ಕೆ ಕಡಿಮೆಯಾಗಿದೆ? ನಾನು ಕೇಳಿಕೊಳ್ಳ ಬೇಕಾದದ್ದು ಏನೂ ಇಲ್ಲ. ಇವು ನಿನ್ನಲ್ಲಿಯೇ ಇರಲಿ. ಮುಂದೆ ಬೇಕಾದಾಗ ಕೇಳಿಕೊಳ್ಳುತ್ತೇನೆ'' ಎಂದು ಹೇಳಿದ್ದೀಯೆ. ಮಹಾರಾಜನು ಹಾಗೆಯೇ ಆಗಲಿ ಎಂದು ಒಪ್ಪಿದ್ದಾನೆ. ಈ ವಿಚಾರವನ್ನು ನೀನೇ ನನಗೆ ಹೇಳಿದ್ದೀಯೆ. ಈಗ ಆ ವರಗಳನ್ನು ಕೇಳಿಕೊಳ್ಳಲು ಸಮಯ ಬಂದಿದೆ. ನನ್ನ ಮಗನಾದ ಭರತನಿಗೆ ಪಟ್ಟಾಭಿಷೇಕ ಮಾಡಬೇಕೆಂಬುದು ಮೊದಲನೆಯ ವರವಾಗಲಿ. ರಾಮನು ಹದಿನಾಲ್ಕು ವರ್ಷ

ವನವಾಸಕ್ಕೆ ಹೋಗಬೇಕು ಎಂಬುದು ಎರಡನೆಯ ವರವಾಗಲಿ. ಏಕೆಂದರೆ ರಾಮನು ಅಯೋಧ್ಯೆಯಲ್ಲಿಯೇ ಇದ್ದರೆ ಏನಾದರೂ ಉಪದ್ರವ ತಲೆದೋರೀತು. ಪ್ರಜೆಗಳು ಅವನ ಕಡೆಗೆ ತಿರುಗಿ ಬಿಟ್ಟಾರು. ಹದಿನಾಲ್ಕು ವರುಷ ಅವನ ಸುಳಿವಿಲ್ಲದೆ ಹೋದರೆ ಕಾಡಿನಲ್ಲಿ ರಾಮನು ಅರಾಮನಾಗಿ ಬಿಡುತ್ತಾನೆ! ಅಷ್ಟರಲ್ಲಿ ಜನಗಳೂ ಅವನನ್ನು ಮರೆತು ಬಿಡುತ್ತಾರೆ'' ಎಂದಳು. ಕೈಕೇಯಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಎಷ್ಟು ಬುದ್ಧಿಶಾಲಿ ಈ ಮಂಥರೆ! ಎಂದು ಅವಳನ್ನು ಹೊಗಳಿದಳು. ''ಮಂಥರೆ, ಎಂತಹ ಚತುರೆ ನೀನು! ಈ ಚಾತುರ್ಯಗಳೆಲ್ಲ ನಿನ್ನ ಬೆನ್ನಿನ ಈ ಡುಬ್ಬದಲ್ಲಿ ಅಡಗಿದ್ದವೆಂದು ತೋರುತ್ತದೆ! ಭರತನು ರಾಜನಾದ ಮೇಲೆ ಈ ಡುಬ್ಬಕ್ಕೆ ಒಂದು ಚಿನ್ನದ ಒಡವೆಯನ್ನು ಮಾಡಿಸಿ ಹಾಕುತ್ತೇನೆ! ಈ ಅಂತಃಪುರದಲ್ಲಿರುವ ದಾಸಿಯರಲ್ಲಿ ನೀನೇ ಪರಮ ಸುಂದರಿಯಾಗಿದ್ದೀಯೆ!'' ಎಂದು ಹೊಗಳಿದಳು. ಆಗ ಗೂನಿಯು ಸಂತೋಷದಿಂದ ಹಿಗ್ಗುತ್ತ ''ಕೈಕೇಯಿ, ಏಳು, ಏಳು, ನೀನು ಈಗಲೇ ಅತ್ಯಂತ ಕ್ರೋಧಗೊಂಡವಳಂತೆ ನಟಿಸುತ್ತ ಕ್ರೋಧಾಗಾರದಲ್ಲಿ ಮಲಗಿರು. ರಾಜನು ನಿನ್ನ ಬಳಿಗೆ ಬಂದೇ ಬರುವನು. ಆಗ ಈ ಎರಡು ವರಗಳನ್ನು ಕೊಡುವಂತೆ ನಿರ್ಬಂಧ ಪಡಿಸಿ ಅವನು ಒಪ್ಪಿದ ಮೇಲೆ ವರಗಳು ಏನೆಂಬುದನ್ನು ತಿಳಿಸು. ತಡಮಾಡಬೇಡ. ನೀರು ಹರಿದು ಹೋದಮೇಲೆ ಅಡ್ಡಕಟ್ಟೆಯನ್ನು ಹಾಕಿದರೆ ಏನು ಫಲ?'' ಎಂದಳು. ಒಡನೆಯೇ ಕೈಕೇಯಿಯು ತನ್ನ ಮೈಮೇಲಿದ್ದ ಒಡವೆಗಳನ್ನೆಲ್ಲ ಕಿತ್ತೆಸೆದು ಮಲಿನವಾದ ಸೀರೆಯನ್ನುಟ್ಟು ಕೋಪಾಗಾರಕ್ಕೆ ಹೋಗಿ ನಿಟ್ಟುಸಿರುಬಿಡುತ್ತಾ ನೆಲದ ಮೇಲೆ ಮಲಗಿದಳು. ಈ ಪ್ರಕಾರ ಕುಬ್ಜೆಯು ದುರ್ಬೋಧನೆ ಮಾಡಿ ಕೈಕೇಯಿಗೆ ತಪ್ಪು ದಾರಿಯನ್ನು ತೋರಿಸಿದಳು. ಅವಳು ಹೇಳಿದ ಚಾಡಿಯ ಮಾತುಗಳಿಂದ ನಾನಾ ವಿಪತ್ತುಗಳು ಬಂದೊದಗಿದವು.

೧೬

ಕೈಕೇಯಿಯ ಎರಡು ವರಗಳು. ವನವಾಸಕ್ಕೆ ಹೋಗಲು ಶ್ರೀರಾಮನ ನಿಶ್ಚಯ

ಇತ್ತಲಾಗಿ ದಶರಥ ಮಹಾರಾಜನು ಪಟ್ಟಾಭಿಷೇಕದ ಏರ್ಪಾಡುಗಳೆಲ್ಲವನ್ನೂ ಮಾಡುವಂತೆ ಸೂಚಿಸಿ ತನ್ನ ಪ್ರಿಯೆಯಾದ ಕೈಕೇಯಿಗೆ ಈ ವೃತ್ತಾಂತವನ್ನು ತಿಳಿಸುವುದಕ್ಕಾಗಿ ಅವಳ ಅಂತಃಪುರಕ್ಕೆ ಹೋದನು. ಅಲ್ಲಿ ಕೈಕೇಯಿ ಇಲ್ಲದ್ದನ್ನು ಕಂಡು ಅವಳು ಎಲ್ಲಿ ಹೋದಳೆಂದು ವಿಚಾರಿಸಿದಾಗ, ಅವಳು ಕೋಪಾಗಾರಕ್ಕೆ ಹೋಗಿರುವುದಾಗಿ ತಿಳಿದು ಬಂದಿತು. ಅವನು ಚಿಂತಾಕ್ರಾಂತನಾಗಿ ಅಲ್ಲಿಗೆ ಹೋದನು.

ಸರಳ ಸ್ವಭಾವದ ಆ ರಾಜನು ಕಿತ್ತೆಸೆದ ಬಳ್ಳಿಯಂತೆ ನೆಲದ ಮೇಲೊರಗಿದ್ದ ಕೈಕೇಯಿಯನ್ನು ಕಂಡನು. ಅವನಿಗೆ ಬಹಳ ವ್ಯಥೆಯಾಯಿತು. ಕಾಡಿನಲ್ಲಿ ಯಾವುದೋ ಪೆಟ್ಟಿನಿಂದ ನರಳುವ ಹೆಣ್ಣಾನೆಯನ್ನು ಸಲಗವು ಸೊಂಡಿಲಿನಿಂದ ನೇವರಿಸುವಂತೆ ಅವನು ಕೈಕೇಯಿಯನ್ನು ತನ್ನ ಕೈಯಿಂದ ನೇವರಿಸುತ್ತ ಹೀಗೆಂದನು. ''ದೇವಿ, ನಿನಗೆ ಇಷ್ಟು ಕೋಪವೇಕೆ ಬಂದಿತೆಂಬುದು ನನಗೆ ತಿಳಿಯದು. ನಿನ್ನ ಅಸಮಾಧಾನಕ್ಕೆ ಕಾರಣವಾದರೂ ಏನು? ಯಾರಿಂದಾದರೂ ನಿನಗೆ ಅವಮಾನವಾಯಿತೆ? ಅವರು ಯಾರೆಂದು ಹೇಳಿದರೆ ಸರಿಯಾದ ರೀತಿಯಲ್ಲಿ ದಂಡಿಸುವೆನು. ನಿನ್ನ ಯಾವ ಬಯಕೆಯನ್ನಾದರೂ ಪೂರೈಸುವೆನು. ಮಹಾರಾಜನಾದ ನನಗೆ ಯಾವ ಕೊರತೆಯೂ ಇಲ್ಲ. ಹೇಳು ಹೇಳು'' ಎಂದು ಮತ್ತೆ ಮತ್ತೆ ಕೇಳಿದನು. ಕೈಕೇಯಿಯು ಯಾವ ಮಾತನ್ನೂ ಆಡದೆ ತನ್ನ ಮುಖವನ್ನು ಮರೆಸಿಕೊಳ್ಳುತ್ತಾ ಬಹಳ ಹೊತ್ತು ಮೌನ 'ದಿಂದಲೇ ಇದ್ದಳು. ದಶರಥನಿಗೆ ಏನು ಮಾಡಬೇಕೆಂಬುದು ತೋರಲಿಲ್ಲ. ''ಪ್ರಿಯೆ, ನೀನೇಕೆ ಮಾತಾಡುವುದಿಲ್ಲ? ಖಂಡಿತವಾಗಿಯೂ ನಿನ್ನ ಇಚ್ಛೆಯನ್ನು ನೆರವೇರಿಸುತ್ತೇನೆ. ಅದು ಎಷ್ಟು ಕಠೋರವಾಗಿದ್ದರೂ ನಡೆಸುತ್ತೇನೆ. ಇದೋ, ನನ್ನ ಮಗನಾದ ರಾಮನಿಗಿಂತ ಪ್ರಿಯರಾದವರು ನನಗೆ ಈ ಜಗತ್ತಿನಲ್ಲಿ ಇನ್ನೊಬ್ಬರಿಲ್ಲ. ನನ್ನ ಜೀವಕ್ಕೆ ಆಧಾರವಾದ ರಾಮನ ಹೆಸರಿನಲ್ಲಿ ಶಪಥ ಮಾಡುತ್ತೇನೆ. ಆಣೆ ಇಡುತ್ತೇನೆ. ನಿನಗೆ ಬೇಕಾದ್ದನ್ನು ಸಲ್ಲಿಸುತ್ತೇನೆ. ಇದು ಸತ್ಯ'' ಎಂದು ಹೇಳಿದನು. ಆಗ ಕೈಕೇಯಿಯು ಎದ್ದು ಕುಳಿತಳು. ಮತ್ತೆ ರಾಜನು ''ಪ್ರಿಯೆ, ಕೋಪವನ್ನು ತ್ಯಜಿಸು. ನಾನು ಸಂಪಾದಿಸಿದ ಪುಣ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ'' ಎಂದನು. ದಶರಥನ ಈ ಶಪಥ ವಾಕ್ಯದಿಂದ ಕೈಕೇಯಿಗೆ ಸಂತೋಷವಾಯಿತು. ''ಮಹಾರಾಜ, ನನ್ನ ಅಪೇಕ್ಷೆಯನ್ನು ಸಲ್ಲಿಸುತ್ತೇನೆಂದು ಆಣೆಯಿಟ್ಟು ಹೇಳಿದ್ದೀಯೆ. ದೇವಾಸುರ ಸಂಗ್ರಾಮದಲ್ಲಿ ನೀನು ಎರಡು ವರಗಳನ್ನು ಕೊಟ್ಟಿದ್ದೆಯಷ್ಟೆ. ಅವುಗಳನ್ನೀಗ ಕೇಳಿಕೊಳ್ಳುತ್ತೇನೆ'' ಎಂದಳು.

ದಶರಥನು ''ಅಯ್ಯೋ ಮುಗ್ಧೆ, ಇಷ್ಟಕ್ಕಾಗಿ ಈ ಕೋಪವೆ? ಕೇಳಿಕೊ; ಸಲ್ಲಿಸುತ್ತೇನೆ'' ಎಂದನು. ಕೈಕೇಯಿಯು ''ಸೂರ್ಯಚಂದ್ರಾದಿ ದೇವತೆಗಳೇ ಕೇಳಿರಿ. ಸತ್ಯಸಂಧನೂ, ಧರ್ಮಜ್ಞನೂ ಆದ ಮಹಾರಾಜನು ನನಗೆ ವರಗಳನ್ನು ಸಲ್ಲಿಸುತ್ತಿದ್ದಾನೆ. ನೀವೆಲ್ಲರೂ ಸಾಕ್ಷಿಗಳಾಗಿ ಕೇಳಿರಿ'' ಎಂದಳು. ಮೂಕವಿಸ್ಮಿತನಾಗಿ ಅವಳನ್ನೇ ನೋಡುತ್ತಿದ್ದ ದಶರಥನನ್ನು ಕುರಿತು ''ಮಹಾರಾಜ, ನನ್ನ ವರಗಳು ಇವು. ನನ್ನ ಮಗನಾದ ಭರತನಿಗೆ ಯುವರಾಜ ಪಟ್ಟಾಭಿಷೇಕವನ್ನು ಮಾಡಬೇಕೆಂಬುದು ಮೊದಲನೆಯ ವರ. ರಾಮನು ನಾರುಬಟ್ಟೆಯನ್ನುಟ್ಟು, ಜಟಾಧಾರಿಯಾಗಿ ತಾಪಸನಂತೆ ದಂಡಕಾರಣ್ಯಕ್ಕೆ ಹದಿನಾಲ್ಕು ವರ್ಷ ಹೋಗಿರಬೇಕು. ಇದು ಎರಡನೆಯ

ವರ. ನೀನು ಸತ್ಯಸಂಧನಾದರೆ ಇವುಗಳನ್ನು ಸಲ್ಲಿಸು. ಇಲ್ಲದಿದ್ದರೆ ನಾನು ಈ ದಿನವೇ ವಿಷವನ್ನು ಕುಡಿದೋ ನೇಣು ಹಾಕಿಕೊಂಡೋ ಪ್ರಾಣವನ್ನು ಬಿಡುತ್ತೇನೆ'' ಎಂದಳು.

ಕೈಕೇಯಿಯ ನುಡಿಯನ್ನು ಕೇಳಿ ದಶರಥನು ದಿಗ್‌ಭ್ರಾಂತನಾಗಿ ಮಿಲಮಿಲನೆ ಸೊರಗಿ ಕುಸಿದು ಹೋದನು. ಮೈಯೆಲ್ಲ ಬೆವರಿತು; ಚಿಂತೆ ಆವರಿಸಿತು. ''ಇದೇನು ನನಗೆ ಕನಸು ಬೀಳುತ್ತಿದೆಯೆ? ಭೂತಾವೇಶವಾಗಿದೆಯೊ? ಮನೋರೋಗವೋ?'' ಎಂದು ಕಳವಳಿಸುತ್ತ ತನ್ನ ತಲೆಯನ್ನು ಎರಡು ಕೈಗಳಿಂದಲೂ ಹಿಡಿದುಕೊಂಡನು. ಕೈಕೇಯಿಯ ವಾಗ್‌ಬಾಣದ ಹೊಡೆತಕ್ಕೆ ಈಡಾದ ರಾಜನು ಸ್ವಲ್ಪ ಚೇತರಿಸಿಕೊಂಡಾಗ 'ಹಾ! ಧಿಕ್! ಥೂ!' ಎಂಬ ಉದ್ಗಾರ ಅವನ ಬಾಯಿಂದ ಹೊರಟಿತು. ರೋಷಾವಿಷ್ಟ ನಾಗಿ ಕೈಕೇಯಿಯನ್ನು ಸುಟ್ಟುಬಿಡುವನೋ ಎಂಬಂತೆ ದುರದುರನೆ ನೋಡುತ್ತ ''ಎಲೈ ಪಾಪಿಷ್ಠೆ, ದುಷ್ಟೆ, ಈ ಕುಲಕ್ಕೆ ಮೃತ್ಯುವಾಗಿ ಬಂದಿದ್ದೀಯೆ. ರಾಮನು ನಿನಗೆ ಏನು ಮಾಡಿದ್ದಾನೆ? ಹಡೆದ ತಾಯಿಯಂತೆ ನಿನ್ನನ್ನು ಪ್ರೀತಿ ಗೌರವಗಳಿಂದ ನೋಡುತ್ತಿಲ್ಲವೆ? ಈ ಮಾತನ್ನು ನೀನೇ ನನಗೆ ಹೇಳಿದ್ದೀಯೆ. ಈಗ ಇಂಥಾ ಕೆಟ್ಟ ಬುದ್ಧಿ ನಿನಗೆ ಹೇಗೆ ಬಂದಿತು? ನಾನಾದರೂ ನಿನಗೆ ಮಾಡಿದ್ದೇನು? ಈ ರಾಜ್ಯವನ್ನಾದರೂ ಬಿಟ್ಟೇನು, ಪ್ರಾಣವನ್ನಾದರೂ ತೊರೆದೇನು, ನನ್ನ ಮಗನಾದ ರಾಮನನ್ನು ತೊರೆಯಲಾರೆ'' ಎಂದು ಹಲುಬಿದನು. ''ಭರತನಿಗೆ ಬೇಕಾದರೆ ರಾಜ್ಯಾಭಿಷೇಕವನ್ನು ಮಾಡುವೆನು. ರಾಮನು ಯಾವ ತಪ್ಪು ಮಾಡಿದ್ದಾನೆಂದು ಅರಣ್ಯಕ್ಕೆ ಕಳಿಸಲಿ? ಇದೊಂದನ್ನು ಬಿಟ್ಟು ಇನ್ನೇನನ್ನಾದರೂ ಕೇಳಿಕೊ'' ಎಂದನು. ಎಷ್ಟು ಹೇಳಿದರೂ ಕೈಕೇಯಿಯು ಜಗ್ಗಲಿಲ್ಲ. ಕಡೆಗೆ ದಶರಥನು ಕೈಕೇಯಿಗೆ ''ಇದೊಂದು ವರವನ್ನು ಹಿಂತೆಗೆದುಕೊ. ನಿನ್ನ ಕಾಲಿಗೆ ತಲೆಬಾಗಿ ನಮಸ್ಕಾರ ಮಾಡುತ್ತೇನೆ!'' ಎಂದು ಹೇಳಿ ಅವಳ ಕಾಲಿಗೆ ನಮಸ್ಕರಿಸಲು ಹೋದನು. ಕೈಕೇಯಿಯು ಸಿಟ್ಟಿನಿಂದ ತನ್ನ ಕಾಲನ್ನು ಎಳೆದುಕೊಂಡು ''ಇಂಥಾ ನಟನೆ ಬೇಕಾಗಿಲ್ಲ. ಮಾತು ಕೊಟ್ಟಂತೆ ನಡೆದುಕೊ'' ಎಂದಳು. ಅವಳು ನಾನಾ ರೀತಿಯಲ್ಲಿ ಗಂಡನನ್ನು ಹಂಗಿಸಿದಳು. ದಶರಥನು ಕಂಗಾಲಾದನು. ಹುಚ್ಚು ಹಿಡಿದವನಂತೆ ಬುದ್ಧಿ ಗೆಟ್ಟನು. ಮತ್ತೆ ಮತ್ತೆ ಕೈಕೇಯಿಗೆ ಕೈಮುಗಿದು ಬೇಡಿಕೊಂಡನು. ನಿಷ್ಠುರವಾದಿನಿ ಯಾದ ಕೈಕೇಯಿಯ ಬಳಿ ಏನೂ ನಡೆಯಲಿಲ್ಲ. ದಶರಥನು ಹುಚ್ಚನಂತೆ ಹಲುಬುತ್ತಾ ಶೋಕಭಾರವನ್ನು ತಡೆಯಲಾರದೆ 'ಹಾ ರಾಮ' ಎಂದು ಕೂಗುತ್ತಾ ನೆಲದ ಮೇಲೆ ಬಿದ್ದುಹೋದನು. ನಿಟ್ಟುಸಿರು ಬಿಡುತ್ತಾ ನಾನಾ ಬಗೆಯಲ್ಲಿ ಹಲುಬುತ್ತಾ, ಕಣ್ಣೀರು ಸುರಿಸುತ್ತಾ ಮಲಗಿಯೇ ಇದ್ದನು. ಏಳುವ ಸಾಮರ್ಥ್ಯವೇ ಅವನಿಗಿರಲಿಲ್ಲ.

ಕೈಕೇಯಿಯು ಮುಖವನ್ನು ಗಂಟು ಹಾಕಿ ಸಿಟ್ಟಿನಿಂದ ಕುಳಿತಿದ್ದಳು. ದಶರಥನು ಎಷ್ಟು ಸಲ ಬೇಡಿಕೊಂಡರೂ ಅವಳು ಜಗ್ಗಲೇ ಇಲ್ಲ. ಕಡೆಗೆ ದಶರಥನು ಕೈಕೇಯಿಯ

ಕಡೆ ತಿರುಗಿ ''ಅಯ್ಯೋ ದುಷ್ಟೆ! ಕೈಕೇಯಿ! ನನ್ನ ವೈರಿ! ನಾನು ಸತ್ತು ಶ್ರೀರಾಮನು ವನಕ್ಕೆ ಹೋದಮೇಲೆ ನಿನ್ನ ಇಷ್ಟವು ಕೈಗೂಡುವುದು. ನೀನು ವಿಧವೆಯಾಗಿ ಮಗನೊಡನೆ ಈ ರಾಜ್ಯವನ್ನಾಳಬೇಕಾಗಿದೆ. ಭರತನಾದರೋ ಧರ್ಮಾತ್ಮ ರಾಮನಿಗೆ ರಾಜ್ಯವನ್ನು ತಪ್ಪಿಸಿ ತಾನು ರಾಜನಾಗಲು ಅವನು ಎಂದಿಗೂ ಒಪ್ಪುವುದಿಲ್ಲ. ಒಂದು ವೇಳೆ ಅವನೇನಾದರೂ ಒಪ್ಪಿದರೆ, ಅವನು ನನ್ನ ಮಗನಲ್ಲ. ಅವನನ್ನು ತೊರೆಯುತ್ತೇನೆ. ಇದೋ, ನಿನ್ನನ್ನು ಮದುವೆಯಾದಾಗ ಯಾವ ಕೈಯಿಂದ ನಿನ್ನ ಕೈಹಿಡಿದೆನೋ ಆ ಕೈ ಹಾಳಾಗಲಿ! ನೀನು ನನ್ನ ಹೆಂಡತಿಯಲ್ಲ. ನಿನ್ನನ್ನು ತೊರೆದಿದ್ದೇನೆ'' ಎಂದನು. ಕೈಕೇಯಿಯು ಸ್ವಲ್ಪವೂ ಅಳುಕದೆ ಕಠೋರಚಿತ್ತಳಾಗಿ ತನ್ನ ಹಠವನ್ನು ಬಿಡದೆ ಸುಮ್ಮನೆ ಕುಳಿತಿದ್ದಳು. ದಶರಥನ ಗೋಳಾಟ, ತೊಳಲಾಟದಲ್ಲಿ ರಾತ್ರಿ ಕಳೆದು ಹೋಯಿತು.

ಮುಹೂರ್ತ ಕಾಲವು ಸಮೀಪಿಸಿತೆಂದು ವಸಿಷ್ಠರು ತಮಗೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ತಮ್ಮ ಆಶ್ರಮದಿಂದ ಬೇಗಬೇಗನೆ ಪಟ್ಟಣದೊಳಗೆ ಬಂದರು. ಅವರು ಅರಮನೆಯ ಬಾಗಿಲಿಗೆ ಬಂದಾಗ ಸುಮಂತ್ರನು ಕಾಣಿಸಿದನು. ಅವರು ಆತನಿಗೆ ''ಸುಮಂತ್ರ, ಕಲ್ಯಾಣ ಮಂಟಪದಲ್ಲಿ ಎಲ್ಲವೂ ಸಿದ್ಧವಾಗಿದೆಯೇ?'' ಎಂದು ವಿಚಾರಿಸಿ ಮಹಾರಾಜನು ಕೂಡಲೇ ಬರುವಂತೆ ಆತನಿಗೆ ತಿಳಿಸಬೇಕೆಂದರು. ಸುಮಂತ್ರನು ತ್ವರೆಯಿಂದ ಕೈಕೇಯಿಯ ಅಂತಃಪುರಕ್ಕೆ ಹೋಗಿ ಅವನಿದ್ದ ಕೋಣೆಯ ಹೊರಗಡೆಯಲ್ಲಿ ನಿಂತು ''ಮಹಾರಾಜ, ಬೆಳಗಾಗುತ್ತ ಬಂದಿತು. ಶ್ರೀರಾಮನ ಪಟ್ಟಾಭಿಷೇಕವು ಆರಂಭವಾಗುವುದಕ್ಕೆ ಅನುಮತಿಯನ್ನು ಕೊಡು. ವಸಿಷ್ಠ ಮುನಿಗಳು ನಿನ್ನ ಆಗಮನವನ್ನು ಪ್ರತೀಕ್ಷಿಸುತ್ತಿದ್ದಾರೆ'' ಎಂದನು. ಯಾವ ಉತ್ತರವೂ ಬಾರದೇ ಹೋದ್ದರಿಂದ ಸುಮಂತ್ರನು ಧೈರ್ಯಮಾಡಿ ಒಳಗೆ ಹೋದನು. ದಶರಥನು ಶೋಕದಿಂದ ತಲೆಯೆತ್ತದೆ ನೆಲದ ಮೇಲೆ ಮಲಗಿರುವುದನ್ನು ಕಂಡು ವಿಹ್ವಲನಾದನು. ತಂತ್ರಜ್ಞಳಾದ ಕೈಕೇಯಿಯು ಸುಮಂತ್ರನಿಗೆ ''ಸುಮಂತ್ರ, ರಾಮನಿಗೆ ಪಟ್ಟಗಟ್ಟುವೆನೆಂಬ ಉತ್ಸಾಹದಲ್ಲಿದ್ದ ಮಹಾರಾಜನಿಗೆ ರಾತ್ರಿಯೆಲ್ಲವೂ ನಿದ್ರೆ ಬರಲಿಲ್ಲ! ಈಗ ಸ್ವಲ್ಪ ಬೇಗನೆ ಹೋಗಿ ರಾಜಕುಮಾರನಾದ ರಾಮನನ್ನು ಇಲ್ಲಿಗೆ ಕರೆದುಕೊಂಡು ಬಾ. ಇನ್ನು ಯಾವ ಚಿಂತೆಯೂ ಇಲ್ಲ'' ಎಂದಳು. ಸುಮಂತ್ರನು ಅದೆಲ್ಲವೂ ಯಥಾರ್ಥವೆಂದೇ ಭಾವಿಸಿ ಉತ್ಸಾಹದಿಂದ ಶ್ರೀರಾಮನ ಭವನಕ್ಕೆ ತೆರಳಿ ರಾಜಾಜ್ಞೆಯನ್ನು ತಿಳಿಸಿದನು. ಆ ರಾಜಕುಮಾರನು ಸ್ನಾನ ಮಾಡಿ ಪ್ರಾತಃಕೃತ್ಯಗಳೆಲ್ಲವನ್ನೂ ಮುಗಿಸಿದ್ದನು. ಸರ್ವಾಲಂಕಾರ ಭೂಷಿತನಾಗಿ ಸೀತೆಯೊಡನೆ ಸುವರ್ಣ ಪೀಠದಲ್ಲಿ ಕುಳಿತಿದ್ದನು. ಸುಮಂತ್ರನ ಮಾತನ್ನು ಕೇಳಿ ''ಸೀತೆ, ನಾನು ಹೋಗಿ ಮಹಾರಾಜನ ದರ್ಶನವನ್ನು ತೆಗೆದುಕೊಳ್ಳುವೆನು. ನೀನು ಪರಿಜನ ಸಹಿತಳಾಗಿ

ಇಲ್ಲಿಯೇ ಸಂತೋಷದಿಂದಿರು'' ಎಂದು ತಿಳಿಸಿ ಹೊರಟನು. ಭವನದ ಬಾಗಿಲಲ್ಲಿ ಕೈಮುಗಿದುಕೊಂಡು ಲಕ್ಷ್ಮಣನು ನಿಂತಿದ್ದು ಕಾಣಿಸಿತು. ತನಗಾಗಿ ಕಾದಿದ್ದ ಎಲ್ಲ ಮಿತ್ರ ಪರಿವಾರದವರನ್ನು ಅಭಿನಂದಿಸಿ ರಥವನ್ನೇರಿದನು. ಅವನೊಡನೆ ಲಕ್ಷ್ಮಣನೂ ಹೊರಟನು. ರಾಜಬೀದಿಯಲ್ಲಿ ತನ್ನನ್ನು ಅಭಿನಂದಿಸಿ ಜಯಘೋಷ ಮಾಡುತ್ತಿದ್ದ ಪ್ರಜೆಗಳಿಗೆ ಪ್ರತಿವಂದನೆಗಳನ್ನರ್ಪಿಸುತ್ತ ಕೈಕೇಯಿಯ ಭವನಕ್ಕೆ ಆಗಮಿಸಿದನು. ಶ್ರೀರಾಮನೊಬ್ಬನೇ ಒಳಗೆ ಪ್ರವೇಶಿಸಿ ತನ್ನ ತಂದೆಯು ದೈನ್ಯದಿಂದ ತಲೆತಗ್ಗಿಸಿ ಕುಳಿತಿರುವುದನ್ನು ಕಂಡನು. ಅವನು ಅಚ್ಚರಿಪಡುತ್ತಲೇ ತಂದೆಯ ಪಾದಗಳಿಗೆ ವಿನಯದಿಂದ ವಂದಿಸಿ ಕೈಕೇಯಿಯ ಪಾದಗಳಿಗೆ ನಮಸ್ಕರಿಸಿದನು. ದಶರಥನು ಕಣ್ಣೀರು ಸುರಿಸುತ್ತ ''ರಾಮ'', ಎಂದಿಷ್ಟೇ ಹೇಳಿದನು. ಮುಂದೆ ಮಾತು ಹೊರಡಲಿಲ್ಲ. ಮತ್ತೆ ತಲೆತಗ್ಗಿಸಿದನು. ತಂದೆಯ ಈ ದುರವಸ್ಥೆಯನ್ನು ರಾಮನು ಎಂದೂ ಕಂಡಿರಲಿಲ್ಲ. ಕಾಣದೆ ಥಟ್ಟನೆ ಹಾವನ್ನು ತುಳಿದವನಂತೆ ಸಂಭ್ರಾಂತನಾಗಿ ''ಇದೇನಿರಬಹುದು? ನನ್ನ ತಂದೆಗೆ ಎಷ್ಟು ಕೋಪಬಂದಿದ್ದರೂ ನನ್ನನ್ನು ಕಂಡೊಡನೆ ಹಸನ್ಮುಖನಾಗುತ್ತಿದ್ದನು. ಶಿವ ಶಿವ! ಇಂದೇಕೆ ಹೀಗೆ?'' ಎಂದು ಶೋಕಾವಿಷ್ಟನಾಗಿ ಕೈಕೇಯಿಗೆ ಕಾಲು ಮುಟ್ಟಿ ನಮಸ್ಕರಿಸಿ ಈ ರೀತಿ ಹೇಳಿದನು. ''ಅಮ್ಮಾ, ನಾನೇನಾದರೂ ತಿಳಿಯದೆ ತಪ್ಪು ಮಾಡಿದೆನೆ? ತಂದೆಗೆ ಇಷ್ಟು ಕೋಪ ಬರಲು ಕಾರಣವೇನು? ನೀನಾದರೂ ಸಮಾಧಾನವನ್ನು ಹೇಳು; ಅಥವಾ ದೇಹದಲ್ಲಿ ಏನಾದರೂ ಬಾಧೆಯಾಗಿದೆಯೆ? ಭರತನೂ ಶತ್ರುಘ್ನನೂ ಕ್ಷೇಮವಾಗಿದ್ದಾರಷ್ಟೆ?'' ಎಂದನು. ಮಹಾತ್ಮನಾದ ಶ್ರೀರಾಮನು ಹೀಗೆ ಕೇಳಲಾಗಿ ಲಜ್ಜೆಗೆಟ್ಟು ಕೈಕೇಯಿಯು ಹಿಂದೆ ಮುಂದೆ ನೋಡದೆ ಸ್ಪಷ್ಟವಾಗಿ ಇಂತೆಂದಳು. ''ರಾಮ, ನಿನ್ನ ತಂದೆಗೆ ಕೋಪವೂ ಬಂದಿಲ್ಲ, ಯಾವ ಕಷ್ಟವೂ ಆಗಿಲ್ಲ. ತನ್ನ ಮನಸ್ಸಿನಲ್ಲಿದ್ದ ಒಂದು ವಿಷಯವನ್ನು ನಿನಗೆ ಅಂಜಿಕೊಂಡು ಹೇಳುತ್ತಿಲ್ಲ. ನಿನ್ನ ತಂದೆ ನನಗೆ ಎರಡು ವರಗಳನ್ನು ಕೊಟ್ಟಿದ್ದನು. ಅವುಗಳನ್ನೀಗ ನಡೆಸಿಕೊಡಬೇಕೆಂದು ಕೇಳಿದ್ದೇನೆ. ಸತ್ಯವೇ ಧರ್ಮದ ಮೂಲವೆಂದು ಸಜ್ಜನರಿಗೆ ತಿಳಿದ ವಿಷಯವೇ ಸರಿ. ಮಹಾರಾಜನು ನನಗೆ ಸಲ್ಲಿಸಬೇಕಾದ ವರಗಳನ್ನು ನಡೆಸಿಕೊಡುವುದು ನಿನ್ನ ಅಧೀನವಾಗಿದೆ. ನೀನು ನಡೆಸುತ್ತೇನೆಂದೂ ಎಂದಿಗೂ ತಪ್ಪುವುದಿಲ್ಲವೆಂದೂ ಹೇಳಿದರೆ ಮಾತ್ರ ನಾನು ತಿಳಿಸುತ್ತೇನೆ. ನಿನ್ನ ತಂದೆ ಅದನ್ನು ಹೇಳುವುದಿಲ್ಲ'' ಎಂದಳು. ಈ ಮಾತನ್ನು ಕೇಳಿ ಶ್ರೀರಾಮನಿಗೆ ವ್ಯಥೆಯಾಯಿತು. ''ದೇವಿ, ನೀನು ಈ ರೀತಿಯಲ್ಲಿ ನನಗೆ ಹೇಳಬಹುದೆ? ಮಹಾರಾಜನು ಆಜ್ಞೆ ಮಾಡಿದರೆ ಬೆಂಕಿಯಲ್ಲಾದರೂ ಬೀಳುವೆನು. ಘೋರ ವಿಷವನ್ನಾದರೂ ತಿನ್ನುವೆನು. ನನಗೆ ತಂದೆಯಾಗಿ, ಗುರುವಾಗಿ, ದೊರೆಯಾಗಿ

ಹಿತಕಾರಿಯಾದ ಮಹಾರಾಜನ ಮಾತನ್ನು ಎಂದಿಗಾದರೂ ಪಾಲಿಸದೇ ಇರುವೆನೆ? ದೇವಿ, ಮಹಾರಾಜನ ಇಷ್ಟವೇನೆಂಬುದನ್ನು ಹೇಳು. ಅದರಂತೆ ನಡೆಯುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ. ರಾಮನು ಎರಡು ಮಾತಾಡತಕ್ಕವನಲ್ಲ'' ಎಂದನು. ಆಗ ಕೈಕೇಯಿಗೆ ಧೈರ್ಯ ಬಂದಿತು. ಮನಸ್ಸಿನಲ್ಲಿಯೇ ಹಿಗ್ಗುತ್ತ ''ರಾಮ, ನಾನು ಕೇಳಿಕೊಂಡ ವರಗಳಿವು – ಅದರಂತೆ ಮಹಾರಾಜನು ನಿನಗೆ ಹೇಳಬೇಕೆಂದಿರುವ ವಿಷಯ ಇಷ್ಟು. ಏನೆಂದರೆ, ಈಗ ನೀನು ಪಟ್ಟಾಭಿಷೇಕವನ್ನು ಮಾಡಿಸಿಕೊಳ್ಳಬಾರದು. ಭರತನಿಗೆ ಪಟ್ಟಾಭಿಷೇಕವಾಗಬೇಕು. ನೀನು ನಾರುಬಟ್ಟೆಯುಟ್ಟು, ತಪಸ್ವಿಯಂತೆ ಹದಿನಾಲ್ಕು ವರ್ಷಗಳವರೆಗೆ ದಂಡಕಾರಣ್ಯದಲ್ಲಿರಬೇಕು. ನೀನು ನಗರದಲ್ಲಿರಕೂಡದು. ಇದಿಷ್ಟನ್ನೂ ನಿನಗೆ ಹೇಳಲು ಮಹಾರಾಜನು ಹಿಂಜರಿಯುತ್ತಿದ್ದಾನೆ'' ಎಂದಳು.

ಮೃತ್ಯುವಿನಂತೆ ಅತಿಕ್ರೂರವಾದ ಕೈಕೇಯಿಯ ಮಾತುಗಳನ್ನು ಕೇಳಿ ಶ್ರೀರಾಮನು ಸ್ವಲ್ಪವೂ ವಿಷಾದಿಸಲಿಲ್ಲ. ಧೀರೋದಾತ್ತನಾದ ಅವನ ಮುಖದಲ್ಲಿ ಯಾವ ಬದಲಾವಣೆಯೂ ಕಾಣಿಸಲಿಲ್ಲ. ಅವನು ಕೈಕೇಯಿಯನ್ನು ನೋಡಿ ''ಹಾಗೆಯೇ ಆಗಲಿ. ನಾನು ವನವಾಸಕ್ಕೆ ಹೋಗುವೆನು. ಮಹಾರಾಜನು ಮಾತುಕೊಟ್ಟುದನ್ನು ನಡೆಸುವುದಕ್ಕಾಗಿ ನಾನು ನಾರುಬಟ್ಟೆಯನ್ನುಟ್ಟು ಜಟೆಯನ್ನು ಧರಿಸುವೆನು. ನನಗೆ ಗುರುವಾಗಿರುವ ತಂದೆಯು ಆಜ್ಞೆ ಮಾಡಿದರೆ ನಾನು ಯಾವ ಕಾರ್ಯವನ್ನು ಮಾಡದೇ ಇದ್ದೇನು? ಆದರೆ ನನ್ನ ತಂದೆಯು ನನ್ನೊಡನೆ ಮಾತಾಡುವುದಿಲ್ಲವೇಕೆ? ಅದೊಂದೇ ನನಗೆ ಚಿಂತೆಯನ್ನುಂಟುಮಾಡಿದೆ. ದೇವಿ, ಮಹಾರಾಜನಿಗೆ ಸಮಾಧಾನವನ್ನು ಹೇಳು. ಈಗಲೇ ದೂತರು ತ್ವರೆಯಿಂದ ಹೋಗಿ ಭರತನನ್ನು ಸೋದರಮಾವನ ಮನೆಯಿಂದ ಕರೆತರಲಿ. ಅವನಿಗೆ ಪಟ್ಟಾಭಿಷೇಕವಾಗಲಿ. ನನ್ನ ತಮ್ಮನು ನನಗಿಂತ ಬೇರೆಯಲ್ಲ. ನಾನು ಹದಿನಾಲ್ಕು ವರ್ಷ ಅರಣ್ಯದಲ್ಲಿರುತ್ತೇನೆ'' ಎಂದನು. ಕೈಕೇಯಿಗೆ ರಾಮನ ಮಾತಿನಲ್ಲಿ ನಂಬಿಕೆ ಹುಟ್ಟಿತು. ಅವಳು ''ರಾಮ, ನಿನ್ನ ತಂದೆ ಮಾತನಾಡದಿರುವುದಕ್ಕಾಗಿ ಚಿಂತಿಸಬೇಡ. ನೀನು ಬೇಗನೆ ಕಾಡಿಗೆ ಹೋಗು. ನೀನು ಹೋಗುವವರೆಗೂ ನಿನ್ನ ತಂದೆ ಸ್ನಾನವನ್ನೂ ಮಾಡುವುದಿಲ್ಲ, ಊಟವನ್ನೂ ಮಾಡುವುದಿಲ್ಲ'' ಎಂದಳು. ಇದೆಲ್ಲವನ್ನೂ ಕೇಳುತ್ತಿದ್ದ ದಶರಥನು ಉಮ್ಮಳಿಸುವ ದುಃಖವನ್ನು ತಡೆಯಲಾರದೆ ''ಅಯ್ಯೋ ಕಷ್ಟವೇ!'' ಎನ್ನುತ್ತ ದೊಪ್ಪನೆ ನೆಲದ ಮೇಲೆ ಉರುಳಿಹೋದನು. ರಾಮನು ಮೆಲ್ಲಗೆ ಅವನನ್ನು ಹಿಡಿದು ಎತ್ತಿ ಕುಳ್ಳಿರಿಸಿದನು. ಕೈಕೇಯಿಯನ್ನು ನೋಡಿ ''ದೇವಿ, ನಾನು ಸುಖಭೋಗಗಳಿಗಾಗಿ ಬಯಸುತ್ತಿಲ್ಲ. ಋಷಿಗಳಂತೆ ಧರ್ಮವನ್ನು ಪಾಲಿಸಬೇಕೆಂಬುದೇ ನನ್ನ ಧ್ಯೇಯ. ನನ್ನ ತಂದೆಗೆ ಪ್ರಿಯವಾದರೆ ಪ್ರಾಣವನ್ನಾದರೂ ಒಪ್ಪಿಸಿ ಅವನ ಆಜ್ಞೆಯನ್ನು ನಡೆಸುತ್ತೇನೆ. ಅಮ್ಮಾ

ನನ್ನ ತಂದೆಯು ನೇರವಾಗಿ ಹೇಳದಿದ್ದರೂ ಪೂಜ್ಯ ಮಾತೆಯಾದ ನಿನ್ನ ಮಾತನ್ನೇ ನಂಬಿ ಹದಿನಾಲ್ಕು ವರ್ಷ ವನದಲ್ಲಿರುವೆನು. ಈ ಮಾತನ್ನು ನೇರವಾಗಿ ನನಗೇ ತಿಳಿಸದೆ ತಂದೆಗೆ ಹೇಳಿಬಿಟ್ಟೆಯಲ್ಲ. ನನ್ನಲ್ಲಿ ಯಾವ ಸದ್ಗುಣವನ್ನೂ ನೀನು ಕಾಣಲಾರದೇ ಹೋದೆಯಾ? ಇದೋ, ನನ್ನ ತಾಯಿಯನ್ನು ಬೀಳ್ಕೊಂಡು ಸೀತೆಗೆ ಸಮಾಧಾನ ಹೇಳುವುದೊಂದೇ ತಡ, ಈ ದಿನವೇ ಅರಣ್ಯಕ್ಕೆ ಹೊರಡುವೆನು. ಭರತನು ರಾಜನಾಗಿ ತಂದೆಯ ಶುಶ್ರೂಷೆಯನ್ನು ಮಾಡುತ್ತಿರಲಿ'' ಎಂದನು. ದಶರಥನು ಎರಡು ಕೈಗಳನ್ನೂ ಮೇಲೆತ್ತಿ 'ಹೋ' ಎಂದು ಕೂಗಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. ಶ್ರೀರಾಮನು ತಂದೆಗೂ ಕೈಕೇಯಿಗೂ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಅವಳ ಅಂತಃಪುರದಿಂದ ಹೊರಟನು.

೧೭

ಕೌಸಲ್ಯಾದರ್ಶನ. ಸೀತೆಯೂ ಲಕ್ಷ್ಮಣನೂ ಶ್ರೀರಾಮನೊಡನೆ ಅರಣ್ಯಕ್ಕೆ ಹೋಗಲು ನಿಶ್ಚಯಿಸುವುದು.

ಹೊರಗಡೆ ಲಕ್ಷ್ಮಣನೂ, ಗೆಳೆಯರೂ ಕಾದು ನಿಂತಿದ್ದರು. ಶ್ರೀರಾಮನು ಯಾವ ವಿಷಾದವನ್ನೂ ವ್ಯಕ್ತಪಡಿಸದೆ ನಡೆದ ಸಂಗತಿಯನ್ನು ಹೇಳಿದನು. ಅದನ್ನು ಕೇಳಿ ಶ್ರೀರಾಮನ ಸ್ನೇಹಿತರು ಶೋಕಸಂತಪ್ತರಾದರು. ಸುಮಿತ್ರಾತನಯನಾದ ಲಕ್ಷ್ಮಣನು ಸಿಟ್ಟಿನಿಂದ ಉರಿದೆದ್ದು ಕಣ್ಣಿಂದ ಕಿಡಿಗಳನ್ನು ಕಾರುತ್ತ ಶ್ರೀರಾಮನನ್ನು ಹಿಂಬಾಲಿಸಿದನು. ದಾರಿಯಲ್ಲಿದ್ದ ಕಲ್ಯಾಣ ಮಂಟಪದಲ್ಲಿ ಪಟ್ಟಾಭಿಷೇಕದ ಸಿದ್ಧತೆಗಳು ನಡೆದಿದ್ದವು. ಶ್ರೀರಾಮನು ಅದನ್ನು ಕಣ್ಣೆತ್ತಿಯೂ ನೋಡದೆ ಕೌಸಲ್ಯೆಯ ಮನೆಗೆ ನಡೆದನು. ಐಶ್ವರ್ಯವನ್ನು ತ್ಯಜಿಸಿ ಅರಣ್ಯಕ್ಕೆ ಹೋಗಬೇಕಾಗಿ ಬಂದರೂ ಲೋಕಾತೀತನಾದ ಯೋಗೀಶ್ವರನಂತಿದ್ದ ಅವನ ಮುಖದಲ್ಲಿ ಕಾಂತಿಯು ಕಂದಲಿಲ್ಲ. ಪಟ್ಟಾಭಿಷೇಕದ ಸಂತೋಷವಾರ್ತೆಯನ್ನು ಕೇಳಿದಾಗ ಅವನ ಮುಖವು ಹೇಗಿದ್ದಿತೋ ಹಾಗೆಯೇ ಈಗಲೂ ಅರಳಿ ರಮಣೀಯವಾಗಿದ್ದುದನ್ನು ಜನರು ನೋಡಿದರು.

ಅನಂತರ ಶ್ರೀರಾಮನು ಲಕ್ಷ್ಮಣನೊಡನೆ ಕೌಸಲ್ಯಾದೇವಿಯ ಭವನಕ್ಕೆ ಆಗಮಿಸಿದನು. ಅಲ್ಲಿ ಕೆಲವು ಸ್ತ್ರೀಯರು ಶ್ರೀರಾಮನನ್ನು ಕಂಡೊಡನೆ ಸಂಭ್ರಮದಿಂದ ಒಳಗೆ ಹೋಗಿ ಅವನು ಬಂದ ಹರ್ಷದ ಸುದ್ದಿಯನ್ನು ಕೌಸಲ್ಯೆಗೆ ನಿವೇದಿಸಿದರು. ಅವಳು ಬಿಳಿಯ ದುಕೂಲವನ್ನುಟ್ಟು ರಾತ್ರಿಯೆಲ್ಲಾ ವ್ರತನಿಷ್ಠಳಾಗಿ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಿದ್ದಳು. ಪ್ರಾತಃಕಾಲದಲ್ಲಿ ಮಂಗಳಾಲಂಕಾರವನ್ನು ಧರಿಸಿ ತನ್ನ

ಮಗನಿಗೆ ಶ್ರೇಯಸ್ಸಾಗಲೆಂದು ಬ್ರಾಹ್ಮಣರಿಂದ ಹೋಮವನ್ನು ಮಾಡಿಸುತ್ತಿದ್ದಳು. ಶ್ರೀರಾಮನನ್ನು ಕಂಡೊಡನೆ ಅವಳು ಹರ್ಷದಿಂದ ಎದ್ದು ಬಂದು ಅವನನ್ನು ಆಲಿಂಗಿಸಿ ಶಿರಸ್ಸನ್ನು ಆಘ್ರಾಣಿಸಿದಳು. ''ರಾಮ, ನಿನಗೆ ದೀರ್ಘಾಯುಸ್ಸೂ, ಕೀರ್ತಿಯೂ ಪ್ರಾಪ್ತವಾಗಲಿ. ಪೂರ್ವಜರು ಪಾಲಿಸಿದ ಧರ್ಮಮಾರ್ಗದಲ್ಲಿಯೇ ನಡೆಯುತ್ತಿರು. ಸತ್ಯಸಂಧನಾದ ನಿನ್ನ ತಂದೆ ಯುವರಾಜ ಪದವಿಯನ್ನಿತ್ತು ನಿನಗೆ ಪಟ್ಟಾಭಿಷೇಕ ಮಾಡುವನು. ಕುಳಿತುಕೋ'' ಎಂದು ಹೇಳಿ ಅವನಿಗೊಂದು ಆಸನವನ್ನು ಕೊಟ್ಟಳು. ಶ್ರೀರಾಮನು ಆಸನವನ್ನು ಸ್ಪರ್ಶಿಸಿ ತಲೆಬಾಗಿ ತಾಯಿಗೆ ವಂದಿಸಿದನು. ಆಮೇಲೆ ''ಅಮ್ಮಾ ನಿನಗೆ ನಿಜಸ್ಥಿತಿಯೇನಾಗಿದೆ ಎಂಬುದು ಗೊತ್ತಿಲ್ಲ. ನಿನಗೊಂದು ವಿಪತ್ತು ಕಾದಿದೆ. ಸೀತೆಗೂ ಲಕ್ಷ್ಮಣನಿಗೂ ದುಃಖಕರವಾದ ಸುದ್ದಿಯಿದು'' ಎಂದು ನುಡಿದು ಕೈಕೇಯಿಯ ಅಂತಃಪುರದಲ್ಲಾದ ಸಂಗತಿಯನ್ನು ನಿವೇದಿಸಿದನು. ಆ ಮಾತನ್ನು ಕೇಳಿದೊಡನೆ ಕೌಸಲ್ಯೆಯು ಕಡಿದ ಮರದಂತೆ, ದೇವಲೋಕದಿಂದ ಬಿದ್ದ ಅಪ್ಸರೆಯಂತೆ, ನೆಲದ ಮೇಲೆ ಕುಸಿದು ಬಿದ್ದಳು. ಶ್ರೀರಾಮನು ವ್ಯಥೆಯಿಂದ ತಾಯಿಯನ್ನು ಮೆಲ್ಲನೆ ಎತ್ತಿ ಕುಳ್ಳಿರಿಸಿ ಮೈಯನ್ನು ಸವರುತ್ತ ಬಳಿಯಲ್ಲಿ ಕುಳಿತನು. ಲಕ್ಷ್ಮಣನು ಹತ್ತಿರದಲ್ಲಿಯೇ ನಿಂತಿದ್ದನು. ''ಮಗನೆ, ನೀನು ಹುಟ್ಟಿದ್ದರಿಂದ ನನಗೆ ಶೋಕವೇ ಪ್ರಾಪ್ತವಾಯಿತು. ನಾನು ಬಂಜೆಯಾಗಿದ್ದರೆ ಇಂಥ ಕಷ್ಟ ಬರುತ್ತಿರಲಿಲ್ಲ. ಪತಿಯಿಂದ ನಾನು ಯಾವ ಸುಖವನ್ನೂ ಕಾಣಲಿಲ್ಲ. ಮಗನಿಂದಲಾದರೂ ಒಳ್ಳೆಯದನ್ನು ಕಂಡೇನೆಂದು ನಂಬಿಕೊಂಡಿದ್ದೆ. ನಾನು ಹೆಸರಿಗೆ ಮಾತ್ರ ಪಟ್ಟದ ರಾಣಿ. ಚುಚ್ಚು ಮಾತನ್ನು ಕೇಳುತ್ತಿರುವುದೇ ನಾನು ಪಡೆದ ಭಾಗ್ಯ. ಇನ್ನು ನಾನು ಕೈಕೇಯಿಯ ದಾಸಿಯಾದಂತೆಯೇ ಸರಿ'' ಎಂದು ನಾನಾ ವಿಧವಾಗಿ ಹಲುಬುತ್ತ ಕಣ್ಣೀರಿನ ಹೊಳೆಯನ್ನೇ ಹರಿಸಿದಳು.

ಇದೆಲ್ಲವನ್ನೂ ಕೇಳುತ್ತಿದ್ದ ಲಕ್ಷ್ಮಣನಿಗೆ ತಡೆದುಕೊಳ್ಳಲಾಗಲಿಲ್ಲ. ಅವನು ಕೌಸಲ್ಯೆಗೆ ''ಅಮ್ಮಾ ಒಬ್ಬ ಹೆಂಗಸಿನ ಮಾತಿಗಾಗಿ ಅಣ್ಣನು ಅರಣ್ಯಕ್ಕೆ ಹೋಗುವುದು ನನಗೆ ಹಿಡಿಸುವುದಿಲ್ಲ. ಕಾಮಿಯಾದ ಮಹಾರಾಜನು ಆ ಹೆಂಗಸಿನ ಒತ್ತಾಯಕ್ಕೆ ಮಣಿದು ಏನನ್ನೋ ಬಡಬಡಿಸಿದ್ದಾನೆ. ಪಟ್ಟಾಭಿಷೇಕವು ಇಲ್ಲವಾದರೆ ಹೋಗಲಿ. ಅಣ್ಣನು ಅರಣ್ಯಕ್ಕೆ ಏಕೆ ಹೋಗಬೇಕು? ಇವನು ಯಾವ ತಪ್ಪು ಮಾಡಿದ್ದಾನೆ? ಈ ರ್‍ಾಜ್ಯದಲ್ಲಿ ಒಬ್ಬ ಗಂಡಸಾಗಲಿ, ಹೆಂಗಸಾಗಲಿ ಶ್ರೀರಾಮನಲ್ಲಿ ಒಂದು ತಪ್ಪನ್ನಾದರೂ ತೋರಿಸಲಾರರು. ಧರ್ಮಾತ್ಮನೂ ದೇವಪುರುಷನೂ ಆದ ಶ್ರೀರಾಮನು ಕಾಡಿಗೆ ಹೋಗಬೇಕಂತೆ. ಅಣ್ಣಾ, ಆ ಮುದುಕರಾಜನು ಏನನ್ನಾದರೂ ಹೇಳಿಕೊಳ್ಳಲಿ. ನೀನು ರಾಜ್ಯಾಧಿಕಾರವನ್ನು ವಹಿಸಿಕೊ. ನಾನು ನಿನಗೆ ಸಹಾಯಕನಾಗಿರುತ್ತೇನೆ. ನಾನು

ಧನುಸ್ಸನ್ನು ಹಿಡಿದು ನಿನ್ನ ಪಾರ್ಶ್ವದಲ್ಲಿ ಸಾಕ್ಷಾತ್ ಯಮನಂತೆ ನಿಂತಿರಲು ಯಾವನು ಅಧಿಕ ಪ್ರಸಂಗ ಮಾಡಿಯಾನು? ಯಾರಾದರೂ ಭರತನ ಪಕ್ಷವಾಗಿ ಮಾತಾಡಿದರೆ ಅವರ ಪ್ರಾಣವನ್ನು ಹೀರಿಬಿಡುತ್ತೇನೆ. ತಂದೆ ಎನಿಸಿಕೊಂಡ ಆ ವೃದ್ಧನು ಅಡ್ಡಬಂದರೆ ನಿರ್ದಾಕ್ಷಿಣ್ಯವಾಗಿ ಅವನನ್ನೂ ಕೊಂದುಹಾಕೋಣ!'' ಎಂದನು. ತನ್ನ ಕೈಯನ್ನು ಕೊಡವುತ್ತ ಧನುಸ್ಸನ್ನು ಎತ್ತಿಹಿಡಿದು ಕೌಸಲ್ಯೆಗೆ ''ಅಮ್ಮಾ, ಈ ದಿನವೇ ಶ್ರೀರಾಮನು ಸಿಂಹಾಸನವನ್ನೇರಲಿ. ತಂದೆ ಎನಿಸಿಕೊಂಡವನು ಕೈಕೇಯಿಯ ವ್ಯಾಮೋಹದಿಂದ ಹುಡುಗಾಟವಾಡುತ್ತಿದ್ದಾನೆ. ಆ ಕ್ಷುದ್ರಮನುಷ್ಯನನ್ನು ಕೊಂದುಹಾಕುವೆನು!'' ಎಂದು ಗುಡುಗಿದನು. ಕೌಸಲ್ಯೆಯ ಬಾಯಿಯಿಂದ ಒಂದು ಮಾತೂ ಹೊರಡಲಿಲ್ಲ. ಮಗನನ್ನು ನೋಡಿ ''ಮಗನೆ, ಈಗ ಏನು ಮಾಡುವೆ?'' ಎಂದಳು. ಶ್ರೀರಾಮನು ''ಅಮ್ಮ, ಲಕ್ಷ್ಮಣನು ನನ್ನ ಮೇಲಿನ ಪ್ರೀತಿಯಿಂದ ದುಡುಕಿ ಮಾತಾಡುತ್ತಿದ್ದಾನೆ. ಇದೆಲ್ಲವೂ ಧರ್ಮಬಾಹಿರವಾದದ್ದು. ಲಕ್ಷ್ಮಣ, ಇಂತಹ ಕ್ರೂರವಾದ ಮಾತಗಳನ್ನಾಡಬೇಡ. ನಮ್ಮ ತಂದೆಯು ಸತ್ಯಸಂಧನಾದ ಮಹಾರಾಜ. ಅವನಿಗೆ ಎದುರಾಡುವುದು ನಮ್ಮ ಕರ್ತವ್ಯವಲ್ಲ. ನಾನು ಕಾಡಿಗೆ ಹೋಗುವೆನೆಂದು ತಂದೆಯ ಎದುರಿನಲ್ಲಿ ಕೈಕೇಯಿಗೆ ಮಾತುಕೊಟ್ಟು ಬಂದಿರುವೆನು. ಈ ನಿಶ್ಚಯವನ್ನು ನಾನು ಎಂದಿಗೂ ಬದಲಾಯಿಸ ತಕ್ಕವನಲ್ಲ'' ಎಂದನು. ಕೌಸಲ್ಯೆಯು ''ಮಗು–ರಾಮ, ನಾನು ನಿನ್ನ ತಾಯಿ. ನನ್ನ ಮಾತನ್ನು ನೀನು ಪಾಲಿಸಬೇಕು. ನೀನು ಕಾಡಿಗೆ ಹೋಗಬಾರದೆಂದು ನಾನು ಆಜ್ಞಾಪಿಸುತ್ತೇನೆ'' ಎಂದಳು. ಶ್ರೀರಾಮನು ವಿನಯದಿಂದ ಕೈಮುಗಿದು ''ಅಮ್ಮ ದಶರಥ ಮಹಾರಾಜನು ನಿನಗೆ ಪತಿಯಾಗಿದ್ದಾನೆ. ಈ ರಾಷ್ಟ್ರಕ್ಕೆ ದೊರೆಯಾಗಿದ್ದಾನೆ. ಅವನ ಆಜ್ಞೆಗೆ ವಿರುದ್ಧವಾಗಿ ಹೇಳುವುದು ನಿನ್ನ ಕರ್ತವ್ಯವಲ್ಲ'' ಎಂದನು. ಕೌಸಲ್ಯೆಗೆ ಏನು ಹೇಳಬೇಕೆಂಬುದು ತೋರದಾಯಿತು. ಕಡೆಗೆ ''ಮಗನೆ, ಅರಣ್ಯಕ್ಕೆ ಹೋಗುವುದೇ ನಿನ್ನ ನಿಶ್ಚಯವಾದರೆ ನಾನೂ ನಿನ್ನ ಜೊತೆಯಲ್ಲಿ ಬರುತ್ತೇನೆ. ನನ್ನನ್ನು ಕರೆದುಕೊಂಡು ಹೋಗು'' ಎಂದಳು. ಶ್ರೀರಾಮನು ಮತ್ತೆ ಕೈಮುಗಿದು ''ಅಮ್ಮ ನನ್ನ ಮೇಲಿನ ವಾತ್ಸಲ್ಯದಿಂದ ಹೀಗೆ ಹೇಳುತ್ತಿದ್ದೀಯೆ. ನಿನ್ನ ಕಷ್ಟವನ್ನೂ ದುಃಖವನ್ನೂ ನಾನು ಬಲ್ಲೆನು. ಆದರೆ ಪುತ್ರಮೋಹದಿಂದ ಧರ್ಮವಿರುದ್ಧವಾಗಿ ನಡೆದುಕೊಳ್ಳ ಬಾರದು. ತಂದೆಯಾದರೋ ವೃದ್ಧನಾಗಿದ್ದಾನೆ. ಕೈಕೇಯಿಗೆ ಗೊತ್ತಿಲ್ಲದೆ ಮಾತುಕೊಟ್ಟು ಇಕ್ಕಳದಲ್ಲಿ ಸಿಕ್ಕಿಕೊಂಡು ಪರಿತಪಿಸುತ್ತಿದ್ದಾನೆ. ಇದರಲ್ಲಿ ಸಂದೇಹವಿಲ್ಲ. ಈ ಸಮಯದಲ್ಲಿ ನೀನು ನಮ್ಮ ತಂದೆಯ ಬಳಿಯಲ್ಲಿದ್ದು ಪತಿಶುಶ್ರೂಷೆ ಮಾಡುತ್ತ ಅವನ ಹಿತವನ್ನು ನೋಡಿಕೊಳ್ಳಬೇಕು. ಅದು ನಿನ್ನ ಧರ್ಮ. ನಿನ್ನ ಕರ್ತವ್ಯ. ಪತಿಯನ್ನು ತೊರೆದು ಮಗನ ಹಿಂದೆ ಹೊರಡುವುದು ವಿಹಿತವಲ್ಲ. ಧರ್ಮಜ್ಞೆಯಾದ ನಿನಗೆ ಅದು ಸಲ್ಲದು'' ಎಂದನು. ಕೌಸಲ್ಯೆಗೆ ದಿಕ್ಕು ತೋಚದಾಯಿತು. ರಾಘವನು ಇನ್ನು ತಡಮಾಡುವುದು

ಸರಿಯಲ್ಲವೆಂದು ಭಾವಿಸಿ ''ಅಮ್ಮ, ನೀನು ಚಿಂತಿಸಬೇಡ. ಹದಿನಾಲ್ಕು ವರ್ಷ ವನವಾಸದಲ್ಲಿದ್ದು ನಿನ್ನ ಆಶೀರ್ವಾದದಿಂದ, ಸುಖವಾಗಿ ಬಂದು ಮತ್ತೆ ನಿನ್ನ ಪಾದಗಳಿಗೆ ವಂದಿಸುತ್ತೇನೆ. ಧೈರ್ಯದಿಂದಿರು. ವನವಾಸಕ್ಕೆ ಹೊರಟಿರುವ ನನಗೆ ಆಶೀರ್ವಾದ ಮಾಡು'' ಎಂದನು. ದಿಕ್ಕುಗಾಣದ ಕೌಸಲ್ಯೆಯು ''ವತ್ಸ, ನೀನು ವನವಾಸಕ್ಕೆ ಹೋಗಲೇಬೇಕೆಂದು ನಿಶ್ಚಯಿಸಿದ್ದೀಯೆ. ಯಾವ ಧರ್ಮವನ್ನು ನೀನು ಕಾಪಾಡುತ್ತಿರುವೆಯೋ ಆ ಧರ್ಮವೇ ನಿನ್ನನ್ನು ಕಾಪಾಡಲಿ. ಸಮಸ್ತ ಮಹರ್ಷಿಗಳೂ ನಿನಗೆ ಮಂಗಳವನ್ನುಂಟು ಮಾಡಲಿ. ಎಲ್ಲ ದೇವತೆಗಳೂ, ದಿಕ್ಪಾಲಕರೂ ನಿನ್ನನ್ನು ಸದಾ ರಕ್ಷಿಸುತ್ತಿರಲಿ. ಅದಿತಿಯು ತನ್ನ ಮಗನಾದ ಇಂದ್ರನಿಗೆ ಯಾವ ಯಾವ ಮಂಗಳವನ್ನು ಹಾರೈಸಿದಳೋ ಅದೆಲ್ಲವೂ ನಿನಗೆ ಕೈಗೂಡಲಿ. ಶ್ರೀಮನ್ನಾರಾಯಣನು ಮಂಗಳ ಮೂರ್ತಿಯಾಗಿ ನಿನಗೆ ಕಲ್ಯಾಣ ಪರಂಪರೆಯನ್ನು ಅನುಗ್ರಹಿಸಲಿ'' ಎಂದು ನುಡಿದು ಶ್ರೀರಾಮನ ಶಿರಸ್ಸಿನ ಮೇಲೆ ಅಕ್ಷತೆಯನ್ನು ಹಾಕಿ ಹರಸಿದಳು. ಮಗನನ್ನು ಸೆಳೆದಪ್ಪಿಕೊಂಡು ತಡವರಿಸುತ್ತ ತೊದಲುತ್ತಾ ''ರಾಮ, ಸುಖವಾಗಿ ಅಯೋಧ್ಯೆಗೆ ಹಿಂದಿರುಗಿ ಬಂದು ನೀನು ಅರಮನೆಯಲ್ಲಿರುವುದನ್ನು ನಾನು ಕಣ್ಣಾರೆ ನೋಡುವಂತಾಗಲಿ. ನಾನು ನಿತ್ಯವೂ ಪೂಜಿಸುವ ಎಲ್ಲ ದೇವತೆಗಳೂ ನಿನ್ನನ್ನು ಕಾಪಾಡಲಿ'' ಎಂದು ನುಡಿದಳು. ಮತ್ತೆ ಮತ್ತೆ ಅವನನ್ನು ಬಿಗಿದಪ್ಪಿಕೊಂಡಳು. ಮಹಾತೇಜಸ್ವಿಯೂ ಕೀರ್ತಿಶಾಲಿಯೂ ಆದ ಶ್ರೀರಾಮನು ತಾಯಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಸೀತೆಯ ಅಂತಃಪುರಕ್ಕೆ ಹೊರಟನು. ಲಕ್ಷ್ಮಣನು ಶೋಕಕ್ರೋಧಗಳಿಂದ ದಿಙ್ಮೂಢನಾಗಿ ರಾಘವನನ್ನು ಹಿಂಬಾಲಿಸಿದನು.

ಅನಂತರ ಶ್ರೀರಾಮನು ತನ್ನ ಭವನಕ್ಕೆ ತೆರಳಿ ಸೀತೆಯ ಅಂತಃಪುರವನ್ನು ಪ್ರವೇಶಿಸಿದನು. ಲಕ್ಷ್ಮಣನು ಹೊರಗೇ ನಿಂತಿದ್ದನು. ಸೀತೆಯನ್ನು ಕಂಡೊಡನೆ ಶ್ರೀರಾಮನಿಗೆ ದುಃಖವುಂಟಾಯಿತು. ಸಂತೋಷದಿಂದ ಹಿಗ್ಗುತ್ತಿರುವ ಈ ಮುಗ್ಧೆಗೆ ಈ ದುಃಖದ ವೃತ್ತಾಂತವನ್ನು ಹೇಗೆ ತಿಳಿಸಲಿ? ಎಂಬ ಕೊರಗು ಅವನನ್ನು ಬಾಧಿಸುತ್ತಿತ್ತು. ಅವನ ಮುಖದ ಕಳೆ ಕುಂದಿತು. ಗಂಡನನ್ನು ಕಂಡೊಡನೆ ಸೀತೆಯು ತತ್ತರಿಸುತ್ತ ''ನನ್ನೊಡೆಯ, ಇದೇನಿದು? ನಿನ್ನ ಮುಖವೇಕೆ ಬಾಡಿದೆ? ಮುಖದಲ್ಲಿ ಎಂದೂ ಇಲ್ಲದ ಕಾಂತಿಹೀನತೆ ಕಾಣುತ್ತಿದೆಯಲ್ಲ'' ಎಂದು ಕಳವಳಿಸುತ್ತ ನುಡಿದಳು. ಆಗ ಶ್ರೀರಾಮನು ''ಸೀತೆ, ಪೂಜ್ಯನಾದ ನನ್ನ ತಂದೆ ನನ್ನನ್ನು ಕಾಡಿಗೆ ಕಳಿಸಲು ಉದ್ದೇಶಿಸಿದ್ದಾನೆ. ನಾನು ಹದಿನಾಲ್ಕು ವರ್ಷ ಅರಣ್ಯವಾಸದಲ್ಲಿ ಇರಬೇಕಾಗಿದೆ. ಜಾನಕಿ, ನೀನು ಉತ್ತಮ ವಂಶದಲ್ಲಿ ಜನಿಸಿದ್ದೀಯೆ. ಧರ್ಮಸ್ವರೂಪವನ್ನು ತಿಳಿದು ಸದಾ ಧರ್ಮಮಾರ್ಗ ದಲ್ಲಿಯೇ ನಡೆಯುತ್ತಿದ್ದೀಯೆ. ಸತ್ಯಸಂಧನಾದ ನನ್ನ ತಂದೆ ಕೈಕೇಯಿಗೆ ಎರಡು

ವರಗಳನ್ನು ಕೊಟ್ಟಿದ್ದನು. ಆ ವರಗಳನ್ನು ಸಲ್ಲಿಸಬೇಕೆಂದು ಅವಳು ಈಗ ಒತ್ತಾಯ ಮಾಡಿದಳು. ಅದರ ಪ್ರಕಾರ ಈ ಕೋಸಲ ರಾಜ್ಯವು ಭರತನಿಗೆ ಸೇರಬೇಕು. ನಾನು ಹದಿನಾಲ್ಕು ವರ್ಷ ವನವಾಸದಲ್ಲಿರಬೇಕು. ಇದು ಕೈಕೇಯಿಯ ನಿರ್ಬಂಧ. ಇದನ್ನು ನಿನಗೆ ತಿಳಿಸಿ ಹೋಗಬೇಕೆಂದು ನಾನು ಬಂದೆ. ಸೀತೆ, ನೀನು ಭರತನೆದುರಿಗೆ ಯಾವಾಗಲೂ ನನ್ನನ್ನು ಹೊಗಳಬೇಡ. ನನ್ನ ವಿಷಯವನ್ನೇ ಕುರಿತು ಯಾರೊಡನೆಯೂ ಹೆಚ್ಚು ಮಾತಾಡಬೇಡ. ರಾಜನಾದ ಭರತನಿಗೂ, ನನ್ನ ತಂದೆಗೂ ತೃಪ್ತಿಯಾಗುವಂತೆ ನಮ್ರತೆಯಿಂದ ನಡೆದುಕೊ. ನಾನು ಈ ದಿನವೇ ಅರಣ್ಯಕ್ಕೆ ಹೊರಡುವೆನು. ಮಂಗಳಾಂಗಿ, ಪ್ರತಿದಿನ ಉಷಃಕಾಲದಲ್ಲಿ ದೇವಪೂಜೆಯನ್ನು ಮಾಡಿ ನನ್ನ ತಂದೆತಾಯಿಗಳನ್ನು ಕಂಡು ನಮಸ್ಕರಿಸಿ ಬಾ. ಕೌಸಲ್ಯಾದೇವಿಯು ವೃದ್ಧೆಯಾಗಿದ್ದಾಳೆ. ದುಃಖದಿಂದ ಬೆಂದು ಹೋಗಿದ್ದಾಳೆ. ಅವಳ ಯೋಗಕ್ಷೇಮಗಳನ್ನು ನೋಡಿಕೊಂಡಿರು. ಲಕ್ಷ್ಮಣನಂತೆ ಭರತ ಶತ್ರುಘ್ನರೂ ನನಗೆ ತುಂಬ ಪ್ರಿಯರಾದ ತಮ್ಮಂದಿರು. ಅವರೆಲ್ಲರನ್ನೂ ಒಡಹುಟ್ಟಿದವರಂತೆ ನೋಡಿಕೊಳ್ಳುತ್ತಿರು. ಇನ್ನು ನಾನು ಅರಣ್ಯಕ್ಕೆ ಹೊರಡುವೆನು. ನಿನಗೆ ಒಳ್ಳೆಯದಾಗಲಿ. ಯಾರ ಮನಸ್ಸನ್ನೂ ನೋಯಿಸದಂತೆ ಸಮಾಧಾನದಿಂದಿರು'' ಎಂದು ನುಡಿದನು.

ಈ ಮಾತನ್ನು ಕೇಳಿದಾಗ ಸೀತೆಗೆ ತನ್ನ ಪತಿಯ ಮೇಲೆ ಪ್ರಣಯ ಪೂರ್ವಕವಾದ ಕೋಪವೇ ಬಂದಿತು. ಅವಳು ದಶರಥನ ಮೇಲಾಗಲಿ ಕೈಕೇಯಿಯ ಮೇಲಾಗಲಿ ಯಾವ ಆಕ್ಷೇಪವನ್ನೂ ಮಾಡಲಿಲ್ಲ. ಗುರುಹಿರಿಯರ ವಿಷಯದಲ್ಲಿ ಪ್ರತಿಯಾಗಿ ಹೇಳುವುದು ತನಗೆ ಉಚಿತವಲ್ಲವೆಂದು ಆ ಗುಣಶೀಲೆಯ ನಿಶ್ಚಯವಾಗಿತ್ತು. ಆದರೆ ತನ್ನ ಪತಿಯು ತನ್ನನ್ನು ಬಿಟ್ಟು ವನಕ್ಕೆ ಹೋಗುತ್ತಾನೆಂಬುದು ಅವಳ ಮನಸ್ಸಿಗೆ ನೋವನ್ನುಂಟುಮಾಡಿತು. ಶ್ರೀರಾಮನನ್ನು ಕುರಿತು ''ರಾಜಪುತ್ರ, ನೀನು ಇಂಥ ಹಗುರವಾದ ಮಾತನ್ನಾಡಬಹುದೆ? ವನಕ್ಕೆ ಹೋಗಲು ನಿನಗೆ ಆಜ್ಞೆಯಾದರೆ ಅರ್ಧಾಂಗಿಯಾದ ನನಗೂ ಆಜ್ಞೆಯಾದಂತೆಯೇ ಸರಿ. ನಾನು ನಿನ್ನೊಡನೆ ವನವಾಸಕ್ಕೆ ಬರುವುದು ನಿಶ್ಚಯ'' ಎಂದಳು. ಶ್ರೀರಾಮನು ಅವಳನ್ನು ಜೊತೆಗೆ ಕರೆದೊಯ್ಯಲು ಇಷ್ಟಪಡಲಿಲ್ಲ. ''ಸೀತೆ, ನೀನು ಕಾಡನ್ನು ನೋಡಿಲ್ಲ. ಅಲ್ಲಿರುವ ಕಲ್ಲು ಮುಳ್ಳುಗಳನ್ನು ತುಳಿಯುವುದು ಕಷ್ಟಕರವಾದದ್ದು'' ಎಂದನು. ಅದಕ್ಕೆ ಸೀತೆ ''ರಾಮ, ಕಲ್ಲುಮುಳ್ಳುಗಳನ್ನು ತೆಗೆದು ನಿನಗೆ ದಾರಿಮಾಡಿಕೊಡುತ್ತಾ ನಾನೇ ಮುಂದೆ ಹೋಗುವೆನು!'' ಎಂದಳು. ರಾಮನು ''ಅರಣ್ಯದಲ್ಲಿ ಸಿಂಹಗಳೂ, ಹುಲಿಗಳೂ ಗರ್ಜಿಸುತ್ತವೆ. ತೋಳ ಕಾಡಾನೆ ಮೊದಲಾದವುಗಳ ಕಾಟವಿರುತ್ತದೆ. ನೀನು ಬರಬೇಡ'' ಎಂದನು. ''ಧನುರ್ಧಾರಿಯಾದ ನಿನ್ನನ್ನು ನೋಡಿದೊಡನೆ ಅವು ಹೆದರಿ

ಓಡಿಹೋಗುತ್ತವೆ!'' ಎಂದು ಸೀತೆ ಹೇಳಿದಳು. ರಾಮನು ''ಪ್ರಿಯೆ, ಅರಣ್ಯದಲ್ಲಿ ಹೊತ್ತಿಗೆ ಸರಿಯಾಗಿ ಆಹಾರ ದೊರೆಯುವುದಿಲ್ಲ. ಗೆಡ್ಡೆ ಗೆಣಸುಗಳನ್ನು ತಿನ್ನಬೇಕಾಗುತ್ತದೆ'' ಎಂದನು. ಅದಕ್ಕೆ ಸೀತೆ ಹೀಗೆ ಉತ್ತರ ಕೊಟ್ಟಳು. ''ರಾಮ, ನೀನು ಏನನ್ನು ತಿಂದು ಉಳಿಸುವೆಯೋ ಅದನ್ನು ತಿಂದು ನಾನು ತೃಪ್ತಿ ಪಡುತ್ತೇನೆ. ತಣ್ಣೀರು ಸ್ನಾನಕ್ಕೆ ಹೆದರುವುದಿಲ್ಲ. ತವರು ಮನೆಯನ್ನು ನೆನೆಯುವುದಿಲ್ಲ. ನನಗೆ ಕಷ್ಟವಾಯಿತೆಂದು ಕಣ್ಣೀರು ಸುರಿಸುವುದಿಲ್ಲ. ನೀನಿಲ್ಲದೆ ಅರಮನೆಯ ಯಾವ ಭೋಗವೂ ನನಗೆ ರುಚಿಸುವುದಿಲ್ಲ. ನಿನ್ನ ಜೊತೆಯಲ್ಲಿ ಬಾಳುವುದೇ ನನಗೆ ಸ್ವರ್ಗ. ಅದೇ ನನ್ನ ಧರ್ಮ. ಎಂತಹ ಗೊಂಡಾರಣ್ಯದಲ್ಲಿಯೂ ತವರು ಮನೆಯಲ್ಲಿದ್ದಂತೆ ನಿನ್ನೊಡನೆ ಸುಖವಾಗಿರುತ್ತೇನೆ. ನನ್ನನ್ನು ಕರೆದುಕೊಂಡು ಹೋಗು'' ಎಂದು ಹಟ ಹಿಡಿದಳು. ಶ್ರೀರಾಮನು ಕೋಮಲೆಯಾದ ಆ ಮುಗ್ಧೆಯನ್ನು ಕರೆದೊಯ್ಯಲು ಇಚ್ಛಿಸದೆ ಇನ್ನೂ ಅನೇಕ ವಿಧದಲ್ಲಿ ಅವಳಿಗೆ ಸಮಾಧಾನ ಹೇಳಿದನು. ಯಾವುದಕ್ಕೂ ಸೀತೆ ಜಗ್ಗಲಿಲ್ಲ. ಕಡೆಗೆ ಸಿಟ್ಟಿನಿಂದ ಅವಳು ''ನನ್ನನ್ನು ಜೊತೆಗೆ ಕರೆದೊಯ್ಯದಿದ್ದರೆ ವಿಷವನ್ನು ತಿಂದು ಪ್ರಾಣಬಿಡುವೆನು. ನನ್ನೊಬ್ಬಳನ್ನು ರಕ್ಷಿಸಲಾರದೆ ಹೀಗೆ ಮಾತಾಡುತ್ತಿರುವೆಯಾ? ನನ್ನ ತಂದೆ ಮದುವೆ ಮಾಡಿಕೊಡುವಾಗ ನೀನು ವೀರನಾದ ಗಂಡೆಂದು ತಿಳಿದಿದ್ದನೊ? ಅಥವಾ ಹೇಡಿಯೆಂದು ಭಾವಿಸಿದ್ದನೊ?'' ಎಂದು ಹೇಳಿ ಗಂಡನನ್ನು ಗಟ್ಟಿಯಾಗಿ ಅಪ್ಪಿಕೊಂಡು ಗಳಗಳನೆ ಕಣ್ಣೀರು ಸುರಿಸುತ್ತಾ ಅಳತೊಡಗಿದಳು. ಆಗ ಶ್ರೀರಾಮನು ಬೇರೊಂದು ಉಪಾಯವನ್ನು ಕಾಣಲಾರದೆ ''ಪ್ರಿಯತಮೆ – ಸೀತೆ, ನೀನು ವನವಾಸದಲ್ಲಿ ತೊಳಲುವುದಕ್ಕಾಗಿಯೇ ಹುಟ್ಟಿದಂತೆ ಕಾಣುತ್ತದೆ. ನಿನ್ನನ್ನು ಕರೆದೊಯ್ಯುವೆನು. ಜೊತೆಗೆ ಬಾ. ನನ್ನ ಪ್ರಾಣಕ್ಕಿಂತಲೂ ಪ್ರಿಯತಮಳಾದವಳು ನೀನು'' ಎಂದು ಸೀತೆಯ ಕಣ್ಣೀರನ್ನು ಒರೆಸುತ್ತಾ ನುಡಿದನು. ಆ ಜನಕಪುತ್ರಿಗೆ ಅದರಿಂದ ಪರಮಾನಂದವಾಯಿತು. ಶ್ರೀರಾಮನು ''ಸೀತೆ, ಇನ್ನು ಹೊರಡಲು ಸಿದ್ಧಳಾಗು. ಅರಮನೆಯಲ್ಲಿರುವ ಈ ಭೋಗವಸ್ತುಗಳು ನಮಗೆ ಅನಾವಶ್ಯಕ. ಇವೆಲ್ಲವನ್ನೂ ನಿನಗೆ ಪ್ರಿಯರಾದ ಸೇವಕ ವರ್ಗದವರಿಗೂ ಯಾಚಕರಿಗೂ ಕೊಟ್ಟುಬಿಡು'' ಎಂದನು. ಜಾನಕಿಯು ಸಂತೋಷದಿಂದ ನಲಿಯುತ್ತ ಸೇವಕರನ್ನೂ ಕರೆಕರೆದು ಅಮೂಲ್ಯವಾದ ವಸ್ತುಗಳನ್ನೂ ಐಶ್ವರ್ಯವನ್ನೂ ದಾನ ಮಾಡಿದಳು.

ಅಷ್ಟರಲ್ಲಿ ಲಕ್ಷ್ಮಣನು ಖಿನ್ನವದನನಾಗಿ ಒಳಗೆ ಬಂದು ಶ್ರೀರಾಮನ ಪಾದಗಳಿಗೆ ನಮಸ್ಕರಿಸಿ ''ಅಣ್ಣಾ, ನಾನೂ ನಿನ್ನೊಡನೆ ಬರುತ್ತೇನೆ. ನಿನ್ನನ್ನೂ ಅತ್ತಿಗೆಯನ್ನೂ ಸೇವಿಸುತ್ತಾ ಸಂತೋಷಿಸುತ್ತೇನೆ. 'ಬೇಡ' ಎನ್ನಬೇಡ. 'ಸದಾ ನನ್ನೊಡನಿರು' ಎಂದು

ನೀನು ಹಿಂದೆಯೇ ಹೇಳಿದ್ದೀಯಲ್ಲವೆ? ಅದರಂತೆ ನಾನು ನಿಮ್ಮೊಡನಿದ್ದು ನಿಮ್ಮನ್ನು ಸೇವಿಸುತ್ತಾ ಹದಿನಾಲ್ಕು ವರ್ಷಗಳ ಕಾಲವನ್ನು ಸಾರ್ಥಕ ಪಡಿಸಿಕೊಳ್ಳುವೆನು'' ಎಂದನು. ಶ್ರೀರಾಮನು ಎಷ್ಟು ಹೇಳಿದರೂ ಅವನು ಒಪ್ಪದೇ ಹೋದನು. ಲಕ್ಷ್ಮಣನ ಆಗ್ರಹಕ್ಕೆ ಮಣಿದು ಶ್ರೀರಾಮನು ಸಮ್ಮತಿಸಿದನು. ಒಡನೆಯೇ ಲಕ್ಷ್ಮಣನು ತನ್ನ ತಾಯಿಯಾದ ಸುಮಿತ್ರೆಯ ಬಳಿಗೆ ಹೋಗಿ ಈ ಸಂಗತಿಯೆಲ್ಲವನ್ನೂ ತಿಳಿಸಿ ವನವಾಸಕ್ಕೆ ಹೋಗಲು ಅವಳ ಅನುಜ್ಞೆಯನ್ನು ಕೇಳಿದನು. ಲಕ್ಷ್ಮಣನು ಹಠಸ್ವಭಾವದವನೆಂಬುದು ಆ ತಾಯಿಗೆ ಚೆನ್ನಾಗಿ ಗೊತ್ತು. ಅವಳು ಬೇರೆ ಏನನ್ನೂ ವಿರೋಧಿಸಿ ಹೇಳಲಾರದೆ ''ಮಗನೆ, ಲಕ್ಷ್ಮಣ, ನೀನು ಅರಣ್ಯಕ್ಕೆ ಹೋಗಬಹುದು. ಅಡವಿಯೇ ನಿನ್ನ ಪಾಲಿಗೆ ಅಯೋಧ್ಯೆಯಾಯಿತು. ಜನಕ ಪುತ್ರಿಯೇ ನಿನ್ನ ತಾಯಿಯಾದ ನಾನೆಂದೂ ಶ್ರೀರಾಮನೇ ತಂದೆಯಾದ ದಶರಥನೆಂದೂ ತಿಳಿದು ಅವರ ಸೇವೆಯಲ್ಲಿ ನಿರತನಾಗಿರು. ನಿನಗೆ ಭಗವಂತನು ಸರ್ವವಿಧವಾದ ಮಂಗಳವನ್ನು ಅನುಗ್ರಹಿಸಲಿ'' ಎಂದಳು. ಲಕ್ಷ್ಮಣನು ತಾಯಿಗೆ ವಂದಿಸಿ ಪತ್ನಿಯಾದ ಊರ್ಮಿಳೆಯ ಬಳಿಗೆ ಹೋಗಿ ತನ್ನ ವನವಾಸದ ವಿಷಯವನ್ನು ಹೇಳಿ ಅವಳನ್ನು ಹೇಗೋ ಸಮಾಧಾನಪಡಿಸಿ ವನವಾಸಕ್ಕೆ ಸಿದ್ಧನಾಗಿ ಶ್ರೀರಾಮನ ಬಳಿಗೆ ಹೋದನು.*

ಇತ್ತಲಾಗಿ ಶ್ರೀರಾಮನು ತನ್ನ ಮುಂದೆ ಕಣ್ಣೀರು ಸುರಿಸುತ್ತ ನಿಂತಿದ್ದ ಪರಿಚಾರಕರಿಗೆ ಯಥೇಚ್ಛವಾಗಿ ಧನವನ್ನಿತ್ತು ''ನಾವು ಹಿಂದಿರುಗಿ ಬರುವವರೆಗೆ ನನ್ನ ಮನೆಯನ್ನೂ ಲಕ್ಷ್ಮಣನ ಮನೆಯನ್ನೂ ಸ್ವಚ್ಛವಾಗಿ ಇರಿಸಿ ನೋಡಿಕೊಳ್ಳುತ್ತಿರ ಬೇಕೆಂದೂ, ಅವನ್ನು ಶೂನ್ಯವಾಗಿ ಮಾಡಕೂಡದೆಂದೂ ಆಜ್ಞಾಪಿಸಿದನು. ಅನಂತರ ಕೋಶಾಧ್ಯಕ್ಷನಿಗೆ ತನ್ನ ಬೊಕ್ಕಸದಲ್ಲಿರುವ ಧನವೆಲ್ಲವನ್ನೂ ತಂದು ಸುರಿಯುವಂತೆ ಆಜ್ಞಾಪಿಸಿದನು. ಲಕ್ಷ್ಮಣನೊಡಗೂಡಿ ಆ ಧನವೆಲ್ಲವನ್ನೂ ದ್ವಿಜರಿಗೂ, ಬಡವರಿಗೂ, ವೃದ್ಧರಿಗೂ ಕರೆಕರೆದು ಕೊಡತೊಡಗಿದನು. ಸೀತೆಯೂ ದಾಸಿಯರಿಗೆ ಬೆಲೆ ಬಾಳುವ ನಾನಾ ವಸ್ತುಗಳನ್ನು ಕೊಟ್ಟುಬಿಟ್ಟಳು.

ಈ ಸುದ್ದಿ ನಗರದಲ್ಲಿ ಹಬ್ಬಿತು. ಅಲ್ಲಿ ತ್ರಿಜಟನೆಂಬ ಒಬ್ಬ ಬಡಬ್ರಾಹ್ಮಣನಿದ್ದನು. ಅವನ ಹೆಂಡತಿಗೆ ಶ್ರೀರಾಮನು ದಾನ ಮಾಡುವ ಸುದ್ದಿ ತಿಳಿಯಿತು. ಅವಳು ಆ ರಾಜಪುತ್ರನ ಬಳಿಗೆ ಹೋಗಿ ಏನನ್ನಾದರೂ ಕೇಳು ಎಂದು ಗಂಡನನ್ನು ಪ್ರೇರಿಸಿದಳು.

* ಲಕ್ಷ್ಮಣನು ಊರ್ಮಿಳೆಯನ್ನು ಕಂಡು ಮಾತಾಡಿದ ವಿಷಯ ವಾಲ್ಮೀಕಿ ರಾಮಾಯಣದಲ್ಲಿ ಬಂದಿಲ್ಲ. ಅದನ್ನು ನಾವು ಊಹಿಸಿಕೊಳ್ಳಬೇಕು.

ಅಂತೆಯೇ ತ್ರಿಜಟನು ಶ್ರೀರಾಮುನ ಬಳಿಗೆ ಬಂದು ತನ್ನ ಕಷ್ಟವನ್ನು ಹೇಳಿಕೊಂಡನು. ಆಗ ರಾಘವನು ''ಓ ದ್ವಿಜೋತ್ತಮ, ಅದೋ ಅಲ್ಲಿ ನೋಡು; ಸರಯೂ ತೀರದಲ್ಲಿ ನನಗೆ ಸೇರಿದ ಗೋವುಗಳು ಮೇಯುತ್ತಿವೆ. ನಿನ್ನ ಕೈಯಲ್ಲಿರುವ ದೊಣ್ಣೆಯನ್ನು ಎಷ್ಟು ದೂರ ಎಸೆಯುವೆಯೋ ಅಲ್ಲಿಯವರೆಗಿನ ದನಕರುಗಳೆಲ್ಲ ನಿನ್ನವು!'' ಎಂದನು. ಒಡನೆಯೇ ಆ ಬ್ರಾಹ್ಮಣನು ತನ್ನ ನಡುವನ್ನು ಬಿಗಿದು ಕಟ್ಟಿ ದೊಣ್ಣೆಯನ್ನು ಗಿರಗಿರನೆ ತಿರುಗಿಸಿ ವೇಗದಿಂದ ಆ ದೊಣ್ಣೆಯನ್ನು ಬೀಸಿ ಎಸೆದನು! ಆಗ ರಾಘವನು ನಗುತ್ತ ''ಬ್ರಾಹ್ಮಣೋತ್ತಮ, ಅಲ್ಲಿರುವ ಹಸುಗಳೆಲ್ಲವೂ ನಿನ್ನವು. ಅವೆಲ್ಲವನ್ನೂ ನೀನು ಒಯ್ಯಬಹುದು. ಹಾಸ್ಯಕ್ಕಾಗಿ ದೊಣ್ಣೆಯ ವಿಷಯವನ್ನು ಹೇಳಿದೆನು. ನನ್ನನ್ನು ಮನ್ನಿಸು'' ಎಂದನು. ತ್ರಿಜಟನು ಬಹಳ ಸಂತೋಷದಿಂದ ಹೋಗಿ ಆ ಗೋವುಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಈ ಪ್ರಕಾರವಾಗಿ ಶ್ರೀರಾಮನ ಐಶ್ವರ್ಯವೆಲ್ಲವೂ ಬಡಬಗ್ಗರಿಗೆ ಸೇರಿತು.

೧೮

ಸೀತಾ, ರಾಮ, ಲಕ್ಷ್ಮಣರು ದಶರಥನನ್ನು ಕಾಣಲು ಹೋಗುವುದು. ಕೈಕೇಯಿಯ ಛಲ. ವನವಾಸಕ್ಕೆ ಸಿದ್ಧತೆ.

ಹೀಗೆ ರಾಮಲಕ್ಷ್ಮಣರಿಬ್ಬರೂ ಸೀತೆಯೊಡಗೂಡಿ ವಸ್ತ್ರ ಧನ ಧಾನ್ಯಗಳನ್ನು ದಾನ ಮಾಡಿ ತಂದೆಯನ್ನು ನೋಡುವುದಕ್ಕಾಗಿ ಹೋದರು. ಆ ವೀರರಿಬ್ಬರೂ ದಿವ್ಯಾಯುಧಗಳನ್ನು ಧರಿಸಿ ಪಾದಚಾರಿಗಳಾಗಿ ರಾಜಬೀದಿಯಲ್ಲಿ ಹೋಗುತ್ತಿದ್ದರು. ಅವರೊಡನೆ ಸೀತೆಯು ಹರ್ಷದಿಂದ ಹೋಗುತ್ತಿದ್ದಳು. ಪೌರರೆಲ್ಲರೂ ಈ ವನವಾಸದ ವೃತ್ತಾಂತವನ್ನು ತಿಳಿದು ಅತ್ಯಂತ ದುಃಖಿತರಾಗಿದ್ದರು. ದಶರಥನ ಮೇಲೆ ಅವರಿಗೆ ಕೋಪವುಂಟಾಯಿತು. ಕೈಕೇಯಿಯನ್ನು ನಿಂದಿಸುತ್ತಲೇ ಇದ್ದರು. ಬೀದಿಯಲ್ಲಿ ಸ್ಥಳವಿಲ್ಲದೆ ಎಷ್ಟೋ ಜನರು ಮಹಡಿಯನ್ನೇರಿ ನೋಡುತ್ತಿದ್ದರು. ಕಿಕ್ಕಿರಿದು ನೆರೆದಿದ್ದ ಸ್ತ್ರೀಯರೂ ಪುರುಷರೂ ರಾಮಲಕ್ಷ್ಮಣರನ್ನೂ ಸೀತೆಯನ್ನೂ ನೋಡಿ ನೋಡಿ ಶೋಕ ಸಂತಪ್ತರಾಗಿ ಕಣ್ಣೀರು ತುಂಬಿಕೊಂಡಿದ್ದರು. ಕೈಕೇಯಿಯ ದುರ್ಬುದ್ಧಿಯನ್ನೂ ಮಹಾರಾಜನ ಅವಿವೇಕವನ್ನೂ ಕೆಲವರು ಹೇಳಿಕೊಳ್ಳುತ್ತಿದ್ದರು. ಇನ್ನು ಕೆಲವರು ಈ ರಾಜಪುತ್ರರ ಗುಣಶೀಲಗಳನ್ನೂ ಸೀತೆಗೆ ಬಂದ ಆಪತ್ತನ್ನೂ ಅವಳ ಪಾತಿವ್ರತ್ಯವನ್ನೂ ಕುರಿತು ಮಾತಾಡುತ್ತಿದ್ದರು. ಶ್ರೀರಾಮಾದಿಗಳು ಅವರ ಯಾವ ಪ್ರತಿಕ್ರಿಯೆಯನ್ನೂ ಗಮನಿಸದೆ ನೇರವಾಗಿ ದಶರಥ ಮಹಾರಾಜನಿದ್ದ ಅರಮನೆಯನ್ನು ಪ್ರವೇಶಿಸಿದರು. ಶ್ರೀರಾಮನು ಅಲ್ಲಿದ್ದ ಸುಮಂತ್ರನನ್ನು ಕರೆದು ''ಸುಮಂತ್ರ, ನಾನು ಬಂದಿರುವುದನ್ನು

ಮಹಾರಾಜನಿಗೆ ತಿಳಿಸು'' ಎಂದನು. ದುಃಖಸಂತಪ್ತನಾದ ಸುಮಂತ್ರನು ಒಳಕ್ಕೆ ಹೋಗಿ, ಒಂದೇ ಸಮನೆ ಅಳುತ್ತ ನಿಟ್ಟುಸಿರು ಬಿಡುತ್ತಿದ್ದ ದಶರಥನನ್ನು ಕಂಡನು. ತೇಜೋಹೀನನಾಗಿ ಬಾಡಿದ ಮುಖವುಳ್ಳ ದಶರಥನು ನೀರಿಲ್ಲದ ಕೆರೆಯಂತೆ ಶೋಚನೀಯನಾಗಿದ್ದನು. ಅವನ ಮನಸ್ಸು ರಾಮನನ್ನೇ ನೆನೆನೆನೆದು ತಳಮಳಿಸುತ್ತಿತ್ತು. ಸುಮಂತ್ರನು ನಡುಗುವ ಧ್ವನಿಯಿಂದ ''ಮಹಾರಾಜ, ನಿನ್ನ ಕುಮಾರನು ಬಾಗಿಲಲ್ಲಿ ಬಂದು ನಿಂತಿದ್ದಾನೆ. ಸತ್ಯಸಂಧನಾದ ನಿನ್ನ ಪುತ್ರನು ಸಕಲ ಬಂಧುಗಳನ್ನೂ ಬೀಳ್ಕೊಂಡು ಬಂದು ನಿನ್ನನ್ನು ನೋಡಲು ಕಾದಿದ್ದಾನೆ. ಅರಣ್ಯಕ್ಕೆ ಹೊರಟು ನಿಂತಿದ್ದಾನೆ'' ಎಂದನು. ಆ ನರೇಂದ್ರನು ಸತ್ಯವಾದಿಯಾದ್ದರಿಂದ ಧೈರ್ಯವನ್ನು ತಂದುಕೊಂಡು, ''ಸುಮಂತ್ರ, ಅರಮನೆಯಲ್ಲಿರುವ ಅಂತಃಪುರದ ಎಲ್ಲ ಸ್ತ್ರೀಯರನ್ನೂ ಬರಹೇಳು. ಅವರಿಂದೊಡಗೂಡಿಯೇ ನಾನು ಆ ಧರ್ಮಾತ್ಮನನ್ನು ನೋಡ ಬೇಕೆಂದಿದ್ದೇನೆ'' ಎಂದನು. ರಾಜಾಜ್ಞೆಯಂತೆ ಸುಮಂತ್ರನು ಅಂತಃಪುರದ ಸ್ತ್ರೀಯರಿಗೆ ತಿಳಿಸಲಾಗಿ ಅವರೆಲ್ಲರೂ ಕೌಸಲ್ಯೆ ಸುಮಿತ್ರೆಯರೊಡನೆ ರಾಜನಿದ್ದ ಸಭಾಂಗಣಕ್ಕೆ ಬಂದರು.

ಅತ್ತು ಅತ್ತು ಅವರ ಕಣ್ಣು ಕೆಂಪಾಗಿತ್ತು. ಆಗ ದಶರಥನು ''ಸುಮಂತ್ರ, ನನ್ನ ಮಗನನ್ನು ಕರೆದುಕೊಂಡು ಬಾ'' ಎಂದು ನುಡಿದನು. ಅನಂತರ ಸುಮಂತ್ರನು ಹೇಳಿದಂತೆ ರಾಮ, ಲಕ್ಷ್ಮಣ, ಸೀತೆ – ಈ ಮೂವರು ಸಭಾಂಗಣವನ್ನು ಪ್ರವೇಶಿಸಿದರು. ದೂರದಿಂದಲೇ ಕೈಮುಗಿದುಕೊಂಡು ಬರುತ್ತಿದ್ದ ಅವರನ್ನು ನೋಡಿ ದಶರಥನು ದುಃಖವನ್ನು ತಡೆಯಲಾರದೆ ಥಟ್ಟನೆ ತನ್ನ ಪೀಠದಿಂದೆದ್ದು ''ರಾಮಾ'' ಎಂದು ಕೂಗುತ್ತ ಅವರ ಬಳಿಗೆ ಓಡುತ್ತ ಹೋದನು. ರಾಮನ ಸಮೀಪಕ್ಕೆ ಹೋಗುವುದರೊಳಗೆ ಎಚ್ಚರದಪ್ಪಿ ನೆಲದ ಮೇಲೆ ಬಿದ್ದು ಹೋದನು. ರಾಮಲಕ್ಷ್ಮಣರು ತಂದೆಯ ಬಳಿಗೆ ಓಡಿ ಬಂದರು. ಹೆಂಗಸರು 'ಅಯ್ಯೊ, ಅಯ್ಯೊ' ಎಂದು ಕೂಗಿಕೊಂಡರು. ರಾಮಲಕ್ಷ್ಮಣರು ಸೀತೆಯೊಡನೆ ಅಳುತ್ತ ದಶರಥನನ್ನು ಎತ್ತಿ ಒಂದು ಮಂಚದ ಮೇಲೆ ಮಲಗಿಸಿದರು. ಸ್ವಲ್ಪ ಹೊತ್ತಿನ ಮೇಲೆ ಅವನಿಗೆ ಎಚ್ಚರ ಹುಟ್ಟಿತು. ಶೋಕಸಮುದ್ರದಲ್ಲಿ ಅವನು ಮುಳುಗಿ ಹೋಗಿದ್ದನು. ಶ್ರೀರಾಮನು ದಶರಥನಿಗೆ ಕೈ ಮುಗಿದು, ''ಮಹಾರಾಜ, ನಾನು ಹೋಗಿ ಬರುತ್ತೇನೆ. ದಂಡಕಾರಣ್ಯಕ್ಕೆ ಹೊರಟಿದ್ದೇನೆ. ಸೀತೆಯೂ ಲಕ್ಷ್ಮಣನೂ ನನ್ನೊಡನೆ ಹೊರಟಿದ್ದಾರೆ. ಅವರಿಗೆ ಎಷ್ಟು ಸಮಾಧಾನ ಹೇಳಿದರೂ ಕೇಳಲಿಲ್ಲ. ನನ್ನೊಡನೆ ಬರಲು ನಿಶ್ಚಯಿಸಿ ಬಿಟ್ಟಿದ್ದಾರೆ. ನನಗೂ, ಲಕ್ಷ್ಮಣನಿಗೂ, ಸೀತೆಗೂ ಅರಣ್ಯವಾಸಕ್ಕೆ ಹೋಗಲು ಈಗ ಅನುಮತಿಯನ್ನು ನೀಡಬೇಕು'' ಎಂದು ಅರಿಕೆ ಮಾಡಿದನು. ದಶರಥನು ಏನನ್ನೂ

ಹೇಳಲಾರದೆ ''ರಾಮ, ಕೈಕೇಯಿಗೆ ವರವನ್ನು ಕೊಟ್ಟು ದೊಡ್ಡ ತಪ್ಪು ಮಾಡಿದೆನು. ನನ್ನ ಬುದ್ಧಿಗೆ ಮಂಕು ಹಿಡಿಯಿತು. ನನ್ನನ್ನು ಬಂಧಿಸಿ ಸೆರೆಯಲ್ಲಿಟ್ಟು ನೀನು ರಾಜನಾಗು. ಸಂಕೋಚವೇ ಬೇಡ. ಇದು ಸಂಪೂರ್ಣವಾಗಿ ನನಗೆ ಇಷ್ಟವಾದದ್ದು'' ಎಂದನು. ಧರ್ಮಾತ್ಮನೂ ವಾಗ್ವಿಶಾರದನೂ ಆದ ಶ್ರೀ ರಾಮಚಂದ್ರನು ಕೈಗಳೆರಡನ್ನೂ ಜೋಡಿಸಿ ತಂದೆಯನ್ನು ಕುರಿತು ''ಮಹಾರಾಜ, ಇನ್ನೂ ಸಾವಿರಾರು ವರ್ಷ ಈ ಪೃಥ್ವೀಮಂಡಲಕ್ಕೆ ನೀನು ಅಧಿಪತಿಯಾಗಿರಬೇಕು. ನೀನು ಕೊಟ್ಟ ಮಾತನ್ನು ನಾನು ಸುಳ್ಳುಮಾಡುವುದು ಅಧರ್ಮ. ನಾನು ಹದಿನಾಲ್ಕು ವರ್ಷ ಅರಣ್ಯದಲ್ಲಿದ್ದು ಪ್ರತಿಜ್ಞೆಯು ಮುಗಿದ ಮೇಲೆ ಪುನಃ ಬಂದು ನಿನ್ನ ಪಾದಗಳನ್ನು ಹಿಡಿದುಕೊಳ್ಳುತ್ತೇನೆ'' ಎಂದನು. ದಶರಥನನ್ನು ಸತ್ಯಪಾಶವು ಬಿಗಿದುಕಟ್ಟಿತ್ತು. ಕೈಕೇಯಿಯು ಹತ್ತಿರದಲ್ಲಿ ನಿಂತು ಕಿವಿಯಲ್ಲಿ 'ಈಗಲೇ ರಾಮನನ್ನು ವನಕ್ಕೆ ಕಳಿಸು' ಎಂದು ಒತ್ತಾಯ ಪಡಿಸುತ್ತಿದ್ದಳು. ದಶರಥನು ದಿಕ್ಕು ತೋರದೆ ಕಣ್ಣೀರು ಸುರಿಸುತ್ತ ''ವತ್ಸ, ಹೋಗಿ ಬಾ. ನಿನಗೆ ಮಂಗಳವಾಗಲಿ! ಶ್ರೇಯಸ್ಸಾಗಲಿ! ಶುಭವಾಗಲಿ! ಯಾವ ವಿಪತ್ತೂ ನಿಮಗೆ ಸಂಭವಿಸದಿರಲಿ. ರಘುನಂದನ, ಸತ್ಯಾತ್ಮನಾದ ನಿನ್ನ ಮನಸ್ಸನ್ನು ತಿರುಗಿಸಲು ಯಾರಿಗೂ ಸಾಧ್ಯವಿಲ್ಲ, ಆದರೆ, ಮಗನೆ, ಈ ದಿನ – ಈ ಒಂದು ರಾತ್ರಿ ಇಲ್ಲಿಯೇ ಇರು. ನಿನ್ನನ್ನು ಉಪಚರಿಸಿ ನನ್ನ ಮನಸ್ಸಿನಲ್ಲಿರುವ ಎಲ್ಲ ಆಸೆಗಳನ್ನೂ ತೀರಿಸಿಕೊಳ್ಳುತ್ತೇನೆ. ನಾಳೆ ಪ್ರಾತಃಕಾಲ ಹೋಗಬಹುದು. ಮಗನೆ, ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನೀನು ವನಕ್ಕೆ ಹೋಗುವುದು ನನಗೆ ಸ್ವಲ್ಪವೂ ಇಷ್ಟವಿಲ್ಲ. ಬೂದಿ ಮುಚ್ಚಿದ ಕೆಂಡದಂತಿದ್ದ ಈ ಹೆಂಗಸು ನನ್ನನ್ನು ಅಲ್ಲಾಡಿಸಿಬಿಟ್ಟಳು. ಅವಳ ಮೋಸಕ್ಕೆ ಬಲಿಯಾದೆ'' ಎಂದು ಕಣ್ಣೀರು ಹರಿಸಿದನು. ಆ ಮಾತನ್ನು ಕೇಳಿ ರಾಮ ಲಕ್ಷ್ಮಣ ಸೀತೆಯರಿಗೆ ತುಂಬ ವ್ಯಥೆಯಾಯಿತು. ಶ್ರೀರಾಮನು ದೈನ್ಯದಿಂದ ತಂದೆಗೆ ''ಮಹಾರಾಜ, ಈ ದಿನವೇನೋ ನನಗೆ ಒಳ್ಳೆಯ ಬುದ್ಧಿಯುಂಟಾಗಿ ವನಕ್ಕೆ ಹೋಗಲು ನಿರ್ಧರಿಸಿದ್ದೇನೆ. ನಾಳೆಗೆ ನನ್ನ ಬುದ್ಧಿ ಹೇಗಿರುತ್ತದೆಯೋ? ಆದ್ದರಿಂದ ಸರ್ವಕಾಮನೆಗಳೂ ಸಿದ್ಧಿಸಿದವೆಂದು ನಾನು ಈಗಲೇ ಹೊರಟು ಹೋಗುವೆನು. ಈ ರಾಜ್ಯವನ್ನು ಭರತನಿಗೆ ಕೊಡಬಹುದು. ಇದನ್ನು ನಾನು ತ್ಯಜಿಸಿ ಹೋಗುತ್ತಿದ್ದೇನೆ. ಮಹಾರಾಜ, ಕೈಕೇಯಿಗೆ ಕೊಟ್ಟ ವರವು ಪೂರ್ಣವಾಗಿ ಸಂದು ಹೋಗಲಿ. ನನಗೆ ರಾಜ್ಯ ಬೇಕಾಗಿಲ್ಲ. ನಿನ್ನ ಆಜ್ಞೆಯನ್ನು ಪಾಲಿಸುವುದೇ ನನಗೆ ಮುಖ್ಯವಾದದ್ದು. ನೀನು ಹೀಗೆ ದುಃಖಿಸಬೇಡ. ಕಣ್ಣೀರು ಸುರಿಸಬೇಡ. ಅಪ್ಪ, ನನಗೆ ಸೌಖ್ಯದ ಬಯಕೆ ಇಲ್ಲ. ಪುರುಷೋತ್ತಮನಾದ ನೀನು ಅಸತ್ಯವನ್ನು ನುಡಿದೆ ಎಂದು ಸರ್ವಥಾ ಆಗಕೂಡದು. ನಾನು ಅರಣ್ಯದಲ್ಲಿ ಸುಖವಾಗಿರುವೆನು. ಸೀತಾ ಲಕ್ಷ್ಮಣರು ಜೊತೆಯಲ್ಲಿರುವಾಗ ನನಗೆ ಯಾವ ಕಷ್ಟವೂ ಆಗಲಾರದು. ನೀನು ಶಾಂತಚಿತ್ತನಾಗಿರು'' ಎಂದು

ಹೇಳಿದನು. ಆ ಮಾತನ್ನು ಕೇಳುತ್ತಿದ್ದ ದಶರಥ ರಾಜನು ಶೋಕದಲ್ಲಿ ಮುಳುಗಿ ಹೋದನು. ದೇಹವು ತತ್ತರಿಸಿತು. ಮಿಲಮಿಲನೆ ಒದ್ದಾಡುತ್ತ ಮಗನನ್ನು ಅಪ್ಪಿಕೊಂಡನು. ದಶರಥನಿಗೆ ಬವಳಿ ಬಂದು ಎಚ್ಚರ ತಪ್ಪಿ ಬಿದ್ದನು. ಎಲ್ಲೆಲ್ಲಿಯೂ ಹಾಹಾಕಾರ ತುಂಬಿಹೋಯಿತು.

ಆಮೇಲೆ ಶೈತ್ಯೋಪಚಾರದಿಂದ ದಶರಥನು ಮೆಲ್ಲಗೆ ಚೇತರಿಸಿಕೊಂಡನು. ಆಗ ಮಂತ್ರಿಯಾದ ಸುಮಂತ್ರನಿಗೆ ಈ ಅನರ್ಥಗಳಿಗೆ ಕಾರಣಳಾದ ಕೈಕೇಯಿಯ ಮೇಲೆ ಬಹಳ ಕೋಪ ಉಂಟಾಯಿತು. ಅವನು ಧೈರ್ಯದಿಂದ ಮರ್ಮಭೇದಕವಾದ ಕೆಲವು ಮಾತುಗಳನ್ನು ಕೈಕೇಯಿಗೆ ಹೇಳಿದನು. ''ದೇವಿ, ನಿನ್ನ ಪತಿಯಾದ ದಶರಥ ಮಹಾರಾಜನು ಧರ್ಮನಿಷ್ಠನೆಂದು ಲೋಕವಿಖ್ಯಾತನಾಗಿದ್ದಾನೆ. ಇಂಥವನಿಗೆ ಈ ಘೋರದೆಸೆಯನ್ನು ತಂದ ನಿನಗೆ ಇನ್ನೂ ಮಾಡುವುದಕ್ಕೆ ಹೇಸದ ಕೃತ್ಯವೊಂದೂ ಉಳಿಯಲಿಲ್ಲ. ಪತಿಹತ್ಯೆಯನ್ನು ಮಾಡಿ ಕುಲಘಾತಕಿಯೇ ಆಗುವೆಯೋ ಹೇಗೆ? ಅತಿಶಯವಾದ ಪ್ರೀತಿಯಿಂದ ನಿನ್ನನ್ನು ಪೋಷಿಸಿಕೊಂಡು ಬಂದಿರುವ ನಿನ್ನ ಪತಿಯನ್ನೇ ಧಿಕ್ಕರಿಸಿ ಹೀಗೆ ನಡೆದುಕೊಳ್ಳಬೇಡ. ಮಗನಿಗೆ ರಾಜ್ಯವಾಗಲೆಂಬ ಸ್ವಾರ್ಥದಿಂದ ಗಂಡನ ಜೀವನಕ್ಕೆ ಸಂಚಕಾರ ಹಿಡಿಯುವ ನೀನು ಕೆಟ್ಟ ಹೆಸರನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಧರ್ಮ ಬಾಹಿರವಾದ ನೀಚಕೃತ್ಯವನ್ನು ಮಾಡುವ ನಿನ್ನ ರಾಜ್ಯದಲ್ಲಿ ಯಾವ ಸತ್ಪುರುಷನೂ ವಾಸ ಮಾಡಲಾರ. ಆದ್ದರಿಂದ, ದೇವಿ, ಪತಿಯ ಪ್ರಾಣವನ್ನುಳಿಸುವುದಕ್ಕಾದರೂ ನೀನು ವರವನ್ನು ಹಿಂತೆಗೆದುಕೊ'' ಎಂದನು. ಕೈಕೇಯಿಯು ಮತ್ತಷ್ಟು ಕ್ರುದ್ಧಳಾಗಿ ಮುಖವನ್ನು ಗಂಟಿಕ್ಕಿದಳು. ಸುಮಂತ್ರನು ಮತ್ತೆ ಹೀಗೆಂದನು. ''ನಿನ್ನ ತಾಯಿಯ ಕಲ್ಯಾಣ ಗುಣವೇ ನಿನಗೆ ಬಂದಿದೆ ! ಬೇವಿನ ಮರದಿಂದ ಜೇನುತುಪ್ಪ ಸುರಿದೀತೆ? ನಿನ್ನ ತಾಯಿಯ ಕೆಟ್ಟ ಹಟವು ನಮಗೆ ಗೊತ್ತಿದೆ. ನಿನ್ನ ತಂದೆಗೆ ಒಬ್ಬ ಮಹಾತ್ಮನು ಕೊಟ್ಟ ವರದಿಂದ ಸಕಲ ಪ್ರಾಣಿಗಳ ಮಾತಿನ ಅರ್ಥ ಆ ರಾಜನಿಗೆ ತಿಳಿಯುತ್ತಿತ್ತು. ಒಂದು ದಿನ ರಾತ್ರಿ ಮಲಗಿದ್ದಾಗ ಹೊರಗಡೆ ಒಂದು ಹಕ್ಕಿ ಕೂಗಿತು. ಅದನ್ನು ಕೇಳಿ ರಾಜನು ನಕ್ಕನು. ನಕ್ಕದ್ದು ಏಕೆ? ಎಂದು ನಿನ್ನ ತಾಯಿ ಕೇಳಿದಳಂತೆ. ರಾಜನು ಹೇಳಲಿಲ್ಲ. ನಿನ್ನ ತಾಯಿಯು ಒತ್ತಾಯ ಪಡಿಸಿದಾಗ ಆತನು ''ದೇವಿ, ಹಕ್ಕಿಯ ಮಾತಿನ ಅರ್ಥವನ್ನು ನಾನು ಹೇಳಬಾರದು. ಹೇಳಿದರೆ ನನ್ನ ತಲೆ ಒಡೆದು ನಾನು ಸತ್ತು ಹೋಗುವೆನೆಂದು ಒಬ್ಬ ಮಹಾತ್ಮನು ನನಗೆ ಹೇಳಿದ್ದಾನೆ'' ಎಂದನು. ನಿನ್ನ ತಾಯಿ, ಆದರೂ ಬಿಡದೆ, ''ಚಿಂತೆಯಿಲ್ಲ, ಹಕ್ಕಿಯು ಹೇಳಿದ್ದನ್ನು ನೀನು ಹೇಳಲೇಬೇಕು'' ಎಂದು ಹಟ ಹಿಡಿದಳು. ನಿನ್ನ ತಂದೆ ಹೇಗೋ ರಾತ್ರಿಯನ್ನು ಕಳೆದು ಮರುದಿನ ಆ ಮಹಾತ್ಮನಾದ ಋಷಿಯನ್ನು ಕಂಡು ಈ ಸಂಗತಿಯನ್ನು ನಿವೇದಿಸಿದನು.

ಆಗ ಋಷಿಯು ''ರಾಜ, ಹಕ್ಕಿಯ ಮಾತನ್ನು ನೀನು ಹೆಂಡತಿಗೆ ಹೇಳಿದರೆ ನೀನು ಸಾಯುವುದು ನಿಶ್ಚಯ. ಅಂತಹ ಹಟಮಾರಿಯಾದ ಹೆಂಡತಿಯನ್ನು ತ್ಯಜಿಸಿಬಿಡು'' ಎಂದು ಉಪದೇಶಿಸಿದನು. ಆಗ ನಿನ್ನ ತಂದೆ ನಿನ್ನ ದುರ್ಬುದ್ಧಿಯ ತಾಯಿಯನ್ನು ದೇಶಭ್ರಷ್ಟಳನ್ನಾಗಿ ಮಾಡಿ ನಿಶ್ಚಿಂತನಾಗಿದ್ದಾನೆ. ಅಂತಹ ತಾಯಿಯ ಮಗಳು ನೀನು!'' ಎಂದು ಜರಿದನು. ಆಮೇಲೆ ''ದೇವಿ, ಜ್ಯೇಷ್ಠ ಪುತ್ರನಾದ ಶ್ರೀರಾಮನಿಗೆ ಪಟ್ಟಾಭಿಷೇಕವು ನಡೆಯಲೆಂದು ದಶರಥರಾಜನಿಗೆ ಹೇಳು. ಅವನು ರಾಜನಾಗಿದ್ದರೆ ನಿನ್ನನ್ನು ತಾಯಿಯಂತೆ ನೋಡಿಕೊಳ್ಳುತ್ತಾನೆ. ಅದರಿಂದ ಭರತನಿಗೂ ತುಂಬ ಸಂತೋಷವಾಗುತ್ತದೆ. ನಿನ್ನ ಈ ದುಷ್ಕೃತ್ಯವನ್ನು ಧರ್ಮಾತ್ಮನಾದ ಭರತನು ಎಂದಿಗೂ ಒಪ್ಪುವುದಿಲ್ಲ'' ಎಂದು ಬುದ್ಧಿ ಹೇಳಿದನು. ಕೈಕೇಯಿಯು ಒಂದು ಮಾತನ್ನೂ ಆಡಲಿಲ್ಲ. ಅವಳ ಆಗ್ರಹವೂ ತಗ್ಗಲಿಲ್ಲ. ಮುಖಚರ್ಯೆಯಲ್ಲಿ ಯಾವ ಪರಿವರ್ತನೆಯೂ ಕಾಣಿಸಲಿಲ್ಲ.

ದಶರಥನು ನಿಟ್ಟುಸಿರು ಬಿಡುತ್ತಾ ಸುಮಂತ್ರನನ್ನು ಕುರಿತು ''ಸುಮಂತ್ರ, ರಾಮನನ್ನು ಹಿಂಬಾಲಿಸಿ ಚತುರಂಗ ಸೇನೆಯು ಹೊರಡುವಂತೆ ವ್ಯವಸ್ಥೆ ಮಾಡು. ಬಂಡಿ ಬಂಡಿಗಳಲ್ಲಿ ಆಹಾರ ಪದಾರ್ಥಗಳನ್ನೂ, ವಸ್ತ್ರಗಳನ್ನೂ, ಬೇಕಾದ ಸಮಸ್ತ ಸಾಮಗ್ರಿಗಳನ್ನೂ ಖಜಾನೆಯಲ್ಲಿರುವ ಐಶ್ವರ್ಯವನ್ನೂ ತುಂಬಿಸಿಕೊಂಡು ನನ್ನ ಮಗನು ಅರಣ್ಯಕ್ಕೆ ಹೋಗಲಿ. ನನ್ನ ಸೊಸೆ ಜಾನಕಿಗೆ ಬೇಕಾದ ವಸ್ತ್ರಗಳೂ ಒಡವೆಗಳೂ ಜೊತೆಯಲ್ಲಿ ಹೋಗಲಿ. ಹದಿನಾಲ್ಕು ವರ್ಷ ಅಲ್ಲಿ ಸುಖವಾಗಿರಲಿ'' ಎಂದನು. ಆ ಮಾತನ್ನು ಕೇಳಿದೊಡನೆ ಕೈಕೇಯಿಗೆ ಭಯವಾಯಿತು. ಮುಖವು ಬಾಡಿತು. ಸ್ವರವು ಕುಗ್ಗಿತು. ಬಾಯಿ ಒಣಗಿತು. ಅವಳು ಉದ್ವಿಗ್ನಳಾಗಿ ತನ್ನ ಪತಿಯ ಕಡೆಗೆ ತಿರುಗಿ ''ಹೇ ಪುಣ್ಯಾತ್ಮ, ಇದೆಲ್ಲವನ್ನೂ ಅಡವಿಗೆ ಕಳಿಸಿದರೆ ರಾಜ್ಯವು ನಿಸ್ಸಾರವಾಗುತ್ತದೆ. ನನ್ನ ಮಗನಾದ ಭರತನು ಅಂತಹ ರಾಜ್ಯವನ್ನು ಎಂದಿಗೂ ಸ್ವೀಕರಿಸುವುದಿಲ್ಲ!'' ಎಂದಳು. ದಶರಥನು ''ಎಲೈ ನೀಚಳೆ, ಈ ಸಾಮಗ್ರಿಗಳನ್ನು ರಾಮನ ಹಿಂದೆ ಕಳಿಸಕೂಡದೆಂದು ನೀನು ಹೇಳಿರಲಿಲ್ಲ. ಆ ರೀತಿ ನಾನು ಮಾತು ಕೊಟ್ಟೂ ಇಲ್ಲ'' ಎಂದನು. ಕೈಕೇಯಿಯು ಮತ್ತಷ್ಟು ಬಿರುಸಾಗಿ ''ನಿನ್ನ ವಂಶದಲ್ಲಿಯೇ ಹಿಂದೆ ಅಸಮಂಜನೆಂಬವನಿಗೆ ಏನನ್ನೂ ಕೊಡದೆ ಅವನ ತಂದೆಯು ರಾಜ್ಯಭ್ರಷ್ಟನನ್ನಾಗಿ ಓಡಿಸಲಿಲ್ಲವೆ?'' ಎಂದಳು. ದಶರಥನು ''ಥೂ'' ಎಂದಿಷ್ಟೇ ಹೇಳಿದನು. ಆಗ ಸಿದ್ಧಾರ್ಥನೆಂಬ ಮಂತ್ರಿಯು ಕೈಕೇಯಿಯ ಮಾತನ್ನು ಸಹಿಸಲಾರದೆ ''ಅಸಮಂಜನು ದುಷ್ಟ. ಊರಿನ ಮಕ್ಕಳನ್ನು ಹೊಳೆಗೆ ಎಸೆದು ಸಂತೋಷ ಪಡುತ್ತಿದ್ದನು. ಆ ಪಾಪಿಯನ್ನು ಅವನ ತಂದೆ ರಾಜ್ಯದಿಂದ ಓಡಿಸಿರಬಹುದು.

ಅವನಿಗೂ ಧರ್ಮಾತ್ಮನೂ ಪರಮಸಾಧುವೂ ಆದ ಶ್ರೀರಾಮನಿಗೂ ಎಲ್ಲಿಯ ಹೋಲಿಕೆ? ಈ ಮಾತನ್ನು ಹೇಳಲು ನಿನಗೆ ಲಜ್ಜೆಯಾಗುವುದಿಲ್ಲವೆ?'' ಎಂದನು. ಕೈಕೇಯಿಯು ತನ್ನ ಛಲವನ್ನು ಬಿಡಲಿಲ್ಲ.

ಇದೆಲ್ಲವನ್ನೂ ಗಮನಿಸುತ್ತಿದ್ದ ನೀತಿಜ್ಞನಾದ ಶ್ರೀರಾಮನು ತಂದೆಯನ್ನು ಕುರಿತು ವಿನಯದಿಂದ ''ಮಹಾರಾಜ, ನಾನು ಸಕಲ ಸುಖಭೋಗಗಳನ್ನು ವರ್ಜಿಸಿ ಋಷಿಯಂತೆ ಕಾಡಿನಲ್ಲಿ ವಾಸಮಾಡತಕ್ಕವನು. ನನಗೆ ಈ ಪರಿವಾರವೇಕೆ? ಐಶ್ವರ್ಯವೇಕೆ? ಇದೆಲ್ಲವನ್ನೂ ನನ್ನ ತಮ್ಮನಾದ ಭರತನಿಗೆ ಬಿಟ್ಟುಕೊಟ್ಟಿದ್ದೇನೆ. ನಾನು ನಾರುಬಟ್ಟೆಯನ್ನುಟ್ಟು ಹೋಗತಕ್ಕವನು. ಹಾರೆ ಬುಟ್ಟಿ ಮುಂತಾದ ಕೆಲವು ವಸ್ತುಗಳು ಮಾತ್ರ ನನಗೆ ಬೇಕಾಗಬಹುದು. ಇನ್ನು ಯಾವುದೂ ಬೇಡ'' ಎಂದನು. ಕೂಡಲೇ ಕೈಕೇಯಿಯು ಒಳಗೆ ಹೋಗಿ ನಾರು ಬಟ್ಟೆಗಳನ್ನು ತಂದು ''ಇವುಗಳನ್ನು ಧರಿಸಿ'' ಎಂದು ಶ್ರೀರಾಮನಿಗೆ ನಾಚಿಕೆಯಿಲ್ಲದೆ ಹೇಳಿದಳು. ಶ್ರೀರಾಮನು ರಾಜಯೋಗ್ಯವಾದ ತನ್ನ ವಸ್ತ್ರಗಳನ್ನು ತೆಗೆದಿಟ್ಟು ಆ ನಾರುಬಟ್ಟೆಯನ್ನುಟ್ಟನು. ಲಕ್ಷ್ಮಣನು ತಾಪಸ ಯೋಗ್ಯವಾದ ಆ ಬಟ್ಟೆಗಳನ್ನೇ ತರಿಸಿ ಉಟ್ಟುಕೊಂಡನು. ಕೈಕೇಯಿಯು ಸೀತೆಗೂ ಒಂದು ನಾರು ಸೀರೆಯನ್ನು ತಂದುಕೊಟ್ಟಳು. ದೊರಗು ದೊರಗಾಗಿ, ಹಿಡಿದರೆ ಜಾರುತ್ತಿದ್ದ ಆ ಸೀರೆಯನ್ನು ಹೇಗೆ ಉಡಬೇಕೆಂದು ಗೊತ್ತಾಗದೆ ಆ ರಾಜಪುತ್ರಿಯು ಅದನ್ನು ಕೈಯಲ್ಲಿ ಹಿಡಿದುಕೊಂಡಳು. ಕಣ್ಣೀರು ತುಂಬಿತು. 'ಋಷಿಪತ್ನಿಯರು ಇದನ್ನು ಹೇಗೆ ಧರಿಸುವರೋ?' ಎನ್ನುತ್ತಾ ತನ್ನ ಗಂಡನ ಮುಖವನ್ನು ನೋಡಿದಳು. ಶ್ರೀರಾಮನು ಕೂಡಲೇ ಹತ್ತಿರ ಬಂದು ಆ ನಾರುಬಟ್ಟೆಯನ್ನು ಸೀತೆಯ ಪಟ್ಟೆಯ ಸೀರೆಯ ಮೇಲೆ ತಾನೇ ಸುತ್ತಿ ಕಟ್ಟಿದನು. ಆ ರಾಜಪುತ್ರನು ರಾಜಕುಮಾರಿಗೆ ನಾರುಬಟ್ಟೆಯುಡಿಸುವುದನ್ನು ಕಂಡು ಅಲ್ಲಿದ್ದ ಅಂತಃಪುರ ಸ್ತ್ರೀಯರೆಲ್ಲರೂ ಗಳಗಳನೆ ಕಣ್ಣೀರು ಸುರಿಸಿದರು.

ಜಾನಕಿಯು ನಾರುಸೀರೆಯುಡುವುದನ್ನು ಕಂಡು ಅಲ್ಲಿ ಕುಳಿತಿದ್ದ ವಸಿಷ್ಠರಿಗೆ ತಡೆಯಲಾರದಷ್ಟು ಕೋಪ ಬಂದಿತು. ಅವರು ಕೈಕೇಯಿಯ ಕಡೆಗೆ ತಿರುಗಿ ''ಕೈಕೇಯಿ, ನಿನ್ನ ಚೇಷ್ಟೆ ಅತಿಯಾಯಿತು. ದುರ್ಬುದ್ಧಿಯವಳೆ, ರಾಜನನ್ನು ಮೋಸಪಡಿಸಿ ಮರ್ಯಾದೆಯನ್ನುಲ್ಲಂಘಿಸಿ ನಡೆಯುತ್ತಿದ್ದೀಯೆ. ನೀನು ಶೀಲಭ್ರಷ್ಟಳು. ಸೀತೆಯು ವನವಾಸಕ್ಕೆ ಹೋಗಬೇಕಾದ್ದಿಲ್ಲ. ರಾಮನಿಗೆ ಮೀಸಲಾಗಿದ್ದ ಸಿಂಹಾಸನದಲ್ಲಿ ಸೀತೆಯು ಕುಳಿತು ರಾಜ್ಯಭಾರವನ್ನು ನಡೆಸಲಿ. ರಾಮನಿಗೆ ಅರ್ಧಶರೀರಳೇ ಆದ ಈ ರಾಜಕುಮಾರಿ ರಾಮನಿಗೆ ಪ್ರತಿನಿಧಿಯಾಗಿ ರಾಜ್ಯವನ್ನು ಪಾಲಿಸುವುದು ಧರ್ಮವೇ ಆಗಿದೆ'' ಎಂದರು. ಆಮೇಲೆ ''ಕೈಕೇಯಿ, ಈ ನಾರು ಬಟ್ಟೆಯನ್ನು ತ್ಯಜಿಸಿ ನಿನ್ನ

ಸೊಸೆಗೆ ಉತ್ತಮವಾದ ವಸ್ತ್ರಾಭರಣಗಳನ್ನು ಕೊಡು. ಅವಳು ಋಷಿಪತ್ನಿಯಂತೆ ವನವಾಸಮಾಡಬೇಕೆಂದು ನೀನು ಕೇಳಿಯೂ ಇಲ್ಲ, ದಶರಥನು ಹಾಗೆ ಹೇಳಿಯೂ ಇಲ್ಲ'' ಎಂದರು. ಇತ್ತ ಸೀತೆಯು ತನ್ನ ಪತಿಯ ವೇಷವನ್ನು ಅನುಕರಿಸಬೇಕೆಂದು ನಿಶ್ಚಯಿಸಿ ಮನಸ್ಸು ಬದಲಿಸದೆ ನಾರು ಬಟ್ಟೆಯನ್ನು ಧರಿಸಿದಳು. ಸೀತೆಯು ದಿಕ್ಕಿಲ್ಲದ ಅನಾಥೆಯಂತೆ ನಾರು ಬಟ್ಟೆಯನ್ನು ಉಟ್ಟುದನ್ನು ಕಂಡು ಅಲ್ಲಿದ್ದ ಕೆಲವು ಜನರು ''ಛೀ.. ಛೀ... ದಶರಥ, ನಿನಗೆ ಧಿಕ್ಕಾರ'' ಎಂದರು. ಆ ನಿಂದಾವಚನವನ್ನು ಕೇಳಿ ದಶರಥನು ತಾನು ಬದುಕುವ ಆಸೆಯನ್ನು ತೊರೆದನು. ಅನಂತರ ವನಪ್ರಯಾಣಕ್ಕೆ ಸಿದ್ಧನಾದ ಶ್ರೀರಾಮನು ತಂದೆಯ ಕಡೆ ನೋಡಿದನು. ದಶರಥನು ತಲೆಯನ್ನು ತಗ್ಗಿಸಿಕೊಂಡು ಕಣ್ಣೀರು ಸುರಿಸುತ್ತಾ ತನ್ನಲ್ಲಿಯೇ ಏನೇನೋ ಹಲುಬಿಕೊಳ್ಳುತ್ತಿದ್ದನು. ಶ್ರೀರಾಮನು ''ಅಪ್ಪ, ನೀನು ಸಮಸ್ತ ಧರ್ಮಗಳನ್ನೂ ಬಲ್ಲವನು. ನಾನೀಗ ಅರಣ್ಯಕ್ಕೆ ಹೊರಟಿದ್ದೇನೆ. ನನ್ನ ತಾಯಿ ಕೌಸಲ್ಯೆ ವೃದ್ಧೆಯಾಗಿದ್ದಾಳೆ. ಬಹಳ ದೊಡ್ಡ ಸ್ವಭಾವದವಳು. ನಿನ್ನನ್ನೇ ನಂಬಿಕೊಂಡಿರುವ ಸಾಧ್ವಿ. ಈಗ ಶೋಕ ಸಮುದ್ರದಲ್ಲಿ ಮುಳುಗಿದ್ದಾಳೆ. ಇವಳನ್ನು ನೀನು ಆದರದಿಂದ ನೋಡಿಕೊಳ್ಳಬೇಕು. ಇದೇ ನನ್ನ ಪ್ರಾರ್ಥನೆ. ಪುತ್ರ ಶೋಕದಿಂದ ಅವಳು ಕಂಗೆಡದಂತೆ ಸಮಾಧಾನ ಹೇಳಿ ನೋಡಿಕೊಳ್ಳುತ್ತಿದ್ದರೆ ನಾನು ಅರಣ್ಯದಲ್ಲಿ ನೆಮ್ಮದಿಯಾಗಿರುತ್ತೇನೆ. ನಾನು ವನವಾಸದಲ್ಲಿರುವಾಗ ನನ್ನ ತಾಯಿ ಕೊರಗಿ ಕೊರಗಿ ಮರಣ ಹೊಂದದಂತೆ ನೋಡಿಕೊಳ್ಳಬೇಕು'' ಎಂದನು.

ಅನಂತರ ವೈದೇಹಿಯು ತನ್ನ ಅತ್ತೆಯಾದ ಕೌಸಲ್ಯೆಯ ಪಾದಗಳಿಗೆ ವಂದಿಸಲು, ಕೌಸಲ್ಯೆಯು ಅವಳನ್ನು ಅಪ್ಪಿಕೊಂಡಳು. ಕಣ್ಣೀರು ಸುರಿಸುತ್ತಾ ಸೊಸೆಯನ್ನು ಕುರಿತು ''ಮಗಳೇ, ಪತಿಯನ್ನೇ ನಂಬಿ ಅವನ ಹಿಂದೆ ಕಾಡಿಗೆ ಹೊರಟಿದ್ದೀಯೆ. ಪರಮ ಪತಿವ್ರತೆಯೂ ಸಾಧ್ವಿಯೂ ಆದ ನಿನ್ನನ್ನು ನೋಡಿ ನನ್ನ ಎದೆ ಒಡೆದುಹೋಗುತ್ತಿದೆ. ಪತಿಯು ಧನಿಕನಾದರೂ ದರಿದ್ರನಾದರೂ ಪತ್ನಿಯಾದವಳಿಗೆ ಅವನೇ ದೇವರಿಗೆ ಸಮಾನ'' ಎಂದಳು. ಕೌಸಲ್ಯೆಯ ಆಶಯವನ್ನು ಗ್ರಹಿಸಿದ ಸೀತೆಯು ತನ್ನ ಅತ್ತೆಗೆ ಕೈಮುಗಿದು ''ಅಮ್ಮ, ನೀನು ಆಜ್ಞೆ ಮಾಡಿದಂತೆ ನಡೆದುಕೊಳ್ಳುವೆನು. ಪತಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನನ್ನ ತಂದೆ ತಾಯಿಗಳು ಹೇಳಿಕೊಟ್ಟಿದ್ದಾರೆ. ತಂತಿಯಿಲ್ಲದೆ ವೀಣೆಯು ನುಡಿಯದು. ಚಕ್ರವಿಲ್ಲದೆ ರಥವು ನಡೆಯದು. ಎಷ್ಟು ಮಕ್ಕಳಿದ್ದರೂ ಪತಿಯಿಲ್ಲದಿದ್ದರೆ ಹೆಂಗಸಿಗೆ ಸೌಖ್ಯವಿಲ್ಲ. ದೇವಿ, ನಾನು ಪತಿಯನ್ನು ಎಂದಿಗಾದರೂ ಅಲಕ್ಷಿಸುವೆನೆ?'' ಎಂದಳು. ಹೀಗೆ ನುಡಿದ ಸೀತೆಯ ವಚನವನ್ನಾಲಿಸಿ ಕೌಸಲ್ಯೆಗೆ ದುಃಖ ಹರ್ಷಗಳೆರಡೂ ಸೇರಿ ಕಂಬನಿ ಉಕ್ಕಿತು.

ಮತ್ತೆ ಮತ್ತೆ ಸೊಸೆಯನ್ನು ಆಲಿಂಗಿಸಿಕೊಂಡಳು. ಅನಂತರ ಶ್ರೀರಾಮನು ತಾಯಿಗೆ ಸಮಾಧಾನವನ್ನು ಹೇಳಿ ಅವಳಂತೆಯೇ ಶೋಕಾರ್ತರಾಗಿದ್ದ ಅಂತಃಪುರ ಸ್ತ್ರೀಯರನ್ನು ನೋಡಿ ಕೈಮುಗಿದುಕೊಂಡು, ''ಮಾತೆಯರೆ, ನಾನು ಸಲಿಗೆಯಿಂದಲೋ ಅಜ್ಞಾನದಿಂದಲೋ ಯಾವ ತಪ್ಪನ್ನಾದರೂ ಮಾಡಿದ್ದರೆ ಮನ್ನಿಸಬೇಕು. ನಾನು ಹೋಗಿಬರಲು ನೀವೆಲ್ಲರೂ ಅನುಜ್ಞೆಯನ್ನು ಕೊಡಿರಿ'' ಎಂದು ಪ್ರಾರ್ಥಿಸಿದನು. ಶ್ರೀರಾಮನ ವಿನಯಪೂರ್ಣವಾದ ಈ ಸಾಂತ್ವನ ವಾಕ್ಯವನ್ನು ಕೇಳಿ ಆ ಸ್ತ್ರೀಯರು ಗಟ್ಟಿಯಾಗಿ ಅಳತೊಡಗಿದರು. ಆ ಸಭಾಂಗಣದಲ್ಲಿ ಎಲ್ಲೆಲ್ಲಿಯೂ ರೋದನ ಧ್ವನಿಯು ಹರಡಿತು. ಯಾವ ದಶರಥನ ಅರಮನೆಯು ಭೇರೀ ಮೃದಂಗಗಳ ಮಂಗಳ ಧ್ವನಿಯಿಂದ ಪ್ರತಿಧ್ವನಿಸುತ್ತಿತ್ತೋ ಆ ಅರಮನೆಯು ಈಗ ಶೋಕದ ತವರುಮನೆ ಯಾಗಿ ಚೀರಾಟ ಗೋಳಾಟಗಳಿಂದ ತುಂಬಿಹೋಯಿತು.

೧೯

ಶ್ರೀರಾಮಾದಿಗಳು ರಥದಲ್ಲಿ ಕುಳಿತು ಅಯೋಧ್ಯೆಯಿಂದ ಹೊರಡುವುದು. ಗಂಗಾತೀರದಲ್ಲಿ ಗುಹನ ಭೇಟಿ. ಸುಮಂತ್ರನನ್ನು ಬೀಳ್ಕೊಂಡು ಗಂಗಾನದಿಯನ್ನು ದಾಟುವುದು.

ಅನಂತರ ಶ್ರೀರಾಮನೂ ಸೀತೆಯೂ ಲಕ್ಷ್ಮಣನೂ ದಶರಥನ ಪಾದಗಳನ್ನು ಮುಟ್ಟಿ ಅಭಿವಾದನೆ ಮಾಡಿದರು. ಶ್ರೀರಾಮನು ತನ್ನ ತಾಯಿಯಾದ ಕೌಸಲ್ಯೆಯ ದುಃಖವನ್ನು ಕಂಡು ವ್ಯಥೆಪಡುತ್ತಾ ಅವಳಿಗೆ ನಮಸ್ಕರಿಸಿದನು. ಅವಳು ಶೋಕಭಾರದಿಂದ ಮಾತಾಡಲಾರದೆ ಮನಸ್ಸಿನಲ್ಲಿಯೇ ಶುಭವನ್ನು ಹಾರೈಸಿದಳು. ಲಕ್ಷ್ಮಣನು ತನ್ನ ತಾಯಿಯಾದ ಸುಮಿತ್ರೆಗೆ ವಂದಿಸಲಾಗಿ ಅವಳು ಅಳುತ್ತಾ ಲಕ್ಷ್ಮಣನ ಶಿರಸ್ಸನ್ನಾಘ್ರಾಣಿಸಿ ಆಶೀರ್ವದಿಸಿದಳು. ಆಮೇಲೆ ಅವರೆಲ್ಲರೂ ಸುಮಂತ್ರನು ಸಿದ್ಧಪಡಿಸಿದ ರಥದ ಬಳಿಗೆ ಬಂದರು. ವನವಾಸಕ್ಕೆ ಬೇಕಾದ ಆಯುಧ, ಕವಚ, ಹಾರೆ ಮೊದಲಾದವನ್ನು ರಥದಲ್ಲಿಟ್ಟು ಮೂವರೂ ರಥವನ್ನು ಹತ್ತಿದರು. ಸುಮಂತ್ರನು ಸಾರಥಿಯ ಸ್ಥಾನದಲ್ಲಿ ಕುಳಿತು ಅಶ್ವಗಳನ್ನು ಹುರಿದುಂಬಿಸಿದನು. ರಥವು ಹೊರಟಿತು. ನೆರೆದಿದ್ದ ಪೌರರು ಆ ಮೂವರ ಗುಣಗಳನ್ನು ಗಾನ ಮಾಡುತ್ತ ಶೋಕಾರ್ತರಾಗಿದ್ದರು. ಅಷ್ಟರಲ್ಲಿ ದಶರಥನು ''ನನ್ನ ಮುದ್ದು ಮಗನನ್ನು ಇನ್ನೊಮ್ಮೆ ನೋಡುವೆನು'' ಎಂದು ಹೇಳುತ್ತಾ ಉದ್ವಿಗ್ನನಾಗಿ ಅರಮನೆಯಿಂದ ಹೊರಟನು. ರಥವು ಮುಂದೆ ಸಾಗುತ್ತಿತ್ತು. ದಶರಥನು ಹಿಂದಿನಿಂದ ಓಡುತ್ತ ಹೋಗಿ ದೊಪ್ಪನೆ ಕುಸಿದು ಬಿದ್ದನು. ಅನಂತರ

ಹೇಗೋ ಮೇಲೆದ್ದು ಹೊರಟನು. ಕೌಸಲ್ಯೆಯು ರಥದ ಹಿಂದೆ ಅಳುತ್ತ 'ರಾಮಾ, ರಾಮಾ, ಸೀತೆ, ಲಕ್ಷ್ಮಣ', ಎಂದು ಕೂಗುತ್ತ ಮುಗ್ಗರಿಸುತ್ತಾ ಓಡುತ್ತ ಬರುತ್ತಿದ್ದಳು. ದಶರಥನು 'ಸುಮಂತ್ರ ನಿಲ್ಲಿಸು, ನಿಲ್ಲಿಸು' ಎಂದು ಕೂಗುತ್ತಿದ್ದನು. ರಾಮನು ತಂದೆ ತಾಯಿಗಳ ದುರವಸ್ಥೆಯನ್ನು ನೋಡಿ ಈ ಶೋಕದೃಶ್ಯವು ಹೆಚ್ಚು ಹೊತ್ತು ಬೇಡವೆಂದೂ ರಥವನ್ನು ತ್ವರೆಯಿಂದ ಓಡಿಸಬೇಕೆಂದೂ ಸುಮಂತ್ರನಿಗೆ ತಿಳಿಸಿದನು. ರಥವು ವೇಗದಿಂದ ಮುಂದೆ ಸಾಗಿತು. ಕೆಲವು ಪೌರರು ಶ್ರೀರಾಮನ ವಿಯೋಗವನ್ನು ತಡೆಯಲಾರದೆ ರಥವು ಹೋದ ಮಾರ್ಗದಲ್ಲಿ ಹೋಗುತ್ತಲೇ ಇದ್ದರು.

ಹೀಗೆ ಶ್ರೀರಾಮನೇರಿದ್ದ ರಥವು ಕಣ್ಣಿಗೆ ಕಾಣದಂತೆ ಹೊರಟು ಹೋಗಲಾಗಿ, ಹುಚ್ಚನಂತಾಗಿದ್ದ ದಶರಥನು ಆ ದಿಕ್ಕನ್ನೇ ನೋಡುತ್ತ ನಿಂತು ಕಡೆಗೆ ನೆಲದ ಮೇಲೆ ಕುಸಿದು ಬಿದ್ದನು. ಒಡನೆಯೇ ಕೌಸಲ್ಯೆಯು ಬಂದು ಅವನನ್ನು ಎತ್ತುವುದಕ್ಕಾಗಿ ಬಲಗೈಯನ್ನು ಹಿಡಿದುಕೊಂಡಳು. ಕೈಕೇಯಿಯು ಎಡಪಾರ್ಶ್ವಕ್ಕೆ ಬಂದಳು. ದಶರಥನು ಕೈಕೇಯಿಯನ್ನು ನೋಡಿ ''ಮುಟ್ಟಬೇಡ ನನ್ನ ಮೈಯನ್ನು, ಪಾಪಿಷ್ಠೆ, ನಿನ್ನನ್ನು ನೋಡಲೂ ನನಗೆ ಇಷ್ಟವಿಲ್ಲ. ನೀನು ನನ್ನ ಹೆಂಡತಿಯೂ ಅಲ್ಲ, ಬಂಧುವೂ ಅಲ್ಲ, ನಿನ್ನನ್ನು ನಾನು ತೊರೆದಿದ್ದೇನೆ. ಭರತನೇನಾದರೂ ಈ ರಾಜ್ಯವು ಸಿಕ್ಕಿತೆಂದು ಸಂತೋಷಪಡುವುದಾದರೆ, ಅವನು ನನಗೆ ಪಿತೃತರ್ಪಣವನ್ನೂ ಕೊಡಬೇಕಾದ್ದಿಲ್ಲ, ಕೊಟ್ಟರೂ ನನಗೆ ಸೇರದೇ ಹೋಗಲಿ!'' ಎಂದನು. ಕೌಸಲ್ಯೆಯು ದಶರಥನನ್ನು ಮೆಲ್ಲಗೆ ಎಬ್ಬಿಸಿ ರೋದಿಸುತ್ತ ಕೈ ಹಿಡಿದುಕೊಂಡು ಅರಮನೆಯ ಕಡೆಗೆ ಹೊರಟಳು. ದಶರಥನು ತಾನು ಬ್ರಹ್ಮಹತ್ಯೆ ಮಾಡಿದವನಂತೆ ಪಶ್ಚಾತ್ತಾಪ ಪಡುತ್ತ, ಬೆಂಕಿಯನ್ನು ತುಡುಕಿದವನಂತೆ ಕೈ ಕೊಡಹುತ್ತ, ಪದೇ ಪದೇ ಹಿಂದಿರುಗಿ ನೋಡುತ್ತ, ಅರಮನೆಯ ಬಾಗಿಲಿಗೆ ಬಂದನು. ಅಳುತ್ತಿದ್ದ ದಶರಥ ರಾಜನು ಕುಗ್ಗಿದ ಸ್ವರದಲ್ಲಿ ದೈನ್ಯದಿಂದ ''ರಾಮನ ತಾಯಿಯಾದ ಕೌಸಲ್ಯೆಯ ಮನೆಗೆ ನನ್ನನ್ನು ಕರೆದೊಯ್ಯಿರಿ'' ಎಂದನು. ಸೇವಕರು ಕೌಸಲ್ಯೆಯ ಅಂತಃಪುರಕ್ಕೆ ಕರೆದುಕೊಂಡು ಹೋಗಿ ಅವನನ್ನು ಹಾಸಿಗೆಯ ಮೇಲೆ ಮಲಗಿಸಿದರು. ಶೂನ್ಯವಾಗಿ ಹಾಳು ಬಿದ್ದಂತಿದ್ದ ಅರಮನೆಯನ್ನು ನೋಡಿ ಆತನು ಸಂಕಟವನ್ನು ತಡೆಯಲಾರದೆ ಎರಡು ಕೈಗಳನ್ನೂ ಎತ್ತಿ ''ರಾಮಾ, ನಮ್ಮಿಬ್ಬರನ್ನೂ ಬಿಟ್ಟು ಹೋದೆಯಾ?'' ಎಂದು ಗಟ್ಟಿಯಾಗಿ ಕೂಗಿಕೊಂಡನು. ''ರಾಮನು ಹಿಂದಿರುಗಿ ಬಂದ ಮೇಲೆ ಯಾರು ಅವನನ್ನು ಕಣ್ಣಾರೆ ನೋಡುವರೋ ಅವರೇ ಧನ್ಯರು. ಅಷ್ಟು ಕಾಲ ಬದುಕಿರುವವರೇ ಪುಣ್ಯಾತ್ಮರು'' ಎಂದನು. ಕೌಸಲ್ಯಾದೇವಿಯು ಅವನ ಸಮೀಪದಲ್ಲಿ ಕುಳಿತು ನಿಟ್ಟುಸಿರುಬಿಡುತ್ತಾ ರೋದಿಸುತ್ತಿದ್ದಳು.

ಕೌಸಲ್ಯೆಯು ಶೋಕಾರ್ತಳಾಗಿ ಒಂದೇ ಸಮನೆ ಗೋಳಾಡುತ್ತಿರಲು, ಧರ್ಮಶೀಲೆಯಾದ ಸುಮಿತ್ರೆಯು ಒಳ್ಳೆಯ ಮಾತನ್ನಾಡಿ ಸಂತೈಸುತ್ತಿದ್ದಳು : ''ಆರ್ಯೆ, ನಿನ್ನ ಪುತ್ರನು ಅತ್ಯಂತ ಗುಣಶಾಲಿಯಾಗಿ ಪುರುಷಶ್ರೇಷ್ಠನೆನಿಸಿಕೊಂಡಿದ್ದಾನೆ. ತಂದೆಯನ್ನು ಸತ್ಯಸಂಧನೆಂದು ಸ್ಥಿರಪಡಿಸುವುದಕ್ಕಾಗಿ ರಾಜ್ಯವನ್ನು ತ್ಯಜಿಸಿ ಹೋಗಿದ್ದಾನೆ. ಧರ್ಮನಿಷ್ಠನಾದ ಆ ಮಹಾಪುರುಷನಿಗಾಗಿ ಶೋಕಿಸುವುದು ಸರಿಯಲ್ಲ. ಲಕ್ಷ್ಮಣನು ನಿಷ್ಠೆಯಿಂದ ತನ್ನ ಅಣ್ಣನನ್ನು ಸೇವಿಸುತ್ತ ಪುಣ್ಯಶಾಲಿಯಾಗುವನು. ಸುಖವಾಗಿರಬಹುದಾಗಿದ್ದ ಜಾನಕಿಯು ಧರ್ಮಾತ್ಮನಾದ ನಿನ್ನ ಮಗನನ್ನು ಹಿಂಬಾಲಿಸಿ ಹೋಗಿದ್ದಾಳೆ. ಪುಣ್ಯಾತ್ಮನಾದ ರಾಮನ ದೇಹವನ್ನು ಸೂರ್ಯನು ಕಿರಣಗಳಿಂದ ಪೀಡಿಸಲಾರ. ಮಹಾವೀರನಾದ ಆತನಿಗೆ ಅರಣ್ಯದಲ್ಲಾದರೂ ಯಾವ ಭಯವುಂಟು? ಪರಮಶೂರರಾದ ಅಣ್ಣತಮ್ಮಂದಿರು ವನವಾಸವನ್ನು ಮುಗಿಸಿ ಶೀಘ್ರವಾಗಿ ಹಿಂದಿರುಗುವರು. ರಾಮನು ಈ ರಾಜ್ಯವನ್ನು ಮರಳಿ ಪಡೆಯುವನು. ಅವನಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕವಾಗುವುದು ನಿಶ್ಚಯ. ಧನುರ್ಧಾರಿಯಾದ ಲಕ್ಷ್ಮಣನನ್ನು ಎದುರಿಸುವವರು ಯಾರು? ರಾಮನಿಗೆ ಸಾಟಿಯಾದ ಪರಾಕ್ರಮಿ ಈ ಜಗತ್ತಿನಲ್ಲಿ ಯಾರಿದ್ದಾರೆ? ದೇವಿ, ಸೀತಾಲಕ್ಷ್ಮಣರೊಡನೆ ಹಿಂದಿರುಗಿ ಬರುವ ಪುತ್ರನನ್ನು ನೀನೇ ನೋಡುವೆ. ಆನಂದ ಬಾಷ್ಪವನ್ನು ಸುರಿಸುವೆ. ಅಕ್ಕ – ಕೌಸಲ್ಯೆ, ರಾಮನಿಗಿಂತ ಉತ್ತಮನಾದ ಪುರುಷನು ಈ ಲೋಕದಲ್ಲಿ ಇನ್ನೊಬ್ಬನಿಲ್ಲ. ಅಂಥವನು ನಿನಗೆ ಮಗನಾಗಿರುವಾಗ ನೀನು ದುಃಖಿಸಬಾರದು. ಇಲ್ಲಿರುವ ಜನರಿಗೆ ಈ ಸಮಯದಲ್ಲಿ ನೀನೇ ಸಮಾಧಾನ ಹೇಳಬೇಕು. ಹೀಗೆ ಅಳಬಾರದು'' ಎಂದು ಸಾಂತ್ವನದ ನುಡಿಗಳನ್ನು ಆಡುತ್ತಿದ್ದಳು. ಆ ಮಾತುಗಳನ್ನು ಕೇಳಿ ಕೌಸಲ್ಯೆಯ ಶೋಕಾವೇಗವು ಕಡಿಮೆಯಾಗುತ್ತಿತ್ತು.

ಇತ್ತಲಾಗಿ ರಥವನ್ನು ಹಿಂಬಾಲಿಸಿ ಬರುತ್ತಿದ್ದ ಪೌರರಿಗೆ ಶ್ರೀರಾಮನು ಮತ್ತೆ ಮತ್ತೆ ಸಮಾಧಾನ ಹೇಳಿ, ರಥವನ್ನು ಇನ್ನೂ ವೇಗವಾಗಿ ಓಡಿಸುವಂತೆ ಸುಮಂತ್ರನಿಗೆ ತಿಳಿಸಿದನು. ಪೌರರು ತಮ್ಮೊಡನೆ ಬರಲಾರದೆ ಹಿಂದಕ್ಕೆ ಹೊರಟು ಹೋಗಲೆಂಬುದು ಅವನ ಆಶಯವಾಗಿತ್ತು. ರಥವು ತಮಸಾ ನದಿಯ ಬಳಿಗೆ ಬಂದಿತು. ಸಂಜೆ ಯಾಯಿತು. ಮೂವರೂ ರಥದಿಂದ ಇಳಿದರು. ಶ್ರೀರಾಮನು ಲಕ್ಷ್ಮಣನನ್ನು ಕುರಿತು ''ಲಕ್ಷ್ಮಣ, ವನವಾಸಕ್ಕೆ ಹೊರಟಿರುವ ನಮಗೆ ಇದು ಮೊದಲನೆಯ ರಾತ್ರಿ. ನನ್ನ ತಂದೆ ತಾಯಿಗಳನ್ನು ನೆನಸಿಕೊಂಡು ನನಗೆ ಬಹಳ ವ್ಯಸನವಾಗುತ್ತಿದೆ. ಅವರು ಅತ್ತು ಅತ್ತು ಕಣ್ಣೀರು ಸುರಿಸಿ ಕುರುಡರೇ ಆಗಿ ಬಿಡುವರೋ ಏನೋ? ಆದರೆ ಭರತನು ಧರ್ಮಾತ್ಮ. ಆತನ ಸೌಜನ್ಯವನ್ನು ನೆನಸಿಕೊಂಡು ತಂದೆ ತಾಯಿಗಳಿಗೋಸ್ಕರ

ಚಿಂತಿಸಬೇಕಾದ್ದಿಲ್ಲವೆಂದು ನನ್ನನ್ನು ನಾನೇ ಸಮಾಧಾನ ಪಡಿಸಿಕೊಳ್ಳುತ್ತಿದ್ದೇನೆ. ಲಕ್ಷ್ಮಣ, ನೀರನ್ನು ಮಾತ್ರ ಸೇವಿಸಿ ಈ ರಾತ್ರಿಯನ್ನು ಕಳೆಯುವೆನು'' ಎಂದನು. ಸುಮಂತ್ರನ ಕಡೆಗೆ ತಿರುಗಿ, ''ಸೌಮ್ಯ, ನೀನು ಕುದುರೆಗಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊ'' ಎಂದು ಹೇಳಿದನು. ಎಲ್ಲರೂ ಸಾಯಾಹ್ನಿಕವನ್ನು ಮುಗಿಸಿದರು. ಸುಮಂತ್ರನೂ ಲಕ್ಷ್ಮಣನೂ ಸೇರಿ ಶ್ರೀರಾಮನಿಗೆ ಮಲಗುವುದಕ್ಕಾಗಿ ಎಲೆಗಳಿಂದ ಒಂದು ಹಾಸಿಗೆಯನ್ನು ರಚಿಸಿದರು. ಶ್ರೀರಾಮನು ತನ್ನ ಪತ್ನಿಯೊಡನೆ ಹೋಗಿ ಎಲೆಗಳ ರಾಶಿಯ ಮೇಲೆ ಮಲಗಿದನು. ಇತ್ತ ಲಕ್ಷ್ಮಣನು ನಿದ್ರೆ ಮಾಡದೆ ಸುಮಂತ್ರನೊಡನೆ ಸಂಭಾಷಿಸುತ್ತ ಶ್ರೀರಾಮನ ಗುಣಗಳನ್ನು ಹೇಳಿ ಕೊಂಡಾಡುತ್ತಿದ್ದನು. ಹಾಗೆಯೇ ರಾತ್ರಿ ಕಳೆಯಿತು.

ಬೆಳಗಿನ ಜಾವದಲ್ಲಿ ಶ್ರೀರಾಮನು ಎದ್ದು ನೋಡಿದಾಗ ತನ್ನನ್ನು ಹಿಂಬಾಲಿಸಿ ಬಂದ ಪ್ರಜೆಗಳು ನದೀ ತೀರದಲ್ಲಿ ಮಲಗಿದ್ದುದನ್ನು ಕಂಡನು. ಕೂಡಲೆ ಅವನು ಲಕ್ಷ್ಮಣನನ್ನು ಕರೆದು ''ಲಕ್ಷ್ಮಣ, ನಮ್ಮನ್ನೇ ನಂಬಿ ಬಂದಿರುವ ಈ ಜನರನ್ನು ನೋಡು. ನಮ್ಮ ಹಿಂದೆಯೇ ಬಂದು ಈ ಪರಿಯಾಗಿ ಮರದ ಕೆಳಗೆ ಮಲಗುವ ಕಷ್ಟ ಇವರಿಗೆ ಬರಬಾರದು. ರಾಜಪುತ್ರರು ಪ್ರಜೆಗಳ ಕಷ್ಟವನ್ನು ಪರಿಹರಿಸಬೇಕಲ್ಲದೆ, ತಮ್ಮ ಕಷ್ಟಗಳನ್ನು ಪ್ರಜೆಗಳ ಮೇಲೆ ಹೇರಬಾರದು. ಆದ್ದರಿಂದ ನಾವು ಬೇಗನೆ ಇವರಿಗೆ ಗೊತ್ತಾಗದಂತೆ ಮುಂದಕ್ಕೆ ಹೊರಟು ಹೋಗೋಣ'' ಎಂದನು. ಸುಮಂತ್ರನು ಲಕ್ಷ್ಮಣನ ಸಲಹೆಯಂತೆ ರಥವನ್ನು ಉತ್ತರದ ಕಡೆಗೆ ಸ್ವಲ್ಪದೂರ ತೆಗೆದುಕೊಂಡು ಹೋಗಿ ಬೇರೊಂದು ದಾರಿಯಲ್ಲಿ ಹಿಂದಕ್ಕೆ ಬಂದನು. ಒಡನೆಯೇ ರಾಮ ಲಕ್ಷ್ಮಣ ಸೀತೆಯರು ರಥವನ್ನೇರಿ, ದಕ್ಷಿಣಾಭಿಮುಖವಾಗಿ ಪ್ರಯಾಣ ಮಾಡಿದರು.

ಬೆಳಗಾದ ಮೇಲೆ ಆ ಪೌರರು ಶ್ರೀರಾಮನನ್ನು ಕಾಣದೆ ದುಃಖಿತರಾದರು. ಸುತ್ತಲೂ ಹುಡುಕಿ ನೋಡಿ ಎಲ್ಲಿಯೂ ಅವರ ಸುಳಿವನ್ನು ಕಾಣದೆ ಉತ್ತರ ದಿಕ್ಕಿಗೆ ರಥವು ಹೋದ ದಾರಿಯನ್ನು ಗುರುತಿಸಿದರು. ಏನು ಮಾಡಬೇಕೆಂದು ದಿಕ್ಕುತೋರದೆ ಅವರೆಲ್ಲರೂ ಶೋಕಿಸುತ್ತಲೇ ನಗರಕ್ಕೆ ಹಿಂದಿರುಗಿ ಹೋದರು. ಅಯೋಧ್ಯಾ ನಗರವು ಜನಶೂನ್ಯವಾಗಿ ಹಾಳು ಬಿದ್ದಂತೆ ಕಾಣಿಸಿತು. ಯಾರ ಮನೆಯ ಬಾಗಿಲಲ್ಲೂ ನೀರನ್ನು ಹಾಕಲಿಲ್ಲ, ರಂಗವಲ್ಲಿಯನ್ನು ಇಡಲಿಲ್ಲ, ಒಂದು ಅಂಗಡಿಯೂ ತೆರೆಯಲಿಲ್ಲ.

ಇತ್ತ ಶ್ರೀರಾಮನು ಸೀತಾಲಕ್ಷ್ಮಣರೊಡನೆ ರಥದಲ್ಲಿ ಪ್ರಯಾಣ ಮಾಡಿ ಕೋಸಲ ದೇಶದ ಗಡಿಯನ್ನು ಸೇರಿದನು. ಅನಂತರ ಅಯೋಧ್ಯೆಯ ಕಡೆಗೆ ತಿರುಗಿ ಕೈ

ಮುಗಿದು ''ಅಯೋಧ್ಯಾಧಿದೇವತೆ, ವನವಾಸಕ್ಕೆ ಹೋಗಲು ನಮಗೆ ಅನುಜ್ಞೆಯನ್ನು ನೀಡು. ತಂದೆಗೆ ಮಾತು ಕೊಟ್ಟಂತೆ ವನವಾಸವನ್ನು ಮುಗಿಸಿ ಮತ್ತೆ ಬಂದು ನಿನ್ನನ್ನು ಕಾಣುವಂತೆ ಅನುಗ್ರಹಿಸು'' ಎಂದು ಪ್ರಾರ್ಥಿಸಿದನು. ಆತನ ಸುಂದರವಾದ ನೇತ್ರಗಳಿಂದ ಕಣ್ಣೀರು ಹರಿಯುತ್ತಿತ್ತು. ಆಮೇಲೆ ಕೋಸಲರಾಜ್ಯವನ್ನು ದಾಟಿ ಎಲ್ಲರೂ ಗಂಗಾತೀರಕ್ಕೆ ಬಂದರು. ತೀರದಲ್ಲಿ ಒಂದು ವಿಶಾಲವಾದ ಇಂಗುದೀ ವೃಕ್ಷವು ಶೋಭಿಸುತ್ತಿತ್ತು. ಆ ಮರದ ಅಡಿಯಲ್ಲಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ರಥದಿಂದಿಳಿದನು. ಅವರು ಮರದ ಕೆಳಗೆ ವಿಶ್ರಮಿಸುತ್ತಿದ್ದಾಗ ಸಮೀಪದ ಶೃಂಗಿಬೇರಪುರದ ಅಧಿಪತಿಯೂ ಬೇಡರ ಜಾತಿಯವನೂ ಆದ ಗುಹನಿಗೆ ಈ ವೃತ್ತಾಂತವು ತಿಳಿಯಿತು. ರಾಘವನಿಗೆ ಅವನು ಆಪ್ತಮಿತ್ರ. ಒಡನೆಯೇ ಗುಹನು ತನ್ನ ಮಂತ್ರಿಗಳನ್ನೂ ಬಂಧುಗಳನ್ನೂ ಕರೆದುಕೊಂಡು ಶ್ರೀರಾಮನ ಬಳಿಗೆ ಬಂದನು. ಅವನು ಬರುತ್ತಿರುವುದನ್ನು ಕಂಡು ಶ್ರೀರಾಮನು ಲಕ್ಷ್ಮಣನೊಡನೆ ಹೋಗಿ ಅವನನ್ನು ಎದುರುಗೊಂಡನು. ಗುಹನು ರಾಘವನನ್ನು ಆಲಿಂಗಿಸಿಕೊಂಡು ''ರಾಮ, ಈ ಶೃಂಗಿವೇರಪುರವು ನಿನ್ನ ಅಯೋಧ್ಯೆಯೆಂದೇ ತಿಳಿ. ನಿನಗೋಸ್ಕರ ಏನು ಮಾಡಲಿ? ನಾವು ನಿನ್ನ ಸೇವಕರು. ನೀನು ನಮಗೆ ಪ್ರಭು'' ಎಂದನು. ಅಯೋಧ್ಯೆಯಲ್ಲಿ ನಡೆದ ವೃತ್ತಾಂತವು ಗುಹನಿಗೆ ತಿಳಿಯಿತು. ಅನಂತರ ಕೆಲವು ಹೊತ್ತು ಸಂಭಾಷಣೆಯಾದ ಮೇಲೆ ಗುಹನು ಇವರೆಲ್ಲರ ಭೋಜನಕ್ಕೆ ಬೇಕಾದ ಆಹಾರವನ್ನೂ ಹಾಸಿಗೆಯನ್ನೂ ಕುದುರೆಗಳಿಗೆ ಹುಲ್ಲನ್ನೂ ತರಿಸಿದನು. ಅವೆಲ್ಲವನ್ನೂ ಸ್ವೀಕರಿಸುವಂತೆ ಬೇಡಿಕೊಂಡನು. ರಾಘವನು ''ಮಿತ್ರ–ಗುಹ, ನಿನ್ನ ಮಧುರವಾದ ಈ ಸ್ನೇಹದಿಂದಲೇ ನಾನು ತೃಪ್ತನಾದೆನು. ಪಿತೃವಾಕ್ಯ ಪರಿಪಾಲನೆಗಾಗಿ ನಾನು ತಾಪಸನಾಗಿದ್ದೇನೆ. ಇನ್ನು ಮೇಲೆ ಕಂದಮೂಲ ಫಲಗಳೇ ನನಗೆ ಆಹಾರ. ರಥವನ್ನು ಎಳೆದು ತಂದಿರುವ ಕುದುರೆಗಳಿಗೆ ಬೇಕಾದ ಆಹಾರವನ್ನು ತರಿಸಿಕೊಡು. ಅವು ತೃಪ್ತವಾದರೆ ನನಗೆ ತೃಪ್ತಿಯಾಯಿತೆಂದು ತಿಳಿ'' ಎಂದುಬಿಟ್ಟನು. ಅಷ್ಟರಲ್ಲಿ ಸಾಯಂಕಾಲವಾಯಿತು. ಶ್ರೀರಾಮನು ಸಾಯಂಕಾಲದ ಸಂಧ್ಯಾವಂದನೆಯನ್ನು ಮಾಡಿ ಲಕ್ಷ್ಮಣನು ತಂದುಕೊಟ್ಟ ನೀರನ್ನು ಕುಡಿದು ನೆಲದ ಮೇಲೆ ಮಲಗಿ ಬಿಟ್ಟನು. ಸೀತೆಯೂ ಮಲಗಿದಳು. ಲಕ್ಷ್ಮಣನು ಗುಹನಿದ್ದಲ್ಲಿಗೆ ಬಂದು ಒಂದು ಮರದ ಕೆಳಗೆ ಕುಳಿತನು. ಇಬ್ಬರೂ ಶ್ರೀರಾಮನ ಗುಣಗಳನ್ನೂ ಸೀತೆಯ ಪತಿವ್ರತಾ ಧರ್ಮವನ್ನೂ ಮತ್ತೆ ಮತ್ತೆ ಹೇಳಿ ಹೊಗಳುತ್ತ ಕಾವಲಾಗಿದ್ದರು. ಅವರಾರೂ ರಾತ್ರಿ ನಿದ್ರೆ ಮಾಡಲಿಲ್ಲ.

ರಾತ್ರಿಯು ಕಳೆದು ಬೆಳಗಾಯಿತು. ಶ್ರೀರಾಮನು ಸೌಮಿತ್ರಿಯನ್ನು ಕರೆದು ''ತಮ್ಮ, ಸೂರ್ಯೋದಯ ಸಮಯವು ಸಮೀಪಿಸಿತು. ನಾವೀಗ ಈ ಜಾಹ್ನವೀ

ನದಿಯನ್ನು ದಾಟಿ ಹೋಗೋಣ'' ಎಂದನು. ಅಣ್ಣನ ಆಶಯವನ್ನು ಗ್ರಹಿಸಿದ ಲಕ್ಷ್ಮಣನು ನದಿಯನ್ನು ದಾಟಲು ಬೇಕಾದ ದೋಣಿಯ ವಿಷಯವನ್ನು ಗುಹನಿಗೆ ತಿಳಿಸಿದನು. ಗುಹನು ತನ್ನ ಅಧಿಕಾರಿಗಳನ್ನು ಕುರಿತು ''ಇವರು ನದಿಯನ್ನು ದಾಟಲು ಬೇಕಾದ ಒಂದು ದೃಢವಾದ ನೌಕೆಯನ್ನು ತನ್ನಿರಿ. ನಾವಿಕರು ನದಿಯನ್ನಿಳಿಯಲು ಸುಲಭವಾದ ಸ್ಥಳದಲ್ಲಿ ಅದನ್ನು ತಂದು ನಿಲ್ಲಿಸಲಿ'' ಎಂದನು. ಸ್ವಲ್ಪ ಹೊತ್ತಿನಲ್ಲಿ ನೌಕೆಯು ಸಿದ್ಧವಾಯಿತು.

ಅದನ್ನು ಗುಹನು ಶ್ರೀರಾಮನಿಗೆ ತಿಳಿಸಲಾಗಿ, ರಾಮಲಕ್ಷ್ಮಣರು ಕವಚಗಳನ್ನು ತೊಟ್ಟು, ಬತ್ತಳಿಕೆಗಳನ್ನು ಹೆಗಲಿಗೇರಿಸಿ, ಖಡ್ಗಗಳನ್ನು ನಡುವಿಗೆ ಬಿಗಿದು ಧನುರ್ಧಾರಿಗಳಾಗಿ ನೌಕೆಯ ಬಳಿಗೆ ಹೊರಟರು. ಆಗ ಸುಮಂತ್ರನು ಕೈಮುಗಿದು ಕೊಂಡು ವಿನಯದಿಂದ ''ರಾಜಕುಮಾರ, ಈಗ ನಾನೇನು ಮಾಡಲಿ?'' ಎಂದು ಕೇಳಿದನು. ರಾಘವನು ಆತನ ಬೆನ್ನನ್ನು ಸವರಿ ''ಸುಮಂತ್ರ ನೀನಿನ್ನು ರಾಜಧಾನಿಗೆ ಹೊರಟುಹೋಗು. ಮಹಾರಾಜನ ಬಳಿಯಲ್ಲಿದ್ದು ಜಾಗರೂಕತೆಯಿಂದ ಅವನನ್ನು ನೋಡಿಕೊಳ್ಳುತ್ತಿರು. ನಾವಿನ್ನು ಕಾಲ್ನಡೆಯಿಂದಲೇ ಮಹಾರಣ್ಯವನ್ನು ಪ್ರವೇಶಿಸು ತ್ತೇವೆ'' ಎಂದನು. ಸುಮಂತ್ರನ ಕಣ್ಣುಗಳಿಂದ ಬಳಬಳನೆ ನೀರು ಉದುರಿತು. ಅವನು ದೈನ್ಯದಿಂದ ''ರಾಜಪುತ್ರ, ನಿನಗೂ ಈ ಕಷ್ಟ ಬರುವುದಾದರೆ ಸದ್ಗುಣಗಳಿಗೆ ಯಾವ ಬೆಲೆಯೂ ಈ ಲೋಕದಲ್ಲಿ ಇಲ್ಲವೆಂದು ತೋರುತ್ತದೆ. ಸಾಮಾನ್ಯ ಮನುಷ್ಯರಂತೆ ನೀವು ಮೂವರೂ ಕಾಡಿನಲ್ಲಿ ಇರಬೇಕಾಯಿತೆಂದರೆ, ದೈವಕ್ಕೆ ಎದುರೇ ಇಲ್ಲವೆಂದಾಯಿತು. ಮುಖ್ಯವಾಗಿ ನಾವು ಕೆಟ್ಟೆವು. ನೀನೂ ನಮ್ಮನ್ನು ಕೈಬಿಟ್ಟೆ. ಪಾಪಿಷ್ಠೆಯಾದ ಕೈಕೇಯಿಯ ಕೈಕೆಳಗೆ ನಾವು ಬಾಳಬೇಕಾಯಿತು'' ಎಂದು ಹೇಳಿ ಗಳಗಳನೆ ಅತ್ತುಬಿಟ್ಟನು. ಶ್ರೀರಾಮನು ಅವನನ್ನು ಸಂತೈಸುತ್ತಾ ಮಧುರವಾದ ನುಡಿಗಳಿಂದ ''ಸುಮಂತ್ರ, ನನ್ನ ತಂದೆಯು ವೃದ್ಧನಾಗಿದ್ದಾನೆ. ಸ್ತ್ರೀವ್ಯಾಮೋಹಕ್ಕೆ ಸಿಕ್ಕಿ ಇಂತಹ ಕಷ್ಟವನ್ನು ತಂದುಕೊಂಡಿದ್ದಾನೆ. ಆತನಿಗೆ ಅಸಮಾಧಾನವಾಗದಂತೆ ಶೋಕದಿಂದ ಕೊರಗದಂತೆ ನೋಡಿಕೊ. ನನ್ನ ಪೂಜ್ಯನಾದ ತಂದೆಗೆ ಈ ಮಾತನ್ನು ಅರಿಕೆ ಮಾಡು. ''ಮಹಾರಾಜ, ನಾನಾಗಲಿ, ಮೈಥಿಲಿಯಾಗಲಿ, ಲಕ್ಷ್ಮಣನಾಗಲಿ ವನವಾಸಕ್ಕಾಗಿ ಬಂದೆವೆಂದು ವ್ಯಥೆ ಪಡುವುದಿಲ್ಲ, ಹದಿನಾಲ್ಕು ವರ್ಷ ಕಳೆದೊಡನೆ ಬಂದು ನಿನ್ನ ಪಾದಗಳಿಗೆ ನಮಸ್ಕರಿಸುತ್ತೇವೆ'' ಎಂದು ಹೇಳು ಮತ್ತು ನನ್ನ ತಾಯಿಗೂ, ಲಕ್ಷ್ಮಣನ ತಾಯಿಗೂ, ಕೈಕೇಯಿಗೂ ಇದೇ ಮಾತನ್ನು ನಿವೇದಿಸು. ಭರತನಿಗೆ ಪಟ್ಟಾಭಿಷೇಕವಾಗಲಿ. ಅವನಿಗೆ ನಾನು ಹೇಳಿದೆನೆಂದು ಈ ಮಾತನ್ನು ತಿಳಿಸು. ''ಭರತ, ತಂದೆಯಲ್ಲಿಯೂ ಇತರ ತಾಯಿಯರಲ್ಲಿಯೂ ಯಾವ ಭೇದಭಾವವನ್ನೂ

ಇಡದೆ ಎಲ್ಲರ ಯೋಗಕ್ಷೇಮಗಳನ್ನೂ ಸರಿಯಾಗಿ ನೋಡಿಕೊಳ್ಳಬೇಕು. ನಿನ್ನ ತಾಯಿಯಾದ ಕೈಕೇಯಿಯನ್ನು ನೋಡಿಕೊಳ್ಳುವಂತೆ ಲಕ್ಷ್ಮಣನ ತಾಯಿಯನ್ನೂ ನನ್ನ ತಾಯಿಯನ್ನೂ ನೋಡಿಕೊಂಡು ಉಪಚರಿಸು. ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಿರು, ಎಂದು ಹೇಳು'' ಎಂದು ನುಡಿದನು. ಸುಮಂತ್ರನು ತಾನು ಅಯೋಧ್ಯೆಗೆ ಹೋಗುವುದಿಲ್ಲವೆಂದೂ ಶ್ರೀರಾಮನೊಡನೆ ಅರಣ್ಯದಲ್ಲಿಯೇ ಇರುವೆನೆಂದೂ ಹೇಳತೊಡಗಿದನು. ಶ್ರೀರಾಮನು ಆತನನ್ನು ನೋಡಿ ''ಸುಮಂತ್ರ, ನಿನಗೆ ನನ್ನಲ್ಲಿ ಪರಮಭಕ್ತಿಯಿದೆ ಎಂಬುದನ್ನು ಬಲ್ಲೆನು. ನೀನು ಅಯೋಧ್ಯೆಗೆ ಹಿಂದಿರುಗುವುದೇ ಯುಕ್ತ. ಹಿಂದಿರುಗಿ ಬಂದ ನಿನ್ನನ್ನು ನೋಡಿದಾಗ ಕೈಕೇಯಿಗೆ ರಾಮನು ಕಾಡಿಗೆ ಹೋದನೆಂದು ನಂಬಿಕೆ ದೃಢವಾಗುತ್ತದೆ. ಮನಸ್ಸಿಗೆ ನೆಮ್ಮದಿ ಯಾಗುತ್ತದೆ. ಅಲ್ಲದೆ ಈ ಸಂದರ್ಭದಲ್ಲಿ ನೀನು ಮಹಾರಾಜನ ಬಳಿ ಇರಲೇಬೇಕು'' ಎಂದು ಸುಮಂತ್ರನನ್ನು ಸಂತೈಸಿದನು. ಅನಂತರ ಆ ಧೀರನು ಗುಹನ ಕಡೆಗೆ ತಿರುಗಿ ''ಮಿತ್ರ, ನನಗೆ ಆಲದ ಹಾಲನ್ನು ತರಿಸಿಕೊಡು. ನಾನು ಜಟೆಯನ್ನು ಕಟ್ಟಿ ಋಷಿ ಯಂತೆ ಕಾಡಿನಲ್ಲಿರಬೇಕು. ಅದು ನನ್ನ ವ್ರತವಾಗಿರುತ್ತದೆ'' ಎಂದನು. ಗುಹನು ಆಲದ ಹಾಲನ್ನು ತರಿಸಿಕೊಡಲು ಶ್ರೀರಾಮನೂ ಲಕ್ಷ್ಮಣನೂ ಅದನ್ನು ತಲೆಗೂದಲುಗಳಿಗೆ ಸವರಿ ಜಟೆಯನ್ನು ಬಿಗಿದು ಕಟ್ಟಿಕೊಂಡರು. ಕೆಲವು ಹಿತೋಪದೇಶಗಳನ್ನು ಮಾಡಿ ಗುಹನನ್ನೂ, ಸುಮಂತ್ರನನ್ನೂ ಶ್ರೀರಾಮನು ಬೀಳ್ಕೊಂಡನು. ಆಮೇಲೆ ರಾಮ, ಲಕ್ಷ್ಮಣ, ಸೀತೆಯರು ಗಂಗಾನದಿಗೆ ವಂದಿಸಿ ನಾವೆಯನ್ನೇರಿದರು. ನದೀಮಧ್ಯಕ್ಕೆ ಬಂದಾಗ ವೈದೇಹಿಯು ಕೈಮುಗಿದುಕೊಂಡು ''ಹೇ ಭಾಗೀರಥಿ, ದಶರಥ ಮಹಾರಾಜನ ಧೀಮಂತ ಪುತ್ರನಾದ ನನ್ನ ಪತಿ ಶ್ರೀರಾಮನು ತಂದೆಯ ಆಜ್ಞೆಯನ್ನು ಪರಿಪಾಲಿಸುತ್ತಿದ್ದಾನೆ. ಈತನನ್ನು ರಕ್ಷಿಸು. ಹದಿನಾಲ್ಕು ವರ್ಷಗಳು ಕಳೆದ ಮೇಲೆ ನಾವು ಮೂವರೂ ಕುಶಲದಿಂದ ಹಿಂದಿರುಗಿ ಬರುವಂತಾಗಲಿ. ದೇವಿ, ಆಗ ನಾನಾ ವಿಧ ಪೂಜೆಗಳಿಂದ ನಿನ್ನನ್ನು ಆರಾಧಿಸುವೆನು'' ಎಂದು ಪ್ರಾರ್ಥಿಸಿದಳು.

ಹೀಗೆ ಪತಿಹಿತಕಾಂಕ್ಷಿಣಿಯಾದ ಜಾನಕಿಯು ಗಂಗೆಯನ್ನು ಪ್ರಾರ್ಥಿಸುತ್ತಿರು ವಾಗಲೇ ನಾವೆಯು ಆಚೆಯ ದಡವನ್ನು ಸೇರಿತು. ಆಗ ಶ್ರೀರಾಮನು ಸೀತಾ ಲಕ್ಷ್ಮಣರೊಡನೆ ನಾವೆಯಿಂದಿಳಿದು ದಕ್ಷಿಣ ದಿಕ್ಕಿನಲ್ಲಿದ್ದ ಅರಣ್ಯದ ಕಡೆಗೆ ಹೊರಟನು. ಆ ವೀರನು ತಮ್ಮನನ್ನು ನೋಡಿ ''ಸೌಮಿತ್ರಿ, ವನದಲ್ಲಿ ನೀನು ಎಚ್ಚರಿಕೆಯಿಂದ ರಕ್ಷಣಾಕಾರ್ಯವನ್ನು ನೋಡಿಕೊಳ್ಳುತ್ತಿರು. ಈ ನಿರ್ಮಾನುಷ ಪ್ರದೇಶದಲ್ಲಿ ನಾವು ಜಾಗರೂಕತೆಯಿಂದಿರಬೇಕು. ನೀನು ಮುಂದೆ ಹೋಗು. ನಿನ್ನ ಹಿಂದೆ ಸೀತೆ ಹೋಗಲಿ. ನಿಮ್ಮಿಬ್ಬರ ಹಿಂದೆ ಬೆಂಗಾವಲಾಗಿ ನಾನು ಬರುತ್ತೇನೆ''

ಎಂದನು. ಆಮೇಲೆ ''ಈಗ ಸೀತೆಗೆ ವನವಾಸದ ಕಷ್ಟವೇನೆಂದು ತಿಳಿಯುವುದು! ಹಳ್ಳ, ತಿಟ್ಟು, ಮುಳ್ಳು, ಕೊರಕಲುಗಳಿಂದ ತುಂಬಿದ ಘೋರಾರಣ್ಯವನ್ನು, ತಮ್ಮ ತಮ್ಮ ಈಗ ಸೀತೆ ಪ್ರವೇಶಿಸುವಳು'' ಎಂದನು. ಅನಂತರ ಮುಂದೆ ಲಕ್ಷ್ಮಣನೂ ನಡುವೆ ಸೀತೆಯೂ ಹಿಂದುಗಡೆ ಶ್ರೀ ರಾಮನೂ ನಡೆಯತೊಡಗಿದರು. ನದಿಯ ಉತ್ತರ ದಡದಲ್ಲಿ ನಿಂತಿದ್ದ ಸುಮಂತ್ರನು ಈ ಮೂವರನ್ನೂ ಎವೆಯಿಕ್ಕದೆ ನೋಡುತ್ತಿದ್ದನು. ಅವರು ಕಾಡಿನಲ್ಲಿ ಕಣ್ಮರೆಯಾದ ಮೇಲೆ ಸುಮಂತ್ರನು ಅಳುತ್ತ ತನ್ನ ರಥದ ಕಡೆಗೆ ಹೋದನು. ಇತ್ತ ಶ್ರೀರಾಮಾದಿಗಳು ಕಾಡಿನಲ್ಲಿ ದೊರಕಿದ ಕಂದಮೂಲಾದಿಗಳನ್ನು ತಿಂದು ಒಂದು ಮರದಡಿಯನ್ನು ಸೇರಿದರು.

೨೦

ಶ್ರೀರಾಮನ ಸಂಕ್ಷೋಭ. ಸುಮಂತ್ರನು ದಶರಥನಿಗೆ ವರದಿಯನ್ನೊಪ್ಪಿಸುವುದು

ಸಂಜೆಯಾಯಿತು. ಸಂಧ್ಯಾವಂದನೆಯನ್ನು ಆಚರಿಸಿ ಲಕ್ಷ್ಮಣನನ್ನು ಕುರಿತು ಶ್ರೀರಾಮನು ಕೆಲವು ಮಾತುಗಳನ್ನು ಆಡಿದನು. ''ಲಕ್ಷ್ಮಣ, ಈಗ ರಾತ್ರಿಯಾಯಿತು. ಇದೊಂದು ರಾತ್ರಿಯನ್ನು ಇಲ್ಲಿ ಹೇಗಾದರೂ ಕಳೆಯೋಣ. ಈಗ ನಮ್ಮ ತಂದೆಯು ಶೋಕದಿಂದ ಕಂಗೆಟ್ಟು ಹೋಗಿರಬಹುದು. ಕೈಕೇಯಿಯು ತನ್ನ ಅಭೀಷ್ಟವು ಸಿದ್ಧಿಸಿತೆಂದು ನಲಿಯುತ್ತಿರಬಹುದು. ನನ್ನ ತಂದೆ ಕೈಕೇಯಿಗೆ ವಶನಾಗಿ ನನ್ನನ್ನು ತ್ಯಜಿಸಿ ಈ ಕಷ್ಟವನ್ನು ತಂದುಕೊಂಡಿದ್ದಾನೆ. ಲಕ್ಷ್ಮಣ, ಮಹಾರಾಜನಿಗೆ ಕೊನೆಗಾಲ, ನಮಗೆ ವನವಾಸ, ಭರತನಿಗೆ ರಾಜ್ಯಪ್ರಾಪ್ತಿ ಇವನ್ನು ಸಾಧಿಸುವುದಕ್ಕಾಗಿಯೇ ಕೈಕೇಯಿಯು ನಮ್ಮ ಮನೆಗೆ ಬಂದು ಸೇರಿದಳೆಂದು ಕಾಣುತ್ತದೆ. ಅವಳು ಸೌಭಾಗ್ಯ ಮದದಿಂದ ಉನ್ಮತ್ತಳಾಗಿ ನನ್ನ ತಾಯಿಯನ್ನೂ, ನಿನ್ನ ತಾಯಿ ಸುಮಿತ್ರಾ ದೇವಿಯನ್ನೂ ಪೀಡಿಸದೆ ಇರುತ್ತಾಳೆಯೆ? ನೀನು ಕೂಡಲೇ ಅಯೋಧ್ಯೆಗೆ ಹಿಂದಿರುಗಿ ಹೋಗು. ನಿನ್ನ ತಾಯಿಗೂ ವೃದ್ಧೆಯಾದ ಕೌಸಲ್ಯೆಗೂ ದಿಕ್ಕಾಗಿರು. ನಾನೊಬ್ಬನೇ ಸೀತೆಯೊಡನೆ ದಂಡಕಾರಣ್ಯಕ್ಕೆ ಹೋಗುವೆನು. ನನಗೆ ಯಾವ ಭಯವೂ ಇಲ್ಲ. ಲಕ್ಷ್ಮಣ, ಒಮ್ಮೊಮ್ಮೆ ನನ್ನ ಮನಸ್ಸಿಗೆ ಕಾವೇರುತ್ತದೆ. ನನ್ನ ತಾಯಿಗೆ ಇಂಥ ಕಷ್ಟವು ಬಂದಿತಲ್ಲ ಎಂದು ವ್ಯಥೆಯಾಗುತ್ತದೆ. ಸೌಮಿತ್ರಿ, ನಾನು ಮನಸ್ಸು ಮಾಡಿದರೆ ಒಬ್ಬನೇ ಈ ಅಯೋಧ್ಯೆಯನ್ನು–ಅಷ್ಟೇಕೆ–ಈ ಜಗತ್ತನ್ನೂ ಗೆದ್ದು ವಶಪಡಿಸಿಕೊಳ್ಳಬಲ್ಲೆ. ಆದರೆ ಪರಾಕ್ರಮವಿದೆಯೆಂದು ಅದನ್ನು ಮೆರೆಸತಕ್ಕದ್ದಲ್ಲ. ಧರ್ಮ ವಿರುದ್ಧವಾಗಿ ನಡೆಯತಕ್ಕದ್ದಲ್ಲ. ಆದ್ದರಿಂದ ತಂದೆಯ

ಮಾತಿನಂತೆ ರಾಜ್ಯವನ್ನು ತ್ಯಜಿಸಿ ಕಾಡಿಗೆ ಬಂದೆನು'' ಎಂದು ನಾನಾ ಬಗೆಯಲ್ಲಿ ವ್ಯಾಕುಲತೆಯಿಂದ ಮಾತಾಡುತ್ತಿದ್ದನು.

ಆಗ ಲಕ್ಷ್ಮಣನು ಅಣ್ಣನನ್ನು ಸಮಾಧಾನ ಪಡಿಸುತ್ತ, ''ಶ್ರೀರಾಮ, ವೀರಾಗ್ರಣಿಯಾದ ನೀನು ಅಯೋಧ್ಯೆಯನ್ನು ಬಿಟ್ಟು ಬಂದದ್ದರಿಂದ ಅದು ಚಂದ್ರನಿಲ್ಲದ ರಾತ್ರಿಯಂತಾಗಿದೆ. ಪುರುಷೋತ್ತಮನಾದ ನೀನು ಹೀಗೆ ಶೋಕಿಸುವುದು ಯುಕ್ತವಲ್ಲ. ನೀನು ಶೋಕಿಸಿದರೆ ಸೀತಾದೇವಿಗೂ, ನನಗೂ ದುಃಖವು ಹೆಚ್ಚುವುದು. ನಿನ್ನನ್ನಾಗಲಿ ನನ್ನ ತಮ್ಮನನ್ನಾಗಲಿ ತಾಯಿಯನ್ನಾಗಲಿ ನೋಡುವ ಬಯಕೆ ನನಗಿಲ್ಲ. ನೀನಿಲ್ಲದ ಸ್ವರ್ಗವೂ ನನಗೆ ಬೇಡ'' ಎಂದನು. ಅನಂತರ ಎಲ್ಲರೂ ಸ್ವಲ್ಪಹೊತ್ತು ಶಾಂತರಾಗಿ ಕುಳಿತು ಮರದಡಿಯಲ್ಲಿ ಮಲಗಿ ರಾತ್ರಿಯನ್ನು ಕಳೆದರು.

ಮರುದಿನ ಸೂರ್ಯನು ಉದಿಸಿದೊಡನೆ ಮುಂದಕ್ಕೆ ಹೊರಟರು. ಒಂದು ದೊಡ್ಡ ಅಡವಿಯನ್ನು ದಾಟುವಾಗ ಸೀತೆಯ ಮೃದು ಚರಣಗಳು ನೊಂದವು. ಅವಳು ಆಯಾಸದಿಂದ ಪತಿಯ ಮುಖವನ್ನು ನೋಡುತ್ತ ''ಇನ್ನು ಎಷ್ಟು ದೂರ ಹೋಗಬೇಕು?'' ಎಂದು ಕೇಳಿದಳು. ಆ ಮಾತನ್ನು ಕೇಳಿ ಶ್ರೀರಾಮನ ಕಣ್ಣಲ್ಲಿ ನೀರು ತುಂಬಿತು. ಅದು ಸೀತೆಗೋಸ್ಕರ ಆತನ ಕಣ್ಣಲ್ಲಿ ತುಂಬಿದ ಮೊದಲನೆಯ ಕಣ್ಣೀರು. ಅವನಿಗೆ ಏನು ಹೇಳಲೂ ತೋರಲಿಲ್ಲ. ಅನಂತರ ಅಡವಿಯನ್ನು ದಾಟಿ ಗಂಗಾ ಯಮುನೆಯರ ಸಂಗಮ ಸ್ಥಳವಾದ ಪ್ರಯಾಗಕ್ಕೆ ಬಂದರು. ಮೂವರೂ ಭರದ್ವಾಜ ಮುನಿಗಳ ಆಶ್ರಮಕ್ಕೆ ಹೋಗಿ ಮುನಿಗಳನ್ನು ಸಂದರ್ಶಿಸಿ ಅಭಿವಾದನೆ ಮಾಡಿದರು. ಶ್ರೀರಾಮನು ತಾವು ಯಾರೆಂಬುದನ್ನೂ ಅರಣ್ಯಕ್ಕೆ ಬಂದ ಕಾರಣವನ್ನೂ ಮುನಿಗಳಿಗೆ ನಿವೇದಿಸಿದನು. ಭರದ್ವಾಜ ಮುನಿಗಳು ಅವರನ್ನು ಪ್ರೀತಿಯಿಂದ ಸ್ವಾಗತಿಸಿ ಸತ್ಕರಿಸಿ ದರು. ಮರುದಿನ ಪ್ರಾತಃಕೃತ್ಯವು ಮುಗಿದ ಮೇಲೆ ಸೀತಾ ಲಕ್ಷ್ಮಣರೊಡನೆ ಬಂದು ಶ್ರೀರಾಮನು ಭರದ್ವಾಜರಿಗೆ ನಮಸ್ಕರಿಸಿದನು. ಭರದ್ವಾಜರು ''ರಾಮ, ನಿನಗೆ ನಿಷ್ಕಾರಣವಾಗಿ ವನವಾಸವು ಪ್ರಾಪ್ತವಾಯಿತು. ಈ ಸ್ಥಳವು ಮನೋಹರವಾದ ಪುಣ್ಯಕ್ಷೇತ್ರ. ಹದಿನಾಲ್ಕು ವರ್ಷಗಳೂ ಇಲ್ಲಿಯೇ ಇರಬಹುದು'' ಎಂದರು. ರಾಘವನು ''ಮಹಾತ್ಮರೆ, ನಿಮ್ಮ ಕಾರುಣ್ಯವು ಸೀಮಾತೀತವಾದುದು. ಆದರೆ ಅಯೋಧ್ಯಾನಗರವಾಸಿಗಳಿಗೆ, ಈ ಪ್ರದೇಶವು ಸಮೀಪದಲ್ಲಿರುವುದರಿಂದ ನಮ್ಮನ್ನು ನೋಡುವುದಕ್ಕಾಗಿ ಅವರು ಪದೇ ಪದೇ ಬರುವರು. ಆದ್ದರಿಂದ ಇಲ್ಲಿರುವುದು ನನಗೆ ಇಷ್ಟವಿಲ್ಲ. ದೂರದಲ್ಲಿರುವ ಇನ್ನೊಂದು ಸ್ಥಳವನ್ನು ಹೇಳಿರಿ: ಸುಖೋಚಿತಳಾದ ಜಾನಕಿಯು ಅಲ್ಲಿ ಹರ್ಷಪಡುವಂತೆ ಇರಬೇಕು'' ಎಂದನು. ಭರದ್ವಾಜರು ''ವತ್ಸ, ಇಲ್ಲಿಗೆ ಹತ್ತು ಹರದಾರಿಗಳ ದೂರದಲ್ಲಿ ಚಿತ್ರಕೂಟವೆಂಬ ಪರ್ವತವಿದೆ. ಲತಾ ವೃಕ್ಷಗಳಿಂದ ಮನೋಹರವಾದ ಸ್ಥಳ ಅದು.

ಹಲವರು ಅಲ್ಲಿದ್ದಾರೆ. ಅದು ನಿಮಗೆ ಸುಖಕರವಾದ ಸ್ಥಳವೆಂದು ನಾನು ಭಾವಿಸುತ್ತೇನೆ'' ಎಂದರು. ಅನಂತರ ಆ ದಿನವೆಲ್ಲಾ ಭರದ್ವಾಜರ ಆಶ್ರಮದಲ್ಲಿ ಕಳೆಯಿತು. ಮರುದಿನ ಬೆಳಗಿನಲ್ಲಿ ಶ್ರೀರಾಮನು ಭರದ್ವಾಜರನ್ನು ಕಂಡು ''ಮಹಾತ್ಮರೆ, ನಿಮ್ಮ ಕೃಪೆಯಿಂದ ರಾತ್ರಿಯನ್ನು ಸುಖವಾಗಿ ಕಳೆದೆವು. ಮುಂದೆ ಪ್ರಯಾಣ ಮಾಡಲು ಅನುಜ್ಞೆಯನ್ನು ಕೊಡಬೇಕು'' ಎಂದು ಕೇಳಿಕೊಂಡನು. ಭರದ್ವಾಜರು ''ರಾಮ, ನಾನು ಹೇಳಿದಂತೆ ಚಿತ್ರಕೂಟಕ್ಕೆ ಹೋಗು. ಮನೋಜ್ಞವಾದ ಸ್ಥಳವದು. ನೀನು ಸೀತಾಲಕ್ಷ್ಮಣರೊಡನೆ ಅಲ್ಲಿ ಸುಖವಾಗಿರ ಬಹುದು'' ಎಂದರು. ಆ ಮುನಿಗಳು ಮೂವರಿಗೂ ಆಶೀರ್ವಾದ ವನ್ನು ಮಾಡಿ ವಾತ್ಸಲ್ಯದಿಂದ ಅವರನ್ನು ಕಳಿಸುತ್ತ ಸ್ವಲ್ಪ ದೂರ ಹೋಗಿ ಚಿತ್ರಕೂಟಕ್ಕೆ ಹೋಗುವ ದಾರಿಯನ್ನು ವಿವರವಾಗಿ ತಿಳಿಸಿಕೊಟ್ಟರು. ಅವರು ಆಶ್ರಮಕ್ಕೆ ಹಿಂದಿರುಗಲು ರಾಘವನು ಲಕ್ಷ್ಮಣನನ್ನು ನೋಡಿ ''ಲಕ್ಷ್ಮಣ, ಈ ಮುನಿಗಳು ಎಷ್ಟು ಅನುಕಂಪದಿಂದ ನಮ್ಮನ್ನು ಕಂಡರು! ನಾವೇ ಪುಣ್ಯವಂತರು'' ಎಂದನು. ಅವರೆಲ್ಲರೂ ಮುಂದೆ ಹೋಗಿ ಒಂದು ತೆಪ್ಪವನ್ನು ರಚಿಸಿ ಯಮುನಾ ನದಿಯನ್ನು ದಾಟಿದರು. ಸೀತೆಯು ತಮ್ಮೆಲ್ಲರ ಪ್ರಯಾಣವು ಸುಖಕರವಾಗಿರುವಂತೆ ಯಮುನೆಯನ್ನು ಪ್ರಾರ್ಥಿಸಿದಳು. ಹಾಗೆಯೇ ದಾರಿಯಲ್ಲಿ ಒಂದು ದೊಡ್ಡ ಆಲದ ಮರವನ್ನು ಕಂಡು ''ಎಲೈ ಮಹಾವೃಕ್ಷವೆ, ನಿನಗೆ ನಮಸ್ಕಾರ. ನನ್ನ ಪತಿಯು ಕ್ಷೇಮವಾಗಿ ವನವಾಸವನ್ನು ಪೂರೈಸುವಂತಾಗಲಿ'' ಎಂದು ಬೇಡಿದಳು. ಮುಂದೆ ಹೋಗುವಾಗ ಬಳ್ಳಿಗಳಲ್ಲಿಯೂ, ಮರಗಳಲ್ಲಿಯೂ ಸುಂದರವಾದ ನಾನಾ ಬಗೆಯ ಹೂಗಳು ಅರಳಿದ್ದವು. ಸೀತೆಯು ಕುತೂಹಲದಿಂದ ಅವನ್ನು ನೋಡುತ್ತ ನಿಂತಾಗ ಶ್ರೀರಾಮನ ಸೂಚನೆಯಂತೆ ಲಕ್ಷ್ಮಣನು ಆ ಹೂಗಳನ್ನು ಕಿತ್ತು ಸೀತೆಗೆ ತಂದುಕೊಡುತ್ತಿದ್ದನು. ಹೀಗೆ ಒಂದೆರಡು ದಿನಗಳಲ್ಲಿ ಅವರು ಚಿತ್ರಕೂಟ ಗಿರಿಯನ್ನು ಸೇರಿದರು. ಆ ಬೆಟ್ಟದಲ್ಲಿ ಹಕ್ಕಿಗಳ ಹಿಂಡು ಚಿಲಿಪಿಲಿ ಗುಟ್ಟುತ್ತಾ ಹಾರಾಡುತ್ತಿದ್ದವು. ಫಲಮೂಲಗಳು ಯಥೇಚ್ಛವಾಗಿದ್ದವು. ಸಿಹಿನೀರು ಪುಷ್ಕಳವಾಗಿ ದೊರೆಯುತ್ತಿತ್ತು. ಶ್ರೀರಾಮನು ಪದ್ಮನೇತ್ರೆಯಾದ ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಸಂಭಾಷಿಸುತ್ತಾ ಹೇಳಿದನು. ''ವೈದೇಹಿ, ಈ ಮುತ್ತುಗದ ಮರಗಳನ್ನು ನೋಡು. ಹೂಗಳು ಅರಳಿರುವುದರಿಂದ ಮರಗಳಿಗೆ ಬೆಂಕಿ ಹೊತ್ತಿದೆಯೋ ಎಂಬಂತೆ ಕಾಣುತ್ತಿದೆ! ಗೇರುಮರಗಳೂ, ಬಿಲ್ವ ವೃಕ್ಷಗಳೂ ಹಣ್ಣುಗಳಿಂದ ಬಳುಕುತ್ತಿವೆ. ಈ ಮರಕ್ಕೆ ಕೋತಿಗಳು ಮುತ್ತಿಕೊಂಡಿರುವುದನ್ನು ನೋಡು! ಅದೋ! ದೊಡ್ಡ ದೊಡ್ಡ ಜೇನುಗೂಡುಗಳು. ಲಕ್ಷ್ಮಣ, ಈ ಪುಣ್ಯಾರಣ್ಯದಲ್ಲಿ ನಾವು ಸಂತೋಷದಿಂದ ಇರಬಹುದು'' ಎಂದನು. ದಾರಿಯಲ್ಲಿ ವಾಲ್ಮೀಕಿ ಮುನಿಗಳ ಆಶ್ರಮವಿತ್ತು. ಮೂವರೂ ಅಲ್ಲಿ ಹೋಗಿ ಮುನಿಗಳ ಆತಿಥ್ಯವನ್ನು ಸ್ವೀಕರಿಸಿ ಮುಂದಕ್ಕೆ ತೆರಳಿದರು. ಅಲ್ಲೊಂದು ಸಮತಟ್ಟಾದ ವಿಶಾಲ ಸ್ಥಳವು ಕಾಣಿಸಿತು. ಶ್ರೀರಾಮನು

ಲಕ್ಷ್ಮಣನಿಗೆ ''ತಮ್ಮ, ಇದು ನಾವು ವಾಸ ಮಾಡಬಹುದಾದ ಉತ್ತಮ ಸ್ಥಳ. ಇಲ್ಲಿರೋಣ'' ಎಂದನು. ಲಕ್ಷ್ಮಣನು ಅಣ್ಣನ ಮಾತನ್ನು ಮನ್ನಿಸಿ ಸುಂದರವಾದ ಒಂದು ಪರ್ಣಶಾಲೆಯನ್ನು ನಿರ್ಮಿಸಿದನು. ಅದು ತಮ್ಮ ನೂತನ ಗೃಹವೆಂದು ಭಾವಿಸಿ ವಿಧಿಪೂರ್ವಕವಾಗಿ ಪೂಜೆ ಮಾಡಿ ಮೂವರೂ ಪರ್ಣಶಾಲೆಯನ್ನು ಪ್ರವೇಶಿಸಿದರು. ಸಮೃದ್ಧವಾಗಿ ಫಲಪುಷ್ಪಗಳೂ ತಿಳಿನೀರೂ ಇದ್ದುದರಿಂದ ಎಲ್ಲರೂ ಹರ್ಷದಿಂದ ಇದ್ದರು.

ಇತ್ತ ಗುಹನು ಸುಮಂತ್ರನೊಡನೆ ಬಹಳ ಹೊತ್ತು ಮಾತಾಡುತ್ತಿದ್ದು ಕಡೆಗೆ ತನ್ನ ಭವನಕ್ಕೆ ತೆರಳಿದನು. ಸುಮಂತ್ರನು ಶೂನ್ಯಹೃದಯನಾಗಿ ನಿಟ್ಟುಸಿರು ಬಿಡುತ್ತ ರಥವನ್ನೇರಿ ಅಯೋಧ್ಯೆಗೆ ಬಂದನು. ಸಂತೋಷವಿಲ್ಲದೆ ಸಪ್ಪೆಯಾಗಿದ್ದ ಆ ಪಟ್ಟಣವನ್ನು ಕಂಡು ''ಇದೇನು? ಅಯೋಧ್ಯೆಯು ರಾಮನ ವಿಯೋಗಾಗ್ನಿಯಿಂದ ಸುಟ್ಟು ಹೋದಂತೆ ಕಾಣುತ್ತದೆ'' ಎಂದು ಖಿನ್ನವದನನಾಗಿ ಅರಮನೆಯ ಬಳಿಗೆ ಹೋದನು. ರಥದಿಂದಿಳಿದು ಅರಮನೆಯಲ್ಲಿ ಏಳು ಕಕ್ಷೆಗಳನ್ನು ದಾಟಿ ಒಳಗೆ ಹೋದನು. ಶ್ರೀರಾಮನನ್ನು ವನದಲ್ಲಿ ಬಿಟ್ಟು ಸುಮಂತ್ರನು ಬಂದುದನ್ನು ಕಂಡು ಅರಮನೆಯಲ್ಲಿದ್ದ ಜನರು ಮತ್ತೆ ಅಳತೊಡಗಿದರು. ಸುಮಂತ್ರನು ನೇರವಾಗಿ ದಶರಥನಿದ್ದ ಸ್ಥಳಕ್ಕೆ ಹೋಗಿ, ಪುತ್ರಶೋಕದಿಂದ ಬಳಲಿ ಬೆಂಡಾಗಿ ತಳಮಳಿಸುತ್ತಿದ್ದ ರಾಜನಿಗೆ ಎಲ್ಲ ವೃತ್ತಾಂತವನ್ನೂ ಹೇಳಿದನು. ದಶರಥನು ಯಾವ ಮಾತನ್ನೂ ಆಡದೆ ಸುಮಂತ್ರನ ನುಡಿಯನ್ನು ಕೇಳಿ ಎಚ್ಚರತಪ್ಪಿದನು. ಆಮೇಲೆ ಸ್ವಲ್ಪ ಹೊತ್ತಿನಲ್ಲಿ ಕೌಸಲ್ಯೆಯ ಉಪಚಾರದಿಂದ ಚೇತರಿಸಿಕೊಂಡ ಆ ವೃದ್ಧನು ಚಡಪಡಿಸುತ್ತ ಸಾರಥಿಯನ್ನು ಕುರಿತು ''ಸುಮಂತ್ರ, ನನ್ನ ಮಗನು ಎಲ್ಲಿ ಮಲಗಿದ? ಎಲ್ಲಿ ಏನು ತಿಂದ? ಎಲ್ಲವನ್ನೂ ಹೇಳಪ್ಪ'' ಎಂದು ಗೋಳಾಡಿದನು. ಮತ್ತೊಮ್ಮೆ ಸುಮಂತ್ರನು ಎಲ್ಲವನ್ನೂ ವಿವರಿಸಿದ ಮೇಲೆ ''ನೀನು ಬರುವಾಗ ರಾಮನು ಏನು ಹೇಳಿದ? ಲಕ್ಷ್ಮಣ ಸೀತೆಯರು ಏನೆಂದರು? ಹೇಳು'' ಎಂದನು. ಸುಮಂತ್ರನು ಹೀಗೆಂದನು – ''ಮಹಾರಾಜ, ಅವರೆಲ್ಲರೂ ನನ್ನನ್ನು ಬೀಳ್ಕೊಂಡು ಹೊರಡುವಾಗ ಶ್ರೀರಾಮನು ಹೀಗೆಂದನು. 'ಸುಮಂತ್ರ, ಪೂಜ್ಯರಾದ ನನ್ನ ತಂದೆತಾಯಿಗಳಿಗೂ ಎಲ್ಲ ಹಿರಿಯರಿಗೂ ನನ್ನ ನಮಸ್ಕಾರಗಳನ್ನು ತಿಳಿಸು. ನನ್ನ ತಾಯಿಗೆ 'ದೇವಿ, ಮಹಾರಾಜನನ್ನು ದೇವತೆಯೆಂದು ಭಾವಿಸಿ ಅವನ ಪಾದಗಳನ್ನು ಸೇವಿಸುತ್ತಿರು. ನನ್ನ ಎಲ್ಲ ಮಾತೆಯರಲ್ಲಿಯೂ ಹೊಂದಿಕೊಂಡಿರು' ಎಂದಿದ್ದಾನೆ. 'ಭರತನಿಗೆ ನನ್ನ ಆಶೀರ್ವಾದಗಳನ್ನು ತಿಳಿಸು' ಎಂದನು. ಅಲ್ಲದೆ, ಮಹಾರಾಜ, ನನ್ನ ತಾಯಿ ಕೌಸಲ್ಯೆಯನ್ನು ಪ್ರೀತಿವಿಶ್ವಾಸಗಳಿಂದ ಕಾಣುತ್ತಿರು'' ಎಂದು ನಿನಗೆ ಹೇಳಿದ್ದಾನೆ. ಲಕ್ಷ್ಮಣನು ಮಾತ್ರ ಸಿಟ್ಟಿನಿಂದ ಉರಿದುಬಿದ್ದು ''ಸುಮಂತ್ರ, ನನ್ನ ಅಣ್ಣನನ್ನು ವನವಾಸಕ್ಕೆ

ಕಳಿಸಿದ್ದು ಪ್ರೀತಿಪಾತ್ರಳಾದ ಕೈಕೇಯಿಯ ದುರಾಸೆಯನ್ನು ಸಲ್ಲಿಸುವುದ ಕ್ಕಾಗಿಯೋ ಅಥವಾ ಅವಳಿಗೆ ವರವನ್ನು ಕೊಟ್ಟಿರುವ ಮಾತಿಗೆ ಸಿಕ್ಕಿಕೊಂಡಿದ್ದರಿಂದಲೋ ಇರಬಹುದು. ಹೇಗಿದ್ದರೂ ಇದು ಅತ್ಯಂತ ಅನುಚಿತವಾದ ಹೇಯಕೃತ್ಯವೇ ಸರಿ. ಮಹಾರಾಜನಲ್ಲಿ ನನಗೆ ತಂದೆಯೆಂಬ ಗೌರವ ಬುದ್ಧಿ ಇಲ್ಲ – ಎಂದು ಆತನಿಗೆ ಹೇಳಿಬಿಡು. ಶ್ರೀರಾಮನೇ ನನಗೆ ತಂದೆ, ಅಣ್ಣ, ಪ್ರಭು, ಬಂಧು – ಎಲ್ಲವೂ. ಧರ್ಮಭ್ರಷ್ಟವಾದ ಈ ತುಚ್ಛ ಕಾರ್ಯವನ್ನೆಸಗಿದ ನೀನು ಹೇಗೆ ರಾಜ ಎನ್ನಿಸಿ ಕೊಳ್ಳುತ್ತೀಯೆ? – ಎಂದು ಆತನನ್ನು ಕೇಳು'' ಎಂದಿದ್ದಾನೆ. ಮಹಾರಾಜ, ಸಾಧ್ವಿಯಾದ ಜನಕಪುತ್ರಿಯಾದರೋ ನಿಟ್ಟುಸಿರುಬಿಡುತ್ತ ಸುಮ್ಮನೆ ನಿಂತಿದ್ದಳು. ಭೂತಾವಿಷ್ಟಳಂತೆ ದಿಗ್‌ಭ್ರಾಂತಳಾಗಿ ಕಣ್ಣೀರು ಸುರಿಸುತ್ತಿದ್ದಳು. ನನ್ನೊಡನೆ ಏನನ್ನೂ ಹೇಳಲಿಲ್ಲ. ಅನಂತರ, ''ಮಹಾರಾಜ, ರಾಮಲಕ್ಷ್ಮಣರು ನಾರು ಬಟ್ಟೆಗಳನ್ನು ಬಿಗಿದು ಉಟ್ಟು ಆಲದ ಹಾಲಿನಿಂದ ಜಟೆಗಳನ್ನು ನಿರ್ಮಿಸಿಕೊಂಡು ಗಂಗಾನದಿಯನ್ನು ದಾಟಿ ಮುಂದಕ್ಕೆ ಹೋದರು. ನಾನು ಇತ್ತ ಬಂದೆನು'' ಎಂದು ಅರಿಕೆ ಮಾಡಿದನು.

ಸುಮಂತ್ರನ ಮಾತುಗಳನ್ನು ಆಲಿಸುತ್ತಿದ್ದ ದಶರಥನು ಕಣ್ಣೀರು ಸುರಿಸುತ್ತ ಬಿಕ್ಕುತ್ತ ಏನೇನನ್ನೋ ಹಲುಬಿದನು. ಮಗನಿಗೋಸ್ಕರ ಕರುಳು ಕೊರೆಯುವಂತೆ ವಿಲಪಿಸಿ ಎಚ್ಚರದಪ್ಪಿ ಹಾಸಿಗೆಯಲ್ಲಿ ಕುಸಿದನು. ಅವನಿಗೆ ಏನಾಗುವುದೋ ಎಂದು ಸುಮಿತ್ರೆಯು ಭಯಾವಿಷ್ಟಳಾದಳು. ಕೌಸಲ್ಯೆಯ ಶೋಕಕ್ಕೆ ತುದಿ ಮೊದಲಿಲ್ಲ ವಾಯಿತು. ಎಚ್ಚೆತ್ತ ದಶರಥನು 'ಅಪ್ಪಾ ಮಗನೇ' ಎಂದು ರೋದಿಸುತ್ತಲೇ ಇದ್ದನು. ಅಂದಿನ ರಾತ್ರಿ ದಶರಥನ ಅರಮನೆಗೆ ಗರಬಡಿದಂತಿತ್ತು. ಅತ್ತು ಅತ್ತು ಬೆಂಡಾಗಿದ್ದ ದಶರಥನಿಗೆ ತಾನು ಯೌವನದಲ್ಲಿ ಮಾಡಿದ ಒಂದು ಕೃತ್ಯವು ಸ್ಮರಣೆಗೆ ಬಂದಿತು. ಕೌಸಲ್ಯೆಯನ್ನು ಕುರಿತು ಇಂತೆಂದನು : ''ಕೌಸಲ್ಯೆ, ನಾನು ಯುವರಾಜ ನಾಗಿದ್ದಾಗ ಮಾಡಿದ ಒಂದು ದುಷ್ಕೃತ್ಯವು ಈಗ ನೆನಪಿಗೆ ಬರುತ್ತಿದೆ. ಶಬ್ದವೇಧಿಯಾದ ಬಾಣದಿಂದ ಗುರಿಹೊಡೆಯಲು ನಾನು ಸಮರ್ಥನಾಗಿದ್ದೆನು. ಒಂದು ಸಂಜೆ ಬೇಟೆಗೆ ಹೋದಾಗ ನದಿಯ ಬಳಿ ಯಾರೋ ಗಡಿಗೆಯನ್ನು ಮುಳುಗಿಸಿ ನೀರನ್ನು ತುಂಬಿಕೊಳ್ಳುತ್ತಿರುವ ಶಬ್ದ ನನಗೆ ಕೇಳಿಸಿತು. ಕಣ್ಣಿಗೆ ಎಟುಕುತ್ತಿರಲಿಲ್ಲವಾಗಿ ಆ ಶಬ್ದವು ಕಾಡಾನೆಯ ಘೀಂಕಾರವೆಂದು ತಿಳಿದು ಶಬ್ದವೇಧಿಯಾದ ಬಾಣದಿಂದ ಹೊಡೆದೆನು. ಮರುಕ್ಷಣದಲ್ಲಿ 'ಹಾ ಹಾ' ಎಂಬ ಮನುಷ್ಯನ ಆರ್ತಧ್ವನಿ ಕೇಳಿಸಿತು. ನಾನು ಆತಂಕಪಡುತ್ತ ಆ ಸ್ಥಳಕ್ಕೆ ಓಡಿಹೋದೆನು. ಅವನೊಬ್ಬ ಋಷಿಕುಮಾರನಾಗಿದ್ದನು. ವಿಚಾರಿಸಿದಾಗ ಅವನ ತಂದೆತಾಯಿಗಳು ಕುರುಡರೆಂದೂ ಬಳಿಯ ಆಶ್ರಮ ದಲ್ಲಿದ್ದಾರೆಂದೂ ತಾನು ನೀರನ್ನು ಒಯ್ಯಲು ಬಂದಿದ್ದನೆಂದೂ ಗೊತ್ತಾಯಿತು. ಆ

ಮಾತನ್ನು ಕೇಳಿ ನನಗೆ ಬಹಳ ವ್ಯಥೆಯಾಯಿತು. ಧನುರ್ಬಾಣಗಳು ನನ್ನ ಕೈಯಿಂದ ಜಾರಿಬಿದ್ದವು. ಅತ್ಯಂತಯಾತನೆಯಿಂದ ನರಳುತ್ತಿದ್ದ ಆ ಮುನಿಪುತ್ರನ ಮೈಗೆ ನಾಟಿದ್ದ ನನ್ನ ಬಾಣವನ್ನು ಎಳೆದು ಕಿತ್ತೆನು. ಋಷಿಕುಮಾರನು ಅಸುವನ್ನು ನೀಗಿದನು. ನಾನು ಭಯಶೋಕಗಳಿಂದ ತತ್ತರಿಸುತ್ತ ಆ ಮುನಿಗಳ ಆಶ್ರಮಕ್ಕೆ ಹೋದೆನು. ಆ ಬಾಲಕನ ತಾಯಿ ತಂದೆಗಳಿಗೆ ಈ ವೃತ್ತಾಂತವನ್ನು ತಿಳಿಸಿದೆ. ಅವರು ಮಗನಿಗಾಗಿ ಗೋಳಾಡ ತೊಡಗಿದರು. ಕುರುಡರಾದ ತಮಗೆ ಮುಂದೆ ಗತಿ ಯಾರೆಂದು ರೋದಿಸಿದರು. ಆ ಋಷಿಯು ''ಎಲೈ ರಾಜ, ಗೊತ್ತಿಲ್ಲದೆ ಅಜ್ಞಾನದಿಂದ ಈ ದುಷ್ಕೃತ್ಯವನ್ನು ಮಾಡಿದೆ ಯಾದ್ದರಿಂದ ಇನ್ನೂ ಬದುಕಿ ಉಳಿದಿದ್ದೀಯೆ! ನಮ್ಮಿಬ್ಬರನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗು. ನಮ್ಮ ಪ್ರಿಯಪುತ್ರನನ್ನು ಕಡೆಯ ಸಲ ಕೈಯಿಂದಾದರೂ ಸ್ಪರ್ಶಿಸುತ್ತೇವೆ'' ಎಂದನು. ಆಮೇಲೆ ನಾನು ಅವರಿಬ್ಬರನ್ನು ಮೆಲ್ಲಗೆ ನದಿಯ ಬಳಿಗೆ ಕರೆದುಕೊಂಡು ಹೋಗಿ ಅವರ ಮಗನನ್ನು ಕೈಯಿಂದ ಮುಟ್ಟಿಸಿದೆನು. ಅವರಿಬ್ಬರೂ ಮಗನಿಗಾಗಿ ರೋದಿಸಿ ಚಿತೆಯನ್ನೇರ್ಪಡಿಸುವಂತೆ ನನಗೆ ಹೇಳಿದರು. ಬಾಲಕನ ದೇಹವನ್ನು ಅಗ್ನಿಗೆ ಅರ್ಪಿಸಿ ತರ್ಪಣವನ್ನಿತ್ತರು. ಆ ಋಷಿಯು ರೋದಿಸುತ್ತಲೇ ನನ್ನನ್ನು ಕುರಿತು ''ದಶರಥ, ಪುತ್ರಶೋಕದಿಂದ ನಾನೀಗ ಸಾಯುತ್ತಿದ್ದೇನೆ. ನಿನಗೂ ಪುತ್ರಶೋಕ ದಿಂದಲೇ ಮರಣವು ಬರಲಿ!'' ಎಂದು ಶಪಿಸಿದರು. ಆ ವೃದ್ಧದಂಪತಿಗಳು ಚಿತಾಗ್ನಿ ಯಲ್ಲಿ ದೇಹವನ್ನು ತ್ಯಜಿಸಿ ಸ್ವರ್ಗಸ್ಥರಾದರು. ದೇವಿ–ಕೌಸಲ್ಯೆ, ನಾನು ಮಾಡಿದ ದುಷ್ಕೃತ್ಯವು ಈಗ ಫಲಿಸುತ್ತಿದೆ. ಅಪಥ್ಯವಸ್ತುಗಳನ್ನು ತಿಂದವನಿಗೆ ರೋಗವು ತಪ್ಪದೆ ಬರುವಂತೆ, ನನಗೀಗ ಕರ್ಮಫಲವು ಒದಗಿ ಬಂದಿದೆ.. ಇನ್ನು ನಾನು ಬದುಕುವುದಿಲ್ಲ'' ಎಂದು ನುಡಿಯುತ್ತಲೇ ಹಾಸಿಗೆಯ ಮೇಲೆ ಒರಗಿದನು.

೨೧

ದಶರಥನ ಮರಣ. ಭರತನ ಆಗಮನ

ಸ್ವಲ್ಪ ಹೊತ್ತಿನ ಮೇಲೆ ದಶರಥನಿಗೆ ಪ್ರಜ್ಞೆ ಬಂದಿತು. ಅವನು ಕೌಸಲ್ಯೆಯನ್ನು ಕುರಿತು ''ಕೌಸಲ್ಯೆ, ನನ್ನ ಕಣ್ಣಿಗೆ ನೀನು ಕಾಣಿಸುವುದೇ ಇಲ್ಲ! ಮರಣಕಾಲ ಬಂದಾಗ ದೃಷ್ಟಿಶಕ್ತಿ ಹೋಗಿಬಿಡುವುದು. ನನ್ನ ಬುದ್ಧಿಗೆ ಮಂಕು ಕವಿಯಿತು. ನನ್ನ ರಾಮನ ಅರಳಿದ ತಾವರೆಯಂತೆ ಸುಂದರವಾದ ಮುಖವನ್ನು ನೋಡತಕ್ಕವರೇ ಭಾಗ್ಯವಂತರು. ಹಾ ಮಗನೆ, ಎಲ್ಲಿಗೆ ಹೋದೆ? ಕೌಸಲ್ಯೆ, ನಾನು ಸಾಯುತ್ತಿದ್ದೇನೆ. ಸುಮಿತ್ರೆ, ನೀನೊಬ್ಬ ತಪಸ್ವಿನಿ. ಏನೂ ತಿಳಿಯದು. ತುಂಬ ಸಾತ್ತ್ವಿಕಳು. ಎಲೇ ಕೈಕೇಯಿ, ನನ್ನ ವೈರಿ, ಕುಲಗೇಡಿ!'' ಎಂದು ಹಲುಬುತ್ತ ಗೊಣಗುತ್ತ ಮರುಗುತ್ತ ಮೈಮರೆತಿದ್ದನು.

ಕೌಸಲ್ಯಾ ಸುಮಿತ್ರೆಯರು ಶೂನ್ಯಹೃದಯರಾಗಿ ಮೌನದಿಂದ ಕುಳಿತಿದ್ದರು. ಅರ್ಧರಾತ್ರಿಯ ಸಮಯದಲ್ಲಿ ದಶರಥನ ಪ್ರಾಣವು ಹೋಯಿತು. ನಿಃಶಬ್ದವಾದ್ದರಿಂದ ಸ್ವಲ್ಪ ಹೊತ್ತಿನ ಮೇಲೆ ಕೌಸಲ್ಯಾ ಸುಮಿತ್ರೆಯರು ಮಹಾರಾಜನನ್ನು ಮುಟ್ಟಿ ನೋಡಿದರು. ನಿದ್ರೆಯ ಚಿಹ್ನೆಯೊಂದೂ ಗೋಚರಿಸಲಿಲ್ಲ. ಉಸಿರಾಡುವನೇ ಎಂಬುದನ್ನು ಪರೀಕ್ಷಿಸಿದರು. ಯಾವ ಸುಳಿವೂ ಇರಲಿಲ್ಲ. ನಾಡೀ ಚಲನೆಯೂ ನಿಂತು ಹೋಗಿತ್ತು. ದಿಕ್ಕುಗಾಣದೆ ಇಬ್ಬರೂ ಅಳತೊಡಗಿದರು.

ಬೆಳಗಾದ ಮೇಲೆ, ದಶರಥನು ಮೃತನಾದನೆಂಬ ಘೋರವಾರ್ತೆಯು ಅಂತಃಪುರದಲ್ಲಿ ಹರಡಿತು. ಎಲ್ಲೆಲ್ಲಿಯೂ ಆರ್ತಧ್ವನಿಯು ವ್ಯಾಪಿಸಿತು. ಸಚಿವರೂ ಬಂಧುವರ್ಗದವರೂ ತ್ವರೆಯಿಂದ ಅರಮನೆಗೆ ಬಂದರು. ಅರಮನೆಯು ಆಕ್ರಂದನ ಧ್ವನಿಯಿಂದ ಮೊಳಗುತ್ತಿತ್ತು. ಸ್ವರ್ಗಸ್ಥನಾದ ದಶರಥಮಹಾರಾಜನು ಆರಿಹೋದ ಅಗ್ನಿಯಂತೆ, ಮೋಡ ಮುಸುಕಿದ ಸೂರ್ಯನಂತೆ, ಗ್ರಹಣ ಹಿಡಿದ ಚಂದ್ರನಂತೆ ತೇಜೋಹೀನನಾಗಿ ಕಾಣುತ್ತಿದ್ದನು. ಕೌಸಲ್ಯೆಯು ಪತಿಯ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡು ಅಳುತ್ತಿದ್ದಳು. ಸಾವಿನ ಸುದ್ದಿಯನ್ನು ಕೇಳಿ ಅಲ್ಲಿಗೆ ಕೈಕೇಯಿಯು ಬಂದಳು. ಕೌಸಲ್ಯೆಯು ''ಕೈಕೇಯಿ, ನಿನ್ನ ಇಷ್ಟವು ಕೈಗೂಡಿತೆ? ಇನ್ನು ನೀನು ನೆಮ್ಮದಿಯಾಗಿರಬಹುದು'' ಎಂದಳು.

ಅಷ್ಟು ಹೊತ್ತಿಗೆ ವಸಿಷ್ಠರೂ ಅಮಾತ್ಯರೂ ಆಗಮಿಸಿ ಕೌಸಲ್ಯೆಗೆ ಸಮಾಧಾನವನ್ನು ಹೇಳುತ್ತ ಮುಂದಿನ ಕರ್ತವ್ಯವೇನೆಂಬುದನ್ನು ಆಲೋಚಿಸಿದರು. ವ್ಯವಹಾರದಕ್ಷರೂ ಧರ್ಮಜ್ಞರೂ ಆದ ಅವರು ದಶರಥನ ಉತ್ತರಕ್ರಿಯೆಯನ್ನು ಮಾಡುವ ಯಾವ ಪುತ್ರನೂ ಸಮೀಪದಲ್ಲಿಲ್ಲದ್ದನ್ನು ಗಮನಿಸಿ, ಭರತಶತ್ರುಘ್ನರು ಬರುವವರೆಗೂ ಶವವನ್ನು ಕಾಯ್ದಿರಿಸಬೇಕೆಂದು ನಿಶ್ಚಯಿಸಿ, ರಾಜನ ದೇಹವನ್ನು ಎಣ್ಣೆಯ ಕೊಪ್ಪರಿಗೆ ಯಲ್ಲಿ ಮುಳುಗಿಸಿಟ್ಟರು. ''ಈಗ ರಾಜ್ಯಕ್ಕೆ ನಿಯಾಮಕನು ಯಾರು? ಈ ದೇಶವು ಅನಾಯಕವಾಯಿತು. ದಶರಥ ಮಹಾರಾಜನು ಸ್ವರ್ಗಸ್ಥನಾದನು. ಅನಾಯಕವಾದ ರಾಜ್ಯದಲ್ಲಿ ಎಲ್ಲ ವಿಧವಾದ ಅವ್ಯವಸ್ಥೆಯೂ ಪ್ರಾಪ್ತವಾಗುವುದು'' ಎಂದು ಮಾತಾಡಿಕೊಂಡರು. ಆಗ ವಸಿಷ್ಠ ಮುನಿಗಳು ''ಭರತನಿಗೆ ಈ ವಿಚಾರವೊಂದೂ ಗೊತ್ತಿಲ್ಲ. ಶತ್ರುಘ್ನನೂ ಅವನ ಜೊತೆಯಲ್ಲಿಯೇ ಇದ್ದಾನೆ. ಕೂಡಲೆ ದೂತರನ್ನು ಕಳಿಸಿ ಆ ಇಬ್ಬರು ಅಣ್ಣತಮ್ಮಂದಿರನ್ನು ಕರೆಸಿರಿ'' ಎಂದರು. ಮಂತ್ರಿಗಳ ಆಜ್ಞೆಯಂತೆ ಸಿದ್ಧಾರ್ಥನೇ ಮೊದಲಾದ ಐವರು ದೂತರಾಗಿ ಹೊರಡಲು ಸಿದ್ಧರಾದರು. ವಸಿಷ್ಠರು ಅವರನ್ನು ಕುರಿತು ''ನೀವು ಅತಿವೇಗದಿಂದೋಡುವ ಕುದುರೆಗಳನ್ನೇರಿ ಕೇಕಯ ದೇಶದ

ರಾಜಧಾನಿಯಾದ ರಾಜಗೃಹಕ್ಕೆ ಹೋಗಬೇಕು. ಭರತನನ್ನು ಕಂಡ ಕೂಡಲೇ ನೀವಿಬ್ಬರೂ ಅಯೋಧ್ಯೆಗೆ ಬರಬೇಕೆಂದು ಪುರೋಹಿತರೂ ಮಂತ್ರಿಗಳೂ ಹೇಳಿದ್ದಾರೆಂದು ತಿಳಿಸಿರಿ. ರಾಮನ ವನವಾಸವನ್ನಾಗಲಿ ದಶರಥನ ಸಾವನ್ನಾಗಲಿ ಯಾವುದನ್ನೂ ಅವರಿಗೆ ತಿಳಿಸಬಾರದು. ತ್ವರೆಯಿಂದ ಅವರು ಬರುವಂತೆ ಏರ್ಪಡಿಸಿರಿ'' ಎಂದು ಆದೇಶಿಸಿದನು. ಆ ಐವರು ದೂತರು ಪ್ರಯಾಣಕ್ಕೆ ಸಿದ್ಧರಾಗಿ, ಕುದುರೆಗಳನ್ನೇರಿ ಪಶ್ಚಿಮಾಭಿಮುಖವಾಗಿ ರಾಜಗೃಹಕ್ಕೆ ತೆರಳಿದರು.

ಇತ್ತ ಸೋದರಮಾವನ ಮನೆಯಲ್ಲಿದ್ದ ಭರತನಿಗೆ ಬೆಳಗಿನ ಜಾವದಲ್ಲಿ ಒಂದು ದುಃಸ್ವಪ್ನವು ಕಾಣಿಸಿತು. ಆ ಕನಸಿನಲ್ಲಿ ಅವನ ತಂದೆಯಾದ ದಶರಥನು ಕೆಂಪುಬಣ್ಣದ ಹೂಮಾಲೆಯನ್ನು ಧರಿಸಿ ಕತ್ತೆಗಳನ್ನು ಹೂಡಿದ ರಥದಲ್ಲಿ ದಕ್ಷಿಣ ದಿಕ್ಕಿಗೆ ಹೋದಂತೆಯೂ, ಕಶ್ಮಲವಾದ ಒಂದು ಗೋಮಯದ ಗುಂಡಿಯಲ್ಲಿ ಅವನು ಬಿದ್ದ ಹಾಗೆಯೂ ಭರತನಿಗೆ ಕಾಣಿಸಿತು. ಬೆಳಗಾದ ಮೇಲೆ ಆ ರಾಜಕುಮಾರನು ಕೆಟ್ಟ ಕನಸನ್ನೇ ಆಲೋಚಿಸುತ್ತ ಅತ್ಯಂತ ದುಃಖಿತನಾಗಿ ಶತ್ರುಘ್ನನೊಡನೆ ಹೇಳಿಕೊಂಡನು.

ಅಯೋಧ್ಯೆಯಿಂದ ಬಂದ ರಾಜದೂತರು ಕೇಕಯರಾಜನಾದ ಅಶ್ವಪತಿಯನ್ನೂ ಅವನ ಪುತ್ರನಾದ ಯುಧಾಜಿತನನ್ನೂ ಸಂದರ್ಶಿಸಿ, ಭರತನಿದ್ದ ಸ್ಥಳಕ್ಕೆ ತ್ವರೆಯಿಂದ ಬಂದರು. ಅವರನ್ನು ಕಂಡೊಡನೆ ಭರತನ ಕಳವಳವು ಇನ್ನೂ ಹೆಚ್ಚಿತು. ವಿನಯದಿಂದ ನಮಸ್ಕರಿಸಿದ ಆ ದೂತರನ್ನು ಕುರಿತು ''ಸೌಮ್ಯರೆ, ಅಯೋಧ್ಯೆಯಲ್ಲಿ ನನ್ನ ತಂದೆಯಾದ ದಶರಥ ಮಹಾರಾಜನು ಕುಶಲದಿಂದಿರುವನೆ? ರಾಮಲಕ್ಷ್ಮಣರು ಆರೋಗ್ಯದಿಂದಿರುವರೆ? ಧರ್ಮಜ್ಞಳಾದ ಕೌಸಲ್ಯಾದೇವಿಗೆ ಕುಶಲವೆ?'' ಎಂದು ಎಲ್ಲರ ಯೋಗಕ್ಷೇಮಗಳನ್ನು ವಿಚಾರಿಸಿದನು. ಆ ದೂತರು ''ರಾಜಕುಮಾರ, ಎಲ್ಲರೂ ಕುಶಲದಿಂದಿದ್ದಾರೆ. ನೀನು ಶತ್ರುಘ್ನನೊಡನೆ ಕೂಡಲೇ ಹೊರಟು ಅಯೋಧ್ಯೆಗೆ ಬರಬೇಕೆಂದು ಆಜ್ಞೆಯಾಗಿದೆ. ತಡಮಾಡಲು ಇದು ಸಮಯವಲ್ಲ. ಶೀಘ್ರವಾಗಿ ಪ್ರಯಾಣಮಾಡಬೇಕು. ನಿನಗೆ ಶುಭವಾಗಲಿ'' ಎಂದರು.

ತ್ವರೆಯಿಂದ ಹೊರಡಲು ನಿಮಿತ್ತವೇನಿರಬಹುದೆಂದು ಭರತನಿಗೆ ಕುತೂಹಲ ವಾಯಿತೇ ಹೊರತು ನಿಜವಾದ ಪರಿಸ್ಥಿತಿ ತಿಳಿಯಲೇ ಇಲ್ಲ. ದೂತರು ಹಾರಿಕೆಯ ಉತ್ತರವನ್ನಿತ್ತರು. ಭರತನು ತಡಮಾಡದೆ ಅಜ್ಜನಾದ ಅಶ್ವಪತಿಗೂ ಸೋದರಮಾವ ನಾದ ಯುಧಾಜಿತನಿಗೂ ದೂತರು ಹೇಳಿದ ವಿಷಯವನ್ನು ತಿಳಿಸಿ, ಶತ್ರುಘ್ನನೊಡನೆ ಪ್ರಯಾಣಕ್ಕೆ ಸಿದ್ಧನಾದನು. ಅಶ್ವಪತಿಯೂ ಯುಧಾಜಿತನೂ ಭರತಶತ್ರುಘ್ನರಿಗೆ ಪಾರಿತೋಷಿಕವಾಗಿ ಆನೆ, ಕುದುರೆ, ರತ್ನಾದಿಗಳನ್ನು ಪ್ರೀತಿಯಿಂದ ಕೊಟ್ಟರು. ಭರತನಿಗೆ

ಅದಾವುದೂ ಬೇಕಾಗಿರಲಿಲ್ಲ. ''ಇದೆಲ್ಲವನ್ನೂ ರಾಜಭೃತ್ಯರು ತರಲಿ'' ಎಂದು ಹೇಳಿ, ಶೀಘ್ರಗಾಮಿಗಳಾದ ಅಶ್ವಗಳನ್ನು ಹೂಡಿದ ರಥವನ್ನೇರಿ ಭರತಶತ್ರುಘ್ನರು ಹೊರಟೇಬಿಟ್ಟರು. ತನಗೆ ದುಃಸ್ವಪ್ನವಾದದ್ದು, ಮರುದಿನವೇ ದೂತರು ಬಂದು ತ್ವರೆಪಡಿಸಿದ್ದು–ಎರಡೂ ಸೇರಿ ಭರತನ ಹೃದಯದಲ್ಲಿ ದೊಡ್ಡ ಚಿಂತೆ ಉದ್ಭವಿಸಿತು.

ಬಹಳ ದೂರದಲ್ಲಿದ್ದ ಕೇಕಯ ರಾಜ್ಯದಿಂದ ಹೊರಟು ನದೀ, ಪರ್ವತ, ಅರಣ್ಯ ಮುಂತಾದವನ್ನು ದಾಟುತ್ತ ಕೆಲವು ದಿನಗಳಲ್ಲಿ ಭರತನು ಶತ್ರುಘ್ನನೊಡನೆ ಅಯೋಧ್ಯೆಗೆ ಬಂದು ಸೇರಿದನು.

೨೨

ಕ್ರುದ್ಧನಾದ ಭರತನು ಕೈಕೇಯಿಯನ್ನು ದೂಷಿಸುವುದು. ಕೌಸಲ್ಯಾದರ್ಶನ. ಮೃತನಾಗಿದ್ದ ದಶರಥನ ಉತ್ತರಕ್ರಿಯೆ.

ಅಯೋಧ್ಯೆಯನ್ನು ಕಂಡೊಡನೆ ಭರತನು ಸಾರಥಿಯನ್ನು ಕುರಿತು ''ಸಾರಥಿ, ನಗರದ ಹೊರವಲಯದಲ್ಲಿರುವ ಉದ್ಯಾನವನದಲ್ಲಿ ಎಂದಿನಂತೆ ಕಳೆಯಿಲ್ಲ. ಜನರ ಸುಳಿವೇ ಇಲ್ಲ. ಏಕಿರಬಹುದು?'' ಎಂದು ಹೇಳುತ್ತ ಮಹಾದ್ವಾರದಿಂದ ರಾಜಧಾನಿಯನ್ನು ಪ್ರವೇಶಿಸಿದನು. ''ಶತ್ರುಘ್ನ, ಈ ಪಟ್ಟಣವು ಅರಣ್ಯದಂತೆ ಕಾಣಿಸುತ್ತಿದೆ. ವಾಹನಗಳಲ್ಲಿ ಜನರ ಓಡಾಟವಿಲ್ಲ. ಭೇರಿ, ಮೃದಂಗ, ವೀಣೆಗಳ ಸದ್ದಿಲ್ಲ. ನನ್ನ ಹೃದಯವು ಬಿರಿದುಹೋಗುವಂತೆ ಆಗುತ್ತಿದೆ'' ಎಂದನು. ಅರಮನೆಯ ಬಾಗಿಲಿನಲ್ಲಿ ದ್ವಾರಪಾಲಕರು ಎದ್ದು ನಿಂತು 'ವಿಜಯವಾಗಲಿ' ಎಂದರು. ಭರತನು 'ಇದೇನಿರಬಹುದು? ಅರಮನೆಯ ಅಂಗಣವನ್ನೂ ಸಹ ಕಸ ಗುಡಿಸಿ ಸ್ವಚ್ಛ ಮಾಡಿಲ್ಲ' ಎಂದನು. ಅನಂತರ ದೈನ್ಯದಿಂದ ದುಃಖಿಸುತ್ತಲೇ ತನ್ನ ತಂದೆಯಿರುತ್ತಿದ್ದ ಸ್ಥಳಕ್ಕೆ ಧಾವಿಸಿದನು. ಅಲ್ಲಿ ಆತನನ್ನು ಕಾಣದೆ ತಾಯಿಯನ್ನು ನೋಡಲು ಕೈಕೇಯಿಯ ಅಂತಃಪುರಕ್ಕೆ ಬಂದನು. ಮಗನು ಬಂದದ್ದನ್ನು ಕಂಡು ಕೈಕೇಯಿಯು ಹರ್ಷದಿಂದ ಎದ್ದು ಬಂದಳು. ಭರತನು ತಾಯಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು. ಕೈಕೇಯಿಯು ಅವನನ್ನು ಆಲಿಂಗಿಸಿಕೊಂಡು ''ಮಗು, ಅಜ್ಜನ ಮನೆಯಿಂದ ಹೊರಟು ಎಷ್ಟು ದಿನಗಳಾದವು? ನಿನ್ನ ಮಾವನೂ, ಅಜ್ಜನೂ ಕ್ಷೇಮವಾಗಿದ್ದಾರೆಯೆ? ಎಲ್ಲವನ್ನು ವಿಶದವಾಗಿ ತಿಳಿಸು'' ಎಂದಳು. ಭರತನು ಅವರೆಲ್ಲರೂ ಕ್ಷೇಮವಾಗಿದ್ದಾರೆಂದು ಹೇಳಿ ಅಜ್ಜನು ಕೊಟ್ಟ ಪಾರಿತೋಷಿಕಗಳನ್ನು ದೂತರು ತರುವರೆಂದು ತಿಳಿಸಿದನು. ''ಅಯೋಧ್ಯೆಯಿಂದ ಬಂದ ದೂತರು ನನ್ನನ್ನು ತ್ವರೆಪಡಿಸಿದ್ದರಿಂದ ಅವಸರ ಪಡುತ್ತ

ನಾನೂ ಶತ್ರುಘ್ನನೂ ಮುಂದೆ ಬಂದೆವು'' ಎಂದು ಹೇಳಿ ವಿಷಣ್ಣನಾಗಿಯೇ ಕೇಳಿದನು: ''ಅಮ್ಮ, ಈಗ ನಾನು ಒಂದು ವಿಷಯವನ್ನು ಕೇಳಬೇಕಾಗಿದೆ. ನಾನು ತಂದೆಯನ್ನು ನೋಡಲು ಆತನಿರುತ್ತಿದ್ದ ಸ್ಥಳಕ್ಕೆ ಹೋದೆನು; ಅಲ್ಲಿರಲಿಲ್ಲ. ನಿನ್ನ ಬಳಿಯಲ್ಲಿರಬಹುದೆಂದು ಇಲ್ಲಿಗೆ ಬಂದೆನು. ಇಲ್ಲಿಯೂ ಇಲ್ಲ. ಮೊದಲು ನಾನು ತಂದೆಯನ್ನು ಕಂಡು ನಮಸ್ಕರಿಸಬೇಕು. ದೊಡ್ಡಮ್ಮನಾದ ಕೌಸಲ್ಯಾದೇವಿಯ ಮನೆಯಲ್ಲಿ ಇರಬಹುದೆ?'' ಎಂದು ಕೇಳಿದನು. ಆಗ ರಾಜ್ಯಲೋಭದಿಂದ ಬುದ್ಧಿಗೆಟ್ಟ ಕೈಕೇಯಿಯು ಭರತನಿಗೆ ಪ್ರಿಯವಾಗುವುದೆಂದು ಭ್ರಮಿಸಿ ಹೀಗೆಂದಳು :

ಕೈಕೇಯಿ : ಭರತ, ನಿನ್ನ ತಂದೆಗೆ ಸದ್ಗತಿಯಾಯಿತು.

ಭರತ : ಹಾಗೆಂದರೇನಮ್ಮ? ಬಿಡಿಸಿ ಹೇಳು.

ಕೈಕೇಯಿ : ''ಸಮಸ್ತಪ್ರಾಣಿಗಳಿಗೂ ಅನಿವಾರ್ಯವಾದ ಯಾವ ಗತಿಯುಂಟೋ ಆ ಗತಿಯು ನಿನ್ನ ತಂದೆಗೆ ಪ್ರಾಪ್ತವಾಯಿತು''.

ಕಠೋರವಾದ ಆ ಮಾತನ್ನು ಕೇಳಿದೊಡನೆ ಮೃದು ಹೃದಯನಾದ ಭರತನು ಪಿತೃಶೋಕದಿಂದ ಕಂಗೆಟ್ಟು ನೆಲದ ಮೇಲೆ ಕುಸಿದು ಹೋದನು. ಆಜಾನುಬಾಹುವಾದ ಆ ವೀರನು ಎರಡು ತೋಳುಗಳನ್ನು ಮೇಲೆತ್ತಿ 'ಅಯ್ಯೋ, ಕೆಟ್ಟೆನು' ಎಂದು ಕೂಗಿಕೊಂಡನು. ನಾನಾ ಬಗೆಯಲ್ಲಿ ತನ್ನ ತಂದೆಯ ಸದ್ಗುಣಗಳನ್ನೂ ತನ್ನ ಮೇಲಿದ್ದ ವಾತ್ಸಲ್ಯವನ್ನೂ ನೆನೆನೆನೆದು ಹೇಳಿಕೊಳ್ಳುತ್ತ ಅಳತೊಡಗಿದನು. ಶತ್ರುಘ್ನನು ದಿಗ್ಭ್ರಾಂತನಾಗಿ ಶೋಕಿಸುತ್ತ ಕುಳಿತನು. ಅನಂತರ ಭರತನು ''ಮಹಾರಾಜನು ರಾಮನಿಗೆ ಪಟ್ಟಾಭಿಷೇಕ ಮಾಡಬಹುದು. ಅಥವಾ ಯಾವುದಾದರೊಂದು ಯಾಗದಲ್ಲಿ ತೊಡಗಿರಬಹುದು ಎಂದು ಭಾವಿಸಿ ತ್ವರೆಯಿಂದ ಬಂದೆನು. ಎಲ್ಲವೂ ವಿರುದ್ಧವಾಯಿತು. ನನ್ನ ಹೃದಯವು ಸೀಳಿಹೋಯಿತು'' ಎಂದು ಗೋಳಾಡಿದನು. ಅನಂತರ ಹೀಗೆಂದನು :

ಭರತ : ಅಮ್ಮಾ, ನಾನು ಬರುವುದರೊಳಗೆ ತಂದೆಯು ಹೊರಟುಹೋದನಲ್ಲ. ಅವನಿಗೆ ಒದಗಿದ ವ್ಯಾಧಿ ಯಾವುದು? ಸತ್ಯಸಂಧನೂ, ಧರ್ಮನಿರತನೂ ಆದ ಮಹಾರಾಜನು ಕಡೆಯ ಕಾಲದಲ್ಲಿ ಏನು ಹೇಳಿದನು? ಅವನ ಚರಮ ಸಂದೇಶವನ್ನಾದರೂ ಕೇಳುವೆನು; ಹೇಳು.

ಕೈಕೇಯಿ : ಭರತ, ನಿನ್ನ ತಂದೆ ಸಾಯುವಾಗ 'ಹಾ ರಾಮ, ಸೀತೆ, ಲಕ್ಷ್ಮಣಾ' ಎಂದು ಕೂಗುತ್ತ ದೇಹವನ್ನು ತ್ಯಜಿಸಿದನು. 'ರಾಮ, ಲಕ್ಷ್ಮಣ, ಸೀತೆಯರು

ಹಿಂದಿರುಗಿ ಬಂದಾಗ ಅವರನ್ನು ಯಾರು ನೋಡುವರೋ ಅವರೇ ಪುಣ್ಯಾತ್ಮರು'' ಎಂದನು. ಇದೇ ಚರಮ ಸಂದೇಶ.

ಭರತ : ಅಯ್ಯೋ, ತಂದೆಯ ಮರಣಕಾಲದಲ್ಲಿ ರಾಮಲಕ್ಷ್ಮಣರೂ ಇರಲಿಲ್ಲವೆ? ನನ್ನ ಅಣ್ಣನು ಸೀತಾಲಕ್ಷ್ಮಣರೊಡನೆ ಎಲ್ಲಿಗೆ ಹೋಗಿದ್ದಾನೆ?

ಕೈಕೇಯಿ : ಮಗು, ರಾಮನು ನಾರು ಬಟ್ಟೆಯನ್ನುಟ್ಟು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯಕ್ಕೆ ಹೊರಟುಹೋದನು.

ಭರತ: (ದಿಗ್ಭ್ರಾಂತನಾಗಿ ಹೆದರುತ್ತ) ಇದೇನು? ಅಣ್ಣನು ಯಾವ ಅಪರಾಧವನ್ನೂ ಮಾಡಿಲ್ಲವಷ್ಟೆ? ಯಾವ ಕೆಟ್ಟ ಕೆಲಸವನ್ನೂ ಅವನು ಎಂದಿಗೂ ಮಾಡುವುದಿಲ್ಲ. ಅವನಿಗೇಕೆ ಈ ದಂಡನೆಯಾಯಿತು?

ಕೈಕೇಯಿ : (ಹೆಮ್ಮೆಯಿಂದ ಬೀಗುತ್ತ) ವತ್ಸ, ಅವನು ಯಾವ ಅಪರಾಧವನ್ನೂ ಮಾಡಲಿಲ್ಲ. ನಿಜವಾದ ಸಂಗತಿ ಏನೆಂದರೆ, ನಿನ್ನ ತಂದೆ ನಿನ್ನನ್ನು ವಂಚಿಸಿ ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಹವಣಿಸಿದ್ದನು. ನಾನು ಅದನ್ನು ತಡೆದು ರಾಜ್ಯವನ್ನು ನಿನಗೆ ಕೊಡಬೇಕೆಂದೂ ರಾಮನು ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕೆಂದೂ ಕೇಳಿಕೊಂಡೆನು. ಸತ್ಯಸಂಧನಾದ ನಿನ್ನ ತಂದೆ ನನ್ನ ಮಾತನ್ನು ನಡೆಸಿದನು. ಸೀತಾಲಕ್ಷ್ಮಣರು ರಾಮನ ಜೊತೆಗೆ ತಾವೂ ಹೋದರು. ಮಹಾರಾಜನು ತನ್ನ ಮುದ್ದುಮಗನನ್ನು ನೆನೆಯುತ್ತಾ ಶೋಕದಿಂದ ದೇಹವನ್ನು ತ್ಯಜಿಸಿದನು. ನಿನಗೋಸ್ಕರ ನಾನು ಈ ಕಾರ್ಯತಂತ್ರವನ್ನು ಹೂಡಿದೆನು–ನಿಷ್ಕಂಟಕವಾಗಿ ರಾಜ್ಯವು ನಿನ್ನ ಕೈಸೇರಿತು. ಅಳುವುದೇಕೆ? ರಾಜಪದವಿಯನ್ನು ಸ್ವೀಕರಿಸು. ರಾಜನಾಗು.

ದಿಙ್ಮೂಢನೂ ಶೋಕಾಕುಲನೂ ಆದ ಭರತನು ನಿರ್ಜೀವನಂತೆ ಈ ಮಾತುಗಳನ್ನು ಆಲಿಸಿದನು. ತಂದೆಯು ಗತಿಸಿದನೆಂಬುದನ್ನೂ ಒಡಹುಟ್ಟಿದ ಲಕ್ಷ್ಮಣನೂ ತನ್ನ ಅತ್ತಿಗೆಯೂ ಕಾಡಿಗೆ ಹೋದರೆಂಬುದನ್ನೂ ಕೇಳಿ ಆ ರಾಜಪುತ್ರನು ದುಃಖದಿಂದ ಬೆಂದು ಹೋದನು. ಅವನು ಶೋಕದಿಂದ ಗದ್ಗದಿಸುತ್ತ ಈ ಪ್ರಕಾರ ಹೇಳಿದನು – ''ನನಗೆ ತಂದೆ ಇಲ್ಲ. ತಂದೆಗೆ ಸಮಾನನಾದ ಅಣ್ಣನೂ ಕಾಡಿಗೆ ಹೋದನು. ಈ ರಾಜ್ಯವನ್ನು ಕಟ್ಟಿಕೊಂಡೇನಾಗಬೇಕು? ನೀನು ಮಹಾರಾಜನನ್ನು ಪ್ರೇತಭಾವಕ್ಕೆ ತಳ್ಳಿ ಅಣ್ಣನನ್ನು ವನಕ್ಕೆ ಅಟ್ಟಿದ್ದೀಯೆ. ಗಾಯದ ಮೇಲೆ ಉಪ್ಪು ಸುರಿದೆ. ನೀನು ಇಷ್ಟು ವಂಚಕಳೆಂದು ನನ್ನ ತಂದೆಗೆ ಗೊತ್ತಾಗಲಿಲ್ಲ'' ಎಂದನು. ಆಮೇಲೆ ಸಿಟ್ಟಿನಿಂದ ''ನೀನು ಕುಲಘಾತಕಿ! ಗಂಡನನ್ನೇ ಕೊಂದವಳು. ಎಲೇ ಪಾಪಿ, ಪಾಪವನ್ನೇ ಕಂಡರಿಯದ ಧರ್ಮಾತ್ಮನಾದ ರಾಮನಿಗೆ ನಾರುಬಟ್ಟೆಯುಡಿಸಿ ಕಾಡಿಗೆ ಕಳಿಸಿದೆಯಾ? ನನಗೆ ರಾಜ್ಯಬೇಕೆಂದು ಯಾರು ನಿನಗೆ ಹೇಳಿದರು? ಪತಿಘಾತುಕಳಾದ

ನಿನ್ನನ್ನು ಈಗಲೇ ಕೊಂದುಬಿಡುತ್ತಿದ್ದೆ. ಕೊಂದರೆ ಶ್ರೀರಾಮನು ಕೋಪಗೊಂಡು ನನ್ನೊಡನೆ ಮಾತಾಡುವುದನ್ನೇ ಬಿಟ್ಟುಬಿಡುವನು–ಎಂದು ಸುಮ್ಮನಿದ್ದೇನೆ. ನೀನು ನನಗೆ ತಾಯಿಯಲ್ಲ, ನನ್ನ ವೈರಿ ನೀನು. ಎಲೇ ಪಾಪಿಷ್ಠೆ, ನಿನ್ನ ಆಸೆ ನಡೆಯುವುದಿಲ್ಲ. ಶ್ರೀರಾಮನನ್ನು ಕರೆತಂದು ಸಿಂಹಾಸನದ ಮೇಲೆ ಕುಳ್ಳಿರಿಸಿ ನಾನು ಅವನಿಗೆ ದಾಸನಾಗಿ ನಡೆದುಕೊಳ್ಳುತ್ತೇನೆ'' ಎಂದು ನಾನಾ ಪ್ರಕಾರವಾಗಿ ಕೂಗಾಡಿದನು.

ಕೈಕೇಯಿಯ ಅಂತಃಪುರದಲ್ಲಿ ಹೀಗೆ ಕೂಗಾಟವಾಗುತ್ತಿದ್ದುದನ್ನು ಕೇಳಿ ಕೌಸಲ್ಯೆಯು ಭರತನು ಬಂದಿರಬಹುದೆಂದೆಣಿಸಿ ಅವನನ್ನು ನೋಡಬೇಕೆಂದು ಸುಮಿತ್ರೆಯೊಡನೆ ಹೊರಟಳು. ಭರತನು ನಾನಾ ವಿಧವಾಗಿ ತನ್ನ ತಾಯಿಯನ್ನು ದೂಷಿಸಿ, ಈ ದೊಡ್ಡಮ್ಮನಾದ ಕೌಸಲ್ಯೆಯೇ ನನಗೆ ತಾಯಿ–ಎನ್ನುತ್ತಾ ಕೌಸಲ್ಯೆಯ ಮನೆಗೆ ಹೊರಟನು. ಕೌಸಲ್ಯೆಯನ್ನು ಕಂಡು ಭರತ ಶತ್ರುಘ್ನರು ದುಃಖಾರ್ತರಾದರು. ಅವರು ಓಡುತ್ತ ಮುಂದೆ ಬಂದು ತಮ್ಮ ದೊಡ್ಡಮ್ಮನನ್ನು ಅಪ್ಪಿ ಹಿಡಿದುಕೊಂಡು ಅಳತೊಡಗಿದರು. ಕೌಸಲ್ಯೆಯು ''ಭರತ, ನಿನ್ನ ತಾಯಿ ನನ್ನ ಮಗನಿಗೆ ನಾರುಬಟ್ಟೆಯುಡಿಸಿ ವನವಾಸಕ್ಕೆ ಕಳಿಸಿದಳಲ್ಲ, ಅವಳಿಗೆ ಬಂದ ಲಾಭವೇನು? ಇನ್ನು ನೀನು ರಾಜನಾಗಿ ಸುಖದಿಂದಿರಬಹುದು!'' ಎಂದಳು. ಈ ಕಠೋರ ವಾಕ್ಯವನ್ನು ಕೇಳಿ ಭರತನಿಗೆ ತುಂಬ ವ್ಯಥೆಯಾಯಿತು. ಗಾಯವನ್ನು ಸೂಜಿಯಿಂದ ತಿವಿದಂತಾಯಿತು. ಅವನು ಕೌಸಲ್ಯೆಯ ಪಾದಗಳ ಮೇಲೆ ಬಿದ್ದು ಅತ್ತು ಅತ್ತು ಎಚ್ಚರದಪ್ಪಿದನು. ಅದನ್ನು ಕಂಡು ಕೌಸಲ್ಯೆಗೂ ವ್ಯಥೆಯಾಯಿತು. ಭರತನು ಎಚ್ಚೆತ್ತು ಕೈ ಜೋಡಿಸಿಕೊಂಡು ''ಅಮ್ಮ, ನಿರಪರಾಧಿಯಾದ ನನ್ನನ್ನು ಏಕೆ ದೂರುತ್ತೀಯೆ? ನನಗೆ ಅಣ್ಣನಲ್ಲಿ ಇರುವ ಪ್ರೀತಿ ಗೌರವಗಳು ಎಷ್ಟೆಂಬುದು ನಿನಗೆ ಗೊತ್ತಿದೆ. ನಿನ್ನ ಪಾದದ ಆಣೆಯಾಗಿ ಹೇಳುತ್ತೇನೆ. ನನಗೆ ರಾಜ್ಯದ ಮೇಲೆ ಯಾವ ಆಸೆಯೂ ಇರಲಿಲ್ಲ, ಈಗಲೂ ಇಲ್ಲ. ನಾನೇನಾದರೂ ಶ್ರೀರಾಮನ ವನವಾಸವನ್ನು ಬಯಸಿದ್ದೆನಾದರೆ, ರಾಜ್ಯವನ್ನು ಬಯಸಿದ್ದೆನಾದರೆ, ನನಗೆ ಘೋರ ನರಕವು ಬರಲಿ. ಜನ್ಮ ಜನ್ಮಗಳಲ್ಲಿಯೂ ನಾನು ಹುಳುವಾಗಿ ಹುಟ್ಟುತ್ತಿರಲಿ'' ಎಂದು ಪರಿಪರಿಯಾಗಿ ಆಣೆಯಿಟ್ಟು ಗೋಳಾಡಿದನು. ಆಗ ಕೌಸಲ್ಯೆಯು ''ಮಗನೆ, ನೀನು ಹೀಗೆ ಆಣೆಹಾಕುತ್ತಿದ್ದರೆ ನನ್ನ ಜೀವಕ್ಕೆ ಸಂಕಟವಾಗುತ್ತದೆ. ನೀನು ಧರ್ಮಾತ್ಮನೆಂಬುದು ನನಗೆ ತಿಳಿದಿದೆ. ನಿನ್ನ ಹೃದಯವು ಶುದ್ಧವಾದದ್ದು. ಶೋಕಾರ್ತಳಾಗಿದ್ದ ನಾನು ದುಡುಕಿ ಮಾತಾಡಿಬಿಟ್ಟೆನು. ನಮಗಾದ ಕಷ್ಟ ಪರಂಪರೆಯನ್ನು ನೋಡು'' ಎಂದು ಹೇಳಿ ಭರತನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೈದಡವಿ ಅಳತೊಡಗಿದಳು. ಭರತನ ಮನಸ್ಸು ಹಿಂಜಿ ಹಿಪ್ಪೆಯಾಯಿತು. ಈ ಪ್ರಕಾರವಾಗಿ ಶೋಕಿಸುತ್ತಲೇ ರಾತ್ರಿ ಕಳೆದು ಹೋಯಿತು.

ಮಾರನೆಯ ದಿನ ಪುರೋಹಿತರಾದ ವಸಿಷ್ಠ ಮಹರ್ಷಿಗಳು ಆಗಮಿಸಿ ಭರತನನ್ನು ಕುರಿತು ''ರಾಜಪುತ್ರ, ಶೋಕಿಸಬೇಡ. ಆದದ್ದು ಆಗಿಹೋಯಿತು. ಈಗ ಮೊದಲು ಮಾಡಬೇಕಾದದ್ದು ಮಹಾರಾಜನ ಉತ್ತರ ಕ್ರಿಯೆ. ಅದನ್ನು ನೆರವೇರಿಸು'' ಎಂದರು. ಭರತನು ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡು ಶವಸಂಸ್ಕಾರಕ್ಕೆ ಬೇಕಾದ ಏರ್ಪಾಡನ್ನು ಮಾಡಿಸಿದನು. ಎಣ್ಣೆಯ ಕೊಪ್ಪರಿಗೆಯಿಂದ ದಶರಥನ ದೇಹವನ್ನು ತೆಗೆದು ನೆಲದ ಮೇಲೆ ಮಲಗಿಸಲಾಯಿತು. ತಂದೆಯ ಮುಖವನ್ನು ನೋಡಿ ಭರತ ಶತ್ರುಘ್ನರು ದೈನ್ಯದಿಂದ ಗೋಳಾಡಿದರು. ವಸಿಷ್ಠರ ಮೇಲ್ವಿಚಾರಣೆಯಂತೆ ಋತ್ವಿಜರು ಕಾಲೋಚಿತವಾಗಿ ವಿಧಿಪೂರ್ವಕವಾದ ಕಾರ್ಯಗಳನ್ನು ನೆರವೇರಿಸಿದರು. ದಶರಥನ ಮೃತದೇಹವನ್ನು ಪಲ್ಲಕ್ಕಿಯಲ್ಲಿಟ್ಟು ಕಣ್ಣೀರು ಸುರಿಸುತ್ತ ಪರಿಚಾರಕರು ಹೊತ್ತುಕೊಂಡು ಹೊರಟರು. ಶ್ಮಶಾನದಲ್ಲಿ ಋತ್ವಿಜರು ರಾಜನ ದೇಹವನ್ನು ಚಿತೆಯ ಮಧ್ಯದಲ್ಲಿ ಮಲಗಿಸಿದರು. ಅನಂತರ ಭರತನ ಕೈಯಿಂದ ಶಾಸ್ತ್ರೋಕ್ತ ಪ್ರಕಾರದಲ್ಲಿ ಚಿತೆಗೆ ಅಗ್ನಿ ಸ್ಪರ್ಶ ಮಾಡಿಸಿದರು. ಭರತ ಶತ್ರುಘ್ನರೂ ಕೌಸಲ್ಯಾದಿ ಸ್ತ್ರೀಯರೂ ಶೋಕ ಸಂತಪ್ತರಾಗಿ ರಾಜನನ್ನು ಅಪಸವ್ಯವಾಗಿ ಸುತ್ತಿ ಬಂದರು. ಅನಂತರ ಎಲ್ಲರೂ ಸರಯೂ ನದಿಗೆ ಹೋಗಿ ಮೃತನಾದ ದಶರಥನಿಗೆ ಜಲತರ್ಪಣವನ್ನಿತ್ತು ನಗರಕ್ಕೆ ಹಿಂದಿರುಗಿದರು.

ಹನ್ನೆರಡನೆಯ ದಿನ ಸಪಿಂಡೀಕರಣಾಂತವಾದ ಶ್ರಾದ್ಧಕರ್ಮಗಳು ನಡೆದವು. ಭರತ ಶತ್ರುಘ್ನರು ವಿಪ್ರರಿಗೆ ಪುಷ್ಕಳವಾಗಿ ದಾನಮಾಡಿ ಭೂರಿ ಭೋಜನವನ್ನು ಮಾಡಿಸಿದರು.

ದಶರಥನ ಅಪರಕ್ರಿಯೆಗಳೆಲ್ಲವೂ ನಡೆದ ಮೇಲೆ ಶೋಕಾರ್ತನಾದ ಭರತನು ಶ್ರೀರಾಮನ ಬಳಿಗೆ ಹೋಗಬೇಕೆಂದು ಶತ್ರುಘ್ನನೊಡನೆ ವಿಚಾರ ಮಾಡುತ್ತಿದ್ದನು. ಆಗ ಶತ್ರುಘ್ನನು ''ಅಣ್ಣ, ಸರ್ವವನ್ನೂ ಬಲ್ಲ ಮಹಾತ್ಮನಾದ ನಮ್ಮ ತಂದೆ ಶ್ರೀರಾಮನನ್ನು ಅರಣ್ಯಕ್ಕೆ ಕಳಿಸಿಬಿಟ್ಟನಲ್ಲ? ಒಬ್ಬ ಹೆಂಗಸಿನ ಮಾತಿಗೆ ಕಟ್ಟುಬಿದ್ದು ಇಷ್ಟು ಅನರ್ಥವನ್ನು ತಂದೊಡ್ಡಿದನು. ಲಕ್ಷ್ಮಣನಾದರೂ ತಂದೆಯನ್ನು ನಿಗ್ರಹಿಸಿ ವನವಾಸವನ್ನು ತಪ್ಪಿಸಬಹುದಾಗಿತ್ತು'' ಎಂದನು. ಆ ಸಮಯದಲ್ಲಿ ಕುಬ್ಜೆಯು ಸರ್ವಾಭರಣ ಭೂಷಿತಳಾಗಿ ಬರುತ್ತಿದ್ದುದನ್ನು ಶತ್ರುಘ್ನನು ನೋಡಿದನು. ಆ ಗೂನಿಯು ಪಟ್ಟೆಯ ಸೀರೆಯನ್ನುಟ್ಟು, ಸೊಂಟಕ್ಕೆ ಚಿನ್ನದ ಡಾಬನ್ನು ಹಾಕಿಕೊಂಡಿದ್ದಳು! ಅವಳನ್ನು ನೋಡಿದರೆ ಹಗ್ಗದಿಂದ ಕಟ್ಟಿಹಾಕಿದ ಹೆಣ್ಣು ಕೋತಿಯಂತೆ ಕಾಣಿಸುತ್ತಿದ್ದಳು. ಶತ್ರುಘ್ನನಿಗೆ ಕೋಪವನ್ನು ತಡೆಯಲಾಗಲಿಲ್ಲ. 'ಈ ಎಲ್ಲ ವಿಪತ್ತಿಗೂ ಈ ಗೂನಿಯೇ ಮೂಲಕಾರಣ' ಎಂದು ಸರ್ರನೆ ಹೋಗಿ ಹೆಂಗಸರ ನಡುವೆಯಿದ್ದ ಆ ಗೂನಿಯನ್ನು

ಹಿಡಿದು ಎಳೆದನು. ಅರಮನೆಯು ಬಿರಿದುಹೋಗುವಂತೆ ಅವಳು ಕಿರುಚಿದಳು. ನೆಲದ ಮೇಲೆ ಬಿದ್ದ ಅವಳನ್ನು ಶತ್ರುಘ್ನನು ದರದರನೆ ಎಳೆದುಕೊಂಡು ಹೋದನು. ಆಗ ಭರತನು ಅಲ್ಲಿಗೆ ಬಂದು ಶತ್ರುಘ್ನನನ್ನು ತಡೆದು ''ತಮ್ಮ ಈ ಗೂನಿಯನ್ನು ದಂಡಿಸಿದ್ದು ಶ್ರೀರಾಮನಿಗೆ ಗೊತ್ತಾದರೆ ಆ ಧರ್ಮಾತ್ಮನು ನಮ್ಮ ಮೇಲೆ ಕೋಪಿಸಿಕೊಂಡು ಮಾತಾಡುವುದನ್ನೇ ಬಿಟ್ಟು ಬಿಡುವನು. ಆದ್ದರಿಂದಲೇ ನಾನು ಕೈಕೇಯಿಯನ್ನು ಕೊಲ್ಲದೆ ಉಳಿಸಿದ್ದೇನೆ'' ಎಂದು ಸಮಾಧಾನ ಹೇಳಿ ಕುಬ್ಜೆಯನ್ನು ಬಿಡಿಸಿದನು. ಅವಳು ಅಳುತ್ತ ಓಡಿಹೋದಳು.

೨೩

ಶ್ರೀರಾಮನನ್ನು ಕರೆತರುವುದಕ್ಕಾಗಿ ಚಿತ್ರಕೂಟಕ್ಕೆ ಭರತನ ಪ್ರಯಾಣ. ಶ್ರೀರಾಮನ ಅನಂಗೀಕಾರ.

ಹದಿನಾಲ್ಕನೆಯ ದಿನ ಪ್ರಾತಃಕಾಲ ಸಚಿವರೆಲ್ಲರೂ ಆಗಮಿಸಿ ಭರತನನ್ನು ಕಂಡು ''ರಾಜಪುತ್ರ, ಗತಿಸಿ ಹೋದುದಕ್ಕೆ ಶೋಕಿಸುತ್ತಾ ಕುಳ್ಳಿರುವುದು ತರವಲ್ಲ. ರಾಜನಿಲ್ಲದೆ ರಾಜ್ಯವು ಅನಾಯಕವಾಗಿದೆ. ನಿನ್ನ ತಂದೆಯಾದ ಮಹಾರಾಜನ ಇಚ್ಛೆಯಂತೆ ನೀನು ಪಟ್ಟಾಭಿಷಿಕ್ತನಾಗು. ಮುಂದಿನ ಏರ್ಪಾಡುಗಳನ್ನು ಈಗಾಗಲೇ ನಾವು ಮಾಡಿದ್ದೇವೆ'' ಎಂದರು. ಭರತನು ಅವರೆಲ್ಲರನ್ನೂ ಕುರಿತು ''ಸಚಿವರೆ, ನಾನು ಈ ರಾಜ್ಯವನ್ನು ಎಂದೂ ಬಯಸಿದವನಲ್ಲ. ನನ್ನ ತಾಯಿಯು ಮಾಡಬಾರದ ಕೆಟ್ಟ ಕೆಲಸವನ್ನು ಮಾಡಿದಳು. ನನ್ನ ತಂದೆಗೂ ಶ್ರೀರಾಮನಿಗೂ ಘೋರವಾದ ದುಃಖವನ್ನು ತಂದೊಡ್ಡಿದಳು. ಈ ಕೋಸಲ ರಾಜ್ಯಕ್ಕೆ ರಾಜನಾಗಲು ನನ್ನ ಅಣ್ಣನಾದ ಶ್ರೀರಾಮನೇ ಸಮರ್ಥನು. ನಮ್ಮ ವಂಶದಲ್ಲಿ ಜ್ಯೇಷ್ಠನಾದ ರಾಜಪುತ್ರನಿರುವಾಗ ಅವನನ್ನು ಉಲ್ಲಂಘಿಸಿ ಕಿರಿಯನು ಸಿಂಹಾಸನವನ್ನೇರುವುದು ಯಾವಾಗಲೂ ನಡೆದು ಬಂದಿಲ್ಲ. ನನ್ನ ಅಣ್ಣನ ಯೋಗ್ಯತೆಯ ಒಂದಂಶವೂ ನನ್ನಲ್ಲಿಲ್ಲ. ಆದ್ದರಿಂದ ನಾನು ರಾಜನಾಗುವೆನೆಂಬುದು ಎಂದಿಗೂ ನಡೆಯತಕ್ಕದ್ದಲ್ಲ. ನಾನೀಗ ಅರಣ್ಯಕ್ಕೆ ಹೋಗಿ ಆ ಧರ್ಮಾತ್ಮನ ಪಾದಗಳಿಗೆ ಅಡ್ಡಬಿದ್ದು ಕ್ಷಮೆಯನ್ನು ಕೇಳುವೆನು. ಒತ್ತಾಯಪಡಿಸಿ ಆತನನ್ನು ಅರಮನೆಗೆ ಕರೆತಂದು ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕವನ್ನು ನಡೆಸಿ ಅವನ ಭೃತ್ಯನಾಗಿ ನಡೆದುಕೊಳ್ಳುತ್ತೇನೆ. ಆಗಲೇ ನನ್ನ ಮನಸ್ಸಿಗೆ ಸ್ವಲ್ಪವಾದರೂ ಶಾಂತಿ ದೊರಕೀತು. ಇದು ನನ್ನ ದೃಢವಾದ ನಿಶ್ಚಯ'' ಎಂದನು. ಆಗ ವಸಿಷ್ಠ ಮುನಿಗಳು ''ಭರತ ನಿನ್ನ ಅಣ್ಣನು ವನವಾಸದ ಪ್ರತಿಜ್ಞೆ ಮಾಡಿ ಹೋಗಿದ್ದಾನೆ. ಹದಿನಾಲ್ಕು ವರ್ಷ ಕಳೆದ ಹೊರತು ಅವನು ಹಿಂದಿರುಗಲಾರ. ಆದ್ದರಿಂದ ನೀನು

ಪಟ್ಟಾಭಿಷಿಕ್ತನಾಗುವುದು ಉತ್ತಮ'' ಎಂದರು. ಭರತನು ಅತ್ಯಂತ ಖೇದದಿಂದ ವಸಿಷ್ಠ ಮುನಿಗಳನ್ನೂ ಲಕ್ಷಿಸದೆ ಮಾತಾಡಿದನು. ''ಈ ವಿಷಯದಲ್ಲಿ ನಾನು ಯಾರ ಮಾತನ್ನೂ ಕೇಳತಕ್ಕವನಲ್ಲ. ಶ್ರೀರಾಮ ಲಕ್ಷ್ಮಣ ಸೀತೆಯರಿದ್ದಲ್ಲಿಗೆ ಕೂಡಲೇ ಹೊರಡಬೇಕಾಗಿದೆ. ಶ್ರೀರಾಮನನ್ನು ವೈಭವದಿಂದ ನಗರಕ್ಕೆ ಕರೆತರುವೆನು. ಎಲ್ಲ ಸಿದ್ಧತೆಗಳೂ ನಡೆಯಲಿ'' ಎಂದು ಆಜ್ಞಾಪಿಸಿ ಬಿಟ್ಟನು.

ಇಷ್ಟರಲ್ಲಿ ಕೈಕೇಯಿಗೆ ಬಹಳ ಪಶ್ಚಾತ್ತಾಪವಾಗಿತ್ತು. ಭರತನು ರಾಜನಾಗಲು ಎಂದಿಗೂ ಒಪ್ಪತಕ್ಕವನಲ್ಲ ಎಂದು ಖಚಿತವಾಯಿತು. ವ್ಯರ್ಥವಾಗಿ ದಶರಥ ಮಹಾರಾಜನ ಮರಣಕ್ಕೆ ತಾನು ಕಾರಣಳಾಗಿ ವಿಧವೆಯಾದೆನು. ಎಲ್ಲರ ನಿಂದೆಗೂ ಪಾತ್ರಳಾದೆನು ಎಂದು ಅವಳ ಮನಸ್ಸಿಗೆ ಬಹಳ ವಿಷಾದವಾಗಿತ್ತು. ವಾಸ್ತವವಾಗಿ ಅವಳಿಗೆ ಶ್ರೀರಾಮನ ಮೇಲೆ ಪ್ರೀತಿವಿಶ್ವಾಸಗಳಿದ್ದವು. ಮಂಥರೆಯ ಚಾಡಿಮಾತನ್ನು ಕೇಳಿ ಬುದ್ಧಿಗೆಟ್ಟು, ಒಂದು ದೊಡ್ಡ ತಪ್ಪನ್ನೇ ಎಸಗಿಬಿಟ್ಟೆನೆಂದು ಅವಳು ನೊಂದು ಕೊಂಡಳು. ಈಗ ಭರತನು ಶ್ರೀರಾಮನನ್ನು ಕರೆತರಲು ಹೊರಟಾಗ ತಾನೂ ಜೊತೆಗೆ ಹೋಗಬೇಕೆಂದೂ ಅವಳ ಮನಸ್ಸಿಗೆ ತೋರಿತು. ಆದ್ದರಿಂದ ಕೌಸಲ್ಯೆ, ಸುಮಿತ್ರೆ ಮೊದಲಾದವರೊಡನೆ ತಾನೂ ಹೋಗಲು ನಿರ್ಧರಿಸಿಕೊಂಡಳು.

ಅನಂತರ ಭರತನು ಶ್ರೀರಾಮನನ್ನು ವೈಭವದಿಂದ ಕರೆತರಬೇಕೆಂದು ನಿಶ್ಚಯಿಸಿ ವಸಿಷ್ಠರನ್ನೂ ಸಚಿವರನ್ನೂ ಕರೆದುಕೊಂಡು ಸೇನಾಸಮೇತನಾಗಿ ಹೊರಟನು. ಪಟ್ಟದ ಆನೆ, ಶ್ವೇತಚ್ಛತ್ರ, ರಾಜಯೋಗ್ಯವಾದ ಆಭರಣಗಳು, ಶ್ರೀರಾಮನ ಪಾದಗಳಿಗೆ ಉಚಿತವಾದ ಪಾದುಕೆಗಳು–ಇವೆಲ್ಲವನ್ನೂ ತೆಗೆಸಿಕೊಂಡು ಸುಮಂತ್ರನು ಹೇಳಿದ ಮಾರ್ಗದಲ್ಲಿ ಅವನು ಪ್ರಯಾಣಮಾಡಿದನು. ಭರತನ ಭ್ರಾತೃವಾತ್ಸಲ್ಯವನ್ನು ಕಂಡು ಹೃಷ್ಟರಾದ ಪ್ರಜೆಗಳೂ ಸಹ ಜೊತೆಗೆ ಪ್ರಯಾಣ ಮಾಡಿದರು. ಭರತನ ಸೇನೆಯು ಗಂಗಾತೀರಕ್ಕೆ ಆಗಮಿಸಿತು.

ಹೀಗೆ ಭರತನು ಸೇನಾ ಸಮೇತನಾಗಿ ಬಂದದ್ದು ಶ್ರೀರಾಮನ ಮಿತ್ರನಾದ ಗುಹನಿಗೆ ತಿಳಿಯಿತು. ಆತನು ''ಒಂದುವೇಳೆ ಭರತನು ರಾಮನಲ್ಲಿ ಸದ್ಭಾವನೆ ಯನ್ನಿಟ್ಟು ಬಂದಿದ್ದರೆ, ಒಳ್ಳೆಯದೇ ಆಯಿತು. ಇಲ್ಲದಿದ್ದರೆ ಗಂಗೆಯನ್ನು ದಾಟದಂತೆ ಆತನ ಸೇನೆಯನ್ನು ತಡೆಯಬೇಕು'' ಎಂದು ನಿಶ್ಚಯಿಸಿ ಅದರಂತೆ ನಾವಿಕರಿಗೆ ಆಜ್ಞೆಮಾಡಿ ಭರತನ ಬಳಿಗೆ ಬಂದನು. ಭರತನನ್ನು ಕಂಡು ''ರಾಜಪುತ್ರ, ನಿನಗೆ ಸ್ವಾಗತ. ಧರ್ಮಾತ್ಮನಾದ ರಾಮನ ಹಿಂದೆ ರಾಮನನ್ನು ಹುಡುಕುತ್ತ ಸದ್ಭಾವನೆಯಿಂದ ಬಂದಿರುವೆಯೋ ಹೇಗೆ? ಮಹತ್ತರವಾದ ಈ ಸೇನೆಯನ್ನು ನೋಡಿ

ನನ್ನ ಮನಸ್ಸಿಗೆ ಶಂಕೆಯಾಗಿದೆ'' ಎಂದನು. ಆಕಾಶದಂತೆ ನಿರ್ಮಲಚಿತ್ತನಾದ ಭರತನು ಗುಹನ ಮಾತಿನಿಂದ ವ್ಯಥಿತನಾಗಿ ''ನಿಷಾದರಾಜ, ನನಗೆ ಅಣ್ಣನಾದ ಶ್ರೀರಾಮನು ತಂದೆಯಂತೆ ಪೂಜ್ಯನಾದವನು. ಅವನನ್ನು ವೈಭವದಿಂದ ರಾಜಧಾನಿಗೆ ಕರೆದೊಯ್ಯುವುದಕ್ಕಾಗಿ ಬಂದಿದ್ದೇನೆ. ಇದು ಸತ್ಯವಾದ ಮಾತು. ನೀನು ಶಂಕಿಸಬಾರದು'' ಎಂದನು. ಗುಹನಿಗೆ ತುಂಬ ಸಂತೋಷವಾಯಿತು. ಅನಂತರ ಭರತನು ರಾಮ ಲಕ್ಷ್ಮಣ ಸೀತೆಯರ ವೃತ್ತಾಂತವನ್ನು ಗುಹನಿಂದ ಕೇಳಿ ತಿಳಿದನು. ಶ್ರೀರಾಮನ ವಿಷಯವಾಗಿ ಸಂಭಾಷಿಸುತ್ತಾ ಶೋಕಾರ್ತನಾಗಿದ್ದ ಭರತನಿಗೆ ಶ್ರೀರಾಮನ ವೃತ್ತಾಂತವೆಲ್ಲವನ್ನೂ ಗುಹನು ಆರುಹಿ ಸೀತಾರಾಮರು ರಾತ್ರಿ ಎಲ್ಲಿ ಮಲಗಿದ್ದರೆಂಬುದನ್ನೂ ತೋರಿಸಿದನು. ಅದೆಲ್ಲವನ್ನೂ ಕೇಳಿ, ನೋಡಿ ಶೋಕಾವೇಗದಿಂದ ಭರತನು ಕುಸಿದು ಹೋದನು..

ರಾತ್ರಿ ಕಳೆಯಿತು. ಮಾರನೆಯ ದಿನ ಪ್ರಾತಃಕಾಲದಲ್ಲಿಯೇ ಗುಹನು ಬಂದು ತನ್ನ ನಾವೆಗಳಿಂದ ಅವರೆಲ್ಲರನ್ನೂ ಗಂಗಾನದಿಯ ದಕ್ಷಿಣ ತೀರಕ್ಕೆ ಕಳಿಸಿಕೊಟ್ಟನು. ಗುಹನು ತೋರಿಸಿದ ದಾರಿಯಲ್ಲಿಯೇ ಮುಂದೆ ಹೋಗುತ್ತಿರುವಾಗ ಭರದ್ವಾಜಾಶ್ರಮವು ಕಂಗೊಳಿಸಿತು. ಭರತನು ತನ್ನ ಸೇನೆಯೆಲ್ಲವನ್ನೂ ಹಿಂದಕ್ಕೆ ನಿಲ್ಲಿಸಿ ಪುರೋಹಿತರಾದ ವಸಿಷ್ಠರನ್ನು ಕರೆದುಕೊಂಡು ಭರದ್ವಾಜ ಮುನಿಗಳ ಆಶ್ರಮಕ್ಕೆ ಬಂದನು. ವಸಿಷ್ಠರನ್ನು ಕಂಡೊಡನೆ ಭರದ್ವಾಜ ಮುನಿಗಳು ಎಲ್ಲರನ್ನೂ ಸ್ವಾಗತಿಸಿ ಉಪಚರಿಸಿದರು. ಆಮೇಲೆ ಭರತನನ್ನು ಕುರಿತು, ''ಭರತ, ನೀನು ಈಗ ವನಕ್ಕೆ ಬಂದ ನಿಮಿತ್ತವೇನು? ರಾಜಕಾರ್ಯದಲ್ಲಿ ತೊಡಗದೆ ಹೀಗೆ ಬಂದದ್ದರಿಂದ ನನ್ನ ಮನಸ್ಸು ಶಂಕಾಕುಲವಾಗಿದೆ'' ಎಂದರು. ಆ ಮಾತನ್ನು ಕೇಳಿದೊಡನೆ ಭರತನಿಗೆ ಕಣ್ಣೀರು ಉಕ್ಕಿತು. ಅವನು ದುಃಖದಿಂದ ತೊದಲುತ್ತ ಭರದ್ವಾಜರನ್ನು ಕುರಿತು, ''ಮಹರ್ಷಿಗಳೂ ಹೀಗೆ ತಿಳಿಯುವುದಾದರೆ, ಅಯ್ಯೋ, ನಾನು ಕೆಟ್ಟೆ. ನನ್ನಲ್ಲಿ ಯಾವ ತಪ್ಪೂ ಇಲ್ಲ, ನನ್ನ ತಾಯಿ ಹೇಳಿದುದನ್ನು ನಾನು ಒಪ್ಪತಕ್ಕವನಲ್ಲ, ನನ್ನ ಅಣ್ಣನಾದ ಆ ಪುರುಷೋತ್ತಮನ ಪಾದಗಳಿಗೆ ಅಡ್ಡ ಬಿದ್ದು ಅವನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗಬೇಕೆಂದು ನಾನು ಬಂದಿದ್ದೇನೆ. ಭಗವನ್, ಈ ರಾಜ್ಯಕ್ಕೆ ಶ್ರೀರಾಮನೇ ಪ್ರಭು. ನನ್ನನ್ನು ಕೃಪಾದೃಷ್ಟಿಯಿಂದ ನೋಡಿರಿ'' ಎಂದು ನುಡಿದು ನಮಸ್ಕರಿಸಿದನು. ವಸಿಷ್ಠರು ಭರತನ ಹೃದಯಶುದ್ಧಿಯನ್ನು ಮೆಚ್ಚಿ ನಾಲ್ಕು ಮಾತಗಳನ್ನಾಡಿದರು. ಭರದ್ವಾಜರು ಆ ರಾಜಪುತ್ರನನ್ನು ಕುರಿತು ''ವತ್ಸ, ನಿನ್ನ ಕೀರ್ತಿಯು ಶಾಶ್ವತವಾಗಿ ನಿಲ್ಲುತ್ತದೆ. ನಿನ್ನ ಹೃದಯವನ್ನು ನಾನು ಬಲ್ಲೆ. ಶ್ರೀರಾಮನು ಸೀತಾಲಕ್ಷ್ಮಣರೊಡನೆ ಚಿತ್ರಕೂಟ ಪರ್ವತದಲ್ಲಿದ್ದಾನೆ'' ಎಂದು ತಿಳಿಸಿದರು. ಅನಂತರ ಆ ಮಹಾತ್ಮರು ಭರತನೇ

ಮೊದಲಾದವರಿಗೆ ಒಂದು ಔತಣ ಕೂಟವನ್ನೇರ್ಪಡಿಸಿದರು. ತಮ್ಮ ತಪೋಬಲ ದಿಂದ ಸಕಲ ಭೋಜನ ಸಾಮಗ್ರಿಗಳನ್ನೂ ಸಿದ್ಧಪಡಿಸಿದರು. ಅವರ ಒತ್ತಾಯಕ್ಕೆ ಮಣಿದು ಭರತನೂ ಅವನ ಪರಿವಾರದವರೆಲ್ಲರೂ ಔತಣದಲ್ಲಿ ಭಾಗವಹಿಸಿದರು.

ಮಾರನೆಯ ದಿನ ಭರದ್ವಾಜ ಮುನಿಗಳ ಅನುಮತಿಯನ್ನು ಪಡೆದು ಭರತನು ತನ್ನ ಪರಿವಾರದೊಡನೆ ಚಿತ್ರಕೂಟದ ಕಡೆಗೆ ತೆರಳಿದನು.

ಇತ್ತಲಾಗಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಚಿತ್ರಕೂಟದ ಆಶ್ರಮದಲ್ಲಿ ತಂಗಿದ್ದನು. ಕಾಡಿನಲ್ಲಿದ್ದ ತರುಲತೆಗಳನ್ನೂ, ಮೃಗಪಕ್ಷಿಗಳನ್ನೂ, ಗಿರಿನದಿಗಳನ್ನೂ ಜಾನಕಿಗೆ ತೋರಿಸುತ್ತಾ ಅವಳಿಗೆ ಬೇಸರವಾಗದಂತೆ ವಿನೋದದ ಮಾತುಗಳನ್ನಾಡುತ್ತಾ ವಿಹರಿಸುತ್ತಿದ್ದನು. ಒಂದು ಗಿರಿನದಿಯ ಬಳಿ ಸಮತಲದಲ್ಲಿ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಕುಳಿತಿದ್ದನು. ಆಗ ಭರತನ ಸೇನೆಯು ಬೆಟ್ಟದ ಸಮೀಪಕ್ಕೆ ಬಂದುದ ರಿಂದ ಕೋಲಾಹಲ ಶಬ್ದವಾಗಿ ಹಕ್ಕಿಗಳೂ, ಮೃಗಗಳೂ ಹೆದರಿದವು. ಹಕ್ಕಿಗಳು ಗಗನ ದಲ್ಲಿ ಹಾರಾಡುತ್ತ ಕೋಲಾಹಲ ಧ್ವನಿಯನ್ನು ಮಾಡಿದವು. ಮೃಗಗಳು ಚಲ್ಲಾಪಿಲ್ಲಿ ಯಾಗಿ ಓಡತೊಡಗಿದವು. ಅದನ್ನು ಗಮನಿಸಿದ ಶ್ರೀರಾಮನು ಲಕ್ಷ್ಮಣನನ್ನು ಕರೆದು, ''ಲಕ್ಷ್ಮಣ, ಇದ್ದಕ್ಕಿದ್ದಂತೆ ಕೋಲಾಹಲ ಶಬ್ದವು ಕೇಳಿಸುತ್ತಿದೆ. ಹಕ್ಕಿಗಳು ಹೆದರಿ ಕೂಗಾಡುತ್ತ ಆಕಾಶದಲ್ಲಿ ಹಾರುತ್ತಿವೆ. ಜಿಂಕೆ ಮೊದಲಾದವು ಭಯದಿಂದ ಓಡುತ್ತಿವೆ. ಅದೇನೆಂಬುದನ್ನು ತಿಳಿ'' ಎಂದು ಆದೇಶಿಸಿದನು. ಸೌಮಿತ್ರಿಯು ಒಂದು ಎತ್ತರವಾದ ಮರವನ್ನೇರಿ ಎಲ್ಲದಿಕ್ಕುಗಳನ್ನೂ ವೀಕ್ಷಿಸಿದನು. ಉತ್ತರದಿಕ್ಕಿನಿಂದ ಚತುರಂಗ ಸೇನೆ ಯೊಂದು ಬರುತ್ತಿರುವುದು ಅವನಿಗೆ ಕಾಣಿಸಿತು. ಅದನ್ನು ನೋಡುತ್ತಲೇ ಲಕ್ಷ್ಮಣನು ಬೆಂಕಿಯಂತೆ ಸಿಡಿದೆದ್ದು ''ಅಣ್ಣಾ, ಸೀತಾದೇವಿಯು ಗುಹೆಯೊಳಗೆ ಹೋಗಲಿ! ಕವಚ ವನ್ನು ತೊಡು; ಯುದ್ಧಕ್ಕೆ ಸಿದ್ಧನಾಗು!'' ಎಂದು ಕೂಗಿದನು. ಶ್ರೀರಾಮನು ಶಾಂತಚಿತ್ತ ನಾಗಿಯೇ ''ಸೌಮಿತ್ರಿ, ಯಾರು ಬರುತ್ತಿದ್ದಾರೆ? ನೀನು ಸಂಭ್ರಾಂತನಾಗಲು ಕಾರಣವೇನು?'' ಎಂದು ಕೇಳಿದನು. ಲಕ್ಷ್ಮಣನು ''ಆ ಕೈಕೇಯಿಯ ಮಗನು ಬರು ತ್ತಿದ್ದಾನೆ. ಪಟ್ಟಾಭಿಷೇಕ ಮಾಡಿಸಿಕೊಂಡು, ಅಷ್ಟರಿಂದ ತೃಪ್ತನಾಗದೆ, ನಮ್ಮನ್ನು ಸಂಹರಿಸಲು ಬರುತ್ತಿದ್ದಾನೆ. ಶ್ರೀರಾಮ, ಇವನಿಂದಲೇ ನಿನಗೆ ರಾಜ್ಯವು ತಪ್ಪಿ ಹೋಯಿತು. ಈ ದಿನ ಭರತನನ್ನು ನಾನು ಕೊಂದು ಹಾಕುವೆನು! ಆ ಕೈಕೇಯಿಯು ಬಂದು ಸತ್ತ ಮಗನನ್ನು ನೋಡಲಿ! ಈ ಪಾಪಶೇಷವು ಭೂಮಿಯಿಂದ ತೊಡೆದು ಹೋಗಲಿ!'' ಎಂದು ಅಬ್ಬರಿಸಿದನು. ಅದಕ್ಕೆ ರಾಘವನು ಶಾಂತ ಮನಸ್ಸಿನಿಂದಲೇ ''ಲಕ್ಷ್ಮಣ, ಭರತನು ಬಂದರೆ ಒಳ್ಳೆಯದೇ ಆಯಿತು. ಸಾಧುಶೀಲನಾದ ಭರತನು

ಬಂದರೆ ಕವಚವೇಕೆ? ಧನುರ್ಬಾಣಗಳೇಕೆ? ಅವನು ಯಾವಾಗಲಾದರೂ ನನಗಾಗಲಿ, ನಿನಗಾಗಲಿ ಒಂದು ಅಪ್ರಿಯವಾದ ಮಾತನ್ನು ನುಡಿದದ್ದುಂಟೆ? ಲಕ್ಷ್ಮಣ, ನಾನು ರಾಜ್ಯವನ್ನು ಬಯಸಿದ್ದು ನಿಮ್ಮೆಲ್ಲರ ಸುಖ ಸಂತೋಷಗಳಿಗಾಗಿ, ನನಗಾಗಿ ಅಲ್ಲ. ನಾನು ಮನಸ್ಸು ಮಾಡಿದರೆ ಅಯೋಧ್ಯೆಯೊಂದನ್ನೇ ಅಲ್ಲ, ಈ ಜಗತ್ತನ್ನೇ ವಶಪಡಿಸಿಕೊಳ್ಳಬಲ್ಲೆನು. ತಂದೆಯ ಆಜ್ಞೆಯನ್ನು ಪಾಲಿಸುವುದಕ್ಕಾಗಿ ನಾನು ಕಾಡಿಗೆ ಬಂದಿದ್ದೇನೆ. ಭರತನ ವಿಷಯದಲ್ಲಿ ನಿಷ್ಠುರವಾಗಿ ಮಾತಾಡಬೇಡ. ನೀನು ಮರದಿಂದ ಕೆಳಗಿಳಿದು ಬಾ'' ಎಂದನು. ಅಣ್ಣನ ಈ ಸಾಂತ್ವನ ವಚನವನ್ನು ಕೇಳಿ ಲಕ್ಷ್ಮಣನಿಗೆ ಲಜ್ಜೆಯಾಯಿತು. ಅವನು ಮನಸ್ಸಿನಲ್ಲಿ ಕಳವಳಿಸುತ್ತಲೇ ಕೆಳಗಿಳಿದು ಬಂದನು.

ಚಿತ್ರಕೂಟದಲ್ಲಿ ಶ್ರೀರಾಮನಿದ್ದಾನೆಂದು ಭರದ್ವಾಜ ಮುನಿಗಳು ಹೇಳಿದ್ದರಷ್ಟೆ. ಅದರಂತೆ ಭರತನು ತನ್ನ ಸೇನೆಯನ್ನು ಬೆಟ್ಟದ ಕೆಳಗೆ ನಿಲ್ಲಿಸಿ, ಅಣ್ಣನನ್ನು ಹುಡುಕುವುದಕ್ಕಾಗಿ ಕೆಲವರನ್ನು ನೇಮಿಸಿ ತಾನು ಶತ್ರುಘ್ನನೊಡನೆ ಪಾದಚಾರಿಯಾಗಿ ಇನ್ನೊಂದು ದಿಕ್ಕಿನಿಂದ ಬೆಟ್ಟವನ್ನೇರತೊಡಗಿದನು. ಆತನ ಮನಸ್ಸಿನಲ್ಲಿ ''ಈಗ ಶ್ರೀರಾಮನನ್ನೂ, ಲಕ್ಷ್ಮಣನನ್ನೂ, ಸೀತಾದೇವಿಯನ್ನೂ ಕಂಡಹೊರತು ನೆಮ್ಮದಿಯಿಲ್ಲ'' ಎಂದು ಹೇಳಿಕೊಳ್ಳುತ್ತಾ ತ್ವರೆಯಿಂದ ಮೇಲಕ್ಕೆ ಸಾಗಿದನು. ಆಶ್ರಮದಲ್ಲಿದ್ದ ರಾಮಲಕ್ಷ್ಮಣರು ಕಾಡುದಾರಿಯನ್ನು ಗುರುತಿಸುವುದಕ್ಕಾಗಿ ಮರಗಳ ಮೇಲೆ ದರ್ಭೆಗಳಿಂದಲೂ ನಾರು ಬಟ್ಟೆಯ ತುಂಡುಗಳಿಂದಲೂ ಮಾಡಿಕೊಂಡಿದ್ದ ಚಿಹ್ನೆಗಳು ಗೋಚರಿಸಿದವು. ಅವೆಲ್ಲವೂ ಲಕ್ಷ್ಮಣನು ಮಾಡಿದ ಗುರುತುಗಳೆಂದು ನಿಶ್ಚಯಿಸಿ ಆ ನರಶ್ರೇಷ್ಠನು ''ಅಯ್ಯೋ, ನನ್ನ ಜನ್ಮಕ್ಕೆ ಧಿಕ್ಕಾರ! ನನ್ನ ಬದುಕಿಗೆ ಧಿಕ್ಕಾರ! ಮಹಾತೇಜಸ್ವಿಯಾದ ರಘುನಾಥನು ನನಗೋಸ್ಕರ ಈ ಗೊಂಡಾರಣ್ಯಕ್ಕೆ ಬರಬೇಕಾಯಿತು'' ಎಂದು ಗೊಣಗಿಕೊಳ್ಳುತ್ತಾ, ಮರದ ಮೇಲಿದ್ದ ಆ ಚಿಹ್ನೆಗಳನ್ನು ಗಮನಿಸಿ ಬೇಗ ಬೇಗನೆ ಆ ದಿಕ್ಕಿಗೆ ಧಾವಿಸಿದನು. ಒಂದು ಸಮತಳದಲ್ಲಿ ಕಟ್ಟಿಕೊಂಡಿದ್ದ ಪರ್ಣಶಾಲೆಯು ದೂರದಲ್ಲಿ ಕಾಣಿಸಿತು. ಅದೇ ಅಣ್ಣನು ಕಟ್ಟಿಕೊಂಡ ಪರ್ಣಶಾಲೆಯಾಗಿರಬೇಕು ಎಂದುಕೊಳ್ಳುತ್ತ ಮುಂದೆ ಹೋಗುತ್ತಿರಲು, ಪರ್ಣಶಾಲೆಯ ವೇದಿಕೆಯಲ್ಲಿ ಅಗ್ನಿಯು ಉರಿಯುತ್ತಿರುವುದು ಮತ್ತು ಇನ್ನೊಬ್ಬ ಅಗ್ನಿಯೋ ಎಂಬಂತೆ ಬೆಳಗುತ್ತಿದ್ದ ತೇಜೋರಾಶಿಯಾದ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಕುಳಿತಿರುವುದೂ ಕಂಡಿತು. ಭರತನ ದುಃಖವು ಉಮ್ಮಳಿಸಿತು. ಅವನು ಶತ್ರುಘ್ನನಿಗೆ ''ತಮ್ಮ, ಅಲ್ಲಿ ನೋಡು. ದಿವ್ಯ ವಸ್ತ್ರಗಳನ್ನು ಧರಿಸುತ್ತಿದ್ದ ನಮ್ಮ ಅಣ್ಣನು ಕೃಷ್ಣಾಜಿನವನ್ನು ಹೊದೆದು ಇಲ್ಲಿ ತಪಸ್ಸು ಮಾಡುತ್ತ ಇರುವನಲ್ಲ. ಈ ಜಟಾಭಾರವನ್ನು ಹೇಗೆ ಹೊತ್ತುಕೊಂಡಿದ್ದಾನೋ? ಶ್ರೀರಾಮನಿಗೆ ಈ ಕಷ್ಟವೆಲ್ಲವೂ ನನ್ನ ದೆಸೆಯಿಂದ

ಬಂದಿತು. ನಾನೆಂತಹ ಪಾಪಿ! ನನ್ನ ಬಾಳನ್ನು ಸುಡಬೇಕು'' ಎಂದು ಹಲುಬಿದನು. ದುಃಖದಿಂದ ಉದ್ವಿಗ್ನನಾಗಿ ''ಅಣ್ಣಾ, ಎಂದು ಕೂಗುತ್ತ ಓಡಿಹೋಗಿ ಶ್ರೀರಾಮನ ಪಾದಗಳನ್ನು ಮುಟ್ಟುವುದರೊಳಗೆ ಕುಸಿದು ಬಿದ್ದನು. ಒಡನೆಯೇ ಶ್ರೀರಾಮನು ಎದ್ದು ಧಾವಿಸುತ್ತ ಬಂದು ಭರತನನ್ನೆತ್ತಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವನ ಮೈದಡವಿದನು. ಶತ್ರುಘ್ನನು ಅಳುತ್ತ ಬಂದು ಶ್ರೀರಾಮನ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು. ಶ್ರೀರಾಮನು ಮೆಲ್ಲಗೆ ಭರತನನ್ನು ಕುರಿತು ''ಭರತ, ಇದೇನು? ನೀನು ಕಾಡಿಗೆ ಬಂದೆಯಲ್ಲ? ಪೂಜ್ಯನಾದ ತಂದೆಯ ಸೇವೆಯನ್ನು ಬಿಟ್ಟು ಇಲ್ಲಿಗೆ ಬಂದಿದ್ದೀಯಲ್ಲ? ನಿನ್ನನ್ನು ನೋಡಿ ಎಷ್ಟು ಕಾಲವಾಯಿತು! ಮೊದಲು ನನಗೆ ನೀನು ಯಾರೆಂಬುದೇ ತಿಳಿಯದೇ ಹೋಯಿತು'' ಎಂದನು. ಅನಂತರ ಭರತನ ಕಣ್ಣೀರನ್ನು ಒರೆಸುತ್ತ ''ಭರತ, ನಮ್ಮ ತಂದೆಯು ಕ್ಷೇಮವಾಗಿರುವನೆ? ಕೌಸಲ್ಯೆಯೂ ಸುಮಿತ್ರಾದೇವಿಯೂ ಸುಖದಿಂದಿರುವರೆ? ಪೂಜ್ಯಳಾದ ನನ್ನ ಚಿಕ್ಕಮ್ಮ ಕೈಕೇಯಿ ದೇವಿಗೆ ಸಂತೋಷವಾಗಿದೆಯೇ?'' ಎಂದು ಕೇಳಿದನು. ಭರತನ ಬಾಯಿಯಿಂದ ಯಾವ ಮಾತೂ ಹೊರಡಲಿಲ್ಲ. ಮತ್ತೆ ''ವತ್ಸ, ನೀನು ಪಟ್ಟಾಭಿಷಿಕ್ತನಾಗಿ ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿರುವೆಯಾ? ಮಂತ್ರಿಗಳೂ, ಸೇನಾಧಿಕಾರಿಗಳೂ ನಿನ್ನ ಆಜ್ಞೆಯನ್ನು ಸರಿಯಾಗಿ ಪಾಲಿಸುತ್ತಿರುವರಷ್ಟೆ?'' ಎಂದನು. ಆಗ ಭರತನು ''ಅಣ್ಣಾ, ಧರ್ಮಭ್ರಷ್ಟನಾದ ನನಗೆ ಈ ರಾಜಧರ್ಮದಿಂದ ಏನಾಗಬೇಕು? ನಾನು ರಾಜನಾಗತಕ್ಕವನಲ್ಲ. ನೀನು ಕೂಡಲೇ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಿ ನಮ್ಮ ವಂಶವು ಉಳಿಯುವಂತೆ ಮಾಡು. ಶ್ರೀರಾಮ, ನಾನು ಕೇಕಯ ದೇಶದಲ್ಲಿದ್ದಾಗ ನೀನು ಅರಣ್ಯಕ್ಕೆ ಬಂದು ಬಿಟ್ಟಿದ್ದೀಯೆ. ಈ ಯಾವ ಸಂಗತಿಯೂ ನನಗೆ ಮೊದಲು ತಿಳಿಯದೇ ಹೋಯಿತು. ಓ ಪುರುಷೋತ್ತಮ, ನೀನು ಸೀತಾಲಕ್ಷ್ಮಣರೊಡನೆ ಇತ್ತ ಬಂದ ಕೂಡಲೇ ಮಹಾರಾಜನು ನಿಮ್ಮನ್ನೇ ನೆನೆಯುತ್ತ ಸ್ವರ್ಗವನ್ನು ಸೇರಿಕೊಂಡನು. ಅಣ್ಣಾ ತಂದೆಗೆ ತರ್ಪಣಾದಿಗಳನ್ನು ನಡೆಸು. ನಾನೂ ಈ ಶತ್ರುಘ್ನನೂ ಇಬ್ಬರೂ ತಂದೆಗೆ ಸಂಸ್ಕಾರವನ್ನು ಮಾಡಿದೆವು. ಜ್ಯೇಷ್ಠ ಪುತ್ರನೂ ಮಹಾರಾಜನಿಗೆ ಅತ್ಯಂತ ಪ್ರಿಯನೂ ಆದ ನೀನು ತರ್ಪಣಾದಿಗಳನ್ನು ಕೊಡದಿದ್ದರೆ ಸ್ವರ್ಗದಲ್ಲಿಯೂ ನಮ್ಮ ತಂದೆಗೆ ಶಾಂತಿಯಿರುವುದಿಲ್ಲ'' ಎಂದನು.

ದಶರಥಮಹಾರಾಜನು ಸ್ವರ್ಗಸ್ಥನಾದನೆಂಬ ಕೆಟ್ಟ ಸುದ್ದಿಯು ವಜ್ರಾಯುಧದಂತೆ ಶ್ರೀರಾಮನನ್ನು ತಾಗಿತು. ಅವನು ಎರಡು ಕೈಗಳನ್ನೂ ಮೇಲಕ್ಕೆ ಚಾಚಿ ನೆಲದ ಮೇಲೆ ಒರಗಿದನು. ಅವನ ತಮ್ಮಂದಿರೂ ವೈದೇಹಿಯೂ ಕಣ್ಣೀರು ಸುರಿಸುತ್ತಾ ಆ ವೀರನನ್ನು ತಣ್ಣೀರಿನಿಂದ ಚಿಮುಕಿಸಿದರು. ಶ್ರೀರಾಮನು ಚೇತರಿಸಿಕೊಂಡು ''ಭರತ, ನೀನೇ ಪುಣ್ಯಾತ್ಮ. ನೀನೂ ಶತ್ರುಘ್ನನೂ ತಂದೆಗೆ ಉತ್ತರ ಕ್ರಿಯೆಗಳನ್ನು ಮಾಡಿ ಧನ್ಯರಾದಿರಿ.

ಆ ಭಾಗ್ಯವು ನನಗೂ ಲಕ್ಷ್ಮಣನಿಗೂ ಇಲ್ಲದೆ ಹೋಯಿತು'' ಎಂದು ಹೇಳಿ ತಂದೆಯ ವಾತ್ಸಲ್ಯವನ್ನು ಸ್ಮರಿಸಿಕೊಂಡು ಮತ್ತೆ ಮತ್ತೆ ಅಳುತ್ತಿದ್ದನು. ಲಕ್ಷ್ಮಣನೂ ಸೀತೆಯೂ ಮೌನದಿಂದ ಕಣ್ಣೀರು ಬಿಡುತ್ತ ಕುಳಿತಿದ್ದರು. ಅನಂತರ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಮಂದಾಕಿನೀ ನದಿಗೆ ಹೋದನು. ಎಲ್ಲರೂ ನದಿಯಲ್ಲಿ ಸ್ನಾನ ಮಾಡಿದರು. ಆ ಸೋದರರರು ಮಹಾರಾಜನಿಗೆ ತರ್ಪಣವನ್ನಿತ್ತರು. ಆಮೇಲೆ ರಾಘವನು ತಮ್ಮಂದಿರೊಡನೆ ನದೀ ತೀರಕ್ಕೆ ಬಂದು ಬೋರೆ ಹಣ್ಣುಗಳಿಂದ ಮಿಶ್ರವಾದ ಇಂಗುದೀಬೀಜಗಳನ್ನು ಪಿಂಡದಂತೆ ನಿರ್ಮಿಸಿ ವಿಧಿಪೂರ್ವಕವಾಗಿ ದರ್ಭೆಗಳ ಮೇಲಿಟ್ಟನು. ದುಃಖವನ್ನು ತಡೆಯಲಾರದೆ ಅಳುತ್ತ ''ಮಹಾರಾಜ, ಇದರಿಂದ ಸುಪ್ರೀತನಾಗು. ಇದೇ ನಮ್ಮ ಆಹಾರ. ಜನರಿಗೆ ಯಾವುದು ಆಹಾರವೋ ಅವರ ಇಷ್ಟದೇವತೆಗಳಿಗೂ ಅದೇ ಆಹಾರವಾಗುತ್ತದೆ'' ಎಂದು ನುಡಿದು ಪಿಂಡಪ್ರದಾನವನ್ನು ಮಾಡಿ ಶಾಸ್ತ್ರೋಕ್ತವಾದ ಕರ್ತವ್ಯವನ್ನು ನೆರವೇರಿಸಿ ತನ್ನ ಪರ್ಣಶಾಲೆಯ ಬಾಗಿಲಿಗೆ ಬಂದು ತಮ್ಮಂದಿರನ್ನು ಅಪ್ಪಿಕೊಂಡು ಗಟ್ಟಿಯಾಗಿ ಅತ್ತನು. ಅಷ್ಟರಲ್ಲಿ ಭರತನ ಜೊತೆಗೆ ಬಂದಿದ್ದ ಕೌಸಲ್ಯೆ ಮೊದಲಾದವರೂ, ಇತರ ಪರಿವಾರದವರೂ ಅಲ್ಲಿಗೆ ಬಂದು ಸೇರಿದರು. ರಾಮ, ಲಕ್ಷ್ಮಣ, ಸೀತೆಯರು ಕೌಸಲ್ಯೆ, ಸುಮಿತ್ರೆ, ಕೈಕೇಯಿಯರಿಗೆ ವಂದಿಸಿದರು. ಕೌಸಲ್ಯೆಯು ಸೀತೆಯನ್ನು, ತಾಯಿಯು ಮಗಳನ್ನು ಅಪ್ಪಿಕೊಳ್ಳುವಂತೆ ಪ್ರೀತಿಯಿಂದ ಅಪ್ಪಿಕೊಂಡು, ಜಾನಕಿಯ ಕಷ್ಟಸ್ಥಿತಿಗಾಗಿ ಮರುಗಿದಳು. ಅಷ್ಟರಲ್ಲಿ ತೇಜೋನಿಧಿಗಳಾದ ವಸಿಷ್ಠಮುನಿಗಳು ಅಲ್ಲಿಗೆ ಬಂದರು. ಶ್ರೀರಾಮಾದಿಗಳು ಅವರಿಗೆ ಭಕ್ತಿಯಿಂದ ವಂದಿಸಿದರು. ಎಲ್ಲರೂ ಪರ್ಣಶಾಲೆಯ ಹೊರಗೆ ಒಂದು ಸಮತಳದಲ್ಲಿ ಕುಳಿತುಕೊಂಡರು.

ಶ್ರೀರಾಮನ ಬಳಿ ಭರತನು ಕುಳಿತಿದ್ದನು. ಲಕ್ಷ್ಮಣ ಶತ್ರುಘ್ನ ಮೊದಲಾದವರು ಪಕ್ಕದಲ್ಲಿ ಕುಳಿತಿದ್ದರು. ಸ್ವಲ್ಪಹೊತ್ತು ಯಾರೂ ಮಾತಾಡಲಿಲ್ಲ. ಕಡೆಗೆ ಶ್ರೀರಾಮನೇ ಭರತನನ್ನು ನೋಡಿ ''ವತ್ಸ–ಭರತ, ನೀನು ಜಟೆಯನ್ನು ಧರಿಸಿ ನಾರು ಬಟ್ಟೆಯನ್ನು ಉಟ್ಟು ಇಲ್ಲಿಗೆ ಬಂದಿದ್ದೀಯೆ. ನೀನು ರಾಜ್ಯವನ್ನು ಬಿಟ್ಟು ಇಲ್ಲಿಗೆ ಬಂದ ಕಾರಣವೇನು? ಎಲ್ಲವನ್ನೂ ಸ್ಪಷ್ಟವಾಗಿ ತಿಳಿಸು'' ಎಂದನು. ಭರತನ ಬಾಯಿಯಿಂದ ಮಾತೇ ಹೊರಡದು. ಶ್ರೀರಾಮನು ಮತ್ತೆ ಮತ್ತೆ ಅದೇ ಪ್ರಶ್ನೆಯನ್ನು ಮಾಡಲಾಗಿ ಭರತನು ಇಂತೆಂದನು. ''ಅಣ್ಣ, ನಮ್ಮ ತಂದೆಯು ಮಾಡಬಾರದ ಕೆಲಸವನ್ನು ಮಾಡಿ ಪಶ್ಚಾತ್ತಾಪ ಪಡುತ್ತಾ ಸ್ವರ್ಗಸ್ಥನಾದನು. ಒಬ್ಬ ಸ್ತ್ರೀಮಾತ್ರಳಾದ ನನ್ನ ತಾಯಿ ಕೈಕೇಯಿಯ ಮಾತಿಗೆ ಇಲ್ಲದ ಬೆಲೆಯನ್ನು ಕೊಟ್ಟು, ಪಾಪಕಾರ್ಯವನ್ನೇ ಮಾಡಿದನು. ನನ್ನ ತಾಯಿ ವಿಧವೆಯಾಗಿ ನರಳುತ್ತ ಘೋರ ನರಕದಲ್ಲಿಯೇ ಬೀಳುತ್ತಾಳೆ. ನಾನು ನಿನ್ನ

ದಾಸನಾಗಿದ್ದೇನೆ. ಎಂದೆಂದಿಗೂ ಹೀಗೆಯೇ ಇರುವೆನು. ನೀನು ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಿ ರಾಜ್ಯಭಾರವನ್ನು ವಹಿಸಿಕೊ. ನಮ್ಮ ವಂಶದ ಪದ್ಧತಿಯಂತೆ ಜ್ಯೇಷ್ಠನಾದ ನೀನೇ ದೊರೆಯಾಗಬೇಕು. ಮಂತ್ರಿಗಳೂ, ಪ್ರಜೆಗಳೂ ಸಕಲರೂ ನೀನೇ ರಾಜನಾಗಬೇಕೆಂದು ನಿಶ್ಚಯಿಸಿಕೊಂಡು ಇಲ್ಲಿಗೆ ಬಂದಿದ್ದಾರೆ. ನನ್ನ ತಾಯಿ ಕೈಕೇಯಿಗೆ ತುಂಬ ಪಶ್ಚಾತ್ತಾಪವಾಗಿದೆ. ನೀನು ಹಿಂದಿರುಗಿ ಬಂದು ರಾಜನಾಗಬೇಕೆಂಬುದು ಅವಳಿಗೆ ಸಮ್ಮತವಾದದ್ದು. ಆದ್ದರಿಂದಲೇ ಅವಳೂ ಇಲ್ಲಿಗೆ ಬಂದಿದ್ದಾಳೆ. ನಮ್ಮ ಪ್ರಾರ್ಥನೆಯನ್ನು ನಡೆಸಿಕೊಡು'' ಎಂದು ಹೇಳಿ ಶ್ರೀರಾಮನ ಪಾದಗಳನ್ನು ಹಿಡಿದುಕೊಂಡನು. ನೆರೆದವರೆಲ್ಲರೂ ರಾಘವನ ಉತ್ತರವೇನಿರಬಹುದೆಂದು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು. ಶ್ರೀರಾಮನು ಭರತನಿಗೆ ಈ ಪ್ರಕಾರವಾಗಿ ಉತ್ತರವನ್ನಿತ್ತನು : ''ಭರತ, ನೀನು ಸತ್ಕುಲದಲ್ಲಿ ಜನಿಸಿ ಗುರುಕುಲದಲ್ಲಿ ವಿನೀತನಾಗಿ ಧರ್ಮವನ್ನು ಚೆನ್ನಾಗಿ ಬಲ್ಲವನಾಗಿದ್ದೀಯೆ. ನೀನೆಂದಿಗೂ ಅಧರ್ಮ ಮಾರ್ಗಕ್ಕೆ ಇಳಿಯತಕ್ಕವನಲ್ಲ. ಆದರೆ ನೀನು ನಿನ್ನ ತಾಯಿಯನ್ನು ದೂಷಿಸುವುದು ಸರಿಯಲ್ಲ. ಹಿರಿಯರಾದವರಿಗೆ ತಮ್ಮ ಇಷ್ಟದಂತೆ ಕಿರಿಯರನ್ನು ನೋಡಿಕೊಳ್ಳುವ ಅಧಿಕಾರವುಂಟು. ನಮ್ಮ ತಂದೆಗೆ ನಾವೆಲ್ಲರೂ ಅಧೀನರು. ಆತನ ಆಜ್ಞೆಯನ್ನು ನಾವು ಪಾಲಿಸಬೇಕು. ತಂದೆಯ ಆಜ್ಞೆಯು ಸರಿಯೇ ತಪ್ಪೇ ಎಂದು ವಿಚಾರಿಸುವ ಅಧಿಕಾರ ನಮಗಿಲ್ಲ. ಆದ್ದರಿಂದಲೇ ನಾನು ಎದುರಾಡದೆ ಕಾಡಿಗೆ ಬಂದಿದ್ದೇನೆ. ತಂದೆ ತಾಯಿಗಳ ಇಷ್ಟದಂತೆ ನೀನು ಅಯೋಧ್ಯಾಧಿಪತಿಯಾಗುವುದೇ ಯುಕ್ತವಾದದ್ದು. ಹದಿನಾಲ್ಕು ವರ್ಷ ಕಾಡಿನಲ್ಲಿದ್ದು ತಪಸ್ವಿಯಾಗಿ ಬಾಳುವೆನು. ನಿನ್ನ ತಪ್ಪು ಯಾವುದೂ ಇಲ್ಲ ಎಂಬುದು ನಿಶ್ಚಿತ. ಅಯೋಧ್ಯೆಗೆ ಹಿಂದಿರುಗಿ ಪಟ್ಟಾಭಿಷಿಕ್ತನಾಗು–ಇದೇ ನಿನ್ನ ಕರ್ತವ್ಯ'' ಎಂದನು.

ಭರತನಿಗೆ ಅಣ್ಣನ ಮಾತಿನಿಂದ ತುಂಬ ನಿರಾಸೆಯಾಯಿತು. ಅವನು ಕಣ್ಣೀರು ಸುರಿಸುತ್ತ ''ಅಣ್ಣಾ, ಹೀಗೆನ್ನಬೇಡ. ನಿನಗೆ ತಲೆಬಾಗಿ ಬೇಡಿಕೊಳ್ಳುತ್ತೇನೆ. ನನ್ನ ಪ್ರಾರ್ಥನೆಯನ್ನು ನಡೆಸು. ಅರಣ್ಯದಲ್ಲಿ ಇರಲೇಬೇಕೆಂಬುದಾದರೆ ನಿನಗೆ ಬದಲಾಗಿ ನಾನೇ ಹದಿನಾಲ್ಕು ವರ್ಷ ವನವಾಸ ಮಾಡುವೆನು!'' ಎಂದನು. ಆ ಮಾತನ್ನು ಕೇಳಿ ಶ್ರೀರಾಮನೂ ನೆರೆದ ಪರಿವಾರದವರೂ ವಿಸ್ಮಿತರಾದರು. ರಾಘವನು ''ಭರತ, ಈ ರೀತಿ ವ್ಯಾಜದ ಧರ್ಮಾಚರಣೆ ಸಲ್ಲದು. ತಂದೆಯ ಆಜ್ಞೆ ನಾನು ವನವಾಸ ಮಾಡಬೇಕೆಂದು, ನೀನಲ್ಲ. ನನಗೆ ಬದಲಾಗಿ ನೀನು ವನವಾಸ ಮಾಡುವೆನೆಂಬುದು ಶಾಸ್ತ್ರಗರ್ಹಿತವಾದದ್ದು. ಅದಾಗದು'' ಎಂದನು. ಭರತನು ''ಹಾಗಾದರೆ ನಿನ್ನೊಡನೆ ನಾನೂ ಅರಣ್ಯದಲ್ಲಿರುತ್ತೇನೆ. ಅಯೋಧ್ಯೆಗೆ ಹಿಂದಿರುಗುವುದಿಲ್ಲ'' ಎಂದನು.

ಶ್ರೀರಾಮನು ''ಭರತ, ನೀನು ಇಲ್ಲಿರುವುದಕ್ಕೆ ಯಾವ ನಿಮಿತ್ತವೂ ಇಲ್ಲ. ನೀನಿದ್ದರೆ ಶತ್ರುಘ್ನನೂ ಇಲ್ಲಿಯೇ ಉಳಿಯುವನು. ಕೋಸಲ ರಾಜ್ಯವು ಅನಾಯಕವಾಗುವುದು. ಇದು ಕ್ಷಾತ್ರಧರ್ಮವಲ್ಲ'' ಎಂದನು. ಭರತನು ಎಷ್ಟು ಹೇಳಿದರೂ ಶ್ರೀರಾಮನು ಅಯೋಧ್ಯೆಗೆ ಹಿಂದಿರುಗಲು ಒಪ್ಪಲಿಲ್ಲ. ಕಡೆಗೆ ಭರತನು ಬೇರೆ ದಾರಿ ಕಾಣದೆ ನೆಲದ ಮೇಲೆ ದರ್ಭೆಯನ್ನು ಹರಡಿ ''ನನ್ನ ಅಣ್ಣನು ಅಯೋಧ್ಯೆಗೆ ಬರಲು ಒಪ್ಪುವವರೆಗೂ ನಾನು ಉಪವಾಸ ಸತ್ಯಾಗ್ರಹವನ್ನಾಚರಿಸುವೆನು'' ಎಂದು ನುಡಿದು ಆ ದರ್ಭೆಗಳ ಮೇಲೆ ಮಲಗಿಬಿಟ್ಟನು. ಎಲ್ಲರೂ ದಿಗ್ಭ್ರಾಂತರಾದರು. ಶ್ರೀರಾಮನು ''ಅಪ್ಪಾ-ಭರತ, ಹೀಗೆ ಮಾಡಬಾರದು. ಈ ಉಪವಾಸ ಸತ್ಯಾಗ್ರಹವು ಬ್ರಾಹ್ಮಣರಿಗೆ ಸೇರಿದ್ದು. ಇದು ಕ್ಷತ್ರಿಯ ಧರ್ಮವಲ್ಲ. ವೀರಕ್ಷತ್ರಿಯನಾದ ನಿನಗೆ ಇದು ಉಚಿತವಲ್ಲ. ಮೇಲೇಳು'' ಎಂದು ಸಂತೈಸಿ ಅವನನ್ನೆಬ್ಬಿಸಿದನು. ಪ್ರಾಯಶ್ಚಿತ್ತಾರ್ಥವಾಗಿ ಭರತನು ಆಚಮನ ಮಾಡಿ ವಸಿಷ್ಠರ ಪಾದಗಳಿಗೂ, ಶ್ರೀರಾಮನ ಪಾದಗಳಿಗೂ ನಮಸ್ಕರಿಸಿದನು. ಆಮೇಲೆ ಸುತ್ತಲೂ ನೋಡಿ ''ಋಷಿಗಳೆ, ಮಂತ್ರಿಗಳೆ, ಪ್ರಜೆಗಳೆ, ನೀವೆಲ್ಲರೂ ಸುಮ್ಮನೆ ಕುಳಿತು ನೋಡುತ್ತೀರಲ್ಲ? ಅಯೋಧ್ಯೆಗೆ ಹಿಂದಿರುಗಬೇಕೆಂದು ನೀವೆಲ್ಲರೂ ನನ್ನ ಅಣ್ಣನಿಗೆ ಹೇಳಿ ಒತ್ತಾಯಿಸಬಾರದೆ?'' ಎಂದು ಕೇಳಿದನು. ಯಾರೂ ಮಾತಾಡಲಿಲ್ಲ. ಕೆಲವು ಋಷಿಗಳು ಮಾತ್ರ ''ಭರತ, ನಿನ್ನ ವಿನಯವನ್ನೂ ಧರ್ಮನಿಷ್ಠೆಯನ್ನೂ ಕಂಡು ನಾವೆಲ್ಲರೂ ಬೆರಗಾಗಿದ್ದೇವೆ. ಸಂತುಷ್ಟರಾಗಿದ್ದೇವೆ. ಆದರೆ ಶ್ರೀರಾಮನ ಸತ್ಯಪ್ರತಿಜ್ಞೆಯನ್ನು ನಾವು ಗಮನಿಸಬೇಕಾಗಿದೆ. ಅವನ ಧರ್ಮ-ನಿಷ್ಠೆಯನ್ನು ಪರಿವರ್ತಿಸಲು ನಾವು ಶಕ್ತರಲ್ಲ'' ಎಂದರು. ಮುಂದೇನು ಮಾಡಬೇಕೆಂಬುದು ಸಮಸ್ಯೆಯಾಗಿ ಉಳಿಯಿತು.

೨೪

ಪಾದುಕಾ ಪಟ್ಟಾಭಿಷೇಕ. ಅತ್ರಿಮುನಿಗಳ ಆಶ್ರಮ

ವಸಿಷ್ಠರು ನಡೆದ ಪರಿಸ್ಥಿತಿಯನ್ನೆಲ್ಲಾ ಪರಿಶೀಲಿಸಿ ಹೀಗೆಂದರು. ''ರಾಮನ ಧರ್ಮನಿಷ್ಠೆಯು ದೃಢವಾದದ್ದು. ಭರತನ ವಿನಯ ಸಂಪತ್ತಿಯೂ ಲೋಕೋತ್ತರವಾದದ್ದು. ಪುರೋಹಿತನಾದ ನಾನು ಈಗೊಂದು ಪರಿಹಾರ ಮಾರ್ಗವನ್ನು ಹೇಳುತ್ತಿದ್ದೇನೆ. ಏನೆಂದರೆ, ರಾಜ್ಯವು ಅನಾಯಕವಾಗಕೂಡದು. ಭರತನು ಹಿಂದಿರುಗಿ ಅಯೋಧ್ಯೆಯನ್ನು ಪಾಲಿಸುತ್ತಿರಬೇಕು. ಆದರೆ ತಾನು ರಾಜನೆನಿಸಿಕೊಳ್ಳಲು ಅವನು ಇಚ್ಛಿಸುವುದಿಲ್ಲ. ಆದ್ದರಿಂದ ಶ್ರೀರಾಮನ ಪಾದುಕೆಗಳನ್ನು ಅವನ ಪ್ರತಿನಿಧಿಯನ್ನಾಗಿ

ಒಯ್ದು ಪಾದುಕೆಗಳ ಹೆಸರಿನಲ್ಲಿ ಭರತನು ರಾಜ್ಯಭಾರವನ್ನು ನಡೆಸಲಿ. ಹದಿನಾಲ್ಕು ವರ್ಷಗಳು ಕಳೆದ ಮೇಲೆ ಶ್ರೀರಾಮನು ವನವಾಸವನ್ನು ಮುಗಿಸಿಕೊಂಡು ಬಂದು ಪಟ್ಟಾಭಿಷಿಕ್ತನಾಗಲಿ'' ಎಂದರು. ಎಲ್ಲರೂ ವಸಿಷ್ಠರ ಮಾತಿಗೆ ತಲೆದೂಗಿದರು. ಶ್ರೀರಾಮನೂ ಅಂಗೀಕರಿಸಿದನು. ಭರತನು ತಾನು ತಂದಿದ್ದ ಪಾದುಕೆಗಳನ್ನು ಶ್ರೀರಾಮನ ಮುಂದಿಟ್ಟನು. ವಸಿಷ್ಠರು ''ರಾಮ, ನೀನು ಈ ಎರಡು ಪಾದುಕೆಗಳ ಮೇಲೆ ನಿಂತು ಅನಂತರ ಅವುಗಳನ್ನು ಭರತನಿಗೆ ಕೊಡು'' ಎಂದರು. ರಾಘವನು ಗುರುಗಳ ಆಜ್ಞೆಯಂತೆ ಪಾದುಕೆಗಳ ಮೇಲೆ ನಿಂತು ಆಮೇಲೆ ಅವುಗಳನ್ನು ಭರತನಿಗೆ ಒಪ್ಪಿಸಿದನು. ಭರತನು ವಿನಯದಿಂದ ಆ ಪಾದುಕೆಗಳನ್ನು ತೆಗೆದುಕೊಂಡು ತನ್ನ ತಲೆಯ ಮೇಲಿಟ್ಟುಕೊಂಡನು. ಅನಂತರ ಶ್ರೀರಾಮನಿಗೆ ಪ್ರದಕ್ಷಿಣೆ ಮಾಡಿ ಆ ಪಾದುಕೆಗಳನ್ನು ಪಟ್ಟದಾನೆಯ ಶಿರಸ್ಸಿನ ಮೇಲೆ ಇಟ್ಟನು. ಅಲ್ಲದೆ ಶ್ರೀ ರಾಮನನ್ನು ಕುರಿತು ''ರಘುನಂದನ, ಇನ್ನು ಹದಿನಾಲ್ಕು ವರ್ಷಗಳವರೆಗೆ ನಾನು ಜಟೆಯನ್ನು ಧರಿಸಿ ನಾರು ಬಟ್ಟೆಯನ್ನುಟ್ಟು ಅಯೋಧ್ಯಾನಗರದ ಹೊರಗೆ ವಾಸಮಾಡುವೆನು. ಫಲಮೂಲಗಳೇ ನನಗೆ ಆಹಾರ. ಸಮಸ್ತ ರಾಜ್ಯಭಾರವೂ ನಿನ್ನ ಪಾದುಕೆಗಳ ಹೆಸರಿನಲ್ಲಿ ನಡೆಯುವುದು. ನೀನು ಬರುವುದನ್ನೇ ಕಾದುಕೊಂಡಿರುವೆನು. ಹದಿನಾಲ್ಕು ವರ್ಷಗಳು ಕಳೆದು ಮಾರನೆಯ ದಿನವೇ ನಿನ್ನ ದರ್ಶನವಾಗದಿದ್ದರೆ ಬೆಂಕಿಯಲ್ಲಿ ಬೀಳುವೆನು. ಇದು ಸತ್ಯ'' ಎಂದು ಪ್ರತಿಜ್ಞೆ ಮಾಡಿದನು. ಶ್ರೀರಾಮನು ಭರತ ಶತ್ರುಘ್ನರನ್ನು ಅಪ್ಪಿಕೊಂಡು ಭರತನನ್ನು ಕುರಿತು ''ತಮ್ಮ, ನೀನು ಹೇಳಿದಂತಾಗಲಿ. ಕೈಕೇಯಿ ನಮ್ಮ ತಾಯಿ. ಅವಳನ್ನು ಗೌರವದಿಂದ ನೋಡಿಕೊಳ್ಳುತ್ತಿರು. ಎಂದಿಗೂ ಅವಳ ಮೇಲೆ ನೀನು ಕೋಪಿಸಿಕೊಳ್ಳಬಾರದು. ಇದು ನನ್ನ ಆಣೆ. ಸೀತೆಯ ಆಣೆ'' ಎಂದು ನುಡಿದು ಭರತನನ್ನು ಬೀಳ್ಕೊಂಡನು. ಅನಂತರ ತನ್ನ ಗುರುಹಿರಿಯರಿಗೂ ಮಂತ್ರಿ ಪ್ರಜೆಗಳಿಗೂ ಯಥೋಚಿತವಾಗಿ ಸಮಾಧಾನವನ್ನು ಹೇಳಿ, ವನವಾಸ ಕಳೆದೊಡನೆ ಬರುವೆನೆಂದು ತಿಳಿಸಿದನು. ಬಳಿಯಲ್ಲಿ ನಿಂತಿದ್ದ ಕೌಸಲ್ಯೆ, ಸುಮಿತ್ರೆ, ಕೈಕೇಯಿ ಮೊದಲಾದವರ ಕಣ್ಣಲ್ಲಿ ಕಂಬನಿ ತುಂಬಿ ಹರಿಯುತ್ತಿತ್ತು. ದುಃಖದಿಂದ ಕಂಠವು ಬಿಗಿದುಬಂದಿತ್ತು. ಅವರ ಬಾಯಿಯಿಂದ ಶಬ್ದವೇ ಹೊರಡಲಿಲ್ಲ. ಶ್ರೀರಾಮನು ಅವರೆಲ್ಲರಿಗೂ ನಮಸ್ಕರಿಸಿ ಕಂಬನಿಯನ್ನು ಮಿಡಿಯುತ್ತ ತನ್ನ ಪರ್ಣಶಾಲೆಯೊಳಗೆ ಹೋದನು.

ಹೀಗೆ ಭರತನು ಶ್ರೀರಾಮನನ್ನು ಬೀಳ್ಕೊಂಡು ಶೋಕಾರ್ತನಾಗಿಯೇ ಒಂದು ಬಗೆಯಲ್ಲಿ ತನ್ನನ್ನು ಸಂತೈಸಿಕೊಳ್ಳುತ್ತಾ ಶತ್ರುಘ್ನನೊಡನೆ ರಥವನ್ನೇರಿದನು. ಪರಿವಾರ ದವರೆಲ್ಲರೂ ಹಿಂಬಾಲಿಸಿದರು. ದಾರಿಯಲ್ಲಿ ಭರದ್ವಾಜ ಮುನಿಗಳ ಆಶ್ರಮಕ್ಕೆ ಹೋಗಿ

ನಡೆದ ಸಂಗತಿಯೆಲ್ಲವನ್ನೂ ಯಥಾರ್ಥವಾಗಿ ತಿಳಿಸಿ ''ಮಹರ್ಷಿಗಳೆ, ನನ್ನ ಮೇಲೆ ಕೃಪಾದೃಷ್ಟಿ ಇರಬೇಕು'' ಎಂದು ಬೇಡಿಕೊಂಡು ಅಯೋಧ್ಯೆಯ ಕಡೆಗೆ ಪ್ರಯಾಣ ಮಾಡಿದನು.

ಅಯೋಧ್ಯೆಯನ್ನು ನೋಡುತ್ತಲೇ ಭರತನ ದುಃಖವು ಮರುಕಳಿಸಿತು. ಅವನು ಸಾರಥಿಯನ್ನು ಕುರಿತು ''ಸುಮಂತ್ರ, ಅಯೋಧ್ಯೆ ಈಗ ಹೇಗೆ ಹಾಳುಬಿದ್ದಿದೆ, ನೋಡು. ಆನಂದದ ಸೊಲ್ಲೇ ಇಲ್ಲ'' ಎಂದು ಗೋಳಾಡಿದನು. ಮಂಕು ಕವಿದಂತಿದ್ದ ಅಯೋಧ್ಯೆಯನ್ನು ನೋಡಿ ಭರತನು ನಾನಾ ವಿಧವಾಗಿ ಹಲುಬುತ್ತ ಶೂನ್ಯವಾಗಿದ್ದ ತಂದೆಯ ಅರಮನೆಯನ್ನು ಪ್ರವೇಶಿಸಿದನು. ಅನಂತರ ದೃಢಸಂಕಲ್ಪನಾದ ಆ ರಾಜಪುತ್ರನು ತನ್ನ ಮಾತೆಯರೆಲ್ಲರೂ ಅಯೋಧ್ಯೆಯಲ್ಲಿರುವಂತೆ ವ್ಯವಸ್ಥೆ ಮಾಡಿ ತನ್ನ ಗುರುಗಳಾದ ವಸಿಷ್ಠರನ್ನೂ, ಸಚಿವರನ್ನೂ ಕುರಿತು ''ಮಾನ್ಯರೆ, ನಾನು ನಂದಿಗ್ರಾಮದಲ್ಲಿ ವಾಸಮಾಡಬೇಕೆಂದು ಸಂಕಲ್ಪಿಸಿದ್ದೇನೆ. ನಿಮ್ಮೆಲ್ಲರ ಅನುಜ್ಞೆಯನ್ನು ಬೇಡುತ್ತೇನೆ. ನನ್ನ ಅಣ್ಣನು ಯಾವಾಗ ಹಿಂದಿರುಗಿ ಬರುವನೆಂಬುದನ್ನು ಕಾದುಕೊಂಡಿರುತ್ತೇನೆ. ಈ ಪಾದುಕೆಗಳೇ ರಾಜ್ಯಭಾರವನ್ನು ನಡೆಸುತ್ತವೆ. ಶ್ರೀರಾಮನೇ ಈ ಕೋಸಲ ದೇಶಕ್ಕೆ ಅಧಿಪತಿ ಎಂಬುದು ತಿಳಿದಿರಲಿ'' ಎಂದು ನುಡಿದು ಅವರ ಅನುಮತಿಯಂತೆ ಶತ್ರುಘ್ನನೊಡನೆ ನಂದಿಗ್ರಾಮಕ್ಕೆ ಹೋದನು. ಅಲ್ಲಿ ಶ್ರೀರಾಮನ ಪಾದುಕೆಗಳನ್ನು ತನ್ನ ಶಿರಸ್ಸಿನ ಮೇಲಿಟ್ಟುಕೊಂಡು ವಸಿಷ್ಠರೇ ಮೊದಲಾದ ಹಿರಿಯರನ್ನು ನೋಡಿ, ''ಪೂಜ್ಯರೆ, ಈ ರಾಜ್ಯವನ್ನು ನನ್ನ ಅಣ್ಣನು ನ್ಯಾಸರೂಪವಾಗಿ ನನ್ನಲ್ಲಿ ಇಟ್ಟಿದ್ದಾನೆ. ಅವನ ಪ್ರತಿನಿಧಿಗಳಾದ ಈ ಪಾದುಕೆಗಳು ರಾಜ್ಯದ ಯೋಗಕ್ಷೇಮಗಳನ್ನು ನಿರ್ವಹಿಸುತ್ತವೆ'' ಎಂದು ನುಡಿದು ಆ ಪಾದುಕೆಗಳನ್ನು ಸಿಂಹಾಸನದ ಮೇಲಿಟ್ಟು, ನಮಸ್ಕರಿಸಿದನು. ''ಇವು ನನ್ನ ಅಣ್ಣನ ಪಾದಗಳೆಂದು ತಿಳಿಯಿರಿ. ಶ್ವೇತಚ್ಛತ್ರವನ್ನು ಹಿಡಿಯಿರಿ'' ಎಂದು ಸಚಿವರಿಗೆ ತಿಳಿಸಿ, ಆ ಪಾದುಕೆಗಳಿಗೇ ಪಟ್ಟಾಭಿಷೇಕ ಮಾಡಿದನು. ಆ ಭ್ರಾತೃವತ್ಸಲನು ಪ್ರಜೆಗಳ ಕಡೆಗೆ ತಿರುಗಿ ''ಶ್ರೀರಾಮನು ಹಿಂದಿರುಗಿ ಬಂದು ಪಟ್ಟಾಭಿಷಿಕ್ತನಾದಾಗ ಮಾತ್ರ ನನ್ನ ಪಾಪವು ತೊಳೆದೀತು'' ಎಂದು ಕಣ್ಣೀರು ಸುರಿಸುತ್ತ ನುಡಿದನು. ಹೀಗೆ ಭರತನು ಪಾದುಕೆಗಳಿಗೆ ಪಟ್ಟಾಭಿಷೇಕ ಮಾಡಿ ರಾಜಕಾರ್ಯಗಳೆಲ್ಲವನ್ನು ಪ್ರತಿ ದಿನ ಆ ಪಾದುಕೆಗಳಿಗೆ ಅರಿಕೆಮಾಡಿಕೊಳ್ಳುತ್ತ ಬೆಲೆಬಾಳುವ ಕಾಣಿಕೆಯು ಬಂದರೆ ಪಾದುಕೆಗಳ ಎದುರಿಗೆ ಇಟ್ಟು ನಿವೇದಿಸುತ್ತ, ಕೋಸಲ ರಾಜ್ಯವನ್ನು ಯಥಾಕ್ರಮವಾಗಿ ರಾಜನಿಯಮಗಳಂತೆ ಪಾಲಿಸತೊಡಗಿದನು. ತಾನು ಮಾತ್ರ ಶತ್ರುಘ್ನನೊಡನೆ ಜಟಾಧಾರಿಯಾಗಿ ನಾರುಬಟ್ಟೆಯುಟ್ಟು ತಣ್ಣೀರು ಸ್ನಾನಮಾಡಿ ಕೇವಲ ಫಲಮೂಲಗಳನ್ನು ತಿನ್ನುತ್ತ ರಾಜಕಾರ್ಯದಲ್ಲಿ ತೊಡಗಿದನು.

ಇತ್ತಲಾಗಿ ಭರತನು ಹೊರಟುಹೋದ ಮೇಲೆ ಶ್ರೀರಾಮನಿಗೆ ಚಿತ್ರಕೂಟ ವಾಸವು ಹಿಡಿಸಲಿಲ್ಲ. ''ಈ ಸ್ಥಳದಲ್ಲಿ ಭರತನನ್ನೂ ಮಾತೆಯರನ್ನೂ ಪ್ರಜಾಪರಿವಾರ ಗಳನ್ನೂ ನೋಡಿದೆನು. ಭರತನು ಎಂಥ ಮಹಾಪುರುಷ! ಇಲ್ಲಿದ್ದರೆ ಮತ್ತೆ ಮತ್ತೆ ಅವನ ನೆನಪಾಗಿ ದುಃಖವಾಗುತ್ತದೆ'' ಎಂದು ನುಡಿದು ಸೀತಾಲಕ್ಷ್ಮಣರೊಡನೆ ಅಲ್ಲಿಂದ ಹೊರಟನು. ಮುಂದೆ ಅತ್ರಿಮುನಿಗಳ ಆಶ್ರಮಕ್ಕೆ ಹೋಗಿ ಅವರನ್ನು ಸಂದರ್ಶಿಸಿ ದನು. ಆ ಮುನಿಗಳು ತಮ್ಮ ಮಕ್ಕಳನ್ನು ಕಂಡಂತೆ ಆ ಮೂವರನ್ನೂ ಪ್ರೀತಿಯಿಂದ ಸ್ವಾಗತಿಸಿ ಉಪಚರಿಸಿದರು. ಅನಂತರ ತಮ್ಮ ಪತ್ನಿಯೂ ವೃದ್ಧೆಯೂ ಆದ ಅನಸೂಯಾದೇವಿಯನ್ನು ಕರೆದು ಈ ಮೂವರನ್ನೂ ಅವಳಿಗೆ ತೋರಿಸಿದರು. ಅನಸೂಯೆಯನ್ನು ಕುರಿತು ''ಅನುಸೂಯೆ, ಇವಳು ವೈದೇಹಿ. ಇವಳನ್ನು ಒಳಗೆ ಕರೆದು ಉಪಚರಿಸು'' ಎಂದು ನುಡಿದರು. ಸ್ತ್ರೀಯರಿಬ್ಬರೂ ಮಾತಾಡಿಕೊಳ್ಳುತ್ತಿರಲಿ ಎಂಬುದು ಆ ಮಹರ್ಷಿಗಳ ಆಶಯ. ಶ್ರೀರಾಮನು ಒಳಗೆ ಹೋಗುವಂತೆ ತನ್ನ ಪತ್ನಿಗೆ ತಿಳಿಸಿದನು. ಸೀತೆಯು ಒಳಗೆ ಹೋಗಿ ಅನಸೂಯೆಗೆ ನಮಸ್ಕರಿಸಿದಳು. ಅನಸೂಯೆ ಬಹಳ ವೃದ್ಧೆ. ದೇಹವು ಸುಕ್ಕುಗಟ್ಟಿತ್ತು, ಮುಪ್ಪಿನಿಂದ ತಲೆಗೂದಲು ಬೆಳ್ಳಗಾಗಿತ್ತು, ಬಾಳೆಯ ಗಿಡದಂತೆ ಶರೀರವು ನಡುಗುತ್ತಿತ್ತು, ಮಹಾತಪಸ್ವಿನಿಯಾದ ಆಕೆಗೆ ಧರ್ಮಶೀಲೆಯೂ, ಪತಿವ್ರತಾ ಶಿರೋಮಣಿಯೂ ಆದ ಸೀತಾದೇವಿಯನ್ನು ಕಂಡು ಆನಂದವಾಯಿತು. ಅವಳು ಪ್ರೀತಿಯಿಂದ ''ಸೀತೆ, ಪತಿಯ ಕಷ್ಟದಲ್ಲಿ ಭಾಗಿಯಾಗಿ ಅರಣ್ಯಕ್ಕೆ ಬಂದಿದ್ದೀಯೆ. ರಾಜಕುಮಾರಿ ಎಂಬ ಹೆಮ್ಮೆಯನ್ನು ತೊರೆದು ಸಕಲ ಸಂಪತ್ತುಗಳನ್ನೂ ಅಲಕ್ಷಿಸಿ ಕಾಡಿಗೆ ಬಂದಿದ್ದೀಯೆ. ಇದು ಪತಿವ್ರತೆಯ ಲಕ್ಷಣ. ನಾನು ಎಷ್ಟೋ ರೀತಿಯಲ್ಲಿ ಆಲೋಚಿಸಿ ನೋಡಿದ್ದೇನೆ. ಪತಿಗಿಂತ ಹೆಚ್ಚಿನ ಇನ್ನೊಬ್ಬ ಆಪ್ತನು ಸ್ತ್ರೀಯರಿಗಿಲ್ಲ. ನೀನು ಪುಣ್ಯಾತ್ಮಳು'' ಎಂದು ನುಡಿದಳು. ಆಗ ವೈದೇಹಿಯು ''ಆರ್ಯೆ, ಪೂಜ್ಯಳಾದ ನೀನು ನನಗೆ ಬುದ್ಧಿವಾದವನ್ನು ಹೇಳಿ ಅನುಗ್ರಹಿಸಿದ್ದೀಯೆ. ನನ್ನ ಪತಿಯು ಸಕಲಗುಣ ಸಂಪನ್ನನೂ ಧರ್ಮಾತ್ಮನೂ ಆಗಿದ್ದಾನೆ. ಆ ವೀರನು ನನ್ನ ತಾಯಿತಂದೆಗಳಂತೆ ನನ್ನನ್ನು ನೋಡಿಕೊಳ್ಳುತ್ತಿದ್ದಾನೆ. ನನ್ನ ಪುಣ್ಯದಿಂದ ಇಂದು ನಿನ್ನ ದರ್ಶನವಾಯಿತು'' ಎಂದಳು. ಆಮೇಲೆ ಆ ತಪಸ್ವಿನಿಯು, ''ವತ್ಸೆ, ರಾಮನು ಶಿವಧನುಸ್ಸನ್ನು ಮುರಿದು ನಿನ್ನನ್ನು ಮದುವೆಯಾದನೆಂದು ಕೇಳಿದ್ದೇನೆ. ಆ ಕಥೆಯನ್ನು ನಿನ್ನ ಬಾಯಿಯಿಂದಲೇ ಕೇಳಬೇಕೆಂದು ಇಚ್ಛೆಯಾಗಿದೆ! ಹೇಳು''ಎಂದಳು. ಜಾನಕಿಯು ನಸುನಗುತ್ತ ಆ ಕಥೆಯೆಲ್ಲವನ್ನೂ ವಿವರವಾಗಿ ತಿಳಿಸಿದಳು. ಆಮೇಲೆ ''ಆರ್ಯೆ, ಶಿವಧನುಸ್ಸನ್ನು ಮುರಿದಾಗ ನನ್ನ ತಂದೆ ಜನಕರಾಜನು ತನ್ನ ಪ್ರತಿಜ್ಞೆಯಂತೆ ನನ್ನನ್ನು ಈ ದಶರಥ ಪುತ್ರನಿಗೆ ಮದುವೆ ಮಾಡಿಕೊಡಲು ಸಿದ್ಧನಾದನು. ಆಗ ಈ ಪುಣ್ಯಾತ್ಮನು ಏನು ಹೇಳಿದನು ಗೊತ್ತೇ? ''ವಿಶ್ವಾಮಿತ್ರ ಮುನಿಗಳ ಆಜ್ಞೆಯಂತೆ ಧನುಸ್ಸನ್ನೆತ್ತಿ

ಹೆದೆಯನ್ನು ಮೀಟಿದೆನು. ಧನುಸ್ಸು ಮುರಿದು ಹೋಯಿತು. ನನ್ನ ಕರ್ತವ್ಯ ಅಷ್ಟೆ. ಮದುವೆಯಾಗುವ ವಿಷಯದಲ್ಲಿ ನನ್ನ ತಂದೆ ದಶರಥಮಹಾರಾಜನು ಒಪ್ಪಬೇಕು'' ಎಂದು ಬಿಟ್ಟನು! ಆಗ ನನ್ನ ತಂದೆ ದಶರಥ ಮಹಾರಾಜನ ಬಳಿಗೆ ದೂತರನ್ನು ಕಳಿಸಿ ಆ ಮಹಾರಾಜನನ್ನು ಬರಮಾಡಿಕೊಂಡನು. ಅವನು ಎದುರಿಗೆ ಬಂದು ಮದುವೆಗೆ ಒಪ್ಪಿದ ಮೇಲೆ ಈ ಮಹಾಪುರುಷನು ನನ್ನ ಪಾಣಿಗ್ರಹಣ ಮಾಡಿದನು! ಅಲ್ಲಿಂದ ನಾನು ಮಹಾವೀರನೂ, ಧರ್ಮಾತ್ಮನೂ ಆದ ನನ್ನ ಪತಿಯಲ್ಲಿ ಅನುರಕ್ತಳಾಗಿ ಅವನನ್ನು ಹಿಂಬಾಲಿಸಿಕೊಂಡಿದ್ದೇನೆ'' ಎಂದಳು. ಹೀಗೆ ಸಂಭಾಷಿಸುತ್ತಿದ್ದಾಗ ಆ ವೃದ್ಧ ತಪಸ್ವಿನಿಯು ''ಸೀತೆ, ನೀನು ಬಹಳ ಚೆನ್ನಾಗಿ ಮಾತಾಡುತ್ತಿದ್ದೀಯೆ! ನನಗೆ ತುಂಬ ಸಂತೋಷವಾಯಿತು'' ಎಂದು ನುಡಿದು ಒಂದು ಉತ್ತಮವಾದ ಸೀರೆಯನ್ನೂ ಚಿನ್ನದ ಒಡವೆಗಳನ್ನೂ ತಂದಿಟ್ಟು ''ಮಗಳೆ, ದೇವತಾನುಗ್ರಹದಿಂದ ಇದು ನನಗೆ ದೊರಕಿದೆ. ಇದೆಲ್ಲವನ್ನೂ ನಿನಗೆ ಕೊಡುತ್ತೇನೆ. ಸ್ವೀಕರಿಸು'' ಎಂದು ಹೇಳಿ ಅದೆಲ್ಲವನ್ನೂ ಸೀತೆಯ ಕೈಗೆ ಕೊಟ್ಟಳು. ಅನಂತರ ''ಸೀತೆ, ಈಗ ನನ್ನ ಕಣ್ಣೆದುರಿಗೆ ಈ ಸೀರೆಯನ್ನುಟ್ಟು ಒಡವೆಗಳನ್ನು ಹಾಕಿಕೊ. ನಿನ್ನನ್ನು ನೋಡಿ ಸಂತೋಷ ಪಡುತ್ತೇನೆ!'' ಎಂದಳು. ವೈದೇಹಿಯು ಅದೊಂದು ಆಜ್ಞೆಯೆಂದು ಭಾವಿಸಿ ಹಾಗೆಯೇ ಮಾಡಿದಳು. ಆ ವೃದ್ಧೆಯು ಮತ್ತೆ ಮತ್ತೆ ಸೀತೆಯನ್ನು ನೋಡಿ ಹಿಗ್ಗುತ್ತಾ ''ಕಲ್ಯಾಣಿ, ನಿನಗೆ ಮಂಗಳವಾಗಲಿ! ಬಹಳ ಹೊತ್ತಾಯಿತು. ನೀನು ಪತಿಯ ಬಳಿಗೆ ಹೋಗು'' ಎಂದಳು. ಸೀತೆಯು ಆ ತಪಸ್ವಿನಿಗೆ ಭಕ್ತಿಯಿಂದ ನಮಸ್ಕರಿಸಿ ಹೊರಗಡೆ ಬಂದಳು. ದಿವ್ಯವಸ್ತ್ರವನ್ನುಟ್ಟು, ದಿವ್ಯಾಲಂಕಾರಗಳನ್ನು ಧರಿಸಿದ್ದ ಸೀತೆಯನ್ನು ಶ್ರೀರಾಮನು ಕಣ್ಣರಳಿಸಿ ವಿಸ್ಮಯದಿಂದ ನೋಡಿದನು. ಅತ್ರಿ ಮಹರ್ಷಿಗಳು ಆಶ್ರಮದಲ್ಲಿಯೇ ಆ ರಾತ್ರಿ ಉಳಿಯಬೇಕೆಂದು ಆ ಮೂವರನ್ನು ಉಳಿಸಿಕೊಂಡರು. ರಾತ್ರಿ ಕಳೆಯಿತು. ಪುರುಷಶ್ರೇಷ್ಠರಾದ ರಾಮ ಲಕ್ಷ್ಮಣರು ಪ್ರಾತಃಕೃತ್ಯಗಳನ್ನು ಮುಗಿಸಿ ಅತ್ರಿಮುನಿಗಳ ಬಳಿಗೆ ಬಂದು ಮುಂದೆ ಪ್ರಯಾಣ ಮಾಡಲು ಅವರ ಅನುಜ್ಞೆಯನ್ನು ಬೇಡಿದರು. ಅತ್ರಿ ಮುನಿಗಳು ''ರಾಘವ, ಈ ಮಹಾರಣ್ಯದಲ್ಲಿ ನರಭಕ್ಷಕರಾದ ರಾಕ್ಷಸರಿದ್ದಾರೆ. ಕ್ರೂರ ಜಂತುಗಳೂ ಇಲ್ಲಿವೆ. ನೀವು ಎಚ್ಚರದಿಂದ ಸಂಚರಿಸಬೇಕು. ಈ ರಾಜಕುಮಾರಿಯನ್ನು ಕಾವಲಾಗಿ ನೋಡಿಕೊಳ್ಳುತ್ತಿರಿ. ಇದೊ, ಈ ದಾರಿಯನ್ನು ಹಿಡಿದರೆ ನೀನು ದಂಡಕಾರಣ್ಯಕ್ಕೆ ಹೋಗಲು ಸಾಧ್ಯವಾಗುತ್ತದೆ'' ಎಂದರು. ಅಲ್ಲಿದ್ದ ಋಷಿಗಳೆಲ್ಲರೂ ರಾಮ, ಲಕ್ಷ್ಮಣ, ಸೀತೆಯರಿಗೆ ಆಶೀರ್ವಾದ ಮಾಡಿದರು. ಅನಂತರ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಮುಂದಕ್ಕೆ ಹೊರಟನು. ಮೇಘ ಮಂಡಲ ವನ್ನು ಭೇದಿಸಿಕೊಂಡು ಸೂರ್ಯನು ನುಗ್ಗಿಹೋಗುವಂತೆ ತೇಜಸ್ವಿಯಾದ ಶ್ರೀರಾಮಚಂದ್ರನು ದಂಡಕಾರಣ್ಯವನ್ನು ಪ್ರವೇಶಿಸಿದನು.

ಅರಣ್ಯಕಾಂಡ

೨೫

ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯದಲ್ಲಿದ್ದ ಋಷಿಗಳನ್ನು ಸಂದರ್ಶಿಸುವುದು. ವಿರಾಧನನ್ನು ಹಳ್ಳದಲ್ಲಿ ಹೂಳುವುದು. ಶರಭಂಗ ಮುನಿಗಳ ಅಗ್ನಿಪ್ರವೇಶ. ಸುತೀಕ್ಷ್ಣರ ಸಂದರ್ಶನ.

ಮಹಾಪರಾಕ್ರಮಿಯೂ ಧೀರನೂ ಆದ ಶ್ರೀರಾಮನು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯವನ್ನು ಪ್ರವೇಶಿಸಿ, ಅಲ್ಲಿರುವ ಲತಾ, ವೃಕ್ಷ, ಗಿರಿ, ನದಿ ಮೊದಲಾದವುಗಳನ್ನು ನೋಡುತ್ತ ಹೋಗುತ್ತಿದ್ದನು. ವನವಾಸಿಗಳಾದ ಸ್ತ್ರೀಪುರುಷರು ಈ ಮೂವರ ದೇಹಸಂಪತ್ತು, ಸೌಂದರ್ಯ, ತೇಜಸ್ಸುಗಳಿಂದ ಆಕೃಷ್ಟರಾಗಿ ವಿಸ್ಮಯಗೊಂಡು ಇವರು ಯಾರಿರಬಹುದೆಂದು ಕುತೂಹಲದಿಂದ ಅಲ್ಲಲ್ಲಿ ನಿಂತು ನೋಡುತ್ತಿದ್ದರು. ರಾಮಲಕ್ಷ್ಮಣರ ಹಿಂದೆ ರಾಜಕುಮಾರಿಯಾದ ಜಾನಕಿಯು ಹೋಗುತ್ತಿರುವಾಗ ವನವಾಸಿಗಳಾದ ಕೆಲವು ಸ್ತ್ರೀಯರು ಸೀತೆಯನ್ನು ಕುರಿತು ಕುತೂಹಲದಿಂದ ''ಏನಮ್ಮ ಅವರಿಬ್ಬರಲ್ಲಿ ನಿನ್ನ ಪತಿಯಾರು?'' ಎಂದು ಕೇಳಿದರು. ಸೀತೆಯು ನಸುನಗುತ್ತ ಲಕ್ಷ್ಮಣನ ಕಡೆಗೆ ಕೈ ಮಾಡಿ ''ಅದೋ, ಆ ರಾಜಕುಮಾರನು ನನ್ನ ಮೈದುನ!'' ಎಂದು ನುಡಿದು ಲಜ್ಜೆಯಿಂದ ಬೇಗ ಬೇಗನೆ ಹೆಜ್ಜೆ ಇಡುತ್ತ ಮುಂದೆ ಹೋದಳು. ಅರಣ್ಯದ ಕೆಲವು ಸ್ಥಳಗಳಲ್ಲಿ ಮಹಾತ್ಮರಾದ ಋಷಿಗಳು ಗುಡಿಸಲುಗಳನ್ನು ಕಟ್ಟಿಕೊಂಡು ವೇದಾಧ್ಯಯನ ಮಾಡುತ್ತ ತಪಸ್ಸಿನಲ್ಲಿ ನಿರತರಾಗಿದ್ದರು. ಅವರು ಈ ಮೂವರನ್ನು ಸ್ವಾಗತಿಸಿ, ಫಲಮೂಲಾದಿಗಳಿಂದ ಸತ್ಕರಿಸಿ ''ರಾಜಪುತ್ರ, ನಾವು ಯಾರಗೊಡವೆಗೂ ಹೋಗದೆ ಇಲ್ಲಿ ತಪಸ್ಸು ಮಾಡಿಕೊಂಡಿದ್ದೇವೆ. ಆದರೂ ಕೆಲವು ರಾಕ್ಷಸರು ಇದ್ದಕ್ಕಿದ್ದಂತೆ ಬಂದು ನಮ್ಮ ಅನುಷ್ಠಾನಗಳಿಗೆ ಅಡ್ಡಿಮಾಡುತ್ತಾರೆ. ನೀನು ಅನುಕಂಪದಿಂದ ನಮ್ಮನ್ನು ರಕ್ಷಿಸಬೇಕು'' ಎಂದು ರಾಘವನನ್ನು ಕೇಳುತ್ತಿದ್ದರು. ರಾಮಲಕ್ಷ್ಮಣರು ಅವರಿಗೆ ಅಭಯವನ್ನೀಯುತ್ತಾ ಮುಂದೆ ಸಾಗುತ್ತಿದ್ದರು. ಮುಂದೆ ಹೋಗುತ್ತ ಹೋಗುತ್ತ ದಟ್ಟವಾದ ಅಡವಿಯನ್ನು ಪ್ರವೇಶಿಸಬೇಕಾಯಿತು. ಅಲ್ಲಿ ವಿರಾಧನೆಂಬ ಒಬ್ಬ ಘೋರ ರಾಕ್ಷಸನು ಈ ಮೂವರನ್ನು ಕಂಡು ಗರ್ಜಿಸುತ್ತ ನುಗ್ಗಿಬಂದು ತರುಬಿ ನಿಂತನು. ರಾಮಲಕ್ಷ್ಮಣರ ಕಡೆಗೆ ತಿರುಗಿ ''ಎಲೈ ಯಾರು ನೀವು? ಋಷಿಗಳ ವೇಷದಲ್ಲಿರುವ ನೀವು ಈ ಹೆಂಗಸನ್ನು ಯಾಕೆ ಕರೆತಂದಿದ್ದೀರಿ? ಮುನಿಧರ್ಮಕ್ಕೆ ವಿರುದ್ಧವಾಗಿ ನಡೆಯುವ ನೀವು ಪಾಪಿಗಳು. ನಾನು ಈ

ತರುಣಿಯನ್ನು ಒಯ್ಯುತ್ತೇನೆ'' ಎಂದನು. ಆ ಮಾತನ್ನು ಕೇಳಿ ಶ್ರೀರಾಮನ ನೇತ್ರಗಳು ಕೆಂಪಡರಿದವು. ಅವನು ''ಎಲೈ ನೀಚ, ನೀನು ಮೃತ್ಯುವನ್ನು ಹುಡುಕಿಕೊಂಡು ಬಂದಂತೆ ಕಾಣುತ್ತದೆ. ಜೀವ ಸಹಿತನಾಗಿ ನೀನು ಮುಂದೆ ಹೋಗಲಾರೆ'' ಎಂದು ಹೇಳಿ ಧನುಸ್ಸಿಗೆ ಹೆದೆಯೇರಿಸಿ ನಿಶಿತವಾದ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳು ವಿರಾಧನ ದೇಹವನ್ನು ಭೇದಿಸಲಾಗಿ ರಕ್ತವು ಚಿಮ್ಮಿತು. ಆ ರಾಕ್ಷಸನು ಶೂಲವನ್ನೆತ್ತಿಕೊಂಡು ನುಗ್ಗಿದನು. ಶ್ರೀರಾಮನು ಎರಡು ಬಾಣಗಳಿಂದ ಶೂಲವನ್ನು ಕತ್ತರಿಸಿ ಹಾಕಲು, ಆ ರಾಕ್ಷಸನು ರಾಮ ಲಕ್ಷ್ಮಣರನ್ನು ಬಲವಾದ ತನ್ನ ತೋಳುಗಳಿಂದ ಅವಚಿ ಹಿಡಿದು ಬಾಲಕರನ್ನು ಎತ್ತಿಕೊಳ್ಳುವಂತೆ ಅವರನ್ನೆತ್ತಿ ತನ್ನ ಹೆಗಲ ಮೇಲೆ ಏರಿಸಿಕೊಂಡು ಅರಣ್ಯದೊಳಗೆ ಹೊರಟನು! ಸೀತಾದೇವಿಯು ತನ್ನ ತೋಳುಗಳನ್ನೆತ್ತಿ ''ಓ ರಾಕ್ಷಸ, ಆ ರಾಜಪುತ್ರರನ್ನು ಬಿಟ್ಟು ನನ್ನನ್ನೇ ಕೊಂದುಬಿಡು. ನಿನಗೆ ಕೈ ಮುಗಿಯುತ್ತೇನೆ'' ಎಂದು ಗೋಳಾಡಿದಳು. ಅಷ್ಟರಲ್ಲಿ ಸೌಮಿತ್ರಿಯು ವಿರಾಧನ ಎಡತೋಳನ್ನೂ ಶ್ರೀರಾಮನು ಅವನ ಬಲದೋಳನ್ನೂ ಕತ್ತರಿಸಿ ಬಿಟ್ಟರು. ರಾಕ್ಷಸನು ನೆಲದ ಮೇಲೆ ತತ್ತರಿಸಿ ಬಿದ್ದನು. ಅನಂತರ ರಾಮಲಕ್ಷ್ಮಣರು ತಮ್ಮ ಮುಷ್ಟಿ ಗಳಿಂದಲೂ ಪಾದಗಳಿಂದಲೂ ಆ ರಾಕ್ಷಸನನ್ನು ಗುದ್ದಿ ತಿವಿದು ಖಡ್ಗಗಳಿಂದ ಕಡಿದರೂ ಅವನು ಸಾಯಲಿಲ್ಲ. ಆಗ ಶ್ರೀರಾಮನು ಲಕ್ಷ್ಮಣನನ್ನು ನೋಡಿ ''ತಮ್ಮ, ಈ ರಾಕ್ಷಸನಿಗೆ ತಪೋಬಲವಿದೆ. ಶಸ್ತ್ರದಿಂದ ಇವನನ್ನು ಕೊಲ್ಲಲು ಸಾಧ್ಯವಿಲ್ಲ. ನೆಲದಲ್ಲಿ ಒಂದು ಗುಂಡಿಯನ್ನು ಮಾಡಿ ಇವನನ್ನು ಹೂತುಬಿಡೋಣ!'' ಎಂದು ಹೇಳಿ ಆ ವಿರಾಧನು ಅಲ್ಲಾಡದಂತೆ ಅವನ ಕತ್ತನ್ನು ಬಲವಾಗಿ ಮೆಟ್ಟಿ ನಿಂತನು. ಆಗ ವಿರಾಧನು ''ಹೇ ಪುರುಷೋತ್ತಮ, ನೀನು ಯಾರೆಂದು ನನಗೆ ಮೊದಲು ತಿಳಿಯದೇ ಹೋಯಿತು. ನೀನು ದಶರಥ ಪುತ್ರನಾದ ಶ್ರೀರಾಮನೇ ಹೌದು. ನಾನು ಕುಬೇರನ ಶಾಪದಿಂದ ಈ ರಾಕ್ಷಸ ದೇಹವನ್ನು ಪಡೆದೆನು. ತುಂಬುರು ಎಂದ ಗಂಧರ್ವ ನಾನು. ''ದಶರಥ ಪುತ್ರನಾದ ರಾಮನು ನಿನ್ನ ತೋಳುಗಳನ್ನು ಕತ್ತರಿಸಿದಾಗ ಈ ಶಾಪದ ಪರಿಹಾರವಾಗುವುದು'' ಎಂದು ಕುಬೇರನು ಹೇಳಿದ್ದನು. ಈಗ ನಿನ್ನ ಅನುಗ್ರಹದಿಂದ ಈ ಶಾಪದ ಬಿಡುಗಡೆಯಾಯಿತು. ಇಲ್ಲಿಗೆ ಸ್ವಲ್ಪ ದೂರದಲ್ಲಿ ಶರಭಂಗ ಮುನಿಯ ಆಶ್ರಮವಿದೆ. ಅವನನ್ನು ಭೇಟಿಮಾಡು. ನಿನಗೆ ಶ್ರೇಯಸ್ಸಾಗುವುದು. ನನ್ನನ್ನು ಆ ಗುಂಡಿಯಲ್ಲಿ ಹೂತು ಬಿಡು'' ಎಂದನು. ಆಗ ರಾಮಲಕ್ಷ್ಮಣರು ಆ ರಾಕ್ಷಸನ ದೇಹವನ್ನು ಒಂದು ಹಳ್ಳಕ್ಕೆ ತಳ್ಳಿ ಕಲ್ಲುಗಳಿಂದ ಮುಚ್ಚಿದರು. ಅನಂತರ ಸೀತೆಯನ್ನು ಸಂತೈಸಿ ಅವಳೊಡನೆ ಶರಭಂಗ ಮುನಿಗಳ ಆಶ್ರಮಕ್ಕೆ ಹೋದರು. ಅಲ್ಲೊಂದು ಆಶ್ಚರ್ಯವು ಕಾದಿತ್ತು. ತೇಜೋಮಯವಾದ ಒಂದು ಆಕೃತಿಯು ಭೂಮಿಯ ಮೇಲ್ಗಡೆ ರಥದಲ್ಲಿ ನಿಂತು ಶರಭಂಗ ಮುನಿಗಳೊಡನೆ ಮಾತನಾಡುತ್ತಿದ್ದುದು

ಕಾಣಿಸಿತು. ಶ್ರೀರಾಮನು ಲಕ್ಷ್ಮಣನಿಗೆ ಆ ದೃಶ್ಯವನ್ನು ತೋರಿಸಿ, ''ಸೌಮಿತ್ರಿ, ಅಲ್ಲಿ ನೋಡು. ಆತನು ದೇವೇಂದ್ರನೇ ಆಗಿರಬೇಕು. ಸುತ್ತಲೂ ನಿಂತಿರುವವರು ದೇವತೆಗಳು. ನೀವಿಬ್ಬರು ಇಲ್ಲೇ ನಿಂತಿರಿ. ನಾನೊಬ್ಬನೇ ಮುಂದೆ ಹೋಗಿ ಆತನು ಯಾರೆಂಬುದನ್ನು ನಿಶ್ಚಯಿಸಿಕೊಂಡು ಬರುತ್ತೇನೆ'' ಎಂದು ಹೇಳಿ ಮುಂದೆ ಹೋದನು. ರಥದಲ್ಲಿದ್ದವನು ದೇವೇಂದ್ರನೇ. ಅವನು ಶ್ರೀರಾಮನು ಬರುತ್ತಿರುವುದನ್ನು ಕಂಡು ಶರಭಂಗ ಮುನಿಗಳಿಗೆ ಅದನ್ನು ಸೂಕ್ಷ್ಮವಾಗಿ ತಿಳಿಸಿ ದೇವತೆಗಳೊಡನೆ ''ಅದೊ, ಶ್ರೀರಾಮನು ಬರುತ್ತಿದ್ದಾನೆ. ಅಸಾಧ್ಯವಾದ ಒಂದು ಮಹಾಕಾರ್ಯವು ಅವನಿಂದ ನಡೆಯಬೇಕಾಗಿದೆ. ಆ ಕಾರ್ಯವಾದ ಮೇಲೆ ಅವನನ್ನು ಸಂದರ್ಶಿಸುವುದು ಲೇಸು'' ಎಂದು ಹೇಳಿ ಬೇಗ ಬೇಗನೆ ಸ್ವರ್ಗಕ್ಕೆ ಹೊರಟುಹೋದನು.

ದೇವೇಂದ್ರನು ಹೊರಟುಹೋದ್ದರಿಂದ ಶ್ರೀರಾಮನು ಸೀತಾ ಲಕ್ಷ್ಮಣರೊಡನೆ ಆಶ್ರಮಕ್ಕೆ ಬಂದನು. ಮೂವರೂ ಆ ಮುನಿಗಳಿಗೆ ವಂದಿಸಿ ಅವರ ಅಭೀಷ್ಟದಂತೆ ಸತ್ಕಾರವನ್ನು ಸ್ವೀಕರಿಸಿದರು. ರಾಘವನು ದೇವೇಂದ್ರನ ಆಗಮನದ ವಿಷಯವಾಗಿ ಪ್ರಶ್ನೆಮಾಡಲು ಆ ಮುನಿಗಳು ''ರಾಜಪುತ್ರ, ದೇವೇಂದ್ರನು ನನ್ನನ್ನು ಬ್ರಹ್ಮಲೋಕಕ್ಕೆ ಕರೆದೊಯ್ಯಲು ಬಂದಿದ್ದನು. ಅದು ನನ್ನ ಉಗ್ರವಾದ ತಪಸ್ಸಿನ ಫಲ. ನೀನು ಬರುತ್ತಿರುವುದು ನನಗೆ ತಿಳಿಯಿತು. ನಿನ್ನಂಥ ಪ್ರಿಯನಾದ ಅತಿಥಿಯನ್ನು ಸತ್ಕರಿಸದೆ ಬ್ರಹ್ಮಲೋಕಕ್ಕೆ ಹೋಗಲು ನನಗೆ ಮನಸ್ಸು ಬರಲಿಲ್ಲ. ಧರ್ಮನಿಷ್ಠನೂ, ಮಹಾತ್ಮನೂ ಆದ ನಿನ್ನ ದರ್ಶನವಾಯಿತು. ನಾನು ಸಾಧಿಸಿದ ಪುಣ್ಯಲೋಕಗಳನ್ನು ನಿನಗೆ ಅರ್ಪಿಸ ಬೇಕೆಂದಿದ್ದೇನೆ'' ಎಂದರು. ಅದಕ್ಕೆ ಶ್ರೀರಾಮನು ವಿನಯದಿಂದ ''ಮಹರ್ಷಿಗಳೆ, ಆ ಪುಣ್ಯಲೋಕಗಳನ್ನು ನಾನೇ ಸಂಪಾದಿಸಿಕೊಳ್ಳುವೆನು. ನನಗೆ ಬೇಕಾಗಿರುವುದು ಈ ಅರಣ್ಯದಲ್ಲಿ ವಾಸಮಾಡಲು ಒಂದು ಸ್ಥಳ ಮಾತ್ರ!'' ಎಂದನು. ಆಗ ಶರಭಂಗರು ಆ ಮೂವರನ್ನೂ ಸತ್ಕರಿಸಿ ''ಪುರುಷೋತ್ತಮ, ಈ ಕಾಡಿನಲ್ಲಿ ಧಾರ್ಮಿಕರೂ ತಪಸ್ವಿ ಗಳೂ ಆದ ಸುತೀಕ್ಷ್ಣರೆಂಬ ತಪಸ್ವಿಗಳಿದ್ದಾರೆ. ಅವರು ನಿನಗೆ ವಾಸಿಸಲು ಯೋಗ್ಯ ಸ್ಥಳವನ್ನು ತೋರಿಸುವರು–ಅಲ್ಲಿಗೆ ಹೋಗುವ ದಾರಿ ಇದು'' ಎಂದು ದಾರಿಯ ಗುರುತನ್ನು ತಿಳಿಸಿ ''ವತ್ಸ, ಸ್ವಲ್ಪ ಹೊತ್ತು ಇಲ್ಲಿಯೇ ಇರು. ಹಾವು ತನ್ನ ಹಳೆಯ ಪರೆಯನ್ನು ಬಿಡುವಂತೆ ಈ ದೇಹವನ್ನು ತ್ಯಜಿಸುವೆನು'' ಎಂದು ನುಡಿದರು. ಆಮೇಲೆ ಶರಭಂಗರು ಅಗ್ನಿಯನ್ನು ವಿಧಿಪೂರ್ವಕವಾಗಿ ಅರ್ಚಿಸಿ ಜ್ವಾಲೆಯನ್ನೆಬ್ಬಿಸಿ ಅದರಲ್ಲಿ ಪ್ರವೇಶಿಸಿಬಿಟ್ಟರು. ನೋಡು ನೋಡುತ್ತಿರುವಂತೆ ಅವರ ದೇಹವು ಸುಟ್ಟು ಭಸ್ಮವಾಯಿತು. ರಾಘವನು ಸೀತಾಲಕ್ಷ್ಮಣರೊಡನೆ ವಿಸ್ಮಯದಿಂದ ನೋಡುತ್ತಿರಲು, ಜ್ವಾಲೆಯ ಮಧ್ಯದಿಂದ ಒಂದು ತೇಜೋಮೂರ್ತಿ ಎದ್ದಿತು. ಅವರೇ ಶರಭಂಗರು.

ಎಲ್ಲರೂ ನೋಡುತ್ತಿರುವಂತೆ ಅವರು ಅಂತರಿಕ್ಷಾಭಿಮುಖವಾಗಿ ಪ್ರಯಾಣ ಮಾಡಿ ಬ್ರಹ್ಮಲೋಕವನ್ನು ಸೇರಿದರು.

ಮುಂದೆ ಆ ಮೂವರೂ ಕಾಡಿನಲ್ಲಿ ಹೋಗುತ್ತಿರುವಾಗ ನಾನಾ ಬಗೆಯ ತಪೋನಿಷ್ಠೆಯಲ್ಲಿ ತೊಡಗಿದ್ದ ಋಷಿಗಳನ್ನು ಕಂಡರು. ಆ ಋಷಿಗಳು ರಾಘವನನ್ನು ಕುರಿತು ''ರಾಜಪುತ್ರ, ನಾವು ಈ ಅರಣ್ಯದಲ್ಲಿ ರಾಕ್ಷಸರ ಬಾಧೆಯಿಂದ ನರಳುತ್ತಿದ್ದೇವೆ. ನಿಷ್ಕಾರಣವಾಗಿ ಅವರು ಆಶ್ರಮದೊಳಗೆ ಬಂದು ನಮ್ಮನ್ನು ವಿನೋದಕ್ಕಾಗಿ ಹೊಡೆದು ಬಡಿದು ಗಾಯ ಗೊಳಿಸುತ್ತಾರೆ. ಅವರಿಗೆ ವಿನೋದ. ನಮಗೆ ಪ್ರಾಣ ಸಂಕಟ. ಆ ದುಷ್ಟರನ್ನು ಸಂಹರಿಸಿ ನಮ್ಮನ್ನು ಕಾಪಾಡಬೇಕೆಂದು ಬೇಡಿಕೊಳ್ಳುತ್ತೇವೆ'' ಎಂದರು. ಶ್ರೀರಾಮನು ''ಮಹಾತ್ಮರೆ, ನೀವು ಹೀಗೆ ದೈನ್ಯದಿಂದ ಬೇಡಿಕೊಳ್ಳ ಬಾರದು. ಈ ರೀತಿ ಮಾಡಬೇಕೆಂದು ನಮಗೆ ಆಜ್ಞಾಪಿಸಬೇಕು. ನಿಮ್ಮ ಆಜ್ಞೆಯನ್ನು ಪಾಲಿಸುವುದು ನಮ್ಮ ಕರ್ತವ್ಯ'' ಎಂದು ಹೇಳಿ ಅವರಿಗೆ ಅಭಯವನ್ನಿತ್ತು ಸುತೀಕ್ಷ್ಣ ಮುನಿಗಳ ಆಶ್ರಮದ ಕಡೆಗೆ ತೆರಳಿದನು.

ದಾರಿಯನ್ನು ತೋರಿಸುತ್ತ ಕೆಲವು ಬ್ರಾಹ್ಮಣರು ಅವರ ಜೊತೆಗೆ ಹೋದರು. ಆ ಘೋರಾರಣ್ಯದಲ್ಲಿ ನಿರಂತರ ತಪೋನಿರತರಾದ ಸುತೀಕ್ಷ್ಣ ಮುನಿಗಳು ಮಧುರ ವಾಣಿಯಿಂದ ''ನೀವು ಮೂವರೂ ಅರಣ್ಯಕ್ಕೆ ಬಂದಿದ್ದೀರೆಂದು ನಾನು ತಿಳಿದಿದ್ದೆ. ಉಳಿದ ದಿನಗಳನ್ನು ಇಲ್ಲಿಯೇ ನೀನು ಕಳೆಯಬಹುದು'' ಎಂದು ನುಡಿದು ಅವರನ್ನು ಸತ್ಕರಿಸಿದರು. ಅವರು ಆ ರಾತ್ರಿ ಅಲ್ಲಿಯೇ ಉಳಿದು ಪ್ರಾತಃ ಕಾಲದಲ್ಲಿ ಸಂಧ್ಯಾದಿ ವಿಧಿಗಳನ್ನು ನಡೆಸಿ ಸುತೀಕ್ಷ್ಣರ ಬಳಿಗೆ ಹೋಗಿ ವಂದಿಸಿದರು. ಶ್ರೀರಾಮನು ''ಮಹರ್ಷಿಗಳೇ, ನಿಮ್ಮ ಆಶ್ರಮದಲ್ಲಿ ರಾತ್ರಿಯನ್ನು ಸುಖವಾಗಿ ಕಳೆದೆವು. ಇನ್ನು ನಾವು ಬಿಸಿಲೇರುವುದರೊಳಗೆ ಮುಂದಕ್ಕೆ ಪ್ರಯಾಣ ಮಾಡುವೆವು. ಅನುಜ್ಞೆಯನ್ನು ನೀಡಬೇಕು'' ಎಂದನು. ಮುನಿಗಳು ''ಒಳ್ಳೆಯದು, ರಾಮ, ನಿನ್ನ ದಾರಿ ಸುಗಮ ವಾಗಲಿ. ಲಕ್ಷ್ಮಣ, ಸೀತೆ, ನೀವು ಶ್ರೀರಾಮನೊಡನೆ ಇರತಕ್ಕವರು. ನಿಮಗೆ ಕುಶಲವಾಗಲಿ. ನೀವೆಲ್ಲರೂ ಮತ್ತೊಮ್ಮೆ ಇಲ್ಲಿಗೆ ಬನ್ನಿರಿ'' ಎಂದು ಹೇಳಿ ವಾತ್ಸಲ್ಯದಿಂದ ಅವರನ್ನು ಬೀಳ್ಕೊಂಡರು. ವಿಶಾಲಾಕ್ಷಿಯಾದ ಸೀತೆಯು ಧನುಸ್ಸು, ಬತ್ತಳಿಕೆ, ಖಡ್ಗ ಮೊದಲಾದವುಗಳನ್ನು ಅಣ್ಣ ತಮ್ಮಂದಿರಿಗೆ ಕೊಟ್ಟು ಪ್ರಯಾಣಕ್ಕೆ ಅನುಕೂಲ ಪಡಿಸಿದಳು.

★

೨೬

ಅಹಿಂಸೆಯ ವಿಚಾರವಾಗಿ ಸೀತಾರಾಮರ ಸಂವಾದ. ಅಗಸ್ತ್ಯರ ಆಶ್ರಮಕ್ಕೆ ಪ್ರಯಾಣ. ಪಂಚವಟಿಯಲ್ಲಿ ಪರ್ಣಶಾಲೆಯ ನಿರ್ಮಾಣ.

ರಘುನಂದನನು ಸೀತಾಲಕ್ಷ್ಮಣರೊಡನೆ ಪ್ರಯಾಣ ಮಾಡುತ್ತಿರುವಾಗ ಜಾನಕಿಯು ತನ್ನ ಪತಿಯನ್ನು ಕುರಿತು ಇಂತೆಂದಳು. ''ಆರ್ಯಪುತ್ರ, ನೀನು ಮಹತ್ತರವಾದ ಧರ್ಮಮಾರ್ಗವನ್ನು ಹಿಡಿದಿದ್ದೀಯೆ. ಅಧರ್ಮದ ಲೇಶವೂ ನಿನ್ನ ಬಳಿಗೆ ಸುಳಿಯುವುದಿಲ್ಲ. ಆದರೆ ನಿಷ್ಕಾರಣವಾದ ಪರಹಿಂಸೆಯು ನಿನಗೀಗ ಗಂಟು ಬಿದ್ದಿತೆಂದು ನನಗೆ ತೋರುತ್ತದೆ. ಇಲ್ಲಿ ಸಂಚರಿಸುವ ರಾಕ್ಷಸರನ್ನು ನೀನು ಕೊಲ್ಲುವ ಸಂದರ್ಭ ಬರಬಹುದು.ನಮಗೆ ತಪ್ಪು ಮಾಡದೇ ಇರುವವರನ್ನು ಕೊಲ್ಲುವುದು ನನಗೆ ಇಷ್ಟವಿಲ್ಲ. ಆದ್ದರಿಂದ, ಆರ್ಯಪುತ್ರ, ಈ ಶಸ್ತ್ರಗಳನ್ನು ಹಿಡಿಯುವುದರಿಂದ ಹಿಂಸೆಯು ಸಂಭವಿಸುವುದು. ಯಾವುದಾದರೊಂದು ತಪೋವನದಲ್ಲಿ ನೆಲೆಸಿ ನಿರ್ಮಲಚಿತ್ತನಾಗಿ ತಪಸ್ಸನ್ನಾಚರಿಸುತ್ತಿರುವುದು ಯುಕ್ತವೆಂದು ನನಗೆ ತೋರುತ್ತದೆ. ನಿನ್ನೊಡನೆ ಸದಾ ತಪಸ್ವಿನಿಯಾಗಿಯೇ ಇರಲು ನನಗೆ ಬಯಕೆಯಾಗಿದೆ! ಆದರೆ ನಿನಗೆ ತಿಳಿಯದ ವಿಷಯವೇನಿದೆ? ಧರ್ಮ ಸೂಕ್ಷ್ಮತೆಯನ್ನು ನೀನು ಬಲ್ಲೆ. ಹೆಂಗಸರಿಗೆ ಸಹಜವಾದ ಚಾಪಲ್ಯದಿಂದ ನಾನು ಹೀಗೆ ಹೇಳಿಬಿಟ್ಟೆನು! ಅನ್ಯಥಾ ಭಾವಿಸಬೇಡ. ನಿನಗೆ ಧರ್ಮ ಸ್ವರೂಪವನ್ನು ಹೇಳಲು ಯಾರಿಗೆ ಸಾಮರ್ಥ್ಯವುಂಟು?'' ಎಂದು ನಯವಾಗಿ ನುಡಿದಳು. ವೈದೇಹಿಯು ಈ ನುಡಿಯನ್ನು ಕೇಳಿ ಶ್ರೀರಾಮನು ಹೀಗೆಂದನು : ''ಜಾನಕಿ, ನನ್ನಲ್ಲಿರುವ ಪ್ರೇಮದಿಂದ ಈ ಮಾತನ್ನಾಡಿದ್ದೀಯೆ. ನೀನು ದೊಡ್ಡ ವಂಶದಲ್ಲಿ ಹುಟ್ಟಿದವಳು. ಉದಾರವಾದ ಬುದ್ಧಿ ನಿನ್ನದು. ಆದರೆ ನಾನು ಹೇಳಬೇಕಾದ ಒಂದಂಶವುಂಟು. ಈ ದಂಡಕಾರಣ್ಯದಲ್ಲಿ ನೆಲೆಸಿರುವ ಧರ್ಮಾತ್ಮರಾದ ಋಷಿಗಳಿಗೆ ರಾಕ್ಷಸರು ನಿಷ್ಕಾರಣವಾಗಿ ಪೀಡೆಯನ್ನು ಕೊಡುತ್ತಿದ್ದಾರೆ. ಋಷಿಗಳೇ ಹೇಳಿದ್ದನ್ನು ನೀನು ಕೇಳಿದ್ದೀಯೆ. ಅವರೇ ನನ್ನ ಬಳಿಗೆ ಬಂದು ''ರಾಮ, ನಿನಗೆ ಶರಣಾಗತರಾಗಿದ್ದೇವೆ. ನಮ್ಮನ್ನು ರಕ್ಷಿಸು'' ಎಂದು ಹೇಳಿದರು. ಅದನ್ನು ಕೇಳಿ ನನಗೆ ನಾಚಿಕೆಯಾಯಿತು. ಈ ಪ್ರದೇಶವೆಲ್ಲವೂ ಕೋಸಲ ರಾಜ್ಯಕ್ಕೆ ಸೇರಿದ್ದು. ಈ ಋಷಿಗಳಿಗೆ ಅಭಯವನ್ನು ನೀಡದಿದ್ದ ಮೇಲೆ ನಾವೆಂತಹ ಕ್ಷತ್ರಿಯರು? ದುಷ್ಟರಾದ ರಾಕ್ಷಸರನ್ನು ಕೊಲ್ಲುವೆನೆಂದು ಮಾತುಕೊಟ್ಟಿದ್ದೇನೆ. ಕೊಟ್ಟ ಮಾತನ್ನು ನಾನು ಎಂದಿಗೂ ಮುರಿಯಲಾರೆನು. ಅವರನ್ನು ರಕ್ಷಿಸುವುದು ನನ್ನ ಕರ್ತವ್ಯ. ಪ್ರಿಯೆ–ಸೀತೆ, ನನ್ನ ಮೇಲಿನ ಪ್ರೇಮದಿಂದಲೂ, ಸಲಿಗೆಯಿಂದಲೂ ಈ ಮಾತನ್ನು ಹೇಳಿದ್ದೀಯೆ. ನನಗೆ ಆನಂದವಾಯಿತು. ನಿನ್ನ ವಂಶಕ್ಕೆ ಅನುರೂಪವಾದ ಮಾತು ನೀನು ಹೇಳಿದ್ದು. ನನಗೆ

ಪ್ರಾಣಕ್ಕಿಂತಲೂ ಪ್ರಿಯಳಾದವಳು ನೀನು. ನೀನು ಹೇಳಿದ್ದು ಯುಕ್ತವೇ ಹೌದು'' ಎಂದನು.

ಈ ಪ್ರಕಾರವಾಗಿ ಸಂಚರಿಸುತ್ತ, ದಂಡಕಾರಣ್ಯದಲ್ಲಿದ್ದ ವಿವಿಧಾಶ್ರಮಗಳಲ್ಲಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ವಾಸವಾಗಿದ್ದನು. ಹತ್ತು ವರ್ಷಗಳು ಕಳೆದವು. ಇನ್ನೂ ದಕ್ಷಿಣದ ಕಡೆಗೆ ಹೋಗಿ ಸ್ವಲ್ಪ ಕಾಲವನ್ನು ಕಳೆಯಬೇಕೆಂದು ನಿರ್ಧರಿಸಿ ಆ ಮೂವರೂ ದಕ್ಷಿಣದ ಕಡೆಗೆ ಪ್ರಯಾಣ ಮಾಡಿದರು. ಜೊತೆಯಲ್ಲಿ ಕೆಲವು ಋಷಿಗಳೂ ಹೋದರು. ಆ ಋಷಿಗಳು ಶ್ರೀರಾಮನಿಗೆ ದಾರಿಯನ್ನು ತೋರಿಸುತ್ತಾ ದಾರಿಯಲ್ಲಿ ಕಂಡ ವಿವಿಧ ವೈಚಿತ್ರ್ಯಗಳನ್ನು ತಿಳಿಸಿ ವರ್ಣಿಸುತ್ತಾ ಹೋದರು. ಮುಂದೆ ಅಗಸ್ತ್ಯ ಮುನಿಗಳ ಆಶ್ರಮವಿದೆಯೆಂದು ಹೇಳಿದಾಗ ಶ್ರೀರಾಮನು ಅವರ ದರ್ಶನವನ್ನು ಮಾಡಬೇಕೆಂದು ಕುತೂಹಲಾವಿಷ್ಟನಾದನು. ಭಗವಾನ್ ಅಗಸ್ತ್ಯರು ಅಸದೃಶವಾದ ತಪೋಮಹಿಮೆಯುಳ್ಳವರೆಂದು ಶ್ರೀರಾಮನಿಗೆ ಗೊತ್ತಿತ್ತು. ಆತನ ಮಾತಿನಂತೆ ಲಕ್ಷ್ಮಣನು ವಿಶಾಲವಾದ ಆಶ್ರಮದ ಬಾಗಿಲಿಗೆ ಹೋಗಿ ಅಲ್ಲಿದ್ದ ಶಿಷ್ಯರಿಗೆ ಶ್ರೀರಾಮನ ಆಗಮನ ವೃತ್ತಾಂತವನ್ನು ಮಹರ್ಷಿಗಳಿಗೆ ತಿಳಿಸಬೇಕೆಂದು ನುಡಿದನು. ಒಬ್ಬ ಶಿಷ್ಯನು ಒಳಗೆ ಹೋಗಿ ಈ ಸುದ್ದಿಯನ್ನು ನಿವೇದಿಸಿದಾಗ ಅಗಸ್ತ್ಯರು, ''ಬಹಳ ಒಳ್ಳೆಯದಾಯಿತು. ಶ್ರೀರಾಮನು ಯಾವಾಗ ಇಲ್ಲಿಗೆ ಬರುವನೋ ಎಂದು ನಾನು ಗುಣಿಸುತ್ತಲೇ ಇದ್ದೆ. ವತ್ಸ, ಬೇಗ ಹೋಗು. ಅವರೆಲ್ಲರನ್ನೂ ಇಲ್ಲಿಗೆ ಕರೆದುಕೊಂಡು ಬಾ'' ಎಂದರು. ಶಿಷ್ಯನು ಹೊರಗೆ ಬಂದು ಶ್ರೀರಾಮಾದಿಗಳಿಗೆ ಅಗಸ್ತ್ಯರ ಮಾತನ್ನು ತಿಳಿಸಿ ಆಶ್ರಮದೊಳಗೆ ಬರಬೇಕೆಂದು ನಿವೇದಿಸಿದನು. ಅಷ್ಟರಲ್ಲಿ ಆ ಮುನಿಗಳೇ ಇವರನ್ನು ಸ್ವಾಗತಿಸಲು ಬರುತ್ತಿದ್ದರು. ರಾಘವನು ''ಲಕ್ಷ್ಮಣ, ಅಲ್ಲಿ ನೋಡು! ತೇಜೋನಿಧಿಗಳಾದ ಅಗಸ್ತ್ಯ ಮುನಿಗಳೇ ಬರುತ್ತಿದ್ದಾರೆ. ತಪಸ್ಸಿನ ನಿಧಿ ಇವರು'' ಎಂದನು. ಈ ಮೂವರೂ ಮುಂದೆ ಹೋಗಿ ಅಗಸ್ತ್ಯರ ಪಾದಗಳಿಗೆ ವಂದಿಸಿ ಆನಂದದಿಂದ ಕೈಮುಗಿದು ನಿಂತುಕೊಂಡರು. ಮುನಿಗಳು ಆದರದಿಂದ ಅವರನ್ನು ಸ್ವಾಗತಿಸಿ ಗೃಹಸ್ಥ ಧರ್ಮದಂತೆ ಅತಿಥಿಸತ್ಕಾರ ಮಾಡಿ ಕಂದಮೂಲಾದ್ಯಾಹಾರಗಳಿಂದ ಭೋಜನ ಮಾಡಿಸಿದರು. ಆಮೇಲೆ ಆ ಮೂವರೂ ಅಗಸ್ತ್ಯ ಮುನಿಗಳನ್ನು ಕಂಡು ನಮಸ್ಕರಿಸಿ ಎದುರಿಗೆ ಕುಳಿತರು. ಮುನಿಗಳು ''ರಾಮ, ಅತ್ಯಂತ ಪ್ರಿಯನಾದ ಅತಿಥಿಯಾಗಿ ಬಂದಿದ್ದೀಯೆ. ಈ ಚಾಪವನ್ನು ನೋಡು. ವಿಶ್ವಕರ್ಮನು ನಿರ್ಮಿಸಿದ ದಿವ್ಯಚಾಪವಿದು. ಈ ಅಮೋಘಾಸ್ತ್ರವು ಬ್ರಹ್ಮದತ್ತವಾದದ್ದು. ಈ ಎರಡು ಬತ್ತಳಿಕೆಗಳನ್ನು ಇಂದ್ರನು ನನಗೆ ಕೊಟ್ಟಿದ್ದಾನೆ. ಇದರಲ್ಲಿರುವ ಬಾಣಗಳು ಅಕ್ಷಯವಾದವು. ಈ ದಿವ್ಯವಾದ ಖಡ್ಗವನ್ನು ನೋಡು. ಪೂರ್ವದಲ್ಲಿ ವಿಷ್ಣುವೇ ಈ

ಧನುಸ್ಸನ್ನು ಹಿಡಿದು ರಾಕ್ಷಸರನ್ನು ಸಂಹರಿಸಿದನು. ಈ ಎಲ್ಲ ಆಯುಧಗಳೂ ಆತನವೇ. ವೀರಾಗ್ರಣಿ–ರಾಮ, ಇವುಗಳನ್ನು ಸ್ವೀಕರಿಸು. ನಿನಗೆ ವಿಜಯವಾಗಲಿ'' ಎಂದು ಹರಸಿದರು. ರಘುನಂದನನು ಅವೆಲ್ಲವನ್ನೂ ವಿನಯದಿಂದ ಸ್ವೀಕರಿಸಿದನು.

ಅಗಸ್ತ್ಯ ಮುನಿಗಳು ಮತ್ತೆ ಹೀಗೆಂದರು : ''ರಾಮ, ನನಗೆ ಆನಂದವಾಯಿತು. ಲಕ್ಷ್ಮಣ, ನಿನ್ನ ಭ್ರಾತೃವಾತ್ಸಲ್ಯಕ್ಕೆ ಮೆಚ್ಚಿದೆನು. ನಿನಗೆ ಶುಭವಾಗಲಿ. ಸೀತೆ, ನಿನ್ನ ಪಾತಿವ್ರತ್ಯವು ಅತ್ಯಂತ ಪ್ರಶಂಸನೀಯವಾದದ್ದು. ಮಿಥಿಲೇಶ್ವರನ ಪುತ್ರಿಯಾದ ನೀನು ದಾರಿ ನಡೆದು ಆಯಾಸಗೊಂಡಿದ್ದೀಯೆ. ರಾಮ, ಸೀತೆಯಂತಹ ಸಾಧ್ವೀಮಣಿಯನ್ನು ಮದುವೆಯಾದ ನೀನು ಭಾಗ್ಯಶಾಲಿ. ಈ ಲೋಕದಲ್ಲಿ ಸೀತೆಯಂಥವರು ದುರ್ಲಭ. ನಿನಗೊದಗಿದ ಈ ಕಷ್ಟ ಕಾಲದಲ್ಲಿಯೂ ಎಲ್ಲ ಸುಖ ಭೋಗಗಳನ್ನು ತೊರೆದು ಅವಳು ನಿನ್ನ ಹಿಂದೆ ಬಂದಿದ್ದಾಳೆ'' ಎಂದು ಶ್ಲಾಘಿಸಿದರು. ''ರಾಘವ, ಉಳಿದ ವರ್ಷಗಳೆಲ್ಲವನ್ನೂ ನೀವೆಲ್ಲರೂ ನನ್ನ ಆಶ್ರಮದಲ್ಲಿಯೇ ಕಳೆಯಬಹುದು'' ಎಂದರು. ಆಗ ಶ್ರೀರಾಮನು ''ಮಹಾತ್ಮರೆ, ನನ್ನ ಮೇಲೆ ನೀವು ತೋರಿಸಿದ ಈ ವಾತ್ಸಲ್ಯಕ್ಕೂ ಈ ಅನುಗ್ರಹಕ್ಕೂ ನಾನು ಕೃತಜ್ಞನಾಗಿದ್ದೇನೆ. ನನಗಾದರೋ ಇನ್ನೂ ದಕ್ಷಿಣ ದಿಕ್ಕಿನಲ್ಲಿ ಒಂದು ಆಶ್ರಮವನ್ನು ನಿರ್ಮಿಸಿ ಅದರಲ್ಲಿ ವಾಸವಾಗಿರಬೇಕೆಂದು ಇಚ್ಛೆಯಾಗಿದೆ. ಯುಕ್ತವಾದ ಆ ಸ್ಥಳ ಯಾವುದೆಂದು ಹೇಳಿದರೆ ಅನುಗೃಹೀತನಾಗುವೆನು'' ಎಂದು ನುಡಿದು ಕೈ ಮುಗಿದನು.ಅಗಸ್ತ್ಯರು ''ರಘುನಂದನ, ನಿನ್ನ ಹೃದಯಾಂತರಾಳದಲ್ಲಿರುವ ಉದ್ದೇಶವು ತಪೋಬಲದಿಂದ ನನಗೆ ತಿಳಿಯಿತು. ನೀನು ಪಂಚವಟಿ ಎಂದ ಸ್ಥಳಕ್ಕೆ ಹೋಗು. ಅದು ಉತ್ತಮವಾದ ಸ್ಥಳ. ಗೋದಾವರೀ ನದಿಯ ತೀರದಲ್ಲಿದೆ. ಹಣ್ಣು ಹಂಪಲುಗಳು ಯಥೇಚ್ಛವಾಗಿ ದೊರೆಯುತ್ತವೆ. ಅಲ್ಲಿ ಜಾನಕಿಯು ಸಂತೋಷದಿಂದಿರುವಳು. ನಿನ್ನ ಉದ್ದೇಶವು ಅಲ್ಲಿ ನೆರವೇರುವುದು'' ಎಂದರು. ಶ್ರೀರಾಮನು ಸೀತಾಲಕ್ಷ್ಮಣರೊಡನೆ ಅಗಸ್ತ್ಯರಿಗೆ ಅಭಿವಾದನೆ ಮಾಡಿ ಅವರ ಅನುಜ್ಞೆಯನ್ನು ಪಡೆದು ಜೊತೆಗೆ ಬಂದ ಬ್ರಾಹ್ಮಣರು ತೋರಿಸಿದ ದಾರಿಯಲ್ಲಿ ಪಂಚವಟಿಯ ಕಡೆಗೆ ಪ್ರಯಾಣ ಮಾಡಿದನು.

ರಾಘವನು ಪಂಚವಟಿಗೆ ಹೋಗುವಾಗ ಆಲದ ಮರದ ಮೇಲೆ ಕುಳಿತಿದ್ದ ಒಂದು ಮಹಾ ಗೃಧ್ರವನ್ನು ಕಂಡನು. ಭೀಕರಾಕೃತಿಯ ಆ ಗೃಧ್ರವು ಒಬ್ಬ ರಾಕ್ಷಸನಾಗಿರಬೇಕೆಂದು ಊಹಿಸಿ ರಾಮಲಕ್ಷ್ಮಣರು ''ಎಲೈ ನೀನು ಯಾರು?'' ಎಂದು ಕೇಳಿದರು. ಆ ಪಕ್ಷಿಯು ಮಧುರವಾದ ಧ್ವನಿಯಿಂದ ''ವತ್ಸರೆ, ನಿಮ್ಮ ತಂದೆಯಾದ ದಶರಥ ರಾಜನಿಗೆ ನಾನು ಮಿತ್ರ ಎಂದು ತಿಳಿಯಿರಿ'' ಎಂದಿತು. ತನ್ನ ತಂದೆಯ

ಮಿತ್ರನೆಂಬುದನ್ನು ಕೇಳಿ ಶ್ರೀರಾಮನು ಆ ಗೃಧ್ರರಾಜನ ಕುಲಗೋತ್ರಗಳೆಲ್ಲವನ್ನೂ ವಿಚಾರಿಸಿದನು. ಆ ಗೃಧ್ರವು ತನ್ನ ವಂಶವನ್ನು ತಿಳಿಸಿ ತನ್ನ ಹೆಸರು ಜಟಾಯುವೆಂದೂ ತನಗೆ ಸಂಪಾತಿ ಎಂಬ ಅಣ್ಣನೊಬ್ಬನಿದ್ದಾನೆಂದೂ ಹೇಳಿತು. ಆಮೇಲೆ ''ರಾಮ, ಈ ಅರಣ್ಯವು ದುರ್ಗಮವಾದದ್ದು. ನೀನೂ ಲಕ್ಷ್ಮಣನೂ ವಾಸಸ್ಥಳದಿಂದ ಹೊರಗೆ ಹೋದಾಗ ಸೀತೆಯ ರಕ್ಷಣೆಯನ್ನು ನಾನು ನೋಡಿಕೊಳ್ಳುತ್ತೇನೆ'' ಎಂದಿತು. ಅನಂತರ ಜಟಾಯು ವನ್ನು ಆಲಿಂಗಿಸಿಕೊಂಡು ಆತನ ಕುಶಲವನ್ನು ವಿಚಾರಿಸಿ ರಾಮಲಕ್ಷ್ಮಣರು ಮುಂದೆ ನಡೆದರು.

ಎಲ್ಲರೂ ಪಂಚವಟಿ ಎಂಬ ಸ್ಥಳವನ್ನು ಸೇರಿದರು. ಅಲ್ಲಿ ಐದು ವಟವೃಕ್ಷ ಗಳಿದ್ದುದರಿಂದ ಪಂಚವಟಿ ಎಂಬ ಹೆಸರು ಬಂದಿತ್ತು. ಶ್ರೀರಾಮನು ತಮ್ಮನನ್ನು ನೋಡಿ ''ಲಕ್ಷ್ಮಣ, ಪಂಚವಟಿಗೆ ಬಂದೆವು. ಎಲ್ಲ ಕಡೆಯನ್ನೂ ಗಮನಿಸಿ ನೋಡು. ನೀನು ಅರಣ್ಯದ ಪರಿಶೀಲನೆಯಲ್ಲಿ ನಿಪುಣ. ವೈದೇಹಿಗೆ ಸಂತೋಷವಾಗುವ ಒಂದು ಸ್ಥಳವನ್ನು ಗೊತ್ತುಮಾಡು'' ಎಂದನು. ಅದರಂತೆ ಲಕ್ಷ್ಮಣನು ಗೊತ್ತುಮಾಡಿದ ಸ್ಥಳದಲ್ಲಿ ಒಂದು ಪರ್ಣಶಾಲೆಯನ್ನು ನಿರ್ಮಿಸಿ ಶಾಸ್ತ್ರೋಕ್ತವಾದ ಶಾಂತಿಕರ್ಮ ಗಳನ್ನು ನೆರವೇರಿಸಿ ಆ ಮೂವರೂ ಪರ್ಣಶಾಲೆಯ ಪ್ರವೇಶವನ್ನು ಮಾಡಿದರು. ಅನಂತರ ಮುಂದಿನ ವರ್ಷಗಳೆಲ್ಲವನ್ನೂ ಆ ಪರ್ಣಶಾಲೆಯಲ್ಲಿಯೇ ಕಳೆಯಬೇಕೆಂದು ನಿಶ್ಚಯಿಸಿದರು.

೨೭

ಭರತನ ಗುಣಗಳ ಸ್ಮರಣೆ. ಶೂರ್ಪಣಖಾ ಪ್ರಸಂಗ. ಖರ, ದೂಷಣ, ತ್ರಿಶಿರರ ಸಂಹಾರ

ಈ ಪ್ರಕಾರವಾಗಿ ಆ ಮೂವರೂ ಪಂಚವಟಿಯಲ್ಲಿ ಸುಖವಾಗಿ ಕಾಲವನ್ನು ಕಳೆಯುತ್ತಿದ್ದರು. ಒಂದು ದಿನ ಹೇಮಂತ ಋತುವಿನ ಪ್ರಾತಃ ಕಾಲದಲ್ಲಿ ರಘುನಂದನನು ರಮ್ಯವಾದ ಗೋದಾವರೀನದಿಗೆ ಸ್ನಾನಕ್ಕಾಗಿ ಹೊರಟನು. ಅವನೊಡನೆ ಸೌಮಿತ್ರಿಯೂ ವೈದೇಹಿಯೂ ಎಂದಿನಂತೆ ಹಿಂಬಾಲಿಸಿ ನಡೆದರು. ಆಗ ಸೌಮಿತ್ರಿಯು ''ಅಣ್ಣ, ಈಗ ನಂದಿಗ್ರಾಮದಲ್ಲಿ ಭರತನು ಸ್ನಾನಕ್ಕೋಸ್ಕರ ಸರಯೂ ನದಿಗೆ ಹೋಗುತ್ತಿರಬಹುದು. ಸುಖದಲ್ಲಿರಬೇಕಾದ ಆ ರಾಜಪುತ್ರನು ಈಗ ಸರಯೂ ನದಿಯಲ್ಲಿ ಹೇಗೆ ಮುಳುಗುವನೊ? ಸದಾ ಪ್ರಿಯವಾಗಿ ಮಾತನಾಡತಕ್ಕ ಆ ವೀರನು ತ್ರಿಕರಣ ಶುದ್ಧಿಯಿಂದ ನಿನ್ನನ್ನು ನಂಬಿದ್ದಾನೆ. 'ಮನುಷ್ಯರು ತಾಯಿಯ

ಸ್ವಭಾವವನ್ನು ಪಡೆಯುತ್ತಾರೆ, ತಂದೆಯ ಸ್ವಭಾವವನ್ನಲ್ಲ' ಎಂದು ಹೇಳುವುದುಂಟು. ಭರತನು ಈ ಪ್ರವಾದವನ್ನು ಸುಳ್ಳುಮಾಡಿದನು. ಅವನಿಗೆ ತನ್ನ ತಾಯಿಯಾದ ಕೈಕೇಯಿಯ ಕ್ರೂರ ಸ್ವಭಾವ ಬರಲೇ ಇಲ್ಲ''! ಎಂದನು. ಆಗ ಶ್ರೀರಾಮನಿಗೆ ಚಿಕ್ಕಮ್ಮನ ನಿಂದೆಯು ಸಹ್ಯವಾಗಲಿಲ್ಲ. ಅವನು ಲಕ್ಷ್ಮಣನ ಕಡೆಗೆ ತಿರುಗಿ ''ಲಕ್ಷ್ಮಣ, ನಮ್ಮ ಚಿಕ್ಕಮ್ಮನಾದ ಕೈಕೇಯೀ ದೇವಿಯನ್ನು ನೀನು ನಿಂದಿಸುವುದು ಎಂದಿಗೂ ತರವಲ್ಲ. ಇಕ್ಷ್ವಾಕು ವಂಶಕ್ಕೆ ತಿಲಕಪ್ರಾಯನಾದ ಭರತನ ಸುದ್ದಿಯನ್ನು ಮತ್ತೆ ಮತ್ತೆ ಹೇಳುತ್ತಿರು. ಲಕ್ಷ್ಮಣ, ಭರತನ ನೆನಪಾದೊಡನೆ ನನ್ನ ಹೃದಯವು ಸ್ನೇಹದಿಂದ ಕರಗಿ ಹೋಗುವುದು. ಈಗಲೇ ಹೋಗಿ ಅವನನ್ನು ಕಾಣಬೇಕೆನಿಸುವುದು. ಅವನ ಮಾತುಗಳು ಅಮೃತದಂತೆ ನನ್ನನ್ನು ಆಪ್ಯಾಯನಗೊಳಿಸಿದವು. ಭರತ ಶತ್ರುಘ್ನರೊಡನೆ ನಿನ್ನೊಂದಿಗೆ ಹಿಂದಿನಂತೆ ಮತ್ತೆ ಯಾವಾಗ ಇರುವೆನೊ'' ಎಂದು ಚಡಪಡಿಸಿದನು. ಅಣ್ಣನ ಮೃದು ಹೃದಯವನ್ನು ನೋಡಿ ಲಕ್ಷ್ಮಣನು ತಾನಾಡಿದ ಮಾತಿಗೆ ಪಶ್ಚಾತ್ತಾಪ ಗೊಂಡನು. ಅವರೆಲ್ಲರೂ ಗೋದಾವರೀ ನದಿಯಲ್ಲಿ ಸ್ನಾನಮಾಡಿದರು. ಶ್ರೀರಾಮ ಲಕ್ಷ್ಮಣರು ದೇವತೆಗಳಿಗೂ ಪಿತೃಗಳಿಗೂ ಜಲತರ್ಪಣವನ್ನಿತ್ತು ನಿತ್ಯ ಕರ್ಮವನ್ನು ಮುಗಿಸಿದರು. ಆ ಮೂವರೂ ತಮ್ಮ ಪರ್ಣಶಾಲೆಗೆ ಹಿಂದಿರುಗಿದರು.

ಈ ಪ್ರಕಾರವಾಗಿ ಶ್ರೀರಾಮನ ವನವಾಸದಲ್ಲಿ ಹದಿಮೂರು ವರ್ಷಗಳು ಕಳೆದುಹೋದವು. ಒಂದು ದಿನ ಶ್ರೀರಾಮನು ಸೀತಾಲಕ್ಷ್ಮಣರೊಡನೆ ವಿನೋದದಿಂದ ಮಾತಾಡುತ್ತ ಕುಳಿತಿರುವಾಗ ಒಬ್ಬ ರಾಕ್ಷಸಿಯು ಸ್ವೇಚ್ಛೆಯಾಗಿ ತಿರುಗುತ್ತ ಆ ಸ್ಥಳಕ್ಕೆ ಬಂದಳು. ಅವಳೇ ರಾವಣನ ತಂಗಿಯಾದ ಶೂರ್ಪಣಖಿ. ಆಕೆಯು ಸಾಕ್ಷಾತ್ ದೇವತೆಯಂತೆ ಶೋಭಿಸುತ್ತಿದ್ದ ಶ್ರೀರಾಮನನ್ನು ನೋಡಿ ಕಾಮವಶಳಾದಳು. ಭೀಕರಾಕೃತಿಯ ಆ ರಾಕ್ಷಸಿಯು ಬುದ್ಧಿಗೆಟ್ಟು ಶ್ರೀರಾಮನನ್ನು ಬಯಸಿ ಮುಂದೇನು ಮಾಡಬೇಕೆಂದು ಕ್ಷಣಕಾಲ ಆಲೋಚಿಸಿದಳು. ಅವಳು ಮಾಯಾವಿನಿಯಾದ್ದರಿಂದ ತನ್ನ ರೂಪವನ್ನು ಬದಲಾಯಿಸಿ ಶ್ರೀರಾಮನ ಬಳಿಗೆ ಹೋಗಿ ''ಎಲೈ, ಯಾರು ನೀನು? ತಾಪಸವೇಷವನ್ನು ಧರಿಸಿದ ನಿನಗೆ ಈ ಧನುರ್ಬಾಣಗಳೇಕೆ? ರಾಕ್ಷಸರಿಂದ ತುಂಬಿದ ಈ ಪ್ರದೇಶಕ್ಕೆ ನೀನು ಹೇಗೆ ಬಂದೆ? ಏಕೆ ಬಂದೆ? ಸತ್ಯವನ್ನು ಹೇಳು'' ಎಂದಳು. ರಾಘವನಾದರೋ ಸರಳ ಸ್ವಭಾವದವನೂ, ಸತ್ಯವಂತನೂ ಆದ್ದರಿಂದ ತಾವು ಮೂವರೂ ಯಾರೆಂಬುದನ್ನೂ ಅರಣ್ಯಕ್ಕೆ ಬಂದಿರುವುದರ ಕಾರಣವನ್ನೂ ಯಥಾರ್ಥವಾಗಿ ತಿಳಿಸಿ, ''ನೀನು ಯಾರು? ಸ್ತ್ರೀಯಾದ ನೀನು ಒಂಟಿಯಾಗಿ ತಿರುಗು ವುದೇಕೆ?'' ಎಂದು ಕೇಳಿದನು. ಶೂರ್ಪಣಖಿಯು ಹೀಗೆಂದಳು. ''ರಾಕ್ಷಸೇಶ್ವರನಾದ ರಾವಣನ ವಿಷಯವನ್ನು ನೀನು ಕೇಳಿರಬಹುದು. ನಾನು ಅವನ ತಂಗಿ. ಅವನಲ್ಲದೆ

ನನಗೆ ಇನ್ನಿಬ್ಬರು ಅಣ್ಣಂದಿರಿದ್ದಾರೆ. ಒಬ್ಬನು ಕುಂಭಕರ್ಣ. ಮಹಾಪರಾಕ್ರಮಿ. ನಿದ್ರೆ ಮಾಡುವುದರಲ್ಲಿ ನಿಸ್ಸೀಮ! ಇನ್ನೊಬ್ಬನು ವಿಭೀಷಣ. ಅವನಿಗೆ ಧರ್ಮದಲ್ಲಿ ಅಧಿಕವಾದ ಶ್ರದ್ಧೆ. ರಾಕ್ಷಸರ ಸ್ವಭಾವ ಅವನಿಗಿಲ್ಲ. ಅದಿರಲಿ; ರಾಮ, ನಾನೇನೂ ಅವರಿಗೆ ಅಧೀನಳಲ್ಲ. ನಿನ್ನಂಥ ಸುಂದರ ಪುರುಷನನ್ನು ನಾನು ನೋಡಿಯೇ ಇರಲಿಲ್ಲ. ನೀನು ನನ್ನ ಗಂಡನೆಂದು ಮೆಚ್ಚಿ ಬಂದಿದ್ದೇನೆ. ಈ ಬಡಕಲು ದೇಹದ ಸೀತೆಯಿಂದ ನಿನಗೇನಾಗಬೇಕು? ಈಕೆಯನ್ನೂ ಲಕ್ಷ್ಮಣನನ್ನೂ ಕೊಂದು ತಿಂದು ಬಿಡುತ್ತೇನೆ. ಆಮೇಲೆ ನಾವಿಬ್ಬರೂ ಯಥೇಚ್ಛವಾಗಿ ವಿಹರಿಸೋಣ!'' ಎಂದಳು.

ಆ ಮಾತನ್ನು ಕೇಳಿ ಶ್ರೀರಾಮನಿಗೆ ನಗು ಬಂದಿತು. ಅವನು ಮೃದುವಾಗಿಯೇ ''ಆರ್ಯೆ, ನನಗೆ ಮದುವೆಯಾಗಿದೆ. ಇವಳು ನನ್ನ ಪ್ರಿಯ ಪತ್ನಿ. ನಿನ್ನಂಥ ಹೆಂಗಸರಿಗೆ ಸವತಿಯೊಡನಿರುವುದು ಬಹು ಕಷ್ಟ. ಅದೋ, ಅವನು ನನ್ನ ತಮ್ಮನಾದ ಲಕ್ಷ್ಮಣ. ಸುಂದರನಾದ ಯುವಕ. ಒಂಟಿಯಾಗಿದ್ದಾನೆ. ಅವನನ್ನು ವರಿಸಿದರೆ ನಿನಗೆ ಸವತಿಯ ಕಾಟವಿರುವುದಿಲ್ಲ'' ಎಂದು ನುಡಿದನು. ಕಾಮಮೋಹಿತಳಾಗಿ ವಿಚಾರಶೂನ್ಯಳಾದ ಆ ರಾಕ್ಷಸಿಯು ನೆಟ್ಟಗೆ ಲಕ್ಷ್ಮಣನ ಬಳಿಗೆ ಹೋಗಿ, ತನ್ನನ್ನು ಮದುವೆಯಾಗುವಂತೆ ಒತ್ತಾಯ ಪಡಿಸಿದಳು. ಲಕ್ಷ್ಮಣನು ವಿನೋದಕ್ಕಾಗಿಯೇ ''ಸುಂದರಿ, ನಾನು ಅಣ್ಣನ ದಾಸನಾಗಿದ್ದೇನೆ. ದಾಸನ ಹೆಂಡತಿಯಾಗಿರುವುದು ನಿನಗೆ ಯೋಗ್ಯವಲ್ಲ. ನೀನು ನನ್ನ ಅಣ್ಣನನ್ನೇ ವರಿಸು. ನಿನ್ನ ಪ್ರೇಮವನ್ನು ತೋಡಿಕೊಂಡರೆ ಆತನು ಒಪ್ಪುವನು. ನಿನ್ನ ಈ ರಮಣೀಯ ರೂಪವನ್ನು ಯಾವನು ತಾನೇ ಉಪೇಕ್ಷಿಸಿಯಾನು!'' ಎಂದನು. ಹಾಸ್ಯ ಕಲೆಯ ಪರಿಚಯವೇ ಇಲ್ಲದ ಆ ಮೂಢ ರಾಕ್ಷಸಿಯು ಶ್ರೀರಾಮನ ಬಳಿಗೆ ಮತ್ತೆ ಹೋಗಿ ''ರಾಮ, ಈ ಸೀತೆಯನ್ನು ಭಕ್ಷಿಸಿ ಸವತಿಯ ಕಾಟವನ್ನು ತಪ್ಪಿಸಿಕೊಳ್ಳುತ್ತೇನೆ. ಆಮೇಲೆ ನನ್ನನ್ನು ಮದುವೆಯಾಗುವೆಯಂತೆ!'' ಎಂದು ಹೇಳಿ ಉರಿಗಣ್ಣುಗಳಿಂದ ಸೀತೆಯನ್ನು ದುರುಗುಟ್ಟಿ ನೋಡುತ್ತ ಅವಳ ಕಡೆಗೆ ನುಗ್ಗಿದಳು. ಬಲಾಢ್ಯನಾದ ಶ್ರೀರಾಮನು ಶೂರ್ಪಣಖಿಯನ್ನು ತಡೆದು ನಿಲ್ಲಿಸಿ ''ಲಕ್ಷ್ಮಣ, ಕ್ರೂರಿಗಳೂ ಅನಾಗರಿಕರೂ ಆದ ಈ ರಾಕ್ಷಸರೊಡನೆ ವಿನೋದವು ಸಲ್ಲದು. ಈ ಕುರೂಪಿಯನ್ನು ಇನ್ನೂ ವಿರೂಪಗೊಳಿಸಿ ಆಚೆಗೆ ಕಳಿಸು'' ಎಂದನು. ಲಕ್ಷ್ಮಣನು ಕೋಪದಿಂದ ಖಡ್ಗವನ್ನು ಸೆಳೆದು ಆ ರಾಕ್ಷಸಿಯ ಕಿವಿಮೂಗುಗಳನ್ನು ಕತ್ತರಿಸಿ ಬಿಟ್ಟನು. ಕಿವಿ ಮೂಗುಗಳನ್ನು ಕೊಯ್ದೊಡನೆ ಘೋರಾಕೃತಿಯನ್ನು ತಳೆದ ಆ ರಾಕ್ಷಸಿಯು ಕೆಟ್ಟ ಧ್ವನಿಯಿಂದ ಕಿರುಚುತ್ತ ಕಾಡಿನೊಳಗೆ ಓಡಿಹೋದಳು. ಆ ರಾಕ್ಷಸಿಯ ಮೈಯೆಲ್ಲವೂ ರಕ್ತದಿಂದ ನೆನೆಯಿತು. ಅವಳು ಗಟ್ಟಿಯಾಗಿ ಒದರುತ್ತಾ ಆಕಾಶಮಾರ್ಗದಲ್ಲಿ ಹೋಗಿ ಖರನೆಂಬ ರಾಕ್ಷಸನೆದುರಿಗೆ ಸಿಡಿಲಿನಂತೆ ನೆಲಕ್ಕೆ ಧುಮುಕಿದಳು. ಖರ, ದೂಷಣ,

ತ್ರಿಶಿರ ಎಂಬ ಮೂವರು ರಾಕ್ಷಸನಾಯಕರು ರಾವಣನ ಆಜ್ಞೆಯಂತೆ ಸೇನಾಸಮೇತ ರಾಗಿ ದಂಡಕಾರಣ್ಯದಲ್ಲಿ ನೆಲೆಸಿದ್ದರು. ಖರನು ಶೂರ್ಪಣಖಿಗೆ ಪರ್ಯಾಯವಾಗಿ ಅಣ್ಣನಾಗಬೇಕು. ಅವನು ಶೂರ್ಪಣಖಿಯನ್ನು ನೋಡಿ ''ತಂಗಿ, ಏನಾಯಿತೆಂಬುದನ್ನು ಹೇಳು. ಕಾಮರೂಪಿಣಿಯಾಗಿ ಮನಸ್ಸು ಬಂದಂತೆ ಸಂಚರಿಸುವ ಸಾಮರ್ಥ್ಯವುಳ್ಳ ನಿನ್ನನ್ನು ಯಾವನು ಹೀಗೆ ವಿರೂಪಗೊಳಿಸಿದನು? ಆ ದುರಾತ್ಮನ ಪ್ರಾಣವನ್ನು ಹೀರಿ ಬಿಡುವೆನು'' ಎಂದನು. ಆಗ ಶೂರ್ಪಣಖಿಯು ''ಅಣ್ಣ, ತರುಣರೂ ರೂಪ ಸಂಪನ್ನರೂ ಆದ ಇಬ್ಬರು ರಾಜಪುತ್ರರು ದಂಡಕಾರಣ್ಯಕ್ಕೆ ಬಂದಿದ್ದಾರೆ. ಅವರು ದಶರಥರಾಜನ ಮಕ್ಕಳಂತೆ. ರಾಮ, ಲಕ್ಷ್ಮಣ ಎಂದು ಅವರ ಹೆಸರು. ಅವರ ಜೊತೆಗೆ ರೂಪಸಂಪನ್ನೆಯಾದ ಒಬ್ಬ ತರುಣಿಯೂ ಇರುವುದನ್ನು ನಾನು ನೋಡಿದೆ. ನನ್ನ ಈ ದುರವಸ್ಥೆಗೆ ಆ ಹೆಂಗಸೇ ಮೂಲಕಾರಣ. ನಾನೊಬ್ಬ ದಿಕ್ಕಿಲ್ಲದ ಸೂಳೆಯೋ ಎಂಬಂತೆ ಭಾವಿಸಿ ಆ ಅಣ್ಣತಮ್ಮಂದಿರು ನನ್ನನ್ನು ಹೀಗೆ ವಿರೂಪಗೊಳಿಸಿದರು. ಅವರಿಬ್ಬರ ರಕ್ತವನ್ನು, ಮುಖ್ಯವಾಗಿ ಆ ಹೆಂಗಸಿನ ರಕ್ತವನ್ನು ಕುಡಿದುಬಿಡಬೇಕೆಂದು ನನಗೆ ಬಯಕೆಯಾಗಿದೆ! ನನ್ನ ಆಸೆಯನ್ನು ನೆರವೇರಿಸಿಕೊಡು'' ಎಂದಳು. ಶೂರ್ಪಣಖಿಯ ಈ ಮಾತನ್ನು ಕೇಳಿ ಖರನು ಸಿಟ್ಟಿನಿಂದ ''ತಂಗಿ, ನಿನ್ನ ಇಚ್ಛೆಯನ್ನು ನೆರವೇರಿಸುವೆನು. ದುಃಖಿಸಬೇಡ'' ಎಂದು ಹೇಳಿ ಹದಿನಾಲ್ಕು ಮಂದಿ ರಾಕ್ಷಸರನ್ನು ಕರೆದು, ರಾಮ ಲಕ್ಷ್ಮಣರನ್ನು ನೀವು ಹೋಗಿ ಕೊಲ್ಲಬೇಕೆಂದೂ ಅವರಿಬ್ಬರ ರಕ್ತವನ್ನು ಕುಡಿಯಬೇಕೆಂದು ತನ್ನ ತಂಗಿ ಬಯಸಿದ್ದಾಳೆಂದೂ ತಿಳಿಸಿದನು. ಕ್ರೂರಸ್ವಭಾವದ ಶೂರ್ಪಣಖಿಯು ಆ ರಾಕ್ಷಸರನ್ನು ಪರ್ಣಶಾಲೆಯ ಬಳಿಗೆ ಕರೆ ತಂದು ರಾಮ ಲಕ್ಷ್ಮಣರನ್ನು ತೋರಿಸಿದಳು. ಅವರು ಅಬ್ಬರಿಸುತ್ತಾ ಶ್ರೀರಾಮನ ಮೇಲೆ ಆಕ್ರಮಣ ವನ್ನು ಮಾಡಲು, ಆಗ ಶ್ರೀರಾಮನು ತನ್ನ ಕೋದಂಡವನ್ನು ಜಗ್ಗಿ ಒಂದೊಂದು ಬಾಣದಿಂದ ಒಬ್ಬೊಬ್ಬ ರಾಕ್ಷಸನಂತೆ ಹದಿನಾಲ್ಕು ಬಾಣಗಳಿಂದ ಅವರೆಲ್ಲರನ್ನೂ ಕೊಂದುಹಾಕಿದನು. ದೂರದಲ್ಲಿ ನಿಂತು ಇದನ್ನು ನೋಡುತ್ತಿದ್ದ ಶೂರ್ಪಣಖಿಯು ಜೋಲುಮೋರೆ ಹಾಕಿಕೊಂಡು ಖರನ ಬಳಿಗೆ ಬಂದು ನೆಲದ ಮೇಲೆ ಬಿದ್ದು ಹೊರಳಾಡತೊಡಗಿದಳು. ಖರನು ಅದನ್ನು ನೋಡಿ ''ತಂಗಿ, ನಿನ್ನ ಪ್ರಾರ್ಥನೆಯನ್ನು ನಡೆಸುವುದಕ್ಕಾಗಿ ಹದಿನಾಲ್ಕು ಜನ ರಾಕ್ಷಸರನ್ನು ಕಳಿಸಿದ್ದೇನೆ. ಮತ್ತೆ ಹೀಗೆ ಗೋಳಾಡುವುದೇಕೆ?'' ಎಂದು ಕೇಳಿದನು. ಆ ರಾಕ್ಷಸಿಯು ತನ್ನ ಕಣ್ಣು ಮೂಗುಗಳನ್ನು ಒರೆಸಿಕೊಳ್ಳುತ್ತಾ ''ಆ ಹದಿನಾಲ್ಕು ಜನರನ್ನೂ ರಾಮನು ಒಂದೊಂದೇ ಬಾಣದಿಂದ ಸೀಳಿಹಾಕಿದನು. ಆ ಅಣ್ಣತಮ್ಮಂದಿರು ಮಹಾಪರಾಕ್ರಮಿಗಳು. ದೊಡ್ಡ ಸೇನೆಯನ್ನು ಕಳಿಸದೆ ನನಗೆ ಶಾಂತಿಪಾಠ ಹೇಳುತ್ತಿದ್ದೀಯೆ. ನೋಡು ನನ್ನ ಅವಸ್ಥೆಯನ್ನು'' ಎಂದು ಹಲುಬಿದಳು. ಎರಡು ಕೈಗಳಿಂದಲೂ ತನ್ನ ಹೊಟ್ಟೆಯನ್ನು ಬಡಿದುಕೊಳ್ಳುತ್ತಾ ಅತ್ತಳು.

ಖರನು ಕ್ರೋಧಾವಿಷ್ಟನಾಗಿ ಹದಿನಾಲ್ಕುಸಾವಿರ ಮಂದಿ ಭಯಂಕರರಾದ ರಾಕ್ಷಸರನ್ನು ಮುಂದಿಟ್ಟುಕೊಂಡು ತಾನೇ ಸ್ವತಃ ರಣಯಾತ್ರೆಗೆ ಹೊರಟನು. ಅವನ ಜೊತೆಗೆ ದೂಷಣ, ತ್ರಿಶಿರ ಮೊದಲಾದ ಸೇನಾಪತಿಗಳು ಪ್ರಯಾಣ ಮಾಡಿದರು. ಆ ಸಮಯದಲ್ಲಿ ಹಲವಾರು ಉತ್ಪಾತಗಳು ಕಾಣಿಸಿದವು. ರಾಕ್ಷಸರ ಆರ್ಭಟವು ಮುಗಿಲು ಮುಟ್ಟಿತು. ಶ್ರೀರಾಮನು ಲಕ್ಷ್ಮಣನೊಡನೆ ಸಮಾಲೋಚಿಸಿ ದೊಡ್ಡರಾಕ್ಷಸ ಸೇನೆಯೇ ಬರುತ್ತಿದೆ ಎಂದು ನಿಶ್ಚಯಿಸಿದನು. ಅವನು ''ಲಕ್ಷ್ಮಣ, ಈಗ ಭೀಕರವಾದ ಹೋರಾಟವು ಸಂಭವಿಸಲಿದೆ. ರಾಕ್ಷಸರ ಗರ್ಜನೆ ಕೇಳುತ್ತಿದೆ. ಆದ್ದರಿಂದ, ತಮ್ಮ ನೀನು ವೈದೇಹಿಯನ್ನು ಕರೆದುಕೊಂಡು ಆ ಬೆಟ್ಟದ ಗುಹೆಯೊಳಗೆ ಹೋಗು. ನಾನು ಈ ರಾಕ್ಷಸರನ್ನು ಎದುರಿಸುತ್ತೇನೆ'' ಎಂದು ಹೇಳಿ ತನ್ನ ಧನುಸ್ಸನ್ನು ಝೇಂಕರಿಸಿದನು. ಲಕ್ಷ್ಮಣನು ತಾನೇ ಹೋರಾಡುವೆನೆಂದೂ ಶ್ರೀರಾಮನೇ ವೈದೇಹಿಯೊಡನೆ ಗುಹೆಯಲ್ಲಿ ವಿಶ್ರಮಿಸಬಹುದೆಂದೂ ಹೇಳಿದನು. ಶ್ರೀರಾಮನು ಒಪ್ಪಲಿಲ್ಲ. ''ಲಕ್ಷ್ಮಣ, ತಡಮಾಡಬೇಡ. ರಾಕ್ಷಸರು ಸಮೀಪಿಸಿದಂತೆ ಕಾಣಿಸುತ್ತದೆ. ನೀನು ಶೂರನೂ ಬಲಾಢ್ಯನೂ ಆಗಿದ್ದೀಯೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ನಿಶಾಚರರನ್ನು ನಾನೇ ಸಂಹರಿಸಬೇಕೆಂದಿದ್ದೇನೆ. ಇದೋ ನನ್ನ ಆಣೆ. ಕೂಡಲೇ ಸೀತೆಯನ್ನು ಕರೆದುಕೊಂಡು ಗುಹೆಯೊಳಗೆ ಕಾದಿರು'' ಎಂದು ಆದೇಶಿಸಿದನು. ಅಣ್ಣನ ಮಾತನ್ನು ಮೀರಲಾರದೆ ಲಕ್ಷ್ಮಣನು ಸೀತೆಯೊಡನೆ ದುರ್ಗಮವಾದ ಆ ಗುಹೆಯನ್ನು ಪ್ರವೇಶಿಸಿದನು. ಅದನ್ನೇ ಗಮನಿಸಿ ನೋಡುತ್ತಿದ್ದ ಶ್ರೀರಾಮನು ''ಅಬ್ಬಾ, ಒಂದು ವ್ಯವಸ್ಥೆ ಪೂರೈಸಿತು'' ಎಂದು ಹೇಳಿ ದಿವ್ಯಕವಚವನ್ನು ತೊಟ್ಟು, ಹೊಗೆಯಿಲ್ಲದ ಬೆಂಕಿಯಂತೆ ವಿರಾಜಿಸುತ್ತ ಏಕಾಕಿಯಾಗಿ ನಿಂತನು. ಆ ವೀರನು ಪ್ರಚಂಡವಾದ ಕೋದಂಡವನ್ನು ಹಿಡಿದು ಹೆದೆಯನ್ನು ಮಿಡಿಯುತ್ತಾ ದಶದಿಕ್ಕುಗಳನ್ನೂ ನೋಡುತ್ತ ಸಜ್ಜಾಗಿ ನಿಂತನು ಅವನ ರೌದ್ರಾಕಾರವನ್ನು ನೋಡಿ ಸಕಲ ಜೀವರಾಶಿಗಳೂ ಭಯದಿಂದ ತಲ್ಲಣಿಸಿದವು. ಅಷ್ಟರಲ್ಲಿ ಖರನ ರಾಕ್ಷಸಪಡೆಯು ಶ್ರೀರಾಮನ ಕಡೆಗೆ ಧಾವಿಸಿ ಬಂದಿತು. ರಣಪಂಡಿತನಾದ ಶ್ರೀರಾಮನು ಸುತ್ತಲೂ ಕಣ್ಣುಹೊರಳಿಸಿ ಖರನ ಸೇನೆಯನ್ನು ನೋಡಿ ಕೋಪದಿಂದ ಕೆಂಡವಾದನು. ಋಷಿಗಳಿಗೆ ಕೊಟ್ಟಿದ್ದ ಮಾತನ್ನು ನಡೆಸುವ ಕಾಲ ಬಂದಿತೆಂದು ಮನಸ್ಸಿನಲ್ಲಿ ಸಂತೋಷಿಸಿದನು. ರಾಕ್ಷಸರು ಮುದ್ಗರ, ಪಟ್ಟಿಶ, ಶೂಲ, ಖಡ್ಗ ಮುಂತಾದ ಆಯುಧಗಳನ್ನು ಧರಿಸಿ ಶ್ರೀರಾಮನನ್ನು ಮುತ್ತಿದರು. ಆಕಾಶ ಮಾರ್ಗದಲ್ಲಿ ನಿಂತು ನೋಡುತ್ತಿದ್ದ ದೇವ ಗಂಧರ್ವಾದಿಗಳು ''ಅಯ್ಯೋ ಒಬ್ಬ ರಾಜಪುತ್ರನನ್ನು ಸಾವಿರಾರು ರಾಕ್ಷಸರು ಮುತ್ತಿದರಲ್ಲ''! ಎಂದು ಚಿಂತೆಗೆ ಒಳಗಾದರು. ನೋಡುನೋಡುತ್ತಿದ್ದ ಹಾಗೆ ಶ್ರೀರಾಮನ ಮಂಡಲಾಕಾರದ ಕೋದಂಡದಿಂದ ಲೆಕ್ಕವಿಲ್ಲದಷ್ಟು ಉಗ್ರಶರಗಳು ಚಿಮ್ಮುತ್ತಾ ರಾಕ್ಷಸರ ಮೇಲೆ ನುಗ್ಗಿದವು. ಆ ಬಾಣಗಳು

ದೈತ್ಯರ ತೋಳುಗಳನ್ನೂ ತೊಡೆಗಳನ್ನೂ ತಲೆಗಳನ್ನೂ ತುಂಡರಿಸಿ ಚೆಲ್ಲಿದವು. ಅವರೇರಿದ್ದ ಅಶ್ವಗಳನ್ನು ಕೊಂದವು. ಎಲ್ಲ ರಾಕ್ಷಸರೂ ಸ್ವಲ್ಪಹೊತ್ತಿನಲ್ಲಿ ಸತ್ತು ಯಮಲೋಕವನ್ನು ಸೇರಿದರು. ಎಲ್ಲೆಲ್ಲಿಯೂ ಅವರ ಹೆಣಗಳಿಂದ ರಣಭೂಮಿಯು ತುಂಬಿಹೋಯಿತು. ಅಷ್ಟರಲ್ಲಿ ದೂಷಣನೆಂಬ ಸೇನಾಪತಿಯು ಯುದ್ಧಕ್ಕಾಗಿ ಮುನ್ನುಗ್ಗಿದನು. ಶ್ರೀರಾಮನ ಶರಗಳಿಂದ ದೂಷಣನು ಹತನಾದನು. ಒಡನೆಯೇ ಕ್ರೋಧಾವಿಷ್ಟನಾದ ಖರನು ತನ್ನ ರಥವನ್ನು ಮುಂದಕ್ಕೆ ದೂಡುತ್ತಿರಲು ತ್ರಿಶಿರನು ಅವನನ್ನು ತಡೆದು ತಾನೇ ರಾಘವನನ್ನು ಎದುರಿಸಿದನು. ಶ್ರೀರಾಮನ ಹೊಡೆತಕ್ಕೆ ಅವನೆಲ್ಲಿ ತಡೆದಾನು? ಅವನೂ ಸತ್ತು ಬಿದ್ದನು. ಈಗ ರಣರಂಗದಲ್ಲಿ ಉಳಿದವರು ಇಬ್ಬರೇ. ಒಬ್ಬನು ಖರ, ಇನ್ನೊಬ್ಬನು ಶ್ರೀರಾಮ. ಪರಾಕ್ರಮಿಯಾದ ಖರನು ತನ್ನ ರಥವನ್ನೋಡಿಸುತ್ತಾ ಮುಂದೆ ಬಂದು ಶ್ರೀರಾಮನ ಚಾಪವನ್ನು ಕಡಿದು ಏಳು ಬಾಣಗಳಿಂದ ಅವನ ಕವಚವನ್ನು ಕಳಚಿ ಬೀಳಿಸಿದನು. ಅವನ ಬಾಣಗಳ ಹೊಡೆತದಿಂದ ರಾಘವನ ಸರ್ವಾಂಗಗಳೂ ಗಾಯಗೊಂಡವು. ಆಗ ಮತ್ತಷ್ಟು ಕೆರಳಿದ ಆ ವೀರನು ''ಇನ್ನು ತಡಮಾಡಬಾರದು. ಇವನನ್ನು ಮುಗಿಸಿಬಿಡಬೇಕು'', ಎಂದು ಸಂಕಲ್ಪಿಸಿ ಅಗಸ್ತ್ಯ ಮಹರ್ಷಿಗಳು ಕೊಟ್ಟಿದ್ದ ವೈಷ್ಣವಧನುಸ್ಸನ್ನು ಹಿಡಿದು ಖರನ ಮೇಲೆ ಏರಿ ಹೋದನು. ಶ್ರೀ ರಾಮನ ಬಾಣಗಳಿಂದ ಖರನ ರಥಧ್ವಜವು ಕತ್ತರಿಸಿ ಬಿದ್ದಿತು. ಅನಂತರ ಆ ತೇಜಸ್ವಿಯು ನಾಲ್ಕು ಬಾಣಗಳಿಂದ ಖರನ ನಾಲ್ಕು ಕುದುರೆ ಗಳನ್ನು ಕೊಂದು ಸಾರಥಿಯ ಶಿರಸ್ಸನ್ನು ಕತ್ತರಿಸಿದನು. ಮತ್ತೆ ಇನ್ನೊಂದು ಬಾಣದಿಂದ ಖರನು ಹಿಡಿದಿದ್ದ ಧನುಸ್ಸನ್ನು ತುಂಡು ಮಾಡಿದನು. ಖರನು ಥಟ್ಟನೆ ನೆಲಕ್ಕೆ ಧುಮುಕಿ ಗದೆಯನ್ನು ಹಿಡಿದು ನಿಂತನು. ಅವನನ್ನು ನೋಡಿ ಶ್ರೀರಾಮನು ''ಎಲೈ ರಾಕ್ಷಸ, ಇಷ್ಟು ಪ್ರಬಲವಾದ ಸೇನೆಯನ್ನು ಕಟ್ಟಿಕೊಂಡು ಯುದ್ಧಕ್ಕೆ ಬಂದೆಯಲ್ಲ, ಇದಕ್ಕೆ ನಿಮಿತ್ತವೇನು? ಧರ್ಮನಿಷ್ಠರಾದ ತಪಸ್ವಿಗಳನ್ನು ಕೊಂದು ನೀನು ಯಾವ ಭಾಗ್ಯವನ್ನು ಪಡೆಯಬೇಕಾಗಿದೆ? ವಿಷಮಿಶ್ರವಾದ ಅನ್ನವನ್ನು ತಿಂದಂತೆ ನಿನ್ನ ದುಷ್ಕೃತ್ಯದ ಫಲವು ನಿನಗೀಗ ಕಾದಿದೆ. ತಾಳೆಯ ಹಣ್ಣನ್ನು ಉದುರಿಸುವಂತೆ ನಿನ್ನ ಶಿರಸ್ಸನ್ನು ಕೆಳಕ್ಕೆ ಉರುಳಿಸುವೆನು'' ಎಂದನು. ಆಗ ಖರನು ''ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುವುದು ವೀರರ ಲಕ್ಷಣವಲ್ಲ. ನೋಡುತ್ತಿರು, ನಿನ್ನನ್ನೀಗ ಕೊಂದು ಹತರಾದ ರಾಕ್ಷಸರ ಹೆಂಡಿರು, ಮಕ್ಕಳ ಕಣ್ಣೀರನ್ನು ಒರೆಸುತ್ತೇನೆ'' ಎಂದು ನುಡಿದು ಗದೆಯನ್ನೆತ್ತಿದನು. ಎತ್ತಿದ ಗದೆಯು ರಾಘವನ ಬಾಣದಿಂದ ತುಂಡಾಗಿ ಬಿತ್ತು. ಖರನು ರುಷ್ಟನಾಗಿ ಒಂದು ದೊಡ್ಡ ಸಾಲವೃಕ್ಷವನ್ನು ಕಿತ್ತು ಎತ್ತಿ ಸಿಂಹನಾದಗೈದು 'ಎಲೈ ರಾಮ, ನೀನು ಸತ್ತೆ' ಎಂದು ಕೂಗಿ ಆ ವೃಕ್ಷವನ್ನು ಶ್ರೀರಾಮನ ಮೇಲೆ ಬೀಸಿದನು. ರಾಘವನ ಬಾಣಗಳಿಂದ ಆ ವೃಕ್ಷವು ಚೂರುಚೂರಾಗಿ ಬಿದ್ದಿತು. ಬಾಣಗಳ

ಹೊಡೆತದಿಂದ ಖರನು ಕಂಗೆಟ್ಟನು. ಅವನ ಮೈಯೆಲ್ಲವೂ ರಕ್ತದಿಂದ ತೊಯ್ದು ಹೋಯಿತು. ಅವನು ಹಿಂದೆ ಮುಂದೆ ನೋಡದೆ ಬರಿಗೈಯಿಂದಲೇ ಶ್ರೀರಾಮನ ಮೇಲೆ ನುಗ್ಗಿದನು. ಹತ್ತಿರ ಬರುತ್ತಿದ್ದಂತೆಯೇ ಗುರಿಹೊಡೆಯುವ ದೃಷ್ಟಿಯಿಂದ ಶ್ರೀರಾಮನು ನಾಲ್ಕು ಹೆಜ್ಜೆ ಹಿಂದಕ್ಕೆ ಸರಿದು, ಐಂದ್ರಾಸ್ತ್ರವನ್ನು ಹೂಡಿ ಖರನ ಮೇಲೆ ಪ್ರಯೋಗಿಸಿದನು. ಆ ಮಹಾಸ್ತ್ರವು ಸಿಡಿಲಿನಂತೆ ಮೊರೆಯುತ್ತಾ ರಭಸದಿಂದ ಖರನ ಎದೆಗೆ ತಾಗಿತು. ಖರನು ಸತ್ತು ಬಿದ್ದನು.

ಆಗ ದೇವತೆಗಳು ಹರ್ಷದಿಂದ ದೇವದುಂದುಭಿಗಳನ್ನು ಮೊಳಗುತ್ತ ಶ್ರೀರಾಮನ ಮೇಲೆ ಹೂವಿನ ಮಳೆಯನ್ನು ಸುರಿಸಿದರು. ''ಆಹಾ, ಮೂರು ಗಳಿಗೆಯಲ್ಲಿ ಶ್ರೀರಾಮನು ಹದಿನಾಲ್ಕು ಸಾವಿರ ರಾಕ್ಷಸರನ್ನು ಸಂಹರಿಸಿಬಿಟ್ಟನಲ್ಲ! ಏನಿದು ಅದ್ಭುತ! ಇವನ ಶೌರ್ಯವೇನು! ಆಹಾ ಇವನ ಸಾಮರ್ಥ್ಯವೆ!'' ಎಂದು ಕೊಂಡಾಡಿದರು. ರಣಭೂಮಿಯು ಶಾಂತವಾಗಲು ಲಕ್ಷ್ಮಣನು ಸೀತಾದೇವಿಯೊಡನೆ ಗುಹೆಯಿಂದ ಹೊರಟನು. ವಿಜಯಶಾಲಿಯಾದ ಶ್ರೀರಾಮನನ್ನು ಮಹರ್ಷಿಗಳು ಸ್ತುತಿಸುತ್ತಿದ್ದರು. ಆ ವೀರಾಗ್ರಣಿಯು ರಣಭೂಮಿಯಿಂದ ಹೋಗಿ ಆಶ್ರಮವನ್ನು ಪ್ರವೇಶಿಸಿದನು. ಲಕ್ಷ್ಮಣನು ಬಂದು ಅಣ್ಣನನ್ನು ಆದರದಿಂದ ಗೌರವಿಸಿ ಸತ್ಕರಿಸತೊಡಗಿದನು. ಚಂದ್ರಮುಖಿಯಾದ ಜಾನಕಿಯು ಮತ್ತೆ ಮತ್ತೆ ತನ್ನ ಪತಿಯನ್ನು ಅಪ್ಪಿಕೊಂಡು ಹಿರಿ ಹಿಗ್ಗಿದಳು.

೨೮

ರಾವಣನಿಗೆ ಮಾರೀಚನ ಹಿತೋಪದೇಶ. ಮಾಯಾಮೃಗವಾಗಿ ಬಂದ ಮಾರೀಚನಿಂದಾದ ವಂಚನೆ. ಲಕ್ಷ್ಮಣನು ಪರ್ಣಶಾಲೆಯಿಂದ ಹೋಗುವುದು.

ಭೀಮ ಪರಾಕ್ರಮಿಗಳಾದ ಖರ ದೂಷಣ ತ್ರಿಶಿರರೂ ಹದಿನಾಲ್ಕು ಸಾವಿರ ರಾಕ್ಷಸ ಯೋಧರೂ ಅಷ್ಟುಬೇಗನೆ ಶ್ರೀರಾಮನಿಂದ ಹತರಾದುದನ್ನು ಕಂಡು ಶೂರ್ಪಣಖಿಗೆ ದೊಡ್ಡ ಚಿಂತೆಯೇ ಆವರಿಸಿತು. ರಾಮಲಕ್ಷ್ಮಣರ ರಕ್ತವನ್ನು ಕುಡಿಯಬೇಕೆಂದು ಅವಳು ದೂರದಲ್ಲಿ ಕುಳಿತು ಇದನ್ನೆಲ್ಲ ನೋಡುತ್ತಿದ್ದಳು. ಅವಳಿಗೆ ಬೇರೆ ದಾರಿ ತೋರಲಿಲ್ಲ, ನೇರವಾಗಿ ಸಮುದ್ರದ ಮೇಲೆ ಹಾರಿ ತನ್ನ ಅಣ್ಣನಾದ ರಾವಣನ ಬಳಿಗೆ ಬಂದಿಳಿದಳು. ರಾವಣನು ದಿವ್ಯವಸ್ತ್ರಾಭರಣಗಳಿಂದ ಭೂಷಿತನಾಗಿ ಮಂತ್ರಿಗಳೊಡನೆ ಒಡ್ಡೋಲಗದಲ್ಲಿ ಕುಳಿತಿದ್ದನು. ಕಿವಿ ಮೂಗುಗಳನ್ನು ಕತ್ತರಿಸಿಕೊಂಡ ಶೂರ್ಪಣಖಿಯು ಅಣ್ಣನೆದುರಿಗೆ ಹೋಗಿ ನಿಂತು 'ಎ ರಾವಣ, ನೀನು

ಕಾಮಭೋಗಗಳಲ್ಲಿ ಮುಳುಗಿ ಹೋಗಿದ್ದೀಯೆ. ನಿನಗೀಗ ಘೋರವಾದ ವಿಪತ್ತು ಸಮೀಪಿಸಿದೆ. ಯಾರು ರಾಜ್ಯಪಾಲನೆಯ ಕಡೆಗೆ ಗಮನವೀಯದೆ ಸುಖಲೋಲುಪ ರಾಗಿರುತ್ತಾರೋ ಅವರು ಶೀಘ್ರವೇ ಹಾಳಾಗುತ್ತಾರೆ. ಹೇ ರಾಕ್ಷಸ, ನೀನು ಬುದ್ಧಿಹೀನ! ನಿನ್ನ ಬಳಿ ಗೂಢಚಾರರೇ ಇಲ್ಲವೋ ಹೇಗೆ? ತಿಳಿಗೇಡಿಗಳಾದ ಮಂತ್ರಿಗಳನ್ನು ಕಟ್ಟಿಕೊಂಡಿದ್ದೀಯೆ. ಜನಸ್ಥಾನದಲ್ಲಿ ಏನಾಗಿದೆಯೆಂದು ಬಲ್ಲೆಯಾ? ನೀನು ರಕ್ಷಣೆಗಾಗಿ ನೇಮಿಸಿದ್ದ ಖರದೂಷಣಾದಿಗಳೆಲ್ಲರೂ ಸತ್ತು ಹೋದರು! ಹದಿನಾಲ್ಕು ಸಾವಿರ ರಾಕ್ಷಸ ಯೋಧರನ್ನೂ, ಖರ ದೂಷಣ ತ್ರಿಶಿರರನ್ನೂ ಒಬ್ಬನೇ ಒಬ್ಬ ರಾಮನು ಕೊಂದುಹಾಕಿದ್ದಾನೆ. ರಾಕ್ಷಸರ ಕಗ್ಗೊಲೆಯು ನಡೆದಿದ್ದರೂ ನಿನಗೆ ಗೊತ್ತಿಲ್ಲದೇ ಹೋಗಿದೆ'' ಎಂದು ಜರಿದಳು. ಆಗ ರಾವಣನು ಸಿಟ್ಟಿನಿಂದ ''ತಂಗಿ, ರಾಮನೆಂದರೆ ಯಾವನವನು? ಅಷ್ಟು ಜನ ರಾಕ್ಷಸರನ್ನೂ ಒಬ್ಬನೇ ಕೊಂದನೆಂದು ಹೇಳುತ್ತೀಯಲ್ಲ, ಹಾಗಾದರೆ ಅವನ ಆಯುಧಗಳು ಎಂತಹವು? ಯುದ್ಧವೇಕೆ ನಡೆಯಿತು? ಸರಿಯಾಗಿ ಹೇಳು?'' ಎಂದು ಕೇಳಿದನು. ಆ ರಾಕ್ಷಸಿಯು ಕೋಪದಿಂದ ದಿಙ್ಮೂಢಳಾಗಿದ್ದರೂ ಸತ್ಯಸುಳ್ಳುಗಳನ್ನು ಸೇರಿಸಿ ನುಡಿದಳು. ''ರಾವಣ, ರಾಮನು ದಶರಥ ರಾಜನ ಪುತ್ರ. ಆಜಾನುಬಾಹು. ಮನ್ಮಥನಂತಹ ಸುಂದರಾಕೃತಿ. ಖರಾದಿಗಳೊಡನೆ ಅವನು ಯುದ್ಧ ಮಾಡುವುದನ್ನು ನಾನು ನೋಡಿದೆನು. ಪದಾತಿಯಾಗಿದ್ದ ರಾಮನೊಬ್ಬನೇ ಭೀಮಕಾಯರಾದ ಹದಿನಾಲ್ಕು ಸಾವಿರ ರಾಕ್ಷಸರನ್ನು ತೀಕ್ಷ್ಣಾಸ್ತ್ರಗಳಿಂದ ಕೊಂದು ಹಾಕಿ ಮೂರು ಗಳಿಗೆಯಲ್ಲಿ ಧ್ವಂಸ ಮಾಡಿದನು. ಸ್ತ್ರೀಹತ್ಯೆಗೆ ಅಂಜಿ ನನ್ನನ್ನು ಹೀಗೆ ವಿಕಾರ ಗೊಳಿಸಿದ್ದಾನೆ. ಆತನಿಗೆ ಪರಾಕ್ರಮಿಯಾದ ಲಕ್ಷ್ಮಣನೆಂಬ ತಮ್ಮನಿದ್ದಾನೆ. ಅವರಿಬ್ಬರೂ ಮಹಾವೀರರು. ರಾಮನಿಗೆ ಪ್ರೀತಿಪಾತ್ರಳಾದ ಒಬ್ಬ ಪತ್ನಿ ಇದ್ದಾಳೆ. ವನದ ಅಧಿದೇವತೆಯೋ ಇನ್ನೊಬ್ಬ ಲಕ್ಷ್ಮೀದೇವಿಯೋ ಎಂಬಂತೆ ಅವಳು ನನಗೆ ಕಾಣಿಸಿದಳು. ಕಾಯಿಸಿದ ಚಿನ್ನದಂತೆ ಅವಳ ಮೈಬಣ್ಣ, ಅಣ್ಣಾ, ಅವಳು ಜನಕರಾಜನ ಮಗಳಂತೆ. ಆ ತರುಣಿಯಂತೆ ಯಾವ ದೇವಕನ್ಯೆಯೂ ಇಲ್ಲ. ಎಣೆಯಿಲ್ಲದ ರೂಪವತಿಯಾದ ಅವಳು ನಿನಗೆ ತಕ್ಕ ಮಡದಿಯಾಗಬಲ್ಲಳು. ನಿನಗೋಸ್ಕರ ಆ ಸುಂದರಾಂಗಿಯನ್ನು ನಾನು ತರಬೇಕೆಂದು ಪ್ರಯತ್ನಿಸಿದೆ! ಆಗ ರಾಮಲಕ್ಷ್ಮಣರು ನನ್ನನ್ನು ಹೀಗೆ ವಿರೂಪಗೊಳಿಸಿದರು. ಆ ಸೀತೆ ನಿನಗೆ ಬೇಕೆಂಬ ಇಚ್ಛೆಯಿದ್ದರೆ ಕೂಡಲೇ ಬಲಗಾಲನ್ನು ಮುಂದಿಡು! ರಾಮಲಕ್ಷ್ಮಣರನ್ನು ಕೊಂದು ಅವಳನ್ನು ಬಲಾತ್ಕಾರದಿಂದ ಅಪಹರಿಸು. ಮೃತರಾದ ಖರಾದಿ ರಾಕ್ಷಸರಿಗೆ ಆತ್ಮಶಾಂತಿಯನ್ನುಂಟು ಮಾಡು'' ಎಂದು ಮತ್ತೆ ಮತ್ತೆ ಒತ್ತಾಯಪಡಿಸಿದಳು.

ಆಗ ರಾವಣನು ಸೀತೆಯನ್ನು ಅಪಹರಿಸಬೇಕೆಂದು ನಿಶ್ಚಯಿಸಿದನು.

ರಾಮಲಕ್ಷ್ಮಣರೊಡನೆ ಯುದ್ಧಮಾಡುವುದು ಅವನಿಗೆ ಹಿಡಿಸಲಿಲ್ಲ. ರಹಸ್ಯವಾಗಿ ಸೂತನನ್ನು ಕರೆದು ಸಮುದ್ರ ತೀರದಲ್ಲಿದ್ದ ಮಾರೀಚನ ಆಶ್ರಮಕ್ಕೆ ಬಂದನು. ಮಾರೀಚನು ಮಹಾಮಾಯಾವಿಯಾದ ರಾಕ್ಷಸನೆಂಬುದು ಅವನಿಗೆ ತಿಳಿದಿತ್ತು. ಆತನನ್ನು ಕಂಡು ''ಅಯ್ಯಾ ಮಾರೀಚ, ನನಗೆ ನಿನ್ನಿಂದ ಒಂದು ಉಪಕಾರವಾಗ ಬೇಕಾಗಿದೆ. ನಾನು ಬಹಳ ಪೇಚಿನಲ್ಲಿ ಸಿಕ್ಕಿದ್ದೇನೆ. ದಶರಥನ ಮಗನಾದ ರಾಮನೆಂಬುವನು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯಕ್ಕೆ ಬಂದಿದ್ದಾನೆ. ಆ ಕ್ಷತ್ರಿಯಾಧಮನು ನನ್ನ ತಂಗಿಯ ಕಿವಿಮೂಗುಗಳನ್ನು ಕೊಯ್ದು ವಿರೂಪಗೊಳಿಸಿ ದ್ದಾನೆ. ಖರ ದೂಷಣಾದಿಗಳನ್ನೂ ಅವರ ಸೇನೆಯನ್ನೂ ಕೊಂದು ಹಾಕಿದ್ದಾನೆ. ಇದಕ್ಕೆ ನಿಮಿತ್ತವಾದರೂ ಏನು? ತನಗೆ ಬಲವಿದೆಯೆಂದು ಕೊಬ್ಬಿನಿಂದ ಮಾಡಿದ ದುಷ್ಕೃತ್ಯ ವಿದು. ಇದಕ್ಕೆ ನಾನು ಸೇಡು ತೀರಿಸಿಕೊಳ್ಳಬೇಕು. ಅವನ ಹೆಂಡತಿಯಾದ ಸೀತೆಯನ್ನು ಅಪಹರಿಸಿ ತರುವುದೇ ಇದಕ್ಕೆ ಪ್ರತೀಕಾರ. ನೀನು ಆಶ್ಚರ್ಯಕರವಾದ ಒಂದು ಜಿಂಕೆಯ ರೂಪವನ್ನು ಧರಿಸಿ ಸೀತೆಯಿರುವ ಬಳಿಯಲ್ಲಿ ಸುಳಿದಾಡು. ಚಪಲೆಯಾದ ಆ ಹೆಂಗಸು ಆ ಜಿಂಕೆ ಬೇಕೆಂದು ಹಟಹಿಡಿಯುವಳು. ರಾಮಲಕ್ಷ್ಮಣರು ನಿನ್ನನ್ನು ಹಿಡಿಯಲು ಬಂದಾರು. ನೀನು ಉಪಾಯದಿಂದ ಅವರನ್ನು ಬಹುದೂರದವರೆಗೆ ಕರೆದುಕೊಂಡು ಹೋಗು. ಇತ್ತ ಏಕಾಕಿನಿಯಾದ ಸೀತೆಯನ್ನು ನಾನು ಅಪಹರಿಸಿ ತರುವೆನು'' ಎಂದನು.

ಆ ಮಾತನ್ನು ಕೇಳಿ ಮಾರೀಚನ ಮುಖವು ಕಪ್ಪಿಟ್ಟಿತು. ಅವನು ಹೆದರಿಕೆಯಿಂದ ಬೆವರಿಹೋದನು. ''ಮಹಾರಾಜ ರಾವಣ, ರಾಮನು ತಂದೆಯ ಮಾತಿನಂತೆ ಧರ್ಮಪಾಲನೆಗಾಗಿ ಅರಣ್ಯಕ್ಕೆ ಬಂದಿದ್ದಾನೆ. ಆತನ ವಿಷಯವನ್ನು ನೀನು ತಪ್ಪಾಗಿ ಕೇಳಿದ್ದೀಯೆ. ರಾಮನು ಧರ್ಮನಿಷ್ಠನೂ, ಅಸದೃಶ ಪರಾಕ್ರಮಿಯೂ ಆದವನು. ನಿಷ್ಕಾರಣವಾಗಿ ಶೂರ್ಪಣಖಿಯನ್ನು ವಿರೂಪಗೊಳಿಸಿಲ್ಲ. ಖರಾದಿಗಳನ್ನು ಕೊಲ್ಲಲು ಸಾಕಷ್ಟು ಕಾರಣವಿರಲೇಬೇಕು. ಸೀತೆಯಂತಹ ಪತಿವ್ರತೆಯನ್ನು ನೀನು ಅಪಹರಿಸಬಲ್ಲೆಯಾ? ತನ್ನ ತೇಜಸ್ಸಿನಿಂದಲೇ ಅವಳು ಸುರಕ್ಷಿತೆಯಾಗಿದ್ದಾಳೆ. ಅಗ್ನಿಯಿಂದ ಜ್ವಾಲೆಯನ್ನೂ, ಸೂರ್ಯನಿಂದ ಅವನ ಪ್ರಭೆಯನ್ನೂ ಬೇರೆ ಮಾಡಲಾದೀತೆ? ಸೀತೆ ನಿನಗೆ ದಕ್ಕತಕ್ಕವಳಲ್ಲ. ಈ ದುಷ್ಟ ಆಲೋಚನೆಯನ್ನು ಬಿಟ್ಟು ಬಿಡು'' ಎಂದನು. ರಾವಣನು ಮಾರೀಚನನ್ನೇ ಧಿಕ್ಕರಿಸಿ ಮಾತಾಡಿದನು. ಮಾರೀಚನು ''ಮಹಾರಾಜ, ನಾನು ರಾಮನ ಪರಾಕ್ರಮವೇನೆಂಬುದನ್ನು ಬಲ್ಲೆ. ವಿಶ್ವಾಮಿತ್ರನ ಆಶ್ರಮದಲ್ಲಿ ಅವನು ಇದ್ದಾಗ ಇನ್ನೂ ಚಿಕ್ಕವಯಸ್ಸಿನವನಾಗಿದ್ದನು. ನನ್ನ ತಮ್ಮ ಸುಬಾಹುವನ್ನು ಒಂದೇ ಬಾಣದಿಂದ ಕೊಂದು ಹಾಕಿದನು. ನಾನು ಮರದ

ತರಗೆಲೆಯಂತೆ ಹಾರಿ ಸಮುದ್ರದಲ್ಲಿ ಬಿದ್ದೆನು. ಆತನ ಹೆಸರನ್ನು ಹೇಳಿದರೇ ನನಗೆ ನಡುಕ ಹುಟ್ಟುತ್ತದೆ. ರಕಾರಾದಿಯಾದ ಒಂದು ಶಬ್ದವನ್ನು ಕೇಳಿದರೇ ನನಗೆ ಹೆದರಿಕೆಯಾಗುತ್ತದೆ! ಖಂಡಿತ ರಾಮನೊಡನೆ ವಿರೋಧ ಬೇಡ'' ಎಂದನು. ರಾವಣನು ಮತ್ತಷ್ಟು ಉದ್ದೀಪ್ತನಾಗಿ ''ಎಲಾ ರಾಕ್ಷಸ, ನನಗೆ ಪ್ರತಿಯಾಗಿ ಹೇಳುವೆಯಾ? ನಿನ್ನನ್ನು ಈಗಲೇ ಕೊಂದು ಬಿಡುವೆನು'' ಎಂದು ತನ್ನ ಖಡ್ಗವನ್ನು ಹಿರಿದನು. ಆಗ ಮಾರೀಚನು ''ಈ ದುಷ್ಟನ ಸಹವಾಸದಲ್ಲಿ ನನಗೆ ಮೃತ್ಯು ಒದಗಿತು. ಈತನ ಕೈಯಿಂದ ಸಾಯುವುದಕ್ಕಿಂತ ಪುಣ್ಯಾತ್ಮನಾದ ರಾಮನ ಕೈಯಿಂದಲೇ ಸಾಯುವುದು ಒಳ್ಳೆಯದು'' ಎಂದು ನಿರ್ಧರಿಸಿ ರಾವಣನೊಡನೆ ದಂಡಕಾರಣ್ಯಕ್ಕೆ ಬರಲು ಒಪ್ಪಿದನು.

ಅವರಿಬ್ಬರೂ ಶ್ರೀರಾಮನ ಪರ್ಣಶಾಲೆಯ ಕಡೆಗೆ ಹೊರಟರು. ಪರ್ಣಶಾಲೆಗೆ ಸ್ವಲ್ಪದೂರದಲ್ಲಿ ಮಾರೀಚನು ರಾವಣನ ಹೇಳಿಕೆಯಂತೆ ಜಿಂಕೆಯ ರೂಪವನ್ನು ತಾಳಿ ಶ್ರೀರಾಮನ ಆಶ್ರಮದ ಬಳಿಯಲ್ಲಿ ಸುಳಿಯತೊಡಗಿದನು. ನೋಡಲು ಅತ್ಯದ್ಭುತ ವಾದ ಆ ಜಿಂಕೆಗೆ ಇಂದ್ರನೀಲಮಣಿಯಂತೆ ಹೊಳೆಯುವ ಕೊಂಬುಗಳಿದ್ದವು. ಮುಖದ ಒಂದು ಪಾರ್ಶ್ವವು ಕೆಂಪು ಕಮಲದಂತೆಯೂ ಇನ್ನೊಂದು ಪಾರ್ಶ್ವವು ನೀಲೋತ್ಪಲದಂತೆಯೂ ಇತ್ತು. ಇಂದ್ರನೀಲ ಮಣಿಯಂತೆ ಹೊಳೆಯುವ ಕಪ್ಪಾದ ದೇಹ. ಹೊಟ್ಟೆಯ ಕೆಳಭಾಗವು ಮಲ್ಲಿಗೆಯಂತೆ ಬೆಳ್ಳಗೆ ಹೊಳೆಯುತ್ತಿತ್ತು. ಅದರ ಕಾಲ್ಗೊರಸು ವೈಡೂರ್ಯಮಣಿಯಂತೆ ರಂಜಿಸುತ್ತಿತ್ತು. ಹೀಗೆ ಎಲ್ಲಿಯೂ ಕಾಣಸಿಗದ ಪರಮ ರಮಣೀಯವಾದ ಆ ಜಿಂಕೆಯು ಸೀತೆಯ ಕಣ್ಣಿಗೆ ಗೋಚರಿಸಿತು. ಮಾಯಾವಿಯಾದ ಮಾರೀಚನು ಉದ್ದೇಶ ಪೂರ್ವಕವಾಗಿಯೇ ಜಿಂಕೆಯ ರೂಪದಿಂದ ಹುಲ್ಲನ್ನು ಮೇಯುತ್ತ ಆಟವಾಡುತ್ತ ಮತ್ತೆ ಮತ್ತೆ ಸೀತೆಗೆ ಕಾಣಿಸಿಕೊಂಡನು. ಹೂಗಳನ್ನು ಬಿಡಿಸುತ್ತಿದ್ದ ವೈದೇಹಿಯು ಆ ಮೃಗವನ್ನು ಅಚ್ಚರಿಯಿಂದ ಕಣ್ಣರಳಿಸಿ ಪ್ರೇಮದಿಂದ ನೋಡಿದಳು. ಆ ಸುಂದರಿಯು ರಾಮ ಲಕ್ಷ್ಮಣರನ್ನು ಕೂಗಿ ಕರೆದು ಜಿಂಕೆಯನ್ನು ತೋರಿಸಿದಳು. ಲಕ್ಷ್ಮಣನು ಜಿಂಕೆಯನ್ನು ಗಮನಿಸಿ ನೋಡಿ ''ಅಣ್ಣ ಇದು ನಿಜವಾದ ಜಿಂಕೆಯಲ್ಲ! ಇಂತಹ ಜಿಂಕೆ ಇರುವುದೇ ಇಲ್ಲ. ಇದು ರಾಕ್ಷಸರ ಇನ್ನೊಂದು ಮಾಯೆಯೇ ಸರಿ. ಪ್ರಾಯಶಃ ಮಾಯಾವಿಯಾದ ಮಾರೀಚನೇ ಇವನಾಗಿದ್ದರೂ ಆಶ್ಚರ್ಯವಿಲ್ಲ!'' ಎಂದನು. ಸೀತೆಯು ಸೌಮಿತ್ರಿಯ ಮಾತಿಗೆ ಅಡ್ಡಬಂದು ನಸುನಗೆಯಿಂದ ಶ್ರೀರಾಮನನ್ನು ಕುರಿತು ''ಆರ್ಯಪುತ್ರ, ಈ ಮೃಗವು ಬಹಳ ಚೆನ್ನಾಗಿದೆ. ಮೈಮೇಲೆ ರತ್ನದ ಕಣಗಳು ಹರಡಿದಂತಿದೆ. ಅಬ್ಬಾ! ಇದರ ಸೌಂದರ್ಯವೇ! ನನಗೆ ಇದನ್ನು ಹಿಡಿದು ಕೊಡು. ಇದರೊಡನೆ ಆಟವಾಡುತ್ತ

ಸಂತೋಷದಿಂದಿರುವೆನು'' ಎಂದಳು. ಶ್ರೀರಾಮನು ಲಕ್ಷ್ಮಣನ ಮುಖವನ್ನು ನೋಡಿದನು. ಅವನು ಮತ್ತೆ ''ಅಣ್ಣ, ಇಂತಹ ಜಿಂಕೆ ಜಗತ್ತಿನಲ್ಲಿಯೇ ಇರುವುದಿಲ್ಲ. ನಿಶ್ಚಯವಾಗಿ ಇದು ಮೋಸ. ಅದರ ಸುದ್ದಿ ನಮಗೆ ಬೇಡ. ನಾವು ಆಯುಧಧಾರಿಗಳಾಗಿ ಎಚ್ಚರದಿಂದಿರೋಣ. ಆ ಶೂರ್ಪಣಖಿಯ ನೆವದಿಂದ ರಾಕ್ಷಸರ ಕಾಟ ಅಧಿಕವಾಯಿತು'' ಎಂದನು. ಸೀತೆಯು ''ನನಗೆ ಆ ಜಿಂಕೆ ಖಂಡಿತವಾಗಿ ಬೇಕು. ಸಿಗದಿದ್ದರೆ ಅದನ್ನು ಕೊಂದು ಬಿಡು. ಅದರ ಚರ್ಮವು ಬಹು ಸುಂದರವಾಗಿದೆ. ಅಯೋಧ್ಯೆಯಲ್ಲಿ ಅತ್ತೆ ಮೊದಲಾದವರು ಇದನ್ನು ನೋಡಿ ಆಶ್ಚರ್ಯಪಡಲಿ'' ಎಂದಳು. ಆಗ ಶ್ರೀರಾಮನು ''ಲಕ್ಷ್ಮಣ, ನೀನು ಹೇಳಿದಂತೆ ಇದೊಂದು ರಾಕ್ಷಸ ಮಾಯೆಯಾಗಿದ್ದರೂ ಇರಬಹುದು. ಆದರೆ ಸೀತೆಗೆ ಇದರ ಮೇಲೆ ತುಂಬ ಆಸೆಯಾಗಿದೆ. ಅದನ್ನು ಹಿಡಿದು ತರಲು ನಾನು ಪ್ರಯತ್ನಿಸುವೆನು. ನನಗೆ ಯಾವ ರಾಕ್ಷಸರ ಭಯವೂ ಇಲ್ಲ. ನೀನು ಆಶ್ರಮದಲ್ಲೇ ಇದ್ದು ಸೀತೆಯನ್ನು ಎಚ್ಚರಿಕೆಯಿಂದ ನೋಡಿಕೊಂಡಿರು'' ಎಂದು ಹೇಳಿ ಧನುಷ್ಪಾಣಿಯಾಗಿ ಆ ಮಾಯಾಮೃಗವನ್ನು ಹಿಡಿಯಲು ಧಾವಿಸಿದನು.

ವಿಪತ್ಕಾಲವು ಬಂದೊದಗಿದಾಗ ಎಂತಹ ಬುದ್ಧಿಶಾಲಿಗೂ ಬುದ್ಧಿ ಕೆಡುವುದೆಂಬುದು ಸುಳ್ಳಲ್ಲ. ಶ್ರೀರಾಮನು ಜಿಂಕೆಯನ್ನು ಹಿಡಿಯಲು ಹೊರಟೇಬಿಟ್ಟನು. ಮಾರೀಚನು ತನ್ನ ಉದ್ದೇಶವು ಫಲಿಸಿತೆಂದು ಅವನ ಕೈಗೆ ಸಿಗದಂತೆ ತಪ್ಪಿಸಿಕೊಂಡು ಓಡತೊಡಗಿದನು. ಒಂದು ಸಲಕ್ಕೆ ಅಡವಿಯ ಪದರುಗಳಲ್ಲಿ ಮರೆಯಾಗುತ್ತಾ ಮತ್ತೆ ಕಾಣಿಸಿಕೊಳ್ಳುತ್ತಾ, ಕೈಗೆ ಸಿಕ್ಕಿತೆಂದೇ ತಿಳಿದು ರಾಘವನು ಧಾವಿಸಿ ಬಂದಾಗ ಚಮತ್ಕಾರದಿಂದ ದೂರಕ್ಕೆ ನೆಗೆದು ತಪ್ಪಿಸಿಕೊಳ್ಳುತ್ತಾ, ನಾನಾ ಬಗೆಯ ಮೋಸದ ಆಟವನ್ನಾಡಿ ಪರ್ಣಶಾಲೆಯಿಂದ ಬಹುದೂರದವರೆಗೆ ರಾಮನನ್ನು ಕರೆದೊಯ್ದನು. ಶ್ರೀರಾಮನ ತಾಳ್ಮೆ ಮುಗಿಯಿತು. ''ಈ ಜಿಂಕೆ ಕೈಗೆ ಸಿಕ್ಕತಕ್ಕದಲ್ಲ. ಜಾನಕಿಯು ಹೇಳಿದಂತೆ ಇದನ್ನೀಗ ಕೊಂದು ಬಿಡುವೆನು'' ಎಂದು ನಿಶ್ಚಯಿಸಿ ಒಂದು ನಿಶಿತಾಸ್ತ್ರವನ್ನು ಧನುಸ್ಸಿಗೆ ಹೂಡಿ ಜಿಂಕೆಗೆ ಗುರಿಯಿಟ್ಟು ಹೊಡೆದನು. ಲಕ್ಷ್ಮಣನು ರಾಮನೊಡನೆ ಬರಲಿಲ್ಲವೆಂಬುದು ಮಾರೀಚನಿಗೆ ತಿಳಿದಿತ್ತು. ಆ ಮಾಯಾವಿಯು ಪ್ರಾಣಬಿಡುವ ಕಾಲ ಬಂದಾಗ ಘೋರಾಕೃತಿಯ ರಾಕ್ಷಸರೂಪವನ್ನು ತಳೆದು ಶ್ರೀರಾಮನ ಧ್ವನಿಯನ್ನೇ ಅನುಕರಿಸಿ ''ಹಾ ಸೀತೆ, ಹಾ ಲಕ್ಷ್ಮಣ'' ಎಂದು ದೈನ್ಯಧ್ವನಿಯಿಂದ ಗಟ್ಟಿಯಾಗಿ ಕೂಗಿದನು. ರಾಮಬಾಣದ ಹೊಡೆತದಿಂದ ಅವನು ನೆಲದ ಮೇಲುರುಳಿ ಅಸುವನ್ನು ನೀಗಿದನು. ಘೋರಾಕಾರದ ಆ ರಾಕ್ಷಸನನ್ನು ನೋಡಿದೊಡನೆ ''ಆಹಾ, ಇದು ಮಾರೀಚನ ಮಾಯೆಯೇ ಹೌದು. ಲಕ್ಷ್ಮಣನು ಹೇಳಿದಂತೆಯೇ ಆಯಿತು. ನಾನು ಸಂಹರಿಸಿದ್ದು ಮಾರೀಚನನ್ನು. ಈ ರಾಕ್ಷಸನು

ಸಾಯುವಾಗ 'ಹಾ ಸೀತೆ, ಹಾ ಲಕ್ಷ್ಮಣ' ಎಂದು ಕೂಗಿ ಪ್ರಾಣಬಿಟ್ಟನಲ್ಲ. ಹಾಗೆ ಕೂಗಿದ್ದು ನಮ್ಮನ್ನು ಮೋಸಗೊಳಿಸುವುದಕ್ಕೇ ಸರಿ. ಇದನ್ನು ಕೇಳಿ ಸೀತೆ ಏನಾಗುವಳೋ, ಲಕ್ಷ್ಮಣನು ಏನು ಮಾಡುವನೋ ಎಂದು ಧರ್ಮಾತ್ಮನಾದ ಶ್ರೀರಾಮನು ಚಿಂತೆಗೊಳಗಾದನು. ಮೈ ಜುಮ್ಮೆಂದಿತು. ಇನ್ನು ಯಾವ ಕೇಡು ಕಾದಿದೆಯೋ ಎಂದು ಜನಸ್ಥಾನದಲ್ಲಿದ್ದ ತನ್ನ ಆಶ್ರಮದ ಕಡೆಗೆ ತ್ವರೆಯಿಂದ ಹೊರಟನು.

ಇತ್ತ ಪರ್ಣಶಾಲೆಯಲ್ಲಿದ್ದ ಸೀತೆಗೆ 'ಹಾ ಸೀತೆ ಹಾ ಲಕ್ಷ್ಮಣ' ಎಂಬ ಆರ್ತಸ್ವರವು ಕೇಳಿಸಿತು. ಆ ಧ್ವನಿಯು ತನ್ನ ಪತಿಯ ಧ್ವನಿಯಂತೆಯೇ ಇದ್ದುದರಿಂದ ಸಂಭ್ರಾಂತಳಾಗಿ ಲಕ್ಷ್ಮಣನನ್ನು ಕುರಿತು ''ಲಕ್ಷ್ಮಣಾ ಲಕ್ಷ್ಮಣಾ, ಆ ಧ್ವನಿಯು ನಿನ್ನ ಅಣ್ಣನ ಧ್ವನಿಯೇ ಸರಿ. ಅಯ್ಯೋ! ಯಾವುದೋ ಸಂಕಟದಲ್ಲಿ ಅವನು ಸಿಕ್ಕಿಕೊಂಡಿದ್ದಾನೆ. ನನ್ನ ಜೀವ ತಳಮಳಿಸುತ್ತಿದೆ. ನೀನು ಬೇಗನೆ ಅವನ ಸಹಾಯಕ್ಕಾಗಿ ಓಡುತ್ತ ಹೋಗು'' ಎಂದಳು. ಲಕ್ಷ್ಮಣನು ''ಅತ್ತಿಗೆ, ಹೆದರಬೇಡ. ಅಣ್ಣನಿಗೆ ಯಾವ ವಿಪತ್ತೂ ಬರದು. ಅದು ರಾಕ್ಷಸರ ಮಾಯೆಯೇ ಸರಿ. ಆತಂಕಗೊಳ್ಳಬೇಡ'' ಎಂದನು. ಸೀತೆಯು ಮಾತ್ರ ಲಕ್ಷ್ಮಣನು ಹೋಗಲೇಬೇಕೆಂದು ಒತ್ತಾಯ ಮಾಡಿದಳು. ಅವನು ತನ್ನ ಅಣ್ಣನ ಆಜ್ಞೆಯನ್ನೇ ಮನ್ನಿಸಿ ''ದೇವಿ, ಮೂರು ಲೋಕಗಳನ್ನೂ ರಕ್ಷಿಸಬಲ್ಲ ಮಹಾವೀರನಾದ ಶ್ರೀರಾಮನಿಗೆ ನನ್ನಿಂದ ರಕ್ಷಣೆ ಆಗಬೇಕೆ? ನಾನು ಹೇಳಿದಂತೆ ಅದು ರಾಕ್ಷಸರ ಮೋಸವೇ ಸರಿ. ನೀನು ನಿಶ್ಚಿಂತೆಯಿಂದಿರು. ಏನೂ ಆಗುವುದಿಲ್ಲ'' ಎಂದನು. ಶೋಕಾರ್ತಳಾದ ಸೀತೆಯು ಕುಪಿತಳಾಗಿ ''ಲಕ್ಷ್ಮಣ, ಇಂತಹ ಸಂದರ್ಭದಲ್ಲಿಯೂ ನೀನೇಕೆ ಹೋಗುವುದಿಲ್ಲ? ಶ್ರೀರಾಮನು ಸಾಯಲೆಂದೇ ನಿನ್ನ ಇಚ್ಛೆಯಾಗಿರಬೇಕು! ನನ್ನ ಮೇಲಿನ ಆಸೆಯಿಂದ ನೀನು ಹೀಗೆ ಮಾಡುತ್ತಿದ್ದೀಯೆ. ನನ್ನನ್ನು ಗುರಿಯಾಗಿಟ್ಟು ಕೊಂಡೇ ನೀನು ಬಂದಿದ್ದೀಯೆ!'' ಎಂದುಬಿಟ್ಟಳು. ಹೆಣ್ಣು ಜಿಂಕೆಯಂತೆ ಹೆದರಿ ಕಂಗಾಲಾದ ಸೀತೆಯನ್ನು ನೋಡಿ ಲಕ್ಷ್ಮಣನು ಹೀಗೆಂದನು : ''ತಾಯಿ, ನೀನು ಹಾಗೆಲ್ಲ ಮಾತಾಡಬಾರದು. ಅಣ್ಣನನ್ನು ಎದುರಿಸಿ ಯುದ್ಧ ಮಾಡುವ ಎದೆಗಾರಿಕೆ ಯಾವನಿಗಿದೆ? ಹದಿನಾಲ್ಕು ಸಾವಿರ ರಾಕ್ಷಸರನ್ನು ಒಬ್ಬನೇ ಕೊಚ್ಚಿ ಹಾಕಿರುವುದನ್ನು ನೀನು ಕಣ್ಣಾರೆ ನೋಡಿದ್ದೀಯೆ. ನಿನ್ನೊಬ್ಬಳನ್ನೇ ಈಗ ಪರ್ಣಶಾಲೆಯಲ್ಲಿ ಬಿಟ್ಟು ಹೋಗುವುದು ಸರ್ವಥಾ ಯೋಗ್ಯವಲ್ಲ. ನಾನು ಇಲ್ಲಿಂದ ಚಲಿಸಬಾರದೆಂದು ಅಣ್ಣನೇ ಆಜ್ಞೆಮಾಡಿದ್ದಾನೆ. ನಿನಗೆ ಯಾವುದಾದರೂ ಅಪಾಯ ಸಂಭವಿಸೀತು. ನಾನೀಗ ಹೋಗಬಾರದು'' ಎಂದನು. ಸೀತೆಗೆ ಇನ್ನೂ ಕೋಪ ಹೆಚ್ಚಿತು. ''ಎಲಾ ಅಯೋಗ್ಯ, ನೀನು ಘಾತುಕ. ದಾಯಾದಿಯಾದ ನೀನು ಸವತಿಯ ಮಗನಲ್ಲವೆ? ನೀನು

ಶ್ರೀರಾಮನನ್ನು ಹಿಂಬಾಲಿಸಿ ಬಂದಿರುವುದು ದುರುದ್ದೇಶದಿಂದ. ಪತಿಯನ್ನೇ ನಂಬಿರುವ ನಾನು ನಿನ್ನನ್ನು ಕಣ್ಣೆತ್ತಿಯೂ ನೋಡತಕ್ಕವಳಲ್ಲ. ನಿನ್ನ ದುರುದ್ದೇಶ ತಿಳಿಯಿತು. ನಿನ್ನೆದುರಿಗೇ ನಾನು ಪ್ರಾಣವನ್ನು ಬಿಡುತ್ತೇನೆ'' ಎಂದು ಹಲುಬಿ ಲಕ್ಷ್ಮಣನನ್ನು ಮತ್ತೆ ಮತ್ತೆ ನಿಂದಿಸಿದಳು. ಮೈನವಿರೇಳಿಸುವ ಆ ಮಾತನ್ನು ಕೇಳಿ ನಿರ್ಮಲ ಚಿತ್ತನಾದ ಲಕ್ಷ್ಮಣನ ಮನಸ್ಸು ಕೆಟ್ಟು ಹೋಯಿತು. ''ಜನಕರಾಜಪುತ್ರಿ, ಕಾಯಿಸಿದ ಕಬ್ಬಿಣದ ಸರಳನ್ನು ನನ್ನ ಕಿವಿಗೆ ಇರಿದಂತಾಯಿತು. ನೀನಾಡಿದ ಈ ಕೆಟ್ಟ ಮಾತಿಗೆ ವನದೇವತೆಗಳು ಸಾಕ್ಷಿಯಾಗಿರಲಿ. ನನ್ನನ್ನು ಹೀಗೆ ಶಂಕಿಸುವೆಯಾ? ಥೂ, ಹಾಳಾಗಿ ಹೋಗು'' ಎಂದು ನುಡಿದು ಆ ಲಕ್ಷ್ಮಣನು ''ದೇವಿ, ನಿನಗೆ ಶುಭವಾಗಲಿ. ಶ್ರೀರಾಮನಿರುವಲ್ಲಿಗೆ ಹೋಗುವೆನು. ಆದರೆ ಅವನೊಡನೆ ಮತ್ತೆ ಬಂದು ನಿನ್ನನ್ನು ಕಾಣುವಂತಾದೀತೆ?'' ಎಂದನು. ಜಾನಕಿಯು ಅಳುತ್ತಲೇ ''ಲಕ್ಷ್ಮಣ, ಶ್ರೀರಾಮನನ್ನು ಬಿಟ್ಟು ಇನ್ನೊಬ್ಬನನ್ನೂ ನಾನು ಎಡಗಾಲಿಂದಲೂ ಮುಟ್ಟುವುದಿಲ್ಲ; ತಿಳಿದಿರು. ಗೋದಾವರೀ ನದಿಗೆ ಬೀಳುವೆನು'' ಎಂದಳು. ಲಕ್ಷ್ಮಣನ ಮನಸ್ಸು ಕದಡಿ ಹೋಯಿತು. ಆದರೂ ಅವನು ಸೀತೆಗೆ ಕೈಮುಗಿದು ಅಭಿವಾದನೆ ಮಾಡಿ 'ತಾಯಿ, ನಿನ್ನ ಇಷ್ಟದಂತಾಗಲಿ' ಎಂದು ಹೇಳಿ ಧನುರ್ಬಾಣಗಳನ್ನು ತೆಗೆದುಕೊಂಡು ಪರ್ಣಶಾಲೆಯಿಂದ ಹೊರಟನು. ಮತ್ತೆ ಮತ್ತೆ ಹಿಂದಿರುಗಿ ಕಣ್ಣಿಗೆ ಕಾಣುವವರೆಗೂ ಮೈಥಿಲಿಯನ್ನು ನೋಡುತ್ತ ಅರಣ್ಯದಲ್ಲಿ ಮರೆಯಾದನು.

೨೮

ರಾವಣನಿಂದ ಸೀತಾಪಹರಣ. ಜಟಾಯುವಿನ ಪರಾಜಯ. ಲಂಕಾಪ್ರವೇಶ.

ದಶಕಂಠನು ಈ ಸಮಯವನ್ನು ಕಾಯುತ್ತ ಅಡಗಿ ನಿಂತಿದ್ದನು. ಒಡನೆಯೇ ಅವನು ಸಂನ್ಯಾಸಿಯ ವೇಷವನ್ನು ಧರಿಸಿ ದಂಡ ಕಮಂಡಲುಗಳನ್ನು ಹಿಡಿದು ಪರ್ಣಶಾಲೆಯ ಬಳಿಗೆ ಬಂದನು. ಕ್ರೂರಕರ್ಮಿಯಾದ ರಾವಣನನ್ನು ನೋಡಿ ಜನಸ್ಥಾನದಲ್ಲಿ ಬೆಳೆದಿದ್ದ ಮರಗಳು ಅಲ್ಲಾಡಲಿಲ್ಲ! ಗಾಳಿ ಬೀಸಲಿಲ್ಲ, ಗೋದಾವರೀ ನದಿಯು ಹೆದರಿ ಮೆಲ್ಲಗೆ ಹರಿಯತೊಡಗಿದಳು! ಸಾಧುವೇಷವನ್ನು ಧರಿಸಿದ ಆ ದುಷ್ಟನು, ಚಿತ್ರಾನಕ್ಷತ್ರದ ಬಳಿಗೆ ಶನಿಯು ಬಂದಂತೆ ವೈದೇಹಿಯ ಬಳಿಗೆ ಬಂದನು. ಹುಲ್ಲು ಮುಚ್ಚಿದ ಹಾಳುಬಾವಿಯಂತಿದ್ದ ಆ ಪಾಪಿಯು ಪೂರ್ಣಚಂದ್ರಾನನೆಯಾದ, ಹಳದಿಯ ಬಣ್ಣದ ರೇಷ್ಮೆಯ ಸೀರೆಯನ್ನುಟ್ಟಿದ್ದ ವೈದೇಹಿಯನ್ನು ನೋಡಿ ಆನಂದದಿಂದ ಹಿಗ್ಗುತ್ತ ಮುಂದೆ ಬಂದನು. ಆತನು ''ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ

ಸಂನ್ಯಾಸಯೋಗಾತ್ ಯತಯಃ ಶುದ್ಧಸತ್ವಾಃ'' ಎಂಬ ವೇದ ವಾಕ್ಯವನ್ನು ಘೋಷಿಸುತ್ತ ಬಂದು ಸೀತಾದೇವಿಯನ್ನು ನೋಡಿ ''ಎಲಾ ಬಂಗಾರದ ಮೈಬಣ್ಣದವಳೆ, ನೀನು ಯಾರು? ಘೋರವಾದ ಈ ಅರಣ್ಯದಲ್ಲಿ ಒಂಟಿಯಾಗಿರುವೆಯಲ್ಲ! ನಿನಗೆ ಭಯವಾಗುವುದಿಲ್ಲವೆ? ಮಾಯಾವಿಗಳಾದ ರಾಕ್ಷಸರಿರುವ ಈ ಅರಣ್ಯದಲ್ಲಿ ನೀನು ಒಂಟಿಯಾಗಿರಬಾರದು!'' ಎಂದನು. ಸೀತೆಯು ಚಿಂತಾಕ್ರಾಂತಳಾಗಿದ್ದರೂ ಆ ಸಂನ್ಯಾಸಿಯನ್ನು ನೋಡಿ ಅತಿಥಿಸತ್ಕಾರವು ತನ್ನ ಕರ್ತವ್ಯವೆಂದು ಭಾವಿಸಿದಳು. ಕಾಲು ತೊಳೆಯಲು ನೀರನ್ನು ತಂದು ಕೊಟ್ಟು ಕುಳಿತುಕೊಳ್ಳಲು ಆಸನವನ್ನಿತ್ತು ಉಪಚರಿಸಿದಳು. ವೇದಘೋಷ ಮಾಡುತ್ತ ಕಮಂಡಲು ಧಾರಿಯಾಗಿ ಬಂದ ಆತನು ಒಬ್ಬ ಸಾಧುಬ್ರಾಹ್ಮಣನೆಂದೇ ಸೀತೆ ಭಾವಿಸಿದಳು. ಕೆಲವು ಕಂದಮೂಲಫಲಗಳನ್ನು ಎದುರಿಗೆ ತಂದಿಟ್ಟು 'ಇವನ್ನು ಸ್ವೀಕರಿಸಬೇಕು' ಎಂದಳು. ರಾವಣನಿಗೆ ಅದಾವುದೂ ಬೇಕಾಗಿರಲಿಲ್ಲ. ಅವನು ಸೀತೆಯ ವೃತ್ತಾಂತವನ್ನು ಕೇಳಿದನು. ಸೀತೆಯು ಏನ್ನಾದರೂ ಇವನು ಬ್ರಾಹ್ಮಣ ಸಂನ್ಯಾಸಿ. ಅತಿಥಿಯಾಗಿ ಬಂದಿದ್ದಾನೆ ಎಂದು ಆಲೋಚಿಸಿ, ಮನಸ್ಸು ಶ್ರೀರಾಮನ ಕಡೆಗೇ ಧಾವಿಸುತ್ತಿದ್ದರೂ ತನ್ನ ವೃತ್ತಾಂತವೆಲ್ಲವನ್ನೂ ಹೇಳಿದಳು. ಆಮೇಲೆ ''ಎಲೈ ಬ್ರಾಹ್ಮಣ, ನಿನ್ನ ಹೆಸರೇನು? ಗೋತ್ರ ಯಾವುದು? ನೀನಾದರೂ ಏಕಾಕಿಯಾಗಿ ಅರಣ್ಯಕ್ಕೆ ಬಂದದ್ದೇಕೆ?'' ಎಂದು ಕೇಳಿದಳು. ಆಗ ರಾವಣನು ಇನ್ನು ಹೆಚ್ಚು ಸಮಯವಿಲ್ಲವೆಂದು ಭಾವಿಸಿ ''ಸೀತೆ, ದೇವಾಸುರ ಮನುಷ್ಯಲೋಕಗಳು ಯಾರಿಗೆ ಹೆದರಿ ನಡುಗುತ್ತವೆಯೋ ಅಂತಹ ರಾಕ್ಷಸೇಶ್ವರನಾದ ರಾವಣನೇ ನಾನು! ಸಮುದ್ರಮಧ್ಯದಲ್ಲಿರುವ ಲಂಕೆಯು ನನ್ನ ರಾಜಧಾನಿ. ನೀನು ನನ್ನ ಭಾರ್ಯೆಯಾಗು. ನನ್ನ ಎಲ್ಲ ರಾಣಿಯರಿಗೂ ಅಧೀಶ್ವರಿಯಾಗು. ದಿಕ್ಕುಗೆಟ್ಟು ಅನಾಥನಾಗಿ ಬಂದಿರುವ ಈ ರಾಮನಿಂದ ನಿನಗೇನಾಗಬೇಕು''? ಎಂದನು. ಸೀತೆಯು ಆ ಮಾತನ್ನು ಕೇಳಿ ಎದೆನಡುಗಿದರೂ ಮಹಾಧೈರ್ಯವನ್ನು ತಳೆದು ''ಎಲಾ ನೀಚ, ಸಂನ್ಯಾಸಿ ವೇಷವನ್ನು ಧರಿಸಿ ಬಂದ ವಂಚಕ ನೀನು. ನಾನು ಯಾರೆಂದು ತಿಳಿದೆ? ವೀರಾಗ್ರೇಸರನಾದ ಶ್ರೀರಾಮನ ಧರ್ಮಪತ್ನಿ. ನನ್ನನ್ನು ನೀನು ಬಯಸುವೆಯಾ? ಘೋರಸರ್ಪದ ಬಾಯಿಯಿಂದ ಹಲ್ಲನ್ನು ಕೀಳುವೆಯಾ? ರಾಘವನ ಪ್ರಿಯ ಪತ್ನಿಯನ್ನು ಬಯಸುವ ನೀನು ಕಣ್ಣನ್ನು ಸೂಜಿಯಿಂದ ತಿವಿದುಕೊಳ್ಳುತ್ತಿದ್ದೀಯೆ. ಕತ್ತಿಯ ಅಲಗನ್ನು ನಾಲಿಗೆಯಿಂದ ನೆಕ್ಕಲು ಬಯಸುತ್ತಿದ್ದೀಯೆ. ಉರಿಯುವ ಕೆಂಡವನ್ನು ಬಟ್ಟೆಯಿಂದ ಸುತ್ತಿಕೊಳ್ಳಲು ಹೊರಟಿದ್ದೀಯೆ. ಥೂ ನೀಚ'' ಎಂದು ಧಿಕ್ಕರಿಸಿ ನುಡಿದಳು. ಶುದ್ಧಚಿತ್ತಳಾದ ಆ ವನಿತೆಯ ಗಡುಸಾದ ಉತ್ತರವನ್ನು ಕೇಳಿ ರಾವಣನು ತನ್ನ ನಿಜರೂಪವನ್ನು ತಳೆದನು. ''ಮೈಥಿಲಿ, ನನ್ನ ಪರಾಕ್ರಮ

ವೇನೆಂಬುದು ನಿನಗೆ ತಿಳಿಯದು. ಕೈಲಾಗದೆ ಕಾಡಿಗೆ ತಪಸ್ಸು ಮಾಡಲು ಬಂದಿರುವ ಈ ದರಿದ್ರನನ್ನು ಕಟ್ಟಿಕೊಂಡು ಏನು ಮಾಡುತ್ತೀಯೆ? ನನ್ನೊಡನೆ ಸಕಲ ಸುಖಭೋಗಗಳನ್ನೂ ಅನುಭವಿಸು'' ಎಂದನು. ಬಿರುಗಾಳಿಗೆ ಸಿಕ್ಕಿದ ಬಾಳೆಯ ಗಿಡದಂತೆ ನಡುಗುತ್ತಿದ್ದ ಸೀತೆಯು ''ಎಲೈ ರಾಕ್ಷಸ, ನನ್ನನ್ನು ಬಲಾತ್ಕರಿಸಿದರೆ ನೀನು ಅಮೃತವನ್ನು ಕುಡಿದಿದ್ದರೂ ಬದುಕಲಾರೆ'' ಎಂದಳು. ಸಿಟ್ಟಿನಿಂದ ಕಿಡಿ ಕಿಡಿಯಾದ ರಾವಣನು ಕೆಂಗಣ್ಣುಗಳಿಂದ ಸೀತೆಯನ್ನು ನೋಡುತ್ತ ಅವಳ ಕೇಶಪಾಶವನ್ನು ಎಡಗೈಯಿಂದ ಹಿಡಿದು ಬಲಗೈಯಿಂದ ಅವಳನ್ನು ಎತ್ತಿದನು. ಒಡನೆಯೇ ಮಾಯಾಮಯವಾದ ಸುವರ್ಣ ರಥವು ಕಿರ್ರೆಂದು ಧ್ವನಿಗೈಯುತ್ತಾ ಬಂದು ಕಾಣಿಸಿಕೊಂಡಿತು. ರಾವಣನು ವೈದೇಹಿಯನ್ನು ಹಿಡಿದು ಹೊತ್ತು ರಥದೊಳಗೆ ಬಲಾತ್ಕಾರವಾಗಿ ಹೇರಿದನು. ಸೀತೆಯು ಗಟ್ಟಿಯಾಗಿ ಅರಚುತ್ತಾ ''ರಾಮಾ ರಾಮಾ'' ಎಂದು ಕೂಗುತ್ತಿದ್ದಳು. ರಾವಣನ ರಥವು ಆಕಾಶಮಾರ್ಗದಲ್ಲಿ ಹೊರಟಿತು. ಶೋಕವಿಹ್ವಲಳಾಗಿ ಹುಚ್ಚು ಹಿಡಿದವಳಂತೆ ಹಲುಬುತ್ತಿದ್ದ ಸೀತೆಯು ''ಹಾ ಲಕ್ಷ್ಮಣ, ಅಣ್ಣನ ಇಷ್ಟದಂತೆ ನಡೆದು ಕೊಂಡವನು ನೀನು. ಅಯ್ಯೋ! ನಾನು ಎಂತಹ ಮಾತನ್ನಾಡಿಬಿಟ್ಟೆ! ಓ ಮಹಾಬಾಹು, ನನ್ನನ್ನು ತೊರೆದು ಹೋದೆಯಾ?'' ಎಂದು ಗೋಳಾಡಿದಳು. ಅಷ್ಟರಲ್ಲಿ ಒಂದು ಮರದ ಮೇಲೆ ಕುಳಿತಿದ್ದ ಮಹಾಗೃಧ್ರವು ಸೀತೆಗೆ ಕಾಣಿಸಿತು. ಅವನು ಜಟಾಯುವೆಂದರಿತು, ದುಃಖದಿಂದ ಬಿಕ್ಕುತ್ತ ''ಅಪ್ಪಾ-ಜಟಾಯು, ನನ್ನ ಕಡೆಗೆ ನೋಡು. ಅನಾಥೆಯಾದ ನನ್ನನ್ನು ಈ ರಾಕ್ಷಸನು ಒಯ್ಯುತ್ತಿದ್ದಾನೆ. ಓ ಜಟಾಯು, ನನ್ನ ಅಪಹಾರದ ಸುದ್ದಿಯನ್ನು ಶ್ರೀರಾಮನಿಗೂ ಲಕ್ಷ್ಮಣನಿಗೂ ತಿಳಿಸು'' ಎಂದು ಕೂಗಿ ಹೇಳಿದಳು.

ನಿದ್ದೆಯ ಜೋಮಿನಲ್ಲಿದ್ದ ಜಟಾಯುವಿಗೆ ಸೀತೆಯ ಆಕ್ರಂದನವು ಕೇಳಿಸಿತು. ತಟಕ್ಕನೆ ಅವನು ಕಣ್ತೆರೆದು ನೋಡಲಾಗಿ ರಾವಣನೂ ವೈದೇಹಿಯೂ ಗೋಚರಿಸಿದರು. ನಡೆದ ಸಂಗತಿಯನ್ನು ಅವನು ಊಹಿಸಿಕೊಂಡು ರಾವಣನನ್ನುದ್ದೇಶಿಸಿ, ''ರಾವಣ, ಈ ದುಷ್ಕೃತ್ಯವನ್ನೆಸಗುವುದು ಸರಿಯಲ್ಲ. ಈ ತರುಣಿಯು ಲೋಕನಾಥನಾದ ಶ್ರೀರಾಮನ ಧರ್ಮಪತ್ನಿ. ಧರ್ಮನಿಷ್ಠನಾದ ರಾಜನು ಪರಸ್ತ್ರೀಯರನ್ನು ಮುಟ್ಟಬಹುದೆ? ಇಂಥವರನ್ನು ರಕ್ಷಿಸಬೇಕಾದ ನೀನೇ ಈ ದುಷ್ಕಾರ್ಯದಲ್ಲಿ ತೊಡಗಿದೆಯಾ?'' ಎಂದು ಕೂಗಿ ಹೇಳಿದನು. ರಾವಣನು ಅವನ ಮಾತನ್ನು ಲೆಕ್ಕಿಸದೆ ಹೋಗುತ್ತಿರಲು ಜಟಾಯುವು ಕೋಪದಿಂದ 'ಎಲೇ ರಾವಣ, ನಿಲ್ಲು ನಿಲ್ಲು. ತೊಟ್ಟಿನಿಂದ ಹಣ್ಣನ್ನು ಉದುರಿಸುವಂತೆ ರಥದಿಂದ ನಿನ್ನನ್ನು ಉದುರಿಸುತ್ತೇನೆ' ಎಂದು ಹೇಳಿ ಆಕಾಶಕ್ಕೆ ಹಾರಿ ರಾವಣನ ರಥವನ್ನು ಅಡ್ಡಗಟ್ಟಿದನು.

ರಾವಣನಿಗೂ ಜಟಾಯುವಿಗೂ ದೊಡ್ಡ ಹೊಡೆದಾಟವೇ ನಡೆಯಿತು. ತನ್ನ ರೆಕ್ಕೆಗಳಿಂದಲೇ ರಾವಣನ ಬಾಣ ಜಾಲವನ್ನು ಬಡಿದು ಜಟಾಯು ಹೋರಾಡಿದನು. ರಾವಣನ ಶ್ವೇತಚ್ಛತ್ರವನ್ನು ರೆಕ್ಕೆಗಳ ವೇಗದಿಂದ ಹೊಡೆದು ಉರುಳಿಸಿದನು. ಹೀಗೆ ಕೆಲವು ಹೊತ್ತು ಭೀಕರವಾದ ಹೋರಾಟ ನಡೆಯಲಾಗಿ ಘೋರಕರ್ಮಿಯಾದ ಆ ರಾಕ್ಷಸನು ಖಡ್ಗದಿಂದ ಜಟಾಯುವಿನ ಎರಡು ರೆಕ್ಕೆಗಳನ್ನು ಕತ್ತರಿಸಿ ಕಾಲುಗಳನ್ನು ಕಡಿದನು. ಜಟಾಯುವು ಗಾಯಗೊಂಡು ನೆತ್ತರು ಸುರಿಯುತ್ತಿರಲು ನೆಲದ ಮೇಲೆ ದೊಪ್ಪನೆ ಬಿದ್ದನು. ಜಟಾಯುವಿನ ಸ್ಥಿತಿಯನ್ನು ನೋಡಿ ಸೀತೆಯು ಮತ್ತಷ್ಟು ಗೋಳಾಡಿದಳು. ಅವಳು ಅತ್ಯಂತ ಭಯದಿಂದ ಕಂಗೆಟ್ಟಳು. ಆಕಾಶಮಾರ್ಗದಲ್ಲಿ ಹೋಗುತ್ತಿರುವಾಗ ಅವಳು ರಾವಣನನ್ನು ನಾನಾ ವಿಧವಾಗಿ ನಿಂದಿಸುತ್ತಿದ್ದಳು. ಹೀಗೆ ರಾವಣನು ವೈದೇಹಿಯನ್ನು ಒಯ್ಯುತ್ತಿರುವಾಗ ಅವಳನ್ನು ಉಳಿಸಬಲ್ಲ ಯಾವ ರಕ್ಷಕನೂ ಗೋಚರಿಸಲಿಲ್ಲ. ಕೆಳಗೆ ನೋಡಲು ಋಷ್ಯಮೂಕಗಿರಿಯ ಶಿಖರದಲ್ಲಿ ಐವರು ವಾನರರು ಕುಳಿತಿದ್ದುದು ಅವಳಿಗೆ ಗೋಚರಿಸಿತು. ಪ್ರತ್ಯುತ್ಪನ್ನಮತಿಯಾದ ವೈದೇಹಿಯು ತನ್ನ ಕೆಲವು ಆಭರಣಗಳನ್ನು ತೆಗೆದು ಉತ್ತರೀಯದಲ್ಲಿ ಕಟ್ಟಿ ವಾನರರ ಬಳಿಗೆ ಎಸೆದಳು. ದೈವಗತಿಯಿಂದ ರಾಮ ಲಕ್ಷ್ಮಣರು ಇಲ್ಲಿಗೆ ಬಂದರೆ ಈ ವಾನರರು ತನ್ನ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸಲಿ ಎಂಬುದು ಅವಳ ಉದ್ದೇಶವಾಗಿತ್ತು. ಕ್ಷುಬ್ಧನಾಗಿದ್ದ ರಾವಣನಿಗೆ ಸೀತೆಯು ತನ್ನ ಒಡವೆಗಳನ್ನೆಸೆದುದು ಗೊತ್ತಾಗಲಿಲ್ಲ. 'ರಾಮಾ ರಾಮಾ' ಎಂದು ಅರಚುತ್ತಿದ್ದ ಸೀತೆಯನ್ನು ಆ ವಾನರರು ಕಣ್ಣೆತ್ತಿ ನೋಡಿದರು.

ವೈದೇಹಿಯು ತನ್ನ ವಶಳಾದಳೆಂದು ಆ ರಾಕ್ಷಸೇಶ್ವರನು ಹರ್ಷದಿಂದ ಉಬ್ಬಿ ವೇಗದಿಂದ ಮುಂದೆ ಸಾಗಿದನು. ತನ್ನ ಮೃತ್ಯುವನ್ನೇ ತಾನು ಕರೆದೊಯ್ಯುತ್ತಿದ್ದೇನೆಂದು ಅವನಿಗೆ ತಿಳಿಯಲಿಲ್ಲ. ಅಂತರಿಕ್ಷದಲ್ಲಿದ್ದ ಸಿದ್ಧರೂ ಚಾರಣರೂ ''ಇಲ್ಲಿಗೆ ದಶಕಂಠನ ಅವತಾರ ಮುಗಿಯಿತು''! ಎಂದು ಉದ್ಗರಿಸಿದರು. ರಾವಣನು ಮಹಾಸಾಗರವನ್ನು ದಾಟಿ ಲಂಕೆಗೆ ಹೋಗಿ ತನ್ನ ಅರಮನೆಯಲ್ಲಿದ್ದ ಅಂತಃಪುರದ ಒಂದು ಭಾಗದಲ್ಲಿ ಸೀತೆಯನ್ನಿಳಿಸಿದನು. ಕೆಲವು ರಾಕ್ಷಸಿಯರನ್ನು ಕರೆದು ''ಎಲೈ ರಾಕ್ಷಸಿಯರೆ, ಈ ಸೀತೆಗೆ ನೀವು ಕಾವಲಾಗಿ ರಕ್ಷಿಸುತ್ತಿರಬೇಕು. ನನ್ನ ಅನುಮತಿಯಿಲ್ಲದೆ ಇನ್ನೊಬ್ಬ ಪುರುಷನಾಗಲಿ, ಸ್ತ್ರೀಯಾಗಲಿ ಇವಳನ್ನು ನೋಡಕೂಡದು. ಈ ಸೀತೆಯು ಅನ್ನ, ವಸ್ತ್ರ, ಒಡವೆ ಮೊದಲಾದ್ದರಲ್ಲಿ ಯಾವುದನ್ನು ಕೇಳಿದರೂ ಕೂಡಲೇ ಅದನ್ನು ತಂದು ಕೊಡಿರಿ. ಇವಳಿಗೆ ಅಪ್ರಿಯವಾದ ಒಂದು ಮಾತನ್ನು ಯಾರೂ ಆಡಕೂಡದು. ಅಪ್ರಿಯವಾದ್ದನ್ನು ಆಡಿದರೆ, ಹಾಗೆ ಮಾತಾಡಿದವರ ಆಯುಸ್ಸು ಅಲ್ಲಿಗೇ

ಮುಗಿಯಿತೆಂದು ತಿಳಿಯತಕ್ಕದ್ದು''–ಎಂದು ಆಜ್ಞಾಪಿಸಿದನು. ಆಮೇಲೆ ಬಲಾಢ್ಯರಾದ ಕೆಲವು ರಾಕ್ಷಸರನ್ನು ಕರೆದು ''ಎಲೈ ರಾಕ್ಷಸರೆ, ನೀವು ಈ ಕೂಡಲೇ ದಂಡಕಾರಣ್ಯದ ಜನಸ್ಥಾನಕ್ಕೆ ಹೋಗಿರಿ. ಅಲ್ಲಿ ರಾಮ, ಲಕ್ಷ್ಮಣ ಎಂಬ ಇಬ್ಬರು ಮನುಷ್ಯರು ಅಲೆಯುತ್ತಿರುವುದನ್ನು ಕಾಣಬಹುದು. ಅವರನ್ನು ಮೋಸದಿಂದ ಕೊಂದುಹಾಕಿರಿ'' ಎಂದು ಆದೇಶವನ್ನಿತ್ತನು. ಈ ಪ್ರಕಾರವಾಗಿ ಶ್ರೀರಾಮನೊಡನೆ ಘೋರವೈರವನ್ನು ಬೆಳೆಸಿದ ಆ ದುರಾತ್ಮನು ತನಗೆ ಸೀತೆಯು ವಶಳಾದಳೆಂದು ಸಂತೋಷಪಡುತ್ತಿದ್ದನು.

ಮಾರನೆಯ ದಿನ ವೈದೇಹಿಯನ್ನೇ ಚಿಂತಿಸುತ್ತಿದ್ದ ಆತನು ಕಾಮಪೀಡಿತನಾಗಿ ಅವಳನ್ನು ನೋಡುವುದಕ್ಕಾಗಿ ಹೋದನು. ರಾಕ್ಷಸಿಯರ ಮಧ್ಯದಲ್ಲಿದ್ದ ಸೀತಾದೇವಿಯು ಶೋಕಾರ್ತಳಾಗಿ ಕಣ್ಣೀರು ಸುರಿಸುತ್ತಿದ್ದಳು. ರಾವಣನು ಸ್ವತಃ ಅವಳನ್ನು ಒತ್ತಾಯಿಸಿ ಕರೆದುಕೊಂಡು ಹೋಗಿ ತನ್ನ ಅರಮನೆಯ ವೈಭವವನ್ನು ತೋರಿಸಿದನು. ಮುತ್ತು, ರತ್ನ, ಬೆಳ್ಳಿ, ಬಂಗಾರ ಮುಂತಾದ ಐಶ್ವರ್ಯದಿಂದ ತುಂಬಿ ತುಳುಕುತ್ತಿದ್ದ ಅರಮನೆಯ ವಿವಿಧ ಭಾಗಗಳನ್ನು ತೋರಿಸಿದಾಗ ಜಾನಕಿಯು ಚಿತ್ರದ ಬೊಂಬೆಯಂತೆ ಮೌನವಾಗಿದ್ದಳೇ ಹೊರತು ಒಂದನ್ನೂ ಕಣ್ಣೆತ್ತಿ ನೋಡಲಿಲ್ಲ. ಅನಂತರ ದಶಕಂಠನು ''ಸೀತೆ, ಈ ಎಲ್ಲ ವೈಭವಗಳಿಗೂ ನೀನು ಮಹಾರಾಣಿ ಯಾಗಿರು. ನನ್ನನ್ನು ಪರಿಗ್ರಹಿಸು. ಅಂತಃಪುರದ ಸ್ತ್ರೀಯರೆಲ್ಲರಿಗೂ ನೀನು ಈಶ್ವರಿಯಾಗು. ರಾಮನ ದರ್ಶನವಾದೀತೆಂದೂ ಅವನು ಇಲ್ಲಿಗೆ ಬಂದಾನೆಂದೂ ಕನಸಿನಲ್ಲಿಯೂ ಊಹಿಸಬೇಡ. ಸುಂದರಿ, ಯೌವನವು ಶಾಶ್ವತವಲ್ಲ. ನನ್ನೊಡನೆ ಸಮಸ್ತ ಸುಖಗಳನ್ನೂ ಅನುಭವಿಸು. ನಿನ್ನ ಮೃದುಪಾದಗಳಿಗೆ ನಾನು ತಲೆಮುಟ್ಟಿ ನಮಸ್ಕರಿಸುತ್ತೇನೆ. ಈ ರಾವಣನು ಇನ್ನೊಬ್ಬ ಸ್ತ್ರೀಗೆ ಎಂದಿಗಾದರೂ ನಮಸ್ಕರಿಸ ತಕ್ಕವನೆ?'' ಎಂದು ವಶೀಕರಣದ ಮಾತುಗಳನ್ನೇ ಆಡುತ್ತಿದ್ದನು. ಆಗ ವೈದೇಹಿಯು ಕೋಪದಿಂದ ಇಂತೆಂದಳು : ''ಎಲೈ ರಾಕ್ಷಸ, ದಶರಥ ಮಹಾರಾಜನು ಧರ್ಮಕ್ಕೆ ನೆಲೆಯಾದ ಮಹಾಪುರುಷ. ಅವನ ಪುತ್ರನಾದ ಶ್ರೀರಾಮನು ಧರ್ಮಾತ್ಮನೆಂದೂ, ವೀರಾಗ್ರೇಸರನೆಂದೂ ವಿಖ್ಯಾತನಾದವನು. ಅವನೇ ನನ್ನ ಪತಿ. ನನ್ನ ದೇವತೆ. ನನ್ನ ಸರ್ವಸ್ವ. ಆ ಮಹಾಪುರುಷನನ್ನು ಬಿಟ್ಟು ನರಿಯಂತಿರುವ ವಂಚಕನಾದ ನಿನ್ನನ್ನು ನಾನು ಕಣ್ಣೆತ್ತಿಯೂ ನೋಡಲಾರೆ. ನನ್ನ ಪತಿಯು ಸರ್ವಲೋಕಗಳನ್ನೂ ಜಯಿಸಬಲ್ಲ ರಣಪಂಡಿತ. ಈ ಸಮುದ್ರವನ್ನೂ ಒಣಗಿಸಬಲ್ಲ. ನಿನ್ನ ಕೊಬ್ಬನ್ನು ಮೈಯಿಂದ ಕರಗಿಸುವನು. ನೀನು ಮಾಡಿದ ಪಾಪಕೃತ್ಯವೇ ನಿನಗೆ ಮೃತ್ಯುಪಾಶವಾಗುವುದು. ಎಲಾ ರಾಕ್ಷಸಾಧಮ, ನನ್ನನ್ನು ನೀನು ಮುಟ್ಟುವುದಕ್ಕೂ ಅರ್ಹನಲ್ಲ. ರಾಜಹಂಸ ದೊಡನೆ ವಿಹರಿಸುವ ರಾಜಹಂಸಿಯು ಪೊದೆಯಲ್ಲಿರುವ ಕಾಗೆಯನ್ನು ಕಣ್ಣೆತ್ತಿ

ನೋಡೀತೆ? ಈ ದೇಹವು ಈಗ ನಿನಗೆ ಅಧೀನವಾಗಿದೆ. ನನ್ನನ್ನು ಕೊಂದುಬಿಡು. ತಿನ್ನುವುದಾದರೂ ತಿಂದುಬಿಡು. ನಿನ್ನ ಇಚ್ಛೆಯು ಮಾತ್ರ ನಡೆಯತಕ್ಕದ್ದಲ್ಲ'' ಎಂದಳು. ಮೈನವಿರೇಳಿಸುವ ಆ ಮಾತನ್ನು ಕೇಳಿ ರಾವಣನಿಗೆ ಕೋಪವು ನೆತ್ತಿಗೇರಿತು. ಅವನು ''ಸೀತೆ, ನಿನಗೆ ಹನ್ನೆರಡು ತಿಂಗಳು ಅವಧಿಯನ್ನು ಕೊಟ್ಟಿದ್ದೇನೆ. ಅಷ್ಟರಲ್ಲಿ ನೀನು ನನ್ನ ವಶಕ್ಕೆ ಬಾರದಿದ್ದರೆ, ಮಾರನೆಯ ದಿನವೇ ನನ್ನ ಅಡಿಗೆಯವರು ನಿನ್ನನ್ನು ತುಂಡು ತುಂಡಾಗಿ ಕಡಿದು ಬೇಯಿಸಿಬಿಡುತ್ತಾರೆ'' ಎಂದು ಅಬ್ಬರಿಸಿದನು. ಆಮೇಲೆ ಆ ರಾಕ್ಷಸೇಶ್ವರನು ಭೂಮಿಯನ್ನು ಒಡೆಯುವನೋ ಎಂಬಂತೆ ನೆಲವನ್ನು ಒದೆದು ಕಾವಲಿದ್ದ ರಾಕ್ಷಸಿಯರ ಕಡೆಗೆ ತಿರುಗಿ ''ಎಲೈ ರಾಕ್ಷಸಿಯರೆ, ಇವಳನ್ನು ಅಶೋಕವನದ ಮಧ್ಯಕ್ಕೆ ಎಳೆದೊಯ್ಯಿರಿ. ಈಕೆಯನ್ನು ಗುಪ್ತವಾಗಿಟ್ಟು ಕಾವಲಾಗಿರಿ. ಭಯಂಕರವಾಗಿ ಹೆದರಿಸುತ್ತಲೂ ಒಳ್ಳೆಯ ಮಾತನ್ನಾಡುತ್ತಲೂ ಈ ಸೀತೆಯನ್ನು ಸ್ವಾಧೀನಕ್ಕೆ ತನ್ನಿರಿ'' ಎಂದು ಆಜ್ಞಾಪಿಸಿ ಹೊರಟುಹೋದನು. ಆ ರಾಕ್ಷಸಿಯರು ಗುಟ್ಟಾಗಿ ಜಾನಕಿಯನ್ನು ಅಶೋಕವನಕ್ಕೆ ಕರೆದೊಯ್ದು ಒಂದು ಮರದ ಕೆಳಗೆ ಅವಳನ್ನಿರಿಸಿದರು. ಜಾನಕಿಯು ಹೆಣ್ಣು ಹುಲಿಗಳ ಕೈಗೆ ಸಿಕ್ಕಿದ ಹರಿಣಿಯಂತೆ ರಾಕ್ಷಸಿಯರಿಗೆ ಅಧೀನಳಾದಳು. ಆ ದೇವಿಯು ತನಗೆ ಪ್ರಿಯನಾದ ಶ್ರೀರಾಮಚಂದ್ರನನ್ನೇ ನೆನೆಸಿಕೊಳ್ಳುತ್ತಾ ಶೋಕದಿಂದ ಎಚ್ಚರದಪ್ಪುತ್ತಿದ್ದಳು. ಅವಳ ಮನಸ್ಸಿಗೆ ನೆಮ್ಮದಿಯ ಲೇಶವೂ ಇಲ್ಲವಾಯಿತು.

೩೦

ಶ್ರೀರಾಮಲಕ್ಷ್ಮಣರಿಂದ ಸೀತಾನ್ವೇಷಣೆ. ಶ್ರೀರಾಮನ ಕ್ರೋಧ.

ಇತ್ತ ಶ್ರೀರಾಮನು ಮೃಗವೇಷದಲ್ಲಿ ಬಂದಿದ್ದ ಮಾರೀಚನನ್ನು ವಧಿಸಿ ಚಿಂತಾಕ್ರಾಂತನಾಗಿ ಬೇಗ ಬೇಗನೆ ತನ್ನ ಆಶ್ರಮದ ಕಡೆಗೆ ಹಿಂತಿರುಗಿ ಬರುತ್ತಿದ್ದನು. ಅವನ ಮನಸ್ಸಿನಲ್ಲಿ ''ಈ ದುಷ್ಟರಾಕ್ಷಸನು 'ಹಾ ಸೀತೆ, ಹಾ ಲಕ್ಷ್ಮಣ' ಎಂದು ಕೂಗಿದನಲ್ಲ. ದುರುದ್ದೇಶದಿಂದಲೇ ನಮ್ಮನ್ನು ವಂಚಿಸುವುದಕ್ಕಾಗಿಯೇ ಕೂಗಿದನು. ಸೀತೆಯು ಈ ಕೂಗನ್ನು ಕೇಳಿದ ಮೇಲೆ ಲಕ್ಷ್ಮಣನನ್ನು ನನ್ನ ಬಳಿಗೆ ಹೋಗಬೇಕೆಂದು ನಿರ್ಬಂಧಿಸುವಳು. ಆಗ ಏಕಾಕಿನಿಯಾದ ಸೀತೆಯನ್ನು ವಧಿಸಬೇಕೆಂದು ಈ ರಾಕ್ಷಸರು ಸಂಚುಮಾಡಿರಬೇಕು. ಬಹುದೂರ ನನ್ನನ್ನು ಕರೆತಂದದ್ದು ಈ ಸಂಚಿನ ಫಲವಾಗಿಯೇ'' ಎಂದು ಆಲೋಚಿಸುತ್ತಾ ಸೀತೆಯ ಗತಿ ಏನಾಯಿತೋ ಎಂದು ದುಃಖಿಸುತ್ತ ಬೇಗ ಬೇಗನೆ ಹೆಜ್ಜೆಯಿಡುತ್ತಿದ್ದನು. ದೂರದಲ್ಲಿ ಲಕ್ಷ್ಮಣನು ದೈನ್ಯದಿಂದ ಕಳೆಗುಂದಿ ಬರುತ್ತಿರುವುದು ಕಾಣಿಸಿತು. ಸ್ವಲ್ಪ ಹೊತ್ತಿನಲ್ಲೇ ಇಬ್ಬರೂ ಎದುರು ಬದುರಾಗಿ ಬಂದು ನಿಂತರು. ಈರ್ವರ ಕಣ್ಣುಗಳಿಂದಲೂ ಕಣ್ಣೀರು ಹರಿಯುತ್ತಿತ್ತು.

ಶ್ರೀರಾಮನಿಗೆ ಲಕ್ಷ್ಮಣನನ್ನು ನೋಡಿದಾಗ ತನ್ನ ಪ್ರತಿಬಿಂಬವನ್ನೇ ನೋಡಿದಂತಾಯಿತು. ರಘುನಂದನನು ಲಕ್ಷ್ಮಣನ ಕೈಯನ್ನು ದೈನ್ಯದಿಂದ ಹಿಡಿದುಕೊಂಡು ''ಅಯ್ಯೋ ಲಕ್ಷ್ಮಣ, ನೀನು ತಪ್ಪು ಮಾಡಿದೆ. ಸೀತೆಯೊಬ್ಬಳನ್ನೇ ಬಿಟ್ಟು ಬಂದೆಯಲ್ಲ, ತಮ್ಮ, ಅವಳೀಗ ಕ್ಷೇಮದಲ್ಲಿರಬಹುದೆ? ನೀನು ಹೇಳಿದಂತೆ ಆ ಮೃಗವು ರಾಕ್ಷಸ ಮಾಯೆಯಾಗಿತ್ತು, ಆ ರಾಕ್ಷಸನು ಬಹುದೂರ ನನ್ನನ್ನು ಕರೆದೊಯ್ದನು. ಕಡೆಗೆ ನಾನು ಶರಪ್ರಯೋಗದಿಂದ ಅದನ್ನು ಕೊಂದೆನು. ಅವನು ಸಾಯುವಾಗ ಆ ರೀತಿಯಲ್ಲಿ ಕೂಗಿಕೊಂಡನು. ಲಕ್ಷ್ಮಣ, ನೀನು ಅದನ್ನು ನಂಬಿದೆ. ಮೋಸವಾಯಿತು. ಸೀತೆಯನ್ನು ಯಾರೋ ಅಪಹರಿಸಿರಬೇಕು. ಅಥವಾ ಕೊಂದಿರಬೇಕು'' ಎಂದನು. ಲಕ್ಷ್ಮಣನು ದೈನ್ಯದಿಂದಲೇ ''ಅಣ್ಣ, ರಾಕ್ಷಸನ ಕೂಗನ್ನು ನಾನು ನಂಬಲಿಲ್ಲ. ಅದು ನಿನ್ನ ಕೂಗೆಂದೇ ತಿಳಿದು ನಿನ್ನ ಸಹಾಯಕ್ಕಾಗಿ ನಾನು ಹೋಗಬೇಕೆಂದು ಅತ್ತಿಗೆ ಒತ್ತಾಯಿಸಿದಳು. ನಾನು ಎಷ್ಟು ಸಮಾಧಾನ ಹೇಳಿದರೂ ಕೇಳಲಿಲ್ಲ. ಕಡೆಗೆ ಬಹಳ ಕೆಟ್ಟಮಾತಿನಿಂದ ನನ್ನನ್ನು ಹೀಯಾಳಿಸಿದಳು. ಅದನ್ನು ಸಹಿಸಿಕೊಳ್ಳಲಾರದೆ ಬಂದು ಬಿಟ್ಟೆನು'' ಎಂದನು. ಶ್ರೀರಾಮನು ''ನೀನು ಸೀತೆಯೊಬ್ಬಳನ್ನೇ ಬಿಟ್ಟು ಬರಬಾರದಾಗಿತ್ತು, ಮುಂದೇನು ಗತಿ?'' ಎನ್ನುತ್ತಾ ಬೇಗ ಬೇಗನೆ ತನ್ನ ಆಶ್ರಮದ ಕಡೆಗೆ ಧಾವಿಸಿದನು. ಲಕ್ಷ್ಮಣನು ದೀನವದನನಾಗಿ ಶ್ರೀರಾಮನನ್ನು ಹಿಂಬಾಲಿಸಿ ಹೋದನು. ಅವರಿಬ್ಬರೂ ತ್ವರೆಯಿಂದ ಹೆಜ್ಜೆಹಾಕುತ್ತ ಆಶ್ರಮದ ಬಳಿಗೆ ಬಂದರು. ಆಶ್ರಮವು ಶೂನ್ಯವಾಗಿತ್ತು, ರಾಘವನು ಉದ್ವಿಗ್ನನಾಗಿ ಪರ್ಣಶಾಲೆಯ ಮೂಲೆ ಮೂಲೆಗಳನ್ನೂ ಹುಡುಕಿ ನೋಡಿದನು. ಹಾಳುಬಿದ್ದ ತಾವರೆಯ ಕೊಳದಂತೆ ಪರ್ಣಶಾಲೆ ಕಾಣಿಸಿತು. ದರ್ಭೆ, ಆಸನ, ಚಾಪೆ ಮೊದಲಾದ ಉಪಕರಣಗಳು ಚದರಿ ಹರಡಿದ್ದವು. ಬಿಕೋ ಎನ್ನುತ್ತಿದ್ದ ಆಶ್ರಮವನ್ನು ನೋಡಿ ಶ್ರೀರಾಮನಿಗೆ ದುಃಖ ಉಕ್ಕಿತು. ಬಿಕ್ಕಿ ಬಿಕ್ಕಿ ಅತ್ತನು. ''ತಮ್ಮ, ಸೀತೆ ಎಲ್ಲಿಗೆ ಹೋಗಿರುವಳು? ವಿನೋದಕ್ಕಾಗಿ ಎಲ್ಲಾದರೂ ಅಡಗಿಕೊಂಡಿರಬಹುದೋ? ಅಥವಾ ನನ್ನನ್ನು ಹುಡುಕುತ್ತಾ ಅವಳೂ ಕಾಡಿನೊಳಗೆ ಬಂದು ಬಿಟ್ಟಳೊ? ರಾಕ್ಷಸರು ಭಕ್ಷಿಸಿರಬಹುದೆ? ನೀರಿಗಾಗಿ ನದಿಗೆ ಹೋಗಿರಬಹುದೆ''? ಎಂದು ಹೇಳುತ್ತ ಹುಚ್ಚನಂತೆ ಹಲುಬಿದನು. ಲಕ್ಷ್ಮಣನ ಬಾಯಿಯಿಂದ ಮಾತೇ ಹೊರಡಲಿಲ್ಲ, ಅವನನ್ನು ಶೋಕ, ಚಿಂತೆ, ಪಶ್ಚಾತ್ತಾಪಗಳು ಮುತ್ತಿಕೊಂಡಿದ್ದವು.

ಅನಂತರ ಶ್ರೀರಾಮನು ಹೊರಗೆ ಬಂದು ಸುತ್ತಲೂ ನೋಡಿ ಮರ ಬಳ್ಳಿಗಳು ಮಾತಾಡಬಲ್ಲವೋ ಎಂಬಂತೆ ಸೀತೆ ಎಲ್ಲಿ ಹೋದಳೆಂದು ಕೇಳ ತೊಡಗಿದನು. ಬಿಲ್ವವೃಕ್ಷ, ಅಶೋಕ ವೃಕ್ಷ, ಮತ್ತಿಯ ಮರ, ನೇರಳೆಯ ಮರ ಮೊದಲಾದ ಮರಗಳನ್ನೂ ಬಳ್ಳಿಗಳನ್ನೂ ಕುರಿತು ''ಸೀತೆ ಎಲ್ಲಿಗೆ ಹೋದಳು? ನೀವು ಕಂಡಿರಾ?''–

ಎಂದು ಪ್ರಲಾಪಿಸಿದನು. ತನ್ನ ಪ್ರಿಯಪತ್ನಿಯ ಅಂದವನ್ನೂ, ಒಂದೊಂದು ಅಂಗದ ಸೌಂದರ್ಯವನ್ನೂ ನೆನೆ ನೆನೆದು ಹಲುಬಿದನು. ''ಸೀತೆ'' ಎಂದು ಗಟ್ಟಿಯಾಗಿ ತನ್ನ ಬಾಹುಗಳನ್ನು ನೀಡಿ ಗೋಳಾಡಿದನು. ಶೋಕವು ಅತಿಯಾದಾಗ ಎಂತಹ ಧೀಮಂತರ ಬುದ್ಧಿಯೂ ಮೋಹಗೊಳ್ಳುವುದು. ಅಪಾರವಾದ ಆತನ ಶೋಕವನ್ನು ನೋಡಿ ಲಕ್ಷ್ಮಣನು ''ಅಣ್ಣ, ನೀನು ವಿವೇಕಶಾಲಿ. ಹೀಗೆ ವಿಷಾದಪಡಬಾರದು. ನಾವಿಬ್ಬರೂ ಶ್ರಮವಹಿಸಿ ಸೀತಾದೇವಿಯನ್ನು ಅರಣ್ಯದಲ್ಲಿ ಹುಡುಕೋಣ. ಈ ಅರಣ್ಯವನ್ನು ಶೋಧಿಸಿ ಬಿಡೋಣ. ಅನಂತರ ಮುಂದಿನ ಕರ್ತವ್ಯವನ್ನು ಆಲೋಚಿಸಬಹುದು. ರಘುನಾಥ, ಹೀಗೆ ದುಃಖಿಸಬೇಡ'' ಎಂದನು. ಆಮೇಲೆ ಅವರಿಬ್ಬರೂ ಅರಣ್ಯದಲ್ಲಿ ಸಂಚರಿಸಿ ದೇವಿಯ ಹೆಸರನ್ನು ಹಿಡಿದು ಕರೆಯುತ್ತಾ, ಸೀತಾನ್ವೇಷಣೆಯಲ್ಲಿ ತೊಡಗಿದರು. ಎಲ್ಲಿಯೂ ಸೀತೆಯ ಸುಳಿವು ದೊರೆಯಲಿಲ್ಲ.

ಶ್ರೀರಾಮನ ಚೈತನ್ಯವೇ ಕುಂದಿಹೋಯಿತು. ಅವನು ನಿರಾಸೆಯಿಂದ ತಮ್ಮನನ್ನು ನೋಡಿ ''ಲಕ್ಷ್ಮಣ, ನನ್ನನ್ನು ಇಲ್ಲಿಯೇ ಕಾಡುಪಾಲಾಗಿ ಬಿಟ್ಟು ಅಯೋಧ್ಯೆಗೆ ಹೊರಟುಹೋಗು. ಭರತನಿಗೆ ರಾಜ್ಯವನ್ನಾಳಲು ನಾನು ಅನುಜ್ಞೆಯನ್ನು ಕೊಟ್ಟಿದ್ದೇನೆಂದು ತಿಳಿಸು. ಇನ್ನು ಮೇಲೆ ಅವನೇ ರಾಜ್ಯವನ್ನು ಪಾಲಿಸಲಿ. ಲಕ್ಷ್ಮಣ, ನನ್ನ ಪಾಡು ಹೀಗಾಯಿತೆಂದು ನನ್ನ ಅಮ್ಮ ಕೌಸಲ್ಯೆಗೆ ಹೇಳಿಬಿಡು'' ಎಂದನು. ಅವನ ಸ್ಥಿತಿಯನ್ನು ಕಂಡು ಲಕ್ಷ್ಮಣನಿಗೆ ಭಯವು ಆವರಿಸಿತು. ಏನು ಹೇಳಬೇಕೆಂಬುದೇ ಅವನಿಗೆ ತೋರಲಿಲ್ಲ. ಶೋಕ ನಿಮಗ್ನನಾದ ಶ್ರೀರಾಮನು ಬಿಸುಸುಯ್ದು ಹೀಗೆಂದನು. ''ಲಕ್ಷ್ಮಣ, ಈ ಜಗತ್ತಿನಲ್ಲಿ ನನ್ನಂಥ ಪಾಪಿಷ್ಠನು ಇನ್ನೊಬ್ಬನಿಲ್ಲ. ಒಂದರ ಮೇಲೆ ಒಂದರಂತೆ ದುಃಖವನ್ನು ಅನುಭವಿಸುತ್ತಿದ್ದೇನೆ. ಬಂಧುಗಳನ್ನು ಅಗಲಿದೆನು. ತಂದೆಯ ಮರಣವಾಯಿತು. ತಾಯಿಯನ್ನು ಬಿಟ್ಟು ಬಂದೆನು. ಈ ಕಾಡಿನಲ್ಲಿ ಎಲ್ಲ ಬಗೆಯ ಕಷ್ಟಗಳನ್ನೂ ಅನುಭವಿಸಿದೆನು. ಈಗ ಸೀತಾವಿಯೋಗವೂ ಆಗಿ ಹೋಯಿತು. ನನ್ನನ್ನು ನಂಬಿ ಬಂದವಳು ರಾಕ್ಷಸರ ಪಾಲಾದಳು. ಅವಳನ್ನು ರಕ್ಷಿಸಿಕೊಳ್ಳಲು ನನಗೆ ಆಗದೇ ಹೋಯಿತಲ್ಲ. ರಾಕ್ಷಸರು ಬಂದು ಮುತ್ತಿದಾಗ ಎಷ್ಟು ದೈನ್ಯದಿಂದ ಕೂಗಿಕೊಂಡಳೊ. ಎಷ್ಟು ಅತ್ತಳೊ? ಈಗ ಯಾವ ಸ್ಥಿತಿಯಲ್ಲಿ ಎಲ್ಲಿ ಗೋಳಾಡುತ್ತಿರುವಳೊ'' ಎಂದು ಹಲುಬಿದನು. ಆಗ ಸೌಮಿತ್ರಿಯು ಕಾಲೋಚಿತವಾದ ಸಮಾಧಾನವಾಕ್ಯವನ್ನು ಹೇಳಿದನು. ''ಅಣ್ಣ, ಮನಸ್ಸಿಗೆ ಧೈರ್ಯವನ್ನು ತಂದುಕೊ. ದೇವಿಯನ್ನು ಹುಡುಕುವ ಉತ್ಸಾಹ ಹೆಚ್ಚಲಿ. ಉತ್ಸಾಹ ಶಕ್ತಿಯುಳ್ಳ ಪುರುಷರಿಗೆ ಯಾವ ಕಾರ್ಯವೂ ದುಷ್ಕರವಲ್ಲ'' ಎಂದು ಹೇಳಿದನು. ರಘುನಂದನನಿಗೆ ಅದಾವುದೂ ಹಿಡಿಸಲಿಲ್ಲ. ''ಲಕ್ಷ್ಮಣ,

ಗೋದಾವರೀನದಿಗೆ ಇನ್ನೊಮ್ಮೆ ಹೋಗಿ ಬಾ. ಅಲ್ಲಿ ಸ್ನಾನ ಮಾಡುತ್ತಿರಬಹುದು'' ಎಂದನು. ಲಕ್ಷ್ಮಣನು ಹೋಗಿ ನೋಡಿ ಹುಡುಕಿ ಬಂದು ಅಲ್ಲೆಲ್ಲಿಯೂ ಸೀತೆಯ ಸುಳಿವಿಲ್ಲವೆಂದು ನಿವೇದಿಸಿದನು. ಶ್ರೀರಾಮನ ವ್ಯಥೆ ಹೆಚ್ಚಿತು. ಅವನು ತಾನೇ ಮತ್ತೆ ಗೋದಾವರೀನದಿಗೆ ಹೋಗಿ ಹುಡುಕಿ ''ಹೇ ಗೋದಾವರೀ ನದಿಯೇ, ನನ್ನ ಸೀತೆಯನ್ನು ಕಂಡೆಯಾ? ಎಲ್ಲಿ ಹೋದಳು?'' ಎಂದು ಕೇಳಿದನು. ನದಿಯು ತನ್ನ ಪಾಡಿಗೆ ಹರಿಯುತ್ತಿತ್ತು. ಅಣ್ಣ ತಮ್ಮಂದಿರಿಬ್ಬರೂ ನದೀತೀರದಿಂದ ಹೊರಟು ಅರಣ್ಯದೊಳಗೆ ಬಂದರು. ಶ್ರೀರಾಮನ ವಿಲಾಪವನ್ನು ಕೇಳುತ್ತಿದ್ದ ಮೃಗಗಳು ಆಕಾಶವನ್ನೂ ಭೂಮಿಯನ್ನೂ ನೋಡುತ್ತ ದಕ್ಷಿಣ ದಿಕ್ಕಿಗೆ ಅಭಿಮುಖವಾಗಿ ನಿಂತಿದ್ದವು. ಮೇಧಾವಿಯಾದ ಲಕ್ಷ್ಮಣನು ''ರಾಘವ, ಈ ಮೃಗಗಳು ಸೂಚಿಸುವಂತೆ ನಾವು ದಕ್ಷಿಣ ದಿಕ್ಕಿಗೆ ಹೋಗಬೇಕು. ಬಹುಶಃ ರಾಕ್ಷಸರ ವಾಸಸ್ಥಾನವು ದಕ್ಕಿಣ ದಿಕ್ಕಿನಲ್ಲೇ ಇದೆ'' ಎಂದನು.

ಅವರಿಬ್ಬರೂ ದಕ್ಷಿಣ ದಿಕ್ಕಿಗೆ ಹೊರಟರು. ಸೀತೆಯ ಸುಳಿವನ್ನೂ ಕಾಣದೆ ಶ್ರೀರಾಮನ ದುಃಖವು ಕ್ರೋಧವಾಗಿ ಪರಿಣಮಿಸಿತು. ಅವನು ''ಲಕ್ಷ್ಮಣ, ಈ ಬಗೆಯ ದೈನ್ಯದಿಂದ ನಮ್ಮ ಕಾರ್ಯಸಿದ್ಧಿಯಾಗದು. ಮೃದು ಸ್ವಭಾವದವನನ್ನು ನಿರ್ವೀರ್ಯನೆಂದು ದೇವತೆಗಳೂ ಭಾವಿಸಿರುವ ಹಾಗಿದೆ. ನನ್ನ ಶಾಂತಸ್ವಭಾವವೇ ದೋಷವಾಗಿ ಪರಿಣಮಿಸಿತು. ಲಕ್ಷ್ಮಣ, ನನ್ನ ಸಾಮರ್ಥ್ಯವೇನೆಂಬುದನ್ನು ಜಗತ್ತು ನೋಡಲಿ. ಸಕಲಭೂತಗಳನ್ನೂ ಯಕ್ಷ ಗಂಧರ್ವಾದಿಗಳನ್ನೂ ಕೊಂದು ಬಿಡುವೆನು. ಗ್ರಹಗಣಗಳು ಮಿಸುಕಾಡದಂತೆ, ಸೂರ್ಯಮಂಡಲವು ಮಾಸಿಹೋಗುವಂತೆ, ಸಮುದ್ರವು ಒಣಗಿ ಹೋಗುವಂತೆ, ನನ್ನ ವಿಕ್ರಮವನ್ನು ಮೆರೆಸುವೆನು. ರಾಮನ ತೇಜಃಪರಾಕ್ರಮಗಳೇನೆಂಬುದನ್ನು ಜಗತ್ತು ಕಾಣಲಿ. ನನ್ನ ಸೀತೆಯು ಎಲ್ಲಿರುವಳೆಂಬುದು ದೇವಾದಿಗಳಿಗೆ ತಿಳಿದೇ ಇದೆ. ಅವಳನ್ನು ತಂದೊಪ್ಪಿಸದಿದ್ದರೆ ಈ ಜಗತ್ತನ್ನೇ ನಾಶಮಾಡುತ್ತೇನೆ! ಸೀತೆಯು ದರ್ಶನವಾಗುವವರೆಗೆ ಜಗತ್ತಿಗೆ ಕಿಚ್ಚುಹಚ್ಚಿ ಉರಿಸುತ್ತೇನೆ'' ಎಂದು ವೀರವಾಣಿಯಿಂದ ಅಬ್ಬರಿಸಿದನು. ರೋಷದಿಂದ ಅವನ ಕಣ್ಣುಗಳು ಕಿಡಿಗೆದರಿದವು. ತುಟಿಗಳು ಅದುರಿದವು. ಜಟೆಯನ್ನು ಬಿಗಿದು ಕಟ್ಟಿದನು. ಕ್ರೋಧೋದ್ರಿಕ್ತನಾದ ಶ್ರೀರಾಮನ ಆಕೃತಿಯು ಪ್ರಳಯ ಕಾಲದ ರುದ್ರನಂತೆ ಪ್ರಜ್ವಲಿಸಿತು. ಲಕ್ಷ್ಮಣನ ಕೈಯಿಂದ ಧನುಸ್ಸನ್ನು ಸೆಳೆದುಕೊಂಡು ಪ್ರಜ್ವಲಿಸುವ ಶರವನ್ನು ಜೋಡಿಸಿ ''ಲಕ್ಷ್ಮಣ, ನನ್ನ ಸೀತೆಯನ್ನು ದೇವತೆಗಳು ಕ್ಷೇಮವಾಗಿ ತಂದೊಪ್ಪಿಸದಿದ್ದರೆ ದೇವಗಂಧರ್ವಾದಿಗಳಿಂದ ಸಮೇತವಾದ ಈ ಪ್ರಪಂಚವನ್ನು ತಲೆಕೆಳಗು ಮಾಡಿಬಿಡುತ್ತೇನೆ'' ಎಂದು ಆರ್ಭಟಿಸಿದನು.

ಶ್ರೀರಾಮನು ಆ ಪರಿಯಲ್ಲಿ ಕ್ರೋಧೋದ್ರಿಕ್ತನಾದ್ದನ್ನು ಲಕ್ಷ್ಮಣನು ಎಂದೂ ಕಂಡಿರಲಿಲ್ಲ. ಅವನು ದೈನ್ಯದಿಂದ ಕೈ ಮುಗಿದುಕೊಂಡು ''ಶ್ರೀರಾಮ, ನೀನು ಇದುವರೆಗೆ ಮೃದು ಸ್ವಭಾವದವನಾಗಿ ಜಿತೇಂದ್ರಿಯನಾಗಿದ್ದೀಯೆ. ಸಕಲ ಪ್ರಾಣಿಗಳ ಹಿತವನ್ನು ಚಿಂತಿಸತಕ್ಕವನು ನೀನು. ಯಾವನೋ ಒಬ್ಬನು ಮಾಡಿದ ಅಪರಾಧಕ್ಕಾಗಿ ಸಕಲ ಜೀವಿಗಳನ್ನೂ ಕೊಲ್ಲುವುದು ಯುಕ್ತವಲ್ಲ, ಧರ್ಮವಲ್ಲ, ಪೂಜ್ಯನೆ, ನಾನು ಕೈ ಮುಗಿದು ಯಾಚಿಸುತ್ತೇನೆ. ಈ ಕೋಪವನ್ನು ಉಪಸಂಹರಿಸು. ಸೀತೆಯನ್ನು ಯಾವನೋ ಅಪಹರಿಸಿದ್ದಾನೆ. ಆ ಶತ್ರು ಯಾರೆಂದು ಅನ್ವೇಷಿಸೋಣ. ಆ ವೈರಿಯ ಮೇಲೆ ನಿನ್ನ ಪರಾಕ್ರಮವನ್ನು ಮೆರೆಸು. ನನ್ನ ಪ್ರಾರ್ಥನೆಯನ್ನು ನಡೆಸು'' ಎಂದನು. ಸಾರಗ್ರಾಹಿಯಾದ ಶ್ರೀರಾಮನು ಲಕ್ಷ್ಮಣನ ಹಿತವಚನವನ್ನು ಕೇಳಿ ಹಾಗೆಯೇ ಆಗಲೆಂದು ಕ್ರಮವಾಗಿ ಶಾಂತನಾದನು. ಲಕ್ಷ್ಮಣನ ಹಿತೋಪದೇಶವು ಸರಿಯಾದದ್ದೆಂದು ಅವನ ಮನಸ್ಸಿಗೆ ತೋರಿತು. ಧೈರ್ಯವನ್ನವಲಂಬಿಸಿ ಮತ್ತೆ ಸೀತಾನ್ವೇಷಣೆಗೆ ಹೊರಟನು.

೩೧

ಜಟಾಯುವಿನ ಅಂತ್ಯ ಸಂಸ್ಕಾರ. ಕಬಂಧನ ವೃತ್ತಾಂತ. ಶಬರಿಯ ಆತಿಥ್ಯ. ಪಂಪಾದರ್ಶನ

ಅವರಿಬ್ಬರೂ ಎಡಬಿಡದೆ ಹುಡುಕುತ್ತ ನಡೆಯುವಾಗ ಮಹಾತ್ಮನೂ ಪಕ್ಷಿಶ್ರೇಷ್ಠನೂ ಆದ ಜಟಾಯು ನೆಲದ ಮೇಲೆ ಬಿದ್ದಿರುವುದು ಕಾಣಿಸಿತು. ಶ್ರೀರಾಮನು ''ಲಕ್ಷ್ಮಣ, ಇವನೇ ಆ ರಾಕ್ಷಸ! ಸೀತೆಯನ್ನು ತಿಂದು ನಿಶ್ಚಿಂತೆಯಿಂದ ಮಲಗಿದ್ದಾನೆ. ಇವನನ್ನು ಕೊಂದೆಸೆಯುವೆನು'' ಎಂದು ಹೇಳುತ್ತಾ ಧಡಾರನೆ ಮುಂದೆ ನುಗ್ಗಿದನು. ಅಷ್ಟರಲ್ಲಿ ರಕ್ತವನ್ನುಗುಳುತ್ತಿದ್ದ ಜಟಾಯುವು ''ಆಯುಷ್ಮನ್ ರಾಮ, ಯಾವ ಸೀತಾದೇವಿಯನ್ನು ಈ ಮಹಾರಣ್ಯದಲ್ಲಿ ದಿವ್ಯ ಮೂಲಿಕೆಯನ್ನು ಅರಸುವಂತೆ ಅರಸುತ್ತಿದ್ದೀಯೋ ಆ ದೇವಿಯನ್ನೂ, ನನ್ನ ಪ್ರಾಣವನ್ನೂ ರಾವಣನು ಅಪಹರಿಸಿದನು'' ಎಂದನು. ಆಗ ಅವನು ಜಟಾಯುವೆಂದು ಶ್ರೀರಾಮನಿಗೆ ಗೊತ್ತಾಯಿತು. ಶ್ರೀರಾಮನಿಗೆ ಕಣ್ಣೀರು ಉಕ್ಕಿತು. ಅವನು ಜಟಾಯುವನ್ನು ಆಲಿಂಗಿಸಿಕೊಂಡು ನೆಲದ ಮೇಲೆ ಕುಸಿದನು. ಜಟಾಯು ಮೆಲ್ಲಗೆ ಸೀತಾವೃತ್ತಾಂತವನ್ನು ತಿಳಿಸಿ ಅವಳನ್ನು ರಕ್ಷಿಸಲು ಹೋಗಿ ರಾವಣನ ಆಘಾತಕ್ಕೆ ಒಳಗಾದೆನೆಂಬುದನ್ನು ತಿಳಿಸಿದನು. ಶ್ರೀರಾಮನ ಶೋಕವು ಉಮ್ಮಳಿಸಿತು. ''ಲಕ್ಷ್ಮಣ, ಈ ಗೃಧ್ರರಾಜನು ವಯಸ್ಸಾದವನು. ನನಗೋಸ್ಕರ ಹತನಾಗಿ ನೆಲದ ಮೇಲೆ ಮಲಗಿರುವನಲ್ಲ. ನನ್ನ ದೌರ್ಭಾಗ್ಯವನ್ನು

ನೋಡು. ನನಗಾಗಿ ಈತನು ಪ್ರಾಣವನ್ನರ್ಪಿಸುತ್ತಿದ್ದಾನೆ. ಪಾಪಿಯಾದ ನಾನು ಮಹಾಸಾಗರದಲ್ಲಿ ಧುಮುಕಿದರೆ ಅದು ನೀರಿಲ್ಲದಂತೆ ಒಣಗಿ ಹೋದೀತು'' ಎಂದು ಶೋಕಿಸುತ್ತ ಪಿತೃವಾತ್ಸಲ್ಯದಿಂದ ಜಟಾಯುವನ್ನು ಮುಟ್ಟಿ ಮುಟ್ಟಿ ತಡವರಿಸಿದನು. ಅನಾಥನಂತೆ ವಿಲಪಿಸುತ್ತಿದ್ದ ಶ್ರೀರಾಮನನ್ನು ಮುಖವೆತ್ತಿ ನೋಡಿ ಜಟಾಯುವು ''ವತ್ಸ, ರಾಮ, ರಾಕ್ಷಸರಾಜನಾದ ರಾವಣನು ಅವಳನ್ನು ಅಪಹರಿಸಿಕೊಂಡು ದಕ್ಷಿಣ ದಿಕ್ಕಿಗೆ ಹೋದನು. ಆ ದುರಾತ್ಮನ ಕತ್ತಿಯ ಹೊಡೆತದಿಂದ ನನ್ನ ರೆಕ್ಕೆಗಳು ಕತ್ತರಿಸಿ ಬಿದ್ದವು. ಈಗ ನನ್ನ ಪ್ರಾಣವು ಮರಣಯಾತನೆಗೆ ಸಿಕ್ಕಿ ತೊಳಲುತ್ತಿದೆ. ಜನಕ ಪುತ್ರಿಯ ವಿಷಯವಾಗಿ ವ್ಯಥೆಪಡಬೇಡ. ರಾವಣನನ್ನು ನೀನು ಕೊಲ್ಲುವೆ. ಮತ್ತೆ ಜಾನಕಿ ಯೊಡನೆ ವಿಹರಿಸುವೆ'' ಎಂದನು. ಅಷ್ಟರಲ್ಲಿ ಜಟಾಯುವಿನ ಬಾಯಿಯಿಂದ ಗರಣೆ ಗರಣೆಯಾಗಿ ರಕ್ತವು ಸುರಿಯಿತು. ಆ ಪಕ್ಷಿರಾಜನು ''ರಾವಣನು ವಿಶ್ರವಸ್ಸಿನ ಮಗ. ಕುಬೇರನ ತಮ್ಮ'' ಎಂದು ಹೇಳುತ್ತ ಕಡೆಯುಸಿರೆಳೆದು ಪ್ರಾಣಬಿಟ್ಟನು.

ಶ್ರೀರಾಮನಿಗೆ ಜಟಾಯುವಿನ ಮರಣವು ಮತ್ತೊಂದು ದುಃಖ ಪ್ರಸಂಗವನ್ನು ತಂದೊಡ್ಡಿತು. ಅವನು ಜಟಾಯುವನ್ನು ಕೊಂಡಾಡುತ್ತ ಲಕ್ಷ್ಮಣನ ಕಡೆಗೆ ತಿರುಗಿ, ''ಲಕ್ಷ್ಮಣ, ಈ ಪಕ್ಷಿಯು ನನಗೋಸ್ಕರ ಪ್ರಾಣವನ್ನು ಒಪ್ಪಿಸಿತಲ್ಲವೆ, ಇದು ನನ್ನ ಕರುಳನ್ನು ಕೊರೆಯುತ್ತಿದೆ. ಸೀತಾಪಹಾರದಿಂದಾದ ದುಃಖವು ಅಷ್ಟಾಗಿ ಕಾಣಿಸು ವುದಿಲ್ಲ'' ಎಂದನು. ಆಮೇಲೆ ''ಈ ಪಕ್ಷಿರಾಜನಿಗೆ ಯೋಗ್ಯವಾದ ಅಗ್ನಿಸಂಸ್ಕಾರವನ್ನು ಮಾಡುವೆನು. ಇವನು ನನ್ನ ತಂದೆಗೆ ಸಮಾನ'' ಎಂದನು. ಲಕ್ಷ್ಮಣನು ಚಿತೆಯನ್ನು ಸಿದ್ಧಪಡಿಸಲು ಶ್ರೀರಾಮನು ವಿಧ್ಯುಕ್ತವಾಗಿ ಜಟಾಯುವಿನ ದೇಹವನ್ನು ಅದರ ಮೇಲಿಟ್ಟು, ''ಪಕ್ಷಿರಾಜ, ಶ್ರೇಷ್ಠರಾದ ಸದ್ಗೃಹಸ್ಥರಿಗೆ ಮತ್ತು ಯುದ್ಧದಲ್ಲಿ ಹಿಂದೆಗೆಯದ ವೀರರಿಗೆ ಯಾವ ಸದ್ಗತಿಯು ದೊರಕುವುದೋ ಅದು ನಿನಗೆ ದೊರಕಲಿ. ನೀನು ಪುಣ್ಯಲೋಕವನ್ನು ಸೇರು'' ಎಂದು ಹೇಳಿ ತನ್ನ ಬಂಧುವಿಗೆ ಸಂಸ್ಕಾರ ಮಾಡುವಂತೆ ದುಃಖಿಸುತ್ತಾ ವಿಧಿ ಪೂರ್ವಕವಾಗಿ ಚಿತೆಗೆ ಅಗ್ನಿಸ್ಪರ್ಶ ಮಾಡಿದನು. ಜಟಾಯುವಿಗೆ ಪಿಂಡಗಳನ್ನರ್ಪಿಸಿ ಪಿತೃಮೇಧ ಮಂತ್ರಗಳನ್ನು ಜಪಿಸಿದನು. ಅನಂತರ ಶ್ರೀರಾಮಲಕ್ಷ್ಮಣರಿಬ್ಬರೂ ಗೋದಾವರೀ ನದಿಗೆ ಹೋಗಿ ಸ್ನಾನ ಮಾಡಿ ಜಟಾಯುವಿಗೆ ಜಲತರ್ಪಣವನ್ನಿತ್ತರು. ಆಮೇಲೆ ಸೀತೆಯನ್ನು ಅನ್ವೇಷಿಸುತ್ತಾ ದಕ್ಷಿಣ ದಿಕ್ಕಿಗೆ ಹೋಗುವಾಗ ದುರ್ಗಮವಾದ ಗೊಂಡಾರಣ್ಯವು ಎದುರಾಯಿತು. ಆ ಪುರುಷ ಶ್ರೇಷ್ಠರು ನಿರ್ಭೀತಿಯಿಂದ ಹೋಗುತ್ತಿರುವಾಗ ಒಬ್ಬ ರಾಕ್ಷಸಿಯು ಕೂದಲನ್ನು ಕೆದರಿಕೊಂಡು ಬಂದಳು. ಅವಳು ನೇರವಾಗಿ ಬಂದು ಲಕ್ಷ್ಮಣನನ್ನು ಕುರಿತು ''ಎಲೈ ವೀರಾಗ್ರಣಿ, ನನ್ನ ಹೆಸರು ಅಯೋಮುಖಿ, ಬಾ,

ನಾವಿಬ್ಬರೂ ಆನಂದದಿಂದ ವಿಹರಿಸೋಣ!'' ಎಂದು ಹೇಳುತ್ತಾ ಅವನನ್ನು ಹಿಡಿದುಕೊಂಡಳು! ಲಕ್ಷ್ಮಣನು ಕ್ರುದ್ಧನಾಗಿ ಖಡ್ಗವನ್ನು ಸೆಳೆದು ಆ ರಾಕ್ಷಸಿಯ ಕಿವಿ ಮೂಗುಗಳನ್ನು ಕೊಯ್ದು ಹಾಕಿದನು. ಒಡನೆಯೇ ಆ ರಾಕ್ಷಸಿಯು ಅಪಸ್ವರದಿಂದ ಅರಚುತ್ತ ಕಾಡಿನೊಳಗೆ ಓಡಿಹೋದಳು. ಆ ತೇಜಸ್ವಿಗಳು ಹಾಗೆಯೇ ವನದಲ್ಲಿ ಹೋಗುತ್ತಿರುವಾಗ ಒಬ್ಬ ಮಹಾಕಾಯನಾದ ರಾಕ್ಷಸನು ಕಾಣಿಸಿಕೊಂಡನು. ಅವನ ಬಾಯಿ ಹೊಟ್ಟೆಯಲ್ಲಿತ್ತು. ತಲೆ ಮತ್ತು ಕುತ್ತಿಗೆಗಳೆರಡೂ ಇರಲಿಲ್ಲ. ಅವನೊಬ್ಬ ತಲೆಯಿಲ್ಲದ ಕಬಂಧ. ಆ ಕಬಂಧನು ನೀಳವಾದ ತನ್ನ ಕೈಗಳನ್ನು ಚಾಚಿ ರಾಮಲಕ್ಷ್ಮಣರನ್ನು ಬಲವಾಗಿ ಅಮುಕಿ ಹಿಡಿದನು. ಆಮೇಲೆ ''ಎಲೈ ಮನುಷ್ಯರೆ, ಬುದ್ಧಿಗೆಟ್ಟಿರುವ ನಿಮ್ಮನ್ನು ದೈವವು ನನ್ನ ಆಹಾರಕ್ಕಾಗಿ ಕಳಿಸಿಕೊಟ್ಟಿದೆ!'' ಎಂದು ನುಡಿದು ಅವರನ್ನು ನುಂಗುವುದಕ್ಕಾಗಿ ಭೀಷಣವಾದ ಬಾಯಿಯನ್ನು ತೆರೆದನು. ಶ್ರೀರಾಮ ಲಕ್ಷ್ಮಣರು ತಡಮಾಡದೆ ತಮ್ಮ ಖಡ್ಗಗಳಿಂದ ಅವನ ಎರಡು ತೋಳುಗಳನ್ನೂ ಕತ್ತರಿಸಿ ಚೆಲ್ಲಿದರು. ಕಬಂಧನು ದೈನ್ಯದಿಂದ ''ಎಲೈ ವೀರರೇ, ನೀವು ಯಾರು?'' ಎಂದು ಕೇಳಿದನು. ಲಕ್ಷ್ಮಣನು ತಮ್ಮಿಬ್ಬರ ಪರಿಚಯವನ್ನು ಹೇಳಿ ರಾಕ್ಷಸನಿಂದ ಅಪಹೃತಳಾದ ಸೀತಾದೇವಿಯ ಅನ್ವೇಷಣೆಗಾಗಿ ಯತ್ನಿಸುತ್ತಿದ್ದೇವೆ. ಎಂದನು. ಆಗ ಕಬಂಧನಿಗೆ ದೇವೇಂದ್ರನ ವಚನವು ಸ್ಮರಣೆಗೆ ಬಂದಿತು. ಅವನು ''ಹೇ ಪುರುಷಶ್ರೇಷ್ಠರೆ, ನಿಮಗೆ ಸ್ವಾಗತ. ಶ್ರೀರಾಮ, ಪೂರ್ವದಲ್ಲಿ ನನಗೆ ದಿವ್ಯರೂಪವಿತ್ತು. ಬಲಪರಾಕ್ರಮಗಳಿಂದ ಕೊಬ್ಬಿದ ನಾನು ಸೊಕ್ಕಿನಿಂದ ಮೆರೆಯುತ್ತ ಇದ್ದೆನು. ಒಮ್ಮೆ ನಾನು ಕರಾಳರೂಪವನ್ನು ಧರಿಸಿ ಸ್ಥೂಲಶಿರನೆಂಬ ಮಹರ್ಷಿಯನ್ನು ಹೆದರಿಸಿದೆನು. ಆ ಋಷಿಯು ಕ್ರುದ್ಧನಾಗಿ ''ಎಲೈ ನೀಚ, ನಿನಗೆ ಈ ಕರಾಳರೂಪವೇ ಶಾಶ್ವತವಾಗಲಿ'' ಎಂದು ಶಪಿಸಿದನು. ನಾನು ಪಶ್ಚಾತ್ತಾಪದಿಂದ ಆತನ ಕ್ಷಮೆಯನ್ನು ಬೇಡಿದಾಗ ''ಎಲೈ, ಶ್ರೀರಾಮನು ನಿನ್ನ ತೋಳನ್ನು ಕತ್ತರಿಸಿ ನಿನ್ನನ್ನು ಅಗ್ನಿಯಲ್ಲಿ ದಹಿಸಿದಾಗ ಮೊದಲಿನ ಉತ್ತಮ ರೂಪವನ್ನು ಪಡೆಯುವೆ'' ಎಂದು ಹೇಳಿ ಹೊರಟು ಹೋದನು. ನಾನು ದನು ಎಂಬವನ ಪುತ್ರ. ತಪೋಬಲದಿಂದ ಬ್ರಹ್ಮನನ್ನು ಮೆಚ್ಚಿಸಿ ದೀರ್ಘಾಯುಸ್ಸನ್ನು ಪಡೆದಿದ್ದೆನು. ಒಮ್ಮೆ ನಾನು ಇಂದ್ರನನ್ನು ಎದುರಿಸಿದಾಗ ಅವನು ವಜ್ರಾಯುಧದಿಂದ ನನ್ನನ್ನು ಅಪ್ಪಳಿಸಿ ಹೊಡೆದನು. ಆ ಹೊಡೆತಕ್ಕೆ ನನ್ನ ತಲೆಯು ದೇಹದ ಮಧ್ಯಭಾಗದಲ್ಲಿ ಹುದುಗಿಹೋಯಿತು! ನನ್ನ ಪ್ರಾರ್ಥನೆಯಂತೆ ಇಂದ್ರನು ದೀರ್ಘವಾದ ತೋಳನ್ನೂ ಹೊಟ್ಟೆಯಲ್ಲಿಯೇ ಬಾಯಿಯನ್ನೂ ನಿರ್ಮಿಸಿದನು. ರಾಘವ, ನಾನು ಹುಡುಕುತ್ತಿದ್ದ ಶ್ರೀರಾಮನೇ ನೀನು. ನಿನಗೆ ಶುಭವಾಗಲಿ! ನೀವಿಬ್ಬರೂ ನನಗೆ ದಹನ ಸಂಸ್ಕಾರವನ್ನು ಮಾಡಿರಿ. ಆಮೇಲೆ ನನ್ನ ಮೊದಲಿನ ರೂಪವನ್ನು ಪಡೆದು ನಿಮಗೊಂದು ಉಪಕಾರವನ್ನು ಮಾಡುವೆನು'' ಎಂದನು.

ಅನಂತರ ಆ ರಾಜಪುತ್ರರು ಒಂದು ಕೊರಕಲಿನಲ್ಲಿ ದೊಡ್ಡ ಚಿತೆಯನ್ನು ನಿರ್ಮಿಸಿ ಕಬಂಧನನ್ನು ಅದರೊಳಗೆ ತಳ್ಳಿದರು. ಕಬಂಧನ ದೇಹವು ಸುಟ್ಟೊಡನೆ ಆ ಚಿತೆಯಿಂದ ದಿವ್ಯರೂಪವನ್ನು ಧರಿಸಿದ ಒಬ್ಬ ತೇಜಸ್ವಿಯು ಹೊರಬಂದನು. ಅವನೇ ಹಿಂದೆ ಹೇಳಿದ ದನುಪುತ್ರ. ಆತನು ಅಂತರಿಕ್ಷದಲ್ಲಿ ನಿಂತು, ''ಶ್ರೀರಾಮ, ನನ್ನ ಮಾತನ್ನು ಕೇಳು. ಮುಂದೆ ಪಂಪಾ ತೀರದಲ್ಲಿರುವ ಋಷ್ಯಮೂಕ ಪರ್ವತದಲ್ಲಿ ಸುಗ್ರೀವನೆಂಬ ವಾನರೋತ್ತಮನಿದ್ದಾನೆ. ಅವನು ಸತ್ಯಸಂಧ, ವಿನೀತ, ಬುದ್ಧಿಶಾಲಿ, ಅವನ ಅಣ್ಣನಾದ ವಾಲಿಯು ರಾಜ್ಯ ನಿಮಿತ್ತವಾಗಿ ಆತನನ್ನು ಹೊರಗಟ್ಟಿದ್ದಾನೆ. ನೀನು ನೇರವಾಗಿ ಅಲ್ಲಿಗೆ ಹೋಗಿ ಸುಗ್ರೀವನೊಡನೆ ಅಗ್ನಿ ಸಾಕ್ಷಿಕವಾದ ಸ್ನೇಹವನ್ನು ಬೆಳೆಸು. ಬಲಾನ್ವಿತನಾದ ಸುಗ್ರೀವನನ್ನು ನೀನು ನಂಬಬಹುದು. ನಿನ್ನಿಂದಲೂ ಅವನಿಗೊಂದು ಉಪಕಾರವಾಗ ಬೇಕಾಗಿದೆ. ಶ್ರೀರಾಮ, ಆ ಕಪಿ ಶ್ರೇಷ್ಠನು ನಿನ್ನ ಕಾಂತೆಯಾದ ಸೀತೆಯನ್ನು ನಿಶ್ಚಯವಾಗಿ ಹುಡುಕಿ ನಿನಗೆ ತಂದೊಪ್ಪಿಸಬಲ್ಲನು'' ಎಂದು ಹೇಳಿ ಆಕಾಶಮಾರ್ಗ ವಾಗಿ ಹೊರಟು ಹೋದನು.

ಆಮೇಲೆ ಆ ರಾಜಕುಮಾರರು ದಕ್ಷಿಣದಿಂದ ಪಶ್ಚಿಮಾಭಿಮುಖವಾಗಿ ಹೊರಟು ಕಬಂಧನು ತೋರಿಸಿದ ಮಾರ್ಗದಲ್ಲಿ ನಡೆದರು. ಪಂಪಾ ಸರಸ್ಸಿನ ಪಶ್ಚಿಮ ತೀರವನ್ನು ಸೇರಿದಾಗ ಅಲ್ಲೊಂದು ಆಶ್ರಮವು ಕಾಣಿಸಿತು. ಅದು ತಪಸ್ವಿನಿಯಾದ ಶಬರಿಯಿದ್ದ ಆಶ್ರಮ. ಇವರೀರ್ವರನ್ನು ಕಂಡೊಡನೆ ಯೋಗಸಿದ್ಧಳಾದ ಶಬರಿಯು ಕೈ ಮುಗಿದು ಎದ್ದು ನಿಂತು ಉಭಯರ ಪಾದಗಳಿಗೂ ವಂದಿಸಿ ಅರ್ಘ್ಯ ಪಾದ್ಯಾದಿಗಳನ್ನಿತ್ತು ಸತ್ಕರಿಸಿದಳು. ಶ್ರೀರಾಮನು ಆಕೆಯ ಕುಶಲವನ್ನು ವಿಚಾರಿಸಿದನು. ಶಬರಿಯು ''ಶ್ರೀರಾಮ, ಈಗ ನಿನ್ನ ದರ್ಶನದಿಂದ ನನ್ನ ತಪಸ್ಸು ಸಿದ್ಧಿಸಿತು. ನಾನು ಮಾಡಿದ ಗುರು ಶುಶ್ರೂಷೆಗೆ ಫಲವು ದೊರೆಯಿತು. ರಘುನಂದನ, ಆ ಮಹರ್ಷಿಗಳು ದಿವ್ಯಜ್ಞಾನದಿಂದ 'ಶಬರಿ, ಸ್ವಲ್ಪಕಾಲದ ಮೇಲೆ ಶ್ರೀರಾಮನು ಲಕ್ಷ್ಮಣಸಮೇತನಾಗಿ ಈ ಪುಣ್ಯಾಶ್ರಮಕ್ಕೆ ಬರುವನು. ಆತನ ದರ್ಶನವಾದ ಮೇಲೆ ನೀನು ಸದ್ಗತಿಯನ್ನು ಪಡೆಯುವೆ' ಎಂದು ಹೇಳಿದರು. ಹೇ ಪುರುಷೋತ್ತಮ, ನಿನಗೋಸ್ಕರ ಕಾಡಿನಲ್ಲಿ ಬೆಳೆದ ಫಲಮೂಲಾದಿ ಆಹಾರಗಳನ್ನು ಸಂಗ್ರಹಿಸಿದ್ದೇನೆ. ಸ್ವೀಕರಿಸು'' – ಎಂದಳು. ರಾಮ ಲಕ್ಷ್ಮಣರು ಅವೆಲ್ಲವನ್ನೂ ಪ್ರೀತಿಯಿಂದ ಸ್ವೀಕರಿಸಿದರು. ಆಕೆಯ ಗುರುಗಳಾದ ಮತಂಗ ಮುನಿಗಳ ಆಶ್ರಮವನ್ನೆಲ್ಲ ನೋಡಿ ಸಂತೋಷಿಸಿದರು. ಶ್ರೀರಾಮನು ಶಬರಿಯನ್ನು ನೋಡಿ ''ಧರ್ಮಚಾರಿಣಿ, ನನ್ನನ್ನು ಭಕ್ತಿಯಿಂದ ಅರ್ಚಿಸಿದ್ದೀಯೆ. ನಿನಗೆ ಸದ್ಗತಿಯಾಗಲಿ'' ಎಂದನು. ನಾರುಬಟ್ಟೆಯನ್ನುಟ್ಟು, ಜಟಾಧಾರಿಣಿಯಾಗಿ ಮುದುಕಿ ಯಾಗಿದ್ದ ಶಬರಿಗೆ ತನ್ನ ದೇಹವನ್ನು ಆಗಲೇ ವಿಸರ್ಜಿಸಬೇಕೆಂದು ಇಚ್ಛೆಯಾಯಿತು.

ಶ್ರೀರಾಮನ ಅನುಜ್ಞೆಯಾದೊಡನೆ ಅವಳು ಅಗ್ನಿಯನ್ನು ಪ್ರಜ್ವಲಿಸಿ ಅದರಲ್ಲಿ ತನ್ನ ದೇಹವನ್ನರ್ಪಿಸಿದಳು. ಒಡನೆಯೇ ಶಬರಿಯು ಒಂದು ದಿವ್ಯ ಸುಂದರ ದೇಹವನ್ನು ಪಡೆದು ಮಿಂಚಿನಂತೆ ಆ ಪ್ರದೇಶವನ್ನು ಬೆಳಗಿಸುತ್ತ ತನ್ನ ತಪೋಬಲದಿಂದ ಪುಣ್ಯಲೋಕವನ್ನಡರಿದಳು. ಹೀಗೆ ಶಬರಿಯು ತನ್ನ ತಪೋಬಲದಿಂದ ಸ್ವರ್ಗವನ್ನು ಸೇರಲಾಗಿ, ಧರ್ಮಾತ್ಮನಾದ ರಾಘವನು ಮಹಾತ್ಮರ ತಪಃಪ್ರಭಾವವೇನೆಂಬುದನ್ನು ತಮ್ಮನೊಡನೆ ಸಮೀಕ್ಷಿಸಿದನು. ಆಮೇಲೆ ಲಕ್ಷ್ಮಣನನ್ನು ಕುರಿತು ''ವತ್ಸ, ನಿಜವಾಗಿಯೂ ನನ್ನ ಮನಸ್ಸಿಗೆ ಉಲ್ಲಾಸವಾಗಿದೆ. ಒಳ್ಳೆಯದಾಗುವುದೆಂದು ಹೃದಯವು ಹೇಳುತ್ತಿದೆ. ಕಬಂಧನು ಹೇಳಿದಂತೆ ಪಂಪಾ ಸರಸ್ಸಿನ ಬಳಿಗೆ ಹೋಗೋಣ, ಬಾ. ಅದೋ ಋಷ್ಯಮೂಕ ಗಿರಿಯು ಕಾಣಿಸುತ್ತಿದೆ. ಧರ್ಮಾತ್ಮನಾದ ಸುಗ್ರೀವನು ಅಲ್ಲಿ ವಾಸವಾಗಿದ್ದಾನಲ್ಲವೆ?'' ಎಂದು ಹೇಳಿ ಲಕ್ಷ್ಮಣನೊಡನೆ ಪಂಪಾ ಸರೋವರದ ಬಳಿಗೆ ಬಂದನು. ಅವರಿಬ್ಬರೂ ಬಹುದೂರದವರೆಗೆ ದಾರಿಯನ್ನು ನಡೆದು ಬಂದು ಆಯಾಸಗೊಂಡದ್ದರಿಂದ ಆ ಸರಸ್ಸಿನಲ್ಲಿ ಸ್ನಾನ ಮಾಡಿದರು. ಮನೋಜ್ಞವಾದ ಆ ಸರಸ್ಸನ್ನು ಶ್ರೀರಾಮಚಂದ್ರನು ಶಾಂತವಾಗಿ ಸಮೀಕ್ಷಿಸಿದನು.

ಕಿಷ್ಕಿಂಧಾಕಾಂಡ

೩೨

ಸುಗ್ರೀವನ ಪ್ರೇರಣೆಯಂತೆ ಹನುಮಂತನು ಬಂದು ಶ್ರೀರಾಮಲಕ್ಷ್ಮಣರೊಡನೆ ಸಂಭಾಷಿಸುವುದು. ಅಗ್ನಿಸಾಕ್ಷಿಕವಾಗಿ ಶ್ರೀರಾಮಸುಗ್ರೀವರ ಸಖ್ಯ. ಸೀತಾದೇವಿಯ ಒಡವೆಗಳನ್ನು ಗುರುತಿಸಿ ಶ್ರೀರಾಮನ ಶೋಕ

ಆ ಪಂಪಾಸರಸ್ಸಿನಲ್ಲಿದ್ದ ಮೀನುಗಳನ್ನೂ ತಾವರೆ ಹೂವುಗಳನ್ನೂ, ನೀರು ಹಕ್ಕಿಗಳನ್ನೂ, ಸುತ್ತಲೂ ಮರಗಿಡಗಳಿಂದ ತುಂಬಿದ ರಮಣೀಯ ದೃಶ್ಯವನ್ನೂ ನೋಡಿ ಶ್ರೀರಾಮನ ವಿರಹ ಶೋಕವು ಮತ್ತೆ ಪುಟಿದೆದ್ದಿತು. ಲಕ್ಷ್ಮಣನಿಗೆ ಪ್ರಕೃತಿಯ ಚೇತೋಹಾರಿ ದೃಶ್ಯಗಳನ್ನು ತೋರಿಸುತ್ತ ರಾಘವನು ವಿಲಪಿಸಿದನು. ಅನಂತರ ''ಲಕ್ಷ್ಮಣ, ನನ್ನ ಕಾಂತೆಯನ್ನು ಕಂಡಹೊರತು ಮನಸ್ಸಿಗೆ ಶಾಂತಿ ದೊರಕದು. ಪರಾಧೀನಳಾದ ಜಾನಕಿಯು ಈಗ ಎಲ್ಲಿ ಹೇಗೆ ಪ್ರಾಣವನ್ನು ಹಿಡಿದಿರಬಹುದು? ಮುಂದೊಂದು ದಿನ ಜನಕಮಹಾರಾಜನು ಸೀತೆಯ ಕುಶಲವನ್ನು ವಿಚಾರಿಸಿದರೆ ಏನು ಹೇಳಲಿ ಲಕ್ಷ್ಮಣ? ನಿರ್ಭಾಗ್ಯನಾದ ನನ್ನನ್ನು ಅವಳು ಹಿಂಬಾಲಿಸಿ ಬಂದಳು. ಮುಗುಳ್ನಗೆಯಿಂದ ಚೆಲುವಾದ ಅವಳ ಮುಖವನ್ನು ನೋಡದಿದ್ದರೆ ನಾನು ಬದುಕಿರುವುದು ಶಕ್ಯವೆ? ಆ ಮುಗ್ಧೆಯು ಅರಣ್ಯದಲ್ಲಿ ಎಷ್ಟು ಕಷ್ಟವನ್ನನುಭವಿಸಿದಳು! ಆದರೆ ಒಮ್ಮೆಯೂ ತನ್ನ ಕಷ್ಟವನ್ನು ಹೇಳಿಕೊಳ್ಳಲಿಲ್ಲ'' ಎಂದು ಹೇಳುತ್ತ ಶ್ರೀರಾಮನು ಶೋಕಿಸತೊಡಗಿದನು. ಲಕ್ಷ್ಮಣನು ''ಅಣ್ಣ ಮನಸ್ಸಿಗೆ ಧೈರ್ಯವನ್ನು ತಂದುಕೊ. ಧೀರರಾದ ನಿನ್ನಂಥವರು ಎಂದಿಗೂ ಎದೆಗುಂದಬಾರದು. ರಾವಣನು ಎಲ್ಲಾದರೂ ಅಡಗಲಿ, ಪಾತಾಳವನ್ನು ಸೇರಲಿ, ಅವನು ಜೀವಸಹಿತನಾಗಿ ಉಳಿಯಲಾರನೆಂಬುದು ನಿಶ್ಚಯ. ಆ ಪಾಪಿಯು ಎಲ್ಲಿರುವನೆಂಬುದನ್ನು ನಾವು ಮೊದಲು ತಿಳಿಯಬೇಕು. ಮಿಂಚಿಹೋದ ಕಾರ್ಯವನ್ನು ಧೈರ್ಯೋತ್ಸಾಹಗಳಿಂದ ಸಾಧಿಸಬೇಕಲ್ಲದೆ ಬೇರೆ ಮಾರ್ಗವಿಲ್ಲ. ಶೋಕವನ್ನು ಬದಿಗೊತ್ತು'' ಎಂದು ಸಮಾಧಾನವನ್ನು ಹೇಳುತ್ತಿದ್ದನು.

ಆಗ ಋಷ್ಯಮೂಕದ ಶಿಖರದಲ್ಲಿ ಸಂಚರಿಸುತ್ತಿದ್ದ ಸುಗ್ರೀವನು ಅಕಸ್ಮಾತ್ತಾಗಿ ಶ್ರೀರಾಮಲಕ್ಷ್ಮಣರನ್ನು ಕಂಡನು. ಅವನು ಬಲಾಢ್ಯನಾದರೂ ಇವರನ್ನು ಕಂಡು ಹೆದರಿ ವಿಷಣ್ಣನಾದನು. ತನ್ನನ್ನು ವಧಿಸುವುದಕ್ಕಾಗಿ ವಾಲಿಯು ಇವರನ್ನು ಕಳಿಸಿರಬೇಕು ಎಂದು ಚಿಂತಾಕುಲನಾದನು. ರಾಮಲಕ್ಷ್ಮಣರು ಆಯುಧಧಾರಿಗಳಾಗಿ

ಋಷ್ಯಮೂಕದ ಕಡೆಗೇ ನೋಡುತ್ತಿದ್ದುದರಿಂದ ಅವನ ಭಯವು ಇಮ್ಮಡಿಸಿತು. ಅಷ್ಟರಲ್ಲಿ ಅವನ ಸಚಿವನಾದ ಹನುಮಂತನು ಬಂದು ಸುಗ್ರೀವನ ತಲ್ಲಣವನ್ನು ನೋಡಿ, ಸುಗ್ರೀವನನ್ನು ಕುರಿತು ''ವಾನರೋತ್ತಮ, ಇಲ್ಲಿಗೆ ವಾಲಿಯೇನೂ ಬಂದಿಲ್ಲ, ನಿನಗೇಕೆ ಅಂಜಿಕೆ?'' ಎಂದು ಕೇಳಿದನು. ಆಗ ಸುಗ್ರೀವನು ಹನುಮಂತನಿಗೆ ರಮಲಕ್ಷ್ಮಣರ ಕಡೆಗೆ ಕೈಮಾಡಿ ತೋರಿಸಿದನು. ಹನುಮಂತನು ''ಅವರು ಯಾರೆಂಬುದನ್ನು ತಿಳಿಯದೆ ಕಂಗೆಡಬಾರದು'' ಎಂದಾಗ ಸುಗ್ರೀವನು 'ಹನುಮಂತ, ನೀನೇ ಅಲ್ಲಿಗೆ ಹೋಗಿ ಅವರ ಇಂಗಿತನೇನೆಂಬುದನ್ನು ತಿಳಿದು ಬಾ'' ಎಂದನು.

ಹನುಮಂತನು ಕಾಮರೂಪಿಯಾದ್ದರಿಂದ ಕಪಿವೇಷವನ್ನು ಪರಿತ್ಯಜಿಸಿ ಭಿಕ್ಷುವೇಷವನ್ನು ಧರಿಸಿದನು. ಅವನು ವಿನೀತನಂತೆ ರಾಮಲಕ್ಷ್ಮಣರ ಬಳಿಗೆ ಬಂದು ನಮಸ್ಕರಿಸಿ ಮೃದುವಾದ ಮಾತಿನಿಂದ ಅವರನ್ನು ಹೊಗಳಿ ''ಎಲೈ ಮಹಾತ್ಮರೆ, ತಾಪಸವೇಷಧಾರಿಗಳಾದ ನೀವು ಯಾರು? ಪರ್ವತದ ಕಡೆಗೇ ನೋಡುತ್ತಿರುವಿರಲ್ಲ, ಏನನ್ನು ಹುಡುಕುತ್ತಿದ್ದೀರಿ?'' ಎಂದನು. ಹನುಮಂತನ ವಿನಯ ಪೂರ್ಣವೂ ಮೃದುಮಧುರವೂ ಆದ ನುಡಿಯನ್ನು ಕೇಳಿ ಶ್ರೀರಾಮನಿಗೆ ಆನಂದವಾಯಿತು. ಲಕ್ಷ್ಮಣನು ತಾವು ಯಾರೆಂಬುದನ್ನೂ ಏತಕ್ಕಾಗಿ ಕಾಡಿನಲ್ಲಿ ಅಲೆಯುತ್ತಿದ್ದೇವೆಂಬುದನ್ನೂ ತಿಳಿಸಿದನು. ಸೀತಾಪಹಾರದ ವೃತ್ತಾಂತವನ್ನು ಹೇಳಿ ''ಆ ಕಾರ್ಯದಲ್ಲಿ ನೆರವನ್ನು ಬಯಸಿ ಸುಗ್ರೀವನ ಬಳಿಗೆ ಬಂದಿದ್ದೇವೆ. ಆತನನ್ನು ನಾವು ನೋಡಬೇಕಾಗಿದೆ'' ಎಂದೂ ಹೇಳಿದನು. ಬುದ್ಧಿಶಾಲಿಯಾದ ಹನುಮಂತನು ತನ್ನ ಒಡೆಯನಾದ ಸುಗ್ರೀವನಿಗೆ ಇವರು ಯೋಗ್ಯ ಮಿತ್ರರೇ ಆಗುವರೆಂದು ಊಹಿಸಿ ಆನಂದಿಸಿದನು. 'ಶ್ರೀರಾಮ–ಲಕ್ಷ್ಮಣ, ನಿಮಗೆ ಸ್ವಾಗತ. ನಾನು ಸುಗ್ರೀವನ ಸಚಿವನಾಗಿದ್ದೇನೆ. ನನ್ನ ಹೆಸರು ಹನುಮಂತ, ನೀವು ಅಪೇಕ್ಷಿಸುವುದಾದರೆ ಸುಗ್ರೀವನ ಬಳಿಗೆ ಕರೆದೊಯ್ಯುವೆನು'' ಎಂದನು. ಲಕ್ಷ್ಮಣನು ''ಅಯ್ಯಾ–ಹನುಮಂತ, ನಮ್ಮ ದಾರಿ ಸುಗಮವಾಯಿತು. ನನ್ನ ಅಣ್ಣನಾದ ಶ್ರೀರಾಮನು ಲೋಕೋತ್ತರ ಕೀರ್ತಿಶಾಲಿಯೂ ಮಹಾಪರಾಕ್ರಮಿಯೂ ಧರ್ಮನಿಷ್ಠನೂ ಆದ ಮಹಾಪುರುಷನಾಗಿದ್ದಾನೆ. ದೈವದುರ್ವಿಪಾಕದಿಂದ ಈ ಕಷ್ಟಕ್ಕೆ ಸಿಕ್ಕಿಕೊಂಡು ಸುಗ್ರೀವನ ಬಳಿಗೆ ಶರಣಾರ್ಥಿಯಾಗಿ ಬಂದಿದ್ದಾನೆ. ಲೋಕನಾಥನಾಗಿದ್ದ ಮಹಾವೀರನು ಇಂದು ಸುಗ್ರೀವನ ಸಹಾಯವನ್ನು ಯಾಚಿಸುತ್ತಿದ್ದಾನೆ'' ಎಂದು ದೈನ್ಯದಿಂದ ನುಡಿದನು. ಆಗ ಮಾತಿನಲ್ಲಿ ನಿಪುಣನಾದ ಹನುಮಂತನು ''ಆರ್ಯ ಲಕ್ಷ್ಮಣ, ನನ್ನ ಸ್ವಾಮಿಯಾದ ಸುಗ್ರೀವನೂ ಸಹ ಅಣ್ಣನಾದ ವಾಲಿಯೊಡನೆ ವೈರವನ್ನು ಬೆಳೆಸಿಕೊಂಡು ರಾಜ್ಯಭ್ರಷ್ಟನಾಗಿದ್ದಾನೆ. ವಾಲಿಯು ಸುಗ್ರೀವನ ಮಡದಿಯನ್ನು ಅಪಹರಿಸಿ ಅವನನ್ನು

ಪೀಡಿಸಿ ಕಾಡಿಗೆ ಅಟ್ಟಿದ್ದಾನೆ. ಅವನೂ ನಿನ್ನ ಅಣ್ಣನಂತೆ ಪತ್ನೀಶೋಕದಿಂದ ವಿಹ್ವಲನಾಗಿದ್ದಾನೆ. ಸೂರ್ಯಪುತ್ರನಾದ ಸುಗ್ರೀವನು ಸತ್ಯಸಂಧ. ಅವನು ನಿಶ್ಚಯವಾಗಿಯೂ ನಿಮಗೆ ನೆರವಾಗುವನು'' ಎಂದನು. ರಾಮಲಕ್ಷ್ಮಣರು ಸುಗ್ರೀವನನ್ನು ಕಾಣಲು ಬಯಸಿದರು. ಆ ಕಪಿ ಕುಂಜರನು ಭಿಕ್ಷುವೇಷವನ್ನು ಪರಿತ್ಯಜಿಸಿ, ತನ್ನ ವಾನರ ರೂಪವನ್ನು ಧರಿಸಿ ಶ್ರೀರಾಮ ಲಕ್ಷ್ಮಣರನ್ನು ತನ್ನ ಹೆಗಲಮೇಲೆ ಕುಳ್ಳಿರಿಸಿಕೊಂಡು, ಲೀಲಾಜಾಲವಾಗಿ ಋಷ್ಯಮೂಕ ಪರ್ವತವನ್ನು ಏರಿದನು. ಅನಂತರ ಸುಗ್ರೀವನಿದ್ದ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ಅವರಿಬ್ಬರನ್ನೂ ಇಳಿಸಿ ತಾನೊಬ್ಬನೇ ಒಳಗೆ ಹೋಗಿ ಸುಗ್ರೀವನಿಗೆ ಹೇಳಿದನು : ''ವಾನರಶ್ರೇಷ್ಠ , ಅಲ್ಲಿ ಬಂದಿರತಕ್ಕವನು ಶ್ರೀರಾಮನೆಂಬ ರಾಜಪುತ್ರ. ಅವನ ತಮ್ಮನಾದ ಲಕ್ಷ್ಮಣನೂ ಜೊತೆಗೆ ಇದ್ದಾನೆ. ಅವರಿಬ್ಬರೂ ದಶರಥ ಮಹಾರಾಜನ ಪುತ್ರರು. ಇಬ್ಬರೂ ಮಹಾ ತೇಜಸ್ವಿಗಳೂ ಪರಮ ವೀರರೂ ಆಗಿ ಕಾಣುತ್ತಾರೆ. ಯಾವುದೋ ಕಾರಣದಿಂದ ರಾಜ್ಯವನ್ನು ಪರಿತ್ಯಜಿಸಿ ಅರಣ್ಯಕ್ಕೆ ಬಂದರಂತೆ. ಶ್ರೀರಾಮನ ಪತ್ನಿಯಾದ ಸೀತಾದೇವಿಯೂ ಜೊತೆಗೆ ಬಂದಳು. ಅವಳನ್ನು ರಾವಣನು ಮೋಸದಿಂದ ಅಪಹರಿಸಿಬಿಟ್ಟನಂತೆ. ಈಗ ಸೀತಾನ್ವೇಷಣಾ ಕಾರ್ಯದಲ್ಲಿ ನಿನ್ನ ನೆರವನ್ನು ಅಪೇಕ್ಷಿಸಿ ಅವರು ಬಂದಿದ್ದಾರೆ. ವಾನರೇಂದ್ರ, ಆವರಿಬ್ಬರೂ ಪೂಜನೀಯರು. ಅವರೊಡನೆ ಸ್ನೇಹವನ್ನು ಬೆಳೆಸು. ಅವರನ್ನು ಆದರಿಸಿ ಸತ್ಕರಿಸು'' ಎಂದು ನುಡಿದನು.

ಸುಗ್ರೀವನ ಭಯವು ದೂರವಾಯಿತು. ಅವನು ಸಂತೋಷಪಡುತ್ತ ರಾಘವನಿದ್ದಲ್ಲಿಗೆ ಬಂದು ಪ್ರೀತಿಯಿಂದ ಶ್ರೀರಾಮನನ್ನು ಕುರಿತು ''ಆರ್ಯ, ನಿನಗೆ ಸ್ವಾಗತ. ನೀನು ಧರ್ಮನಿಷ್ಠನೆಂದೂ ಮಹಾ ವೀರನೆಂದೂ ಸರ್ವಭೂತಗಳಲ್ಲಿ ದಯಾಳುವೆಂದೂ ನಾನು ಕೇಳಿದ್ದೇನೆ. ಅಲ್ಲದೆ ವಾಯು ಪುತ್ರನಾದ ಈ ಹನುಮಂತನು ನಿನ್ನ ಸದ್ಗುಣಗಳನ್ನು ವಿವರಿಸಿದ್ದಾನೆ. ''ಹೇ ಮಹಾತ್ಮ ನೀನು ನನ್ನೊಡನೆ ಸಖ್ಯವನ್ನು ಬಯಸುವುದಾದರೆ, ಇದೋ–ಕೈ ನೀಡಿದ್ದೇನೆ. ಕೈಯನ್ನು ಹಿಡಿ–ನಮ್ಮ ಸ್ನೇಹಕ್ಕೆ ಚ್ಯುತಿಯಿಲ್ಲವೆಂದು ಪ್ರತಿಜ್ಞೆಯಾಗಲಿ'' ಎಂದನು. ಸುಗ್ರೀವನ ಮಧುರವಾದ ನುಡಿಯನ್ನು ಕೇಳಿ ಶ್ರೀರಾಮನು ಅವನ ಕೈಯನ್ನು ಸಂತೋಷದಿಂದ ಹಿಡಿದು ಹೃತ್ಪೂರ್ವಕವಾಗಿ ಸ್ನೇಹದಿಂದ ಸುಗ್ರೀವನನ್ನು ಬಿಗಿಯಾಗಿ ಆಲಂಗಿಸಿಕೊಂಡನು. ಅನಂತರ ಅಗ್ನಿಯನ್ನು ಉತ್ಪಾದಿಸಿ ಇಬ್ಬರೂ ಅಗ್ನಿಸಾಕ್ಷಿಕವಾಗಿ ತಮ್ಮೀರ್ವರ ಮೈತ್ರಿಯು ಸ್ಥಿರವಾದದ್ದೆಂದು ಪ್ರತಿಜ್ಞೆ ಮಾಡಿದರು. ಸುಗ್ರೀವನು ವಾಲಿಯಿಂದ ತನಗಾದ ಅಪಕಾರವನ್ನು ವಿವರಿಸಿ ತನಗೆ ಅಭಯವನ್ನು ನೀಡುವಂತೆ ಶ್ರೀರಾಮನನ್ನು ಪ್ರಾರ್ಥಿಸಿದನು. ಧರ್ಮಜ್ಞನಾದ ಕಾಕುತ್ಸ್ಥನು ಮುಗುಳ್ನಗೆಯಿಂದ ''ವಾನರೋತ್ತಮ,

ಉಪಕಾರವೇ ಮಿತ್ರನಿಂದ ಆಗಬೇಕಾದ ಪ್ರಯೋಜನ. ತೀಕ್ಷ್ಣವಾದ ಈ ಅಸ್ತ್ರಗಳನ್ನು ನೋಡು. ವಿಷದಂಷ್ಟ್ರಗಳಂತಿರುವ ಈ ಕ್ರೂರಾಸ್ತ್ರಗಳಿಂದ ಆ ವಾಲಿಯು ಇಂದೇ ಹತನಾಗಿ ನೆಲದಮೇಲೆ ಒರಗುವುದನ್ನು ನೋಡು'' ಎಂದನು. ಹೀಗೆ ಶ್ರೀರಾಮನೂ ಸುಗ್ರೀವನೂ ಸಂಭಾಷಿಸುತ್ತಿದ್ದ ಸಮಯದಲ್ಲಿ ಸೀತಾದೇವಿಯ ಕಮಲಸದೃಶವಾದ ಎಡಗುಣ್ಣು, ವಾಲಿಯ ಹೊಂಬಣ್ಣದ ಎಡಗಣ್ಣು, ರಾವಣನ ಅಗ್ನಿ ಸದೃಶವಾದ ಎಡಗಣ್ಣು ಇವೆಲ್ಲವೂ ಏಕಕಾಲದಲ್ಲಿ ಅದುರಿದವು !

ಸುಗ್ರೀವನು ಶ್ರೀರಾಮನನ್ನು ನೋಡಿ ''ಶ್ರೀರಾಮ, ನನ್ನ ಸಚಿವನಾದ ಹನುಮಂತನು ನಿನ್ನ ವಿಚಾರವನ್ನು ಹೇಳಿದ್ದಾನೆ. ನಿನ್ನ ಪತ್ನಿಯಾದ ಜನಕಪುತ್ರಿಯನ್ನು ರಾಕ್ಷಸನೊಬ್ಬನು ಅಪಹರಿಸಿದ್ದಾನಂತೆ. ಆ ಪಾಪಿಯು ಸಮಯ ಸಾಧಿಸಿ ಬಂದು ನೀವಿಬ್ಬರೂ ಇಲ್ಲದಿದ್ದಾಗ ಆ ದುಷ್ಕಾರ್ಯವನ್ನು ಮಾಡಿದ್ದಾನಂತೆ. ಸೀತಾದೇವಿಯನ್ನು ಆ ರಾಕ್ಷಸನು ಎಲ್ಲಿಯೇ ಇಟ್ಟಿದ್ದರೂ–ಅವಳು ರಸಾತಳದಲ್ಲಿರಲಿ, ಅಥವಾ ನಭಸ್ಥಳದಲ್ಲಿರಲಿ–ನಾನು ಹುಡುಕಿ ತರುವೆನು! ಇದು ನನ್ನ ಸತ್ಯ ಪ್ರತಿಜ್ಞೆಯೆಂದು ತಿಳಿ. ಓ ಮಹಾಬಾಹು, ಶೋಕಿಸಬೇಡ. ನಾನು ನನ್ನ ಮಂತ್ರಿಗಳೊಡನೆ ಈ ಗಿರಿಶೃಂಗದಲ್ಲಿ ಕುಳಿತಿದ್ದಾಗ ಕ್ರೂರಕರ್ಮಿಯಾದ ಒಬ್ಬ ರಾಕ್ಷಸನು ಒಬ್ಬ ಯುವತಿಯನ್ನು ಅಪಹರಿಸಿ ಒಯ್ಯುತ್ತಿದ್ದುದನ್ನು ನೋಡಿದೆನು. ಅವಳು ಕರುಣಸ್ವರದಿಂದ ''ರಾಮಾ, ರಾಮಾ, ಲಕ್ಷ್ಮಣಾ'' ಎಂದು ಕೂಗಿಕೊಳ್ಳುತ್ತಿದ್ದಳು. ಅವಳೇ ನಿನ್ನ ಪತ್ನಿಯಾದ ಮೈಥಿಲಿ ಯಾಗಿರಬೇಕು, ಸಂದೇಹವಿಲ್ಲ. ಆ ಯುವತಿಯು ನಮ್ಮನ್ನು ನೋಡಿ ತನ್ನ ಆಭರಣಗಳನ್ನು ಉತ್ತರೀಯದಲ್ಲಿ ಸುತ್ತಿ ನಮ್ಮ ಕಡೆಗೆ ಬಿಸುಟಳು. ಅದನ್ನು ನಾವು ಸುರಕ್ಷಿತವಾಗಿ ತೆಗೆದಿಟ್ಟಿದ್ದೇವೆ. ಅವನ್ನು ನಿನಗೆ ತೋರಿಸುವೆನು. ಒಡವೆಗಳನ್ನು ನೀನು ಗುರುತಿಸಬಹುದು'' ಎಂದನು. ಒಡನೆಯೇ ಶ್ರೀರಾಮನು ''ಮಿತ್ರ ಸುಗ್ರೀವ, ಅದನ್ನು ತರಿಸು. ಏಕೆ ತಡಮಾಡುವೆ?'' ಎಂದನು. ಸುಗ್ರೀವನು ದುರ್ಗಮವಾದ ತನ್ನ ಗುಹೆಯನ್ನು ಪ್ರವೇಶಿಸಿ ಆ ಉತ್ತರೀಯದ ಗಂಟನ್ನು ತಂದು ಶ್ರೀರಾಮನ ಎದುರಿಗಿಟ್ಟನು. ದಾಶರಥಿಯು ಅದನ್ನು ಬಿಚ್ಚಿನೋಡಿ ಆಭರಣಗಳನ್ನು ಕೈಯಲ್ಲಿ ಹಿಡಿದುಕೊಂಡನು. ಕಣ್ಣೀರು ಉಕ್ಕಿ ಬಂದಿತು. ಅವನು ''ಹಾ ಪ್ರಿಯೇ'' ಎಂದು ಕೂಗುತ್ತ ನೆಲದಮೇಲೆ ಬಿದ್ದುಹೋದನು. ಆಭರಣಗಳನ್ನು ಎದೆಗೊತ್ತಿಕೊಂಡು ಕೆರಳಿದ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಲಕ್ಷ್ಮಣನನ್ನು ನೋಡಿ, ''ತಮ್ಮ ಇತ್ತ ನೋಡು. ಇವೇ ವೈದೇಹಿಯ ಆಭರಣಗಳು. ನೀನೇ ನೋಡು'' ಎಂದನು. ಸೌಮಿತ್ರಿಯು ಅವನ್ನು ನೋಡಿ ''ಅಣ್ಣ, ಈ ಕೇಯೂರಗಳನ್ನೂ ಕುಂಡಲಗಳನ್ನೂ ನಾನು ಗುರುತಿಸಲಾರೆ. ಈ ಕಾಲಂದಿಗೆಗಳು ಮಾತ್ರ ಅತ್ತಿಗೆಯವೇ ಹೌದು. ನಿತ್ಯವೂ

ದೇವಿಯ ಪಾದಗಳಿಗೆ ವಂದಿಸುವಾಗ ಇವುಗಳನ್ನು ನೋಡಿದ್ದೇನೆ'' ಎಂದನು. ಶ್ರೀರಾಮನು ಸುಗ್ರೀವನ ಕಡೆಗೆ ತಿರುಗಿ ''ಸುಗ್ರೀವ, ನನ್ನ ಪ್ರಾಣಕಾಂತೆಯನ್ನು ಆ ನೀಚರಾಕ್ಷಸನು ಯಾವ ಕಡೆಗೆ ಕರೆದೊಯ್ಯುತ್ತಿದ್ದನು? ನನ್ನ ಮೈಥಿಲಿಯನ್ನಪಹರಿಸಿ ನನ್ನ ರೋಷವನ್ನುಕ್ಕಿಸಿದ್ದಾನೆ. ತನ್ನ ಮೃತ್ಯುವಿನ ಮನೆಯ ಬಾಗಿಲನ್ನು ತಾನೇ ತೆರೆದಿದ್ದಾನೆ. ನನ್ನ ವೈರಿಯು ಎಲ್ಲಿರುವನೆಂದು ಹೇಳು. ಅವನನ್ನು ಧ್ವಂಸಮಾಡುವೆನು'' ಎಂದು ವೀರವಾಣಿಯಿಂದ ಘೋಷಿಸಿದನು.

೩೩

ವಾಲಿ–ಸುಗ್ರೀವರ ವೈರಕ್ಕೆ ನಿಮಿತ್ತ. ವಾಲಿಯನ್ನು ಸಂಹರಿಸುತ್ತೇನೆಂದು ಶ್ರೀರಾಮನ ಪ್ರತಿಜ್ಞೆ. ಶ್ರೀರಾಮನ ಬಲ ಪರೀಕ್ಷಣ.

ಆಗ ಸುಗ್ರೀವನು ಕೈಮುಗಿದುಕೊಂಡು ''ಶ್ರೀರಾಮ, ಆ ದುಷ್ಟರಾಕ್ಷಸನ ವಾಸಸ್ಥಾನವಾಗಲಿ, ಅವನ ಸಾಮರ್ಥ್ಯವಾಗಲಿ ನನಗೆ ತಿಳಿಯದು. ಮೈಥಿಲಿಯು ನಿನಗೆ ದೊರೆಯುವಂತೆ ನಾನು ಸರ್ವಥಾ ಪ್ರಯತ್ನ ಮಾಡುವೆನು. ನಾನೂ ಪತ್ನಿಯಿಂದ ವಿರಹಿತನಾಗಿದ್ದೇನೆ. ಆದರೆ ನಿನ್ನಷ್ಟು ಶೋಕಿಸುತ್ತಿಲ್ಲ. ಶೋಕಕ್ಕೆ ಒಂದು ಮಿತಿಯಿರಬೇಕು. ಹಿಡಿಸಲಾರದ ಭಾರವನ್ನು ಹೇರಿದರೆ ಹಡಗೂ ಸಹ ನೀರಲ್ಲಿ ಮುಳುಗಿ ಹೋಗುತ್ತದೆ. ರಾಜಪುತ್ರ, ನೀನು ಈ ರೀತಿಯಾಗಿ ಶೋಕಿಸಬಾರದು. ಅಗ್ನಿಸಾಕ್ಷಿಯಾಗಿ ಮಿತ್ರನಾಗಿರುವ ನಾನು ಹಿತವಾಕ್ಯವನ್ನು ಹೇಳುತ್ತಿದ್ದೇನೆ. ಶೋಕಿಸಬೇಡ'' ಎಂದು ಹೇಳಿ ಸುಗ್ರೀವನು ರಾಘವನ ಕಣ್ಣೀರನ್ನು ಒರೆಸಿದನು. ಹೀಗೆ ಆಪ್ತನಾಗಿ ನುಡಿದ ಸುಗ್ರೀವನ ಮಾತಿನಿಂದ ಸಂತೃಪ್ತನಾದ ದಾಶರಥಿಯು ''ವಾನರೋತ್ತಮ, ನಾನು ನಿನಗೆ ಹೇಳಿದುದು ಅತಿಶಯೋಕ್ತಿಯೆಂದು ತಿಳಿಯಬೇಡ. ನಿನಗೆ ಕೇಡನ್ನು ಮಾಡಿರುವ ವಾಲಿಯನ್ನು ನಿಶ್ಚಯವಾಗಿ ವಧಿಸುವೆನು. ನಾನು ಎಂದೂ ಸುಳ್ಳು ಹೇಳಿದವನಲ್ಲ'' ಎಂದನು. ಅನಂತರ ಅವರಿಬ್ಬರೂ ಸೌಹಾರ್ದದಿಂದ ಕುಳಿತುಕೊಂಡು ತಮ್ಮ ಬವಣೆಗಳನ್ನು ಹೇಳಿಕೊಂಡರು. ಸುಗ್ರೀವನ ಭಾರ್ಯೆಯನ್ನು ವಾಲಿಯು ಏಕೆ ಅಪಹರಿಸಿದನೆಂಬ ಪೂರ್ವ ವೃತ್ತಾಂತವನ್ನು ಶ್ರೀರಾಮನು ತಿಳಿಯಲಪೇಕ್ಷಿಸಿದನು. ಆಗ ಸುಗ್ರೀವನು ಹೀಗೆಂದನು :

''ರಾಘವ, ನನ್ನ ಅಣ್ಣನಾದ ವಾಲಿಯು ಮಹಾಪರಾಕ್ರಮಿ. ನಮ್ಮ ತಂದೆಯು ಮೃತನಾದಮೇಲೆ ಹಿರಿಯನಾದ ವಾಲಿಯನ್ನು ಮಂತ್ರಿಗಳು ರಾಜ್ಯಪಟ್ಟಕ್ಕೇರಿಸಿದರು. ನಾನು ಅಣ್ಣನಿಗೆ ವಿಧೇಯನಾಗಿ ಹೃದಯ ಪೂರ್ವಕವಾಗಿ ಅವನನ್ನು ಪ್ರೀತಿಸುತ್ತ

ಭೃತ್ಯನಂತೆ ನಡೆದುಕೊಳ್ಳುತ್ತಿದ್ದೆನು. ಹೀಗಿರಲು ಮಾಯಾವಿಯೆಂಬ ದೈತ್ಯನು ಪೂರ್ವವೈರದಿಂದ ರಾತ್ರಿಯಲ್ಲಿ ಬಂದು ನಮ್ಮ ಕಿಷ್ಕಿಂಧಾನಗರದ ಹೆಬ್ಬಾಗಿಲಿನಲ್ಲಿ ಗರ್ಜಿಸತೊಡಗಿದನು. ಎಷ್ಟೋಸಲ ಸೋತು ಓಡಿಹೋಗಿದ್ದ ಮಾಯಾವಿಯು ಮತ್ತೆ ಬಂದುದನ್ನು ತಿಳಿದು ನನ್ನ ಅಣ್ಣನು ಕೂಡಲೇ ಯುದ್ಧಕ್ಕೆ ಹೊರಟೇ ಬಿಟ್ಟನು. ನಾನು ಭ್ರಾತೃವಾತ್ಸಲ್ಯದಿಂದ ವಾಲಿಯ ಬೆಂಬಲಕ್ಕಾಗಿ ಅವನೊಡನೆ ಹೋದೆನು. ಮಾಯಾವಿಯು ನಮ್ಮಿಬ್ಬರನ್ನು ಕಂಡೊಡನೆ ಭೀತಿಯಿಂದ ಓಡಿ ಹೋದನು. ನಾವು ಅಟ್ಟಿಸಿಕೊಂಡು ಹೋದೆವು. ಅವನು ದುರ್ಗಮವಾದ ಒಂದು ಪರ್ವತದ ಬಿಲವನ್ನು ಪ್ರವೇಶಿಸಿಬಿಟ್ಟನು. ಬಿಲದ ಬಾಗಿಲಿನಲ್ಲಿ ವಾಲಿಯು ನನ್ನನ್ನು ಕುರಿತು ''ಸುಗ್ರೀವ, ನೀನು ಈ ಬಿಲದ್ವಾರದಲ್ಲಿ ಎಚ್ಚರಿಕೆಯಿಂದ ಕಾವಲಾಗಿ ನಿಂತಿರು. ನಾನು ಒಳಗೆ ನುಗ್ಗಿಹೋಗಿ ಆ ವೈರಿಯನ್ನು ಕೊಂದೇ ತೀರುವೆನು'' ಎಂದನು. ಆಮೇಲೆ ವಾಲಿಯು ಬಿಲದೊಳಗೆ ನುಗ್ಗಿ ಹೋದನು. ನಾನು ಬಾಗಿಲಲ್ಲಿ ಕಾವಲಾಗಿ ನಿಂತಿದ್ದೆನು. ಬಹಳ ದಿನಗಳು ಕಳೆದು ಹೋದವು. ಒಂದು ದಿನ ಬಿಲದ್ವಾರದಿಂದ ನೊರೆ ನೊರೆಯಾದ ರಕ್ತವು ಹರಿದು ಬಂದಿತು. ಬಿಲದೊಳಗೆ ಗರ್ಜಿಸುತ್ತಿದ್ದ ರಾಕ್ಷಸರ ಕೋಲಾಹಲ ಧ್ವನಿಯು ನನ್ನ ಕಿವಿಗೆ ಕೇಳಿಸಿತು. ನನ್ನ ಅಣ್ಣನ ಧ್ವನಿಯು ಮಾತ್ರ ಕೇಳಲಿಲ್ಲ. ಶ್ರೀರಾಮ, ವಾಲಿಯು ಹತನಾಗಿ ಬಿಟ್ಟನೆಂದು ನಾನು ಶೋಕಾರ್ತನಾಗಿ, ರಾಕ್ಷಸ ರಿಂದಾಗಬಹುದಾದ ಹಾವಳಿಯನ್ನು ತಡೆಗಟ್ಟಲು ಬಿಲದ ಬಾಗಿಲಿಗೆ ದೊಡ್ಡ ಬಂಡೆಯೊಂದನ್ನು ಆನಿಸಿ ಮುಚ್ಚಿಬಿಟ್ಟೆನು. ನಾನು ಶೋಕಾರ್ತನಾಗಿ ವಾಲಿಗೆ ತರ್ಪಣವನ್ನಿತ್ತು ಕಿಷ್ಕಿಂಧೆಗೆ ಬಂದೆನು. ಈ ರಾಜ್ಯವು ಅರಾಜಕವಾಗುತ್ತದೆ ಎಂದು ಮಂತ್ರಿಗಳೆಲ್ಲರೂ ಸೇರಿ ನನಗೆ ಪಟ್ಟಾಭಿಷೇಕವನ್ನು ಮಾಡಿಬಿಟ್ಟರು. ಈ ರಾಜ್ಯವು ಅಣ್ಣನದೆಂದೇ ತಿಳಿದು, ಮಾರ್ಗಾಂತರವಿಲ್ಲದ್ದರಿಂದ ಶೋಕಿಸುತ್ತಲೇ ಹೇಗೋ ರಾಜ್ಯಕಾರ್ಯವನ್ನು ನಡೆಸುತ್ತಿದ್ದೆನು. ಹೀಗಿರಲು ಒಂದು ದಿನ ವಾಲಿಯು ಆ ಮಾಯಾವಿಯನ್ನೂ ಇತರ ರಾಕ್ಷಸರನ್ನೂ ಕೊಂದು ಬಂಡೆಯನ್ನು ಹೊರಗೆ ತಳ್ಳಿ ನಗರಕ್ಕೆ ಬಂದನು. ನಾನು, ತುಂಬ ಸಂತೋಷದಿಂದಲೇ ಅವನನ್ನು ಆದರಿಸಿ ಅಭಿವಾದನೆ ಮಾಡಿದೆನು. ನನ್ನ ಕಿರೀಟವನ್ನು ಅವನ ಪಾದಗಳಿಗೆ ಮುಟ್ಟಿಸಿ ವಂದಿಸಿದೆನು. ವಾಲಿಯು ಕೋಪೋದ್ರಿಕ್ತನಾಗಿ ನನ್ನನ್ನು ಹಂಗಿಸಿದನು. ನಾನು ''ಅಣ್ಣ ಕೋಪಿಸಬೇಡ. ಮಂತ್ರಿಗಳ ಒತ್ತಾಯಕ್ಕೆ ಮಣಿದು ನಾನು ರಾಜ್ಯವನ್ನು ಸ್ವೀಕರಿಸ ಬೇಕಾಯಿತು. ನನ್ನನ್ನು ಮನ್ನಿಸು. ನೀನೇ ಕಿಷ್ಕಿಂಧೆಗೆ ರಾಜನಲ್ಲದೆ ನಾನಲ್ಲ. ನಾನು ಮೊದಲಿನಂತೆಯೇ ಭೃತ್ಯ. ಈ ರಾಜ್ಯವನ್ನು ಸ್ವೀಕರಿಸು. ತಲೆಬಾಗಿ ಬೇಡಿಕೊಳ್ಳುತ್ತೇನೆ'' ಎಂದು ಹೇಳಿದೆನು. ಆದರೂ ಅವನು ನನ್ನನ್ನು ಜರಿದು ''ಥೂ, ನಿನಗೆ ಧಿಕ್ಕಾರ'' ಎಂದು ಬಿಟ್ಟನು. ಅವನು ಮಂತ್ರಿಗಳನ್ನೂ ಪ್ರಜೆಗಳನ್ನೂ ಕರೆದು ಹಿಂದಿನ

ಸಂಗತಿಯನ್ನು ತಿಳಿಸಿ, ''ನೀಚನಾದ ಈ ಸುಗ್ರೀವನು ರಾಜ್ಯದಾಸೆಗಾಗಿ ಬಿಲದ್ವಾರವನ್ನು ಮುಚ್ಚಿಬಂದಿದ್ದಾನೆ. ನಾನು ಆ ರಾಕ್ಷಸರಿಂದ ಹತನಾಗಲೆಂಬ ದುರುದ್ದೇಶದಿಂದ ಹೀಗೆ ಮಾಡಿದ್ದಾನೆ'' ಎಂದು ಹೇಳಿ ಆ ವಾನರನು ಉಟ್ಟಬಟ್ಟೆಯಲ್ಲಿ ನನ್ನನ್ನು ಹೊರಗಟ್ಟಿದನು. ನನ್ನನ್ನು ಹೊಡೆದು ಹೊರಗಟ್ಟಿ ನನ್ನ ಭಾರ್ಯೆಯಾದ ರುಮೆಯನ್ನು ಬಲಾತ್ಕಾರದಿಂದ ತನ್ನ ಅಂತಃಪುರಕ್ಕೆ ಸೇರಿಸಿಕೊಂಡನು. ನನ್ನನ್ನು ಕೊಲ್ಲಲು ನಾನಾ ಪ್ರಯತ್ನಗಳನ್ನು ಮಾಡಿದನು. ಅವನ ಭಯದಿಂದ ಕಂಗೆಟ್ಟು ಭೂಮಂಡಲವನ್ನೇ ನಾನು ಸುತ್ತಬೇಕಾಯಿತು. ಕಡೆಗೆ ಹನುಮಂತನ ಸೂಚನೆಯಂತೆ ಈ ಋಷ್ಯಮೂಕದಲ್ಲಿ ನೆಲೆಸಿದ್ದೇನೆ. ಒಬ್ಬ ಋಷಿಯ ಶಾಪದಿಂದ ವಾಲಿಯು ಈ ಸ್ಥಳಕ್ಕೆ ಬರುವುದಿಲ್ಲ. ರಾಘವ, ಇದು ನನ್ನ ಪೂರ್ವಕಥೆ. ನಾನು ಯಾವ ತಪ್ಪನ್ನೂ ಮಾಡದಿದ್ದರೂ ನನಗೆ ಎಂತಹ ಕಷ್ಟಬಂದಿದೆ, ನೋಡು. ನನ್ನ ಮೇಲಿನ ವಿಶ್ವಾಸದಿಂದ ಕೆಲವೇ ಕಪಿವೀರರು ನನ್ನ ಜೊತೆಗೆ ಅಲೆಯುತ್ತಿದ್ದಾರೆ. ನನ್ನನ್ನು ಅನುಗ್ರಹಿಸಿ ಈ ಕಷ್ಟದಿಂದ ಪಾರುಮಾಡು'' ಎಂದು ಬಿನ್ನೈಸಿದನು. ಅವೆಲ್ಲವನ್ನೂ ಕೇಳಿ ಕಾಕುತ್ಸ್ಥನು ''ಸುಗ್ರೀವ, ನನ್ನ ತೀಕ್ಷ್ಣಾಸ್ತ್ರಗಳು ಅಮೋಘವಾದವು. ನಿನ್ನ ಭಾರ್ಯೆಯನ್ನಪಹರಿಸಿದ ಆ ಪಾಪಾತ್ಮನು ನನ್ನ ಕಣ್ಣಿಗೆ ಬೀಳುವವರೆಗೆ ಬದುಕಿ ಉಳಿದಾನು. ಅನಂತರ ಅವನು ಬದುಕಿ ಉಳಿಯುವುದಿಲ್ಲ, ನಿನ್ನ ಕಷ್ಟವನ್ನು ನೀಗಿಸುವೆನು. ಚಿಂತೆಯನ್ನು ತ್ಯಜಿಸು'' ಎಂದು ಧೈರ್ಯ ಹೇಳಿದನು.

ಶ್ರೀರಾಮನ ಮಾತಿನಿಂದ ಸುಗ್ರೀವನಿಗೆ ಸಮಾಧಾನವಾದರೂ ವಾಲಿಯ ಬಲ ಪರಾಕ್ರಮಗಳನ್ನು ನೆನೆದು ''ಈತನು ಅವನನ್ನು ಕೊಲ್ಲಬಲ್ಲನೆ?'' ಎಂಬ ಸಂದೇಹವುಳಿಯಿತು. ಅವನು, ''ಮಿತ್ರ–ಶ್ರೀರಾಮ, ನಿನ್ನನ್ನು ನಾನು ಪೂರ್ಣವಾಗಿ ನಂಬುತ್ತೇನೆ. ಆದರೆ ವಾಲಿಯ ಪರಾಕ್ರಮವನ್ನು ನೆನೆದು ನನ್ನ ಎದೆ ತಲ್ಲಣಿಸುತ್ತದೆ. ಆತನು ಸಾಮಾನ್ಯಪರಾಕ್ರಮಿಯೆಂದು ತಿಳಿಯಬೇಡ. ಹೋರಾಟದಲ್ಲಿ ಬಹಳ ಗಟ್ಟಿಗ. ದುಂದುಭಿ ಎಂಬ ಬಲಾಢ್ಯನಾದ ರಾಕ್ಷಸನೊಬ್ಬನು ಮಹಿಷಾಕೃತಿಯನ್ನು ಧರಿಸಿ ಒಮ್ಮೆ ವಾಲಿಯೊಡನೆ ಯುದ್ಧಕ್ಕೆ ಬಂದನು. ಆಗ ಈ ಕಪಿಕುಂಜರನು ಪರ್ವತಾಕಾರನಾದ ದುಂದುಭಿಯ ಕೊಂಬುಗಳೆರಡನ್ನೂ ಹಿಡಿದು ಹೋರಾಡಿದನು. ಇಬ್ಬರಿಗೂ ಘೋರವಾದ ಸಂಗ್ರಾಮವು ನಡೆಯಿತು. ಒಬ್ಬರನ್ನೊಬ್ಬರು ತದುಕುತ್ತ ಹೋರಾಡುತ್ತಿರಲು ರಾಕ್ಷಸನ ಬಲ ಕುಗ್ಗಿತು. ವಾಲಿಯ ಕೈ ಮೇಲಾಯಿತು. ವಾಲಿಯು ತನ್ನ ಎರಡು ಬಾಹುಗಳಿಂದಲೂ ದುಂದುಭಿಯನ್ನು ಮೇಲೆತ್ತಿ ನೆಲದ ಮೇಲೆ ಕುಕ್ಕಿಬಿಟ್ಟನು. ದುಂದುಭಿಯ ದೇಹವು ನಜ್ಜುಗುಜ್ಜಾಗಿ ಅವನು ಪ್ರಾಣವನ್ನು ತೊರೆದನು. ವಾಲಿಯು ಆತನ ದೇಹವನ್ನು ಮೇಲೆತ್ತಿ ಬಹುದೂರದವರೆಗೆ ಚೆಂಡನ್ನು ಎಸೆದಂತೆ ಎಸೆದುಬಿಟ್ಟನು. ಆ ರಾಕ್ಷಸನ ರಕ್ತವು ಈ ಋಷ್ಯಮೂಕಪರ್ವತ

ಸಾಲುಗಳಲ್ಲಿದ್ದ ಮತಂಗ ಮುನಿಗಳ ಆಶ್ರಮದಲ್ಲಿ ಬಿದ್ದಿತು. ಆಗ ಋಷಿಗಳು ಕ್ರುದ್ಧರಾಗಿ ''ಈ ರಕ್ತಪಾತಕ್ಕೆ ಕಾರಣನಾದ ದುಷ್ಟನು ಈ ಪರ್ವತ ಪಂಕ್ತಿಯಮೇಲೆ ಕಾಲಿಟ್ಟರೆ ಅವನು ಸತ್ತುಹೋಗಲಿ!'' ಎಂದು ಶಪಿಸಿದರು. ಶ್ರೀ ರಾಮ, ಈ ಶಾಪವನ್ನರಿತ ವಾಲಿಯು ಋಷ್ಯಮೂಕದೊಳಗೆ ಕಾಲಿರಿಸುವುದಿಲ್ಲ. ಆದ್ದರಿಂದಲೇ ನಾನಿಲ್ಲಿ ಕ್ಷೇಮವಾಗಿದ್ದೇನೆ. ಮತ್ತೆ, ರಾಜಪುತ್ರ, ದುಂಧುಭಿಯ ಅಸ್ಥಿಪಂಜರವು ದೂರದಲ್ಲಿ ಕಾಣುತ್ತಿದೆ ನೋಡು. ಇತ್ತನೋಡು. ಇಲ್ಲಿ ಏಳು ಸಾಲ ವೃಕ್ಷಗಳಿವೆಯಷ್ಟೆ? ಈ ಮಹಾವೃಕ್ಷಗಳಲ್ಲಿ ಪ್ರತಿಯೊಂದನ್ನೂ ವಾಲಿಯು ಬಾಣದಿಂದ ಹೊಡೆದು ಬಾಣವು ಆಚೆಗೆ ತೂರಿಹೋಗುವಂತೆ ಮಾಡಲು ಶಕ್ತನಾಗಿದ್ದಾನೆ. ಅಂತಹ ವೀರನನ್ನು ಕೊಲ್ಲುವುದು ಹೇಗೆ?'' ಎಂದನು. ಸುಗ್ರೀವನ ಇಂಗಿತವನ್ನರಿತ ಲಕ್ಷ್ಮಣನು ನಗುತ್ತ ''ಸುಗ್ರೀವ, ಯಾವ ಕಾರ್ಯವನ್ನು ಮಾಡಿ ತೋರಿಸಿದರೆ ಶ್ರೀರಾಮನ ಬಲಪರಾಕ್ರಮಗಳಲ್ಲಿ ನಿನಗೆ ನಂಬಿಕೆಯಾದೀತು?'' ಎಂದು ಕೇಳಿದನು. ಆಗ ಸುಗ್ರೀವನು ''ಲಕ್ಷ್ಮಣ, ಸತ್ತು ಬಿದ್ದಿರುವ ಮಹಿಷಾಸುರನ ಅಸ್ಥಿಪಂಜರವನ್ನು ನಿನ್ನ ಅಣ್ಣನು ತನ್ನ ಪಾದದಿಂದ ಒದೆದು ದೂರಕ್ಕೆ ಒಮ್ಮೆಗೇ ಚಿಮ್ಮಲಿ'' ಎಂದನು. ಒಡನೆಯೇ ಶ್ರೀರಾಮನು ಮೇಲೆದ್ದು ಅಸ್ಥಿಪಂಜರದ ಬಳಿಗೆ ಹೋಗಿ ಅದನ್ನು ತನ್ನ ಕಾಲಿನ ಹೆಬ್ಬೆರಳಿನಿಂದ ಆಟವಾಡುವಂತೆ ಚಿಮ್ಮಿದನು. ಆ ದೇಹವು ಹತ್ತು ಯೋಜನದಷ್ಟು ದೂರ ಹಾರಿಬಿದ್ದಿತು. ಹನುಮಂತನೇ ಮೊದಲಾದವರು ವಿಸ್ಮಿತರಾದರು. ಆದರೂ ಸುಗ್ರೀವನು ''ಶ್ರೀರಾಮ, ಹಿಂದೆ ಈ ದೇಹವು ರಕ್ತಮಾಂಸಗಳಿಂದ ತುಂಬಿ ಬಹುಭಾರವಾಗಿತ್ತು, ಅದನ್ನೇ ವಾಲಿಯು ಎಸೆದಿದ್ದಾನೆ. ಈಗ ಇದು ಬರಿಯಮೂಳೆಯ ಪಂಜರ. ಇದನ್ನು ಚಿಮ್ಮಿರುವುದು ಸಮಪರಾಕ್ರಮ ವೇನಲ್ಲ'' ಎಂದು ಬಿಟ್ಟನು. ಆಮೇಲೆ ''ರಾಘವ, ಈ ಸಾಲವೃಕ್ಷಗಳಲ್ಲೊಂದನ್ನು ನಿನ್ನ ಶರವೇಗದಿಂದ ಭೇದಿಸು. ಆಗ ನನಗೆ ನಂಬಿಕೆಯಾಗುವುದು'' ಎಂದನು.

ಸುಗ್ರೀವನ ನುಡಿಯನ್ನು ಕೇಳಿ ಮಹಾತೇಜಸ್ವಿಯಾದ ಶ್ರೀರಾಮನು ತನ್ನ ಕೋದಂಡವನ್ನು ಎತ್ತಿಹಿಡಿದು ಘೋರವಾದ ಒಂದು ಶರವನ್ನು ಹೂಡಿ ದಶದಿಕ್ಕುಗಳೂ ಝುಂಕಾರದಿಂದ ಮೊಳಗುವಂತೆ ಒಂದು ಸಾಲವೃಕ್ಷಕ್ಕೆ ಗುರಿಯಿಟ್ಟು ಹೊಡೆದನು. ಆ ಘೋರಶರವು ಆ ಸಾಲ ವೃಕ್ಷವನ್ನು ಭೇದಿಸಿ ಸಾಲಾಗಿನಿಂತಿದ್ದ ಉಳಿದ ಆರು ವೃಕ್ಷಗಳನ್ನೂ ತೂರಿಕೊಂಡು ಹೋಗಿ ಮುಂದಿನ ಪರ್ವತ ಪ್ರದೇಶಗಳಲ್ಲಿ ನುಗ್ಗಿ ಭೂಮಿಯನ್ನು ಸೀಳಿಕೊಂಡು ಮಹಾವೇಗದಿಂದ ಹಿಂದಕ್ಕೆ ಜಿಗಿದು ಪುನಃ ತನ್ನ ಬತ್ತಳಿಕೆಯನ್ನು ಸೇರಿಕೊಂಡಿತು! ಶ್ರೀರಾಮನ ಈ ಅದ್ಭುತ ಕೃತ್ಯವನ್ನೂ ಶರವೇಗವನ್ನೂ ಮತ್ತೆ ಹಿಂದೆ ಬಂದು ಬತ್ತಳಿಕೆಗೆ ಸೇರಿದ್ದನ್ನೂ ಕಂಡು ಸುಗ್ರೀವನು ಆಶ್ಚರ್ಯದಲ್ಲಿ

ಮುಳುಗಿ ಹೋದನು. ಅವನು ಶ್ರೀರಾಮನಿಗೆ ತಲೆಬಾಗಿ ನೆಲದಮೇಲೆ ಅಡ್ಡಬಿದ್ದು 'ನಮೋನಮಃ' ಎಂದನು. ಅನಂತರ ಕೈ ಜೋಡಿಸಿ ''ಹೇ ಪುರುಷೋತ್ತಮ, ಸಂಗ್ರಾಮಕ್ಕೆ ಬಂದರೆ ಇಂದ್ರಾದಿ ದೇವತೆಗಳನ್ನೂ ಸಹ ನೀನು ಲೆಕ್ಕಿಸತಕ್ಕವನಲ್ಲ. ಇನ್ನು ವಾಲಿಯಗತಿಯನ್ನೇನು ಹೇಳಲಿ? ಆಹಾ! ರಣಭೂಮಿಯಲ್ಲಿ ನಿನ್ನನ್ನು ಎದುರಿಸುವ ಗಂಡಸು ಯಾರು? ಪ್ರಭು, ನಾನು ಅಜ್ಞಾನದಿಂದ ತಪ್ಪು ಮಾತುಗಳನ್ನಾಡಿದೆನು. ಕೃಪೆಯಿಟ್ಟು ನನ್ನನ್ನು ಮನ್ನಿಸು. ವಾಲಿಯ ಭಯದಿಂದ ತಲ್ಲಣಿಸಿಹೋದ ನಾನು ಅರಿಯದೆ ಅವಿವೇಕದ ಮಾತುಗಳನ್ನು ಆಡಿದೆನು'' ಎಂದು ನುಡಿದನು. ಶ್ರೀರಾಮನು ನಸು ನಗುತ್ತ ''ಸುಗ್ರೀವ, ನನ್ನ ಪರಿಚಯವಿಲ್ಲದ್ದರಿಂದ ನೀನು ಹಾಗೆ ಮಾತನಾಡಿದ್ದೀಯೆ. ಅದನ್ನು ನಾನು ಮನಸ್ಸಿಗೆ ಹಚ್ಚಿಕೊಳ್ಳತಕ್ಕವನಲ್ಲ. ಈಗ ನಂಬಿಕೆಯಾಯಿತಷ್ಟೆ?'' ಎಂದು ನುಡಿದನು.

೩೪

ವಾಲಿಯ ಮೇಲೆ ಬಾಣಪ್ರಯೋಗ
ಶ್ರೀರಾಮನನ್ನು ವಾಲಿಯು ನಿಂದಿಸುವುದು. ವಾಲಿಸಂಹಾರದ ಸಮರ್ಥನೆ

ಅನಂತರ ಮಹಾಪ್ರಾಜ್ಞನಾದ ರಾಘವನು ''ಮಿತ್ರ-ಸುಗ್ರೀವ, ಈಗಲೇ ಕಿಷ್ಕಿಂಧೆಗೆ ಹೋಗೋಣ. ನೀನು ದಾರಿತೋರಿಸುತ್ತ ಮುಂದೆ ಹೋಗಿ ನಿನ್ನ ದುಷ್ಟ ಸೋದರನಾದ ವಾಲಿಯನ್ನು ಯುದ್ಧಕ್ಕೆ ಕರೆ'' ಎಂದನು. ಎಲ್ಲರೂ ತ್ವರೆಯಿಂದ ಕಿಷ್ಕಿಂಧೆಯ ಕಡೆಗೆ ಹೊರಟರು. ಕಿಷ್ಕಿಂಧೆಯ ಹೊರಗೆ ಶ್ರೀರಾಮ, ಲಕ್ಷ್ಮಣ ಮೊದಲಾದವರು ದಟ್ಟವಾದ ಅರಣ್ಯದಲ್ಲಿ ಮರಗಳ ಮರೆಯಲ್ಲಿ ನಿಂತಿದ್ದರು. ಸುಗ್ರೀವನು ಕಿಷ್ಕಿಂಧೆಯ ಮಹಾದ್ವಾರದಲ್ಲಿ ವಾಲಿಯನ್ನು ಕರೆಯುವುದಕ್ಕಾಗಿ ಭೀಕರ ಸ್ವರದಿಂದ ಗರ್ಜಿಸಿದನು. ಸುಗ್ರೀವನ ಧ್ವನಿಯನ್ನು ಗುರುತಿಸಿದ ವಾಲಿಯು ಸಿಟ್ಟಿನಿಂದ ಸಿಡಿದೆದ್ದು ಕಿಷ್ಕಿಂಧೆಯಿಂದ ಹೊರಬಂದನು. ವಾಲಿ ಸುಗ್ರೀವರಿಗೆ ಹಣಾಹಣಿಯಾದ ಹೋರಾಟವಾರಂಭಿಸಿತು. ಆ ಸೋದರರು ಸಿಡಿಲೆರಗುವಂತೆ ಅಂಗೈಗಳಿಂದ ಅಪ್ಪಳಿಸುತ್ತ ವಜ್ರಮುಷ್ಟಿಗಳಿಂದ ಗುದ್ದುತ್ತಾ ಒಬ್ಬರನ್ನೊಬ್ಬರು ಜಡಿದರು. ಆ ಸಮಯದಲ್ಲಿ ಕೋದಂಡ ಪಾಣಿಯಾದ ರಾಘವನು ಅವರಿಬ್ಬರನ್ನೂ ಗಮನಿಸಿ ನೋಡಿದನು. ಅಶ್ವಿನೀ ದೇವತೆಗಳಂತೆ ಅಚ್ಚಳಿಯದೆ ಒಬ್ಬರನ್ನೊಬ್ಬರು ಹೋಲುತ್ತಿದ್ದ ಆ ಯೋಧರಲ್ಲಿ ಸುಗ್ರೀವನಾರು? ವಾಲಿ ಯಾರು? ಎಂದು ರಾಘವನು ಗುರುತಿಸಲಾರದೆ ಹೋದನು. ಅವರಿಬ್ಬರು ಉಡುಗೆ ಒಂದೇ ಬಗೆ. ಮೈಕಟ್ಟು ಒಂದೇ

ರೀತಿಯಲ್ಲಿತ್ತು. ಆ ವಾನರರ ಮುಖಗಳು ಸಮಾನ. ಆದ್ದರಿಂದ ಘೋರವಾದ ತನ್ನ ಶರವನ್ನು ಪ್ರಯೋಗಿಸಲು ಅವನಿಗೆ ಮನಸ್ಸಾಗಲಿಲ್ಲ. ಅಷ್ಟರಲ್ಲಿ ವಾಲಿಯ ಪೆಟ್ಟನ್ನು ಸಹಿಸಲಾರದ ಸುಗ್ರೀವನು ಹೇಗೋ ಓಡಿಹೋಗಿ ಋಷ್ಯಮೂಕಗಿರಿಯನ್ನು ಸೇರಿಕೊಂಡನು. ವಾಲಿಯು ಮಾತಂಗ ಮುನಿಗಳ ಶಾಪಕ್ಕೆ ಅಳುಕಿ ''ಎಲೈ ಸುಗ್ರೀವ, ತಪ್ಪಿಸಿಕೊಂಡು ಬದುಕಿದೆ'' ಎಂದು ಕೂಗಿ ಹೇಳಿ ಕಿಷ್ಕಿಂಧೆಗೆ ಹಿಂದಿರುಗಿದನು. ಆಮೇಲೆ ಶ್ರೀರಾಮನು ಲಕ್ಷ್ಮಣ ಹನುಮಂತರೊಂದಿಗೆ ಸುಗ್ರೀವನಿದ್ದ ಸ್ಥಳಕ್ಕೆ ಬಂದನು. ಸುಗ್ರೀವನು ದೈನ್ಯದಿಂದ ''ರಾಜಪುತ್ರ, ವಾಲಿಯನ್ನು ಕರೆಯಿಸಿ ಆತನಿಂದ ನನ್ನನ್ನು ಹೊಡೆಸಿದೆ. ನೀನು ಮಾಡಿದುದೇನು? ಆತನನ್ನು ಕೊಲ್ಲುವುದಿಲ್ಲ ಎಂದು ಮೊದಲೇ ಸತ್ಯವನ್ನು ನುಡಿದಿದ್ದರೆ ನಾನು ಇಲ್ಲಿಂದ ಹೊರಡುತ್ತಲೇ ಇರಲಿಲ್ಲ'' ಎಂದನು. ಆತನ ದೀನ ವಾಣಿಯನ್ನು ಕೇಳಿ ಶ್ರೀರಾಮನು ''ಮಿತ್ರ–ಸುಗ್ರೀವ, ನಾನು ಹೇಳುವುದನ್ನು ಕೇಳು. ಸಿಟ್ಟಾಗಬೇಡ. ನೀನೂ ವಾಲಿಯೂ ಒಂದೇ ರೀತಿ ಕಾಣುತ್ತೀರಿ. ನಿಮ್ಮ ಆಕಾರ, ನಿಲುವು, ಮುಖಚರ್ಯೆ, ನಡಿಗೆ, ಕಂಠಧ್ವನಿ, ಮೈಬಣ್ಣ ಎಲ್ಲವೂ ಏಕಪ್ರಕಾರವಾಗಿವೆ. ವಾನರೇಂದ್ರ, ನಿಮ್ಮೀರ್ವರ ಈ ರೂಪಸಾದೃಶ್ಯದಿಂದ ನನಗೆ ದಿಗ್ಭ್ರಮೆಯಾಯಿತು. ಆದ್ದರಿಂದ ಏನಾದರೂ ಅವಿವೇಕವೇ ನಡೆದು ಹೋದೀತೆಂದು ನಾನು ಬಾಣವನ್ನು ಬಿಡಲಿಲ್ಲ. ನಮ್ಮ ಸ್ನೇಹಕ್ಕೆ ಸಂಚಕಾರವನ್ನು ತರಬಾರದು. ಮಿತ್ರ–ಸುಗ್ರೀವ, ನನ್ನ ಅವಿವೇಕದಿಂದ ನಿನ್ನ ಮೇಲೆ ನಾನು ಬಾಣವನ್ನು ಪ್ರಯೋಗಿಸಿದ್ದರೆ ಏನಾಗುತ್ತಿತ್ತು? ಈ ಅರಣ್ಯದಲ್ಲಿ ಆಶ್ರಯದಾತನಾದ ನಾನು ಎರಡು ಬಗೆಯುವೆನೆ? ಸುಗ್ರೀವ, ನಿನ್ನನ್ನು ಗುರುತಿಸಲು ನಾನು ಏರ್ಪಾಡು ಮಾಡುವೆನು. ಇನ್ನೊಮ್ಮೆ ವಾಲಿಯನ್ನು ಕರೆ. ವಾಲಿಯು ಛಿನ್ನಗಾತ್ರನಾಗಿ ನೆಲದಮೇಲೆ ಹೊರಳಾಡುವುದನ್ನು ನೀನೇ ನೋಡುವೆ'' ಎಂದು ಸಮಾಧಾನ ಪಡಿಸಿದನು. ಲಕ್ಷ್ಮಣನ ಕಡೆಗೆ ತಿರುಗಿ ತಮ್ಮ ಅಲ್ಲಿ ಅರಳಿನಿಂತಿರುವ ನಾಗಪುಷ್ಪೀ ಲತೆಯನ್ನು ತಂದು ಮಾಲೆಯಾಗಿ ಮಾಡಿ ಸುಗ್ರೀವನ ಕೊರಳಿಗೆ ಹಾಕು. ಆಗ ಈತನನ್ನು ಗುರುತಿಸಲು ನನಗೆ ಸಾಧ್ಯವಾಗುವುದು'' ಎಂದನು. ಅಂತೆಯೇ ಲಕ್ಷ್ಮಣನು ಕೆಂಪು ಹೂಗಳಿಂದ ವಿರಾಜಿಸುತ್ತಿದ್ದ ನಾಗಪುಷ್ಪೀ ಲತೆಯನ್ನು ತಂದು ಮಾಲೆಯಾಗಿ ಸುಗ್ರೀವನ ಕೊರಳಿಗೆ ಹಾಕಿದನು.

ಶ್ರೀರಾಮನ ಮಾತಿನಿಂದ ಸುಗ್ರೀವನಿಗೆ ಸಮಾಧಾನವಾಯಿತು. ಅವನು ಮತ್ತೆ ಉತ್ಸಾಹದಿಂದ ಕಿಷ್ಕಿಂಧೆಯ ಕಡೆಗೆ ಹೊರಟನು. ಶ್ರೀರಾಮನೂ ಲಕ್ಷ್ಮಣ ಸಮೇತನಾಗಿ ಹನುಮಂತ, ನಳ, ನೀಲ, ತಾರ – ಎಂಬ ಕಪಿಶ್ರೇಷ್ಠರೊಡನೆ ಕಿಷ್ಕಿಂಧೆಯ ಕಡೆಗೆ ಹೊರಟನು. ದಾರಿಯಲ್ಲಿ ಸಪ್ತಜನಾಶ್ರಮವೆಂಬ ಋಷಿಗಳ

ಆಶ್ರಮವನ್ನು ನೋಡಿ ಕೈಮುಗಿದು ಮುಂದೆ ಹೋದರು. ಅವರೆಲ್ಲರೂ ಕಿಷ್ಕಿಂಧೆಗೆ ಹೋಗಿ ಸಮೀಪದಲ್ಲಿದ್ದ ನಿಬಿಡಾರಣ್ಯದಲ್ಲಿ ಮರಗಳಿಂದ ಮರೆಯಾದ ಸ್ಥಳದಲ್ಲಿ ನಿಂತರು. ಸುಗ್ರೀವನು ಮಾತ್ರ ಸ್ವಲ್ಪ ಮುಂದೆ ಹೋಗಿ ಘೋರವಾಗಿ ಗರ್ಜಿಸಿ ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸಿದನು. ಮುಗಿಲು ಬಿರಿಯುವಂತೆ ಅವನ ಗರ್ಜನೆಯು ಮೊಳಗಿತು. ಅಂತಃಪುರದಲ್ಲಿದ್ದ ವಾಲಿಗೆ ತಮ್ಮನಾದ ಸುಗ್ರೀವನ ಗರ್ಜನೆಯು ಕೇಳಿಸಿತು. ಅವನ ಸಹನೆ ತಪ್ಪಿತು. ಆ ವಾನರೇಂದ್ರನು ಕ್ರೋಧಾವಿಷ್ಟ ನಾಗಿ ಅಂತಃಪುರದಿಂದ ಹೊರಟನು. ಅವನ ಮಡದಿಯಾದ ತಾರೆಯು ಸಂಭ್ರಾಂತ ಳಾಗಿ ಸರ್ರನೆ ಓಡಿ ಬಂದು ಅವನನ್ನಪ್ಪಿಕೊಂಡು ಹೀಗೆಂದಳು. ''ವೀರಾಗ್ರೇಸರ, ಈ ಕ್ರೋಧವನ್ನು ತ್ಯಜಿಸು. ಥಟ್ಟನೆ ಈಗಲೇ ಯದ್ಧಕ್ಕೆ ಹೊರಡುವುದು ನನಗೆ ಸರಿ ಎನಿಸುವುದಿಲ್ಲ. ಸೋತು ದಿಕ್ಕುಗೆಟ್ಟು ಓಡಿಹೋದ ಸುಗ್ರೀವನು ಮತ್ತೆ ಬಂದು ಯುದ್ಧಕ್ಕೆ ಕರೆಯುತ್ತಾನೆಂದರೆ ನನಗೇಕೋ ಸಂದೇಹವಾಗುತ್ತದೆ. ಅವನಿಗೆ ಯಾವುದೋ ದೊಡ್ಡ ಸಹಾಯ ಒದಗಿದೆ. ಒಂದು ಮಾತನ್ನು ಕೇಳು. ನಮ್ಮ ಪುತ್ರನಾದ ಅಂಗದನು ಕಾಡಿನಲ್ಲಿ ತಿರುಗಾಡುತ್ತಿದ್ದಾಗ ಗೂಢಚಾರರು ಅವನಿಗೆ ಒಂದು ಸುದ್ದಿಯನ್ನು ಮುಟ್ಟಿಸಿದರಂತೆ. ಏನೆಂದರೆ, ಅಯೋಧ್ಯಾಪತಿಯಾದ ದಶರಥನ ಇಬ್ಬರು ಮಕ್ಕಳು ಬಂದು ಸುಗ್ರೀವನೊಡನೆ ಸ್ನೇಹವನ್ನು ಬೆಳೆಸಿದ್ದಾರಂತೆ. ಅವರಿಬ್ಬರೂ ಅಜೇಯರಾದ ಪರಾಕ್ರಮಿಗಳು. ರಾಮ ಮತ್ತು ಲಕ್ಷ್ಮಣ ಎಂದು ಅವರ ಹೆಸರು. ರಾಮನು ರಣಪಂಡಿತನೆಂದು ವಿಖ್ಯಾತನಾದವನು. ಅವನ ಸಹಾಯ ಸುಗ್ರೀವನಿಗೆ ದೊರಕಿರಬೇಕು. ಮಹಾರಾಜ, ತಮ್ಮನೊಡನೆ ಜಗಳವು ಬೇಡ. ಅವನು ಹೇಗಿದ್ದರೂ ನಿನಗೆ ಒಡಹುಟ್ಟಿದವನು. ಆತನೊಡನೆ ವೈರವು ಬೇಡ. ಕೈ ಮುಗಿದು ಬೇಡಿಕೊಳ್ಳುತ್ತೇನೆ'' ಎಂದಳು.

ಆಗ ವಾಲಿಯು ಅವಳನ್ನು ಗದರಿಸಿ ''ತಾರೆ, ತಮ್ಮನಾದ ಈ ಸುಗ್ರೀವನು ಕಾಲುಕೆರೆದುಕೊಂಡು ಬಂದಾಗ ನಾನೇಕೆ ಸಹಿಸಿಕೊಳ್ಳಬೇಕು? ಕುತ್ತಿಗೆಯನ್ನು ಮುರಿಸಿಕೊಳ್ಳುವುದಕ್ಕಾಗಿ ಹೀಗೆ ಕಿರಿಚಿಕೊಳ್ಳುತ್ತಿದ್ದಾನೆ. ರಾಮನಿಂದ ಕೇಡಾದೀತೆಂದು ನೀನು ಶಂಕಿಸಬೇಡ. ಅವನಿಗೆ ನಾನು ಯಾವ ಅಪಕಾರವನ್ನೂ ಮಾಡಿಲ್ಲ. ಧರ್ಮಜ್ಞನಾದ ಆತನು ನನ್ನ ಮೇಲೆ ಯಾವ ಪಾಪಕೃತ್ಯವನ್ನೂ ಎಸಗಲಾರ. ನಾನು ಸುಗ್ರೀವನ ಸೊಕ್ಕನ್ನು ಅಡಗಿಸುವೆನೇ ಹೊರತು ಅವನನ್ನು ಕೊಲ್ಲುವುದಿಲ್ಲ. ನೀನು ಹೆದರಬೇಡ. ತಾರೆ, ನನ್ನ ಮೇಲಿನ ಪ್ರೇಮದಿಂದ ನೀನು ಹಿತವಚನವನ್ನಾಡಿದ್ದೀಯೆ. ನೀನು ಹಿಂದಿರುಗು'' ಎಂದು ಹೇಳಿ ದರ್ಪದಿಂದ ಹೊರಟೇಬಿಟ್ಟನು. ವಾಲಿಯು ಮಹಾಸರ್ಪದಂತೆ ಸಿಟ್ಟಿನಿಂದ ಭೋರ್ಗರೆಯುತ್ತ ಸುಗ್ರೀವನಿಗೆ ಎದುರಾಗಿ

ಉತ್ಸಾಹದಿಂದ ನುಗ್ಗಿಬಂದನು. ಮತ್ತೆ ಹಿಂದಿನಂತೆ ಘೋರವಾದ ಮುಷ್ಟಿಯುದ್ಧವು ತೊಡಗಿತು. ಭೀಮಕಾಯರಾದ ಅವರಿಬ್ಬರೂ ಎರಡು ಗ್ರಹಗಳಂತೆ ಹೋರಾಡಿದರು. ಕ್ರಮೇಣ ಸುಗ್ರೀವನು ಶಕ್ತಿಗುಂದಿದನು. ಶ್ರೀರಾಮನಿದ್ದ ಕಡೆಗೆ ಮತ್ತೆ ಮತ್ತೆ ನೋಡಲಾರಂಭಿಸಿದನು. ಸುಗ್ರೀವನು ಕಂಗೆಟ್ಟಿರುವುದನ್ನು ಶ್ರೀರಾಮನು ಕಂಡು, ಈಗ ವಾಲಿಯನ್ನು ವಧಿಸಬೇಕೆಂದು ನಿಶ್ಚಯಿಸಿದನು. ಆ ತೇಜಸ್ವಿಯು ತನ್ನ ದಿವ್ಯಾಸ್ತ್ರವನ್ನು ಹೊರಗೆಳೆದು ತನ್ನ ದಿವ್ಯ ಧನುಸ್ಸಿಗೆ ಹೂಡಿ, ಯಮನು ಕಾಲಚಕ್ರವನ್ನೆಳೆಯುವಂತೆ ಹೆದೆಯನ್ನು ಮೀಟಿ, ವಾಲಿಯ ಎದೆಗೆ ಗುರಿಯಿಟ್ಟು ಹೊಡೆದನು. ಮರುಕ್ಷಣದಲ್ಲಿ ಆ ಮಹಾಶರವು ಸಿಡಿಲಿನಂತೆ ಮೊರೆಯುತ್ತ ಮಿಂಚಿನಂತೆ ಮಿಂಚುತ್ತ ವಾಲಿಯ ಎದೆಯಲ್ಲಿ ನುಗ್ಗಿತು. ವೀರ್ಯೋದ್ಧತನಾದ ಆ ಕಪೀಶ್ವರನು ಶ್ರೀರಾಮನ ಮಹಾಶರದ ಆಘಾತವನ್ನು ತಡೆದುಕೊಳ್ಳಲಾರದೆ ನೆಲದ ಮೇಲೆ ಉರುಳಿದನು. ಇಂದ್ರಪುತ್ರನಾದ ವಾಲಿಯು ನೆತ್ತರಿನ ಪ್ರವಾಹದಿಂದ ಒದ್ದೆಯಾಗಿ ಎಚ್ಚರದಪ್ಪಿದನು.

ಜ್ವಾಲೆಯುಡಗಿದ ಅಗ್ನಿಯಂತೆ ರಣರಂಗದಲ್ಲಿ ಬಿದ್ದ ವಾಲಿಯು ಮೆಲ್ಲಗೆ ಕಣ್ಣುಬಿಟ್ಟು ಸುತ್ತಲೂ ನೋಡತೊಡಗಿದನು. ದೇವೇಂದ್ರನ ತನಯನಾದ ವಾಲಿಯು ನೆಲಕ್ಕೆ ಬಿದ್ದ ಸೂರ್ಯನಂತೆ ಕಂಗೊಳಿಸುತ್ತಿದ್ದನು. ಶ್ರೀರಾಮನು ಲಕ್ಷ್ಮಣನೊಡನೆ ಆದರಪೂರ್ವಕವಾಗಿ ವಾಲಿಯ ಸಮೀಪಕ್ಕೆ ಬಂದನು. ಶ್ರೀರಾಮನನ್ನು ಕಂಡು ಆ ಕಪೀಶ್ವರನು ಮೆಲ್ಲಗೆ ಚೈತನ್ಯವನ್ನು ತಂದುಕೊಂಡು ರಾಘವನಿಗೆ ಚುಚ್ಚುಮಾತುಗಳನ್ನಾಡ ತೊಡಗಿದನು. ''ಎಲೈ ರಾಮ, ನೀನು ಉತ್ತಮ ಕುಲದಲ್ಲಿ ಹುಟ್ಟಿದ ರಾಜಪುತ್ರನಾಗಿದ್ದೀಯೆ. ಧರ್ಮನಿಷ್ಠ, ಸತ್ಯ ಸಂಧ, ಆಚಾರಶೀಲ—ಎಂದು ಜನರು ನಿನ್ನ ಕೀರ್ತಿಯನ್ನು ಹಾಡಿ ಹೊಗಳುತ್ತಿದ್ದಾರೆ. ನೀನು ಉನ್ನತ ವಂಶದಲ್ಲಿ ಹುಟ್ಟಿದವನೆಂದೂ ಕ್ಷತ್ರಿಯ ಧರ್ಮದಲ್ಲಿ ಇರತಕ್ಕವನೆಂದೂ ನಾನು ತಿಳಿದಿದ್ದೆ. ಕ್ಷುದ್ರ ಪ್ರಯೋಜನಕ್ಕಾಗಿ ಅಧರ್ಮ ಮಾರ್ಗದಲ್ಲಿ ನೀನು ಕಾಲಿಡುವುದಿಲ್ಲವೆಂದು ನನ್ನ ವಿಶ್ವಾಸವಾಗಿತ್ತು, ಹೀಗಿರುವಾಗ ನೀನು ನಿನ್ನೊಡನೆ ಯುದ್ಧಕ್ಕೆ ಬಾರದವನನ್ನು ವಧಿಸಿದೆಯೆಲ್ಲಾ, ಇದಕ್ಕಿಂತ ನೀಚಕೃತ್ಯವುಂಟೆ? ಧರ್ಮದ ಹೆಸರಿನಲ್ಲಿ ಡೊಂಬರಾಟವಾಡತಕ್ಕವನು ನೀನು ಎಂದು ನಾನು ತಿಳಿದಿರಲಿಲ್ಲ. ಹುಲ್ಲು ಹೊದಿಸಿದ ಹಾಳು ಬಾವಿಯಂತಿರುವ ಪಾಪಿ ನೀನು. ಬೂದಿಮುಚ್ಚಿದ ಕೆಂಡದಂತೆ ಸಾಧುವೇಷವನ್ನು ಧರಿಸಿದ ದುಷ್ಟ ನೀನು. ಎಲೈ ರಾಮ, ನಿನ್ನ ದೇಶದ ಪ್ರಜೆಗಾಗಲಿ, ನಿನಗಾಗಲಿ, ನಾನು ಯಾವ ಅಪರಾಧವನ್ನೂ ಮಾಡಲಿಲ್ಲ. ನನ್ನ ಪಾಡಿಗೆ ಫಲಮೂಲಗಳನ್ನು ತಿಂದುಕೊಂಡು ಕಾಡಿನಲ್ಲಿದ್ದ ವಾನರ ನಾನು. ಮರೆಯಲ್ಲಿ ನಿಂತು ನನ್ನನ್ನು ಹೊಡೆಯಲು ನಿಮಿತ್ತವೇನು? ನಿನಗೆ ಧರ್ಮದಲ್ಲಿ ಶ್ರದ್ಧೆಯಿಲ್ಲ. ನಾನು ಯಾವ

ಪಾಪ ಕೃತ್ಯವನ್ನು ಮಾಡಿದ್ದೇನೆಂದು ನನ್ನನ್ನು ಕೊಂದಿದ್ದೀಯೆ? ನನ್ನ ಮಾಂಸವೂ ಭಕ್ಷಣಾರ್ಹವಲ್ಲ. ನನ್ನ ಪತ್ನಿಯಾದ ತಾರೆಯು ನನಗೆ ಹಿತೋಪದೇಶ ಮಾಡಿದಳು. ಅವಳ ಮಾತನ್ನು ಮೀರಿ ನಾನು ಈ ಆಪತ್ತಿಗೆ ಒಳಗಾದೆನು. ಎಲೈ ರಾಮ, ಅಲ್ಪಮನುಷ್ಯನಾದ ನೀನು ಮಹಾತ್ಮನಾದ ದಶರಥನಿಗೆ ಹೇಗೆ ತಾನೆ ಪುತ್ರನಾಗಿ ಹುಟ್ಟಿದೆ? ನನ್ನ ಕಣ್ಣೆದುರಿಗೆ ಬಂದು ನೀನು ಯುದ್ಧ ಮಾಡಿದ್ದ ಪಕ್ಷದಲ್ಲಿ ಇಷ್ಟುಹೊತ್ತಿಗೆ ನೀನು ಯಮನ ಮನೆಯಲ್ಲಿರುತ್ತಿದ್ದೆ. ರಾವಣನು ಸೀತೆಯನ್ನು ಕದ್ದನೆಂದೂ ಈ ಹೇಡಿ ಸುಗ್ರೀವನು ನಿನಗೆ ಸಹಾಯ ಮಾಡುತ್ತಾನೆಂದೂ ನಂಬಿ ನನ್ನ ಮೇಲೆ ಬಾಣಪ್ರಯೋಗ ಮಾಡಿದೆಯಾ? ನೀನು ಶೂರನಾಗಿದ್ದರೆ ನಿನ್ನ ಪರಾಕ್ರಮವನ್ನು ರಾವಣನ ಮೇಲೆ ಮೆರೆಸಬೇಕಾಗಿತ್ತು. ನನಗೆ ಒಂದು ಮಾತನ್ನು ಹೇಳಿದ್ದರೆ ರಾವಣನನ್ನು ದರದರನೆ ಎಳೆದು ತಂದು ನಿನ್ನ ಕಾಲಿಗೆ ಬೀಳಿಸುತ್ತಿದ್ದೆ! ನೀನು ಅವಿವೇಕಿ. ಕೈಲಾಗದ ಸುಗ್ರೀವನಿಂದ ನಿನಗೆ ಯಾವ ಸಹಾಯವಾದೀತು? ನಿನಗೆ ಯಾವ ತಪ್ಪನ್ನೂ ಮಾಡದ ನನ್ನನ್ನು ಕೊಂದೆಯಲ್ಲ, ಯಾವ ಕಾರಣದಿಂದ? ಈ ಸವಾಲಿಗೆ ಉತ್ತರವೇನು''? ಎಂದನು. ಇಷ್ಟು ಹೇಳುವುದರಲ್ಲಿ ತತ್ತರಿಸುತ್ತಿದ್ದ ವಾಲಿಯ ಬಾಯಿಯು ಒಣಗಿತು. ಮಾತಾಡಲಾರದೆ ಸುಮ್ಮನಾದನು. ಆಗ ಶ್ರೀರಾಮನು ಧೀರವಾಣಿಯಿಂದ ಹೀಗೆ ಉತ್ತರವನ್ನಿತ್ತನು: ''ಸೌಮ್ಯ–ಕಪೀಶ್ವರ, ನೀನು ಧರ್ಮಾರ್ಥಕಾಮಗಳ ಸ್ವರೂಪವನ್ನೂ ಶಿಷ್ಟಾಚಾರವನ್ನೂ ಅರಿಯದೆ ಅಜ್ಞಾನದಿಂದ ನನ್ನನ್ನು ನಿಂದಿಸುತ್ತಿದ್ದೀಯೆ. ಕಪಿಚಾಪಲ್ಯದಿಂದ ಹೀಗೆ ಮಾತಾಡಿದ್ದೀಯೆ. ಗಿರಿ ಕಾನನ ಸಹಿತವಾದ ಈ ಪ್ರದೇಶವೆಲ್ಲವೂ ಚಕ್ರವರ್ತಿಯಾದ ದಶರಥ ಮಹಾರಾಜನ ಆಳ್ವಿಕೆಗೆ ಒಳಪಟ್ಟದ್ದು. ಈಗ ಈ ಚಕ್ರಾಧಿಪತ್ಯಕ್ಕೆ ಭರತನು ಒಡೆಯನಾಗಿದ್ದಾನೆ. ನನ್ನ ಹೆಸರಿನಲ್ಲಿ ರಾಜ್ಯವನ್ನು ಪಾಲಿಸುತ್ತಿದ್ದಾನೆ. ಧರ್ಮಯುಕ್ತವಾದ ಆತನ ರಾಜ್ಯಭಾರಕ್ಕೆ ಸಹಾಯಕನಾಗಿ ಧರ್ಮವನ್ನು ರಕ್ಷಿಸುವುದು ನನ್ನ ಕರ್ತವ್ಯವೂ ಹೌದು. ಧರ್ಮ ಭ್ರಷ್ಟನನ್ನು ನಿಯಮಾನುಸಾರವಾಗಿ ನಾವು ದಂಡಿಸುತ್ತೇವೆ. ನೀನು ಕಾಮಲೋಲುಪನಾಗಿ ರಾಜಮಾರ್ಗದಿಂದ ಜಾರಿದ್ದೀಯೆ. ತಮ್ಮನಾದ ಸುಗ್ರೀವನ ಭಾರ್ಯೆಯನ್ನು ನೀನು ರಮಿಸಬಹುದೆ? ಆತನ ಹೆಂಡತಿಯು ನಿನ್ನ ಸೊಸೆಗೆ ಸಮಾನಳು. ಇಂತಹ ಧರ್ಮಭ್ರಷ್ಟನಿಗೆ ಅದರಲ್ಲಿಯೂ ರಾಜನಾದವನೇ ದುಷ್ಟಮಾರ್ಗಕ್ಕೆ ಇಳಿದಾಗ ಅವನಿಗೆ ಮರಣ ಶಿಕ್ಷೆಯನ್ನು ನೀಡಬೇಕೆಂದು ಧರ್ಮಶಾಸ್ತ್ರವು ವಿಧಿಸಿದೆ. ಸೊಸೆಯನ್ನು ಕಾಮಿಸತಕ್ಕವನಿಗೆ ವಧೆಯೇ ಶಿಕ್ಷೆಯೆಂದು ಶಾಸ್ತ್ರವಿಧಿಯುಂಟು. ನಿನಗೆ ಮರಣದಂಡನೆಯನ್ನು ನಾನು ವಿಧಿಸಿದ್ದೇನೆ. ಈ ದಂಡನೆಗೆ ಗುರಿಯಾದವನೊಡನೆ ರಾಜನು ಯುದ್ಧಮಾಡುವುದಿಲ್ಲ. ಶೂಲಕ್ಕೇರಿಸಿಯೋ ವಿಷಪ್ರಾಶನ ಮಾಡಿಸಿಯೋ, ಯಾವುದೋ ಒಂದು ರೀತಿಯಲ್ಲಿ ಅವನನ್ನು ಕೊಲ್ಲಬಹುದು. ಆದ್ದರಿಂದ ನಾನು

ನಿನ್ನೊಡನೆ ಯುದ್ಧಕ್ಕೆ ಬರಲೇ ಇಲ್ಲ. ಶಾಸ್ತ್ರವಿಹಿತವಾದ ದಂಡನೆಯನ್ನು ಜಾರಿಗೊಳಿಸಿದ್ದೇನೆ. ಧರ್ಮನಿರ್ಣಯ ಬಹಳ ಸೂಕ್ಷ್ಮವಾದದ್ದು. ಗುರುಹಿರಿಯರ ಸೇವೆಯನ್ನು ಮಾಡದ ಉದ್ಧತಸ್ವಭಾವದವರಿಗೆ ಧರ್ಮದ ನಿಜವಾದ ಅರಿವು ಮೂಡುವುದೇ ಇಲ್ಲ. ಇನ್ನು ನೀನು ವನಚರನಾದ ಕಪಿಯೆಂದೂ ಧರ್ಮಶಾಸ್ತ್ರದ ಸೋಂಕು ನನಗಿಲ್ಲವೆಂದೂ ಹೇಳುವುದಾದರೆ, ಆಗ ನಿನ್ನನ್ನು ಬೇಟೆಯಾಡಿದ್ದೇನೆ ಎಂದು ತಿಳಿದುಕೊ. ಬೇಟೆಯಾಡುವ ರಾಜನು ದುಷ್ಟಮೃಗಗಳನ್ನು ಬಲೆಯೊಡ್ಡಿಯೋ, ಹಳ್ಳಕ್ಕೆ ಬೀಳಿಸಿಯೋ ಕೊಲ್ಲುತ್ತಾನೆ. ಓಡಿಹೋಗುವ ಪ್ರಾಣಿಗಳನ್ನು ಬಾಣಪ್ರಯೋಗದಿಂದ ಸಾಯಿಸುತ್ತಾನೆ. ಅದು ದೋಷವೆಂದು ಶಾಸ್ತ್ರವು ಹೇಳಿಲ್ಲ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ನಿನ್ನನ್ನು ನಾನು ಕೊಂದಿರುವುದು ಧರ್ಮವಿರುದ್ಧವಲ್ಲ ಎಂದು ತಿಳಿದುಕೊ. ಅಲ್ಲದೆ ಅಗ್ನಿಸಾಕ್ಷಿಕವಾಗಿ ಸಖ್ಯವನ್ನು ಬೆಳೆಸಿದ ಸುಗ್ರೀವನಿಗೆ ವಾಲಿಯನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿ ಹೇಳಿದ್ದೇನೆ. ಆ ಪ್ರತಿಜ್ಞೆಯನ್ನು ಉಲ್ಲಂಘಿಸಿ ನಿನ್ನೊಡನೆ ಸ್ನೇಹವನ್ನು ಬೆಳೆಸಿ ನಿನ್ನ ಸಹಾಯವನ್ನು ಯಾಚಿಸಬಹುದೆ? ಆಲೋಚಿಸಿ ನೋಡು. ಮರೆಯಲ್ಲಿ ನಿಂತು ನಿನ್ನನ್ನು ಕೊಂದದ್ದು ಧರ್ಮ ಬಾಹಿರವಲ್ಲ. ಸೌಮ್ಯ–ವಾಲಿ, ಶಾಂತನಾಗಿ ವಿಚಾರಮಾಡು'' ಎಂದನು.

ಆಗ ವಾನರೇಂದ್ರನಾದ ವಾಲಿಗೆ ಬಹಳ ಪಶ್ಚಾತ್ತಾಪವಾಯಿತು. ಧರ್ಮದ ವಿಷಯದಲ್ಲಿ ಸರಿಯಾದ ಅರಿವಾಯಿತು. ಆತನು ಕೈಮುಗಿದುಕೊಂಡು, ''ಪುರುಷೋತ್ತಮ, ನೀನು ಹೇಳುವುದು ವಾಸ್ತವ, ಸಂಶಯವಿಲ್ಲ. ನೀನು ಸಕಲ ವಸ್ತುಗಳ ತತ್ತ್ವವನ್ನೂ ಬಲ್ಲವನು. ಧರ್ಮನಿರ್ಣಯದಲ್ಲಿ ನಿನ್ನ ಬುದ್ಧಿಯು ನಿರ್ಮಲವಾಗಿದೆ. ನಾನು ಧರ್ಮಬಾಹಿರನೇ ಹೌದು. ವಿವೇಕವಿಲ್ಲದೆ ಅಪ್ರಿಯವಾದ ಮಾತನ್ನಾಡಿ ಬಿಟ್ಟೆನು. ನನಗೆ ಅಭಯವನ್ನು ನೀಡಿ ಪರಿಪಾಲಿಸು. ಶ್ರೀರಾಮ, ನನಗೆ ಈ ಸ್ಥಿತಿಯೊದಗಿತೆಂದು ನನಗಾಗಿ ಶೋಕವಿಲ್ಲ. ತಾರೆಗಾಗಿಯೂ ಶೋಕಿಸುವುದಿಲ್ಲ. ನನ್ನ ಮಗ ಅಂಗದನನ್ನು ನೆನೆಸಿಕೊಂಡರೆ ದುಃಖವು ಉಮ್ಮಳಿಸುವುದು. ನನ್ನ ಒಬ್ಬನೇ ಮುದ್ದುಮಗನು ಅವನು. ಶ್ರೀರಾಮ, ನೀನು ಅಂಗದನನ್ನು ಕಾಪಾಡಿಕೊಂಡು ಬರಬೇಕು.ಅವನು ಚಿಕ್ಕವಯಸ್ಸಿನವನಾದರೂ ಮಹಾಶೂರ. ಸುಗ್ರೀವನಲ್ಲಿಯೂ ಅಂಗದನಲ್ಲಿಯೂ ಒಂದೇ ವಿಧವಾಗಿ ವಾತ್ಸಲ್ಯಬುದ್ಧಿಯನ್ನಿಡು. ಅವನನ್ನು ಪಾಲಿಸುವ ಭಾರ ನಿನ್ನದು'' ಎಂದು ಹೇಳಿ ಕೈಮುಗಿದು ಸುಮ್ಮನಾದನು. ಶ್ರೀರಾಮನು ವಾತ್ಸಲ್ಯದಿಂದ ವಾಲಿಯನ್ನು ಸಂತೈಸುತ್ತ ''ವಾನರೋತ್ತಮ, ಅಪರಾಧಿಯು ಯೋಗ್ಯವಾದ ಶಿಕ್ಷೆಯನ್ನನುಭವಿಸಿದರೆ ಅವನ ಪಾಪವು ನೀಗುತ್ತದೆ. ನಿನ್ನ ಪಾಪವು ನೀಗಿತು. ಈಗ ನೀನು ಸಹಜವಾದ ಶುದ್ಧ ಸ್ವಭಾವವನ್ನು ಪಡೆದಿದ್ದೀಯೆ. ಅಂಗದನನ್ನು

ಸರಿಯಾಗಿ ನೋಡಿಕೊಳ್ಳುವ ಭಾರ ನನಗಿರಲಿ. ನಿನ್ನ ಕರ್ಮಫಲವನ್ನು ಮೀರಲು ನಿನ್ನಿಂದಾಗದು. ಇನ್ನು ನಿನಗೆ ಸದ್ಗತಿಯಾಗುವುದು. ಚಿಂತಿಸಬೇಡ'' ಎಂದನು. ಶ್ರೀರಾಮನ ಮಧುರವಾಕ್ಯವನ್ನು ಕೇಳಿ ವಾಲಿಯು ''ಸ್ವಾಮಿ, ನೀನು ದೇವೇಂದ್ರನಿಗೆ ಸಮಾನನಾದವನು. ಪ್ರಸನ್ನನಾಗು. ನನ್ನನ್ನು ಕ್ಷಮಿಸು'' ಎಂದನು.

೩೫

ತಾರೆಯ ಶೋಕ, ಸುಗ್ರೀವನಿಗೆ ವಾಲಿಯ ಅಂತ್ಯಸಂದೇಶ ವಾಲಿಯ ಅಂತ್ಯಸಂಸ್ಕಾರ, ಸುಗ್ರೀವನಿಗೆ ಪಟ್ಟಾಭಿಷೇಕ

ಪತಿಯು ಹತನಾದನೆಂಬ ಭೀಕರ ವಾರ್ತೆಯನ್ನು ಕೇಳಿ ತಾರೆಯು ಹೆಣ್ಣು ಜಿಂಕೆಯಂತೆ ಹೆದರಿ ಕಂಗಾಲಾದಳು. ಪುತ್ರನಾದ ಅಂಗದನೊಡನೆ ಕಿಷ್ಕಿಂಧೆಯಿಂದ ಹೊರಟು ಯುದ್ಧವು ನಡೆದ ಸ್ಥಳಕ್ಕೆ ಓಡುತ್ತ ಬಂದಳು. ನೆಲದಮೇಲೆ ಒರಗಿದ್ದ ವಾಲಿಯನ್ನು ನೋಡಿದಳು. ಸಮೀಪದಲ್ಲಿ ಕೋದಂಡವನ್ನೂರಿ ನಿಂತಿದ್ದ ಶ್ರೀರಾಮನನ್ನೂ ಲಕ್ಷ್ಮಣನನ್ನೂ ಕೋಪವಿಲ್ಲದೆ ಶಾಂತನಾಗಿ ನಿಂತಿದ್ದ ಸುಗ್ರೀವನನ್ನೂ ಕಂಡಳು. ನೆಲದಮೇಲುರುಳಿದ್ದ ಪತಿಯನ್ನು ನೋಡಿ ''ಆರ್ಯಪುತ್ರ'' ಎಂದು ಕೂಗುತ್ತ ಗಟ್ಟಿಯಾಗಿ ಅಳತೊಡಗಿದಳು. ತಾರೆಯನ್ನು ಅಂಗದನನ್ನೂ ನೋಡಿ ಸುಗ್ರೀವನಿಗೆ ತಡೆಯಲಾರದಷ್ಟು ದುಃಖವಾಯಿತು. ತಾರೆಯು ವಾಲಿಯ ದೇಹವನ್ನಪ್ಪಿಕೊಂಡು ಅತ್ತುಸಾಕಾಗಿ ''ಆರ್ಯಪುತ್ರ, ನಿನ್ನ ಮಗನಾದ ಅಂಗದನು ಬಂದಿದ್ದಾನೆ. ಕಣ್ಣುತೆರೆದು ನೋಡು'' ಎಂದು ಗೋಳಾಡಿದಳು. ''ನಾನು ತಪ್ಪು ಮಾಡಿದ್ದರೆ ಮನ್ನಿಸು'' ಎಂದು ವಾಲಿಯ ಪಾದಗಳಿಗೆ ತನ್ನ ತಲೆಯನ್ನು ಮುಟ್ಟಿಸಿ ನಮಸ್ಕರಿಸಿದಳು. ಆಗ ಹನುಮಂತನು ಮುಂದೆ ಬಂದು ತಾರೆಗೆ ಸಮಾಧಾನದ ಮಾತುಗಳನ್ನು ಹೇಳಿ ಅವಳನ್ನು ಸಂತೈಸಲು ಪ್ರಯತ್ನಿಸಿದನು. ತಾರೆಯು ''ಹನುಮಂತ, ವಾಲಿಯಂಥ ಪತಿಯನ್ನು ಕಳೆದುಕೊಂಡ ನಾನು ಇನ್ನೇಕೆ ಬದುಕಿರಬೇಕು? ಮಗನಾದ ಅಂಗದನಿಗೆ ನಾನೇನು ಮಾಡಬಲ್ಲೆ? ಅವನ ಚಿಕ್ಕಪ್ಪನಾದ ಸುಗ್ರೀವನಿಗೇ ಎಲ್ಲವೂ ಸೇರಿದೆ'' ಎಂದಳು.

ಮೃತ ಪ್ರಾಯನಾಗಿದ್ದ ವಾಲಿಯು ಸ್ವಲ್ಪ ಚೇತರಿಸಿಕೊಂಡು ಕಣ್ಣು ಬಿಟ್ಟನು. ಅವನಿಗೆ ಮಗನಾದ ಅಂಗದನು ಮೊದಲು ಗೋಚರಿಸಿದನು. ಸುಗ್ರೀವನನ್ನು ಹತ್ತಿರಕ್ಕೆ ಕರೆದು ''ತಮ್ಮ-ಸುಗ್ರೀವ, ನಾನು ತಪ್ಪು ಮಾಡಿದೆನೆಂದು ಮನಸ್ಸಿನಲ್ಲಿ ಕಾಲುಷ್ಯವನ್ನಿಟ್ಟುಕೊಳ್ಳಬೇಡ, ನನ್ನ ಭವಿಷ್ಯವು ಹೀಗಿದ್ದುದರಿಂದ ನನ್ನ ಬುದ್ಧಿಗೆ ಮಂಕು

ಕವಿದಿತ್ತು, ನಾನು ಎಲ್ಲವನ್ನೂ ಬಿಟ್ಟು ಯಮರಾಜನ ಮನೆಗೆ ಹೊರಟಿದ್ದೇನೆ. ತಮ್ಮ ನನ್ನ ಒಂದು ಮಾತನ್ನು ನಡೆಸು. ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಅಂಗದನಿಗೆ ಅಭಯವನ್ನಿತ್ತು ಅವನನ್ನು ಪಾಲಿಸು. ಕಿಷ್ಕಿಂಧೆಯ ರಾಜ್ಯವನ್ನು ನೀನು ವಹಿಸಿಕೊ. ಈ ತಾರೆಯು ಬಹಳ ಬುದ್ಧಿಶಾಲಿನಿ. ಅವಳ ಯೋಗಕ್ಷೇಮಗಳನ್ನು ನೋಡಿಕೊ. ಶ್ರೀರಾಮನ ಕಾರ್ಯವನ್ನು ಹಿಂದುಮುಂದೆ ನೋಡದೆ ನೀನು ಸಾಧಿಸಿಕೊಡಬೇಕು. ವತ್ಸ–ಸುಗ್ರೀವ, ದಿವ್ಯವಾದ ಈ ಕಾಂಚನಮಾಲೆಯನ್ನು ಕೊರಳಿಗೆ ಹಾಕಿಕೊ. ನಾನು ಸತ್ತೊಡನೆ ಇದರ ತೇಜಸ್ಸು ಹೊರಟು ಹೋದೀತು'' ಎಂದನು. ಭ್ರಾತೃವಾತ್ಸಲ್ಯದಿಂದ ಕೂಡಿದ ವಾಲಿಯ ನುಡಿಯನ್ನು ಕೇಳಿ ಸುಗ್ರೀವನ ವಿಜಯೋತ್ಸಾಹವು ಮಣ್ಣುಪಾಲಾಯಿತು. ಅವನು ವ್ಯಥೆಯಿಂದ ಕರಗಿ ಹೋದನು. ವಾಲಿಯ ಸೂಚನೆಯಂತೆ ದೈನ್ಯದಿಂದಲೇ ಮುಂದೆ ಬಂದು ಅವನ ಕಂಠ ಮಾಲೆಯನ್ನು ಸ್ವೀಕರಿಸಿದನು. ವಾಲಿಯು ಅಂಗದನಿಗೆ ಒಂದೆರಡು ಹಿತೋಪದೇಶಗಳನ್ನು ನೀಡಿದನು. ಅಷ್ಟರಲ್ಲಿ ವಾಲಿಯ ಕಣ್ಣಾಲೆಗಳು ಸೆಳೆದುಕೊಂಡವು. ವಾಲಿಯ ಪ್ರಾಣವು ಹಾರಿತು. ನೆರೆದಿದ್ದ ವಾನರರೆಲ್ಲರೂ ತಮ್ಮ ನಾಯಕನು ಮೃತನಾದನೆಂದು ವಿಷಾದದಿಂದ ಶೋಕಿಸುತ್ತಿದ್ದರು. ತಾರೆಯ ಅಳುವಿಗೆ ಪಾರವೇ ಇರಲಿಲ್ಲ.

ಇದೆಲ್ಲವನ್ನೂ ನೋಡುತ್ತಿದ್ದ ಸುಗ್ರೀವನಿಗೆ ಪಶ್ಚಾತ್ತಾಪದಿಂದ ಸಂಕಟವಾಯಿತು. ಅವನ ಮುಖದಲ್ಲಿ ಕಂಬನಿ ಹರಿಯಿತು. ಅವನು ಮೆಲ್ಲಗೆ ಶ್ರೀರಾಮನ ಬಳಿಗೆ ಹೋಗಿ ''ರಾಜಪುತ್ರ, ನೀನು ಪ್ರತಿಜ್ಞೆ ಮಾಡಿದಂತೆ ನಿನ್ನ ಕಾರ್ಯವನ್ನು ನಿರ್ವಹಿಸಿದ್ದೀಯೆ. ಅದರ ಪರಿಣಾಮ ಏನಾಯಿತು ನೋಡು. ನನಗೆ ರಾಜಭೋಗದಲ್ಲಿ ಆಸೆಯೇ ತಪ್ಪಿ ಹೋಯಿತು. ಈ ತಾರೆಯ ರೋದನವನ್ನೂ, ಅಂಗದನ ಗೋಳನ್ನೂ ಕಂಡೆನು. ನನಗೀಗ ತುಂಬ ಸಂಕಟವಾಗುತ್ತಿದೆ. ನನ್ನ ಅಣ್ಣ ವಾಲಿಯು ನನ್ನನ್ನು ಹೊಡೆದೋಡಿಸುವಾಗಲೂ 'ಸುಗ್ರೀವ, ನಿನ್ನನ್ನು ಕೊಲ್ಲಲಾರೆ. ಬದುಕು, ಹೋಗು' ಎಂದು ಹೇಳುತ್ತಿದ್ದನು. ಆ ಮಹಾತ್ಮನಿಗೆ ನಾನು ಎಂತಹ ತಮ್ಮನಾದೆ? ಅಣ್ಣನ ವಧೆಯನ್ನು ಮಾಡಿಸಿದೆನು. ರಾಘವ, ನಾನು ಉರಿಯುವ ಬೆಂಕಿಯಲ್ಲಿ ಹಾರುವೆನು. ಅಂಗದನು ರಾಜನಾಗಲಿ. ಈ ಕಪಿವೀರರು ನಿನ್ನ ಪತ್ನಿಯನ್ನು ಹುಡುಕಿಕೊಡುವರು. ಶ್ರೀರಾಮ, ಪಾಪಿಯಾದ ನನಗೆ ಅನುಜ್ಞೆಯನ್ನು ಕೊಡು'' ಎಂದು ಗೋಗರೆದನು. ಹೀಗೆ ದುಃಖಾರ್ತನಾದ ಸುಗ್ರೀವನ ವಿಲಾಪವನ್ನು ಕೇಳಿ, ರಘುನಾಥನ ಕಣ್ಣಲ್ಲಿ ನೀರು ತುಂಬಿತು. ಅವನು ದಿಕ್ಕು ತೋಚದೆ ಸ್ತಬ್ಧನಾಗಿ ನಿಂತನು. ಆ ಸಮಯದಲ್ಲಿ ಕಪಿವೀರರು ತಾರೆಯನ್ನು ಶ್ರೀರಾಮನ ಬಳಿಗೆ ಕರೆತಂದರು. ಅವಳು ಅಳುಕುತ್ತ, ಬಳುಕುತ್ತ, ಮುಗ್ಗರಿಸುತ್ತ ಶ್ರೀರಾಮನೆದುರಿಗೆ ಹೋಗಿ ''ರಾಮ, ಯಾವ ಬಾಣದಿಂದ

ನನ್ನ ಪ್ರಿಯನನ್ನು ಹೊಡೆದು ಕೊಂದೆಯೊ, ಅದೇ ಬಾಣದಿಂದ ನನ್ನನ್ನು ಹೊಡೆದು ಕೊಂದು ಬಿಡು'' ಎಂದು ಹಲುಬಿದಳು. ಆಗ ಶ್ರೀರಾಮನು ಅವಳನ್ನು ಸಂತೈಸುತ್ತ ''ಎಲೌ ವೀರಪತ್ನಿ, ಧೈರ್ಯಗುಂದಬೇಡ. ಸಮಸ್ತ ಲೋಕವೃತ್ತವೂ ವಿಧಿಯ ಸಂಕಲ್ಪ ದಂತೆ ನಡೆಯುತ್ತದೆ. ಮೂರು ಲೋಕಗಳೂ ವಿಧಾತನಿಗೆ ವಶವಾಗಿವೆ. ತಾರೆ, ದುಃಖಿಸ ಬೇಡ. ನಿನ್ನ ಮಗನಾದ ಅಂಗದನನ್ನು ಸಂತೈಸು. ಅವನು ಯುವರಾಜ ಪದವಿಯನ್ನು ಪಡೆಯುವನು. ಧೈರ್ಯದಿಂದಿರು. ಸಕಲ ಭೋಗಗಳನ್ನೂ ಮುಂದೆ ಅನುಭವಿಸುವೆ'' ಎಂದು ಹಲವು ಬಗೆಯಲ್ಲಿ ಅವಳಿಗೆ ಸಮಾಧಾನ ಹೇಳಿದನು.

ಅನಂತರ ಸುಗ್ರೀವನ ಕಡೆಗೆ ತಿರುಗಿ ''ಸುಗ್ರೀವ, ಹೀಗೆ ಶೋಕಾರ್ತರಾಗಿ ನೀವೆಲ್ಲರೂ ಸುಮ್ಮನೆ ಕೊರಗುವುದು ಮೃತನಾದವನಿಗೆ ಶ್ರೇಯಸ್ಕರವಲ್ಲ. ಮುಂದಿನ ಕರ್ತವ್ಯವೇನೆಂಬುದನ್ನು ಸಮಾಧಾನದಿಂದ ನಡೆಸಿರಿ. ಕಣ್ಣೀರು ಸುರಿಸುವುದನ್ನು ಸಾಕುಮಾಡಿರಿ. ಕಾಲರೂಪನಾದ ಈಶ್ವರನು ಸಕಲ ವಿಷಯಗಳಿಗೂ ಕಾರಣ ನಾಗಿದ್ದಾನೆ. ಲೋಕವೆಲ್ಲವೂ ತನ್ನ ಕರ್ಮಕ್ಕೆ ಅನುಗುಣವಾಗಿ ನಡೆಯುತ್ತಿದೆ. ವಾಲಿಯು ಸಹಜವಾದ ತನ್ನ ಉತ್ತಮ ಗತಿಯನ್ನು ಕಂಡುಕೊಂಡಿದ್ದಾನೆ. ಸ್ವಧರ್ಮವನ್ನು ಪರಿಪಾಲಿಸಿ ಸ್ವರ್ಗವನ್ನು ಗಳಿಸಿದ್ದಾನೆ. ಅವನಿಗಾಗಿ ನೀವು ಶೋಕಿಸಬೇಡಿರಿ. ಕಾಲೋಚಿತವಾದ ಮುಂದಿನ ಊರ್ಧ್ವಕ್ರಿಯೆಯನ್ನು ನಡೆಸಿರಿ'' ಎಂದು ಹೇಳಿದನು. ಆಗ ಲಕ್ಷ್ಮಣನು ಸುಗ್ರೀವನಿಗೆ ಸಮಾಧಾನ ಹೇಳಿ ವಾಲಿಯ ಉತ್ತರಕ್ರಿಯೆಗೆ ಏರ್ಪಾಡು ಮಾಡಿಸಿದನು. ವಾನರ ಯೋಧರು ಕಿಷ್ಕಿಂಧೆಗೆ ಹೋಗಿ ಸುಂದರವಾದ ಶಿಬಿಕೆಯನ್ನು ತಂದರು. ಸುಗ್ರೀವನು ಗೋಳೋ ಎಂದು ಅಳುತ್ತ ಅಂಗದನನ್ನು ಕರೆದುಕೊಂಡು ವಾಲಿಯ ದೇಹವನ್ನೆತ್ತಿ ಶಿಬಿಕೆಯಲ್ಲಿಟ್ಟನು. ಹೂಮಾಲೆಗಳಿಂದಲೂ, ವಸ್ತ್ರಗಳಿಂದಲೂ ವಾಲಿಯ ದೇಹವನ್ನಲಂಕರಿಸಿದರು. ಕಪಿನಾಯಕರು ಶಿಬಿಕೆಯನ್ನು ಹೊತ್ತುಕೊಂಡು ''ಚಿತೆಯಿದ್ದ ಕಡೆಗೆ ಬಂದರು. ಎಲ್ಲರೂ ಅಳುತ್ತ ಶಿಬಿಕೆಯನ್ನು ಹಿಂಬಾಲಿಸಿದರು. ವಿಧಿ ಪೂರ್ವಕವಾಗಿ ವಾಲಿಯ ದಹನ ಕ್ರಿಯೆ ನಡೆಯಿತು. ಸುಗ್ರೀವ, ಅಂಗದ, ಮೊದಲಾದವರು ಮೃತನಾದ ವಾಲಿಗೆ ಜಲತರ್ಪಣವನ್ನಿತ್ತರು. ಸುಗ್ರೀವನು ತಾರೆ ಮೊದಲಾದವರನ್ನು ಕಿಷ್ಕಿಂಧೆಗೆ ಕಳಿಸಿ ಲಕ್ಷ್ಮಣ ಸಮೇತನಾಗಿದ್ದ ಶ್ರೀರಾಮನ ಬಳಿಗೆ ಬಂದು ನಿಂತನು.

ಅಪರಕಾರ್ಯವನ್ನು ನಡೆಸಿದ ಸುಗ್ರೀವನು ಒದ್ದೆ ಬಟ್ಟೆಯನ್ನುಟ್ಟೇ ಬಂದಿದ್ದನು. ಆಂಜನೇಯನು ಶ್ರೀರಾಮನಿಗೆ ಕೈಮುಗಿದು ''ಹೇ ಪ್ರಭು, ನಿನ್ನ ಅನುಗ್ರಹದಿಂದ ಸುಗ್ರೀವನಿಗೆ ದುರ್ಲಭವಾಗಿದ್ದ ಈ ಕಪಿರಾಜ್ಯವು ದೊರಕಿತು. ನೀನು ಅನುಮತಿಯನ್ನಿತ್ತರೆ ಅವನೀಗ ರಾಜಧಾನಿಯನ್ನು ಪ್ರವೇಶಿಸುವನು. ನೀನು ಕಿಷ್ಕಿಂಧೆಗೆ

ಆಗಮಿಸಿ ಸುಗ್ರೀವನನ್ನು ಕಪಿರಾಜನನ್ನಾಗಿ ನೇಮಿಸಿ ವಾನರರನ್ನು ಸಂತೋಷಪಡಿಸು'' ಎಂದನು. ಆಗ ವಾಕ್ಯಕೋವಿದನಾದ ರಘುನಾಥನು, ''ಸೌಮ್ಯ ಹನುಮಂತ, ಈಗ ಸುಗ್ರೀವನು ಕಿಷ್ಕಿಂಧೆಗೆ ಹೋಗಲಿ. ಹದಿನಾಲ್ಕು ವರ್ಷಗಳವರೆಗೆ ನಾನು ನಗರವನ್ನಾಗಲಿ ಗ್ರಾಮವನ್ನಾಗಲಿ ಪ್ರವೇಶಿಸುವುದಿಲ್ಲ, ವಾನರೋತ್ತಮನಾದ ಈ ವೀರನಿಗೆ ಪಟ್ಟಾಭಿಷೇಕವು ನಡೆಯಲಿ'' ಎಂದು ಹೇಳಿ ಸುಗ್ರೀವನನ್ನು ಕುರಿತು, ''ಸುಗ್ರೀವ, ಈ ಅಂಗದಕುಮಾರನು ತಂದೆಯನ್ನು ಕಳೆದುಕೊಂಡಿದ್ದಾನೆ. ಇವನಿಗೆ ಯುವರಾಜ ಪದವಿಯನ್ನಿತ್ತು ಅಭಿಷೇಕ ಮಾಡು – ಧೀರನೂ ಶೂರನು ಆದ ಅಂಗದನು ಯುವರಾಜ ಪದವಿಗೆ ಅರ್ಹನಾಗಿದ್ದಾನೆ. ನೀನು ಪಟ್ಟಾಭಿಷಿಕ್ತನಾಗು. ಈಗ ಶ್ರಾವಣಮಾಸ. ಈ ಮಳೆಗಾಲವು ನಮ್ಮ ಮುಂದಿನ ಕಾರ್ಯಕ್ಕೆ ಅನುಕೂಲವಾಗಿಲ್ಲ, ಈ ಮಳೆಗಾಲ ಕಳೆಯಲಿ. ಕಾರ್ತಿಕ ಮಾಸವು ಬಂದೊಡನೆ ಸೀತಾನ್ವೇಷಣ ಕಾರ್ಯದಲ್ಲಿ ನೀನು ಉದ್ಯುಕ್ತನಾಗು. ನೀನೀಗ ರಾಜಧಾನಿಯನ್ನು ಪ್ರವೇಶಿಸಿ ಎಲ್ಲ ಪ್ರಜೆಗಳನ್ನು ಸಂತೋಷಪಡಿಸು. ನಾನು ಆ ಪ್ರಸ್ರವಣಗಿರಿಯಲ್ಲಿ ಲಕ್ಷ್ಮಣನೊಡನೆ ಮಳೆಗಾಲವನ್ನು ಕಳೆಯುವೆನು'' ಎಂದು ತಿಳಿಸಿದನು.

ಆಮೇಲೆ ಸುಗ್ರೀವನು ಕಿಷ್ಕಿಂಧಾನಗರವನ್ನು ಪ್ರವೇಶಿಸಿದನು. ಆಗ ಸಚಿವರೇ ಮೊದಲಾದ ಅಧಿಕಾರವರ್ಗದವರೂ ಇತರ ವಾನರಾದಿನಾಯಕರೂ ಸುತ್ತಲೂ ನೆರೆದು ಸುಗ್ರೀವನಿಗೆ ತಲೆ ಬಾಗಿ ವಂದಿಸಿದರು. ಸುಗ್ರೀವನು ಕಾಲೋಚಿತವಾಗಿ ಅವರೊಡನೆ ಸಂಭಾಷಿಸಿ ಅರಮನೆಯನ್ನು ಪ್ರವೇಶಿಸಿದನು. ಕೆಲವು ದಿನಗಳಲ್ಲಿಯೇ ಸುಮುಹೂರ್ತದಲ್ಲಿ ಸುಗ್ರೀವನಿಗೆ ಪಟ್ಟಾಭಿಷೇಕವಾಯಿತು. ಅವನು ಕಿಷ್ಕಿಂಧಾಧಿಪತಿಯಾದನು. ಅನಂತರ ಸುಗ್ರೀವನು ಅಂಗದನಿಗೆ ಯುವರಾಜ ಪದವಿಯನ್ನಿತ್ತು ಪಟ್ಟಾಭಿಷೇಕ ಮಾಡಿ ಶ್ರೀರಾಮನ ಬಳಿಗೆ ಹೋಗಿ ಎಲ್ಲ ವೃತ್ತಾಂತವನ್ನೂ ತಿಳಿಸಿ ಕಿಷ್ಕಿಂಧೆಗೆ ಹಿಂದಿರುಗಿದನು.

೩೬

ಪ್ರಸ್ರವಣಗಿರಿಯಲ್ಲಿ ಶ್ರೀರಾಮಲಕ್ಷ್ಮಣರವಾಸ. ಮಳೆಗಾಲ ಕಳೆದಮೇಲೆ ಲಕ್ಷ್ಮಣನು ಕಿಷ್ಕಿಂಧೆಗೆ ಹೋಗಿ ಸುಗ್ರೀವನನ್ನು ಎಚ್ಚರಿಸುವುದು. ಸುಗ್ರೀವನ ಆದೇಶದಂತೆ ಕಪಿಸೇನೆಗಳ ಆಗಮನ

ಇತ್ತಲಾಗಿ ಶ್ರೀರಾಮನು ತಮ್ಮನೊಡನೆ ಮಾಲ್ಯವಾನ್ ಎಂಬ ಒಂದು ಗಿರಿಗೆ ಬಂದನು. ಅದಕ್ಕೆ ಪ್ರಸ್ರವಣಗಿರಿ ಎಂದು ಇನ್ನೊಂದು ಹೆಸರು. ಮನೋಹರವಾದ ಆ

ಸ್ಥಳದಲ್ಲಿ ಸೌಮಿತ್ರಿಯೊಡನೆ ನೆಲೆಸಿ ಮಳೆಗಾಲವನ್ನು ಕಳೆಯಬೇಕೆಂದು ನಿರ್ಧರಿಸಿದನು. ಆ ಬೆಟ್ಟದಲ್ಲಿದ್ದ ಒಂದು ಗುಹೆಯು ಅವರಿಗೆ ವಾಸಸ್ಥಾನವಾಯಿತು. ಸುತ್ತಲೂ ಬೆಳೆದಿದ್ದ ಮರಗಿಡ ಬಳ್ಳಿಗಳನ್ನೂ ಅರಳಿದ ಬಣ್ಣ ಬಣ್ಣದ ಹೂಗಳನ್ನೂ ನೋಡಿ ಅವನಿಗೆ ಸಂತೋಷವಾಯಿತು. ನವಿಲು ಜಿಂಕೆ ಮೊದಲಾದ ವಿವಿಧ ಪ್ರಾಣಿಗಳು ಸಂಚರಿಸು ತ್ತಿದ್ದವು. ಸುಂದರವಾದ ಹಕ್ಕಿಗಳು ಚಿಲಿಪಿಲಿಗುಟ್ಟುತ್ತ ಎಲ್ಲೆಲ್ಲಿಯೂ ಹಾರಾಡುತ್ತಿದ್ದವು. ಆ ಪ್ರಕೃತಿ ಸೌಂದರ್ಯವನ್ನು ನೋಡಿ ಮುಗ್ಧರಾದ ರಾಮಲಕ್ಷ್ಮಣರು ಶಾಂತಮನಸ್ಕ ರಾಗಿ ನೆಲೆಸಿದರು. ಶ್ರೀರಾಮನಿಗೆ ಆಗಾಗ ಪ್ರಿಯ ಪತ್ನಿಯಾದ ಸೀತೆಯ ನೆನಪಾಗಿ ಶೋಕದಿಂದ ಉಮ್ಮಳಿಸುತ್ತಿದ್ದನು. ಆಗ ಲಕ್ಷ್ಮಣನು ಅಣ್ಣನನ್ನು ಸಂತೈಸುತ್ತಿದ್ದನು.

ಮಳೆಗಾಲವು ವಿಜೃಂಭಿಸಿತು. ಪರ್ವತಾಕಾರವಾದ ಮೋಡಗಳು ಗಗನವನ್ನು ವ್ಯಾಪಿಸಿದವು. ಧಾರಾಕಾರವಾಗಿ ಮಳೆ ಸುರಿಯತೊಡಗಿತು. ಮಿಂಚು ಗುಡುಗು ಸಿಡಿಲುಗಳು ರಭಸದಿಂದ ಮೆರೆದಾಡಿದವು. ಹೀಗೆ ಒಂದೇ ಸಮನೆ ಮಳೆಯು ಸುರಿಸುತ್ತಿರಲು ರಾಮಲಕ್ಷ್ಮಣರು ಗಿರಿಗುಹೆಯಲ್ಲಿ ಕಷ್ಟದಿಂದಲೇ ಕಾಲಯಾಪನೆ ಮಾಡಿದರು. ಮಳೆಗಾಲವು ಯಾವಾಗ ಕಳೆಯುವುದೋ ಎಂಬ ನಿರೀಕ್ಷೆಯಲ್ಲಿದ್ದರು. ಕ್ರಮವಾಗಿ ವರ್ಷಾಕಾಲವು ಕಳೆದು ಶರತ್ಕಾಲವು ಆಗಮಿಸಿತು. ಮೋಡದ ಅಬ್ಬರ ಇಳಿಯಿತು. ಆಕಾಶವು ನಿರ್ಮಲವಾಯಿತು. ಶುಕ್ಲಪಕ್ಷದಲ್ಲಿ ಚೆಲುವಾದ ಬೆಳದಿಂಗಳು ಹರಡಿತು. ಶ್ರೀರಾಮನು ಸೀತಾವಿರಹದಿಂದ ಕೊರಗುತ್ತ ಯಾವ ಸಮಯವನ್ನು ನಿರೀಕ್ಷಿಸುತ್ತಿದ್ದನೋ ಆ ಶರತ್ಕಾಲವು ಬಂದಿತು. ಇನ್ನೇನು ಸುಗ್ರೀವನು ಬರುವನೆಂದು ಅವನು ಆಗಮನವನ್ನು ನಿರೀಕ್ಷಿಸತೊಡಗಿದನು.

ಇತ್ತಲಾಗಿ ಸುಗ್ರೀವನು ಅಂತಃಪುರದಲ್ಲಿ ವಿವಿಧ ಭೋಗಗಳನ್ನು ಅನುಭವಿಸುತ್ತ ಆನಂದದಿಂದ ವಿಹರಿಸುತ್ತಿದ್ದನು. ಬಹಳ ಕಾಲದಿಂದ ಕಷ್ಟದಲ್ಲಿ ಸವೆಯುತ್ತಿದ್ದ ಆತನಿಗೆ ಅರಮನೆಯ ಭೋಗವು ರಮಣೀಯವೆನಿಸಿತು. ತನ್ನ ಮಡದಿಯಾದ ರುಮೆಯೊಡನೆ ಹೆಚ್ಚುಹೊತ್ತು ವಿಹರಿಸುತ್ತಿದ್ದನು. ಕ್ರಮವಾಗಿ ತಾರೆಯೂ ಅವನ ಮಡದಿಯಾದಳು. ವಿಧವೆಯಾದವಳು ಮೈದುನನನ್ನು ಮದುವೆಯಾಗುವುದು ಆ ಕಾಲದಲ್ಲಿ ರೂಢಿಯಾಗಿತ್ತು. ಅದೇನೂ ಆಗ ಅಧರ್ಮವಾಗಿರಲಿಲ್ಲ. ಮಳೆಗಾಲವು ಕಳೆದರೂ ಸುಖಲೋಲುಪನಾಗಿದ್ದ ಸುಗ್ರೀವನು ಶ್ರೀರಾಮನ ದರ್ಶನಕ್ಕೆ ಆಗಮಿಸಲಿಲ್ಲ. ಸೀತಾವಿರಹದಿಂದ ಶೋಕಾರ್ತನಾದ ರಾಘವನು ಸೀತೆಯು ಅನುಭವಿಸುತ್ತಿರ ಬಹುದಾದ ಕಷ್ಟಗಳನ್ನು ನೆನೆದು ಸಂತಪ್ತನಾದನು. ಹಾಗೆಯೇ ಕೆಲವು ದಿನಗಳು ಕಳೆದ ಮೇಲೆ ಅವನ ಮನಸ್ಸಿನಲ್ಲಿ ಕ್ರೋಧವು ಅಂಕುರಿಸಿತು. ಅವನು ಲಕ್ಷ್ಮಣನು ಕರೆದು

ಇಂತೆಂದನು. ''ಸೌಮಿತ್ರಿ, ಈಗ ಮಳೆಗಾಲವು ಪೂರ್ತಿಯಾಗಿ ಮುಗಿದು ಹೋಯಿತು. ರಾಜರಿಗೆ ವಿಜಯಯಾತ್ರೆಯನ್ನು ಮಾಡಲು ಇದು ತಕ್ಕಸಮಯವಾಗಿದೆ. ತಮ್ಮ ಮಳೆಗಾಲದ ಈ ನಾಲ್ಕು ತಿಂಗಳು ನನಗೆ ನೂರುವರ್ಷಗಳಂತೆ ಕಳೆದವು. ನನ್ನ ವಿಷಯದಲ್ಲಿ ಸುಗ್ರೀವಮಹಾರಾಜನಿಗೆ ದಯೆ ಬರಲಿಲ್ಲ. ನಮ್ಮಿಂದಾದ ಉಪಕಾರವನ್ನು ಮರೆತಿದ್ದಾನೆ. ಸೀತಾನ್ವೇಷಣೆಗೆ ಕಾಲವನ್ನು ಗೊತ್ತುಮಾಡಿಕೊಂಡು ಹೋದ ಆ ದುಷ್ಟನು ಅದನ್ನು ಮರೆತಿದ್ದಾನಲ್ಲ? ಇದು ಕೃತಘ್ನತೆಯಲ್ಲವೆ? ನಾನು ಕೈಲಾಗದವನೆಂದೂ ತನಗೆ ಶರಣಾರ್ಥಿಯಾಗಿ ಬಂದಿದ್ದಾನೆಂದೂ ಆತನು ಭಾವಿಸಿರಬೇಕು. ತಮ್ಮ ವೀರನಾದ ನಿನ್ನ ನೆರವಿರುವಾಗ ನನಗೆ ಯಾವ ಚಿಂತೆಯೂ ಇಲ್ಲ. ಆದರೆ ನಮ್ಮಿಂದ ಉಪಕೃತನಾದ ಈ ಸುಗ್ರೀವನು ನಮ್ಮ ಕ್ಲೇಶವೇನೆಂಬುದನ್ನೇ ಮರೆತು ಅಂತಃಪುರದಲ್ಲಿ ಕುಡಿಯುತ್ತ ಕ್ರೀಡಿಸುತ್ತ ಮೈಮರೆತಿದ್ದಾನೆ. ವತ್ಸ–ಲಕ್ಷ್ಮಣ, ನೀನು ಸುಗ್ರೀವನ ಬಳಿಗೆ ಹೋಗಿ ಬಾ. ನನ್ನ ರೋಷಕ್ಕೆ ಅನುಗುಣವಾದ ಈ ಮಾತನ್ನು ಅವನಿಗೆ ಹೇಳು–''ಎಲೈ ಸುಗ್ರೀವ, ನನ್ನಿಂದ ಹತನಾದ ವಾಲಿಯು ಯಾವ ದಾರಿಯನ್ನು ಹಿಡಿದು ಹೋದನೋ ಆ ದಾರಿಯು ಮುಚ್ಚಿಹೋಗಿಲ್ಲ ! ನೀನು ಹಿಡಿಸಲಾರದಷ್ಟು ಇಕ್ಕಟ್ಟಾಗಿಯೂ ಇಲ್ಲ ! ಮಾತು ಕೊಟ್ಟಂತೆ ನಡೆದುಕೊ. ವಾಲಿಯ ದಾರಿಯನ್ನು ಹಿಡಿಯಬೇಡ. ಸತ್ಯಮಾರ್ಗವನ್ನು ಉಲ್ಲಂಘಿಸಿದರೆ ನಿನ್ನ ಮಿತ್ರ ಬಾಂಧವರೆಲ್ಲರೊಡನೆ ನಿನ್ನನ್ನು ಕೊಂದುಹಾಕುವೆನು'' ಎಂದು ಹೇಳು. ಲಕ್ಷ್ಮಣ, ಅಲ್ಲಿಗೆ ಹೋಗಿ ಪರಿಸ್ಥಿತಿ ಏನೆಂಬುದನ್ನು ಮತ್ತೊಮ್ಮೆ ಆಲೋಚಿಸಿ ಯುಕ್ತವಾದ ಮಾತನ್ನು ಅವನಿಗೆ ಹೇಳು'' ಎಂದನು. ಶ್ರೀರಾಮನ ಕ್ರೋಧೋದ್ರೇಕವನ್ನೂ ಅವನು ಅನುಭವಿಸುತ್ತಿದ್ದ ಶೋಕವನ್ನೂ ಕಂಡ ಲಕ್ಷ್ಮಣನಿಗೆ ಸುಗ್ರೀವನ ವಿಷಯದಲ್ಲಿ ಕ್ರೋಧವು ಭುಗಿಲೆದ್ದಿತು. ಒಡನೆಯೇ ಲಕ್ಷ್ಮಣನು ಬತ್ತಳಿಕೆಯನ್ನು ಹೆಗಲಿಗೇರಿಸಿ ಧನುಸ್ಸನ್ನು ಹಿಡಿದು ''ಅಣ್ಣ , ಕೃತಘ್ನನಾದ ಸುಗ್ರೀವನನ್ನು ನಾನು ಕೊಂದು ಹಾಕುವೆನು! ಅವನ ಗೊಡವೆಯೇ ಬೇಡ. ವಾಲಿಪುತ್ರನಾದ ಅಂಗದನು ಕಪಿನಾಯಕರೊಡನೆ ಕೂಡಿ ಸೀತಾದೇವಿಯನ್ನು ಅನ್ವೇಷಿಸಲಿ'' ಎಂದು ನಿವೇದಿಸಿದನು. ಆಗ ಶ್ರೀರಾಮನು ಲಕ್ಷ್ಮಣನನ್ನು ಸಂತೈಸುತ್ತ ''ವತ್ಸ–ಮಿತ್ರವಧೆಯು ಪಾಪಕಾರ್ಯ. ನಾವು ದುಡುಕಬಾರದು. ಸುಗ್ರೀವನೊಡನೆ ಮೊದಲಿನ ಸ್ನೇಹವನ್ನೇ ನೆನೆದು ಸಾಮದಿಂದ ಸಂಭಾಷಿಸು. ಕಠೋರವಾದ ಮಾತನ್ನಾಡಬೇಡ. ಕಾಲಾತಿಕ್ರಮ ವಾಯಿತು–ಎಂಬುದನ್ನು ಮೊದಲು ತಿಳಿಸು'' ಎಂದನು. ಲಕ್ಷ್ಮಣನು ಹಾಗೆಯೆ ಆಗಲೆಂದು ಹೇಳಿ ಅಣ್ಣನಿಗೆ ನಮಸ್ಕರಿಸಿ ಕಿಷ್ಕಿಂಧೆಗೆ ಹೊರಟನು.

ಆದರೆ ಅವನ ಮುಖದಲ್ಲಿ ಕ್ರೋಧದ ಲಕ್ಷಣಗಳು ಎದ್ದು ಕಾಣುತ್ತಿದ್ದವು.

ಕಾವಲಿದ್ದ ಕಪಿಗಳು ಲಕ್ಷ್ಮಣನನ್ನು ನೋಡಿ ಭಯಾವಿಷ್ಟರಾದರು. ಒಡನೆಯೇ ಯುವರಾಜನಾದ ಅಂಗದನ ಬಳಿಗೆ ಹೋಗಿ ಲಕ್ಷ್ಮಣನು ಬಂದಿದ್ದಾನೆಂದು ಅರಿಕೆ ಮಾಡಿದರು. ಕೂಡಲೇ ಅಂಗದನು ಭಯಪಡುತ್ತಲೇ ವಿನೀತನಾಗಿ ಲಕ್ಷ್ಮಣನ ಸಮೀಪಕ್ಕೆ ಬಂದನು. ಲಕ್ಷ್ಮಣನು ಅಂಗದನನ್ನು ನೋಡಿ "ವತ್ಸ, ನಾನು ಬಂದಿರುವೆನೆಂದು ಸುಗ್ರೀವನಿಗೆ ಹೇಳು. ಲಕ್ಷ್ಮಣನು ಅಣ್ಣನ ಕಷ್ಟವನ್ನು ನೋಡಿ ಸಂತಪ್ತನಾಗಿ ಬಾಗಿಲಲ್ಲಿ ಬಂದು ನಿಂತಿರುವನು. ಅವನ ಮಾತು ರುಚಿಸಿದರೆ ಅದರಂತೆ ನಡೆದುಕೊಳ್ಳಬೇಕು– ಎಂದು ತಿಳಿಸಿ ಬೇಗನೆ ಬಾ," ಎಂದನು. ಲಕ್ಷ್ಮಣನ ಮಾತನ್ನು ಕೇಳಿ ಅಂಗದನು ಕಳವಳಿಸುತ್ತ ಚಿಕ್ಕಪ್ಪನಾದ ಸುಗ್ರೀವನನ್ನು ಕಂಡನು. ಸುಗ್ರೀವನಾದರೋ ಮದ್ಯದ ಅಮಲಿನಲ್ಲಿದ್ದನು. ಅವನಿಗೆ ಏನೂ ಸ್ಫುರಿಸಲಿಲ್ಲ. ಇದನ್ನರಿತ ಅಂಗದನು ತನ್ನ ತಾಯಿಯಾದ ತಾರೆಯ ಬಳಿಗೆ ಹೋಗಿ ಲಕ್ಷ್ಮಣನು ಬಂದ ಸಂಗತಿಯನ್ನು ನಿವೇದಿಸಿದನು. ಅಷ್ಟರಲ್ಲಿ ಸುಗ್ರೀವನ ಸಚಿವರಿಗೆ ಈ ವಿಷಯವು ತಿಳಿಯಿತು. ಅವರೆಲ್ಲರೂ ಆತನ ಬಳಿಗೆ ಬಂದು ಲಕ್ಷ್ಮಣನ ಆಗಮನ ವೃತ್ತಾಂತವನ್ನು ತಿಳಿಸಿದರು. ಆ ವೇಳೆಗೆ ಮದ್ಯದ ಅಮಲು ಇಳಿದದ್ದರಿಂದ ಸುಗ್ರೀವನಿಗೆ ಎಲ್ಲವೂ ತಿಳಿಯಿತು. ಕ್ರುದ್ಧನಾದ ಲಕ್ಷ್ಮಣನನ್ನು ಸಂತೈಸುವುದಕ್ಕಾಗಿ ಅವನು ತಾರೆಯನ್ನು ಕಳಿಸಿದನು. ತಾರೆಯು ಲಕ್ಷ್ಮಣನ ಬಳಿಗೆ ಬಂದಳು. ಆ ಕಪೀಂದ್ರನ ಪತ್ನಿಯನ್ನು ನೋಡಿದೊಡನೆ ಲಕ್ಷ್ಮಣನು ಸಂಕೋಚದಿಂದ ತಲೆತಗ್ಗಿಸಿ ನಿಂತನು. ತಾರೆಯು ಲಕ್ಷ್ಮಣನನ್ನು ಕುರಿತು, "ಓ ರಾಜಕುಮಾರ, ನಿನ್ನ ಈ ಕೋಪಕ್ಕೆ ಕಾರಣವೇನು? ನಿನಗೆ ವಿರೋಧವನ್ನು ಮಾಡಲು ಈ ಜಗತ್ತಿನಲ್ಲಿ ಯಾರಿಗೆ ಧೈರ್ಯವಿದೆ?" ಎಂದು ಕೇಳಿದಳು. ಲಕ್ಷ್ಮಣನು "ಎಲೌ ಸೌಮ್ಯಳೆ, ಸುಗ್ರೀವನು ಕಾಮಲೋಲುಪನಾಗಿ ಮೈಮರೆತಿರುವುದೇಕೆ? ನನ್ನ ಅಣ್ಣನಾದ ಶ್ರೀರಾಮನಿಗೆ ಕೊಟ್ಟಮಾತನ್ನು ಮರೆತುಬಿಟ್ಟನೋ ಹೇಗೆ? ಲೋಕೈಕ ವೀರನೂ ಸತ್ಯ ಸಂಧನೂ ಆದ ಶ್ರೀರಾಮನು ಅವನಿಗೆ ಮಿತ್ರನಾಗಿ ದೊರಕಿದ್ದಾನೆ. ಅಂತಹವನನ್ನು ಈ ಸುಗ್ರೀವನು ಉಪೇಕ್ಷಿಸ ಬಹುದೆ?" ಎಂದನು. ಆಗ ಚತುರೆಯಾದ ತಾರೆಯು "ರಾಜಪುತ್ರ, ನಿನ್ನ ಕೋಪಕ್ಕೆ ಕಾರಣವು ತಿಳಿಯಿತು. ವೀರಾಗ್ರಣಿ, ಅವನು ತಪ್ಪು ಮಾಡಿದರೂ ನೀನು ಕ್ಷಮಿಸಬೇಕು. ಶ್ರೀರಾಮನ ಕಾರ್ಯವು ವಿಲಂಬಿಸುತ್ತಿದೆ ಎಂಬುದನ್ನು ನಾನು ಬಲ್ಲೆ. ಸುಗ್ರೀವನು ಕಾಮವಶನಾಗಿ ಮೈಮರೆತಿದ್ದಾನೆಂಬುದನ್ನೂ ಬಲ್ಲೆ. ಅವನು ಬಹಳ ವರ್ಷಗಳಿಂದ ಕಷ್ಟದಲ್ಲಿ ನವೆದಿದ್ದನು. ಈಗ ಸ್ವಲ್ಪಕಾಲ ಅವನಿಗೆ ವಿಹರಿಸುವ ಆಸಕ್ತಿ ಹುಟ್ಟಿರುವುದು ಆಶ್ಚರ್ಯವೇನಲ್ಲ. ಲಕ್ಷ್ಮಣ, ನಿನಗೆ ಕಾಮತಂತ್ರದಲ್ಲಿ ಪರಿಚಯವಿಲ್ಲ! ಆದ್ದರಿಂದ ಹೀಗೆ ಕೋಪವಶನಾಗಿದ್ದೀಯೆ. ಸುಗ್ರೀವನು ಚಪಲ ಸ್ವಭಾವದ ಕಪಿ.

ಸ್ತ್ರೀವ್ಯಾಮೋಹದಲ್ಲಿ ಸಿಲುಕಿದ್ದಾನೆ. ಕೋಪಿಸಬೇಡ, ಬಾ. ನಿಮ್ಮ ಕಾರ್ಯವನ್ನು ಅವಶ್ಯವಾಗಿ ಆತನು ಸಾಧಿಸಿಕೊಡುವನು. ನಿನ್ನನ್ನು ಕಂಡಮೇಲೆ ಅವನಿಗೆ ತನ್ನ ಕರ್ತವ್ಯದ ನೆನಪಾಗುವುದು'' ಎಂದು ಹೇಳಿ ಲಕ್ಷ್ಮಣನನ್ನು ಸುಗ್ರೀವನಿದ್ದ ಅಂತಃಪುರಕ್ಕೆ ಕರೆದೊಯ್ದಳು. ಲಕ್ಷ್ಮಣನು ಸಂಕೋಚಪಡುತ್ತಲೇ ಅಂತಃಪುರಕ್ಕೆ ಹೋದನು. ಕಪಿರಾಜನಾದ ಸುಗ್ರೀವನು ರುಮೆಯನ್ನು ಆಲಂಗಿಸಿಕೊಂಡು ಸಿಂಹಾಸನದಲ್ಲಿ ಕುಳಿತಿದ್ದನು. ವಿಸ್ಮಯದಿಂದ ಕಣ್ಣರಳಿಸಿ ನೋಡುತ್ತಿದ್ದ ಲಕ್ಷ್ಮಣನನ್ನು ಸುಗ್ರೀವನು ಆತಂಕದಿಂದ ಕಣ್ಣರಳಿಸಿ ನೋಡಿದನು !

ಲಕ್ಷ್ಮಣನು ಸುಭಾಂಗಣವನ್ನು ಪ್ರದೇಶಿಸಿದೊಡನೆ ಸುಗ್ರೀವನೂ, ಅಲ್ಲಿದ್ದ ಅಂಗನೆಯರೂ ತಟ್ಟನೆ ಎದ್ದು ನಿಂತರು. ಸುಗ್ರೀವನು ಕೈ ಮುಗಿದುಕೊಂಡು ಲಕ್ಷ್ಮಣನೆದುರಿಗೆ ಬಂದು ನಿಂತನು. ಕ್ರುದ್ಧನಾದ ಲಕ್ಷ್ಮಣನು ''ಎಲೈ ವಾನರೇಶ್ವರ, ಮಿತ್ರರಿಂದ ಉಪಕೃತನಾದವನು ಅವರಿಗೆ ಪ್ರತ್ಯುಪಕಾರವನ್ನು ಮಾಡದಿದ್ದರೆ ಕೃತಘ್ನತನೆನಿಸುತ್ತಾನೆ. ಕೃತಘ್ನನು ಲೋಕದಲ್ಲಿ ನಿಂದನೀಯನಾಗುತ್ತಾನಲ್ಲದೆ, ದಂಡನೆಗೆ ಅರ್ಹನೂ ಆಗುತ್ತಾನೆ. ನಿನ್ನ ಸುಖದುಃಖಗಳನ್ನು ಕೇಳಿ ಕರುಣಾಳುವಾದ ಶ್ರೀರಾಮನು ನಿನಗೆ ಕಪಿರಾಜ್ಯವನ್ನು ಕೊಡಿಸಿದನು. ನಿನ್ನ ಸಹಾಯವಿಲ್ಲದಿದ್ದರೂ ಆ ಮಹಾಭಾಗನು ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬಲ್ಲನು. ನೀನು ಕೊಟ್ಟ ಮಾತೂ ನಿನಗಾದ ಉಪಕಾರವೂ ಮರೆತು ಹೋಗಿದ್ದರೆ, ನಿನ್ನ ಅಣ್ಣನಾದ ವಾಲಿಯನ್ನು ನೀನು ಹಿಂಬಾಲಿಸಬೇಕಾಗುತ್ತದೆ! ಸುಗ್ರೀವ, ಇಕ್ಷ್ವಾಕುನಾಥನ ಕೋದಂಡದಿಂದ ಸಿಡಿಲುಗಳಂತೆರಗುವ ಶರಗಳ ರುಚಿಯನ್ನು ನೀನು ಕಂಡಿಲ್ಲ! ಆದ್ದರಿಂದಲೇ ಶ್ರೀರಾಮನ ಕಾರ್ಯವನ್ನು ಮನಸ್ಸಿಗೂ ತಂದುಕೊಂಡಿಲ್ಲ'' ಎಂದು ಗದರಿಸಿದನು.

ಆಗ ಬಳಿಯಲ್ಲಿಯೇ ಇದ್ದ ತಾರೆಯು ಸುಗ್ರೀವನ ಗುಣಾತಿಶಯವನ್ನೂ ಕೃತಜ್ಞತೆಯನ್ನೂ ಮತ್ತೆ ಮತ್ತೆ ಹೊಗಳಿ ಲಕ್ಷ್ಮಣನನ್ನು ಸಮಾಧಾನ ಪಡಿಸಿದಳು. ಸುಗ್ರೀವನ ವಿಷಯದಲ್ಲಿ ಅಂತಹ ಕಠೋರವಾದ ಮಾತನ್ನಾಡಬಾರದೆಂದು ವಿಜ್ಞಾಪಿಸಿದಳು. ಲಕ್ಷ್ಮಣನು ಶಾಂತನಾದನು. ಅಷ್ಟರಲ್ಲಿ ಸುಗ್ರೀವನಿಗೆ ಮದ್ಯದ ಅಮಲು ಪೂರ್ತಿಯಾಗಿ ಇಳಿದಿತ್ತು. ಅವನು ವಿನಯದಿಂದ ಲಕ್ಷ್ಮಣನನ್ನು ಕುರಿತು, ''ಸೌಮಿತ್ರಿ, ಶ್ರೀರಾಮನ ಪರಾಕ್ರಮವನ್ನು ನಾನು ಬಲ್ಲೆ. ಆತನಿಂದಾದ ಉಪಕಾರವನ್ನು ನಾನು ಎಂದಿಗೂ ಮರೆಯತಕ್ಕವನಲ್ಲ. ಈಗಾಗಲೇ ನನ್ನ ವಶದಲ್ಲಿರುವ ವಾನರ ಭಲ್ಲೂಕ ಸೇನೆಗಳೆಲ್ಲವೂ ಸೀತಾನ್ವೇಷಣೆಗಾಗಿ ಬಂದು ಸೇರಬೇಕೆಂದು ಆಜ್ಞಾಪಿಸಿದ್ದೇನೆ. ಮತ್ತೆ ಇನ್ನೊಮ್ಮೆ ಅವರನ್ನು ಎಚ್ಚರಿಸುತ್ತೇನೆ.

ಲಕ್ಷ್ಮಣ, ನಾನು ತಪ್ಪು ಮಾಡಿದ್ದರೆ ಈ ಭೃತ್ಯನನ್ನು ಕ್ಷಮಿಸಬೇಕು. ತಪ್ಪು ಮಾಡದೇ ಇರತಕ್ಕವನು ಯಾರೂ ಇಲ್ಲ'' ಎಂದನು. ಅವನ ನುಡಿಯನ್ನು ಕೇಳಿ ಲಕ್ಷ್ಮಣನು ಸಂಪ್ರೀತನಾದನು. ಸುಗ್ರೀವನಿಗೆ ಕೆಲವು ಸಾಂತ್ವನ ವಾಕ್ಯಗಳನ್ನು ಹೇಳಿ ''ವಾನರೇಶ್ವರ, ದುಃಖದಲ್ಲಿ ಮುಳುಗಿರುವ ಶ್ರೀರಾಮನ ದೀನೋಕ್ತಿಯನ್ನು ಕೇಳಿ ನನಗೆ ಸಂಕಟವಾದ್ದರಿಂದ ಏನೋ ಕಠೋರವಾದ ಮಾತುಗಳನ್ನಾಡಿಬಿಟ್ಟೆನು. ಅದನ್ನು ಮನಸ್ಸಿನಲ್ಲಿಡದೆ ಕ್ಷಮಿಸು'' ಎಂದು ನುಡಿದನು.

ಆಗ ಸುಗ್ರೀವನು ಸಚಿವನಾದ ಹನುಮಂತನನ್ನು ಕರೆದು ''ಆಂಜನೇಯ, ನನ್ನ ಅಧೀನದಲ್ಲಿರುವ ಸಕಲವಾನರ ಬಲವನ್ನೂ ಬರಮಾಡು. ಪೃಥ್ವಿಯಲ್ಲಿರುವ ಸಮಸ್ತವಾನರರೂ ಕ್ಷಿಪ್ರದಲ್ಲಿ ಇಲ್ಲಿಗೆ ಬರುವಂತೆ ಏರ್ಪಡಿಸು. ಅವರನ್ನು ಕರೆಸುವುದಕ್ಕಾಗಿ ದೂತರನ್ನು ಹಿಂದೆಯೇ ನಾನು ಕಳಿಸಿದ್ದೇನಷ್ಟೆ. ಅವರಿನ್ನೂ ಬರಲಿಲ್ಲವಾದ್ದರಿಂದ ಅವರನ್ನು ತ್ವರೆಪಡಿಸುವುದಕ್ಕಾಗಿ ಇನ್ನೂ ಕೆಲವು ಶೀಘ್ರಗಾಮಿ ಗಳಾದ ವಾನರರನ್ನು ನಿಯೋಜಿಸು. ಇಂದಿಗೆ ಹತ್ತು ದಿನಗಳೊಳಗಾಗಿ ಯಾರು ಇಲ್ಲಿಗೆ ಬಂದು ಸೇರುವುದಿಲ್ಲವೋ ಅವರು ರಾಜಾಜ್ಞೆಯನ್ನು ಮುರಿದರೆಂದು ತಿಳಿಯತಕ್ಕದ್ದು. ಆ ದುರಾತ್ಮರಿಗೆ ಮರಣದಂಡನೆಯನ್ನು ವಿಧಿಸಲಾಗುವುದು. ಇದು ನನ್ನ ಆಜ್ಞೆ'' ಎಂದನು. ಅಷ್ಟರಲ್ಲಿಯೇ ಹಿಂದಿನ ಆಜ್ಞೆಯಂತೆ ಬಹಳಮಂದಿ ಕಪಿನಾಯಕರು ಕಿಷ್ಕಿಂಧೆಗೆ ಬರತೊಡಗಿದರು. ಸುಗ್ರೀವನು ಅವರಿಂದ ಕಾಣಿಕೆಯನ್ನು ಸ್ವೀಕರಿಸಿ ಎಲ್ಲರನ್ನೂ ಸಮ್ಮಾನಿಸಿದನಲ್ಲದೆ ತನ್ನ ಕಾರ್ಯವು ಸಿದ್ಧಿಸಿತೆಂದು ಸಂತೋಷಿಸಿದನು.

ಅನಂತರ ಒಂದು ಉತ್ತಮವಾದ ಪಲ್ಲಕ್ಕಿಯನ್ನು ತರಿಸಿ ತಾನೂ ಲಕ್ಷ್ಮಣನೂ ಅದರಲ್ಲಿ ಕುಳಿತು ವಾನರನಾಯಕರೊಡನೆ ಶ್ರೀರಾಮನ ಬಳಿಗೆ ತೆರಳಿದನು. ಎಲ್ಲರೂ ಪ್ರಸ್ರವಣಗಿರಿಗೆ ಹೋದರು. ಆ ವಾನರ ಸೇನೆಯನ್ನು ನೋಡಿ ಶ್ರೀರಾಮನಿಗೆ ಸುಗ್ರೀವನಲ್ಲಿ ನಂಬಿಕೆಯುಂಟಾಯಿತು. ಬಳಿಗೆ ಬಂದು ನಮಸ್ಕರಿಸಿದ ಸುಗ್ರೀವನನ್ನು ಶ್ರೀರಾಮನು ಪ್ರೇಮಾದರಗಳಿಂದ ಅಪ್ಪಿಕೊಂಡು ''ಮಿತ್ರ, ಕುಳಿತುಕೋ'' ಎಂದು ಆದರದಿಂದ ಉಪಚರಿಸಿದನು. ಕಾಕುತ್ಸ್ಥನು ಆ ವಾನರೇಶ್ವರನನ್ನು ನೋಡಿ ''ವಾನರೇಂದ್ರ, ಮುಂದಿನ ಕರ್ತವ್ಯವೇನೆಂಬುದನ್ನು ನಿನ್ನ ಸಚಿವರೊಡನೆ ಸಮಾಲೋಚಿಸು'' ಎಂದನು. ಸುಗ್ರೀವನು ಕಾಕುತ್ಸ್ಥನನ್ನು ನೋಡಿ ''ಓ ಮಹಾಬಾಹು, ನನ್ನ ಕೈಬಿಟ್ಟು ಹೋದ ಸಂಪತ್ತು, ವಾನರಾಧಿಪತ್ಯ–ಇವೆಲ್ಲವೂ ನಿನ್ನ ಅನುಗ್ರಹದಿಂದ ಪುನಃ ಲಭಿಸಿದವು. ಉಪಕಾರಕ್ಕೆ ಪ್ರತಿಯಾಗಿ ಉಪಕಾರವನ್ನು ಮಾಡದವನು ಪುರುಷಾಧಮನೇ ಸರಿ. ನನ್ನ ಆದೇಶದಂತೆ ಈಗಾಗಲೇ ಬಹುಮಂದಿ

ಕಪಿನಾಯಕರು ಬಂದಿದ್ದಾರೆ. ಇನ್ನೂ ಕೋಟಿ ಕೋಟಿ ಸಂಖ್ಯೆಯಲ್ಲಿ ಸದ್ಯದಲ್ಲಿಯೇ ಬರತಕ್ಕವರಿದ್ದಾರೆ. ಶ್ರೀರಾಮ, ಆ ಕಪಿವೀರರು ದೇವೇಂದ್ರನಿಗೆ ಸರಿದೂಗುವ ಪರಾಕ್ರಮಿಗಳು. ಆ ವೀರರು ರಾಕ್ಷಸಾಧಮನಾದ ರಾವಣನನ್ನು ರಣರಂಗದಲ್ಲಿ ಕೊಂದು ಮೈಥಿಲಿಯನ್ನು ನಿನಗೆ ತಂದೊಪ್ಪಿಸುವರು'' ಎಂದನು. ಕಪಿಶ್ರೇಷ್ಠನಾದ ಸುಗ್ರೀವನ ಆ ನುಡಿಗಳನ್ನು ಕೇಳಿ ಶ್ರೀರಾಮನಿಗೆ ಹರ್ಷವಾಯಿತು. ಕೈ ಮುಗಿದು ಕೊಂಡಿದ್ದ ಆತನನ್ನು ರಾಘವನು ಪ್ರೀತಿಯಿಂದ ಅಪ್ಪಿಕೊಂಡು ''ಮಿತ್ರ–ಸುಗ್ರೀವ, ನೀನು ಗುಣಶಾಲಿ ಎಂಬುದನ್ನೂ ಪ್ರಿಯವಾದಿಯೆಂಬುದನ್ನೂ ನಾನು ಬಲ್ಲೆ. ನಿನ್ನ ಸಹಾಯದಿಂದ ಸಕಲ ಶತ್ರುಗಳನ್ನೂ ರಣದಲ್ಲಿ ನಾನು ಜಯಿಸಬಲ್ಲೆ. ನಿನ್ನಂತಹ ಸತ್ಯಸಂಧನಾದ ವೀರನು ಮಿತ್ರರಿಗೆ ಉಪಕಾರ ಮಾಡುವುದರಲ್ಲಿ ಅಚ್ಚರಿ ಏನಿದೆ?'' ಎಂದನು. ಅಷ್ಟರಲ್ಲಿ ಮಹತ್ತರವಾದ ರಜೋರಾಶಿಯು ಗಗನವನ್ನಡರಿತು. ಭೂಮಿಯು ನಡುಗಿದಂತಾಯಿತು. ಸ್ವಲ್ಪ ಹೊತ್ತಿನಲ್ಲಿಯೇ ಪರ್ವತಾಕಾರರೂ ತೀಕ್ಷ್ಣದಂಷ್ಟ್ರರೂ ಮಹಾಬಲರೂ ಆದ ಲೆಕ್ಕವಿಲ್ಲದಷ್ಟು ವಾನರರು ಬಂದು ಸಮಸ್ತ ಪ್ರದೇಶವನ್ನೂ ಆವರಿಸಿಬಿಟ್ಟರು. ಬಲಾಢ್ಯರಾದ ಅವರು ಮೋಡದಂತೆ ಗುಡುಗುತ್ತ ಬಂದರು. ಸುಷೇಣ, ಶತಬಲಿ, ಕೇಸರಿ, ಧೂಮ್ರ, ನೀಲ, ಗವಯ, ಮೈಂದ ದ್ವಿವಿದರು, ಜಾಂಬವಂತ, ಗಂಧಮಾದನ, ನಳ, ದಧಿಮುಖ–ಮೊದಲಾದ ಕಪಿ ನಾಯಕರು ಲಕ್ಷ ಲಕ್ಷ ಸಂಖ್ಯೆಯಲ್ಲಿದ್ದ ವೀರ ಯೋಧರೊಡನೆ ಬಂದು ಸಮಾವೇಶ ಗೊಂಡರು. ಆ ನಾಯಕರು ಸುಗ್ರೀವನನ್ನು ಕಂಡು ತಲೆಬಾಗಿ ವಂದಿಸಿದರು.

೩೭

ಸೀತಾನ್ವೇಷಣೆಗಾಗಿ ಸುಗ್ರೀವನು ವಾನರರನ್ನು ನಾನಾ ದಿಕ್ಕುಗಳಿಗೆ ಕಳಿಸುವುದು

ಸುಗ್ರೀವನು ಅವರೆಲ್ಲರ ಯೋಗಕ್ಷೇಮಗಳನ್ನು ವಿಚಾರಿಸಿ ರಾಘವನ ಬಳಿಗೆ ಬಂದು ''ದಾಶರಥಿ, ಇತ್ತನೋಡು. ಮಹಾಪರಾಕ್ರಮಿಗಳಾದ ವಾನರಸೇನಾಪತಿಗಳು ತಮ್ಮ ಸೈನಿಕರೊಡನೆ ಬಂದು ನೆರೆದಿದ್ದಾರೆ. ಇವರೆಲ್ಲರೂ ನನ್ನ ಆಜ್ಞೆಯಂತೆ ಆಗಮಿಸಿದ್ದಾರೆ. ಎಲ್ಲರೂ ನಿನ್ನ ಕಿಂಕರರೆಂದು ತಿಳಿ. ಈಗ ಇವರು ಏನು ಮಾಡಬೇಕೆಂಬುದನ್ನು ಗೊತ್ತುಪಡಿಸಿ ನೀನೇ ಆಜ್ಞೆಯನ್ನು ಕೊಡು'' ಎಂದು ನಿವೇದಿಸಿದನು. ಆ ದಶರಥನಂದನನು ಸುಗ್ರೀವನನ್ನು ಅಪ್ಪಿಕೊಂಡು ''ಸುಗ್ರೀವ, ನನ್ನ ಸೀತೆಯು ಬದುಕಿರುವಳೋ ಇಲ್ಲವೋ ಎಂಬುದನ್ನು ಮೊದಲು ತಿಳಿಯ ಬೇಕಾಗಿದೆ. ಅವಳು ಬದುಕಿರುವಳೆಂಬುದೂ ರಾವಣನಿರುವ ಸ್ಥಳವೂ

ಗೊತ್ತಾದಮೇಲೆ, ಸಮಯೋಚಿತವಾದ ಕಾರ್ಯವನ್ನು ಕೈಗೊಳ್ಳುವೆನು. ಸೀತೆಯನ್ನು ಹುಡುಕಿಸುವ ಕಾರ್ಯವು ನಿನ್ನಿಂದಾಗಬೇಕು. ನೀನೇ ಇದಕ್ಕೆ ಪ್ರಭು'' ಎಂದನು. ಆಮೇಲೆ ವಾನರೇಂದ್ರನಾದ ಸುಗ್ರೀವನು ಕೆಲವು ಕಪಿ ಸೇನಾನಿಗಳನ್ನು ಬಳಿಗೆ ಕರೆಸಿದನು. ಶ್ರೀರಾಮ ಲಕ್ಷ್ಮಣರೆದುರಿಗೆ ಈ ಪ್ರಕಾರವಾಗಿ ಆಜ್ಞೆಯನ್ನಿತ್ತನು. ''ಎಲೈ ವೀರಸೇನಾನಿಗಳೆ, ನನಗೆ ಆಪ್ತಮಿತ್ರನೂ ಅಸಾಧಾರಣ ಪರಾಕ್ರಮಿಯೂ ಆದ ಶ್ರೀ ರಾಮನು ಅಯೋಧ್ಯಾಧಿಪತಿಯಾದ ದಶರಥ ಮಹಾರಾಜನ ಪುತ್ರ. ಲಕ್ಷ್ಮಣನೆಂಬ ಈ ವೀರಾಗ್ರಣಿಯು ಅವನ ತಮ್ಮ. ಶ್ರೀರಾಮನ ಧರ್ಮಪತ್ನಿಯಾದ ಸೀತಾದೇವಿ ಯೆಂಬ ರಾಜಕುಮಾರಿಯನ್ನು ರಾಕ್ಷಸ ರಾಜನಾದ ರಾವಣನು ಕಳ್ಳತನದಿಂದ ಅಪಹರಿಸಿಕೊಂಡು ಹೋಗಿದ್ದಾನೆ. ಅವಳನ್ನು ಎಲ್ಲಿ ಇಟ್ಟಿರುವನೆಂಬುದು ತಿಳಿಯದು. ಆ ಕೋಮಲಾಂಗಿಯು ಎಲ್ಲಿದ್ದಾಳೆಂಬುದನ್ನು ಮೊದಲು ಪತ್ತೆ ಮಾಡಬೇಕಾಗಿದೆ. ಈ ಕಾರ್ಯವನ್ನು ಯಶಸ್ವಿಯಾಗಿ ನೀವು ನಿರ್ವಹಿಸುತ್ತೀರೆಂದು ನಂಬಿದ್ದೇನೆ. ಇದಕ್ಕಾಗಿಯೇ ನಿಮ್ಮನ್ನು ನಾನು ಕರೆಸಿರುವುದು. ಬಹಳ ಜಾಗರೂಕತೆಯಿಂದಲೂ ಶ್ರದ್ಧೆಯಿಂದಲೂ ಈ ಹೊಣೆಯನ್ನು ಹೊತ್ತು ನಿರ್ವಹಿಸಬೇಕಾಗಿದೆ. ಈ ರಾಜಾಜ್ಞೆಯನ್ನು ನೀವೆಲ್ಲರೂ ಪಾಲಿಸತಕ್ಕದ್ದು'' ಎಂದು ತಿಳಿಸಿದನು.

ಅನಂತರ ವಿನತನೆಂಬ ಸೇನಾಪತಿಯನ್ನು ಕರೆದು ''ಎಲೈ ವಾನರೋತ್ತಮ, ನೀನು ವೇಗಶಾಲಿಗಳಾದ ಒಂದು ಲಕ್ಷವಾನರರನ್ನು ಕರೆದುಕೊಂಡು ಪೂರ್ವದಿಕ್ಕಿಗೆ ಹೋಗತಕ್ಕದ್ದು. ದೇಶಕಾಲ ನೀತಿಗಳನ್ನನುಸರಿಸಿ ಎಲ್ಲ ಕಡೆಯಲ್ಲಿಯೂ ಶೋಧಿಸಬೇಕು. ಜನಕಪುತ್ರಿಯಾದ ಸೀತಾದೇವಿಯನ್ನೂ ಈಗ ರಾವಣನು ಇರುವ ವಾಸಸ್ಥಾನವನ್ನೂ ಕಂಡುಹಿಡಿಯಬೇಕು'' ಎಂದು ಆಜ್ಞಾಪಿಸಿ ಆ ದಿಕ್ಕಿನಲ್ಲಿದ್ದ ಪರಿಚಿತ ಸ್ಥಳಗಳನ್ನು ಸ್ಥೂಲವಾಗಿ ತಿಳಿಸಿದನು. ಈ ಪ್ರಕಾರವಾಗಿ ಪಶ್ಚಿಮ, ಉತ್ತರ ದಿಕ್ಕುಗಳಿಗೆ ಬೇರೆ ಬೇರೆ ಕಪಿವೀರರನ್ನು ಗೊತ್ತುಮಾಡಿ ಸೀತಾದೇವಿಯನ್ನು ಹುಡುಕುವಂತೆ ಆಜ್ಞಾಪಿಸಿದನು. ಅನಂತರ ಕಾರ್ಯಸಮರ್ಥರೆಂದು ನಿರ್ಣೀತರಾದ ವಾನರೋತ್ತಮರನ್ನು ಕುರಿತು ದಕ್ಷಿಣದಿಕ್ಕಿಗೆ ಹೋಗುವಂತೆ ನಿಯಮಿಸಿದನು. ಅವರು ಯಾರೆಂದರೆ–ನೀಲ, ಹನುಮಂತ, ಜಾಂಬವಂತ, ಸುಹೋತ್ರ, ಗವಯ, ಗವಾಕ್ಷ, ಮೈಂದ, ದ್ವಿವಿದ, ಗಂಧಮಾದನ ಮೊದಲಾದವರು. ಯುವರಾಜನಾದ ಅಂಗದನು ಅವರೆಲ್ಲರಿಗೂ ನಾಯಕನಾಗುವಂತೆ ಗೊತ್ತುಮಾಡಿದನು. ಅವರೆಲ್ಲರನ್ನೂ ಕುರಿತು ''ಎಲೈ ಕಪಿ ವೀರರೆ, ನೀವು ದಕ್ಷಿಣ ದಿಕ್ಕಿನಲ್ಲಿ ಯಾವ ಸ್ಥಳವನ್ನೂ ಬಿಡದೆ ಶೋಧಿಸಬೇಕು. ಬಹಳ ಮುಂದೆ ಹೋದಮೇಲೆ ಒಂದು ಮಹಾಸಾಗರವು ಗೋಚರಿಸುತ್ತದೆ. ಆ ಸಮುದ್ರದ ನಡುವೆ ವಿಸ್ತೀರ್ಣವಾದ ಒಂದು ದ್ವೀಪವಿದೆ. ಆ ದ್ವೀಪದಲ್ಲಿ ನೀವು ಜಾನಕಿಯನ್ನು

ಸರಿಯಾಗಿ ಅನ್ವೇಷಿಸಿರಿ. ದುಷ್ಟನೂ, ವಧಾರ್ಹನೂ ಆದ ರಾವಣನ ರಾಜಧಾನಿ ಆ ದ್ವೀಪದಲ್ಲಿದೆ. ಬಹುಶಃ ಅಲ್ಲಿಯೇ ರಾವಣನು ಸೀತಾದೇವಿಯನ್ನು ಇಟ್ಟಿರಬೇಕು. ಎಲೈ ವೀರರೆ, ಆ ದ್ವೀಪವನ್ನು ಮತ್ತೆ ಮತ್ತೆ ಹುಡುಕಿ ನೋಡಿರಿ. ಸಮುದ್ರವನ್ನು ದಾಟುವಾಗ ಆ ದಕ್ಷಿಣ ಸಮುದ್ರದ ಮಧ್ಯದಲ್ಲಿ ಒಬ್ಬ ರಾಕ್ಷಸಿ ಇದ್ದಾಳೆ. ಅದು ನೆನಪಿರಲಿ. ಈ ಪ್ರಕಾರವಾಗಿ ನೀವು ದಕ್ಷಿಣದಿಕ್ಕೆಲ್ಲವನ್ನೂ ಶೋಧಿಸಿದರೆ ನಿಮಗೆ ಯಶಸ್ಸು ನಿಶ್ಚಯವಾಗಿ ದೊರೆಯುವುದು. ನಿಮ್ಮಲ್ಲಿ ಯಾವನು ಒಂದು ತಿಂಗಳೊಳಗಾಗಿ ಹಿಂದಿರುಗಿ ಬಂದು ಸೀತಾದೇವಿಯನ್ನು ಕಂಡೆನು ಎಂದು ಹೇಳುವನೋ ಅವನು ನನಗೆ ಸಮಾನನಾಗಿ ವೈಭವದಿಂದ ಮೆರೆಯುವನು. ಆತನು ನನ್ನ ಪ್ರಾಣಕ್ಕಿಂತಲೂ ಪ್ರಿಯತಮನೆಂದು ಭಾವಿಸುವೆನು. ಆತನು ಮಾಡುವ ಸಕಲ ಅಪರಾಧಗಳನ್ನೂ ಕ್ಷಮಿಸುವೆನು'' ಎಂದು ತಿಳಿಸಿದನು. ಅನಂತರ ಎಲ್ಲರನ್ನೂ ಕುರಿತು ''ಎಲೈ ವೀರರೆ, ನೀವು ಸತ್ಕುಲದಲ್ಲಿ ಜನಿಸಿದ ಮಹಾಪರಾಕ್ರಮಿಗಳೂ ಸ್ವಾಮಿಭಕ್ತರೂ ಆಗಿದ್ದೀರಿ. ನೀವು ಶ್ರೀರಾಮನ ಪತ್ನಿಯಾದ ಸೀತಾದೇವಿಯನ್ನು ಅರಸಲೇಬೇಕು. ಈ ಕಾರ್ಯವನ್ನು ಸಾಧಿಸಿದರೆ ಮಹಾತ್ಮನಾದ ಶ್ರೀರಾಮನಿಗೆ ಪರಮ ಸಂತೋಷವಾಗುವುದು. ಅದಕ್ಕಿಂತಲೂ ಹೆಚ್ಚಾಗಿ ನನಗೆ ಆನಂದವಾಗುವುದು. ನೀವು ಕೃತ ಕೃತ್ಯರಾಗಿ ಬಂದರೆ ನಿಮಗೆ ಪ್ರಿಯವಾದ ಸಕಲ ವಸ್ತುಗಳನ್ನೂ ಕೊಟ್ಟು ಸಂಮಾನಿಸುವೆನು. ಇಂದಿನಿಂದ ಒಂದು ತಿಂಗಳ ಅವಧಿಯನ್ನು ಕೊಟ್ಟಿದ್ದೇನೆ. ಅವಧಿಯನ್ನು ಮೀರಿದರೆ ತೀವ್ರ ದಂಡನೆಗೆ ಗುರಿಯಾಗುತ್ತೀರಿ'' ಎಂದನು.

ಈ ಮಹಾಕಾರ್ಯವನ್ನು ಸಾಧಿಸಿದರೆ ಹನುಮಂತನೇ ಸಾಧಿಸುವನೆಂದು ಸುಗ್ರೀವನಿಗೆ ಆತನಲ್ಲಿ ಅತಿಶಯವಾದ ವಿಶ್ವಾಸವಿತ್ತು. ಆದ್ದರಿಂದ ಅವನು ಹನುಮಂತನನ್ನು ತನ್ನ ಬಳಿಗೆ ಕರೆದು, ''ವಾನರೋತ್ತಮ, ನಿನ್ನ ಗತಿವೇಗಕ್ಕೆ ತಡೆ ಎಂಬುದೇ ಇಲ್ಲ. ನಿನ್ನ ಗಮನಶಕ್ತಿ, ನಿನ್ನ ವೇಗ, ನಿನ್ನ ತೇಜಸ್ಸು, ನಿನ್ನ ಶೀಘ್ರಕಾರಿತೆ, ಇವೆಲ್ಲವೂ, ವೀರಾಗ್ರಣಿ, ಅಸದೃಶವಾದ ಅದ್ಭುತ ಗುಣಗಳು. ಪರಾಕ್ರಮದಲ್ಲಿ ನಿನಗೆ ಸಮಾನನಾದ ಇನ್ನೊಬ್ಬನು ಈ ಪ್ರಪಂಚದಲ್ಲಿಲ್ಲ. ಹನುಮಂತ, ಬಲ ಬುದ್ಧಿಪರಾಕ್ರಮಗಳು ನಿನ್ನಲ್ಲಿಯೇ ನೆಲೆಸಿವೆ. ನೀತಿಕೋವಿದನಾದ ನೀನು, ಸೀತಾದೇವಿಯು ಹೇಗೆ ಲಭಿಸಿಯಾಳೆಂಬುದನ್ನು ನೋಡಿಕೊಳ್ಳಬೇಕು'' ಎಂದು ಹೇಳಿದನು. ಆಗ ಸುಗ್ರೀವನು ಹನುಮಂತನಿಗೆ ಈ ಕಾರ್ಯಭಾರವನ್ನು ಹೊರಿಸುತ್ತಿರುವುದನ್ನು ಶ್ರೀರಾಮನು ಗಮನಿಸಿದನು. ಹನುಮಂತನ ಜಾಣ್ಮೆ ಸಾಮರ್ಥ್ಯ ಮೊದಲಾದುದರ ಪರಿಚಯ ಆತನಿಗೆ ತಕ್ಕ ಮಟ್ಟಿಗೆ ತಿಳಿದೇಯಿತ್ತು. ಆದ್ದರಿಂದ ರಾಘವನು ತನ್ನ ಮನಸ್ಸಿನಲ್ಲಿ ''ಈ ಕಪಿರಾಜನು ಹನುಮಂತನಲ್ಲಿ

ವಿಶೇಷವಾದ ನಂಬಿಕೆಯನ್ನಿಟ್ಟಿದ್ದಾನೆ. ಈತನ ಸಾಮರ್ಥ್ಯವು ಸುಗ್ರೀವನಿಗೆ ತಿಳಿದಿದೆ. ಹನುಮಂತನೇ ಈ ಕಾರ್ಯವನ್ನು ಸಾಧಿಸುವುದು ನಿಶ್ಚಯ'' ಎಂದು ಆಲೋಚಿಸಿದನು. ಕಾರ್ಯೋನ್ಮುಖನಾಗಿ ಪ್ರಯಾಣಕ್ಕೆ ಸಜ್ಜಾಗಿ ನಿಂತಿದ್ದ ಆಂಜನೇಯನನ್ನು ಶ್ರೀರಾಮನು ತನ್ನ ಬಳಿಗೆ ಕರೆದು ''ಹೇ ವೀರಾಗ್ರಣಿ, ನಿನ್ನ ಉತ್ಸಾಹ ಬಲ ಪರಾಕ್ರಮಗಳು ಅಸಾಧಾರಣವಾದವು. ನಿನ್ನಿಂದಲೇ ನನ್ನ ಕಾರ್ಯವು ಕೈಗೂಡುವುದೆಂದು ನನ್ನ ಹೃದಯವು ಸಾರಿ ಹೇಳುತ್ತಿದೆ. ಓ ಹನುಮಂತ, ನಿನ್ನನ್ನು ನಂಬಿದ್ದೇನೆ. ನಿನಗೆ ಯಶಸ್ಸು ಲಭಿಸಲಿ'' ಎಂದು ನುಡಿದನು. ಅನಂತರ ಶ್ರೀರಾಮನು ತನ್ನ ನಾಮಾಂಕಿತವಾದ ಉಂಗುರವನ್ನು ಬೆರಳಿಂದ ತೆಗೆದು, ಕೈ ಮುಗಿದು ನಿಂತಿದ್ದ ಹನುಮಂತನನ್ನು ನೋಡಿ ''ಹನುಮಂತ, ನನ್ನ ಸೀತೆಯನ್ನು ನೀನು ಕಾಣುವೆ. ನಿನ್ನಲ್ಲಿ ಅವಳಿಗೆ ನಂಬಿಕೆಯಾಗಲೆಂದು ಈ ಅಂಗುಲೀಯಕವನ್ನು ಕೊಡುತ್ತೇನೆ. ಇದನ್ನು ಆಕೆಗೆ ಕೊಡು,'' ಎಂದು ಕಂಬನಿಗರೆಯುತ್ತ ಆ ಉಂಗುರವನ್ನು ಹನುಮಂತನ ಕೈಯಲ್ಲಿಟ್ಟನು. ಪವನ ತನಯನಾದ ಆಂಜನೇಯನು ಆ ಉಂಗುರವನ್ನು ತನ್ನ ಸೆರಗಿನಲ್ಲಿ ಭದ್ರಪಡಿಸಿಕೊಂಡು ಶ್ರೀರಾಮನಿಗೆ ನಮಸ್ಕರಿಸಿದನು. ಅನಂತರ ಎಲ್ಲ ಕಪಿನಾಯಕರೂ ತಮ್ಮ ತಮ್ಮ ಸೇನೆಯೊಡನೆ ಗೊತ್ತಾದ ದಿಕ್ಕುಗಳಿಗೆ ಉತ್ಸಾಹದಿಂದ ಪ್ರಯಾಣ ಮಾಡಿದರು. ಇತ್ತ ಶ್ರೀರಾಮನು ಸೀತಾನ್ವೇಷಣಕ್ಕೆ ಗೊತ್ತಾದ ಒಂದು ತಿಂಗಳ ಅವಧಿಯನ್ನು ನಿರೀಕ್ಷಿಸುತ್ತ ಲಕ್ಷ್ಮಣನೊಡನೆ ಪ್ರಸ್ರವಣಗಿರಿಯಲ್ಲಿ ವಾಸವಾಗಿದ್ದನು.

೩೮

ದಕ್ಷಿಣ ದಿಕ್ಕಿಗೆ ಅಂಗದ, ಹನುಮಂತ–ಮೊದಲಾದವರ ಪ್ರಯಾಣ ಸ್ವಯಂಪ್ರಭೆಯ ದರ್ಶನ. ಸಂಪಾತಿಯ ವೃತ್ತಾಂತ

ವೈದೇಹಿಯ ದರ್ಶನಕ್ಕಾಗಿ ಸುಗ್ರೀವನಿಂದ ಆಜ್ಞಪ್ತರಾದ ಕಪಿನಾಯಕರು, ಆತನು ತಿಳಿಸಿದಂತೆ ಬೇರೆ ಬೇರೆ ದಿಕ್ಕುಗಳಿಗೆ ಹೋದರು. ತಮಗೆ ಸೂಕ್ತವೆನಿಸಿದ ನಗರ, ಹಳ್ಳಿ, ಅರಣ್ಯ, ಬೆಟ್ಟ, ಬಯಲು ಪ್ರದೇಶ, ನದಿ, ಗುಹೆ ಮೊದಲಾದ ದುರ್ಗಮವಾದ ಸ್ಥಳಗಳಲ್ಲಿ ಅರಸಿದರು. ಅವರೆಲ್ಲರೂ ಜಾನಕಿಯನ್ನು ಹುಡುಕಲೇಬೇಕೆಂದು ನಿಶ್ಚಯಿಸಿ ಹಗಲಿನಲ್ಲಿ ಕಾರ್ಯೋನ್ಮುಖರಾಗಿ ರಾತ್ರಿಯಲ್ಲಿ ಒಂದುಕಡೆ ಬಂದು ಸೇರುತ್ತಿದ್ದರು. ಹೀಗೆ ಪೂರ್ವ, ಪಶ್ಚಿಮ, ಉತ್ತರ ದಿಕ್ಕುಗಳಿಗೆ ಹೋದ ವಾನರರು ಒಂದು ತಿಂಗಳವರೆಗೆ ಬಹಳ ಶ್ರಮದಿಂದ ಹುಡುಕುತ್ತ, ವಿಚಾರಿಸುತ್ತ ತಮ್ಮ ಕೈಲಾದ ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ಫಲವಾಗಲಿಲ್ಲ.

ಎಲ್ಲರೂ ನಿರಾಶರಾಗಿ ಕಿಷ್ಕಿಂಧೆಗೆ ಬಂದು ಮಹಾರಾಜನಾದ ಸುಗ್ರೀವನಿಗೆ ತಮ್ಮ ವೈಫಲ್ಯವನ್ನು ನಿವೇದಿಸಿದರು. ದಕ್ಷಿಣದಿಕ್ಕಿನಲ್ಲಿ ಪ್ರಯಾಣ ಮಾಡಿದ ಹನುಮಂತ, ಅಂಗದಾದಿಗಳಿಂದಲೇ ಸೀತಾನ್ವೇಷಣೆಯು ಸಾಧ್ಯವಾಗುತ್ತದೆಂದು ಸುಗ್ರೀವನು ತಾಳ್ಮೆಯಿಂದ ಇದ್ದನು.

ಇತ್ತಲಾಗಿ ಅಂಗದನೇ ಮೊದಲಾದ ವಾನರ ವೀರರು ದಕ್ಷಿಣ ದಿಕ್ಕಿನಲ್ಲಿ ವೈದೇಹಿಯನ್ನು ಹುಡುಕಲು ಸತತವಾದ ಪ್ರಯತ್ನವನ್ನು ಮಾಡುತ್ತ ಮುಂದೆ ಮುಂದೆ ಹೋದರು. ಕಡೆಗೆ ಒಂದು ದಿನ ಧೀಮಂತನಾದ ಅಂಗದನು ವಾನರರನ್ನು ಕುರಿತು ''ಮಿತ್ರರೆ, ಇಷ್ಟು ಪ್ರದೇಶಗಳಲ್ಲಿ ಹುಡುಕಿದರೂ ಜಾನಕಿಯು ನಮಗೆ ಗೋಚರಿಸಲಿಲ್ಲ. ಅವಳನ್ನು ಅಪಹರಿಸಿದ ರಾಕ್ಷಸನೂ ನಮಗೆ ಕಾಣಿಸಲಿಲ್ಲ. ಕಾಲವಾದರೋ ಬಹಳವಾಗಿ ಕಳೆದು ಹೋಯಿತು. ನಾವು ಇನ್ನೂ ಉತ್ಸಾಹದಿಂದ ಈ ಕಾರ್ಯದಲ್ಲಿ ತೊಡಗಬೇಕು. ಸ್ನೇಹಿತರೆ, ಈಗ ಸುಗ್ರೀವನು ರಾಜನೆಂಬುದನ್ನು ಮರೆಯದಿರಿ. ಅವನು ವಿಧಿಸುವ ದಂಡನೆಯು ಉಗ್ರವಾದದ್ದು. ನಾವೀಗ ಏನು ಮಾಡಬೇಕೆಂಬುದನ್ನು ಆಲೋಚಿಸಿರಿ'' ಎಂದನು. ಆಗ ಕಪಿಶ್ರೇಷ್ಠನಾದ ಹನುಮಂತನು ''ಇನ್ನೂ ಮುಂದೆ ಮುಂದೆ ಹೋಗಿ ಜಾನಕಿಯನ್ನು ಹುಡುಕುವುದೇ ನಮ್ಮ ಗುರಿಯಾಗಿರಲಿ. ಉತ್ಸಾಹದಿಂದ ಮುಂದೆ ಬನ್ನಿರಿ'' ಎಂದು ಹೇಳಿದನು. ಮುಂದಕ್ಕೆ ಹೋದರು. ಅಲ್ಲಿ ಒಂದು ಪರ್ವತ ಗುಹೆಯಿಂದ ಹಂಸಗಳೇ ಮೊದಲಾದ ಜಲಚರ ಪಕ್ಷಿಗಳು ಹಾರಿಬರುತ್ತಿದ್ದವು. ಆ ಗುಹೆಯೊಳಗೆ ಯಾವುದೋ ಜಲಾಶಯವಿದೆ ಎಂದು ಹನುಮಂತನು ನಿಶ್ಚಯಿಸಿದನು. ವಾನರರೆಲ್ಲರಿಗೂ ಬಹಳ ಬಾಯಾರಿಕೆಯಾಗಿತ್ತು. ಆ ಜಲಾಶಯಕ್ಕೆ ಹೋಗಿ ನೀರು ಕುಡಿಯೋಣವೆಂದು ಆಲೋಚಿಸಿ ಅವರೆಲ್ಲರೂ ಆ ಗುಹೆಯನ್ನು ಪ್ರವೇಶಿಸಿದರು. ಹನುಮಂತನು ಊಹಿಸಿದಂತೆ ಅಲ್ಲೊಂದು ವಿಶಾಲವಾದ ಜಲಾಶಯವಿತ್ತು. ಅದರಲ್ಲಿ ತಿಳಿನೀರು ತುಂಬಿತ್ತು. ವಾನರರು ಮುಂದೆ ನೋಡಲಾಗಿ ಒಂದು ಸುಂದರವಾದ ದೊಡ್ಡ ಪ್ರಾಸಾದವು ಕಾಣಿಸಿತು. ಆಶ್ಚರ್ಯಚಕಿತರಾದ ಅವರೆಲ್ಲರೂ ಸುತ್ತಲೂ ನೋಡುತ್ತ ಭವ್ಯವಾದ ಆ ಪ್ರಾಸಾದದ ಬಳಿಗೆ ಹೋದರು. ಧೈರ್ಯದಿಂದ ಒಳಗೆ ಪ್ರವೇಶಿಸಲಾಗಿ ಒಬ್ಬ ಸುಂದರಿಯಾದ ಸ್ತ್ರೀ ವ್ಯಕ್ತಿ ಗೋಚರಿಸಿದಳು. ಅವಳು ಕೃಷ್ಣಾಜಿನವನ್ನು ಧರಿಸಿ ನಿಯತಾಹಾರಳಾಗಿ ತಪಸ್ಸು ಮಾಡುತ್ತಿದ್ದಳು. ತೇಜಸ್ವಿನಿಯಾದ ಆ ತಾಪಸಿಯನ್ನು ಕಂಡೊಡನೆ ಈ ಕಪಿವೀರರು ಹೆದರಿ ಗಪ್ಪನೆ ದೂರದಲ್ಲಿ ನಿಂತರು. ಹನುಮಂತನು ಮುಂದೆ ಬಂದು ಕೈ ಮುಗಿದುಕೊಂಡು ಆ ಸ್ತ್ರೀಯನ್ನು ನೋಡಿ ''ದೇವಿ, ನೀನು ಯಾರು? ಈ ಭವನವೂ ಈ ಗುಹೆಯೂ ಯಾರದು?'' ಎಂದು ಕೇಳಿದನು. ಆ

ತಪಸ್ವಿನಿಯು ಹನುಮಂತನ ವಿನಯ ವಾಕ್ಯಗಳಿಂದ ಪ್ರಸನ್ನಳಾಗಿ ''ಹೇ ವಾನರೋತ್ತಮ, ಹಿಂದೆ ಮಯನೆಂಬ ದಾನವೋತ್ತಮನಿದ್ದನು. ಆತನು ತನ್ನ ವಿಚಿತ್ರಶಕ್ತಿಯಿಂದ ಈ ದಿವ್ಯ ಭವನವನ್ನೂ ಸರೋವರವೇ ಮೊದಲಾದವನ್ನು ನಿರ್ಮಿಸಿದ್ದಾನೆ. ಅವನು ಹೇಮೆಯೆಂಬ ಅಪ್ಸರಸ್ತ್ರೀಯಲ್ಲಿ ಅನುರಕ್ತನಾಗಿದ್ದನು. ಒಂದಾನೊಂದು ಕಾರಣದಿಂದ ದೇವೇಂದ್ರನು ಮಯನನ್ನು ಕೊಂದನು. ನಾನು ಹೇಮೆಯ ಗೆಳತಿ. ನನ್ನ ಹೆಸರು ಸ್ವಯಂಪ್ರಭೆ. ಹೇಮೆಯು ನನಗೆ ಈ ಸ್ಥಳವೆಲ್ಲವನ್ನೂ ಒಪ್ಪಿಸಿ ಹೊರಟುಹೋದಳು. ನಾನು ಇಲ್ಲಿ ತಪಸ್ಸು ಮಾಡಿಕೊಂಡಿದ್ದೇನೆ. ನೀವೆಲ್ಲರೂ ದಣಿದಿದ್ದೀರಿ. ಮೊದಲು ಇಲ್ಲಿರುವ ಹಣ್ಣುಗಳನ್ನು ತಿಂದು ನೀರನ್ನು ಕುಡಿದು ಹಸಿವು ಬಾಯಾರಿಕೆಗಳನ್ನು ನೀಗಿಸಿಕೊಳ್ಳಿರಿ. ಆಮೇಲೆ ನಿಮ್ಮ ವೃತ್ತಾಂತವನ್ನು ತಿಳಿಸಿರಿ'' ಎಂದಳು.

ವಾನರರು ಸಂತೋಷದಿಂದ ಹಣ್ಣು ಮತ್ತು ಕಂದಮೂಲ ಫಲಗಳನ್ನು ತಿಂದು ನೀರುಕುಡಿದು ತೃಪ್ತರಾದರು. ಆಮೇಲೆ ಹನುಮಂತನು ಬಂದು ಸ್ವಯಂಪ್ರಭೆಗೆ ನಮಸ್ಕರಿಸಿ ''ಹೇ ತಪಸ್ವಿನಿ, ಕೋಸಲೇಶ್ವರನಾದ ದಶರಥ ಮಹಾರಾಜನಿಗೆ ಶ್ರೀರಾಮನೆಂಬ ತೇಜಸ್ವಿಯೂ, ಬಲಾಢ್ಯನೂ ಆದ ಪುತ್ರನಿದ್ದಾನೆ'' ಎಂದು ಆರಂಭಿಸಿ ತಮ್ಮ ವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಸಿದನು. ಅಲ್ಲದೆ ಈ ಮಹಾಬಿಲದಲ್ಲಿ ತಾವು ಸಿಕ್ಕಿಕೊಂಡಿರುವುದಾಗಿಯೂ ಹೊರಗೆ ಹೋಗುವ ದಾರಿಯೇ ಕಾಣದಾಗಿದೆಯೆಂದೂ ತಿಳಿಸಿ ತಮ್ಮನ್ನು ಪಾರುಮಾಡಬೇಕೆಂದು ಹೇಳಿದನು. ಆಗ ಸ್ವಯಂಪ್ರಭೆಯು ''ಎಲೈ ವಾನರರೆ, ಈ ಗುಹೆಯೊಳಗೆ ಬಂದವರು ಜೀವಂತವಾಗಿ ಹಿಂದಿರುಗುವುದು ಶಕ್ಯವಾದದ್ದಲ್ಲ. ಆದರೆ ಮಹಾತ್ಮನಾದ ಶ್ರೀರಾಮನ ಕಾರ್ಯವನ್ನು ಸಾಧಿಸುವುದಕ್ಕಾಗಿ ನೀವು ಬಂದಿದ್ದೀರಿ. ಈ ಪುಣ್ಯಕಾರ್ಯಕ್ಕಾಗಿ ಹೊರಟು ಗೊತ್ತಿಲ್ಲದೆ ಈ ಬಿಲವನ್ನು ಪ್ರವೇಶಿಸಿದ್ದೀರಿ. ಆದ್ದರಿಂದ ನಿಮಗೆ ಬಿಡುಗಡೆಯಾಗುವುದು'' ಎಂದು ನುಡಿದು ''ನೀವೆಲ್ಲರೂ ಬಂದು ನಿಮಿಷಕಾಲ ಕಣ್ಣು ಮುಚ್ಚಿಕೊಳ್ಳಬೇಕು. ಕಣ್ಣುಬಿಡಕೂಡದು'' ಎಂದಳು. ಅಂತೆಯೇ ವಾನರರು ಕೈಯಿಂದ ತಮ್ಮ ಮುಖವೆಲ್ಲವನ್ನೂ ಮುಚ್ಚಿಕೊಂಡರು. ಅವರೆಲ್ಲರನ್ನೂ ಸ್ವಯಂಪ್ರಭೆಯು ಒಂದು ನಿಮಿಷ ಮಾತ್ರದಲ್ಲಿ ಬಿಲದಿಂದ ಹೊರಗೆ ತಂದು ಬಿಟ್ಟಳು. ಅನಂತರ ''ಎಲೈ ವಾನರೋತ್ತಮರೆ, ಈ ದಿಕ್ಕಿಗೆ ನಿಮ್ಮ ಕಿಷ್ಕಿಂಧೆಯಿದೆ. ಅತ್ತ ಕಾಣುವುದೇ ದಕ್ಷಿಣದ ಮಹಾಸಾಗರ, ನಿಮಗೆ ಶುಭವಾಗಲಿ'' ಎಂದು ಹೇಳಿ ಗುಹೆಯೊಳಗೆ ಹೊರಟುಹೋದಳು. ವಾನರರು ವಿಸ್ಮಯದಿಂದ ಆ ಮಹಾಸಾಗರವನ್ನು ದೂರದಿಂದ ನೋಡಿದರು. ಆ ಕಪಿವೀರರು ಬಳಿಯಲ್ಲಿದ್ದ ಒಂದು ಬೆಟ್ಟವನ್ನೇರಿ ಮುಂದೇನು ಮಾಡಬೇಕೆಂದು ಚಿಂತೆಗೆ ಒಳಗಾದರು.

ಯುವರಾಜನಾದ ಅಂಗದನು ಚಿಂತಾಕ್ರಾಂತನಾಗಿ ''ಸ್ನೇಹಿತರೆ, ನಾವು ಕಿಷ್ಕಿಂಧೆಯಿಂದ ಹೊರಟು ಒಂದುತಿಂಗಳಾಯಿತು. ಸುಗ್ರೀವನು ನೀಡಿದ ಅವಧಿಯು ಮುಗಿಯಿತು. ನಮ್ಮ ದುರ್ದೈವದಿಂದ ಆ ರಾಜಪುತ್ರಿಯು ಗೋಚರಿಸಲಿಲ್ಲ. ಈಗ ನಾವೇನು ಮಾಡಬೇಕು? ಕಾಲಾತಿಕ್ರಮವೂ ಆಯಿತು. ಫಲವೂ ದೊರೆಯಲಿಲ್ಲ. ಹಿಂದಕ್ಕೆ ಹೋದರೆ ಕ್ರೂರನಾದ ಸುಗ್ರೀವನು ಬರಿಗೈಯಲ್ಲಿ ಬಂದ ನಮ್ಮನ್ನು ದಂಡಿಸದೆ ಇರುವುದಿಲ್ಲ. ನನ್ನನ್ನಂತೂ ಅವನು ಕೊಲ್ಲಿಸುವುದು ನಿಶ್ಚಯ. ಆದ್ದರಿಂದ ನಾನು ಇಲ್ಲಿಯೇ ಪ್ರಾಯೋಪವೇಶದಿಂದ ದೇಹವನ್ನು ತ್ಯಜಿಸುತ್ತೇನೆ!''ಎಂದು ಹೇಳಿ ಒಂದು ಕಡೆ ಕುಳಿತು ಬಿಟ್ಟನು. ತಾರ ಮೊದಲಾದ ಕಪಿನಾಯಕರು ಅವನ ಮಾತನ್ನು ಅನುಮೋದಿಸಿದರು. ಅವರೂ ಸಹ ಅಂಗದನ ಬಳಿಯಲ್ಲಿ ಉಪವಾಸದಿಂದ ದೇಹವನ್ನು ತ್ಯಜಿಸುತ್ತೇವೆಂದು ಕುಳಿತುಕೊಳ್ಳಲು ಪ್ರಾರಂಭಿಸಿದರು! ಪ್ರಕರಣವೇ ದಾರಿ ತಪ್ಪಿ ಕೈ ಬಿಡುತ್ತಿರುವುದು ಹನುಮಂತನಿಗೆ ಹೊಳೆಯಿತು. ಆಗ ಮಹಾಬುದ್ಧಿ ಶಾಲಿಯಾದ ಆ ವಾನರೋತ್ತಮನು ಅಂಗದನಿಗೆ ಬುದ್ಧಿ ಹೇಳಲಾರಂಭಿಸಿದನು. ''ಅಯ್ಯಾ ಅಂಗದ, ಈ ಕಪಿಗಳು ನಿನ್ನ ಮಾತನ್ನು ಕೇಳಿ ಇಲ್ಲಿಯೇ ಇರುತ್ತಾರೆಂದು ಭಾವಿಸಿದೆಯಾ? ಇವರೆಲ್ಲರೂ ಚಪಲ ಚಿತ್ತರು. ಇವರನ್ನು ನಂಬಿ ಕಷ್ಟಕ್ಕೆ ಗುರಿಯಾಗಬೇಡ. ನಿನ್ನ ಮನಸ್ಸಿನಲ್ಲಿ ಸುಗ್ರೀವನಿಗೆ ವಿರುದ್ಧವಾಗಿ ನಿಲ್ಲಬೇಕೆಂಬ ಅಭಿಪ್ರಾಯ ಬಂದಂತೆ ಕಾಣುತ್ತದೆ! ಹಾಗೆ ಭಾವಿಸಬೇಡ. ಇವರು ಇನ್ನೊಂದು ಕ್ಷಣದಲ್ಲಿ ಸುಗ್ರೀವನಿಗೆ ಶರಣಾಗಿಬಿಡುತ್ತಾರೆ! ಆಗ ನಿನ್ನನ್ನು ರಕ್ಷಿಸುವವರು ಯಾರು? ಲಕ್ಷ್ಮಣನ ಬಾಣಗಳನ್ನು ಎದುರಿಸತಕ್ಕವರು ಯಾರು? ಆದ್ದರಿಂದ ಮರುಳನಂತೆ ವರ್ತಿಸಬೇಡ. ನಮ್ಮ ಕೈಲಾದ ಪ್ರಯತ್ನವನ್ನು ಮಾಡೋಣ. ವ್ಯರ್ಥವಾದರೆ ಹಿಂದಕ್ಕೆ ಹೋಗಿ ಸುಗ್ರೀವನಿಗೆ ನಿವೇದಿಸೋಣ. ಸತ್ಯವನ್ನು ಹೇಳಲು ಹೆದರುವುದೇಕೆ? ತಂದೆಯನ್ನು ಕಳೆದುಕೊಂಡಿರುವ ನಿನ್ನನ್ನು ಸುಗ್ರೀವನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾನೆ. ಮರುಕದಿಂದ ನಿನ್ನನ್ನು ಮನ್ನಿಸುತ್ತಾನೆ. ಏನೂ ಮಾಡುವುದಿಲ್ಲ. ಒಂದು ವೇಳೆ ಅವನು ಕ್ರುದ್ಧನಾದರೂ ದಯಾ ಸಮುದ್ರನಾದ ಶ್ರೀರಾಮನು ನಿನ್ನನ್ನು ರಕ್ಷಿಸುವನು. ಈ ಲಘು ಬುದ್ಧಿಯನ್ನು ತೊರೆ'' ಎಂದು ಹೇಳಿದನು.

ಅದಕ್ಕೆ ಅಂಗದನು ಪ್ರತಿಯಾಗಿ ಹೀಗೆಂದನು. ''ಆಂಜನೇಯ, ನಿನ್ನ ಹೇಳಿಕೆಯನ್ನು ನಾನು ಒಪ್ಪಲಾರೆ. ಆ ಸುಗ್ರೀವನು ಧರ್ಮ ಬಾಹಿರ. ನನ್ನ ತಂದೆಗೆ ಕೇಡನ್ನು ಬಯಸಿ ಗುಹೆಯದ್ವಾರವನ್ನು ಮುಚ್ಚಿ ಬಂದು ಕಿಷ್ಕಿಂಧಾ ರಾಜ್ಯಕ್ಕೆ ಒಡೆಯ ನೆನೆಸಿಕೊಳ್ಳಲಿಲ್ಲವೆ? ಅವನು ಕೃತಘ್ನನೂ ಕ್ರೂರನೂ ಆಗಿದ್ದಾನೆ. ಅವನ ದೃಷ್ಟಿಯಲ್ಲಿ ನಾನು ಶತ್ರುವಿನ ಮಗ. ನನ್ನನ್ನು ಅವನು ಉಳಿಸುವನೆ? ಅವನ ಗುಲಾಮಗಿರಿಯನ್ನು

ಮಾಡುವುದಕ್ಕಿಂತ ನಾನು ಪ್ರಾಯೋಪವೇಶ ಮಾಡುವುದೇ ಉತ್ತಮ. ನನಗೆ ಮರಣವೇ ಶ್ರೇಯಸ್ಕರ'' ಎಂದು ಹೇಳಿ ಧರ್ಭೆಯನ್ನು ಹಾಸಿ ಅದರ ಮೇಲೆ ಕುಳಿತು ಬಿಟ್ಟನು. ತಮ್ಮ ಯುವರಾಜನು ಹೀಗೆ ಮಾಡಿದ್ದನ್ನು ಕಂಡು ಉಳಿದವಾನರರೂ ಸಮುದ್ರ ತೀರದಲ್ಲಿ ದರ್ಭೆಯನ್ನು ಹಾಸಿ ಉಪವಾಸಮಾಡುತ್ತೇವೆಂದು ಹೇಳಲಾರಂಭಿಸಿದರು! ಹನುಮಂತನು ಮುಂದೇನು ಮಾಡಬೇಕೆಂದು ಯೋಚಿಸುತ್ತಿದ್ದನು.

ಆ ಸಮಯದಲ್ಲಿ ಬಹಳ ವಯಸ್ಸಾಗಿದ್ದ ಒಂದು ಗೃಧ್ರವು ಕಾಣಿಸಿತು. ಅದರ ಹೆಸರು ಸಂಪಾತಿ; ಜಟಾಯುವಿನ ಅಣ್ಣ. ಬಳಿಯಲ್ಲಿದ್ದ ಪರ್ವತದ ಒಂದು ಗುಹೆಯಿಂದ ಹೊರಬಂದು ಈ ಕಪಿಗಳನ್ನು ನೋಡಿ ಸಂತುಷ್ಟವಾಯಿತು. ಮಹಾಬಲಾಢ್ಯನಾದ ಆ ಸಂಪಾತಿಯು ''ಆಹಾ, ಬಹು ಕಾಲದ ಮೇಲೆ ಸೊಗಸಾದ ಔತಣವು ತಾನಾಗಿ ದೊರಕಿತು. ಈ ಕಪಿಗಳನ್ನು ತಿನ್ನುವೆನು!'' ಎಂದು ಉದ್ಗರಿಸಿದನು. ಆಗ ಅಂಗದನು ಹನುಮಂತನನ್ನು ನೋಡಿ ಹೀಗೆಂದನು. ''ಹನುಮಂತ, ಅಲ್ಲಿನೋಡು. ಯಮನೇ ಹದ್ದಿನ ರೂಪದಲ್ಲಿ ಬಂದಂತೆ ಕಾಣುತ್ತದೆ! ನಾವು ಶ್ರೀರಾಮನ ಕಾರ್ಯವನ್ನು ಸಾಧಿಸಲಿಲ್ಲ. ಜಟಾಯುವೆಂಬ ಒಂದು ಹದ್ದು ಶ್ರೀರಾಮನ ಕಾರ್ಯಕ್ಕಾಗಿ ತನ್ನ ಪ್ರಾಣವನ್ನೇ ಅರ್ಪಿಸಿತು. ಅವನಿಗೆ ಸದ್ಗತಿಯೂ ಒದಗಿತು. ನಮಗೆ ಜಟಾಯುವಿನಂತೆ ಶ್ರೀರಾಮನ ಕಾರ್ಯಕ್ಕೆ ನೆರವಾಗಲು ಸಾಮರ್ಥ್ಯವಿಲ್ಲದೇ ಹೋಯಿತು'' ಎಂದು ಹಲುಬುತ್ತಿದ್ದನು. ಅಂಗದನಾಡಿದ ಆ ನುಡಿಗಳನ್ನು ಕೇಳಿ ಸಂಪಾತಿಗೆ ಒಂದು ಚಿಂತೆ ಅಂಕುರಿಸಿತು– ''ಎಲಾ, ಇವರು ನನ್ನ ತಮ್ಮನಾದ ಜಟಾಯುವಿನ ಹೆಸರನ್ನು ಹೇಳುತ್ತಿದ್ದಾರೆ. ಅವನು ಸತ್ತು ಹೋದನೆಂದು ಈ ವಾನರರ ಮಾತಿನಿಂದ ತಿಳಿದುಬರುತ್ತದೆ'' ಎಂದು ಶೋಕಿಸುತ್ತ ಉಚ್ಚಸ್ವರದಿಂದ ಹೀಗೆಂದನು. ''ಎಲೈ, ಯಾರದು? ಜಟಾಯುವು ನನ್ನ ಪ್ರಾಣಕ್ಕಿಂತಲೂ ಪ್ರಿಯನಾದ ನನ್ನ ತಮ್ಮ. ನನ್ನ ಹೆಸರು ಸಂಪಾತಿ. ಈ ಸುದ್ದಿಯನ್ನು ಕೇಳಿ ನನಗೆ ತುಂಬ ದುಃಖವಾಗಿದೆ. ನನ್ನನ್ನು ಈ ಬೆಟ್ಟದ ತಿಟ್ಟನಿಂದ ಕೆಳಗಿಳಿಸುವಿರಾ? ನಿಮ್ಮೊಡನೆ ನಾನು ಮಾತಾಡಬೇಕಾಗಿದೆ'' ಎಂದನು. ಅಂಗದನು ಎದ್ದು ಹೋಗಿ ಸಂಪಾತಿಯನ್ನು ಕೆಳಕ್ಕೆ ಇಳಿಸಿ ಕರೆತಂದನು. ಜಟಾಯುವಿಗೆ ಸಂಬಂಧಿಸಿದ ಎಲ್ಲ ವೃತ್ತಾಂತವನ್ನೂ ಆ ಪಕ್ಷಿರಾಜನಿಗೆ ಅಂಗದನು ಹೇಳಿದನು. ಸೀತಾನ್ವೇಷಣೆಗಾಗಿ ಸಮುದ್ರದ ಬಳಿಗೆ ಬಂದು ಚಿಂತಾಕ್ರಾಂತರಾದ ಆ ವಾನರರನ್ನು ಕುರಿತು ''ಎಲೈ ವಾನರರೆ, ನನಗೆ ಪೂರ್ವ ವೃತ್ತಾಂತವೆಲ್ಲವೂ ತಿಳಿಯಿತು. ಆ ಜಟಾಯುವು ನನ್ನ ತಮ್ಮ. ತಮ್ಮನ ವೈರಿಯಾದ ರಾವಣನನ್ನು ತೊಡೆದು ಹಾಕುವ ಶಕ್ತಿ ಈಗ ನನಗಿಲ್ಲ. ನೀವು ಬಂದಿರುವುದು ಶ್ರೀರಾಮನ ಕಾರ್ಯಕ್ಕಾಗಿ. ನನ್ನ ತಮ್ಮನು

ಮಾಡಿದಂತೆ ನಾನೂ ಈಗ ಒಂದು ಸಹಾಯವನ್ನು ಮಾಡಲೇಬೇಕು. ದುರಾತ್ಮನಾದ ರಾವಣನು ಒಬ್ಬ ಯುವತಿಯನ್ನು ಅಪಹರಿಸಿಕೊಂಡು ಹೋಗುತ್ತಿದ್ದುದನ್ನು ನಾನು ನೋಡಿದೆ. ಅವಳು 'ರಾಮಾ, ಲಕ್ಷ್ಮಣಾ' ಎಂದು ಅರಚುತ್ತಿದ್ದಳು. ಆ ರಾಕ್ಷಸನು ಲಂಕಾನಗರಿಯಲ್ಲಿದ್ದಾನೆ. ನೂರು ಯೋಜನಗಳ ಆಚೆ ಲಂಕಾದ್ವೀಪವಿದೆ. ಆ ಯುವತಿಯು ಸೀತಾದೇವಿಯೇ ಆಗಿರಬೇಕು. ಅವಳನ್ನು ನಾನೀಗ ಕಣ್ಣಾರೆ ನೋಡುತ್ತಿದ್ದೇನೆ. ನನಗೆ ದಿವ್ಯವಾದ ನೇತ್ರ ಪಾಟವವಿದೆ. ವಾನರೋತ್ತಮರೆ, ಸಮುದ್ರವನ್ನು ಲಂಘಿಸಿ ಲಂಕೆಗೆ ಹೋದರೆ ನೀವು ಸೀತಾದೇವಿಯನ್ನು ಕಾಣಬಹುದು'' ಎಂದನು. ಕಪಿವೀರರಿಗೆ ಆ ಗೃಧ್ರರಾಜನ ಮಾತನ್ನು ಕೇಳಿ ತುಂಬ ಸಂತೋಷವಾಯಿತು. ಸೀತಾದೇವಿಯಿರುವ ಸ್ಥಳವು ತಿಳಿಯಿತೆಂದು ಹರ್ಷದಿಂದ ಉಬ್ಬಿದರು.

ಅನಂತರ ಸಂಪಾತಿಯ ಬಯಕೆಯಂತೆ ವಾನರರು ಆತನನ್ನು ಸಮುದ್ರ ಜಲದ ಬಳಿಗೆ ಕರೆದೊಯ್ದರು. ಸಂಪಾತಿಯು ಸಮುದ್ರದಲ್ಲಿ ಸ್ನಾನ ಮಾಡಿ ಜಟಾಯುವಿಗೆ ತರ್ಪಣವನ್ನಿತ್ತನು. ಸಂಪಾತಿಯು ತನ್ನ ಪೂರ್ವ ವೃತ್ತಾಂತವನ್ನು ವಾನರರಿಗೆ ಹೇಳಿದನು. ''ಮಿತ್ರರೆ, ನಾನೂ ಜಟಾಯುವೂ ಒಂದು ಸಲ ಸ್ಪರ್ಧೆಯಿಂದ ಗಗನ ಮಂಡಲವನ್ನು ಏರುತ್ತ ಹೋದೆವು. ನಾನು ಬಹು ಎತ್ತರದಲ್ಲಿ ಹಾರಿದ್ದರಿಂದ ಸೂರ್ಯನ ಕಿರಣಗಳಿಂದ ನನ್ನ ರೆಕ್ಕೆಗಳು ಸುಟ್ಟು ಹೋದವು. ನಾನು ದೊಪ್ಪನೆ ನೆಲದ ಮೇಲೆ ಬಿದ್ದೆನು. ಅಷ್ಟರಮೇಲೆ ನಾನು ಜಟಾಯುವನ್ನು ಕಾಣಲಾಗಲಿಲ್ಲ. ಹೀಗಿರುವಾಗ ನಿಶಾಕರನೆಂಬ ಒಬ್ಬ ಮುನಿಯು ಕೃಪಾವಿಷ್ಟನಾಗಿ ನನ್ನನ್ನು ಅನುಗ್ರಹಿಸುತ್ತ ಹೇಳಿದನು'': ''ಸಂಪಾತಿ, ಮುಂದೆ ನಿನಗೆ ಮತ್ತೆ ರೆಕ್ಕೆ ಪುಕ್ಕಗಳು ಹುಟ್ಟುವವು. ನೀನು ಭಗವಂತನನ್ನು ಸ್ಮರಿಸುತ್ತ ಇಲ್ಲಿಯೇ ಶಾಂತವಾಗಿರು. ಮುಂದೆ ಕೆಲವು ವಾನರರು ಶ್ರೀರಾಮನ ಕಾರ್ಯಕ್ಕಾಗಿ ಇಲ್ಲಿಗೆ ಬರುವರು. ನಿನ್ನ ಕೈಲಾದ ರೀತಿಯಲ್ಲಿ ಅವರಿಗೆ ಉಪಕಾರ ಮಾಡಿದರೆ ನಿನಗೆ ರೆಕ್ಕೆ ಪುಕ್ಕಗಳು ಹುಟ್ಟುವುವು–'' ಎಂದು ಹೇಳಿದ್ದಾನೆ. ನಾನು ವೃದ್ಧನಾಗಿದ್ದೇನೆ. ನಿಮಗೆ ಇನ್ನಾವ ಉಪಕಾರವನ್ನೂ ಮಾಡಲಾರೆ. ಸೀತಾದೇವಿ ಇರುವ ಸ್ಥಳವನ್ನು ಹೇಳಿದ್ದೇನೆ. ಇದೇ ನಾನು ಮಾಡುವ ಉಪಕಾರ. ಓಹೋ! ನೋಡಿ ನನ್ನ ರೆಕ್ಕೆಗಳು ಮೊದಲಿನಂತೆ ಹುಟ್ಟುತ್ತಿವೆ. ಇದು ನಿಶಾಕರಮುನಿಯ ಅನುಗ್ರಹ'' ಎಂದನು. ಅಷ್ಟರಲ್ಲಿ ಸಂಪಾತಿಯ ರೆಕ್ಕೆಗಳು ಮೊದಲಿನಂತೆ ಮೂಡಿದವು. ಸಂಪಾತಿಯು ಹರ್ಷದಿಂದ ''ವಾನರೋತ್ತಮರೆ, ನಿಮ್ಮ ಆಗಮನದಿಂದ ನನಗೆ ರಕ್ಕೆಗಳು ಹುಟ್ಟಿದವು. ನಿಮಗೆ ಶುಭವಾಗಲಿ. ಶ್ರೀರಾಮನ ಕಾರ್ಯವನ್ನು ಸಾಧಿಸಿರಿ'' ಎಂದು ಹೇಳಿ ಆಕಾಶಕ್ಕೆ ಹಾರಿ ತನ್ನ ಇಚ್ಛೆಯಂತೆ ಹೊರಟು ಹೋದನು.

೩೯

ಸಮುದ್ರಲಂಘನಕ್ಕೆ ಸಮರ್ಥರು ಯಾರೆಂಬ ವಿಚಾರ, ಜಾಂಬವಂತನು ಹನುಮಂತನನ್ನು ಪ್ರೋತ್ಸಾಹಿಸುವುದು, ಹನುಮಂತನ ಉತ್ಸಾಹ, ಸಿದ್ಧತೆ

ಗೃಧ್ರರಾಜನಾದ ಸಂಪಾತಿಯ ನುಡಿಯನ್ನು ಕೇಳಿ ಜಾನಕಿಯಿದ್ದ ಸ್ಥಳವು ತಿಳಿಯಿತೆಂದು ಹರ್ಷದಿಂದ ಬೀಗುತ್ತ ವಾನರರೆಲ್ಲರೂ ಎದ್ದು ನಿಂತರು. ಆ ಪರಾಕ್ರಮಿಗಳು ಗುಂಪು ಗುಂಪಾಗಿ ಸೇರಿ ಸಿಂಹದಂತೆ ಗರ್ಜಿಸಿದರು. ಅಲ್ಲಿಂದ ಮುಂದೆ ನಡೆದು ಸರಿಯಾದ ಒಂದು ಸ್ಥಳವನ್ನಾರಿಸಿಕೊಂಡು ಆ ಮಹಾಸಾಗರದ ಉತ್ತರ ತೀರದಲ್ಲಿ ಬೀಡುಬಿಟ್ಟರು. ಆಮೇಲೆ ಎಲ್ಲರೂ ಸಮುದ್ರವನ್ನು ಪರಿಶೀಲಿಸ ತೊಡಗಿದರು. ಪರ್ವತಾಕಾರದ ಅಲೆಗಳು ಎದ್ದೆದ್ದು ಬರುತ್ತಿದ್ದವು. ಆ ಅಲೆಗಳ ಹೊಡೆತಗಳಿಂದ ಪುಟಿದೆದ್ದ ಜಲರಾಶಿಯು ಆಕಾಶದ ಕಡೆಗೆ ಚಿಮ್ಮುತ್ತಿತ್ತು. ಸಮುದ್ರರಾಜನು ಗುಡುಗಿನಂತೆ ಗರ್ಜಿಸುತ್ತಿದ್ದನು. ಎಷ್ಟುದೂರ ನೋಡಿದರೂ ಜಲರಾಶಿಯೇ ಕಾಣಿಸುತ್ತಿತ್ತು. ಅದರ ಇನ್ನೊಂದು ಪಾರವೇ ಕಾಣಿಸಲಿಲ್ಲ. ಆಕಾಶದಂತೆ ಕೊನೆಯೇ ಕಾಣಿಸದ ಆ ಸಮುದ್ರವನ್ನು ನೋಡಿ ಕಪಿನಾಯಕರು ವಿಷಣ್ಣರಾದರು. 'ಈ ಮಹಾಸಾಗರದ ಆಚೆಗೆ ಹೋಗಿ ನಾವು ಲಂಕೆಗೆ ಸೇರುವುದು ಹೇಗೆ?' ಎಂಬ ಮಹತ್ತರವಾದ ಚಿಂತೆ ಅವರನ್ನು ಆವರಿಸಿತು. ವಿಷಣ್ಣರಾದ ಆ ಕಪಿಗಳನ್ನು ನೋಡಿ ವಾಲಿಪುತ್ರನಾದ ಅಂಗದನು ಉತ್ಸಾಹವನ್ನು ಅವರಲ್ಲಿ ತುಂಬುವುದಕ್ಕಾಗಿ ಹೀಗೆಂದನು: ''ವಾನರೋತ್ತಮರೆ, ನೀವು ಚಿಂತೆಯನ್ನು ಅಂಟಿಸಿಕೊಳ್ಳದಿರಿ. ಚಿಂತೆ ಎಂಬುದು ಬಹಳ ಕೆಟ್ಟದ್ದು. ಪರಾಕ್ರಮವನ್ನು ಮೆರೆಸಬೇಕಾದ ಕಾಲದಲ್ಲಿ ಹೇಡಿಗಳಂತೆ ತಲ್ಲಣಗೊಳ್ಳುವುದು ವೀರರಿಗೆ ಭೂಷಣವಲ್ಲ. ಉತ್ಸಾಹ ಹೀನರಾದಾಗ ಅವರ ಕಾರ್ಯವು ಎಂದಿಗೂ ಸಿದ್ಧಿಸದು. ಧೀರರಾಗಿರಿ, ಮುಂದಿನ ಕಾರ್ಯಭಾರವನ್ನು ಆಲೋಚಿಸೋಣ'' ಎಂದು ಧೈರ್ಯ ಹೇಳಿದನು. ಅಷ್ಟರಲ್ಲಿ ಸೂರ್ಯನು ಅಸ್ತಂಗತನಾದನು. ರಾತ್ರಿಯಾಯಿತು. ಕಪಿಗಳೆಲ್ಲರೂ ಸಮುದ್ರದ ದಂಡೆಯ ಮೇಲೆ ವಿಶ್ರಮಿಸಿದರು.

ಮೂರನೆಯ ದಿನ ವಾನರ ಸೈನಿಕರು ಹಣ್ಣು ಹಂಪಲುಗಳನ್ನು ಗೆಡ್ಡೆ ಗೆಣಸುಗಳನ್ನೂ ತಿಂದು ತೃಪ್ತಿಯಿಂದ ಸಮುದ್ರ ತೀರದಲ್ಲಿ ನೆರೆದರು. ವಾಲಿ ತನಯನಾದ ಅಂಗದನು ಅವರೆಲ್ಲರನ್ನೂ ಉದ್ದೇಶಿಸಿ ''ಮಿತ್ರರೆ, ಈಗ ಸಮುದ್ರವನ್ನು ದಾಟಿ ಹೋಗಬಲ್ಲ ತೇಜಸ್ವಿಯಾದ ವೀರನು ಯಾರು? ನೂರು ಯೋಜನಗಳ ದೂರ ಹಾರಬಲ್ಲ ಗಟ್ಟಿಗನು ಯಾರು? ನಮ್ಮೆಲ್ಲರಿಗೂ

ಅಭಯದಾತನಾಗಿ ಈ ಮಹಾಕಾರ್ಯವನ್ನು ಸಾಧಿಸಬಲ್ಲ ಧೀರನಾರು? ಓ ಕಪಿವೀರರೆ, ನಿಮ್ಮಲ್ಲಿ ಯಾರಾದರೂ ಈ ಸಮುದ್ರವನ್ನು ದಾಟಿ ಹೋಗಲು ಸಮರ್ಥರಿದ್ದರೆ ಅವರು ಮುಂದೆ ಬರಲಿ'' ಎಂದನು. ಯುವರಾಜನ ಮಾತನ್ನು ಕೇಳಿ ಯಾರೂ ಒಂದು ಮಾತನ್ನೂ ಆಡಲಿಲ್ಲ. ಎಲ್ಲರೂ ಸ್ತಬ್ಧರಾಗಿ ಸುಮ್ಮನೆ ನೋಡುತ್ತ ನಿಂತರು.

ಅಂಗದನು ಅವರೆಲ್ಲರನ್ನೂ ವೀಕ್ಷಿಸುತ್ತ ''ಎಲೈ ವಾನರರೆ, ನೀವೆಲ್ಲರೂ ಮಹಾ ಪರಾಕ್ರಮಿಗಳೆಂದು ವಿಖ್ಯಾತರಾದವರು. ವೀರಾಗ್ರಣಿಗಳೆಂದು ಕೀರ್ತಿ ಪಡೆದ ಕುಲದಲ್ಲಿ ಜನಿಸಿದವರು. ಏಕೆ ಸುಮ್ಮನೆ ನಿಂತಿದ್ದೀರಿ? ಒಳ್ಳೆಯದು. ಈಗ ಒಬ್ಬೊಬ್ಬ ವೀರನೂ ಮುಂದೆ ಬಂದು ಎಷ್ಟು ದೂರ ಲಂಘಿಸಲು ತನಗೆ ಸಾಮರ್ಥ್ಯವುಂಟು– ಎಂಬುದನ್ನಾದರೂ ಹೇಳಬೇಕು. ಎದುರಿಗೆ ಬಂದು ಹೇಳಿರಿ'' ಎಂದು ಆಜ್ಞಾಪಿಸಿದನು. ಆಗ ಗಜ, ಗವಾಕ್ಷ, ಗವಯ, ಶರಭ, ಗಂಧ ಮಾದನ, ಮೈಂದ, ದ್ವಿವಿದ ಮೊದಲಾದ ಸೇನಾನಾಯಕರು ತಮ್ಮ ತಮ್ಮ ಲಂಘನಸಾಮಥ್ಯವನ್ನು ಹೇಳತೊಡಗಿದರು. ಒಬ್ಬನು ಹತ್ತು ಯೋಜನವೆಂದನು! ಇನ್ನೊಬ್ಬನು 'ಇಪ್ಪತ್ತು ಯೋಜನ ದೂರ ನೆಗೆಯಬಲ್ಲೆ' ಎಂದನು. ಆದರೆ ನೂರು ಯೋಜನಗಳ ದೂರ ನೆಗೆಯಬಲ್ಲ ಸಾಮರ್ಥ್ಯವನ್ನು ಯಾರೂ ಹೇಳಿಕೊಳ್ಳಲಿಲ್ಲ. ಹೀಗೆ ತಮ್ಮ ಬಲಪರಾಕ್ರಮಗಳನ್ನು ಅವರು ಹೇಳಿಕೊಳ್ಳುತ್ತಿರುವಾಗ ಕಪಿ ಸೇನೆಯಲ್ಲಿ ಅತ್ಯಂತ ವೃದ್ಧನಾದ ಜಾಂಬವಂತನು ಅವರೆಲ್ಲರ ಒಪ್ಪಿಗೆಯನ್ನು ಪಡೆದು ಇಂತೆಂದನು. ''ಎಲೈ ಪರಾಕ್ರಮಿಗಳೆ, ಹಿಂದೆ ನನಗೆ ಈ ಸಮುದ್ರವನ್ನು ಲೆಕ್ಕಿಸದೆ ತಕ್ಕಮಟ್ಟಿಗೆ ಲಂಘಿಸುವ ಸಾಮರ್ಥ್ಯವಿತ್ತು! ಈಗ ವಯಸ್ಸಾಗಿ ಹೋಯಿತು. ಆದರೂ ಪರಿಸ್ಥಿತಿಯು ಈ ಘಟ್ಟವನ್ನು ಮುಟ್ಟಿದಾಗ ಕರ್ತವ್ಯವನ್ನು ಉಪೇಕ್ಷಿಸುವುದು ತರವಲ್ಲ. ನಾನೀಗ ಸಂದೇಹವಿಲ್ಲದೆ ತೊಂಬತ್ತು ಯೋಜನಗಳ ದೂರ ಹಾರಬಲ್ಲೆನು. ಯೌವನ ಕಾಲದಲ್ಲಿ ಅಸಾಧಾರಣವಾದ ಶಕ್ತಿ ಇತ್ತು. ಈಗ ಇಷ್ಟು ಮಾತ್ರ ಇದೆ. ಇಷ್ಟರಿಂದ ನಮ್ಮ ಕಾರ್ಯಸಿದ್ಧಿಯಾಗುವುದಿಲ್ಲ'' ಎಂದನು. ಅನಂತರ ಕಪಿಶ್ರೇಷ್ಠನಾದ ಅಂಗದನು ಹಿರಿಯನಾದ ಜಾಂಬವಂತನಿಗೆ ವಂದಿಸಿ ವಾನರರನ್ನು ನೋಡುತ್ತ ''ಮಿತ್ರರೆ, ಈ ನೂರು ಯೋಜನಗಳ ದೂರವನ್ನು ನಾನು ಲಂಘಿಸಿ ಹೋಗಬಲ್ಲೆ. ಆದರೆ ಮತ್ತೆ ಹಿಂದಿರುಗಿ ಬರುವ ಶಕ್ತಿ ನನಗಿದೆಯೇ ಇಲ್ಲವೇ ಹೇಳಲಾರೆ'' ಎಂದು ಹೇಳಿದನು. ಆಗ ವಾಕ್ಯ ಕೋವಿದನಾದ ಜಾಂಬವಂತನು ಅಂಗದನನ್ನು ನೋಡಿ ''ಎಲೈ ವೀರಾಗ್ರಣಿ, ನಿನ್ನ

ಸಾಮರ್ಥ್ಯವೇನೆಂಬುದನ್ನು ನಾನು ಬಲ್ಲೆನು. ನೂರು ಯೋಜನಗಳಲ್ಲ, ಸಾವಿರ ಯೋಜನಗಳವರೆಗೆ ಹೋಗಿಬರುವ ಸಾಮರ್ಥ್ಯವು ನಿನಗಿರಬಹುದು. ಲಂಕೆಗೆ ಹೋಗಿ ಬರುವ ಶಕ್ತಿ ನಿನಗಿದೆ. ಅದು ಮುಖ್ಯ ವಿಷಯವಲ್ಲ. ವತ್ಸ, ನೀನು ಯುವರಾಜ. ನಮ್ಮೆಲ್ಲರಿಗೂ ಪ್ರಭುವಾಗಿದ್ದೀಯೆ. ಕಾರ್ಯಾರ್ಥವಾಗಿ ಭೃತ್ಯರನ್ನು ಸ್ವಾಮಿಯು ಕಳಿಸಬೇಕೇ ಹೊರತು, ಸ್ವಾಮಿಯನ್ನೇ ಭೃತ್ಯರು ಕಳಿಸಬಾರದು. ನಿನ್ನ ರಕ್ಷಣೆಯನ್ನು ನೋಡಿಕೊಳ್ಳಬೇಕಾದ ಭೃತ್ಯರು ನಾವು. ಅಂಗದ, ನೀನು ಸೂತ್ರಧಾರಿಯಾಗಿ ನಮ್ಮೆಲ್ಲೊಬ್ಬರನ್ನು ಕಳಿಸಬೇಕು'' ಎಂದು ಹೇಳಿದನು. ಪ್ರಾಜ್ಞನಾದ ಜಾಂಬವಂತನು ಹೀಗೆ ಹೇಳಲಾಗಿ ಅಂಗದನು ''ಜಾಂಬವಂತರೆ, ನಾನೂ ಹೋಗುವುದಿಲ್ಲ – ಹೋಗತಕ್ಕ ಇನ್ನೊಬ್ಬ ವಾನರ ವೀರನೂ ಇಲ್ಲ. ಹೀಗಾದರೆ ನಮ್ಮ ಕಾರ್ಯವು ನೆರವೇರುವುದು ಹೇಗೆ? ಕಾರ್ಯವನ್ನು ಸಾಧಿಸದೇ ನಾವು ಸುಗ್ರೀವನ ಬಳಿಗೆ ಹೋದರೆ ಅವನು ನಮ್ಮನ್ನು ನಿಗ್ರಹಿಸುವುದು ನಿಶ್ಚಯ. ಈಗ ನಮಗೆ ಮತ್ತೆ ಪ್ರಾಯೋಪವೇಶವೇ ಗತಿ'' ಎಂದನು. ಆಗ ಜಾಂಬವಂತನು ''ಅಂಗದ, ಈ ಕಾರ್ಯವನ್ನು ಸಾಧಿಸಲು ನಿನಗೆ ಯಾವಕೊರತೆಯೂ ಆಗದು. ಇದನ್ನು ಸಾಧಿಸಬಲ್ಲ ಧೀರನೊಬ್ಬನಿದ್ದಾನೆ. ನೋಡು'' ಎಂದು ಹೇಳಿ ದೂರದಲ್ಲಿ ಏನೂ ಅರಿಯದವನಂತೆ ಸುಮ್ಮನೆ ಕುಳಿತಿದ್ದ ಹನುಮಂತನನ್ನು ತೋರಿಸಿದನು! ಆಮೇಲೆ ಜಾಂಬವಂತನು ಹನುಮಂತನನ್ನು ಸಮೀಪಕ್ಕೆ ಕರೆದು ಹೀಗೆ ಹೇಳಿದನು. ''ಓ ಹನುಮಂತ, ಈ ವಾನರಸೇನೆಯ ಅಗ್ರಗಣ್ಯನಾದ ವೀರನು ನೀನು. ಸರ್ವಶಾಸ್ತ್ರ ವಿಶಾರದನಾಗಿದ್ದೀಯೆ. ಏನೂ ಮಾತಾಡದೆ ಸುಮ್ಮನೆ ಕುಳಿತಿರುವಿಯೇಕೆ? ಹನುಮಂತ, ವೈನತೇಯನಾದ ಗರುಡನ ರೆಕ್ಕೆಗಳಿಗೆ ಎಷ್ಟು ಬಲವುಂಟೋ ಅಷ್ಟು ಬಲವು ನಿನ್ನ ಬಾಹುಗಳಿಗಿದೆ! ನೀನು ಅಂಜನಾದೇವಿಯಲ್ಲಿ ಹುಟ್ಟಿದ ವಾಯುದೇವನ ಪುತ್ರ. ಇಂದ್ರಾದಿದೇವತೆಗಳ ವರದಿಂದ ಮಹಾಬಲಪರಾಕ್ರಮಗಳೂ ವಜ್ರಾಯುಧದ ಪೆಟ್ಟಿಗೂ ಜಗ್ಗದ ಮೈಕಟ್ಟೂ ನಿನಗೆ ಲಭಿಸಿವೆ. ಹಾಗೆಯೇ ಸ್ವೇಚ್ಛಾಮರಣದ ಶಕ್ತಿಯೂ ಲಭಿಸಿದೆ. ನಿನ್ನ ಸಾಮರ್ಥ್ಯವನ್ನು ಏನೆಂದು ನಾನು ವರ್ಣಿಸಲಿ? ಆಂಜನೇಯ, ನಮಗೀಗ ಎಂಥ ಕಷ್ಟಕಾಲವು ಒದಗಿದೆ ಎಂಬುದು ನಿನಗೆ ತಿಳಿಯದೆ? ನಮ್ಮನ್ನು ನೀನೇ ಉಳಿಸಬೇಕು. ಹಿಂದೆ ನಾನು ವಿಷ್ಣುವಿನ ವಾಮನಾವತಾರದ ಸಂದರ್ಭದಲ್ಲಿ ಈ ಭೂಮಂಡಲವನ್ನು ಇಪ್ಪತ್ತೊಂದು ಸಲ ಪ್ರದಕ್ಷಿಣೆ ಮಾಡಿ ತ್ರಿವಿಕ್ರಮನಿಗೆ ನಮಸ್ಕರಿಸಿದೆನು! ಅಂತಹ ಸಾಮರ್ಥ್ಯ ನನಗಿತ್ತು. ಈಗ ನಾನು ವೃದ್ಧನಾಗಿದ್ದೇನೆ. ನೀನೀಗ ಲಂಕೆಗೆ ಹೋಗಿ

ಸೀತಾದೇವಿಯನ್ನು ಕಂಡುಬರಬೇಕು. ಎಲೈ ಕಪಿಶಾರ್ದೂಲ, ನಿಖಿಲ ವಾನರಸೇನೆಯೂ ನಿನ್ನ ಪರಾಕ್ರಮವನ್ನು ನೋಡಲು ಉತ್ಸುಕವಾಗಿದೆ. ಏಳು; ತ್ರಿವಿಕ್ರಮನಂತೆ ಅದ್ಭುತಕಾಯನಾಗಿ ವಿಜೃಂಭಿಸು'' ಎಂದನು. ಜಾಂಬವಂತನ ನುಡಿಯನ್ನು ಕೇಳಿದ ಮೇಲೆ ತನ್ನ ಗತಿವೇಗವೆಷ್ಟಿದೆ ಎಂಬುದು, ತನ್ನ ಸಾಮರ್ಥ್ಯವೇನೆಂಬುದು ಹನುಮಂತನಿಗೆ ನೆನಪಾಯಿತು! ಅವನು ಎದ್ದು ನಿಂತನು. ''ಆಹಾ, ಹೌದು! ಜಾಂಬವಂತರೆ, ಈ ಸಮುದ್ರವು ನನಗೆ ಯಾವ ಲೆಕ್ಕ? ಇದನ್ನು ಲೀಲೆಯಿಂದ ನಾನು ದಾಟಿಹೋಗಬಲ್ಲೆ! ಈ ಕಾರ್ಯವನ್ನು ಸಾಧಿಸುವೆನು'' ಎಂದು ಹೇಳಿ ಹನುಮಂತನು ತನ್ನ ದೇಹವನ್ನು ಅದ್ಭುತಾಕಾರವಾಗಿ ಬೆಳೆಸತೊಡಗಿದನು. ಅದನ್ನು ನೋಡಿ ಕಪಿಸೇನೆಯು ಹರ್ಷದಿಂದ ಉಲ್ಲಾಸಗೊಂಡಿತು.

ಹನುಮಂತನು ಒಮ್ಮೆ ತನ್ನ ಬಾಲವನ್ನು ನೆಲಕ್ಕೆ ಬಡಿದು ಆಶ್ಚರ್ಯಕರವಾದ ರೀತಿಯಲ್ಲಿ ದೇಹವನ್ನು ಬೆಳೆಸಿ ಸಮುದ್ರಲಂಘನಕ್ಕೆ ಸಜ್ಜಾಗತೊಡಗಿದನು. ಅವನ ಮುಖವು ಕೆಂಪಗೆ ಕಾದ ಬಾಣಲೆಯಂತೆ ತೇಜೋ ವಿಶಿಷ್ಟವಾಗಿ ಕಂಗೊಳಿಸಿತು. ಅವನು ಜಾಂಬವಂತನೇ ಮೊದಲಾದ ಹಿರಿಯರಿಗೆ ಅಭಿವಾದನೆ ಮಾಡಿ, ಕಪಿಗಳತ್ತ ತಿರುಗಿ ''ಕಪಿಶ್ರೇಷ್ಠರೆ, ಮಹಾವೇಗಶಾಲಿಯೂ ಪ್ರಭಂಜನನೆಂದು ವಿಖ್ಯಾತನೂ ಆದ ವಾಯುದೇವನ ಪುತ್ರನಾನು. ನನ್ನ ತೋಳ್ಬಲದಿಂದ ಈ ಕಡಲನ್ನು ಈಡಾಡಬಲ್ಲೆ. ನನ್ನ ವೇಗಕ್ಕೆ ಎದುರಿಲ್ಲ. ಮಿತ್ರರೆ, ನೂರು ಯೋಜನಗಳಲ್ಲ, ಸಾವಿರಯೋಜನಗಳವರೆಗೂ ನೆಗೆಯಬಲ್ಲೆ. ನೇರವಾಗಿ ಲಂಕೆಗೆ ಹೋಗಿ ಸೀತಾದೇವಿಯನ್ನು ಕಂಡು ಬರುವೆನು. ಅಲ್ಲಿ ಆ ದೇವಿಯು ಕಾಣದಿದ್ದರೆ ರಾವಣನನ್ನು ಹೆಡೆಮುರಿಗೆ ಕಟ್ಟಿ ತಂದು ಶ್ರೀರಾಮನೆದುರಿಗೆ ನಿಲ್ಲಿಸುವೆನು! ಇದು ನಿಶ್ಚಯ'' ಎಂದನು. ಆ ಕಪಿಶಾರ್ದೂಲನು ಜಾಂಬವಂತನಿಗೆ ನಮಸ್ಕರಿಸಿ ಅವನ ಆಶೀರ್ವಾದವನ್ನು ಪಡೆದು ಯುವರಾಜನಾದ ಅಂಗದನನ್ನು ಬೀಳ್ಕೊಂಡನು. ಅನಂತರ ಸಮುದ್ರದ ಮೇಲೆ ಹಾರಲು ನಿಂತುಕೊಳ್ಳಬೇಕಾದ ಎತ್ತರವಾದ ಸ್ಥಳವಾವುದೆಂದು ಪರೀಕ್ಷಿಸಿ ನೋಡಿ ಅಲ್ಲಿದ್ದ ಮಹೇಂದ್ರ ಪರ್ವತವನ್ನು ಹತ್ತಿ ಹೋದನು. ಕಪಿಗಳೆಲ್ಲರೂ ನೋಡುತ್ತಿರುವಾಗ ಆ ಕಪಿಶ್ರೇಷ್ಠನು ಮಹೇಂದ್ರಗಿರಿಯ ಶಿಖರವನ್ನೇರಿ ಇಲ್ಲಿಂದಲ್ಲಿಗೆ ಸ್ವಲ್ಪಹೊತ್ತು ಸುತ್ತಾಡಿದನು. ಮಹಾಕಾಯನಾದ ಹನುಮಂತನ ಕಾಲ್ಗಳ ತುಳಿತದ ರಭಸಕ್ಕೆ ಪರ್ವತವು ಕಿರ್ರೆಂದು ಶಬ್ದ ಮಾಡಿತು. ಬಂಡೆಗಳು ಅಲ್ಲಾಡಿ ಉರುಳಿದವು. ಸಿಂಹಾದ್ರಿ ವನ್ಯ ಮೃಗಗಳು ಕಂಗಾಲಾದವು. ಭಯೋದ್ವಿಗ್ನರಾದ ತಪಸ್ವಿಗಳು ಹೆದರಿ ಅತ್ತಿತ್ತ ಓಡಿಹೋದರು. ಬಲೋದ್ಧತನಾದ

ಹನುಮಂತನು ತನ್ನ ಲಂಘನಗತಿಯು ಹೇಗಿರಬೇಕೆಂದು ಆಲೋಚಿಸುತ್ತ ಶ್ರೀರಾಮನ ಕಾರ್ಯವನ್ನು ಸಾಧಿಸುವುದಕ್ಕಾಗಿ ದೃಢಸಂಕಲ್ಪವನ್ನು ಮಾಡಿದನು. ತನ್ನಲ್ಲಿ ಉತ್ಸಾಹವನ್ನು ತಂದುಕೊಳ್ಳುವುದಕ್ಕಾಗಿ ಹನುಮಂತನು ಆ ಪರ್ವತವನ್ನು ಒಂದು ಸಲ ಗುದ್ದಿದನು. ಬೆಟ್ಟವು ಸೀಳಿಹೋಗುವುದೋ ಎಂಬಂತೆ ಶಬ್ದವಾಯಿತು. ಆಗ ಅಲ್ಲಿದ್ದ ತಪಸ್ವಿಗಳು ವಿಹಾರಾರ್ಥವಾಗಿ ಬಂದಿದ್ದ ವಿದ್ಯಾಧರರೂ 'ಈ ಪರ್ವತವು ಭೂಕಂಪದಿಂದ ಸೀಳಿ ಹೋಗುತ್ತಿದೆ' ಎಂದು ಭಾವಿಸಿ ಹೆದರಿಕೆಯಿಂದ ಆಕಾಶಕ್ಕೆ ಹಾರಿದರು. ಪರ್ವತದ ಮೇಲೆ ಇನ್ನೊಂದು ಪರ್ವತವೋ ಎಂಬಂತೆ ನಿಂತಿದ್ದ ಆ ಕಪಿವೀರನು ತನ್ನ ರೋಮಗಳನ್ನು ಒದರಿ ಮಹಾಮೇಘದಂತೆ ಒಂದು ಸಲ ಗರ್ಜಿಸಿದನು.

ಸುಂದರಕಾಂಡ

೪೦

ಸಮುದ್ರಲಂಘನ. ಮೈನಾಕ, ಸುರಸಾ, ಸಿಂಹಿಕೆಯರ ವೃತ್ತಾಂತ.

ಅನಂತರ ಧೀರನಾದ ಹನುಮಂತನು ಪ್ರಬಲವಾದ ತನ್ನ ಕೈಗಳನ್ನು ಪರ್ವತದ ಮೇಲೆ ದೃಢವಾಗಿ ಊರಿ ಸೊಂಟವನ್ನು ಕುಗ್ಗಿಸಿ, ಕಾಲುಗಳನ್ನು ಸ್ವಲ್ಪ ಬಾಗಿಸಿದನು. ತೇಜೋ ಬಲಗಳನ್ನು ತನ್ನಲ್ಲಿ ಆವೇಶ ಮಾಡಿಕೊಂಡನು. ಸಮುದ್ರದ ಮೇಲೆ ತಾನು ಹೋಗಬೇಕಾದ ಮಾರ್ಗದಲ್ಲಿ ಬಹುದೂರದವರೆಗೆ ದೃಷ್ಟಿಯನ್ನು ಬೀರಿ ತನ್ನನ್ನು ನೋಡುತ್ತಿದ್ದ ಕಪಿಗಳನ್ನು ಕುರಿತು ಹೀಗೆಂದನು: ''ಎಲೈ ಮಿತ್ರರೆ, ಶ್ರೀರಾಮನ ಕೋದಂಡದಿಂದ ಜಿಗಿದ ಬಾಣದಹಾಗೆ ವೇಗದಿಂದ ನೇರವಾಗಿ ಲಂಕಾಪಟ್ಟಣಕ್ಕೆ ಹೋಗಿಬಿಡುತ್ತೇನೆ. ಲಂಕೆಯಲ್ಲಿ ಜನಕಸುತೆಯನ್ನು ನಾನು ಕಾಣದಿದ್ದರೆ ದುಷ್ಟನಾದ ಆ ರಾವಣನನ್ನು ಹಗ್ಗಗಳಿಂದ ಬಿಗಿದು ಎಳೆದುಕೊಂಡು ಬರುತ್ತೇನೆ! ಸರ್ವಥಾ ಶ್ರೀರಾಮನ ಕಾರ್ಯವನ್ನು ಸಾಧಿಸಿಕೊಂಡು ಬರುವುದು ನಿಶ್ಚಯ'' ಎಂದು ಹೇಳಿದನು. ಇಷ್ಟು ಹೇಳಿ ಆ ವಾನರೋತ್ತಮನು ಉಸಿರನ್ನು ಬಿಗಿಹಿಡಿದು ಏನನ್ನೂ ಲೆಕ್ಕಿಸದೆ ಗಗನ ಮಾರ್ಗದಲ್ಲಿ ನೆಗೆದುಬಿಟ್ಟನು. ಆ ವೀರನು ಹಾರಿದ ವೇಗಕ್ಕೆ ಬೆಟ್ಟದಲ್ಲಿ ಬೆಳೆದಿದ್ದ ಮರಗಿಡಗಳು ಕೊಂಬೆಗಳ ಸಹಿತವಾಗಿ ಹಾರಿಹೋದವು! ಬಂಧುವನ್ನು ಬಹುದೂರ ಕಳಿಸಲು ಹೋಗುವ ಜನರಂತೆ ಆ ವೃಕ್ಷಗಳು ಹನುಮಂತನ ಹಿಂದ ಹಾರಿಹೋಗಿ ಸಮುದ್ರದಲ್ಲಿ ಬಿದ್ದವು. ಹನುಮಂತನು ತನ್ನ ಎರಡು ಕೈಗಳನ್ನೂ ಎರಡು ರೆಕ್ಕೆಗಳಂತೆ ನೀಳವಾಗಿ ಚಾಚಿದ್ದನು. ಆ ಮಹಾಕಪಿಯು ಹಾರುತ್ತಿರುವಾಗ ಇವನೇನು ಸಮುದ್ರವನ್ನು ಕುಡಿದು ಬಿಡುವನೋ, ಆಕಾಶವನ್ನೇ ನುಂಗಿ ಬಿಡುವನೋ ಎನಿಸುತ್ತಿತ್ತು. ತನ್ನ ಬಾಲವನ್ನು ಒಂದೊಂದು ಸಲ ನೆಟ್ಟಗೆ ಮೇಲಗಡೆ ಚಾಚಿ ನಿಲ್ಲಿಸುತ್ತಾ, ಒಮ್ಮೊಮ್ಮೆ ಚಕ್ರಾಕಾರವಾಗಿ ಮಡಿಸುತ್ತಾ ಹಾರುತ್ತಿದ್ದನು. ಸೂರ್ಯನೇ ದಕ್ಷಿಣ ದಿಕ್ಕಿಗೆ ಚಲಿಸುತ್ತಿರುವನೋ ಅಥವಾ ಒಂದು ಮಹಾ ಉಲ್ಕೆಯು ಪ್ರಜ್ವಲಿಸುತ್ತ ಎರಗುತ್ತಿದೆಯೋ ಎಂಬಂತೆ ಪ್ರಯಾಣ ಮಾಡುತ್ತಿದ್ದನು. ಅವನ ವಿಸ್ತಾರವಾದ ನೆರಳು ಸಮುದ್ರದ ಮೇಲೆ ಬಿದ್ದು ಒಂದು ದೊಡ್ಡ ಹಡಗು ಸಮುದ್ರಯಾನ ಮಾಡುವಂತೆ ಕಾಣಿಸುತ್ತಿತ್ತು. ಆತನ ವೇಗಕ್ಕೆ ಸಿಕ್ಕಿದ ಸಮುದ್ರವು ಕ್ಷುಬ್ಧವಾಗಿ ಮೊರೆಯುತ್ತ ನೊರೆಯುಗುಳುತ್ತ ಅಪಸ್ಮಾರ ರೋಗಿಯಂತೆ ಕಾಣುತ್ತಿತ್ತು. ಪರ್ವತಗಳಂತೆ ಸಮುದ್ರದ ಅಲೆಗಳು ಎದ್ದೆದ್ದು ಬೀಳುತ್ತಿದ್ದವು. ಈ ಪ್ರಕಾರವಾಗಿ ಮಹಾಪ್ರತಾಪಿಯಾದ ಹನುಮಂತನು ಸಾಗರದ ಮೇಲೆ

ಲಂಘಿಸುತ್ತಿರುವಾಗ ಸಮುದ್ರರಾಜನಿಗೆ ಒಂದು ಆಲೋಚನೆ ಹುಟ್ಟಿತು. ''ಈ ಹನುಮಂತನು ಶ್ರೀರಾಮನ ದೂತನಾಗಿ ಹೋಗುತ್ತಿದ್ದಾನೆ. ಶ್ರೀರಾಮನು ಇಕ್ಷ್ವಾಕು ವಂಶದವನು. ಆ ವಂಶದ ಸಗರಚಕ್ರವರ್ತಿಯಿಂದ ನಾನು ಅಭಿವೃದ್ಧಿಗೆ ಬಂದಿರುವೆನು. ಈ ಶ್ರೀರಾಮ ದೂತನಿಗೆ ನಾನೊಂದು ಉಪಕಾರವನ್ನು ಮಾಡಬೇಕು.'' ಹೀಗೆ ವಿಚಾರಮಾಡಿ ಸಮುದ್ರ ರಾಜನು, ತನ್ನಲ್ಲಿ ಮುಳುಗಿದ್ದ ಮೈನಾಕಗಿರಿಯನ್ನು ಕುರಿತು, ''ಮೈನಾಕ, ನಿನ್ನಿಂದ ನನಗೊಂದು ಕಾರ್ಯವಾಗಬೇಕಾಗಿದೆ. ಶ್ರೀರಾಮನ ದೂತನಾದ ಹನುಮಂತನು ಮೇಲ್ಗಡೆ ಹಾರಿಹೋಗುತ್ತಿದ್ದಾನೆ. ಇಕ್ಷ್ವಾಕು ವಂಶದವರಿಂದ ಉಪಕೃತನಾದ ನಾನು ಅವನಿಗೊಂದು ಸತ್ಕಾರವನ್ನು ಮಾಡಬೇಕು. ಮೈನಾಕ, ಮೇಲಕ್ಕೆ ಏಳು. ಹನುಮಂತನು ನಿನ್ನ ಶಿಖರದಲ್ಲಿ ಇರುವ ಫಲಮೂಲಗಳನ್ನು ತಿಂದು ಸ್ವಲ್ಪಹೊತ್ತು ವಿಶ್ರಮಿಸಿ ಮುಂದೆ ಹೋಗಲಿ'' ಎಂದನು. ಆಗ ಮೈನಾಕನು ಸಮುದ್ರ ಜಲವನ್ನು ಭೇದಿಸಿಕೊಂಡು ಮೇಲೆದ್ದನು. ತನ್ನ ದೇಹವಾದ ಪರ್ವತದ ಶಿಖರದಲ್ಲಿ ನಿಂತು ಹನುಮಂತನನ್ನು ಸ್ವಾಗತಿಸಬೇಕೆಂದಿದ್ದನು. ಅಷ್ಟರಲ್ಲಿ ಹನುಮಂತನು ತನ್ನ ಗತಿವೇಗಕ್ಕೆ ಏನೋ ವಿಘ್ನ ಬಂದಿತೆಂದು ತನ್ನ ಎದೆಯಿಂದಲೇ ತಳ್ಳಿ ಮೈನಾಕನನ್ನು ಕೆಳಗೆ ಉರುಳಿಸಿದನು. ಆಗ ಮೈನಾಕನು ಮತ್ತೆ ತನ್ನ ಪರ್ವತದೊಡನೆ ಮೇಲೆದ್ದು ಶಿಖರದ ಮೇಲೆ ಕಾಣಿಸಿಕೊಂಡು ವಿನಯದಿಂದ ಕೈಮುಗಿದು, ''ಆಂಜನೇಯ, ಅತಿಥಿಯಾದ ನಿನ್ನನ್ನು ಸತ್ಕರಿಸಲು ನಾನು ಮೇಲೆ ಬಂದಿದ್ದೇನೆ. ಸಮುದ್ರ ರಾಜನ ಪ್ರೇರಣೆಯಂತೆ ಮೇಲಕ್ಕೆ ಎದ್ದೆನೇ ಹೊರತು ನಿನಗೆ ಅಡ್ಡಿಮಾಡುವುದಕ್ಕಲ್ಲ. ನನ್ನ ಈ ಬೆಟ್ಟದಲ್ಲಿ ಬೇಕಾದಷ್ಟು ಫಲಮೂಲಗಳಿದೆ. ಅವುಗಳನ್ನು ತಿಂದು ಸ್ವಲ್ಪ ಹೊತ್ತು ವಿಶ್ರಮಿಸು'' ಎಂದನು. ಆಗ ಹನುಮಂತನು ''ಮೈನಾಕ, ನೀನು ಅತಿಥಿಸತ್ಕಾರ ಮಾಡಿದಂತೆಯೇ ಆಯಿತು. ನಾನು ಸಂತುಷ್ಟನಾಗಿದ್ದೇನೆ. ವಿಷಾದಿಸಬೇಡ. ಹಗಲು ಕಳೆದು ಹೋಗುತ್ತಿದೆ. ನಾನು ತ್ವರೆಯಿಂದ ಹೋಗಬೇಕು. ನಿನ್ನ ಮೃದುವಾಕ್ಯವೇ ನನಗೆ ಸತ್ಕಾರ'' ಎಂದು ಮೈನಾಕನನ್ನು ಮೈದಡವಿ ಮುಗುಳುನಗೆ ಬೀರುತ್ತ ಮುಂದೆ ಹೋದನು. ಸಮುದ್ರ ರಾಜನೂ ಮೈನಾಕನೂ ಗೌರವ ಬುದ್ಧಿಯಿಂದ ಹನುಮಂತನನ್ನು ನೋಡುತ್ತ ಅವನಿಗೆ ಶುಭವಾಗಲೆಂದು ಮನಸ್ಸಿನಲ್ಲಿ ಹಾರೈಸಿದರು. ಅಷ್ಟರಲ್ಲಿ ದೇವೇಂದ್ರನು ಪ್ರತ್ಯಕ್ಷನಾಗಿ ಮೈನಾಕನನ್ನು ಕುರಿತು ''ಮೈನಾಕ, ನಿನ್ನ ಕಾರ್ಯದಿಂದ ನಾನು ಸಂಪ್ರೀತನಾಗಿದ್ದೇನೆ. ಶ್ರೀರಾಮನ ದೂತನನ್ನು ಸತ್ಕರಿಸಲು ಪ್ರಯತ್ನಿಸಿದ್ದೀಯೆ. ನನಗೆ ಸಂತೋಷವಾಯಿತು. ಇನ್ನು ಮೇಲೆ ನನ್ನಿಂದ ನಿನಗೆ ಭಯವಿಲ್ಲ, ಎಲ್ಲಿ ಬೇಕಾದರೂ ಸಂಚರಿಸು'' ಎಂದು ಹೇಳಿ ಹೊರಟು ಹೋದನು. ಅಂದಿನಿಂದ ಮೈನಾಕನು ಇಂದ್ರನ ಭಯವನ್ನು ತೊರೆದು ಸುಖವಾಗಿದ್ದನು.

ಆಂಜನೇಯನು ಸಾಗರವನ್ನು ದಾಟಿ ಮುಂದೆ ಹೋಗುತ್ತಿರಲಾಗಿ, ದೇವ ಗಂಧರ್ವಾದಿಗಳು ಆತನ ಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕಾಗಿ ದೇವಮಾತೆ ಯಾದ ಸುರಸಾ ದೇವಿಯನ್ನು ಪ್ರೇರಿಸಿದರು. ಅವಳು ಭೀಕರರೂಪವನ್ನು ಧರಿಸಿ ಹನುಮಂತನೆದುರಿಗೆ ಬಂದು ನಿಂತು ''ಎಲೈ ಕಪಿಯೇ, ನನಗೆ ನೀನು ಆಹಾರವಾದೆ. ನನ್ನ ಬಾಯಿಯನ್ನು ಪ್ರವೇಶಿಸು'' ಎಂದು ನುಡಿದು ದೊಡ್ಡದಾಗಿ ತನ್ನ ಬಾಯಿಯನ್ನು ತೆರೆದು ಎದುರಿಗೆ ನಿಂತಳು. ಹನುಮಂತನು ಧೈರ್ಯದಿಂದ ಕೈಜೋಡಿಸಿ ''ದೇವಿ, ಶ್ರೀ ರಾಮನ ಒಂದು ಕಾರ್ಯಕ್ಕಾಗಿ ನಾನು ಹೊರಟಿದ್ದೇನೆ. ಸೀತಾದೇವಿಯನ್ನು ಹುಡುಕಲು ಲಂಕೆಗೆ ಹೋಗುತ್ತಿದ್ದೇನೆ. ನನಗೀಗ ಅಡ್ಡಿ ಮಾಡಬೇಡ. ಆ ದೇವಿಯನ್ನು ಹುಡುಕಿ ಆ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸಿ, ಆಮೇಲೆ ಬಂದು ನಿನಗೆ ಆಹಾರವಾಗುತ್ತೇನೆ. ಇದು ಸತ್ಯ'' ಎಂದನು. ಆಗ ಸುರಸೆಯು ''ಅದಾಗದು. ನೀನು ನನ್ನ ಬಾಯಿಯನ್ನು ಪ್ರವೇಶಿಸಲೇಬೇಕು'' ಎಂದು ನುಡಿದು ಮತ್ತಷ್ಟು ದೊಡ್ಡದಾಗಿ ತನ್ನ ಬಾಯಿಯನ್ನು ಹಿಗ್ಗಿಸಿದಳು. ಹನುಮಂತನು ಕಾಮರೂಪಿಯಾದ್ದರಿಂದ ತನ್ನ ದೇಹವನ್ನು ಅವಳ ಬಾಯಿಗಿಂತ ದೊಡ್ಡದಾಗಿ ಬೆಳೆಸಿದನು. ಸುರಸೆಯು ತನ್ನ ಬಾಯಿಯನ್ನು ಮತ್ತಷ್ಟು ದೊಡ್ಡದು ಮಾಡಿದಳು. ಚಾಣಾಕ್ಷನಾದ ಆಂಜನೇಯನು ತನ್ನ ದೇಹವನ್ನು ಒಡನೆಯೇ ಬಹಳ ಚಿಕ್ಕದನ್ನಾಗಿ ಮಾಡಿ ಅವಳ ಬಾಯೊಳಗೆ ಹೊಕ್ಕು ವೇಗದಿಂದ ಹೊರಗೆ ಬಂದು ಆಕಾಶದಲ್ಲಿ ನಿಂತನು. ಅನಂತರ ''ದಾಕ್ಷಾಯಣಿ, ನಿನ್ನ ಇಷ್ಟದಂತೆ ಬಾಯಿಯನ್ನು ಹೊಕ್ಕು ಬಂದಿದ್ದೇನೆ. ನಿನ್ನ ಇಚ್ಛೆ ನೆರವೇರಿತಷ್ಟೆ? ಇನ್ನು ನನಗೆ ಅಡ್ಡಿ ಮಾಡಬೇಡ'' ಎಂದನು. ಸುರಸೆಯು ಅವನ ಬುದ್ಧಿಮತ್ತೆಗೆ ಮೆಚ್ಚಿ ಸುಪ್ರೀತಳಾಗಿ ''ವಾನರೋತ್ತಮ, ನಿನ್ನ ಕಾರ್ಯವು ಸಿದ್ಧಿಸಲಿ. ಶ್ರೀರಾಮನ ಕಾರ್ಯವನ್ನು ನಡೆಸಿ ಕೃತಕೃತ್ಯನಾಗು'' ಎಂದು ಹೇಳಿ ಪಕ್ಕಕ್ಕೆ ಸರಿದಳು. ಹನುಮಂತನು ಮಹಾವೇಗದಿಂದ ಮುಂದೆಸಾಗಿ ಮೋಡಗಳ ಸಂದಿನಲ್ಲಿ ಮರೆಯಾಗುತ್ತಲೂ ಮತ್ತೆ ಆಗಾಗ ಕಾಣಿಸಿಕೊಳ್ಳುತ್ತಲೂ ಮುಂದಕ್ಕೆ ಸಾಗುತ್ತಿದ್ದನು. ರೆಕ್ಕೆಯುಳ್ಳ ಬೆಟ್ಟದಂತೆ ಸಾಗಿ ಬರುತ್ತಿದ್ದ ಆತನನ್ನು ಸಿಂಹಿಕೆ ಎಂಬ ರಾಕ್ಷಸಿಯು ನೋಡಿದಳು. ಬ್ರಹ್ಮನ ವರದಿಂದ ಆಕೆಗೆ ಒಬ್ಬ ವ್ಯಕ್ತಿಯ ನೆರಳನ್ನು ಜಗ್ಗಿ ಹಿಡಿಯುವ ಶಕ್ತಿ ಲಭಿಸಿತ್ತು. ಅವಳು ಹನುಮಂತನ ನೆರಳನ್ನು ಹಿಡಿದು ಜಗ್ಗಿದಳು. ಆಗ ಹನುಮಂತನು ''ಇದೇನು? ನನ್ನ ವೇಗಕ್ಕೆ ಅಡ್ಡಿಯಾಗುತ್ತಿದೆ. ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ಆಗಿದ್ದೇನೆ'' ಎಂದು ಚಿಂತಿಸುತ್ತಾ ಕೆಳಗೆ ನೋಡಿದನು. ಭೂತಾಕಾರದ ಸಿಂಹಿಕೆ ಅವನಿಗೆ ಗೋಚರಿಸಿದಳು. ''ಓಹೋ, ನಮ್ಮ ಸುಗ್ರೀವನು ಹೇಳಿದ ಛಾಯಾಗ್ರಹವೆಂಬ ಭೂತವಿದು'' ಎಂದು ನಿಶ್ಚಯಿಸಿ ತನ್ನ ದೇಹವನ್ನು ಇನ್ನೂ ದೊಡ್ಡದಾಗಿ ಬೆಳೆಸಿದನು. ಆಗ ರಾಕ್ಷಸಿಯು ತನ್ನ ಬಾಯಿಯನ್ನು ಹಿಗ್ಗಿಸಿ ಗುಡುಗಿನಂತೆ

ಮೊರೆಯುತ್ತಾ ಹನುಮಂತನನ್ನು ಅಟ್ಟಿಸಿಕೊಂಡು ಬಂದಳು. ವಜ್ರದೇಹಿಯಾದ ಆ ಮಹಾಕಪಿಯು ಕೂಡಲೇ ತನ್ನ ದೇಹವನ್ನು ಚಿಕ್ಕದಾಗಿ ಮಾಡಿಕೊಂಡು ರಾಹುವಿನ ಬಾಯಿಯಲ್ಲಿ ಹೋಗುವ ಚಂದ್ರನಂತೆ ಅವಳ ಬಾಯಿಯಲ್ಲಿ ನುಗ್ಗಿ ಬಿಟ್ಟನು. ಆಕಾಶಮಾರ್ಗದಲ್ಲಿ ದೇವ ಗಂಧರ್ವಾದಿಗಳು ಈ ದೃಶ್ಯವನ್ನು ನೋಡುತ್ತಿದ್ದರು. ಒಡನೆಯೇ ಆ ಕಪಿವೀರನು ತನ್ನ ಚೂಪಾದ ಉಗುರುಗಳಿಂದ ಸಿಂಹಿಕೆಯ ಎದೆಯನ್ನು ಸೀಳಿ ಹೊರಗೆ ಬಂದನು. ಸಿಂಹಿಕೆಯು ಸತ್ತು ಸಮುದ್ರದಲ್ಲಿ ಬಿದ್ದಳು. ಅದನ್ನು ನೋಡುತ್ತಿದ್ದ ದೇವತೆಗಳು ಆಶ್ಚರ್ಯದಿಂದ ''ವಾನರೋತ್ತಮ, ನಿನ್ನ ಧೈರ್ಯ, ವಿವೇಕ, ದಕ್ಷತೆ ಇವುಗಳಿಗೆ ಎಣೆಯೇ ಇಲ್ಲ. ನಿನ್ನ ಉದ್ದೇಶವು ನಿರ್ವಿಘ್ನವಾಗಿ ನೆರವೇರಲಿ'' ಎಂದು ಕೊಂಡಾಡಿದರು. ಹನುಮಂತನು ಮತ್ತೆ ತನ್ನ ದೇಹವನ್ನು ಬೆಳೆಸಿ ಗರುಡವೇಗದಿಂದ ಹೋಗುತ್ತ ಸುಮಾರು ನೂರು ಯೋಜನಗಳಷ್ಟು ದೂರ ಬಂದು ಬಿಟ್ಟನು. ಮುಂದೆ ಸಮುದ್ರ ತೀರದಲ್ಲಿ ನಾನಾ ವೃಕ್ಷಗಳಿಂದ ಭೂಷಿತವಾದ ಲಂಕಾದ್ವೀಪವು ಕಾಣಿಸಿತು. 'ಓಹೋ, ಆ ದುಷ್ಟ ರಾವಣನಿರುವ ಲಂಕೆ ಮುಂದಿದೆ. ರಾಕ್ಷಸರು ನನ್ನನ್ನು ಕಂಡು ಬಿಟ್ಟಾರು' ಎಂದು ದೇಹವನ್ನು ಚಿಕ್ಕದಾಗಿ ಮಾಡಿಕೊಂಡು ಎದುರಿಗಿದ್ದ ತ್ರಿಕೂಟ ಪರ್ವತದ 'ಲಂಬ' ಎಂಬ ಉನ್ನತ ಶಿಖರದ ಮೇಲೆ ಧುಮುಕಿದನು. ಧುಮುಕಿದ ರಭಸಕ್ಕೆ ಅಲ್ಲಿದ್ದ ಮೃಗಪಕ್ಷಿಗಳು ಹೆದರಿ ಓಡಿಹೋದವು. ಆತನಿಗೆ ಲಂಕಾನಗರಿಯು ಸ್ಪಷ್ಟವಾಗಿ ಗೋಚರಿಸಿತು. ಅವನು ಒಂದು ಸಲವೂ ನಿಟ್ಟುಸಿರು ಬಿಡಲಿಲ್ಲ. ತನ್ನ ಮನಸ್ಸಿನಲ್ಲಿ ''ಈ ನೂರು ಯೋಜನಗಳು ಯಾವ ಲೆಕ್ಕಕ್ಕೆ? ಇಂಥ ಎಷ್ಟೋ ನೂರು ಯೋಜನಗಳನ್ನು ದಾಟಬಲ್ಲೆನು!''ಎಂದುಕೊಂಡನು.

೪೧

ಲಂಕಾಧಿ ದೇವತೆಯ ಭಂಗ. ಲಂಕೆಯಲ್ಲಿ ಸೀತಾನ್ವೇಷಣೆ, ಸೀತೆಯನ್ನು ಕಾಣದೆ ಹನುಮಂತನು ಚಿಂತಾಕ್ರಾಂತನಾಗುವುದು, ಅಶೋಕವನಗಮನ

ಅನಂತರ ಆ ವೀರಾಗ್ರಣಿಯಾದ ಕಪಿಶ್ರೇಷ್ಠನು ಸುತ್ತಲೂ ಬೆಳೆದ ದೇವದಾರು, ಖರ್ಜೂರ ಮೊದಲಾದ ವೃಕ್ಷಗಳನ್ನು ನೋಡುತ್ತ ಲಂಕೆಯ ಕಡೆಗೆ ಹೋದನು. ಲಂಕೆಯ ಸುತ್ತಲೂ ರಾವಣನು ಕಾವಲನ್ನು ಬಿಗಿ ಪಡಿಸಿದ್ದನು. ದೊಡ್ಡದಾದ ಕೋಟೆಯು ಆ ಪಟ್ಟಣವನ್ನು ಸುತ್ತುಗಟ್ಟಿತ್ತು. ಭೀಕರಾಕಾರದ ರಾಕ್ಷಸರು ಆಯುಧಗಳನ್ನು ಹಿಡಿದು ಲಂಕೆಯನ್ನು ಕಾಯುತ್ತಿದ್ದರು. ಹನುಮಂತನು ಮನಸ್ಸಿನಲ್ಲಿ 'ಪ್ರಬಲವಾದ ಕಾವಲಿರುವ ಈ ಲಂಕೆಗೆ ನಮ್ಮ ವಾನರರು ಬಂದರೂ ಏನು

ಮಾಡಬಲ್ಲರು?' ಎಂದು ಚಿಂತಾಕ್ರಾಂತನಾಗಿ ''ಇರಲಿ, ಮೊದಲು ನಾನು ಸೀತಾದೇವಿಯನ್ನು ಕಾಣಬೇಕಾಗಿದೆ. ಈ ರಾಕ್ಷಸರನ್ನು ವಂಚಿಸಿಯೇ ನಾನು ಜಾನಕಿಯನ್ನು ಹುಡುಕಬೇಕು, ರಾತ್ರಿಯಾಗಲಿ'' ಎಂದು ನಿರ್ಧರಿಸಿ ಸೂರ್ಯನು ಮುಳುಗುವುದನ್ನು ಕಾಯುತ್ತ ಮರೆಯಲ್ಲಿ ನಿಂತನು.

ರಾತ್ರಿಯಾಯಿತು. ಚಂದ್ರನು ಉದಿಸಿದನು. ಬೆಳದಿಂಗಳು ಹರಡಿತು. ಕಾಮರೂಪಿಯಾದ ಆಂಜನೇಯನು ತನ್ನ ದೇಹವನ್ನು ಬೆಕ್ಕಿನಗಾತ್ರದಷ್ಟು ಚಿಕ್ಕದಾಗಿ ಮಾಡಿಕೊಂಡು ಲಂಕೆಯನ್ನು ಪ್ರವೇಶಿಸಲು ಸಿದ್ಧನಾದನು. ಹನುಮಂತನು ಕೋಟೆಯ ಒಂದು ಪ್ರದೇಶದಲ್ಲಿ ಲಂಕೆಯೊಳಗೆ ಹೋಗಲು ಪ್ರಯತ್ನಿಸುತ್ತಿರುವಾಗ ಲಂಕಾಧಿದೇವತೆಯಾದ ಲಂಕಿಣಿಯು ಎದುರಾದಳು. ಅವಳು ಹನುಮಂತನೆದುರಿಗೆ ಆರ್ಭಟಿಸುತ್ತ ಬಂದು ನಿಂತು ''ಎಲೈ ಕಪಿಯೆ, ಯಾರು ನೀನು? ಇಲ್ಲಿ ನಿನಗೇನು ಕೆಲಸ?'' ಎಂದು ಗರ್ಜಿಸಿದಳು. ಧೀರನಾದ ಆ ವಾನರ ವೀರನು ಆಕೆಯನ್ನು ನೋಡಿ ''ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ. ನೀನು ಯಾರೆಂಬುದನ್ನು ಮೊದಲು ಹೇಳು. ಏನಿದು ನಿನ್ನ ವಿಕಾರರೂಪ! ನನ್ನನ್ನು ತಡೆದು ಗದರಿಸುತ್ತಿರುವುದೇಕೆ?''ಎಂದು ಕೇಳಿದನು. ಆ ಲಂಕಾಧಿದೇವತೆಯು ಮತ್ತಷ್ಟು ಕ್ರುದ್ಧಳಾಗಿ ''ಎಲೈ ಕಪಿಯೆ, ರಾವಣನ ಆಜ್ಞೆಯಂತೆ ನಾನು ಈ ನಗರವನ್ನು ಕಾಯುತ್ತಿದ್ದೇನೆ. ನಾನೇ ಲಂಕಾಧಿದೇವತೆ. ನಿನ್ನನ್ನು ಒಳಗೆ ಬಿಡುವುದಿಲ್ಲ, ತಿಳಿಯಿತೆ?'' ಎಂದು ಗಜರಿದಳು. ಹನುಮಂತನು ಸ್ವಲ್ಪವೂ ಹೆದರದೆ ''ನನಗೆ ಈ ಲಂಕೆಯನ್ನು ನೋಡಲು ಇಚ್ಛೆಯಾಗಿದೆ. ಭದ್ರೆ, ಒಂದು ಸಲ ಈ ಪಟ್ಟಣವನ್ನು ನೋಡಿಕೊಂಡು ನನ್ನ ಪಾಡಿಗೆ ನಾನು ಹೊರಟುಹೋಗುತ್ತೇನೆ' ಎಂದನು. ಆಗ ಲಂಕಿಣಿಯು ''ಎಲೈ, ಬುದ್ಧಿಗೇಡಿ ಮಂಗ, ನಿನ್ನನ್ನು ಒಳಗೆ ಬಿಡುವುದಿಲ್ಲ, ಹೊರಡು ಇಲ್ಲಿಂದ''– ಎನ್ನುತ್ತ ಹನುಮಂತನಿಗೆ ಒಂದು ಬಲವಾದ ಪೆಟ್ಟನ್ನು ಕೊಟ್ಟಳು. ಅವನಿಗೆ ಕೋಪ ಉಕ್ಕಿತು. ಆತನು ಒಂದು ಸಲ ಗರ್ಜಿಸಿ ತನ್ನ ಎಡಗೈ ಮುಷ್ಟಿಯಿಂದ ಲಂಕಿಣಿಯನ್ನು ಗುದ್ದಿದನು. ಅಷ್ಟಕ್ಕೆ ಆ ರಾಕ್ಷಸಿಯು ಕುಸಿದು ನೆಲದ ಮೇಲೆ ಬಿದ್ದಳು. ಅವಳು ಹೆಂಗಸೆಂದು ಹನುಮಂತನು ಮರುಕದೋರಿ ಸುಮ್ಮನಾದನು. ಅವಳು ಎದ್ದು ನಿಂತು ಗದ್ಗದ ಸ್ವರದಿಂದ ''ವಾನರೋತ್ತಮ, ನನ್ನನ್ನು ಕಾಪಾಡು. ನೀನು ಮಹಾಬಲಶಾಲಿ. ಬ್ರಹ್ಮದೇವನು ನನ್ನನ್ನು ಕುರಿತು 'ಒಬ್ಬ ವಾನರನು ಬಂದು ಯಾವಾಗ ನಿನ್ನನ್ನು ಸೋಲಿಸುತ್ತಾನೋ ಆಗ ಈ ರಾಕ್ಷಸರಿಗೆ ವಿಪತ್ಕಾಲವು ಬಂದಿತೆಂದು ತಿಳಿ' ಎಂದು ಹೇಳಿದ್ದನು. ಇದೊಂದು ಸತ್ಯವಾದ ಸಂಗತಿ. ಅಂತಹ ಸಮಯ ಬಂದಿತೆಂದು ತೋರುತ್ತದೆ. ಸೀತಾ ನಿಮಿತ್ತವಾಗಿ ರಾವಣನಿಗೂ ಈ ರಾಕ್ಷಸರಿಗೂ ಕಷ್ಟದಕಾಲ ಒದಗಿತು. ನೀನಿನ್ನು ಒಳಗೆ ಹೋಗು. ಪತಿವ್ರತೆಯಾದ

ಜನಕಸುತೆಯನ್ನು ಹುಡುಕುವುದು ನಿನ್ನ ಉದ್ದೇಶವಾಗಿರಬಹುದು'' ಎಂದು ಹೇಳಿ ಹೊರಟುಹೋದಳು.

ಮಹಾತೇಜಸ್ವಿಯಾದ ಆಂಜನೇಯನು ಲಂಕಾದೇವತೆಯನ್ನು ಜಯಿಸಿ ಕೋಟೆಯ ಗೋಡೆಯಿಂದ ಹಾರಿ ಲಂಕೆಯೊಳಗೆ ಇಳಿದನು. ಇಳಿಯುವಾಗ ಶತ್ರುವಿನ ತಲೆಯನ್ನು ಮೆಟ್ಟುವಂತೆ ತನ್ನ ಎಡಗಾಲನ್ನು ಮೊದಲು ನೆಲದಮೇಲೆ ಊರಿದನು. ಧೀರನಾದ ಹನುಮಂತನು ಸೀತಾನ್ವೇಷಣೆಗಾಗಿ ಹೊರಟು ಬೀದಿಯ ಇಕ್ಕೆಲಗಳಲ್ಲಿದ್ದ ಪ್ರಾಸಾದಗಳ ಮೇಲೆ ಸಂಚರಿಸುತ್ತ ಹೋದನು. ನಗರದ ಚೆಲುವನ್ನು ಕಂಡು ಅವನಿಗೆ ಸಂತೋಷವಾಯಿತು. ಬೀದಿಯಲ್ಲಿ ವಿಕಾರರೂಪದ ರಾಕ್ಷಸರು ಸಂಚರಿಸುತ್ತಿದ್ದರು. ಅವನು ಎಚ್ಚರಿಕೆಯಿಂದ ಎಲ್ಲ ಕಡೆಗೂ ನೋಡುತ್ತ ''ಈಗ ರಾವಣನ ಅರಮನೆಗೆ ಹೋಗುವೆನು. ಈ ಪ್ರಾಂತದಲ್ಲೆಲ್ಲಿಯೂ ಸೀತಾದೇವಿಯ ಸುಳಿವಿಲ್ಲ'' ಎಂದು ಆಲೋಚಿಸಿ ಅತ್ಯುನ್ನತ್ತವೂ ವಿಶಾಲವೂ ಆಗಿದ್ದ ಅರಮನೆಯ ಕಡೆಗೆ ಹೋದನು. ಅರಮನೆಯ ಸುತ್ತಮುತ್ತಲೂ ಇರುವ ಪ್ರಾಸಾದಗಳಲ್ಲಿ ಸೀತೆಯು ಕಾಣಿಸಲಿಲ್ಲ. ''ಈ ಕಡೆಯಲ್ಲೆಲ್ಲಿಯೂ ಆದೇವಿಯು ಇಲ್ಲ. ರಾವಣನ ಅಂತಃಪುರದೊಳಗೇ ಇರಬಹುದೆ?'' ಎಂದು ಚಿಂತಿಸುತ್ತ ಮಧ್ಯರಾತ್ರಿಯ ಸಮಯದಲ್ಲಿ ಗುಟ್ಟಾಗಿ ಅಂತಃಪುರವನ್ನು ಪ್ರವೇಶಿಸಿದನು. ಅತ್ಯಂತ ವೈಭವದಿಂದ ಮೆರೆಯುತ್ತಿದ್ದ ಲಂಕೇಶ್ವರನ ಅಂತಃಪುರದಲ್ಲಿ ವಿಲಾಸಿನಿಯರು ಮದ್ಯವನ್ನು ಕುಡಿದು ನರ್ತಿಸಿ, ಹಾಡಿ, ಬಳಲಿ ಮಲಗಿದ್ದರು. ಎಲ್ಲರೂ ನಿದ್ರಾವಶರಾಗಿದ್ದರು. ಒಂದು ಸ್ತ್ರೀಪರಿವಾರವೇ ಅಲ್ಲಿ ಮಲಗಿತ್ತು. ಸೀತಾದೇವಿಯು ಹೇಗಿದ್ದಾಳೆ? ಅವಳು ಧರಿಸಿದ್ದ ವಸ್ತ್ರಗಳಾವುವು? ಅವಳ ಮುಖ ಲಕ್ಷಣಗಳೇನು? – ಎಂಬುದನ್ನೆಲ್ಲ ಅವನು ಕೇಳಿ ತಿಳಿದುಕೊಂಡಿದ್ದನು. ಅಲ್ಲದೆ ಪತಿವ್ರತೆಯಾದ ಆ ಸಾಧ್ವಿಯು ತನ್ನನ್ನು ಬಲಾತ್ಕಾರವಾಗಿ ಅಪಹರಿಸಿಕೊಂಡು ಬಂದ ಈ ರಾಕ್ಷಸನ ಬಳಿಯಲ್ಲಿ ಯಾವ ಸ್ಥಿತಿಯಲ್ಲಿದ್ದಾಳು? ಎಂಬುದನ್ನು ಊಹಿಸಿಕೊಂಡಿದ್ದನು. ಆದ್ದರಿಂದ ಇವಳು ಸೀತೆಯಲ್ಲ, ಇವಳು ಸೀತೆಯಲ್ಲ–ಎಂದು ನಿರ್ಧರಿಸುವುದು ಅವನಿಗೇನೂ ಕಷ್ಟವಾಗಲಿಲ್ಲ. ಅಂತಃಪುರದಲ್ಲಿ ಕುಣಿದು ದಣಿದು ಮಲಗಿದ್ದ ಆ ಸುಂದರಿಯರನ್ನು ನೋಡುತ್ತ ನೋಡುತ್ತ ಅವರಾರೂ ಸೀತೆಯಲ್ಲ ಎಂದು ಮನಸ್ಸಿಗೆ ನಿಶ್ಚಯವಾಯಿತು. ಆದರೆ ಇನ್ನೊಂದು ಚಿಂತೆ ಹುಟ್ಟಿತು. ''ಎಲಾ, ಈ ಸ್ತ್ರೀಯರು ನಿದ್ರಿಸುತ್ತಿರುವಾಗ ನಾನು ನೋಡುತ್ತ ಬಂದೆನಲ್ಲ. ಪರಸ್ತ್ರೀಯರನ್ನು ಗಮನಿಸಿ ನೋಡುವುದು ಪಾಪಕಾರ್ಯವಲ್ಲವೆ?'' ಎಂದುಕೊಂಡನು. ಆಮೇಲೆ ''ಪಾಪ ಪುಣ್ಯಗಳಿಗೆ ಮನಸ್ಸೇ ಮುಖ್ಯವಾದದ್ದು. ನನ್ನ ಮನಸ್ಸು ನನಗೆ ಅಧೀನವಾಗಿದೆ. ಇದು ಸ್ವಲ್ಪವೂ ವಿಚಲಿತವಾಗಲಿಲ್ಲ. ಸ್ತ್ರೀಯನ್ನು ಹುಡುಕುವುದಕ್ಕಾಗಿ ಬಂದ ನಾನು ಸ್ತ್ರೀಯರ

ಮಧ್ಯದಲ್ಲಿ ಹುಡುಕದೆ ಮೃಗಪಕ್ಷಿಗಳ ಮಧ್ಯದಲ್ಲಿ ಹುಡುಕಲೆ? ನನಗೆ ದೋಷವಿಲ್ಲ'' ಎಂದು ಸಮಾಧಾನ ಮಾಡಿಕೊಂಡನು. ಹೀಗೆ ಅಂತಃಪುರವನ್ನೆಲ್ಲ ಶೋಧಿಸುತ್ತ ಕಡೆಗೆ ದಿವ್ಯವಾದ ಇನ್ನೊಂದು ಪ್ರಾಂಗಣಕ್ಕೆ ಬಂದನು. ಅತ್ಯಂತ ಸುಂದರವಾಗಿದ್ದ ಆ ಸ್ಥಳದಲ್ಲಿ ಬಂದು ದೊಡ್ಡ ಮಂಚದಮೇಲೆ ರಾವಣನು ಮಲಗಿದ್ದನು! ಆತನ ಭವ್ಯವೂ ದೊಡ್ಡದೂ ಆದ ಆಕೃತಿಯನ್ನು ಕಂಡೊಡನೆ ಅವನೇ ರಾವಣನೆಂದು ಹನುಮಂತನಿಗೆ ನಿಶ್ಚಯವಾಯಿತು. ಮೇಘದಂತೆ ಕಪ್ಪು ದೇಹದ ಆ ರಾವಣನು ಪ್ರಜ್ವಲಿಸುವ ಒಡವೆಗಳನ್ನು ಧರಿಸಿ ರೇಷ್ಮೆಯ ದುಕೂಲವನ್ನುಟ್ಟು ಮೈಗೆ ಚಂದನವನ್ನು ಬಳಿದುಕೊಂಡಿದ್ದನು. ಬುಸುಗುಟ್ಟುವ ಮಹಾಸರ್ಪದಂತೆ ಉಸಿರು ಬಿಡುತ್ತಿದ್ದ ರಾವಣನನ್ನು ಕಂಡೊಡನೆ ಹನುಮಂತನು ಒಂದು ಕ್ಷಣಕಾಲ ಗಪ್ಪನೆ ನಿಂತು ಹಿಂದಕ್ಕೆ ಸರಿದನು. ಆಮೇಲೆ ರಾವಣನ ಮಂಚಕ್ಕೆ ಸಮೀಪದಲ್ಲಿ ಇನ್ನೊಂದು ಮಂಚದಮೇಲೆ ಮಲಗಿದ್ದ ಪರಮ ಸುಂದರಿಯಾದ ಸ್ತ್ರೀಯೊಬ್ಬಳು ಹನುಮಂತನಿಗೆ ಗೋಚರಿಸಿದಳು. ಚಿನ್ನದ ಮೈಬಣ್ಣದಿಂದ ಕಂಗೊಳಿಸುತ್ತಿದ್ದ ಆ ಸುಂದರಿಯು ರಾವಣನ ರಾಣಿಯಾದ ಮಂಡೋದರಿ. ಹನುಮಂತನು ಅವಳ ರೂಪವನ್ನೂ ಯೌವನ ಸಂಪತ್ತನ್ನೂ ನೋಡಿ ಇವಳು ಸೀತೆಯೆಂದು ಭ್ರಮಿಸಿ, ಆನಂದದಿಂದ ಬಾಲವನ್ನು ಬಡಿದು ಹಿಗ್ಗಿಹಾಡುತ್ತ ಕುಣಿದಾಡಿದನು! ಇಲ್ಲಿಂದಲ್ಲಿಗೆ ತಿರುಗಾಡಿದನು. ಸ್ತಂಭಗಳನ್ನು ಹತ್ತಿ ಧುಮುಕಿದನು. ಒಬ್ಬ ಸಾಮಾನ್ಯ ಕಪಿಯಂತೆ ತನ್ನ ಬಾಲಕ್ಕೆ ಮುತ್ತಿಟ್ಟು ಒಂದು ಕ್ಷಣಕಾಲ ತನ್ನ ಕಪಿಚೇಷ್ಟೆಯನ್ನು ಮೆರೆಸಿಬಿಟ್ಟನು!

ಆಮೇಲೆ ಹನುಮಂತನು ''ಎಂದಿಗಾದರೂ ಉಂಟೆ? ಸಾಧ್ವೀಶಿರೋಮಣಿಯಾದ ಜಾನಕಿಯು ರಾವಣನ ಬಳಿಯಲ್ಲಿ ಮಲಗಿರುವುದುಂಟೆ? ಶ್ರೀರಾಮನನ್ನಗಲಿದ ಆ ದೇವಿಗೆ ನಿದ್ರೆಯಾದರೂ ಬಂದೀತೆ? ಛೇ, ನಾನೆಂತಹ ಬುದ್ಧಿಗೇಡಿ'' ಎಂದುಕೊಂಡು ಅವಳು ಸೀತೆಯಲ್ಲವೆಂದು ನಿರ್ಧರಿಸಿಬಿಟ್ಟನು. ಅನಂತರ ಅಂತಃಪುರದ ಪಾನಭೂಮಿಯನ್ನು ಪ್ರವೇಶಿಸಿ ನಾನಾ ಬಗೆಯ ಖಾದ್ಯಗಳೂ, ಪೇಯಗಳೂ ಹರಡಿರುವುದನ್ನೂ ಅನೇಕ ಸುಂದರಿಯರು ಅಲ್ಲಲ್ಲಿ ಮಲಗಿರುವುದನ್ನೂ ಕಂಡನು. ''ಇಲ್ಲ, ಅಂತಃಪುರದಲ್ಲಿ ಸೀತಾದೇವಿಯಿರುವ ಸಂದರ್ಭವೇ ಇಲ್ಲ'' ಎಂದು ಅಲ್ಲಿಂದ ಹೊರಟು ಅರಮನೆಗೆ ಸೇರಿದ್ದ ಲತಾಗೃಹಗಳನ್ನೂ ಚಿತ್ರಶಾಲೆಗಳನ್ನೂ ಇನ್ನೂ ಅನೇಕ ಸ್ಥಳಗಳನ್ನೂ ಶೋಧಿಸಿದನು. ಎಲ್ಲಿಯೂ ಸೀತೆಯ ಸುಳಿವಿಲ್ಲ. ಸೀತೆಯನ್ನು ಕಾಣದೆ ಚಿಂತಾಮಗ್ನನಾದನು. ಅವನು ಎತ್ತರವಾದ ಒಂದು ಪ್ರಾಕಾರದ ಮೇಲೆ ಕುಳಿತುಕೊಂಡು ತನ್ನ ಮನಸ್ಸಿನಲ್ಲಿ ''ಎಷ್ಟು ಶೋಧಿಸಿದರೂ ಮೈಥಿಲಿಯು ದೊರಕಲಿಲ್ಲ. ಪತಿವ್ರತೆಯಾದ ಆ ದೇವಿಯನ್ನು ಒಲಿಸಿಕೊಳ್ಳಲಾರದೆ ಈ ರಾಕ್ಷಸನು

ಅವಳನ್ನು ಕೊಂದಿರಬಹುದೆ? ಘೋರಾಕಾರದ ಈ ರಾಕ್ಷಸಿಯರನ್ನು ಕಂಡು ಸೀತೆಯು ಹೆದರಿ ಪ್ರಾಣವನ್ನು ತೊರೆದಿರಬಹುದೆ? ಈಗೇನು ಮಾಡಲಿ?'' ಎಂದು ತೀವ್ರವಾದ ವ್ಯಥೆಗೆ ಒಳಗಾದನು. ''ನಾನು ಶ್ರೀರಾಮನ ಪತ್ನಿಯನ್ನು ಕಾಣದೆ ಹಿಂದಿರುಗಿದರೆ ಕ್ರುದ್ಧನಾದ ಜಾಂಬವಂತನೂ ಅಂಗದನೂ ಏನು ಹೇಳಿಯಾರು? ಸಂಪಾತಿಯು ಲಂಕೆಯಲ್ಲಿ ಸೀತೆಯಿದ್ದಾಳೆಂದೂ, ತನಗೆ ದೂರದೃಷ್ಟಿಯಿರುವುದರಿಂದ ಅವಳನ್ನು ಕಾಣುತ್ತಿದ್ದೇನೆಂದೂ ಹೇಳಿದ್ದಾನೆ. ಅವಳು ಈ ಭವನಗಳಲ್ಲಿ ಇಲ್ಲ. ಹಾಗಾದರೆ ಅವಳು ಎಲ್ಲಿದ್ದಿರಬಹುದು? ಪತ್ನಿಯಲ್ಲಿ ಅಷ್ಟೊಂದು ಪ್ರೇಮವಿಟ್ಟಿರುವ ಶ್ರೀರಾಮನಿಗೆ ನಾನು ಹಿಂದಿರುಗಿ ಹೋಗಿ ಏನೆಂದು ಹೇಳಲಿ? ಸೀತೆಯನ್ನು ಕಾಣಲಿಲ್ಲವೆಂದೆ? ರಾಕ್ಷಸರು ಅವಳನ್ನು ಕೊಂದಿದ್ದಾರೆಂದೆ? ಏನು ಹೇಳಲೂ ಸಾಧ್ಯವಿಲ್ಲ. ಆ ಮಹಾತ್ಮನು ನನ್ನನ್ನು ನಂಬಿ ಅಂಗುಲೀಯಕವನ್ನು ನನಗೆ ಕೊಟ್ಟಿದ್ದಾನೆ. ಈಗ ಏನು ಮಾಡಬೇಕು? ಪರಿಸ್ಥಿತಿಯು ಬಿಕ್ಕಟ್ಟಿಗೆ ಬಂದಿತು. ನಾನು ಬರಿಗೈಯಲ್ಲಿ ಹಿಂದೆ ಹೋಗುವುದಕ್ಕಿಂತ ಇಲ್ಲಿಯೇ ಪ್ರಾಣವನ್ನು ಬಿಡುವುದು ಲೇಸು. ಈ ಸೋಲು ಮೋರೆಯನ್ನು ಯಾರಿಗೂ ತೋರಿಸಲಾರೆ'' ಎಂದು ನಾನಾ ವಿಧವಾಗಿ ಆಲೋಚಿಸುತ್ತಾ ಯಾವ ನಿಶ್ಚಯವೂ ಇಲ್ಲದೆ ಶೋಕಾವಿಷ್ಟನಾದನು. ಅನಂತರ ದೂರದಲ್ಲಿರುವ ಅಶೋಕವೃಕ್ಷಗಳಿರುವ ವನವು ಒಂದು ಅವನಿಗೆ ಕಾಣಿಸಿತು. ಆಂಜನೇಯನು ''ಓಹೋ! ಅಲ್ಲೊಂದು ವೃಕ್ಷವಾಟಿಕೆ ಕಾಣಿಸುತ್ತಿದೆ. ಅದನ್ನು ನಾನು ಹುಡುಕಲಿಲ್ಲ. ಉತ್ಸಾಹವೇ ಕಾರ್ಯವನ್ನು ಸಾಧಿಸಬಲ್ಲದು. ಆದ್ದರಿಂದ ನಾನು ಉತ್ಸಾಹಗೆಡದೆ ಆ ವನಕ್ಕೆ ಹೋಗುವೆನು. ಸಂಪಾತಿಗೆ ಕಾಣಿಸಿದ ಆ ದೇವಿಯು ಬಹುಶಃ ಅಲ್ಲಿಯೇ ಇರಬೇಕು'' ಎಂದು ಆಲೋಚಿಸಿ ಉತ್ಸಾಹದಿಂದ ಎದ್ದು ನಿಂತನು. ''ಶ್ರೀ ರಾಮನಿಗೆ ನಮಸ್ಕಾರ! ಜನಕ ಪುತ್ರಿಯಾದ ಸೀತಾದೇವಿಗೆ ನಮಸ್ಕಾರ! ಇಂದ್ರಾದಿ ದೇವತೆಗಳಿಗೆ ನಮಸ್ಕಾರ! ಸುಗ್ರೀವನಿಗೆ ಜಯವಾಗಲಿ!'' ಎಂದು ಹೇಳಿ ಆ ಮಹಾತೇಜಸ್ವಿಯು ರಾವಣನ ಅರಮನೆಯ ಪ್ರಾಕಾರದಿಂದ ನೆಗೆದು ಅಶೋಕವನದ ಪ್ರಾಕಾರಕ್ಕೆ ಬಂದಿಳಿದನು.

೪೨

ಹನುಮಂತನು ಸೀತೆಯನ್ನು ಕಾಣುವುದು. ರಾವಣನ ಆಗಮನ. ರಾವಣನ ಪ್ರಾರ್ಥನೆಗೆ ಸೀತೆಯ ಧಿಕ್ಕಾರ. ಆತನು ಸೀತೆಯನ್ನು ಬೆದರಿಸಿ ನಿರ್ಗಮಿಸುವುದು

ಆ ವನಕ್ಕೆ ಅಶೋಕವನವೆಂದು ರಾವಣನು ಹೆಸರಿಟ್ಟಿದ್ದನು. ಮರಗಳು ಸುಂದರವಾಗಿ ಬೆಳೆದು ನಿಂತಿದ್ದವು. ಬಳ್ಳಿಗಳಲ್ಲಿ ಸುಗಂಧವನ್ನು ಬೀರುವ ಹೂಗಳು

ತುಂಬಿದ್ದವು. ಅಶೋಕವನದಲ್ಲಿ ತಿರುಗಾಡಲು ಸ್ವಚ್ಛವಾದ ದಾರಿಗಳೂ ಅಲ್ಲಲ್ಲಿ ಕುಳಿತುಕೊಳ್ಳಲು ಸುವರ್ಣಮಯವಾದ ಕಟ್ಟೆಗಳೂ ಇದ್ದವು. ಹನುಮಂತನು ಮರದಿಂದ ಮರಕ್ಕೆ ಹಾರುತ್ತ ಸೀತಾದೇವಿ ಎಲ್ಲಿರಬಹುದೆಂದು ನೋಡುತ್ತ ಹೋಗಿ ಉನ್ನತವಾದ ಒಂದು ಶಿಂಶಪಾ ವೃಕ್ಷದ ಮೇಲೆ ಬಂದು ಕುಳಿತನು. ಅಲ್ಲೊಂದು ಚಿಕ್ಕ ನದಿಯು ತಿಳಿನೀರಿನಿಂದ ತುಂಬಿ ಹರಿಯುತ್ತಿತ್ತು. ಹನುಮಂತನು ಮನಸ್ಸಿನಲ್ಲಿ ಸೀತಾದೇವಿಯು ಈ ವನದಲ್ಲಿ ಇರುವುದು ನಿಶ್ಚಯವಾದರೆ ಪ್ರಾತಃ ಕೃತ್ಯಕ್ಕಾಗಿ ಈ ತಿಳಿನೀರಿನ ಹೊಳೆಗೆ ಬಂದೇ ಬರುವಳು–ಎಂದು ಆಲೋಚಿಸಿದನು. ಸುತ್ತಲೂ ನೋಡುತ್ತಿದ್ದ ಹನುಮಂತನಿಗೆ ಅಶೋಕವನದಲ್ಲಿ ವರ್ತುಲಕಾರದ ಒಂದು ಭವನವು ಕಾಣಿಸಿತು. ಹಾಗೆಯೇ ಆ ಭವನದ ಬಳಿಯಲ್ಲಿ ಕೆಲವು ರಾಕ್ಷಸ ಸ್ತ್ರೀಯರು ಗೋಚರಿಸಿದರು. ಅವರ ನಡುವೆ ಮಲಿನವಸ್ತ್ರವನ್ನುಟ್ಟಿದ್ದ ಒಬ್ಬ ವನಿತೆಯೂ ಕಾಣಿಸಿದಳು. ಹನುಮಂತನ ಕುತೂಹಲವು ಹೆಚ್ಚಿತು. ''ಆಹಾ! ಈ ತರುಣಿಯು ಚಿಂತಾಕ್ರಾಂತಳಾಗಿ ನಿಟ್ಟುಸಿರು ಬಿಡುತ್ತಿರುವಳು. ಕ್ಷೀಣಿಸುತ್ತಿರುವ ಚಂದ್ರಲೇಖೆಯಂತೆ ಇದ್ದಾಳೆ. ನೀಳವಾದ ವೇಣಿಯು ಬೆನ್ನಮೇಲೆ ಲಂಬಿಸಿದೆ. ಇವಳೇ ಸೀತೆಯಾಗಿರಬೇಕು'' ಎಂದು ಅವಳನ್ನೇ ನೋಡುತ್ತ ಸದ್ದು ಮಾಡದೆ ಮರದಿಂದ ಮರಕ್ಕೆ ಹಾರುತ್ತ ಸಮೀಪಕ್ಕೆ ಆಗಮಿಸಿದನು. ಸೀತೆಯ ಮೈಮೇಲಿದ್ದ ಒಂದೆರಡು ಒಡವೆಗಳೂ ಕಿವಿಯ ಓಲೆಗಳೂ ಗೋಚರಿಸಿದವು. ''ಓಹೊ! ಶ್ರೀರಾಮನು ಹೇಳಿದಂತೆಯೇ ಇವಳಿದ್ದಾಳೆ. ಅದೇ ಬಣ್ಣದ ಸೀರೆಯನ್ನುಟ್ಟಿದ್ದಾಳೆ. ಆ ಪುರುಷೋತ್ತಮನು ವರ್ಣಿಸಿದ ಒಡವೆಗಳು ಇವಳ ಮೈಮೇಲಿವೆ. ಋಷ್ಯಮೂಕದಲ್ಲಿ ನಮಗೆ ದೊರಕಿದ ಉತ್ತರೀಯವು ಇದೇ ಸೀರೆಯ ಒಂದು ತುಂಡು. ಸಂದೇಹವಿಲ್ಲ, ನಾನು ದೇವಿಯನ್ನು ಕಂಡೆನು!'' ಎಂದು ಹಿಗ್ಗಿದನು. ಹಾಗೆಯೇ ಅವಳನ್ನು ಗಮನಿಸಿ ನೋಡುತ್ತ ''ಶ್ರೀ ರಾಮನ ಪ್ರಿಯ ಪತ್ನಿಯಾದ ಸಾಧ್ವಿಯೇ ಇವಳು. ಈ ದೇವಿಯ ರೂಪ ಲಕ್ಷಣಗಳಿಗೆ ಅನುರೂಪನಾದವನು ಶ್ರೀರಾಮನೇ. ಆತನ ರೂಪ ಲಕ್ಷಣಗಳಿಗೆ ಅನುರೂಪಳಾದವಳು ಈಕೆಯೇ. ಇವಳ ಮನಸ್ಸು ಶ್ರೀ ರಾಮನಲ್ಲಿ ನೆಲೆಸಿಹೋಗಿದೆ. ಅವನನ್ನೇ ಚಿಂತಿಸುತ್ತಿದ್ದಾಳೆ, ಸಂದೇಹವಿಲ್ಲ. ಇಂಥ ಪ್ರಿಯಪತ್ನಿಯನ್ನು ಅಗಲಿಯೂ ಪ್ರಭುವಾದ ರಾಘವನು ಇನ್ನೂ ದೇಹವನ್ನಿಟ್ಟುಕೊಂಡಿರುವನಲ್ಲ, ಅನ್ಯರಿಗೆ ದುಷ್ಕರವಿದು'' ಎಂದುಕೊಂಡನು.

ಮತ್ತೆ ಹನುಮಂತನಿಗೆ ಮನಸ್ಸಿನಲ್ಲಿ ನಾನಾ ಬಗೆಯ ಕಲ್ಪನೆಗಳು ತಲೆದೋರಿದವು. ''ಪರಮ ಪೂಜ್ಯಳಾದ ಈ ದೇವಿಗೂ ಈ ಪರಿಯಾದ ದುಃಖವು ತಲೆದೋರುವುದಾದರೆ ವಿಧಿನಿಯಮವನ್ನು ಮೀರುವವರಾರು? ಈ ದೇವಿಗೆ ಎದುರಿಗಿರುವ ಮರಗಳೂ ಕಾಣುವುದಿಲ್ಲ, ವಿಕೃತರಾದ ಈ ರಾಕ್ಷಸಿಯರೂ

ಕಾಣುವುದಿಲ್ಲ. ಮನಸ್ಸಿನಲ್ಲಿ ನೆಟ್ಟಿರುವ ಶ್ರೀ ರಾಮನೊಬ್ಬನೇ ಕಾಣಿಸುತ್ತಿದ್ದಾನೆ'' ಎಂದು ಕೊಂಡನು. ಅಷ್ಟರಲ್ಲಿ ಬಿಳಿನೈದಿಲೆಯಂತೆ ಶುಭ್ರವರ್ಣದ ಚಂದ್ರನು ನಿರ್ಮಲವಾದ ನೀರಿನಲ್ಲಿ ಹಂಸವು ಈಜಿಬರುವಂತೆ ಆಕಾಶದಲ್ಲಿ ಸಾಗುತ್ತ ಬಂದನು. ಸುತ್ತಲೂ ರಾಕ್ಷಸಿಯರು ಕಾವಲಾಗಿ ಕುಳಿತಿದ್ದುದರಿಂದ ಮುಂದೇನು ಮಾಡಬೇಕೆಂದು ಚಿಂತಾಕ್ರಾಂತನಾಗಿ ಮನಸ್ಸಿನಲ್ಲಿಯೇ ಶ್ರೀರಾಮ ಲಕ್ಷ್ಮಣರಿಗೆ ನಮಸ್ಕರಿಸಿ ಒಂದು ಶಿಂಷಪಾವೃಕ್ಷದಲ್ಲಿ ಹನುಮಂತನು ಮರೆಯಾಗಿ ಕುಳಿತನು.

ಅಷ್ಟರಲ್ಲಿ ನಿದ್ರೆಯಿಂದ ಎಚ್ಚೆತ್ತ ರಾವಣನು ಸೀತೆಯನ್ನು ಸ್ಮರಿಸಿಕೊಂಡು ಕಾಮವಶನಾದನು. ಅವಳನ್ನು ಕಂಡು ಮನ ಒಲಿಸುವ ಉದ್ದೇಶದಿಂದ ಆ ರಾಕ್ಷಸೇಶ್ವರನು ಉತ್ತಮ ವಸ್ತ್ರಗಳನ್ನು ಧರಿಸಿ ಸೀತೆಯಿದ್ದೆಡೆಗೆ ಹೊರಟನು. ಅವನ ಜೊತೆಯಲ್ಲಿ ದೀವಟಿಗೆಗಳನ್ನು ಹಿಡಿದು ಒಂದು ಸ್ತ್ರೀ ಸಮೂಹವೇ ಆಗಮಿಸುತ್ತಿತ್ತು. ಹನುಮಂತನಿಗೆ ಆ ರಾವಣನು ಗೋಚರಿಸಿದನು. ಆಗ ಹನುಮಂತನು ಮುಂದೇನಾಗುವುದೆಂದು ತಿಳಿಯುವ ಕೌತುಕದಿಂದ ಆ ವೃಕ್ಷದಲ್ಲಿಯೇ ಸ್ವಲ್ಪವೂ ಕಾಣಿಸದಂತೆ ಅಡಗಿ ಕುಳಿತನು. ರಾವಣನು ಬರುತ್ತಿರುವುದನ್ನು ಕಂಡು ಸೀತೆಯು ಬಿರುಗಾಳಿಗೆ ಸಿಕ್ಕಿದ ಬಾಳೆಯಗಿಡದಂತೆ ನಡುಗಲಾರಂಭಿಸಿದಳು. ಆ ವಿಶಾಲಾಕ್ಷಿಯು ಮೈಯನ್ನು ಮುದುರಿಕೊಂಡು ಹೆದರುತ್ತ ಕುಳಿತಿರುವಾಗ ರಾವಣನು ಸಮೀಪಿಸಿದನು. ಕಿತ್ತೆಸೆದ ತಾವರೆಯ ಬಳ್ಳಿಯಂತೆ, ಕತ್ತಲೆಯಲ್ಲಿ ಮಿಣುಗುವ ದೀಪದಂತೆ ಇದ್ದ ಆ ಕೋಮಲಾಂಗಿಯ ಎದುರಿಗೆ ಬಂದುನಿಂತು ರಾವಣನು ಮಾತಾಡಲುಪಕ್ರಮಿಸಿದನು. ''ಎಲೌ ಸುಂದರಿ, ನನ್ನನ್ನು ಕಂಡು ಮುದುರಿಕೊಳ್ಳುವುದೇತಕ್ಕೆ? ಯಾರಿಗಾಗಿ ನೀನು ಹೆದರಬೇಕು? ನನ್ನನ್ನು ಬಿಟ್ಟು ಇಲ್ಲಿ ಯಾವ ಪುರುಷನೂ ಇಲ್ಲ. ನಾನೇನೂ ಅಧರ್ಮಿಯಲ್ಲ. ಪರಸ್ತ್ರೀಯರನ್ನು ಅಪಹರಿಸಿತರುವುದು ರಾಕ್ಷಸರಾದ ನಮಗೆ ಕುಲಧರ್ಮ! ಬಲಾತ್ಕಾರವಾಗಿ ನಾನು ನಿನ್ನನ್ನು ಮುಟ್ಟುವುದಿಲ್ಲ. ಪ್ರಿಯತಮೆ, ನನ್ನಲ್ಲಿ ವಿಶ್ವಾಸವಿಡು. ಶೋಕದಿಂದ ಕೊರಗಬೇಡ. ನೀನು ಸ್ತ್ರೀಯರಲ್ಲಿ ರತ್ನವಾಗಿದ್ದೀಯೆ. ನೀನು ಮಲಿನ ವಸ್ತ್ರಗಳನ್ನುಟ್ಟು ಕೊರಗುವುದು ಉಚಿತವಲ್ಲ. ನನ್ನ ಪಟ್ಟದ ರಾಣಿಯಾಗಿ ಸಕಲ ಸೌಖ್ಯಗಳನ್ನೂ ಅನುಭವಿಸು. ನಾರು ಬಟ್ಟೆಯನ್ನುಟ್ಟು ಕಾಡಿಗೆ ಬಂದು ಗತಿಯಿಲ್ಲದೆ ಅಲೆಯುತ್ತಿರುವ ರಾಮನಿಂದ ನಿನಗೆ ಏನಾಗಬೇಕು? ಸೀತೆ, ಬಲಪರಾಕ್ರಮಗಳಲ್ಲಾಗಲಿ, ಐಶ್ವರ್ಯ ಕೀರ್ತಿಗಳಲ್ಲಾಗಲಿ, ರಾಮನು ನನಗೆ ಎಂದಿಗೂ ಸಮನಲ್ಲ. ದೇವಿ, ನನ್ನನ್ನು ವರಿಸಿ ಯಥೇಚ್ಛವಾಗಿ ವಿಹರಿಸುತ್ತ ಸುಖದಿಂದಿರು. ಈ ಯೌವನವು ಶಾಶ್ವತವಲ್ಲ. ಆಯುಸ್ಸನ್ನು ವ್ಯರ್ಥಮಾಡಿಕೊಳ್ಳಬೇಡ. ನಿನಗೆಂದಿಗೂ ರಾಮನು ದೊರೆಯ ತಕ್ಕವನಲ್ಲ. ಅವನೀಗ ಕಾಡಿನಲ್ಲಿ ಅಲೆದು ಸತ್ತುಹೋಗಿರಲೂಬಹುದು!'' ಎಂದನು.

ಆ ರಾಕ್ಷಸನ ಮಾತನ್ನು ಕೇಳಿ ಜಾನಕಿಗೆ ತುಂಬ ದುಃಖವಾಯಿತು. ಮಹಾಪತಿವ್ರತೆಯಾದ ಆ ದೇವಿಯು ತನ್ನ ಪತಿಯನ್ನೇ ಧ್ಯಾನಿಸುತ್ತ ತನ್ನೆದುರಿಗೆ ಒಂದು ಹುಲ್ಲು ಕಡ್ಡಿಯನ್ನಿಟ್ಟು ಅದರೊಡನೆ ಮಾತನಾಡುತ್ತಿರುವಂತೆ ರಾವಣನಿಗೆ ಉತ್ತರ ಕೊಟ್ಟಳು. ''ರಾವಣ, ಈ ದುರ್ಬುದ್ಧಿಯನ್ನು ಬಿಡು. ಪಾಪಿಯು ಮುಕ್ತಿಯನ್ನು ಬಯಸುವಂತೆ ನೀನು ನನ್ನನ್ನು ಬಯಸುತ್ತಿದ್ದೀಯೆ. ನಿನ್ನ ಇಚ್ಛೆ ಎಂದಿಗೂ ನಡೆಯದು. ಉತ್ತಮಕುಲದಲ್ಲಿ ಹುಟ್ಟಿ ಉತ್ತಮ ಕುಲವನ್ನು ಸೇರಿದವಳು ನಾನು. ಪರಸ್ತ್ರೀಯರನ್ನು ಕೆಣಕುವ ದುರ್ಬುದ್ಧಿಯಾದ ನಿನಗೆ ಬುದ್ಧಿವಾದವನ್ನು ಹೇಳತಕ್ಕ ಸಜ್ಜನರು ಇಲ್ಲಿ ಯಾರೂ ಇಲ್ಲವೊ? ಇದ್ದರೂ ಅವರ ಮಾತನ್ನು ನೀನು ಕೇಳುವುದಿಲ್ಲವೊ? ನಿನ್ನ ಐಶ್ವರ್ಯಕ್ಕೆ ನಾನು ಮರುಳಾಗತಕ್ಕವಳಲ್ಲ. ಸೂರ್ಯನಿಂದ ಅವನ ಪ್ರಭೆಯನ್ನು ಬೇರ್ಪಡಿಸಲು ಹೇಗೆ ಶಕ್ಯವಿಲ್ಲವೋ ಹಾಗೆ ಶ್ರೀರಾಮನಿಂದ ನನ್ನನ್ನು ಬೇರ್ಪಡಿಸಲು ಯಾರಿಗೂ ಶಕ್ಯವಿಲ್ಲ. ರಾವಣ, ನಾನು ಅತ್ಯಂತ ದುಃಖಿತಳಾಗಿದ್ದೇನೆ. ಶ್ರೀರಾಮನ ಬಳಿಗೆ ನನ್ನನ್ನು ಕಳಿಸಿ ಪುಣ್ಯವನ್ನು ಕಟ್ಟಿಕೊ. ಕ್ಷಮಾಶೀಲನಾದ ಆ ಧೀರನು ನಿನ್ನನ್ನು ಕ್ಷಮಿಸುವನು. ನಿನಗೆ ಶ್ರೇಯಸ್ಸು ಬೇಕೆನಿಸಿದರೆ ಹೀಗೆ ಮಾಡು. ಇಲ್ಲದಿದ್ದರೆ ನಿನ್ನ ವಧೆಯಾಗುವುದು ನಿಶ್ಚಯ. ನೀನು ಯಮನಿಂದಲಾದರೂ ತಪ್ಪಿಸಿಕೊಳ್ಳಬಹುದು. ಶ್ರೀರಾಮನು ಕ್ರುದ್ಧನಾದರೆ ಮಾತ್ರ ಅವನಿಂದ ನೀನು ತಪ್ಪಿಸಿಕೊಳ್ಳಲಾರೆ. ರಾಮಲಕ್ಷ್ಮಣ ನಾಮಾಂಕಿತಗಳಾದ ಘೋರಾಸ್ತ್ರಗಳು ಬೆಂಕಿಯನ್ನುಗುಳುತ್ತ ಈ ಲಂಕೆಯೊಳಗೆ ನುಗ್ಗಿ ಬರುತ್ತವೆ. ಶ್ರೀರಾಮನೆಂಬ ಗರುತ್ಮಂತನು ರಾಕ್ಷಸರೆಂಬ ಸರ್ಪಗಳನ್ನು ಎಳೆದೆಳೆದು ಕೊಂದುಹಾಕುವನು. ನಿಮ್ಮೆಲ್ಲರನ್ನೂ ಧ್ವಂಸಮಾಡಿ ನನ್ನ ಗಂಡನು ನನ್ನನ್ನು ಬಿಡಿಸಿಕೊಂಡು ಹೋಗುವನು. ಶ್ರೀರಾಮನು ಲಕ್ಷ್ಮಣನೊಡನೆ ಬಂದು ತನ್ನ ನಿಶಿತಾಸ್ತ್ರಗಳಿಂದ ನಿನ್ನ ಪ್ರಾಣವನ್ನು ಹೀರಿಬಿಡುತ್ತಾನೆ'' ಎಂದಳು.

ಸೀತೆಯಾಡಿದ ಈ ಕ್ರೂರವಾದ ಮಾತನ್ನು ಕೇಳಿ ಕ್ರುದ್ಧನಾದ ರಾಕ್ಷಸೇಶ್ವರನು ''ಸೀತೆ, ನಿನಗೆ ನಾನು ಒಳ್ಳೆಯ ಮಾತನ್ನಾಡಿದರೆ ನನ್ನನ್ನು ತಿರಸ್ಕರಿಸುತ್ತಲೇ ಬಂದಿದ್ದೀಯೆ. ನಿನ್ನಲ್ಲಿ ನನಗೆ ಉಂಟಾಗಿರುವ ಕಾಮವು ಉಕ್ಕುತ್ತಿರುವ ನನ್ನ ಕೋಪವನ್ನು ತಡೆಯುತ್ತಿದೆ. ನೀನಾಡಿದ ಒಂದೊಂದು ಮಾತಿಗೂ ಚಿತ್ರ ಹಿಂಸೆ ಮಾಡಿ ನಿನ್ನನ್ನು ವಧಿಸಬೇಕಾಗಿತ್ತು, ಆದರೆ, ಸುಂದರಿ, ನಿನ್ನನ್ನು ಕೊಲ್ಲದೆ ಬಿಟ್ಟಿದ್ದೇನೆ'' ಎಂದನು.

ಆಮೇಲೆ ಮತ್ತೆ ದುರದುರನೆ ಸೀತೆಯನ್ನು ನೋಡುತ್ತ ''ನಾನು ಹೇಳುವುದನ್ನು ಗಮನವಿಟ್ಟು ಕೇಳು. ನಾನು ನಿನಗೆ ಒಂದು ವರ್ಷದ ಅವಧಿಯನ್ನು ಕೊಟ್ಟಿದ್ದೆನು.

ಅದರಲ್ಲಿ ಇನ್ನು ಎರಡು ತಿಂಗಳು ಮಾತ್ರ ಉಳಿದಿದೆ. ಅಷ್ಟರಲ್ಲಿ ನೀನು ನನ್ನ ಹಾಸಿಗೆಯನ್ನು ಏರಲೇಬೇಕು. ಇಲ್ಲದಿದ್ದರೆ ಅಡಿಗೆ ಮನೆಯಲ್ಲಿ ನನ್ನ ಬೆಳಗಿನ ಊಟಕ್ಕಾಗಿ ಅಡಿಗೆಯವರು ನಿನ್ನನ್ನು ತರಕಾರಿಯಂತೆ ಕತ್ತರಿಸಿ ಹಾಕುತ್ತಾರೆ!'' ಎಂದನು.

ವೈದೇಹಿಯು ಕಣ್ಣೀರು ಸುರಿಸುತ್ತ ಸಿಟ್ಟಿನಿಂದ ಮತ್ತೆ ಇಂತೆಂದಳು. ''ಎಲಾ ನೀಚ, ಧರ್ಮಾತ್ಮನಾದ ಶ್ರೀರಾಮನ ಪತ್ನಿಯನ್ನು ಮನಸ್ಸಿನಲ್ಲಾದರೂ ಬಯಸುವವನು ಈ ಜಗತ್ತಿನಲ್ಲಿ ನಿನ್ನನ್ನು ಬಿಟ್ಟರೆ ಇನ್ನೊಬ್ಬನಿಲ್ಲ. ಅಧಮ, ನಾನು ಯಾರೆಂದು ತಿಳಿದು ಇಂತಹ ಹಗುರವಾದ ಮಾತನ್ನು ಆಡುವೆ? ಜನಕಮಹಾರಾಜನ ಪುತ್ರಿಯೂ, ದಶರಥ ಚಕ್ರವರ್ತಿಯ ಸೊಸೆಯೂ, ಧರ್ಮಾತ್ಮನಾದ ಶ್ರೀರಾಮನ ಧರ್ಮಪತ್ನಿಯೂ ಆದ ನನಗೆ ಇಂತಹ ಮಾತನ್ನಾಡುವೆಯಾ? ನನ್ನ ತಪೋಬಲದಿಂದ ನಿನ್ನನ್ನು ಈಗಲೇ ಸುಟ್ಟು ಬೂದಿ ಮಾಡಬಲ್ಲೆ, ಮಹಾತ್ಮನಾದ ನನ್ನ ಪತಿಯ ಅನುಮತಿಯಿಲ್ಲದ್ದರಿಂದಲೂ ಇಂಥ ಅಲ್ಪಕಾರ್ಯಕ್ಕೆ ನನ್ನ ತೇಜೋಬಲವನ್ನು ವ್ಯರ್ಥ ಮಾಡಿಕೊಳ್ಳಬಾರದೆಂದೂ ಸುಮ್ಮನಿದ್ದೇನೆ. ನನ್ನನ್ನು ನೀನು ಅಪಹರಿಸಿದ್ದು ಶ್ರೀರಾಮನನ್ನು ಎದುರಿಸುವ ಶಕ್ತಿಯು ನಿನಗೆ ಇಲ್ಲದ್ದರಿಂದ. ನಿನ್ನ ವಿನಾಶಕ್ಕಾಗಿಯೇ ದೈವವು ಇಂಥ ಬುದ್ಧಿಯನ್ನು ನಿನಗೆ ಕೊಟ್ಟಿತು. ನೀನು ಪರಾಕ್ರಮಿಯಾದರೆ ನನ್ನನ್ನು ಕಳ್ಳತನದಿಂದ ತಂದದ್ದೇಕೆ?'' ಎಂದು ಕೇಳಿದಳು. ಈ ಮಾತನ್ನು ಕೇಳಿ ರಾವಣನು ಕೆಂಗಣ್ಣಿನಿಂದ ಸೀತೆಯನ್ನು ನೋಡುತ್ತ ಸರ್ಪದಂತೆ ಬುಸುಗುಟ್ಟುತ್ತ ''ಎಲೇ ಹೆಂಗಸೆ, ಭ್ರಷ್ಟನಾದ ಆ ದರಿದ್ರನನ್ನು ನಂಬಿ ಇಂತಹ ಮಾತನ್ನಾಡುವೆಯಾ?'' ಎಂದು ಹೇಳಿ ಕಾವಲುಗಾರ್ತಿಯರಾದ ರಾಕ್ಷಸಿಯರನ್ನು ಬಳಿಗೆ ಕರೆದು ''ಎಲೈ ರಾಕ್ಷಸಿಯರೆ, ಇನ್ನು ಮೇಲೆ ಇವಳಿಗೆ ನೀವು ಚಿತ್ರ ಹಿಂಸೆಯನ್ನು ಕೊಡಬಹುದು. ಯಾವ ದಂಡೋಪಾಯವನ್ನಾದರೂ ಕೈಗೊಂಡು ಈಕೆ ನನ್ನ ವಶಳಾಗುವಂತೆ ಮಾಡಿರಿ'' ಎಂದು ಆಜ್ಞಾಪಿಸಿದನು. ಮುಂದೆ ನುಗ್ಗಿ ಹೆದರಿಸುತ್ತಿದ್ದ ರಾವಣನನ್ನು ಅವನ ಭಾರ್ಯೆಯಲ್ಲೊಬ್ಬಳು ಅಪ್ಪಿಕೊಂಡು–ಅವನನ್ನು ತಡೆದು ನಿಲ್ಲಿಸಿ, ''ಪ್ರಭು, ನೀನು ಬಾಹುಬಲದಿಂದ ಸಂಪಾದಿಸಿದ ದಿವ್ಯ ಭೋಗ ಗಳನ್ನು ಅನುಭವಿಸುವಂತೆ ಬ್ರಹ್ಮನು ಇವಳ ಹಣೆಯಲ್ಲಿ ಬರೆದಿಲ್ಲ! ಈ ಬುದ್ಧಿಹೀನೆಯಿಂದ ನಿನಗೇನಾಗಬೇಕು? ಬಾ, ಕಾಮಿನಿಯರಾದ ನಮ್ಮೊಡನೆ ರಮಿಸು'' ಎಂದಳು. ಆಗ ರಾವಣನು ಗಹಗಹಿಸಿ ನಗುತ್ತ ಭೂಮಿಯು ನಡುಗುವಂತೆ ಹೆಜ್ಜೆಯನ್ನಿಡುತ್ತ ತನ್ನ ಪರಿವಾರದೊಂದಿಗೆ ಅರಮನೆಗೆ ಹಿಂದಿರುಗಿ ಹೋದನು.

೪೩

ರಾಕ್ಷಸಿಯರ ಬೆದರಿಕೆ, ನೇಣು ಹಾಕಿಕೊಳ್ಳಲು ಸೀತೆಯ ಪ್ರಯತ್ನ, ಹನುಮಂತನಿಂದ ಶ್ರೀರಾಮ ವೃತ್ತಾಂತಕಥನ

ಇತ್ತಲಾಗಿ ರಾಕ್ಷಸಿಯರು ರಾವಣನ ಆಜ್ಞೆಯಂತೆ ಸೀತಾದೇವಿಯನ್ನು ಸುತ್ತುಗಟ್ಟಿ ಹೆದರಿಸತೊಡಗಿದರು. ''ಸೀತೆ, ರಾಜಾಧಿರಾಜನಾದ ರಾಕ್ಷಸೇಂದ್ರನಿಗೆ ಭಾರ್ಯೆಯಾಗು. ಅವನ ಅಂತಃಪುರದಲ್ಲಿ ನೂರಾರು ಸುಂದರಿಯರಿದ್ದರೂ ಅವರನ್ನು ಬಿಟ್ಟು ನಿನ್ನನ್ನು ಕಾಮಿಸುತ್ತಿದ್ದಾನೆ. ಆತನೇ ನಿನ್ನ ಬಳಿಗೆ ಬಂದು ನಿನ್ನನ್ನು ಬೇಡಿಕೊಂಡರೂ ಇಲ್ಲವೆನ್ನುತ್ತೀಯ? ನಿನಗೆ ಬುದ್ದಿ ಇಲ್ಲ. ನಮ್ಮ ರಾವಣೇಶ್ವರನನ್ನು ವರಿಸದಿದ್ದರೆ ನಿನ್ನನ್ನು ನಾವು ಸುಮ್ಮನೆ ಬಿಡುವುದಿಲ್ಲ. ನಿನಗೆ ಚಿತ್ರಹಿಂಸೆ ಕೊಡುತ್ತೇವೆ. ಕಡೆಗೆ ನಿನ್ನನ್ನು ಕೊಂದು ಹಾಕುತ್ತೇವೆ'' ಎಂದು ನಾನಾ ವಿಧವಾಗಿ ಹೇಳಿ ಹೆದರಿಸಿದರು. ಆಗ ಕಮಲನೇತ್ರೆಯಾದ ಜಾನಕಿಯು ಕಣ್ಣೀರು ಸುರಿಸುತ್ತ ''ನೀವೆಲ್ಲರೂ ಸೇರಿ ಲೋಕನಿಂದಿತವಾದ ಇಂತಹ ಮಾತನ್ನು ಹೇಳುವಿರಲ್ಲ. ನಿಮ್ಮ ಈ ಕೆಟ್ಟ ಮಾತು ನನಗೆ ಸ್ವಲ್ಪವೂ ಹಿಡಿಸದು. ನನ್ನ ಪತಿಯು ದೀನನಾಗಿರಲಿ, ರಾಜ್ಯಭ್ರಷ್ಟನಾಗಿರಲಿ ಅವನೇ ನನಗೆ ಪೂಜ್ಯನು. ಶಚೀದೇವಿಯು ದೇವೇಂದ್ರನನ್ನೂ ಅರುಂಧತಿಯು ವಸಿಷ್ಠರನ್ನೂ ಅನುವರ್ತಿಸಿಕೊಂಡಿರುವಂತೆ ನಾನು ಇಕ್ಷ್ವಾಕುನಾಥನಾದ ಶ್ರೀರಾಮನನ್ನೇ ಅನುವರ್ತಿಸಿ ನಡೆಯತಕ್ಕವಳು. ಎಷ್ಟು ಮಾತುಗಳಿಂದೇನು? ನನ್ನನ್ನು ನೀವು ಕೊಂದು ಹಾಕಿದರೂ ಚಿಂತೆಯಿಲ್ಲ. ಆ ರಾಕ್ಷಸಾಧಮನನ್ನು ಮಾತ್ರ ನಾನು ಎಡಗಾಲಿಂದಲೂ ಮುಟ್ಟತಕ್ಕವಳಲ್ಲ'' ಎಂದು ಹೇಳಿ ಸುಮ್ಮನಾದಳು. ಭೀಕರಾಕೃತಿಯ ಆ ರಾಕ್ಷಸಿಯರು ತಮ್ಮ ವಿಕಾರರೂಪದ ಮುಖಗಳಿಂದ ಮತ್ತಷ್ಟು ಹೆದರಿಸಿದರು. ದೇವಕನ್ಯೆಯಂತಿದ್ದ ಜಾನಕಿಯು ಕಣ್ಣೀರು ಸುರಿಸಿ ಅಳತೊಡಗಿದಳು. ಅವಳು ತನ್ನ ಮನಸ್ಸಿನಲ್ಲಿ ನಾನಾವಿಧವಾಗಿ ಚಿಂತಿಸಿದಳು. ಅವಳ ಮನಸ್ಸಿಗೆ ನೆಮ್ಮದಿಯೇ ಇಲ್ಲವಾಯಿತು. ಶೋಕದಿಂದ ನಿಟ್ಟುಸಿರು ಬಿಡುತ್ತಾ ಹಲುಬ ತೊಡಗಿದಳು. ''ಹಾ ರಾಮ, ಹಾ ಲಕ್ಷ್ಮಣ, ಅಮ್ಮಾ ಕೌಸಲ್ಯೆ, ಹಾ ಸುಮಿತ್ರೆ, ಶ್ರೀರಾಮನನ್ನಗಲಿಯೂ ನಾನು ಇಷ್ಟುಕಾಲ ಬದುಕಿರುವೆನಲ್ಲ. ಕಾಲ ಒದಗಿದಹೊರತು ಸಾವು ಬಾರದು ಎಂಬ ಮಾತು ನಿಜವಾಯಿತು. ಪದ್ಮನೇತ್ರನೂ ಸಿಂಹದಂತೆ ಧೀರವಾಗಿ ನಡೆಯತಕ್ಕವನೂ ಆದ ನನ್ನ ಪ್ರಾಣನಾಥನನ್ನು ನೋಡತಕ್ಕವರೇ ಪುಣ್ಯಾತ್ಮರು. ಆ ಮಹಾತ್ಮನನ್ನಗಲಿದ ಮೇಲೆ ನಾನು ಜೀವಿಸಿರಬಾರದು. ಜನ್ಮಾಂತರದಲ್ಲಿ ನಾನು ಎಂಥ ಪಾಪಕೃತ್ಯವನ್ನು ಮಾಡಿದ್ದೆನೋ. ಈಗ ನಾನು ಪ್ರಾಣವನ್ನು ತ್ಯಜಿಸಿ ಬಿಡುತ್ತೇನೆ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಇಲ್ಲಿ ಯಾವ ಸಾಧನವಿದೆ? ವಿಷವೂ ಇಲ್ಲ; ಬೆಂಕಿಯೂ ಇಲ್ಲ.

ಈ ಮನುಷ್ಯ ಜನ್ಮಕ್ಕೆ ಧಿಕ್ಕಾರ'' ಎಂದು ಗೋಳಾಡಿದಳು. ಅನಂತರ ''ಶ್ರೀರಾಮನು ನನ್ನನ್ನು ಏಕೆ ಉಪೇಕ್ಷಿಸಿರಬಹುದು? ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರನ್ನು ಏಕಾಕಿಯಾಗಿ ಧ್ವಂಸ ಮಾಡಿದ ಆ ವೀರನು ಇಷ್ಟುದಿನವಾದರೂ ನನ್ನನ್ನು ಏಕೆ ನೆನೆಸಿಕೊಳ್ಳಲಿಲ್ಲ? ಓಹೋ, ನಾನು ಎಲ್ಲಿದ್ದೇನೆಂಬುದು ಶ್ರೀರಾಮಲಕ್ಷ್ಮಣರಿಬ್ಬರಿಗೂ ಗೊತ್ತಿಲ್ಲ. ಜಟಾಯು ನನ್ನನ್ನು ಉಳಿಸುವುದಕ್ಕಾಗಿ ಹೋರಾಡಿದನು. ಬಹುಶಃ ಅವನು ಸತ್ತುಹೋಗಿರಬೇಕು. ನಾನು ಹೀಗೆ ಲಂಕೆಯಲ್ಲಿರುವುದು ಗೊತ್ತಾದರೆ ನನ್ನ ಗಂಡನು ಈ ಮಹಾಸಾಗರವನ್ನು ಒಣಗಿಸಿ ಲಂಕಾಪಟ್ಟಣವನ್ನು ಧೂಳೆಬ್ಬಿಸಿ ಬಿಡುವನು. ಶ್ರೀರಾಮನು ಲಕ್ಷ್ಮಣನೊಡನೆ ಹುಡುಕಿ ನಾನಿರುವ ಸ್ಥಳವನ್ನು ಗೊತ್ತುಮಾಡದೇ ಬಿಡುವುದಿಲ್ಲ'' ಎಂದುಕೊಂಡಳು. ಹೀಗೆ ನಾನಾವಿಧವಾಗಿ ಚಿಂತಿಸುತ್ತಾ ''ಜಿತೇಂದ್ರಿಯರಾಗಿರುವ ಋಷಿಗಳೇ ಧನ್ಯರು. ಅವರಿಗೆ ಪ್ರಿಯ–ಅಪ್ರಿಯಗಳೆಂಬ ವಸ್ತುಗಳೇ ಇಲ್ಲ. ಅಂತಹ ಮಹಾತ್ಮರಿಗೆ ನಮಸ್ಕಾರ. ನನಗಾದರೋ ಶ್ರೀರಾಮನು ಪರಮಪ್ರಿಯನು'' ಎಂದು ಹೇಳುತ್ತ ರೋದಿಸಿದಳು.

ಆಗ ತ್ರಿಜಟೆಯೆಂಬ ರಾಕ್ಷಸಿಯು ಉಳಿದ ರಾಕ್ಷಸಿಯರನ್ನು ಕುರಿತು ಹೀಗೆಂದಳು. ''ಎಲೈ ರಾಕ್ಷಸಿಯರೆ, ಈ ರಾತ್ರಿ ನಾನೊಂದು ಸ್ವಪ್ನವನ್ನು ಕಂಡೆನು. ಏನೆಂದರೆ, ಒಂದು ದಿವ್ಯವಾದ ಪಲ್ಲಕ್ಕಿಯು ಅಂತರಿಕ್ಷದಲ್ಲಿ ಬರುತ್ತಿತ್ತು. ಆ ಪಲ್ಲಕ್ಕಿಯಲ್ಲಿ ರಾಮನು ಶುಭ್ರವಾದ ಹೂಮಾಲೆಯನ್ನೂ ವಸ್ತ್ರವನ್ನೂ ಧರಿಸಿ ಲಕ್ಷ್ಮಣನೊಡನೆ ಬರುತ್ತಿದ್ದನು. ಆಗ ಸೀತೆಯು ಬಿಳಿಯ ದುಕೂಲವನ್ನುಟ್ಟು ಮೇಲಕ್ಕೆ ಏರಿ ಸೂರ್ಯನೊಡನೆ ಸೇರಿದ ಪ್ರಭೆಯಂತೆ ರಾಮನೊಡನೆ ಸೇರಿಹೋದಳು. ಅಷ್ಟೇ ಅಲ್ಲ, ನಮ್ಮ ರಾವಣನು ಕೆಂಪು ಬಟ್ಟೆಯನ್ನುಟ್ಟು ಎಣ್ಣೆಯನ್ನು ಕುಡಿಯುತ್ತ ನೆಲದ ಮೇಲೆ ಕುಳಿತಿರುವಂತೆ ಕನಸಿನಲ್ಲಿ ಕಂಡೆನು. ಒಬ್ಬ ಕರಿಯ ಹೆಂಗಸು ರಾವಣನ ಕೊರಳಿಗೆ ಹಗ್ಗವನ್ನು ಕಟ್ಟಿ ದಕ್ಷಿಣದಿಕ್ಕಿಗೆ ಎಳೆದುಕೊಂಡು ಹೋಗುತ್ತಿರುವಂತೆ ನನಗೆ ಸ್ವಪ್ನವಾಯಿತು ! ಕುಂಭಕರ್ಣಾದಿ ರಾಕ್ಷಸರೆಲ್ಲರೂ ರಕ್ತವಸ್ತ್ರವನ್ನುಟ್ಟು ಸಗಣಿಯ ಗುಂಡಿಯೊಳಗೆ ಬಿದ್ದಂತಾಯಿತು. ಎಲೈ ರಾಕ್ಷಸಿಯರೆ, ರಾಮನು ಇಲ್ಲಿಗೆ ಬಂದು ಸೀತೆಯನ್ನು ಬಿಡಿಸಿಕೊಂಡು ಹೋಗುವುದು ನಿಶ್ಚಯ. ನೀವು ಸೀತೆಯನ್ನು ಹೆದರಿಸಿದರೆ ಮುಂದೆ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತೀರಿ'' ಎಂದಳು. ಆ ಮಾತನ್ನು ಕೇಳಿ ರಾಕ್ಷಸಿಯರು ಹೆದರಿಹೋದರು. ತ್ರಿಜಟೆಯು ಸೀತೆಯ ಕಡೆಗೆ ತಿರುಗಿ ''ಸೀತೆ, ನನಗೆ ಬಿದ್ದ ಕನಸಿನಪ್ರಕಾರ ನಿನ್ನ ಪತಿಯು ಇಲ್ಲಿಗೆ ಬಂದು ನಿನ್ನನ್ನು ಬಿಡಿಸಿಕೊಂಡು ಹೋಗುವನು. ಧೈರ್ಯದಿಂದಿರು'' ಎಂದಳು. ಆಗ ವೈದೇಹಿಯು ''ಈ ಮಾತು ದಿಟವಾದರೆ ನಿಮ್ಮನ್ನು ನಾನು ರಕ್ಷಿಸುತ್ತೇನೆ!'' ಎಂದು ಲಜ್ಜೆಯಿಂದ ನುಡಿದಳು. ಅಷ್ಟರಲ್ಲಿ ಅದುವರೆಗೆ ನಿದ್ರೆಗೆಟ್ಟಿದ್ದ ಆ ರಾಕ್ಷಸಿಯರಿಗೆ ನಿದ್ರೆ

ಬರತೊಡಗಿತು. ಅವರು ಸ್ವಲ್ಪ ದೂರದಲ್ಲಿ ಮರದ ಕೆಳಗೆ ಮಲಗಿ ಗಾಢವಾಗಿ ನಿದ್ರಿಸತೊಡಗಿದರು. ಆದರೆ ಸೀತಾದೇವಿಗೆ ಎಲ್ಲಿಂದ ನಿದ್ದೆ ಬರಬೇಕು? ನಿರ್ಜನವಾದ ಅಡವಿಯಲ್ಲಿ ಉಳಿದುಹೋದ ಚಿಕ್ಕ ಹುಡುಗಿಯಂತೆ ಅಳುತ್ತ ಹಲುಬತೊಡಗಿದಳು. ಹತ್ತು ತಿಂಗಳಿಂದ ಈ ಕಷ್ಟವನ್ನನುಭವಿಸುತ್ತಿದ್ದ ಅವಳು ''ನನ್ನ ಎದೆಯು ಸಾವಿರ ಚೂರಾಗಿ ಸೀಳಿ ಹೋಗಬಾರದೆ? ದುಷ್ಟನಾದ ಆ ರಾಕ್ಷಸನು ಎರಡು ತಿಂಗಳ ಅವಧಿಯನ್ನು ಕೊಟ್ಟು ಹೋಗಿದ್ದಾನೆ. ಆಮೇಲೆ ನನ್ನನ್ನು ಕೊಂದೇ ಬಿಡುವನು. ಕಳ್ಳನನ್ನು ಸೆರೆಹಿಡಿದು ಬೆಳಗಾದರೆ ಶೂಲಕ್ಕೇರಿಸುವಂತೆ ನನ್ನ ಗತಿಯಾಯಿತಲ್ಲ. ಮೃತ್ಯುವೇ ಜಿಂಕೆಯ ರೂಪದಿಂದ ಬಂದು ನನ್ನನ್ನು ವಂಚಿಸಿತು. ಆಜಾನುಬಾಹುವೂ ಪೂರ್ಣಚಂದ್ರಾನನನೂ ಆದ ನನ್ನ ರಾಮನಿಗೆ ಈ ವಿಷಯವೇನೂ ತಿಳಿಯದು. ನನ್ನ ತಪೋನಿಯಮಗಳೆಲ್ಲವೂ ವ್ಯರ್ಥವಾದವು. ಆತ್ಮಹತ್ಯೆ ಮಾಡಿಕೊಳ್ಳುವುದೇ ನನಗೆ ಲೇಸು. ಅದಕ್ಕೆ ವಿಷವೆಲ್ಲಿದೆ? ಚೂರಿಯೆಲ್ಲಿದೆ?'' ಎಂದು ಚಿಂತಿಸಿದಳು. ಆಮೇಲೆ ನೀಳವಾಗಿ ಹರಡಿದ್ದ ತನ್ನ ವೇಣಿಯನ್ನು ಕೈಯಲ್ಲಿ ಹಿಡಿದು ''ಈ ಕೇಶರಾಶಿಯೇ ನನಗೆ ಯಮಪಾಶವಾಗಲಿ. ಈ ಮರದ ಕೊಂಬೆಗೆ ಸುತ್ತಿ ಬಿಗಿದು ನೇಣುಹಾಕಿಕೊಳ್ಳುವೆನು'' ಎಂದು ಆಲೋಚಿಸಿ ಅಶೋಕ ವೃಕ್ಷದ ಬಳಿಗೆ ಬಂದು ನಿಂತಳು. ಅಷ್ಟರಲ್ಲಿ ಅವಳಿಗೆ ಶುಭಶಕುನಗಳಾದವು. ಆಕೆಯ ಎಡಗಣ್ಣು ಅದುರಿತು. ಎಡದೋಳು ಹಾರತೊಡಗಿತು. ವಾಮ ಭಾಗದ ತೊಡೆಯು ಕೊಂಚ ನಡುಗಿತು. ಇವೇ ಮೊದಲಾದ ಶುಭಶಕುನಗಳು ಆಕಸ್ಮಿಕವಾಗಿ ಉಂಟಾಗಲು ಜಾನಕಿಯು ಉಲ್ಲಾಸಗೊಂಡಳು. ತೊಂಡೆ ಹಣ್ಣಿನಂತಿರುವ ತುಟಿಯಿಂದಲೂ ಮನೋಹರವಾದ ಕಣ್ಣು ಹುಬ್ಬು ಮುಂಗುರುಳುಗಳಿಂದಲೂ ಶುಭ್ರವಾದ ಹಲ್ಲುಗಳಿಂದಲೂ ಅವಳ ಮುಖವು ರಾಹುವಿನಿಂದ ಬಿಡುಗಡೆಹೊಂದಿದ ಚಂದ್ರನಂತೆ ಕಳೆಯೇರಿತು.

ಮರದಮೇಲೆ ಕುಳಿತಿದ್ದ ಹನುಮಂತನು ಇದೆಲ್ಲವನ್ನೂ ನೋಡುತ್ತಿದ್ದನು. ರಾವಣನ ಬೆದರಿಕೆ, ಸೀತೆಯ ಧಿಕ್ಕಾರ, ರಾಕ್ಷಸಿಯರ ಕೆಟ್ಟಮಾತು–ಇವೆಲ್ಲವನ್ನೂ ಅವನು ವೀಕ್ಷಿಸುತ್ತ ಕೇಳುತ್ತ ಸುಮ್ಮನೆ ಕುಳಿತಿದ್ದನು. ಅವನು ತನ್ನಲ್ಲಿ ಹೀಗೆಂದು ಕೊಂಡನು. ''ಈಕೆ ಶ್ರೀರಾಮನ ಪತ್ನಿಯಾದ ಸೀತೆಯೆಂದು ನಿಶ್ಚಯವಾಯಿತು. ರಾವಣನು ಎಂತಹ ಅಧಮನೆಂಬುದನ್ನೂ ತಿಳಿದೆನು. ದೇವಿಯ ಪಾತಿವ್ರತ್ಯದ ತೇಜಸ್ಸೇನೆಂಬುದನ್ನೂ ಅರಿತೆನು. ಆಹಾ, ಇಂತಹ ಮಹಾತ್ಮಳೂ ಮನೋಜ್ಞಳೂ ಸಾಧ್ವೀಶಿರೋಮಣಿಯೂ ಆದ ಈ ಸ್ತ್ರೀರತ್ನಕ್ಕಾಗಿ ಶ್ರೀರಾಮನು ಶೋಕಕ್ಕೆ ಒಳಗಾದದ್ದು ಆಶ್ಚರ್ಯವೇನಲ್ಲ, ತನ್ನನ್ನು ನಂಬಿಬಂದ ಒಬ್ಬ ಸ್ತ್ರೀಯನ್ನು ರಕ್ಷಿಸಲಾರದೆ ಹೋದೆನು, ಆಶ್ರಿತಳಾದವಳನ್ನು ಪಾಲಿಸದೆ ಹೋದೆನು, ಧರ್ಮಪತ್ನಿಯನ್ನು

ಅಗಲಿದೆನು, ಪ್ರಿಯತಮೆಯನ್ನು ಕಳೆದುಕೊಂಡೆನು–ಎಂದು ಹಗಲುರಾತ್ರಿಯೂ ಆತನು ಶೋಕಿಸುತ್ತಿರುವುದರ ಮರ್ಮವು ನನಗೀಗ ತಿಳಿಯಿತು. ಮೂರು ಲೋಕದ ಐಶ್ವರ್ಯವೂ ತ್ರಿಲೋಕಾಧಿಪತ್ಯವೂ ಈ ದೇವಿಯ ಪ್ರಾಪ್ತಿಗೆ ಸಮವಲ್ಲ. ಇರಲಿ; ಈಗ ನಾನು ಮುಂದೇನು ಮಾಡಬೇಕು? ಇವಳೊಡನೆ ಮಾತಾಡಿ ಸಮಾಧಾನವನ್ನು ಹೇಳಿ ನಾನು ಹೋಗಬೇಕು. ಈಕೆಯೊಡನೆ ಮಾತನಾಡದೇ ನಾನು ಹಿಂದಿರುಗಿದಲ್ಲಿ ''ಸೀತೆಯು ನನಗೆ ಏನು ಹೇಳಿದ್ದಾಳೆ?'' ಎಂದು ಶ್ರೀರಾಮನು ಕೇಳಿದರೆ ನಾನು ಏನೇಂದು ಉತ್ತರ ಕೊಡಬೇಕು? ಈಕೆಯ ಸಂದೇಶವನ್ನು ತೆಗೆದುಕೊಂಡೇ ಹೋಗಬೇಕಾಗಿದೆ. ಈಗ ನಾನು ಇವಳೊಡನೆ ಮಾತಾಡಲೇಬೇಕು. ಮೊದಲು ಹೇಗೆ ಕಾಣಿಸಿಕೊಳ್ಳಲಿ? ನನ್ನ ರೂಪವನ್ನು ಕಂಡು ಇವಳು ಭಯಗೊಂಡು ಕೂಗಿಕೊಳ್ಳ ಬಹುದು. ಆದ್ದರಿಂದ ನಾನೀಗ ಹೇಗೆ ನಡೆದುಕೊಳ್ಳಬೇಕು?'' ಎಂದು ಚಿಂತಾಕ್ರಾಂತ ನಾದನು. ''ಆಮೇಲೆ ಇವಳು ದುಃಖ ಕೋಪ ಚಿಂತೆ ಮೊದಲಾದ್ದರಿಂದ ಉದ್ವಿಗ್ನ ಳಾಗಿದ್ದಾಳೆ. ಈಗಲೇ ನಾನು ಇವಳಿಗೆ ಕಾಣಿಸಿಕೊಳ್ಳುವುದು ಯುಕ್ತವಲ್ಲ. ಇವಳ ಉದ್ವೇಗವು ಕಡಿಮೆಯಾಗಿ ಚಿತ್ತವು ಶಾಂತಸ್ಥಿತಿಗೆ ಮುಟ್ಟುವಂತೆ ಮಾಡಬೇಕು. ನನ್ನ ಮಾತಿನಲ್ಲಿ ನಂಬಿಕೆ ಹುಟ್ಟುವಂತೆ ಮಾಡುವೆನು. ಶ್ರೀರಾಮನಿಗಾಗಿ ಹಂಬಲಿಸುತ್ತಿರುವ ಇವಳಿಗೆ ಆತನ ಸುದ್ದಿಯನ್ನು ಹೇಳುವುದೇ ಸರಿಯಾದ ಮಾರ್ಗ. ಕ್ಷುಬ್ಧವಾದ ಅವಳ ಮನಸ್ಸು ಆಗ ಮಾತ್ರ ಸಮಸ್ಥಿತಿಗೆ ಬಂದೀತು'' ಎಂದುಕೊಂಡನು.

ಹೀಗೆ ಆಲೋಚಿಸಿದ ಆ ವಾನರೋತ್ತಮನು ಸೀತೆಗೆ ಕೇಳಿಸುವಂತೆ ಇಂಪಾದ ಮಾತನ್ನಾಡಲಾರಂಭಿಸಿದನು : ''ಅಯೋಧ್ಯಾನಗರದಲ್ಲಿ ದಶರಥನೆಂಬ ಮಹಾರಾಜ ನಿದ್ದನು. ಅವನು ಪುಣ್ಯಾತ್ಮ ಕೀರ್ತಿಶಾಲಿ. ರಾಜರ್ಷಿಗಳಲ್ಲಿ ಶ್ರೇಷ್ಠ. ಸತ್ಯ ನಿಷ್ಠ. ಆ ಮಹಾರಾಜನಿಗೆ ಶ್ರೀರಾಮನೆಂಬ ಜ್ಯೇಷ್ಠ ಪುತ್ರನಿದ್ದಾನೆ. ಆ ರಾಜಪುತ್ರನು ದೊಡ್ಡ ವಿದ್ಯಾವಂತ. ಧನುರ್ಧಾರಿಗಳಲ್ಲಿ ಅಗ್ರಗಣ್ಯ. ಧರ್ಮಾತ್ಮನೂ ಸತ್ಯಸಂಧನೂ ಆದವನು. ರಾಮನ ಆಕೃತಿ ಬಹು ಸುಂದರವಾದುದು. ಆ ವೀರನು ತಂದೆಯ ಮಾತನ್ನು ಪಾಲಿಸುವುದಕ್ಕಾಗಿ ತನ್ನ ಪತ್ನಿಯನ್ನೂ, ತಮ್ಮನನ್ನೂ ಕರೆದುಕೊಂಡು ಅರಣ್ಯಕ್ಕೆ ಹೊರಟು ಬಂದನು. ರಾಮಲಕ್ಷ್ಮಣರಿಬ್ಬರೂ ಇಲ್ಲರ ವೇಳೆಯಲ್ಲಿ ರಾವಣನು ಶ್ರೀರಾಮನ ಪತ್ನಿಯಾದ ಜಾನಕಿಯನ್ನು ಅಪಹರಿಸಿ ತಂದನು. ಅನಂತರ ರಾಮನು ಸೀತೆಗಾಗಿ ಪರಿತಪಿಸುತ್ತಾ ಅರಣ್ಯದಲ್ಲಿ ಹುಡುಕುತ್ತಿರುವಾಗ ಸುಗ್ರೀವನೆಂಬ ಕಪೀಶ್ವರನೊಡನೆ ಸ್ನೇಹವು ಬೆಳೆಯಿತು. ಬಲಾಢ್ಯನಾದ ರಾಮನು ಸುಗ್ರೀವನ ಅಣ್ಣನೂ, ದುಷ್ಟನೂ ಆದ ವಾಲಿಯನ್ನು ಕೊಂದು ಕಿಷ್ಕಿಂಧಾರಾಜ್ಯವನ್ನು ಸುಗ್ರೀವ ನಿಗೆ ಕೊಡಿಸಿದನು. ವಾನರೇಶ್ವರನಾದ ಸುಗ್ರೀವನ ಬಳಿಯಲ್ಲಿ ಬಲಶಾಲಿಗಳಾದ

ಲಕ್ಷಾಂತರ ಕಪಿನಾಯಕರಿದ್ದಾರೆ. ಸುಗ್ರೀವನ ಆಜ್ಞೆಯಂತೆ ಕಾಮರೂಪಿಗಳಾದ ವಾನರರು ದಿಕ್ಕು ದಿಕ್ಕುಗಳಲ್ಲಿಯೂ ಸೀತಾದೇವಿಯನ್ನು ಅರಸುತ್ತಿದ್ದಾರೆ. ದಕ್ಷಿಣ ದಿಕ್ಕಿಗೆ ಹೊರಟ ನಾವು ಕೆಲವರು ಸಮುದ್ರತೀರಕ್ಕೆ ಬಂದೆವು. ಜಟಾಯುವಿನ ಅಣ್ಣನಾದ ಸಂಪಾತಿಯು ಲಂಕೆಯನ್ನು ಶ್ರೀರಾಮನ ಪತ್ನಿಯಿದ್ದಾಳೆ–ಎಂದು ಹೇಳಿದನು. ಆಗ ನಾನು ನೂರು ಯೋಜನದಗಲದ ಸಮುದ್ರವನ್ನು ಲಂಘಿಸಿ ಲಂಕೆಗೆ ಬಂದೆನು. ಈ ವಿಶಾಲಾಕ್ಷಿಯೇ ಸೀತೆಯೆಂಬುದು ನಿಶ್ಚಯ. ರಾಘವನು ಯಾವರೂಪವನ್ನೂ, ಯಾವಮೈಬಣ್ಣವನ್ನೂ ಯಾವ ಬಗೆಯ ವಸ್ತ್ರವನ್ನೂ ಗುರುತಾಗಿ ಹೇಳಿದ್ದನೋ ಅವೆಲ್ಲವೂ ಈಕೆಯಲ್ಲಿ ಕಂಡುಬರುತ್ತವೆ. ನಾನು ಸೀತಾದೇವಿಯ ದರ್ಶನ ಮಾಡಿದೆನು!'' ಎಂದು ಹೇಳಿ ಸುಮ್ಮನಾದನು. ಅದನ್ನು ಕೇಳಿ ಸೀತಾದೇವಿಗೆ ಪರಮಾಶ್ಚರ್ಯವಾಯಿತು. ಶ್ರೀರಾಮ ವೃತ್ತಾಂತವನ್ನು ಕೇಳಿ ಬಹಳ ಹರ್ಷವಾಯಿತು. ಅವಳು ಎಲ್ಲಾದಿಕ್ಕಿಗೂ ತಿರುತಿರುಗಿ ನೋಡಿದಳು. ಒಮ್ಮೆ ಮೇಲೆ ನೋಡುವಳು. ಒಮ್ಮೆ ಕೆಳಗೆ ನೋಡುವಳು. ಹೀಗೆ ನೋಡುತ್ತ ನೋಡುತ್ತ ಮಹಾಬುದ್ಧಿಶಾಲಿಯೂ ವಾಯುಪುತ್ರನೂ ಆದ ಹನುಮಂತನು ಶಿಂಶಪಾವೃಕ್ಷದಲ್ಲಿ ಕುಳಿತಿರುವುದನ್ನು ಕಂಡಳು.

೪೪

ಹನುಮಂತನು ತನ್ನ ಪರಿಚಯವನ್ನು ಹೇಳಿ ಶ್ರೀರಾಮನ ಅಂಗುಲೀಯಕವನ್ನು ಸೀತೆಗೆ ಕೊಡುವುದು

ಆ ವೃಕ್ಷದಲ್ಲಿ ಮರೆಯಾಗಿ ಕುಳಿತಿದ್ದ ಕಪಿಯನ್ನು ಕಂಡೊಡನೆ ಅವಳು ಹೆದರಿ ಹೋದಳು. ''ಅಬ್ಬಾ! ಈ ಕಪಿಯು ನನ್ನನ್ನು ಹಿಂಸಿಸಲು ಬಂದಿರಬೇಕು'' ಎಂದುಕೊಂಡು ಕರುಣಸ್ವರದಿಂದ 'ಹಾ ರಾಮಾ' ಎಂದು ಅಳಲಾರಂಭಿಸಿದಳು. ''ಆಹಾ, ನಾನು ಕನಸನ್ನು ಕಾಣುತ್ತಿದ್ದೇನೆ. ಈ ವಿಕಾರರೂಪದ ಕಪಿಯು ನನಗೆ ಕನಸಿನಲ್ಲಿ ಕಂಡಿದೆ. ಕನಸಿನಲ್ಲಿ ಕಪಿಯನ್ನು ಕಾಣುವುದು ಕೆಟ್ಟದ್ದು. ಅಯ್ಯೋ, ದುಃಖದಿಂದ ಕುದಿಯುತ್ತಿರುವ ನನಗೆ ನಿದ್ರೆಯೇ ಇಲ್ಲ. ಸ್ವಪ್ನವೆಲ್ಲಿಂದ ಬೀಳಬೇಕು? ನನಗೆ ಭ್ರಾಂತಿ ಹಿಡಿದಿರಬಹುದೆ? ಭ್ರಾಂತಿಯಾದರೆ ಸ್ಪಷ್ಟವಾಗಿ ಕಪಿಯು ಕಾಣಿಸುತ್ತಿದೆಯಲ್ಲ! ಅದು ಮಾತಾಡುತ್ತಿದೆಯಲ್ಲ! ಏನಿರಬಹುದು? ಓ ದೇವರೆ, ಈ ವಾನರನು ಹೇಳಿದ್ದು ಸತ್ಯವಾಗಲಿ! ಸುಳ್ಳಾಗದಿರಲಿ!'' ಎಂದು ಪ್ರಾರ್ಥಿಸ ತೊಡಗಿದಳು.

ಆಮೇಲೆ ಹನುಮಂತನು ಸೀತಾದೇವಿಗೆ ನಮಸ್ಕರಿಸಿ ವಿನಯದಿಂದ ಮೆಲ್ಲಗೆ ಅವಳ ಸಮೀಪಕ್ಕಿದ್ದ ಕೊಂಬೆಗೆ ಇಳಿದು ಬಂದನು. ಅವನು ಕೈಮುಗಿಯುತ್ತಾ ''ಎಲೌ

ದೇವಿ, ನೀನು ಯಾರು? ಮರದ ಕೊಂಬೆಯನ್ನು ಹಿಡಿದು ಏಕೆ ನಿಂತಿರುವೆ? ತಾವರೆಯ ದಳಗಳಿಂದ ನೀರು ಸುರಿಯುವಂತೆ, ನಿನ್ನ ಕಣ್ಣುಗಳಿಂದ ಕಂಬನಿಯು ಸುರಿಯುತ್ತಿರುವುದೇಕೆ? ತಾಯಿ, ನೀನು ದೇವಕನ್ಯೆಯಾಗಿರಬಹುದೆ? ನೀನು ಅಳುತ್ತಿರುವುದರಿಂದಲೂ, ಶ್ರೀರಾಮನ ಹೆಸರನ್ನು ಹೇಳುತ್ತಿರುವುದರಿಂದಲೂ ಶ್ರೀರಾಮನ ಪತ್ನಿಯಾದ ಸೀತಾದೇವಿಯೆಂದು ಊಹಿಸುತ್ತೇನೆ. ನಿನ್ನ ದೀನ ಸ್ಥಿತಿಯನ್ನು ನೋಡಿದರೆ ರಾವಣನಿಂದ ಅಪಹೃತಳಾದ ಶ್ರೀರಾಮನ ಪತ್ನಿಯೇ ಆಗಿರಬೇಕು,'' ಎಂದನು.

ಹೀಗೆ ಶ್ರೀರಾಮನ ಹೆಸರನ್ನು ಹೇಳಿ ವಿನಯದಿಂದ ಮಾತಾಡುತ್ತಿರುವುದನ್ನು ಕೇಳಿದ ಸೀತೆಗೆ ಸ್ವಲ್ಪ ಧೈರ್ಯ ಬಂದಿತು. ಅವಳು ''ಹೌದು; ನಾನು ಶ್ರೀರಾಮನ ಪತ್ನಿ. ನೀನು ಯಾರು?'' ಎಂದಳು. ಹನುಮಂತನು ಅವಳನ್ನು ಸಂತೈಸುತ್ತ ''ದೇವಿ, ನಾನು ಶ್ರೀರಾಮನ ಸಂದೇಶವನ್ನು ತಂದಿರುವ ದೂತನು. ಶ್ರೀರಾಮನೂ ಲಕ್ಷ್ಮಣನೂ ಕುಶಲದಿಂದಿದ್ದಾರೆ'' ಎಂದನು. ಆ ನರಶ್ರೇಷ್ಠರಿಬ್ಬರ ಕುಶಲವಾರ್ತೆಯನ್ನು ಕೇಳಿದೊಡನೆ ಸೀತೆಯು ಸಂತೋಷದಿಂದ ಉಬ್ಬಿಹೋದಳು. ''ಆಹಾ, ಮನುಷ್ಯನು ಬದುಕಿದ್ದರೆ ನೂರು ವರ್ಷಗಳಿಗಾದರೂ ಒಮ್ಮೆ ಸುಖದ ದಿನವನ್ನು ಕಾಣಬಹುದು – ಎಂಬ ಹೇಳಿಕೆ ಸತ್ಯವಾಗಿ ತೋರುತ್ತದೆ'' ಎಂದಳು. ಆಗ ಹನುಮಂತನು ಇನ್ನೂ ಮುಂದಕ್ಕೆ ಬರತೊಡಗಿದನು. ಆಗ ಸೀತೆಗೆ ಅವನು ರಾವಣ ನಾಗಿರಬಹುದು–ಎಂಬ ಶಂಕೆ ಹುಟ್ಟಿತು. ''ಅಯ್ಯೋ, ನನ್ನ ಪಾಪಕರ್ಮವೇ? ರಾವಣನೇ ವೇಷ ಮರೆಸಿಕೊಂಡು ಬಂದಿದ್ದಾನೆ'' ಎಂದುಕೊಂಡು ಮುಖವನ್ನು ತಿರುಗಿಸಿದಳು. ''ರಾವಣ, ನನ್ನನ್ನು ಪೀಡಿಸುವುದಕ್ಕೆ ಮತ್ತೆ ಬಂದೆಯಾ? ಕಪಟ ಸಂನ್ಯಾಸಿಯ ವೇಷದಲ್ಲಿ ಬಂದಿದ್ದ ನೀನು ಈಗ ಕಪಿಯ ರೂಪದಲ್ಲಿ ಬಂದಿರುವೆ. ಉಪವಾಸದಿಂದ ಕೊರಗುತ್ತಿರುವ ನನ್ನನ್ನು, ರಾವಣ, ಹೀಗೆ ಪೀಡಿಸುವುದು ತರವಲ್ಲ'' ಎಂದಳು.

ಆಗ ಆಂಜನೇಯನು ಮತ್ತೆ ಕೈಮುಗಿದು ''ಅಮ್ಮ ನಾನು ರಾವಣನಲ್ಲ. ನನ್ನ ಮಾತನ್ನು ನಂಬು. ಕಂಗೆಡಬೇಡ. ನಿನ್ನ ಪತಿಯಾದ ಶ್ರೀರಾಮನು ಮಹಾವಿಷ್ಣುವಿನಂತೆ ಪರಾಕ್ರಮಶಾಲಿ. ಸಾಕ್ಷಾತ್ ಮನ್ಮಥನಂತೆ ರೂಪಶಾಲಿ. ಆ ಮಹಾತ್ಮನು ಸಮಸ್ತ ಲೋಕಗಳನ್ನೂ ರಕ್ಷಿಸಬಲ್ಲನು. ನೀನು ಇಲ್ಲಿರುವುದು ಆತನಿಗೆ ತಿಳಿದಿಲ್ಲ. ಅಗ್ನಿಯಂತೆ ಜ್ವಲಿಸುವ ಅಸ್ತ್ರಗಳಿಂದ ಈ ರಾಕ್ಷಸನನ್ನು ಕೊಂದು ನಿನ್ನನ್ನು ಬಿಡಿಸಿಕೊಂಡು ಹೋಗುವನು. ದೇವಿ, ನಾನು ರಾಮದೂತ. ನಿನ್ನ ಯೋಗಕ್ಷೇಮಗಳನ್ನು ವಿಚಾರಿಸುವುದಕ್ಕೆ ಬಂದಿದ್ದೇನೆ. ಸುಮಿತ್ರಾತನಯನಾದ ಲಕ್ಷ್ಮಣನು ನಿನಗೆ ಅಭಿವಂದಿಸಿ ಕುಶಲವನ್ನು ವಿಚಾರಿಸುವಂತೆ ಹೇಳಿದ್ದಾನೆ. ಶ್ರೀರಾಮನ ಮಿತ್ರನಾದ ಸುಗ್ರೀವನು ನನ್ನನ್ನು ಕಳಿಸಿದ್ದಾನೆ. ಹನುಮಂತನೆಂದು ನನ್ನ ಹೆಸರು. ದುರಾತ್ಮನಾದ ರಾವಣನ

ತಲೆಯನ್ನು ಮೆಟ್ಟಿ ನಿನ್ನನ್ನು ನೋಡಿಹೋಗಬೇಕೆಂದು ಬಂದಿದ್ದೇನೆ. ನಾನು ರಾವಣನಲ್ಲ, ನನ್ನ ಮಾತನ್ನು ನಂಬು'' ಎಂದು ಹೇಳಿದನು.

ಆಂಜನೇಯನು ಶ್ರೀರಾಮನನ್ನು ಹೊಗಳಿದ್ದರಿಂದಲೂ ರಾವಣನನ್ನು ನಿಂದಿಸಿದ್ದರಿಂದಲೂ ಆತನ ಮಾತು ಸತ್ಯವಾಗಿರಬಹುದೆಂದು ಸೀತೆಗೆ ಅನ್ನಿಸಿತು. ಅವಳು ''ಎಲೈ ವಾನರ, ನೀನು ರಾಮನನ್ನು ಎಲ್ಲಿನೋಡಿದೆ? ಲಕ್ಷ್ಮಣನನ್ನು ಹೇಗೆ ಬಲ್ಲೆ? ಕಪಿರಾಜನಾದ ಸುಗ್ರೀವನೊಡನೆ ಅವರಿಗೆ ಸ್ನೇಹವು ಹೇಗೆ ಘಟಿಸಿತು? ಅದಿರಲಿ. ಶ್ರೀರಾಮನ ಆಕಾರ ಹೇಗಿದೆ? ಅವನ ಮೈಬಣ್ಣ ಎಂಥಹದು? ನೀನು ರಾಮಲಕ್ಷ್ಮಣರನ್ನು ಬಲ್ಲೆಯಾದರೆ ಅವರು ಹೇಗಿದ್ದಾರೆ ಹೇಳು'' ಎಂದು ಕೇಳಿದಳು. ಹನುಮಂತನು ''ಜಾನಕಿ, ನಾನು ರಾಮದೂತನೆಂದು ಗೊತ್ತಾದರೂ ಈ ವಿವರವನ್ನು ಕೇಳುತ್ತಿರುವೆ. ಒಳ್ಳೆಯದು; ಹೇಳುವೆನು'' ಎಂದು ನುಡಿದು ಶ್ರೀರಾಮನ ಆಕೃತಿಯನ್ನು ವರ್ಣಿಸತೊಡಗಿದನು. ಆತನ ಮೈಕಟ್ಟು, ಎತ್ತರ, ನಿಲುವು, ಸೌಂದರ್ಯ, ಮೈಬಣ್ಣ ಮಾತಾಡುವ ಶೈಲಿ, ಧ್ವನಿ–ಎಲ್ಲವನ್ನೂ ವಿವರಿಸಿದನು. ಅಂತೆಯೇ ಲಕ್ಷ್ಮಣನ ತೇಜಸ್ವಿಯಾದ ಆಕಾರ, ಗುಣ, ಮೊದಲಾದದ್ದನ್ನು ತಿಳಿಸಿದನು. ಅನಂತರ ಸುಗ್ರೀವನ ಸ್ನೇಹವಾದ ಬಗೆಯನ್ನೂ ವಾಲಿಯನ್ನು ಸಂಹರಿಸಿದ್ದಕ್ಕೆ ನಿಮಿತ್ತವನ್ನೂ ತಿಳಿಸಿದನು. ಸುಗ್ರೀವನು ಕಪಿರಾಜನಾದದ್ದನ್ನೂ ಶ್ರೀರಾಮನ ಪ್ರೇರಣೆಯಂತೆ ಸುಗ್ರೀವನು ಸೀತಾನ್ವೇಷಣೆಗಾಗಿ ಕಪಿನಾಯಕರನ್ನು ಕಳಿಸಿದ್ದನ್ನೂ ತಾನು ಸಮುದ್ರವನ್ನು ಹಾರಿ ಲಂಕೆಗೆ ಬಂದದ್ದನ್ನೂ ಸ್ವಲ್ಪವೂ ತೊದಲದೆ ಬಿಡಿಸಿ ಹೇಳಿ ತನ್ನ ಸಾಮರ್ಥ್ಯ ಪರಾಕ್ರಮಗಳನ್ನ ಹೇಳಿಕೊಂಡನು. ಅದೆಲ್ಲವನ್ನೂ ಕೇಳಿದ ವೈದೇಹಿಗೆ 'ಇವನು ಸತ್ಯವನ್ನೇ ಹೇಳುತ್ತಿದ್ದಾನೆ' ಎನ್ನಿಸಿತು. ಸೀತೆಗೆ ಪೂರ್ಣನಂಬಿಕೆಯಾಗಲೆಂದು ಹನುಮಂತನು ಶಿಂಶಪಾವೃಕ್ಷದಿಂದ ಕೆಳಗಿಳಿದು ಶ್ರೀರಾಮನ ಅಂಗುಲೀಯಕವನ್ನು ತೆಗೆದು ದೇವಿ ''ಇದೋ, ಶ್ರೀರಾಮನ ಹೆಸರನ್ನು ಕೆತ್ತಿದ ಅಂಗುಲೀಯಕವನ್ನು ನೋಡು! ನಿನಗೆ ನನ್ನಲ್ಲಿ ವಿಶ್ವಾಸ ಹುಟ್ಟಲೆಂದು ಆ ಮಹಾತ್ಮನು ಇದನ್ನು ನನ್ನ ಕೈಗೆ ಕೊಟ್ಟು ಕಳಿಸಿದ್ದಾನೆ. ನಿನ್ನ ಕಷ್ಟವು ನೀಗಿತೆಂದು ತಿಳಿ'' ಎಂದು ನುಡಿದು ಆ ಉಂಗುರವನ್ನು ಸೀತೆಯ ಕೈಯಲ್ಲಿಟ್ಟನು. ಸೀತೆಯು ಆ ಉಂಗುರವನ್ನು ಕೈಯಲ್ಲಿ ತೆಗೆದುಕೊಂಡು ಅದನ್ನೇ ನೋಡುತ್ತ ಶ್ರೀರಾಮನೇ ಅಲ್ಲಿಗೆ ಬಂದಷ್ಟು ಆನಂದವಾಗಿ ಉಬ್ಬಿ ಹೋದಳು. ಬಾಡಿದ್ದ ಅವಳ ಮುಖವು ಹರ್ಷದಿಂದ ಹಿಗ್ಗಿತು. ಗ್ರಹಣವು ಬಿಟ್ಟ ಪೂರ್ಣಚಂದ್ರನಂತೆ ಮಿನುಗಿತು. ಆ ಯುವತಿಯು ಸ್ವಲ್ಪ ನಾಚಿಕೆ ಪಡುತ್ತಲೇ ಹನುಮಂತನನ್ನು ನೋಡಿ ''ವಾನರೋತ್ತಮ, ನೀನೇ ಪರಾಕ್ರಮಶಾಲಿ, ನೀನೇ ಸಮರ್ಥ, ಬುದ್ಧಿಶಾಲಿಯೆಂದರೆ ನೀನೇ. ಮಹಾಸಾಗರವನ್ನು ದಾಟಿಬಂದಿದ್ದೀಯೆ.

ನೀನು ಸಾಮಾನ್ಯ ಕಪಿಯಲ್ಲ. ಧೀಮಂತನಾದ ರಾಮನು ದೂತನ ಅರ್ಹತೆಯನ್ನು ಪರೀಕ್ಷೆ ಮಾಡದೆ ನನ್ನ ಬಳಿಗೆ ಕಳಿಸಲಾರ. ಧರ್ಮಾತ್ಮನಾದ ಶ್ರೀರಾಮನೂ, ಸುಮಿತ್ರಾತನಯನಾದ ಲಕ್ಷ್ಮಣನೂ ಕ್ಷೇಮದಿಂದಿರುವುದು ನನ್ನ ಭಾಗ್ಯ'' ಎಂದಳು. ಮತ್ತೆ ಆ ಅಂಗುಲೀಯಕವನ್ನು ನೋಡುತ್ತ ಕಣ್ಣಿಗೆ ಒತ್ತಿಕೊಂಡು ಬಿಸುಸುಯ್ದು ''ಕಪಿಶ್ರೇಷ್ಠ, ಶ್ರೀರಾಮಲಕ್ಷ್ಮಣರು ಕುಶಲದಿಂದದ್ದ ಮೇಲೆ ನನ್ನನ್ನೇಕೆ ಇದುವರೆಗೆ ಬಿಡಿಸಿಕೊಳ್ಳಲಿಲ್ಲ? ಓಹೋ, ನಾನಿಲ್ಲಿರುವುದು ಅವರಿಗೆ ತಿಳಿದಿರಲಿಕ್ಕಿಲ್ಲ. ಶ್ರೀರಾಮನು ಮೊದಲಿನಂತೆಯೇ ಧೀರನಾಗಿರುತ್ತಾನೆಯೆ? ನನ್ನನ್ನು ಅಗಲಿದ್ದರಿಂದ ಶೋಕತಪ್ತನಾಗಿ ಕೃಶನಾಗಿಲ್ಲವಷ್ಟೆ? ಅಪ್ಪಾ–ರಾಮದೂತ, ಶ್ರೀರಾಮನಿಗೆ ನನ್ನಮೇಲಿರುವ ಪ್ರೇಮವು ಅಪಾರವಾದದ್ದು. ನನ್ನ ಪ್ರಿಯನು ನನ್ನನ್ನು ಒಂದು ದಿನ ಬಿಡಿಸಿಕೊಳ್ಳುತ್ತಾನೆ–ಎಂಬ ಆಶಾಬಂಧದಿಂದ ಇದುವರೆಗೆ ಜೀವ ಹಿಡಿದಿದ್ದೇನೆ'' ಎಂದು ನುಡಿದಳು. ಆಗ ಹನುಮಂತನು ''ದೇವಿ, ನೀನು ಇಲ್ಲಿರುವ ಸುದ್ದಿಯನ್ನು ನನ್ನಿಂದ ಕೇಳುತ್ತಲೇ ಆ ವೀರಾಗ್ರಣಿಯು ಬಹುದೊಡ್ಡದಾದ ವಾನರ ಸೇನೆಯೊಡನೆ ಇಲ್ಲಿಗೆ ಬರುವನು. ಈ ರಾಕ್ಷಸರನ್ನು ಸದ್ದಿಲ್ಲದಂತೆ ಅಡಗಿಸಿ ರಾವಣನನ್ನು ವಧಿಸಿ ನಿನ್ನನ್ನು ಕರೆದುಕೊಂಡು ಹೋಗುವನು. ದೇವಿ, ಶ್ರೀರಾಮನ ರಮಣೀಯವಾದ ಮುಖವನ್ನು ಸದ್ಯದಲ್ಲಿಯೇ ನೀನು ನೋಡುತ್ತೀಯೆ. ನಿನ್ನ ವಿರಹ ದುಃಖದಿಂದ ಆ ರಘುಶ್ರೇಷ್ಠನು ಯಾವ ಹಣ್ಣುಗಳನ್ನೂ ತಿನ್ನನು. ಕಂದಮೂಲಗಳನ್ನು ಮಾತ್ರ ಸೇವಿಸುವನು. ಸದಾ ನಿನ್ನನ್ನು ಚಿಂತಿಸುತ್ತಾ, ಶೋಕಿಸುತ್ತಾ ಇರುವನು. ಎಲ್ಲಿಯಾದರೂ ಹಣ್ಣನ್ನಾಗಲಿ ಸುಂದರವಾದ ಹೂವನ್ನಾಗಲಿ ಕಂಡರೆ, ನಿನ್ನನ್ನು ನೆನೆಸಿಕೊಂಡು 'ಹಾ ಸೀತೆ' ಎಂದು ಹಂಬಲಿಸುತ್ತ ನಿಟ್ಟುಸಿರು ಬಿಡುವನು. ಅವನಿಗೆ ಸರಿಯಾಗಿ ನಿದ್ರೆಯೇ ಬರುತ್ತಿಲ್ಲ. ನಿನ್ನನ್ನು ಹುಡುಕಲೇಬೇಕೆಂದು ದೃಢವಾದ ಸಂಕಲ್ಪವನ್ನು ಮಾಡಿದ್ದಾನೆ'' ಎಂದು ಹೇಳಿದನು.

ಆ ನುಡಿಯನ್ನು ಕೇಳಿ ಸೀತೆಗೆ ಹರ್ಷವೂ ಆಯಿತು, ದುಃಖವೂ ಆಯಿತು. ಶ್ರೀರಾಮನ ಕುಶಲ ವೃತ್ತಾಂತವನ್ನು ಕೇಳಿ ಹರ್ಷ, ತನಗಾಗಿ ಶೋಕದಿಂದ ಪರಿತಪಿಸುತ್ತಿರುವುದನ್ನು ಕೇಳಿ ದುಃಖ–ಹೀಗೆ ಹರ್ಷದುಃಖಗಳೆರಡೂ ಅವಳಿಗೆ ಏಕಕಾಲದಲ್ಲಾದವು. ಅವಳು ಹನುಮಂತನನ್ನು ನೋಡಿ ''ವಾನರೋತ್ತಮ, ನಿನ್ನ ಈ ನುಡಿ ವಿಷಮಿಶ್ರಿತವಾದ ಅಮೃತದಂತಿದೆ. ನನ್ನ ಪತಿಯ ಕುಶಲವಾರ್ತೆಯನ್ನು ಕೇಳಿ ಸಂತೋಷವಾಯಿತು. ನನಗಾಗಿ ಪರಿತಪಿಸುತ್ತಿರುವುದನ್ನು ಕೇಳಿ ತೀವ್ರವಾದ ಶೋಕವಾಗುತ್ತಿದೆ'' ಎಂದಳು. ಮತ್ತೆ ''ಸುಖದುಃಖಗಳು ನಮ್ಮ ಅಧೀನವಲ್ಲ. ದೈವವನ್ನು ಮೀರಿ ನಡೆಯುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಲಕ್ಷ್ಮಣ, ನಾನು, ರಾಮ ಈ ಮೂವರೂ ವ್ಯಸನ ಪರಂಪರೆಯಲ್ಲಿ ಸಿಕ್ಕಿ ದಿಕ್ಕು ಕಾಣದೆ ಇದ್ದೇವೆ. ಶ್ರೀರಾಮನು

ಶೋಕಸಮುದ್ರದಲ್ಲಿ ಈಜಿ ಬಳಲಿಹೋಗಿದ್ದಾನೆ. ವಾನರೋತ್ತಮ, ನೀನು ಹೋಗಿ ನನ್ನ ಪ್ರಿಯತಮನನ್ನು ತ್ವರೆಗೊಳಿಸಬೇಕು. ಇನ್ನು ಎರಡು ತಿಂಗಳೊಳಗೆ ಈ ಕಾರ್ಯವಾಗಬೇಕು. ಆಮೇಲೆ ನಾನು ಬದುಕಿರುವುದಿಲ್ಲ. ಪಾಪಿಯಾದ ಆ ರಾವಣನು ನನಗೆ ಎರಡು ತಿಂಗಳು ಮಾತ್ರ ಗಡುವನ್ನು ಕೊಟ್ಟಿದ್ದಾನೆ. ಅವನಾಡಿದ ಮಾತನ್ನು, ಹನುಮಂತ, ಮರದಮೇಲಿಂದ ನೀನು ಕೇಳಿರಬೇಕಲ್ಲವೆ? ಆತನು ನನ್ನನ್ನು ಶ್ರೀರಾಮನಿಗೆ ಹಿಂದಿರುಗಿಸುವುದಿಲ್ಲವೆಂದು ನಿಶ್ಚಯಿಸಿದ್ದಾನಂತೆ. ಅವನ ತಮ್ಮ ವಿಭೀಷಣನ ಮಗಳಾದ ಅನಲೆಯೆಂಬುವಳು ಈ ಮಾತನ್ನು ನನಗೆ ಹೇಳಿದ್ದಾಳೆ. ಮಹಾಪರಾಕ್ರಮಿಯಾದ ಶ್ರೀರಾಮನು ಈ ರಾಕ್ಷಸನನ್ನು ಕೊಂದು ನನ್ನನ್ನು ಬಿಡಿಸಿಕೊಂಡು ಹೋಗಬೇಕು. ಅಂತಹ ಸಾಮರ್ಥ್ಯವು ಆ ವೀರನಿಗಿದೆ. ಹಾಗೆಯೇ ಮಾಡುವನೆಂದು ನನ್ನ ಅಂತರಾತ್ಮವು ನುಡಿಯುತ್ತಿದೆ. ಈ ರಾಕ್ಷಸರು ಅವನಿಗೆ ಯಾವ ಲೆಕ್ಕ?'' ಎಂದಳು.

೪೫

ಸೀತೆಗೂ ಹನುಮಂತನಿಗೂ ಮುಂದುವರಿದ ಸಂಭಾಷಣೆ, ವಾಯಸ ವೃತ್ತಾಂತ, ಚೂಡಾಮಣಿ ಪ್ರದಾನ.

ಆಗ ಆಂಜನೇಯನು ಕಂಬನಿದುಂಬಿದ್ದ ಸೀತೆಯನ್ನು ನೋಡಿ ''ದೇವಿ, ನಾನು ಹೋಗಿ ಈ ಸಂಗತಿಯನ್ನು ಶ್ರೀರಾಮನಿಗೆ ತಿಳಿಸುವುದೇ ತಡ, ಒಡನೆಯೇ ವಾನರ ಭಲ್ಲೂಕಗಳ ಮಹಾಸೇನೆಯನ್ನು ಇಲ್ಲಿಗೆ ತಂದೇ ಬಿಡುವನು. ಅಥವಾ ಅದೂ ಬೇಡ, ದೇವಿ, ನಿನ್ನನ್ನು ಈಗಲೇ ಕಷ್ಟದಿಂದ ಪಾರುಮಾಡುತ್ತೇನೆ. ಇದೋ,ನನ್ನ ಬೆನ್ನನ್ನೇರಿ ಕುಳಿತುಕೊ. ಈಗಲೇ ನಿನ್ನನ್ನು ಒಯ್ದು ಪ್ರಸ್ರವಣ ಪರ್ವತದಲ್ಲಿರುವ ಶ್ರೀರಾಮನಿಗೆ ಒಪ್ಪಿಸುವೆನು. ನನ್ನ ಬೆನ್ನ ಮೇಲೇರು. ಭಯಪಡಬೇಡ. ನನ್ನ ಶಕ್ತಿಪರಾಕ್ರಮಗಳೇನೆಂಬುದನ್ನು ನೋಡು'' ಎಂದನು. ಆ ನುಡಿಯನ್ನು ಕೇಳಿ ಸೀತೆಯು ವಿಸ್ಮಯದಿಂದ ರೋಮಾಂಚಗೊಂಡಳು. ''ಹನುಮಂತ, ಅಷ್ಟುದೂರದವರೆಗೆ ನನ್ನನ್ನು ಹೊತ್ತುಕೊಂಡು ಹೋಗುವೆಯಾ? ಇಷ್ಟು ಚಿಕ್ಕ ಶರೀರ ನಿನ್ನದು. ಇದಕ್ಕೇ ನೀನು ಕಪಿ ಎನ್ನುವುದು!'' ಎಂದಳು.

ಈ ಮಾತನ್ನು ಕೇಳಿ ಆ ವಾಯುಪುತ್ರನಿಗೆ ಎಂದೂ ಆಗದ ಅವಮಾನವಾದಂತಾಯಿತು. ''ಈಕೆಗೆ ನನ್ನ ಪರಾಕ್ರಮವೂ ನನ್ನ ಮಹಿಮೆಯೂ ಗೊತ್ತಿಲ್ಲ. ನನ್ನ ನಿಜರೂಪವೇನೆಂಬುದನ್ನು ಒಮ್ಮೆ ನೋಡಲಿ'' ಎಂದುಕೊಂಡು ಸೀತೆಯು

ನೋಡುನೋಡುತ್ತಿರುವಂತೆ ತನ್ನ ದೇಹವನ್ನು ಬೆಳೆಯಿಸತೊಡಗಿದನು. ಉರಿಯುವ ಅಗ್ನಿಯಂತೆ ಜ್ವಲಿಸುತ್ತಾ ಮೇರು ಪರ್ವತವೋ ಎಂಬಂತೆ ಸೀತೆಯ ಎದುರಿಗೆ ಬೆಳೆದು ನಿಂತನು. ಬಲಾಢ್ಯನಾದ ಆ ಹನುಮಂತನು ಸೀತೆಯನ್ನು ಕುರಿತು ''ದೇವಿ, ಈ ರಾವಣಾದಿ ರಾಕ್ಷಸರನ್ನು ಬಿಗಿದುಕಟ್ಟಿ ಎತ್ತಿಕೊಂಡು ಹೋಗುವಶಕ್ತಿ ನನಗುಂಟು. ಧೈರ್ಯದಿಂದಿರು. ಸಂದೇಹಪಡಬೇಡ'' ಎಂದನು. ಸೀತೆಯು ಆಶ್ಚರ್ಯದಿಂದ ಅವನನ್ನು ನೋಡುತ್ತ ''ಓ ಮಹಾಕಪಿಯೇ, ನಿನ್ನ ಸಾಮರ್ಥ್ಯವು ತಿಳಿಯಿತು. ಸಾಮಾನ್ಯನಾದವನು ಈ ಮಹಾಸಾಗರವನ್ನು ದಾಟಿ ಇಲ್ಲಿಗೆ ಬರಬಲ್ಲನೆ? ನನ್ನನ್ನು ಕರೆದೊಯ್ಯುವ ಶಕ್ತಿ ನಿನಗಿದೆ. ಆದರೆ ನಾನು ನಿನ್ನೊಡನೆ ಬರುವುದು ಯುಕ್ತವಲ್ಲ. ವಾಯುವೇಗದಿಂದ ನೀನು ಸಾಗುವಾಗ ನಾನು ಹೆದರಿಕೆಯಿಂದ ಕೆಳಗೆ ಬಿದ್ದುಬಿಡಬಹುದು. ದುರಾತ್ಮರಾದ ರಾಕ್ಷಸರು ನಿನ್ನನ್ನು ಅಡ್ಡಗಟ್ಟಬಹುದು. ನನ್ನನ್ನು ರಕ್ಷಿಸಿಕೊಳ್ಳುತ್ತಾ ಅವರೊಡನೆ ನೀನು ಹೋರಾಡಬೇಕಾದೀತು. ಅಲ್ಲದೆ ನಾನು, ನನ್ನ ಇಚ್ಛೆಯಿಂದಲೇ ಪರಪುರುಷನ ಬೆನ್ನನ್ನೇರಿ ಕುಳಿತುಕೊಳ್ಳುವುದು ಯೋಗ್ಯವಲ್ಲ. ಮುಖ್ಯವಾದ ಇನ್ನೊಂದು ಕಾರಣವಿದೆ. ನೀನು ನನ್ನನ್ನು ಕರೆದೊಯ್ದರೂ ಶ್ರೀರಾಮನಿಗೆ ಸಮಾಧಾನವಾಗದು. ತನ್ನ ವಂಶವನ್ನು ಅಭಿಮಾನದಿಂದ ಶ್ಲಾಘಿಸುತ್ತಿರುವ ಆ ವೀರನಿಗೆ ಈ ರೀತಿಯಲ್ಲಿ ಬಿಡಿಸಿಕೊಂಡು ಹೋಗುವುದು ಗೌರವವನ್ನು ತರದು. ತನ್ನ ಬಾಹುಬಲಕ್ಕೆ, ತನ್ನ ಕೀರ್ತಿಗೆ ಕಳಂಕವುಂಟಾಯಿತೆಂದು ಅವನು ಕೋಪಿಸಬಹುದು. ಆದ್ದರಿಂದ ಆತನೇ ಇಲ್ಲಿಗೆ ಬಂದು ತನ್ನ ಬಾಹುಬಲದಿಂದ ಈ ರಾವಣನನ್ನು ಕೊಂದು ನನ್ನನ್ನು ಬಿಡಿಸಿಕೊಂಡು ಹೋಗುವುದೇ ಆ ವೀರನಿಗೆ ಒಪ್ಪುವ ಕಾರ್ಯವಾಗುತ್ತದೆ. ಆತನ ಹೃದಯವನ್ನು ನಾನು ಬಲ್ಲೆ'' ಎಂದಳು. ಮತ್ತೆ ''ಕಪಿಶ್ರೇಷ್ಠ, ಶತ್ರುಮರ್ದನನಾದ ರಘುನಾಥನು ಲಕ್ಷ್ಮಣಸಮೇತನಾಗಿ ಬಂದು ಪ್ರಳಯಕಾಲದ ಸೂರ್ಯನ ಕಿರಣಗಳಂತೆ ಜ್ವಲಿಸುವ ತನ್ನ ಅಸ್ತ್ರಗಳನ್ನು ತೂರಿ ತನ್ನ ಪರಾಕ್ರಮವನ್ನು ಮೆರೆಸಲಿ'' ಎಂದು ಹೇಳಿದಳು.

ಆಂಜನೇಯನು ಸೀತೆಯ ಆ ನುಡಿಯನ್ನು ಕೇಳಿ ಸಂತುಷ್ಟನಾಗಿ ''ದೇವಿ, ನೀನು ಯೋಗ್ಯವಾದ ಮಾತನ್ನಾಡಿದ್ದೀಯೆ. ಪತಿವ್ರತೆಯ ಸ್ವಭಾವಕ್ಕೆ ಒಪ್ಪತಕ್ಕ ಮಾತು ಇದು. ಇಂತಹ ಧೀರವಾಣಿ ನೀನಲ್ಲದೆ ಇನ್ನಾವಸ್ತ್ರೀಯ ಬಾಯಿಂದ ಬಂದೀತು? ತಾಯಿ, ನಿನ್ನ ಕಷ್ಟವನ್ನು ನೋಡಿ ಮನಸ್ಸು ಕರಗಿಹೋದ್ದರಿಂದ ಹಾಗೆ ಹೇಳಿದೆನು. ನನ್ನನ್ನು ಮನ್ನಿಸು'' ಎಂದು ನುಡಿದು ಮೊದಲಿನಂತೆ ತನ್ನ ರೂಪವನ್ನು ಚಿಕ್ಕದಾಗಿ ಮಾಡಿಕೊಂಡನು. ಅನಂತರ ಹನುಮಂತನು ''ದೇವಿ, ನಿನ್ನನ್ನು ನೋಡಿ ಬಂದ ವಿಷಯದಲ್ಲಿ ಶ್ರೀರಾಮನಿಗೆ ನಂಬಿಕೆಯಾಗುವಂತೆ ಒಂದು ಗುರುತನ್ನು ಕೊಡು'' ಎಂದು ಕೇಳಿದನು. ಆಗ

ಸೀತಾದೇವಿಯು ಕಣ್ಣೀರು ತುಂಬಿಕೊಂಡು ಗದ್ಗದ ಸ್ವರದಿಂದ ಹೇಳತೊಡಗಿದಳು: ''ಹನುಮಂತ, ಇದೇ ದೊಡ್ಡ ಗುರುತು. ಇದನ್ನು ನನ್ನ ಪ್ರಿಯನಿಗೆ ಹೇಳು. ಹಿಂದೊಮ್ಮೆ ಚಿತ್ರಕೂಟದ ಒಂದು ಪಾರ್ಶ್ವದಲ್ಲಿ 'ನಾನು ನಿನ್ನ ತೊಡೆಯ ಮೇಲೆ ಕುಳಿತಿದ್ದೆನು. ಆಗ ಒಂದು ಕಾಗೆಯು ಬಂದು ನನ್ನನ್ನು ಕುಕ್ಕತೊಡಗಿತು. ಅದನ್ನು ಓಡಿಸಲು ನಾನೆಷ್ಟು ಯತ್ನಿಸಿದರೂ ಅದು ಮತ್ತೆಮತ್ತೆ ನನ್ನನ್ನು ಪೀಡಿಸುತ್ತಲೇ ಇತ್ತು. ಆಗ ನಾನು ಸಿಟ್ಟಿನಿಂದ ಮೇಲೆದ್ದು ಆ ಕಾಗೆಯನ್ನು ಹೊಡೆಯುವುದಕ್ಕಾಗಿ ನನ್ನ ಕಾಂಚಿಯನ್ನು ಬಿಚ್ಚಿ ಕೈಯಲ್ಲಿ ಹಿಡಿದೆನು. ಆಗ ನನ್ನ ಸೀರೆ ಕೊಂಚ ಸಡಿಲಿತು. ನೀನು ನನ್ನನ್ನು ನೋಡಿ ಹಾಸ್ಯ ಮಾಡಿದೆ. ನನಗೆ ಇತ್ತ ಕೋಪ, ಇತ್ತ ನಾಚಿಕೆ. ಕಡೆಗೆ ಕಾಗೆಯನ್ನು ಓಡಿಸಲಿಕ್ಕಾಗದೆ ಕಣ್ಣೀರು ತುಂಬಿಕೊಂಡು ನಿನ್ನ ತೊಡೆಯಮೇಲೆ ಬಂದು ಕುಳಿತೆನು'. ಈ ಮಾತನ್ನು ರಾಮನಿಗೆ ಹೇಳು. ಅನಂತರ ರಾಘವನು ನನ್ನ ತೊಡೆಯಮೇಲೆ ತಲೆಯಿಟ್ಟು ಮಲಗಿದನು. ಅವನಿಗೆ ನಿದ್ರೆ ಬಂದಿತು. ಸಮಯವನ್ನು ಕಾದು ಕಾಗೆಯು ಮತ್ತೆ ಬಂದು ನನ್ನ ಎದೆಯನ್ನು ಬಲವಾಗಿ ಕುಕ್ಕಿತು. ರಕ್ತದ ಹನಿಗಳು ರಾಮನಮೇಲೆ ಸುರಿದವು. ಆ ವೀರನು ಎಚ್ಚರಗೊಂಡು ಎದ್ದು ನನ್ನ ಮೈಮೇಲಿನ ಗಾಯವನ್ನು ನೋಡಿ ಸರ್ಪದಂತೆ ರೋಷಾವಿಷ್ಟನಾದನು. 'ಪ್ರಿಯೆ, ಯಾವನು ನಿನ್ನನ್ನು ಗಾಯಗೊಳಿಸಿದವನು?' ಎಂದು ಹೇಳುತ್ತ ಸುತ್ತಲೂ ನೋಡಿದಾಗ ದೂರದಲ್ಲಿ ಕುಳಿತಿದ್ದ ಕಾಗೆ ಕಾಣಿಸಿತು. ಅದೇ ಕಾಗೆ ನನ್ನನ್ನು ಕೆಣಕಿತೆಂದು ತಿಳಿದು ಬಳಿಯಲ್ಲಿದ್ದ ಒಂದು ದರ್ಭೆಯನ್ನು ತೆಗೆದು, ಬ್ರಹ್ಮಾಸ್ತ್ರದ ಮಂತ್ರದಿಂದ ಅದನ್ನು ಅಭಿಮಂತ್ರಿಸಿ ದನು. ಆ ದರ್ಭೆಯು ಕಾಲಾಗ್ನಿಯಂತೆ ಪ್ರಜ್ವಲಿಸತೊಡಗಿತು. ಆದನ್ನು ವಾಯಸದ ಮೇಲೆ ಪ್ರಯೋಗಿಸಿದನು. ವಾಯಸವು ದಿಕ್ಕುಗೆಟ್ಟು ಓಡಿತು. ದರ್ಭೆಯು ಗಗನ ಮಾರ್ಗದಲ್ಲಿ ಅದನ್ನು ಬೆನ್ನಟ್ಟಿತು. ಆ ಕಾಗೆ ದೇವೇಂದ್ರನ ಮಗನಾದ ಜಯಂತನೆಂದು ಆಮೇಲೆ ತಿಳಿಯಿತು. ತಂದೆಯಾದ ಇಂದ್ರನೂ, ದೇವತೆಗಳೂ, ಮಹರ್ಷಿಗಳೂ ಅವನನ್ನು ರಕ್ಷಿಸಲಾರದೆ ಕೈಬಿಟ್ಟರು. ಕಡೆಗೆ ಆ ವಾಯಸವು ಶ್ರೀರಾಮನೇ ಗತಿ ಎಂದು ತಿರುಗಿ ಬಂದು ನನ್ನ ಪ್ರಿಯನ ಪಾದಗಳ ಬಳಿ ಅಡ್ಡ ಬಿದ್ದಿತು. ಶರಣಾಗತವತ್ಸಲನಾದ ಶ್ರೀರಾಮನು ಕೃಪೆತೋರಿ ವಧಾರ್ಹವಾದ ಆ ಕಾಗೆಯನ್ನು ರಕ್ಷಿಸಿದನು. ಈ ವೃತ್ತಾಂತವನ್ನು ಅವನಿಗೆ ಹೇಳು'' ಎಂದಳು. ''ಹನುಮಂತ, ಶ್ರೀರಾಮನಂತೆ ಲಕ್ಷ್ಮಣನೂ ಮಹಾಪರಾಕ್ರಮಿ. ಅವರಿಬ್ಬರೂ ಮನಸ್ಸನ್ನು ಮಾಡಿದ್ದರೆ ಇಷ್ಟರಲ್ಲಿಯೇ ನನ್ನನ್ನು ಪಾರುಮಾಡಬಹುದಾಗಿತ್ತು. ಮುಖ್ಯವಾಗಿ ನಾನು ಮಾಡಿದ ಪಾಪಕರ್ಮವು ಬಹುದೊಡ್ಡದು'' ಎಂದು ಹೇಳಿ ಸೆರಗಿನಿಂದ ಕಣ್ಣೀರನ್ನು ಒರೆಸಿಕೊಂಡಳು. ಹನುಮಂತನು ''ದೇವಿ, ಆಣೆ ಮಾಡಿ ಹೇಳುತ್ತೇನೆ. ಶ್ರೀರಾಮನಿಗೆ ನಿನ್ನ ವಿರಹದುಃಖದಿಂದ ಅತ್ಯಂತ ಖೇದವಾಗಿದೆ.

ಅವನನ್ನು ನೋಡಿ ಲಕ್ಷ್ಮಣನು ಸಂಕಟಪಡುತ್ತಿದ್ದಾನೆ. ಅವರು ನಿನ್ನನ್ನು ಬಿಡಿಸಿಕೊಳ್ಳಬೇಕೆಂದು ಹಗಲಿರಳೂ ಕನವರಿಸುತ್ತಿದ್ದಾರೆ. ನಿನ್ನನ್ನು ಕಂಡದ್ದಾಯಿತು. ಇದು ಶೋಕಿಸುವ ಕಾಲವಲ್ಲ. ಧೈರ್ಯದಿಂದಿರು. ಶ್ರೀರಾಮ ಲಕ್ಷ್ಮಣರಿಗೂ ಸುಗ್ರೀವನಿಗೂ ಹೇಳಿ ಕಳಿಸಬೇಕಾದ ಮಾತಿದ್ದರೆ ಅದನ್ನು ಹೇಳು'' ಎಂದನು. ಆಗ ಜಾನಕಿಯು ತೊದಲುತ್ತಲೇ ''ಕೌಸಲ್ಯಾದೇವಿಯು ಲೋಕ ಸಂರಕ್ಷಣಾರ್ಥವಾಗಿ ಯಾವ ಮಹಾತೇಜಸ್ವಿಯನ್ನು ಹಡೆದಿರುವಳೋ ಆತನ ಕುಶಲವನ್ನು ವಿಚಾರಿಸಿದ್ದೇನೆಂದು ನನ್ನ ಪರವಾಗಿ ಹೇಳಿ ತಲೆಬಾಗಿ ನಮಸ್ಕರಿಸಿದ್ದೇನೆಂದು ಹೇಳು. ಸುಮಿತ್ರಾದೇವಿಯ ಪ್ರಿಯಪುತ್ರನಾದ ಲಕ್ಷ್ಮಣನು ತನ್ನ ಅಣ್ಣನಿಗಾಗಿ ಸಕಲ ಸೌಖ್ಯಗಳನ್ನೂ ತ್ಯಜಿಸಿ ಕಾಡಿಗೆ ಬಂದು ಬಿಟ್ಟನು. ಅವನು ಅತ್ಯಂತ ಕಾರ್ಯದಕ್ಷ. ನನ್ನನ್ನು ತಾಯಿಯಂತೆ ಸೇವಿಸಿದ. ಶುದ್ಧಾತ್ಮನಾದ ಆ ಧೀರನ ಕುಶಲವನ್ನು ವಿಚಾರಿಸಿದ್ದೇನೆಂದು ಹೇಳು. ಕಪಿರಾಜನಾದ ಸುಗ್ರೀವನ ಯೋಗಕ್ಷೇಮಗಳನ್ನು ಕೇಳಿದ್ದೇನೆಂದು ಆತನ ಸೌಹಾರ್ದವನ್ನು ಮೆಚ್ಚಿಕೊಂಡಿದ್ದೇ ನೆಂದೂ ತಿಳಿಸು. ಹನುಮಂತ, ನನ್ನ ಸ್ವಾಮಿಗೆ ಈ ಮಾತನ್ನು ಮತ್ತೆ ಮತ್ತೆ ಹೇಳು. ''ಇನ್ನು ಒಂದು ತಿಂಗಳು ಮಾತ್ರ ನಾನು ಬದುಕಿರುತ್ತೇನೆ. ಅಷ್ಟರಲ್ಲಿ ನಿನ್ನನ್ನು ಕಾಣದಿದ್ದರೆ ನಿಶ್ಚಯವಾಗಿ ನಾನು ಆತ್ಮಹತ್ಯೆ ಮಾಡಿಕೊಳ್ಳುವೆನು. ಪಾಪಿಯಾದ ರಾವಣನ ಸೆರೆಯಿಂದ ನೀನೇ ನನ್ನನ್ನು ಬಿಡಿಸಿ ರಕ್ಷಿಸಬೇಕು'' ಎಂದು ತಿಳಿಸು ಎಂದಳು. ಅನಂತರ ತನ್ನ ಸೆರಗಿನಲ್ಲಿ ಕಟ್ಟಿದ್ದ ದಿವ್ಯವಾದ ಚೂಡಾಮಣಿಯನ್ನು ತೆಗೆದು ಇದನ್ನು ಶ್ರೀರಾಮನಿಗೆ ಕೊಡು-ಎಂದು ಹೇಳಿ ಹನುಮಂತನ ಕೈಯಲ್ಲಿಟ್ಟಳು. ಆಂಜನೇಯನು ಶ್ರೇಷ್ಠವಾದ ಆ ಚೂಡಾಮಣಿಯನ್ನು ಸ್ವೀಕರಿಸಿ ಆನಂದದಿಂದ ಕಣ್ಣಿಗೆ ಒತ್ತಿಕೊಂಡು ಭದ್ರವಾಗಿ ಅದನ್ನು ಇಟ್ಟುಕೊಂಡನು. ಅವನ ಹರ್ಷಕ್ಕೆ ಪಾರವೇ ಉಳಿಯಲಿಲ್ಲ. ಶ್ರೀರಾಮನನ್ನು ನೆನೆಸಿಕೊಳ್ಳುತ್ತ ತನ್ನ ಕಾರ್ಯವು ಸಿದ್ಧಿಸಿತೆಂದು ಹರ್ಷಿಸುತ್ತ ಹಿಂದಿರುಗಿ ಪ್ರಯಾಣ ಮಾಡಲು ಸಿದ್ಧನಾದನು.

ಜಾನಕಿಯು ಹನುಮಂತನನ್ನು ನೋಡಿ ''ವಾನರೋತ್ತಮ, ಈ ಚೂಡಾಮಣಿ ಯನ್ನು ನೋಡಿದೊಡನೆ ಶ್ರೀರಾಮನಿಗೆ ತನ್ನ ತಾಯಿ, ನಾನು, ದಶರಥ ಮಹಾರಾಜ ಈ ಮೂವರ ನೆನಪಾಗುವುದು. ನನ್ನನ್ನು ಬಿಡಿಸುವ ಕಾರ್ಯವು ನಿನ್ನನ್ನೇ ಅವಲಂಬಿ ಸಿದೆ'' ಎಂದಳು. ಆ ವಾಯುಪುತ್ರನು ಹಾಗೆಯೇ ಆಗಲೆಂದು ಮಾತುಕೊಟ್ಟು ದೇವಿಗೆ ನಮಸ್ಕಾರ ಮಾಡಿದನು. ಸೀತೆಯು ಕಣ್ಣೀರು ಸುರಿಸುತ್ತ ಮತ್ತೆ ''ಅಪ್ಪಾ-ಹನುಮಂತ, ನಾನು ಪ್ರಾಣವನ್ನು ಬಿಡುವುದರೊಳಗೆ, ರಾಮನು ನನ್ನನ್ನು ಉಳಿಸುವಂತೆ ಮಾಡು. ನಿನಗೆ ಎಷ್ಟೋ ಪುಣ್ಯ ಬರುತ್ತದೆ'' ಎಂದಳು. ಆಂಜನೇಯನು ಕೈ ಮುಗಿದು ''ಅಮ್ಮ, ಶ್ರೀರಾಮನು ಶೀಘ್ರದಲ್ಲಿಯೇ ಬಂದು ಶತ್ರುಗಳನ್ನು ಗೆದ್ದು ನಿನ್ನ ಶೋಕವನ್ನು

ಪರಿಹರಿಸುವನು. ರಾಜಪುತ್ರಿ, ಅವನನ್ನು ಯುದ್ಧದಲ್ಲಿ ಎದುರಿಸುವವರು ಈ ಲೋಕದಲ್ಲಿ ಯಾರಿದ್ದಾರೆ?'' ಎಂದನು. ವೈದೇಹಿಯು ಹನುಮಂತನನ್ನೇ ಮತ್ತೆ ಮತ್ತೆ ನೋಡುತ್ತ ''ಹನುಮಂತ, ಒಂದು ದಿನದ ಮಟ್ಟಿಗೆ ಇಲ್ಲಿಯೇ ಇರು. ಎಲ್ಲಿಯಾದರೂ ಅಡಗಿಕೊಂಡು ವಿಶ್ರಾಂತಿಯನ್ನು ಪಡೆದು ನಾಳೆ ಹೋಗಬಹುದು. ನೀನು ಇದ್ದರೆ ಮಂದಭಾಗ್ಯಳಾದ ನನ್ನ ಶೋಕವು ಸ್ವಲ್ಪಹೊತ್ತಾದರೂ ತಪ್ಪುವುದು'' ಎಂದಳು. ಮತ್ತೆ ''ಹನುಮಂತ, ಆ ವಾನರಸೇನೆಯು ಈ ಮಹಾಸಾಗರವನ್ನು ದಾಟಿಬರುವುದಾದರೂ ಹೇಗೆ?'' ಎಂದು ಕೇಳಿದಳು. ಹನುಮಂತನು ''ದೇವಿ, ಸುಗ್ರೀವನ ವಾನರ ಸೇನೆಗೆ ಈ ಸಮುದ್ರವು ಯಾವ ಲೆಕ್ಕ? ಆ ಯೋಧರ ಪರಾಕ್ರಮವನ್ನು ನೀನು ಅರಿಯೆ. ದೂತನಾದ ನಾನೇ ಈ ಸಮುದ್ರವನ್ನು ಹಾರಿಬಂದಿದ್ದೇನೆ. ಸುಗ್ರೀವ ಮಹಾರಾಜನ ವಾನರ ಯೋಧರಿಗೆ ಈ ಸಮುದ್ರವು ಅತ್ಯಲ್ಪ. ಒಂದೇ ನೆಗೆತಕ್ಕೆ ಅವರು ಹಾರಿಬರಬಲ್ಲರು. ಆ ಯೋಧರಲ್ಲಿ ನಾನು ಕಡೆಯ ದರ್ಜೆಯವನು! ದೂತಕಾರ್ಯಕ್ಕಾಗಿ ಅಲ್ಪರನ್ನು ಕಳಿಸುತ್ತಾರೇ ಹೊರತು ವೀರಯೋಧರನ್ನಲ್ಲ!'' ಎಂದನು. ಮತ್ತೆ ಜಾನಕಿಯೊಡನೆ ''ಅಮ್ಮ, ಅಳಬೇಡ; ಕೆಡಕನ್ನು ಚಿಂತಿಸಬೇಡ. ನಿನಗೆ ದೇವೇಂದ್ರನಂತಹ ಪತಿಯಿದ್ದಾನೆ. ನೀನು ಅನಾಥಳಲ್ಲ. ಲಕ್ಷ್ಮಣ ಸಹಿತನಾದ ಶ್ರೀರಾಮನು ಮಾರುತಸಹಿತನಾದ ಕಾಲಾಗ್ನಿಯಂತೆ ರಭಸದಿಂದ ನುಗ್ಗಿ ಲಂಕೆಯನ್ನು ಧ್ವಂಸಮಾಡಬಲ್ಲನು. ನಾನು ರಾಮನ ಬಳಿಗೆ ಹೋಗುವುದೊಂದೇ ತಡ. ಅಲ್ಲಿಯವರೆಗೆ ಸಹಿಸಿಕೊಂಡಿರು. ಇಲ್ಲಿ ಉಳಿದುಕೊಂಡು ತಡಮಾಡುವುದು ಸರಿಯಲ್ಲ'' ಎಂದನು. ಹೀಗೆ ಹೇಳಿ ಆ ವೀರನು ಸೀತೆಗೆ ವಂದಿಸಿ ಪ್ರತಿ ಪ್ರಯಾಣಕ್ಕಾಗಿ ದೇಹವನ್ನು ಬೆಳೆಯಿಸಿಕೊಳ್ಳತೊಡಗಿದನು. ಸೀತೆಯು ಬಳಬಳನೆ ಕಣ್ಣೀರು ಸುರಿಸುತ್ತ ''ಅಪ್ಪಾ–ಹನುಮಂತ, ಸಿಂಹ ಪರಾಕ್ರಮಿಗಳಾದ ರಾಮ ಲಕ್ಷ್ಮಣರಿಗೂ ಸುಗ್ರೀವನಿಗೂ ಅವನ ಮಂತ್ರಿಗಳಿಗೂ ನಾನು ಕುಶಲವನ್ನು ವಿಚಾರಿಸಿದ್ದೇನೆಂದು ಹೇಳು. ಈ ರಾಕ್ಷಸಿಯರು ನನ್ನನ್ನು ಹೆದರಿಸುತ್ತಿರುವುದನ್ನೂ ತಿಳಿಸು. ನಿನ್ನ ಪ್ರಯಾಣ ಸುಖವಾಗಿ ನಡೆಯಲಿ'' ಎಂದಳು.

೪೬

ಅಶೋಕವನ ಭಂಗ. ಅಕ್ಷಕುಮಾರನ ವಧೆ. ಇಂದ್ರಜಿತು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಹನುಮಂತನನ್ನು ಬಂಧಿಸುವುದು.

ಆಂಜನೇಯನು ಅಲ್ಲಿಂದ ಹೊರಟು ಮತ್ತೊಂದು ಸ್ಥಳಕ್ಕೆ ಹೋಗಿ ಹೀಗೆ ಆಲೋಚಿಸಿದನು–''ನನ್ನ ದೊಡ್ಡ ಕಾರ್ಯವು ನೆರವೇರಿತು. ಸೀತಾದೇವಿಯನ್ನು

ನೋಡಿದ್ದಾಯಿತು. ಈಗ ನೇರವಾಗಿ ಹಿಂದಿರುಗುವುದಕ್ಕಿಂತ ಈ ರಾಕ್ಷಸರ ಬಲಪರಾಕ್ರಮಗಳೇನೆಂಬುದನ್ನು ತಿಳಿದುಕೊಂಡು ಹೋಗುವುದು ಯುಕ್ತವಲ್ಲವೆ? ಸ್ವಾಮಿಯ ಕಾರ್ಯವನ್ನು ಎಲ್ಲ ಬಗೆಯಲ್ಲಿ ಸಾಧಿಸಿಕೊಂಡು ಹೋಗತಕ್ಕವನು ಉತ್ತಮನಾದ ಭೃತ್ಯನು. ಶ್ರೀರಾಮನಾಗಲಿ, ಸುಗ್ರೀವನಾಗಲಿ, ನನ್ನನ್ನು ಕುರಿತು 'ರಾಕ್ಷಸರ ಬಲವೆಷ್ಟು? ಅವರ ಯುದ್ಧದ ವಿಧಾನವೆಂತಹದು?' ಎಂದು ಕೇಳಿದರೆ ನಾನು ಏನು ಹೇಳಲಿ? ರಾವಣನ ಮನಸ್ಸಿನಲ್ಲಿ ಇರುವುದೇನು–ಎಂಬುದನ್ನು ಸರಿಯಾಗಿ ತಿಳಿದುಕೊಂಡು ಹೋಗಬೇಕು,'' ಎಂದುಕೊಂಡನು. ಮತ್ತೆ ''ಅದಕ್ಕೆ ಉಪಾಯವೇನು? ರಾವಣನಿಗೆ ಪ್ರಿಯವಾದ ಈ ಅಶೋಕವನವನ್ನು ಧ್ವಂಸ ಮಾಡಿದರೆ ಇದರ ರಕ್ಷಣೆಗಾಗಿ ರಾಕ್ಷಸರು ಬರುವರು. ಅವರನ್ನು ಕೊಂದು ಈಡಾಡಿದರೆ ರಾಕ್ಷಸವೀರರ ಪರಿಚಯವಾಗುವುದು. ರಾವಣನನ್ನು ಕಾಣಲೂ ಸಾಧ್ಯವಾಗಬಹುದು'' ಎಂದು ನಿಶ್ಚಯಿಸಿ ಕ್ರುದ್ಧನಾಗಿ ಬಿರುಗಾಳಿಯಂತೆ ಅಶೋಕ ವನದ ಮರಗಳನ್ನು ಮುರಿದು ಉರುಳಿಸಿ ದಿಕ್ಕು ದಿಕ್ಕಿಗೆ ತೂರಿದನು. ಜಲಾಶಯ ದೊಳಗೆ ಮದಿಸಿದ ಆನೆಯು ನುಗ್ಗಿದಂತೆ ಹೂವಿನ ಗಿಡಗಳನ್ನೂ ಬಳ್ಳಿಗಳನ್ನೂ ಕಿತ್ತೆಸೆದು ಭಾರಿ ಧಾಂದಲೆಯನ್ನೇ ಮಾಡಿಬಿಟ್ಟನು. ಅಶೋಕವನದಲ್ಲಿದ್ದ ಲೀಲಾ ಗೃಹಗಳೂ ಚಿತ್ರಶಾಲೆಗಳೂ ಅಲ್ಲಿನ ಮಂಟಪಗಳೂ ನೆಲಸಮವಾದವು. ಎಲ್ಲೆಲ್ಲಿಯೂ ಪಕ್ಷಿಗಳು ಕೂಗುತ್ತ ಹಾರಾಡಿದವು. ಮೃಗಗಳು ಅರಚುತ್ತ ಪಲಾಯನ ಮಾಡಿದವು. ಆಗ ಕಾವಲಿದ್ದ ರಾಕ್ಷಸಿಯರು ಎಚ್ಚೆತ್ತು ಓಡಿ ಬಂದು ಈ ಮಹಾಕಪಿಯನ್ನು ನೋಡಿದರು. ಅವರಿಗೆ ದಿಕ್ಕುತೋರದೆ ಹೆದರಿ ಈ ವಿಷಯವನ್ನು ತಿಳಿಸುವುದಕ್ಕಾಗಿ ಅರಮನೆಗೆ ಓಡುತ್ತ ಹೋದರು. ಆಂಜನೇಯನು ಆ ಉದ್ಯಾನವನದ ಹೊರಬಾಗಿಲಿಗೆ ಬಂದು ಪ್ರಾಕಾರದ ಗೋಪುರದಮೇಲೆ ತೇಜಸ್ಸಿನಿಂದ ಜ್ವಲಿಸುತ್ತ ಕಾದು ಕುಳಿತನು.

ಅತ್ತಲಾಗಿ ರಾಕ್ಷಸಿಯರು ಅರಮನೆಗೆ ಹೋಗಿ ಅಶೋಕವನದಲ್ಲಿ ನಡೆದ ಈ ಮಹಾಕಪಿಯ ಹಾವಳಿಯನ್ನು ತಿಳಿಸಿದರು. ರಾವಣನಿಗೆ ಆ ವೃತ್ತಾಂತವು ತಿಳಿದಾಗ ''ಸೀತೆಯಿರುವ ಸ್ಥಳಕ್ಕೆ ನನ್ನ ಅಪ್ಪಣೆಯಿಲ್ಲದೆ ಪ್ರವೇಶಿಸಿದವರು ಯಾರು? ಬಲಶಾಲಿಯಾದ ಆ ಕಪಿಯು ಯಾರಿರಬಹುದು?''ಎಂದು ಕ್ರುದ್ಧನಾದನು. ಅವನ ಕಣ್ಣುಗಳಿಂದ ಕಿಡಿಗಳು ಸಿಡಿದವು. ಕಿಂಕರರೆಂಬ ರಾಕ್ಷಸರನ್ನು ಬರಹೇಳಿ ಆ ಕಪಿಯನ್ನು ನಿಗ್ರಹಿಸಬೇಕೆಂದು ಆಜ್ಞೆ ಮಾಡಿದನು. ಕಿಂಕರರೆಂಬ ಹೆಸರಿನ ಒಂದು ರಾಕ್ಷಸ ಸೇನೆಯು ಕೂಟ, ಮುದ್ಗರ ಮುಂತಾದ ಆಯುಧಗಳನ್ನು ಹಿಡಿದು ಹನುಮಂತನಿದ್ದ ಕಡೆಗೆ ಧಾವಿಸಿತು. ಅವರನ್ನು ನೋಡಿದೊಡನೆ ಪರ್ವತದಂತೆ ದೇಹವನ್ನು ಬೆಳೆಸಿಕೊಂಡ ಹನುಮಂತನು ಬಾಲವನ್ನು ಅಪ್ಪಳಿಸಿ ಗಟ್ಟಿಯಾಗಿ ಒಂದು ಸಲ

ಗರ್ಜಿಸಿದನು. ಆ ಶಬ್ದವು ಲಂಕಾನಗರದಲ್ಲಿ ಮೊಳಗಿ ಹೋಯಿತು. ಅವನು ಗಟ್ಟಿಯಾಗಿ ''ಅತಿ ಬಲಾಢ್ಯನಾದ ಶ್ರೀರಾಮನಿಗೆ ಜಯವಾಗಲಿ! ವೀರನಾದ ಲಕ್ಷ್ಮಣನಿಗೆ ಜಯವಾಗಲಿ! ಸುಗ್ರೀವ ಮಹಾರಾಜನಿಗೆ ಜಯವಾಗಲಿ! ನಾನು ಕೋಸಲೇಂದ್ರನಾದ ಶ್ರೀರಾಮನ ದಾಸ. ನನ್ನ ಹೆಸರು ಹನುಮಂತ. ನಾನು ವಾಯು ಪುತ್ರ. ರಾವಣನಂಥ ಸಾವಿರ ಜನ ಬಂದರೂ ನಾನು ಹೆದರುವುದಿಲ್ಲ. ನೀವೆಲ್ಲರೂ ಕಣ್ಣುಕಣ್ಣು ಬಿಟ್ಟು ನೋಡುತ್ತಿರುವಾಗಲೇ ಈ ಲಂಕೆಯನ್ನು ನಾಶಮಾಡಿ ಸೀತಾದೇವಿಗೆ ವಂದಿಸಿ ಕೃತಕೃತ್ಯನಾಗಿ ಹೊರಟು ಹೋಗುವೆನು'' ಎಂದು ಘೋಷಿಸಿದನು. ಆತನು ಅಶೋಕವನದ ಮಹಾದ್ವಾರಕ್ಕೆ ಹಾಕಿದ್ದ ಕಬ್ಬಿಣದ ದೊಡ್ಡ ಲಾಳವಂಡಿಗೆ (ಅಗಳಿ) ಯನ್ನು ಎಳೆದು ಕೈಗೆ ತೆಗೆದುಕೊಂಡು ರಾಕ್ಷಸರನ್ನು ಬಡಿಯಲಾರಂಭಿಸಿದನು. ಆ ಕಿಂಕರರನ್ನು ಸಂಹರಿಸಿ ಹತ್ತಿರದಲ್ಲಿ ಕಾಣಿಸುತ್ತಿದ್ದ ರಾಕ್ಷಸರ ದೊಡ್ಡ ದೇವಸ್ಥಾನವೊಂದನ್ನು ಉರುಳಿಸಿ ಅದರ ಪ್ರಾಕಾರದ ಮೇಲೆ ಏರಿ ಕುಳಿತನು.

ಈ ಸುದ್ದಿಯು ರಾಕ್ಷಸೇಶ್ವರನಿಗೆ ಮುಟ್ಟಿತು. ಅವನು ತನ್ನ ಪ್ರಧಾನ ಸೇನಾಪತಿಯಾದ ಪ್ರಹಸ್ತನ ಪುತ್ರ ಜಂಬುಮಾಲಿಯನ್ನು ಯುದ್ಧಕ್ಕಾಗಿ ನೇಮಿಸಿದನು. ಜಂಬುಮಾಲಿಯು ಧನುರ್ಧಾರಿಯಾಗಿ ರಾಕ್ಷಸಸೇನೆಯೊಡನೆ ಬಂದು ಹನುಮಂತನ ಮೇಲೆ ಹರಿತವಾದ ಬಾಣಗಳನ್ನು ಬಿಡತೊಡಗಿದನು. ಹನುಮಂತನು ಮಹಾಕೋಪದಿಂದ ಆ ಬಾಗಿಲಿನ ಅಗುಳಿಯನ್ನೇ ತೆಗೆದುಕೊಂಡು ವೇಗದಿಂದ ತಿರುಗಿಸಿ ಜಂಬುಮಾಲಿಯ ಎದೆಯ ಮೇಲೆ ಅಪ್ಪಳಿಸಿ ಹೊಡೆದನು. ಮರಕ್ಷಣದಲ್ಲಿ ಜಂಬುಮಾಲಿಯೇ ಇಲ್ಲ. ಅವನು ಸತ್ತು ಜಜ್ಜಿ ಹೋಗಿ ನೆಲದ ಮೇಲೆ ಬಿದ್ದಿದ್ದನು.

ಈ ವೃತ್ತಾಂತವನ್ನು ಕೇಳಿದ ರಾವಣನು ಕ್ರುದ್ಧನಾಗಿ ವೀರರಾದ ಏಳುಮಂದಿ ಮಂತ್ರಿ ಕುಮಾರರನ್ನು ಹೋರಾಡಲು ಕಳಿಸಿದನು. ಅವರು ರಾಕ್ಷಸಯೋಧರೊಡನೆ ಬಂದು ಹನುಮಂತನನ್ನು ಮುತ್ತಿದರು. ಆ ಕಪಿವೀರನು ಕೆಲವರನ್ನು ಕೈಯಿಂದ ಅಪ್ಪಳಿಸಿ ಹೊಡೆದು, ಕೆಲವರನ್ನು ಕಾಲಿನಿಂದ ತುಳಿದು, ಕೆಲವರನ್ನು ಉಗುರಿನಿಂದ ಸೀಳಿ ಕೊಂದು ಹಾಕಿದನು. ಮಂತ್ರಿ ಕುಮಾರರೆಲ್ಲರು ಸತ್ತರು. ಸತ್ತುಳಿದ ಸೈನಿಕರು ಕಂಗೆಟ್ಟು ದಿಕ್ಕುದಿಕ್ಕಿಗೆ ಓಡಿ ಹೋದರು.

ಈ ವಾರ್ತೆಯನ್ನು ಕೇಳಿ ರಾವಣನು ಚಿಂತಾಕ್ರಾಂತನಾದನು. ಅವನು ವಿರೂಪಾಕ್ಷನೇ ಮೊದಲಾದ ಐವರು ಸೇನಾಪತಿಗಳನ್ನು ಕರೆದು ''ಎಲೈ ವೀರರೆ, ಆ ಕಪಿಯ ಬಲವನ್ನು ಕೇಳಿದರೆ ಅದೊಂದು ಮಹಾಭೂತವಾಗಿರಬೇಕೆಂದು ತೋರುತ್ತದೆ. ದೇವೇಂದ್ರನು ಈ ಭೂತವನ್ನು ಸೃಷ್ಟಿಸಿ ಕಳಿಸಿರಬಹುದೆನಿಸುತ್ತದೆ. ಅದೊಂದು

ಕಪಿಯೆಂದು ಅಸಡ್ಡೆ ಮಾಡದೆ ಸಕಲ ಆಯುಧಗಳಿಂದಲೂ ಸಜ್ಜಾಗಿ ಹೋಗಿ, ಎಚ್ಚರಿಕೆಯಿಂದ ಹೋರಾಡಿ ಅದನ್ನು ಸೆರೆಹಿಡಿಯಿರಿ'' ಎಂದು ಆಜ್ಞಾಪಿಸಿದನು. ಆ ಸೇನಾಪತಿಗಳು ಅಂತೆಯೇ ಸಿದ್ಧರಾಗಿ ರಥಗಳನ್ನೇರಿ ರಾಕ್ಷಸಯೋಧರೊಡನೆ ಹನುಮಂತನಿದ್ದಲ್ಲಿಗೆ ಬಂದು ಯುದ್ಧವನ್ನಾರಂಭಿಸಿದರು. ಆಂಜನೇಯನು ಲಾಳವಂಡಿಗೆಯನ್ನು ಹಿಡಿದು ಆಕಾಶದಲ್ಲಿ ಹಾರಾಡುತ್ತ ತನ್ನ ಪರಾಕ್ರಮವನ್ನು ಮೆರೆಸಿ ಅವರೆಲ್ಲರನ್ನೂ ಕೊಂದುಬಿಟ್ಟನು.

ಈ ಪ್ರಕಾರ ಐವರು ಸೇನಾಪತಿಗಳೂ ಹತರಾದ ಸುದ್ದಿ ರಾವಣನಿಗೆ ಮುಟ್ಟಿತು. ರಾಜಸಭೆಯಲ್ಲಿ ಕುಳಿತಿದ್ದ ಆ ರಾಕ್ಷಸೇಶ್ವರನು ಸಭೆಯಲ್ಲಿದ್ದ ತನ್ನ ಮಗನಾದ ಅಕ್ಷಕುಮಾರನನ್ನು ದಿಟ್ಟಿಸಿ ನೋಡಿದನು. ಅಕ್ಷಕುಮಾರನು ತಂದೆಯ ಇಂಗಿತವನ್ನರಿತು ಥಿಗ್ಗನೆ ಎದ್ದು ನಿಂತು ''ನಾನು ಹೋಗಿ ಆ ಕಪಿಯನ್ನು ಸೆರೆಹಿಡಿದು ತರುವೆನು'' ಎಂದು ತಂದೆಗೆ ವಿಜ್ಞಾಪಿಸಿ ಸಭೆಯಿಂದ ಹೊರಟೇ ಬಿಟ್ಟನು. ಅಕ್ಷಕುಮಾರನು ಮಹಾಬಲಶಾಲಿ. ಯುದ್ಧ ವೀರ. ಸಮಸ್ತ ಯುದ್ಧ ಪರಿಕರಗಳಿಂದ ಸಜ್ಜಾಗಿ ಒಂದು ದಿವ್ಯ ರಥವನ್ನೇರಿ ಯುದ್ಧಕ್ಕೆ ಸಾಗಿದನು. ಸೇನಾಸಮೇತನಾಗಿ ಗರ್ಜಿಸುತ್ತ ದರ್ಪದಿಂದ ಹನುಮಂತನಿದ್ದಲ್ಲಿಗೆ ಬಂದನು. ಅಗ್ನಿಯಂತೆ ಪ್ರಜ್ವಲಿಸುತ್ತಿದ್ದ ಆಂಜನೇಯನನ್ನು ಕಂಡು ಅಚ್ಚರಿಪಡುತ್ತ ಅವನನ್ನೇ ನೋಡುತ್ತ ನಿಂತನು. ''ಈ ಕಪಿಯು ಸಾಮಾನ್ಯನಲ್ಲ'' ಎಂದುಕೊಂಡು ಅವನನ್ನು ರೇಗಿಸುವುದಕ್ಕಾಗಿ ಹನುಮಂತನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳು ಹನುಮಂತನ ಮೈಯಲ್ಲಿ ನೆಟ್ಟವು. ಕ್ರುದ್ಧನಾದ ಹನುಮಂತನು ಅಕ್ಷಕುಮಾರನನ್ನೂ ಅವನ ಸೈನ್ಯವನ್ನೂ ಸುಟ್ಟು ಬಿಡುವಂತೆ ಕಂಗಣ್ಣಿನಿಂದ ನೋಡಿದನು. ಅಕ್ಷಕುಮಾರನು ರಾವಣನ ಮಗನೆಂದೂ, ಮಹಾಪರಾಕ್ರಮಿಯೆಂದೂ ಅಲ್ಲಿದ್ದ ರಾಕ್ಷಸರು ಘೋಷಿಸಿದರು. ವಾಯು ಪುತ್ರನಾದ ಹನುಮಂತನು, ಆತನು ರಾವಣ ಪುತ್ರನೆಂದು ತಿಳಿದು ಹರ್ಷದಿಂದ ಗುಡುಗಿನಂತೆ ಗರ್ಜಿಸಿದನು. ತನ್ನ ದೇಹವನ್ನು ಇನ್ನೂ ಬೆಳೆಸಿ ಸಿಂಹನಾದ ಮಾಡಿ ಎಲ್ಲರಿಗೂ ಭಯವಾಗುವಂತೆ ಆಕಾಶಕ್ಕೆ ನೆಗೆದು ಸುತ್ತಾಡಲಾರಂಭಿಸಿದನು. ಅಕ್ಷಕುಮಾರನು ಹೊಡೆದ ಬಾಣಗಳನ್ನು ಅತ್ತಿಂದಿತ್ತ ಹಾರಿ ತಪ್ಪಿಸಿಕೊಳ್ಳುತ್ತ ಕೆಲವನ್ನು ಹಿಡಿದು ಮುರಿಯುತ್ತ ಸ್ವಲ್ಪಹೊತ್ತು ಹೋರಾಡಿದನು. ಕ್ಷಣಕ್ಷಣಕ್ಕೂ ಅಕ್ಷಕುಮಾರನ ಹೊಡೆತವು ಬಲವಾಗತೊಡಗಿತು. ಮಾರುತಿಯು ''ಇನ್ನು ಉಪೇಕ್ಷಿಸುವುದು ತರವಲ್ಲ. ಇವನನ್ನು ವಧಿಸಿಬಿಡುವುದೇ ಲೇಸು'' ಎಂದು ಆಲೋಚಿಸಿ ತನ್ನ ಅಂಗೈಗಳಿಂದ ಅಪ್ಪಳಿಸಿ ಅಕ್ಷನ ರಥಾಶ್ವಗಳನ್ನು ಕೊಂದು ಆ ಮಹಾರಥವನ್ನು ಬಡಿದು ಮುರಿದು ಹಾಕಿದನು. ಅಕ್ಷಕುಮಾರನು ರಥವನ್ನು ಬಿಟ್ಟು ಧುಮುಕಿ ತನ್ನ ಮಾಯಾಶಕ್ತಿಯಿಂದ

ಆಕಾಶವನ್ನಡರಿ ನಿಂತನು. ಗರುಡನು ಮಹಾಸರ್ಪವನ್ನು ಹಿಡಿಯುವಂತೆ ಹನುಮಂತನು ಅಕ್ಷಕುಮಾರನ ಕಾಲುಗಳನ್ನು ಬಿಗಿಯಾಗಿ ಹಿಡಿದು ಗಿರ್ರನೆ ತಿರುಗಿಸಿ ನೆಲದಮೇಲೆ ಬಡಿದನು. ಆ ಕುಮಾರನ ತೋಳು ತೊಡೆ ಕಂಠ ಸೊಂಟಗಳೆಲ್ಲವೂ ಜಜ್ಜಿ ಮುರಿದು ಹೋದವು. ಮೂಳೆಗಳು ಪುಡಿಯಾದವು. ಆ ರಾಕ್ಷಸನು ಸತ್ತು ಹೋದನು. ಆಂಜನೇಯನು ಪ್ರಳಯ ಕಾಲದಲ್ಲಿ ಹಬ್ಬವಾಡುವ ಯಮನಂತೆ ಕಂಗೊಳಿಸುತ್ತ ಮತ್ತೆ ಮಹಾದ್ವಾರದ ಸಮೀಪಕ್ಕೆ ಹೋಗಿ ನಿಂತನು.

ಅಕ್ಷ ಕುಮಾರನು ಹತನಾದ ವೃತ್ತಾಂತವು ರಾವಣನಿಗೆ ಮುಟ್ಟಿತು. ತನ್ನ ಪುತ್ರನು ಹತನಾದನೆಂದು ಸ್ವಲ್ಪ ಹೊತ್ತು ಶೋಕಿಸಿ ರಾವಣನು ತನ್ನಲ್ಲಿಯೇ ಸಮಾಧಾನವನ್ನು ತಂದುಕೊಂಡನು. ಆಮೇಲೆ ತನ್ನ ಹಿರಿಯಮಗನಾದ ಇಂದ್ರಜಿತುವಿನ ಕಡೆಗೆ ತಿರುಗಿ ''ವತ್ಸ, ನೀನು ಅಸ್ತ್ರವಿದ್ಯೆಯಲ್ಲಿ ತುಂಬ ಸಮರ್ಥನಾಗಿದ್ದೀಯೆ. ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ಬ್ರಹ್ಮಾಸ್ತ್ರವನ್ನು ಪಡೆದಿದ್ದೀಯೆ. ದೇವೇಂದ್ರನನ್ನೂ ಸಹ ಸೋಲಿಸಿ ಇಂದ್ರಜಿತುವೆಂದು ವಿಖ್ಯಾತನಾಗಿದ್ದೀಯೆ. ಸಂಗ್ರಾಮದಲ್ಲಿ ನಿನಗೆ ಸಮಾನನಾದವನು ಇನ್ನೊಬ್ಬನಿಲ್ಲ. ಈಗ ನೋಡು. ನಿನ್ನ ಪ್ರಿಯ ಸಹೋದರನು ಹತನಾದನು. ಇಷ್ಟು ಅನರ್ಥಗಳನ್ನು ತಂದೊಡ್ಡಿದ ಆ ಕಪಿಯು ಮಹಾಬಲಶಾಲಿಯೆಂಬುದು ನಿಶ್ಚಿತ. ಅದರ ದರ್ಪವನ್ನು ಅಡಗಿಸಲು ನೀನೇ ಹೋಗಬೇಕಾಗಿದೆ'' ಎಂದನು. ಒಡನೆಯೇ ಆ ಮೇಘನಾದನು(ಇಂದ್ರಜಿತು) ಯುದ್ಧಕ್ಕೆ ಹೋಗಲು ನಿಶ್ಚಯಿಸಿ ತಂದೆಗೆ ನಮಸ್ಕಾರ ಮಾಡಿ ಸಂಭ್ರಮೋತ್ಸಾಹಗಳಿಂದ ಯುದ್ಧಕ್ಕೆ ಹೊರಟನು.

ಅವನು ಮಹಾರಥವನ್ನೇರಿ ದೊಡ್ಡ ರಾಕ್ಷಸಸೈನ್ಯದೊಡನೆ ಹನುಮಂತನಿದ್ದಲ್ಲಿಗೆ ತೆರಳಿದನು. ಇಂದ್ರಜಿತುವು ಬರುತ್ತಿರುವನೆಂಬುದನ್ನು ತಿಳಿದು, ಯುದ್ಧ ದಕ್ಷನಾದ ಹನುಮಂತನು ಒಂದು ಸಲ ಗರ್ಜಿಸಿ ತನ್ನ ದೇಹವನ್ನು ಬೆಳೆಯಿಸಿಕೊಂಡನು. ಇಂದ್ರಜಿತುವು ಸಿಡಿಲು ಹೊಡೆದಂತೆ ಧನುಸ್ಸನ್ನು ಮಿಡಿಯುತ್ತ ಬಂದನು. ಅವರಿಬ್ಬರಿಗೂ ಘೋರವಾದ ಕದನವು ಆರಂಭವಾಯಿತು. ಗಗನತಳಕ್ಕೆ ನೆಗೆದ ಹನುಮಂತನು ಇಂದ್ರಜಿತುವಿನ ಬಾಣಗಳ ನಡುವೆ ತೂರುತ್ತ ಶರಹತಿಯನ್ನು ತಪ್ಪಿಸಿಕೊಳ್ಳುತ್ತ ಆಶ್ಚರ್ಯಕರವಾದ ಹೊಡೆದಾಟವನ್ನು ನಡೆಸಿದನು. ರಾಕ್ಷಸರನ್ನು ಲಾಳವಂಡಿಗೆಯಿಂದ ಬಡಿದು ಕೊಲ್ಲುತ್ತಿದ್ದನು. ಇಂದ್ರಜಿತು ಮಹಾಚಿಂತೆಗೆ ಒಳಗಾಗಿ ''ಇದಾವುದೋ ಅದ್ಭುತ ವೀರ್ಯವುಳ್ಳ ಮಹಾಕಪಿ. ನನ್ನ ಸಾಮಾನ್ಯ ಶರಗಳಿಗೆ ನಿಲುಕತಕ್ಕದ್ದಲ್ಲ''–ಎಂದು ನಿಶ್ಚಯಿಸಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ವಾಯು ಪುತ್ರನನ್ನು ಬಂಧಿಸಿದನು. ಹನುಮಂತನು ಆ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು ನೆಲದಮೇಲೆ

ಬಿದ್ದನು. ''ನಾನೀಗ ಬ್ರಹ್ಮದೇವನ ಮಹಿಮೆಯಿಂದ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದಿರುವೆನು. ಲೋಕಗುರುವಾದ ಬ್ರಹ್ಮನ ಆಜ್ಞೆಯನ್ನು ಅನುಸರಿಸುವುದು ನನಗೆ ಯೋಗ್ಯವಾದದ್ದು. ಬ್ರಹ್ಮನೂ ದೇವೇಂದ್ರನೂ ವಾಯುದೇವನೂ ಅನುಗ್ರಹಿಸಿದ ವರಬಲಗಳಿಂದ ನನಗೆ ಯಾವಭಯವೂ ಇಲ್ಲ. ಈ ಅಸ್ತ್ರಕ್ಕೆ ಕಟ್ಟು ಬಿದ್ದಂತೆ ನಟಿಸಿದರೆ ನನಗೆ ಪ್ರಯೋಜನ ವುಂಟು. ರಾವಣನನೊಡನೆ ಸಂಭಾಷಿಸುವ ಅವಕಾಶ ದೊರೆಯುತ್ತದೆ. ಅದು ನನಗೆ ಇಷ್ಟವಾದದ್ದು'' ಎಂದುಕೊಂಡನು. ಅಂತೆಯೇ ನಿಶ್ಚೇಷ್ಟನಾಗಿ ಮಲಗಿದ್ದ ಹನುಮಂತ ನನ್ನು ಮೂದಲಿಸುತ್ತ ಬಂದ ರಾಕ್ಷಸರು ಸೆಣಬು ಮುಂತಾದ ಹಗ್ಗಗಳಿಂದ ಅವನನ್ನು ಬಿಗಿದು ಕಟ್ಟಿದರು. ಹಗ್ಗದಿಂದ ಬಿಗಿದೊಡನೆ ಬ್ರಹ್ಮಾಸ್ತ್ರವು ಸಡಿಲಿಹೋಯಿತು. ಆಗ ಇಂದ್ರಜಿತು ಧಾವಿಸುತ್ತ ಬಂದು ''ಅಯ್ಯೋ, ಬ್ರಹ್ಮಾಸ್ತ್ರವು ಸಡಿಲಿಹೋಯಿತು. ಹಗ್ಗದಿಂದ ಬಿಗಿಯಬಾರದಾಗಿತ್ತು, ಬ್ರಹ್ಮಾಸ್ತ್ರವು ಇನ್ನೊಂದರ ನೆರವನ್ನು ಎಂದಿಗೂ ಸಹಿಸುವುದಿಲ್ಲ, ಮಂತ್ರ ಪದ್ಧತಿಯನ್ನು ಈ ರಾಕ್ಷಸರು ಅರಿತುಕೊಳ್ಳದೆ ಹೋದರು. ಈಗೇನು ಮಾಡುವುದು? ನಾವೆಲ್ಲರೂ ಮಹಾವಿಪತ್ತಿನಲ್ಲಿ ಸಿಕ್ಕಿಕೊಂಡೆವು'' ಎಂದು ವಿಷಾದಿಸಿದನು. ಆಂಜನೇಯನು ಮಾತ್ರ ಬ್ರಹ್ಮಾಸ್ತ್ರವು ಸಡಿಲಿತೆಂದು ತೋರಿಸಿ ಕೊಳ್ಳದೆ ಬಲವಾದ ಕಟ್ಟಿಗೆ ಒಳಗಾದಂತೆ ಮೈಕೈಯನ್ನು ಅಲ್ಲಾಡಿಸದೆ ತೆಪ್ಪಗಿದ್ದನು! ರಾಕ್ಷಸರು ಅವನನ್ನು ಎಳೆದುಕೊಂಡು ರಾವಣನ ಸಭೆಗೆ ಕರೆತಂದರು. ಇಂದ್ರಜಿತುವಿಗೆ ಬ್ರಹ್ಮಾಸ್ತ್ರವು ಸಡಿಲಿತೆಂಬುದು ಗೊತ್ತಾದರೂ ಇದೇನು ವಿಚಿತ್ರವಿರಬಹುದೆಂದು ಸುಮ್ಮನೆ ಹಿಂಬಾಲಿಸಿ ಬಂದನು.

೪೭

ರಾವಣದರ್ಶನ, ಹನುಮಂತನ ಬಾಲಕ್ಕೆ ಬೆಂಕಿಯನ್ನು ಹಚ್ಚಿ ಮೆರವಣಿಗೆ. ಲಂಕಾದಹನ, ಲಂಕೆಯಿಂದ ಹಿಂದಿರುಗಲು ಹನುಮಂತನ ಸಿದ್ಧತೆ

ರಾಕ್ಷಸೇಶ್ವರನು ರಾಜಸಭೆಯಲ್ಲಿ ರತ್ನ ಸಿಂಹಾಸನದ ಮೇಲೆ ವೈಭವದಿಂದ ಮಂಡಿಸಿದ್ದನು. ರಾಕ್ಷಸರು ಹನುಮಂತನನ್ನು ಎಳೆದುಕೊಂಡು ಬಂದು ರಾವಣ ನೆದುರಿಗೆ ನಿಲ್ಲಿಸಿದರು. ಹನುಮಂತನು ಆಶ್ಚರ್ಯದಿಂದ ರಾಕ್ಷಸೇಶ್ವರನನ್ನು ನೋಡಿ ''ಅಬ್ಬಾ, ಈತನ ರೂಪವೇನು? ತೇಜಸ್ಸೇನು? ಸಮಸ್ತ ರಾಜಲಕ್ಷಣಗಳಿಂದಲೂ ಮೆರೆಯುತ್ತಿದ್ದಾನೆ. ಇವನಲ್ಲಿ ಅಧರ್ಮವೊಂದು ಇಲ್ಲದ ಪಕ್ಷದಲ್ಲಿ ದೇವತೆಗಳಿಗೂ, ದೇವೇಂದ್ರನಿಗೂ ಅಧಿಪತಿಯಾಗಬಲ್ಲನು. ಇವನು ಕ್ರುದ್ಧನಾದರೆ ಜಗತ್ತನ್ನೇ ಮುಳುಗಿಸಬಲ್ಲನು'' ಎಂದುಕೊಂಡನು. ರಾವಣನು ಕಿಡಿಕಾರುವ ಕೆಂಗಣ್ಣುಗಳಿಂದ

ಹನುಮಂತನನ್ನು ನೋಡಿ ಪ್ರಹಸ್ತನ ಕಡೆಗೆ ತಿರುಗಿ ''ಪ್ರಹಸ್ತ, ಈ ದುರಾತ್ಮನು ಯಾರೆಂದು ಕೇಳು? ಇವನು ಏತಕ್ಕಾಗಿ ಲಂಕೆಗೆ ಬಂದಿದ್ದಾನೆ? ಅಶೋಕವನವನ್ನು ಹಾಳುಮಾಡಿ ನಮ್ಮೊಡನೆ ಯುದ್ಧಕ್ಕೆ ಇಳಿಯಲು ಕಾರಣವೇನು? ಈ ದುಷ್ಟನನ್ನು ವಿಚಾರಿಸು'' ಎಂದನು. ಅಂತೆಯೇ ಪ್ರಹಸ್ತನು ಕೇಳಿದ ಪ್ರಶ್ನೆಗಳಿಗೆ ಧೀರವಾಣಿಯಿಂದ ಉತ್ತರ ಕೊಡುತ್ತ ಹನುಮಂತನು ರಾವಣನ ಕಡೆಗೆ ತಿರುಗಿ ಹೀಗೆಂದನು : ''ನಾನು ಯಾವ ಮಾಯಾವಿಯೂ ಅಲ್ಲ; ವಾನರ ಜಾತಿಯವನೇ ಹೌದು. ರಾವಣ, ರಾಕ್ಷಸ ರಾಜನಾದ ನಿನ್ನನ್ನು ಭೇಟಿ ಮಾಡಿ ಮಾತಾಡಲು ಕಾರಣವಾಗಲೆಂದು ಅಶೋಕವನ ವನ್ನು ನಾಶಮಾಡಿದೆನು. ಬಲಶಾಲಿಗಳಾದ ರಾಕ್ಷಸರು ನನ್ನೊಡನೆ ಏನನ್ನೂ ವಿಚಾರಿಸದೆ ಯುದ್ಧಕ್ಕೆ ಬಂದರು. ಆತ್ಮರಕ್ಷಣೆಗಾಗಿ ನಾನೂ ಯುದ್ಧ ಮಾಡ ಬೇಕಾಯಿತು. ನಿನ್ನನ್ನು ನೋಡುವ ಅಪೇಕ್ಷೆಯಿಂದಲೇ ಈ ಬ್ರಹ್ಮಾಸ್ತ್ರಕ್ಕೆ ಬದ್ಧನಾಗಿರು ವಂತೆ ನಟಿಸಿದೆನು. ಈ ಬ್ರಹ್ಮಾಸ್ತ್ರವು ಯಾವಾಗಲೋ ಬಿಟ್ಟು ಹೋಯಿತು. ಒಂದಾನೊಂದು ಕಾರ್ಯಕ್ಕಾಗಿ ನಾನು ಇಲ್ಲಿಗೆ ಬಂದಿದ್ದೇನೆ. ನಾನು ಮಹಾತೇಜಸ್ವಿಯಾದ ಶ್ರೀರಾಮನ ದೂತನೆಂದು ತಿಳಿ. ಎಲೈ ರಾಕ್ಷಸೇಶ್ವರ, ವಾನರೇಶ್ವರನಾದ ಸುಗ್ರೀವನು ನಿನಗೊಂದು ಸಂದೇಶವನ್ನು ಕಳಿಸಿದ್ದಾನೆ. ನೀನು ಸೀತಾದೇವಿಯನ್ನು ಶ್ರೀರಾಮನಿಗೆ ಒಪ್ಪಿಸಿ ಆತನ ಕ್ಷಮೆಯನ್ನು ಕೇಳಿಕೊಳ್ಳಬೇಕೆಂದು ವಾನರೇಶ್ವರನ ಇಚ್ಛೆಯಾಗಿದೆ. ಕೋಸಲೇಶ್ವರನಾದ ದಶರಥ ಮಹಾರಾಜನಿಗೆ ಶ್ರೀರಾಮನು ಅತ್ಯಂತ ಪ್ರಿಯನಾದ ಪುತ್ರ. ಕಾರಣಾಂತರದಿಂದ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡನೆಯೂ ತನ್ನ ಧರ್ಮಪತ್ನಿಯಾದ ಸೀತೆಯೊಡನೆಯೂ ಅರಣ್ಯಕ್ಕೆ ಬಂದನು. ಸೀತೆಯು ಜನಕರಾಜನ ಮಗಳು. ಮಹಾ ಪತಿವ್ರತೆ. ಅವಳು ಅರಣ್ಯದಲ್ಲಿ ಕಳೆದು ಹೋದಳು. ಅವಳನ್ನು ಹುಡುಕುತ್ತ ರಾಮ ಲಕ್ಷ್ಮಣರು ಋಷ್ಯ ಮೂಕಗಿರಿಗೆ ಬಂದರು. ಆಗ ನಮ್ಮ ಸುಗ್ರೀವನ ಸ್ನೇಹವಾಯಿತು. ಸುಗ್ರೀವನ ಅಪೇಕ್ಷೆಯಂತೆ ವೀರಾಗ್ರಣಿಯಾದ ರಾಘವನು ಒಂದೇ ಬಾಣದಿಂದ ವಾಲಿಯನ್ನು ಸಂಹರಿಸಿ ಸುಗ್ರೀವನಿಗೆ ಕಿಷ್ಕಿಂಧಾರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿಸಿದನು. ಸತ್ಯಸಂಧನಾದ ಸುಗ್ರೀವನು ಮೊದಲೇ ರಾಘವನಿಗೆ ಕೊಟ್ಟಿದ್ದ ಮಾತಿನಂತೆ ಸೀತಾದೇವಿಯನ್ನು ಹುಡುಕುವುದಕ್ಕಾಗಿ ವಾನರರನ್ನು ನಾನಾದಿಕ್ಕುಗಳಿಗೆ ಅಟ್ಟಿದನು. ನಾನು ಸುಗ್ರೀವನ ಮಂತ್ರಿಯಾದ ಹನುಮಂತ. ಸೀತಾನ್ವೇಷಣೆಗಾಗಿ. ನಾವು ಕೆಲವರು ದಕ್ಷಿಣದಿಕ್ಕಿಗೆ ಬಂದೆವು. ನಾನು ಈ ಸಮುದ್ರವನ್ನು ಲಂಘಿಸಿ ನಿನ್ನ ನಗರಕ್ಕೆ ಬಂದೆನು. ಇಲ್ಲಿ ಹುಡುಕುತ್ತಿರುವಾಗ ಅಶೋಕವನದಲ್ಲಿ ಆ ಜನಕಪುತ್ರಿಯನ್ನು ಕಂಡೆನು. ಅವಳನ್ನು ನೀನೇ ಅಪಹರಿಸಿ ತಂದಿದ್ದೀಯೆ. ನಿನ್ನಂಥ ಬುದ್ಧಿಶಾಲಿಗಳು ಪರಸ್ತ್ರೀಯರನ್ನು ಅಪಹರಿಸಿ ಸೆರೆಯಲ್ಲಿಡುವುದು ಯುಕ್ತವಲ್ಲ. ನೀನು ಧರ್ಮಜ್ಞ.

ಘೋರವಾದ ತಪಸ್ಸು ಮಾಡಿದವನು. ನೀನು ಆತ್ಮವಿನಾಶಕಾರಿಯಾದ ಇಂತಹ ಕಾರ್ಯದಲ್ಲಿ ತೊಡಗಬಹುದೆ? ಶ್ರೀರಾಮಲಕ್ಷ್ಮಣರು ಸಾಮಾನ್ಯಕ್ಷತ್ರಿಯರೆಂದು ತಿಳಿಯಬೇಡ. ಅವರನ್ನು ಎದುರಿಸುವವರು ದೇವಾಸುರರಲ್ಲಿ ಒಬ್ಬರೂ ಇಲ್ಲ. ರಾಮನಿಗೆ ಕೆಡುಕು ಮಾಡಿದವನು ಎಂದಿಗೂ ಉಳಿಯಲಾರ. ನನ್ನ ಮಾತನ್ನು ಮನ್ನಿಸಿ ಜಾನಕಿಯನ್ನು ಶ್ರೀರಾಮನಿಗೆ ಒಪ್ಪಿಸಿಬಿಡು. ಅವಳು ಶೋಕದಿಂದ ಕೊರಗುತ್ತಿರುವುದನ್ನು ನಾನೇ ಕಂಡಿದ್ದೇನೆ. ರಾವಣ, ತಪಸ್ಸಿನಿಂದ ದೀರ್ಘಾಯುಸ್ಸನ್ನೂ ಸಂಪತ್ತನ್ನೂ ಗಳಿಸಿ ಕೊಂಡಿರುವ ನೀನು ಅದೆಲ್ಲವನ್ನೂ ಈ ಪಾಪಕಾರ್ಯದಿಂದ ಹಾಳು ಮಾಡಿಕೊಳ್ಳುವುದು ಯುಕ್ತವಲ್ಲ. ನೀನು ದೇವಾಸುರರಿಗೆ ಅವಧ್ಯನಾಗಿರಬಹುದು. ಶ್ರೀರಾಮನು ಮನುಷ್ಯ. ಸುಗ್ರೀವನು ದೇವಾಸುರರಲ್ಲಿ ಸೇರಿಲ್ಲ! ಈಗ ನೀನು ಪ್ರಾಣವನ್ನು ಹೇಗೆ ಉಳಿಸಿಕೊಳ್ಳುತ್ತೀಯೆ? ಶ್ರೀರಾಮನಿಗೆ ಅಪಕಾರ ಮಾಡಿದವನು ಸಾಕ್ಷಾತ್ ದೇವೇಂದ್ರನಾದರೂ ಸೌಖ್ಯದಿಂದ ಉಳಿಯಲಾರ. ಸೀತಾದೇವಿಯ ಪತಿವ್ರತಾ ತೇಜಸ್ಸಿನಿಂದ ಈ ಪಟ್ಟಣವು ಈಗಲೇ ಅರ್ಧಸುಟ್ಟು ಹೋಗಿದೆ. ಇನ್ನು ರಾಘವನ ಕೋಪಾಗ್ನಿಯೂ ಸೇರಿದರೆ ಈ ನಗರವೂ ನಿನ್ನ ಅರಮನೆಯೂ, ವೈಭವವೂ, ಧಗಧಗನೆ ಸುಟ್ಟು ಉರಿದು ಹೋದೀತು'' ಎಂದನು.

ಹನುಮಂತನ ಮಾತನ್ನು ಕೇಳಿದ ರಾವಣನು ರೋಷಾವಿಷ್ಟನಾಗಿ 'ಈ ಕಪಿಯನ್ನು ಕೊಲ್ಲಿರಿ' ಎಂದು ರಾಕ್ಷಸರಿಗೆ ಆಜ್ಞೆಮಾಡಿದನು. ಆಗ ಆಸ್ಥಾನದಲ್ಲಿ ಕುಳಿತಿದ್ದ ರಾವಣನ ತಮ್ಮನಾದ ವಿಭೀಷಣನಿಗೆ ಅದು ಸಮ್ಮತವಾಗಲಿಲ್ಲ. ಅವನು ವಿನಯದಿಂದಲೇ ಹೀಗೆ ವಿಜ್ಞಾಪಿಸಿದನು: ''ಮಹಾರಾಜ, ನೀನು ಧರ್ಮಶಾಸ್ತ್ರವನ್ನೂ ಲೋಕವ್ಯವಹಾರವನ್ನೂ ತಿಳಿದವನು. ಮಹಾಪರಾಕ್ರಮಿ. ದೂತನಾಗಿ ಬಂದವನನ್ನು ವಧಿಸಬಾರದೆಂದು ರಾಜನೀತಿ ಶಾಸ್ತ್ರವಿದೆ. ದೂತರನ್ನು ದಂಡಿಸಲು ಬೇರೆ ಎಷ್ಟೋ ವಿಧಾನಗಳಿವೆ. ಅವರನ್ನು ವಿರೂಪಗೊಳಿಸುವುದು, ಚಾಟಿಯಿಂದ ಹೊಡೆಸುವುದು ಇತ್ಯಾದಿ. ದೂತರ ವಧೆಯು ಮಾತ್ರ ಧರ್ಮಬಾಹಿರ. ಈ ಕಪಿಯನ್ನು ಕೊಂದರೆ ಯಾವ ಪ್ರಯೋಜನವೂ ಇಲ್ಲ. ಬೇರೆಯವರು ಹೇಳಿಕಳಿಸಿದ ಮಾತನ್ನು ಇವನು ಹೇಳಿದ್ದಾನೆ. ಇವನು ಸ್ವತಂತ್ರನಲ್ಲ. ಇವನನ್ನು ಕಳಿಸಿದ ಶತ್ರುವನ್ನು ದಂಡಿಸು. ನಿನ್ನ ವಶದಲ್ಲಿರುವ ಶೂರರಾದ ಯೋಧರು ಸಮುದ್ರದ ಆಚೆಗೆ ಹೋಗಿ ಮೂಢರಾದ ರಾಮಲಕ್ಷ್ಮಣರನ್ನು ದಂಡಿಸಲಿ. ದೂತನ ವಧೆ ಲಂಕೇಶ್ವರನಾದ ನಿನಗೆ ಯೋಗ್ಯವಲ್ಲ'' ಎಂದನು.

ರಾವಣನಿಗೆ ವಿಭೀಷಣನ ಮಾತು ಸರಿಯೆನಿಸಿತು. ಅವನು ರಾಕ್ಷಸಭಟರನ್ನು ನೋಡಿ ''ಎಲೈ ಭಟರೆ, ಕಪಿಗಳಿಗೆ ತಮ್ಮ ಬಾಲದಲ್ಲಿ ಬಹಳ ಪ್ರೀತಿಯಿರುತ್ತದೆ. ಇವನ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ ಸುಟ್ಟುಬಿಡಿ. ಬಾಲವನ್ನು ಸುಡಿಸಿಕೊಂಡು ಹೋದ ಈ

ಕಪಿಯನ್ನು ಇವನ ಬಂಧುಮಿತ್ರರು ನೋಡಲಿ. ಈತನ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ ಬೀದಿಗಳಲ್ಲಿ ಮೆರವಣಿಗೆ ಮಾಡಿ ಬಿಟ್ಟುಬಿಡಿರಿ'' ಎಂದು ಆಜ್ಞಾಪಿಸಿದನು. ಅಂತೆಯೇ ರಾಕ್ಷಸರು ಹನುಮಂತನ ಬಾಲಕ್ಕೆ ಬೆಂಕಿಯಿಡುವುದಕ್ಕಾಗಿ ಬಟ್ಟೆಯನ್ನು ಸುತ್ತಲಾರಂಭಿಸಿದರು. ಹನುಮಂತನು ಕ್ಷಣಮಾತ್ರದಲ್ಲಿ ತನ್ನ ಬಾಲವನ್ನು ಬೆಳೆಸತೊಡಗಿದನು. ಆ ಭಟರು ಇನ್ನಷ್ಟು ಹರಕು ಬಟ್ಟೆಗಳನ್ನು ತಂದು ಬಾಲಕ್ಕೆ ಸುತ್ತಿ ಎಣ್ಣೆಯನ್ನು ಸುರಿದು ಬೆಂಕಿ ಹತ್ತಿಸಿದರು. ಹನುಮಂತನನ್ನು ಹಗ್ಗಗಳಿಂದ ಕಟ್ಟಿ ಹಿಡಿದು ನಗರದ ಬೀದಿಗಳಲ್ಲಿ ಮೆರವಣಿಗೆ ಮಾಡಿಸುವುದಕ್ಕಾಗಿ ಹೊರಟರು. ವಜ್ರಕಾಯನಾದ ಹನುಮಂತನು ಅದಾವುದನ್ನೂ ಲೆಕ್ಕಿಸಲಿಲ್ಲ ''ಒಳ್ಳೆಯದು ರಾತ್ರಿಯಲ್ಲಿ ಈ ಪಟ್ಟಣವನ್ನು ಸರಿಯಾಗಿ ನೋಡಲಿಲ್ಲ. ಈಗ ಒಂದು ಸಲ ಇದೆಲ್ಲವನ್ನೂ ನೋಡಲು ಅವಕಾಶ ಒದಗಿತು'' ಎಂದು ಸುಮ್ಮನಿದ್ದನು. ರಾಕ್ಷಸರು ''ಎಲ್ಲರೂ ನೋಡಿರಿ, ಅಶೋಕವನವನ್ನು ಹಾಳು ಮಾಡಿದ ಕಪಿ ಇದು'' ಎಂದು ಕೂಗುತ್ತ ಡಂಗುರ ಬಾರಿಸುತ್ತ ಹೊರಟರು. ಹನುಮಂತನು ಪಿಳಪಿಳನೆ ಕಣ್ಣು ಬಿಡುತ್ತ ಪರಾಧೀನನಾದವನಂತೆ ರಸ್ತೆಯಲ್ಲಿ ಸ್ವಲ್ಪ ದೂರದವರೆಗೆ ಹೋದನು. ನಗರದಲ್ಲಿದ್ದ ರಾಕ್ಷಸರೂ ರಾಕ್ಷಸಿಯರೂ ಕುತೂಹಲದಿಂದ ರಸ್ತೆಯಲ್ಲಿ ನೆರೆದು ಅವನನ್ನು ನೋಡುತ್ತಿದ್ದರು. ಅನಂತರ ಹನುಮಂತನು ''ಇಷ್ಟು ಸಾಕು. ಈ ರಾಕ್ಷಸರನ್ನು ಮುಗಿಸಿಬಿಡುತ್ತೇನೆ. ಈ ಬೆಂಕಿಯಿಂದಲೇ ಪಟ್ಟಣವನ್ನು ಸುಟ್ಟು ಬಿಡುತ್ತೇನೆ'' ಎಂದು ನಿರ್ಧರಿಸಿ ಒಮ್ಮೆಗೇ ತನ್ನನ್ನು ಹಿಡಿದಿದ್ದ ರಾಕ್ಷಸರನ್ನು ತಳ್ಳಿ ಒದೆದು ಕೊಂದು ಹಾಕಿ ಚಂಗನೆ ಮೇಲಕ್ಕೆ ನೆಗೆದು ಒಂದು ಪ್ರಾಸಾದದ ಶಿಖರವನ್ನೇರಿ ಕುಳಿತನು. ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿಸಿದ ವೃತ್ತಾಂತವನ್ನು ರಾಕ್ಷಸಿಯರು ಸೀತೆಗೆ ತಿಳಿಸಿದರು. ಆ ದೇವಿಯು ಶೋಕಗ್ರಸ್ತಳಾಗಿ ಅಗ್ನಿಗೆ ಕೈಮುಗಿದು ''ಅಗ್ನಿದೇವ–ನನ್ನಲ್ಲಿ ನಿನಗೆ ಕರುಣೆಯಿದ್ದರೆ, ನನ್ನ ಚಾರಿತ್ರವು ಶುದ್ಧವಾಗಿದ್ದರೆ, ಶ್ರೀರಾಮದೂತನಾದ ಹನುಮಂತನ ಬಾಲವನ್ನು ಸುಡಬೇಡ. ಅವನಿಗೆ ಯಾವ ಹಿಂಸೆಯೂ ಆಗದಿರಲಿ'' ಎಂದು ಪ್ರಾರ್ಥಿಸಿದಳು. ಒಡನೆಯೇ ತನ್ನ ಬಾಲದಲ್ಲಿರುವ ಅಗ್ನಿಯು ತನ್ನನ್ನು ಬಾಧಿಸದೇ ಹಿಮದಂತೆ ಶೀತಳವಾಗಿರುವುದು ಹನುಮಂತನಿಗೆ ತಿಳಿಯಿತು. ಅವನು ''ಆಹಾ, ಬೆಂಕಿಯು ತಣ್ಣಗಾಯಿತಲ್ಲ! ಇದು ಸಾಧ್ವೀಶಿರೋಮಣಿಯಾದ ಸೀತಾದೇವಿಯ ತಪೋಮಹಿಮೆಯೇ ಸರಿ'' ಎಂದುಕೊಂಡನು. ಪರ್ವತಾಕಾರವಾಗಿದ್ದ ತನ್ನ ದೇಹವನ್ನು ಸಣ್ಣದಾಗಿ ಮಾಡಿಕೊಳ್ಳಲು, ಕಟ್ಟಿದ ಹಗ್ಗದ ಕಟ್ಟುಗಳೆಲ್ಲವೂ ಸಡಲಿ ಬಿದ್ದವು. ತನ್ನ ಮನಸ್ಸಿನಲ್ಲಿ ''ನಾನೀಗ ಪ್ರಬಲರಾದ ರಾಕ್ಷಸರ ಒಂದಂಶವನ್ನು ನಾಶ ಮಾಡಿದ್ದಾಯಿತು. ಈಗ ನನ್ನ ಬಾಲದಲ್ಲಿ ಉರಿಯುತ್ತಿರುವ ಯಜ್ಞಪುರುಷನಿಗೆ ಈ

ಮಹಾಭವನಗಳನ್ನು ಆಹುತಿಯಾಗಿ ಅರ್ಪಿಸಿಬಿಡುತ್ತೇನೆ'' ಎಂದು ಕೊಂಡನು. ಕೂಡಲೆ ಆತನು ಸ್ವಲ್ಪವೂ ಭಯಪಡದೆ ಮನೆಯಿಂದ ಮನೆಗೆ ನೆಗೆಯುತ್ತ ಬಾಲದ ಬೆಂಕಿಯಿಂದ ಮಹಾಭವನಗಳಿಗೆ ಬೆಂಕಿ ಹಚ್ಚುತ್ತ ಎಲ್ಲೆಲ್ಲಿಯೂ ಹಾರಾಡಿದನು. ಆ ಮಹಾಕಪಿಯು ಧನಿಕರ ಪ್ರಾಸಾದಗಳಿಗೆ ಬೆಂಕಿಯಿಟ್ಟು ಸುಟ್ಟು ಬೂದಿ ಮಾಡಿದನು. ರಾಕ್ಷಸರು ಭೀತರಾಗಿ ತಮ್ಮ ಆಸ್ತಿಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಹೆಣಗುತ್ತಿದ್ದರು. ಆ ಸಮಯದಲ್ಲಿ ಗಾಳಿಯೂ ವೇಗದಿಂದ ಬೀಸತೊಡಗಿತು. ಬೆಂಕಿಯು ಭವನದಿಂದ ಭವನಕ್ಕೆ ಹಬ್ಬಿ ವಿಸ್ತರಿಸಿತು. ಎಲ್ಲೆಲ್ಲಿಯೂ ರಾಕ್ಷಸರ, ರಾಕ್ಷಸಿಯರ, ಮಕ್ಕಳ ಹಾಹಾಕಾರವು ದಿಗಂತವನ್ನು ವ್ಯಾಪಿಸಿತು. ಸುಮಾರು ಲಂಕೆಯಲ್ಲಿದ್ದ ದೊಡ್ಡ ಭವನಗಳಿಗೆಲ್ಲ ಬೆಂಕಿಯಿಟ್ಟು ಆ ವಾನರಸಿಂಹನು ತ್ರಿಕೂಟಪರ್ವತದ ಶಿಖರವನ್ನೇರಿ ಕುಳಿತುಕೊಂಡನು. ಅವನ ಬಾಲದಲ್ಲಿ ಇನ್ನೂ ಬೆಂಕಿ ಉರಿಯುತ್ತಿತ್ತು, ಮಹಾಬಲಿಷ್ಠನೂ ವೇಗಶಾಲಿಯೂ ಆದ ಆ ಕಪಿವೀರನನ್ನು ಹಿಡಿಯಲು ಯಾವ ರಾಕ್ಷಸಯೋಧನಿಗೂ ಸಾಧ್ಯವಾಗಲಿಲ್ಲ.

ಆಂಜನೇಯನು ಲಂಕೆಯ ಸಮಸ್ತ ಭಾಗಗಳಿಗೂ ಬೆಂಕಿಯಿಟ್ಟ ಮೇಲೆ ಬಾಲವನ್ನು ಸಮುದ್ರದಲ್ಲಿ ಅದ್ದಿ ಬೆಂಕಿಯನ್ನು ಆರಿಸಿದನು. ಆಗ ಅವನು ತಿರುಗಿ ಲಂಕೆಯನ್ನು ನೋಡುತ್ತಿರುವಾಗ ಒಂದು ಚಿಂತೆ ಆವರಿಸಿತು. ಮನಸ್ಸಿನಲ್ಲಿ ಕಳವಳವಾಯಿತು : ''ಅಯ್ಯೋ, ನಾನೀಗ ಏನು ಮಾಡಿಬಿಟ್ಟೆ? ಲಂಕೆಯಲ್ಲಿ ಸೀತಾದೇವಿಯಿರುವುದನ್ನೇ ಯೋಚಿಸದೆ ಬೆಂಕಿಯನ್ನು ಹತ್ತಿಸಿಬಿಟ್ಟೆ. ಅಯ್ಯೋ, ನಾನು ಸ್ವಾಮಿದ್ರೋಹಿ! ನಾಚಿಕೆಗೆಟ್ಟವನು! ಪಾಪಿಷ್ಠ! ನನಗೆ ಧಿಕ್ಕಾರ. ಲಂಕಾನಗರವೇ ದಗ್ಧವಾದ ಮೇಲೆ ಪೂಜ್ಯಳಾದ ಜಾನಕಿಯು ಉಳಿದಿರುತ್ತಾಳೆಯೇ? ಕೋಪಕ್ಕೆ ಒಳಗಾಗಿ ದೊಡ್ಡ ಅನರ್ಥವನ್ನೇ ಮಾಡಿಬಿಟ್ಟೆ. ಎಂಥ ಭಾಗ್ಯಹೀನನಾದ ಅವಿವೇಕಿ ನಾನು'' ಎಂದುಕೊಂಡನು. ಅನಂತರ ಮತ್ತೆ ತನ್ನಲ್ಲಿಯೇ ''ಆ ದೇವಿಯನ್ನು ಪಾತಿವ್ರತ್ಯದ ಮಹಿಮೆಯೇ ಕಾಪಾಡಿರಬಹುದು. ಮಂಗಳ ಸ್ವರೂಪಿಣಿಯಾದ ಆ ದೇವತಾ ಸ್ತ್ರೀಯನ್ನು ಬೆಂಕಿಯು ಸುಡಲಾರದು. ಶ್ರೀರಾಮನ ಧರ್ಮಪತ್ನಿಯನ್ನು ಸುಡಲು ಅಗ್ನಿಗೆ ಧೈರ್ಯಬಂದೀತೆ? ಅಗ್ನಿಯನ್ನೇ ಅವಳು ಸುಟ್ಟು ಬಿಟ್ಟಾಳು. ಓಹೋ! ನನ್ನ ಬಾಲವನ್ನೇ ಅಗ್ನಿಯು ಸುಡದಿರುವುದಕ್ಕೆ ಅವಳ ತಪೋಮಹಿಮೆಯೇ ಕಾರಣ ವಲ್ಲವೆ?'' ಎಂದುಕೊಂಡನು. ಅಷ್ಟರಲ್ಲಿ ಆಕಾಶಗಾಮಿಗಳಾದ ಚಾರಣರು ''ಆಹಾ, ಲಂಕಾನಗರವೇ ಸುಟ್ಟು ಭಸ್ಮವಾದರೂ ಅಗ್ನಿಯು ಸೀತಾದೇವಿಯ ಬಳಿಗೆ ಸುಳಿಯಲಿಲ್ಲ, ಇದು ಶ್ರೀರಾಮನ ಮಹಿಮೆ. ದೇವಿಯ ತಪಃಪ್ರಭಾವ'' ಎಂದು ಹೇಳಿಕೊಳ್ಳುತ್ತಿದ್ದರು. ಆ ಮಾತು ಹನುಮಂತನ ಕಿವಿಗೆ ಕೇಳಿಸಿತು. ಅಮೃತವನ್ನು

ಕುಡಿದಂತೆ ಅವನಿಗೆ ಆನಂದವಾಯಿತು. ದೇವಿಯನ್ನೊಮ್ಮೆ ಕಣ್ಣಿಂದಲೇ ನೋಡಿ ಹೋಗಬೇಕೆಂದು ನಿಶ್ಚಯಿಸಿ ಆ ಧೀರನು ಮತ್ತೆ ಅಶೋಕವನಕ್ಕೆ ಹಾರಿ ಬಂದು ಸೀತೆಯನ್ನು ಕಂಡು ನಮಸ್ಕರಿಸಿದನು. ಬಳಿಯಲ್ಲಿ ಯಾವ ರಾಕ್ಷಸಿಯರೂ ಇರಲಿಲ್ಲ. ಜಾನಕಿಯು ಹರ್ಷದಿಂದ ಹನುಮಂತನ ಪರಾಕ್ರಮವನ್ನು ಹೊಗಳಿ ''ಹನುಮಂತ, ನಿನ್ನ ಪರಾಕ್ರಮವು ಊಹಾತೀತವಾದದ್ದು. ಬೇಗನೆ ಹೋಗಿ ಶ್ರೀರಾಮನಿಗೆ ನನ್ನ ಕಷ್ಟವನ್ನು ನಿವೇದಿಸು'' ಎಂದಳು. ಹನುಮಂತನು ''ಅಮ್ಮ ಸ್ವಲ್ಪವೂ ಚಿಂತಿಸಬೇಡ. ನಿನ್ನ ಇಷ್ಟವು ನೆರವೇರುವುದು'' ಎಂದು ಹೇಳಿ ಆಕೆಗೆ ಸಾಷ್ಟಾಂಗ ನಮಸ್ಕಾರ ಮಾಡಿ ತ್ವರೆಯಿಂದ ಹೊರಟು ಅರಿಷ್ಟವೆಂಬ ಪರ್ವತ ಶಿಖರವನ್ನೇರಿದನು.

೪೮

ಹನುಮಂತನು ಸಮುದ್ರವನ್ನು ಲಂಘಿಸಿ ಹಿಂದಕ್ಕೆ ಬರುವುದು. ಕಪಿಗಳ ಆನಂದ. ಲಂಕಾವೃತ್ತಾಂತ ಕಥನ. ಮಧುವನ ಪ್ರವೇಶ. ಸುಗ್ರೀವನ ಬಳಿಗೆ ಆಗಮನ.

ಆಗ ಹನುಮಂತನು ಸಮುದ್ರದ ದಕ್ಷಿಣತೀರದ ಕಡೆಗೆ ನೋಡುತ್ತ ತನ್ನ ದೇಹವನ್ನು ಹಿಂದಿನಂತೆಯೇ ಬೆಳಸಿಕೊಂಡನು. ''ಇನ್ನೇನು? ಈ ಮಹಾಸಾಗರವನ್ನು ಲೀಲೆಯಿಂದ ದಾಟಿಹೋಗಬಲ್ಲೆ. ಹಿಂದಿನ ಚಿಂತೆ ಈಗ ನನಗಿಲ್ಲ'' ಎಂದುಕೊಂಡು ಗಗನತಳಕ್ಕೆ ನೆಗೆದುಬಿಟ್ಟನು. ಬಿಳಿಯ ಬಟ್ಟೆಯನ್ನುಟ್ಟಿದ್ದ ಆ ವೀರನು ಮೋಡಗಳ ನಡುವೆ ನುಗ್ಗುತ್ತ, ಹೊರಡುತ್ತ, ಚಂದ್ರನಂತೆ ಶೋಭಿಸುತ್ತ ವೇಗದಿಂದ ಹಿಂದಿರುಗಿದನು. ಮೇಘದಂತೆ ಗರ್ಜಿಸುತ್ತ ಶ್ರೀರಾಮನ ಕೋದಂಡದಿಂದ ಚಿಮ್ಮಿದ ಬಾಣದಂತೆ ಮಹಾವೇಗದಿಂದ ಹಾರಿಬಂದನು. ದೂರದಲ್ಲಿ ಮಹೇಂದ್ರ ಪರ್ವತವು ಕಾಣಿಸಿತು. ಆ ಕಪಿಶಾರ್ದೂಲನು ತನ್ನ ಗೆಳೆಯರನ್ನು ಕಾಣಬೇಕೆಂದು ಹರ್ಷದಿಂದ ಬಾಲವನ್ನಲ್ಲಾಡಿಸಿ ಸಿಂಹದಂತೆ ಗರ್ಜಿಸಿದನು. ಇತ್ತಲಾಗಿ ಸಮುದ್ರದ ತೀರದಲ್ಲಿ ಅಂಗದಾದಿ ವೀರರು ಹನುಮಂತನಿಗಾಗಿ ಕಾಯುತ್ತ ದೀನವದನರಾಗಿ ಕುಳಿತಿದ್ದರು. ಆ ವಾನರಯೋಧರು ಹನುಮಂತನ ಗರ್ಜನೆಯನ್ನು ಕೇಳಿ ಉತ್ಸಾಹಗೊಂಡರು. ಮತ್ತೆ ಮತ್ತೆ ಗರ್ಜಿಸುತ್ತಿದ್ದ ಹನುಮಂತನ ಧ್ವನಿಯನ್ನು ಕೇಳಿ ಜಾಂಬವಂತನು ಸಂತೋಷ ದಿಂದ ಹಿಗ್ಗುತ್ತ ಕಪಿಗಳನ್ನು ಕುರಿತು ''ಎಲೈ ಕಪಿವೀರರೆ, ಹನುಮಂತನ ಧ್ವನಿ ಅದು. ಕಾರ್ಯವನ್ನು ಸಾಧಿಸಿಕೊಂಡು ಅವನು ಬರುತ್ತಿದ್ದಾನೆ. ಸೀತೆಯನ್ನು ನೋಡಿಯೇ ಬಂದಿದ್ದಾನೆ. ಇಲ್ಲದಿದ್ದರೆ ಹರ್ಷದ ಈ ಧ್ವನಿಯನ್ನು ಮಾಡುತ್ತಿರಲಿಲ್ಲ'' ಎಂದನು. ಕಪಿಗಳು ಆನಂದದಿಂದ ಕುಣಿದಾಡತೊಡಗಿದರು. ಮರದಿಂದ ಮರಕ್ಕೂ ಬೆಟ್ಟದ

ಶಿಖರಕ್ಕೂ ಅಲ್ಲಿಂದ ಇನ್ನೊಂದು ಶಿಖರಕ್ಕೂ ನೆಗೆಯುತ್ತ ಹನುಮಂತನನ್ನು ನೋಡುವುದಕ್ಕಾಗಿ ನೆರೆದರು. ಅವನನ್ನು ಸ್ವಾಗತಿಸುವುದಕ್ಕಾಗಿ ಆ ಕಪಿಯೋಧರು ಹೂಗಳಿಂದ ತುಂಬಿದ ಮರದ ಕೊಂಬೆಗಳನ್ನು ಮುರಿದು ಹಿಡಿದುಕೊಂಡು ಬಾವುಟದಂತೆ ಅಲ್ಲಾಡಿಸತೊಡಗಿದರು. ನೋಡ ನೋಡುತ್ತಿದ್ದಂತೆಯೇ ಆಂಜನೇಯನು ಸಂತೋಷದಿಂದ ಹಿಗ್ಗುತ್ತ ಆ ಮಹೇಂದ್ರ ಪರ್ವತದ ಶಿಖರದ ಮೇಲೆ ಇನ್ನೊಂದು ಪರ್ವತವೋ ಎಂಬಂತೆ ಆಕಾಶದಿಂದ ಧುಮುಕಿದನು. ಕಪಿವೀರರ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವರು ಗೆಡ್ಡೆ ಗೆಣಸು ಹಣ್ಣು ಮುಂತಾದವನ್ನು ಹನುಮಂತನಿಗೆ ಕೊಡುವುದಕ್ಕಾಗಿ ಹೊತ್ತುಕೊಂಡು ಬಂದರು. ಹನುಮಂತನು ಜಾಂಬವಂತನಿಗೂ ಗುರುಹಿರಿಯರಿಗೂ ವಂದಿಸಿ ಅಂಗದನನ್ನು ಸಂಮಾನಿಸಿ 'ಸೀತಾದೇವಿಯನ್ನು ನೋಡಿ ಬಂದೆನು' ಎಂದು ಸಂಕ್ಷೇಪವಾಗಿ ಹೇಳಿದನು. 'ನೋಡಿಬಂದೆನು' ಎಂಬ ಮಾತು ಅವರೆಲ್ಲರಿಗೂ ಅಮೃತವು ದೊರಕಿದಷ್ಟು ಹರ್ಷವನ್ನುಂಟುಮಾಡಿತು. ಕೆಲವರು ಸಿಂಹನಾದ ಮಾಡಿದರು. ಕೆಲವರು ಬಾಲದಿಂದ ನೆಲವನ್ನು ಬಡಿದರು. ಕೆಲವರು ಮುಂದೆ ಹಾರಿ ಬಂದು ಮಹಾಗಜದಂತಿದ್ದ ಹನುಮಂತನನ್ನು ಅಪ್ಪಿಕೊಂಡರು. ಕೆಲವರು ಅವನ ಮೈಯನ್ನು ಮತ್ತೆ ಮತ್ತೆ ಮುಟ್ಟಿದರು! ಅಂಗದನು ಹನುಮಂತನನ್ನು ಕುರಿತು ''ಹೇ ವಾನರೋತ್ತಮ, ಸತ್ತ್ವ ಪರಾಕ್ರಮಗಳಲ್ಲಿ ನಿನಗೆ ಸಮಾನರಾದ ಮತ್ತೊಬ್ಬರಿಲ್ಲ. ನಿನ್ನ ಅನುಗ್ರಹದಿಂದ ನಮ್ಮ ಪ್ರಾಣವನ್ನು ಉಳಿಸಿದಂತಾಯಿತು. ಅಬ್ಬಾ, ನಿನ್ನ ಸ್ವಾಮಿ ಭಕ್ತಿಯೆಷ್ಟು! ನಿನ್ನ ಧೈರ್ಯವೆಷ್ಟು!'' ಎಂದು ಕೊಂಡಾಡಿದನು.

ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡ ಮೇಲೆ ಹನುಮಂತನು ಸೀತಾವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಸಿದನು. ಅನಂತರ ಜಾಂಬವಂತನು ಆ ವೃತ್ತಾಂತವನ್ನು ವಿಸ್ತರಿಸಿ ಹೇಳಬೇಕೆಂದು ಕೇಳಲಾಗಿ ಹನುಮಂತನು ಮೊದಲಿನಿಂದ ಕಡೆಯವರೆಗೆ ನಡೆದುದೆಲ್ಲವನ್ನೂ ಬಿಡಿಸಿ ಹೇಳಿದನು. ಸಮುದ್ರವನ್ನು ದಾಟಿದ ಬಗೆ, ಲಂಕಿಣಿಯನ್ನು ಕಂಡದ್ದು, ನಗರವನ್ನು ಹುಡುಕಿದುದು, ಅಶೋಕವನದಲ್ಲಿ ಸೀತಾದರ್ಶನ, ರಾವಣನ ಆಗಮನ, ಸೀತೆಯೂ ರಾವಣನೂ ಆಡಿದ ಮಾತುಗಳು, ಅನಂತರ ತಾನು ಸೀತೆಯನ್ನು ಕಂಡು ಮಾತಾಡಿದ ಬಗೆ, ಅವಳು ಹೇಳಿದ ನುಡಿ, ಅಶೋಕವನಭಂಗ, ರಾಕ್ಷಸರೊಡನೆ ಹೋರಾಟ, ರಾವಣನೊಡನೆ ಭೇಟಿ, ಲಂಕೆಯ ದಹನ ಇವೆಲ್ಲವನ್ನೂ ವಿವರಿಸಿದನು. ಆಮೇಲೆ ''ಮಿತ್ರರೆ, ಸೀತಾದೇವಿಯು ಮಹಾಪತಿವ್ರತೆ, ಸಾಧ್ವೀ ಶಿರೋಮಣಿ. ನನಗೆ ಭೂಮಿಗಿಳಿದ ದೇವತೆಯನ್ನು ಕಂಡಂತಾಯಿತು. ಅವಳ ಕಷ್ಟವು ಅಪಾರವಾದದ್ದು. ಶ್ರೀರಾಮನಿಗೆ ಈ ವೃತ್ತಾಂತವನ್ನು ತಿಳಿಸಿ ಆ ಮಹಾತ್ಮನ ಶೋಕವನ್ನು ನೀಗಿಸಬೇಕು. ಮುಂದೆ ನಡೆಯುವ ಮಹಾಯುದ್ಧದಲ್ಲಿ ನಾವೆಲ್ಲರೂ

ಸುಗ್ರೀವನಿಗೆ ಬೆಂಬಲವನ್ನಿತ್ತು ಹೋರಾಡಲೇಬೇಕು. ಇದೊಂದು ಪವಿತ್ರವಾದ ಧರ್ಮಕಾರ್ಯ'' ಎಂದನು.

ಅನಂತರ ''ನಾವೇ ಲಂಕೆಗೆ ನುಗ್ಗಿ ರಾವಣನನ್ನು ವಧಿಸಿ ಶ್ರೀರಾಮನ ಕಾರ್ಯವನ್ನು ನೆರವೇರಿಸಿಯೇ ಬಿಡಬಹುದು'' ಎಂದನು. ಆಗ ಜ್ಞಾನವೃದ್ಧನಾದ ಜಾಂಬವಂತನು ''ಹನುಮಂತ, ಇದೊಂದು ಸಾಹಸದ ಕಾರ್ಯ. ನಿನ್ನ ನೆರವಿನಿಂದ ನಾವೇ ರಾವಣನನ್ನು ಒಂದು ವೇಳೆ ಜಯಿಸಬಹುದು. ಆದರೆ ಇದು ಸರಿಯಾದ ಮಾರ್ಗವಲ್ಲ. ಸೀತೆಯನ್ನು ಹುಡುಕಬೇಕೆಂಬುದಷ್ಟೇ ಸುಗ್ರೀವನು ನಮಗೆ ನೇಮಿಸಿದ್ದ ಕಾರ್ಯ. ನಾವು ಲಂಕೆಗೆ ನುಗ್ಗುವುದು ಅವಿವೇಕವಾಗುತ್ತದೆ. ವಿಖ್ಯಾತಪೌರುಷನಾದ ಶ್ರೀರಾಮನಿಗೆ ಇದರಿಂದ ಕೋಪವೇ ಬರಬಹುದು. ಅವನ ಕೀರ್ತಿಗೆ ಇದು ಕಳಂಕವೆನಿಸಬಹುದು. ಆದ್ದರಿಂದ ಈ ವೃತ್ತಾಂತವನ್ನು ಸುಗ್ರೀವನಿಗೂ ಶ್ರೀರಾಮನಿಗೂ ಮೊದಲು ತಿಳಿಸೋಣ. ದುಡುಕುವುದು ಬೇಡ'' ಎಂದನು. ಯುವರಾಜನಾದ ಅಂಗದನು ಅದನ್ನೊಪ್ಪಿದನು. ಒಡನೆಯೇ ಅವರೆಲ್ಲರೂ ಕಿಷ್ಕಿಂಧೆಗೆ ಅಭಿಮುಖವಾಗಿ ಪ್ರಯಾಣ ಮಾಡಿದರು. ದಾರಿಯಲ್ಲಿ ಸುಗ್ರೀವನಿಗೆ ಸೇರಿದ ಮಧುವನವು ಕಂಗೊಳಿಸಿತು. ಕಪಿಗಳು ಅಲ್ಲಿಗೆ ಹೋಗಿ ಮಧುವನ್ನು ಕುಡಿಯಲಪೇಕ್ಷಿಸಿದರು. ಅದಕ್ಕೆ ಅಂಗದನು ಅನುಮತಿಯನ್ನಿತ್ತನು. ಕಪಿಗಳೆಲ್ಲರೂ ಮಧುವನಕ್ಕೆ ನುಗ್ಗಿ ಯಥೇಷ್ಟವಾಗಿ ಮಧುವನ್ನು ಕುಡಿದು ಹಾರಾಡಿ ವಿನೋದಿಸಿದರು. ಕಾವಲುಗಾರನಾದ ದಧಿಮುಖನು ಅಡ್ಡಬರಲಾಗಿ ಈ ಕಪಿಗಳು ಅವನನ್ನು ಹೊಡೆದು ಓಡಿಸಿದರು. ಪರಾಜಿತನಾದ ದಧಿಮುಖನು ಈ ವೃತ್ತಾಂತವನ್ನು ಮಹಾರಾಜನಾದ ಸುಗ್ರೀವನಿಗೆ ತಿಳಿಸಬೇಕೆಂದು ತ್ವರೆಯಿಂದ ಕಿಷ್ಕಿಂಧೆಗೆ ಸಾಗಿದನು. ಅವನು ಮಹಾರಾಜನಾದ ಸುಗ್ರೀವನನ್ನು ಕಂಡು ನಮಸ್ಕರಿಸಿ ''ಮಹಾರಾಜ, ನಿನಗೆ ಅತ್ಯಂತ ಪ್ರಿಯವಾದ ಮಧುವನದಲ್ಲಿ ಯಥೇಷ್ಟವಾಗಿ ವಿಹರಿಸುವುದಕ್ಕೆ ನೀನು ಯಾರಿಗೂ ಅವಕಾಶವನ್ನು ನೀಡಿಲ್ಲ. ಆದರೂ ಅಂಗದ, ಹನುಮಂತ ಮೊದಲಾದ ವಾನರರು ಮಧುವನಕ್ಕೆ ನುಗ್ಗಿ ಯಥೇಷ್ಟವಾಗಿ ಮಧುವನ್ನು ಕುಡಿದು ವಿಹರಿಸುತ್ತಿದ್ದಾರೆ. ಇವರಿಂದ ಆ ಸುಂದರ ವನವು ಹಾಳಾಯಿತು. ನಮ್ಮ ಕಾವಲುಗಾರರನ್ನು ಅವರೆಲ್ಲರೂ ಸೇರಿ ಹೊಡೆದು ಓಡಿಸಿದರು. ನಮ್ಮನ್ನೇ ಹಂಗಿಸುತ್ತಿದ್ದಾರೆ. ಪ್ರಭುವಾದ ನೀನಿರುವಾಗ ಈ ಕಪಿಗಳು ಈ ರೀತಿ ಹಾವಳಿ ಮಾಡುತ್ತಿದ್ದಾರೆ'' ಎಂದನು. ಆತನ ದೂರನ್ನು ಕೇಳಿದ ಸುಗ್ರೀವನಿಗೆ ಸಂತೋಷವೇ ಆಯಿತು. ಲಕ್ಷ್ಮಣನನ್ನು ಕುರಿತು ''ಆರ್ಯ ಲಕ್ಷ್ಮಣ, ಅಂಗದ ಮೊದಲಾದ ಕಪಿವೀರರು ನಮ್ಮ ಮಧುವನಕ್ಕೆ ನುಗ್ಗಿ ಸ್ವೇಚ್ಛೆಯಾಗಿ ಮಧುವನ್ನು ಕುಡಿದು ವಿಹರಿಸುತ್ತಿದ್ದಾರೆ – ಎಂದು ಈ ದಧಿಮುಖನು ಹೇಳುತ್ತಿದ್ದಾನೆ. ಆ ವಾನರರು

ಸೀತಾದೇವಿಯ ಅನ್ವೇಷಣೆಗಾಗಿ ದಕ್ಷಿಣದಿಕ್ಕಿಗೆ ಹೋಗಿದ್ದರು. ನಾನು ಕೊಟ್ಟಿದ್ದ ಒಂದು ತಿಂಗಳ ಗಡುವು ಕಳೆದು ಹೋಗಿದೆ. ಆದರೂ ಅವರು ನನ್ನ ಅನುಮತಿಯಿಲ್ಲದೆ ಮಧುವನಕ್ಕೆ ನುಗ್ಗಿದ್ದಾರೆಂದರೆ ತಮ್ಮ ಕಾರ್ಯವನ್ನು ಸಾಧಿಸಿಕೊಂಡು ಬಂದಿದ್ದಾರೆಂದೇ ಅರ್ಥ! ದೇವಿಯನ್ನು ನೋಡಿ ಬಂದಿದ್ದಾರೆ. ಸಂಶಯವೇ ಇಲ್ಲ! ಅವರು ವೈದೇಹಿಯನ್ನು ಕಾಣದೆ ಬಂದಿದ್ದರೆ ಅಲ್ಲಿಗೆ ಎಂದಿಗೂ ನುಗ್ಗುತ್ತಿರಲಿಲ್ಲ. ಪ್ರಾಯಶಃ ಹನುಮಂತನೇ ದೇವಿಯನ್ನು ನೋಡಿ ಬಂದಿರಬೇಕು'' ಎಂದನು.

ಸುಗ್ರೀವನ ಬಾಯಿಯಿಂದ ಹೊರಟ ಅಮೃತಪ್ರಾಯವಾದ ಈ ಮಾತನ್ನು ಕೇಳಿ ಶ್ರೀರಾಮ ಲಕ್ಷ್ಮಣರಿಗೆ ಪರಮಾನಂದವಾಯಿತು. ಸುಗ್ರೀವನು ದಧಿಮುಖನ ಕಡೆಗೆ ತಿರುಗಿ ''ದಧಿಮುಖ, ನಾನು ಯಾವ ಕೆಲಸಕ್ಕೆ ಆ ವಾನರರನ್ನು ನೇಮಿಸಿದ್ದೆನೋ ಅದನ್ನವರು ಸಾಧಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಅವರ ಚೇಷ್ಟೆಯನ್ನು ನಾನು ಕ್ಷಮಿಸಿದ್ದೇನೆ. ನೀನು ಬೇಸರ ಪಡಬೇಡ. ಕೂಡಲೆ ಹನುಮಂತ ಮೊದಲಾದವರನ್ನು ಇಲ್ಲಿಗೆ ಕಳುಹಿಸು'' ಎಂದನು. ಶ್ರೀರಾಮ ಲಕ್ಷ್ಮಣರಿಗೆ ಆನಂದದಿಂದ ಕಣ್ಣುಗಳರಳಿದವು. ಮೈಯಲ್ಲಿ ರೋಮಾಂಚವಾಯಿತು. ತನ್ನ ಕಾರ್ಯವು ಕೈಗೂಡಿತೆಂದು ಸುಗ್ರೀವನು ಹಿಗ್ಗಿದನು.

ಇತ್ತಲಾಗಿ ದಧಿಮುಖನು ವನಪಾಲಕರೊಡನೆ ಅಂತರಿಕ್ಷಕ್ಕೆ ಹಾರಿ ಮಧುವನಕ್ಕೆ ಬಂದನು. ಅವನು ಅಂಗದನ ಬಳಿಗೆ ಹೋಗಿ ಸುಗ್ರೀವನ ಆಜ್ಞೆಯನ್ನು ತಿಳಿಸಿ, ಕೂಡಲೆ ಎಲ್ಲರೂ ಕಿಷ್ಕಿಂಧೆಗೆ ಹೋಗಬೇಕು ಎಂದು ನಿವೇದಿಸಿದನು. ಒಡನೆಯೇ ಅಂಗದನ ಆಜ್ಞೆಯಂತೆ ಎಲ್ಲರೂ ಯಂತ್ರದಿಂದ ಹಾರಿಸಿದ ಬೆಟ್ಟಗಳಂತೆ ಚಂಗನೆ ಆಕಾಶಕ್ಕೆ ನೆಗೆದು ಋಷ್ಯಮೂಕದ ಕಡೆಗೆ ಹೊರಟರು.

೪೯

ಹನುಮಂತನು ಶ್ರೀರಾಮನಿಗೆ ಸೀತಾವೃತ್ತಾಂತವನ್ನು ತಿಳಿಸಿ ಚೂಡಾಮಣಿಯನ್ನು ಕೊಡುವುದು. ಸೀತೆಗೆ ಹೇಳಿದ ಸಮಾಧಾನವನ್ನು ಶ್ರೀರಾಮನಿಗೆ ನಿವೇದಿಸುವುದು.

ಇತ್ತ ವಿರಹಶೋಕಾಕುಲನಾಗಿದ್ದ ಶ್ರೀರಾಮನನ್ನು ಕುರಿತು ಸುಗ್ರೀವನು ''ರಾಘವ, ಇನ್ನು ಸಮಾಧಾನದಿಂದಿರು. ನಿನಗೆ ಮಂಗಳವಾಗಲಿ. ವಾನರರು ದೇವಿಯನ್ನು ಸಂದರ್ಶಿಸಿ ಬಂದಿದ್ದಾರೆ. ಇದು ನಿಶ್ಚಯ. ಇಲ್ಲದಿದ್ದರೆ ನಾನು ಗೊತ್ತು ಮಾಡಿದ ಸಮಯವನ್ನು ಮೀರಿ ಅವರು ಬರುತ್ತಿರಲಿಲ್ಲ ಮತ್ತು ಮಧುವನಕ್ಕೆ ಎಂದೂ

ನುಗ್ಗುತ್ತಿರಲಿಲ್ಲ. ಅಂಗದನು ಅದನ್ನು ಸಹಿಸಿಕೊಳ್ಳುತ್ತಲೂ ಇರಲಿಲ್ಲ. ಶ್ರೀರಾಮ, ಹನುಮಂತನಲ್ಲದೆ ಬೇರೆ ಯಾವನೂ ಈ ಕಾರ್ಯವನ್ನು ಸಾಧಿಸಿರಲಾರನು. ಹನುಮಂತನಲ್ಲಿ ಕಾರ್ಯದಕ್ಷತೆಯಿದೆ. ಬುದ್ಧಿ, ಉದ್ಯೋಗ, ಪರಾಕ್ರಮಗಳು ಸದಾ ನೆಲೆಸಿರುತ್ತವೆ. ದಕ್ಷನಾದ ಅಂಗದನು ಅಧಿಪತಿಯಾಗಿ, ಪ್ರಾಜ್ಞನಾದ ಜಾಂಬವಂತನು ಮಾರ್ಗದರ್ಶಿಯಾಗಿ, ಹನುಮಂತನು ಕಾರ್ಯಸಾಧಕನಾಗಿ ನಿಂತಿರುವಾಗ ಆ ಕಾರ್ಯವು ಎಂದಿಗೂ ಸಿದ್ಧಿಸದೇ ಇರುವುದಿಲ್ಲ. ವೀರಾಗ್ರಣಿ, ಚಿಂತಿಸಬೇಡ'' ಎಂದು ನುಡಿದನು. ಅಷ್ಟರಲ್ಲಿ ಕಪಿಗಳು ಶ್ರೀರಾಮನನ್ನು ಕಾಣುವುದಕ್ಕಾಗಿ ಆನಂದದಿಂದ ಧಾವಿಸಿ ಬರುತ್ತಿದ್ದರು. ಅವರ ಮುಂದುಗಡೆ ಅಂಗದನೂ ಹನುಮಂತನೂ ಇದ್ದರು. ಎಲ್ಲರೂ ಶ್ರೀರಾಮ ಸುಗ್ರೀವರ ಸಮೀಪದಲ್ಲಿ ನೆಲದ ಮೇಲೆ ಇಳಿದರು. ಹನುಮಂತನು ಶ್ರೀರಾಮನಿಗೆ ತಲೆಬಾಗಿ ''ಪ್ರಭು, ಸೀತಾದೇವಿಯು ಕುಶಲದಿಂದ ಇದ್ದಾಳೆ'' ಎಂದು ನಿವೇದಿಸಿದನು. ಲಕ್ಷ್ಮಣನು ಹರ್ಷದಿಂದ ಹನುಮಂತನನ್ನೇ ನೋಡುತ್ತಿದ್ದನು. ಅಷ್ಟರಲ್ಲಿ ಆ ವಾನರರು ಚಾಪಲ್ಯದಿಂದ ಮುಂದೆ ಬಂದು ''ಸೀತಾದೇವಿಯು ಲಂಕೆಯಲ್ಲಿ ಬಂದಿಯಾಗಿದ್ದಾಳೆ. ರಾಕ್ಷಸಿಯರು ಅವಳನ್ನು ಹೆದರಿಸುತ್ತಿದ್ದಾರೆ. ರಾವಣನು ಆಕೆಗೆ ಇನ್ನೂ ಎರಡು ತಿಂಗಳು ಅವಧಿಯನ್ನು ಕೊಟ್ಟಿದ್ದಾನೆ'' ಎಂದರು. ಆಗ ಶ್ರೀರಾಮನು ''ಎಲೈ ವಾನರರೆ, ಸೀತಾದೇವಿಯು ಲಂಕೆಯಲ್ಲಿ ಎಲ್ಲಿದ್ದಾಳೆ? ನನ್ನ ವಿಷಯದಲ್ಲಿ ಅವಳ ಮನಸ್ಸು ಹೇಗಿದೆ? ಎಲ್ಲವನ್ನೂ ವಿಶದವಾಗಿ ತಿಳಿಸಿರಿ'' ಎಂದನು. ವಿಶದವಾಗಿ ತಿಳಿಸಲು ಅವರಿಗೇನು ಗೊತ್ತು? ಅವರು ಹನುಮಂತನ ಕಡೆಗೆ ತಿರುಗಿ ''ಹನುಮಂತ, ಶ್ರೀರಾಮನಿಗೆ ಎಲ್ಲವನ್ನೂ ತಿಳಿಸು'' ಎಂದರು! ಆಗ ಆಂಜನೇಯನು ಜಾನಕಿಯಿದ್ದ ದಕ್ಷಿಣದಿಕ್ಕಿಗೆ ತಿರುಗಿ ತಲೆಬಾಗಿ ವಂದಿಸಿ ಎಲ್ಲ ವೃತ್ತಾಂತವನ್ನೂ ಹೇಳಲುಪಕ್ರಮಿಸಿದನು. ಆಂಜನೇಯನು ಮಾತನಾಡುವ ಕಲೆಯಲ್ಲಿ ಪ್ರವೀಣ. ''ದೇವ, ನಾನು ಸೀತಾದೇವಿಯನ್ನು ಹುಡುಕುವುದಕ್ಕಾಗಿ ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿ ಹೋದೆನು. ಅಲ್ಲಿ ಲಂಕೆಯೆಂಬ ಪಟ್ಟಣವಿದೆ. ಅದು ದುರಾತ್ಮನಾದ ರಾವಣನ ರಾಜಧಾನಿ. ಆ ನಗರದಲ್ಲಿ ನಾನು ಸಾಧ್ವಿಯಾದ ಸೀತಾದೇವಿಯನ್ನು ಕಂಡೆನು. ನಗರದ ಬಳಿಯಿರುವ ಅಶೋಕವನದಲ್ಲಿ ಅವಳಿದ್ದಾಳೆ. ಅವಳು ಮುಂದಿನ ಆಸೆಯನ್ನೆಲ್ಲಾ ನಿನಗೊಪ್ಪಿಸಿ ನಿನ್ನನ್ನೇ ನಂಬಿ ಜೀವವನ್ನು ಹಿಡಿದುಕೊಂಡಿರುವಳು. ವಿಕಾರ ರೂಪಿನ ರಾಕ್ಷಸಿಯರು ಅವಳನ್ನು ಕಾಯುತ್ತಿದ್ದಾರೆ. ಅಲ್ಲದೆ ರಾವಣನಿಗೆ ವಶಳಾಗಬೇಕೆಂದು ದೇವಿಯನ್ನು ಹೆದರಿಸುತ್ತಿದ್ದಾರೆ. ಆ ಸಾಧ್ವಿಗೆ ಇಂತಹ ಕಷ್ಟ ಬರಬಾರದಾಗಿತ್ತು. ಸೀತಾದೇವಿಯು ಒಂಟಿ ಜಡೆಯನ್ನು ಬಿಟ್ಟು ದೈನ್ಯದಿಂದ ನಿನ್ನನ್ನೇ ಧ್ಯಾನಿಸುತ್ತಿದ್ದಾಳೆ. ನೆಲದಮೇಲೆ ಮಲಗುತ್ತಾಳೆ. ಮೈಯಲ್ಲಿ ಕಂದಿ ಕುಂದಿ ಚಳಿಗಾಲದ ತಾವರೆಯ ಬಳ್ಳಿಯಂತೆ

ಆಗಿಬಿಟ್ಟಿದ್ದಾಳೆ. ರಾವಣನಿಂದ ತನಗೆ ಉಳಿಗಾಲವಿಲ್ಲವೆಂದು ಭಾವಿಸಿ ತಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ್ದಳು. ಶ್ರೀರಾಮ, ನಾನು ಅವಳನ್ನು ಕಂಡು ಮಾತಾಡಿ ಸಂತೈಸಿ ಧೈರ್ಯದಿಂದಿರುವಂತೆ ಆಶ್ವಾಸನೆ ಕೊಟ್ಟು ಬಂದಿದ್ದೇನೆ'' ಎಂದು ನುಡಿದು ಅನಂತರ ವಿಸ್ತಾರವಾಗಿ ಅಲ್ಲಿ ನಡೆದ ವೃತ್ತಾಂತವನ್ನು ಹೇಳಿದನು.

ರಾವಣನು ಬಂದು ಸೀತೆಯನ್ನು ಹೆದರಿಸಿರುವ ಸಂದರ್ಭವನ್ನು ಮಾತ್ರ ಹೇಳಲಿಲ್ಲ. ತಾನು ಶ್ರೀರಾಮನ ಅಂಗುಲೀಯಕವನ್ನು ಆಕೆಗೆ ಕೊಟ್ಟಿದ್ದರಿಂದ ತನ್ನಲ್ಲಿ ನಂಬಿಕೆಯಾಯಿತೆಂದು ತಿಳಿಸಿ, ಅವಳು ಹೇಳಿದ ಕೆಲವು ಅಭಿಜ್ಞಾನಗಳನ್ನು ಹೇಳಿದನು. ಅವಳು ನಿನಗೆ ''ಇನ್ನು ಒಂದು ತಿಂಗಳು ಹೇಗಾದರೂ ಪ್ರಾಣವನ್ನು ಹಿಡಿದು ಕೊಳ್ಳುವೆನು. ತಿಂಗಳು ಕಳೆದ ಮೇಲೆ ಸರ್ವಥಾ ನಾನು ಬದುಕುವುದಿಲ್ಲ. ರಾಕ್ಷಸರ ಕೈಗೆ ಸಿಕ್ಕಿದ್ದೇನೆ'' ಎಂದು ತಿಳಿಸುವಂತೆ ಹೇಳಿದಳು ಎಂದನು. ಆಮೇಲೆ ಅವಳ ಸಂದೇಶವನ್ನೆಲ್ಲಾ ಯಥಾವತ್ತಾಗಿ ಹೇಳಿ ಜಾನಕಿಯು ಕೊಟ್ಟ ಚೂಡಾಮಣಿಯನ್ನು ಹನುಮಂತನು ಶ್ರೀರಾಮನಿಗೆ ಅರ್ಪಿಸಿದನು.

ಶ್ರೀರಾಮನು ಆ ಚೂಡಾಮಣಿಯನ್ನು ನೋಡಿ ಎದೆಗೆ ಒತ್ತಿಕೊಂಡು ಗಳಗಳನೆ ಅತ್ತುಬಿಟ್ಟನು. ಲಕ್ಷ್ಮಣನೂ ಅಳತೊಡಗಿದನು. ರಾಘವನು ಕಣ್ಣೀರು ತುಂಬಿಕೊಂಡು ಚೂಡಾಮಣಿಯನ್ನು ನೋಡುತ್ತ ಸುಗ್ರೀವನನ್ನು ಕುರಿತು ''ಮಿತ್ರ, ಹಸು ತನ್ನ ಕರುವನ್ನು ಕಂಡಾಗ ಪ್ರೀತಿಯಿಂದ ಕೆಚ್ಚಲು ಸ್ರವಿಸುವಂತೆ ಈ ಮಣಿ ರತ್ನವನ್ನು ಕಂಡು ನನ್ನ ಹೃದಯವು ಕರಗಿ ಹೋಗುತ್ತಿದೆ. ನನ್ನ ಮಾವನು ಈ ರತ್ನವನ್ನು ಸೀತೆಗೆ ಮದುವೆಯ ಕಾಲದಲ್ಲಿ ಕೊಟ್ಟಿದ್ದನು. ಅವಳು ಮದುವಣಗಿತ್ತಿಯಾಗಿದ್ದಾಗ ಈ ರತ್ನವು ಅವಳ ತಲೆಯಲ್ಲಿ ಬಹಳ ಚೆನ್ನಾಗಿ ಒಪ್ಪುತ್ತಿತ್ತು. ಜನಕಮಹಾರಾಜನಿಗೆ ದೇವೇಂದ್ರನು ಕೊಟ್ಟ ರತ್ನವಿದು. ಇದನ್ನು ನೋಡಿದೊಡನೆ ನನ್ನ ತಂದೆಯೂ, ಜನಕಮಹಾರಾಜನೂ ಸೀತೆಯ ತಾಯಿಯೂ, ಜಾನಕಿಯೂ ನನ್ನ ಕಣ್ಣಿಗೆ ಕಟ್ಟಿದಂತಾಗುವರು. ಈ ರತ್ನವು ನನ್ನ ಪ್ರಿಯಳ ತಲೆಗೆ ಬಹಳ ಚೆನ್ನಾಗಿ ಒಪ್ಪುತ್ತದೆ. ಅವಳೇ ನನ್ನೆದುರಿಗೆ ಬಂದು ನಿಂತಂತೆ ತೋರುತ್ತದೆ'' ಎಂದನು. ಪುನಃ ಹನುಮಂತನ ಕಡೆಗೆ ತಿರುಗಿ ''ಸೌಮ್ಯ–ಹನುಮಂತ, ಸೀತೆ ಏನೇನು ಹೇಳಿದಳು? ಮತ್ತೆ ಮತ್ತೆ ಹೇಳು. ನನಗೆ ಅವಳ ಸಂದೇಶವು, ಬಾಯಾರಿದವನಿಗೆ ನೀರು ಕೊಟ್ಟಂತೆ ಆಗುವುದು. ಲಕ್ಷ್ಮಣ, ಚೂಡಾಮಣಿಯು ಮಾತ್ರ ಕಾಣುತ್ತಿದೆ. ಸೀತೆಯಿಲ್ಲ. ಇದಕ್ಕಿಂತಲೂ ದುಃಖವಿನ್ನಾವುದು? ಹನುಮಂತ, ನನ್ನ ಪ್ರಿಯಳಿರುವ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗು. ಇನ್ನು ಒಂದು ನಿಮಿಷವೂ ಇಲ್ಲಿರಲಾರೆನು. ರಾಕ್ಷಸರ ಮಧ್ಯದಲ್ಲಿ ಅವಳ ಮುದ್ದುಮುಖವು ಎಂದಿಗೂ ಶೋಭಿಸಲಾರದು. ಹನುಮಂತ, ನನ್ನ ಸೀತೆ ಏನೇನು ಹೇಳಿದ್ದಾಳೆ? ಎಲ್ಲವನ್ನೂ ಹೇಳಿಬಿಡು. ಅವಳ ಮಾತಿನಿಂದಲೇ ನಾನು

ಜೀವವನ್ನು ಹಿಡಿದುಕೊಳ್ಳುವೆನು. ಅಪ್ಪಾ ಹನುಮಂತ, ನನ್ನನ್ನು ಅಗಲಿರುವ ಆ ಸುಂದರಿ ಏನು ಹೇಳಿದಳು? ನನಗೆ ಹೇಳು'' ಎಂದು ವಿರಹಶೋಕಾಕ್ರಾಂತನಾಗಿ ಕಳವಳಿಸುತ್ತ ನುಡಿದನು.

ಅನಂತರ ಹನುಮಂತನು ಎಲ್ಲವನ್ನೂ ಮತ್ತೆ ತಿಳಿಸಿ ಜಾನಕಿಯು ಯಾವ ಯಾವ ಮಾತುಗಳನ್ನಾಡಿದಳೆಂಬುದನ್ನೂ ಹೇಳಿದನು. ''ರಾಘವ, ನನ್ನ ಮಾತನ್ನು ನಂಬು. ದೇವಿಯು ಕುಶಲದಿಂದಿದ್ದಾಳೆ. ಸುಗ್ರೀವ ಮಹಾರಾಜನ ಸ್ನೇಹವು ನಿನಗಾದ ಬಗೆಯನ್ನೂ ವಾನರ ಭಲ್ಲೂಕ ಸೇನೆಗಳ ಪರಾಕ್ರಮವನ್ನೂ ವರ್ಣಿಸಿ ತಿಳಿಸಿದೆನು. ಮಹಾಸಾಗರವನ್ನು ಲಂಘಿಸಿ ಬರುವ ಸಾಮರ್ಥ್ಯವು ಅವರಿಗಿದೆಯೆಂದೂ ಶ್ರೀರಾಮ ಲಕ್ಷ್ಮಣರು ಶತ್ರುಗಳನ್ನು ಸಂಹರಿಸುತ್ತ ಸಿಂಹಗಳಂತೆ ಸದ್ಯದಲ್ಲಿಯೇ ಬರುವರೆಂದೂ ವಾನರವೀರರ ಗರ್ಜನೆಗಳನ್ನು ಕೆಲವೇ ದಿನಗಳಲ್ಲಿ ನೀನು ಕೇಳುವೆಯೆಂದೂ ತಿಳಿಸಿದೆನು. ರಘುನಾಥನು ರಾವಣನನ್ನು ಸಂಹಾರ ಮಾಡಿ ಅರಣ್ಯವಾಸವನ್ನು ಮುಗಿಸಿ ನಿನ್ನನ್ನು ಕರೆದುಕೊಂಡು ಅಯೋಧ್ಯೆಗೆ ಹೋಗಿ ಪಟ್ಟಾಭಿಷಿಕ್ತನಾಗುವುದನ್ನು ಶೀಘ್ರದಲ್ಲಿಯೇ ನೀನು ನೋಡುತ್ತೀಯೆ ಎಂದು ಹೇಳಿದೆನು. ನಾನು ಹೇಳಿದ ಉತ್ಸಾಹದಾಯಕವಾದ ವೀರವಾಣಿಯಿಂದ ಸೀತಾದೇವಿಗೆ ಸಮಾಧಾನವಾಯಿತು. ಆ ದೇವಿಯ ಮನಸ್ಸಿಗೆ ಶಾಂತಿಯು ಲಭಿಸಿತು'' ಎಂದನು.

ಯುದ್ಧಕಾಂಡ

೫೦

ಶ್ರೀರಾಮನಿಂದ ಹನುಮಂತನ ಪ್ರಶಂಸೆ. ಸುಗ್ರೀವನು ಶ್ರೀರಾಮನಿಗೆ ಸಮಾಧಾನ ಹೇಳುವುದು. ವಾನರಸೇನೆಯು ಸಮುದ್ರ ತೀರಕ್ಕೆ ಬಂದು ಸೇರುವುದು.

ಹನುಮಂತನಾಡಿದ ಈ ನುಡಿಯನ್ನು ಕೇಳಿ ಶ್ರೀರಾಮನು ಸಂಪ್ರೀತನಾಗಿ ಇಂತೆಂದನು : ''ಹನುಮಂತನು ಸಾಧಿಸಿರುವ ಕಾರ್ಯ ಬಹುದೊಡ್ಡದು. ಕಷ್ಟಕರವಾದದ್ದು. ಈ ಜಗತ್ತಿನಲ್ಲಿ ಇನ್ನೊಬ್ಬನು ಇದನ್ನು ಸಾಧಿಸಬಲ್ಲನೆಂದು ಊಹಿಸಲೂ ಸಹ ಶಕ್ಯವಲ್ಲ. ನೂರು ಯೋಜನದಗಲದ ಮಹಾಸಾಗರವನ್ನು ದಾಟಬಲ್ಲ ಇನ್ನೊಬ್ಬ ಪುರುಷನನ್ನೇ ನಾನು ಕಾಣೆನು. ಬಲಾಢ್ಯನಾದ ಈ ವೀರನು ಸಮುದ್ರವನ್ನು ಲಂಘಿಸಿ, ತನ್ನ ಪರಾಕ್ರಮವನ್ನೇ ನೆಚ್ಚಿಕೊಂಡು ಲಂಕೆಯೊಳಗೆ ನುಗ್ಗಿದನಲ್ಲವೆ? ರಾವಣಾದಿ ರಾಕ್ಷಸರ ಬಲವನ್ನು ಇವನು ಲಕ್ಷಿಸಲೇ ಇಲ್ಲ. ಸೀತೆಯನ್ನು ನೋಡಿ ರಾಕ್ಷಸರನ್ನು ಮರ್ದಿಸಿ ಲಂಕೆಯನ್ನು ದಹಿಸಿ ಬಂದಿರುವ ಈ ಬಲಾಢ್ಯನಿಗೆ ಸದೃಶರಾದವರು ಯಾರು? ಈ ಪುಣ್ಯಾತ್ಮನಿಂದ ನಾನೂ ಲಕ್ಷ್ಮಣನೂ ಜೀವಹಿಡಿದಂತಾಯಿತು. ರಘುವಂಶವು ಬದುಕಿತು. ಆದರೆ ದೀನನಾದ ನನ್ನ ಮನಸ್ಸನ್ನು ಇದೊಂದು ತೀವ್ರವಾಗಿ ಕೊರೆಯುತ್ತಿದೆ – ಈ ಸಂತೋಷದ ಸುದ್ದಿಯನ್ನು ತಂದಿರುವ ಹನುಮಂತನಿಗೆ ನಾನು ಯಾವ ಬಹುಮಾನವನ್ನು ಕೊಡಲಿ? ಇವನಿಗೆ ಪ್ರಿಯವಾದ ಏನನ್ನು ಮಾಡಲಿ? ನನ್ನ ಅವಸ್ಥೆ ಈ ಪ್ರಕಾರವಾಗಿದೆ. ಹನುಮಂತ, ನನ್ನ ಆನಂದವನ್ನೂ ಮೆಚ್ಚುಗೆಯನ್ನೂ ತೋರಿಸಲು ನನಗಿರುವುದು ಇದೊಂದೇ. ನಿನ್ನನ್ನೊಮ್ಮೆ ಆಲಿಂಗಿಸಿಕೊಳ್ಳುತ್ತೇನೆ'' ಎಂದು ಹೇಳಿ ಆ ದಶರಥನಂದನನು ಹನುಮಂತನನ್ನು ಪ್ರೀತಿಯಿಂದ ಗಟ್ಟಿಯಾಗಿ ಅಪ್ಪಿಕೊಂಡನು. ಶ್ರೀರಾಮನ ಆಲಿಂಗನದಿಂದ ಹನುಮಂತನಿಗೆ ಪರಮಾನಂದವಾಯಿತು. ''ಶ್ರೀರಾಮನ ಆಲಿಂಗನಕ್ಕಿಂತ ಹೆಚ್ಚಿನ ಭಾಗ್ಯ ಇನ್ನಾವುದು?'' ಎಂದುಕೊಂಡನು. ಹೀಗೆ ಸ್ವಲ್ಪ ಹೊತ್ತು ಹನುಮಂತನನ್ನಾಲಿಂಗಿಸಿ ಮೈಮರೆತಿದ್ದ ರಾಘವನು ಆಮೇಲೆ ಸ್ವಲ್ಪ ಚಿಂತಿಸುತ್ತ ಈ ರೀತಿ ನುಡಿದನು : ''ಸೀತೆಯನ್ನು ಹುಡುಕುವ ಕಾರ್ಯವೇನೋ ಹನುಮಂತನಿಂದ ಸಫಲವಾಯಿತು. ಆದರೆ ನಡುವೆ ಘೋರವಾದ ಸಮುದ್ರವಿದೆಯಲ್ಲ? ಅದನ್ನು ನಾವೆಲ್ಲರೂ ದಾಟಿ ಹೋಗುವುದು ಹೇಗೆ?'' ಎಂದು ನುಡಿದು ಧ್ಯಾನಸ್ಥನಾದನು.

ಹೀಗೆ ಚಿಂತಾಕ್ರಾಂತನಾದ ರಾಘವನನ್ನು ನೋಡಿ ಸುಗ್ರೀವನು ''ಶ್ರೀರಾಮ, ಮಹಾವೀರನಾದ ನೀನು ಒಬ್ಬ ಸಾಮಾನ್ಯ ಪುರುಷನಂತೆ ಹೀಗೆ ಕೊರಗಬಹುದೆ? ರಾಘವ, ಧೈರ್ಯವನ್ನು ತಾಳು. ವಿವೇಕಿಯೂ ರಾಜನೀತಿಕೋವಿದನೂ ರಣಪಂಡಿತನೂ ಆದ ನೀನು ಹೀಗೆ ಚಿಂತಿಸಬಾರದು. ಆ ಸಮುದ್ರವನ್ನು ನಮ್ಮ ವಾನರವೀರರು ದಾಟಬಲ್ಲರು. ನಾನು ಸಮುದ್ರಕ್ಕೆ ಸೇತುವೆಯನ್ನಾದರೂ ಕಟ್ಟಿಸಿ ಎಲ್ಲರನ್ನೂ ಲಂಕೆಗೆ ಕರೆದೊಯ್ಯುವೆನು. ಈ ಸಮಯದಲ್ಲಿ ಉತ್ಸಾಹವು ಮುಖ್ಯವಾದದ್ದು. ಉತ್ಸಾಹ ಶಾಲಿಯಾದ ಧೀರನಿಗೆ ಜಯವು ಕಟ್ಟಿಟ್ಟದ್ದು'' ಎಂದನು.

ಸುಗ್ರೀವನ ನುಡಿಯನ್ನು ಕೇಳಿದ ಮೇಲೆ ಕಾಕುತ್ಸ್ಥನು ಹನುಮಂತನ ಕಡೆಗೆ ತಿರುಗಿ ''ಹನುಮಂತ, ಸೇತುವೆಯನ್ನು ಕಟ್ಟಿಯೋ ಅಥವಾ ಸಮುದ್ರವನ್ನು ಒಣಗಿಸಿಯೋ ನಾನು ಲಂಕೆಗೆ ಹೋಗಬಲ್ಲೆ. ಅದಿರಲಿ. ವಾನರೋತ್ತಮ, ಲಂಕೆಯ ರಕ್ಷಣಾವಿಧಾನ ಹೇಗಿದೆ? ರಾಕ್ಷಸರ ಬಲವೆಷ್ಟಿರಬಹುದು?'' ಎಂದು ಕೇಳಿದನು. ಆಗ ಹನುಮಂತನು ತಾನು ಕಂಡಂತೆ ಲಂಕಾನಗರದ ಕೋಟೆ, ಕಂದಕ, ಕಾವಲಾಗಿರುವ ರಾಕ್ಷಸರ ಬಲ–ಮೊದಲಾದ್ದೆಲ್ಲವನ್ನೂ ವಿವರಿಸಿ ಹೇಳಿದನು. ಅನಂತರ ''ಶ್ರೀರಾಮ, ನಾನು ಲಂಕೆಯನ್ನು ಸುಟ್ಟು ಪ್ರಾಕಾರಗಳನ್ನು ಒಡೆದು ಹಾಕಿದ್ದೇನೆ. ಆ ರಾಕ್ಷಸರ ಸಂಖ್ಯೆ ಒಂದು ಕೋಟಿಗಿಂತ ಹೆಚ್ಚಾಗಬಹುದು. ರಾಕ್ಷಸಸೇನೆಯ ಒಂದು ಭಾಗವನ್ನೇ ನಾನು ನಾಶಮಾಡಿದ್ದೇನೆ. ಯಾವುದಾದರೊಂದು ಉಪಾಯದಿಂದ ನಾವು ಕಡಲನ್ನು ದಾಟೋಣ. ಈ ವಾನರವೀರರು ಮಹಾ ಪರಾಕ್ರಮಿಗಳು. ಅಂಗದ, ಮೈಂದ, ದ್ವಿವಿದ, ನಳ, ನೀಲ ಇವರಿಗೆ ಸಮಾನರಾದ ಯೋಧರು ಯಾರು? ಮೊದಲು ನಾವು ಸಮುದ್ರದ ತೀರಕ್ಕೆ ಹೋಗಿ ಸೇರೋಣ. ಈ ಕಪಿಸೇನೆಗಳು ಸರ್ವಸನ್ನದ್ಧತೆಯಿಂದ ಕೂಡಲೇ ಹೊರಡಬೇಕೆಂದು ಆಜ್ಞೆ ಮಾಡು. ಶುಭ ಮುಹೂರ್ತದಲ್ಲಿ ಯುದ್ಧ ಯಾತ್ರೆಯು ಆರಂಭವಾಗಲಿ. ಜಯವು ನಮಗೆ ಸಿದ್ಧ'' ಎಂದನು.

ಆಗ ಮಹಾತೇಜಸ್ವಿಯಾದ ಶ್ರೀರಾಮನು ''ಹನುಮಂತ, ರಾವಣನೂ ಅವನ ಸೇನಾನಿಗಳೂ ಎಷ್ಟೇ ಪರಾಕ್ರಮಿಗಳೇ ಆಗಲಿ, ಅವರನ್ನು ನಾನು ಧ್ವಂಸ ಮಾಡುತ್ತೇನೆ. ಇದು ಸತ್ಯವೆಂದು ತಿಳಿ'' ಎಂದು ನುಡಿದು ಸುಗ್ರೀವನಿಗೆ ಹೀಗೆಂದನು– ''ಮಿತ್ರ–ಸುಗ್ರೀವ, ಈಗ ವಿಜಯ ಸೂಚಕವಾದ ಅಭಿಜಿನ್ಮುಹೂರ್ತವು ಪ್ರಾಪ್ತವಾಗಿದೆ. ಸೂರ್ಯನು ಆಕಾಶದ ಮಧ್ಯವನ್ನಡರಿದ್ದಾನೆ. ಈಗಲೇ ಯುದ್ಧಯಾತ್ರೆಗೆ ಹೊರಡೋಣ. ವಾನರ ಸೇನೆಗೆ ನೀನು ಆಜ್ಞೆಯನ್ನು ನೀಡು. ದುರುಳನಾದ ಆ ರಾವಣನು ಎಲ್ಲಿಗೆ ಹೋಗಿ ತಪ್ಪಿಸಿಕೊಂಡಾನು? ನೋಡಿಬಿಡುವೆನು.

ನನಗೀಗ ಶುಭನಿಮಿತ್ತಗಳಾಗುತ್ತಿವೆ. ರಾವಣನನ್ನು ಕೊಂದು ಜಾನಕಿಯನ್ನು ಬಿಡಿಸಿ ಕರೆತರುವೆನು'' ಎಂದನು. ಅನಂತರ ''ಸುಗ್ರೀವ, ಕೆಲವು ವಾನರರು ಆಕಾಶಕ್ಕೆ ಹಾರಿ ಮಾರ್ಗವನ್ನು ಎಚ್ಚರಿಕೆಯಿಂದ ಪರಿಶೀಲಿಸುತ್ತಾ ಮುಂದೆ ಹೋಗಲಿ. ಅವರ ಹಿಂದೆ ನಿನ್ನ ಸೇನೆ ಹೋಗುತ್ತಿರಲಿ. ಏಕೆಂದರೆ, ಆ ರಾಕ್ಷಸರು ಗಿರಿಕಂದರಗಳಲ್ಲಿ ಅಡಗಿಕೊಂಡು ಥಟ್ಟನೆ ನಮ್ಮ ಮೇಲೆ ಎರಗಬಹುದು'' ಎಂದನು. ಅಂತೆಯೇ ಸುಗ್ರೀವನು ಯಾರು ಯಾರು ಆಕಾಶಮಾರ್ಗದಲ್ಲಿ ಹೋಗಬೇಕೆಂಬುದನ್ನೂ ಸೇನಾಪತಿಗಳಾದ ವಾನರವೀರರು ಎಷ್ಟೆಷ್ಟು ಬಲವನ್ನು ಜೊತೆಗೆ ಕರೆದೊಯ್ಯಬೇಕೆಂಬುದನ್ನೂ ಅವರೆಲ್ಲರಿಗೂ ತಿಳಿಸಿ, ಮುಂದಿನ ವ್ಯವಸ್ಥೆಯನ್ನು ಮಾಡಿದನು.

ಅನಂತರ ವಾನರೇಶ್ವರನಾದ ಸುಗ್ರೀವನ ಆಜ್ಞೆಯಂತೆ ಸಮಸ್ತ ವಾನರ ಯೋಧರೂ ಯುದ್ಧೋತ್ಸಾಹದಿಂದ ದಕ್ಷಿಣದಿಕ್ಕಿಗೆ ಪ್ರಯಾಣ ಮಾಡಿದರು. ಕೋಟಿ ಕೋಟಿ ಸಂಖ್ಯೆಯಲ್ಲಿದ್ದ ಆ ವಾನರ ಸೈನ್ಯದ ನಡುವೆ ಶ್ರೀರಾಮನೂ, ಲಕ್ಷ್ಮಣನೂ, ಸುಗ್ರೀವನೂ ಪ್ರಯಾಣ ಮಾಡಿದರು. ಹನುಮಂತನು ಶ್ರೀರಾಮನನ್ನೂ, ಅಂಗದನು ಲಕ್ಷ್ಮಣನನ್ನೂ ತಮ್ಮ ಹೆಗಲಮೇಲೆ ಹೊತ್ತುಕೊಂಡು ಬೇಗ ಬೇಗನೆ ಹೋಗುತ್ತಿದ್ದರು. ವಾನರ ಯೋಧರಂತೂ ದಾರಿಯಲ್ಲಿ ಕಪಿಚೇಷ್ಟೆಯನ್ನು ಮಾಡುತ್ತಲೇ ಇದ್ದರು. ಅವರಲ್ಲಿ ಕೆಲವರು ಬಳಿಯಲ್ಲಿದ್ದವರನ್ನು ವಿನೋದಕ್ಕಾಗಿ ಇದ್ದಕ್ಕಿದ್ದಂತೆ ಎತ್ತಿ ಹೊರುತ್ತಿದ್ದರು. ಕೆಲವರನ್ನು ಮೇಲಕ್ಕೆ ಎಸೆಯುತ್ತಿದ್ದರು! ಅವರು ಕೆಳಗೆ ಬೀಳುವಷ್ಟರಲ್ಲಿ ಇವರು ಮೇಲೆ ನೆಗೆದು ಆ ವಾನರರನ್ನು ಆತು ಹಿಡಿಯುತ್ತಿದ್ದರು. ಕೆಲವು ಕಪಿಗಳು ಇತರರನ್ನು ತೊಡರುಗಾಲಿಕ್ಕಿ ಬೀಳಿಸುತ್ತಿದ್ದರು! ಇನ್ನು ಕೆಲವರು ಸೆಡ್ಡು ಹೊಡೆದರು. ಕೆಲವರು ದಾರಿಯಲ್ಲಿದ್ದ ಬಂಡೆಗಳನ್ನು ತೋಳುಗಳಿಂದ ಬೀಸಿ ಎಸೆದರು. ಕೆಲವರು ಮರಗಳನ್ನು ಮುರಿದರು. ಹೀಗೆ ವಿನೋದದಿಂದ ಸಾಗುತ್ತಿದ್ದ ಆ ವಾನರವಾಹಿನಿಯು ಎಲ್ಲಿಯೂ ತಂಗದೆ ಪ್ರಯಾಣ ಮಾಡಿತು. ದಾರಿಯಲ್ಲಿದ್ದ ಹಳ್ಳಿಗಳಲ್ಲಿ ವಾಸಿಸುವ ಜನರಿಗೆ ಯಾವ ತೊಂದರೆಯನ್ನೂ ಕೊಡಬಾರದೆಂದು ಶ್ರೀರಾಮನೂ ಸುಗ್ರೀವನೂ ಕಟ್ಟಾಜ್ಞೆಯನ್ನು ನೀಡಿದ್ದರು. ಹೀಗೆ ಕಪಿಸೇನೆಯೊಡನೆ ಪ್ರಯಾಣ ಮಾಡುತ್ತಾ ಶ್ರೀರಾಮಲಕ್ಷ್ಮಣರು ಮಹೇಂದ್ರಗಿರಿಯನ್ನು ತಲುಪಿದರು. ಅನಂತರ ಬೇಗ ಬೇಗನೆ ಪ್ರಯಾಣ ಮಾಡಿ ದಕ್ಷಿಣ ಸಮುದ್ರ ತೀರವನ್ನು ಎಲ್ಲರೂ ಸೇರಿದರು. ಅಪಾರವಾದ ಸಮುದ್ರದ ಜಲರಾಶಿಯನ್ನು ನೋಡಿ ಶ್ರೀರಾಮನು ಸುಗ್ರೀವನಿಗೆ ''ಮಿತ್ರ– ಸುಗ್ರೀವ, ಈಗ ನಮಗೆ ಹಿಂದೊದಗಿದ ಚಿಂತೆಯೇ ಪ್ರಾಪ್ತವಾಯಿತು. ಈ ಮಹಾಸಾಗರವನ್ನು ದಾಟಲು ಯಾವುದಾದರೊಂದು ಉಪಾಯವನ್ನು ಹುಡುಕಬೇಕು. ಅದಕ್ಕಾಗಿ ಮಂತ್ರಾಲೋಚನೆಯನ್ನು ನಡೆಸೋಣ. ವಾನರ ಸೇನೆಯೆಲ್ಲವೂ ಈ

ಸಮುದ್ರ ತೀರದಲ್ಲಿ ತಂಗಲಿ'' ಎಂದು ತಿಳಿಸಿದನು. ಅಂತೆಯೇ ಸುಗ್ರೀವನ ಆಜ್ಞೆಯಂತೆ ಕಪಿಸೇನೆಯು ಅಲ್ಲಿ ಬಿಡಾರ ಹೂಡಿತು.

ಸಮುದ್ರದಲ್ಲಾದರೋ ಬೃಹದಾಕಾರದ ಮೊಸಳೆಗಳೂ ತಿಮಿಂಗಿಲಗಳೂ ಸಂಚರಿಸುತ್ತಿದ್ದವು. ಬಿರುಗಾಳಿಯು ಬಿರ್ರನೆ ಬೀಸುತ್ತಿತ್ತು, ಬಿರುಗಾಳಿಯ ಹೊಡೆತದಿಂದ ಬಿರಿದು ಭೋರ್ಗರೆಯುತ್ತಿದ್ದ ಜಲರಾಶಿಗಳು ಹಾರಿ ಹಾರಿ ಉರುಳುತ್ತಿದ್ದವು. ಅಲೆಗಳ ಏರಿಳಿತಗಳೊಡನೆ ಮೆರೆಯುತ್ತಿದ್ದ ಸಮುದ್ರವನ್ನು ಕಪಿನಾಯಕರು ಉತ್ಸಾಹದಿಂದ ನೋಡುತ್ತಿದ್ದರು.

ಆಮೇಲೆ ನೀಲನು ಸಮುದ್ರದ ಉತ್ತರ ತೀರದಲ್ಲಿ ವ್ಯವಸ್ಥಿತವಾಗಿ ಬಿಡಾರ ಹೂಡಿಸಿದನು. ಯುದ್ಧ ನೀತಿಯನ್ನನುಸರಿಸಿ ಎಚ್ಚರಿಕೆಯಿಂದ ರಕ್ಷಣಾವಿಧಾನವನ್ನು ಗೊತ್ತುಮಾಡಿದನು. ಮೈಂದ ದ್ವಿವಿದರು ಎಲ್ಲಡೆಯೂ ಸಂಚರಿಸುತ್ತ ಸೇನೆಯ ಕಾವಲಾಗಿದ್ದರು. ಇತ್ತ ರಾಘವನು ಸಮುದ್ರವನ್ನು ನೋಡುತ್ತ ಬಳಿಯಲ್ಲಿದ್ದ ಲಕ್ಷ್ಮಣನೊಡನೆ ''ವತ್ಸ-ಲಕ್ಷ್ಮಣ, ಕಾಲವು ಕಳೆದಂತೆ ಶೋಕವು ಯಾರಿಗಾದರೂ ಕಡಿಮೆಯಾಗುತ್ತ ಹೋಗುವುದು. ನನಗಾದರೊ ಸೀತಾವಿರಹದ ಶೋಕವು ದಿನದಿನವೂ ಹೆಚ್ಚುತ್ತಲಿದೆ. ಓ ತಂಗಾಳಿಯೆ, ನನ್ನ ಕಾಂತೆ ಎಲ್ಲಿರುವಳೋ ಆ ದಿಕ್ಕಿನಿಂದ ಬೀಸುತ್ತ ಬಾ! ಅವಳನ್ನು ಸ್ಪರ್ಶಿಸಿ ಬಂದು ನನ್ನನ್ನೂ ಸ್ಪರ್ಶಿಸು. ತಮ್ಮ ಈ ವಿರಹಾಗ್ನಿಯ ಕಾವನ್ನು ತಡೆದುಕೊಳ್ಳಲಾರೆ. ಈ ಸಮುದ್ರದ ನೀರಲ್ಲಿ ಮುಳುಗಿ ಮಲಗಿಬಿಡುವೆನು. ಆಗ ಈ ಮನ್ಮಥಾಗ್ನಿಯು ನನ್ನನ್ನು ಸುಡಲಾರದು. ಹಗೆಗಳನ್ನು ಬಗೆದೊಗೆದು ನಳಿನನೇತ್ರೆಯಾದ ನನ್ನ ಕಾಂತೆಯನ್ನು ಯಾವಾಗ ನೋಡುವೆನು? ಭಾಗ್ಯಲಕ್ಷ್ಮಿಯಂತಿರುವ ಸೀತೆಯನ್ನು ಯಾವಾಗ ಕಾಣುವೆನು?'' ಎಂದು ವಿಲಪಿಸಿದನು. ಲಕ್ಷ್ಮಣನು ಸಮಾಧಾನ ಹೇಳುತ್ತಲೇ ಇದ್ದನು. ಸಂಜೆಯಾಯಿತು. ಆ ರಾಜಪುತ್ರರು ಸಂಧ್ಯಾವಂದನೆಯನ್ನಾಚರಿಸಿ ಮುಂದಿನ ಕರ್ತವ್ಯದಲ್ಲಿ ತೊಡಗಿದರು.

೫೧

ರಾವಣನು ಮಂತ್ರಾಲೋಚನೆಗಾಗಿ ಸಭೆಯನ್ನು ಕರೆಯುವುದು. ವಿಭೀಷಣನ ಹಿತೋಪದೇಶ

ಇತ್ತ ಲಂಕಾನಗರದಲ್ಲಿ ಆಂಜನೇಯನು ನಡೆಸಿದ ಭಯಂಕರವೂ ಅದ್ಭುತವೂ ಆದ ಸಾಹಸಕೃತ್ಯವನ್ನು ಕಂಡು ರಾವಣನು ಕಳವಳಕ್ಕೀಡಾದನು. ಅವನೊಂದು ರಾಜಸಭೆಯನ್ನು ಸೇರಿಸಿ ರಾಕ್ಷಸ ನಾಯಕರನ್ನು ಕುರಿತು ಲಜ್ಜೆಯಿಂದ ಸಂಕೋಚ

ಪಡುತ್ತ ಹೀಗೆಂದನು : ''ರಾಕ್ಷಸವೀರರೆ, ವಾನರನೊಬ್ಬನು ನನ್ನ ನಗರದೊಳಗೆ ನುಗ್ಗಿ ನಗರವನ್ನೇ ಕ್ಷೋಭೆಗೆ ಈಡುಮಾಡಿದನು. ಸೀತೆಯನ್ನು ಪ್ರತ್ಯಕ್ಷವಾಗಿ ನೋಡಿ ಹೋದನು. ಬಲಾಢ್ಯರಾದ ರಾಕ್ಷಸಯೋಧರನ್ನು ಒಬ್ಬನೇ ಕೊಂದು ಹೊರಟು ಹೋಗಿದ್ದಾನೆ. ಈಗ ನಾನು ಏನು ಮಾಡಲಿ? ಮುಂದೆ ಯುಕ್ತವಾದ ಮಾರ್ಗ ಯಾವುದು? ಮಂತ್ರಾಲೋಚನೆಯನ್ನು ಗಟ್ಟಿಗರಾದ ನೀವು ಸರಿಯಾಗಿ ವಿಮರ್ಶಿಸಿರಿ. ಇನ್ನು ರಾಮನು ಸಾವಿರಾರು ಮಂದಿ ಕಪಿವೀರರೊಡನೆ ನಮ್ಮ ಲಂಕಾಪುರಿಯ ಮೇಲೆ ಧಾಳಿ ಮಾಡಲು ಬರಬಹುದು. ಯಾವುದೊ ಉಪಾಯದಿಂದ ಸಮುದ್ರವನ್ನೂ ದಾಟಬಹುದು. ಮುಂದೇನು ಮಾಡುವುದು, ಹೇಳಿರಿ?'' ಎಂದನು. ಆಗ ಸಭೆಯಲ್ಲಿದ್ದ ಬಲಾಢ್ಯರಾದ ಆ ರಾಕ್ಷಸರು ತಮ್ಮ ದೊರೆಯಾದ ರಾವಣನಿಗೆ ಕೈಮುಗಿದು ಹೀಗೆಂದರು : ''ಮಹಾರಾಜ, ಇಲ್ಲಿಗೆ ಬಂದಿದ್ದ ವಾನರನು ಒಬ್ಬ ಕಪಿಯೆಂದು ನಾವು ಅಲಕ್ಷಿಸಿದ್ದರಿಂದ ಹಾಗೆ ನಡೆದು ಹೋಯಿತು. ಇನ್ನು ನಾವು ಎಚ್ಚರಿಕೆಯಿಂದಿರಬೇಕು. ನಮ್ಮಲ್ಲಿ ಮಹಾವೀರರಾದ ರಾಕ್ಷಸನಾಯಕರಿದ್ದಾರೆ. ನಿನ್ನ ಸಾಮರ್ಥ್ಯವೇನು ಸಾಮಾನ್ಯವೇ? ಕುಬೇರನ ಯಕ್ಷಪರಿವಾರದೊಡನೆ ಹೋರಾಡಿ ಪುಷ್ಪಕವಿಮಾನವನ್ನೇ ಕಿತ್ತುಕೊಂಡು ಬಂದಿದ್ದೀಯೆ. ಕಾಲಕೇಯರೆಂಬ ಶೂರರಾದ ದಾನವರು ವರಬಲದಿಂದ ಕೊಬ್ಬಿದವರು. ಅವರನ್ನು ನೀನು ಕೈಸೆರೆ ಹಿಡಿದಿಲ್ಲವೆ? ದಿಕ್ಪಾಲಕನ್ನೇ ಸೋಲಿಸಿರುವ ನಿನಗೆ ಮನುಷ್ಯಮಾತ್ರನಾದ ಈ ರಾಮನು ಯಾವ ಲೆಕ್ಕದವನು? ನಿನ್ನ ಪುತ್ರನಾದ ಇಂದ್ರಜಿತು ಒಬ್ಬನೇ ಸಮಸ್ತವಾನರರನ್ನೂ ಕೊಂದು ಅವರ ಹುಟ್ಟಡಗಿಸಬಲ್ಲನು. ದೇವೇಂದ್ರನನ್ನೇ ಸೆರೆಹಿಡಿದು ತಂದ ಮೇಘನಾದನಿಗೆ ಸಮನಾದ ವೀರನು ಈ ಪೃಥ್ವಿಯಲ್ಲಿ ಯಾವನಿದ್ದಾನೆ? ನೀನು ಸ್ವಲ್ಪವೂ ಚಿಂತಿಸಬೇಡ. ನಿನಗೆ ಜಯವು ಸಿದ್ಧ'' ಎಂದರು. ಆಮೇಲೆ ಪ್ರಹಸ್ತ, ವಜ್ರದಂಷ್ಟ್ರ, ನಿಕುಂಭ – ಮುಂತಾದ ರಾಕ್ಷಸ ನಾಯಕರು ತಮ್ಮ ಪರಾಕ್ರಮವನ್ನು ಹೊಗಳಿಕೊಂಡರು. ಹೀಗೆ ವೀರರಾದ ರಾಕ್ಷಸರು ಎದ್ದು ಎದ್ದು ನಿಂತು ತಮ್ಮ ಪರಾಕ್ರಮವನ್ನು ಕೊಚ್ಚಿಕೊಳ್ಳುತ್ತಿರುವಾಗ ಮಹಾಬುದ್ಧಿಶಾಲಿಯಾದ ವಿಭೀಷಣನು ಅವರನ್ನು ತಡೆದು ಇಂತೆಂದನು. ''ಎಲೈ ಮಿತ್ರರೆ, ನೂರು ಯೋಜನದಗಲದ ಸಮುದ್ರವನ್ನು ಹನುಮಂತನೊಬ್ಬನೇ ದಾಟಿಬಂದು ಇಷ್ಟೊಂದು ಸಾಹಸವನ್ನು ನಡೆಸಿ ಸುಖವಾಗಿ ಮರಳಿಹೋದನಲ್ಲ, ಇದು ಸಾಧ್ಯವಾದೀತೆಂದು ಯಾವನು ಊಹಿಸಿಯಾನು? ವೈರಿಗಳ ಸೇನಾಬಲವೂ ಪರಾಕ್ರಮವೂ ಕಲ್ಪನೆಗೆ ಮೀರಿದ್ದು. ನಾವು ದುಡುಕುವುದು ತರವಲ್ಲ. ಖರ, ದೂಷಣ, ತ್ರಿಶಿರ ಮೊದಲಾದ ವೀರರನ್ನೂ ಹದಿನಾಲ್ಕು ಸಾವಿರ ರಾಕ್ಷಸ ಸೇನೆಯನ್ನೂ ರಾಮನೊಬ್ಬನೇ ಏಕಾಕಿಯಾಗಿ ಕೊಂದನೆಂದು ನಮ್ಮ ಶೂರ್ಪಣಖಿಯೇ ಹೇಳಿದ್ದಾಳೆ. ಇಷ್ಟಾಗಿ ನಾವು ಹೀಗೆ ಯುದ್ಧ ಮಾಡುವ ನಿಮಿತ್ತವಾದರೂ ಏನು? ನಮ್ಮ

ಮಹಾರಾಜನಾದ ರಾವಣನಿಗೆ ರಾಮನಿಂದಾದ ಅಪಕಾರವಾದರೂ ಯಾವುದು? ನಮ್ಮ ಪ್ರಭುವಾದ ರಾವಣನು ರಾಮನ ಪತ್ನಿಯನ್ನು ಜನಸ್ಥಾನದಿಂದ ಅಪಹರಿಸಿ ತಂದದ್ದು ಯುಕ್ತವಲ್ಲ. ಪರಸ್ತ್ರೀ ಸ್ಪರ್ಶವು ಘೋರವಾದ ಪಾಪವಲ್ಲವೆ? ಆದ್ದರಿಂದ ಅಪಹೃತಳಾಗಿರುವ ವೈದೇಹಿಯನ್ನು ಈಗ ಹಿಂದಿರುಗಿಸುವುದೇ ಸರಿಯಾದ ಮಾರ್ಗ. ಜಗಳಕ್ಕಾಗಿ ಕಾಲುಕರೆಯುವುದರಿಂದ ಏನು ಪ್ರಯೋಜನ? ರಾಮನೊಡನೆ ವ್ಯರ್ಥವಾಗಿ ವೈರವನ್ನು ಬೆಳೆಸುವುದು ನಮಗೆ ಯೋಗ್ಯವಲ್ಲ'' ಎಂದನು. ಆಮೇಲೆ ರಾವಣನು ಕಡೆಗೆ ತಿರುಗಿ ಕೈಮುಗಿದು ವಿನಯದಿಂದ ''ಮಹಾರಾಜ ನಿನ್ನನ್ನು ಸೆರೆಗೊಡ್ಡಿ ಬೇಡಿಕೊಳ್ಳುತ್ತೇನೆ. ನನ್ನ ಮಾತನ್ನು ನಡೆಸು. ಮೈಥಿಲಿಯನ್ನು ರಾಮನಿಗೆ ಒಪ್ಪಿಸಿಬಿಡು. ಪ್ರಭು, ಸಿಟ್ಟು ಮಾಡಬೇಡ. ಧರ್ಮಮಾರ್ಗವನ್ನವಲಂಬಿಸು. ಪರಸ್ತ್ರೀಯನ್ನು ಅಪಹರಿಸುವುದು ದೊಡ್ಡ ಪಾಪಕೃತ್ಯವಲ್ಲವೆ? ಪ್ರಜೆಗಳಿಗೆ ಆದರ್ಶನಾಗಿರಬೇಕಾದ ರಾಜನು ಈ ಕಾರ್ಯವನ್ನು ಮಾಡಬಾರದು. ಧರ್ಮಮಾರ್ಗವನ್ನವಲಂಬಿಸು. ಯಾವಾಗಲೂ ಧರ್ಮಕ್ಕೆ ಜಯ ಒದಗುವುದು. ಪ್ರಸನ್ನನಾಗು. ಮಕ್ಕಳು ಮಡದಿಯರೊಡನೆ ಇನ್ನೂ ಕೆಲವು ಕಾಲ ಬದುಕಿರೋಣ'' ಎಂದು ಪ್ರಾರ್ಥಿಸಿದನು. ವಿಭೀಷಣನ ಮಾತನ್ನು ಕೇಳಿ ಆ ರಾಕ್ಷಸೇಶ್ವರನು ಗಪ್ಪನೆ ಸಭೆಯನ್ನು ಮುಗಿಸಿ ಅರಮನೆಯೊಳಗೆ ಹೊರಟುಹೋದನು.

ವಿಭೀಷಣನು ತನ್ನ ಮನಸ್ಸಿನಲ್ಲಿ ''ರಾಜಸಭೆಯಲ್ಲಿ ಅಣ್ಣನಿಗೆ ಹಿತವಾದವನ್ನು ಹೇಳಿದ್ದು ಸರಿಯಾಗಲಿಲ್ಲ. ಏಕಾಂತದಲ್ಲಿಯೇ ಅವನನ್ನು ಕಂಡು ವಿವರವಾಗಿ ಮಾತಾಡಬೇಕು. ನಾವೇ ಅಧರ್ಮದ ಕಾರ್ಯಕ್ಕೆ ಕೈಹಾಕಿ, ತನ್ನ ಪಾಡಿಗೆ ತಾನಿದ್ದ ರಾಮನಿಗೆ ಕೇಡುಮಾಡಿ, ಮತ್ತೆ ಅವನೊಡನೆ ಹೋರಾಡಬೇಕೆಂಬುದು ಯಾವ ನ್ಯಾಯ?'' ಎಂದುಕೊಂಡನು.

ಪರಾಕ್ರಮಿಯಾದ ಆ ಧೀರನು ಮಾರನೆಯ ದಿನ ಬೆಳಗಾಗುತ್ತಲೇ ರಾವಣನ ಅರಮನೆಗೆ ತೆರಳಿದನು. ಒಳಗೆ ಹೋಗಿ ಸಿಂಹಾಸನದಲ್ಲಿ ಕುಳಿತಿದ್ದ ರಾವಣನಿಗೆ ವಂದಿಸಿ, ರಾವಣನು ಕಣ್ಣುಸನ್ನೆಯಿಂದ ತೋರಿಸಿದ ಸುವರ್ಣಪೀಠದಲ್ಲಿ ಕುಳಿತುಕೊಂಡನು. ಅಲ್ಲಿ ರಾವಣನ ಆಪ್ತಸಚಿವರಲ್ಲದೆ ಬೇರೆ ಯಾರೂ ಇರಲಿಲ್ಲ. ಅದು ಸರಿಯಾದ ಸ್ಥಳವೆಂದು ನಿಶ್ಚಯಿಸಿ ತನ್ನ ಅಣ್ಣನನ್ನು ಒಳ್ಳೆಯ ಮಾತಿನಿಂದ ಶ್ಲಾಘಿಸಿ ಹೀಗೆಂದನು : ''ಅಣ್ಣ, ನಿನ್ನ ರಾಜಧಾನಿಗೆ ಸೀತೆಯು ಎಂದು ಬಂದು ಸೇರಿದಳೋ ಅಂದಿನಿಂದಲೇ ಇಲ್ಲಿ ಕೆಟ್ಟ ಶಕುನಗಳಾಗುತ್ತಿವೆ. ಅಗ್ನಿಗೆ ಎಂದಿನಂತೆ ಹವಿಸ್ಸನ್ನರ್ಪಿಸಿ ಪ್ರಜ್ವಲಿಸುವಂತೆ ಮಾಡಿದರೂ ಅದು ಹೊಗೆಯುಗುಳುತ್ತದೆಯೇ ಹೊರತು ಸರಿಯಾಗಿ

ಉರಿಯುವುದಿಲ್ಲ. ಅಗ್ನಿಶಾಲೆಗಳಲ್ಲಿ ಹಾವುಗಳು ಕಾಣಿಸಿಕೊಳ್ಳುತ್ತಿವೆ. ಕುದುರೆಗಳು ದೈನ್ಯದಿಂದ ಕೆನೆಯುತ್ತವೆ. ಹದ್ದುಗಳು ರಾಜಧಾನಿಯ ಮೇಲೆ ಮಂಡಲಾಕಾರವಾಗಿ ಸುತ್ತುತ್ತವೆ. ಇವೇ ಮೊದಲಾದ ದುಃಶಕುನಗಳನ್ನು ನಾನು ಕಾಣುತ್ತಿದ್ದೇನೆ. ಅಣ್ಣಾ, ನಾನು ಹೇಡಿಯಂತೆ ಈ ಮಾತುಗಳನ್ನಾಡುತ್ತಿಲ್ಲ. ನೀನು ವೈದೇಹಿಯನ್ನು ರಾಮನಿಗೆ ಬಿಟ್ಟುಕೊಡಬೇಕು. ಅದೇ ಸರಿಯಾದ ಧರ್ಮಮಾರ್ಗ. ಪರಸ್ತ್ರೀಯರನ್ನು ಕಾಮಿಸುವುದು ಅಧರ್ಮ. ನಿನ್ನ ಸಕಲ ಮಂತ್ರಿಗಳಿಗೂ ಈ ವಿಚಾರವು ತಿಳಿದಿದ್ದರೂ ಹೇಳಲು ಹೆದರಿ ಹಿಂಜರಿದು ಸುಮ್ಮನಿದ್ದಾರೆ. ನಿನ್ನ ಹಿತವನ್ನೇ ಬಯಸುವ ನಾನು ಇದನ್ನು ನಿನಗೆ ತಿಳಿಸಲೇಬೇಕು. ಇದು ನನ್ನ ಕರ್ತವ್ಯ'' ಎಂದನು.

ವಿಭೀಷಣನ ಹಿತವಾದವನ್ನು ಕೇಳಿ ರಾವಣನ ರಕ್ತವು ಬಿಸಿಯೇರಿತು. ಆ ಹಟಮಾರಿಯು ''ಈ ಜಗತ್ತಿನಲ್ಲಿ ಯಾರಿಂದಲೂ ನನಗೆ ಹೆದರಿಕೆಯಿಲ್ಲ. ರಾಮನಿಗೆ ಸೀತೆಯು ಎಂದಿಗೂ ದಕ್ಕಲಾರಳು. ಇಂದ್ರನೊಡನೆ ದೇವತೆಗಳ ಪಡೆಯನ್ನು ಕಟ್ಟಿಕೊಂಡು ಬಂದರೂ ರಾಮನು ನನ್ನೆದುರಿಗೆ ನಿಲ್ಲಲಾರ'' ಎಂದು ಉತ್ತರವನ್ನಿತ್ತನು. ಅನಂತರ ಯಾವ ಮಾತನ್ನಾಡಲೂ ಅವಕಾಶವನ್ನು ಕೊಡದೆ ವಿಭೀಷಣನನ್ನು ನಿಷ್ಠುರಭಾವದಿಂದ ಮನೆಗೆ ಕಳಿಸಿದನು.

೫೨

ರಾವಣನ ಎರಡನೆಯ ಮಂತ್ರಾಲೋಚನಾಸಭೆ, ಕುಂಭಕರ್ಣನ ಹೇಳಿಕೆ. ವಿಭೀಷಣನ ಬುದ್ಧಿವಾದ. ರಾವಣನ ಧಿಕ್ಕಾರ. ವಿಭೀಷಣನು ರಾವಣನನ್ನು ಪರಿತ್ಯಜಿಸಿ ಶ್ರೀರಾಮನ ಬಳಿಗೆ ಬರುವುದು.

ಹೀಗೆ ರಾವಣನು ವಿಭೀಷಣನ ಹಿತವಾದವನ್ನು ಮನಸ್ಸಿಗೆ ತೆಗೆದುಕೊಳ್ಳದೆ ಸೀತಾದೇವಿಯಲ್ಲಿ ಆಸಕ್ತನಾಗಿ ಸ್ವಲ್ಪಕಾಲ ನಿಶ್ಚಿಂತೆಯಿಂದಿದ್ದನು. ಆದರೂ ಅವನ ಮನಸ್ಸು ತಳಮಳಿಸುತ್ತಲೇ ಇತ್ತು. ಶ್ರೀರಾಮನು ವಾನರಸೇನಾಸಮೇತನಾಗಿ ಸಮುದ್ರದ ಆಚೆಯ ದಡದಲ್ಲಿ ತಂಗಿರುವುದನ್ನು ಕೇಳಿ ಯುದ್ಧವಾಗುವುದು ನಿಶ್ಚಯವೆಂದು ರಾವಣನು ಭಾವಿಸಿದನು. ಮಂತ್ರಾಲೋಚನೆಗೋಸ್ಕರ ಮತ್ತೊಂದು ದೊಡ್ಡ ಸಭೆಯನ್ನು ಕರೆದನು. ಎಲ್ಲ ಸೇನಾಪತಿಗಳೂ ರಾವಣನ ಆಪ್ತಮಿತ್ರರೂ ಬಂದು ಸೇರಿದರು. ವಿಭೀಷಣನು ಸಭಾಸ್ಥಾನಕ್ಕೆ ಬಂದು ತನ್ನ ಪೀಠದಲ್ಲಿ ಕುಳಿತನು. ರಾವಣನು ಪ್ರಹಸ್ತನನ್ನು ಕುರಿತು '' ಸೇನಾಪತಿ, ಶಸ್ತ್ರಾಸ್ತ್ರ ವಿಶಾರದರಾದ ಚತುರಂಗ ಬಲದ ಯೋಧರು ನಗರರಕ್ಷಣೆಯನ್ನು ಎಚ್ಚರದಿಂದ ಮಾಡುತ್ತಿರುವಂತೆ ಕಟ್ಟುನಿಟ್ಟಾದ

ಆಜ್ಞೆಯನ್ನು ಹೊರಡಿಸು'' ಎಂದು ತಿಳಿಸಿದನು. ಅನಂತರ ರಾವಣನು ಸಭೆಯನ್ನು ಉದ್ದೇಶಿಸಿ ಹೀಗೆಂದನು. ''ಮಿತ್ರರೆ, ಧರ್ಮಾರ್ಥ ಕಾಮಗಳ ವಿಷಯದಲ್ಲಿ ಕ್ಲಿಷ್ಟ ಪರಿಸ್ಥಿತಿ ಉಂಟಾದಾಗ ಏನುಮಾಡಬೇಕೆಂದು ನಿರ್ಣಯಿಸಿ ಹೇಳಲು ನೀವು ಶಕ್ತರಾಗಿದ್ದೀರಿ. ಈಗ ಒದಗಿರುವ ಸಂದರ್ಭವೇನೆಂಬುದು ನಿಮಗೆ ಗೊತ್ತಿದೆ. ನನ್ನ ತಮ್ಮನಾದ ಕುಂಭಕರ್ಣನು ಮಾತ್ರ ನಿದ್ರಾವಶನಾಗಿದ್ದುದರಿಂದ ಅವನಿಗೆ ಏನೂ ತಿಳಿದಿಲ್ಲ. ಅವನೀಗ ಎದ್ದು ಈ ಸಭೆಗೆ ಬಂದಿದ್ದಾನೆ. ''ತಮ್ಮ–ಕುಂಭಕರ್ಣ, ದಂಡಕಾರಣ್ಯಕ್ಕೆ ರಾಮನೆಂಬವನು ತನ್ನ ಪತ್ನಿಯಾದ ಸೀತೆಯೆಂಬ ಪರಮಸುಂದರಿಯನ್ನು ಯಾವುದೋ ನಿಮಿತ್ತದಿಂದ ಕರೆತಂದನು. ಅವನ ತಮ್ಮನಾದ ಲಕ್ಷ್ಮಣನೂ ಜೊತೆಗಿದ್ದಾನೆ. ಸೀತೆಯ ಸೌಂದರ್ಯಕ್ಕೆ ನಾನು ಮಾರುಹೋದೆನು. ಅಂತಹ ಚೆಲುವೆಯನ್ನು ಇದುವರೆಗೆ ನಾನು ಕಂಡಿಲ್ಲ. ನಾನು ಕಾಮವಶನಾಗಿ ಅವಳನ್ನು ಅಪಹರಿಸಿಕೊಂಡು ಬಂದಿದ್ದೇನೆ. ನಾನು ಎಷ್ಟುವಿಧವಾಗಿ ಕೇಳಿಕೊಂಡರೂ ಇನ್ನೂ ಅವಳು ನನ್ನ ವಶಳಾಗಲಿಲ್ಲ. ಹತ್ತು ತಿಂಗಳಾದವು. ಇನ್ನೂ ಎರಡು ತಿಂಗಳು ಮಾತ್ರ ಅವಧಿಯನ್ನು ಕೊಟ್ಟಿದ್ದೆನು. ಈಗ ರಾಮನು ಸುಗ್ರೀವನ ಸೇನೆಯೊಡನೆ ಬಂದು ಸಮುದ್ರದ ಉತ್ತರತೀರದಲ್ಲಿ ಬೀಡುಬಿಟ್ಟಿದ್ದಾನೆ. ಒಂದು ಕಪಿಯು ಹೇಗೋ ಇಲ್ಲಿಗೆ ಬಂದು ಸೀತೆಯನ್ನು ನೋಡಿ ಲಂಕೆಯಲ್ಲಿ ಹಾವಳಿಯನ್ನೆಬ್ಬಿಸಿ ಹೊರಟುಹೋಯಿತು. ಆ ಕಪಿಯೇ ರಾಮನಿಗೆ ಸೀತೆಯಿಲ್ಲಿದ್ದಾಳೆಂದು ತಿಳಿಸಿರಬೇಕು. ರಾಮಲಕ್ಷ್ಮಣರು ಬಹಳ ಶೂರರೆಂದು ಜನರು ಹೇಳುತ್ತಾರೆ. ಆದರೆ ಆ ಮನುಷ್ಯಜಾತಿಯವರಿಂದ ನನಗೆ ಯಾವ ಭಯವೂ ಇಲ್ಲ. ಇನ್ನು ವಾನರರು ಯಾವ ಲೆಕ್ಕಕ್ಕೆ? ಸೀತೆಯನ್ನಂತೂ ರಾಮನಿಗೊಪ್ಪಿಸಲು ನಾನು ಎಂದಿಗೂ ಸಮ್ಮತಿಸುವುದಿಲ್ಲ.ಆ ಸೋದರರಿಬ್ಬರನ್ನೂ ಕೊಲ್ಲಲೇಬೇಕು. ನೀವೆಲ್ಲರೂ ನನಗೆ ಬೆಂಬಲವಾಗಿದ್ದೀರಿ. ಅಲ್ಲದೆ ವಿಶಾಲವಾದ ಈ ಸಮುದ್ರವನ್ನು ಅವನಾದರೂ ಹೇಗೆ ದಾಟಿ ಬರುತ್ತಾನೆ? ಒಂದು ವೇಳೆ ಯುದ್ಧವು ಘಟಿಸಬಹುದು. ಈಗೇನು ಮಾಡಬೇಕೆಂಬುದನ್ನು ನಿಶ್ಚಯಿಸಿ ಹೇಳಿರಿ'' ಎಂದನು.

ಹೀಗೆ ರಾವಣನು ಹಲುಬುತ್ತಿರುವುದನ್ನು ಕೇಳಿ ಕುಂಭಕರ್ಣನಿಗೆ ಸಿಟ್ಟುಬಂದಿತು. ಅವನು ಅಣ್ಣನಾದ ರಾವಣನನ್ನು ದಿಟ್ಟಿಸಿ ನೋಡುತ್ತ ಹೀಗೆಂದನು : ''ನಾನು ನಿದ್ರೆಯಿಂದ ಎದ್ದಮೇಲೆ ನಿನ್ನ ಈ ಹುಡುಗಾಟಿಕೆಯನ್ನು ಸ್ವಲ್ಪ ಮಟ್ಟಿಗೆ ಕೇಳಿದ್ದೇನೆ. ನೀನು ದಿಢೀರನೆ ಹೋಗಿ ರಾಮಲಕ್ಷ್ಮಣರನ್ನು ವಂಚಿಸಿ ಸೀತೆಯನ್ನು ಅಪಹರಿಸಿ ತಂದೆಯಲ್ಲ, ಆಗ ಯಾರೊಡನೆ ಸಮಾಲೋಚನೆ ಮಾಡಿದ್ದೆ? ಮಹಾರಾಜ, ನಿನಗೆ ಅನುಚಿತವಾದ ಸಾಹಸಕಾರ್ಯವಿದು. ಈ ವಿಷಯವನ್ನು ಕುರಿತು ಮೊದಲೇ ನಮ್ಮೊಡನೆ ಸಮಾಲೋಚಿಸಬೇಕಾಗಿತ್ತು. ಯಾವ ರಾಜನು ಮಂತ್ರಾಲೋಚನೆ ಮಾಡಿ

ಮುಂದಿನ ಕಾರ್ಯವನ್ನು ನಿಶ್ಚಯಿಸುವನೋ ಅವನು ಪಶ್ಚಾತ್ತಾಪ ಪಡಬೇಕಾಗು ವುದಿಲ್ಲ. ಮಹಾರಾಜ, ಊಹಾತೀತವಾದ ಒಂದು ದೊಡ್ಡ ಸಾಹಸ ಕೃತ್ಯಕ್ಕೆ ದುಡುಕಿ ಕೈಹಾಕಿಬಿಟ್ಟೆಯಲ್ಲ! ರಾಮನು ಆಗಲೇ ನಿನ್ನನ್ನು ಕೊಲ್ಲದೆ ಇದ್ದುದು ನಮ್ಮ ಅದೃಷ್ಟ.'' ಈ ಮಾತನ್ನು ಕೇಳಿ ರಾವಣನ ಹುಬ್ಬು ಗಂಟಿಕ್ಕಿತು. ಮುಖವು ಕ್ರೂರವಾಯಿತು. ಅದನ್ನರಿತ ಕುಂಭಕರ್ಣನು ''ಒಳ್ಳೆಯದು. ಆದದ್ದು ಆಗಿಹೋಯಿತು. ನಿನ್ನ ತಪ್ಪನ್ನು ನಾನು ಸರಿಪಡಿಸುವೆನು! ನೀನು ಚಿಂತೆಯನ್ನು ತೊರೆದು ನೆಮ್ಮದಿಯಿಂದಿರು. ನಾನು ಯುದ್ಧಕ್ಕಿಳಿದು ರಾಮಲಕ್ಷ್ಮಣರನ್ನು ಸದೆಬಡಿಯುವೆನು. ವಾನರರನ್ನು ಬಡಿದು ಕೊಂದು ಸಮುದ್ರಕ್ಕೆಸೆಯುವೆನು. ನೀನು ನಿಶ್ಚಿಂತೆಯಿಂದ ಯಥೇಚ್ಛವಾಗಿ ಹೆಂಡವನ್ನು ಕುಡಿಯುತ್ತ ಅಂತಃಪುರದಲ್ಲಿ ಉಲ್ಲಾಸದಿಂದಿರು'' ಎಂದನು.

ರಾವಣನಿಗೆ ಕುಂಭಕರ್ಣನ ಮಾತಿನಿಂದ ಅಸಮಾಧಾನವಾಯಿತೆಂಬುದು ಮಹಾಪಾರ್ಶ್ವನಿಗೆ ತಿಳಿಯಿತು. ಅವನು ತನ್ನ ಪರಾಕ್ರಮವನ್ನು ವಿವರಿಸಿ 'ರಾಕ್ಷಸ ರೆಲ್ಲರೂ ನಿನಗೆ ಬೆಂಬಲವಾಗಿದ್ದಾರೆ' ಎಂದು ರಾವಣನಿಗೆ ಹೇಳಿದನು ಮತ್ತು ''ಮಹಾರಾಜ, ನಿನಗೆ ಸೀತೆಯಲ್ಲಿ ಅಷ್ಟು ವ್ಯಾಮೋಹವಿರುವುದಾದರೆ ಅವಳನ್ನು ಎಳೆತಂದು ನಿನ್ನ ಹಾಸಿಗೆಯನ್ನೇರಿಸು'' ಎಂದನು. ಅದಕ್ಕೆ ರಾವಣನು ''ಇಲ್ಲ, ನಾನು ಬಲಾತ್ಕರಿಸಲಾರೆ. ಒಂದಾನೊಂದು ಕಾರಣದಿಂದ ಬ್ರಹ್ಮದೇವನು ಕುಪಿತನಾಗಿ 'ರಾವಣ, ನೀನು ಪರಸ್ತ್ರೀಯನ್ನು ಬಲಾತ್ಕರಿಸಿದರೆ ನಿನ್ನ ತಲೆ ಸಾವಿರ ಹೋಳಾಗಿ ಸೀಳಿಹೋಗಲಿ' ಎಂದು ಶಪಿಸಿದ್ದಾನೆ. ಆ ಶಾಪದ ಹೆದರಿಕೆಯಿಂದ ನಾನು ಸೀತೆಯನ್ನು ಬಲಾತ್ಕರಿಸುವಂತಿಲ್ಲ. ರಾಮನಿಗೆ ನನ್ನ ಪರಾಕ್ರಮವು ಗೊತ್ತಿಲ್ಲ. ಮಹಾಪಾರ್ಶ್ವ, ಅವನು ಸಿಂಹವನ್ನು ಕೆಣಕಲು ಬರುತ್ತಿದ್ದಾನೆ. ಸರ್ಪಗಳಂತೆ ಭೋರ್ಗರೆಯುವ ನನ್ನ ಶರಗಳ ಹೊಡೆತವನ್ನು ಅವನು ಕಂಡಿಲ್ಲ. ಆದ್ದರಿಂದ ಯುದ್ಧಕ್ಕೆ ಬರುತ್ತಿದ್ದಾನೆ. ಆದಿತ್ಯನು ನಕ್ಷತ್ರಗಳ ಪ್ರಭೆಯನ್ನು ಅಡಗಿಸುವಂತೆ ನಾನು ಆತನ ಬಲವನ್ನು ಹೀರಿಬಿಡುವೆನು. ದೇವೇಂದ್ರನಿಗೇ ನಾನು ಜಗ್ಗಿದವನಲ್ಲ. ಈ ಮನುಷ್ಯನಿಗೆ ಅಂಜುವೆನೆ? ನನ್ನ ಭುಜಬಲದಿಂದಲೇ ಈ ಲಂಕಾನಗರಿಯನ್ನು ಕುಬೇರನಿಂದ ಕಸಿದುಕೊಂಡಿದ್ದೇನೆ'' ಎಂದನು.

ಈ ರೀತಿಯಾದ ಸಂಭಾಷಣೆಯನ್ನು ಕೇಳುತ್ತಿದ್ದ ವಿಭೀಷಣನಿಗೆ ಸುಮ್ಮನಿರ ಲಾಗಲಿಲ್ಲ. ಬೃಹಸ್ಪತಿಯಂತೆ ಬುದ್ಧಿವಿಶಾರದನಾದ ಆತನು ಮತ್ತೆ ತನ್ನ ಹಿತವಾದವನ್ನು ಹೇಳತೊಡಗಿದನು. ''ಮಹಾರಾಜ, ಸೀತೆಯೆಂಬ ಘೋರ ಸರ್ಪಿಣಿಯನ್ನು ತಂದು ಏಕೆ ಕೊರಳಿಗೆ ಸುತ್ತಿಕೊಂಡಿದ್ದೀಯೆ? ಆ ವಾನರರು ಲಂಕಾನಗರಿಯನ್ನು

ಮುತ್ತುವುದರೊಳಗೆ ಮೈಥಿಲಿಯನ್ನು ರಾಮನಿಗೆ ಒಪ್ಪಿಸಿಬಿಡು. ರಾಮಬಾಣಗಳ ಅಪ್ರತಿಮವಾದ ಬಲವೇನೆಂಬುದನ್ನು ನಾನು ಬಲ್ಲೆ. ಪತ್ನಿಯ ಅಪಹರಣದಿಂದ ಅತ್ಯಂತ ಕ್ರುದ್ಧನಾಗಿರುವ ರಾಮನು ಯುದ್ಧಕ್ಕೆ ನಿಂತರೆ ಅವನನ್ನು ಈ ಜಗತ್ತಿನಲ್ಲಿ ಯಾರೂ ಎದುರಿಸಲಾರರು. ಈ ಮಹಾಪಾರ್ಶ್ವ, ಮಹೋದರ, ನಿಕುಂಭ, ಕುಂಭ, ಅತಿಕಾಯ ಇವರಾರೂ ಲಕ್ಷ್ಮಣನನ್ನು ಎದುರಿಸಲಾರರು. ರಾಮನಿಗೆ ವಿರುದ್ಧವಾಗಿ ನಡೆದರೆ ಯಾರೂ ಬದುಕಿ ಉಳಿಯಲಾರರು. ಪರಸ್ತ್ರೀಯ ಅಪಹರಣವೆಂಬ ಅಧರ್ಮವು ನಮ್ಮನ್ನು ಕವಿದುಕೊಂಡಿರುವಾಗ ನಮ್ಮ ತೇಜಸ್ಸು ಎಂದಿಗೂ ಮೆರೆಯಲಾರದು. ಅಧರ್ಮಕ್ಕೆ ಎಂದಿಗೂ ಜಯವಾಗದು'' ಎಂದು ಹೇಳಿದನು. ಧರ್ಮಾರ್ಥ ಕಾಮಗಳಲ್ಲಿ ನಿಶ್ಚಿತ ಜ್ಞಾನವಿದ್ದ ವಿಭೀಷಣನು ತನ್ನ ಅಣ್ಣನಾದ ರಾವಣನಿಗೆ ಹಿತವನ್ನೇ ಬಯಸುತ್ತಿದ್ದನು. ಆದ್ದರಿಂದ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ, ರಾವಣನ ಅಂಜಿಕೆಯೂ ಇಲ್ಲದೆ ಒಳ್ಳೆಯ ಮಾತನ್ನೇ ಮತ್ತೆ ಮತ್ತೆ ಆಡಿದನು. ಆಗ ರಾಕ್ಷಸನಾಯಕರಿಗೂ ವಿಭೀಷಣನಿಗೂ ವಿವಾದವೇ ನಡೆಯಿತು. ಇಂದ್ರಜಿತು ಎದ್ದು ನಿಂತು, ತನ್ನ ಚಿಕ್ಕಪ್ಪನಾದ ವಿಭೀಷಣನಿಗೆ ಅವಾಚ್ಯವಾದ ಮಾತುಗಳನ್ನಾಡಿ ಹಂಗಿಸಿದನು. ಆದರೂ ವಿಭೀಷಣನು ಧೃತಿಗೆಡದೆ ಇಂದ್ರಜಿತುವನ್ನು ಗದರಿಸಿ ತನ್ನ ಅಣ್ಣನ ಕಡೆಗೆ ತಿರುಗಿ ''ಅಣ್ಣ, ನಾನು ಮತ್ತೊಮ್ಮೆ ಕೈ ಮುಗಿದು ಬೇಡಿಕೊಳ್ಳುತ್ತೇನೆ. ನಿಷ್ಕಾರಣವಾಗಿ ಈ ಅಧರ್ಮದ ಯುದ್ಧಕ್ಕೆ ಕೈ ಹಾಕದಿರು. ವ್ಯರ್ಥವಾಗಿ ಲಂಕೆಯ ಪ್ರಜೆಗಳಿಗೆ ಕಷ್ಟವನ್ನು ತಂದೊಡ್ಡಬೇಡ. ತಪ್ಪು ಮಾಡಿದವನು ಅನಂತರದಲ್ಲಾದರೂ ಪಶ್ಚಾತ್ತಾಪ ಪಟ್ಟು ಅದನ್ನು ಸರಿಪಡಿಸಿಕೊಳ್ಳುವುದೇ ಸತ್ಪುರುಷಲಕ್ಷಣ. ರಾಜನು ಮಾಡಿದ ಅಪರಾಧಕ್ಕೆ ಪ್ರಜೆಗಳು ದಂಡವನ್ನು ತೆರಬಾರದು. ತಲೆಬಾಗಿ ಬೇಡುತ್ತೇನೆ. ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡು. ನಾವು ನಿಶ್ಚಿಂತೆಯಿಂದ ಸುಖವಾಗಿ ಬಾಳೋಣ'' ಎಂದನು.

ವಿಭೀಷಣನ ಸಾಂತ್ವನ ವಾಕ್ಯವು ಕಾದ ಕಬ್ಬಿಣಕ್ಕೆ ನೀರನ್ನು ಸಿಂಪಡಿಸಿ ದಂತಾಯಿತು. ರಾವಣನ ಕ್ರೋಧವು ಉಕ್ಕಿತು. ಅವನು ದುರದುರನೆ ವಿಭೀಷಣನನ್ನು ನೋಡುತ್ತ ''ಎಲಾ ರಾಕ್ಷಸ, ಶತ್ರುವಿನೊಡನಾದರೂ ಬಾಳಬಹುದು. ಕೆರಳಿದ ಸರ್ಪದೊಡನಾದರೂ ಇರಬಹುದು. ಆದರೆ ಶತ್ರುಪಕ್ಷವನ್ನು ವಹಿಸಿ ಮಿತ್ರನಂತೆ ನಟಿಸುವ ಪುರುಷಾಧಮನೊಡನೆ ಬಾಳುವುದು ಕಷ್ಟ! ನೀನು ನನಗೆ ದಾಯಾದಿ. ದಾಯಾದಿಗಳು ಹೇಗಿರುತ್ತಾರೆಂಬುದು ನನಗೆ ಗೊತ್ತು. ಆನೆಗಳು ತಮ್ಮ ಜಾತಿಯ ಸಲಗವನ್ನು ಹಿಡಿದು ಬೇಟೆಗಾರನಿಗೆ ಒಪ್ಪಿಸುವುದಿಲ್ಲವೆ? ದಾಯಾದಿಗಳಲ್ಲಿ ಹೊಟ್ಟೆಕಿಚ್ಚು, ದ್ರೋಹ ಮೊದಲಾದದ್ದು ಒಳಗೊಳಗೇ ಅಡಗಿರುತ್ತದೆ. ಥೂ

ಅಯೋಗ್ಯ! ಇನ್ನೊಬ್ಬನು ಈ ಬಗೆಯ ಮಾತನ್ನು ನನ್ನೆದುರಿಗೆ ಆಡಿದ್ದರೆ, ಒಂದು ಕ್ಷಣವೂ ಅವನು ಜೀವಸಹಿತ ಉಳಿಯುತ್ತಿರಲಿಲ್ಲ. ನೀಚ, ಕುಲಗೇಡಿ. ನಿನಗೆ ಧಿಕ್ಕಾರ! ಇಲ್ಲಿಂದ ತೊಲಗಿ ಹೋಗು'' ಎಂದನು. ವಿಭೀಷಣನು ರಾವಣನ ಈ ಪರುಷೋಕ್ತಿಗಳನ್ನು ತಡೆದುಕೊಳ್ಳಲಾರದೆ ಹೋದನು. ಅವನು ಸಂತಪ್ತನಾಗಿ ಒಡನೆಯೇ ಗದೆಯನ್ನು ಹಿಡಿದು ಎದ್ದುನಿಂತು ಅಂತರಿಕ್ಷಕ್ಕೆ ಹಾರಿನಿಂತನು. ಅವನ ನಾಲ್ವರು ಮಂತ್ರಿಗಳೂ ವಿಭೀಷಣನ ಜೊತೆಯಲ್ಲಿ ಆಕಾಶಕ್ಕೆ ಅಡರಿದರು. ವಿಭೀಷಣನು ಗಗನದಲ್ಲಿ ನಿಂತು ರಾವಣನ ಕಡೆಗೆ ತಿರುಗಿ ಕ್ರೋಧದಿಂದ ''ಮಹಾರಾಜ, ನೀನು ನನಗೆ ಅಣ್ಣನಾಗಿದ್ದೀಯೆ. ಪೂಜ್ಯನಾಗಿದ್ದೀಯೆ. ನಿನಗೆ ಏನೇನು ತೋರುವುದೋ ಅದೆಲ್ಲವನ್ನೂ ಹೇಳಿ ನನ್ನನ್ನು ಬೈಯಬಹುದು. ನನಗೆ ನೀನು ತಂದೆಗೆ ಸಮಾನನಾದ್ದರಿಂದ ನಿನ್ನ ಹಿತವನ್ನು ಬಯಸಿಯೇ ನೀತಿ ಸಮ್ಮತವಾದ ಮಾತನ್ನಾಡಿದ್ದೇನೆ. ನಿನ್ನ ಹಿತಕ್ಕಾಗಿ ಮತ್ತೆ ಮತ್ತೆ ಹಿತವಾದವನ್ನು ಹೇಳಿದೆನು. ಮಹಾರಾಜ, ಕೇವಲ ಪ್ರಿಯವಾದ ಮಾತುಗಳನ್ನಾಡತಕ್ಕವರು ಸುಲಭವಾಗಿ ಸಿಗುತ್ತಾರೆ. ಅಪ್ರಿಯವಾದರೂ ಪಥ್ಯವಾದ ನುಡಿಯನ್ನು ಹೇಳತಕ್ಕವರು ಮಾತ್ರ ದುರ್ಲಭ. ಕಾಲಪಾಶವು ನಿನ್ನ ಕೊರಳಿಗೆ ಸುತ್ತಿರುವುದನ್ನು ಕಂಡು ನನಗೆ ಸುಮ್ಮನಿರಲಾಗಲಿಲ್ಲ. ರಾಮನ ದೇದೀಪ್ಯಮಾನಗಳಾದ ನಿಶಿತಾಸ್ತ್ರಗಳಿಂದ ನೀನು ಹತನಾಗುವುದನ್ನು ನೋಡಲು ನನಗೆ ಇಷ್ಟವಾಗಲಿಲ್ಲ. ನಿನ್ನ ಹಿತವನ್ನು ಬಯಸಿ ನಾನು ಹೇಳಿದ ಮಾತಿನಲ್ಲಿ ಅತಿರೇಕವಿದ್ದರೆ ದಯವಿಟ್ಟು ಮನ್ನಿಸು. ನೀನು ನನಗೆ ಅಣ್ಣ-ಗುರು. ಇನ್ನು ನಿನ್ನ ಪ್ರಾಣವನ್ನುಳಿಸಿಕೊಳ್ಳಲು ಪ್ರಯತ್ನ ಮಾಡು. ನಿನ್ನ ರಾಜಧಾನಿಯನ್ನೂ ಪ್ರಜೆಗಳನ್ನೂ ಉಳಿಸಿಕೊ. ಆಯುಸ್ಸು ಮುಗಿಯುತ್ತಬಂದಿರುವ ಜನರು ಆಪ್ತರ ಹಿತೋಪದೇಶವನ್ನು ಗಮನಿಸುವುದಿಲ್ಲ. ನಾನು ಹೊರಡು ವೆನು. ನಿನಗೆ ಶುಭವಾಗಲಿ. ನನ್ನನ್ನು ಪರಿತ್ಯಜಿಸಿ ನೆಮ್ಮದಿಯಿಂದ ಬಾಳು'' ಎಂದನು. ಅನಂತರ ವಿಭೀಷಣನು ತನ್ನ ನಾಲ್ವರು ಮಂತ್ರಿಗಳೊಡನೆ ಅಲ್ಲಿಂದ ಹೊರಟು, ಶ್ರೀರಾಮನು ಲಕ್ಷ್ಮಣಸಮೇತನಾಗಿದ್ದ ಸ್ಥಳಕ್ಕೆ ನೇರವಾಗಿ ಬಂದು ಬಿಟ್ಟನು.

೫೩

ವಿಭೀಷಣನ ಶರಣಾಗತಿ. ಶ್ರೀರಾಮನಿಂದ ಅಭಯಪ್ರದಾನ. ವಿಭೀಷಣನಿಗೆ ಸಮುದ್ರ ಜಲದಿಂದ ಪಟ್ಟಾಭಿಷೇಕ

ರಾವಣಾನುಜನಾದ ವಿಭೀಷಣನು ಸುಗ್ರೀವನ ಸೇನೆಯಿದ್ದಲ್ಲಿಗೆ ಆಕಾಶಮಾರ್ಗದಲ್ಲಿ ಬಂದನು. ಗದಾಪಾಣಿಯಾದ ಆ ವೀರನು ವಜ್ರಾಯುಧವನ್ನು ಹಿಡಿದ ದೇವೇಂದ್ರನಂತೆ ಕಂಗೊಳಿಸುತ್ತ ಪರಾಕ್ರಮಿಗಳಾದ ನಾಲ್ವರು ಮಂತ್ರಿಗಳೊಡನೆ

ಬಂದು ಆಕಾಶದಲ್ಲಿ ನಿಂತು ಸುಗ್ರೀವನ ವಾನರ ಸೇನೆಯನ್ನು ನೋಡುತ್ತಿದ್ದನು. ಆಗ ಸುಗ್ರೀವನೇ ಮೊದಲಾದ ಕಪಿವೀರರು 'ಈತನು ಯಾರಿರಬಹುದು?' ಎಂದು ಕುತೂಹಲದಿಂದ ನೋಡುತ್ತಿರುವಾಗ, ವಿಭೀಷಣನು ''ಎಲೈ ವಾನರೋತ್ತಮರೆ, ರಾಕ್ಷಸೇಶ್ವರನಾದ ರಾವಣನು ಸೀತೆಯನ್ನು ಅಪಹರಿಸಿ ತಂದಿದ್ದಾನೆ. ನಾನು ಆತನ ತಮ್ಮ. ನನ್ನ ಹೆಸರು ವಿಭೀಷಣ. ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸಬೇಕೆಂದು ನಾನು ನನ್ನ ಅಣ್ಣನಿಗೆ ಬುದ್ಧಿವಾದವನ್ನು ಹೇಳಿದೆನು. ಆ ದುಷ್ಟನು ನನ್ನ ಉಪದೇಶವನ್ನು ಅಲಕ್ಷಿಸಿ ನನಗೆ ಕೆಟ್ಟಮಾತುಗಳನ್ನಾಡಿ ಅವಮಾನಿಸಿದ್ದಾನೆ. ಆದ್ದರಿಂದ, ವಾನರರೆ, ನಾನು ಶ್ರೀರಾಮನಿಗೆ ಶರಣಾಗತನಾಗಿ ಬಂದಿದ್ದೇನೆ. ನನ್ನ ಮಡದಿ ಮಕ್ಕಳನ್ನು ಬಿಟ್ಟು ಈ ನನ್ನ ಆಪ್ತರೊಡನೆ ಶರಣಾಗತನಾಗಿದ್ದೇನೆ. ಸರ್ವಲೋಕಶರಣ್ಯನೂ ಮಹಾಪುರುಷನೂ ಆದ ರಾಘವನಿಗೆ ನನ್ನ ವಿಷಯವನ್ನು ಅರಿಕೆಮಾಡಿರಿ'' ಎಂದು ಗಂಭೀರಧ್ವನಿಯಿಂದ ಹೇಳಿದನು. ಒಡನೆಯೇ ಸುಗ್ರೀವನು ಧಾವಿಸುತ್ತ ಶ್ರೀರಾಮನ ಬಳಿಗೆ ಹೋಗಿ, ''ಶ್ರೀರಾಮ, ರಾವಣನ ತಮ್ಮನಾದ ವಿಭೀಷಣನೆಂಬವನು ನಾಲ್ವರು ರಾಕ್ಷಸರೊಡನೆ ನಿನಗೆ ಶರಣಾಗತನಾಗಲು ಬಂದಿದ್ದಾನೆ. ರಾಘವ, ನಿನಗೆ ಶುಭವಾಗಲಿ. ಈ ರಾಕ್ಷಸರು ಮಾಯಾವಿಗಳು. ಇವರನ್ನು ಎಂದಿಗೂ ನಂಬಬಾರದು. ಈತನು ನಿಸ್ಸಂಶಯವಾಗಿ ಕುಟಿಲಬುದ್ಧಿಯಿಂದ ನಮ್ಮೊಡನೆ ಸೇರಿಕೊಳ್ಳಲು ಬಂದಿದ್ದಾನೆ. ಇವನು ರಾವಣನ ಗೂಢಚಾರನೇ ಹೌದೆಂದು ನನ್ನ ಅಭಿಪ್ರಾಯ. ಆದ್ದರಿಂದ ಈ ಐವರನ್ನೂ ಹಿಡಿದು ಉಗ್ರದಂಡನೆಯನ್ನು ವಿಧಿಸುವಂತೆ ನನಗೆ ಆಜ್ಞಾಪಿಸು'' ಎಂದನು. ಆಗ ಶ್ರೀರಾಮಚಂದ್ರನು ಸಾವಧಾನವಾಗಿ ಸುಗ್ರೀವನ ವಚನವನ್ನಾಲಿಸಿ ಬಳಿಯಲ್ಲಿದ್ದ ಕಪಿನಾಯಕರನ್ನು ಕುರಿತು, ''ಮಿತ್ರರೆ, ಕಪಿರಾಜನಾದ ಸುಗ್ರೀವನು ಹೇಳಿದ ಈ ಮಾತನ್ನು ನೀವೆಲ್ಲರೂ ಕೇಳಿದ್ದೀರಿ. ಸುಗ್ರೀವನ ನುಡಿ ಯುಕ್ತಿಯುಕ್ತವೂ ಅರ್ಥಗರ್ಭಿತವೂ ಆದದ್ದು. ಈಗ ನಾನು ಏನು ಮಾಡಬೇಕೆಂಬುದು ನಿಮ್ಮ ಅಭಿಪ್ರಾಯ?'' ಎಂದು ಕೇಳಿದನು. ಶ್ರೀರಾಮನ ಹಿತೈಷಿಗಳಾದ ಆ ವಾನರೋತ್ತಮರು ''ರಘುನಾಥ, ಈ ಮೂರು ಲೋಕಗಳಲ್ಲಿಯೂ ನಿನಗೆ ತಿಳಿಯದ ವಿಷಯವಿಲ್ಲ. ಕೇವಲ ಸೌಹಾರ್ದದಿಂದ ನಮ್ಮ ಸಲಹೆಯನ್ನು ಕೇಳುತ್ತಿದ್ದೀಯೆ. ಈ ಕಪಿನಾಯಕರಲ್ಲಿ ಒಬ್ಬೊಬ್ಬನೂ ತನ್ನ ಅಭಿಪ್ರಾಯವನ್ನು ತಿಳಿಸಲಿ'' ಎಂದರು. ಆಗ ಪ್ರಾಜ್ಞನಾದ ಅಂಗದನು ಮುಂದೆ ಬಂದು ''ರಘೋತ್ತಮ, ವಿಭೀಷಣನು ಶತ್ರುಪಕ್ಷದಿಂದ ಬಂದಿದ್ದಾನೆ. ತಟ್ಟನೆ ಅವನನ್ನು ನಂಬಕೂಡದು. ಗುಣದೋಷಗಳನ್ನು ವಿಮರ್ಶಿಸಬೇಕಾಗಿದೆ'' ಎಂದನು. ಹೀಗೆ ಕೆಲವರು ವಿಭೀಷಣನನ್ನು ಪರೀಕ್ಷಿಸ ಬೇಕೆಂದೂ, ಕೆಲವರು ಪರೀಕ್ಷಿಸಬೇಕಾದ್ದಿಲ್ಲ ಅವನು ಶತ್ರುಪಕ್ಷದವನಾದ್ದರಿಂದ

ಸೇರಿಸಿಕೊಳ್ಳಲೇಬಾರದು ಎಂದೂ ಹೇಳಿದರು. ಅನಂತರ ಹನುಮಂತನು ವಿಭೀಷಣನನ್ನು ಬಲ್ಲವನಾಗಿರಬೇಕೆಂಬ ಅಭಿಪ್ರಾಯದಿಂದ ರಾಘವನು ಹನುಮಂತನ ಮುಖವನ್ನು ನೋಡಿದನು. ಹನುಮಂತನು ಮುಂದೆಬಂದು ''ಶ್ರೀರಾಮ, ಈ ವಿಚಾರದಲ್ಲಿ ಯಾವುದನ್ನೂ ನಾನು ನಿರ್ಧರಿಸಿ ಹೇಳಲಾರೆ. ನಾನು ರಾವಣನ ಸಭೆಗೆ ಹೋದಾಗ ಈತನು ನೀತಿಯುಕ್ತವಾಗಿಯೇ ಮಾತಾಡಿದನು. ಆದರೆ ಈಗ ಅವನ ಉದ್ದೇಶವೇನಿರಬಹುದೆಂದು ಹೇಳುವುದು ಕಷ್ಟ. ಅವನು ರಾಜ್ಯಕಾಮಿಯಾಗಿ ಸ್ವಾರ್ಥದಿಂದ ನಿಜವಾಗಿಯೂ ರಾವಣನನ್ನು ತ್ಯಜಿಸಿ ಬಂದಿರಬಹುದು. ನಿನ್ನ ಪರಾಕ್ರಮವೇನೆಂಬುದು ಆತನಿಗೆ ಗೊತ್ತಿದೆ. ಅಥವಾ ಒಂದುವೇಳೆ ಗೂಢಚಾರನಾಗಿ ಬಂದಿರಲೂ ಬಹುದು'' ಎಂದು ಹೇಳಿದನು. ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿಯಿಂದ ಮಾತಾಡಿದರೇ ಹೊರತು ನಿರ್ಧಾರವನ್ನು ಹೇಳಲಿಲ್ಲ. ಆಗ ಸುಗ್ರೀವನು ''ಶ್ರೀರಾಮ, ಇಂಥ ವಿಪತ್ತಿನಲ್ಲಿ ಸಿಕ್ಕಿರುವಾಗ ಅಣ್ಣನನ್ನು ತ್ಯಜಿಸಿ ಬಂದವನು ಈ ರಾಕ್ಷಸ. ಸಮಯ ಬಂದಾಗ ಯಾರನ್ನು ತಾನೇ ಇವನು ಬಿಟ್ಟುಹೋಗದೇ ಇದ್ದಾನು? ಇಂಥವನನ್ನು ಸೇರಿಸಿಕೊಳ್ಳಬಾರದು'' ಎಂದನು. ಆಮೇಲೆ ಶ್ರೀರಾಮನು ಎಲ್ಲರ ಮುಖವನ್ನೂ ನೋಡಿ ಮುಗುಳ್ನಗೆಯನ್ನು ಬೀರುತ್ತ ತನ್ನ ನಿರ್ಧಾರವನ್ನು ತಿಳಿಸಿದನು. ''ಮಿತ್ರರೆ, ನೀವೆಲ್ಲರೂ ನನಗೆ ಆಪ್ತರಾಗಿ ಒಳ್ಳೆಯ ಸಲಹೆಗಳನ್ನೇ ನೀಡಿದ್ದೀರಿ. ಶತ್ರುಗಳಲ್ಲಿ ಅನೇಕ ವಿಧದವರಿರುತ್ತಾರೆ. ಬಹಳ ಎಚ್ಚರಿಕೆಯಿಂದ ನಾವು ಇರಬೇಕಾದದ್ದು ಆವಶ್ಯಕವೇ ಸರಿ. ನನ್ನ ಅಭಿಪ್ರಾಯ ಹೀಗಿದೆ–ವಿಭೀಷಣನು ರಾವಣನ ದಾಯಾದಿ. ಬಹುಶಃ ರಾಜ್ಯಾಪೇಕ್ಷೆಯಿಂದ ರಾವಣನನ್ನು ತ್ಯಜಿಸಿ ಬಂದಿರಬೇಕು. ಅವನನ್ನು ನಾವು ಸೇರಿಸಿಕೊಂಡರೆ ಯುದ್ಧದಲ್ಲಿ ನಮಗೆ ಪ್ರಯೋಜನವೇ ಉಂಟು. ರಾಕ್ಷಸರ ಮಾಯೆಯನ್ನು ಈತನು ಬಲ್ಲನು. ಸುಗ್ರೀವ, ಈ ರಾಕ್ಷಸನು ವಂಚನೆಯಿಂದ ಭೇದೋಪಾಯವನ್ನವಲಂಬಿಸಿ ನಮಗೆ ದ್ರೋಹವನ್ನೇ ಬಗೆದಾನು ಎಂದು ನೀನು ಚಿಂತಿಸುತ್ತಿರುವುದು ಯುಕ್ತವೇ ಹೌದು. ಆದರೆ ಈತನಿಂದ ನಮಗೆ ಯಾವ ಅಪಕಾರವಾದೀತು? ಅದನ್ನು ನಮ್ಮ ಪರಾಕ್ರಮದಿಂದಲೇ ಎದುರಿಸಬಹುದು'' ಎಂದನು. ಸುಗ್ರೀವನು ತಲೆಯಾಡಿಸುತ್ತ ''ರಾಘವ, ಈ ರಾಕ್ಷಸರೆಲ್ಲರೂ ಕುಟಿಲ ಬುದ್ಧಿಯವರು. ಆಪ್ತನಂತೆ ನಮ್ಮೊಡನೆ ಸೇರಿಕೊಂಡು ನನ್ನನ್ನೂ ನಿನ್ನನ್ನೂ ಲಕ್ಷ್ಮಣನನ್ನೂ ಸಂಹರಿಸುವುದೇ ಈತನ ಉದ್ದೇಶವಾಗಿದೆ. ಇವನನ್ನು ಹಿಡಿದು ಉಗ್ರವಾಗಿ ದಂಡಿಸೋಣ'' ಎಂದನು. ಅವೆಲ್ಲವನ್ನೂ ಕೇಳಿ ಶ್ರೀರಾಮಚಂದ್ರನು ಲಕ್ಷ್ಮಣನ ಮುಖವನ್ನು ನೋಡಿ ಸುಗ್ರೀವನ ಕಡೆಗೆ ತಿರುಗಿ ಗಂಭೀರ ಧ್ವನಿಯಿಂದ ಇಂತೆಂದನು– ''ಕಪಿರಾಜ–ಸುಗ್ರೀವ, ನೀನು ನನಗೆ ಪರಮ ಮಿತ್ರನಾದವನು. ನನ್ನ ಹಿತಕ್ಕಾಗಿಯೇ

ಈ ರೀತಿಯಾಗಿ ಹೇಳುತ್ತಿದ್ದೀಯೆ. ಆದರೆ ನನ್ನ ವ್ರತವು ಹೀಗಿದೆ. ಯಾವನೇ ಆಗಿರಲಿ, ಎಂಥ ಸಂದರ್ಭವೇ ಬಂದಿರಲಿ, ಶತ್ರುವಾದವನೂ ಸಹ ನನ್ನ ಬಳಿಗೆ ಬಂದು ಶರಣಾಗತನಾಗಿ ''ನಾನು ನಿನ್ನವನು; ಶರಣಾಗಿದ್ದೇನೆ'' ಎಂದು ಹೇಳಿದರೆ ಆತನನ್ನು ನಾನು ರಕ್ಷಿಸುತ್ತೇನೆ. ಇದು ನನ್ನ ನಿಶ್ಚಿತವಾದ ವ್ರತ. ಇನ್ನು ಈ ರಾಕ್ಷಸರಿಂದ ನನಗೆ ಕೇಡಾಗಬಹುದೆಂದು ನೀನು ಶಂಕಿಸುತ್ತಿದ್ದೀಯೆ. ವಾನರೇಶ್ವರ, ಇಲ್ಲಿ ನೋಡು. ನಾನು ಮನಸ್ಸು ಮಾಡಿದರೆ ರಾವಣನೇ ಮೊದಲಾದ ಸಕಲ ರಾಕ್ಷಸರನ್ನೂ ಕಿರುಬೆರಳಿನಿಂದ ಸದೆಬಡಿದು ಕೊಂದುಹಾಕಬಲ್ಲೆನು. ಈ ಜಗತ್ತಿನಲ್ಲಿ ಯಾರ ಭಯವೂ ನನಗಿಲ್ಲ. ಸುಗ್ರೀವ, ವಿಭೀಷಣನಿಗೆ ನಾನು ಅಭಯವನ್ನಿತ್ತಿದ್ದೇನೆ. ಅವನನ್ನು ಕರೆದುಕೊಂಡು ಬಾ'' ಎಂದು ಆದೇಶಿಸಿದನು. ಯಾರೂ ಎದುರು ಮಾತಾಡಲಿಲ್ಲ. ಸುಗ್ರೀವನು ವಿಸ್ಮಿತನಾಗಿ ''ಧರ್ಮಜ್ಞ-ಜಗನ್ನಾಥ, ನಿನ್ನ ಈ ನಿಲುವಿನಲ್ಲಿ ಅಚ್ಚರಿ ಏನಿದೆ? ನೀನು ನಿರ್ಣಯಿಸಿ ದಂತೆ ವಿಭೀಷಣನು ಪರಿಶುದ್ಧ ಚಿತ್ತನೆಂದೇ ನನ್ನ ಅಂತರಾತ್ಮಕ್ಕೆ ಹೊಳೆಯುತ್ತಿದೆ. ನಿನ್ನ ಆಜ್ಞೆಯಂತೆ ಆತನು ನಮ್ಮ ಮಿತ್ರನಾಗಲಿ'' ಎಂದನು.

ತರುವಾಯ ಸುಗ್ರೀವನೇ ಹೋಗಿ ವಿಭೀಷಣನನ್ನು ಕಂಡು ಶ್ರೀರಾಮನ ಬಳಿಗೆ ಬರುವಂತೆ ಆಹ್ವಾನಿಸಿದನು. ವಿಭೀಷಣನು ಭಕ್ತಿನಮ್ರನಾಗಿ ಭೂಮಿಯ ಕಡೆಗೆ ನೋಡುತ್ತ ಆಕಾಶದಿಂದ ಕೆಳಗಿಳಿದು ತನ್ನ ನಾಲ್ವರು ರಾಕ್ಷಸರೊಡನೆ ಬಂದು ಶ್ರೀರಾಮನ ಪಾದಗಳಿಗೆ ವಂದಿಸಿದನು. ಮಂದಹಾಸದಿಂದ ಕಂಗೊಳಿಸುತ್ತಿದ್ದ ರಾಘವನನ್ನು ಕುರಿತು ವಿಭೀಷಣನು ''ಶ್ರೀರಾಮ, ನಾನು ರಾವಣನ ತಮ್ಮ. ಅವನಿಂದ ಅವಮಾನಿತನಾಗಿದ್ದೇನೆ. ಲಂಕೆಯಲ್ಲಿ ಸಕಲ ಸಂಪತ್ತನ್ನೂ ಬಿಟ್ಟು ಬಂದು ನಿನಗೆ ಶರಣಾಗಿದ್ದೇನೆ. ನನ್ನ ಜೀವಿತ ನನ್ನ ಸೌಖ್ಯ-ಎಲ್ಲವೂ ನಿನಗೆ ಸೇರಿದ್ದು'' ಎಂದು ವಿಜ್ಞಾಪಿಸಿದನು. ಕಾಕುತ್ಸ್ಥನು ಮೃದುನುಡಿಗಳಿಂದ ವಿಭೀಷಣನನ್ನು ಸಂತೈಸಿ ''ವಿಭೀಷಣ, ನಿನಗೆ ಅಭಯವನ್ನಿತ್ತಿದ್ದೇನೆ. ನಮ್ಮೊಡನೆ ಸಹಕರಿಸಿ ಮುಂದಿನ ಕಾರ್ಯದಲ್ಲಿ ಸಹಾಯಕನಾಗಿರು'' ಎಂದನು. ಆಮೇಲೆ ರಾಕ್ಷಸರ ಬಲಾಬಲ ಗಳೇನೆಂಬುದನ್ನೂ, ಲಂಕೆಯ ರಕ್ಷಣಾ ವಿಧಾನಗಳನ್ನೂ ಕೇಳಿ ವಿಭೀಷಣನಿಂದ ಎಲ್ಲವನ್ನೂ ತಿಳಿದುಕೊಂಡನು. ಅದೆಲ್ಲವನ್ನೂ ಕೇಳಿದ ಮೇಲೆ ''ವಿಭೀಷಣ, ರಾವಣನ ಬಲಪರಾಕ್ರಮಗಳು ಅಸಾಧಾರಣವಾದವು'' ಎಂದು ನೀನು ವಿವರಿಸಿದ್ದೀಯೆ. ರಾವಣನ ಸಾಹಸಕೃತ್ಯಗಳೆಲ್ಲವನ್ನೂ ನೀನು ತಿಳಿಸಿದ್ದೀಯೆ. ಇಲ್ಲಿ ಕೇಳು. ಈ ರಾವಣನು ಪಾತಾಳಕ್ಕಿಳಿಯಲಿ, ಬ್ರಹ್ಮನಿಗೆ ಶರಣಾಗಲಿ, ಅವನನ್ನು ರಣರಂಗದಲ್ಲಿ ಧ್ವಂಸ ಮಾಡದೇ ನಾನು ಅಯೋಧ್ಯೆಯ ಬಳಿಗೆ ಹೋಗುವುದಿಲ್ಲ, ಬಂಧು ಬಳಗಗಳಿಂದ ಸಹಿತನಾದ ಆ ದುಷ್ಟನನ್ನು ಸಂಹರಿಸಿ ಲಂಕಾರಾಜ್ಯದಲ್ಲಿ ನಿನಗೆ ಪಟ್ಟಾಭಿಷೇಕ

ಮಾಡುವೆನು! ಇದು ನನ್ನ ಪ್ರತಿಜ್ಞೆ'' ಎಂದು ನುಡಿದು ಲಕ್ಷ್ಮಣನನ್ನು ಕುರಿತು ''ಲಕ್ಷ್ಮಣ, ಸಮುದ್ರದಿಂದ ಜಲವನ್ನು ತಂದು ಈ ವಿಭೀಷಣನಿಗೆ ಅಭಿಷೇಕ ಮಾಡು. ಈತನು ಲಂಕಾಧಿಪತಿಯಾದ ರಾಕ್ಷಸರಾಜನೆಂದು ಘೋಷಿಸು'' ಎಂದು ಆದೇಶ ವನ್ನಿತ್ತನು. ಅಂತೆಯೇ ಸೌಮಿತ್ರಿಯು ಸಮುದ್ರ ಜಲವನ್ನು ತಂದು ವಿಭೀಷಣನಿಗೆ ಅಭಿಷೇಕ ಮಾಡಿ ಆತನೇ ಲಂಕೇಶ್ವರನೆಂದು ಘೋಷಿಸಿದನು. ಅದೆಲ್ಲವನ್ನೂ ನೋಡುತ್ತಿದ್ದ ಕಪಿವೀರರು ಹರ್ಷೋಲ್ಲಾಸದಿಂದ ಶ್ರೀರಾಮನ ಧೀರಕೃತ್ಯವನ್ನು ಕೊಂಡಾಡಿದನು. ಆಮೇಲೆ ಶ್ರೀರಾಮನು ವಿಭೀಷಣನನ್ನು ಆಲಿಂಗಿಸಿಕೊಂಡು, ''ವಿಭೀಷಣ, ನನಗೆ ಮೂವರು ತಮ್ಮಂದಿರಿದ್ದಾರೆ. ನೀನೀಗ ನಾಲ್ಕನೆಯವನಾದೆ'' ಎಂದು ನುಡಿದನು.

ವಿಭೀಷಣನು ''ಓ ಮಹಾತ್ಮ, ನಿನ್ನ ವಿಶ್ವಾಸಕ್ಕೆ ಪಾತ್ರನಾದ ನಾನು ಧನ್ಯನೇ ಸರಿ. ನನಗೆ ಸಾಧ್ಯವಾದ ಸಹಾಯವನ್ನು ನಿಶ್ಚಿತವಾಗಿ ಮಾಡುವೆನು'' ಎಂದನು.

೫೪

ಶ್ರೀರಾಮನ ಶರತಲ್ಪಶಯನ. ಸಮುದ್ರರಾಜನು ಪ್ರತ್ಯಕ್ಷನಾಗುವುದು. ಸೇತುವೆಯ ನಿರ್ಮಾಣ

ಅನಂತರ ಸುಗ್ರೀವನೂ ಹನುಮಂತನೂ ವಿಭೀಷಣನನ್ನು ಕುರಿತು ''ಈಗ ನಾವು ಈ ವಿಶಾಲವಾದ ಸಮುದ್ರವನ್ನು ದಾಟಬೇಕಾಗಿದೆ. ಇದಕ್ಕೆ ಉಪಾಯವೇನು?'' ಎಂದು ಕೇಳಿದರು. ವಿಭೀಷಣನು ''ಈ ಸಮುದ್ರ ರಾಜನು ಸಗರ ಚಕ್ರವರ್ತಿಯಿಂದ ಆಶ್ರಯ ವನ್ನು ಪಡೆದಿದ್ದಾನೆ. ಸಗರವಂಶಜನಾದ ಶ್ರೀರಾಮನಿಗೆ ಪ್ರತ್ಯುಪಕಾರ ಮಾಡುವುದು ಅವನ ಕರ್ತವ್ಯವಾಗಿದೆ. ಆದ್ದರಿಂದ ರಾಘವನು ಸಮುದ್ರ ರಾಜನನ್ನು ಭಕ್ತಿಯಿಂದ ಪ್ರಾರ್ಥಿಸಿ ದಾರಿಯನ್ನು ಬಿಡುವಂತೆ ಕೇಳಿಕೊಳ್ಳುವುದು ಲೇಸು'' ಎಂದನು. ಈ ವಿಷಯ ವನ್ನು ಅವರು ಶ್ರೀರಾಮನಿಗೆ ತಿಳಿಸಲಾಗಿ, ಧರ್ಮಾತ್ಮನಾದ ಆ ವೀರನಿಗೆ ಅದು ರುಚಿಸಿತು. ಅವನು ''ವಿಭೀಷಣನ ಸೂಚನೆ ಯಥಾರ್ಥವಾದದ್ದು ಎಂದು ನುಡಿದು ಸಮುದ್ರತೀರದಲ್ಲಿ ದರ್ಭೆಗಳನ್ನು ಹರಡಿಸಿ ನಿಯಮಪೂರ್ವಕವಾಗಿ ಸಮುದ್ರರಾಜ ನನ್ನು ಪ್ರಾರ್ಥಿಸುವುದಕ್ಕಾಗಿ ಆ ಶರತಲ್ಪದಲ್ಲಿ ಪವಡಿಸಿದನು. ಅಲ್ಲಿ ಮಲಗಿದ ಆ ತೇಜೋ ರಾಶಿಯಾದ ಕಾಕುತ್ಸ್ಥನು ವೇದಿಕೆಯಲ್ಲಿ ಕಂಗೊಳಿಸುವ ಹೋಮಾಗ್ನಿಯಂತೆ ವಿರಾಜಿಸಿದನು.

ಹೀಗೆ ಸುಗ್ರೀವನ ವಾನರಸೇನೆಯು ಸಮುದ್ರ ತೀರದಲ್ಲಿ ಬೀಡು

ಬಿಟ್ಟಿರುವುದನ್ನು ರಾವಣನ ಗುಪ್ತಚರ ಶಾರ್ದೂಲನು ಗಮನಿಸಿ ನೋಡಿ ಅದೆಲ್ಲವನ್ನೂ ರಾವಣನಿಗೆ ಅರಿಕೆ ಮಾಡಿದನು. ಆಗ ರಾಕ್ಷಸೇಶ್ವರನು ಚಿಂತಾಕುಲನಾಗಿ ಒಂದು ಭೇದೋಪಾಯವನ್ನು ನಡೆಸಲು ಯತ್ನಿಸಿದನು. ಕಾರ್ಯಕುಶಲನಾದ ಶುಕನೆಂಬ ರಾಕ್ಷಸನನ್ನು ಕರೆದು ''ಅಯ್ಯಾ–ಶುಕ, ಈಗ ನೀನು ನನಗಾಗಿ ಒಂದು ಕಾರ್ಯವನ್ನು ನಡೆಸಿಕೊಡಬೇಕು. ನೀನು ಸುಗ್ರೀವನ ಬಳಿಗೆ ಹೋಗಿ ನಾನು ಹೇಳಿದೆನೆಂದು ಈ ಮಾತನ್ನು ತಿಳಿಸು. ''ಅಯ್ಯಾ–ಸುಗ್ರೀವ, ನೀನು ಋಕ್ಷರಜಸ್ಸೆಂಬ ವಾನರೋತ್ತಮನ ಪುತ್ರನೂ ಕಿಷ್ಕಿಂಧಾಧಿಪತಿಯೂ ಆಗಿದ್ದೀಯೆ. ನನ್ನ ಸೋದರನಿಗೆ ಸಮನಾದವನು. ನಾನು ರಾಮನ ಮಡದಿಯನ್ನು ಅಪಹರಿಸಿತಂದರೆ ನಿನಗಾದ ನಷ್ಟವೇನು? ನೀನೇಕೆ ಆ ಭಿಕಾರಿ ರಾಮನಿಗೆ ಸಹಾಯ ಮಾಡಲು ವಾನರ ಸೇನೆಯನ್ನು ಕಟ್ಟಿಕೊಂಡು ಬಂದಿದ್ದೀಯೆ? ನೀನು ಸೇನೆಯೊಡನೆ ಕಿಷ್ಕಿಂಧೆಗೆ ಹೊರಟು ಹೋಗು. ನಾನೂ ನೀನೂ ಸ್ನೇಹಿತರಾಗಿರೋಣ'' ಎಂದು ಹೇಳು. ಭೇದೋಪಾಯದಿಂದ ಸುಗ್ರೀವನು ರಾಮನಿಗೆ ಸಹಾಯಕನಾಗದಂತೆ ಮಾಡು'' ಎಂದು ನೇಮಿಸಿದನು. ಅಂತೆಯೇ ಶುಕನು ಸಮುದ್ರವನ್ನು ದಾಟಿ ಬಂದು ಆಕಾಶಮಾರ್ಗದಲ್ಲಿ ನಿಂತು ''ವಾನರರೆ, ನಾನು ಸುಗ್ರೀವನೊಡನೆ ಮಾತಾಡ ಬೇಕಾಗಿದೆ'' ಎಂದನು. ಅವನು ರಾಕ್ಷಸನೆಂಬುದನ್ನು ಅರಿತಕೂಡಲೆ ಕಪಿಯೋಧರು ಆಕಾಶಕ್ಕೆ ನೆಗೆದು ಶುಕನನ್ನು ಭೂಮಿಗೆ ಎಳೆದು ತಂದು ಬಲವಾಗಿ ಗುದ್ದ ತೊಡಗಿದರು. ಕಪಿಗಳ ಕೈಗೆ ಸಿಕ್ಕಿ ಪೆಟ್ಟನ್ನು ತಿನ್ನಲಾರದೆ ''ರಾಮ–ರಾಮ, ನಾನು ದೂತನಾಗಿ ಬಂದಿದ್ದೇನೆ. ದೂತರನ್ನು ಯಾರೂ ಹೊಡೆದು ಕೊಲ್ಲುವುದಿಲ್ಲ. ಈ ಕಪಿಗಳನ್ನು ತಡೆದು ನನ್ನನ್ನು ಕಾಪಾಡು'' ಎಂದು ದೈನ್ಯದಿಂದ ಕೂಗಿದನು. ಶುಕನ ಅರಚಾಟವನ್ನು ಕೇಳಿ ಶ್ರೀರಾಮನು ''ಆತನನ್ನು ಹಿಂಸಿಸಬೇಡಿರಿ'' ಎಂದು ಕಪಿಗಳಿಗೆ ಆಜ್ಞಾಪಿಸಿದನು. ಕಪಿಯೋಧರು ಹಿಂದಕ್ಕೆ ಸರಿದರು. ಒಡನೆಯೇ ಶುಕನು ಆಕಾಶಕ್ಕೆ ನೆಗೆದು ಗಟ್ಟಿಯಾಗಿ ''ಸುಗ್ರೀವ, ನಾನು ರಾವಣೇಶ್ವರನ ದೂತ; ನಿನ್ನೊಡನೆ ರಹಸ್ಯವಾಗಿ ಮಾತನಾಡಲು ಬಂದಿದ್ದೇನೆ. ನನ್ನ ಸಂದೇಶವನ್ನು ದಯವಿಟ್ಟು ಲಾಲಿಸು'' ಎಂದನು. ಆಗ ಸುಗ್ರೀವನು ''ಎಲೈ ದೂತ, ಯಾವ ಸಂದೇಶವನ್ನೂ ನೀನು ಹೇಳ ಬೇಕಾದ್ದಿಲ್ಲ. ರಾವಣನು ನನಗೆ ಮಿತ್ರನಲ್ಲ. ನನಗೆ ಯಾವ ಉಪಕಾರ ವನ್ನೂ ಮಾಡಿದವನಲ್ಲ. ಈಗ ನಿನ್ನನ್ನು ಕಳಿಸಿದ ಉದ್ದೇಶ ನನಗೆ ತಿಳಿಯುತ್ತದೆ. ಶ್ರೀರಾಮನಿಗೆ ವೈರಿಯಾದ ಅವನು ನನಗೂ ವೈರಿಯೇ ಸರಿ. ವಾಲಿಯ ಮಿತ್ರನೂ ದುಷ್ಟನೂ ಆದ ಆತನು ನನಗೆ ವಧ್ಯನಾಗಿದ್ದಾನೆ. ನೀನು ಹೊರಟುಹೋಗು'' ಎಂದನು. ಅಷ್ಟರಲ್ಲಿ ಅಂಗದನು ಸುಗ್ರೀವನನ್ನು ಕುರಿತು ''ಮಹಾರಾಜ, ಈ ರಾಕ್ಷಸನು ಆಕಾಶದಲ್ಲಿ ನಿಂತು ನಮ್ಮ ಸೇನೆಯನ್ನೆಲ್ಲಾ ಪರೀಕ್ಷಿಸಿ ನೋಡುತ್ತಿದ್ದನು. ನಮ್ಮ

ಬಲವನ್ನು ತೂಗಿ ನೋಡಲು ಬಂದಿದ್ದಾನೆ. ಇವನನ್ನು ನಾವು ಬಂಧಿಸಬೇಕು'' ಎಂದನು. ಸುಗ್ರೀವನು ಅದಕ್ಕೆ ಸಮ್ಮತಿಸಲಾಗಿ ವಾನರರು ಮತ್ತೆ ಆಕಾಶಕ್ಕೆ ಹಾರಿ ಶುಕನನ್ನು ಹಿಡಿದು ಹೆಡೆಮುರಿಗೆ ಕಟ್ಟಿ ಎಳೆತಂದರು. ಆಗ ಶುಕನು ಗಟ್ಟಿಯಾಗಿ 'ರಾಮ–ರಾಮ, ಈ ವಾನರರು ನನ್ನನ್ನು ಮತ್ತೆ ಸೆರೆಹಿಡಿದು ಹೊಡೆಯುತ್ತಿದ್ದಾರೆ. ಹೀಗಾದರೆ ನಾನು ಸತ್ತೇ ಹೋಗುವೆನು!' ಎಂದು ಕೂಗ ತೊಡಗಿದನು. ಅವನ ಕೂಗಾಟವು ಶ್ರೀರಾಮನಿಗೆ ಕೇಳಿಸಿತು. ಆತನು ''ಕಪಿಯೋಧರೆ, ಈ ರಾಕ್ಷಸನು ದೂತನಾಗಿ ಬಂದಿದ್ದಾನೆ. ಅವನನ್ನು ಹೊಡೆಯಬೇಡಿರಿ. ಬಿಟ್ಟು ಬಿಡಿರಿ'' ಎಂದು ತಿಳಿಸಿದನು. ಶ್ರೀರಾಮನ ಆಜ್ಞೆಯಂತೆ ಶುಕನು ಬಿಡುಗಡೆ ಹೊಂದಿ ದೈನ್ಯದಿಂದ ಕೊರಗುತ್ತ ಲಂಕೆಗೆ ಹಿಂದಿರುಗಿದನು.

ಇತ್ತ ಶ್ರೀರಾಮನು ಸಮುದ್ರತೀರದಲ್ಲಿ ದರ್ಭಶಯನನಾಗಿ ಪವಡಿಸಿದ್ದನು. ಬಿಳಿಯ ಮರಳರಾಶಿಯ ಮೇಲೆ ಚಾಚಿದ ಅವನ ನೀಳವಾದ ಬಾಹುಗಳು ಗಂಗಾಜಲದಲ್ಲಿ ತೇಲುವ ಮಹಾಸರ್ಪಗಳಂತೆ ವಿರಾಜಿಸುತ್ತಿದ್ದವು. ತನ್ನ ದಕ್ಷಿಣಬಾಹು ವನ್ನು ತಲೆದಿಂಬಿನಂತೆ ಅಳವಡಿಸಿಕೊಂಡನು. ಏಕಾಗ್ರಚಿತ್ತನಾಗಿ ಮಲಗಿದ ಆ ವೀರಾಗ್ರಣಿಯು ಸಮುದ್ರರಾಜನನ್ನು ಒಲಿಸಿಕೊಳ್ಳುವುದಕ್ಕಾಗಿ ಅವನನ್ನು ಧ್ಯಾನಿಸುತ್ತಾ ಇದ್ದನು. ಹೀಗೆ ಮೂರು ರಾತ್ರಿಗಳು ಕಳೆದವು. ಆದರೂ ಬುದ್ಧಿಗೇಡಿಯಾದ ಸಮುದ್ರರಾಜನು ಪ್ರತ್ಯಕ್ಷನಾಗಲಿಲ್ಲ. ಯೋಗ್ಯವಾಗಿ ಮನ್ನಣೆಯನ್ನಿತ್ತು ಗೌರವಿಸಿ, ಧ್ಯಾನಿಸಿದರೂ ಆತನಿಗೆ ಕರುಣೆ ಉಂಟಾಗಲಿಲ್ಲವೆಂದು ಶ್ರೀರಾಮನ ಚಿತ್ತವು ಕ್ಷುಬ್ಧವಾಯಿತು. ಅವನ ಕಣ್ಣುಗಳು ಕೆಂಪಡರಿದವು. ಎದ್ದು ಕುಳಿತನು. ಬಳಿಯಲ್ಲಿ ಮುಗುಳ್ನಗೆ ಬೀರುತ್ತ ಕುಳಿತಿದ್ದ ಲಕ್ಷ್ಮಣನನ್ನು ನೋಡಿ ''ಲಕ್ಷ್ಮಣ, ಸಮುದ್ರರಾಜನ ಸೊಕ್ಕನ್ನು ನೋಡು. ಶಾಂತಿ, ತಾಳ್ಮೆ, ಆರ್ಜವ, ಋಜುತ್ವ, ಪ್ರಿಯ ವಚನ–ಈ ನಮ್ಮ ಸದ್ಗುಣಗಳು ಗುಣಹೀನರ ವಿಷಯದಲ್ಲಿ ಕೆಲಸಕ್ಕೆ ಬಾರವು. ಇವು ಹೇಡಿಯ ಲಕ್ಷಣಗಳೆಂದು ಈ ಮೂಢರು ತಿಳಿಯುತ್ತಾರೆ. ಯಾವನು ತನ್ನ ಪೌರುಷವನ್ನು ಹೊಗಳಿಕೊಳ್ಳುತ್ತ ಔದ್ಧತ್ಯದಿಂದ ದಂಡಪ್ರಯೋಗವನ್ನು ಮಾಡುತ್ತ ಮೆರೆಯುವನೋ ಅವನನ್ನು ಲೋಕವು ಗೌರವಿಸುತ್ತದೆ! ಶಾಂತಿಯು ದುಷ್ಟರಲ್ಲಿ ಫಲಿಸುವುದಿಲ್ಲ. ಸೌಮಿತ್ರಿ, ಈಗ ನೋಡುತ್ತಿರು. ನನ್ನ ಶರಗಳ ರುಚಿಹೇಗಿರುವುದೆಂಬುದನ್ನು ಈ ಉದ್ಧತನಿಗೆ ತೋರಿಸುವೆನು! ಲಕ್ಷ್ಮಣ, ನನ್ನ ಕೋದಂಡವನ್ನು ಇತ್ತ ತಾ. ಈ ಸಮುದ್ರರಾಜನು ಸಾಮಕ್ಕೆ ಮಣಿಯುವವನಲ್ಲ. ನನ್ನ ಘೋರಾಸ್ತ್ರಗಳಿಂದ ಈ ಸಮುದ್ರವನ್ನು ಒಣಗಿಸಿ ಬಿಡುತ್ತೇನೆ. ವಾನರರು ಕಾಲುಗಳಿಂದ ನಡೆಯುತ್ತಲೇ ದಾಟಿಹೋಗಲಿ! ಸಮುದ್ರವು ದಡವನ್ನು ಮೀರಿ ನುಗ್ಗದೆಂದು ಹೇಳುತ್ತಾರೆ. ಈ

ಸಮುದ್ರದ ಸಾವಿರಾರು ಅಲೆಗಳು ಎಲ್ಲ ದಡಗಳಲ್ಲಿಯೂ ನುಗ್ಗಿ ಹರಿಯುವಂತೆ ಮಾಡುವೆನು. ಸೊಕ್ಕಿನಿಂದ ಬೀಗುತ್ತಿರುವ ಈ ಸಮುದ್ರನನ್ನು ಬಾಣಗಳಿಂದ ತತ್ತರಗೊಳಿಸಿ ಈಡಾಡಿ ಬಿಡುವೆನು'' ಎಂದು ಆರ್ಭಟಿಸಿ ಎದ್ದು ನಿಂತನು. ದುರ್ಧರ್ಷನಾದ ಆ ವೀರನು ಧನುಷ್ಪಾಣಿಯಾಗಿ ನಿಶಿತಾಸ್ತ್ರಗಳನ್ನು ಹಿರಿದು ಪ್ರಳಯ ಕಾಲಾಗ್ನಿಯಂತೆ ಪ್ರಜ್ವಲಿಸಿದನು. ಘೋರವಾದ ತನ್ನ ಧನುಸ್ಸಿಗೆ ಶರಗಳನ್ನು ಹೂಡಿದಾಗ ಜಗತ್ತು ತಲ್ಲಣಿಸಿತು. ದೇವತೆಗಳು ಚಿಂತಾಕ್ರಾಂತರಾದರು. ಆತನು ಧನುಸ್ಸಿನಿಂದ ಮಿಡಿದ ನಿಶಿತ ಶರಗಳು ಸಮುದ್ರ ಜಲದಲ್ಲಿ ನುಗ್ಗ ತೊಡಗಲು ಜಲಚರಗಳೆಲ್ಲವೂ ಹೆದರಿ ನಡುಗಿ ದಿಕ್ಕು ದಿಕ್ಕಿಗೆ ಚೆಲ್ಲಾಪಿಲ್ಲಿಯಾಗಿ ಓಡತೊಡಗಿದವು. ಬಿರುಗಾಳಿಯು ಬಲವಾಗಿ ಬೀಸಿತ್ತು. ಮಹಾ ಸಾಗರದಿಂದ ಬೃಹತ್ತರಂಗಗಳು ಮೇಲೆದ್ದು ಉಲ್ಲೋಲ ಕಲ್ಲೋಲವಾದವು. ದೊಡ್ಡ ದೊಡ್ಡ ಅಲೆಗಳು ನಕ್ರಾದಿ ಜಲಜಂತುಗಳೊಡನೆ ಏರೇರಿ ಉರುಳತೊಡಗಿದವು. ಬೃಹದಾಕಾರದ ಮೊಸಳೆಗಳು, ಅಂಗಾತನಾಗಿ ಹಾರಿಹಾರಿ ಬಿದ್ದವು. ಮಹಾಸಾಗರವು ಕ್ಷಣ ಮಾತ್ರದಲ್ಲಿ ಕದಡಿ ಹೋಯಿತು.

ಆಗ ಲಕ್ಷ್ಮಣನು ''ಅಣ್ಣ, ಬೇಡ ಬೇಡ'' ಎನ್ನುತ್ತ ರಾಘವನ ಧನುಸ್ಸನ್ನು ಹಿಡಿದುಕೊಂಡನು. ''ಅಣ್ಣ, ನಿನ್ನಂಥವರು ಹೀಗೆ ಕೋಪಾವಿಷ್ಟರಾಗಬಾರದು. ಜಗತ್ತನ್ನೇ ನಾಶಮಾಡಲು ಹೊರಡಬಾರದು. ಸದಾಚಾರವೇನೆಂಬುದನ್ನು ಸರಿಯಾಗಿ ಪರಿಶೀಲಿಸು'' ಎಂದನು. ಶ್ರೀರಾಮನು ಲಕ್ಷ್ಮಣನ ನುಡಿಯನ್ನು ಲಕ್ಷಿಸದೇ ಉರಿಗಣ್ಣಿನಿಂದ ಸಮುದ್ರವನ್ನು ನೋಡುತ್ತ ''ಎಲೈ ಸಮುದ್ರರಾಜ, ನಿನ್ನನ್ನು ಪಾತಾಳ ಪರ್ಯಂತವಾಗಿ ಒಣಗಿಸಿ ಬಿಡುವೆನು! ಸಮುದ್ರತಳದಿಂದ ಧೂಳಿನ ರಾಶಿಯೇ ಮೇಲೆದ್ದು ಹಾರಾಡಲಿ. ವಾನರರು ಕಾಲ್ನಡಿಗೆಯಿಂದಲೇ ನಡೆಯುತ್ತ ಲಂಕೆಗೆ ಹೋಗುವರು. ನನ್ನ ಪ್ರಾರ್ಥನೆಯನ್ನು ಮನ್ನಿಸದಿರುವ ದುರಹಂಕಾರಿ ನೀನು. ನನ್ನ ಪೌರುಷವೇನೆಂಬುದನ್ನು ತಿಳಿಯದೆ ಹೋದೆ. ಎಲೈ ಬುದ್ಧಿಗೇಡಿ, ನೀನು ನನ್ನ ಶರಗಳಿಂದ ಉರಿದು ನಾಶವಾಗುವುದು ನಿಶ್ಚಯ'' ಎಂದು ಗಜರಿದನು. ಲಕ್ಷ್ಮಣನ ಕೈಯಿಂದ ತನ್ನ ಕೋದಂಡವನ್ನು ಸೆಳೆದುಕೊಂಡು ಕ್ರೂರವಾದ ಒಂದು ಅಸ್ತ್ರವನ್ನು ಹೂಡಿ ಬ್ರಹ್ಮಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿ ಹೆದೆಯನ್ನು ಮೀಟಿದನು. ಒಡನೆಯೇ ಭೂಮ್ಯಾಕಾಶಗಳು ಬಿರಿದಂತಾದವು. ಎಲ್ಲೆಲ್ಲಿಯೂ ಕತ್ತಲೆಯು ಮುಸುಕಿತು. ಸಕಲ ಪ್ರಾಣಿಗಳೂ ದಿಕ್ಕುಗಾಣದೆ ಅರಚಿಕೊಂಡವು. ಭೀಕರವಾದ ಬಿರುಗಾಳಿಯು ಭರ್ರನೆ ಬೀಸತೊಡಗಿತು. ಅದೃಶ್ಯವಾಗಿದ್ದ ಪಿಶಾಚಾದಿಗಳು ವಿಕಾರಧ್ವನಿಯಿಂದ ಕೂಗಿ ಕೊಂಡವು. ಆ ಕ್ಷಣದಲ್ಲಿ ಮಹಾಸಾಗರವು ಮಹಾವೇಗದಿಂದ ಒಂದು ಯೋಜನದೂರ ಹಿಂದಕ್ಕೆ ಸರಿಯಿತು. ಜಲರಾಶಿಯು ಹಿಂದಕ್ಕೆ ಸರಿದದ್ದರಿಂದ ಶ್ರೀರಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸದೆ

ಮುಂದೆ ಏನಾಗುವುದೆಂಬುದನ್ನು ನಿರೀಕ್ಷಿಸುತ್ತ ಕ್ಷಣಕಾಲ ಸುಮ್ಮನಿದ್ದನು. ಅಷ್ಟರಲ್ಲಿ ಸಮುದ್ರರಾಜನು ಜಲರಾಶಿ ಯಿಂದೆದ್ದು ಪ್ರತ್ಯಕ್ಷನಾದನು! ಸರ್ವಾಲಂಕಾರ ಭೂಷಿತನಾದ ಸಮುದ್ರರಾಜನು ''ಶ್ರೀರಾಮ'' ಎಂದು ಕರೆಯುತ್ತ ಶ್ರೀರಾಮನ ಬಳಿಗೆ ನಡೆಬಂದನು. ಕೋದಂಡ ಪಾಣಿಯಾದ ರಾಘವನ ಬಳಿಗೆ ಬಂದು ಕೈಜೋಡಿಸಿ ''ಸೌಮ್ಯ–ರಾಘವ, ಪಂಚಭೂತ ಗಳೂ ಭಗವಂತನ ಆಜ್ಞೆಯಂತೆ ತಮ್ಮ ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಿವೆ. ಹಾಗೆಯೇ ನಾನು ಈಶ್ವರಾಜ್ಞೆಯಂತೆ ಈ ಜಲರಾಶಿಯೊಡನೆ ದಾಟಲು ಅಸಾಧ್ಯನಾಗಿ ಅಗಾಧರೂಪದಿಂದ ಇದ್ದೇನೆ. ಈ ಸ್ಥಿತಿಯನ್ನು ಬಿಟ್ಟು ಎರಡು ಭಾಗವಾಗಿ ಸರಿದರೆ, ಅದು ನನ್ನ ಸ್ವಭಾವಕ್ಕೆ ವಿರುದ್ಧವಾಗುವುದು. ಇದ್ದುದನ್ನು ನಿವೇದಿಸಿ ಕೊಂಡಿದ್ದೇನೆ. ಆದರೆ ಈ ಜಲರಾಶಿಯನ್ನು ದಾಟಲು ನಿನಗೆ ಸಹಾಯ ಮಾಡಬಲ್ಲೆನು. ಶ್ರೀರಾಮ, ನನ್ನ ಮೇಲೆ ವಾನರರು ದಾಟುವುದಕ್ಕೆ ಅನುಕೂಲವಾದ ಸೇತುವೆಯನ್ನು ಕಟ್ಟಿದರೆ ಅದನ್ನು ಮುಳುಗಿಸದೆ ಹೊತ್ತುಕೊಂಡಿರುವೆನು. ಇದು ನಾನು ಮಾಡಬಹುದಾದ ಸಹಾಯ'' ಎಂದನು. ಆಗ ಶ್ರೀರಾಮನು ಶಾಂತನಾಗಿ ''ಒಳ್ಳೆಯದು. ಈ ಅಸ್ತ್ರವನ್ನು ನಾನು ಹೂಡಿಬಿಟ್ಟಿದ್ದೇನೆ. ಇದನ್ನು ಎಲ್ಲಿ ಪ್ರಯೋಗಿಸಲಿ?'' ಎಂದನು. ಆಗ ಸಮುದ್ರರಾಜನು ''ರಾಘವ, ಆ ಉತ್ತರದಿಕ್ಕಿನಲ್ಲಿ ದ್ರುಮಕುಲ್ಯ ಎಂಬ ಒಂದು ಪುಣ್ಯತಮವಾದ ಕ್ಷೇತ್ರವಿದೆ. ಅಲ್ಲಿ ದುಷ್ಕರ್ಮಿಗಳಾದ ದಸ್ಯುಗಳು ಸೇರಿಕೊಂಡು ದುರಾಚಾರಗಳಲ್ಲಿ ನಿರತರಾಗಿದ್ದಾರೆ. ಅವರು ನನ್ನನ್ನು ಮುಟ್ಟುವುದನ್ನು ಸಹ ನಾನು ಸಹಿಸಿಕೊಳ್ಳಲಾರೆ. ಆದ್ದರಿಂದ ಈ ಶರವನ್ನು ಪ್ರಯೋಗಿಸಿ ಅವರನ್ನು ನಾಶ ಮಾಡು'' ಎಂದನು. ಅಂತೆಯೇ ಶ್ರೀರಾಮನು ತನ್ನ ಅಸ್ತ್ರವನ್ನು ಪ್ರಯೋಗಿಸಲು ಆ ಪ್ರದೇಶವು ಸುಟ್ಟು ಮರಳು ಭೂಮಿಯಾಯಿತು. ದಸ್ಯುಗಳು ಅಸುನೀಗಿದರು. ಅನಂತರ ಸಮುದ್ರರಾಜನು ''ಸೌಮ್ಯ–ರಘುನಾಥ, ನಳನೆಂಬ ಕಪಿಶ್ರೇಷ್ಠನು ವಿಶ್ವಕರ್ಮನ ಮಗ. ಶಿಲ್ಪ ವಿದ್ಯೆಯಲ್ಲಿ ತಂದೆಯಾದ ವಿಶ್ವಕರ್ಮನಿಗೆ ಸಮಾನನಾಗಿದ್ದಾನೆ. ಈ ವಾನರೋತ್ತಮನು ನನ್ನ ಮೇಲೆ ಸೇತುವೆಯನ್ನು ಕಟ್ಟಲಿ. ಸೇತುವೆಯು ಮುಳುಗದಂತೆ ನಾನು ಹೊತ್ತುಕೊಂಡಿರುವೆನು'' ಎಂದು ಹೇಳಿ ಅದೃಶ್ಯನಾದನು.

ಆಗ ಬಲಾಢ್ಯನೂ, ವಾನರೋತ್ತಮನೂ ಆದ ನಳನು ಕಪಿಸೇನಾಮಧ್ಯದಿಂದ ಎದ್ದುಬಂದು ''ಶ್ರೀರಾಮ, ವಿಶಾಲವಾದ ಈ ಸಮುದ್ರದಲ್ಲಿ ನಾನು ಸೇತುವೆಯನ್ನು ಕಟ್ಟಬಲ್ಲೆನು. ಸಮುದ್ರರಾಜನು ಹೇಳಿದುದು ಸತ್ಯ. ಈ ವಾನರರು ಸೇತುವೆಯನ್ನು ಕಟ್ಟಲು ನನಗೆ ಸಹಾಯ ಮಾಡಲಿ'' ಎಂದನು. ಅದರಂತೆ ಶ್ರೀರಾಮನು ಆಜ್ಞೆಯನ್ನು ಮಾಡಲಾಗಿ ಕಪಿನಾಯಕರು ಹರ್ಷದಿಂದ ಸಾವಿರಾರು ಸಂಖ್ಯೆಯಲ್ಲಿ ಗುಂಪುಗುಂಪಾಗಿ

ಮಹಾರಣ್ಯದಲ್ಲಿ ನುಗ್ಗಿದರು. ನಾನಾ ಬಗೆಯ ಮರಗಳನ್ನು ಕಿತ್ತು ಮುರಿದು ಸಮುದ್ರದ ಕಡೆಗೆ ಸಾಗಿಸಿದರು. ಬಲಾಢ್ಯರಾದ ಕಪಿನಾಯಕರು ದೊಡ್ಡ ದೊಡ್ಡ ಬಂಡೆಗಳನ್ನೂ ಪರ್ವತ ಶಿಖರಗಳನ್ನೂ ಹೊತ್ತು ತಂದು ಏಕಪ್ರಕಾರವಾಗಿ ಒದಗಿಸಿದರು. ಶಿಲ್ಪ ಕರ್ಮದಲ್ಲಿ ಕುಶಲನಾದ ನಳನು ನೂರು ಯೋಜನದುದ್ದದ ಸೇತುವೆಯನ್ನು ಕಟ್ಟಲಾರಂಭಿಸಿದನು. ಸಮುದ್ರಕ್ಕೆಸೆದ ಬೆಟ್ಟಗಳಾಗಲಿ, ಬಂಡೆಗಳಾಗಲಿ, ಮರಗಳಾಗಲಿ ಮುಳುಗಲಿಲ್ಲ. ನಿಪುಣನಾದ ನಳನ ಕೈಚಳಕದಿಂದ ಮೊದಲನೆಯ ದಿನವೇ ಹದಿನಾಲ್ಕು ಯೋಜನದೂರದ ಸೇತುವೆಯು ನಿರ್ಮಿತವಾಯಿತು. ಹೀಗೆ ಲಕ್ಷ ಲಕ್ಷ ಸಂಖ್ಯೆಯಲ್ಲಿದ್ದ ಕಪಿಗಳ ನೆರವಿನಿಂದ ನಳನು ತ್ವರೆಯಿಂದ ಕೆಲಸ ಮಾಡುತ್ತ ಹೋದನು. ಐದನೆಯ ದಿನ ಆ ವಾನರವೀರರು ಸೇತುವೆಯ ನಿರ್ಮಾಣವನ್ನು ಮುಗಿಸಿದರು. ಸೇತುವೆಯನ್ನು ಲಂಕಾದ್ವೀಪದಲ್ಲಿದ್ದ ಸುವೇಲ ಪರ್ವತಕ್ಕೆ ಕೂಡಿಸಿಬಿಟ್ಟರು. ಒಂದು ಮಹಾಕಾರ್ಯವನ್ನು ನೆರವೇರಿಸಿದೆ ವೆಂದು ಕಪಿಗಳು ಆನಂದದಿಂದ ಹಾರುತ್ತ ಕುಣಿಯುತ್ತ ಕೇಕೆ ಹಾಕಿದರು. ಮೈನವಿರೇಳಿಸುವ ಆ ಅದ್ಭುತ ನಿರ್ಮಾಣವನ್ನು ಸಮಸ್ತರೂ ನೋಡಿ ಆಶ್ಚರ್ಯದಿಂದ ತಲೆದೂಗಿದರು.

ಸೇತುವೆಯ ಮೂಲಕ ಸಮುದ್ರವನ್ನು ದಾಟುವುದು. ಸೇನಾವ್ಯೂಹ ರಚನೆ. ಮಾಯಿಕವಾದ ರಾಮಶಿರಸ್ಸನ್ನು ನಿರ್ಮಿಸಿ ಸೀತೆಯನ್ನು ವಂಚಿಸಲು ರಾವಣನ ಪ್ರಯತ್ನ.

ಆನಂತರ ಶ್ರೀರಾಮನು ಲಕ್ಷ್ಮಣನನ್ನು ಕರೆದು ''ತಮ್ಮ, ಈ ವಾನರ ಯೋಧರ ಸಾಹಸವನ್ನು ನೋಡು! ನೂರುಯೋಜನದಷ್ಟು ಉದ್ದವಿರುವ ವಿಶಾಲವಾದ ಸೇತುವೆಯನ್ನು ರಚಿಸಿಬಿಟ್ಟಿದ್ದಾರೆ. ನಿಜವಾಗಿಯೂ ಸುಗ್ರೀವನು ವಿಶ್ವಾಸಾರ್ಹನಾದ ಮಿತ್ರನೇ ಹೌದು. ಈಗ ನಾವು ಕಪಿಸೇನಾಪರಿವೃತರಾಗಿ ಲಂಕೆಯ ಮೇಲೆ ತ್ವರೆಯಿಂದ ಏರಿಹೋಗೋಣ'' ಎಂದು ಹೇಳಿ ಯುದ್ಧೋತ್ಸಾಹದಿಂದ ಮುಂದೆ ಹೊರಟನು. ಅವನೊಡನೆ ಲಕ್ಷ್ಮಣನೂ, ಸುಗ್ರೀವ ವಿಭೀಷಣರೂ ಹೊರಟರು. ಕಪಿನಾಯಕರೆಲ್ಲರೂ ಶತ್ರುಗಳನ್ನು ಮರ್ದಿಸಬೇಕೆಂಬ ದೃಢನಿಶ್ಚಯವನ್ನು ತಳೆದು ಗರ್ಜಿಸುತ್ತ ಸೇತುವೆಯ ಮೇಲೆ ನುಗ್ಗಿದರು. ಈ ಕಪಿವೀರರ ಗರ್ಜನೆಗೆ ಪ್ರತಿಯಾಗಿ ಲಂಕೆಯಲ್ಲಿ ರಾಕ್ಷಸರು ಗರ್ಜಿಸಿದರು. ಆಗ ಎಲ್ಲೆಲ್ಲಿಯೂ ಮೋಡಗಳು ಕವಿದು ಗುಡುಗಿದಂತೆ ಶಬ್ದವಾಗುತ್ತಿತ್ತು. ಶ್ರೀರಾಮನು ಬೇಗ ಬೇಗನೆ ಸಾಗಿ ಮುಂದೆ ಹೋಗುತ್ತಿರುವಾಗ ಆತನ ಮನಸ್ಸಿನಲ್ಲಿ ಸೀತೆಯ ನೆನಪಾಗಿ ಶೋಕವು ಉಮ್ಮಳಿಸುತ್ತಿತ್ತು.

ಎಲ್ಲರೂ ಲಂಕಾನಗರದ ಹೊರಭಾಗವನ್ನು ಸೇರಿದರು. ಆಮೇಲೆ ಶ್ರೀರಾಮನು ಯುದ್ಧವು ಸಮೀಪಿಸಿದುದರಿಂದ ಸೇನಾವ್ಯೂಹವನ್ನು ರಚಿಸಲು ಉದ್ದೇಶಿಸಿದನು. ವಾನರಸೇನಾಪತಿಗಳನ್ನು ಕರೆದು ಈ ಪ್ರಕಾರವಾಗಿ ಆದೇಶವನ್ನಿತ್ತನು. ''ಮಿತ್ರರೆ, ಈಗ ನಾವು ಎಚ್ಚರಿಕೆಯಿಂದ ಕಾರ್ಯನಿರತರಾಗಬೇಕಾಗಿದೆ. ನಾನು ಹೇಳುವ ಪ್ರಕಾರ ವ್ಯೂಹದ ರಚನೆಯಾಗಲಿ. ಅದರ ವಕ್ಷೋಭಾಗದಲ್ಲಿ ಅಜೇಯನಾದ ಅಂಗದನೂ ನೀಲನೂ ತಮ್ಮ ವಾನರ ಸೇನೆಯೊಡನೆ ನಿಂತಿರಲಿ. ಋಷಭನು ಈ ವ್ಯೂಹದ ದಕ್ಷಿಣದಲ್ಲಿರಬೇಕು. ಗಂಧಮಾದನನು ಎಡಭಾಗದಲ್ಲಿ ನಿಂತಿರಲಿ. ನಾನು ಲಕ್ಷ್ಮಣ ಸಮೇತನಾಗಿ ವ್ಯೂಹದ ಮುಂದುಗಡೆ ನಿಂತಿರುವೆನು. ಜಾಂಬವಂತ, ಸುಷೇಣ, ವೇಗದರ್ಶಿ – ಈ ಮೂವರು ವೀರರು ಸೇನೆಯ ಮಧ್ಯಭಾಗದಲ್ಲಿದ್ದು ಸೇನಾರಕ್ಷಣೆಯನ್ನು ನೋಡಿಕೊಳ್ಳತಕ್ಕದ್ದು. ವಾನರೇಶ್ವರನಾದ ಸುಗ್ರೀವನು ವ್ಯೂಹದ ಹಿಂಭಾಗದಲ್ಲಿ ನಿಂತು ಸೇನೆಯನ್ನು ರಕ್ಷಿಸುತ್ತಿರಲಿ'' ಎಂದು ಗೊತ್ತುಮಾಡಿದನು. ಅನಂತರ ಒಂದು ಮಹಾವ್ಯೂಹವನ್ನು ರಚಿಸಿದನು. ಯುದ್ಧಶಾಸ್ತ್ರಾನುಗುಣವಾಗಿ ಕಪಿಯೋಧರು ದೊಡ್ಡ ದೊಡ್ಡ ಬಂಡೆಗಳನ್ನೂ ಮರಗಳನ್ನೂ ಕಿತ್ತು ಹೊತ್ತು ಹೋರಾಟಕ್ಕೆ ಸಜ್ಜಾಗಿ ನಿಂತರು.

ಇತ್ತಲಾಗಿ ಶುಕನೆಂಬ ಗೂಢಚಾರನು ಶ್ರೀರಾಮನ ಆಜ್ಞೆಯಂತೆ ಬಿಡುಗಡೆ ಹೊಂದಿ ರಾವಣನ ಬಳಿಗೆ ಹೋಗಿ ಎಲ್ಲ ವಿಚಾರಗಳನ್ನೂ ತಿಳಿಸಿದನು. ಶ್ರೀರಾಮನು ದೊಡ್ಡ ಕಪಿ ಸೇನೆಯೊಡನೆ ಸೇತುವೆಯನ್ನು ದಾಟಿ ಲಂಕೆಗೆ ಸಮೀಪದಲ್ಲಿ ಬೀಡು ಬಿಟ್ಟಿರುವ ವಿಚಾರವು ರಾವಣನಿಗೆ ತಿಳಿಯಿತು. ಆ ರಾಕ್ಷಸಾಧಿಪತಿಯು ತಾನೇ ಕಪಿಸೇನೆಯನ್ನು ಪರಿಶೀಲಿಸಬೇಕೆಂದು ಉನ್ನತವಾದ ಸೌಧವನ್ನೇರಿದನು. ಅವನೊಡನೆ ಶುಕ, ಸಾರಣ ಎಂಬ ಇಬ್ಬರು ಗೂಢಚಾರರು ಹೋದರು. ಅವರಿಬ್ಬರೂ ವಾನರಸೇನೆಯನ್ನು ಗುಪ್ತವಾಗಿ ನೋಡಿ ಬಂದಿದ್ದರು. ಅಸಂಖ್ಯಾತವಾಗಿ ನೆರೆದಿದ್ದ ವಾನರವಾಹಿನಿಯನ್ನು ನೋಡಿ, ರಾವಣನು ಸಾರಣನನ್ನು ಕುರಿತು, ''ಸಾರಣ, ಈ ವಾನರ ಸೈನಿಕರಲ್ಲಿ ಯಾರು ಬಲಾಢ್ಯರು? ಇವರ ಸಾಮರ್ಥ್ಯವಾದರೂ ಏನು? ನಿನಗೆ ತಿಳಿದಂತೆ ಯಥಾರ್ಥವಾಗಿ ವಿವರಿಸು'' ಎಂದನು. ಆಗ ಸಾರಣನು ರಾವಣನಿಗೆ, ಕಪಿಗಳ ಪ್ರಧಾನ ಸೇನಾನಿಯಾದ ನೀಲ, ಯುವರಾಜನಾದ ಅಂಗದ, ಸೇತುವೆಯನ್ನು ಕಟ್ಟಿದ ನಳ, ಶ್ವೇತ, ಕುಮುದ ಮೊದಲಾದ ಕಪಿಯೂಥಪರನ್ನು ತೋರಿಸಿ, ಅವರ ಸಾಮರ್ಥ್ಯವನ್ನು ವಿವರಿಸಿದನು. ಹಾಗೆಯೇ ಕಪೀಶ್ವರನಾದ ಸುಗ್ರೀವನನ್ನೂ, ಶ್ರೀರಾಮನನ್ನೂ, ಲಕ್ಷ್ಮಣನನ್ನೂ ತೋರಿಸಿದನು. ಆಮೇಲೆ ಹನುಮಂತನನ್ನೂ ಜಾಂಬವಂತನನ್ನೂ ವಿಭೀಷಣನನ್ನೂ ತೋರಿಸಿದನು. ಅನಂತರ ಶುಕಸಾರಣರು ''ಆ ವಾನರಬಲವನ್ನು ಗೆಲ್ಲುವುದು ಅಸಾಧ್ಯ'' ಎಂದರು.

ಆ ಮಾತನ್ನು ಕೇಳಿದೊಡನೆ ರಾವಣನು ಸಿಟ್ಟಿನಿಂದ ಅವರನ್ನು ನೋಡುತ್ತ, ''ಥೂ ಹೇಡಿಗಳೆ, ಇಲ್ಲಿಂದ ತೊಲಗಿರಿ'' ಎಂದು ಗದರಿದನು.

ಆದರೆ ಸಮುದ್ರವನ್ನು ದಾಟಿಬರುವುದು ರಾಮನಿಗೆ ಸಾಧ್ಯವಿಲ್ಲವೆಂದು ನಂಬಿದ್ದ ರಾವಣನಿಗೆ ಸಮಸ್ತ ವಾನರಸೇನೆಯೂ ದಾಟಿಬಂದಿರುವುದು ಮನಸ್ಸಿಗೆ ಸ್ವಲ್ಪ ಭಯವನ್ನೇ ಉಂಟುಮಾಡಿತು. ಇನ್ನೊಮ್ಮೆ ಮಂತ್ರಾಲೋಚನೆಯನ್ನು ಮಾಡಬೇಕೆಂದು ನಿರ್ಣಯಿಸಿ ಎಲ್ಲ ರಾಕ್ಷಸನಾಯಕರೂ ಸಭೆಗೆ ಬರಬೇಕೆಂದು ತಿಳಿಸಿದನು. ವಿದ್ಯು ಜ್ಜಿಹ್ವನೆಂಬ ಮಾಯಾವಿಯಾದ ಒಬ್ಬ ರಾಕ್ಷಸನನ್ನು ಗುಟ್ಟಾಗಿ ಕರೆಸಿಕೊಂಡು ಹೀಗೆಂದನು. ''ವಿದ್ಯುಜ್ಜಿಹ್ವ, ಈಗ ನಾವು ಒಂದು ವಂಚನೋಪಾಯವನ್ನು ನಡೆಸಬೇಕು. ನೀನು ಮಾಯಾಮಯವಾದ ರಾಮನ ಒಂದು ತಲೆಯನ್ನೂ, ಅವನ ಬಿಲ್ಲಿನಂತಿರುವ ಒಂದು ದೊಡ್ಡ ಬಿಲ್ಲನ್ನೂ ಬಾಣವನ್ನೂ ನಿರ್ಮಿಸು'' ಎಂದು ತಿಳಿಸಿದನು. ವಿದ್ಯುಜ್ಜಿಹ್ವನು 'ಆಗಲಿ, ಪ್ರಭು' ಎಂದು ನುಡಿದು ತನ್ನ ಮಾಯಾಬಲದ ಕೈಚಳಕವನ್ನು ರಾವಣನಿಗೆ ತೋರಿಸಿದನು. ಅದನ್ನು ನೋಡಿ ರಾವಣನು ಸಂತುಷ್ಟನಾಗಿ ತನ್ನ ಹಿಂದೆ ಬರುವಂತೆ ತಿಳಿಸಿ ಅಶೋಕವನಕ್ಕೆ ಹೋದನು. ಜಾನಕಿಯು ತಲೆತಗ್ಗಿಸಿಕೊಂಡು ಕಣ್ಣೀರಿಡುತ್ತ ನೆಲದ ಮೇಲೆ ಕುಳಿತಿದ್ದಳು. ರಾವಣನು ಸಂಭ್ರಮದಿಂದ ಅವಳೆದುರಿಗೆ ಹೋಗಿ ಉದ್ಧಟತನದ ಈ ಮಾತನ್ನಾಡಿದನು. ''ಸೀತೆ, ನಿನ್ನ ಗಂಡನಾದ ರಾಮನು ಮಹಾವೀರನೆಂದು ಹೇಳಿಕೊಳ್ಳುತ್ತಿದ್ದೆಯಲ್ಲ, ಅವನನ್ನು ಯುದ್ಧದಲ್ಲಿ ನಾನು ಕೊಂದು ಹಾಕಿರುವೆನು. ನಿನ್ನ ಜಂಬದ ಬೇರನ್ನು ಕತ್ತರಿಸಿದ್ದೇನೆ. ರಾಮನ ವಾನರ ಸೇನೆಯು ಸಮುದ್ರದ ಉತ್ತರ ತೀರದಲ್ಲಿ ಬೀಡು ಬಿಟ್ಟಿತು. ಮಾರ್ಗಾಯಾಸದಿಂದ ಬಳಲಿದ ಅವರೆಲ್ಲರೂ ಗಾಢ ನಿದ್ರೆಯಲ್ಲಿದ್ದರು. ನಮ್ಮ ಪ್ರಹಸ್ತನು ದೊಡ್ಡ ರಾಕ್ಷಸ ಸೇನೆಯೊಡನೆ ಹೋಗಿ ಆ ಕಪಿಗಳನ್ನು ಧ್ವಂಸ ಮಾಡಿದನು. ಸುಗ್ರೀವನು ಕತ್ತು ಮುರಿಸಿಕೊಂಡು ಸತ್ತು ಬಿದ್ದಿರುವನು. ನಮ್ಮ ಪ್ರಹಸ್ತನು ಮಲಗಿದ್ದ ರಾಮನ ತಲೆಯನ್ನು ಖಡ್ಗದಿಂದ ತುಂಡರಿಸಿದನು. ಹನುಮಂತನನ್ನು ರಾಕ್ಷಸರು ಮುತ್ತಿಕೊಂಡು ಸಂಹರಿಸಿದರು. ಲಕ್ಷ್ಮಣನೂ ಹತಶೇಷರಾದ ಕಪಿಗಳೂ ದಿಕ್ಕು ದಿಕ್ಕಿಗೆ ಓಡಿಹೋದರು. ವಿಭೀಷಣನನ್ನು ಸೆರೆಹಿಡಿದು ತಂದಿದ್ದೇನೆ. ಈ ರೀತಿಯಲ್ಲಿ ನಿನ್ನ ಆಸೆಯೆಲ್ಲವೂ ಮಣ್ಣು ಪಾಲಾಯಿತು. ನನ್ನ ಮಡದಿಯಾಗು, ಸುಖವಾಗಿರು. ಸತ್ತು ಹೋದ ರಾಮನ ಆಸೆಯನ್ನು ತೊರೆದುಬಿಡು'' ಎಂದು ಹೇಳಿ ಒಬ್ಬ ರಾಕ್ಷಸಿಯನ್ನು ಕರೆದು ''ಏ ದಾಸಿ, ವಿದ್ಯುಜ್ಜಿಹ್ವನು ರಾಮನ ತಲೆಯನ್ನು ತಂದಿದ್ದಾನೆ. ಅವನು ಇಲ್ಲಿಗೆ ಬರುವಂತೆ ಹೇಳು'' ಎಂದನು. ಸೀತೆಯು ಕಂಗಾಲಾಗಿ ದಿಕ್ಕು ತೋರದೆ ಪರಿತಪಿಸುತ್ತಿದ್ದಳು. ಅಷ್ಟರಲ್ಲಿ ವಿದ್ಯುಜ್ಜಿಹ್ವನು ಮಾಯಾಮಯವಾದ ರಾಮನ

ಶಿರಸ್ಸನ್ನೂ ಧನುರ್ಬಾಣಗಳನ್ನೂ ತಂದು ರಾವಣನ ಆಜ್ಞೆಯಂತೆ ಸೀತೆಯ ಮುಂದಿಟ್ಟು ಕಣ್ಮರೆಯಾದನು. ವಂಚಕನಾದ ರಾವಣನು ವೈದೇಹಿಯನ್ನು ನೋಡಿ ''ಸೀತೆ, ನೀನೇ ಕಣ್ಣಾರೆ ನೋಡು. ರಾಮನ ಗತಿ ಏನಾಗಿದೆಯೆಂಬುದನ್ನು. ಈಗಲಾದರೂ ನನ್ನ ವಶಳಾಗು'' ಎಂದನು.

ಜಾನಕಿಯು ಮಾಯಾಮಯವಾದ ಶಿರಸ್ಸನ್ನೂ ಮಾಯಿಕವಾದ ಧನುರ್ಬಾಣಗಳನ್ನೂ ನೋಡಿದಳು. ತಾನು ಕಳಿಸಿಕೊಟ್ಟಿದ್ದ ಚೂಡಾಮಣಿಯೂ ಅಲ್ಲಿತ್ತು. ಅದೆಲ್ಲವೂ ಸತ್ಯವೆಂದು ಭ್ರಮಿಸಿ ಕುರರ ಪಕ್ಷಿಯಂತೆ ಚೀರುತ್ತ ಸಂಕಟವನ್ನು ತಡೆಯಲಾರದೆ ಗೋಳಾಡಿದಳು. ''ಓ ಕೈಕೇಯಿ, ನಿನ್ನ ಇಷ್ಟವು ನೆರವೇರಿತೆ? ವಿಖ್ಯಾತವಾದ ರಘುಕುಲವನ್ನೇ ನಾಶಮಾಡಿದೆಯಲ್ಲ'' ಎಂದಳು. ಬುಡಕಡಿದ ಬಾಳೆಯಗಿಡದಂತೆ ನೆಲದ ಮೇಲುರುಳಿದಳು. ಮತ್ತೆ ಎದ್ದು ಕುಳಿತು ತರತರನೆ ನಡುಗುತ್ತ ಮಾಯಾಮಯವಾದ ಶಿರಸ್ಸನ್ನು ನೋಡಿ ನೋಡಿ ಕಂಗೆಟ್ಟು ಹೋದಳು. ಶ್ರೀರಾಮನ ಪರಾಕ್ರಮವನ್ನೂ ಲಕ್ಷ್ಮಣನ ಯುದ್ಧ ಕೌಶಲವನ್ನೂ ಹನುಮಂತನ ಮಹಾಬಲವನ್ನೂ ನೆನೆ ನೆನೆದು ''ಇಂಥ ಅಸಾಧಾರಣ ವೀರರು ಹತರಾಗಿ ಹೋದರೆಂಬುದು ನನ್ನ ದುರದೃಷ್ಟದ ಫಲವೇ ಸರಿ'' ಎಂದು ಮತ್ತೆ ಮತ್ತೆ ತನ್ನನ್ನು ನಿಂದಿಸಿಕೊಂಡಳು. ''ರಾವಣ, ನನ್ನ ತಲೆಯನ್ನೂ ಕಡಿದುಬಿಡು. ಮಹಾತ್ಮನಾದ ನನ್ನ ಪತಿಯನ್ನು ಹಿಂಬಾಲಿಸಿಹೋಗುವೆನು. ಇದು ನೀನು ಮಾಡುವ ಮಹೋಪಕಾರ'' ಎಂದು ಕೈ ಮುಗಿದು ಬೇಡಿದಳು. ಹೀಗೆ ಜಾನಕಿಯು ಅತಿಯಾಗಿ ರೋದಿಸುತ್ತಿರುವಾಗ ರಾಕ್ಷಸರ ರಕ್ಷಣಾಪಡೆಗೆ ಸೇರಿದ ಒಬ್ಬ ಯೋಧನು ಬಂದು ರಾವಣನಿಗೆ ಕೈ ಮುಗಿದು ''ಮಹಾರಾಜನಿಗೆ ಜಯವಾಗಲಿ! ನಿನ್ನ ಆಜ್ಞೆಯಂತೆ ಪ್ರಹಸ್ತನು ಮಂತ್ರಾಲೋಚನಾಸಭೆಯನ್ನು ಸೇರಿಸಿದ್ದಾನೆ. ಈ ಬಿಕ್ಕಟ್ಟಿನ ಸಮಯದಲ್ಲಿ ಕೂಡಲೇ ನಿರ್ಣಯಿಸಬೇಕಾದ ಕಾರ್ಯವಿದೆಯಂತೆ. ಆದ್ದರಿಂದ ನೀನೇ ಶೀಘ್ರವಾಗಿ ಬರಬೇಕೆಂದು ಹೇಳಿ ಕಳಿಸಿದ್ದಾನೆ'' ಎಂದು ನಿವೇದಿಸಿದನು.

ಆ ಯೋಧನ ನುಡಿಯನ್ನು ಕೇಳಿದೊಡನೆ ರಾವಣನು ಚಿಂತಾಕ್ರಾಂತನಾಗಿ ತಟ್ಟನೆ ಅಲ್ಲಿಂದ ನಿರ್ಗಮಿಸಿದನು. ರಾವಣನು ಅತ್ತ ಹೋದೊಡನೆಯೇ ಇತ್ತ ಮಾಯಿಕವಾದ ಶಿರಸ್ಸೂ ಧನುರ್ಬಾಣಗಳೂ ಮಾಯವಾದವು! ಇದೇನಿರಬಹುದೆಂದು ಸೀತಾದೇವಿಯು ವಿಸ್ಮಯಗೊಂಡಳು. ರಾವಣನು ಹೊರಟು ಹೋದೊಡನೆ ವಿಭೀಷಣನ ಪತ್ನಿಯಾದ ಸರಮೆಯು ಅಲ್ಲಿಗೆ ಬಂದಳು. ಸೀತೆಯು ದುಃಖದಿಂದ ಪ್ರಾಣತ್ಯಾಗವನ್ನು ಮಾಡಿಕೊಳ್ಳದಂತೆ ನೋಡುತ್ತಿರಬೇಕೆಂದು ಸರಮೆಯನ್ನು ರಾವಣನು ನೇಮಿಸಿದ್ದನು. ವಿಭೀಷಣನು ಲಂಕೆಯಿಂದ ಹೊರಟುಹೋದ ಮೇಲೆ

ಸರಮೆಯು ಅಂಜುತ್ತಲೇ ತನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದಳು. ಅವಳು ಸೀತಾದೇವಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತ ಅವಳ ಸಖಿಯಾಗಿ ವರ್ತಿಸುತ್ತಿದ್ದಳು. ರಾವಣನು ಮಾಯೆಯಿಂದ ಸೀತೆಯನ್ನು ವಂಚಿಸುತ್ತಿದ್ದಾನೆಂದು ತಿಳಿದು, ಅವನು ಹೋದೊಡನೆ ಜಾನಕಿಯನ್ನು ಸಂತೈಸುವುದಕ್ಕಾಗಿ ತ್ವರೆಯಿಂದ ಬಂದಳು.

೫೬

ಸರಮೆಯು ಸೀತೆಯನ್ನು ಸಂತೈಸುವುದು. ಶ್ರೀರಾಮನು ಯುದ್ಧಸನ್ನದ್ಧನಾಗಿ ನಿಲ್ಲುವುದು. ಸುಗ್ರೀವನು ಥಟ್ಟನೆ ಹಾರಿಹೋಗಿ ರಾವಣನೊಡನೆ ಹೊಡೆದಾಡಿ ಹಿಂದಿರುಗುವುದು.

ಆ ಸಾಧ್ವಿಯು ಗೆಳತಿಯ ಸ್ನೇಹದಿಂದ ಹತ್ತಿರ ಬಂದು ಮೃದುವಾದ ನುಡಿಗಳಿಂದ ಸೀತೆಯನ್ನು ಸಂತೈಸತೊಡಗಿದಳು. ''ವೈದೇಹಿ, ನೀನು ಅಳಬೇಡ. ಧೈರ್ಯದಿಂದಿರು. ರಾವಣನು ಬಂದು ನಿನಗೆ ಹೇಳಿದ ಮಾತನ್ನೂ ನಿನ್ನ ಮುಂದಿಟ್ಟ ಆ ಶಿರಸ್ಸಿನ ವಿಷಯವನ್ನೂ ನಾನು ಬಲ್ಲೆನು. ಅವನು ಬಂದಾಗ ನಾನು ಆ ಪೊದೆಯಲ್ಲಿ ಅವಿತುಕೊಂಡು ಎಲ್ಲವನ್ನೂ ಕೇಳಿದೆ; ನೋಡಿದೆ. ಅವನು ನಿನ್ನ ಮುಂದಿಟ್ಟಿದ್ದ ಶಿರಸ್ಸೂ ಧನುರ್ಬಾಣಗಳೂ ಮಾಯೆಯಿಂದ ಕಲ್ಪಿತವಾದವುಗಳು. ಆದ್ದರಿಂದಲೇ ಅವೆಲ್ಲವೂ ಅದೃಶ್ಯವಾದವು. ಅವನು ಏಕೆ ಇಲ್ಲಿಂದ ತಟ್ಟನೆ ಹೋದನೆಂಬುದೂ ನನಗೆ ಗೊತ್ತಿದೆ. ಅದೋ ಕೇಳು. ರಣಭೇರಿ ಮೊಳಗುತ್ತಿದೆ. ರಾಕ್ಷಸರು ಯುದ್ಧಕ್ಕಾಗಿ ಹೊರಟಿದ್ದಾರೆ. ವಾನರ ಸೇನೆಯು ಲಂಕೆಯ ಪ್ರಾಕಾರದ ಬಳಿ ಮುತ್ತಿಗೆ ಹಾಕಿದೆ. ಆದ್ದರಿಂದಲೇ ರಾವಣನು ಅವಸರದಿಂದ ಹೊರಟುಹೋಗಿದ್ದಾನೆ! ಎಲೆ ಅಂಜುಬುರುಕಿ!' ಏಕೆ ಹೆದರುತ್ತೀಯೆ? ಶ್ರೀರಾಮನಿಗೆ ವಿಜಯಲಕ್ಷ್ಮಿಯು ಒಲಿಯುವಳು. ನಿನ್ನ ಕಷ್ಟವು ನೀಗಿತೆಂದೇ ತಿಳಿ. ದೇವಿ, ಬಲಾಢ್ಯನಾದ ಶ್ರೀರಾಮನು ಲಕ್ಷ್ಮಣನೊಡನೆ ಸೇರಿ ಈ ಯುದ್ಧದಲ್ಲಿ ಜಯವನ್ನು ಗಳಿಸುವನು. ಮಂಗಳಾಂಗಿ, ಸದ್ಯದಲ್ಲಿಯೇ ಆತನ ಪ್ರಸನ್ನವದನವನ್ನು ನೋಡಿ ನೀನು ಆನಂದಿಸುವೆ'' ಎಂದು ಹೇಳಿ ಜಾನಕಿಯನ್ನು ಸಂತೈಸಿದಳು. ಅನಂತರ ''ಸೀತೆ, ನೀನು ಸಂದೇಶವನ್ನಿತ್ತರೆ ನಾನು ಯಾರಿಗೂ ಕಾಣದಂತೆ ಶ್ರೀರಾಮನ ಬಳಿಗೆ ಹೋಗಿ ಅದನ್ನು ಮುಟ್ಟಿಸಿ ಬರಬಲ್ಲೆನು''! ಎಂದಳು. ಹೀಗೆ ಹೇಳಿದ ಸರಮೆಯನ್ನು ನೋಡಿ ಜಾನಕಿಯು ಧೈರ್ಯವನ್ನು ತಂದುಕೊಂಡು ಮೆಲ್ಲಗೆ ''ಸರಮೆ, ನಿನ್ನ ಸಾಮರ್ಥ್ಯವನ್ನು ನಾನು ಬಲ್ಲೆನು. ಅದಿರಲಿ. ಮಹಾವಂಚಕನಾದ ರಾವಣನು ಮುಂದೇನು ಮಾಡುವನೆಂಬುದನ್ನು ನನಗೆ ತಿಳಿದು ಹೇಳು. ಅವನ ಮುಂದಿನ ನಿಶ್ಚಯವೇನು? ಎಂದು ಅರಿತು ಹೇಳಿದರೆ ಅದೇ ನನಗೆ ದೊಡ್ಡ

ಉಪಕಾರ'' ಎಂದಳು. ಅಂತೆಯೇ ಸರಮೆಯು ಅರಮನೆಗೆ ಹೋಗಿ ಅಲ್ಲಿ ನಡೆದುದನ್ನು ತಿಳಿದುಕೊಂಡು ಬಂದು ಹೀಗೆಂದಳು. ''ದೇವಿ, ರಾವಣನ ತಾಯಿಯಾದ ಕೈಕಸಿಯೂ ಮಂತ್ರಿವೃದ್ಧನಾದ ಅವಿದ್ಧನೂ ರಾವಣನಿಗೆ ಸರಿಯಾಗಿಯೇ ಬುದ್ಧಿ ಹೇಳಿದರು. ಎಷ್ಟು ಹೇಳಿದರೂ ಅವನು ಕೇಳುವುದಿಲ್ಲ, ನಾನು ಬದುಕಿರು ವವರೆಗೂ ಸೀತೆಯನ್ನು ಬಿಟ್ಟು ಕೊಡುವುದಿಲ್ಲ ಎಂದು ಆ ಘಾತುಕನು ಹಟವನ್ನು ತೊಟ್ಟಿದ್ದಾನೆ'' ಎಂದಳು. ಇತ್ತಲಾಗಿ ರಾವಣನ ಮಾತಾಮಹನಾದ ಸುಮಾಲಿಯು ತಮ್ಮ ಮಾಲ್ಯವಂತನು ಬಂದು ರಾವಣನಿಗೆ ನಾನಾ ಬಗೆಯಲ್ಲಿ ಹಿತೋಪದೇಶ ಮಾಡಿದನು. ಛಲವಾದಿಯಾದ ರಾವಣನು ಮಾಲ್ಯವಂತನ ಮಾತಿಗೂ ಸೊಪ್ಪುಹಾಕದೆ, ''ನಾನು ಧೀರನಾಗಿ ನಿಂತು ಹೀಗೆಯೇ ಎರಡು ಸೀಳಾಗಿ ಹೋದೇನು! ಇನ್ನೊಬ್ಬನಿಗೆ ಮಾತ್ರ ತಲೆಬಾಗಿಸತಕ್ಕವನಲ್ಲ'' ಎಂದು ನುಡಿದು, ಅವನನ್ನು ಧಿಕ್ಕರಿಸಿ ನಗರದ್ವಾರಗಳಿಗೆ ರಕ್ಷಣಾ ವ್ಯವಸ್ಥೆಯನ್ನು ಏರ್ಪಡಿಸಿದನು. ಮಂತ್ರಿಗಳಿಗೆ ಇನ್ನೂ ಕೆಲವು ಸೂಚನೆಗಳನ್ನಿತ್ತು ಕಾರ್ಯನಿರತರಾಗಿರುವಂತೆ ವಿಧಿಸಿ ತನ್ನ ಅಂತಃಪುರವನ್ನು ಪ್ರವೇಶಿಸಿದನು.

ಇತ್ತ ಶ್ರೀರಾಮನು ಸುಗ್ರೀವ, ಹನುಮಂತ, ಜಾಂಬವಂತ, ವಿಭೀಷಣ, ಅಂಗದ, ಲಕ್ಷ್ಮಣ ಮೊದಲಾದವರೊಡನೆ ಮುಂದಿನ ಕರ್ತವ್ಯವನ್ನು ಕುರಿತು ಸಮಾಲೋಚಿಸುತ್ತಿದ್ದನು. ಆಗ ವಿಭೀಷಣನು ಲಂಕೆಯ ರಕ್ಷಣಾವಿಧಾನವನ್ನು ತಿಳಿಸಿ ಕೋಟಿ ಕೋಟಿ ಸಂಖ್ಯೆಯಲ್ಲಿರುವ ರಾಕ್ಷಸರ ಪರಾಕ್ರಮ, ಪ್ರತಾಪ ಮೊದಲಾದ್ದನ್ನು ವರ್ಣಿಸಿ ಹೇಳಿದನು. ಅನಂತರ ''ಶ್ರೀರಾಮ, ನಾನು ಹೀಗೆ ರಾವಣನ ಸೇನೆಯನ್ನು ವರ್ಣಿಸಿದೆನೆಂದು ಬೇಸರಪಡಬೇಡ. ಆ ರಾಕ್ಷಸರನ್ನಡಗಿಸಲು ಬೇಕಾದ ರೋಷವನ್ನು ತೇಜಸ್ಸನ್ನೂ ಉದ್ದೀಪನಗೊಳಿಸುವುದಕ್ಕಾಗಿ ಈ ಮಾತನ್ನು ಹೇಳಿದ್ದೇನೆ. ನಿನ್ನನ್ನು ಹೆದರಿಸುವುದಕ್ಕಾಗಿ ಅಲ್ಲ. ಅವರೆಲ್ಲರನ್ನೂ ಧ್ವಂಸ ಮಾಡುವ ಸಾಮರ್ಥ್ಯವು ನಿನ್ನಲ್ಲಿದೆ'' ಎಂದನು. ರಾಘವನು ವಿಭೀಷಣನ ಮಾತನ್ನು ಅನುಮೋದಿಸಿ ವಾನರಯೋಧರಿಗೆ ಈ ರೀತಿಯಲ್ಲಿ ಆಜ್ಞೆಯನ್ನಿತ್ತನು. ''ಮಿತ್ರರೆ, ವಿಭೀಷಣನು ಹೇಳಿದ ವಿಚಾರಗಳೆಲ್ಲವನ್ನೂ ನೀವು ಕೇಳಿದ್ದೀರಿ. ಈಗ ಪರಾಕ್ರಮಿಯಾದ ನೀಲನು ತನ್ನ ವಾನರಾನೀಕದೊಡನೆ ಲಂಕೆಯ ಪೂರ್ವದ್ವಾರದಲ್ಲಿರುವ ಪ್ರಹಸ್ತನನ್ನು ಎದುರಿಸಲಿ. ವೀರಾಗ್ರೇಸರನಾದ ಅಂಗದನು ಕಪಿಸೇನೆಯೊಡನೆ ಹೋಗಿ ದಕ್ಷಿಣದ್ವಾರದಲ್ಲಿರುವ ಮಹೋದರ ಮಹಾಪಾರ್ಶ್ವರನ್ನು ಅಡ್ಡಗಟ್ಟಲಿ. ಹನುಮಂತನು ವೀರನೆಂದು ವಿಖ್ಯಾತನಾದ ಇಂದ್ರಜಿತುವನ್ನು ಎದುರಿಸುವುದಕ್ಕಾಗಿ ಪಶ್ಚಿಮ ದಿಕ್ಕಿಗೆ ಹೋಗಲಿ. ಇನ್ನು ವರಬಲದಿಂದ ಕೊಬ್ಬಿರುವ ಕ್ಷುದ್ರನಾದ

ರಾವಣನನ್ನು ಎದುರಿಸುವುದಕ್ಕಾಗಿ ನಾನೇ ಉತ್ತರದ್ವಾರದಲ್ಲಿ ನಿಲ್ಲುವೆನು. ಲಕ್ಷ್ಮಣನು ನನ್ನ ಬಳಿಯಲ್ಲಿರಲಿ. ವಾನರೇಂದ್ರನಾದ ಸುಗ್ರೀವನೂ ಜಾಂಬವಂತನೂ ವಿಭೀಷಣನೂ ಸೇನೆಯ ಮಧ್ಯದಲ್ಲಿರಲಿ. ಇನ್ನೊಂದು ಮುಖ್ಯವಾದ ವಿಷಯವುಂಟು. ಯುದ್ಧ ಸಮಯದಲ್ಲಿ ವಾನರಯೋಧರು ಮನುಷ್ಯರೂಪವನ್ನು ಧರಿಸಬಾರದು. ವಾನರವೇಷವೇ ಇವರು ನಮ್ಮವರೆಂದು ಗುರುತಿಸಲು ಸಂಕೇತವಾಗಿರತಕ್ಕದ್ದು.ನಾನು, ಲಕ್ಷ್ಮಣ, ವಿಭೀಷಣ ಮತ್ತು ಅವನ ನಾಲ್ವರು ಸಚಿವರು–ಹೀಗೆ ಏಳುಮಂದಿ ಮಾತ್ರ ಸಂಗ್ರಾಮ ಸಮಯದಲ್ಲಿ ಮನುಷ್ಯಾಕೃತಿಯಲ್ಲಿಯೇ ಇರುತ್ತೇವೆ'' ಎಂದು ತಿಳಿಸಿದನು. ಅನಂತರ ಲಂಕೆಯನ್ನೊಮ್ಮೆ ಸಮೀಕ್ಷಿಸಬೇಕೆಂಬ ಉದ್ದೇಶದಿಂದ ಸಮೀಪದಲ್ಲಿದ್ದ ಸುವೇಲ ಪರ್ವತದ ಶಿಖರವನ್ನೇರಿದನು. ಅವನ ಜೊತೆಗೆ ಲಕ್ಷ್ಮಣ ಸುಗ್ರೀವಾದಿ ಗಳೂ ಆ ಬೆಟ್ಟವನ್ನೇರಿದರು. ಅವರೆಲ್ಲರೂ ಆ ದಿನ ರಾತ್ರಿ ಸುವೇಲಪರ್ವತದಲ್ಲಿಯೇ ತಂಗಿದ್ದರು. ಮಾರನೆಯದಿನ ಪ್ರಾತಃಕಾಲದಲ್ಲಿ ಎದ್ದು ಪ್ರಾತಃಕೃತ್ಯಗಳನ್ನು ಮುಗಿಸಿ ಲಂಕಾನಗರವನ್ನು ನೋಡತೊಡಗಿದರು. ಮಹಾಸೌಧಗಳಿಂದ ತುಂಬಿದ್ದ ಲಂಕೆಯ ವೈಭವವನ್ನು ಕಂಡು ಶ್ರೀರಾಮನು ಬೆರಗಾದನು. ಸುತ್ತಮುತ್ತಲ ಉದ್ಯಾನವನಾದಿ ಗಳನ್ನೂ ಪರಿಸರದ ಸೌಂದರ್ಯವನ್ನೂ ಕಂಡು ವಿಸ್ಮಿತನಾದನು. ಆ ಸಮಯದಲ್ಲಿ ದೈವಪ್ರೇರಣೆಯೋ ಎಂಬಂತೆ ರಾಕ್ಷಸೇಶ್ವರನಾದ ರಾವಣನು ತ್ರಿಕೂಟಗಿರಿಯ ಒಂದು ಗೋಪುರಾಗ್ರದಲ್ಲಿ ವೈಭವದಿಂದ ಕುಳಿತಿದ್ದನು. ಕಪ್ಪಾದ ಮೋಡದಂತೆ ವಿರಾಜಿಸುತ್ತಿದ್ದ ರಾವಣನು ಚಿನ್ನದ ಜರತಾರಿಯ ವಸ್ತ್ರವನ್ನುಟ್ಟಿದ್ದನು. ಕೆಂಪಾದ ಶಲ್ಯವನ್ನು ಹೊದೆದಿದ್ದ ಆ ಪರಾಕ್ರಮಿಯು ಸಂಜೆಗೆಂಪಿನ ಬಿಸಿಲಿನಿಂದ ಆವೃತವಾದ ಮೇಘದಂತೆ ಕಂಗೊಳಿಸುತ್ತಿದ್ದನು. ಇವರೆಲ್ಲರೂ ಆತನನ್ನು ನೋಡುತ್ತಿರುವಾಗ ಸುಗ್ರೀವನು ಕ್ರೋಧದಿಂದ ಉದ್ದೀಪ್ತನಾಗಿ ಸುವೇಲ ಪರ್ವತದಿಂದ ರಾವಣನಿದ್ದ ಸ್ಥಳಕ್ಕೆ ಇದ್ದಕ್ಕಿದ್ದಂತೆ ಒಂದೇ ನೆಗೆತದಿಂದ ಹಾರಿಬಿಟ್ಟನು. ವಿಭೀಷಣಾದಿಗಳು ಇದೇನಿರಬಹುದೆಂದು ದಿಗ್ಭ್ರಾಂತರಾದರು. ಸುಗ್ರೀವನು ನಿರ್ಭಯದಿಂದ ರಾವಣನೆದುರಿಗೆ ಹೋಗಿ ನಿಂತು ಅವನನ್ನು ಹುಲ್ಲಿನಂತೆ ಕಡೆಗಣಿಸಿ ''ಎಲಾ ರಾಕ್ಷಸ, ಲೋಕನಾಥನಾದ ಶ್ರೀರಾಮನಿಗೆ ಮಿತ್ರನೂ ಭೃತ್ಯನೂ ಆದ ಸುಗ್ರೀವ ನಾನು. ಇನ್ನು ನಿನಗೆ ಉಳಿಗಾಲವಿಲ್ಲ'' ಎಂದು ಕಠೋರವಾಗಿ ನುಡಿದು, ಮುಂದೆ ನುಗ್ಗಿ ರಾವಣನ ಕಿರೀಟವನ್ನು ಕಿತ್ತು ಎಸೆದನು. ರಾವಣನು ಧಿಗ್ಗನೆ ಎದ್ದುನಿಂತು ''ಎಲಾ ಸುಗ್ರೀವ, ನಿನ್ನ ಗ್ರೀವವನ್ನು (ಕೊರಳನ್ನು) ಈಗಲೇ ಮುರಿಯುವೆನು'' ಎಂದು ಹೇಳಿ ಸುಗ್ರೀವನನ್ನು ಮೇಲೆತ್ತಿ ನೆಲದ ಮೇಲೆ ಕುಕ್ಕಿದನು. ಇಬ್ಬರಿಗೂ ಖಾಡಾಖಾಡಿಯಾದ ಹೋರಾಟ ನಡೆಯಿತು. ಇಬ್ಬರೂ ಬೆವರಿ ಒದ್ದೆಯಾದರು. ಗಾಯಗೊಂಡ ಅವರು ಅರಳಿದ ಮುತ್ತುಗದ ಮರದಂತೆ

ಕಾಣುತ್ತಿದ್ದರು. ಉಗ್ರವೇಗದಿಂದ ಒಬ್ಬರನ್ನೊಬ್ಬರು ಗುದ್ದುತ್ತಾ, ತಿವಿಯುತ್ತಾ, ಚಚ್ಚುತ್ತಾ ಹೊಡೆದಾಡಿದರು. ಸಲಗಗಳಂತಿದ್ದ ಆ ಸಾಹಸಿಗಳು ಬಹಳ ಹೊತ್ತು ಹೋರಾಡಿದರು. ತಿಂಡಿಗಾಗಿ ಕಚ್ಚಾಡುವ ಬೆಕ್ಕುಗಳಂತೆ ಕಿಸ್ಸೆಂದು ಕೂಗಾಡಿದರು! ಹೀಗೆ ಸರಿಜೋಡಿಯಾಗಿ ಹೋರಾಡುತ್ತಿರುವಾಗ ರಾವಣನು ತನ್ನ ಮಾಯಾಶಕ್ತಿಯನ್ನು ಬಳಸಲು ಉದ್ದೇಶಿಸಿದನು. ಈ ಸಂಚು ತಿಳಿದೊಡನೆ ಆ ವಾನರೇಂದ್ರನು ಥಟ್ಟನೆ ಆಕಾಶಕ್ಕೆ ನೆಗೆದು ವಾಯುವೇಗದಿಂದ ಹಿಂದಕ್ಕೆ ಬಂದು ಶ್ರೀರಾಮನ ಬಳಿಯಲ್ಲಿ ನಿಂತನು. ಆತನ ಮೈಮೇಲಾದ ಗಾಯಗಳನ್ನು ಕಂಡು ಶ್ರೀರಾಮನು ಸುಗ್ರೀವನನ್ನು ಅಪ್ಪಿಕೊಂಡು ''ಮಿತ್ರ–ಸುಗ್ರೀವ, ನನ್ನೊಡನೆ ಆಲೋಚಿಸದೆ ಎಂಥ ಸಾಹಸಕೃತ್ಯವನ್ನು ಮಾಡಿಬಿಟ್ಟೆ? ಪ್ರಭುಗಳಾದವರು ಹೀಗೆ ದುಡುಕಿನ ಕೆಲಸವನ್ನು ಮಾಡಬಾರದು. ನಮ್ಮೆಲ್ಲರನ್ನೂ ಸಂಶಯಕ್ಕೆ ಗುರಿ ಮಾಡಿ ಅಪಾಯಕಾರಿಯಾದ ಈ ಕಾರ್ಯಕ್ಕೆ ಕೈ ಹಾಕಬಹುದೆ? ನನಗೆ ಹೇಳದೆ ಇನ್ನೊಮ್ಮೆ ಇಂತಹ ಕಾರ್ಯವನ್ನು ಮಾಡಬೇಡ. ಮಿತ್ರ, ನೀನು ಪರಾಕ್ರಮದಲ್ಲಿ ದೇವೇಂದ್ರನಿಗೆ ಸಮನೆಂದು ಗೊತ್ತಿದ್ದರೂ ನಾನು ಚಿಂತಾಗ್ರಸ್ತನಾದೆ. ನೀನು ಬರದಿದ್ದರೆ ನನ್ನ ಮನಸ್ಸಿನಲ್ಲಿ ಹೀಗೆಯೇ ಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದೆ. ರಾವಣನನ್ನು ಕೊಂದು ವಿಭೀಷಣನಿಗೆ ಪಟ್ಟಗಟ್ಟಿ ಭರತನಿಗೆ ರಾಜ್ಯವನ್ನು ವಹಿಸಿಕೊಟ್ಟು ನಿಜವಾಗಿಯೂ ನಾನು ದೇಹತ್ಯಾಗವನ್ನು ಮಾಡುತ್ತಿದ್ದೆ'' ಎಂದನು. ಸುಗ್ರೀವನು ''ರಘುಕುಲೋತ್ತಮ, ನಿನ್ನ ಪತ್ನಿಯನ್ನು ಕದ್ದೊಯ್ದ ಆ ದುರುಳನನ್ನು ಕಂಡೊಡನೆ ನನಗೆ ಸುಮ್ಮನಿರಲಾಗಲಿಲ್ಲ. ಅವನನ್ನೊಮ್ಮೆ ಗುದ್ದಬೇಕೆಂದು ನಾನು ಅಲ್ಲಿಗೆ ಹೋದೆ. ನನ್ನ ಸಾಮರ್ಥ್ಯದ ಅರಿವಿರುವಾಗ ನಾನೇಕೆ ಹೆದರಲಿ?'' ಎಂದನು. ಲಕ್ಷ್ಮಣಾದಿಗಳೆಲ್ಲರೂ ಸುಗ್ರೀವನನ್ನು ಶ್ಲಾಘಿಸಿದರು.

೫೭

ಅಂಗದ ಸಂಧಾನ. ಲಂಕೆಯ ಮೇಲೆ ಮುತ್ತಿಗೆ. ಯುದ್ಧಾರಂಭ

ರಾಜನೀತಿಜ್ಞನಾದ ರಾಘವನು ಕಡೆಯದಾಗಿ ಸಂಧಿಯ ಪ್ರಯತ್ನವನ್ನು ಮಾಡಿನೋಡಬೇಕೆಂದು ಬಯಸಿ ಆ ವಿಷಯವಾಗಿ ಸುಗ್ರೀವಾದಿಗಳೊಡನೆ ಸಮಾಲೋಚಿಸಿದನು. ಅನಂತರ ಯುವರಾಜನಾದ ಅಂಗದನನ್ನು ಕರೆಯಿಸಿ ಹೀಗೆಂದನು. ''ಅಂಗದ, ನನಗಾಗಿ ನೀನೊಂದು ಕಾರ್ಯವನ್ನು ಮಾಡಬೇಕಾಗಿದೆ. ರಾವಣನೊಡನೆ ಸಂಧಾನಕ್ಕೆ ಯತ್ನಿಸಿ ನೋಡಬೇಕೆಂದು ನಾನು ನಿಶ್ಚಯಿಸಿದ್ದೇನೆ. ಆದ್ದರಿಂದ ನೀನು ನಮ್ಮ ರಾಯಭಾರಿಯಾಗಿ ರಾವಣನನ್ನು ಕಂಡುಬರಬೇಕು. ಧೀರನೂ ವೀರನೂ ಆದ ನಿನಗೆ ಯಾವ ಭಯವೂ ಇಲ್ಲ. ವತ್ಸ, ನೀನು ರಾವಣನನ್ನು

ಕಂಡು ನಾನು ಹೇಳಿದೆನೆಂದು ಈ ಮಾತನ್ನು ತಿಳಿಸು. ''ರಾಕ್ಷಸೇಶ್ವರ, ನೀನು ಮಾಡಿದುದು ಮಹತ್ತರವಾದ ಪಾಪಕಾರ್ಯ–ಎಂಬುದನ್ನು ಜಗತ್ತೇ ಬಲ್ಲದು. ಈಗಲಾದರೂ ನೀನು ಪಶ್ಚಾತ್ತಾಪವನ್ನು ಪಟ್ಟು ನನ್ನ ಪತ್ನಿಯಾದ ಜಾನಕಿಯನ್ನು ನನಗೆ ಒಪ್ಪಿಸಿಬಿಡು. ನಾನು ನಿನ್ನ ಎಲ್ಲ ಅಪರಾಧಗಳನ್ನೂ ಕ್ಷಮಿಸಲು ಸಿದ್ಧನಾಗಿದ್ದೇನೆ. ನಾನೀಗ ದಂಡಧಾರಿಯಾಗಿ ಲಂಕೆಯ ಬಾಗಿಲಿಗೆ ಬಂದು ನಿಂತಿದ್ದೇನೆ. ನೀನು ಶರಣಾದರೆ ಎಲ್ಲ ನಿನ್ನ ಸೈನಿಕರೂ, ಪ್ರಜೆಗಳೂ ಬದುಕಿಕೊಳ್ಳುತ್ತಾರೆ. ನಿನ್ನ ತಪ್ಪಿಗಾಗಿ ಅವರೆಲ್ಲರಿಗೂ ದೊಡ್ಡವಿಪತ್ತನ್ನು ತಂದು ಒಡ್ಡಬೇಡ. ಯುದ್ಧವು ಅತಿ ಭೀಕರವಾಗಿ ನಡೆದೀತು. ಈಗಲಾದರೂ ಒಳ್ಳೆಯ ಮಾತಿನಿಂದ ಶರಣಾಗು'' ಎಂದು ತಿಳಿಸು. ಅಂಗದ, ಆಗಲೂ ಅವನು ಹಟವನ್ನು ತೊಟ್ಟು ದರ್ಪದ ಮಾತನ್ನಾಡಿದರೆ ಈ ರೀತಿಯಾಗಿ ತಿಳಿಸು. ''ರಾವಣ, ಯಾವ ಕೊಬ್ಬಿನಿಂದ ನೀನು ಸೀತೆಯನ್ನು ಅಪಹರಿಸಿದೆಯೋ ಅದನ್ನೀಗ ತೋರಿಸು; ಬಾ. ಈ ಲೋಕದಲ್ಲಿ ರಾಕ್ಷಸಜಾತಿಯೇ ಇಲ್ಲದಂತೆ ನಿಶಿತಾಸ್ತ್ರಗಳಿಂದ ತೊಡೆದುಹಾಕುವೆನು. ಧರ್ಮಾತ್ಮನಾದ ವಿಭೀಷಣನು ಶರಣಾರ್ಥಿಯಾಗಿ ನನ್ನ ಬಳಿಗೆ ಬಂದಿದ್ದಾನೆ. ಅವನನ್ನು ರಕ್ಷಿಸುವುದು ನನ್ನ ಹೊಣೆ. ಅಧರ್ಮದಿಂದಲೇ ರಾಜಭೋಗವನ್ನು ಅನುಭವಿಸಬಹುದೆಂದು ತಿಳಿದಿರುವೆಯಾ? ಶರಣಾಗತನಾಗಲು ಇಷ್ಟವಿಲ್ಲದಿದ್ದರೆ ಯುದ್ಧಕ್ಕೆ ಸಂನದ್ಧನಾಗು. ಎಲಾ ರಾಕ್ಷಸ, ನನ್ನ ಕಣ್ಣಿಗೆ ಬಿದ್ದಮೇಲೆ ನೀನು ಬದುಕಿ ಹೋಗುವ ಮಾತು ಸುಳ್ಳು. ಹೆದರಿ ಹಕ್ಕಿಯಾಗಿ ಹಾರಿಹೋಗಿ ಮೂರು ಲೋಕದಲ್ಲಿ ಎಲ್ಲಡಗಿದರೂ ನಿನ್ನನ್ನು ಉಳಿಸುವುದಿಲ್ಲ. ರಾವಣ, ನಿನ್ನ ಅಪರಕ್ರಿಯೆಯನ್ನು ನೀನೇ ಮಾಡಿಕೊಂಡು ಬಿಡು! ತೃಪ್ತಿಯಾಗುವಂತೆ ಲಂಕೆಯನ್ನೊಮ್ಮೆ ನೋಡಿ ಬಾ. ನಿನ್ನ ಪ್ರಾಣ ನನ್ನ ಮುಷ್ಟಿಯೊಳಗಿದೆ!'' ಎಂದು ಹೇಳು'' ಎಂಬುದಾಗಿ ತಿಳಿಸಿದನು.

ಒಡನೆಯೇ ಅಂಗದನು ಶ್ರೀರಾಮನಿಗೆ ನಮಸ್ಕರಿಸಿ ಆಕಾಶಕ್ಕೆ ನೆಗೆದನು. ತೇಜಸ್ವಿಯಾದ ಆ ಧೀರನು ಲಂಕಾ ಪ್ರಾಕಾರವನ್ನು ಲಂಘಿಸಿ ನೆಟ್ಟಗೆ ರಾವಣನ ಅರಮನೆಗೆ ಬಂದಿಳಿದನು. ಸಚಿವರೊಡನೆ ಕುಳಿತಿದ್ದ ರಾಕ್ಷಸೇಶ್ವರನ ಬಳಿಗೆ ಹೋಗಿ ತಾನು ಯಾರೆಂಬುದನ್ನು ತಿಳಿಸಿದನು. ''ರಾವಣ, ಕೋಸಲೇಂದ್ರನಾದ ಶ್ರೀರಾಮನ ದೂತನು ನಾನು. ವಾಲಿಯ ಮಗ. ಅಂಗದನೆಂದು ನನ್ನ ಹೆಸರು. ಆ ರಘುನಾಥನು ಕಡೆಯ ಪ್ರಯತ್ನವಾಗಿ ನಿನಗೊಂದು ಸಂದೇಶವನ್ನು ಕಳಿಸಿದ್ದಾನೆ'' ಎಂದನು. ರಾವಣನು ಅವನನ್ನು ಕೆಕ್ಕರಿಸಿ ನೋಡುತ್ತ ''ಎಲೇ ಮಂಗ, ರಾಮನ ದೂತನೆಂದು ಹೇಳಿಕೊಳ್ಳಲು ನಿನಗೆ ನಾಚಿಕೆಯಾಗುವುದಿಲ್ಲವೆ? ನಿನ್ನ ತಂದೆಯನ್ನು ಕೊಂದ ಆತನಿಗೆ ನೀನು ದೂತನಾಗಿರುವೆಯಾ? ಅಣ್ಣನಿಗೆ ದ್ರೋಹ ಮಾಡಿದ ಸುಗ್ರೀವನನ್ನು ಆಶ್ರಯಿಸಿ

ಬದುಕಿಕೊಂಡಿದ್ದೀಯಾ? ಎಲಾ ಹೇಡಿ, ಇರಲಿ. ಏನು ಹೇಳು'' ಎಂದನು. ಆಗ ಅಂಗದನು ಶ್ರೀರಾಮನು ಹೇಳಿದ ಎಲ್ಲ ಮಾತುಗಳನ್ನೂ ಕ್ರಮವಾಗಿ ತಿಳಿಸಿದನು. ರಾವಣನು ಸಂಧಿಯನ್ನು ಧಿಕ್ಕರಿಸಿದನು. ಅನಂತರ ಅಂಗದನು ''ಎಲೈ ಘಾತುಕ, ಧರ್ಮಾತ್ಮನಾದ ಶ್ರೀರಾಮನ ಪರಾಕ್ರಮವನ್ನೂ ಅವನ ಸೌಜನ್ಯವನ್ನೂ ನೀನು ಕಾಣೆ. ಒಳ್ಳೆಯ ಮಾತಿನಿಂದ ಅವನನ್ನು ಶರಣಾಗಿ ಬದುಕಿಕೊ'' ಎಂದನು. ರಾವಣನು ಸಿಟ್ಟಿನಿಂದ ''ಎಲೈ ದುಷ್ಟ, ಆ ತಿರುಕನಿಗೆ ಶರಣಾಗಲು ನಾನೇನು ನಿನ್ನಂತೆ ಕೈಲಾಗದವನೆ?'' ಎಂದು ನುಡಿದು ತನ್ನ ಸಚಿವರನ್ನು ಕುರಿತು ''ಹಿಡಿಯಿರಿ, ಹಿಡಿಯಿರಿ ಈ ದುಷ್ಟನನ್ನು. ಕೊಂದುಹಾಕಿರಿ ಈ ಕಪಿಯನ್ನು'' ಎಂದು ಅಬ್ಬರಿಸಿದನು. ಕೂಡಲೇ ನಾಲ್ವರು ರಾಕ್ಷಸರು ಬಂದು ಅಂಗದನನ್ನು ಹಿಡಿದು ಕೊಂಡರು. ಆ ಪರಾಕ್ರಮಿಯು ಅವರನ್ನು ಲೆಕ್ಕಿಸದೆ ಸುಮ್ಮನೆ ನಿಂತಿದ್ದನು. ಅಂಗದನ ಒಂದೊಂದು ಕೈಯನ್ನೂ ಇಬ್ಬಿಬ್ಬರು ರಾಕ್ಷಸರು ಬಲವಾಗಿ ಹಿಡಿದುಕೊಂಡ ಮೇಲೆ, ರಾವಣನು ಮಿಕಮಿಕನೆ ನೋಡುತ್ತಿರುವಾಗಲೇ ಅಂಗದನು ಆಕಾಶಕ್ಕೆ ನೆಗೆದು ತನ್ನ ಎರಡು ಕೈಗಳನ್ನೂ ಕೊಡವಿದನು. ನಾಲ್ವರು ರಾಕ್ಷಸರೂ ದೊಪ್ಪನೆ ನೆಲದಮೇಲೆ ಬಿದ್ದರು. ಅನಂತರ ಆ ವೀರನು ಅರಮನೆಯ ಶಿಖರವನ್ನು ಒದ್ದು ಕೆಡವಿ ''ನಾನು ವಾಲಿಪುತ್ರ. ನನ್ನ ಹೆಸರು ಅಂಗದ'' ಎಂದು ಘೋಷಿಸಿ ಸಿಂಹನಾದ ಮಾಡಿ ಆಕಾಶಕ್ಕೆ ಹಾರಿ ಶ್ರೀರಾಮನ ಪಾರ್ಶ್ವದಲ್ಲಿ ಬಂದು ನಿಂತನು. ರಾಘವನು ಅಂಗದಸಂಧಾನದ ಪರಿಯೆಲ್ಲವನ್ನೂ ಕೇಳಿ ಯುದ್ಧವು ಅನಿವಾರ್ಯವೆಂದು ನಿಶ್ಚಯಿಸಿ ವಾನರಯೋಧರೊಡನೆ ಸಂಗ್ರಾಮಕ್ಕೆ ಸಿದ್ಧನಾದನು. ಸುಗ್ರೀವನ ಆಜ್ಞೆಯಂತೆ ವಾನರಯೋಧರು ಲಂಕೆಯ ಪ್ರಾಕಾರವನ್ನು ಸುತ್ತುಗಟ್ಟಿ ಲಗ್ಗೆಹತ್ತಿದರು.

ಇತ್ತಲಾಗಿ ರಾವಣನು ಅರಮನೆಯ ಪ್ರಾಸಾದದ ಬಳಿಗೆ ಹೋಗಿ ಸುತ್ತಲೂ ವಾನರರು ಯುದ್ಧಾಪೇಕ್ಷೆಯಿಂದ ಲಂಕೆಯನ್ನು ಸುತ್ತುಗಟ್ಟಿರುವುದನ್ನು ಕಂಡನು. ಅಷ್ಟರಲ್ಲಿ ಶ್ರೀರಾಮನ ಆಜ್ಞೆಯಂತೆ ವಾನರರು ಗರ್ಜಿಸುತ್ತ ಲಂಕೆಯನ್ನಾಕ್ರಮಿಸಿದರು. ''ಶ್ರೀರಾಮನಿಗೆ ಜಯವಾಗಲಿ! ಶೂರನಾದ ಲಕ್ಷ್ಮಣನಿಗೆ ಜಯವಾಗಲಿ! ಸುಗ್ರೀವ ಮಹಾರಾಜನಿಗೆ ಜಯವಾಗಲಿ!'' ಎಂಬ ಘೋಷವು ಆಕಾಶವನ್ನಡರಿತು. ಆಗ ರಾವಣನ ಆಜ್ಞೆಯಂತೆ ರಾಕ್ಷಸ ಸೈನಿಕರು ಉತ್ಸಾಹದಿಂದ ಮಹಾಸಾಗರದ ಅಲೆಗಳಂತೆ ತಂಡತಂಡವಾಗಿ ನಗರದಿಂದ ಹೊರಬಂದರು. ರಾಕ್ಷಸ ಸೇನೆಯಲ್ಲಿದ್ದ ಗಜಗಳ ಘೀಂಕಾರ, ಅಶ್ವಗಳ ಹೇಷಾರವ, ರಥಚಕ್ರಗಳ ಚೀತ್ಕಾರ – ಇವುಗಳಿಂದ ಕೋಲಾಹಲವೆದ್ದಿತು. ರಾಕ್ಷಸರಿಗೂ ವಾನರರಿಗೂ ಘೋರಸಂಗ್ರಾಮವು ತೊಡಗಿತು. ವಾನರ ವೀರರು ಬಂಡೆಗಳಿಂದ ಬಡಿದು, ಮರಗಳಿಂದ ಹೊಡೆದು, ನಖಗಳಿಂದ

ಪರಚಿ, ದಂತಗಳಿಂದ ಕಚ್ಚಿ ರಾಕ್ಷಸರನ್ನು ಕೊಲ್ಲತೊಡಗಿದರು. ರಾಕ್ಷಸರು ಗದೆ, ಶೂಲ, ಖಡ್ಗ–ಮೊದಲಾದವನ್ನು ಹಿಡಿದು ಹೋರಾಡಿದರು. ಆ ತುಮುಲಯುದ್ಧದಲ್ಲಿ ಎಲ್ಲೆಲ್ಲಿಯೂ ರಕ್ತಮಾಂಸಗಳು ಚೆಲ್ಲಾಡಿ ರಣಾಂಗಣವು ಕೊಚ್ಚೆಯಾಯಿತು. ಆ ದ್ವಂದ್ವಯುದ್ಧದಲ್ಲಿ ಶ್ರೀರಾಮನು ಅಗ್ನಿಕೇತು, ದುರ್ಧರ್ಷ ಮುಂತಾದ ನಾಲ್ವರು ರಾಕ್ಷಸಸೇನಾಪತಿಗಳನ್ನು ಸಂಹರಿಸಿದನು. ಲಕ್ಷ್ಮಣನು ವಿರೂಪಾಕ್ಷನನ್ನೂ, ನೀಲನು ನಿಕುಂಭನನ್ನೂ, ದ್ವಿವಿದನು ಅಶನಿಪ್ರಭನನ್ನೂ, ಸುಷೇಣನು ವಿದ್ಯುನ್ಮಾಲಿಯನ್ನೂ ಕೊಂದು ಹಾಕಿದರು.

೫೮

ರಾತ್ರಿಯುದ್ಧ, ಇಂದ್ರಜಿತುವಿನ ಸರ್ಪಾಸ್ತ್ರಗಳಿಂದ ಶ್ರೀರಾಮ ಲಕ್ಷ್ಮಣರು ಮೂರ್ಛೆಹೋಗುವುದು. ಸೀತಾದೇವಿಯು ಆ ದೃಶ್ಯವನ್ನು ನೋಡಿ ಶೋಕಿಸುವುದು. ತ್ರಿಜಟೆಯ ಸಮಾಧಾನ

ಹೀಗೆ ಯುದ್ಧವು ನಡೆಯುತ್ತಿರಲು ಸೂರ್ಯನು ಮುಳುಗಿದನು. ಭೀಕರವಾದ ರಾತ್ರಿಯು ಪ್ರಾಪ್ತವಾಯಿತು. ಆ ಕತ್ತಲಲ್ಲಿಯೂ ಯುದ್ಧವು ನಡೆಯುತ್ತಲೇ ಇತ್ತು, ರಕ್ತದ ಹೊನಲುಗಳಿಂದ ಕೊಚ್ಚೆಯಾದ ಆ ರಣಭೂಮಿಯಲ್ಲಿ ಎಲ್ಲಿ ಏನಿದೆ? ಎಲ್ಲಿ ಕಾಲಿಡಬೇಕು? ಎಂಬುದು ತಿಳಿಯದಾಯಿತು. ಮಹಾಬಲಾಢ್ಯನಾದ ಶ್ರೀರಾಮನು ಸುವರ್ಣ ಪುಂಖಾಂಕಿತಶರಗಳನ್ನು ಪ್ರಯೋಗಿಸತೊಡಗಿದನು. ಬೆಂಕಿಯಂತೆ ಬೆಳಗುತ್ತಿದ್ದ ಆ ಶರಗಳು ದಿಗ್ ದಿಗಂತಗಳನ್ನು ಬೆಳಗುತ್ತಿದ್ದವು. ಮಹೋದರನೇ ಮೊದಲಾದ ರಾಕ್ಷಸ ವೀರರು ಶ್ರೀರಾಮನೆದುರಿಗೆ ನಿಲ್ಲಲಾರದೆ ಹೆದರಿ ಓಡಿಹೋದರು. ಇನ್ನೊಂದು ಕಡೆ ಅಂಗದನಿಗೂ ಇಂದ್ರಜಿತುವಿಗೂ ಘೋರವಾದ ಹೋರಾಟ ನಡೆಯುತ್ತಿತ್ತು, ಅಂಗದನು ಒಂದೇ ಪ್ರಹಾರದಿಂದ ಇಂದ್ರಜಿತುವಿನ ಸಾರಥಿಯನ್ನೂ, ಕುದುರೆಗಳನ್ನೂ ಬಡಿದು ಉರುಳಿಸಿದನು. ಕೂಡಲೇ ಇಂದ್ರಜಿತುವು ರಥದಿಂದ ಆಕಾಶಕ್ಕೆ ನೆಗೆದು ಅಂತರ್ಧಾನ ಹೊಂದಿದನು. ಮಹಾಮಾಯಾವಿಯಾದ ಆತನಿಗೆ ಬ್ರಹ್ಮನು ಅನುಗ್ರಹಿಸಿದ್ದ ವರಬಲವಿತ್ತು, ಅವನು ಅದೃಶ್ಯನಾಗಿ ಆಕಾಶದಲ್ಲಿ ನಿಂತು ಘೋರವಾದ ಸರ್ಪಾಸ್ತ್ರಗಳಿಂದ ಶ್ರೀರಾಮನನ್ನೂ ಲಕ್ಷ್ಮಣನನ್ನೂಗುರಿಯಿಟ್ಟು ಹೊಡೆಯತೊಡಗಿದನು. ಇಂದ್ರಜಿತುವಿನ ಕೂಟಯುದ್ಧದಲ್ಲಿ ಪುರುಷಸಿಂಹರಾದ ಆ ಸಹೋದರರು ಸರ್ಪಾಸ್ತ್ರಗಳನ್ನು ಎದುರಿಸಿದರು. ಇಂದ್ರಜಿತು ಎಲ್ಲಿರುವನೆಂದು ತಿಳಿಯುವುದಕ್ಕಾಗಿ ಹತ್ತು ಮಂದಿ ವಾನರವೀರರು ಆಕಾಶಕ್ಕೆ ಹಾರಿ ಅವನನ್ನು ಹುಡುಕ ತೊಡಗಿದರು. ರಾವಣಿಯು ಎಲ್ಲಿಯೂ ಅವರಿಗೆ ಗೋಚರಿಸಲಿಲ್ಲ, ಆ ಮಾಯಾವಿಯು

ಶರಗಳಿಂದ ವಾನರರನ್ನು ಹೊಡೆದು ತರಿಯುತ್ತಲೇ ಇದ್ದನು. ಆತನು ಸರ್ಪಾಸ್ತ್ರಗಳಿಂದ ಮತ್ತೆ ಮತ್ತೆ ರಾಮ ಲಕ್ಷ್ಮಣರ ಕಡೆಗೆ ಹೊಡೆಯುತ್ತಲೇ ಇದ್ದನು. ಶರಗಳನ್ನು ತೂರಿ ತೂರಿ ಸಿಂಹನಾದ ಮಾಡುತ್ತಿದ್ದನು. ಅವನು ಕಣ್ಣಿಗೆ ಕಾಣಿಸದೇ ಹೋದ್ದರಿಂದ ಆತನ ಶರಪಂಜರದಿಂದ ಬಂಧಿತರಾದ ಆ ಸೋದರರಿಗೆ ಕಣ್ಣುಕಾಣದಂತಾಗಿ ಪ್ರಜ್ಞೆತಪ್ಪಿ ಕೆಳಗೆ ಬಿದ್ದರು. ನಾಗಪಾಶಗಳಿಂದ ಬದ್ಧರಾದ ರಾಮಲಕ್ಷ್ಮಣರನ್ನು ನೋಡಿ ವಾನರರು ವಿಷಣ್ಣರಾಗಿ ಮಹಾವ್ಯಸನದಲ್ಲಿ ಮುಳುಗಿ ಹೋದರು. ಇಂದ್ರಜಿತುವು ಎಚ್ಚರದಪ್ಪಿ ಮಲಗಿದ್ದ ರಾಮಲಕ್ಷ್ಮಣರನ್ನು ನೋಡಿ ಆನಂದದಿಂದ ಉಬ್ಬಿದನು. ಆತನು ''ಎಲೈ ರಾಕ್ಷಸಭಟರೆ, ನೋಡಿರಿ. ತಾವೇ ಬಲಶಾಲಿಗಳೆಂದು ಮೆರೆಯುತ್ತಿದ್ದ ರಾಮಲಕ್ಷ್ಮಣ ರನ್ನು ಬಾಣಗಳಿಂದ ಹೊಡೆದುರುಳಿಸಿದ್ದೇನೆ. ಇವರಿಬ್ಬರಿಗೋಸ್ಕರವೇ ಅಲ್ಲವೇ ನನ್ನ ತಂದೆಯು ಚಿಂತಾಕ್ರಾಂತನಾಗಿ ನಿದ್ರಿಸುತ್ತಿರಲಿಲ್ಲ. ಸೇತು ಬಂಧನಾದಿ ನಿಮ್ಮ ಸಕಲ ವಿಕ್ರಮಗಳೂ ನಿಷ್ಫಲವಾದವು'' ಎಂದು ಕೂಗಿ ಹೇಳಿದನು. ರಾಮಲಕ್ಷ್ಮಣರು ಮೃತರಾದರೆಂದೇ ತಿಳಿದು ಆ ರಾವಣಪುತ್ರನು ರಾಕ್ಷಸಭಟರೊಡನೆ ಸಂಭ್ರಮದಿಂದ ಲಂಕೆಯನ್ನು ಪ್ರವೇಶಿಸಿದನು.

ನಾಗಪಾಶಗಳಿಂದ ಎಚ್ಚರದಪ್ಪಿ ಮಲಗಿದ್ದ ರಾಮಲಕ್ಷ್ಮಣರನ್ನು ಕಂಡು ಸುಗ್ರೀವನಿಗೆ ಹೆದರಿಕೆ ಹುಟ್ಟಿತು. ದೈನ್ಯದಿಂದ ಕಳವಳಿಸತೊಡಗಿದನು. ಆಗ ವಿಭೀಷಣನು ಬಂದು ''ಮಿತ್ರ–ಸುಗ್ರೀವ, ಹೆದರಬೇಡ. ಕಣ್ಣೀರು ಸುರಿಸಬೇಡ. ಯುದ್ಧದಲ್ಲಿ ಯಾರಿಗಾದರೂ ಹೀಗಾಗುವುದು ಸಾಮಾನ್ಯವಾದುದು. ಕಪಿರಾಜ, ಮಹಾತ್ಮರಾದ ಈ ಅಣ್ಣತಮ್ಮಂದಿರು ಚೇತರಿಸಿಕೊಳ್ಳುವರು. ಸತ್ಯಧರ್ಮಗಳಲ್ಲಿ ದೃಢ ನಿಷ್ಠೆಯುಳ್ಳವರಿಗೆ ಎಂದಿಗೂ ಅಪಮೃತ್ಯು ಬರದು'' ಎಂದು ಹೇಳಿದನು. ತಣ್ಣೀರಿನಿಂದ ಒದ್ದೆಯಾದ ಕೈಯಿಂದ ಸುಗ್ರೀವನ ಕಣ್ಣುಗಳನ್ನು ಒರೆಸಿದನು. ಆಮೇಲೆ ''ಸುಗ್ರೀವ, ಶ್ರೀರಾಮನ ಮುಖಶ್ರೀಯನ್ನು ನೋಡು. ಆಯುಸ್ಸು ತೀರಿದವರ ಮುಖದಲ್ಲಿ ಇಂತಹ ಕಾಂತಿಯಿರುವುದೆ? ಇವರಿಬ್ಬರೂ ಎಚ್ಚರಗೊಳ್ಳುವವರೆಗೆ ಕಾವಲಾಗಿರಿ, ನಾನು ಈ ವಾನರ ಸೇನೆಯೊಳಗೆ ಹೋಗಿ ಅವರೆಲ್ಲರಿಗೂ ಸಮಾಧಾನ ಹೇಳುವೆನು'' ಎಂದು ಸಂತೈಸಿ ಹೊರಟುಹೋದನು.

ಇಂದ್ರಜಿತುವು ಸಂತೋಷದಿಂದ ಉಬ್ಬಿ ತಂದೆಯಿದ್ದಲ್ಲಿಗೆ ಹೋಗಿ ಅವನಿಗೆ ಅಭಿವಾದನ ಮಾಡಿ 'ರಾಮ ಲಕ್ಷ್ಮಣರು ಹತರಾದರು' ಎಂಬ ಆನಂದದ ಸುದ್ದಿಯನ್ನು ತಂದೆಗೆ ಅರಿಕೆ ಮಾಡಿದನು. ರಾವಣನು ತನ್ನ ಸಿಂಹಾಸನದಿಂದ ಜಗ್ಗನೆ ಎದ್ದು ಬಂದು ಮಗನನ್ನಪ್ಪಿಕೊಂಡನು. ಹರ್ಷದಿಂದ ಉಬ್ಬಿದ ರಾವಣನು ನಡೆದ

ವೃತ್ತಾಂತವೆಲ್ಲವನ್ನೂ ಕೇಳಿ ಮತ್ತೆ ಮತ್ತೆ ಇಂದ್ರಜಿತುವನ್ನು ಆಲಿಂಗಿಸಿಕೊಂಡನು. ರಾವಣನ ಹೃದಯವು ಆನಂದಾತಿರೇಕದಿಂದ ಉಕ್ಕಿ ನಲಿಯಿತು. ಶ್ರೀರಾಮನ ಚಿಂತೆಯಿಂದ ಕಾವೇರಿದ ಜ್ವರವು ಇಳಿಯಿತು. ಅವನು ಮಗನನ್ನು ಕೊಂಡಾಡಿದನು.

ಹೀಗೆ ರಾವಣನ ಮಗನಾದ ಮೇಘನಾದನು ತನ್ನ ಕಾರ್ಯವು ಯಶಸ್ವಿಯಾಯಿತೆಂದು ಸಂತೋಷದಿಂದ ಲಂಕೆಗೆ ಹೋಗಲಾಗಿ ಇತ್ತ ಕಪಿನಾಯಕರು ಶ್ರೀ ರಾಮ ಲಕ್ಷ್ಮಣರ ಸುತ್ತಲೂ ಶೋಕಿಸುತ್ತಾ ಕಾವಲಾಗಿ ನಿಂತರು. ಈ ಕಡೆ ರಾವಣನು ಹರ್ಷದಿಂದ ಸೀತೆಯನ್ನು ಕರೆದುಕೊಂಡು ಹೋಗಿ ಸತ್ತು ಬಿದ್ದಿರುವ ರಾಮಲಕ್ಷ್ಮಣರನ್ನು ಅವಳಿಗೆ ತೋರಿಸಬೇಕೆಂದು ರಾಕ್ಷಸಿಯರಿಗೆ ಆಜ್ಞಾಪಿಸಿದನು. ಹಾಗೆಯೇ ರಾಕ್ಷಸಿಯರು ಪುಷ್ಪಕವಿಮಾನದಲ್ಲಿ ಸೀತೆಯನ್ನು ಒತ್ತಾಯದಿಂದ ಕುಳ್ಳಿರಿಸಿಕೊಂಡು ರಾಮಲಕ್ಷ್ಮಣರನ್ನು ತೋರಿಸುವುದಕ್ಕಾಗಿ ಕರೆದೊಯ್ದರು. ಜೊತೆಯಲ್ಲಿ ತ್ರಿಜಟೆಯೂ ಹೋದಳು. ಆ ರಾಕ್ಷಸಿಯರು ಎಚ್ಚರದಪ್ಪಿ ಮಲಗಿದ್ದ ರಾಮಲಕ್ಷ್ಮಣರನ್ನು ಜಾನಕಿಗೆ ತೋರಿಸಲಾಗಿ, ಅವಳ ದುಃಖವು ಉಮ್ಮಳಿಸಿ ಹೋ ಎಂದು ಅಳತೊಡಗಿದಳು. ನಾನಾ ವಿಧವಾಗಿ ತನ್ನನ್ನು ಹಳಿದುಕೊಂಡು ತಾನೇ ಅವರ ಮರಣಕ್ಕೆ ಕಾರಣನಾದೆನೆಂದು ಗೋಳಾಡಿದಳು. ''ವೀರರಾದ ಈ ಸಹೋದರರು ಅಕ್ಷೋಭ್ಯವಾದ ಮಹಾಸಾಗರವನ್ನೇ ದಾಟಿ ಬಂದು ಇಷ್ಟು ಬೇಗನೆ ಹತರಾಗಿಬಿಟ್ಟರೆ? ಅಗ್ನೇಯಾಸ್ತ್ರ, ಬ್ರಹ್ಮಶಿರೋಸ್ತ್ರ ಮುಂತಾದ ದಿವ್ಯಾಸ್ತ್ರಗಳನ್ನು ಪಡೆದಿರುವ ಈ ವೀರರು ಅಲ್ಪನಾದ ಮೇಘನಾದನ ಕೈಯಿಂದ ಹತರಾದರೆ? ನನ್ನ ಅತ್ತೆಯನ್ನು ನೆನೆಸಿಕೊಂಡರೆ ನನ್ನ ದುಃಖವು ಉಮ್ಮಳಿಸುತ್ತದೆ'' ಎಂದು ಹಲುಬುತ್ತ ಒಂದೇ ಸಮನೆ ಅಳತೊಡಗಿದಳು. ಅವಳ ದುಃಖಕ್ಕೆ ಪಾರವೇ ಉಳಿಯಲಿಲ್ಲ. ಆಗ ತ್ರಿಜಟೆಯು ಸೀತಾದೇವಿಯನ್ನು ಸಂತೈಸುತ್ತಾ ಇಂತೆಂದಳು. ''ಅಮ್ಮಾ-ಸೀತೆ, ಅಳಬೇಡ. ನಿನ್ನ ಪತಿಯು ಬದುಕಿದ್ದಾನೆ. ಲಕ್ಷ್ಮಣನೂ ಜೀವಂತವಾಗಿದ್ದಾನೆ. ನಾನು ಹೇಳುವುದಕ್ಕೆ ಪ್ರಬಲವಾದ ಕಾರಣವಿದೆ. ರಾಘವನು ಹತನಾಗಿದ್ದರೆ ಈ ವಾನರಯೋಧರ ಮುಖದಲ್ಲಿ ಹೀಗೆ ಉತ್ಸಾಹವು ಎದ್ದು ಕಾಣುತ್ತಿರಲಿಲ್ಲ. ಈ ಪುಷ್ಪಕವೆಂಬ ದಿವ್ಯವಿಮಾನವು ಪತಿಹೀನೆಯಾದ ನಿನ್ನನ್ನು ಹೊರುತ್ತಿರಲಿಲ್ಲ! ಅಲ್ಲಿ ನೋಡು, ಆ ವಾನರಸೇನೆಯು ರಾಮಲಕ್ಷ್ಮಣರನ್ನು ಎಚ್ಚರಿಕೆಯಿಂದ ರಕ್ಷಿಸುತ್ತಿದೆ. ಅವರಿಬ್ಬರೂ ಬದುಕಿರುವುದು ನಿಶ್ಚಯ. ದೇವಿ, ನಾನು ಎಂದೂ ಸುಳ್ಳು ಹೇಳಿದವಳಲ್ಲ, ಮುಂದೆ ಹೇಳತಕ್ಕವಳೂ ಅಲ್ಲ. ಪರಿಶುದ್ಧವಾದ ನಿನ್ನ ಚಾರಿತ್ರ್ಯ, ಗುಣ, ಶೀಲಗಳು ನನ್ನ ಹೃದಯವನ್ನು ಸೂರೆಗೊಂಡಿವೆ. ವೈದೇಹಿ, ರಾಮಲಕ್ಷ್ಮಣರ ಮುಖಕಾಂತಿಯು ಸ್ವಲ್ಪವೂ ಕಂದಿರುವುದಿಲ್ಲ. ಅವರು ಖಂಡಿತವಾಗಿ ಮೃತರಾಗಿಲ್ಲ, ಆಯಾಸದಿಂದ ಎಚ್ಚರದಪ್ಪಿದಂತೆ ಆಗಿರಬೇಕು'' ಎಂದು ಹೇಳಿದಳು.

ತ್ರಿಜಟೆಯ ಆ ಮಾತನ್ನು ಕೇಳಿ ಜಾನಕಿಯು ಕೈಮುಗಿದುಕೊಂಡು ''ಅಮ್ಮಾ-ತ್ರಿಜಟೆ, ನೀನು ಹೇಳಿದಂತೆ ಈ ಸೋದರರು ಕ್ಷೇಮವಾಗಿ ಬದುಕಿರಲಿ. ಇದು ನನ್ನ ಪ್ರಾರ್ಥನೆ'' ಎಂದಳು. ಆಮೇಲೆ ರಾಕ್ಷಸಿಯರು ಪುಷ್ಪಕವಿಮಾನವನ್ನು ವೇಗದಿಂದ ಹಿಂದಿರುಗಿಸಿ ಸೀತೆಯನ್ನು ಅಶೋಕವನಕ್ಕೆ ಕರೆದೊಯ್ದರು. ಆಕೆಗೆ ಶ್ರೀರಾಮಲಕ್ಷ್ಮಣರ 'ನ್ನು ಕಂಡ ದೃಶ್ಯವೇ ಕಣ್ಣಮುಂದಿತ್ತು. ಅದನ್ನು ನೆನೆ ನೆನೆದು ಬಸವಳಿದಳು.

೫೯

ಗುರುತ್ಮಂತನ ಆಗಮನ. ಸರ್ಪಾಸ್ತ್ರಗಳಿಂದ ವಿಮೋಚನೆ. ಹನುಮಂತನಿಂದ ಧೂಮ್ರಾಕ್ಷನ ವಧೆ.

ಘೋರವಾದ ಸರ್ಪಾಸ್ತ್ರಗಳ ಬಂಧನಕ್ಕೆ ಸಿಕ್ಕಿದ ಶ್ರೀರಾಮಲಕ್ಷ್ಮಣರು ರಕ್ತದಲ್ಲಿ ತೊಯ್ದು ಮಲಗಿದ್ದರು. ಸ್ವಲ್ಪ ಹೊತ್ತಿನಲ್ಲಿ ತನ್ನ ಅಸಾಧಾರಣವಾದ ಸತ್ತ್ವಬಲದಿಂದ ಚೇತರಿಸಿಕೊಂಡ ಶ್ರೀರಾಮನು ಬಳಿಯಲ್ಲಿ ಎಚ್ಚರದಪ್ಪಿ ಮಲಗಿದ್ದ ಲಕ್ಷ್ಮಣನನ್ನು ಕಂಡು ಶೋಕಾರ್ತನಾಗಿ ವಿಲಪಿಸತೊಡಗಿದನು. ''ಅಯ್ಯೋ, ನನ್ನ ತಮ್ಮನು ಹೀಗೆ ಮಲಗಿರುವುದನ್ನು ನೋಡಿ ನನ್ನ ಎದೆ ಒಡೆದು ಹೋಗುತ್ತಿದೆ. ಲಕ್ಷ್ಮಣನಂತಹ ತಮ್ಮನು ನನಗೆ ದೊರಕುವನೆ? ಯುದ್ಧವೀರನೂ, ಅತ್ಯಂತ ಆಪ್ತನೂ ಆದ ಲಕ್ಷ್ಮಣನು ಗತಿಸಿದಮೇಲೆ ನನಗೆ ಸೀತೆಯಿಂದೇನಾಗಬೇಕು? ನಾನಾದರೂ ಏಕೆ ಬದುಕಿರಬೇಕು? ಅಯೋಧ್ಯೆಗೆ ಹಿಂದಿರುಗಲು ನನಗೆ ಮುಖವುಂಟೆ? ನನ್ನ ಚಿಕ್ಕಮ್ಮನಾದ ಸುಮಿತ್ರಾ ದೇವಿಯನ್ನು ಹೇಗೆ ಸಂತೈಸಲಿ?'' ಎಂದು ಬಹುವಿಧವಾಗಿ ಗೋಳಾಡಿದನು. ಅಷ್ಟರಲ್ಲಿ ವೀರನಾದ ವಿಭೀಷಣನು ವಾನರ ಸೇನೆಯನ್ನು ಸಂತೈಸಿ ಗದಾಪಾಣಿಯಾಗಿ ಅಲ್ಲಿಗೆ ಬಂದನು. ಆತನು ಶ್ರೀರಾಮಲಕ್ಷ್ಮಣರ ಸರ್ವಾಂಗಗಳೂ ಗಾಯಗೊಂಡಿರುವುದನ್ನು ಕಂಡು ದುಃಖಿತನಾಗಿ ಏನು ಮಾಡಲೂ ತೋರದೆ ವ್ಯಥೆಯಿಂದ ಕುಳಿತನು. ಅಷ್ಟರಲ್ಲಿ ಸುಷೇಣನು ಅಲ್ಲಿಗೆ ಬಂದನು. ಅವನು ವೈದ್ಯಶಾಸ್ತ್ರದಲ್ಲಿ ತುಂಬ ನಿಪುಣ. ಆತನು ರಾಮ ಲಕ್ಷ್ಮಣರನ್ನು ಪರೀಕ್ಷಿಸಿ ಸುಗ್ರೀವನ ಕಡೆಗೆ ತಿರುಗಿ ''ಸುಗ್ರೀವ, ಸರಿಯಾದ ಚಿಕಿತ್ಸೆಯಿಂದ ಶ್ರೀರಾಮ ಲಕ್ಷ್ಮಣರನ್ನು ಉಳಿಸಬಹುದು. ಸಾಮಾನ್ಯವಾದ ಚಿಕಿತ್ಸೆಯಿಂದ ಫಲವಾಗದು. ಕ್ಷೀರಸಮುದ್ರದ ಬಳಿ ಚಂದ್ರ, ದ್ರೋಣ ಎಂಬ ಎರಡು ಪರ್ವತಗಳಿವೆ. ಅವುಗಳಲ್ಲಿ ಸಂಜೀವಕರಣಿ, ವಿಶಲ್ಯಕರಣಿ ಎಂಬ ಎರಡು ದಿವ್ಯ ಮೂಲಿಕೆಗಳಿವೆ. ಅವನ್ನು ಈಗ ತರಬೇಕು. ಮಹಾರಾಜ, ಅವನ್ನು ತರಲು ವಾಯುಪುತ್ರನಾದ ಹನುಮಂತನೇ ಸಮರ್ಥ. ಆತನನ್ನು ಕಳಿಸು'' ಎಂದನು. ಅಷ್ಟುಹೊತ್ತಿಗೆ ಸರಿಯಾಗಿ ಇದ್ದಕ್ಕಿದ್ದಂತೆ ದೊಡ್ಡಬಿರುಗಾಳಿ ಬೀಸಿತು. ಸಮುದ್ರ ಜಲವು

ಉಲ್ಲೋಲಕಲ್ಲೋಲವಾಯಿತು. ಸಮುದ್ರದಲ್ಲಿದ್ದ ಸರ್ಪಗಳು ಹೆದರಿ ತತ್ತರಿಸಿದವು. ಸಮಸ್ತ ವಾನರರು ಇದೇನಿರಬಹುದೆಂದು ಆಕಾಶದ ಕಡೆಗೆ ನೋಡುತ್ತಿರುವಾಗ ವಿನತಾಪುತ್ರನಾದ ಗರುತ್ಮಂತನು ಕಾಣಿಸಿಕೊಂಡನು. ಆ ಗರುಡನು ಹತ್ತಿರ ಬರುತ್ತಿದ್ದಂತೆಯೇ ಶ್ರೀರಾಮ ಲಕ್ಷ್ಮಣರನ್ನು ಶರರೂಪದಿಂದ ಬಂಧಿಸಿದ್ದ ಮಹಾಸರ್ಪಗಳು ಅವರನ್ನು ಬಿಟ್ಟು ಓಡಿಹೋದವು. ಗರುಡನು ಸಮೀಪಕ್ಕೆ ಬಂದು ನೆಲದ ಮೇಲಿಳಿದನು. ಶ್ರೀರಾಮಲಕ್ಷ್ಮಣರು ಚೇತರಿಸಿಕೊಂಡು ಮೇಲೆದ್ದರು. ಆ ವೈನತೇಯನು ಅವರ ಮೈಯನ್ನು ಸವರಿ ನೇವರಿಸಲಾಗಿ ಎಲ್ಲ ಗಾಯಗಳೂ ಮಾಯವಾದವು. ಅವರ ದೇಹಗಳು ಚಿನ್ನದಂತೆ ಹೊಳಪೇರಿದವು. ಅವರ ತೇಜಸ್ಸು, ಓಜಸ್ಸು, ಉತ್ಸಾಹ, ಬುದ್ಧಿಶಕ್ತಿ ಮೊದಲಾದ ಮಹಾಗುಣಗಳು ಇಮ್ಮಡಿಸಿದವು. ಗರುಡನು ಆ ವೀರಾಗ್ರೇಸರರಿಬ್ಬರನ್ನೂ ಪ್ರೀತಿಯಿಂದ ಆಲಿಂಗಿಸಿಕೊಂಡನು. ಆಗ ಶ್ರೀರಾಮನು ''ಓ ಮಹಾತ್ಮ, ನೀನು ಯಾರು? ನನ್ನ ತಂದೆಯಾದ ದಶರಥ ಮಹಾರಾಜನನ್ನು ಕಂಡಂತೆ ನನಗೆ ಹರ್ಷವಾಗುತ್ತಿದೆ. ದಿವ್ಯಾಭರಣ ಭೂಷಿತನಾದ ನೀನು ಯಾರು?'' ಎಂದು ಕೇಳಿದನು. ಆ ನುಡಿಯನ್ನು ಕೇಳಿ ಆನಂದಿಸಿದ ವೈನತೇಯನು ''ಓ ಕಾಕುತ್ಸ್ಥ ನಾನು ನಿನ್ನ ಪ್ರೀತಿಯ ಗೆಳೆಯ. ನಾನು ಗರುತ್ಮಂತ. ನಿಮ್ಮಿಬ್ಬರಿಗೆ ಒದಗಿದ ಈ ನಾಗಪಾಶವು ಅತ್ಯಂತ ಭೀಕರವಾದದ್ದು. ಕ್ರೂರನಾದ ಇಂದ್ರಜಿತುವಿನ ಮಾಯಾಬಲವಿದು. ಈ ನಾಗಪಾಶದ ವೃತ್ತಾಂತವನ್ನು ಕೇಳಿ ನಾನು ತ್ವರೆಯಿಂದ ಇಲ್ಲಿಗೆ ಧಾವಿಸಿ ಬಂದೆನು. ಅತಿಘೋರವಾದ ಈ ಸರ್ಪಾಸ್ತ್ರ ಬಂಧನವು ನಾನು ಬಂದುದ ರಿಂದ ತೊಲಗಿತು. ಈ ರಾಕ್ಷಸರೆಲ್ಲರೂ ಮೋಸದಿಂದ ಯುದ್ಧ ಮಾಡುತ್ತಾರೆ. ನೀವು ಬಹಳ ಎಚ್ಚರಿಕೆಯಿಂದಿರಬೇಕು. ನಿಮ್ಮ ಋಜುಮಾರ್ಗವು ಈ ಕುಟಿಲಸ್ವಭಾವದವರೆದುರಿಗೆ ಸಲ್ಲದು'' ಎಂದನು. ಆಮೇಲೆ ''ರಾಘವ, ನನಗೆ ಅನುಜ್ಞೆಯನ್ನು ಕೊಡು. ನಾನು ಹೊರಡುತ್ತೇನೆ. ನಾನು ನಿನಗೆ ಹೇಗೆ ಮಿತ್ರನಾದೆನೆಂದು ಮಾತ್ರ ಕೇಳಬೇಡ. ಅದು ನಿನ್ನ ಕರ್ತವ್ಯವೆಲ್ಲವನ್ನೂ ಮುಗಿಸಿದ ಮೇಲೆ ತಾನಾಗಿ ಗೊತ್ತಾಗುವುದು'' ಎಂದು ಹೇಳಿ ರಾಮ ಲಕ್ಷ್ಮಣರನ್ನು ಆಲಿಂಗಿಸಿಕೊಂಡು ಅವರಿಗೆ ಪ್ರದಕ್ಷಿಣ ನಮಸ್ಕಾರ ಮಾಡಿ ಎಲ್ಲ ಕಪಿಗಳೂ ಬೆರಗಿನಿಂದ ನೋಡುತ್ತಿರುವಾಗ ಬಿರುಗಾಳಿಯಂತೆ ಆಕಾಶವನ್ನಡರಿ ಹಾರಿಹೋದನು. ದೊಡ್ಡ ವಿಪತ್ತು ಪರಿಹಾರವಾಯಿತು. ವಾನರರು ಸಂತೋಷದಿಂದ ಸಿಂಹನಾದ ಮಾಡಿದರು. ಬಾಲಗಳನ್ನು ಕೊಡವಿದರು. ಭೇರಿಗಳನ್ನು ಬಡಿದರು. ಶಂಖಗಳನ್ನು ಊದಿದರು. ಸಂತೋಷದಿಂದ ಕುಣಿದರು. ಆ ವೀರರು ಯುದ್ಧಸನ್ನದ್ಧರಾಗಿ ಕೋಲಾಹಲವನ್ನು ಮಾಡುತ್ತ ಲಂಕೆಯ ಪ್ರಾಕಾರದತ್ತ ನುಗ್ಗಿದರು.

ಇತ್ತ ಸಂತೋಷದಿಂದ ಉಬ್ಬಿ ರಾಕ್ಷಸರೊಡನೆ ಕುಳಿತಿದ್ದ ರಾವಣನಿಗೆ ಕಪಿಗಳ

ಕೋಲಾಹಲವು ಕೇಳಿತು. ಅದನ್ನು ಕೇಳಿದಾಗ ರಾವಣನು ಸಚಿವರನ್ನು ನೋಡಿ "ಅರೇ! ಅದೇನು ವಾನರರು ಸಂತೋಷದಿಂದ ಗರ್ಜಿಸುತ್ತಿದ್ದಾರೆ? ರಾಮಲಕ್ಷ್ಮಣರನ್ನು ಶರಬಂಧದಿಂದ ಬಿಗಿದು ಬೀಳಿಸಿದ್ದರೂ ಹರ್ಷದ ಗರ್ಜನೆಗೆ ಕಾರಣವೇನಿರಬಹುದು? ನನಗೆ ಸಂದೇಹವಾಗುತ್ತಿದೆ" ಎಂದು ಉದ್ಗರಿಸಿದನು. ಅನಂತರ ರಾವಣಾಜ್ಞೆಯಂತೆ ಕೆಲವು ರಾಕ್ಷಸಭಟರು ಸಂಭ್ರಮದಿಂದ ಧಾವಿಸಿ ನಗರ ಪ್ರಾಕಾರವನ್ನು ಏರಿನಿಂತು ವಾನರಸೇನೆಯ ಕಡೆಗೆ ನೋಡಿದರು. ಶ್ರೀರಾಮಲಕ್ಷ್ಮಣರು ಸರ್ಪಾಸ್ತ್ರದಿಂದ ವಿಮುಕ್ತರಾಗಿ ಯುದ್ಧೋತ್ಸಾಹದಿಂದ ನಿಂತಿರುವುದನ್ನು ಕಂಡು ಹೆದರಿದರು. ಅವರು ಪೆಚ್ಚು ಮೋರೆಯಿಂದ ಹಿಂದಿರುಗಿ ಬಂದು ಆ ಅಪ್ರಿಯ ವಾರ್ತೆಯನ್ನು ರಾವಣನಿಗೆ ತಿಳಿಸಿದರು. "ಮಹಾಪ್ರಭು, ರಾಮಲಕ್ಷ್ಮಣರು ಇಂದ್ರಜಿತುವಿನ ಸರ್ಪಾಸ್ತ್ರಗಳಿಂದ ಬಂಧಿತರಾಗಿ ಅಲ್ಲಾಡಲಾರದೆ ನೆಲದಮೇಲೆ ಬಿದ್ದುದನ್ನು ನಾವು ಕಂಡಿದ್ದೇವೆ. ಈಗ ಅವರಿಬ್ಬರೂ ಎಚ್ಚೆತ್ತು ಶರಪಾಶವನ್ನು ಹರಿದೊಗೆದು ಸಲಗಗಳಂತೆ ಎದ್ದು ನಿಂತಿರುವುದು ಕಾಣಿಸುತ್ತಿದೆ" ಎಂದು ಅರಿಕೆ ಮಾಡಿದರು. ರಾಕ್ಷಸಭಟರ ನುಡಿಯನ್ನಾಲಿಸಿ ರಾಕ್ಷಸೇಂದ್ರನ ಮುಖವು ಕಳೆಗುಂದಿತು. ಅವನು "ಎಲಾ ಇದೇನು? ನನ್ನ ಮಗನ ನಾಗಪಾಶಗಳೆಂದರೆ ಅತ್ಯಂತ ಕ್ರೂರವಾದವು. ಅವನ ಅಸ್ತ್ರಬಂಧಕ್ಕೆ ಸಿಕ್ಕಿದರೂ ನನ್ನ ಶತ್ರುಗಳು ವಿಮುಕ್ತರಾದ ರೆಂದರೆ ತುಂಬ ಚಿಂತಿಸಬೇಕಾದ ವಿಷಯವಾಯಿತು" ಎಂದನು. ಹೀಗೆ ಹೇಳುತ್ತಿದ್ದಂತೆ ಅವನ ಮುಖವು ಕ್ರೋಧದಿಂದ ಕೆಂಪಾಯಿತು. ಸರ್ಪದಂತೆ ಬುಸುಗುಟ್ಟುತ್ತ ಧೂಮ್ರಾಕ್ಷನೆಂಬ ಸೇನಾಪತಿಯನ್ನು ಕುರಿತು "ಧೂಮ್ರಾಕ್ಷ, ಪ್ರಬಲವಾದ ರಾಕ್ಷಸಸೇನೆಯೊಡನೆ ರಣಾಂಗಣಕ್ಕೆ ನುಗ್ಗಿ ಆ ರಾಮನನ್ನೂ, ಕಪಿಗಳನ್ನೂ ಸಂಹರಿಸು" ಎಂದು ಆಜ್ಞಾಪಿಸಿದನು. ಕೂಡಲೇ "ಮಹಾವೀರನಾದ ಧೂಮ್ರಾಕ್ಷನು ಸಭೆಯಿಂದ ಹೊರಟು ವಿಕಟಾಕಾರದ ರಾಕ್ಷಸ ಸೇನೆಯೊಡನೆ ಅಬ್ಬರಿಸುತ್ತ ಯುದ್ಧಕ್ಕೆ ಹೊರಟನು. ಅವನೆದುರಿಗೆ ನಾನಾ ಬಗೆಯ ಅಪಶಕುನಗಳಾದವು. ಆ ಭೀಮವಿಕ್ರಮನು ಅವೆಲ್ಲವನ್ನೂ ಲಕ್ಷಿಸದೆ ಪುರದ್ವಾರದಿಂದ ಹೊರಗೆ ಬಂದು ಮತ್ತೊಂದು ಮಹಾಸಾಗರವೋ ಎಂಬಂತೆ ಘೋರವಾದ ವಾನರಸೇನೆಯನ್ನು ಕಂಡನು.

ಒಡನೆಯೇ ರಾಕ್ಷಸರಿಗೂ, ವಾನರಯೋಧರಿಗೂ ಭೀಕರವಾದ ಯುದ್ಧವು ತೊಡಗಿತು. ಪರಾಕ್ರಮಿಯಾದ ಧೂಮ್ರಾಕ್ಷನು ಧನುಷ್ಪಾಣಿಯಾಗಿ ನುಗ್ಗಿ ಬಂದು ಶರವೃಷ್ಟಿಯನ್ನು ಸುರಿಸಿ ವಾನರ ಸೇನೆಯನ್ನು ಕಂಗೆಡಿಸಿದನು. ವಾನರರು ಹೆದರಿ ಓಡುತ್ತಿರುವುದನ್ನು ಕಂಡು ಹನುಮಂತನು ಕ್ರುದ್ಧನಾಗಿ ಒಂದು ದೊಡ್ಡ ಬಂಡೆಯನ್ನೆತ್ತಿ ಧೂಮ್ರಾಕ್ಷನ ರಥಕ್ಕೆ ಗುರಿಯಿಟ್ಟು ಬಲವಾಗಿ ಬೀಸಿದನು. ಆ ಬಂಡೆಯನ್ನು ನೋಡಿ

ಧೂಮ್ರಾಕ್ಷನು ಛಂಗನೆ ರಥದಿಂದ ಧುಮುಕಿ ನೆಲದಮೇಲೆ ನಿಂತನು. ಹನುಮಂತನು ಎಸೆದ ಬಂಡೆಯು ಆ ರಾಕ್ಷಸನ ರಥದ ಚಕ್ರಗಳನ್ನೂ, ಮೂಕಿಯನ್ನೂ ಪುಡಿ ಪುಡಿ ಮಾಡಿ ಅಶ್ವಗಳನ್ನು ಕೊಂದು, ರಥದಲ್ಲಿದ್ದ ಆಯುಧಗಳನ್ನು ನಾಶಮಾಡಿ ನೆಲಕ್ಕುರುಳಿತು. ಹನುಮಂತನು ಮಹಾವೇಗದಿಂದ ರಾಕ್ಷಸಸೇನೆಯ ಕಡೆಗೆ ನುಗ್ಗಿ ಮರದ ಕೊಂಬೆಗಳಿಂದಲೂ, ಬಂಡೆಗಳಿಂದಲೂ ಬಡಿದು ರಾಕ್ಷಸರ ಗೋಣುಗಳನ್ನು ಮುರಿದನು. ಹನುಮಂತನು ಒಂದು ಪರ್ವತ ಶಿಖರವನ್ನೆತ್ತಿ ಧೂಮ್ರಾಕ್ಷನ ಮೇಲೆ ಏರಿಹೋದನು. ಆ ರಾಕ್ಷಸನು ತನ್ನ ಗದೆಯಿಂದ ಹನುಮಂತನನ್ನು ಪ್ರಹರಿಸಿದನು. ಆ ವಾಯುಪುತ್ರನು ಅದನ್ನು ಲೆಕ್ಕಿಸದೆ ಪರ್ವತಶಿಖರವನ್ನು ಧೂಮ್ರಾಕ್ಷನ ತಲೆಯಮೇಲೆ ಕುಕ್ಕಿದನು. ಆ ರಾಕ್ಷಸನ ಸರ್ವಾಂಗಗಳೂ ಜಜ್ಜಿಹೋಗಿ ಅವನು ಸತ್ತು ಬಿದ್ದನು. ಅನಂತರ ಹನುಮಂತನು ರಾಕ್ಷಸರನ್ನು ಕೈಯಿಂದಲೇ ಬಡಿದು ಬಡಿದು ನೆತ್ತರ ಹೊನಲನ್ನು ಹರಿಸಿದನು. ಹತಶೇಷರಾದ ರಾಕ್ಷಸರು ಲಂಕೆಗೆ ಓಡಿಹೋಗಿ ನಡೆದ ಸಂಗತಿಯನ್ನು ರಾವಣನಿಗೆ ನಿವೇದಿಸಿದರು.

೬೦

ವಜ್ರದಂಷ್ಟ್ರನಿಗೂ ಅಂಗದನಿಗೂ ಘೋರಯುದ್ಧ. ವಜ್ರದಂಷ್ಟ್ರನ ಸಂಹಾರ. ಹನುಮಂತನಿಂದ ಅಕಂಪನನ ವಧೆ.

ಧೂಮ್ರಾಕ್ಷನು ಹತನಾದ ಸುದ್ದಿಯನ್ನು ಕೇಳಿ ರಾವಣನು ಸಿಟ್ಟಿನಿಂದ ಕಿಡಿಕಿಡಿಯಾದನು. ಅವನು ವಜ್ರದಂಷ್ಟ್ರನೆಂಬ ರಾಕ್ಷಸವೀರನ ಮುಖವನ್ನು ನೋಡಿ ''ವೀರಾಗ್ರೇಸರ, ನೀನು ಹೋಗು. ರಾಕ್ಷಸ ಭಟರೊಡನೆ ನುಗ್ಗಿ ಆ ರಾಮನನ್ನೂ ಸುಗ್ರೀವನನ್ನೂ ಕೊಂದುಹಾಕು'' ಎಂದು ಆಜ್ಞಾಪಿಸಿದನು. ವಜ್ರದಂಷ್ಟ್ರನು ಮಹಾರಾಜನ ಆಜ್ಞೆಯಂತೆ ಹೊರಟು ಸುವರ್ಣ ಭೂಷಿತವಾದ ತನ್ನ ಮಹಾರಥ ವನ್ನೇರಿದನು. ರಾಕ್ಷಸಭಟರು, ಯಷ್ಟಿತೋಮರ, ಶೂಲ, ಮುಸಲ, ಭಿಂಡಿಪಾಲ, ಪಟ್ಟಸ, ಖಡ್ಗ, ಗದೆ, ಪರಶು–ಮೊದಲಾದ ಆಯುಧಗಳನ್ನು ಜಳಪಿಸುತ್ತ ಮದಿಸಿದ ಆನೆಗಳೋ ಚಲಿಸುವ ಬೆಟ್ಟಗಳೋ ಎಂಬಂತೆ ವಜ್ರದಂಷ್ಟ್ರನೊಡನೆ ಹೊರಟರು. ವಜ್ರದಂಷ್ಟ್ರನು ರಣೋತ್ಸಾಹದಿಂದ ಯುದ್ಧಭೂಮಿಗೆ ಧುಮುಕಿ ವಾನರರನ್ನು ಕೊಂದು ಕೊಂದು ಎಸೆಯತೊಡಗಿದನು. ಕಪಿಯೋಧರು ಧೀರೋತ್ಸಾಹದಿಂದ ಶಿಲೆಗಳನ್ನೂ ಕೆಲವು ಬಗೆಯ ಆಯುಧಗಳನ್ನೂ ಹಿಡಿದು ಹೊಡೆದಾಡತೊಡಗಿದರು. ಶಸ್ತ್ರಗಳ ಘರ್ಷಣೆಯಿಂದ ಧಡಧಡಿಲ್, ಘಟಘಟಿಲ್, ಕಣಕಣಿಲ್–ಎಂದು ಎದೆಯೊಡೆಯಿಸುವ ಭೀಕರವಾದ ಸಪ್ಪಳ ಕೇಳಿಸುತ್ತಿತ್ತು. ವಜ್ರದಂಷ್ಟ್ರನಾದರೋ

ಬಿಲ್ಲನ್ನು ಹಿಡಿದು ಪ್ರಳಯಕಾಲದ ಯಮನಂತೆ ವಾನರರನ್ನು ಕೊಂದು ಕೊಂದು ಹೆದರಿಸಿ ದಂಗುಪಡಿಸಿದನು. ರಾಕ್ಷಸಭಟರ ಕೈ ಪ್ರಬಲವಾಯಿತು. ಅವರು ಕಪಿಗಳನ್ನು ಸದೆಬಡಿಯುತ್ತಿರುವುದನ್ನು ಕಂಡು ವಾಲಿ ಪುತ್ರನಾದ ಅಂಗದನ ಕಣ್ಣುಗಳು ರೋಷದಿಂದ ಕೆಂಪಡರಿದವು. ಆ ಪರಾಕ್ರಮಿಯು ಘೋರಯುದ್ಧ ವನ್ನಾರಂಭಿಸಿ ರಾಕ್ಷಸರ ತಲೆಗಳನ್ನೊಡೆದು, ರಥಗಳನ್ನು ಮುರಿದು ರಕ್ತವನ್ನು ಹರಿಸಿ ರಣರಂಗವು ಭಯಂಕರವಾಗುವಂತೆ ಹೋರಾಡತೊಡಗಿದನು. ಅದನ್ನು ನೋಡಿ ಪ್ರತಾಪಶಾಲಿ ಯಾದ ವಜ್ರದಂಷ್ಟ್ರನು ಕೋಪದಿಂದ ಧನುಸ್ಸನ್ನು ಸೆಳೆದು ವಾನರವಾಹಿನಿಯಲ್ಲಿ ನುಗ್ಗಿ ಕಪಿಗಳ ಕತ್ತುಗಳನ್ನು ಕತ್ತರಿಸತೊಡಗಿದನು. ಅಷ್ಟರಲ್ಲಿ ವಾಲಿಪುತ್ರನು ವಜ್ರದಂಷ್ಟ್ರ ನೆದುರಿಗೆ ಬಂದು ಅವನನ್ನೊಮ್ಮೆ ದುರದುರನೆ ನೋಡಿದನು. ಅವರಿಬ್ಬರಿಗೂ ಭೀಷಣವಾದ ಕಾಳಗವು ನಡೆಯಿತು. ವಜ್ರದಂಷ್ಟ್ರನು ತನ್ನ ಗದೆಯನ್ನೆಸೆದು ಮುಷ್ಟಿಯುದ್ಧವನ್ನಾರಂಭಿಸಿದನು. ಅವನಿಗೂ ಅಂಗದನಿಗೂ ಗುದ್ದಾಟವಾಗಿ ಇಬ್ಬರೂ ಬಳಲಿದರು. ಇಬ್ಬರ ಮೈಯಿಂದಲೂ ರಕ್ತವು ಸೋರಿ ಅರಳಿದ ಮುತ್ತುಗದ ಮರ ಗಳಂತೆ ಕಾಣಿಸಿದರು. ಅಷ್ಟರಲ್ಲಿ ಆ ವಾಲಿಪುತ್ರನು ಹರಿತವಾದ ಒಂದು ಖಡ್ಗವನ್ನು ರಣ ಭೂಮಿಯಿಂದ ಎತ್ತಿಕೊಂಡು ಅದರಿಂದ ವಜ್ರದಂಷ್ಟ್ರನ ಮಸ್ತಕವನ್ನು ಕತ್ತರಿಸಿ ದನು. ಸೇನಾಪತಿಯು ಹತನಾದ್ದರಿಂದ ರಾಕ್ಷಸಭಟರು ಧಿಙ್ಮೂಢರಾಗಿ ತಲೆತಗ್ಗಿಸಿ ಕೊಂಡು ಲಂಕೆಯ ಕಡೆಗೆ ಓಡಿಹೋದರು. ವಜ್ರಧಾರಿಯಾದ ದೇವೇಂದ್ರನಂತೆ ಕಂಗೊಳಿಸುತ್ತಿದ್ದ ಅಂಗದನನ್ನು ಕಪಿಯೋಧರು ಗೌರವಿಸಿ ಸತ್ಕರಿಸಿದರು.

ಈ ಸುದ್ದಿ ರಾವಣನಿಗೆ ಮುಟ್ಟಿತು. ಅವನು ವಿಷಾದದಿಂದ ಸೇನಾಪತಿಯಾದ ಪ್ರಹಸ್ತನನ್ನು ನೋಡಿ ''ಪ್ರಹಸ್ತ, ಈಗ ಬಲಾಢ್ಯನಾದ ಅಕಂಪನನು ಯುದ್ಧಕ್ಕೆ ತೆರಳಬೇಕೆಂದು ಆಜ್ಞಾಪಿಸು. ಆರಿಸಿದ ವೀರರಾದ ರಾಕ್ಷಸಭಟರನ್ನು ಅವನೊಡನೆ ಕಳಿಸು'' ಎಂದು ಆದೇಶವನ್ನಿತ್ತನು. ಹಾಗೆಯೇ ಪ್ರಹಸ್ತನು ಅಕಂಪನನಿಗೆ ತಿಳಿಸಲಾಗಿ ಆ ವೀರನು ದೊಡ್ಡ ರಾಕ್ಷಸ ಸೇನೆಯೊಡನೆ ರಣಭೂಮಿಗೆ ತೆರಳಿ ವಾನರ ಸೇನೆಯನ್ನು ಎದುರಿಸಿದನು. ಮತ್ತೆ ಅತ್ಯಂತ ಭೀಕರವಾದ ಬಲವಾದ ಹೊಡೆದಾಟವೇ ನಡೆಯಿತು. ಕಪಿಗಳ ಕೈ ಮೇಲಾಯಿತು. ರಾಕ್ಷಸಭಟರು ಹೆದರಿ ಓಡತೊಡಗಿದರು. ಅದನ್ನು ನೋಡಿ ವೀರನಾದ ಅಕಂಪನನು ವಾನರ ಸೇನೆಯತ್ತ ರಥವನ್ನೋಡಿಸಿ ತನ್ನ ಅತ್ಯುಗ್ರವಾದ ಅಸ್ತ್ರಗಳಿಂದ ವಾನರರನ್ನು ಕೊಲ್ಲತೊಡಗಿದನು. ಕಪಿಗಳು ಹೀಗೆ ಮೃತ್ಯುವಶರಾಗುತ್ತಿರುವುದನ್ನು ನೋಡಿ ಬಲಾಢ್ಯನಾದ ಆಂಜನೇಯನು ಅಕಂಪನನ ಎದುರಿಗೆ ಬಂದು ನಿಂತನು. ಆ ರಾಕ್ಷಸನು ಅವನ ಮೇಲೆ ಶರರಾಶಿಗಳನ್ನು ತೂರಲಾರಂಭಿಸಿದಾಗ, ಬೆಟ್ಟದ ಮೇಲೆ ಧಾರಾಕಾರವಾದ ಮಳೆಸುರಿದಂತಾಯಿತು!

ತೇಜೋನಿಧಿಯಾದ ವಾಯುಪುತ್ರನು ಅದನ್ನು ಲೆಕ್ಕಿಸದೆ ರಭಸದಿಂದ ಮುಂದೆ ನುಗ್ಗಿದನು. ಇಬ್ಬರಿಗೂ ಪ್ರಬಲವಾದ ಹೋರಾಟ ನಡೆಯಿತು. ಅಕಂಪನನು ಕೋಪದಿಂದ ಸಿಂಹನಾದ ಮಾಡಿ ಹರಿತವಾದ ಸರಳುಗಳಿಂದ ಹನುಮಂತನ ದೇಹವನ್ನು ಕೆತ್ತಿದನು. ಹನುಮಂತನು ಕ್ರುದ್ಧನಾಗಿ ಒಂದು ದೊಡ್ಡ ವೃಕ್ಷವನ್ನು ಅಕಂಪನನ ಶಿರಸ್ಸಿನ ಮೇಲೆ ಅಪ್ಪಳಿಸಿ ಹೊಡೆಯಲು ಆ ರಾಕ್ಷಸನು ಹತನಾಗಿ ನೆಲದ ಮೇಲೆ ಉರುಳಿದನು. ಅನಂತರ ಹನುಮಂತನು ರಾಕ್ಷಸ ಸೇನೆಯ ಮೇಲೆ ನುಗ್ಗಲು ಅವರೆಲ್ಲರೂ ಹೆದರಿ, ಹಿಂಜರಿದು ಒಬ್ಬರನ್ನೊಬ್ಬರು ನೂಕುತ್ತ ಆಗಾಗ ಹಿಂದಕ್ಕೆ ನೋಡುತ್ತ ಓಡಿಹೋಗಿ ಲಂಕೆಯನ್ನು ಸೇರಿಕೊಂಡರು. ಶ್ರೀರಾಮ ಲಕ್ಷ್ಮಣರೂ ಸುಗ್ರೀವನೇ ಮೊದಲಾದ ಕಪಿನಾಯಕರೂ ಹನುಮಂತನ ಪರಾಕ್ರಮವನ್ನು ಕಂಡು ಮೆಚ್ಚಿ ಅವನನ್ನು ಕೊಂಡಾಡಿದರು.

೬೧

ಪ್ರಹಸ್ತನ ಯುದ್ಧ, ನೀಲನಿಂದ ಅವನ ವಧೆ

ಅಕಂಪನನ ವಧೆಯನ್ನು ಕೇಳಿ ರುಷ್ಟನಾದ ರಾಕ್ಷಸೇಶ್ವರನು ಅಂದಿನ ಯುದ್ಧ ವನ್ನು ನಿಲ್ಲಿಸಿ ಮರುದಿನ ಪ್ರಾತಃಕಾಲದಲ್ಲಿ ಪ್ರಾಕಾರವನ್ನೇರಿ ವಾನರಸೇನೆಯನ್ನೊಮ್ಮೆ ನೋಡಿದನು. ತನ್ನ ನಗರವನ್ನು ವಾನರರು ಬಂದು ಮುತ್ತಿದರೆಂದು ಉರಿದೆದ್ದ ರಾವಣನು ಪ್ರಹಸ್ತನನ್ನು ಕರೆಸಿ, ''ಪ್ರಹಸ್ತ, ಈ ಯುದ್ಧವು ಪ್ರಬಲವಾಗುತ್ತ ನಡೆದಿದೆ. ಬೇರೆ ಯಾವ ಮಾರ್ಗವೂ ಕಾಣುವುದಿಲ್ಲ. ಮುಂದಿನ ಕಾರ್ಯಭಾರವನ್ನು ನೀನೇ ವಹಿಸಿಕೊಳ್ಳುವುದು ಉತ್ತಮ. ಇದು ಉಪೇಕ್ಷಿಸತಕ್ಕ ಅಲ್ಪ ವಿಷಯವಲ್ಲ. ಈ ಆಪತ್ತಿನ ಕಾಲದಲ್ಲಿ ಹೋರಾಡುವುದೇ ಶ್ರೇಯಸ್ಕರವೆಂದು ನನ್ನ ಅಭಿಪ್ರಾಯವಿದೆ. ನಿನ್ನ ಸಲಹೆ ಏನು?'' ಎಂದು ಕೇಳಿದನು. ಸೇನಾನಿಯಾದ ಪ್ರಹಸ್ತನು ''ಮಹಾರಾಜ, ಈಗ ನಾನು ಹೇಳತಕ್ಕದ್ದೇನಿದೆ? ಎಲ್ಲ ಮಂತ್ರಿಗಳೊಡನೆಯೂ ಸೇನಾಪತಿ ಗಳೊಡನೆಯೂ ಮಂತ್ರಾಲೋಚನೆಯನ್ನು ಮಾಡಿದ್ದಾಗಿದೆ. ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ವನ್ನು ಹೇಳಿದರು. ಸೀತೆಯನ್ನು ರಾಮನಿಗೆ ಒಪ್ಪಿಸುವುದೇ ಶ್ರೇಯಸ್ಕರವೆಂದು ನನ್ನ ಆಶಯವಾಗಿತ್ತು. ಒಪ್ಪಿಸದಿದ್ದರೆ ಯುದ್ಧವೇ ಗತಿಯೆಂದು ನಿಶ್ಚಿತವಾಗಿತ್ತು. ಆದರೆ ನಿನ್ನ ಇಚ್ಛೆ ಬೇರೆಯಾದ್ದರಿಂದ ನಾನೀಗ ಏನನ್ನು ಹೇಳಲಿ? ಮಹಾರಾಜ, ನನ್ನನ್ನು ದಾನಮಾನಗಳಿಂದ ಗೌರವಿಸಿದ್ದೀಯೆ. ನನ್ನ ಕಷ್ಟಕಾಲದಲ್ಲಿ ಉಪಕಾರ ಮಾಡಿದ್ದೀಯೆ. ಈ ಸಮಯದಲ್ಲಿ ನಿನಗೋಸ್ಕರ ನನ್ನ ಪ್ರಾಣವನ್ನೇ ಒಪ್ಪಿಸಲು ಸಿದ್ಧನಾಗಿದ್ದೇನೆ. ಈ ಯುದ್ಧಭಾರವನ್ನು ನಾನು ವಹಿಸಿಕೊಳ್ಳುತ್ತೇನೆ. ಹೆಂಡತಿ

ಮಕ್ಕಳ ಚಿಂತೆಯನ್ನು ಬಿಟ್ಟು ಯುದ್ಧಕುಂಡದಲ್ಲಿ ನನ್ನ ಪ್ರಾಣವನ್ನು ಹೋಮ ಮಾಡುತ್ತೇನೆ! ನೋಡುತ್ತಿರು'' ಎಂದು ಉದ್ಗರಿಸಿದನು. ಅನಂತರ ತನ್ನ ಬಳಿಯಲ್ಲಿದ್ದ ಬಲಾಧ್ಯಕ್ಷರಿಗೆ ಪ್ರಬಲವಾದ ರಾಕ್ಷಸಸೇನೆಯನ್ನು ಸಜ್ಜುಗೊಳಿಸುವಂತೆ ಆಜ್ಞೆ ಮಾಡಿದನು.

ಧೀರನಾದ ಆ ಸೇನಾಪತಿಯು ರಾವಣನನ್ನು ಬೀಳ್ಕೊಂಡು ಸಜ್ಜಾದ ತನ್ನ ಮಹಾರಥವನ್ನೇರಿ ರಾಕ್ಷಸ ಸೇನೆಯೊಡನೆ ಯುದ್ಧಕ್ಕೆ ಹೊರಟನು. ರಣಭೇರಿಗಳು ಗುಡುಗಿನಂತೆ ಮೊಳಗಿದವು. ಪ್ರಹಸ್ತನ ನಾಲ್ವರು ಸಚಿವರು ಅವನಿಗೆ ಬೆಂಬಲವಾಗಿ ರಥದ ಸುತ್ತಲೂ ಪ್ರಯಾಣ ಮಾಡಿದರು. ಪ್ರಳಯಕಾಲದ ಯಮನಂತೆ ಶಸ್ತ್ರಪಾಣಿಯಾದ ಪ್ರಹಸ್ತನು ಹೋಗುತ್ತಿರುವಾಗ ಅವನ ಧ್ವಜಾಗ್ರದಲ್ಲಿ ಒಂದು ಹದ್ದು ದಕ್ಷಿಣ ಮುಖವಾಗಿ ಕುಳಿತುಕೊಂಡಿತು. ಅದನ್ನು ನೋಡಿ ಪ್ರಹಸ್ತನ ಮುಖವು ಕಳೆಗುಂದಿತು. ಆದರೂ ರಾವಣಾಜ್ಞೆಯಂತೆ ಯಾವುದನ್ನೂ ಲಕ್ಷಿಸದೆ ರಣರಂಗವನ್ನು ಪ್ರಹಸ್ತನು ಪ್ರವೇಶಿಸಿದನು.

ಮಹಾವೈಭವದಿಂದ ದೂರದಲ್ಲಿ ಬರುತ್ತಿದ್ದ ಪ್ರಹಸ್ತನನ್ನು ನೋಡಿ ಶ್ರೀರಾಮನು ಬಳಿಯಲ್ಲಿದ್ದ ವಿಭೀಷಣನಿಗೆ ''ವಿಭೀಷಣ, ಮಹಾಶರೀರನಾದ ಆ ರಾಕ್ಷಸನು ಯಾರು? ಅವನ ಹೆಸರೇನು?'' ಎಂದು ಕೇಳಿದನು. ಆಗ ವಿಭೀಷಣನು ''ಶ್ರೀರಾಮ, ಈತನೇ ರಾಕ್ಷಸರ ಪ್ರಧಾನ ಸೇನಾನಿ. ಇವನ ಹೆಸರು ಪ್ರಹಸ್ತ. ಅಸ್ತ್ರವಿದ್ಯಾ ವಿಶಾರದ. ಮಹಾ ಪರಾಕ್ರಮಿ'' ಎಂದು ತಿಳಿಸಿದನು. ಅನಂತರ ರಾಕ್ಷಸ ಸೇನೆಗೂ ಕಪಿಸೇನೆಗೂ ಅದುವರೆಗೆ ನಡೆಯದಷ್ಟು ಭಯಂಕರವಾದ ಹೊಡೆದಾಟವು ಆರಂಭವಾಯಿತು. ಆ ಕದನದಲ್ಲಿ ರಾಕ್ಷಸರು ವಾನರರನ್ನೂ ವಾನರರು ರಾಕ್ಷಸರನ್ನೂ ಅಸಂಖ್ಯಾತವಾಗಿ ಕೊಂದು ಕೊಂದು ಹಾಕಿದರು. ಪ್ರಹಸ್ತನ ಸಚಿವರಲ್ಲೊಬ್ಬನಾದ ನರಾಂತಕನು ಕಪಿಯೋಧರನ್ನು ಸಂಹರಿಸುತ್ತಾ ನುಗ್ಗುತ್ತಿದ್ದನು. ದ್ವಿವಿದನು ಅವನೊಡನೆ ಹೋರಾಡಿ ನರಾಂತಕನನ್ನು ಸಂಹರಿಸಿದನು. ಜಾಂಬವಂತನು ಮಹಾನಾದನೆಂಬ ಇನ್ನೊಬ್ಬ ಸಚಿವನನ್ನು ಕೊಂದುರುಳಿಸಿದನು. ಹೀಗೆ ಪ್ರಹಸ್ತನ ನಾಲ್ವರು ಸಚಿವರೂ ಸಾಯಲಾಗಿ, ಪ್ರಹಸ್ತನು ಅತ್ಯಂತಕ್ರುದ್ಧನಾಗಿ ವಾನರಸೇನೆಯೊಡನೆ ಘೋರವಾದ ಕದನವನ್ನಾರಂಭಿಸಿ ಅವರನ್ನು ಶರಗಳಿಂದ ಹೊಡೆದು ಹುರಿದು ಮುಕ್ಕಿದನು. ಪ್ರಹಸ್ತನಿಗೂ ವೀರನಾದ ನೀಲನಿಗೂ ಯುದ್ಧವು ಸಮನಿಸಿತು. ಆ ಮಹಾ ವಾನರನು ಒಂದು ವೃಕ್ಷವನ್ನು ಕಿತ್ತು ಪ್ರಹಸ್ತನನ್ನು ಅಪ್ಪಳಿಸಿ ಹೊಡೆದನು. ಕ್ರುದ್ಧನಾದ ಆ ರಾಕ್ಷಸಪುಂಗವನು ಹೂಂಕರಿಸುತ್ತ ಶರರಾಶಿಗಳನ್ನು ನೀಲನ ಮೇಲೆ ತೂರತೊಡಗಿದನು. ಸುರಿಯುವ ಧಾರಾಕಾರದ

ಮಳೆಯನ್ನು ಗೂಳಿಯು ಕಣ್ಮುಚ್ಚಿ ತಾಳಿಕೊಳ್ಳುವಂತೆ ನೀಲನು ಅದನ್ನು ಸ್ವಲ್ಪಕಾಲ ತಾಳಿಕೊಂಡಿದ್ದನು. ಅನಂತರ ಕೆರಳಿದ ನೀಲನು ದೊಡ್ಡ ಸಾಲವೃಕ್ಷವನ್ನೆತ್ತಿ ಪ್ರಹಸ್ತನ ರಥದ ಅಶ್ವಗಳನ್ನು ಬಡಿದು ಕೊಂದನು. ದುರ್ಧರ್ಷನಾದ ಆ ವೀರನು ಪ್ರಹಸ್ತನ ಧನುಸ್ಸನ್ನು ಕಿತ್ತು ಎಳೆದು ಮುರಿದುಹಾಕಿ ಸಿಂಹನಾದಮಾಡಿದನು. ಆಗ ಪ್ರಹಸ್ತನು ದೃಢವಾದ ಒಂದು ಮುಸಲಾಯುಧವನ್ನು ಹಿಡಿದು ರಥದಿಂದ ಧುಮುಕಿ ನೀಲನ ಮೇಲೆ ಏರಿಹೋದನು. ತನ್ನ ಶಕ್ತಿಯನ್ನೆಲ್ಲ ಬಳಸಿ ಮುಸಲಾಯುಧದಿಂದ ನೀಲನ ಹಣೆಗೆ ಬಡಿದನು. ನೀಲನ ಹಣೆಯಿಂದ ರಕ್ತವು ಜಲ್ಲೆಂದು ಚಿಮ್ಮಿತು. ಮತ್ತೆ ಅವನನ್ನು ಬಡಿಯಬೇಕೆಂದು ಪ್ರಹಸ್ತನು ಮುಸಲವನ್ನೆತ್ತಿದನು. ಬಲಾಢ್ಯನಾದ ನೀಲನು ಛಂಗನೆ ಪಕ್ಕಕ್ಕೆ ನೆಗೆದು ಒಂದು ದೊಡ್ಡ ಬಂಡೆಯನ್ನೆತ್ತಿ ಪ್ರಹಸ್ತನ ತಲೆಯ ಮೇಲೆ ಕುಕ್ಕಿದನು. ಪ್ರಹಸ್ತನ ತಲೆಯು ಚೂರು ಚೂರಾಗಿ ಒಡೆದು ಹೋಯಿತು. ಅವನು ಗತಪ್ರಾಣನಾಗಿ ನೆಲದ ಮೇಲೆ ಉರುಳಿದನು. ಮಹಾಸೇನಾನಿಯಾದ ಪ್ರಹಸ್ತನು ಹತನಾದನೆಂದರಿತು ರಾಕ್ಷಸಸೇನೆಗೆ ನಡುಕಹುಟ್ಟಿತು. ಅಣೆಕಟ್ಟು ಒಡೆದು ಹೋದಾಗ ಜಲರಾಶಿಯು ನಿಲ್ಲದೆ ಹರಿದು ಹೋಗುವಂತೆ ರಾಕ್ಷಸಯೋಧರು ಅಲ್ಲಿ ನಿಲ್ಲದೆ ಓಡಿ ಹೋದರು. ಶ್ರೀರಾಮಲಕ್ಷ್ಮಣರಿಗೆ ನೀಲನ ಪರಾಕ್ರಮವು ತಿಳಿದು ಹರ್ಷವಾಯಿತು. ಅವರು ನೀಲನನ್ನು ವಿಶೇಷವಾಗಿ ಹೊಗಳಿದರು.

೬೨

ಯುದ್ಧರಂಗಕ್ಕೆ ರಾವಣನ ಪ್ರವೇಶ. ಹನುಮಂತ ಮತ್ತು ನೀಲರೊಡನೆ ಯುದ್ಧ. ರಾವಣನ ಶಕ್ತ್ಯಾಯುಧದಿಂದ ಲಕ್ಷ್ಮಣನ ಮೂರ್ಛೆ. ಶ್ರೀರಾಮನಿಂದ ರಾವಣನ ಪರಾಜಯ.

ರಾಕ್ಷಸಸೇನಾಪತಿಯಾದ ಪ್ರಹಸ್ತನು ನೀಲನಿಂದ ಹತನಾದನೆಂಬ ಸುದ್ದಿಯನ್ನು ಕೇಳಿ ರಾವಣನು ದುಃಖಿತನಾದನು. ಸ್ವಲ್ಪಹೊತ್ತಿನಲ್ಲಿ ಅವನು ಕೋಪದಿಂದ ಭಟರನ್ನು ಕುರಿತು ''ಎಲೈ ಯೋಧರೆ, ಈ ಶತ್ರುಗಳು ಸಾಮಾನ್ಯರೆಂದು ಅಲಕ್ಷಿಸಬಾರದು. ಮಹಾಬಲಶಾಲಿಯಾದ ನನ್ನ ಸೇನಾನಿಯನ್ನು ಇವರು ಸಂಹರಿಸಿದ್ದಾರೆ. ಇನ್ನು ವಿಚಾರಕ್ಕೆ ಅವಕಾಶವಿಲ್ಲ, ನಾನೇ ರಣರಂಗದೊಳಗೆ ಧುಮುಕಿ, ಕಾಳ್ಗಿಚ್ಚು ಅರಣ್ಯವನ್ನು ಸುಡುವಂತೆ ನನ್ನ ನಿಶಿತಾಸ್ತ್ರಗಳಿಂದ ಆ ವೈರಿಗಳನ್ನು ಸುಟ್ಟು ಉರುಬುವೆನು!'' ಎಂದು ಗರ್ಜಿಸಿ ತನ್ನ ದಿವ್ಯ ರಥವನ್ನೇರಿದನು. ರಣವಾದ್ಯಗಳು ಭೋರ್ಗರೆದವು. ರಾವಣನು ತನ್ನ ಸೇನೆಯೊಡನೆ ವೈಭವದಿಂದ ಲಂಕೆಯ ಪ್ರಾಕಾರವನ್ನು ದಾಟಿ ಹೊರಗೆ ಬಂದನು. ಆ ಸೇನೆಯ ರಭಸವನ್ನೂ ಆರ್ಭಟವನ್ನೂ ಕೇಳಿ ಶ್ರೀರಾಮನು ವಿಭೀಷಣನನ್ನು

ಕುರಿತು "ವಿಭೀಷಣ, ಈಗ ಬರುತ್ತಿರುವ ಸೇನಾಪತಿ ಯಾರು? ಯಾವನೋ ಒಬ್ಬ ರಾಕ್ಷಸ ಪ್ರಮುಖನು ಬರುತ್ತಿರಬೇಕು" ಎಂದನು. ಅದಕ್ಕೆ ವಿಭೀಷಣನು "ಶ್ರೀರಾಮ, ಸುಸಜ್ಜಿತವಾದ ಸೇನೆಯನ್ನೂ ಧ್ವಜಪತಾಕೆಗಳನ್ನೂ ನೋಡಿದರೆ ನಿನ್ನ ಪ್ರಥಮ ವೈರಿಯಾದ ರಾವಣನೇ ಬರುವಂತೆ ಕಾಣುತ್ತದೆ" ಎಂದು ಹೇಳಿ ಕೆಲವು ರಾಕ್ಷಸ ಪ್ರಮುಖರ ಹೆಸರನ್ನು ಹೇಳಿದನು. ಅಷ್ಟರಲ್ಲಿ ರಾವಣನೇ ಬರುತ್ತಿರುವುದು ಗೋಚರಿಸಿತು. ವಿಭೀಷಣನು "ಶ್ರೀರಾಮ, ಅದೋ, ಭೀಮಕಾಯನಾದ ರಾವಣನೇ ಬರುತ್ತಿದ್ದಾನೆ. ಅವನ ದರ್ಪವೇನೆಂಬುದನ್ನು ನೀನೇ ನೋಡು" ಎಂದನು. ಶ್ರೀರಾಮನು ಆ ರಾಕ್ಷಸಾಧಿಪತಿಯನ್ನು ಪ್ರತ್ಯಕ್ಷವಾಗಿ ನೋಡಿ "ಅಬ್ಬಾ, ಈತನು ಎಂಥ ತೇಜಸ್ವಿ! ರಾಕ್ಷಸ ಚಕ್ರವರ್ತಿಯೇ ಹೌದು. ಮಹಾಪ್ರತಾಪಶಾಲಿಯಂತೆ ಕಾಣುತ್ತದೆ. ಇರಲಿ, ಈ ದುರುಳನು ನನ್ನ ಭಾಗ್ಯದಿಂದ ಇಂದು ಕಣ್ಣಿಗೆ ಬಿದ್ದನು! ಸೀತೆಯನ್ನಪಹರಿಸಿದ ಈ ನೀಚನ ಮೇಲೆ ನನ್ನ ಕ್ರೋಧವನ್ನು ಈ ದಿನ ಹೊರಸೂಸುವೆನು" ಎಂದು ಹೇಳಿ ಆ ವೀರಾಗ್ರಣಿಯು ಕೋದಂಡವನ್ನೆತ್ತಿ ಹಿಡಿದು ತೀಕ್ಷ್ಣಾಸ್ತ್ರವನ್ನು ಬತ್ತಳಿಕೆಯಿಂದ ಸೆಳೆದನು.

ಲಕ್ಷ್ಮಣನು ಯುದ್ಧ ಸನ್ನದ್ಧನಾಗಿ ಅಣ್ಣನ ಬಳಿಯಲ್ಲಿ ನಿಂತನು. ಆಮೇಲೆ ರಾವಣನು ನುಗ್ಗಿಬರುತ್ತಿರುವುದನ್ನು ಕಂಡು ಕಪಿರಾಜನಾದ ಸುಗ್ರೀವನು ಮುಂದೆ ನುಗ್ಗಿ ಅವನನ್ನೆದುರಿಸಿದನು. ಇಬ್ಬರಿಗೂ ಯುದ್ಧವು ಸಮನಿಸಿತು. ರಾಕ್ಷಸೇಶ್ವರನು ಮೃತ್ಯು ಸಮಾನವಾದ ಒಂದು ಸರಳನ್ನು ಸೆಳೆದುಕೊಂಡು ಸುಗ್ರೀವನನ್ನು ವಧಿಸಬೇಕೆಂಬ ಉದ್ದೇಶದಿಂದ ಆತನಿಗೆ ಗುರಿಯಿಟ್ಟು ಹೊಡೆದನು. ಆ ಮಹಾಸ್ತ್ರವು ರಭಸದಿಂದ ಬಂದು ಸುಗ್ರೀವನ ಎದೆಗೆ ಬಡಿಯಿತು. ಅವನು ಕೂಗಿಕೊಳ್ಳುತ್ತ ಎಚ್ಚರದಪ್ಪಿ ದೊಪ್ಪನೆ ನೆಲದ ಮೇಲೆ ಬಿದ್ದನು. ಇತರ ಕಪಿಯೋಧರು ರಾವಣನೆನ್ನುದುರಿಸಲಾರದೆ ಶ್ರೀರಾಮನೇ ಶರಣೆಂದು ಅವನ ಬಳಿಗೆ ಓಡಿದರು. ಅಷ್ಟರಲ್ಲಿ ಲಕ್ಷ್ಮಣನು ತನ್ನ ಅಣ್ಣನನ್ನು ಕುರಿತು "ಅಣ್ಣ, ಆ ದುರಾತ್ಮನನ್ನು ನಾನೇ ವಧಿಸಬಲ್ಲೆ. ಅನುಮತಿಯನ್ನು ಕೊಡು" ಎಂದು ಕೈಜೋಡಿಸಿ ಪ್ರಾರ್ಥಿಸಿದನು. ಅವನ ಪ್ರಾರ್ಥನೆಯನ್ನು ಮೀರ ಲಾರದೆ ಶ್ರೀರಾಮನು "ಒಳ್ಳೆಯದು. ವತ್ಸ-ಲಕ್ಷ್ಮಣ, ಹೋಗು. ಆದರೆ ತುಂಬ ಜಾಗರೂಕನಾಗಿರು. ಈ ರಾವಣನು ಅತ್ಯಂತ ಬಲಶಾಲಿ" ಎಂದನು. ಸೌಮಿತ್ರಿಯು ಅಣ್ಣನನ್ನು ಆಲಿಂಗಿಸಿಕೊಂಡು ನಮಸ್ಕಾರ ಮಾಡಿ ಯುದ್ಧಕ್ಕೆ ತೆರಳಿದನು. ಅಷ್ಟರಲ್ಲಿ ಹನುಮಂತನು ರಾವಣನ ರಥದೆದುರಿಗೆ ಹೋಗಿ ನಿಂತು ತನ್ನ ಬಲಗೈಯನ್ನು ಮೇಲೆತ್ತಿ "ಎಲೈ ರಾವಣ, ವಾನರನಾದ ನಾನು ಬಂದು ನಿಂತಿದ್ದೇನೆ. ಈ ನನ್ನ ಮುಷ್ಟಿಯನ್ನು ನೋಡು. ನಿನ್ನ ದೇಹದಲ್ಲಿರುವ ಜೀವಾತ್ಮನನ್ನು ಇದು ಹೊರಗೆ ದಬ್ಬುವುದು!"

ಎಂದು ಕೂಗಿ ಹೇಳಿದನು. ಭೀಮ ವಿಕ್ರಮನಾದ ರಾವಣನು ''ಎಲೈ ಕೋಡಗವೆ, ನಿರ್ಭಯದಿಂದ ಮೊದಲು ನನ್ನನ್ನು ಪ್ರಹರಿಸು. ಶಾಶ್ವತವಾದ ಕೀರ್ತಿಯನ್ನು ಗಳಿಸು!. ಅನಂತರ ರಾವಣನ ಪರಾಕ್ರಮದ ಸವಿಯನ್ನು ಕಾಣಬಹುದು!'' ಎಂದನು. ಆಗ ಹನುಮಂತನು ''ಎಲೈ ರಾಕ್ಷಸ, ನನ್ನ ಹೊಡೆತದ ಸವಿಯನ್ನು ಕಾಣೆಯಾ? ನಿನ್ನ ಮಗನಾದ ಅಕ್ಷನನ್ನು ನೆನಪು ಮಾಡಿಕೊ'' ಎಂದನು. ಆ ಮಾತನ್ನು ಕೇಳಿದೊಡನೆಯೇ ರಾವಣನು ಸಿಡಿದೆದ್ದು ಹನುಮಂತನ ಎದೆಯ ಮೇಲೆ ಗುದ್ದಿದನು. ಧೀರನಾದ ಮಾರುತಿಯು ಹಾಗೆಯೇ ಚೇತರಿಸಿಕೊಂಡು ಕ್ರುದ್ಧನಾಗಿ ಅಂಗೈಯಿಂದ ರಾವಣನ ಎದೆಯಮೇಲೆ ಅಪ್ಪಳಿಸಿ ಹೊಡೆದನು. ಆ ಹೊಡೆತದ ಬಿರುಸನ್ನು ತಾಳಲಾರದೆ ದಶಕಂಠನು ಅತ್ತಿಂದಿತ್ತ ತೂಗಾಡಿದನು. ತುಸುಹೊತ್ತಿನಲ್ಲಿ ಆತನು ಚೇತರಿಸಿಕೊಂಡು ''ಭಪ್ಪರೆ! ವಾನರ, ನಿನ್ನ ಶೌರ್ಯಕ್ಕೆ ಮೆಚ್ಚಿದೆನು'' ಎಂದು ಹೇಳಿ ಹನುಮಂತನ ಎದೆಯ ಮೇಲೆ ಬಲವಾಗಿ ಗುದ್ದಿದನು. ಹನುಮಂತನು ತತ್ತರಿಸುತ್ತ ವಿಹ್ವಲನಾಗಿ ಸರಿದು ನಿಂತನು. ಒಡನೆಯೇ ರಾವಣನ ಸಾರಥಿಯು ನೀಲನ ಕಡೆಗೆ ರಥವನ್ನೋಡಿಸಿದನು. ಅವರಿಬ್ಬರಿಗೂ ಭಾರಿ ಯುದ್ಧವು ನಡೆಯಿತು. ರಾವಣನು ನೀಲನನ್ನು ಮೂರ್ಛೆಗೊಳಿಸಿ ಲಕ್ಷ್ಮಣನ ಕಡೆಗೆ ರಥವನ್ನು ಓಡಿಸಿದನು. ರಾವಣನು ಲಕ್ಷ್ಮಣನನ್ನು ಹಂಗಿಸಿ ಮಾತಾಡಿ ಯುದ್ಧವನ್ನಾರಂಭಿಸಿದನು. ರಾಕ್ಷಸೇಶ್ವರನು ನಿಶಿತಾಸ್ತ್ರಗಳನ್ನು ಪ್ರಯೋಗಿಸುತ್ತಿರಲಾಗಿ ಸೌಮಿತ್ರಿಯು ಅವನ ಬಾಣಗಳನ್ನು ತುಂಡರಿಸುತ್ತ ಹೋದನು. ರಾವಣನು ಲಕ್ಷ್ಮಣನ ಬಾಣಗಳೆಲ್ಲವನ್ನೂ ಕತ್ತರಿಸಿ ಒಗೆದು ಹೋರಾಡುತ್ತಿದ್ದನು. ಸೌಮಿತ್ರಿಯು ರಾವಣನ ಬಿಲ್ಲನ್ನು ತುಂಡರಿಸಿ ಬಲವಾದ ಬಾಣದಿಂದ ಹೊಡೆಯಲು ರಾಕ್ಷಸರಾಜನು ಮೂರ್ಛಿತನಾದನು. ತುಸುಹೊತ್ತಿನಲ್ಲಿ ಎಚ್ಚರಗೊಂಡ ರಾವಣನು ಬ್ರಹ್ಮದತ್ತವಾದ ಶಕ್ತಿಯೆಂಬ ಆಯುಧವನ್ನುಬತ್ತಳಿಕೆಯಿಂದ ಹಿರಿದು ಸೌಮಿತ್ರಿಯ ಮೇಲೆ ರಭಸದಿಂದ ಬೀಸಿ ಹೊಡೆದನು. ಲಕ್ಷ್ಮಣನು ಅನೇಕ ಮಹಾಸ್ತ್ರಗಳನ್ನು ಪ್ರಯೋಗಿಸಿದರೂ ಆ ಶಕ್ತಿಯು ವೇಗದಿಂದ ಬಂದು ಲಕ್ಷ್ಮಣನ ವಕ್ಷಃಸ್ಥಳದಲ್ಲಿ ನಾಟಿತು. ಸೌಮಿತ್ರಿಯು ಆ ದಿವ್ಯಾಯುಧದಿಂದ ಆಹತನಾಗಿ ನೆಲದ ಮೇಲೆ ಬಿದ್ದನು. ಎಚ್ಚರ ದಪ್ಪಿದ ಲಕ್ಷ್ಮಣನನ್ನು ನೋಡಿ ರಾವಣನು ತನ್ನ ರಥದಿಂದ ಧುಮುಕಿ ಲಕ್ಷ್ಮಣನನ್ನು ಹೊತ್ತುಕೊಂಡು ಹೋಗಬೇಕೆಂದು ಕೈಗಳನ್ನು ಚಾಚಿದನು. ಆದರೆ ಮಹಾಬಲಶಾಲಿಯಾದ ರಾವಣನಿಗೆ ಲಕ್ಷ್ಮಣನನ್ನು ಥಟ್ಟನೆ ಎತ್ತಲಾಗಲಿಲ್ಲ. ಅವನನ್ನೆತ್ತಲು ಯತ್ನಿಸುತ್ತಿದ್ದ ರಾವಣನ ಹೆಣಗಾಟವನ್ನು ನೋಡಿ ಹನುಮಂತನು ಓಡುತ್ತ ಬಂದು ವಜ್ರಾಯುಧದಂತಿದ್ದ ತನ್ನ ಮುಷ್ಟಿಯಿಂದ ರಾವಣನನ್ನು ಬಲವಾಗಿ ಗುದ್ದಿದನು. ಆ ಹೊಡೆತವನ್ನು ತಡೆದುಕೊಳ್ಳಲಾರದೆ ರಾವಣನು ತತ್ತರಿಸಿ ಬಿದ್ದು

ಹೋದನು. ಬಾಯಿಯಿಂದ ರಕ್ತವು ಕಕ್ಕಿತು. ತಲೆಯು ಗಿರ್ರೆಂದಿತು. ಮಹಾಬಲಶಾಲಿ ಯಾದ ಆಂಜನೇಯನು ಲಕ್ಷ್ಮಣನನ್ನೆತ್ತಿಕೊಂಡು ಶ್ರೀರಾಮನ ಬಳಿಗೆ ಕರೆದೊಯ್ದನು. ರಾವಣನು ಪ್ರಯೋಗಿಸಿದ ಶಕ್ತ್ಯಾಯುಧವು ಅಜೇಯನಾದ ಲಕ್ಷ್ಮಣನನ್ನು ಬಿಟ್ಟು ಮತ್ತೆ ರಾವಣನ ಬತ್ತಳಿಕೆಯನ್ನು ಸೇರಿತು. ಲಕ್ಷ್ಮಣನು ಎಚ್ಚೆತ್ತು ವಿಶ್ರಮಿಸುತ್ತ ಕುಳಿತನು. ಅಷ್ಟರಲ್ಲಿ ಶ್ರೀರಾಮನು ತಾನೇ ರಾವಣನನ್ನೆದುರಿಸಬೇಕೆಂದು ಹೊರಟನು. ಹನುಮಂತನ ಪ್ರಾರ್ಥನೆಯಂತೆ ಆ ಮಹಾಕಪಿಯ ಹೆಗಲನ್ನೇರಿ ರಾವಣನ ಕಡೆಗೆ ಆಕ್ರೋಶದಿಂದ ನುಗ್ಗಿದನು. ರಾವಣನನ್ನು ನೋಡಿ ಕೋದಂಡವನ್ನು ಝೇಂಕರಿಸುತ್ತ "ಎಲಾ ರಾಕ್ಷಸ, ನಿಲ್ಲು, ನಿಲ್ಲು, ಎಲ್ಲಿಗೆ ಹೋಗುವೆ? ಎಲ್ಲಿಗೆ ಹೋದರೆ ಬದುಕಿ ಕೊಂಡೀಯೆ? ದಂಡಕಾರಣ್ಯದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರನ್ನು ತುಂಡರಿಸಿ ಚೆಲ್ಲಿ ಧ್ವಂಸ ಮಾಡಿದವನು. ಈತನೇ ಎಂದು ತಿಳಿ" ಎಂದನು. ಅವನು ರಾಘವನೆಂಬುದು ಗೊತ್ತಾದೊಡನೆ ರಾವಣನು ಪರಮ ಕ್ರುದ್ಧನಾಗಿ ಕ್ರೂರಶರಗಳಿಂದ ಶ್ರೀರಾಮ-ನನ್ನೆದುರಿಸಿದನು. ಆ ಯುದ್ಧದಲ್ಲಿ ಶ್ರೀರಾಮನ ಶರಹತಿಯನ್ನು ರಾವಣನಿಗೆ ತಡೆದುಕೊಳ್ಳಲಾಗಲಿಲ್ಲ. ಅವನು ತತ್ತರಿಸಿ ಅಲ್ಲಾಡಿ ಹೋದನು. ಹಿಡಿದಿದ್ದ ಬಿಲ್ಲು ಸಡಿಲಿಬಿದ್ದಿತು. ಅವನನ್ನು ಕೊಲ್ಲಬೇಕೆಂದು ಶ್ರೀರಾಮನು ಅರ್ಧಚಂದ್ರಾಕೃತಿಯ ಶರವನ್ನು ಹಿರಿದನು. ಆದರೆ ಬಹಳವಾಗಿ ಪೆಟ್ಟುತಿಂದು ಕಂಗೆಟ್ಟಿದ್ದ ರಾವಣನ ದುರವಸ್ಥೆಯನ್ನು ಕಂಡು ಅವನ ಕಿರೀಟವನ್ನು ಮಾತ್ರ ಆ ಮಹಾತ್ಮನು ಕತ್ತರಿಸಿದನು. ಆ ಯುದ್ಧದಲ್ಲಿ ರಾಕ್ಷಸೇಂದ್ರನು ವಿಷದ ಹಲ್ಲನ್ನು ಕಿತ್ತ ಹಾವಿನಂತಾಗಿದ್ದನು. ಅವನ ಸ್ಥಿತಿಗೆ ಮರುಕಗೊಂಡು ಧೀರೋದಾತ್ತನಾದ ದಾಶರಥಿಯು "ರಾಕ್ಷಸರಾಜ, ಈ ದಿನ ನೀನು ಬಹಳ ಹೊತ್ತು ಯುದ್ಧಮಾಡಿ ದಣಿದಿರುವಂತೆ ಕಾಣುತ್ತದೆ. ಈಗ ನಿನ್ನನ್ನು ನಾನು ಕೊಲ್ಲುವುದಿಲ್ಲ. ಅನುಮತಿಯನ್ನು ಕೊಟ್ಟಿದ್ದೇನೆ. ಲಂಕೆಗೆ ಹಿಂದಿರುಗಬಹುದು. ಚೆನ್ನಾಗಿ ವಿಶ್ರಮಿಸಿಕೊಂಡು ಹೊಸ ರಥವನ್ನೇರಿ, ಹೊಸಧನುಸ್ಸನ್ನು ಹಿಡಿದು ಸಜ್ಜಾಗಿ ಬಾ. ಆಗ ನನ್ನ ಪರಾಕ್ರಮವನ್ನು ನೋಡಬಹುದು" ಎಂದನು. ಶ್ರೀರಾಮನು ಹೀಗೆ ನುಡಿಯಲು ರಾವಣನ ದರ್ಪೋತ್ಸಾಹಗಳು ಭಗ್ನವಾದ್ದರಿಂದ ಅವನು ಒಂದು ಮಾತನ್ನೂ ನುಡಿಯದೆ ನೆಟ್ಟಗೆ ಲಂಕೆಗೆ ಹಿಂದಿರುಗಿ ಹೋದನು. ಅವನ ರಥಾಶ್ವಗಳು ಹತವಾಗಿದ್ದವು. ಸಾರಥಿಯು ಸತ್ತಿದ್ದನು. ಮೈತುಂಬ ಗಾಯಗಳಾಗಿದ್ದವು. ಕಿರೀಟವು ಚೂರುಚೂರಾಗಿತ್ತು. ಆತನನ್ನು ಧೀರೋದಾತ್ತನಾದ ಶ್ರೀರಾಮನು ಮರುಕದಿಂದ ಕೊಲ್ಲದೆ ಕೈಬಿಟ್ಟನು. ರಾವಣನ ಪರಾಜಯವನ್ನು ಕಂಡು ದೇವತೆಗಳೂ, ಋಷಿಗಳೂ ಸಂತೋಷಿಸಿದರು.

೬೩

ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುವುದು. ರಾವಣ ಕುಂಭಕರ್ಣರ ಸಂಭಾಷಣೆ. ಕುಂಭಕರ್ಣನು ಯುದ್ಧಭೂಮಿಗೆ ತೆರಳುವುದು.

ರಾವಣನು ಶ್ರೀರಾಮ ಬಾಣಗಳ ಉಗ್ರತೆಗೆ ಕಂಗೆಟ್ಟು ಲಂಕೆಗೆ ಹಿಂದಿರುಗಿ ಹೋದನು. ಸಿಂಹದಿಂದ ಪೆಟ್ಟುತಿಂದ ಸಲಗನಂತಾದನು. ಮನಸ್ಸಿಗೆ ಚಿಂತೆ ಆವರಿಸಿತು. ಆತನು ''ಏನಾಶ್ಚರ್ಯ! ಒಬ್ಬ ತೃಣ ಸಮಾನನಾದ ಮನುಷ್ಯನು ನನ್ನನ್ನು ಪರಾಜಯಗೊಳಿಸಿದನಲ್ಲ. ಏನಿರಬಹುದು? ಬ್ರಹ್ಮದೇವನು 'ರಾವಣ, ಮನುಷ್ಯರಿಂದಲೇ ಭಯವುಂಟು' ಎಂದು ಹೇಳಿದ್ದನು. ಅಂತಹ ಕಾಲವು ಈಗ ಬಂದಿರಬಹುದೆ? ಇಕ್ಷ್ವಾಕುವಂಶದ ಅನರಣ್ಯನು ತನ್ನ ವಂಶದಲ್ಲಿ ಜನಿಸುವ ಒಬ್ಬ ಪುರುಷನಿಂದ ನಿನ್ನ ವಧೆಯಾಗುವುದು ಎಂದಿದ್ದನು. ನಾನು ವೇದವತಿಯನ್ನು ಬಲಾತ್ಕರಿಸಿದಾಗ ಅವಳು 'ನಾನೇ ಇನ್ನೊಂದು ಜನ್ಮದಲ್ಲಿ ಬಂದು ನಿನ್ನ ವಧೆಯನ್ನು ಮಾಡಿಸುವೆನು' ಎಂದು ಹೇಳಿ ಅಗ್ನಿಕುಂಡವನ್ನು ಪ್ರವೇಶಿಸಿದ್ದಳು. ಆ ಮಹಾತ್ಮಳೇ ಈ ಸೀತೆಯಾಗಿರಬಹುದೆ?'' ಎಂದು ನಾನಾವಿಧವಾದ ಚಿಂತೆಗೆ ಒಳಗಾದನು.

ಆಮೇಲೆ ಅರಮನೆಯನ್ನು ಸೇರಿ ರಾಕ್ಷಸ ಭಟರನ್ನು ಕರೆದು ''ಎಲೈ, ಈಗ ನಿದ್ರೆಮಾಡುತ್ತಿರುವ ಕುಂಭಕರ್ಣನನ್ನು ಎಬ್ಬಿಸಿರಿ. ನಗರದ್ವಾರಗಳನ್ನು ಎಚ್ಚರಿಕೆಯಿಂದ ರಕ್ಷಿಸುತ್ತಿರಿ. ಕುಂಭಕರ್ಣನಿಗೆ ಈ ಯುದ್ಧದ ಪರಿವೆಯೇ ಇಲ್ಲ. ಸುಖವಾಗಿ ಮಲಗಿದ್ದಾನೆ. ಅವನೇ ಈಗ ಯುದ್ಧ ಮಾಡಲು ಸಮರ್ಥ. ಅವನನ್ನು ಎಬ್ಬಿಸಿರಿ'' ಎಂದು ಆಜ್ಞಾಪಿಸಿದನು. ರಾಕ್ಷಸ ಭಟರು ಕುಂಭಕರ್ಣನ ಮನೆಗೆ ಹೋಗಿ ಗೊರಕೆಹೊಡೆಯುತ್ತ ನಿದ್ದಿಸುತ್ತಿದ್ದ ಕುಂಭಕರ್ಣನನ್ನು ಎಬ್ಬಿಸಲು ಪ್ರಯತ್ನಿಸಿದರು. ಬ್ರಹ್ಮನ ಶಾಪದಿಂದ ಗಾಢವಾದ ನಿದ್ರೆಗೆ ವಶನಾಗಿ ಮಲಗಿದ್ದ ಆತನನ್ನೆಬ್ಬಿಸುವುದು ಬಹಳ ಕಷ್ಟವಾಯಿತು. ಭೇರಿಗಳನ್ನು ಬಡಿದು, ಶಂಖಗಳನ್ನು ಊದಿ ಕಿವಿಯಲ್ಲಿ ತಣ್ಣೀರನ್ನು ಹೊಯ್ದು ಬಹಳ ಪ್ರಯತ್ನವನ್ನು ಮಾಡಿದಮೇಲೆ ಆ ರಾಕ್ಷಸನು ಎಚ್ಚೆತ್ತನು. ಅವನ ಸುತ್ತಲೂ ವಿವಿಧ ಭೋಜ್ಯಸಾಮಗ್ರಿಗಳನ್ನೂ, ನಾನಾ ಪೇಯಗಳನ್ನೂ ಮೊದಲೇ ಸಿದ್ಧಪಡಿಸಿ ಇಟ್ಟಿದ್ದ ರಾಕ್ಷಸರು ಅವನು ಎಚ್ಚೆತ್ತೊಡನೆ ಗಾಬರಿಯಿಂದ ದೂರ ಓಡಿಹೋದರು! ಕುಂಭಕರ್ಣನು ಆಕಳಿಸುತ್ತ ಸುತ್ತಲೂ ನೋಡಿ 'ಹಸಿವು, ಹಸಿವು' ಎನ್ನುತ್ತ ಎದುರಿಗಿದ್ದ ನಾನಾ ಭೋಜ್ಯಗಳನ್ನೂ ಮಾಂಸಗಳನ್ನೂ ಯಥೇಷ್ಟವಾಗಿ ತಿಂದನು. ಬಗೆಬಗೆಯ ಮದ್ಯಗಳನ್ನೂ ಕೊಡಗಟ್ಟಲೆ ಬಾಯಲ್ಲಿ ಸುರಿದುಕೊಂಡನು. ಹೀಗೆ ತಿಂದು ಕುಡಿದು ತೃಪ್ತನಾದ ಮೇಲೆ ಅಡಗಿಕೊಂಡಿದ್ದ ರಾಕ್ಷಸರು ಬಂದು

ನಮಸ್ಕರಿಸಿದರು. ಕುಂಭಕರ್ಣನು ನಿದ್ರೆಯ ಜೋಮಿನಲ್ಲಿ ಅವರನ್ನು ನೋಡಿದನು. ಅವರು ತನ್ನನ್ನು ಎಬ್ಬಿಸಿದರೆಂದು ಅರಿವಾಯಿತು. ಹೆದರುತ್ತಿದ್ದ ಆ ಭಟರನ್ನು ನೋಡಿ "ಎಲೈ ಭಟರೆ, ಈಗ ನನ್ನನ್ನೇಕೆ ಎಬ್ಬಿಸಿದಿರಿ? ಮಹಾರಾಜನಿಗೆ ಕುಶಲವಷ್ಟೆ? ಇಲ್ಲ ಇಲ್ಲ, ಯಾವುದೋ ವಿಪತ್ತು ಅವನಿಗೆ ಬಂದಿರಬೇಕು. ಅಲ್ಪಕಾರಣಕ್ಕಾಗಿ ನನ್ನ ಅಣ್ಣನು ನನ್ನನ್ನು ಎಬ್ಬಿಸುವುದಿಲ್ಲ. ಈಗ ಏನಾಗಿದೆ, ಹೇಳಿರಿ" ಎಂದನು. ಆಗ ಯೂಪಾಕ್ಷನೆಂಬ ಸಚಿವನು ಮುಂದೆ ಬಂದು ಕೈಮುಗಿದುಕೊಂಡು ಅದುವರೆಗೆ ನಡೆದದ್ದನ್ನು ವಿವರಿಸಿದನು. ರಾಮನು ಕಪಿ ಸೇನೆಯೊಡನೆ ಬಂದು ಲಂಕೆಯನ್ನು ಮುತ್ತಿ ಬಹುಮಂದಿ ರಾಕ್ಷಸವೀರರನ್ನು ಸಂಹರಿಸಿದ್ದಾನೆಂದೂ, ರಾವಣನೇ ಪರಾಜಿತನಾಗಿ ಬಂದನೆಂದೂ ಹೇಳಿದನು. ತನ್ನ ಅಣ್ಣನು ಸೋತು ಬಂದನೆಂಬುದನ್ನು ಕೇಳಿದೊಡನೆ ಕುಂಭಕರ್ಣನ ಕಣ್ಣಾಲಿಗಳು ಗರಗರನೆ ತಿರುಗಿದವು. "ಎಲೈ ಯೂಪಾಕ್ಷ, ಇದೋ ನಾನು ಯುದ್ಧಕ್ಕೆ ಹೊರಟೆ. ವಾನರ ಸೇನೆಯನ್ನು ಕೊಂದು ರಾಮ ಲಕ್ಷ್ಮಣರನ್ನು ಸಂಹರಿಸಿ ಆಮೇಲೆ ಬಂದು ಕಾಣುತ್ತೇನೆಂದು ಮಹಾರಾಜನಿಗೆ ತಿಳಿಸು" ಎಂದಬ್ಬರಿಸಿದನು. ಅವನ ದುಡುಕಿನ ಮಾತನ್ನು ಕೇಳಿ ಮಹೋದರನೆಂಬವನು "ಮಹಾಸ್ವಾಮಿ, ತನ್ನನ್ನು ಮೊದಲು ಕಾಣಬೇಕೆಂದು ಮಹಾರಾಜನ ಆಜ್ಞೆಯಾಗಿದೆ. ಆದ್ದರಿಂದ ಮೊದಲು ಕೃಪೆಯಿಟ್ಟು ಆತನನ್ನು ಭೇಟಿಮಾಡಿ ಆಮೇಲೆ ಶತ್ರುಗಳನ್ನು ಜಯಿಸಬಹುದು" ಎಂದನು. ರಾವಣನ ಆಜ್ಞೆಯನ್ನು ಮನ್ನಿಸಿ ಕುಂಭಕರ್ಣನು 'ಹಾಗೆಯೇ ಆಗಲಿ' ಎಂದು ಹೇಳಿ ಹಾಸಿಗೆಯಿಂದ ಮೇಲೆದ್ದನು. ಮುಖವನ್ನು ತೊಳೆದು ಸ್ನಾನಮಾಡಿ ದಿವ್ಯ ವಸ್ತ್ರಾಲಂಕಾರಗಳಿಂದ ತನ್ನನ್ನು ಅಲಂಕರಿಸಿಕೊಂಡು ಮತ್ತಷ್ಟು ಮದ್ಯದ ಕೊಡಗಳನ್ನು ತರಿಸಿ ಕುಡಿದು ತನ್ನ ಭವನದಿಂದ ಹೊರಟನು. ಕಾಲಾಂತಕನಂತೆ ಕಂಗೊಳಿಸುತ್ತಿದ್ದ ಆ ದೈತ್ಯನು ರಾಜಮಾರ್ಗದಲ್ಲಿ ನಡೆಯುವಾಗ ಭೂಮಿಯು ಅದುರುತ್ತಿತ್ತು! ಪ್ರಜೆಗಳು ಸಾಲಾಗಿ ನಿಂತು ಕೈಮುಗಿಯುತ್ತಿದ್ದರು. ಪರ್ವತದಂತೆ ಮಹೋನ್ನತ ಕಾಯನಾದ ಆತನು ಲಂಕೆಯ ಮಾರ್ಗದಲ್ಲಿ ಹೋಗುತ್ತಿರುವಾಗ ನಗರದ ಹೊರಗಡೆಯಿದ್ದ ಕಪಿನಾಯಕರಿಗೆ ಆತನು ಗೋಚರಿಸಿದನು! ಭೀಷಣಾಕಾರನಾದ ಕುಂಭಕರ್ಣನನ್ನು ನೋಡಿ ಕಪಿಗಳು ಹೆದರಿ ತತ್ತರಿಸಿ ಹೋದರು! ಶ್ರೀರಾಮನು ಆ ಮಹಾರಾಕ್ಷಸನನ್ನು ನೋಡಿ ಅಚ್ಚರಿಗೊಂಡು ವಿಭೀಷಣನನ್ನು ಕರೆದು "ವಿಭೀಷಣ, ಯಾರವನು? ಇಂಥ ದೊಡ್ಡ ಭೂತವನ್ನು ನಾನು ಎಂದೂ ನೋಡಿಯೇ ಇರಲಿಲ್ಲ!" ಎಂದನು. ವಿಭೀಷಣನು ಮುಗುಳ್ನಗೆ ಬೀರುತ್ತ "ಶ್ರೀರಾಮ, ಈತನು ಕುಂಭಕರ್ಣ. ನನ್ನ ಅಣ್ಣ. ಈತನ ದೇಹಶಕ್ತಿ ಅಪಾರವಾದದ್ದು. ಇವನ ಉಪಟಳವನ್ನು ಕಂಡು ಇಂದ್ರಾದಿಗಳು ಬ್ರಹ್ಮನಿಗೆ ಶರಣಾದರು. ಬ್ರಹ್ಮನು ಕುಂಭಕರ್ಣನ ಭೀಷಣ ಕೃತ್ಯವನ್ನು ಕಂಡು

ಸಿಟ್ಟಿನಿಂದ ''ಎಲೈ ರಾಕ್ಷಸ, ಈ ದಿನದಿಂದ ನೀನು ಸತ್ತವನಂತೆ ಬಿದ್ದು ಸದಾ ನಿದ್ರಿಸುತ್ತಿರು'' ಎಂದು ಶಪಿಸಿದನು. ಆಮೇಲೆ ರಾವಣನ ಪ್ರಾರ್ಥನೆಯಂತೆ ಆರು ತಿಂಗಳಿಗೆ ಒಮ್ಮೆ ಒಂದು ದಿನ ಮಾತ್ರ ಎಚ್ಚರವಾಗುವಂತೆ ಪ್ರತಿಶಾಪವನ್ನಿತ್ತಿದ್ದಾನೆ.ಈ ಕುಂಭಕರ್ಣನು ಭಯಂಕರ ಸ್ವರೂಪನು. ಕಪಿಗಳು ಹೆದರಿ ತತ್ತರಿಸಿ ಹೋಗಿದ್ದಾರೆ. ಆದ್ದರಿಂದ ಈಗೊಂದು ಉಪಾಯವನ್ನು ಮಾಡಬೇಕು. ''ಲಂಕೆಯಲ್ಲಿ ಕಾಣುತ್ತಿರುವುದು ಒಂದು ಬೆದರು ಬೊಂಬೆ! ಎತ್ತಿ ನಿಲ್ಲಿಸಿದ್ದಾರೆ. ನೀವು ಹೆದರಬೇಡಿ'' ಎಂದು ವಾನರ ಸೇನೆಯಲ್ಲಿ ಘೋಷಿಸಬೇಕು!'' ಎಂದನು. ಅಂತೆಯೇ ಘೋಷಿಸಲಾಯಿತು. ವಾನರರು ಭಯವನ್ನು ತ್ಯಜಿಸಿದರು.

ಅನಂತರ ಕುಂಭಕರ್ಣನು ನೇರವಾಗಿ ರಾವಣನ ಸಭೆಗೆ ಹೋದನು.ರಾವಣನು ಸಂತೋಷದಿಂದ ಎದ್ದು ನಿಂತು ಕುಂಭಕರ್ಣನನ್ನು ಸ್ವಾಗತಿಸಿದನು. ಕುಂಭಕರ್ಣನು ರಾವಣನ ಪಾದಗಳಿಗೆ ವಂದಿಸಿ ಒಂದು ಉನ್ನತವಾಗಿದ್ದ ವಿಶಾಲವಾದ ಪೀಠದಲ್ಲಿ ಕುಳಿತು ''ಮಹಾರಾಜ, ನನ್ನನ್ನು ನಿದ್ರೆಯಿಂದ ಎಬ್ಬಿಸಿದ್ದೇಕೆ? ನಿನಗೆ ಬಂದಿರುವ ವಿಪತ್ತಾದರೂ ಯಾವುದು''? ಎಂದು ಕೇಳಿದನು. ರಾವಣನು ''ತಮ್ಮ, ನೀನು ಮಲಗಿ ಸುಖವಾಗಿ ನಿದ್ರಿಸುತ್ತಿದ್ದೀಯೆ. ರಾಮನಿಂದ ಒದಗಿದ ವಿಪತ್ತೇನೆಂಬುದು ನಿನಗೆ ತಿಳಿದಿಲ್ಲ. ಆ ದಶರಥ ಪುತ್ರನು ಬಲಶಾಲಿಯೇ ಹೌದು. ಸುಗ್ರೀವನೊಡನೆ ಕಪಿಸೇನಾಸಮೇತನಾಗಿ ಬಂದು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ನಮ್ಮ ಲಂಕಾನಗರವನ್ನು ಮುತ್ತಿದ್ದಾನೆ. ಬಲಾಢ್ಯರಾದ ಬಹುಮಂದಿ ರಾಕ್ಷಸರನ್ನು ಅವರೆಲ್ಲರೂ ಸೇರಿ ಕೊಂದು ಹಾಕಿದ್ದಾರೆ. ನಮಗೆ ಉಂಟಾಗಿರುವ ಭಯ ಇದು. ಈಗ ನೀನು ನಮ್ಮನ್ನು ಕಾಪಾಡಬೇಕಾಗಿದೆ'' ಎಂದನು. ರಾಕ್ಷಸಾಧಿಪತಿಯ ಈ ದೈನ್ಯ ವಚನವನ್ನು ಕೇಳಿ ಕುಂಭಕರ್ಣನು ಇಂತೆಂದನು. ''ಅಣ್ಣ,ಹಿಂದೆ ಮಂತ್ರಾಲೋಚನೆ ಮಾಡಿದಾಗ ಯಾವ ಕೃತ್ಯವು ಸರಿಯಲ್ಲವೆಂದು ನಾವು ಹೇಳಿದ್ದೆವೋ ಅದರ ಫಲವೇ ಈಗ ಪ್ರಾಪ್ತವಾಗಿದೆ. ನೀನು ಕೇವಲ ವೀರ್ಯದರ್ಪದಿಂದ ಇದೆಲ್ಲವನ್ನೂ ನಡೆಸಿ ಬಿಟ್ಟಿದ್ದೀಯೆ. ರಾಜನಾದ ನಿನಗೆ ನೀತಿ ಅನೀತಿಗಳ ಜ್ಞಾನ ಇರಬೇಕಾಗಿತ್ತು, ದುರ್ಮಂತ್ರಿಗಳ ಮಾತನ್ನು ಕೇಳಿಕೊಂಡು ಯುದ್ಧವನ್ನಾರಂಭಿಸಿದ್ದೀಯೆ. ಅರ್ಥಶಾಸ್ತ್ರವನ್ನರಿಯದ ಅಂಥವರ ಮಾತನ್ನು ಕೇಳಕೂಡದು. ಸೀತಾದೇವಿಯನ್ನು ಅಪಹರಿಸಿ ತಂದೆಯಲ್ಲ, ಯಾರ ಮಾತನ್ನು ಕೇಳಿ ಈ ದುಷ್ಕೃತ್ಯವನ್ನು ಮಾಡಿದೆ? ಆಮೇಲೆ

* ಕುಂಭಕರ್ಣನು ದೀರ್ಘಕಾಲದ ನಿದ್ರೆ ಬೇಕೆಂದು ಬ್ರಹ್ಮನಿಂದ ವರವನ್ನು ಪಡೆದಿದ್ದನು. (ಉತ್ತರಕಾಂಡ–10–45, 46). ಆ ನಿದ್ರೆಯು ಕಳೆದುಹೋದ ಮೇಲೆ ವರವೂ ಮುಗಿಯಿತು. ಅನಂತರ ಈ ಶಾಪವು ಬಂದಿದೆಯೆಂದು ತಿಳಿಯಬೇಕು.

ವಿಭೀಷಣನು ಹೇಳಿದ ಹಿತವಾದವನ್ನು ನೀನು ಲಕ್ಷಿಸದೆ ಅವನನ್ನು ಧಿಕ್ಕರಿಸಿ ಓಡಿಸಿದ್ದೀಯೆ. ಈಗಲಾದರೂ ವಿಭೀಷಣನ ಮಾತನ್ನು ನಡೆಸು. ಇಲ್ಲವೆ, ನಿನಗೆ ತೋರಿದಂತೆ ಮಾಡಿಕೊ'' ಎಂದು ಬಿಟ್ಟನು. ರಾವಣನು ಹುಬ್ಬುಗಂಟಿಕ್ಕಿ ಸಿಟ್ಟಿನಿಂದ ''ಕುಂಭಕರ್ಣ, ಗುರುವಿನಂತೆ ನನಗೆ ಉಪದೇಶ ಮಾಡುತ್ತೀಯಾ? ಆದದ್ದು ಆಗಿಹೋಯಿತು. ನೀನು ಅಸಾಧಾರಣ ಬಲಶಾಲಿ ಎಂದು ನಂಬಿ ನಿದ್ರೆಯಿಂದ ಎಬ್ಬಿಸಿದ್ದೇನೆ. ನಾನು ಮಾಡಿದ ತಪ್ಪನ್ನು ನಿನ್ನ ಪರಾಕ್ರಮದಿಂದ ಸರಿಪಡಿಸು. ನನ್ನಲ್ಲಿ ನಿನಗೆ ಪ್ರೀತಿಯಿದ್ದರೆ ರಾಮನನ್ನು ನಿರ್ಮೂಲ ಮಾಡು. ಕಷ್ಟದಲ್ಲಿ ಸಹಾಯ ಮಾಡತಕ್ಕವನೇ ಬಂಧು. ಅವನೇ ಸ್ನೇಹಿತ. ಇಲ್ಲದಿದ್ದರೆ ಹೋಗಿ ಮಲಗಿಕೊಂಡು ನಿದ್ರೆಮಾಡು!'' ಎಂದನು. ಕುಂಭಕರ್ಣನು ಚಿಂತಾಕ್ರಾಂತನಾದನು. ಸ್ವಲ್ಪಹೊತ್ತಿನ ಮೇಲೆ 'ನಮಗೆಲ್ಲರಿಗೂ ವಿನಾಶಕಾಲ ಬಂದಿದೆ' ಎಂದು ನಿಶ್ಚಯಿಸಿಕೊಂಡು ''ಅಣ್ಣ, ಸಿಟ್ಟಾಗಬೇಡ. ನನಗೆ ತಿಳಿದದ್ದನ್ನು ಹೇಳಿದ್ದೇನೆ. ನಿನ್ನ ಮೇಲಿರುವ ಪ್ರೀತಿಯಿಂದ, ಇದೋ, ನಾನು ಯುದ್ಧಕ್ಕೆ ಹೊರಡುವೆನು. ನಿನ್ನ ತಪ್ಪನ್ನು ನನ್ನ ಪರಾಕ್ರಮದಿಂದ ಸರಿಪಡಿಸುವೆನು. ಈ ದಿನ ಸಮರಭೂಮಿಯಲ್ಲಿ ನನ್ನ ಪರಾಕ್ರಮವೇನೆಂಬುದನ್ನು ನೋಡಿ ಸಂತೋಷಪಡು. ನಿನ್ನ ವೈರಿಗಳನ್ನು ತೊಡೆದು ಹಾಕುವೆನು. ಚಿಂತಿಸಬೇಡ. ನನಗೆ ಯಾವ ಸೈನ್ಯದ ಸಹಾಯವೂ ಬೇಡ. ನಾನೊಬ್ಬನೇ ಅವರೆಲ್ಲರ ಕಾರ್ಯವನ್ನೂ ಎಸಗುವೆನು!'' ಎಂದು ಹೇಳಿ ರಾವಣನ ಪಾದಗಳಿಗೆ ವಂದಿಸಿದನು. ಕುಂಭಕರ್ಣನ ಮಾತನ್ನು ಕೇಳಿ ರಾವಣನು ಆನಂದತುಂದಿಲನಾದನು. ಅವನು ಕುಂಭಕರ್ಣನನ್ನು ಅಪ್ಪಿಕೊಂಡು ತನ್ನ ಕೊರಳಿನಿಂದ ಒಂದು ರತ್ನಹಾರವನ್ನು ತೆಗೆದು ಆತನ ಕೊರಳಿಗೆ ಹಾಕಿದನು. ''ತಮ್ಮ, ನಿನ್ನ ಪರಾಕ್ರಮವನ್ನು ನಾನು ಬಲ್ಲೆ. ಆದರೂ ರಾಕ್ಷಸಭಟರು ನಿನ್ನ ಜೊತೆಗೆ ಬರಲಿ'' ಎಂದು ಹೇಳಿ ಆಶೀರ್ವದಿಸಿ ಕುಂಭಕರ್ಣನನ್ನು ಯುದ್ಧಕ್ಕೆ ಕಳಿಸಿದನು.

೬೪

ಕುಂಭಕರ್ಣನ ಘೋರಯುದ್ಧ. ವಿಭೀಷಣನ ಭೇಟಿ. ಶ್ರೀರಾಮನಿಂದ ಕುಂಭಕರ್ಣನ ಸಂಹಾರ.

ಒಡನೆಯೇ ಕುಂಭಕರ್ಣನು ಗರ್ಜಿಸುತ್ತ ಯುದ್ಧೋನ್ಮುಖನಾಗಿ ಹೊರಡಲು, ದೊಡ್ಡ ರಾಕ್ಷಸಸೇನೆಯು ಅವನಿಗೆ ಬೆಂಬಲವಾಗಿ ಹೊರಟಿತು. ಮಹಾ ಸಾಹಸಿಯಾದ ಕುಂಭಕರ್ಣನು ರಾಕ್ಷಸಭಟರನ್ನು ನೋಡಿ ''ಎಲೈ ರಾಕ್ಷಸರೆ, ಈ ದಿನ ಆ ಕಪಿಗಳನ್ನು ಹಿಂಡಿ ಹಿಸುಕಿ ಕೊಂದು ಬಿಡುವೆನು. ನಮ್ಮ ಉದ್ಯಾನಗಳಿಗೆ ಅಲಂಕಾರವಾಗಿ

ಹಾರಾಡಿಕೊಂಡಿರುವ ಈ ಕಪಿಗಳ ಮಾತೇನು? ಈ ವಿಪತ್ತಿಗೆ ಕಾರಣರಾದ ರಾಮಲಕ್ಷ್ಮಣರನ್ನು ಕೊಂದೆಸೆಯುವುದು ಮುಖ್ಯವಾಗಿ ನನ್ನ ಧ್ಯೇಯ'' ಎಂದು ಹೇಳಿ ತನ್ನ ಮೈಮೇಲಿಂದ ಒಡವೆಗಳನ್ನು ಕಿತ್ತೆಸೆದು ಭೀಕರವಾಗಿ ಗರ್ಜಿಸಿದನು. ಘೋರಾಕಾರವನ್ನು ತಳೆದ ಆ ದೈತ್ಯನು ನಗರದ ಕೋಟೆಯ ಬಾಗಿಲಲ್ಲಿ ಹೋಗದೆ ಕೋಟೆಯನ್ನು ಕಾಲಿಂದಲೇ ದಾಟಿ ರಣಭೂಮಿಗೆ ಸಾಗಿದನು! ಪರ್ವತಾಕಾರನಾದ ಆ ರಾಕ್ಷಸಶಾರ್ದೂಲನನ್ನು ಕಂಡೊಡನೆ ವಾನರರು ಹೆದರಿ ಕಂಗಾಲಾಗಿ ಓಡ ತೊಡಗಿದರು. ಕಾಲಾಗ್ನಿರುದ್ರನಂತೆ ಪರಿಘವನ್ನು ಹಿಡಿದು ಆ ಮಹಾರಾಕ್ಷಸನು ಆರ್ಭಟಿಸುತ್ತ ಕಪಿಸೇನೆಯಲ್ಲಿ ನುಗ್ಗಿದನು. ವಾನರರು ಚೆಲ್ಲಾಪಿಲ್ಲಿಯಾಗಿ ಓಡುತ್ತಿರುವಾಗ ನಳ, ನೀಲ, ಗವಾಕ್ಷ–ಮೊದಲಾದ ವಾನರವೀರರೂ ಹೆದರಿ ಓಡತೊಡಗಿದರು. ಅಂಗದನು ನಳಾದಿಗಳನ್ನು ತಡೆದು ''ಎಲೈ ವೀರರೆ, ಪ್ರಾಕೃತ ಕಪಿಗಳಂತೆ ನೀವೂ ಓಡುತ್ತಿರುವಿರಾ? ಆ ರಾಕ್ಷಸನು ವೇಷಕಟ್ಟಿಕೊಂಡು ಬಂದ ಬೆದರು ಬೊಂಬೆ. ಬನ್ನಿರಿ; ಅವನನ್ನು ಕೊಂದು ಹಾಕೋಣ'' ಎಂದು ಕೂಗಿ ಹೇಳಿದನು. ಅಂಗದನ ಮಾತನ್ನು ಕೇಳಿ ಕೆಲವರು ಮಾತ್ರ ಅವನೊಡನೆ ಹಿಂದಿರುಗಿ ಯುದ್ಧಕ್ಕೆ ಧಾವಿಸಿದರು. ಆ ವಾಲಿತನಯನು ಕಪಿಯೋಧರಿಗೆ ಧೈರ್ಯವನ್ನು ಹೇಳುತ್ತಿರುವಾಗ ಆಂಜನೇಯನು ಬಂದು ಸೇರಿಕೊಂಡನು. ಅವರೆಲ್ಲರೂ ಕುಂಭಕರ್ಣನಿದ್ದ ಕಡೆಗೆ ಧಾವಿಸಿದರು. ಅಷ್ಟರಲ್ಲಿ ಆ ರಾಕ್ಷಸನು ಕೆಲವು ಕಪಿಗಳನ್ನು ಬರಗಿ ಬಾಯಲ್ಲಿ ತುರುಕಿಕೊಳ್ಳುತ್ತ ಕೆಲವರನ್ನು ಎತ್ತಿ ಬಡಿಯುತ್ತ, ಕೆಲವರನ್ನು ಕಾಲಿಂದ ತುಳಿದು ಕೊಲ್ಲುತ್ತ ಕೆಲವರನ್ನು ಕೈಯಿಂದ ಹಿಸುಕಿ ಸಾಯಿಸುತ್ತ ಅತ್ಯಂತ ಭೀಷಣವಾದ ಕೃತ್ಯವನ್ನು ಎಸಗುತ್ತ ಬರುತ್ತಿದ್ದನು. ಹನುಮಂತನು ಒಂದು ಪರ್ವತಶಿಖರವನ್ನು ಎತ್ತಿ ಭೀಮಕಾಯನಾದ ಆ ರಾಕ್ಷಸನ ಮೇಲೆ ಬೀಸಿದನು. ಕುಂಭಕರ್ಣನ ದೇಹವು ಗಾಯದಿಂದ ರಕ್ತಸಿಕ್ತವಾಯಿತು. ಅವನು ಕೋಪದಿಂದ ಆರ್ಭಟಿಸಿ ಘೋರವಾದ ಶೂಲವನ್ನೆತ್ತಿ ಹನುಮಂತನ ಎದೆಗೆ ತಿವಿದನು. ರಕ್ತವನ್ನುಗುಳುತ್ತ ವಿಹ್ವಲನಾದ ಹನುಮಂತನು ಮೇಘವು ಗುಡುಗಿದಂತೆ ಭೀಕರವಾಗಿ ಅರಚಿದನು. ನೀಲ, ಗವಾಕ್ಷ ಮೊದಲಾದವರು ಕುಂಭಕರ್ಣನನ್ನಾಕ್ರಮಿಸಿದರು. ಅವರು ವೃಕ್ಷಗಳಿಂದ ಕುಂಭಕರ್ಣನನ್ನು ಬಡಿಯುತ್ತ ಪಾದಗಳಿಂದ ಒದೆಯುತ್ತ ಮುಷ್ಟಿಗಳಿಂದ ಗುದ್ದುತ್ತ ಮುತ್ತಿದರು. ಕುಂಭಕರ್ಣನು ಅದೊಂದನ್ನೂ ಲೆಕ್ಕಿಸದೆ ಋಷಭನನ್ನು ಹಿಡಿದು ಅಮುಕಿ, ಶರಭನನ್ನು ಗುದ್ದಿ, ನೀಲನನ್ನು ಮೊಳಕಾಲಿಂದ ತಿವಿದು ಆ ವಾನರ ವೀರರೆಲ್ಲರನ್ನೂ ನೆಲದಲ್ಲುರುಳಿಸಿದನು. ಅಷ್ಟರಲ್ಲಿ ಅಂಗದನು ಒಂದು ಶೈಲ ಶೃಂಗವನ್ನು ಕುಂಭಕರ್ಣನ ತಲೆಗೆ ಗುರಿಯಿಟ್ಟು ಬೀಸಿದನು. ಆ

ಪೆಟ್ಟನಿಂದ ನೊಂದ ಕುಂಭಕರ್ಣನು ರೋಷದಿಂದ ಶೂಲವನ್ನೆತ್ತಿ ಅಂಗದನನ್ನು ತಿವಿದನು. ಯುದ್ಧ ವಿಶಾರದನಾದ ಅಂಗದನು ಆ ತಿವಿತವನ್ನು ತಪ್ಪಿಸಿಕೊಂಡು ಚಂಗನೆ ಹಾರಿ ಬಂದು ಕುಂಭಕರ್ಣನ ಎದೆಯ ಮೇಲೆ ಅಪ್ಪಳಿಸಿದನು. ಆ ಹೊಡೆತಕ್ಕೆ ತತ್ತರಿಸಿಹೋದ ಆ ರಾಕ್ಷಸನು ತನ್ನ ಎಡಗೈ ಮುಷ್ಟಿಯಿಂದ ಅಂಗದನನ್ನು ಗುದ್ದಿದನು. ಅಂಗದನು ಮೂರ್ಛಿತನಾಗಿ ಬಿದ್ದನು. ಅಷ್ಟರಲ್ಲಿ ಸುಗ್ರೀವನು ಒಂದು ಗಿರಿ ಶೃಂಗದಿಂದ ಕುಂಭಕರ್ಣನ ಎದೆಗೆ ರಪ್ಪನೆ ಬಡಿದನು. ಅವನ ಎದೆಗೆ ತಾಕಿ ಆ ಗಿರಿ ಶೃಂಗವೇ ಪುಡಿಪುಡಿಯಾಯಿತು! ರಾಕ್ಷಸಭಟರು ಹರ್ಷೋದ್ಗಾರ ಮಾಡಿದರು. ಕುಂಭಕರ್ಣನು ಸುಗ್ರೀವನನ್ನು ಕೊಲ್ಲಬೇಕೆಂದು ನಿಶ್ಚಯಿಸಿ ಒಂದು ಮಹಾಶೂಲ–ವನ್ನೆತ್ತಿ ಬೀಸಿದನು. ಅಷ್ಟರಲ್ಲಿ ಹನುಮಂತನು ಹಾರಿ ಬಂದು ಶೂಲವನ್ನು ಹಿಡಿದೆಳೆದು ಮುರಿದೆಸೆದನು. ಆಗ ವಾನರಸೇನೆಯು ಹರ್ಷೋದ್ಗಾರ ಮಾಡಿತು. ಅನಂತರ ಕುಂಭಕರ್ಣನು ಇನ್ನೊಂದು ಪೆಟ್ಟನಿಂದ ಸುಗ್ರೀವನನ್ನು ಹೊಡೆದುರುಳಿಸಿದನು. ಅವನು ಬಿದ್ದೊಡನೆಯೇ ಆ ರಾಕ್ಷಸನು ಎಚ್ಚರದಪ್ಪಿದ ಸುಗ್ರೀವನನ್ನೆತ್ತಿಕೊಂಡು ಲಂಕೆಯ ಕಡೆಗೆ ಹೊರಟು ಬಿಟ್ಟನು. ವಾನರರು ಹಾಹಾಕಾರ ಮಾಡಿದರು. ಕಪಿರಾಜನಾದ ಸುಗ್ರೀವನನ್ನು ಲಂಕೆಯಲ್ಲಿ ಸೆರೆಹಿಡಿದಿಟ್ಟರೆ ಕಪಿಗಳೆಲ್ಲರೂ ಹೆದರಿ ಓಡಿಹೋಗುವರೆಂದು ಆತನು ಭಾವಿಸಿದನು. ಹನುಮಂತನು ಈ ಪರಿಸ್ಥಿತಿಯನ್ನು ನೋಡಿ ''ಎಲಾ, ಈಗೇನು ಮಾಡಲಿ? ಈ ಕುಂಭಕರ್ಣನನ್ನು ಬಡಿದು ಸುಗ್ರೀವನನ್ನು ಬಿಡಿಸಲೆ? ಆದರೆ ಮಹಾಪರಾಕ್ರಮಿಯೂ ಕಪಿರಾಜನೂ ಆದ ಸುಗ್ರೀವನಿಗೆ ನಾನು ಅಪಚಾರಮಾಡಿದಂತಾಗುವುದು. ಸ್ವಲ್ಪಹೊತ್ತು ನೋಡುವೆನು'' ಎನ್ನುತ್ತ ಕುಂಭಕರ್ಣನ ಹಿಂದೆ ಹಿಂದೆ ಧಾವಿಸುತ್ತ ಹೋದನು. ಅಷ್ಟರಲ್ಲಿ ಮೂರ್ಛಿತನಾಗಿದ್ದ ಸುಗ್ರೀವನಿಗೆ ಎಚ್ಚರವಾಯಿತು. ಕುಂಭಕರ್ಣನ ಕೈಗೆ ಸಿಕ್ಕಿಬಿದ್ದಿರುವೆನೆಂದು ಆ ಧೀರನಿಗೆ ತಿಳಿಯಿತು. ಒಡನೆಯೇ ಸುಗ್ರೀವನು ಆ ರಾಕ್ಷಸನ ಕಿವಿಗಳನ್ನು ಹರಿತವಾದ ತನ್ನ ಉಗುರುಗಳಿಂದ ಪರಚಿ ತರಿದು ಮೂಗನ್ನು ಕಚ್ಚಿ ಅವನ ಹೊಟ್ಟೆಯನ್ನು ಬಲವಾಗಿ ಪರಚಿದನು. ಆ ನೋವಿನಿಂದ ರೋಷಾವಿಷ್ಟನಾದ ಕುಂಭಕರ್ಣನು ಸುಗ್ರೀವನನ್ನು ನೆಲದ ಮೇಲೆ ಕುಕ್ಕಿದನು. ಆ ವಾನರೇಂದ್ರನು ಥಟ್ಟನೆ ಆಕಾಶಕ್ಕೆ ನೆಗೆದು ಶ್ರೀರಾಮನ ಬಳಿಗೆ ಬಂದು ಸೇರಿದನು. ಕಿವಿ ಮೂಗುಗಳನ್ನು ಕಳೆದುಕೊಂಡು ಕುಂಭಕರ್ಣನು ರಕ್ತದಲ್ಲಿ ತೊಯ್ದುಹೋದನು. ಕಪ್ಪು ದೇಹದ ಆ ರಾಕ್ಷಸನ ಮೈಮೇಲೆ ರಕ್ತವು ಹೊನಲು ಹೊನಲಾಗಿ ಸುರಿಯುತ್ತಿರಲು ಸಂಜೆಯ ಕೆಮ್ಮೋಡದಂತೆ ಆತನು ಕಂಗೊಳಿಸಿದನು. ಹಾಗೆಯೇ ಮತ್ತೆ ರಣರಂಗಕ್ಕೆ ಹಿಂದಿರುಗಿದನು. ಸುಗ್ರೀವನು ತಪ್ಪಿಸಿಕೊಂಡು ಹೋದನೆಂಬ ಕೋಪದಿಂದ ಕುದಿಯುತ್ತಿದ್ದ ಕುಂಭಕರ್ಣನು

ಉಗ್ರರೂಪನಾಗಿ ಕಪಿಸೇನೆಯನ್ನು ಧ್ವಂಸಪಡಿಸಲಾರಂಭಿಸಿದನು. ಕ್ರೋಧಾವೇಶದಿಂದ ಕೈಚಾಚಿ ಸಿಕ್ಕಿ ಸಿಕ್ಕಿದವರನ್ನು ಬಾಯಲ್ಲಿ ತುರುಕಿಕೊಳ್ಳುತ್ತ ಹೋದನು. ಅಷ್ಟರಲ್ಲಿ ಸುಮಿತ್ರಾತನಯನಾದ ಲಕ್ಷ್ಮಣನು ಆ ರಾಕ್ಷಸನನ್ನೆದುರಿಸಿ ಕೂರಂಬುಗಳಿಂದ ಆತನ ದೇಹವನ್ನು ಕೆತ್ತತೊಡಗಿದನು. ಉಗ್ರಾಕಾರನಾದ ಆ ರಾಕ್ಷಸನಿಗೆ ಅದರ ಕಡೆಗೆ ಗಮನವೇ ಇರಲಿಲ್ಲ. ಆ ಭೀಮಕಾಯನು ಸೌಮಿತ್ರಿಯನ್ನು ನೋಡಿ ''ಭಪ್ಪರೆ! ಲಕ್ಷ್ಮಣ, ರಣರಂಗದಲ್ಲಿ ಯಮನನ್ನೇ ಹೆದರಿಸಿ ಓಡಿಸಿದವನು ನಾನು. ನನಗೆ ಅಂಜದೆ ಯುದ್ಧಕ್ಕೆ ಬಂದ ನೀನು ವೀರನೇ ಹೌದು. ಆದರೆ ನಾನು ರಾಮನನ್ನು ಎದುರಿಸಬೇಕಾಗಿದೆ. ಅವನನ್ನು ಮೊದಲು ಕೊಂದು ಹಾಕಿದರೆ ಈ ವಾನರ ಸೇನೆ ಯಾವ ಲೆಕ್ಕಕ್ಕೆ? ನೀನು ಪಕ್ಕಕ್ಕೆ ಸರಿ'' ಎಂದನು. ಲಕ್ಷ್ಮಣನು ಮುಗುಳ್ನಗೆಯಿಂದ ''ಕುಂಭಕರ್ಣ, ನಿನ್ನ ಮಾತು ಸತ್ಯವೇ ಹೌದು. ಅಲ್ಲಿ ನೋಡು. ನನ್ನ ಅಣ್ಣ ಶ್ರೀರಾಮನು ಕೋದಂಡಧಾರಿಯಾಗಿ ನಿಂತಿದ್ದಾನೆ'' ಎಂದನು. ಕುಂಭಕರ್ಣನು ಲಕ್ಷ್ಮಣನನ್ನು ಲೆಕ್ಕಿಸದೆ, ಭೂಮಿಯು ನಡುಗುವಂತೆ ಹೆಜ್ಜೆಯಿಡುತ್ತ ಶ್ರೀರಾಮನ ಕಡೆಗೆ ನುಗ್ಗಿದನು. ಅವನು ಬರುತ್ತಿರುವುದನ್ನು ಕಂಡು ರಾಘವನು ತೀಕ್ಷ್ಣಾಸ್ತ್ರಗಳನ್ನು ಆ ರಾಕ್ಷಸನ ಎದೆಗೆ ಗುರಿಯಿಟ್ಟು ಹೊಡೆದನು. ಕುಂಭಕರ್ಣನಿಗೆ ಎಚ್ಚರದಪ್ಪಿದಂತಾಗಿ ಕೈಯಲ್ಲಿದ್ದ ಗದೆಯು ಸಡಲಿ ಕೆಳಗೆ ಬಿದ್ದಿತು. ಆ ರಾಕ್ಷಸನು ಗದೆಯನ್ನೂ ತೆಗೆದುಕೊಳ್ಳದೆ ಬರಿಯ ಕೈಯಿಂದಲೇ ಅದ್ಭುತವಾದ ಕಾಳಗವನ್ನು ನಡೆಸಿದನು. ರಾಮಬಾಣಗಳಿಂದ ಅವನ ದೇಹವು ಕ್ಷತವಿಕ್ಷತವಾಯಿತು. ನೆತ್ತರು ಹೊನಲಾಗಿ ಹರಿಯಿತು. ಆ ಮಹಾರಾಕ್ಷಸನಿಗೆ ಯುದ್ಧಾವೇಶದಿಂದ ಎಲ್ಲ ಅರಿವೂ ಮಾಸಿಹೋಯಿತು. ಕಣ್ಣಿಗೆ ಕಂಡ ರಾಕ್ಷಸರನ್ನೇ ಗುದ್ದಿಕೊಲ್ಲುತ್ತ ವಾನರ ಸೇನೆಯನ್ನು ತುಳಿಯುತ್ತ ರೋಷಾವಿಷ್ಟನಾಗಿ ಅತ್ತಿಂದಿತ್ತ ಧಾವಿಸತೊಡಗಿದನು. ಆಗ ಲಕ್ಷ್ಮಣನು ಶ್ರೀರಾಮನ ಬಳಿಗೆ ಬಂದು ''ಅಣ್ಣ, ಈ ರಾಕ್ಷಸನು ಯುದ್ಧೋನ್ಮತ್ತನಾಗಿದ್ದಾನೆ. ತನ್ನವರು ಯಾರು? ಪರರು ಯಾರು ಎಂಬುದೇ ತಿಳಿಯುತ್ತಿಲ್ಲ. ಎಲ್ಲರನ್ನೂ ಬಡಿದು ಸಾಯಿಸುತ್ತಿದ್ದಾನೆ. ತಡಮಾಡದೆ ಇವನನ್ನು ಕೊಲ್ಲಬೇಕು'' ಎಂದು ನುಡಿದು ಕುಂಭಕರ್ಣನ ಶರೀರದ ಮೇಲೆ ಹತ್ತಿ ಧಾಳಿ ಮಾಡಬೇಕೆಂದು ವಾನರ ಯೋಧರಿಗೆ ತಿಳಿಸಿದನು. ಆ ಕಪಿಗಳು ಉತ್ಸಾಹದಿಂದ ನುಗ್ಗಿ ಬೆಟ್ಟದಂತಿದ್ದ ಅವನ ದೇಹವನ್ನು ಹತ್ತಿ ಗುದ್ದತೊಡಗಿದರು. ಕುಂಭಕರ್ಣನು ರೋಷದಿಂದ ಮೈಯನ್ನೊಮ್ಮೆ ಒದರಲು ಕಪಿಗಳೆಲ್ಲರೂ ಕೆಳಗೆ ಉರುಳಿಬಿದ್ದರು. ಅದನ್ನು ವೀಕ್ಷಿಸಿ ಶ್ರೀರಾಮನು ''ಓಹೋ ಇವನು ಬಹು ದುಷ್ಟ'' ಎಂದು ಉದ್ಗರಿಸಿ, ಕೆಂಗಣ್ಣಿನಿಂದ ಆ ರಾಕ್ಷಸನನ್ನು ನೋಡುತ್ತ ಅವನೆದುರಿಗೆ ಧಾವಿಸುತ್ತ ಬಂದನು. ಕುಂಭಕರ್ಣನಾದರೋ ಕಂಡ ಕಂಡ ಕಡೆಗೆ ಧಾವಿಸುತ್ತ ವಾನರರನ್ನು

ಮರ್ದಿಸುತ್ತ ರಕ್ತವನ್ನು ನೆಕ್ಕುತ್ತ ಯಮನಂತೆ ವಿಜೃಂಭಿಸುತ್ತಿದ್ದನು. ಅಷ್ಟರಲ್ಲಿ ಅವನ ತಮ್ಮನಾದ ವಿಭೀಷಣನು ಗದಾಪಾಣಿಯಾಗಿ ಓಡುತ್ತ ಬಂದು ಕುಂಭಕರ್ಣನನ್ನು ಅಡ್ಡಗಟ್ಟಿದನು. ಕುಂಭಕರ್ಣನು ಕ್ಷಣಕಾಲ ದಿಟ್ಟಿಸಿ ನೋಡಿದಾಗ ಅವನು ವಿಭೀಷಣನೆಂದು ಗೊತ್ತಾಯಿತು. ಆಗ ''ವಿಭೀಷಣ, ಗದೆಯಿಂದ ನನ್ನನ್ನು ಅಪ್ಪಳಿಸು. ಇದು ಯುದ್ಧಭೂಮಿ. ಸೋದರ ಸ್ನೇಹವೇನೂ ಬೇಡ. ರಾಮನಿಗೆ ಹಿತವಾದದ್ದನ್ನು ಮಾಡಿಬಿಡು. ತಮ್ಮ–ವಿಭೀಷಣ, ನೀನು ರಾಮನ ಬಳಿಗೆ ಹೋದದ್ದು ಒಳ್ಳೆಯದೇ ಆಯಿತು. ರಾಕ್ಷಸರ ನಡುವೆ ಸತ್ಯ ಧರ್ಮಗಳನ್ನು ಪಾಲಿಸತಕ್ಕವನು ನೀನೊಬ್ಬನೇ. ಧರ್ಮನಿಷ್ಠರಿಗೆ ಯಾವ ವಿಪತ್ತೂ ಬರುವುದಿಲ್ಲ. ನಮ್ಮ ವಂಶಕ್ಕೆ ನೀನೊಬ್ಬನಾದರೂ ಉಳಿದಿರು. ರಾಘವನ ಅನುಗ್ರಹದಿಂದ ಲಂಕಾರಾಜ್ಯವು ನಿನಗೆ ದೊರೆಯುವುದು. ಆದರೆ, ವಿಭೀಷಣ, ನನಗೆ ಅಡ್ಡವಾಗಬೇಡ. ಬೇಗನೆ ಅತ್ತ ಹೊರಟುಹೋಗು. ಯುದ್ಧ ಸಂಭ್ರಮದಲ್ಲಿ ನನ್ನ ಬುದ್ಧಿ ಕೆಟ್ಟು ಹೋಗುವುದು. ಇದು ನನ್ನ ಸ್ವಭಾವ. ನಮ್ಮವರು ಯಾರು? ಪರರು ಯಾರು? ಎಂಬುದೇ ತಿಳಿಯುವುದಿಲ್ಲ! ನಿನ್ನನ್ನು ನಾನು ಹೇಗಾದರೂ ಉಳಿಸಲೇಬೇಕು'' ಎಂದು ಹೇಳಿದನು. ಆ ಮಾತನ್ನು ಕೇಳಿ ವಿಭೀಷಣನ ಕಣ್ಣಲ್ಲಿ ನೀರು ತುಂಬಿತು. ಅವನು ''ಅಣ್ಣ, ನಮ್ಮ ವಂಶವನ್ನುಳಿಸಬೇಕೆಂದು ನಾನು ಬಗೆ ಬಗೆಯಲ್ಲಿ ಅಗ್ರಜನಿಗೆ ಬುದ್ಧಿ ಹೇಳಿದೆನು. ನನ್ನ ಮಾತು ನಡೆಯಲಿಲ್ಲ. ಗತ್ಯಂತರವಿಲ್ಲದೆ ನಾನು ಶ್ರೀರಾಮನನ್ನಾಶ್ರಯಿಸಬೇಕಾಯಿತು'' ಎಂದು ನುಡಿದು ಅಳುತ್ತ ದೂರದಲ್ಲಿ ಹೋಗಿ ಗದೆಯನ್ನೂರಿಕೊಂಡು ಚಿಂತಾಕ್ರಾಂತನಾಗಿ ಸುಮ್ಮನೆ ನಿಂತುಬಿಟ್ಟನು.

ಅನಂತರ ಕುಂಭಕರ್ಣನು ಪಕ್ಕಕ್ಕೆ ಸರಿದು ಶ್ರೀರಾಮನೆಡೆಗೆ ರಭಸದಿಂದ ಸಾಗಿದನು. ಭುಜಗಳನ್ನು ಬೀಸುತ್ತ ನುಗ್ಗಿ ಬರುತ್ತಿದ್ದ ಪರ್ವತಾಕಾರನಾದ ಕುಂಭಕರ್ಣನನ್ನು ನೋಡಿ ಶ್ರೀರಾಮನು ''ಕುಂಭಕರ್ಣ, ಮುಂದೆ ಬಾ. ಹೋರಾಡುವ ವೀರನಾರೂ ಧರೆಯಲ್ಲಿಲ್ಲವೆಂದು ಚಿಂತಿಸಬೇಡ. ನಾನೇ ಎದುರಿಗೆ ಬಂದು ನಿಂತಿದ್ದೇನೆ. ನೀನು ಹುಡುಕುತ್ತಿರುವ ರಾಮನೆಂಬವನು ನಾನೇ'' ಎಂದನು. ಅವನು ಶ್ರೀರಾಮನೆಂಬುದು ಗೊತ್ತಾದೊಡನೆ ಆ ರಾಕ್ಷಸನು ವಿಕಟಾಕಾರವಾಗಿ ನಕ್ಕನು. ಮೋಡವು ಗುಡುಗಿದಂತಾಯಿತು. ಅವನ ಅಟ್ಟಹಾಸವನ್ನು ಕೇಳಿ ವಾನರರಿಗೆ ಎದೆಯೊಡೆದಂತಾಯಿತು–ಕುಂಭಕರ್ಣನು ಮುಂದೆ ಬಂದು ''ರಾಮ, ನಾನು ಯಾರೆಂದು ತಿಳಿದೆ? ನಾನು ವಿರಾಧನಲ್ಲ, ಕಬಂಧನಲ್ಲ, ಖರನೂ ಅಲ್ಲ, ವಾಲಿಯೂ ಅಲ್ಲ, ಮಾರೀಚನೂ ಅಲ್ಲ. ಬಂದವನು ನಾನು ಕುಂಭಕರ್ಣ! ಈ ಮುದ್ಗರವನ್ನು ನೋಡು. ದೇವದಾನವರನ್ನು ಇದರಿಂದಲೇ ಬಡಿದು ಓಡಿಸಿದ್ದೇನೆ. ಎಲಾ ರಾಮ, ನನ್ನ ಕಿವಿ ಮೂಗುಗಳು ಹರಿದು ಹೋಗಿವೆ ಎಂದು ಅಸಡ್ಡೆ ಮಾಡಬೇಡ. ಅದರಿಂದ

ನನಗೆ ಯಾವ ನೋವೂ ಆಗುವುದಿಲ್ಲ! ನನ್ನ ದೇಹವನ್ನು ನೋಡು! ಇದರ ಮೇಲೆ ನಿನ್ನ ಪೌರುಷವನ್ನು ಮೆರೆಸು. ಸ್ವಲ್ಪಹೊತ್ತು ನಿನ್ನ ಶೌರ್ಯವನ್ನು ಪರೀಕ್ಷಿಸಿ ಆಮೇಲೆ ನಿನ್ನನ್ನು ತಿಂದು ಬಿಡುವೆನು!'' ಎಂದು ಘೋಷಿಸಿದನು. ಒಡನೆಯೇ ದಾಶರಥಿಯು ವಜ್ರಸಮಾನಗಳಾದ ಶರಗಳನ್ನು ಹಿರಿದು ಕುಂಭಕರ್ಣನ ಮೇಲೆ ಗುರಿಯಿಟ್ಟು ಹೊಡೆಯಲಾರಂಭಿಸಿದನು. ಯಾವ ತೀಕ್ಷ್ಣಶರವು ಸಪ್ತಸಾಲ ವೃಕ್ಷಗಳನ್ನು ಒಮ್ಮೆಗೇ ಭೇದಿಸಿ ತೂರಿಕೊಂಡು ಹೋಗಿತ್ತೋ, ವೀರಾಗ್ರೇಸರನಾದ ವಾಲಿಯನ್ನು ಯಾವುದು ಒಂದೇ ಹೊಡೆತಕ್ಕೆ ವಧಿಸಿತ್ತೋ, ಅಂತಹ ಶರವು ಕುಂಭಕರ್ಣನಿಗೆ ಯಾತನೆಯನ್ನೂ ಉಂಟುಮಾಡಲಿಲ್ಲ. ಮಳೆಯ ಧಾರೆಗಳು ಪರ್ವತದ ಮೇಲೆ ಸುರಿಯುವಂತೆ ಶ್ರೀರಾಮನ ಶರಪರಂಪರೆಗಳು ಕುಂಭಕರ್ಣನ ಮೇಲೆ ಮಹಾವೇಗದಿಂದ ಸುರಿಯತೊಡಗಿದವು. ಆ ರಾಕ್ಷಸನು ತನ್ನ ಮುದ್ಗರವನ್ನು ಬೀಸಿ ಆ ಶರಪರಂಪರೆ ಯನ್ನು ತಡೆಯುತ್ತಿದ್ದನು. ಇನ್ನು ತಡಮಾಡಬಾರದೆಂದು ಶ್ರೀರಾಮನು ವಾಯವ್ಯಾಸ್ತ್ರ ವನ್ನು ಪ್ರಯೋಗಿಸಿ ಮುದ್ಗರವನ್ನು ಹಿಡಿದಿದ್ದ ಕುಂಭಕರ್ಣನ ತೋಳನ್ನು ಕತ್ತರಿಸಿ ಹಾಕಿದನು. ರಾಕ್ಷಸನು ಭೀಕರವಾಗಿ ಗರ್ಜಿಸಿದನು. ಅವನ ತುಂಡಾದ ತೋಳು ವಾನರರ ಮೇಲೆ ಬಿದ್ದು ಕೆಲವರನ್ನು ಕೊಂದು ಹಾಕಿತು! ವಾನರರು ಹೆದರಿ ದೂರ ಸರಿದು ಶ್ರೀರಾಮನೊಡನೆ ಅವನು ನಡೆಸುತ್ತಿದ್ದ ಯುದ್ಧವನ್ನು ನೋಡುತ್ತಿದ್ದರು. ಕುಂಭಕರ್ಣನು ತನ್ನ ಎಡಗೈಯಿಂದ ಒಂದು ಸಾಲವೃಕ್ಷವನ್ನು ಕಿತ್ತು ರಾಘವನನ್ನು ಎದುರಿಸಿದನು. ರಾಘವನು ಐಂದ್ರಾಸ್ತ್ರದಿಂದ ಆ ತೋಳನ್ನೂ ಕತ್ತರಿಸಿ ಕೆಡವಿದನು. ಹೀಗೆ ಎರಡು ಭುಜಗಳು ಕತ್ತರಿಸಿ ಬಿದ್ದರೂ ಆ ಘೋರರಾಕ್ಷಸನು ಅಬ್ಬರಿಸುತ್ತ ಶ್ರೀರಾಮನ ಮೇಲೆ ನುಗ್ಗಿದನು. ದಾಶರಥಿಯು ಎರಡು ಅರ್ಧ ಚಂದ್ರಾಸ್ತ್ರಗಳಿಂದ ಆತನ ಎರಡು ಕಾಲುಗಳನ್ನೂ ತುಂಡರಿಸಿದನು. ಕೈಕಾಲುಗಳೆಲ್ಲವೂ ಕತ್ತರಿಸಿ ಹೋದ ಮೇಲೆ ಆ ರಾಕ್ಷಸನು ಬಡಬಾಗ್ನಿಯಂತಿದ್ದ ತನ್ನ ಬಾಯನ್ನು ತೆರೆದು ಶ್ರೀರಾಮನನ್ನು ನುಂಗಬೇಕೆಂದು ತೆವಳುತ್ತ ಮುಂದೆ ಮುಂದೆ ಬಂದನು. ಘೋರವಾಗಿ ಗರ್ಜಿಸುತ್ತಿದ್ದ ಆತನ ಬಾಯೊಳಗೆ ಶ್ರೀರಾಮನು ಕೂರಂಬುಗಳನ್ನು ತುಂಬಿದನು. ಅನಂತರ ನಿಶಿತವಾದ ಐಂದ್ರಾಸ್ತ್ರವನ್ನು ಬತ್ತಳಿಕೆಯಿಂದ ಸೆಳೆದು ಧನುಸ್ಸಿಗೆ ಹೂಡಿದನು. ಆ ದಿವ್ಯಾಸ್ತ್ರವು ಬ್ರಹ್ಮದಂಡದಂತೆ ಹೊಳೆಯುತ್ತ ಕಾಲಮೃತ್ಯುವಿನಂತೆ ಭುಗಿಲೆನ್ನುತ್ತ ಅತಿ ಘೋರವಾಗಿ ರಾರಾಜಿಸಿತು. ಸಿಡಿಲಿನಂತೆ ಜಗಜಗಿಸುತ್ತಿದ್ದ ಆ ಭೀಕರಾಸ್ತ್ರವನ್ನು ಶ್ರೀರಾಮನು ಕುಂಭಕರ್ಣನ ಮೇಲೆ ಪ್ರಯೋಗಿಸಿದನು. ಆ ಐಂದ್ರಾಸ್ತ್ರವು ಪ್ರಚಂಡವೇಗದಿಂದ ಸಿಡಿದು ಬಂದು ಕುಂಭಕರ್ಣನ ಶಿರಸ್ಸನ್ನು ಕತ್ತರಿಸಿತು. ಕತ್ತರಿಸಿದ ವೇಗಕ್ಕೆ ಆ ಶಿರಸ್ಸು ಆಕಾಶಕ್ಕೆ ಹಾರಿತು. ಪರ್ವತ ಸದೃಶವಾದ ಆ ಶಿರಸ್ಸು ಸಿಡಿದು

ಲಂಕಾನಗರದ ಬಳಿಯಲ್ಲಿ ಬಿದ್ದಿತು. ಕುಂಭಕರ್ಣನ ಶರೀರವು ಒಲೆದು ಸಮುದ್ರಕ್ಕೆ ಬಿದ್ದಿತು. ಆ ಮಹಾರಾಕ್ಷಸನು ಸತ್ತು ಹೋದನೆಂದು ದೇವತೆಗಳು ಆನಂದದಿಂದ ಕೋಲಾಹಲಮಾಡಿದರು. ಅಂತರಿಕ್ಷದಲ್ಲಿ ನೆರೆದಿದ್ದ ಗಂಧರ್ವ ದೇವರ್ಷಿ ಮೊದಲಾದವರು ಹರ್ಷದಿಂದ ಉಬ್ಬಿದರು. ರಾಕ್ಷಸಭಟರು ಶ್ರೀರಾಮನನ್ನು ನೋಡಿ ತಲ್ಲಣಿಸಿ 'ಹಾಹಾ ಕಾರ'ಮಾಡುತ್ತ ಲಂಕೆಯ ಕಡೆಗೆ ಓಡಿ ಹೋದರು. ಭೀಮ ಪರಾಕ್ರಮಿಯಾದ ಕುಂಭಕರ್ಣನನ್ನು ಸಂಹರಿಸಿದ ಶ್ರೀರಾಮನನ್ನು ವಾನರಭಟರು ಕೊಂಡಾಡಿದರು.

೬೫

ಕುಂಭಕರ್ಣನ ಮರಣವನ್ನು ಕೇಳಿ ರಾವಣನ ಶೋಕ. ತ್ರಿಶಿರ, ನರಾಂತಕ ಮೊದಲಾದವರ ಯುದ್ಧ. ಅವರ ಸಾವು. ಅತಿಕಾಯನನ್ನು ಲಕ್ಷ್ಮಣನು ಸಂಹರಿಸುವುದು.

ಲಂಕೆಗೆ ಓಡಿ ಹೋದ ರಾಕ್ಷಸರು ರಾಕ್ಷಸೇಂದ್ರನನ್ನು ಕಂಡು ''ಮಹಾರಾಜ, ನಿನ್ನ ತಮ್ಮನಾದ ಕುಂಭಕರ್ಣನು ಮಹಾಪರಾಕ್ರಮದಿಂದ ಕಾಲಯಮನೋ ಎಂಬಂತೆ ವಾನರಸೇನೆಯೊಡನೆ ಹೋರಾಡಿದನು. ಮಹಾಪ್ರಭು, ಕಡೆಯಲ್ಲಿ ರಾಮನ ತೇಜಸ್ಸಿನಿಂದ ಶಾಂತನಾದನು. ಕುತ್ತಿಗೆ, ತೊಡೆ, ತೋಳುಗಳು ಕತ್ತರಿಸಿ ಹೋದವು. ಮಹಾಸ್ವಾಮಿ, ನಿನ್ನ ಸೋದರನ ದೇಹವು ಸಮುದ್ರದಲ್ಲಿ ಬಿದ್ದಿತು. ಅವನು ನಿಧನವನ್ನು ಹೊಂದಿದನು'' ಎಂದರು. ಈ ಕಠೋರವಾರ್ತೆಯನ್ನು ಕೇಳಿ ರಾವಣನು ಶೋಕಸಂತಪ್ತನಾಗಿ ನೆಲದ ಮೇಲೊರಗಿದನು. ಅತಿಕಾಯ ಮೊದಲಾದವರೆಲ್ಲರೂ ಅತ್ತರು. ಬಹಳ ಹೊತ್ತಿನಮೇಲೆ ರಾವಣನು ಮೂರ್ಛೆಯಿಂದೆದ್ದು ''ಹಾ ಕುಂಭಕರ್ಣ, ನನ್ನನ್ನು ತ್ಯಜಿಸಿದೆಯಾ? ನಮ್ಮ ಸಂಕಟವನ್ನು ಪರಿಹರಿಸದೇ ಹೊರಟು ಬಿಟ್ಟೆಯಾ? ರಣಮಲ್ಲನಾದ ನೀನು ರಾಮನ ಬಾಣದಿಂದ ಹತನಾದೆಯಾ? ಮಹಾತ್ಮನಾದ ವಿಭೀಷಣನ ಮಾತನ್ನು ಕೇಳದೆ ಹೋದೆನು. ಅಯ್ಯೋ, ಇನ್ನು ನನಗೆ ರಾಜ್ಯದಿಂದ ಏನಾಗಬೇಕು? ಸೀತೆಯನ್ನು ಕಟ್ಟಿಕೊಂಡು ಏನು ಮಾಡಲಿ?'' ಎಂದು ಬಗೆ ಬಗೆಯಲ್ಲಿ ಹಲುಬಿ ಗೋಳಾಡಿದನು. ಅನಂತರ ಅವನ ಮಗನಾದ ತ್ರಿಶಿರನು ''ಮಹಾರಾಜ, ಪರಾಕ್ರಮಿಗಳಾದ ನಿನ್ನಂಥವರು ಹೀಗೆ ಅಳುತ್ತ ಕುಳಿತುಕೊಳ್ಳ ಬಾರದು. ಆಹವ – ಶೂರನಿಗೆ ಶೋಕವು ತರವಲ್ಲ. ನಾನೀಗ ಯುದ್ಧಕ್ಕೆ ಹೊರಡುವೆನು. ರಾಮನನ್ನು ಕೊಲ್ಲುವುದು ನಿಶ್ಚಯ'' ಎಂದನು. ದುಷ್ಟನಾದ ರಾವಣನಿಗೆ ಆ ಮಾತಿನಿಂದ ನವೋತ್ಸಾಹ ಉಂಟಾಯಿತು. ತ್ರಿಶಿರನ ನುಡಿಯನ್ನಾಲಿಸಿ ಅವನ ಸೋದರರಾದ

ದೇವಾಂತಕ, ನರಾಂತಕ, ಅತಿಕಾಯ ಎಂಬವರು ತಾವೂ ಯುದ್ಧಕ್ಕೆ ಸಿದ್ಧರಾದರು. ಆ ನಾಲ್ವರು ರಾವಣ ಪುತ್ರರು ಮಹಾಪರಾಯಾವಿಗಳು. ರಾವಣನು ಅವರನ್ನು ಆಶೀರ್ವದಿಸಿ ಮಹೋದರ, ಮಹಾಪಾರ್ಶ್ವ ಎಂಬ ತನ್ನ ಸಹೋದರರನ್ನೂ ಅವರಿಗೆ ಬೆಂಬಲವಾಗಿ ಕಳಿಸಿಕೊಟ್ಟನು. ಅವರೆಲ್ಲರೂ ನಾನಾ ಬಗೆಯ ಆಯುಧಗಳನ್ನು ರಥದಲ್ಲಿ ತುಂಬಿ ರಾಕ್ಷಸಭಟರೊಡನೆ ರಣರಂಗದೊಳಗೆ ನುಗ್ಗಿ ಉತ್ಸಾಹದಿಂದ ವಾನರಸೇನೆಯನ್ನೆದುರಿಸಿದರು. ಅತ್ಯಂತ ಭೀಕರವಾದ ಯುದ್ಧವು ನಡೆದು ಎರಡು ಪಕ್ಷಗಳಲ್ಲಿಯೂ ಬಹು ಮಂದಿ ಯೋಧರು ಸತ್ತು ಬಿದ್ದರು. ನರಾಂತಕನು ಥಳಥಳಿಸುತ್ತಿದ್ದ ತನ್ನ ಆಯುಧಗಳಿಂದ ಕಪಿಸೇನೆಯನ್ನು ಸುಟ್ಟು ಉರುಬಿದನು. ನರಾಂತಕನ ಭಯದಿಂದ ವಾನರಸೇನೆಯು ಓಡಿಹೋಗುತ್ತಿರುವುದನ್ನು ಕಂಡು ಸುಗ್ರೀವನು ಅವನನ್ನೆದುರಿಸುವಂತೆ ಯುವರಾಜನಾದ ಅಂಗದನಿಗೆ ಹೇಳಿದನು. ಮಹಾತೇಜಸ್ವಿಯಾದ ಅಂಗದನು ನರಾಂತಕನನ್ನು ತರುಬಿದನು. ಅವರಿಬ್ಬರಿಗೂ ಘೋರವಾದ ಹೊಡೆದಾಟ ನಡೆಯಿತು. ವಾಲಿತನಯನು ಮುಷ್ಟಿಯನ್ನು ಬಿಗಿದು ನರಾಂತಕನ ಎದೆಯ ಮೇಲೆ ಸಿಡಿಲೆರಗುವಂತೆ ಬಲವಾಗಿ ಅಪ್ಪಳಿಸಿದನು. ಒಡನೆಯೇ ನರಾಂತಕನು ರಕ್ತವನ್ನು ಕಕ್ಕುತ್ತಾ ಹತನಾಗಿ ನೆಲದ ಮೇಲೊರಗಿದನು.

ಒಡನೆಯೇ ದೇವಾಂತಕ, ತ್ರಿಶಿರ, ಮಹೋದರ–ಈ ಮೂವರು ವಾಲಿಪುತ್ರನನ್ನು ಮುತ್ತಿದರು. ಅಂಗದನಿಗೂ ಆ ರಾಕ್ಷಸರಿಗೂ ಭೀಕರವಾದ ಯುದ್ಧ ನಡೆಯಿತು. ಅಂಗದನ ನೆರವಿಗಾಗಿ ಹನುಮಂತನೂ ನೀಲನೂ ಬಂದರು. ದೇವಾಂತಕನಿಗೂ ಹನುಮಂತನಿಗೂ ಯುದ್ಧವು ಸಂಘಟಿಸಿತು. ಮಾರುತಿಯು ವೇಗದಿಂದ ಮುಂದಕ್ಕೆ ನೆಗೆದು ತನ್ನ ವಜ್ರಮುಷ್ಟಿಯಿಂದ ದೇವಾಂತಕನ ತಲೆಯ ಮೇಲೆ ಗುದ್ದಿದನು. ಆ ರಾಕ್ಷಸನ ಶರೀರವು ಜರ್ಝರಿತವಾಯಿತು. ಕಣ್ಣುಗುಡ್ಡೆಗಳು ಕಳಚಿದವು. ನಾಲಗೆಯು ಜೋತಾಡಿತು. ದೇವಾಂತಕನು ನೆಲದ ಮೇಲೆ ಸತ್ತುಬಿದ್ದನು. ಆಮೇಲೆ ತ್ರಿಶಿರನು ನೀಲನೊಡನೆ ಯುದ್ಧದಲ್ಲಿ ತೊಡಗಿದ್ದನು. ಅವನಿಗೆ ನೆರವಾಗುವುದಕ್ಕಾಗಿ ಮಹೋದರನು ಬಂದನು. ನೀಲನ ಹೊಡೆತದಿಂದ ಮಹೋದರನು ಸತ್ತು ಬಿದ್ದನು. ನೀಲನು ಆಯಾಸಗೊಂಡನೆಂದು ಹನುಮಂತನು ತ್ರಿಶಿರನನ್ನೆದುರಿಸಿದನು. ಆ ರಾವಣಾತ್ಮಜನು ಕೂರ್ಗಣೆಗಳಿಂದ ಹನುಮಂತನನ್ನು ಬಿಗಿಯತೊಡಗಿದನು. ಮಾರುತಿಯು ಕ್ರುದ್ಧನಾಗಿ ತ್ರಿಶಿರನ ಕುದುರೆಗಳನ್ನು ಉಗುರುಗಳಿಂದ ಸೀಳಿಕೊಂದನು. ರೊಚ್ಚಿಗೆದ್ದ ತ್ರಿಶಿರನು ಖಡ್ಗದಿಂದ ಹನುಮಂತನ ಎದೆಗೆ ಹೊಡೆದನು. ಮಾರುತಿಯು ಅದನ್ನು ಲೆಕ್ಕಿಸದೆ ತ್ರಿಶಿರನ ವಕ್ಷಃಸ್ಥಳವನ್ನು ಅಂಗೈಯಿಂದ ಅಪ್ಪಳಿಸಿದನು. ಆ ರಾಕ್ಷಸನು ಮೂರ್ಛಿತನಾಗಿ ನೆಲದ ಮೇಲೆ ಕುಸಿದನು. ವಾಯುಪುತ್ರನು ಆತನ ಖಡ್ಗವನ್ನು

ಕಿತ್ತುಕೊಂಡು ಸಿಂಹನಾದ ಮಾಡಿದನು. ಅಷ್ಟರಲ್ಲಿ ತ್ರಿಶಿರನು ಮೇಲೆದ್ದು ಹನುಮಂತನನ್ನು ಗುದ್ದಿದನು. ರೊಚ್ಚಿಗೆದ್ದ ಹನುಮಂತನು ತನ್ನ ಕೈಯಲ್ಲಿದ್ದ ಖಡ್ಗದಿಂದ ತ್ರಿಶಿರನ ತಲೆಯನ್ನು ಕತ್ತರಿಸಿ ಎಸೆದನು. ಹೀಗೆ ಅವರೆಲ್ಲರೂ ಸತ್ತುಹೋಗಲು ಮಹಾಪಾರ್ಶ್ವನು ಸಿಟ್ಟಿನಿಂದ ಸಿಡಿದೆದ್ದು ವಾನರರನ್ನು ಕೊಲ್ಲತೊಡಗಿದನು. ಬಲಶಾಲಿಯಾದ ಋಷಭನು ಆ ರಾಕ್ಷಸನನ್ನೆದುರಿಸಿ ಭೀಕರವಾದ ಯುದ್ಧದಲ್ಲಿ ತೊಡಗಿದನು. ಆತನು ಮಹಾಪಾರ್ಶ್ವನ ಗದೆಯನ್ನು ಕಿತ್ತುಕೊಂಡು ಅದರಿಂದಲೇ ಆತನನ್ನು ಬಡಿದನು. ರಾವಣನ ಸೋದರನಾದ ಮಹಾಪಾರ್ಶ್ವನೂ ಸಹ ಸತ್ತುಬಿದ್ದನು. ಉಳಿದ ರಾಕ್ಷಸಯೋಧರು ಬದುಕಿದರೆ ಸಾಕೆಂದು ಓಡಿಹೋದರು.

ಈ ಪ್ರಕಾರವಾಗಿ ನರಾಂತಕಾದಿಗಳು ಹತರಾಗಲು ರಾವಣ ಪುತ್ರನಾದ ಅತಿಕಾಯನು ಕೋಪೋದ್ದೀಪಿತನಾದನು. ಬ್ರಹ್ಮನಿಂದ ವರವನ್ನು ಪಡೆದಿದ್ದ ಆ ವೀರನು ರಥವನ್ನೇರಿ ನುಗ್ಗಿ ಬಂದು ''ಎಲೈ ವಾನರರೆ, ನಾನು ಯುದ್ಧಕ್ಕೆ ಬಂದವನು. ನನ್ನ ಹೆಸರು ಅತಿಕಾಯ'' ಎಂದು ಹೇಳಿ ಬೊಬ್ಬಿರಿದನು. ಕುಂಭಕರ್ಣನಂತೆ ಮಹಾಶರೀರನಾದ ಅತಿಕಾಯನನ್ನು ನೋಡಿ ಕಪಿಗಳು ಹೆದರಿದರು. ಅವರು ಗುಂಪು ಗುಂಪಾಗಿ ಓಡುತ್ತಿರಲು ಶ್ರೀರಾಮನು ದೂರದಲ್ಲಿ ಅತಿಕಾಯನನ್ನು ಕಂಡನು. ಆತನ ಭೀಷಣಾಕೃತಿಯನ್ನು ನೋಡಿ ವಿಭೀಷಣನನ್ನು ಕರೆದು ''ವಿಭೀಷಣ, ಆ ರಾಕ್ಷಸಶಾರ್ದೂಲನು ಯಾರು?'' ಎಂದು ಕೇಳಿದನು. ಅದಕ್ಕೆ ವಿಭೀಷಣನು ''ಶ್ರೀರಾಮ, ಈತನು ಕ್ರೂರಕರ್ಮಿಯಾದ ರಾವಣನ ಪುತ್ರ. ಅತಿಕಾಯನೆಂದು ಇವನ ಹೆಸರು. ತೀಕ್ಷ್ಣವಾದ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ವರವನ್ನು ಪಡೆದಿದ್ದಾನೆ. ಇವನು ಅತ್ಯಂತ ಬಲಶಾಲಿ. ಈತನನ್ನು ಮೊದಲು ನಿಗ್ರಹಿಸಬೇಕು'' ಎಂದನು. ಮೈಂದ, ದ್ವಿವಿದ, ಶರಭ ಮುಂತಾದ ಕಪಿಯೂಥಪರು ಅತಿಕಾಯನನ್ನು ಎದುರಿಸಲಾರದೆ ಹೋದರು. ಆ ರಾಕ್ಷಸನು ನೇರವಾಗಿ ಶ್ರೀರಾಮನಿದ್ದಲ್ಲಿಗೆ ಹೋಗಿ ''ಎಲೈ ರಾಮ, ಸಾಮಾನ್ಯ ಯೋಧನೊಡನೆ ನಾನು ಯುದ್ಧ ಮಾಡತಕ್ಕವನೇ ಅಲ್ಲ. ನಿಮ್ಮಲ್ಲಿ ಯಾವನಾದರೂ ವೀರನಿದ್ದರೆ ನನ್ನನ್ನು ಎದುರಿಸಲಿ'' ಎಂದು ಝೇಂಕಾರದಿಂದ ನುಡಿದನು. ಅತಿಕಾಯನಾಡಿದ ಸೊಕ್ಕಿನ ಮಾತನ್ನು ಕೇಳಿ ಲಕ್ಷ್ಮಣನು ಕಿಡಿಕಿಡಿಯಾಗಿ ಧಿಗ್ಗನೆ ಧನುಸ್ಸನ್ನು ಹಿಡಿದು ಆ ರಾಕ್ಷಸನೆದುರಿಗೆ ಹೋಗಿ ತನ್ನ ಮಹಾ ಧನುಸ್ಸನ್ನು ಜೇಗೈದನು. ಅವರಿಬ್ಬರಿಗೂ ಘೋರವಾದ ಯುದ್ಧವು ಸಮನಿಸಿತು. ಅತಿಕಾಯನು ಪ್ರಬಲವಾದ ಒಂದು ಸರಳನ್ನು ಹಿಡಿದು ಲಕ್ಷ್ಮಣನಿಗೆ ಗುರಿಯಿಟ್ಟು ಹೊಡೆದನು. ಸೌಮಿತ್ರಿಯು ಅರ್ಧಚಂದ್ರಾಸ್ತ್ರದಿಂದ ಅದನ್ನು ಕತ್ತರಿಸಿದನು. ಅನಂತರ ಪ್ರಜ್ವಲಿಸುತ್ತಿದ್ದ ಒಂದು ತೀಕ್ಷ್ಣಾಸ್ತ್ರವನ್ನು ಹೂಡಿ ಅತಿಕಾಯನಿಗೆ ಗುರಿಯಿಟ್ಟು

ಹೊಡೆಯಲು ಅದು ಆ ರಾಕ್ಷಸನ ಹಣೆಗೆ ರಪ್ಪೆಂದು ಹೊಡೆಯಿತು. ಹಣೆಯಿಂದ ರಕ್ತವು ಸುರಿಯಿತು. ರಾಕ್ಷಸನು ಅಲ್ಲಾಡಿಹೋದನು. ಆಮೇಲೆ ಅವರಿಬ್ಬರಿಗೂ ವಿಧವಿಧವಾದ ಮಂತ್ರಾಸ್ತ್ರಗಳಿಂದ ಹೋರಾಟ ನಡೆಯಿತು. ಅತಿಕಾಯನು ಅತ್ಯಂತ ಬಲಶಾಲಿಯೆಂದೂ ಸಾಧಾರಣವಾದ ಅಸ್ತ್ರದಿಂದ ಅವನನ್ನು ಸಂಹರಿಸಲು ಸಾಧ್ಯವಿಲ್ಲವೆಂದೂ ತಿಳಿದು ಪರಾಕ್ರಮಿಯಾದ ಸೌಮಿತ್ರಿಯು ಅಮೋಘವಾದ ಬ್ರಹ್ಮಾಸ್ತ್ರವನ್ನು ಧನುಸ್ಸಿಗೆ ಹೂಡಿ ಪ್ರಯೋಗಿಸಿದನು. ಆ ಬ್ರಹ್ಮಾಸ್ತ್ರವು ಅಗ್ನಿಯಂತೆ ತೊಳತೊಳಗುತ್ತ ಮಹಾವೇಗದಿಂದ ಸಿಡಿದು ಬರುತ್ತಿರಲಾಗಿ ಅತಿಕಾಯನು ನಾನಾಬಗೆಯ ಆಯುಧಗಳನ್ನು ಬ್ರಹ್ಮಾಸ್ತ್ರದ ಮೇಲೆ ಬಿಟ್ಟನು. ಕಾಲಾಗ್ನಿಯಂತಿದ್ದ ಬ್ರಹ್ಮಾಸ್ತ್ರವು ಯಾವ ಆಯುಧವನ್ನೂ ಗಣನೆಗೆ ತರದೆ ಮುನ್ನುಗ್ಗಿ ಅತಿಕಾಯನ ತಲೆಯನ್ನು ಕತ್ತರಿಸಿ ಹಾರಿಸಿತು. ಭೀಮ ಪರಾಕ್ರಮಿಯೂ ದುರಾಸದನೂ ಆದ ಅತಿಕಾಯನು ಹತನಾಗಲು ವಾನರರು ಹರ್ಷದಿಂದ ಲಕ್ಷ್ಮಣನನ್ನು ಕೊಂಡಾಡಿದರು. ರಾಕ್ಷಸರು ಯುದ್ಧದ ಆಸೆಯನ್ನು ತೊರೆದು ಲಂಕೆಗೆ ಓಡಿದರು.

ಇತ್ತಲಾಗಿ ನರಾಂತಕಾದಿಗಳಲ್ಲದೆ ಅತಿಕಾಯನೂ ಹತನಾದನೆಂಬುದನ್ನು ಕೇಳಿ ರಾಕ್ಷಸರಾಜನು ಕಳವಳಗೊಂಡು ಉದ್ವಿಗ್ನನಾದನು. ಮಕ್ಕಳ ಮರಣದಿಂದ ನೊಂದು ವಿಶೇಷವಾಗಿ ಅತಿಕಾಯನನ್ನು ನೆನೆಸಿಕೊಳ್ಳುತ್ತಾ ರಾವಣನು ಶೋಕದಿಂದ ಗೋಳಾಡಿದನು. "ಅಬ್ಬಾ, ರಾಮನು ಬಲಶಾಲಿಯೇ ಹೌದು! ಅವನ ಅಸ್ತ್ರಬಲವು ಮಹತ್ತರವಾದದ್ದೇ ಹೌದು! ಅವನನ್ನಾಗಲಿ ಸುಗ್ರೀವ ವಿಭೀಷಣರನ್ನಾಗಲಿ ಮರ್ದಿಸಬಲ್ಲ ವೀರನನ್ನೇ ಕಾಣಲಾರದೆ ಹೋದೆನು" ಎಂದು ಕೊಳ್ಳುತ್ತಾ ರಾಕ್ಷಸಭಟರಿಗೆ ಸೀತೆಯನ್ನೂ ಲಂಕೆಯನ್ನೂ ಎಚ್ಚರಿಕೆಯಿಂದ ರಕ್ಷಿಸುತ್ತಿರಬೇಕೆಂದು ಆಜ್ಞಾಪಿಸಿ ಚಿಂತಾಕ್ರಾಂತನಾಗಿ ತನ್ನ ಅಂತಃಪುರವನ್ನು ಪ್ರವೇಶಿಸಿದನು.

೬೬

ಇಂದ್ರಜಿತುವಿನ ಬ್ರಹ್ಮಾಸ್ತ್ರ ಪ್ರಯೋಗದಿಂದ ಶ್ರೀರಾಮಲಕ್ಷ್ಮಣರೂ ವಾನರ ಸೈನಿಕರೂ ಮೂರ್ಛಿತರಾಗುವುದು. ಹನುಮಂತನು ಓಷಧಿಪರ್ವತವನ್ನು ತರುವುದು

ಅಲ್ಲಿ ರಾವಣನು ಒಬ್ಬನೇ ಕುಳಿತು ಮುಂದೇನು ಮಾಡಬೇಕೆಂಬ ಬಿಡಿಸಲಾಗದ ಸಮಸ್ಯೆಗೆ ಒಳಗಾದನು. ತನ್ನ ಪುತ್ರರೂ ಸಹೋದರರೂ ಒಬ್ಬೊಬ್ಬರಾಗಿ ಸಾಯು ತ್ತಿರುವುದನ್ನು ನೆನೆಸಿಕೊಂಡು ಶೋಕ ವಿಹ್ವಲನಾದನು. ಆಗ ರಾವಣತನಯನಾದ

ಮೇಘನಾದನು ಅಲ್ಲಿಗೆ ಬಂದು ''ಅಪ್ಪಾ, ಏಕೆ ಈ ರೀತಿಯಲ್ಲಿ ಶೋಕಾಕುಲನಾಗಿದ್ದೀಯೆ? ಯುದ್ಧವು ಒದಗಿದ ಮೇಲೆ ವೀರಯೋಧರಿಗೆ ಸಾವು ಬರುವುದು ಸಹಜ. ನಿನ್ನ ಮಗನಾದ ಈ ಇಂದ್ರಜಿತು ಬದುಕಿರುವಾಗ ನೀನು ಶೋಕಿಸುವುದು ತರವಲ್ಲ. ಇಂದ್ರನನ್ನು ಕಂಗೆಡಿಸಿದ ಈ ಮೇಘನಾದನ ಪ್ರತಿಜ್ಞೆಯನ್ನು ಕೇಳು: ''ಈ ದಿನವೇ ನನ್ನ ಶರಪರಂಪರೆಗಳಿಂದ ರಾಮಲಕ್ಷ್ಮಣರನ್ನು ಭಗ್ನಗೊಳಿಸುವೆನು. ನನ್ನ ಉಗ್ರಪರಾಕ್ರಮಕ್ಕೆ ಸೂರ್ಯಾದಿಗಳು ಸಾಕ್ಷಿಗಳಾಗಿರಲಿ. ಹೀಗೆ ದುಃಖಿಸಬೇಡ'' ಎಂದು ಹೇಳಿ ರಾವಣನನ್ನು ಸಂತೈಸಿದನು. ಅನಂತರ ತಂದೆಯ ಆಶೀರ್ವಾದಗಳನ್ನು ಪಡೆದು ಅಲ್ಲಿಂದ ಹೊರಟು ತನ್ನ ಯಾಗಶಾಲೆಯಲ್ಲಿ ಮಂತ್ರಪೂರ್ವಕವಾಗಿ ಅಗ್ನಿಯನ್ನು ಸ್ಥಾಪಿಸಿ ಆಭಿಚಾರಿಕವಾದ ಒಂದು ಹೋಮವನ್ನು ನಡೆಸಿದನು. ಬ್ರಹ್ಮದೇವತಾಕವಾದ ಮಂತ್ರದಿಂದ ತನ್ನ ಅಸ್ತ್ರವನ್ನು ಅಭಿಮಂತ್ರಿಸಿ ಧನುರ್ಬಾಣ ಖಡ್ಗಗಳನ್ನು ಧರಿಸಿ ರಥವನ್ನೇರಿದನು. ಅಚಿಂತ್ಯವಾದ ಮಂತ್ರಶಕ್ತಿಯನ್ನು ಪಡೆದಿದ್ದ ಮಾಯಾವಿಯಾದ ಆ ರಾಕ್ಷಸನು ಅಂತರಿಕ್ಷದಲ್ಲಿ ಕಣ್ಮರೆಯಾಗಿ ರಾಕ್ಷಸಭಟರೊಡನೆ ಸಮರಾಂಗಣಕ್ಕೆ ನುಗ್ಗಿದನು. ಅತ್ಯಂತ ಭೀಕರವಾದ ಮಾಯಾ ಯುದ್ಧವು ನಡೆಯಿತು. ವೀರಾಗ್ರಣಿಯಾದ ಇಂದ್ರಜಿತುವು ತನ್ನ ಘೋರಶರಗಳಿಂದ ಕಪಿಸೇನೆಯನ್ನು ಕೊಚ್ಚತೊಡಗಿದನು. ಹದಿನೆಂಟು ಬಾಣಗಳಿಂದ ಗಂಧಮಾದನನನ್ನು ಹೊಡೆದು ನಳ, ಮೈಂದ, ನೀಲ, ಜಾಂಬವಂತ, ಸುಗ್ರೀವಾದಿ ವಾನರನಾಯಕರನ್ನು ತೀಕ್ಷ್ಣಾಸ್ತ್ರಗಳಿಂದ ಮೂರ್ಛೆಗೊಳಿಸಿದನು. ಈ ಪ್ರಕಾರವಾಗಿ ಆ ವೀರನು ಸಂಗ್ರಾಮಭೂಮಿಯಲ್ಲಿದ್ದ ವಾನರಸೇನೆಯನ್ನು ಸ್ವಲ್ಪ ಹೊತ್ತಿನಲ್ಲಿಯೇ ಕಡೆದು ಬಿಟ್ಟನು. ಅನಂತರ ಉಗ್ರವಾದ ಶರವೃಷ್ಟಿಗಳನ್ನು ಶ್ರೀರಾಮಲಕ್ಷ್ಮಣರ ಮೇಲೆ ಸುರಿಯತೊಡಗಿದನು. ಇಂದ್ರಜಿತುವಿನ ಮಂತ್ರಾಸ್ತ್ರಗಳನ್ನು ನೋಡಿದ ಶ್ರೀರಾಮನು ಲಕ್ಷ್ಮಣನನ್ನು ಕುರಿತು ''ಲಕ್ಷ್ಮಣ, ಇವೆಲ್ಲವೂ ಬ್ರಹ್ಮದತ್ತವಾದ ಮಂತ್ರಾಸ್ತ್ರಗಳು. ಇವುಗಳ ಪರಿಣಾಮವನ್ನು ನಾವು ಸಹಿಸಿಕೊಳ್ಳಬೇಕು. ಈ ರಾಕ್ಷಸನು ಮಾಯಾಬಲದಿಂದ ಕಣ್ಣಿಗೆ ಕಾಣಿಸದೆ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದಾನೆ. ಧೈರ್ಯದಿಂದಿರು''ಎಂದನು. ಅನಂತರ ನಡೆದ ಸಮರದಲ್ಲಿ ಇಂದ್ರಜಿತುವಿನ ಪ್ರಬಲವಾದ ಅಸ್ತ್ರಜಾಲಗಳಿಂದ ಶ್ರೀರಾಮಲಕ್ಷ್ಮಣರು ಮೂರ್ಛಿತರಾದರು. ಮೇಘನಾದನು ಹರ್ಷದಿಂದ ಸಿಂಹನಾದ ಮಾಡಿ ಲಂಕಾನಗರಿಗೆ ಹಿಂದಿರುಗಿದನು.

ಶ್ರೀರಾಮಲಕ್ಷ್ಮಣರು ರಣರಂಗದಲ್ಲಿ ಮೂರ್ಛಿತರಾಗಲು ಉಳಿದಿದ್ದ ವಾನರ ಸೈನಿಕರಿಗೆ ದಿಕ್ಕು ತೋರದಾಯಿತು. ಆಗ ಮಹಾಪ್ರಾಜ್ಞನಾದ ವಿಭೀಷಣನು ಕಪಿವೀರರನ್ನು ಸಂತೈಸುತ್ತ ''ವೀರಯೋಧರೆ, ಹೆದರಬೇಡಿರಿ. ಈ ರಾಜಪುತ್ರರು

ಬ್ರಹ್ಮದೇವನ ವಚನಕ್ಕೆ ಮಾನ್ಯತೆಯನ್ನಿತ್ತು ಮೂರ್ಛಿತರಾಗಿದ್ದಾರೆ. ಬ್ರಹ್ಮದೇವನಿಗೆ ಗೌರವವನ್ನು ಸಲ್ಲಿಸಬೇಕೆಂದು ಆ ಮಂತ್ರಾಸ್ತ್ರಗಳನ್ನು ಇವರು ಎದುರಿಸಲಿಲ್ಲ'' ಎಂದು ಸಂತೈಸತೊಡಗಿದನು. ಆಗ ಮೂರ್ಛೆಯಿಂದೆದ್ದ ಹನುಮಂತನು ವಿಭೀಷಣನ ಬಳಿಗೆ ಬಂದು ''ವಿಭೀಷಣ, ಈಗ ಅಂಧಕಾರವು ಕವಿದಿರುವ ರಾತ್ರಿಯಾಗಿದೆ. ಬಹುಮಂದಿ ಯೋಧರು ಎಚ್ಚರದಪ್ಪಿ ಮಲಗಿದ್ದಾರೆ. ಯಾರು ಯಾರು ಬದುಕಿರುವರೋ ಅವರನ್ನು ಸಂತೈಸೋಣ ಬಾ'' ಎಂದನು. ಅನಂತರ ಅವರಿಬ್ಬರೂ ಪಂಜುಗಳನ್ನು ಹಿಡಿದು ರಣರಂಗದಲ್ಲಿ ಸುತ್ತಾಡಲಾರಂಭಿಸಿದರು. ಎಲ್ಲೆಲ್ಲಿಯೂ ವಾನರ ಸೈನಿಕರ ಕತ್ತರಿಸಿದ ಬಾಲಗಳು, ಮುರಿದ ಕೈಗಳು, ತುಂಡರಿಸಿದ ಕಾಲುಗಳು, ತರಿದು ಹೋದ ತಲೆಗಳು ಬಿದ್ದಿದ್ದವು. ನೆತ್ತರು ಕೋಡಿಯಾಗಿ ಹರಿದಿತ್ತು. ಅವುಗಳ ನಡುವೆ ಹುಡುಕುತ್ತ ಹುಡುಕುತ್ತ ಜಾಂಬವಂತನ ಬಳಿಗೆ ಬಂದರು. ಆ ವೃದ್ಧನ ಮೈಯಲ್ಲಿ ನೂರಾರು ಬಾಣಗಳು ನಾಟಿಕೊಂಡಿದ್ದವು. ಆರಿಹೋಗುತ್ತಿರುವ ಅಗ್ನಿಯಂತೆ ಗೋಚರಿಸುತ್ತಿದ್ದ ಜಾಂಬವಂತನು ಕಣ್ಣು ಮುಚ್ಚಿದ್ದನು. ವಿಭೀಷಣನು ಅವನನ್ನು ನೋಡಿ ''ಆರ್ಯ, ಜೀವಂತ ನಾಗಿರುವೆಯಾ?'' ಎಂದು ಕೇಳಿದನು. ಭಲ್ಲೂಕ ಶ್ರೇಷ್ಠನಾದ ಜಾಂಬವಂತನು ಧ್ವನಿಯಿಂದಲೇ ಮಾತನಾಡಿದವನು ವಿಭೀಷಣನೆಂದು ಗುರುತಿಸಿ, ಆಯಾಸಪಡುತ್ತಲೇ ''ವಿಭೀಷಣ, ಧ್ವನಿಯಿಂದ ನಿನ್ನನ್ನು ಗುರುತಿಸುತ್ತಿದ್ದೇನೆ. ಈ ಅಸ್ತ್ರಗಳ ಹೊಡೆತದಿಂದ ಕಣ್ಣು ಬಿಡಲಾರೆನು. ವಿಭೀಷಣ, ಅಂಜನಾದೇವಿಯು ಯಾವ ಸುಪುತ್ರನಿಗೆ ಜನ್ಮವಿತ್ತಳೋ ಆ ಪುಣ್ಯಾತ್ಮನಾದ ಹನುಮಂತನು ಬದುಕಿರುವನೆ?'' ಎಂದು ವಿಚಾರಿಸಿದನು. ಅದನ್ನು ಕೇಳಿ ವಿಭೀಷಣನು ವಿಸ್ಮಯದಿಂದ ''ಪೂಜ್ಯನೆ, ಆರ್ಯಪುತ್ರರಾದ ಶ್ರೀರಾಮಲಕ್ಷ್ಮಣರನ್ನು ಬಿಟ್ಟು ಹನುಮಂತನ ಯೋಗಕ್ಷೇಮಗಳನ್ನು ಕೇಳುತ್ತಿರುವೆಯಲ್ಲ? ಮಹಾರಾಜನಾದ ಸುಗ್ರೀವನಲ್ಲಾಗಲಿ,ಯುವರಾಜನಾದ ಅಂಗದನಲ್ಲಾಗಲಿ ಈ ಸ್ನೇಹಾತಿಶಯವನ್ನು ತೋರಿಸದೆ ಹನುಮಂತನ ಕುಶಲವನ್ನು ಕೇಳುತ್ತಿರುವೆಯಲ್ಲ!'' ಎಂದನು. ಆಗ ಜಾಂಬವಂತನು ಕಣ್ಣು ಮುಚ್ಚಿಕೊಂಡೇ ''ರಾಕ್ಷಸೋತ್ತಮ, ನಾನು ಆಂಜನೇಯನನ್ನೇಕೆ ವಿಚಾರಿಸಿದೆನೆಂಬುದನ್ನು ಹೇಳುವೆನು, ಕೇಳು. ಆ ವೀರಾಗ್ರಣಿಯು ಜೀವಂತನಾಗಿದ್ದರೆ ಈ ವಾನರಸೇನೆಯು ಸತ್ತರೂ ಸತ್ತಂತಲ್ಲ. ಆ ವೀರನೇನಾದರೂ ಹತನಾಗಿ ಬಿಟ್ಟಿದ್ದರೆ ನಾವೆಲ್ಲರೂ ಬದುಕಿದ್ದರೂ ಸತ್ತಂತೆಯೇ!'' ಎಂದನು. ಆಮೇಲೆ ಹನುಮಂತನು ಮುಂದೆ ಬಂದು ವೃದ್ಧನಾದ ಜಾಂಬವಂತನ ಪಾದಗಳಿಗೆ ವಂದಿಸಿ ''ಆರ್ಯ–ಜಾಂಬವಂತ, ನಾನು ಹನುಮಂತ. ನಿನ್ನ ಆಶೀರ್ವಾದಗಳನ್ನು ಬೇಡುತ್ತಿದ್ದೇನೆ'' ಎಂದನು. ಜಾಂಬವಂತನು ಸಂತೋಷದಿಂದ ''ಹನುಮಂತ, ಇತ್ತ ಬಾ. ಈ ವಾನರಸೇನೆಯನ್ನು ನೀನೇ ಕಾಪಾಡಬೇಕು; ಇನ್ನೊಬ್ಬನಿಂದಾಗದು. ವಿಕ್ರಮದಲ್ಲಿ ನಿನಗೆ ಸಾಟಿಯಾದವರು ಯಾರೂ ಇಲ್ಲ.

ಶ್ರೀರಾಮುಲಕ್ಷ್ಮಣರೂ ಮೂರ್ಛಿತರಾಗಿರಬಹುದು. ನಿನ್ನ ಪರಾಕ್ರಮವನ್ನು ಮೆರೆಸುವುದಕ್ಕೆ ಇದೇ ಸಮಯ. ನೀನು ಈಗಲೇ ವೇಗದಿಂದ ಹಿಮಾಲಯಪರ್ವತದ ವರೆಗೆ ಹಾರಿಹೋಗಬೇಕು. ಋಷಭ, ಕೈಲಾಸ–ಇವೆರಡು ಶಿಖರಗಳ ನಡುವೆ ಓಷಧಿ ಪರ್ವತವು ಕಾಣಿಸುತ್ತದೆ. ಆ ಗಿರಿಯ ಶೃಂಗದಲ್ಲಿ ನಾಲ್ಕು ದಿವ್ಯ ಓಷಧಿಗಳಿವೆ. ಮೃತಸಂಜೀವನಿ, ವಿಶಲ್ಯಕರಣಿ, ಸಾವರ್ಣ್ಯಕರಣಿ, ಸಂಧಾನ ಕರಣಿ ಎಂಬ ನಾಲ್ಕು ಓಷಧಿಗಳು ದಶದಿಕ್ಕುಗಳನ್ನೂ ಬೆಳಗುತ್ತ ಪ್ರಕಾಶಿಸುತ್ತಿವೆ. ಅವನ್ನು ಬೇಗನೆ ತಂದು, ವಾನರೋತ್ತಮ, ನಮ್ಮೆಲ್ಲರನ್ನೂ ಬದುಕಿಸು'' ಎಂದು ಹೇಳಿದನು. ಜಾಂಬವಂತನ ನುಡಿಯನ್ನಾಲಿಸಿ ವಾನರಶಾರ್ದೂಲನಾದ ಆಂಜನೇಯನಲ್ಲಿ ಬಲೋತ್ಸಾಹಗಳು ತುಂಬಿತುಳುಕಿದವು. ಒಡನೆಯೇ ಆ ಧೀರನು ತ್ರಿಕೂಟ ಪರ್ವತಕ್ಕೆ ನೆಗೆದು ಘೋರವಾಗಿ ಗರ್ಜಿಸಿ, ಬಾಲವನ್ನು ನಿಮಿರಿಸಿ, ನಡುವನ್ನು ಬಗ್ಗಿಸಿ ಉತ್ತರ ದಿಕ್ಕಿಗೆ ಅಂತರಿಕ್ಷ ಮಾರ್ಗದಲ್ಲಿ ಹಾರಿದನು. ಆ ವಾನರ ಪುಂಗವನು ಜಾಂಬವಂತನ ನುಡಿಯನ್ನು ಸ್ಮರಣೆಯಲ್ಲಿಟ್ಟುಕೊಂಡು ವಾಯುವೇಗದಲ್ಲಿ ಹಾರುತ್ತ ಹೋಗಿ ಹಿಮಾಲಯಪರ್ವತವನ್ನು ಕಂಡನು. ಓಷಧಿ ಪರ್ವತವನ್ನು ಗುರುತಿಸಿ ಅದರ ಶಿಖರದ ಮೇಲೆ ಇಳಿದನು. ಒಡನೆಯೇ ತಮ್ಮನ್ನರಸುತ್ತ ಈ ವಾನರನು ಬಂದಿದ್ದಾನೆಂದು ತಿಳಿದು ಆ ದಿವ್ಯ ಮೂಲಿಕೆಗಳು ಅದೃಶ್ಯವಾದವು! ಎಷ್ಟು ಹುಡುಕಿದರೂ ಮೂಲಿಕೆಗಳು ಸಿಗದಿರಲು ಹನುಮಂತನು ಕುಪಿತನಾಗಿ ''ಎಲೈ ಗಿರಿರಾಜ, ಹೀಗೇಕೆ ನಡೆದುಕೊಳ್ಳುವೆ? ಶ್ರೀರಾಮನಲ್ಲಿ ನಿನಗೆ ಮರುಕವಿಲ್ಲವೋ ಹೇಗೆ? ಇತ್ತ ನೋಡು. ನನ್ನ ಭುಜಬಲದಿಂದ ನಿನ್ನನ್ನು ಕುಟ್ಟಿ ಪುಡಿ ಪುಡಿ ಮಾಡುವೆನು'' ಎಂದು ಆರ್ಭಟಿಸಿದನು. ಅನಂತರ ಕಾಲಹರಣವಾಗಬಾರದೆಂದು ಓಷಧಿ ಪರ್ವತದ ಶಿಖರವನ್ನು ಕಿತ್ತೆತ್ತಿ ಹೊತ್ತು ಗರುಡನಂತೆ ಉಗ್ರವೇಗದಿಂದ ಆಕಾಶಕ್ಕೆ ಹಾರಿದನು. ಅದ್ಭುತಸಾಹಸಿಯಾದ ಹನುಮಂತನು ವೇಗದಿಂದ ಹಿಂದಿರುಗಿ ಬಂದು ವಾನರಸೈನ್ಯದ ಮಧ್ಯದಲ್ಲಿಳಿದನು. ಆ ಗಿರಿಶಿಖರದಲ್ಲಿದ್ದ ಮಹೌಷಧಿಗಳ ಗಂಧವನ್ನಾಘ್ರಾಣಿಸಿದೊಡನೆ ಶ್ರೀರಾಮ ಲಕ್ಷ್ಮಣರು ಎಚ್ಚೆತ್ತು ಸುಖದಿಂದ ಎದ್ದು ಕುಳಿತರು. ಹಾಗೆಯೇ ಬಾಧೆಗೊಳಗಾಗಿದ್ದ ಇತರ ವಾನರ ಯೂಥಪರೂ ಎದ್ದರು. ಹತರಾಗಿ ಬಿದ್ದ ವಾನರರು ಮೂಲಿಕೆಗಳ ಗಾಳಿಬೀಸಿದೊಡನೆ ಜೀವಂತರಾದರು. ಆದರೆ ರಾಕ್ಷಸರು ಮಾತ್ರ ಬದುಕಲಿಲ್ಲ. ಏಕೆಂದರೆ, ಹತರಾದ ರಾಕ್ಷಸ ಸೈನಿಕರನ್ನು ರಾವಣನ ಆಜ್ಞೆಯಂತೆ ಉಳಿದರಾಕ್ಷಸರು ಸಮುದ್ರಕ್ಕೆ ಎಸೆದು ಬಿಡುತ್ತಿದ್ದರು. ಹತರಾದ ರಾಕ್ಷಸರ ಸಂಖ್ಯೆ ತಿಳಿಯಬಾರದೆಂಬುದು ರಾವಣನ ಉದ್ದೇಶವಾಗಿತ್ತು.

★

೬೩

ಕುಂಭ, ನಿಕುಂಭ, ಮಕರಾಕ್ಷರ ವಧೆ. ಇಂದ್ರಜಿತು ಮಾಯಾ ಸೀತೆಯನ್ನು ಸಂಹರಿಸುವುದು, ಶ್ರೀರಾಮನ ಶೋಕ. ವಿಭೀಷಣನು ಸಂತೈಸುವುದು.

ಕಪೀಂದ್ರನಾದ ಸುಗ್ರೀವನಿಗೆ ತುಂಬ ಸಂತೋಷವಾಗಿ ಅವನ ಉತ್ಸಾಹವು ವರ್ಧಿಸಿತು. ಆತನು ವಾನರಯೋಧರನ್ನು ಕರೆದು ''ಈಗ ರಾವಣನು ಯುದ್ಧಕ್ಕೆ ಬರಲಾರ. ತನ್ನ ಹತರಾದ ಪುತ್ರರನ್ನು ನೆನೆಸಿಕೊಂಡು ಅವನು ಅಳುತ್ತಿರಬಹುದು. ನೀವೆಲ್ಲರೂ ಪಂಜುಗಳನ್ನು ಹಿಡಿದು ಲಂಕೆಯ ಪ್ರಾಕಾರವನ್ನು ಹಾರಿ ಒಳಗೆ ನುಗ್ಗಿರಿ'' ಎಂದು ನುಡಿದನು. ಅಂತೆಯೇ ಕಪಿಯೋಧರು ಲಂಕೆಯೊಳಗೆ ನುಗ್ಗಿ ಪಂಜುಗಳಿಂದ ಮನೆ ಮನೆಗೂ ಬೆಂಕಿಯನ್ನು ಹಚ್ಚಿ ಸುಡಲಾರಂಭಿಸಿದರು. ಅನಿರೀಕ್ಷಿತವಾಗಿ ಬಂದೆರಗಿದ ಈ ಆಪತ್ತಿನಿಂದ ಮನೆಗಳಲ್ಲಿ ಮಲಗಿದ್ದ ರಾಕ್ಷಸರೂ, ರಾಕ್ಷಸಿಯರೂ ಮಕ್ಕಳೂ ಬಹಳ ಕಷ್ಟಕ್ಕೆ ಈಡಾದರು.

ಇದೆಲ್ಲವನ್ನೂ ಕಂಡು ರಾವಣನ ರೋಷವು ನೆತ್ತಿಗೇರಿತು. ಅವನು ಕುಂಭಕರ್ಣನ ಪುತ್ರರಾದ ಕುಂಭ, ನಿಕುಂಭ ಎಂಬ ಇಬ್ಬರನ್ನು ಕರೆದು ಕಪಿಸೇನೆಯನ್ನೆದುರಿಸುವಂತೆ ಆಜ್ಞಾಪಿಸಿದನು. ಭೀಕರವಾದ ಕತ್ತಲೆಯಲ್ಲಿ ವಾನರರಿಗೂ ರಾಕ್ಷಸರಿಗೂ ಘೋರವಾದ ಯುದ್ಧವು ನಡೆಯಿತು. ಆ ತುಮುಲ ಯುದ್ಧದಲ್ಲಿ ಅಂಗದನು ಕಂಪನನೆಂಬ ಸೇನಾಪತಿಯನ್ನು ಕೊಂದು ಹಾಕಿದನು. ರೋಮಾಂಚಕರವಾದ ಆ ಯುದ್ಧದಲ್ಲಿ ದ್ವಿವಿದನು ಶೋಣಿತಾಕ್ಷನನ್ನೂ ಮೈಂದನು ಯೂಪಾಕ್ಷನನ್ನೂ ಬಡಿದು ಕೊಂದು ಹಾಕಿದರು. ಪರಾಕ್ರಮಿಯಾದ ಕುಂಭನು ಮೈಂದನೇ ಮೊದಲಾದ ವಾನರ ಯೂಥಪರನ್ನು ಎದುರಿಸಿದನು. ಕುಂಭಕರ್ಣಪುತ್ರನಾದ ಕುಂಭನ ಹೊಡೆತಕ್ಕೆ ಕಪಿಸೇನೆಯು ಮುಳುಗಿಹೋಗುವ ಹಡಗಿನಂತಾಯಿತು. ಜಾಂಬವಂತ, ಸುಷೇಣ ಮೊದಲಾದವರು ಕುಂಭನನ್ನು ಮುತ್ತಿದರು. ಯಾರಿಗೂ ಆತನ ಕೂರ್ಗಣೆಗಳ ಹೊಡೆತವನ್ನು ತಡೆದುಕೊಳ್ಳಲಾಗಲಿಲ್ಲ. ಆಗ ವಾನರೇಂದ್ರನಾದ ಸುಗ್ರೀವನು ತಾನೇ ಬಂದು ಕುಂಭನನ್ನೆದುರಿಸಿದನು. ಅವರಿಬ್ಬರಿಗೂ ಮಲ್ಲಯುದ್ಧ ನಡೆಯಿತು. ಸುಗ್ರೀವನು ಹಠಾತ್ತನೆ ಕುಂಭನನ್ನೆತ್ತಿ ಸಮುದ್ರಕ್ಕೆ ಎಸೆದು ಬಿಟ್ಟನು. ಕುಂಭನು ಕಡಲಿಂದ ದುಡುಮ್ಮನೆ ಎದ್ದು ಬಂದು ವಜ್ರಸದೃಶವಾದ ಮುಷ್ಟಿಯಿಂದ ಸುಗ್ರೀವನ ಎದೆಯನ್ನು ಗುದ್ದಿದನು. ಭೀಕರವಾದ ಆ ಮುಷ್ಟಾಮುಷ್ಟಿಯಲ್ಲಿ ಸುಗ್ರೀವನ ಮುಷ್ಟಿಯ ಹೊಡೆತದಿಂದ ಕುಂಭನು ಹತನಾಗಿ ಬಿದ್ದನು.

ಸುಗ್ರೀವನು ಕುಂಭನನ್ನು ಕೊಂದನೆಂಬುದನ್ನು ತಿಳಿದು ನಿಕುಂಭನು ತನ್ನ

ಪರಿಘವನ್ನು ಕೈಗೆ ತೆಗೆದುಕೊಂಡು ಸುಗ್ರೀವನನ್ನೆದುರಿಸಿದನು. ನಿಕುಂಭನ ಆರ್ಭಟವನ್ನು ನೋಡಿ ವಾನರರಿಗೆ ಮುಂದೆ ಅಡಿಯಿಡಲು ಧೈರ್ಯಬರಲಿಲ್ಲ. ಹನುಮಂತನೊಬ್ಬನು ಎದೆಯನ್ನು ಚಾಚಿ ಮುಂದೆ ಬಂದನು. ನಿಕುಂಭನು ಘೋರವಾದ ತನ್ನ ಪರಿಘದಿಂದ ಹನುಮಂತನ ಎದೆಗೆ ಬಡಿದೊಡನೆ ಪರಿಘವೇ ಮುರಿದು ನುಚ್ಚುನೂರಾಯಿತು. ಆ ಪ್ರಹಾರಕ್ಕೆ ಮಹಾಕಪಿಯು ತತ್ತರಿಸಿ ತೂಗಾಡಿದನು. ಅನಂತರ ವಾಯುಪುತ್ರನಾದ ಆ ತೇಜಸ್ವಿಯು ನಿಕುಂಭನ ಎದೆಯ ಮೇಲೆ ಬಲವಾಗಿ ಅಪ್ಪಳಿಸಿದನು. ರಾಕ್ಷಸರ ಕವಚವು ಮುರಿದು ಎದೆಯಿಂದ ರಕ್ತವು ಜಲ್ಲೆಂದು ಹಾರಿತು. ಒಡನೆಯೇ ಮಹಾಬಲಶಾಲಿಯಾದ ನಿಕುಂಭನು ಹನುಮಂತನನ್ನು ಹೊತ್ತುಕೊಂಡು ಓಡತೊಡಗಿದನು. ಹನುಮಂತನು ತನ್ನ ವಜ್ರಮುಷ್ಟಿಯಿಂದ ನಿಕುಂಭನನ್ನು ಗುದ್ದಿ ಅವನ ಹಿಡಿತದಿಂದ ತಪ್ಪಿಸಿಕೊಂಡು, ನೆಲಕ್ಕೆ ಧುಮುಕಿ, ಅತ್ಯಾಕ್ರೋಶದಿಂದ ಆ ರಾಕ್ಷಸನನ್ನು ಎತ್ತಿ ನೆಲದಮೇಲೆ ಕುಕ್ಕಿದನು. ನಿಕುಂಭನ ಎದೆಯ ಮೇಲೆ ಹತ್ತಿ ಕುಳಿತು ಹನುಮಂತನು ಅವನ ಕೊರಳನ್ನು ಹಿಸುಕಿದನು. ನಿಕುಂಭನು ಅರಚಿಕೊಳ್ಳುತ್ತಲೇ ಪ್ರಾಣವನ್ನು ನೀಗಿದನು.

ಕುಂಭ ನಿಕುಂಭರಿಬ್ಬರೂ ಯುದ್ಧದಲ್ಲಿ ಸತ್ತು ಹೋದರೆಂಬ ಸುದ್ದಿ ರಾವಣನಿಗೆ ಮುಟ್ಟಿತು. ಅವನಿಗೆ ಒಂದು ಕಡೆ ಸಿಟ್ಟು, ಒಂದು ಕಡೆ ದುಃಖ. ಇವೆರಡರಿಂದ ದಿಕ್ಕುತೋರದೆ ಮಕರಾಕ್ಷನನ್ನು ಕರೆದು ಸಮರಕ್ಕೆ ಹೋಗುವಂತೆ ಆಜ್ಞಾಪಿಸಿದನು. ಒಡೆಯನ ಆಜ್ಞೆಯಂತೆ ಖರಪುತ್ರನಾದ ಮಕರಾಕ್ಷನು ಸಮರಕ್ಕೆ ಸಜ್ಜಾಗಿ ರಾಕ್ಷಸ ಭಟರೊಡನೆ ಯುದ್ಧಭೂಮಿಗೆ ತೆರಳಿದನು. ಅಲ್ಲಿ ತನ್ನ ಸೈನಿಕರನ್ನು ನೋಡಿ ''ಎಲೈ ರಾಕ್ಷಸಭಟರೆ, ಈ ದಿನ ನನ್ನ ಸೇಡನ್ನು ತೀರಿಸಿಕೊಳ್ಳುವೆನು. ನನ್ನ ತಂದೆಯಾದ ಖರನನ್ನು ಕೊಂದ ರಾಮನನ್ನೂ ಲಕ್ಷ್ಮಣನನ್ನೂ ಸುಗ್ರೀವನನ್ನೂ ಕೊಂದು ಅವರ ನೆತ್ತರಿಂದ ಪಿತೃಗಳಿಗೆ ತರ್ಪಣವನ್ನು ನೀಡುವೆನು'' ಎಂದು ನುಡಿದು ಶ್ರೀರಾಮನನ್ನರಸುತ್ತ ಸೇನೆಯಲ್ಲಿ ಸುತ್ತಾಡಿದನು. ಸ್ವಲ್ಪ ಕಾಲದಲ್ಲಿಯೇ ಶ್ರೀರಾಮ ಲಕ್ಷ್ಮಣರು ಕಾಣಿಸಿದರು. ಮಕರಾಕ್ಷನು ಶ್ರೀರಾಮನನ್ನು ಗಟ್ಟಿಯಾಗಿ ಕರೆದು ''ರಾಮ, ನಿಲ್ಲು ನಿಲ್ಲು, ನನ್ನ ತಂದೆಯಾದ ಖರನನ್ನು ದಂಡಕಾರಣ್ಯದಲ್ಲಿ ಕೊಂದವ – ನಲ್ಲವೇ ನೀನು? ಎಲಾ ದುರಾತ್ಮ, ಅದನ್ನು ನೆನೆಸಿಕೊಂಡರೆ ನನ್ನ ಸರ್ವಾಂಗಗಳೂ ಉರಿದು ಹೋಗುತ್ತಿವೆ. ಇಂದು ನನ್ನ ಪರಾಕ್ರಮವೇನೆಂಬುದನ್ನು ಜಗತ್ತು ನೋಡಲಿ'' ಎಂದು ಕೂಗಿದನು. ಶ್ರೀರಾಮನು ನಸುನಗುತ್ತ ''ಎಲೈ ರಾಕ್ಷಸ, ಬರಿಯ ಮಾತುಗಳನ್ನಾಡಿ ಹೆಮ್ಮೆಪಡಬೇಡ. ನಿನ್ನ ಮಾಂಸದಿಂದ ಹದ್ದು, ನರಿ, ಕಾಗೆಗಳಿಗೆ ಸಂತರ್ಪಣೆ ಮಾಡಿಸುವೆನು'' ಎಂದು ಉತ್ತರಕೊಟ್ಟನು. ಅನಂತರ ಅವರಿಬ್ಬರಿಗೂ ಅತ್ಯಂತ

ಭೀಷಣವಾದ ಯುದ್ಧವು ನಡೆಯಿತು. ಮಕರಾಕ್ಷನ ಪ್ರಬಲವಾದ ಶೂಲಾಯುಧವನ್ನು ಶ್ರೀರಾಮನು ತುಂಡು ತುಂಡು ಮಾಡಿದನು. ಆಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಲಾಗಿ ಮಕರಾಕ್ಷನು ಎದೆಯೊಡೆದು ಬಿದ್ದು ಮೃತನಾದನು.

ಮಕರಾಕ್ಷನು ಹತನಾದನೆಂಬ ಸುದ್ದಿಯನ್ನು ಕೇಳಿ ದಿಗ್ಭ್ರಾಂತನಾದ ರಾವಣನು ತನ್ನ ಮಗನಾದ ಮೇಘನಾದನನ್ನು ಯುದ್ಧಕ್ಕೆ ಹೋಗುವಂತೆ ಆಜ್ಞಾಪಿಸಿದನು. ಆತನನ್ನು ಕುರಿತು ''ವತ್ಸ, ಮೇಘನಾದ, ನೀನು ಅಪ್ರತಿಮವೀರ. ಮಾಯಾಯುದ್ಧ ವನ್ನು ನಡೆಸಿ ಈ ರಾಮಲಕ್ಷ್ಮಣರನ್ನು ಸಂಹರಿಸು'' ಎಂದನು. ಒಡನೆಯೇ ಇಂದ್ರಜಿತು ತನ್ನ ಯಜ್ಞಭೂಮಿಗೆ ಹೋಗಿ ಒಂದು ಆಭಿಚಾರಿಕಯಜ್ಞವನ್ನು ನಡೆಸಿದನು. ಹೋಮದಿಂದ ಯಜ್ಞದೇವತೆಗಳನ್ನು ತೃಪ್ತಿಪಡಿಸಿ ತನ್ನ ಮಹಾರಥವನ್ನೇರಿ ರಣರಂಗಕ್ಕೆ ಪ್ರಯಾಣ ಮಾಡಿ, ಭೀಕರವಾದ ಧನುಸ್ಸು ಮತ್ತು ಶರಗಳನ್ನು ಹಿಡಿದು ಅಂತರಿಕ್ಷದಲ್ಲಿ ಕಣ್ಮರೆಯಾದನು. ಶ್ರೀರಾಮಲಕ್ಷ್ಮಣರಿದ್ದಲ್ಲಿಗೆ ಹೋಗಿ, ಅದೃಶ್ಯನಾಗಿ ನಿಂತು ಅವರಿಬ್ಬರ ಮೇಲೆ ಸತತವಾಗಿ ಶರವರ್ಷವನ್ನು ಸುರಿಸತೊಡಗಿದನು. ಶ್ರೀರಾಮಲಕ್ಷ್ಮಣರು ಆಕಾಶದ ಕಡೆಗೆ ನೋಡಿದರು. ಇಂದ್ರಜಿತುವಿನ ಮಾಯೆಯಿಂದ ಎಲ್ಲೆಡೆಯೂ ಹೊಗೆಯು ವ್ಯಾಪಿಸಿತ್ತು. ಆತನು ಕಾಣಿಸುತ್ತಲೇ ಇರಲಿಲ್ಲ. ಪುರುಷಸಿಂಹರಾದ ಆ ವೀರರು ಹೊಡೆದ ತೀವ್ರಾಸ್ತ್ರಗಳು ಇಂದ್ರಜಿತುವಿಗೆ ತಾಗಲಿಲ್ಲ. ಇಂದ್ರಜಿತುವಿನ ಕ್ರೂರ ಶರಗಳು ಒಂದೇ ಸಮನೆ ಬಂದು ಎರಗುತ್ತಿದ್ದವು. ಯಾವ ಕಪಿಯೋಧನಿಗೂ ಇಂದ್ರಜಿತು ಕಾಣಿಸುತ್ತಿರಲಿಲ್ಲ. ಅವನ ಅಸ್ತ್ರಗಳ ಹೊಡೆತವು ಅತಿ ಕ್ರೂರವಾಗಿತ್ತು. ಲಕ್ಷ್ಮಣನಿಗೆ ಸೈರಣೆ ತಪ್ಪಿತು. ಅವನು ಅಣ್ಣನನ್ನು ಕುರಿತು ''ಅಣ್ಣ, ಈಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿಬಿಡುವೆನು. ಎಲ್ಲ ರಾಕ್ಷಸರೂ ಸತ್ತು ಹೋಗಲಿ'' ಎಂದನು. ಆಗ ಶ್ರೀರಾಮನು ''ವತ್ಸ, ಇವನೊಬ್ಬನಿಗೋಸ್ಕರ ಸಕಲರಾಕ್ಷಸರನ್ನೂ ಕೊಲ್ಲುವುದು ತರವಲ್ಲ. ಯುದ್ಧ ಮಾಡದವನು, ಹೆದರಿಕೆಯಿಂದ ಅಡಗಿದವನು, ಕೈಜೋಡಿಸಿ ನಮಸ್ಕರಿಸಿದವನು, ಶರಣಾಗತ, ಹೆದರಿ ಓಡುವವನು ಮೈ ಮರೆತವನು– ಈ ಆರು ಬಗೆಯ ಜನರನ್ನು ಸಂಹರಿಸಬಾರದೆಂದು ಧರ್ಮಶಾಸ್ತ್ರವಿದೆ. ಈ ವೈರಿ ಒಬ್ಬನನ್ನೇ ಈಗ ಸಂಹರಿಸಲು ಪ್ರಯತ್ನಿಸೋಣ. ಇವನು ಕಣ್ಣಿಗೆ ಬಿದ್ದರೆ ಸಾಕು. ಒಂದು ಕ್ಷಣದಲ್ಲಿ ನನ್ನ ದಿವ್ಯಾಸ್ತ್ರದಿಂದ ಸತ್ತು ಒರಗುವನು. ತಾಳ್ಮೆಯಿಂದಿರು'' ಎಂದು ಸಮಾಧಾನ ಹೇಳಿದನು.

ಇದೆಲ್ಲವನ್ನೂ ಗಮನಿಸುತ್ತಿದ್ದ ಇಂದ್ರಜಿತು ಶ್ರೀರಾಮನ ಮನಸ್ಸಿನಲ್ಲಿ ಇರು ವುದನ್ನು ಊಹಿಸಿ, ಯುದ್ಧವನ್ನು ನಿಲ್ಲಿಸಿ ಲಂಕೆಗೆ ಹೋದನು. ಮತ್ತೆ ಕುಂಭಕರ್ಣಾದಿಗಳ

ಸಾವನ್ನು ನೆನೆಸಿಕೊಂಡು ಇನ್ನೊಂದು ಕಪಟೋಪಾಯವನ್ನು ಮಾಡಬೇಕೆಂದು ನಿಶ್ಚಯಿಸಿ ರಾಮಲಕ್ಷ್ಮಣರಿಲ್ಲದ ಪಶ್ಚಿಮದ್ವಾರಕ್ಕೆ ಹೋದನು. ಮಹಾಮಾಯಾವಿಯಾದ ಆತನು ಮಾಯಾಶಕ್ತಿಯಿಂದ ಕೃತಕವಾದ ಸೀತಾಕೃತಿಯನ್ನು ನಿರ್ಮಿಸಿ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಕಪಿಸೇನೆಗೆ ಎದುರಾದನು. ಆ ಮಾಯಾಸೀತೆಯು ಸುಕ್ಕುಗಟ್ಟಿದ ಸೀರೆಯನ್ನುಟ್ಟು, ದೈನ್ಯದಿಂದ ಹೆದರುತ್ತ ಕುಳಿತಿದ್ದಳು. ದೇಹವು ಧೂಳಿನಿಂದ ವ್ಯಾಪ್ತವಾಗಿತ್ತು. ಹನುಮಂತನು ಬೆರಗಾಗಿ ಅವಳನ್ನೇ ದೃಷ್ಟಿಸಿ ನೋಡುತ್ತ, ತಾನು ಅಶೋಕವನದಲ್ಲಿ ಕಂಡ ಸೀತೆಯೇ ಅವಳೆಂದು ತಿಳಿದುಕೊಂಡನು. ಅವಳು ಜಾನಕಿಯೇ ಹೌದೆಂದು ನಿಶ್ಚಯಿಸಿ ಬಳಿಯಲ್ಲಿದ್ದ ಕಪಿಯೋಧರಿಗೆ ಆಕೆಯೇ ಸೀತಾದೇವಿಯೆಂದು ತಿಳಿಸಿದನು. ''ಅರೆ, ಈ ರಾಕ್ಷಸನ ಉದ್ದೇಶವೇನಿರಬಹುದು''? ಎಂದು ಚಿಂತಿಸುತ್ತ ಆ ವೀರಾಗ್ರೇಸರನು ಕಪಿ ಸೈನ್ಯದೊಡನೆ ಇಂದ್ರಜಿತುವಿನ ರಥದೆದುರಿಗೆ ನುಗ್ಗಿದನು. ಇಂದ್ರಜಿತು ತನ್ನ ಮಂತ್ರಾಸ್ತ್ರಗಳಿಂದ ಆ ಕಪಿಯೋಧರನ್ನು ಕಂಗೆಡಿಸಿ, ಮಾಯಾನಿರ್ಮಿತಳಾದ ಸೀತೆಯ ತುರುಬನ್ನು ತುಡುಕಿದನು. ಅವಳು ದೈನ್ಯದಿಂದ ''ರಾಮಾ, ರಾಮಾ'' ಎಂದು ಕೂಗಿಕೊಳ್ಳುತ್ತಿರಲು ಆ ರಾಕ್ಷಸನು ಖಡ್ಗವನ್ನು ಹಿರಿದನು. ಹನುಮಂತನ ಕಣ್ಣಲ್ಲಿ ನೀರು ತುಂಬಿತು. ಅವನು ''ಎಲಾ ಖೂಳ, ನಿನ್ನ ಸರ್ವನಾಶಕ್ಕಾಗಿಯೇ ಅವಳ ತುರುಬನ್ನು ಹಿಡಿದಿದ್ದೀಯೆ. ಥೂ ಪಾಪಿ, ದುಷ್ಟ, ನೀಚ, ಇಂತಹ ಪಾಪ ಕಾರ್ಯಕ್ಕೆ ತೊಡಗಿದೆಯಾ? ನೀನು ಸತ್ತು ನರಕಕ್ಕೆ ಹೋಗಿಬೀಳುವೆ'' ಎಂದು ಕೂಗಿ ಹೇಳುತ್ತಲೇ ವಾನರಯೋಧರೊಡನೆ ರಾವಣಿಯತ್ತ ನುಗ್ಗಿದನು. ಇಂದ್ರಜಿತು ತನ್ನ ಕೂರ್ಗಣೆಗಳಿಂದ ವಾನರರನ್ನು ತಡೆದು ''ಎಲೈ ವಾನರರೆ, ಇವಳಿಂದಲೇ ನನ್ನ ತಂದೆಗೆ ಘೋರವಿಪತ್ತು ಬಂದಿತು. ಆದ್ದರಿಂದ ನಿಮ್ಮೆದುರಿಗೆ ಈ ಸೇಡನ್ನು ತೀರಿಸಿಕೊಳ್ಳುತ್ತೇನೆ'' ಎಂದು ಹೇಳಿ ಆ ಮಾಯಾಸೀತೆಯ ಎಡ ಹೆಗಲ ಮೇಲೆ ಖಡ್ಗದಿಂದ ಹೊಡೆದು ಅವಳನ್ನು ಸೀಳಿಬಿಟ್ಟನು. ಆ ಮಾಯಾಂಗನೆಯು ನೆಲದಲ್ಲಿ ಸತ್ತು ಬಿದ್ದಳು. ಇಂದ್ರಜಿತು ಹನುಮಂತನ ಕಡೆಗೆ ತಿರುಗಿ ''ಎಲೈ ಮಂಗಾ, ನಿನ್ನ ರಾಮನ ಮಡದಿಯನ್ನು ಕತ್ತರಿಸಿ ಹಾಕಿದ್ದೇನೆ. ನಿಮ್ಮೆಲ್ಲರ ಶ್ರಮವೂ ವ್ಯರ್ಥವಾಯಿತು'' ಎಂದು ಹೇಳಿ ಸಿಂಹನಾದ ಮಾಡಿದನು. ಅನಂತರ ಆ ದುರುಳನು ಲಂಕೆಗೆ ಹಿಂದಿರುಗಿ ಹೋಗಲು, ಶೋಕಾಕ್ರಾಂತನಾದ ಹನುಮಂತನು ಯುದ್ಧವನ್ನು ನಿಲ್ಲಿಸಿ ಆ ಕೆಟ್ಟಸುದ್ದಿಯನ್ನು ತಿಳಿಸುವುದಕ್ಕಾಗಿ ಶ್ರೀರಾಮನ ಬಳಿಗೆ ಹೋದನು. ಅವನು ನೇರವಾಗಿ ಶ್ರೀರಾಮನ ಬಳಿಗೆ ತೆರಳಿ ಅತ್ಯಂತ ಶೋಕಧ್ವನಿಯಲ್ಲಿ ''ಶ್ರೀರಾಮ, ನಾವು ರಣರಂಗದಲ್ಲಿ ಹೋರಾಡುತ್ತಿದ್ದೆವು. ರಾವಣನ ಮಗನಾದ ಮೇಘನಾದನು ಸೀತಾದೇವಿಯನ್ನು ರಥದಲ್ಲಿ ಎಳೆದು ತಂದು ರೋದಿಸುತ್ತಿದ್ದ

ದೇವಿಯನ್ನು ನಮ್ಮೆದುರಿಗೆ ಕೊಂದು ಹಾಕಿದನು. ನನ್ನ ಬುದ್ಧಿ ಗಿರ್ರೆಂದಿತು. ಏನು ಮಾಡಲೂ ತೋಚದೆ ಈ ದುಃಖದ ಸುದ್ದಿಯನ್ನು ಹೇಳಲು ಬಂದೆನು'' ಎಂದನು. ಹನುಮಂತನ ಮಾತನ್ನು ಕೇಳಿ ಶ್ರೀರಾಮನು ಶೋಕದಿಂದ ಕಂಗೆಟ್ಟು ಬುಡವನ್ನು ಕತ್ತರಿಸಿದ ಮರದಂತೆ ಎಚ್ಚರದಪ್ಪಿ ಬಿದ್ದನು. ಸುಗ್ರೀವಾದಿಗಳೆಲ್ಲರೂ ದಿಕ್ಕುಗಾಣದೆ ಹೋದರು. ಲಕ್ಷ್ಮಣನು ಅಳುತ್ತಲೇ ಬಂದು ಶ್ರೀರಾಮನನ್ನು ಎರಡು ಕೈಗಳಿಂದಲೂ ಅಪ್ಪಿಕೊಂಡು ಹಲುಬತೊಡಗಿದನು. ''ಅಣ್ಣ, ನೀನು ಜಿತೇಂದ್ರಿಯನಾಗಿ ಸದಾಚಾರ ದಲ್ಲಿಯೇ ನಿರತನಾದವನು. ನೀನು ನಂಬಿದ ಧರ್ಮವು ನಿನ್ನನ್ನು ದುಃಖದಿಂದ ಪಾರುಮಾಡಲಿಲ್ಲ. ಧರ್ಮವೆಂಬುದು ನಿರರ್ಥಕ. ಅಯ್ಯೋ, ಧರ್ಮವೆಂಬುದೇ ಇಲ್ಲ. ಲೋಕದಲ್ಲಿ ಧರ್ಮಹೀನರಾದ ಪಾಪಿಗಳು ಅಭ್ಯುದಯವನ್ನು ಹೊಂದಿ ಸುಖಿಸುತ್ತಲೇ ಇದ್ದಾರೆ. ಧರ್ಮನಿಷ್ಠರು ಈ ಪರಿಯಲ್ಲಿ ಕಷ್ಟಕ್ಕೆ ಒಳಗಾಗುತ್ತಾರೆ. ಪಾಪ ಪುಣ್ಯ ಎಂಬುದು ಸುಳ್ಳು. ಈ ಲೋಕದಲ್ಲಿ ಧನ, ಅಧಿಕಾರ ಇವೇ ಫಲಕ್ಕೆ ಬರತಕ್ಕವು. ನೀನು ಅವೆರಡನ್ನೂ ಬಿಟ್ಟು ಕೊಟ್ಟು ಧರ್ಮವನ್ನು ನಂಬಿ ಕಾಡಿಗೆ ಬಂದೆ. ಆದ್ದರಿಂದಲೇ ಅಲ್ಲವೆ ಖೂಳನಾದ ಆ ರಾಕ್ಷಸನಿಗೆ ನಿನ್ನ ಪ್ರಿಯಪತ್ನಿಯನ್ನು ಅಪಹರಿಸಲು ಸಾಧ್ಯವಾಯಿತು. ವೀರಾಗ್ರಣಿ–ರಘುಕುಲತಿಲಕ, ಮೇಲೇಳು. ಧೈರ್ಯವನ್ನು ತಂದುಕೊ. ನಿನ್ನ ಸಂತೋಷಕ್ಕಾಗಿ ನಾನು ಏನನ್ನು ಮಾಡಲೂ ಸಿದ್ಧ. ನನ್ನ ರೋಷವು ಉಕ್ಕುತ್ತಿದೆ. ನನ್ನ ದಿವ್ಯಾಸ್ತ್ರಗಳಿಂದ ರಾಕ್ಷಸರಾಜನಾದ ಆ ನೀಚನನ್ನು ವಧಿಸಿ ಲಂಕೆಯನ್ನು ನಿಃಶೇಷವಾಗಿ ನಾಶಮಾಡುವೆನು'' ಎಂದನು.

ಅಷ್ಟರಲ್ಲಿ ವಿಭೀಷಣನು ಸೇನಾವ್ಯೂಹವನ್ನು ಆಯಾ ಸ್ಥಳದಲ್ಲಿ ಕಾವಲಾಗಿರು ವಂತೆ ಏರ್ಪಡಿಸಿ ಬಂದನು. ಶ್ರೀರಾಮನು ಲಕ್ಷ್ಮಣನ ತೊಡೆಯ ಮೇಲೆ ಮೈಮರೆತು ಶೋಕಾರ್ತನಾಗಿ ಮಲಗಿರುವುದು ಅವನಿಗೆ ಕಾಣಿಸಿತು. ಆ ರಾಕ್ಷಸೋತ್ತಮನು ಚಿಂತಾಕ್ರಾಂತನಾಗಿ ''ಏನಿದು?'' ಎಂದು ವಿಚಾರಿಸಿ, ನಡೆದುದನ್ನು ತಿಳಿದುಕೊಂಡನು. ಅನಂತರ ಶ್ರೀರಾಮನನ್ನು ಕುರಿತು ''ರಾಘವ, ಹನುಮಂತನು ಹೇಳಿದುದು ಸತ್ಯವಾದ ಸುದ್ದಿಯಲ್ಲ. ಸಮುದ್ರವು ಒಣಗಿಹೋಯಿತು–ಎಂಬ ಮಾತಿನಂತೆ ವಿಶ್ವಾಸಾರ್ಹವಾದ ಮಾತಲ್ಲ. ದುರಾತ್ಮನಾದ ರಾವಣನ ಮನಸ್ಸಿನಲ್ಲೇನಿದೆ ಎಂಬುದನ್ನು ನಾನು ಬಲ್ಲೆ. ಅವನು ಸರ್ವಥಾ ದೇವಿಯನ್ನು ಕೊಲ್ಲಿಸಲು ಎಂದಿಗೂ ಯತ್ನಿಸುವುದಿಲ್ಲ. ಇದೆಲ್ಲವೂ ಮಾಯಾವಿಯಾದ ಮೇಘನಾದನು ನಡೆಸಿದ ಮೋಸ. ಹನುಮಂತನು ಕಂಡದ್ದು ಮಾಯಾಸೀತೆಯೇ ಹೊರತು ದಿಟವಾದ ಸೀತಾದೇವಿ ಯಲ್ಲ. ಆ ಮೋಸಗಾರನು ನಿಮ್ಮನ್ನು ಭ್ರಮೆಗೊಳಿಸಿ ನಿಕುಂಭಿಳಾ ದೇವಾಲಯಕ್ಕೆ ಹೋಗಿದ್ದಾನೆ. ಬಹುಶಃ ಇನ್ನೊಂದು ಆಭಿಚಾರಿಕ ಹೋಮದಲ್ಲಿ ತೊಡಗಿದ್ದಾನೆ. ಆ

ನೀಚನ ಆದ್ಯಂತವೆಲ್ಲವನ್ನೂ ನಾನು ಬಲ್ಲೆ. ಎಲ್ಲರೂ ಧೈರ್ಯದಿಂದಿರಿ. ಸೀತಾದೇವಿಯ ವಧೆ ನಿಶ್ಚಯವಾಗಿ ಆಗಿಲ್ಲ'' ಎಂದನು. ಆಮೇಲೆ ಸ್ವಲ್ಪ ಧೈರ್ಯವನ್ನು ತಳೆದು ಎದ್ದು ಕುಳಿತ ಶ್ರೀರಾಮನನ್ನು ನೋಡಿ, ''ಶ್ರೀರಾಮ, ಧೈರ್ಯದಿಂದಿರು. ಏನೂ ಆಗಿಲ್ಲ. ಈಗ ಆ ರಾಕ್ಷಸನು ನಿಕುಂಭಿಳೆಗೆ ಹೋಗಿರಬೇಕು. ಅವನು ಆರಂಭಿಸಿದ ಹೋಮ ಕೃತ್ಯವು ಸಮಾಪ್ತವಾದಲ್ಲಿ ಅವನನ್ನೆದುರಿಸಲು ಯಾರಿಗೂ ಸಾಧ್ಯವಾಗದು. ದೇವಾಸುರರಿಗೂ ಅದೃಶ್ಯನಾಗಿ ಯುದ್ಧ ಮಾಡುವನು. ಆದ್ದರಿಂದ ಈಗ ಲಕ್ಷ್ಮಣನು ಯುದ್ಧ ಸನ್ನದ್ಧನಾಗಿ ನನ್ನೊಡನೆ ಬರಲಿ. ನಿಕುಂಭಿಳಾಯಾಗವು ಮುಗಿಯದಂತೆ ಈಗಲೇ ತಡೆಯಬೇಕು. ಸೌಮಿತ್ರಿಯು ಇಂದ್ರಜಿತುವನ್ನು ಸಂಹರಿಸಬಲ್ಲನು. ಇವನನ್ನು ಕಳಿಸು'' ಎಂದನು. ಶೋಕಾರ್ತನಾಗಿದ್ದ ರಾಘವನು ದಿಕ್ಕುಗಾಣದೆ ಮತ್ತೆ ಮತ್ತೆ ವಿಚಾರಿಸಿ ವಿಭೀಷಣನ ಮಾತನ್ನು ಅರ್ಥಮಾಡಿಕೊಂಡನು. ವಿಭೀಷಣನು ಲಕ್ಷ್ಮಣನನ್ನು ಕಳಿಸಬೇಕೆಂದು ತ್ವರೆಪಡಿಸುತ್ತಿರಲಾಗಿ ಶ್ರೀರಾಮನು ಲಕ್ಷ್ಮಣನನ್ನು ನೋಡಿ ''ತಮ್ಮ ಇಂದ್ರಜಿತು ಮಹಾಪರಾಕ್ರಮಿಯೇ ಹೌದು. ಸುಗ್ರೀವನ ಸಮಸ್ತಕಪಿಸೇನೆಯನ್ನೂ, ಹನುಮಂತ, ಜಾಂಬವಂತ ಮೊದಲಾದ ವೀರರನ್ನೂ ಜೊತೆಗೆ ಕರೆದುಕೊಂಡು ಹೋಗು. ವಿಭೀಷಣನೂ ನಿನ್ನೊಡನೆ ಬರುವನು'' ಎಂದನು. ಅಣ್ಣನ ಮಾತನ್ನು ಕೇಳಿದೊಡನೆ ಅದ್ಭುತಪರಾಕ್ರಮಿಯಾದ ಸೌಮಿತ್ರಿಯು ಕವಚವನ್ನು ತೊಟ್ಟು ತನ್ನ ಮಹಾಧನುಸ್ಸನ್ನು ಕೈಗೆತ್ತಿಕೊಂಡನು. ನಿಶಿತಾಸ್ತ್ರಗಳನ್ನು ಬತ್ತಳಿಕೆಯಲ್ಲಿ ತುಂಬಿಕೊಂಡು ಖಡ್ಗಧಾರಿಯಾಗಿ ಸಜ್ಜಾದನು. ಆತನು ಶ್ರೀರಾಮನ ಪಾದಗಳನ್ನು ಮುಟ್ಟಿ ವಂದಿಸಿ ''ಅಣ್ಣಾ, ನಿನ್ನ ಆಶೀರ್ವಾದದಿಂದ ನಾನು ನಡೆಸುವ ಪರಾಕ್ರಮಕಾರ್ಯವೇನೆಂಬುದನ್ನು ಜಗತ್ತು ತಿಳಿದೀತು. ಆ ರಾವಣನ ಮಗನ ದೇಹವನ್ನು ನನ್ನ ಕೂರಂಬುಗಳು ಕೊರೆದುಹಾಕುವವು. ನೀನು ನಿಶ್ಚಿಂತೆಯಿಂದಿರು'' ಎಂದು ನುಡಿದು ಉತ್ಸಾಹದಿಂದ ಮುಂದೆ ಹೊರಟನು. ವಿಭೀಷಣನು ತನ್ನ ಸಚಿವರೊಡನೆ ಅವನನ್ನು ಹಿಂಬಾಲಿಸಿದನು. ಹನುಮಂತನೇ ಮೊದಲಾದ ಪರಾಕ್ರಮಿಗಳು ಕಪಿಸೇನೆಯೊಡನೆ ಹೊರಟರು.

೬೮

ಲಕ್ಷ್ಮಣನಿಗೂ ಇಂದ್ರಜಿತುವಿಗೂ ಘೋರವಾದ ಯುದ್ಧ. ಇಂದ್ರಜಿತುವಿನ ಸಾವು

ಆ ಸಮಯದಲ್ಲಿ ಇಂದ್ರಜಿತು ನಿಕುಂಭಿಳಾದೇವಾಲಯದಲ್ಲಿ ಆಭಿಚಾರಿಕ ಯಾಗವನ್ನು ಮಾಡಲು ಸರ್ವಸಿದ್ಧತೆಯನ್ನೂ ನಡೆಸಿದ್ದನು. ಯಾಗ ರಕ್ಷಣೆಗಾಗಿ ರಾಕ್ಷಸ

ಸೇನೆಯನ್ನು ವ್ಯೂಹಾಕಾರವಾಗಿ ನಿಲ್ಲಿಸಿದ್ದನು. ವಿಭೀಷಣನು ಲಕ್ಷ್ಮಣನೊಡನೆ ''ಆರ್ಯ–ಲಕ್ಷ್ಮಣ, ಈ ರಾವಣಿಯು ಮಾಯಾವಿಯಾದ ದುರಾತ್ಮ. ಬಹಳ ಜಾಗರೂಕನಾಗಿ ಯುದ್ಧವನ್ನು ನಡೆಸಬೇಕು. ಈ ಸಲ ಈ ನೀಚನನ್ನು ವಧಿಸಿಬಿಡು'' ಎಂದನು. ಕಪಿಸೇನೆಯು ರಾಕ್ಷಸ ವ್ಯೂಹವನ್ನು ನುಗ್ಗಿ ಭಾರಿ ಹೊಡೆದಾಟ ವನ್ನಾರಂಭಿಸಿತು. ಇಂದ್ರಜಿತು ವಿಸ್ಮಯದಿಂದ ಸುತ್ತಲೂ ನೋಡಿ, ಮತ್ತೊಂದು ಅನರ್ಥವು ಪ್ರಾಪ್ತವಾಯಿತೆಂದು, ಕೈಗೊಂಡ ಯಾಗವನ್ನು ಮುಗಿಸದೆ ನಡುವೆಯೇ ಮೇಲೆದ್ದನು. ತನ್ನ ಯೋಜನೆ ಬಹುಶಃ ವಿಭೀಷಣನಿಂದಲೇ ಕೆಟ್ಟು ಹೋಯಿತೆಂದಾ ಲೋಚಿಸಿ ಕ್ರೋಧಾವಿಷ್ಟವಾಗಿ ಯುದ್ಧಕ್ಕೆ ಹೊರಟನು. ಕಾರ್ಮೋಡದಂತೆ ಕಪ್ಪಾಗಿದ್ದ ಆ ರಕ್ಕಸನು ಮೃತ್ಯುವಿನಂತೆ ಕಂಗೊಳಿಸುತ್ತ ರಥವನ್ನೇರಿ ಬರುತ್ತಿರಲು ದೂರದಲ್ಲಿ ಹನುಮಂತನು ಗೋಚರಿಸಿದನು. ಅವನ ಕಡೆಗೆ ರಥವನ್ನೋಡಿಸುವಂತೆ ಸಾರಥಿಗೆ ಹೇಳಿ ಹನುಮಂತನೆದುರಿಗೆ ಬಂದನು. ಅವರಿಬ್ಬರಿಗೂ ಹೊಡೆದಾಟ ಆರಂಭಿಸಿತು. ವಿಭೀಷಣನು ಲಕ್ಷ್ಮಣನಿಗೆ ಇಂದ್ರಜಿತುವನ್ನು ತೋರಿಸಿ ''ಲಕ್ಷ್ಮಣ, ಅಲ್ಲಿ ನೋಡು. ಅವನೇ ಮೇಘನಾದ. ಅವನನ್ನು ಅಡ್ಡಗಟ್ಟು'' ಎಂದನು. ತೇಜಸ್ವಿಯಾದ ಲಕ್ಷ್ಮಣನು ಇಂದ್ರಜಿತುವನ್ನು ನೋಡಿ ''ಎಲೈ ರಾಕ್ಷಸ, ಯುದ್ಧಕ್ಕಾಗಿ ಆಹ್ವಾನಿಸುತ್ತಿದ್ದೇನೆ. ವಂಚನೆಯಿಲ್ಲದೆ ನನ್ನನ್ನು ಎದುರಿಸು'' ಎಂದನು.

ಇಂದ್ರಜಿತುವಿಗೆ ವಿಭೀಷಣನು ಕಾಣಿಸಿದನು. ಅವನ ಕೋಪವು ನೆತ್ತಿಗೇರಿತು. ತನ್ನ ಚಿಕ್ಕಪ್ಪನಾದ ವಿಭೀಷಣನನ್ನು ಕುರಿತು, ''ಎಲಾ ದುಷ್ಟ, ನೀನು ಇಲ್ಲಿಯೇ ಹುಟ್ಟಿ ಬೆಳೆದವನು. ನನ್ನ ತಂದೆಗೆ ಸಾಕ್ಷಾತ್ ತಮ್ಮನಾಗಿದ್ದೀಯೆ. ನೀನು ನನಗೆ ಚಿಕ್ಕಪ್ಪನಾಗಿ ಈ ದ್ರೋಹವನ್ನೆಣಿಸಿದೆಯಾ? ನೀನು ಧರ್ಮದೂಷಕ. ಸ್ವಜನರೊಡನೆ ಬಾಳದೆ ನೀಚರಾದ ಪರರಿಗೆ ಶರಣಾಗತನಾದೆಯಾ? ಯಾವನೂ ನಿನ್ನಂತೆ ಇಷ್ಟು ನೀಚಕಾರ್ಯವನ್ನು ಮಾಡಲಾರ'' ಎಂದು ದೂಷಿಸಿದನು. ಅದಕ್ಕೆ ವಿಭೀಷಣನು ''ಎಲೈ ಮೇಘನಾದ, ನನ್ನ ನಡತೆ ನಿನಗೆ ತಿಳಿದಿಲ್ಲವೆ? ಹೊಸಬನಂತೆ ಅರ್ಥವಿಲ್ಲದ ಮಾತನ್ನೇಕೆ ಬೊಗಳುವೆ? ನಿನ್ನ ತಂದೆ ಮಾಡಿದ ಪಾಪಕರವಾದ ನೀಚಕೃತ್ಯವು ನಿನಗೆ ತಿಳಿಯದೆ? ನಿಮ್ಮಂತಹ ಪಾಪಿಗಳಿಗೆ ನಾನು ಸಹಾಯಮಾಡತಕ್ಕವನಲ್ಲ. ಹೆಚ್ಚು ಮಾತು ಬೇಡ. ಸಾಮರ್ಥ್ಯವಿದ್ದರೆ ಸೌಮಿತ್ರಿಯೊಡನೆ ಯುದ್ಧಮಾಡು'' ಎಂದು ಪ್ರತ್ಯುತ್ತರ ಕೊಟ್ಟನು. ಯುದ್ಧವಿಶಾರದನಾದ ಇಂದ್ರಜಿತು ಅವನ ಮಾತನ್ನು ಲಕ್ಷಿಸದೆ ಧನುಸ್ಸನ್ನೆತ್ತಿ ''ಎಲೈ ಲಕ್ಷ್ಮಣ, ನನ್ನ ಶೌರ್ಯವನ್ನು ಪರೀಕ್ಷಿಸಲು ಬಂದೆಯಾ? ನಿನಗೆ ಮೃತ್ಯುವು ಸಮೀಪಿಸಿದಂತೆ ಕಾಣುತ್ತದೆ'' ಎಂದು ಹಂಗಿಸಿ ಧನುಸ್ಸನ್ನು ಝೇಗೈದನು. ಭೀಕರವಾದ ಹೋರಾಟವು ಆರಂಭವಾಯಿತು. ಅವರಿಬ್ಬರೂ ಯುದ್ಧದಲ್ಲಿ ಚೆನ್ನಾಗಿ ಪಳಗಿದವರು.

ಇಬ್ಬರೂ ಶಸ್ತ್ರಾಸ್ತ್ರ ಕೋವಿದರು. ಇಬ್ಬರೂ ಅಸದೃಶ ತೇಜಸ್ವಿಗಳು. ಕುಪಿತಕಂಠೀರವಗಳಂತೆ ಇಬ್ಬರೂ ಕಾದಾಡಿದರು. ಲಕ್ಷ್ಮಣನ ಧನುಷ್ಟಂಕಾರದ ಬಿರುಸು ಪ್ರತಿಕ್ಷಣವೂ ಏರುತ್ತಲೇ ಹೋಯಿತು. ಇಂದ್ರಜಿತುವಿನ ಮುಖದ ಕಳೆ ಕುಂದತೊಡಗಿತು. ಆದರೂ ಆ ಧೀರನು ಏಳು ಬಾಣಗಳಿಂದ ಲಕ್ಷ್ಮಣನನ್ನು ನೋಯಿಸಿ ಹತ್ತು ಕೂರಂಬುಗಳಿಂದ ಹನುಮಂತನನ್ನು ಹೊಡೆದು ನಿಶಿತಾಸ್ತ್ರಗಳಿಂದ ವಿಭೀಷಣನ ಮೈಯನ್ನು ಕೆತ್ತಿದನು. ಭೀಮ ಪರಾಕ್ರಮಿಯಾದ ಮೇಘನಾದನಿಗೂ ಸೌಮಿತ್ರಿಗೂ ಅತ್ಯಂತ ಭೀಷಣವಾದ ಕಾಳಗವು ನಡೆಯತೊಡಗಿತು. ಇಬ್ಬರೂ ಕೈಚಳಕದಿಂದ ಧನುರ್ವಿದ್ಯೆಯ ಅಭೂತಪೂರ್ವಚಮತ್ಕಾರವನ್ನು ಬೀರಿದರು. ಲಕ್ಷ್ಮಣನು ರಾವಣಿಯನ್ನೂ, ರಾವಣಿಯು ಲಕ್ಷ್ಮಣನನ್ನೂ ಅನ್ಯೋನ್ಯವಾಗಿ ಪ್ರಹರಿಸುತ್ತಲೇ ಇದ್ದರು. ಅವರ ಸರ್ವಾಂಗಗಳೂ ನೆತ್ತರಲ್ಲಿ ನೆನೆದು ಹೋದ್ದರಿಂದ ಅವರು ಉರಿಯುವ ಎರಡು ಬೆಂಕಿಗಳಂತೆ ಕಾಣಿಸುತ್ತಿದ್ದರು.

ವಿಭೀಷಣನು ತನ್ನ ಸಚಿವರೊಡನೆ ರಾಕ್ಷಸಸೇನೆಯಲ್ಲಿನುಗ್ಗಿ ವಿವಿಧಾಯುಧ ಗಳಿಂದ ಹೊಡೆದಾಡತೊಡಗಿದನು. ಅಲ್ಲದೆ ವಿಭೀಷಣನು ವಾನರ ವೀರರನ್ನು ಕರೆದು ''ಎಲೈ ವೀರರೆ, ರಾವಣನಿಗೆ ಈ ಇಂದ್ರಜಿತು ಒಬ್ಬನೇ ಕಡೆಯ ಅವಲಂಬನವಾಗಿ ದ್ದಾನೆ. ಈತನೊಬ್ಬನನ್ನು ಮುಗಿಸಿಬಿಟ್ಟರೆ ರಾವಣನಿಗೆ ಇನ್ನಾವ ಆಶ್ರಯವೂ ಉಳಿಯುವುದಿಲ್ಲ. ನಿಮ್ಮ ವಿಕ್ರಮವೆಲ್ಲವನ್ನೂ ಈಗ ಮೆರೆಸಿರಿ'' ಎಂದು ಹುರಿದುಂಬಿಸಿ ದನು. ಇತ್ತ ಲಕ್ಷ್ಮಣನಿಗೂ ಇಂದ್ರಜಿತುವಿಗೂ ಖಾಡಾಖಾಡಿಯಾಗಿ ಹೋರಾಟವು ನಡೆಯುತ್ತಲೇ ಇತ್ತು. ಲಕ್ಷ್ಮಣನು ಇಂದ್ರಜಿತುವಿನ ಸಾರಥಿಯ ತಲೆಯನ್ನು ತರಿದು ಹಾಕಿದನು. ಇಂದ್ರಜಿತುವು ಸ್ವಲ್ಪವೂ ಅಳುಕದೆ ತನ್ನ ರಥವನ್ನು ನಡೆಸುತ್ತಲೇ ಲಕ್ಷ್ಮಣನ ಮೇಲೆ ಬಾಣರಾಶಿಗಳನ್ನು ಪ್ರಯೋಗಿಸುತ್ತಲೇ ಇದ್ದನು. ಆಗ ವಾನರಯೂಥಪರು ಇಂದ್ರಜಿತುವಿನ ರಥಕ್ಕೆ ಹೂಡಿದ್ದ ನಾಲ್ಕು ಅಶ್ವಗಳನ್ನು ಕೊಂದು ರಥವನ್ನು ಮುರಿದು ಈಡಾಡಿದರು. ಹೀಗೆ ರಥವೂ ಅಶ್ವಗಳೂ ನಷ್ಟವಾದರೂ ಮಹಾತೇಜಸ್ವಿಯಾದ ಇಂದ್ರಜಿತು ನೆಲದ ಮೇಲೆಯೇ ನಿಂತು ಹೋರಾಡ ತೊಡಗಿದನು. ಆ ಸಮಯದಲ್ಲಿ ಇಂದ್ರಜಿತು ರಾಕ್ಷಸಭಟರಿಗೆ ಉತ್ಸಾಹವನ್ನುಂಟು ಮಾಡುತ್ತಾ ''ಯೋಧರೆ, ನಾನು ಲಂಕೆಗೆ ಹೋಗಿ ಬೇರೊಂದು ರಥವನ್ನು ತರುವೆನು. ನಾನಿಲ್ಲವೆಂಬುದು ಈ ವಾನರರಿಗೆ ತಿಳಿಯದಂತೆ ಧೈರ್ಯದಿಂದ ಹೊಡೆದಾಡುತ್ತಿರಿ'' ಎಂದು ಹೇಳಿ ಲಕ್ಷ್ಮಣಾದಿಗಳಿಗೆ ತಿಳಿಯದಂತೆ ಗಪ್ಪನೆ ಕಣ್ಮರೆಯಾದನು. ಪ್ರತಾಪಶಾಲಿಯಾದ ಆ ಮೇಘನಾದನು ಮತ್ತೊಂದು ಮಹಾರಥವನ್ನೇರಿ ಪಳಗಿದ ಸಾರಥಿಯನ್ನು ನೇಮಿಸಿಕೊಂಡು ಕುದುರೆಗಳನ್ನು ದೌಡಾಯಿಸುತ್ತಾ ರಣರಂಗಕ್ಕೆ ಬಂದನು. ಆ ಹೊಸರಥವನ್ನು ನೋಡಿ ಲಕ್ಷ್ಮಣಾದಿಗಳು

ವಿಸ್ಮಿತರಾದರು. ಲಕ್ಷ್ಮಣನ ಮಹಾಧನುಸ್ಸಿನಿಂದ ಚಿಮ್ಮಿಹೋದ ಕೂರ್ಗಣೆಗಳು ಇಂದ್ರಜಿತುವಿನ ದೇಹವನ್ನು ಕೊರೆದು ಹಾಕುತ್ತಿದ್ದವು. ಆ ರಾಕ್ಷಸನೂ ಸಹ ಶರಜಾಲಗಳನ್ನು ಸೌಮಿತ್ರಿಯ ಮೇಲೆ ಸುರಿಯುತ್ತಿದ್ದನು. ಅಷ್ಟರಲ್ಲಿ ಸೌಮಿತ್ರಿಯು ಇಂದ್ರಜಿತುವಿನ ನೂತನಸಾರಥಿಯನ್ನೂ ಕೊಂದು ಹಾಕಿದನು. ಇಂದ್ರಜಿತು ಕೋಪದಿಂದ ಮೂರು ಶರಗಳನ್ನು ಲಕ್ಷ್ಮಣನ ಹಣೆಗೆ ಗುರಿಯಿಟ್ಟು ಹೊಡೆದನು. ಆ ವೀರರೀರ್ವರ ಸರ್ವಾಂಗಗಳೂ ಗಾಯ ಗೊಂಡವು. ಅನಂತರ ಮಹಾಪರಾಕ್ರಮಿಗಳಾದ ಅವರೀರ್ವರೂ ಮಂತ್ರಾಸ್ತ್ರಗಳಿಂದ ಹೋರಾಡತೊಡಗಿದರು. ಕಿಂಪುರುಷಾದಿ ದೇವತೆಗಳು, ದೇವರ್ಷಿಗಳು, ಆಕಾಶದಲ್ಲಿ ನಿಂತು ಆ ಘೋರಯುದ್ಧವನ್ನು ನೋಡಿ ಬೆರಗಾಗಿ 'ಲಕ್ಷ್ಮಣನಿಗೆ ಶುಭವಾಗಲಿ' ಎಂದು ಹೇಳುತ್ತಿದ್ದರು. ಮೂರು ದಿನಗಳು ಕಳೆದವು. ಹೀಗೆ ಬಹುಕಾಲ ಹೋರಾಡಿದ ಮೇಲೆ ಲಕ್ಷ್ಮಣನು ರಾವಣಾತ್ಮಜನನ್ನು ಸಂಹರಿಸಲೇಬೇಕೆಂದು ನಿಶ್ಚಯಿಸಿ ಅಜೇಯವಾದ ಐಂದ್ರಾಸ್ತ್ರವನ್ನು ಶ್ರೇಷ್ಠವಾದ ತನ್ನ ಧನುಸ್ಸಿಗೆ ಹೂಡಿದನು. ಆ ನರಶ್ರೇಷ್ಠನು ಐಂದ್ರಮಂತ್ರದಿಂದ ಅದನ್ನು ಅಭಿಮಂತ್ರಿಸಿ ''ದಶರಥಾತ್ಮಜನಾದ ಶ್ರೀರಾಮನು ಧರ್ಮಾತ್ಮನೂ ಸತ್ಯಸಂಧನೂ ಪೌರುಷದಲ್ಲಿ ಎದುರಿಲ್ಲದ ಅದ್ವಿತೀಯ ಪರಾಕ್ರಮಿಯೂ ಆಗಿರುವುದು ಸತ್ಯವಾದರೆ, ಎಲೈ ಶರವೇ, ಈ ರಾವಣ ಪುತ್ರನನ್ನು ಸಂಹರಿಸು'' ಎಂದು ಆಣೆಯಿಟ್ಟು ಆ ಶರವನ್ನು ಆಕರ್ಣಾಂತವಾಗಿ ಸೆಳೆದು ಇಂದ್ರಜಿತುವಿನ ಮೇಲೆ ಪ್ರಯೋಗಿಸಿದನು. ವೀರಾಗ್ರಣಿಯಾದ ಲಕ್ಷ್ಮಣನು ಪ್ರಯೋಗಿಸಿದ ಆ ಅಸ್ತ್ರವು ಮಹಾವೇಗದಿಂದ ನುಗ್ಗಿ ಇಂದ್ರಜಿತುವಿನ ಶಿರಸ್ಸನ್ನು ಕತ್ತರಿಸಿ ಧರೆಗುರುಳಿಸಿತು. ಧನುಸ್ಸನ್ನು ಹಿಡಿದಿದ್ದ ಆ ರಾವಣಪುತ್ರನು ಲಕ್ಷ್ಮಣನಿಂದ ಹತನಾಗಿ ಬಿದ್ದನು. ಇಂದ್ರಜಿತು ಹತನಾದೊಡನೆ ವಾನರಯೋಧರೂ, ವಿಭೀಷಣನೂ ಸಂತೋಷದಿಂದ ಕೋಲಾಹಲ ಮಾಡಿದರು. ರಾಕ್ಷಸಸೇನೆಯು ದಿಕ್ಕುದಿಕ್ಕಿಗೆ ಚದರಿ ಓಡಿಹೋಯಿತು. ಆಕಾಶದಲ್ಲಿ ನೆರೆದಿದ್ದ ಇಂದ್ರಾದಿದೇವತೆಗಳು ಸಂತೋಷಿಸಿದರು. ದೇವದುಂದುಭಿಗಳು ಮೊಳಗಿದವು. ವಿಭೀಷಣ, ಹನುಮಂತ, ಜಾಂಬವಂತ ಮೊದಲಾದವರು ವಿಜಯಶಾಲಿಯಾದ ಸೌಮಿತ್ರಿಯನ್ನು ಸ್ತುತಿಸಿದರು. ವಾನರರು ಹರ್ಷದಿಂದ ಬಾಲಗಳನ್ನು ಬಡಿಯುತ್ತ''ಸುಮಿತ್ರಾತನಯನಿಗೆ ಜಯವಾಗಲಿ'' ಎಂದು ಘೋಷಿಸುತ್ತ, ಅವನ ಸುತ್ತ ನೆರೆದರು. ಲಕ್ಷ್ಮಣನ ರಣಕೌಶಲವನ್ನು ಬಗೆಬಗೆಯಾಗಿ ಹೊಗಳಿದರು. ಲಕ್ಷ್ಮಣನು ತನ್ನ ದೇಹವು ಗಾಯಗಳಿಂದ ತುಂಬಿ ರಕ್ತವು ಸೋರುತ್ತಿದ್ದರೂ ಪರಾಕ್ರಮಿಯಾದ ವೈರಿಯು ದೀರ್ಘವಾದ ಹೋರಾಟದಿಂದ ಹತನಾದನೆಂದು ಸಂತುಷ್ಟನಾದನು. ಆ ರಣಧೀರನು ಬಳಲಿ ಹನುಮಂತ ಮತ್ತು ವಿಭೀಷಣರ ಹೆಗಲಮೇಲೆ ಕೈಯಿಟ್ಟುಕೊಂಡು ಶ್ರೀರಾಮನ ಸಮೀಪಕ್ಕೆ ಬಂದು ಅವನಿಗೆ ನಮಸ್ಕರಿಸಿದನು. ಲಕ್ಷ್ಮಣನು ಇಂದ್ರಜಿತುವನ್ನು ಸಂಹರಿಸಿದನೆಂಬ ಸುದ್ದಿಯನ್ನು ಕೇಳಿ

ಕಾಕುತ್ಸ್ಥನು ಆನಂದದಿಂದ ''ಭಲೆ ಲಕ್ಷ್ಮಣ, ಬಹು ದೊಡ್ಡ ಅದ್ಭುತ ಕಾರ್ಯವನ್ನು ಸಾಧಿಸಿದೆ. ಇನ್ನು ನಾವು ಗೆದ್ದೆವೆಂದೇ ತಿಳಿ'' ಎಂದು ಉದ್ಗರಿಸಿದನು. ಆಮೇಲೆ ಶ್ರೀರಾಮನು ಲಕ್ಷ್ಮಣನ ಶಿರಸ್ಸನ್ನು ಆಘ್ರಾಣಿಸಿ, ನಾಚುತ್ತಿದ್ದ ಅವನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಆತನ ಮೈಮೇಲಾದ ಗಾಯಗಳನ್ನು ನೋಡಿ ಮರುಗುತ್ತಾ ಕಣ್ಣೀರು ತುಂಬಿಕೊಂಡು ''ಲಕ್ಷ್ಮಣ, ಲಕ್ಷ್ಮಣ'' ಎಂದು ಗದ್ಗದ ಧ್ವನಿಯಿಂದ ಹೇಳುತ್ತಾ ಲಕ್ಷ್ಮಣನ ದೇಹದಮೇಲೆ ಪ್ರೀತಿಯಿಂದ ಮತ್ತೆ ಮತ್ತೆ ಕೈಯಾಡಿಸಿ ಸವರುತ್ತಿದ್ದನು. ಲಕ್ಷ್ಮಣನ ಮೈಮೇಲಾದ ಗಾಯಗಳನ್ನೂ ಅವನು ಆಯಾಸದಿಂದ ಉಸಿರೆಳೆಯುವುದನ್ನೂ ಕಂಡು ಶ್ರೀರಾಮನು ಶೋಕತಪ್ತನಾಗಿ ಮರುಗತೊಡಗಿದನು. ಅವನ ಮೈದಡವಿ ಸಂತೈಸುತ್ತ ''ತಮ್ಮ-ಲಕ್ಷ್ಮಣ, ಇತರರಿಗೆ ಸಾಧ್ಯವಲ್ಲದ ಪರಾಕ್ರಮವನ್ನು ಮೆರೆಸಿ ಮೇಘನಾದನನ್ನು ಸಂಹರಿಸಿದ್ದೀಯೆ. ರಾವಣನ ಬಲಗೈಯನ್ನೇ ನೀನು ಕತ್ತರಿಸಿದ್ದೀಯೆ. ಮೂರು ದಿನಗಳವರೆಗೆ ಅಹೋರಾತ್ರವೂ ಎಡೆಬಿಡದೆ ಹೋರಾಡಿದ್ದೀಯೆ. ಲಕ್ಷ್ಮಣ, ನೀನು ನನಗೆ ದಿಕ್ಕಾಗಿರುವಾಗ ನನಗೆ ಯಾವುದೂ ದುರ್ಲಭವಲ್ಲ. ಶತ್ರುಗಳಲ್ಲಿ ರಾವಣನೊಬ್ಬನುಳಿದಿದ್ದಾನೆ. ಮಗನು ಹತನಾದ್ದರಿಂದ ಅವನು ಬಂದೇ ಬರುವನು. ಅವನನ್ನು ನಾನು ಎದುರಿಸುತ್ತೇನೆ. ಆ ಕಾರ್ಯದಲ್ಲಿ ನೀನು ಕೈಹಾಕಬೇಡ'' ಎಂದನು. ಆಮೇಲೆ ವೈದ್ಯನಾದ ಸುಷೇಣನನ್ನು ಕರೆಸಿ ''ಸುಷೇಣ, ನೀನು ವೈದ್ಯಶಾಸ್ತ್ರದಲ್ಲಿ ಪ್ರವೀಣ. ನಮ್ಮ ಸೌಮಿತ್ರಿಯನ್ನೂ ವಿಭೀಷಣನನ್ನೂ, ಮತ್ತೆ ಇನ್ನಾವ ಯೋಧರು ಗಾಯಗೊಂಡಿರುವರೋ ಅವರನ್ನೂ ಚಿಕಿತ್ಸೆಯಿಂದ ಸಂತೈಸು'' ಎಂದನು. ಆಗ ಸುಷೇಣನು, ಹಿಂದೆ ಹನುಮಂತನು ತಂದಿದ್ದ ಓಷಧಿ ಪರ್ವತದಿಂದ ಸಂಗ್ರಹಿಸಿ ಕೊಂಡಿದ್ದ ದಿವ್ಯಮೂಲಿಕೆಗಳನ್ನು ಉಪಯೋಗಿಸಿ ಅವರೆಲ್ಲರಿಗೂ ಚಿಕಿತ್ಸೆಯನ್ನು ನೀಡಲು ಎಲ್ಲರೂ ಸಕಲ ಬಾಧೆಗಳಿಂದಲೂ ನಿವೃತ್ತರಾಗಿ ಸ್ವಾಸ್ಥ್ಯವನ್ನು ಪಡೆದರು.

೬೯

ರಾವಣನು ಸೀತಾದೇವಿಯನ್ನು ಕೊಲ್ಲಲು ಹವಣಿಸುವುದು. ಸುಪಾರ್ಶ್ವನ ಬುದ್ಧಿವಾದ, ಶ್ರೀರಾಮನ ಅತ್ಯದ್ಭುತವಾದ ಯುದ್ಧಸಾಮರ್ಥ್ಯ

ಇಂದ್ರಜಿತು ಮೃತನಾದನೆಂಬ ಸುದ್ದಿ ರಾವಣನಿಗೆ ಮುಟ್ಟಿತು. ಹೃದಯ ವಿದ್ರಾವಕವಾದ ಆ ದಾರುಣವಾರ್ತೆಯನ್ನು ಕೇಳಿ ದಶಕಂಠನು ಶೋಕಸಂತಪ್ತನಾಗಿ ಮೂರ್ಛೆ ಹೋದನು. ಬಹಳ ಹೊತ್ತಿನ ಮೇಲೆ ಎಚ್ಚೆತ್ತು ಪುತ್ರಶೋಕದಿಂದ ಅಳತೊಡಗಿದನು. ಇಂದ್ರಜಿತುವಿನ ಪರಾಕ್ರಮ ಕೃತ್ಯಗಳನ್ನು ನೆನೆದು ನೆನೆದು

ಗೋಳಾಡಿದನು. ''ಮಗು–ಮೇಘನಾದ, ನಾನು ಸತ್ತಮೇಲೆ ನನಗೆ ಪ್ರೇತಕಾರ್ಯ ಗಳನ್ನು ಮಾಡಬೇಕಾದವನು ನೀನು. ಅದೀಗ ಹಿಂದು ಮುಂದಾಯಿತಲ್ಲ'' ಎಂದು ಹಲುಬಿದನು. ಹೀಗೆ ಶೋಕಾರ್ತನಾಗಿ ಬಹಳ ಹೊತ್ತು ವಿಲಪಿಸಿದ ಮೇಲೆ ರಾವಣನಿಗೆ ಮಹಾಕ್ರೋಧ ಉಂಟಾಯಿತು. ಅವನು ಸಿಡಿದೆದ್ದು ''ಇಷ್ಟೆಲ್ಲ ಅನರ್ಥಕ್ಕೆ ಕಾರಣಳಾದ ಸೀತೆಯನ್ನು ಕೊಂದು ಬಿಡಬೇಕು!'' ಎಂದು ನಿಶ್ಚಯಿಸಿದನು. ಅವನ ಕಣ್ಣಿಂದ ಸಿಟ್ಟಿನ ಕಿಡಿಗಳು ಸಿಡಿದವು. ಹಲ್ಲುಗಳನ್ನು ಕಟಕಟನೆ ಕಡಿದನು. ರೋಷದಿಂದ ಉದ್ದೀಪ್ತನಾಗಿ ಎಡಬಲಕ್ಕೆ ತಿರುಗಿನೋಡಿದಾಗ ಅವನ ಕ್ರೋಧೋದ್ದೀಪಿತ ಮುಖವನ್ನು ನೋಡಲಾರದೆ ರಾಕ್ಷಸರು ಹೆದರಿ ಅಲ್ಲಲ್ಲಿ ಅವಿತುಕೊಂಡರು! ಆಮೇಲೆ ''ಎಲೈ, ರಾಕ್ಷಸಯೋಧರೆ, ನಾನು ಘೋರವಾದ ತಪಸ್ಸನ್ನಾಚರಿಸಿ ಬ್ರಹ್ಮದೇವನನ್ನು ಮೆಚ್ಚಿಸಿದ್ದೇನೆ. ಯಾರಿಂದಲೂ ನನಗೆ ಭಯವಿಲ್ಲ. ವಜ್ರಾಯುಧದ ಬಡಿತಕ್ಕೂ ವಿವಿಧಾಯುಧಗಳ ಜಡಿತಕ್ಕೂ ಜಗ್ಗದ ವಜ್ರಕವಚವು ನನ್ನಲ್ಲಿದೆ. ಯಾವನು ನನ್ನನ್ನು ಯುದ್ಧದಲ್ಲಿ ಎದುರಿಸಿಯಾನು? ಎಲೈ ಸಚಿವರೆ, ಬ್ರಹ್ಮದೇವನು ನನಗೆ ಅನುಗ್ರಹಿಸಿದ ಆ ಕವಚವನ್ನೂ ಮಹಾಧನುಸ್ಸನ್ನೂ ಹೊರತನ್ನಿರಿ. ರಾಮಲಕ್ಷ್ಮಣರನ್ನು ವಧಿಸು ವುದಕ್ಕಾಗಿಯೇ ಅವುಗಳ ಉಪಯೋಗವಾಗಲಿ'' ಎಂದು ಆಜ್ಞಾಪಿಸಿದನು. ಅನಂತರ ಮೇಲಕ್ಕೆದ್ದು ''ಮೊದಲು ಸೀತೆಯನ್ನು ಕೊಂದು ಬರುವೆನು'' ಎಂದು ನುಡಿದು ನಿಶಿತವಾದ ಖಡ್ಗವನ್ನು ಹೊರಸೆಳೆದು ರಭಸದಿಂದ ಹೆಜ್ಜೆಯಿಡುತ್ತ ಅಶೋಕವನಕ್ಕೆ ನಡೆದನು. ಸಚಿವರೆಲ್ಲರೂ ಅವನನ್ನು ಹಿಂಬಾಲಿಸಿದರು. ದಾರಿಯಲ್ಲಿ ರಾವಣನು ''ಮಿತ್ರರೇ, ನನ್ನ ಮಗನು ಮಾಯಾಸೀತೆಯನ್ನು ವಧಿಸಿ ಶತ್ರುಗಳನ್ನು ವಂಚಿಸಲು ಯತ್ನಿಸಿದನು. ನಾನು ನಿಜವಾದ ಸೀತೆಯನ್ನೇ ಕಡಿದು ಹಾಕಿ ನನ್ನ ಸಿಟ್ಟನ್ನು ಸಾರ್ಥಕ ಪಡಿಸುವೆನು'' ಎಂದು ಹೇಳುತ್ತ ಸೀತೆಯಿದ್ದ ಸ್ಥಳಕ್ಕೆ ಧಾವಿಸಿದನು. ಕತ್ತಿಯನ್ನು ಝಳಪಿಸುತ್ತ ಕ್ರೋಧಾವೇಶದಿಂದ ಬರುತ್ತಿದ್ದ ರಾವಣನನ್ನು ನೋಡಿ ಆತನು ತನ್ನನ್ನು ಕೊಲ್ಲುವುದಕ್ಕಾಗಿಯೇ ಬರುತ್ತಿದ್ದಾನೆಂದು ಸೀತೆಗೆ ನಿಶ್ಚಯವಾಯಿತು. ಅವಳು ದೈನ್ಯದಿಂದ ''ಅಯ್ಯೋ, ಈ ಪಾಪಿಯು ನನ್ನನ್ನು ಕೊಲ್ಲುವನು. ಹನುಮಂತನ ಹೆಗಲಮೇಲೆ ಕುಳಿತು ನನ್ನ ಪತಿಯ ಬಳಿಗೆ ಹೋಗಿ ಬಿಟ್ಟಿದ್ದರೆ ಈ ಕಷ್ಟವಿರುತ್ತಿರಲಿಲ್ಲ. ಈ ನೀಚನು ಶ್ರೀರಾಮ ಲಕ್ಷ್ಮಣರನ್ನು ಯುದ್ಧದಲ್ಲಿ ಸಂಹರಿಸಿರಬಹುದೆ? ನನ್ನನ್ನು ಕೊಲ್ಲುವ ಉದ್ದೇಶವೇನಿರಬಹುದು? ಒಟ್ಟಿನಲ್ಲಿ ನನ್ನಿಂದ ಘೋರವಿಪತ್ತು ಸಂಭವಿಸಿತು'' ಎಂದು ದಿಕ್ಕುಗಾಣದೆ ಕಂಗೆಟ್ಟಳು. ಗೋಳೋ ಎಂದು ಅಳ ತೊಡಗಿದಳು. ಅವಳನ್ನು ನೋಡುತ್ತಲೇ ಸುಪಾರ್ಶ್ವನೆಂಬ ವಿವೇಕಿಯಾದ ಅಮಾತ್ಯನು ಧೈರ್ಯದಿಂದ ಮುಂದೆ ನುಗ್ಗಿ ರಾವಣನನ್ನು ಕುರಿತು ಇಂತೆಂದನು ''ಮಹಾಪ್ರಭು,

ನನ್ನನ್ನು ಕ್ಷಮಿಸು. ''ಮಹಾಕುಲಪ್ರಸೂತನೂ ಧರ್ಮಜ್ಞನೂ ಅಸಾಧಾರಣ ತಪಸ್ವಿಯೂ ಆದ ನೀನು ಈ ಒಬ್ಬ ಬಡಹೆಂಗಸನ್ನು ಕೊಲ್ಲಲು ಯತ್ನಿಸಬಹುದೆ? ವೇದಾಧ್ಯಯನ ಮಾಡಿ ಕರ್ಮನಿಷ್ಠನಾಗಿರುವ ನಿನಗೆ ಸ್ತ್ರೀವಧೆಯು ಅತ್ಯಂತ ಹೇಯವಾದದ್ದು. ಬಹುವರ್ಷಗಳಿಂದ ಆರ್ಜಿಸಿದ ನಿನ್ನ ಕೀರ್ತಿಗೆ ಈ ಕೃತ್ಯವು ಕಳಂಕವನ್ನುಂಟು ಮಾಡುವುದು. ಅನಾಥೆಯಾದ ಈ ಸ್ತ್ರೀಯಲ್ಲಿ ನಿನ್ನ ಕೋಪವು ಯುಕ್ತವಾದ್ದಲ್ಲ. ನಿನ್ನ ಕೋಪವನ್ನು ರಾಮಲಕ್ಷ್ಮಣರ ಮೇಲೆ ಮೆರೆಸು. ಪರಮ ಶೂರನೂ, ಧೀಮಂತನೂ ಆದ ನೀನು ಇಂತಹ ಪಾಪಕೃತ್ಯವನ್ನು ಮಾಡಬೇಡ. ನಾವೆಲ್ಲರೂ ನಿನಗೆ ಸಹಾಯಕರಾಗಿದ್ದೇವೆ. ಮೊದಲು ರಾಮನನ್ನು ಸಂಹರಿಸು. ಅನಂತರ ಸೀತೆ ನಿನಗೆ ವಶಳಾಗುವಳು. ಸ್ತ್ರೀವಧೆಯೆಂಬ ಈ ಹೇಯಕೃತ್ಯವು ಮಾತ್ರ ಸರ್ವಥಾ ಬೇಡ'' ಎಂದು ನಿವೇದಿಸಿದನು. ದಶಕಂಠನು ಮೌನದಿಂದ ಅವನ ಸಲಹೆಯನ್ನು ಒಪ್ಪಿಕೊಂಡು ನೆಟ್ಟಗೆ ಹಿಂದಿರುಗಿ ಬಂದನು. ರಾವಣನು ರಾಜಸಭೆಯನ್ನು ಪ್ರವೇಶಿಸಿ ಸಿಂಹಾಸನದಲ್ಲಿ ಕುಳಿತನು. ಪುತ್ರಶೋಕವು ಅವನನ್ನು ಕಿತ್ತೆಳೆಯುತ್ತಿತ್ತು. ಆತನು ಸಮಸ್ತ ಬಲಾಧ್ಯಕ್ಷರನ್ನೂ ಕುರಿತು ಕೈಮುಗಿದುಕೊಂಡು ''ಮಿತ್ರರೆ, ನೀವೆಲ್ಲರೂ ರಣಯಾತ್ರೆಗೆ ಹೊರಡಿರಿ. ನಿಮ್ಮ ಪರಾಕ್ರಮವೆಲ್ಲವನ್ನೂ ಮೆರೆಸಿರಿ. ನಾಳೆ ನಾನು ಹೋಗಿ ಘೋರವಾದ ಸಮರವನ್ನಾರಂಭಿಸಿ ತೀಕ್ಷ್ಣಾಸ್ತ್ರಗಳಿಂದ ರಾಮನನ್ನು ಕೊಲ್ಲುವೆನು. ಈ ರಾವಣನ ಯುದ್ಧದ ಪರಿ ಏನೆಂಬುದನ್ನು ಜಗತ್ತು ನೋಡಲಿ'' ಎಂದನು.

ಅನಂತರ ಅಳಿದುಳಿದಿದ್ದ ರಾಕ್ಷಸಭಟರೆಲ್ಲರೂ ತಮ್ಮ ಪರಾಕ್ರಮವನ್ನು ಮೆರೆಸಬೇಕೆಂದು ನಿಶ್ಚಯಿಸಿ ಚತುರಂಗ ಬಲದೊಡನೆ ರಣರಂಗಕ್ಕೆ ಧುಮುಕಿದರು. ತಮ್ಮ ಘೋರಾಯುಧಗಳನ್ನು ಯುದ್ಧನೈಪುಣ್ಯವನ್ನೂ ಪ್ರದರ್ಶಿಸಿ ಎಣೆಯಿಲ್ಲದ ತೀವ್ರತೆಯಿಂದ ಹೋರಾಡಿದರು. ಅಂತಹ ಘೋರಯುದ್ಧವನ್ನು ಕಪಿಯೋಧರು ಕಂಡಿರಲಿಲ್ಲ. ಅವರೆಲ್ಲರೂ ತಮ್ಮ ಪರಾಕ್ರಮವನ್ನು ಮೆರೆಸಿ ಬಹಳ ಹೊತ್ತು ಹೋರಾಡಿದರು. ರಾಕ್ಷಸರ ಕೈಮೇಲಾಯಿತು. ಎಲ್ಲ ಕಪಿಯೋಧರೂ ದಿಗ್ಭ್ರಾಂತರಾಗಿ ಹೆದರಿಬಂದು ಶ್ರೀರಾಮನಿಗೆ ಶರಣಾದರು. ಆಗ ದಶರಥಾತ್ಮಜನು ಇನ್ನು ಘೋರವಾದ ಯುದ್ಧವು ನಡೆಯುವುದೆಂದೂ ತನ್ನ ಪರಾಕ್ರಮವೆಲ್ಲವನ್ನೂ ಮೆರೆಸುವುದಕ್ಕೆ ಇದು ಸಮಯವೆಂದೂ ನಿಶ್ಚಯಿಸಿ, ತನ್ನ ದಿವ್ಯಕೋದಂಡವನ್ನೆತ್ತಿ ತೀಕ್ಷ್ಣಾಸ್ತ್ರಗಳಿಂದ ಸಜ್ಜನಾಗಿ ಒಬ್ಬನೇ ರಾಕ್ಷಸ ಸೇನೆಯೊಳಗೆ ನುಗ್ಗಿದನು. ತನ್ನ ಬಾಣಾಗ್ನಿಯಿಂದ ರಾಕ್ಷಸಸೇನೆಯನ್ನು ಸುಟ್ಟು ಉರುಬಲಾರಂಭಿಸಿದನು. ರಾಘವನ ಕರಲಾಘವದಿಂದ ಚಿಮ್ಮಿ ಬಂದ ಶರಗಳು ರಾಕ್ಷಸರ ಶಿರಗಳನ್ನು ತರಿತರಿದು ಉರುಳಿಸಿದವು. ಆ ಬಗೆಯ ಅಸ್ತ್ರವೇಗವನ್ನೂ ತೀಕ್ಷ್ಣತೆಯನ್ನೂ ರಾಕ್ಷಸಯೋಧರು

ಹಿಂದೆ ಕಂಡಿರಲಿಲ್ಲ. ಅವರ ಮಹಾಸೇನೆಯು ರಾಘವಾಸ್ತ್ರಗಳ ಹೊಡೆತಗಳ ತೀವ್ರತೆಯಿಂದ ತತ್ತರಿಸಿ ತೂಗಾಡಿತು. ಬಿರುಗಾಳಿಯಂತೆ ಬಿರುಸಿನಿಂದ ಶ್ರೀರಾಮನೊಬ್ಬನೇ ದೈತ್ಯಸೇನೆಯಲ್ಲಿ ನುಗ್ಗಿ ಭೀಕರವಾದ ಆ ಸೇನೆಯನ್ನು ಕೊಚ್ಚಿ ಕಡಿದುಬಿಟ್ಟನು. ಶ್ರೀರಾಮನೆಲ್ಲಿದ್ದಾನೆಂಬುದಾಗಲಿ, ಅವನ ಅಸ್ತ್ರಗಳು ಯಾವ ದಿಕ್ಕಿನಿಂದ ಬರುತ್ತಿವೆ ಎಂಬುದಾಗಲಿ ಗೊತ್ತಾಗಲೇ ಇಲ್ಲ. ಶ್ರೀರಾಮನು ಆ ಮಹಾಸ್ತ್ರಗಳಿಂದ ರಾಕ್ಷಸರನ್ನು ಕಡಿಕಡಿದು ಕೊಚ್ಚಿದನು. ತರಿತರಿದು ತೂರಿದನು. ಕೈಕಾಲುಗಳನ್ನು ಮುರಿಮುರಿದು ಉರುಳಿಸಿದನು. ಅವರ ಎದೆ ಎದೆಗಳಲ್ಲಿ ಅಂಬುಗಳನ್ನು ನೆಟ್ಟನು. ಆಶ್ಚರ್ಯಕರವಾದ ಆ ಅಸ್ತ್ರವಿದ್ಯೆಯ ಕೈಚಳಕದ ಪರಿಣಾಮವು ಗೋಚರಿಸುತ್ತಿತ್ತೇ ಹೊರತು ಶ್ರೀರಾಮ ನೆಲ್ಲಿರುವನೆಂಬುದೇ ಗೋಚರಿಸುತ್ತಿರಲಿಲ್ಲ. ಇಡೀ ರಣರಂಗದಲ್ಲಿ ಸಾವಿರಾರು ರಾಮರು ಇರಬಹುದೆ?– ಎಂಬ ಭ್ರಮೆಯಿಂದ ರಾಕ್ಷಸಯೋಧರು ಕಂಗೆಟ್ಟರು. ಆ ಮಹಾತ್ಮನು ಗಂಧರ್ವಾಸ್ತ್ರವನ್ನು ಪ್ರಯೋಗಿಸಿ ವೈರಿವಾಹಿನಿಯನ್ನು ಹುರಿದು ಮುಕ್ಕಿ ಧೂಳೆಬ್ಬಿಸಿದನು. ಮಂಡಲಾಕಾರವಾಗಿ ಕೋದಂಡವನ್ನು ಜಗ್ಗಿ ತೆರಪಿಲ್ಲದಂತೆ ಶರಗಳನ್ನು ಸುರಿಸುತ್ತಿದ್ದ ಆತನ ಭೀಷಣಾಕೃತಿಯನ್ನು ನೋಡಿ ಇದೇನು ರಾಮಚಕ್ರವೋ, ಕಾಲಚಕ್ರವೋ ಎಂದು ದೇವತೆಗಳು ಭ್ರಮಿಸಿ ಸಂಮೂಢರಾದರು. ಕ್ಷಣಮಾತ್ರದಲ್ಲಿ ಆ ರಣರಂಗವು ಕಾಲರುದ್ರನ ಸಂಹಾರಲೀಲಾಭೂಮಿಯಂತೆ ಕಂಗೊಳಿಸಿತು. ಅಸಾಧಾರಣವಾದ ಆ ಪರಾಕ್ರಮ ಕೃತ್ಯವನ್ನು ಕಂಡು ದೇವ ಗಂಧರ್ವಾದಿಗಳು ''ಆಹಾ, ಆಶ್ಚರ್ಯ! ಆಶ್ಚರ್ಯ! ಅದ್ಭುತ ಅದ್ಭುತ!'' ಎಂದು ಉದ್ಗರಿಸುತ್ತಿದ್ದರು. ರಾಕ್ಷಸರೆಲ್ಲರೂ ಹತರಾದರು. ಅದೆಲ್ಲವನ್ನೂ ನೋಡುತ್ತಿದ್ದ ಸುಗ್ರೀವ ವಿಭೀಷಣ, ಹನುಮಂತ, ಜಾಂಬವಂತ ಮೊದಲಾದ ನಾಯಕರು ಬೆಕ್ಕಸ ಬೆರಗಾಗಿ ಶ್ರೀರಾಮನ ಬಳಿಗೆ ಬಂದು ನಿಂತರು. ಅವರನ್ನು ನೋಡಿ ಶ್ರೀರಾಮನು ''ಮಿತ್ರರೆ, ದಿವ್ಯವಾದ ಈ ಅಸ್ತ್ರ ಬಲವು ನನಗೊಬ್ಬನಿಗುಂಟು, ಮುಕ್ಕಣ್ಣನಾದ ಪರಮೇಶ್ವರನೊಬ್ಬನಿಗುಂಟು!'' ಎಂದನು. ರಣಕೋವಿದನೂ ಮಹಾತೇಜಸ್ವಿಯು ಆದ ರಾಮನು ರಾಕ್ಷಸವಾಹಿನಿಯನ್ನು ಸಂಹರಿಸಲಾಗಿ ದೇವತೆಗಳು ಹರ್ಷದಿಂದ ಅವನನ್ನು ಸ್ತುತಿಸತೊಡಗಿದರು.

ಈ ಪ್ರಕಾರವಾಗಿ ಅಸಂಖ್ಯಾತರಾದ ರಾಕ್ಷಸರು ಯುದ್ಧದಲ್ಲಿ ಹತರಾಗಲು ಲಂಕೆಯಲ್ಲಿದ್ದ ರಾಕ್ಷಸ ಸ್ತ್ರೀಯರು ದೈನ್ಯದಿಂದ ಗೋಳಾಡತೊಡಗಿದರು. ಅವರಲ್ಲಿ ಕೆಲವರು ಗಂಡಂದಿರನ್ನೂ, ಕೆಲವರು ಸೋದರರನ್ನೂ, ಕೆಲವರು ಮಕ್ಕಳನ್ನೂ ಕಳೆದುಕೊಂಡಿದ್ದರು. ಕೆಲವರ ಬಂಧುಗಳು ನಿರ್ನಾಮವಾಗಿದ್ದರು. ಶೋಕಾರ್ತರಾದ

ಆ ರಾಕ್ಷಸಿಯರು ಒಬ್ಬರೊನ್ನೊಬ್ಬರು ತಬ್ಬಿಕೊಂಡು ಹಲುಬ ತೊಡಗಿದರು – ''ಅಯ್ಯೋ, ಇಷ್ಟೆಲ್ಲ ಕೇಡಿಗೆ ಆ ಶೂರ್ಪಣಖಿಯೇ ಮೂಲ ಕಾರಣ! ಡೊಳ್ಳು ಹೊಟ್ಟೆಯ ಆ ಕುರೂಪಿಗೆ ರಾಮನೆಂಬ ರಾಜಪುತ್ರನಲ್ಲಿ ಕಾಮವುಂಟಾದದ್ದೇ ಇಷ್ಟೆಲ್ಲ ಅನರ್ಥಕ್ಕೆ ಕಾರಣವಾಯಿತು. ಮನ್ಮಥನಂತೆ ರೂಪಶಾಲಿಯಾದ ಆ ರಾಜಪುತ್ರನನ್ನು ಈ ಕರಾಳಿ ಹೇಗೆ ಮೋಹಿಸಿರಬಹುದು? ಸುಕ್ಕು ಚರ್ಮದ ಆ ರಾಕ್ಷಸಿಗೆ ತಲೆ ಗೂದಲೆಲ್ಲವೂ ಬೆಳ್ಳಗಾಗಿದೆ. ಅವಳ ಚಾಡಿಯಿಂದಲ್ಲವೇ ರಾವಣನು ಸೀತೆಯನ್ನು ಅಪಹರಿಸಿ ತಂದದ್ದು. ನಮ್ಮ ರಾಜನೇ ಇಂತಹ ಅಧರ್ಮ ಕೃತ್ಯವನ್ನು ಮಾಡಬಹುದೆ? ಯಾರ ಬುದ್ಧಿವಾದವನ್ನೂ ಇವನು ಕೇಳಲಿಲ್ಲ. ಧರ್ಮಾತ್ಮನಾದ ವಿಭೀಷಣನನ್ನು ಇವನು ಓಡಿಸಿದ್ದಾನೆ. ಪ್ರಹಸ್ತ, ಕುಂಭಕರ್ಣ – ಮೊದಲಾದವರು ಹತರಾದರೂ ಇವನಿಗೆ ಬುದ್ಧಿ ಬಾರದೇ ಹೋಯಿತು. ಇಂದ್ರಜಿತು ಸತ್ತರೂ ಇವನಿಗೆ ಬುದ್ಧಿ ಬರಲಿಲ್ಲ. ಮತ್ತೆ ಯುದ್ಧವನ್ನು ನಡೆಸುತ್ತಲೇ ಇದ್ದಾನೆ. ಇವನು ಮಾಡಿದ ಪಾಪದ ಫಲವನ್ನು ನಾವು ಅನುಭವಿಸಬೇಕಾಯಿತು. ಒಟ್ಟಿನಲ್ಲಿ ನಾವು ದುರ್ದೈವಿಗಳು!'' ಎಂದು ಹಲುಬತೊಡಗಿದರು. ದೈನ್ಯಸ್ವರದಿಂದ ಗಟ್ಟಿಯಾಗಿ ಅತ್ತರು.

೭೦

ರಾವಣನು ಶಕ್ತ್ಯಾಯುಧದಿಂದ ಲಕ್ಷ್ಮಣನನ್ನು ಮೂರ್ಛೆಗೊಳಿಸುವುದು. ಶ್ರೀರಾಮನ ಪ್ರತಿಜ್ಞೆ. ಶ್ರೀರಾಮ ರಾವಣರ ಯುದ್ಧ. ರಾವಣನ ಪಲಾಯನ

ಶೋಕಾರ್ತರಾದ ಆ ರಾಕ್ಷಸಿಯರು ಅಳುತ್ತಿರುವುದು ರಾವಣನಿಗೆ ಕೇಳಿಸಿತು. ಅವನು ದೀರ್ಘವಾಗಿ ನಿಟ್ಟುಸಿರು ಬಿಟ್ಟು ರೋಷಾವಿಷ್ಟನಾದನು. ಸಿಟ್ಟಿನ ಆವೇಶ ದಿಂದ ಮಹೋದರ, ಮಹಾಪಾರ್ಶ್ವ, ವಿರೂಪಾಕ್ಷ ಎಂಬ ಮೂವರು ಸಚಿವರನ್ನು ಕುರಿತು, ''ಸಚಿವರೆ, ನನ್ನ ಎಲ್ಲ ಸೈನಿಕರೂ ಯುದ್ಧಕ್ಕೆ ಹೊರಡಬೇಕೆಂಬ ನನ್ನ ಆಜ್ಞೆ ಯನ್ನು ತಿಳಿಸಿರಿ. ಈ ದಿನ ನನ್ನ ಕೂರ್ಗಣೆಗಳಿಂದ ರಾಮಲಕ್ಷ್ಮಣರನ್ನು ವಧಿಸುವೆನು. ಕಪಿಸೇನೆಯನ್ನು ಕಡೆದು ಈಡಾಡುವೆನು. ಸಮಸ್ತಯೋಧರೂ ನನ್ನನ್ನು ಹಿಂಬಾಲಿಸಲಿ'' ಎಂದು ಆದೇಶಿಸಿದನು. ಅಂತೆಯೇ ರಾಕ್ಷಸಸೇನೆಯು ಸಕಲ ಆಯುಧಗಳನ್ನೂ ಹಿಡಿದು ಯುದ್ಧಸನ್ನದ್ಧವಾಗಿ ಹೊರಟಿತು. ರಾವಣನು ತನ್ನ ದಿವ್ಯರಥವನ್ನು ತರಿಸಿ ಅದನ್ನೇರಿ ರಾಮಲಕ್ಷ್ಮಣರಿದ್ದ ಉತ್ತರದ್ವಾರದ ಮಾರ್ಗಕ್ಕೆ ತೆರಳಿದನು. ಅವನ ಭೀಕರವಾದ

ಕದನವನ್ನು ಎದುರಿಸಲಾರದೆ ಕಪಿಯೋಧರು ಹಿಂಜರಿಯಲಾರಂಭಿಸಿದರು. ಆ ದಶಗ್ರೀವನ ಕೂರ್ಗಣೆಗಳಿಂದ ಕತ್ತರಿಸಲ್ಪಟ್ಟ ವಾನರರ ದೇಹಗಳು ತುಂಡು ತುಂಡಾಗಿ ಎಲ್ಲೆಲ್ಲಿಯೂ ಹರಡಿಹೋದವು. ಇನ್ನೊಂದು ಕಡೆ ಸುಗ್ರೀವನಿಗೂ ವಿರೂಪಾಕ್ಷನಿಗೂ ಬಿರುಸಿನ ಹೊಡೆದಾಟ ನಡೆಯಿತು. ಅತಿ ಘೋರವಾದ ಆ ಯುದ್ಧದಲ್ಲಿ ಸುಗ್ರೀವನು ವಿರೂಪಾಕ್ಷನನ್ನು ಕೊಂದುಹಾಕಿದನು. ಅಷ್ಟರಲ್ಲಿ ಮಹೋದರನು ಸುಗ್ರೀವ ನನ್ನೆದುರಿಸಿದನು. ಹಣಾಹಣಿಯಾಗಿ ನಡೆದ ಆ ಘೋರವಾದ ಹೊಡೆದಾಟದಲ್ಲಿ ವಾನರೇಂದ್ರನಾದ ಸುಗ್ರೀವನು ಮಹೋದರನನ್ನು ಕೊಂದು ಧರೆಯಲ್ಲುರುಳಿಸಿದನು. ದಶಕಂಠನ ಸಚಿವನಾದ ಮಹಾಪಾರ್ಶ್ವನಿಗೂ ಅಂಗದನಿಗೂ ಮತ್ತೊಂದು ಕಡೆ ಯುದ್ಧವು ನಡೆಯುತ್ತಿತ್ತು. ತಂದೆಯಾದ ವಾಲಿಯಂತೆ ಅಸದೃಶಪರಾಕ್ರಮಿಯಾದ ಅಂಗದನು ತನ್ನ ಬಲವಾದ ಮುಷ್ಟಿಯಿಂದ ಮಹಾಪಾರ್ಶ್ವನನ್ನು ಗುದ್ದಿ ಕೊಂದು ಹಾಕಿದನು. ಹೀಗೆ ಮೂವರು ಸಚಿವರೂ ಸತ್ತಮೇಲೆ ಕ್ರೋಧಾವಿಷ್ಟನಾದ ರಾವಣನು ತನ್ನ ಸಾರಥಿಯನ್ನು ಕುರಿತು ''ಸಾರಥಿ, ನಡೆಸು ನನ್ನ ರಥವನ್ನು. ಅದೋ ಅಲ್ಲಿ ರಾಮನಿದ್ದಾನೆ. ಆತನೆದುರಿಗೆ ರಥವು ಸಾಗಲಿ'' ಎಂದು ಆಜ್ಞಾಪಿಸಿದನು. ರಾಕ್ಷಸ ಶಾರ್ದೂಲನಾದ ದಶಕಂಠನು ಅಡ್ಡಗಟ್ಟಿದ ವಾನರ ಯೋಧರನ್ನು ವಿಚ್ಛಿದ್ರಗೊಳಿಸುತ್ತ ಚಂಡಮಾರುತನಂತೆ ನುಗ್ಗಿ ಹೋದನು. ಆಜಾನುಬಾಹುವಾದ ಶ್ರೀರಾಮನು ತನ್ನ ಉನ್ನತವಾದ ಕೋದಂಡವನ್ನೂರಿ ತಮ್ಮನಾದ ಲಕ್ಷ್ಮಣನೊಡನೆ ನಿಂತಿದ್ದನು. ಅವರಿಬ್ಬರೆದುರಿಗೆ ದಶಕಂಠನ ರಥವು ಧಾವಿಸಿತು. ಲಕ್ಷ್ಮಣನು ಮುಂದೆ ನುಗ್ಗಿ ರಾವಣನ ಮೇಲೆ ಶರವರ್ಷಗಳನ್ನು ಸುರಿಸಿದನು. ರಾವಣನು ಅವೆಲ್ಲವನ್ನೂ ಕತ್ತರಿಸಿ ಲಕ್ಷ್ಮಣನನ್ನು ಲೆಕ್ಕಿಸದೆ ಶ್ರೀರಾಮನ ಮೇಲೆ ಅಸ್ತ್ರವನ್ನು ಪ್ರಯೋಗಿಸತೊಡಗಿದನು. ಶ್ರೀರಾಮನಿಗೂ, ರಾವಣನಿಗೂ ಭೀಕರವಾದ ಯುದ್ಧವು ನಡೆಯಿತು. ಅವರಿಬ್ಬರ ದ್ವಂದ್ವಯುದ್ಧವು ಆಶ್ಚರ್ಯಕರವಾಗಿ ಪರಿಣಮಿಸಿತು. ಪ್ರತಿದ್ವಂದ್ವಿಗಳಾದ ಆ ವೀರರ ಬಾಣಗಳು ಅಲೆಅಲೆಯಾಗಿ ತೂರಿಬರುತ್ತಿದ್ದವು. ರಾವಣನು ಹಸ್ತಲಾಘವದಿಂದ ಶ್ರೀರಾಮನ ಹಣೆಗೆ ಬಾಣವನ್ನು ಹೊಡೆದು ನೆಟ್ಟನು. ಆಗ ಸರ್ವಾಸ್ತ್ರ ಕುಶಲನಾದ ಶ್ರೀರಾಮನು ರಾಕ್ಷಸೇಶ್ವರನ ಹಣೆಗೆ ಕ್ರೂರಾಸ್ತ್ರವನ್ನು ಬಿಗಿದನು. ಮಾಯಾವಿಯಾದ ರಾವಣನು ಮಂತ್ರಾಸ್ತ್ರಗಳನ್ನು ಪ್ರಯೋಗಿಸತೊಡಗಿದನು. ಅಗ್ನಿಯಂತೆ ಪ್ರಜ್ವಲಿಸುತ್ತಿದ್ದ ರಘುನಂದನನು ದ್ವಿಗುಣಿತವಾದ ಯುದ್ಧೋತ್ಸಾಹದಿಂದ ತಾನೂ ಮಂತ್ರಾಸ್ತ್ರವನ್ನು ಬಳಸತೊಡಗಿದನು. ರಾವಣನು ಘೋರವಾದ ಆಸುರಾಸ್ತ್ರವನ್ನು ಬಿಡಲಾಗಿ, ರಾಘವನು ಮತ್ತೊಂದು ಪ್ರತ್ಯಸ್ತ್ರದಿಂದ ಆಸುರಾಸ್ತ್ರವನ್ನು ಕತ್ತರಿಸಿದನು. ರಾಕ್ಷಸೇಂದ್ರನ ರೋಷವು ಇಮ್ಮಡಿಸಿತು. ಆ ಪರಾಕ್ರಮಿಗಳೀರ್ವರೂ

ಹೋರಾಡುತ್ತಿರುವಾಗ ವಿಭೀಷಣನು ಅಲ್ಲಿಗೆ ಬಂದನು. ಅವನನ್ನು ಕಂಡೊಡನೆ ದಶಕಂಠನು ಸಿಟ್ಟಿನಿಂದ ಸಿಡಿದೆದ್ದು ಶಕ್ತ್ಯಾಯುಧವನ್ನು ಹಿರಿದು ವಿಭೀಷಣನ ಮೇಲೆ ಪ್ರಯೋಗಿಸಿದನು. ಅಷ್ಟರಲ್ಲಿ ಲಕ್ಷ್ಮಣನು ಹಸ್ತಲಾಘವದಿಂದ ಮೂರು ಸರಳುಗಳನ್ನು ಹೊಡೆದು ಆ ಶಕ್ತಿಯನ್ನು ಮೂರು ತುಂಡಾಗಿ ಕತ್ತರಿಸಿದನು. ರಾವಣನು ಮತ್ತಷ್ಟು ಕ್ರುದ್ಧನಾಗಿ ಬೇರೊಂದು ಮಹಾಶಕ್ತಿಯನ್ನು ಹಿರಿದನು. ವಿಭೀಷಣನ ಗತಿ ಮುಗಿಯಿತೆಂದು ಚಿಂತಿಸಿದ ಲಕ್ಷ್ಮಣನು ಮುನ್ನುಗ್ಗಿ ವಿಭೀಷಣನಿಗೆ ಅಡ್ಡಲಾಗಿ ನಿಂತನು. ಆಗ ರಾವಣನು ''ಶಹಬಾಸ್ ಲಕ್ಷ್ಮಣ, ಶೂರನೆಂದರೆ ನೀನು. ಆ ನೀಚನನ್ನು ಉಳಿಸುವುದಕ್ಕಾಗಿ ಎದುರುಬಂದಿರುವೆ. ಈ ಮಹಾಶಕ್ತಿಯು ನಿನ್ನನ್ನೇ ಮುಗಿಸುವುದು!'' ಎಂದು ಬೊಬ್ಬಿರಿದು ಅದನ್ನು ಎತ್ತಿ ಅಭಿಮಂತ್ರಿಸಿ ಲಕ್ಷ್ಮಣನ ಕಡೆಗೆ ಬೀಸಿದನು. ಸಿಡಿಲಿನಂತೆ ಸಿಡಿದು ಬಂದ ಆ ಮಹಾಶಕ್ತಿಯ ಆರ್ಭಟವನ್ನು ಕಂಡು ಶ್ರೀರಾಮನು ''ಲಕ್ಷ್ಮಣನಿಗೆ ಶಂಭವಾಗಲಿ! ಎಲೈ ಆಯುಧವೆ, ವ್ಯರ್ಥವಾಗು ನೀನು'' ಎಂದು ಉದ್ಗರಿಸಿದನು. ರಾವಣನ ಆ ಮಹಾಶಕ್ತಿಯು ಮಹಾವೇಗದಿಂದ ಬಂದು ಲಕ್ಷ್ಮಣನ ಎದೆಗೆ ತಾಕಿತು. ಲಕ್ಷ್ಮಣನು ಭೂಮಿಯಲ್ಲಿ ಬಿದ್ದನು. ಶ್ರೀರಾಮನು ಒಡನೆಯೇ ಮುಂದೆ ಹೋಗಿ ಲಕ್ಷ್ಮಣನ ಎದೆಗೆ ನಾಟಿದ್ದ ಆ ಮಹಾಸ್ತ್ರವನ್ನು ಕಿತ್ತು ಸಿಟ್ಟಿನಿಂದ ಮುರಿದು ಎಸೆದನು. ಲಕ್ಷ್ಮಣನು ಮೃತನಾದನೆಂದರಿತು ರಾವಣನು ತನ್ನ ರಥವನ್ನು ಕಪಿಸೇನೆಯ ಇನ್ನೊಂದು ಕಡೆಗೆ ಓಡಿಸಿದನು.

ಲಕ್ಷ್ಮಣನು ಮೂರ್ಛಿತನಾಗಿ ಬಿದ್ದುದನ್ನು ಕಂಡು ಶ್ರೀರಾಮನಿಗೆ ದುಃಖವು ಉಮ್ಮಳಿಸಿತು. ಅವನು ಶೋಕಾರ್ತನಾಗಿ ಲಕ್ಷ್ಮಣನನ್ನು ಆಲಂಗಿಸಿಕೊಂಡು ಸ್ವಲ್ಪಹೊತ್ತು ಕಂಬನಿಗರೆದು, ಎಡಬಲಗಳನ್ನು ನೋಡುತ್ತ ಕ್ರೋಧದಿಂದ ಉದ್ದೀಪ್ತನಾದನು. ಸಮೀಪಕ್ಕೆ ಬಂದ ಸುಗ್ರೀವನನ್ನೂ ಹನುಮಂತನನ್ನೂ ನೋಡುತ್ತ ಹೀಗೆಂದನು. ''ವಾನರೋತ್ತಮರೆ, ನೀವೆಲ್ಲರೂ ಲಕ್ಷ್ಮಣನ ಸುತ್ತಲೂ ನಿಂತು ಕಾವಲಾಗಿರಿ. ನನ್ನ ಪರಾಕ್ರಮವನ್ನು ಮೆರೆಸುವ ಸಮಯವು ಈಗ ಒದಗಿ ಬಂದಿದೆ. ದುರುಳನಾದ ದಶಗ್ರೀವನನ್ನು ದಂಡಿಸುವ ಕಾಲವು ಪ್ರಾಪ್ತವಾಗಿದೆ. ವಾನರೋತ್ತಮರೆ, ನನ್ನ ಪ್ರತಿಜ್ಞೆಯನ್ನು ಕೇಳಿ. ರಾಜ್ಯನಾಶ, ವನದಲ್ಲಿ ವಾಸ, ಕಾಡಿನಲ್ಲಿ ಅಲೆದಾಟ, ವೈದೇಹಿಯ ಅಪಹಾರ, ರಾಕ್ಷಸರ ಕಾಟ–ಇಂತಹ ಘೋರಯಾತನೆಗಳನ್ನು ಇದುವರೆಗೆ ಸಹಿಸಿದೆನು. ಈಗ ನನ್ನ ತಮ್ಮ ಸೌಮಿತ್ರಿಯ ಪರಿಸ್ಥಿತಿ ವಿಷಮವಾಗಿದೆ. ಖೂಳನಾದ ರಾವಣನಿಂದ ಇಷ್ಟೆಲ್ಲ ಕಷ್ಟವು ಪ್ರಾಪ್ತವಾಯಿತು. ಕಡಲಿಗೆ ಸೇತುವೆಯನ್ನು ಕಟ್ಟಿ ನಿಮ್ಮೆಲ್ಲರನ್ನೂ ಕರೆದುಕೊಂಡು ಬಂದದ್ದು ಪಾಪಿಯಾದ ಈ ರಾವಣನನ್ನು ಎದುರಿಸುವುದಕ್ಕಾಗಿಯೇ ಅಲ್ಲವೆ? ಎಲೈ ವಾನರ ವೀರರೆ ಕೇಳಿರಿ;

ನೀವೆಲ್ಲರೂ ನನಗಾಗಿ ಕಾದಾಡಿ ಬಹಳ ದಣಿದಿದ್ದೀರಿ. ನೀವೆಲ್ಲರೂ ಪರ್ವತಾಗ್ರದಲ್ಲಿ ಕುಳಿತು ವಿಶ್ರಮಿಸುತ್ತಾ ನನಗೂ ರಾವಣನಿಗೂ ನಡೆಯುವ ಘೋರ ಯುದ್ಧವನ್ನು ನೋಡುತ್ತಿರಿ. ಈ ರಾಮನಲ್ಲಿರುವ ರಾಮತ್ವವೆಂದರೇನೆಂಬುದನ್ನು ಇಂದು ತೋರಿಸಿಬಿಡುತ್ತೇನೆ. ಈ ಜಗತ್ತಿನಲ್ಲಿ ಈದಿನ ರಾಮನೊಬ್ಬನಿರಬೇಕು. ಇಲ್ಲವೇ ರಾವಣನೊಬ್ಬನಿರಬೇಕು. ರಾಮ ರಾವಣರಿಬ್ಬರೂ ಒಟ್ಟಿಗೆ ಬದುಕಿರುವುದಿಲ್ಲ! ಈ ಜಗತ್ತು ಇರುವವರೆಗೂ ರಾಮನ ಯುದ್ಧವು ಎಂಥಹದೆಂಬುದನ್ನು ಸಕಲ ದೇವತೆಗಳೂ ಸಮಸ್ತ ಚರಾಚರಾತ್ಮಕ ಲೋಕಗಳೂ ಹೇಳಿ ಹಾಡಿ ಹೊಗಳಿಕೊಳ್ಳುವಂತಹ ಅದ್ಭುತ ಕೃತ್ಯವನ್ನು ಇಂದು ನಡೆಸುವೆನು! ನೀವು ನೋಡುತ್ತಿರಿ'' ಎಂದು ಘೋಷಿಸಿ ಕೋದಂಡವನ್ನೆತ್ತಿ ಯುದ್ಧಾಭಿಮುಖನಾದನು. ಅಷ್ಟರಲ್ಲಿ ರಾವಣನು ಶ್ರೀರಾಮ ನೊಡನೆ ಕಾದಾಡಬೇಕೆಂದು ತನ್ನ ರಥವನ್ನು ಓಡಿಸುತ್ತ ಬಂದನು. ಅವರಿಬ್ಬರಿಗೂ ಅತಿಘೋರವಾದ ಯುದ್ಧವು ನಡೆಯಿತು. ಅವರ ಕ್ರೂರವಾದ ಶರಗಳು ಆಕಾಶಮಾರ್ಗದಲ್ಲಿ ಸಂಘರ್ಷಿಸಿ, ಧಡ ಧಡಿಲ್, ಠಣ ಠಣಿಲ್ ಎಂಬ ತುಮುಲ ಧ್ವನಿಯನ್ನುಂಟು ಮಾಡಿದವು. ಮಹಾಧೀರನಾದ ಶ್ರೀರಾಮನು ದೀಪ್ತವಾದ ಕೋದಂಡವನ್ನು ಹಿಡಿದು ಅದ್ಭುತವೇಗದಿಂದ ಶರಜಾಲಗಳನ್ನು ತೂರುತ್ತಿರಲು ಅವುಗಳ ಮಹಾರಭಸವನ್ನು ಕಂಡು ರಾವಣನು ಅಂಜಿದನು. ಚಂಡಮಾರುತದ ಧಾಳಿಗೆ ಸಿಕ್ಕಿದ ಮಹಾಮೇಘದಂತೆ ರಣರಂಗದಿಂದ ಹಿಂದಿರುಗಿ ಬೇಗ ಬೇಗನೆ ಲಂಕೆಯ ಕಡೆಗೆ ಧಾವಿಸಿದನು.

೭೧

ಮೂರ್ಛಿತನಾದ ಲಕ್ಷ್ಮಣನನ್ನು ನೋಡಿ ಶ್ರೀರಾಮನ ಶೋಕ. ಹನುಮಂತನು ಮತ್ತೆ ಓಷಧಿಪರ್ವತವನ್ನು ತರುವುದು. ಲಕ್ಷ್ಮಣನು ಚೇತರಿಸಿಕೊಳ್ಳುವುದು. ರಾಮರಾವಣ ಯುದ್ಧ

ರಾವಣನು ಇದ್ದಕ್ಕಿದ್ದಂತೆ ಓಡಿಹೋಗಲಾಗಿ ಶ್ರೀರಾಮನು ಲಕ್ಷ್ಮಣನಿದ್ದಲ್ಲಿಗೆ ಬೇಗ ಬೇಗನೆ ಬಂದನು. ಅವನು ಸುಷೇಣನನ್ನು ನೋಡಿ ''ಸುಷೇಣ, ನನ್ನ ತಮ್ಮನು ನೆಲದಲ್ಲಿ ಬಿದ್ದಿರುವನು, ನೋಡು. ಯಾತನೆಯನ್ನು ತಡೆಯಲಾರದೆ ಇವನು ಹೊರಳಾಡುವುದನ್ನು ಕಂಡು ನನ್ನ ಶೋಕವು ಉಲ್ಬಣಿಸುತ್ತಿದೆ. ನೆತ್ತರಲ್ಲಿ ಮುಳುಗಿರುವ ಪ್ರೀತಿಯ ತಮ್ಮನನ್ನು ನೋಡಿ ನನ್ನ ಮನಸ್ಸು ಕಲಕಿಹೋಗಿದೆ. ನನ್ನ ದೃಷ್ಟಿ ಮಸುಕಾಗುತ್ತಿದೆ. ಕಾಲುಗಳು ಕುಸಿಯುತ್ತಿವೆ. ಶೂರಾಗ್ರಣಿಯಾದ ನನ್ನ ತಮ್ಮನು ಒಂದು ವೇಳೆ ಮೃತನಾದರೆ, ಅಯ್ಯೋ, ನಾನು ಬದುಕಿ ಏನಾಗಬೇಕು? ನನಗೆ ಎಚ್ಚರ

ದಪ್ಪಿದಂತಾಗುತ್ತದೆ'' ಎಂದು ಹೇಳುತ್ತ ತಮ್ಮನ ಬಳಿ ನೆಲಕ್ಕೆ ಕುಸಿದು ಹೋದನು. ಅವನು ಲಕ್ಷ್ಮಣನನ್ನು ನೋಡುತ್ತ ಅಳತೊಡಗಿದನು. ''ಇನ್ನು ಯುದ್ಧವೇಕೆ? ಸೀತೆಯಿಂದ ನನಗೇನಾಗಬೇಕು? ಲಕ್ಷ್ಮಣನು ಹತನಾಗಿ ಮಲಗಿ ಬಿಟ್ಟನಲ್ಲ, ಯಾವ ದೇಶದಲ್ಲಾದರೂ ಮಡದಿಯರು ದೊರಕಬಹುದು. ಬಂಧುಗಳು ಸಿಗಬಹುದು ಒಡಹುಟ್ಟಿದ ತಮ್ಮನು ದೊರಕುವ ಯಾವ ದೇಶವನ್ನೂ ಕಾಣೆ. ನಾನು ಅಯೋಧ್ಯೆಗೆ ಹೇಗೆ ಹಿಂದಿರುಗಲಿ? ಚಿಕ್ಕಮ್ಮನಾದ ಸುಮಿತ್ರೆಯ ಮುಖವನ್ನು ನೋಡುವ ಧೈರ್ಯ ನನಗಿದೆಯೆ? ನನ್ನ ತಾಯಿಯಾದ ಕೌಸಲ್ಯೆಗಾದರೂ ಏನು ಹೇಳುವುದು? ನನ್ನ ಪರಾಕ್ರಮಕ್ಕೆ ಅವಮಾನವಾಯಿತು' ಎಂದು ಹೇಳುತ್ತಾ ಒಂದೇ ಸಮನೆ ಕಣ್ಣೀರು ಸುರಿಸುತ್ತಿದ್ದನು. ''ತಮ್ಮ–ಲಕ್ಷ್ಮಣ, ಮೇಲೇಳು; ಮಾತಾಡು. ಹೀಗೇಕೆ ಮಲಗಿದ್ದೀಯೆ? ನೀನಲ್ಲವೇ ನನ್ನನ್ನು ಸಂತೈಸತಕ್ಕವನು?'' ಎಂದು ವಿಲಪಿಸಿದನು. ಆಗ ಸುಷೇಣನು ಲಕ್ಷ್ಮಣನನ್ನು ಪರೀಕ್ಷಿಸಿ ನೋಡಿ, ''ರಾಘವ, ಲಕ್ಷ್ಮಣನು ಸರ್ವಥಾ ಮೃತನಾಗಿಲ್ಲ. ದುಃಖಿಸಬೇಡ. ಇವನು ಜೀವಂತನಾಗಿದ್ದಾನೆ. ಧೈರ್ಯದಿಂದಿರು'' ಎಂದು ಹೇಳಿದನು. ಸಮೀಪದಲ್ಲಿದ್ದ ಆಂಜನೇಯನನ್ನು ಕರೆದು ಆ ಸುಷೇಣನು ''ಸೌಮ್ಯ–ಹನುಮಂತ, ಓಷಧಿ ಪರ್ವತಕ್ಕೆ ಧಾವಿಸು. ಜಾಂಬವಂತನು ಹಿಂದೆ ಹೇಳಿದ ಆ ದಿವ್ಯಮೂಲಿಕೆಗಳನ್ನು ತೆಗೆದುಕೊಂಡು ಬಾ. ಲಕ್ಷ್ಮಣನ ಪ್ರಾಣವನ್ನುಳಿಸುವುದಕ್ಕೆ ಅವು ಆವಶ್ಯಕ'' ಎಂದನು. ಒಡನೆಯೇ ಆಂಜನೇಯನು ಧೀಂಕಿಟ್ಟು ನೆಗೆದು ಧಾವಿಸಿ ಓಷಧಿ ಪರ್ವತವನ್ನು ಸೇರಿದನು. ಹಿಂದಿನಂತೆಯೇ ಆ ದಿವ್ಯೌಷಧಿಗಳು ಕಾಣದೆ ಹೋದ್ದರಿಂದ ಆ ಮಹಾ ವೀರನು ಪರ್ವತ ಶಿಖರವನ್ನೇ ಕಿತ್ತು ಹೊತ್ತುಕೊಂಡು ಮನೋವೇಗದಿಂದ ಹಾರಿಬಂದು ರಣರಂಗದಲ್ಲಿ ತಂದಿಟ್ಟನು. ಸುಷೇಣನು ಹನುಮಂತನನ್ನು ಹೊಗಳುತ್ತ ಹೋಗಿ ತನಗೆ ಬೇಕಾದ ಮೂಲಿಕೆಗಳನ್ನು ಹುಡುಕಿ ತಂದನು. ಆ ಮೂಲಿಕೆಗಳನ್ನು ಅರೆದು ಅದರ ರಸವನ್ನು ಲಕ್ಷ್ಮಣನ ಮೂಗಿನಲ್ಲಿ ಹಿಂಡಿದನು. ಅಲ್ಲದೆ ಆ ರಸವನ್ನು ಅವನ ಮೈಗೆ ತೊಡೆದನು. ಲಕ್ಷ್ಮಣನ ಯಾತನೆಯೆಲ್ಲವೂ ನೀಗಿತು. ಶೀಘ್ರದಲ್ಲಿ ಅವನು ಮೇಲೆದ್ದು ಕುಳಿತನು. ವಾನರರು ಆನಂದದಿಂದ ''ಭಲಾ! ಸುಷೇಣ, ಭಲಾ!'' ಎಂದು ಸುಷೇಣನನ್ನು ಕೊಂಡಾಡಿದರು. ಶ್ರೀರಾಮನು ಪ್ರೀತಿಯಿಂದ ಲಕ್ಷ್ಮಣನನ್ನು ಅಪ್ಪಿಕೊಂಡನು. ಅವನ ಕಣ್ಣುಗಳಿಂದ ಆನಂದ ಬಾಷ್ಪಗಳುರುಳಿದವು. ಲಕ್ಷ್ಮಣನು ಮೊದಲಿನಂತೆಯೇ ಉತ್ಸಾಹವನ್ನು ತಳೆದು ಶ್ರೀರಾಮನ ಪ್ರೀತಿವಚನಗಳಿಂದ ಸಂತೃಪ್ತನಾಗಿ ಇಂತೆಂದನು. ''ಅಣ್ಣ, ನನಗಾಗಿ ಚಿಂತಿಸಬೇಡ. ಖಿನ್ನನಾಗಬೇಡ. ಉತ್ಸಾಹದಿಂದ ಕಾರ್ಯಸನ್ನದ್ಧನಾಗು'' ಎಂದನು.

ಅಷ್ಟರಲ್ಲಿ ರಾಕ್ಷಸೇಂದ್ರನಾದ ರಾವಣನು ಲಂಕೆಯಲ್ಲಿ ವಿಶ್ರಮಿಸಿಕೊಂಡು

ಬೇರೊಂದು ರಥವನ್ನೇರಿ ಧನುಷ್ಟಂಕಾರ ಮಾಡುತ್ತ ಶ್ರೀರಾಮನಿದ್ದ ಕಡೆಗೆ ಧಾವಿಸಿ ಬಂದನು. ಅವರಿಬ್ಬರಿಗೂ ಅತ್ಯುಗ್ರವಾದ ಕಾಳಗವು ತೊಡಗಿತು. ಆಕಾಶದಲ್ಲಿ ನಿಂತಿದ್ದ ದೇವತೆಗಳು ''ಆಹಾ! ಇದು ಅತಿ ಘೋರವಾದ ಸಂಗ್ರಾಮ. ರಾವಣನು ರಥದಲ್ಲಿದ್ದಾನೆ. ರಾಘವನಾದರೋ ಪಾದಚಾರಿಯಾಗಿದ್ದಾನೆ. ಇದು ಸರಿಯಲ್ಲ'' ಎಂದು ಮಾತಾಡಿಕೊಂಡರು. ಆಗ ದೇವೇಂದ್ರನು ತನ್ನ ಸಾರಥಿಯಾದ ಮಾತಲಿಯನ್ನು ಕರೆದು ''ಮಾತಲಿ, ನೆಲದಮೇಲೆ ನಿಂತು ಯುದ್ಧ ಮಾಡುತ್ತಿರುವ ಆ ರಘುಕುಲೋತ್ತಮನ ಬಳಿಗೆ ನನ್ನ ರಥವನ್ನು ತೆಗೆದುಕೊಂಡು ಹೋಗು. ರಾಘವನಿಗೆ ಸಾಧ್ಯವಾದ ನೆರವು ನೀಡಿ ದೇವಕಾರ್ಯವನ್ನು ಸಾಧಿಸು'' ಎಂದು ಆಜ್ಞಾಪಿಸಿದನು. ಮಾತಲಿಯು ದೇವೇಂದ್ರನಿಗೆ ನಮಸ್ಕರಿಸಿ ''ಪ್ರಭು, ನಿನ್ನ ಆಜ್ಞೆಯಂತೆ ರಥವನ್ನೊಯ್ಯುವೆನು. ಶ್ರೀರಾಮನ ಸಾರಥ್ಯವನ್ನು ನಾನೇ ನಡೆಸುವೆನು'' ಎಂದು ಹೇಳಿ ದಿವ್ಯಾಸ್ತ್ರಗಳನ್ನು ಹೂಡಿದ್ದ ದೇವ ರಥವನ್ನು ತ್ವರೆಯಿಂದ ರಣರಂಗಕ್ಕೆ ತಂದನು. ಇಂದ್ರ ಸಾರಥಿಯು ಶ್ರೀರಾಮನನ್ನು ನೋಡಿ ಕೈಮುಗಿದು ''ಕಾಕುತ್ಸ್ಥ, ನಿನಗೆ ವಿಜಯವಾಗಲಿ. ನಿನ್ನ ನೆರವಿಗಾಗಿ ದೇವೇಂದ್ರನು ಈ ರಥವನ್ನು ಕಳಿಸಿದ್ದಾನೆ. ನಿನ್ನ ಸೇವೆಗೆ ಇದು ಅರ್ಪಿತವಾಗಿದೆ. ಈ ರಥವನ್ನೇರಿ ರಾವಣನನ್ನು ಸಂಹರಿಸು. ನಾನು ಸಾರಥಿಯಾಗಿರುವೆನು'' ಎಂದನು. ಆಗ ಶ್ರೀರಾಮನು ಆ ದಿವ್ಯ ರಥಕ್ಕೆ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ರಥವನ್ನೇರಿದನು. ಮುಂದಿನ ಯುದ್ಧವು ಅದ್ಭುತವಾಗಿ ನಡೆಯಿತು. ಕಡುಗಲಿಗಳಾದ ಶ್ರೀರಾಮ ರಾವಣರ ಯುದ್ಧವು ರೋಮಾಂಚಕರವಾಯಿತು. ರಾವಣನು ಕೂರಂಬುಗಳಿಂದ ಶ್ರೀರಾಮನನ್ನು ನೋಯಿಸಿ ಶರರಾಶಿಯಿಂದ ಮಾತಲಿಗೆ ಹೊಡೆದು ಅಸ್ತ್ರಜಾಲಗಳಿಂದ ಇಂದ್ರನ ದಿವ್ಯಾಶ್ವಗಳನ್ನು ನೋಯಿಸಿ ಕಂಗೆಡಿಸಿದನು. ದಶಗ್ರೀವನ ಶರಪರಂಪರೆಗಳ ಆರ್ಭಟಕ್ಕೆ ಸಿಕ್ಕಿದ ಶ್ರೀರಾಮನ ಹುಬ್ಬುಗಳು ಗಂಟಿಕ್ಕಿದವು. ಕಣ್ಣುಗಳು ಕೆಂಪಡರಿದವು. ಅವನ ಕ್ರೋಧೋದ್ರೇಕವನ್ನು ಕಂಡು ಸಕಲರೂ ಭೀತರಾದರು. ರೋಷಾವಿಷ್ಟನಾದ ರಾಘವನ ದಾರುಣ ಶರಗಳ ಹೊಡೆತವನ್ನು ತಡೆಯಲಾರದೆ ರಾವಣನು ಭೀತನಾದನು. ಆ ರಾಕ್ಷಸೇಂದ್ರನು ಭೀಕರವಾದ ತನ್ನ ಶೂಲವನ್ನು ತುಡಕಿದನು. ಸಿಟ್ಟಿನಿಂದ ಸಿಡಿದೆದ್ದ ಆ ವೀರಾಗ್ರೇಸರನು ತನ್ನ ಮಹಾಶೂಲವನ್ನು ಮೇಲೆತ್ತಿ ಭೈರವನಾದದಿಂದ ಬೊಬ್ಬರಿದು ಶ್ರೀರಾಮನನ್ನು ಒಮ್ಮೆ ನೋಡಿದನು. ಅವನ ಬೊಬ್ಬರಿತವನ್ನು ಕೇಳಿ ಸರ್ವಭೂತಗಳೂ ಹೆದರಿದವು. ಚಂಡಪರಾಕ್ರಮಿಯಾದ ರಾವಣನು ಘೋರಶೂಲವನ್ನು ಎತ್ತಿ ಕಠೋರ ಸ್ವರದಿಂದ ''ಎಲೈ ರಾಮ, ಈ ಶೂಲವು ನಿನ್ನನ್ನೂ ಲಕ್ಷ್ಮಣನನ್ನೂ ತಿಂದು ತೇಗುವುದು'' ಎಂದು ಹೇಳಿ ಶೂಲವನ್ನು ಶ್ರೀರಾಮನ ಮೇಲೆ ರಭಸದಿಂದ ಬೀಸಿದನು. ಅಷ್ಟಘಂಟಾಯುಕ್ತ

ವಾದ ಆ ಶೂಲವು ಮಿಂಚಿನಂತೆ ಮಿಂಚುತ್ತ ಗಗನ ಮಾರ್ಗದಲ್ಲಿ ಭೋರ್ಗರೆಯಿತು. ಶ್ರೀರಾಮನು ಶರರಾಶಿಗಳನ್ನು ಒಂದೇ ಸಮನೆ ಸುರಿದರೂ ಅವೆಲ್ಲವನ್ನೂ ಧ್ವಂಸ ಮಾಡಿ ಶೂಲವು ರಭಸದಿಂದ ಬರುತ್ತಲೇಯಿತ್ತು. ಬಲಾಢ್ಯನಾದ ರಾಘವನು ಇಂದ್ರಪ್ರೇಷಿತವಾದ ಇನ್ನೊಂದು ಶಕ್ತಿಯನ್ನು ಹಿರಿದು ಶೂಲದ ಮೇಲೆ ಪ್ರಯೋಗಿಸಿದನು. ರಭಸದಿಂದ ಸಿಡಿದ ಆ ಶಕ್ತಿಯು ಶೂಲವನ್ನು ಸಂಘಟ್ಟಿಸಿತು. ರಾವಣನ ಆ ಮಹಾಶೂಲವು ಮುರಿದು ತುಂಡಾಗಿ ಕೆಳಗೆ ಬಿತ್ತು. ಮತ್ತೆ ಯುದ್ಧವು ಮುಂದುವರಿಯಿತು. ಕಾಕುತ್ಸ್ಥನ ಬಾಣಗಳ ಜಡಿತದಿಂದ ಕ್ರೋಧೋದ್ರಿಕ್ತನಾದ ರಾವಣನು ತನ್ನ ಕೂರ್ಗಣೆಗಳಿಂದ ರಾಘವನನ್ನು ಮರ್ದಿಸತೊಡಗಿದನು. ರಾವಣನ ಶರಘಾತದಿಂದ ಉದ್ರಿಕ್ತನಾದ ರಾಘವನು ಹೊಳೆಹೊಳೆಯುವ ಸಾಯಕಗಳಿಂದ ರಾವಣನನ್ನು ಥಳಿಸತೊಡಗಿದನು. ಮಹಾಪ್ರಾಜ್ಞನಾದ ಶ್ರೀರಾಮನಿಗೆ ವಿಶ್ವಾಮಿತ್ರರು ಉಪದೇಶಿಸಿದ್ದ ಮಂತ್ರಾಸ್ತ್ರಗಳೆಲ್ಲವೂ ಸ್ಫುರಿಸಿದವು. ಅವನ ಹೊಡೆತಕ್ಕೆ ಸಿಕ್ಕಿದ ರಾವಣನಿಗೆ ಏನು ಮಾಡಬೇಕೆಂದು ತೋರದೆ ದಿಗ್ಭ್ರಮೆ ಹಿಡಿದಂತಾಯಿತು. ಅವನು ಹೊಡೆದ ಅಸ್ತ್ರಗಳೆಲ್ಲವೂ ವಿಫಲವಾದವು. ಏನೂ ತೋರದೆ ಕಂಗೆಟ್ಟು ಮೈಮರೆತಿದ್ದ ರಾವಣನ ಅವಸ್ಥೆಯನ್ನು ಕಂಡು ಸಾರಥಿಯು ಮೆಲ್ಲಗೆ ಅವನ ರಥವನ್ನು ರಣಭೂಮಿಯಿಂದ ಬೇರೆ ಕಡೆಗೆ ಸಾಗಿಸಿದನು.

ತುಸುಹೊತ್ತಿನಲ್ಲಿಯೇ ರಾವಣನು ಚೇತರಿಸಿಕೊಂಡನು. ರಣರಂಗದಿಂದ ದೂರಬಂದಿರುವುದನ್ನು ಕಂಡು ಕ್ರುದ್ಧನಾಗಿ ಕೆಂಗಣ್ಣಿನಿಂದ ಸಾರಥಿಯನ್ನು ನೋಡಿ ''ಎಲಾ ದುಷ್ಟ, ರಥವನ್ನು ಹಿಂದಕ್ಕೆ ತಂದೆಯಾ? ನಾನೊಬ್ಬ ಅಶಕ್ತ-ಹೇಡಿ ಎಂದು ತಿಳಿದೆಯಾ? ಎಲಾ ಅಯೋಗ್ಯ, ನನ್ನನ್ನು ಲೆಕ್ಕಿಸದೆ ನಿನಗೆ ತೋರಿದಂತೆ ಚೇಷ್ಟೆ ಮಾಡುವೆಯಾ? ಚಿರಕಾಲದಿಂದ ನಾನು ಗಳಿಸಿದ ಕೀರ್ತಿಯನ್ನು ನಾಶಗೊಳಿಸಿ ಬಿಟ್ಟೆಯಲ್ಲ. ವಿಖ್ಯಾತ ವೀರನಾದ ವೈರಿಯು ಎದುರಿಗೆ ಬಂದು ನಿಂತಿದ್ದಾನೆ. ಅವನೆದುರಿಗೆ ನನ್ನ ಪರಾಕ್ರಮವನ್ನು ಮೆರೆಸಬೇಕಾದ ಕಾಲ ಇದು. ಎಲಾ ದುರ್ಬುದ್ಧಿಯವನೆ, ರಥವನ್ನೇರಿ ಹಿಂದಕ್ಕೆ ತಂದೆ? ಕೂಡಲೇ ನಡೆಸು ರಥವನ್ನು ರಣರಂಗಕ್ಕೆ'' ಎಂದು ಗರ್ಜಿಸಿದನು. ಆಗ ಸಾರಥಿಯು ವಿನಯದಿಂದ ಕೈಮುಗಿದು ಇಂತೆಂದನು. ಮಹಾರಾಜ, ನಾನು ಯುದ್ಧ ಭೀತನಲ್ಲ. ಬುದ್ಧಿ ಹೀನನೂ ಅಲ್ಲ. ನಿನ್ನ ಕೀರ್ತಿಯನ್ನು ಉಳಿಸಬೇಕೆಂದೇ ರಥವನ್ನಿಲ್ಲಿಗೆ ತಂದೆನು! ಈ ರಥಾಶ್ವಗಳು ರಥವನ್ನು ಎಳೆದೆಳೆದು ದಣಿದಿದ್ದವು. ನಿನ್ನ ಮುಖದಲ್ಲಿ ಉತ್ಸಾಹವೂ ಕಾಣಿಸಲಿಲ್ಲ. ಇದೆಲ್ಲವನ್ನು ಗಮನಿಸಿ ನಿನಗೂ ರಥಾಶ್ವಗಳಿಗೂ ವಿಶ್ರಾಂತಿ ದೊರೆಯಲೆಂದು ನಾನು ಹೀಗೆ ಮಾಡಿದೆನು. ನಾನು ಮಾಡಿದ್ದು ಸ್ವಾಮಿಭಕ್ತಿಯಿಂದಲೇ ಹೊರತು ಬೇರೆ

ಕಾರಣದಿಂದಲ್ಲ, ಪ್ರಭು, ನಾನು ನಿನಗೆ ವಿಧೇಯನಾದ ಸೇವಕ. ನಾನು ತಿಂದ ಉಪ್ಪಿನ ಋಣವನ್ನು ತೀರಿಸಬೇಕೆಂದು ಶ್ರದ್ಧೆಯಿಂದ ನಿನ್ನ ಆಜ್ಞೆಯನ್ನು ಪಾಲಿಸುವೆನು'' ಎಂದು ಅರಿಕೆ ಮಾಡಿದನು. ಸಾರಥಿಯ ಹೇಳಿಕೆಯಿಂದ ಸಂತೃಪ್ತನಾದ ರಾವಣನು ಅವನನ್ನು ಹೊಗಳಿ ''ಸಾರಥಿ, ರಾಮನಿಗೆ ಅಭಿಮುಖವಾಗಿ ರಥವನ್ನು ಓಡಿಸು. ಯುದ್ಧದಲ್ಲಿ ಶತ್ರುವನ್ನು ಕೊಲ್ಲದೆ ಎಂದಿಗೂ ರಾವಣನು ಹಿಂದಿರುಗತಕ್ಕವನಲ್ಲ'' ಎಂದು ಹೇಳಿ ಒಂದು ಹಸ್ತಾಭರಣವನ್ನು ಅವನಿಗೆ ಬಹುಮಾನವಾಗಿ ಕೊಟ್ಟನು. ರಾವಣನ ಆಜ್ಞೆಯಂತೆ ಆ ಸಾರಥಿಯು ರಥಾಶ್ವಗಳನ್ನು ಯುದ್ಧಭೂಮಿಗೆ ದೌಡಾಯಿಸಿದನು.

೭೨

ಅಗಸ್ತ್ಯರು ಶ್ರೀರಾಮನಿಗೆ ಆದಿತ್ಯಹೃದಯವನ್ನು ಉಪದೇಶಿಸುವುದು. ರಾವಣನ ಸಂಹಾರ

ಇತ್ತಲಾಗಿ ಶ್ರೀರಾಮನು ರಾವಣನನ್ನು ಜಯಿಸುವ ಬಗೆ ಯಾವುದೆಂದು ಆಲೋಚಿಸುತ್ತ ನಿಂತಿದ್ದನು. ಆ ಸಮಯದಲ್ಲಿ ಯುದ್ಧವನ್ನು ನೋಡುತ್ತ ದೇವತೆಗಳ ಮಧ್ಯದಲ್ಲಿ ನಿಂತಿದ್ದ ಅಗಸ್ತ್ಯ ಮಹರ್ಷಿಗಳು ಶ್ರೀರಾಮನ ಬಳಿಗೆ ಬಂದರು. ಅವರು ರಾಘವನನ್ನು ಕುರಿತು ''ರಾಮ–ಮಹಾಬಾಹು, ಈ ಸಮಯದಲ್ಲಿ ನಿನಗೆ ಒಂದು ಮಹಾಮಂತ್ರವನ್ನು ಉಪದೇಶಿಸುವೆನು. ಇದಕ್ಕೆ ಆದಿತ್ಯ ಹೃದಯವೆಂದು ಹೆಸರು. ಇದನ್ನು ಮೂರು ಸಲ ಜಪಿಸಿದರೆ ನಿನಗೆ ಯುದ್ಧದಲ್ಲಿ ಜಯ ಲಭಿಸುವುದು'' ಎಂದು ಹೇಳಿ ಆ ಮಂತ್ರವನ್ನು ಉಪದೇಶಿಸಿದರು. ಮಹರ್ಷಿಗಳ ಆದೇಶದಂತೆ ಶ್ರೀರಾಮನು ಮಂತ್ರೋಪದೇಶವನ್ನು ಪಡೆದು ಭಕ್ತಿಯಿಂದ ಜಪಿಸಿದನು. ಆಗ ಸೂರ್ಯದೇವನು ಸಂಪ್ರೀತನಾಗಿ ದೇವತೆಗಳ ಮಧ್ಯದಲ್ಲಿ ಕಾಣಿಸಿಕೊಂಡು ಹರ್ಷದಿಂದ ''ರಾಘವ, ತ್ವರೆಮಾಡು'' ಎಂದು ಹೇಳಿದನು.

ಅಷ್ಟರಲ್ಲಿ ರಾವಣನ ಮಹಾರಥವು ಅದ್ಭುತ ಧ್ವನಿಯಿಂದ ಅಬ್ಬರಿಸುತ್ತಾ ನುಗ್ಗಿ ಬಂದಿತು. ರಘುನಾಥನು ಕೋದಂಡವನ್ನು ಮಿಡಿಯುತ್ತಾ ಮಾತಲಿಯನ್ನು ಕುರಿತು, ''ಮಾತಲಿ, ಅತ್ತ ನೋಡು; ರಾವಣನ ರಥವು ಬರುತ್ತಿದೆ. ನೀನು ಶೀಘ್ರಗತಿಯಿಂದ ನಿನ್ನ ರಥವನ್ನು ನಡೆಸು. ದೇವೇಂದ್ರನ ಸಾರಥಿಯಾಗಿ ಪಳಗಿರುವ ನಿನಗೆ ನಾನು ಹೇಳಬೇಕಾದ್ದೇ ಇಲ್ಲ'' ಎಂದನು. ರಾಮ ರಾವಣರಿಗೆ ಮತ್ತೆ ಇನ್ನೂ ಘೋರವಾದ ಕಾಳಗವು ಮಸೆಯಿತು. ಚಂಡಕೇಸರಿಗಳಂತೆ ಒಬ್ಬರನ್ನೊಬ್ಬರು ವಧಿಸಬೇಕೆಂದು ಅವರೀರ್ವರೂ ಖಾಡಾಖಾಡಿಯಾಗಿ ಹೋರಾಡಿದರು. ಈರ್ವರಿಗೂ ನಡೆದ

ಅತಿಕ್ರೂರವಾದ ಆ ಮಹಾಯುದ್ಧದಿಂದ ಸರ್ವಲೋಕಗಳೂ ತಲ್ಲಣಿಸಿ ತತ್ತರಿಸಿದವು. ರಾಕ್ಷಸ ಸೈನಿಕರೂ ಕಪಿಸೈನಿಕರೂ ಆಯುಧಗಳನ್ನು ಹಿಡಿದು ಎದುರು ಬದುರಾಗಿ ಹೊಡೆದಾಟಕ್ಕೆ ಬಂದಿದ್ದರೂ ರಾಮರಾವಣರ ಯುದ್ಧವನ್ನು ನೋಡುತ್ತಾ ಕಕ್ಕಾಬಿಕ್ಕಿಯಾಗಿ ಸುಮ್ಮನೆ ನಿಂತರು. ಅವರೀರ್ವರ ಹಸ್ತಲಾಘವವನ್ನು ವೀಕ್ಷಿಸಿ ಸರ್ವರೂ ಬೆಕ್ಕಸ ಬೆರಗಾದರು. ಆ ಹೋರಾಟದಲ್ಲಿ ನನಗೆ ಜಯವಾಗುವುದು ಎಂದು ಕಾಕುತ್ಸ್ಥನೂ, ನನಗೆ ಮರಣವಾಗುವುದು ಎಂದು ರಾವಣನೂ ನಿಶ್ಚಯಿಸಿ ಕೊಂಡಂತಿತ್ತು. ದಶಕಂಠನು ಮಾಯಾಬಲದಿಂದ ಗದೆ, ಪರಿಘ, ಚಕ್ರ, ಪರಶು ಮುಂತಾದ ಶಸ್ತ್ರ ಜಾಲಗಳನ್ನು ನಿರ್ಮಿಸಿ ಸುರಿಮಳೆಗರೆದನು. ಅವರೀರ್ವರ ಜಾಜ್ವಲ್ಯಮಾನವಾದ ಶರವರ್ಷದಿಂದ ಆಕಾಶವು ವ್ಯಾಪ್ತವಾಯಿತು. ಅವರೀರ್ವರೂ ತಮ್ಮ ಧನುಸ್ಸುಗಳನ್ನು ಎಡಗೈಯಿಂದ ಬಲಗೈಗೆ ಬಲಗೈಯಿಂದ ಎಡಗೈಗೆ ಬದಲಿಸುತ್ತಾ ನೈಪುಣ್ಯದಿಂದ ಯುದ್ಧ ಮಾಡಿದರು. ಮೈನವಿರೇಳಿಸುವ ಅತಿ ಘೋರವಾದ ದ್ವಂದ್ವ ಯುದ್ಧವು ನಡೆಯಿತು. ರೋಮಾಂಚಕರವಾದ ಆ ಭೀಕರ ಯುದ್ಧವನ್ನು ನೋಡುತ್ತಿದ್ದ ದೇವತೆಗಳೂ, ಋಷಿಗಳೂ, ಸಮಸ್ತ ಪ್ರಜೆಗಳೂ ''ಶುಭವಾಗಲಿ, ಶ್ರೀರಾಮನು ರಾಕ್ಷಸೇಶ್ವರನಾದ ರಾವಣನನ್ನು ಜಯಿಸಲಿ'' ಎಂದು ಜಪಿಸುತ್ತಿದ್ದರು. ಜಗತ್ತಿನಲ್ಲಿ ಅಂತಹ ಯುದ್ಧವನ್ನೇ ಕಂಡರಿಯದ ಗಂಧರ್ವಾದಿಗಳು, ''ಗಗನಕ್ಕೆ ಗಗನವೇ ಸಾಟಿ, ಸಮುದ್ರಕ್ಕೆ ಸಮುದ್ರವೇ ಸಾಟಿ, ರಾಮ ರಾವಣರ ಯುದ್ಧಕ್ಕೆ ರಾಮ ರಾವಣರ ಯುದ್ಧವೇ ಸಾಟಿ !'' ಎಂದು ಉದ್ಗರಿಸಿದರು. ಆ ಸಮಯದಲ್ಲಿ ಶ್ರೀರಾಮನು ಒಂದು ನಿಶಿತಾಸ್ತ್ರವನ್ನು ಪ್ರಯೋಗಿಸಿ ರಾವಣನ ಶಿರಸ್ಸನ್ನು ಕತ್ತರಿಸಿದನು. ಹೊಳೆಯುವ ಕುಂಡಲಗಳಿಂದ ಯುಕ್ತವಾಗಿ ತೇಜಸ್ವಿಯಾಗಿದ್ದ ಆ ಶಿರಸ್ಸು ಭೂಮಿಯಲ್ಲಿ ಬೀಳುವುದನ್ನೇ ಮೂರು ಲೋಕಗಳೂ ನೋಡಿದವು. ಆದರೇನು? ಅದೇ ರೀತಿಯಲ್ಲಿದ್ದ ಮತ್ತೊಂದು ಶಿರಸ್ಸು ರಾವಣನಿಗೆ ಉದ್ಭವಿಸಿತು! ಶ್ರೀರಾಮನು ತಡಮಾಡದೆ ಎರಡನೆಯ ಆ ಶಿರಸ್ಸನ್ನು ಕಡಿದನು. ಕಡಿದೊಡನೆ ಮತ್ತೆ ಆ ಸ್ಥಳದಲ್ಲಿ ಮತ್ತೊಂದು ಶಿರಸ್ಸು ಕಾಣಿಸಿತು! ಹೀಗೆ ನೂರೊಂದು ಸಲ ಬಾಣಗಳನ್ನು ಹೊಡೆದು ಒಂದೇ ಆಕೃತಿಯ ನೂರೊಂದು ಶಿರಸ್ಸುಗಳನ್ನು ದಾಶರಥಿಯು ಕತ್ತರಿಸಿದನು. ರಾವಣನ ಆಯುಸ್ಸಿಗೆ ಅಂತ್ಯವೇ ಕಾಣಿಸಲಿಲ್ಲ. ಚಕಿತನಾದ ಆ ರಘುವೀರನು ''ಎಲಾ ಇದೇನು? ಮಾರೀಚಖರದೂಷಣಾದಿಗಳೂ, ವಾಲಿಯೂ ಯಾವ ಬಾಣಗಳಿಂದ ಹತರಾದರೋ ಆ ತೇಜಸ್ವಿಗಳಾದ ಬಾಣಗಳೇ ಇವು. ಅಪ್ರತಿದ್ವಂದ್ವಗಳಾದ ಈ ಶರಗಳು ರಾವಣನಲ್ಲಿ ತೇಜೋಹೀನವಾಗಿ ವರ್ತಿಸುತ್ತಿವೆ. ಏನು ಕಾರಣವಿರ ಬಹುದು?'' ಎಂದು ಚಿಂತಾಕ್ರಾಂತನಾದನು. ಮತ್ತೆ ಯುದ್ಧವು ಪುನರಾವರ್ತಿಸಿತು.

ರಾಮ ರಾವಣರ ಆ ಯುದ್ಧಕ್ಕೆ ರಾತ್ರಿಯೂ ವಿರಾಮವಿಲ್ಲ, ಹಗಲೂ ಇಲ್ಲ. ಹೀಗೆ ನಡೆಯುತ್ತಿರುವಾಗ ಮಾತಲಿಯು ರಾಘವನನ್ನು ನೋಡಿ ''ಪ್ರಭು-ಶ್ರೀರಾಮ, ನೀನೂ ಸಹ ತಿಳಿಯದವನಂತೆ ಅಸ್ತ್ರಕ್ಕೆ ಪ್ರತ್ಯಸ್ತ್ರವನ್ನು ಹೂಡುತ್ತಾ ಹೀಗೇಕೆ ಯುದ್ಧ ಮಾಡುತ್ತಿರುವೆ? ಇವನ ವಧೆಗಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸು. ಇತರ ಅಸ್ತ್ರಗಳಿಗೆ ಇವನು ಜಗ್ಗುವುದಿಲ್ಲ'' ಎಂದನು. ಆಗ ಶ್ರೀರಾಮನಿಗೆ ಬ್ರಹ್ಮಾಸ್ತ್ರದ ಸ್ಮರಣೆ ಯಾಯಿತು. ಬುಸುಗುಟ್ಟುವ ಸರ್ಪದಂತಿದ್ದ ಆ ಬ್ರಹ್ಮಾಸ್ತ್ರವನ್ನು ರಾಘವನು ಹಿರಿದನು. ತಪಸ್ವಿಗಳಾದ ಅಗಸ್ತ್ಯ ಮಹರ್ಷಿಗಳು ಅದನ್ನು ಶ್ರೀರಾಮನಿಗೆ ಅನುಗ್ರಹಿಸಿದ್ದರು. ಆ ಭೀಕರಾಸ್ತ್ರವನ್ನು ಹಿರಿದು, ವೀರಾಗ್ರಗಣ್ಯನಾದ ಶ್ರೀರಾಮನು ಧನುರ್ವೇದೋಕ್ತವಾದ ವಿಧಿಯಂತೆ ಬ್ರಹ್ಮಾಸ್ತ್ರ ಮಂತ್ರದಿಂದ ಅಭಿಮಂತ್ರಿಸಿ ಧನುಸ್ಸಿಗೆ ಅಳವಡಿಸಿದನು. ರಘುವೀರನು ಆ ಮಹಾಸ್ತ್ರವನ್ನು ಕೋದಂಡಕ್ಕೆ ಜೋಡಿಸಲಾಗಿ ಸಮಸ್ತ ಭೂತ ಜಾತಗಳೂ ಭಯದಿಂದ ನಡುಗಿದವು. ಭೂಮಿಯು ಕಂಪಿಸಿತು. ಅನಂತರ ಶ್ರೀರಾಮನು ಹೆದೆಯನ್ನು ಆಕರ್ಣಾಂತವಾಗಿ ಜಗ್ಗಿ ಸರ್ವಶಕ್ತಿಯನ್ನೂ ವಿನಿಯೋಗಿಸಿ ಆ ಮಹಾಸ್ತ್ರವನ್ನು ರಾವಣನ ಮೇಲೆ ಪ್ರಯೋಗಿಸಿದನು. ಮಹಾವೇಗದಿಂದ ಚಿಮ್ಮಿ ಹೋದ ದುರ್ಧರ್ಷವಾದ ಆ ಅಸ್ತ್ರವು ಕಾಲಮೃತ್ಯುವಿನಂತೆ ರಾವಣನ ಎದೆಗೆ ಬಡಿಯಿತು. ದುರಾತ್ಮನಾದ ರಾವಣನ ಎದೆಯನ್ನು ಸೀಳಿ ರಕ್ತದಲ್ಲಿ ನೆನೆದು ರಾವಣನ ಪ್ರಾಣವನ್ನು ಹಾರಿಸಿ ಭೂತಳದಲ್ಲಿ ನುಗ್ಗಿತು. ಆಮೇಲೆ ರಕ್ತಸಿಕ್ತವಾಗಿ ಹೊಳೆಯುತ್ತ ನೇರವಾಗಿ ಬಂದು ಶ್ರೀರಾಮನ ಬತ್ತಳಿಕೆಯನ್ನು ಸೇರಿತು! ರಾವಣನು ಹತನಾಗಿ ಪ್ರಾಣವನ್ನು ತೊರೆಯುತ್ತಿರುವಾಗ ಸಾಯಕಸಹಿತವಾದ ಅವನ ಧನುಸ್ಸು ಕೈಯಿಂದ ಜಾರಿ ಕೆಳಕ್ಕೆ ಬಿದ್ದಿತು. ಭೀಮ ಪರಾಕ್ರಮಿಯಾದ ಆ ರಾಕ್ಷಸೇಂದ್ರನು, ವಜ್ರಾಯುಧದಿಂದ ಹತನಾದ ವೃತ್ರಾಸುರನಂತೆ ಗತಪ್ರಾಣನಾಗಿ ರಥದಿಂದ ನೆಲಕ್ಕೆ ಬಿದ್ದನು. ತಮ್ಮ ಒಡೆಯನು ಹತನಾದುದನ್ನು ಕಂಡು ರಾಕ್ಷಸ ಸೈನಿಕರು ಹೆದರಿ ಓಡಿಹೋದರು. ವಾನರರು ಅವರನ್ನು ಅಟ್ಟಿಸಿಕೊಂಡು ಹೋದರು.

ಇತ್ತಲಾಗಿ ರಾವಣನು ಹತನಾದುದನ್ನು ಕಂಡು ಪರಮಾನಂದ ಭರಿತರಾದ ವಾನರಯೋಧರು ಶ್ರೀರಾಮನ ವಿಜಯವನ್ನು ಘೋಷಿಸುತ್ತಾ ಸಿಂಹನಾದ ಮಾಡಿದರು. ಅಂತರಿಕ್ಷದಲ್ಲಿ ದೇವ ದುಂಧುಬಿಗಳು ಮೊಳಗಿದವು. ಅಪ್ಸರೆಯರು ಪುಷ್ಪರಾಶಿಗಳನ್ನು ಶ್ರೀರಾಮನ ರಥದ ಮೇಲೆ ಸುರಿದರು. ಸರ್ವಲೋಕ ಭಯಂಕರನಾದ ರಾವಣನು ಹತನಾಗಲು ದೇವತೆಗಳಿಗೆ ಅತ್ಯಾನಂದವಾಯಿತು. ದಿಕ್ಕುಗಳು ಪ್ರಸನ್ನವಾದವು. ಮಾರುತನು ನಿಶ್ಚಿಂತೆಯಿಂದ ಬೀಸತೊಡಗಿದನು. ಸೂರ್ಯನು ನಿರ್ಭಯನಾಗಿ ಬೆಳಗಿದನು. ಸುಗ್ರೀವ ವಿಭೀಷಣಾದಿಗಳೂ ಲಕ್ಷ್ಮಣನೂ

ಸಂತೋಷ ಸಂಭ್ರಮಗಳಿಂದ ಬಂದು, ಜಯಲಕ್ಷ್ಮೀ ವಿರಾಜಿತನಾದ ಶ್ರೀರಾಮನನ್ನು ಸಂಮಾನಿಸಿ ಅಭಿನಂದಿಸಿದರು. ಈ ಪ್ರಕಾರವಾಗಿ ಮಹಾಪ್ರತಾಪಶಾಲಿಯಾದ ರಘುನಂದನನು ತನ್ನ ಪ್ರತಿಜ್ಞೆಯನ್ನು ನೆರವೇರಿಸಿ ಆಪ್ತಜನರಿಂದ ಪರಿವೃತನಾಗಿ, ದೇವತೆಗಳಿಂದ ಪರಿವೃತನಾದ ದೇವೇಂದ್ರನಂತೆ ಶೋಭಿಸುತ್ತಿದ್ದನು.

೭೩

ರಾವಣನ ಸಾವನ್ನು ಕೇಳಿ ಅವನ ಅಂತಃಪುರಸ್ತ್ರೀಯರ ಆಗಮನ. ಮಂಡೋದರಿಯ ಶೋಕ. ವಿಭೀಷಣನು ರಾವಣನ ಉತ್ತರಕ್ರಿಯೆಯನ್ನು ನಡೆಸುವುದು.

ಶ್ರೀರಾಮನಿಂದ ಹತನಾಗಿ ತನ್ನ ಅಣ್ಣನು ಮಲಗಿರುವುದನ್ನು ನೋಡಿ ವಿಭೀಷಣನಿಗೆ ದುಃಖವನ್ನು ತಡೆಯಲಾಗಲಿಲ್ಲ. ಮೊದಲು ಅಣ್ಣನ ಮೇಲೆ ಕ್ರೋಧವುಂಟಾಗಿದ್ದರೂ ಒಡಹುಟ್ಟಿನ ಸಂಬಂಧವು ಅವನ ಕ್ರೋಧವನ್ನೆಲ್ಲಾ ಅಡಗಿಸಿತು. ಆತನು ಹತನಾಗಿಬಿದ್ದ ರಾವಣನ ಬಳಿಗೆ ಹೋಗಿ ಅಳತೊಡಗಿದನು. ''ಅಣ್ಣ, ಅಣ್ಣ, ಓ ಪರಾಕ್ರಮಿ, ಲೋಕವಿಖ್ಯಾತ, ನೀನು ಈ ಪ್ರಕಾರವಾಗಿ ನೆಲದ ಮೇಲೆ ಪವಡಿಸಬೇಕಾಯಿತೆ? ನಾನು ಕೋಪದಿಂದ ಯಾವ ಮಾತನ್ನಾಡಿದೆನೋ ಹಾಗೆಯೇ ನಡೆದುಹೋಯಿತೆ? ನಾನೇನು ಮಾಡಲಿ, ಅಣ್ಣ,? ನನ್ನ ಹಿತೋಕ್ತಿಯನ್ನು ನೀವು ಯಾರೂ ಕೇಳದೇ ಹೋದಿರಿ. ಅಯ್ಯೋ, ಶೌರ್ಯದ ಸಾರವೇ ಹೋಗಿಬಿಟ್ಟಿತು. ಸೂರ್ಯನು ಭೂಮಿಗೆ ಬಿದ್ದಂತಾಯಿತು. ಅಗ್ನಿಯ ಉಷ್ಣತೆ ಅಳಿದಂತಾಯಿತು. ರಾಕ್ಷಸಶಾರ್ದೂಲನಾದ ನೀನು ಮಣ್ಣಲ್ಲಿ ಮಲಗಿದಮೇಲೆ ಇನ್ನೇನುಳಿಯಿತು?'' ಇತ್ಯಾದಿಯಾಗಿ ಹಲುಬುತ್ತ ಗೋಳಾಡಿದನು. ಹೀಗೆ ರೋದಿಸುತ್ತಿದ್ದ ವಿಭೀಷಣನನ್ನು ನೋಡಿ ಶ್ರೀರಾಮನು, ''ವಿಭೀಷಣ, ಶೋಕಿಸಬೇಡ. ಈತನು ತನ್ನ ಅದ್ಭುತವಾದ ಪರಾಕ್ರಮವನ್ನು ಮೆರೆಸಿದ್ದಾನೆ. ಇಂತಹ ವೀರಾಗ್ರಣಿಗಳು ಯುದ್ಧದಲ್ಲಿ ಹತರಾದಾಗ ಶೋಕಿಸಬಾರದು. ಯುದ್ಧದಲ್ಲಿ ಜಯವೇ ಲಭಿಸುವುದೆಂಬ ನಿಶ್ಚಯವಿಲ್ಲ. ವೀರಯೋಧನು ಯುದ್ಧದಲ್ಲಿ ಸತ್ತರೆ ಸದ್ಗತಿಯನ್ನೈದುವನೆಂದು ಶಾಸ್ತ್ರವು ಹೇಳುತ್ತದೆ. ವಿಭೀಷಣ, ನಿನ್ನ ಅಣ್ಣನಿಗಾಗಿ ಹೀಗೆ ಅಳಬೇಡ. ಲೋಕವ್ಯವಸ್ಥೆಯೇ ಹೀಗಿರುತ್ತದೆ. ಆದದ್ದು ಆಗಿಹೋಯಿತು. ಮುಂದೆ ನಡೆಸಬೇಕಾದ ಕಾರ್ಯ ವೇನೆಂಬುದನ್ನು ಪರ್ಯಾಲೋಚಿಸು'' ಎಂದು ಸಂತೈಸಿದನು. ವಿಭೀಷಣನು ''ರಾಘವ, ನನ್ನ ಅಣ್ಣನು ಇಂದ್ರಾದಿದೇವತೆಗಳಿಗೂ ಮಣಿದವನಲ್ಲ. ಈ ವೀರನು ನಿನ್ನನ್ನೆದುರಿಸಿ ಹತನಾಗಿ ಬಿದ್ದನು. ಶ್ರೀರಾಮ, ನನ್ನ ಅಗ್ರಜನು ಸಾಮಾನ್ಯನಲ್ಲ.

ಮಹಾತಪಸ್ವಿ. ಶ್ರೇಷ್ಠನಾದ ಕರ್ಮನಿಷ್ಠ. ವೇದಾಂತದಲ್ಲಿ ನಿಷ್ಣಾತ. ನಿನ್ನ ಅನುಮತಿಯನ್ನು ಪಡೆದು ಈತನ ಪ್ರೇತಕಾರ್ಯವನ್ನು ಮಾಡಬೇಕೆಂದಿದ್ದೇನೆ'' ಎಂದನು. ವಿಭೀಷಣನು ಕಣ್ಣೀರು ಹರಿಸುತ್ತಲೇ ಹೀಗೆ ನುಡಿಯಲಾಗಿ ರಘುನಂದನನು ''ವಿಭೀಷಣ, ನೀನು ಹೇಳುವುದು ಸರಿ. ಈತನ ಅಂತ್ಯೇಷ್ಟಿಯನ್ನು ನಡೆಸು'' ಎಂದನು.

ಇತ್ತಲಾಗಿ ರಾವಣನು ಹತನಾದನೆಂಬ ದುಃಖದ ಸುದ್ದಿಯನ್ನು ಕೇಳಿ ಆತನ ಅಂತಃಪುರದ ಸ್ತ್ರೀಯರು ಅಳುತ್ತ ರಣಭೂಮಿಗೆ ಹೊರಟರು. ಆ ಸ್ತ್ರೀಯರೊಡನೆ ರಾವಣನ ರಾಣಿಯಾದ ಮಂಡೋದರಿಯೂ ಬಂದಳು. ಎಲ್ಲರೂ ಬಂದು ರಾವಣನ ಶವವನ್ನು ನೋಡಿ ಶೋಕಾತಿಶಯದಿಂದ ಹೊರಳಾಡತೊಡಗಿದರು. ಅವರ ರೋದನ ಧ್ವನಿಯು ಗಗನವನ್ನು ವ್ಯಾಪಿಸಿತು. ರಾವಣನ ಪ್ರಿಯತಮೆಯಾದ ಮಂಡೋದರಿಯು ತನ್ನ ಪತಿಯು ಹತನಾದುದನ್ನು ಕಂಡು ಶೋಕಾರ್ತಳಾಗಿ ವಿಲಪಿಸತೊಡಗಿದಳು. ''ಓ ವೀರಾಗ್ರಣಿ, ನಿನ್ನೆದುರಿಗೆ ನಿಲ್ಲಲು ದೇವೇಂದ್ರನೂ ಹೆದರುತ್ತಿದ್ದನಲ್ಲವೆ? ಮೂರು ಲೋಕಗಳನ್ನು ತುಳಿದು ನಿಂತ ನಿನ್ನನ್ನು–ಅಜೇಯನಾದ ನಿನ್ನನ್ನು, ಕಾಡಿನಲ್ಲಿ ಅಲೆದಾಡುತ್ತಿದ್ದ ಒಬ್ಬ ಮನುಷ್ಯನು ಹೇಗೆ ಕೊಂದಿರಬಹುದು? ಇದನ್ನು ನಂಬಬಹುದೆ? ಆ ಮನುಷ್ಯನು ಖರದೂಷಣಾದಿಗಳನ್ನು ಕೊಂದಾಗಲೇ ಆತನು ಸಾಧಾರಣ ಮನುಷ್ಯನಲ್ಲ–ಎಂಬುದು ನಿನಗೆ ತಿಳಿಯದೇ ಹೋಯಿತೆ? ಒಂದು ಕಪಿಯು ಲಂಕೆಯನ್ನು ಕ್ಷೋಭೆಗೊಳಿಸಿ ಹೋಯಿತೆಂದರೆ, ಅದು ಸಾಮಾನ್ಯ ಕಾರ್ಯವೆ? ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದ ಮೇಲೆ ಸಹ ರಾಮನಲ್ಲಿರುವ ಅತಿಶಯವೇನೆಂಬುದು ನಿನಗೆ ಹೊಳೆಯದೇ ಹೋಯಿತಲ್ಲ. ಆತನು ಮನುಷ್ಯ ನಲ್ಲವೆಂದೇ ನಾನು ಊಹಿಸಿದ್ದೆನು. ಓ ನನ್ನ ಸ್ವಾಮಿ, ಏನಾಗಿಹೋಯಿತು? ರಾಮನೆಂಬವನು ಪರಮಾತ್ಮನ ಅವತಾರವೇ ಸರಿ. ಅಲ್ಲದಿದ್ದರೆ ಅವನಿಂದ ನೀನು ಹತನಾಗುವುದೆಂದರೆ ಏನು? ಮಹಾರಾಜ, ನನ್ನ ಕಷ್ಟವನ್ನು ನೋಡು, ನನ್ನ ಗೋಳನ್ನು ಕೇಳುವವರಾರು? ಈ ಸಮಯದಲ್ಲಿ ನೀನು ನನ್ನನ್ನು ಕೈಬಿಟ್ಟೆಯಾ? ಹಿಂದೆ ನೀನು ಇಂದ್ರಿಯಗಳನ್ನು ಜಯಿಸಿ ಜಗತ್ತನ್ನೇ ಜಯಿಸಿದೆ. ಆ ಇಂದ್ರಿಯಗಳೇ ಈಗ ಸೇಡನ್ನು ತೀರಿಸಿಕೊಂಡಿವೆ. ಸೀತೆಯ ಮೋಹಕ್ಕೆ ಒಳಗಾಗಿ ಎಷ್ಟು ಅನರ್ಥಕ್ಕೆ ಗುರಿಯಾದೆ? ಆ ಸಾಧ್ವಿಯನ್ನು ನೀನು ಕೆಣಕಿದ್ದರಿಂದಲೇ ನಿನಗೆ ಈ ಗತಿ ಒದಗಿತು. ಅಂತಹ ಪತಿವ್ರತಾ ಸ್ತ್ರೀಯರನ್ನು ಹಾಗೆ ಗೋಳಾಡಿಸಬಹುದೆ? ಅವಳ ತಪೋಬಲವು ನಿನಗೆ ಮರಣವನ್ನು ತಂದಿತು. ಒಟ್ಟಿನಲ್ಲಿ ನನ್ನ ದುರ್ಭಾಗ್ಯವು ಇಂಥಹದು ಎಂದು ನಾನಾಪ್ರಕಾರವಾಗಿ ಹಲುಬುತ್ತಾ ಅಳತೊಡಗಿದಳು. ಆ ಸ್ತ್ರೀಯರ ರೋದನವು ನಿಲ್ಲುವಂತೆಯೇ ಕಾಣಲಿಲ್ಲ. ಬಹಳ ಹೊತ್ತಿನ ಮೇಲೆ ಶ್ರೀರಾಮನು ವಿಭೀಷಣನನ್ನು ಕುರಿತು

“ವಿಭೀಷಣ, ಇವರೆಲ್ಲರೂ ನನಗೆ ಹೊಸಬರು, ಪರಸ್ತ್ರೀಯರು. ರಾವಣನನ್ನು ಕೊಂದಿರುವ ನಾನು ಇವರನ್ನು ಸಂತೈಸುವುದು ತರವಲ್ಲ. ಆದ್ದರಿಂದ ಈ ಸ್ತ್ರೀಯರಿಗೆ ನೀನು ಸಮಾಧಾನವನ್ನು ಹೇಳಿ ಮನೆಗೆ ಕಳಿಸು. ನಿನ್ನ ಅಣ್ಣನ ಉತ್ತರ ಕ್ರಿಯೆಯನ್ನು ವಿಧಿವತ್ತಾಗಿ ಮಾಡು” ಎಂದನು. ಮನಸ್ಸು ಕಲಕಿ ಹೋದ್ದರಿಂದ ತನ್ನ ಕರ್ತವ್ಯ ವೇನೆಂಬುದನ್ನು ನಿರ್ಣಯಿಸಲಾರದೆ ಹೋದ ವಿಭೀಷಣನು “ರಾಘವ, ಈ ರಾಕ್ಷಸನು ಧರ್ಮದ ಕಟ್ಟಳೆಯನ್ನು ಮೀರಿದವನು. ಕ್ರೂರಸ್ವಭಾವದವನು. ಪರಸ್ತ್ರೀಯರನ್ನು ಬಲಾತ್ಕಾರಿಸಿದ ಪಾಪಿ. ನನಗೆ ಶತ್ರುವಾಗಿ ನಡೆದುಕೊಂಡವನು. ಈ ದುರಾತ್ಮನಿಗೆ ನಾನು ಪ್ರೇತಕಾರ್ಯವನ್ನು ಮಾಡುವುದಿಲ್ಲ!” ಎಂದನು. ಅದಕ್ಕೆ ಧರ್ಮಾತ್ಮನಾದ ಶ್ರೀರಾಮನು “ವಿಭೀಷಣ, ಹೀಗೆ ನುಡಿಯಬಾರದು. ಯಾವ ವೈರವಿದ್ದರೂ ಮರಣಪರ್ಯಂತವೇ ಸರಿ. ಸತ್ತು ಹೋದವರ ಮೇಲೆ ಎಂದಿಗೂ ಕ್ರೋಧವನ್ನು ತೋರಿಸಬಾರದು. ಈತನಿಗೆ ಬಂಧುವಾಗಿ ಉಳಿದವನು ನೀನೊಬ್ಬನೇ. ಎಷ್ಟಾದರೂ ನಿನ್ನ ಒಡಹುಟ್ಟಿದವನು ಇವನು. ಹಿಂದೆ ಮುಂದೆ ನೋಡದೆ ಉತ್ತರಕ್ರಿಯೆಯನ್ನು ಶಾಸ್ತ್ರೋಕ್ತವಾಗಿ ನಡೆಸು. ಇಲ್ಲದಿದ್ದರೆ, ನೋಡು, ನನಗೂ ಈತನು ಅಣ್ಣನೇ ಸರಿ !” ಎಂದನು. ಅನಂತರ ವಿಭೀಷಣನು ಸಮಾಧಾನದಿಂದ ರಾವಣನೇ ಮೊದಲಾದವರ ಉತ್ತರಕ್ರಿಯೆಯನ್ನು ಶಾಸ್ತ್ರೋಕ್ತವಾಗಿ ನಡೆಸಿದನು. ವಿಧಿಪೂರ್ವಕವಾಗಿ ಚಿತೆಗೆ ಬೆಂಕಿಯನ್ನಿಟ್ಟನು. ಸಮುದ್ರದಲ್ಲಿ ಸ್ನಾನಮಾಡಿ ತರ್ಪಣವನ್ನಿತ್ತನು. ಮಂಡೋದರಿ ಮೊದಲಾದ ಸ್ತ್ರೀಯರೆಲ್ಲರೂ ಅಲ್ಲಿಯೇ ಇದ್ದರು. ವಿಭೀಷಣನು ಅವರೆಲ್ಲರನ್ನೂ ಸಂತೈಸಿ ಲಂಕೆಗೆ ಕಳಿಸಿ, ಶ್ರೀರಾಮನ ಬಳಿಗೆ ಬಂದು ನಮಸ್ಕರಿಸಿ ನಿಂತುಕೊಂಡನು.

೭೪

ವಿಭೀಷಣನ ಪಟ್ಟಾಭಿಷೇಕ. ಹನುಮಂತನು ಸೀತೆಗೆ ವಿಜಯವಾರ್ತೆಯನ್ನು ತಿಳಿಸುವುದು. ಶ್ರೀರಾಮನು ಚಿಂತಾಕುಲನಾಗವುದು. ಆತನ ದರ್ಶನಕ್ಕಾಗಿ ಸೀತಾದೇವಿಯ ಆಗಮನ

ಆಕಾಶದಲ್ಲಿ ನೆರೆದಿದ್ದ ದೇವಗಂಧರ್ವಾದಿಗಳು ಇದೆಲ್ಲವನ್ನೂ ನೋಡುತ್ತಿದ್ದರು. ಕಪಿಯೋಧರ ಪರಾಕ್ರಮ, ಸುಗ್ರೀವನ ದಕ್ಷತೆ, ಹನುಮಂತನಿಗೂ ಲಕ್ಷ್ಮಣನಿಗೂ ಶ್ರೀರಾಮನಲ್ಲಿದ್ದ ಪ್ರೇಮಾತಿಶಯ, ಅವರ ಪರಾಕ್ರಮ, ಶ್ರೀರಾಮನ ಅಸಾಧಾರಣ ವಾದ ಯುದ್ಧ ಕೌಶಲ–ಈ ವಿಷಯಗಳನ್ನು ಕುರಿತು ಮಾತಾಡುತ್ತಾ ಅವರು ಸ್ವರ್ಗಲೋಕಕ್ಕೆ ತೆರಳಿದರು. ಇಂದ್ರನು ಕಳಿಸಿದ್ದ ದಿವ್ಯರಥವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವಂತೆ ಶ್ರೀರಾಮನು ಮಾತಲಿಗೆ ತಿಳಿಸಿ ಇಂದ್ರನಿಂದಲೂ

ಮಾತಲಿಯಿಂದಲೂ ಆದ ಉಪಕಾರವನ್ನು ನೆನೆದು ಅವರನ್ನು ಕೊಂಡಾಡಿದನು. ಇಂದ್ರ ಸಾರಥಿಯು ರಾಘವನಿಗೆ ನಮಸ್ಕರಿಸಿ ದಿವ್ಯರಥವನ್ನು ತೆಗೆದುಕೊಂಡು ಹೊರಟುಹೋದನು. ಶ್ರೀರಾಮನೂ ಸುಗ್ರೀವನೂ ಅನ್ಯೋನ್ಯವಾಗಿ ಆಲಂಗಿಸಿ ಕೊಂಡರು. ಅನಂತರ ಕಾಕುತ್ಸ್ಥನು ಸೌಮಿತ್ರಿಯನ್ನು ನೋಡಿ ''ವತ್ಸ–ಲಕ್ಷ್ಮಣ, ವಿಭೀಷಣನು ನಮಗೆ ತುಂಬ ಉಪಕಾರವನ್ನು ಮಾಡಿದ್ದಾನೆ. ಈತನು ನನ್ನಲ್ಲಿ ಅನುರಕ್ತನಾದ ಭಕ್ತನು. ನೀನು ಇವನೊಡನೆ ಲಂಕಾನಗರಿಯನ್ನು ಪ್ರವೇಶಿಸಿ ಈತನಿಗೆ ಪಟ್ಟಾಭಿಷೇಕ ಮಾಡು. ತಮ್ಮ, ವಿಭೀಷಣನು ಲಂಕಾರಾಜ್ಯದಲ್ಲಿ ಅಭಿಷಿಕ್ತ ನಾಗಲೆಂಬುದೇ ನನ್ನ ಅಭಿಲಾಷೆ'' ಎಂದನು.

ಸೌಮಿತ್ರಿಯು ಹರ್ಷದಿಂದ ಆಗಲೆಂದು ನುಡಿದು ವಿಭೀಷಣನೊಡನೆ ಲಂಕೆಗೆ ಹೊರಟನು. ವಾನರೋತ್ತಮರನ್ನು ಕರೆದು, ಅವರಿಗೆ ಸುವರ್ಣ ಕಲಶಗಳನ್ನಿತ್ತು ಅವುಗಳಲ್ಲಿ ಚತುಃಸಮುದ್ರಗಳಿಂದಲೂ ಗಂಗಾದಿಪವಿತ್ರ ನದಿಗಳಿಂದಲೂ ಅಭಿಷೇಕಕ್ಕೆ ಜಲವನ್ನು ತರಬೇಕೆಂದು ಆದೇಶಿಸಿದನು. ಅಂತೆಯೇ ಕಪಿನಾಯಕರು ಧಾವಿಸುತ್ತ ಹೋಗಿ ಪವಿತ್ರಜಲವನ್ನು ತಂದರು. ಲಕ್ಷ್ಮಣನು ಲಂಕೆಗೆ ಹೋಗಿ ರಾಕ್ಷಸ ಸಭಾಮಧ್ಯದಲ್ಲಿ ವಿಭೀಷಣನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದನು. ಪುರೋಹಿತರನ್ನು ಕರೆಸಿ ವೇದೋಕ್ತ ವಿಧಿಯಂತೆ ಆವಶ್ಯಕನಾದ ಕಾರ್ಯಗಳನ್ನು ನೆರವೇರಿಸಿ ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿಸಿದನು. ತಾನೇ ಬಂದು ಕಲಶವನ್ನೆತ್ತಿ ಅಭಿಷೇಕ ಮಾಡಿದನು. ಧರ್ಮಾತ್ಮನೂ, ಶುದ್ಧಾತ್ಮನೂ ಆದ ವಿಭೀಷಣನಿಗೆ ಪಟ್ಟಾಭಿಷೇಕ ವಾಗಲು ಆತನಲ್ಲಿ ಅನುರಾಗವನ್ನಿಟ್ಟಿದ್ದ ಎಲ್ಲ ಸಚಿವರಿಗೂ ಸಮಸ್ತ ರಾಕ್ಷಸ ಪ್ರಜೆಗಳಿಗೂ ಆನಂದವಾಯಿತು. ವಿಭೀಷಣನು ಸಮಯೋಚಿತವಾಗಿ ಮಾತನಾಡಿ ಅಧಿಕಾರಿಗಳನ್ನೂ ಪ್ರಜೆಗಳನ್ನೂ ಸಂತೈಸಿದನು. ಪ್ರಜೆಗಳೆಲ್ಲರೂ ವಿಭೀಷಣನಿಗೆ ನಾನಾ ಬಗೆಯ ಮಂಗಳದ್ರವ್ಯಗಳನ್ನೂ ಕಾಣಿಕೆಗಳನ್ನೂ ಹರ್ಷದಿಂದ ಅರ್ಪಿಸಿದರು. ಅನಂತರ ವಿಭೀಷಣನು ಶ್ರೀರಾಮನ ಬಳಿಗೆ ಬಂದು ಕೆಲವು ಮಂಗಳ ದ್ರವ್ಯಗಳನ್ನು ಆತನಿಗೂ ಲಕ್ಷ್ಮಣನಿಗೂ ಸಮರ್ಪಿಸಿದನು. ವಿಭೀಷಣನಿಗೆ ಪಟ್ಟಾಭಿಷೇಕವಾದದ್ದನ್ನು ತಿಳಿದು ಶ್ರೀರಾಮನಿಗೆ ಆನಂದವಾಯಿತು. ಅವನಿಗೆ ಸಮಾಧಾನವಾಗಲೆಂದು ಮಾತ್ರ ರಾಘವನು ವಿಭೀಷಣನಿತ್ತ ಮಂಗಳದ್ರವ್ಯವನ್ನು ಮುಟ್ಟಿ ಸ್ವೀಕರಿಸಿದನು. ಆಮೇಲೆ ತನ್ನ ಪಾರ್ಶ್ವದಲ್ಲಿ ನಿಂತಿದ್ದ ವೀರಾಗ್ರಗಣ್ಯನಾದ ಹನುಮಂತನನ್ನು ನೋಡಿ ರಾಘವನು ''ಸೌಮ್ಯ–ಆಂಜನೇಯ, ಮಹಾರಾಜನಾದ ವಿಭೀಷಣನ ಅನುಜ್ಞೆಯನ್ನು ಪಡೆದು ಲಂಕೆಗೆ ಹೋಗಿ ಬಾ. ವಿಭೀಷಣನ ಅನುಮತಿಯಿಂದ ಅಶೋಕವನಕ್ಕೆ ಹೋಗಿ ವೈದೇಹಿಗೆ ಈ ವಿಜಯ ವಾರ್ತೆಯನ್ನು ಅರುಹು. ನಾನೂ ಲಕ್ಷ್ಮಣನೂ ಸುಗ್ರೀವನೂ

ಕುಶಲದಿಂದ ಇದ್ದೇವೆಂದು ತಿಳಿಸು. ರಾವಣನನ್ನು ಸಂಹರಿಸಿದ್ದೇನೆಂದು ಹೇಳಿ ಅವಳ ಸಂದೇಶವೇನೆಂಬುದನ್ನು ತಿಳಿದುಕೊಂಡು ಬಾ'' ಎಂದನು.

ಅನಂತರ ಮಾರುತಾತ್ಮಜನು ವಿಭೀಷಣನ ಅನುಜ್ಞೆಯನ್ನು ಪಡೆದು ಅಶೋಕವನಕ್ಕೆ ಹೋಗಿ ಸೀತಾದೇವಿಯನ್ನು ನೋಡಿದನು. ಆ ದೇವಿಯು ಖಿನ್ನಮನಸ್ಕಳಾಗಿ ಮಲಿನಾಂಬರವನ್ನೇ ಉಟ್ಟುಕೊಂಡು ಒಂದು ಮರದ ಬುಡದಲ್ಲಿ ಕುಳಿತಿದ್ದಳು. ಹನುಮಂತನು ತನ್ನ ಹೆಸರನ್ನು ಹೇಳಿ ವೈದೇಹಿಗೆ ನಮಸ್ಕರಿಸಿ ವಿನೀತನಾಗಿ ನಿಂತುಕೊಂಡನು. ವೈದೇಹಿಯು ಅವನನ್ನು ನೋಡಿದರೂ ಧ್ಯಾನಸ್ಥಳಾಗಿ ಸ್ವಲ್ಪ ಹೊತ್ತು ಸುಮ್ಮನಿದ್ದಳು. ಹಿಂದೆ ಬಂದಿದ್ದ ಹನುಮಂತನೇ ಅವನೆಂದು ಗುರುತಿಸಿ ಸಂತೋಷಪಟ್ಟಳು. ಆಂಜನೇಯನು ಅವಳನ್ನು ಕುರಿತು ''ದೇವಿ, ಕುಶಲಿಯಾಗಿದ್ದಾನೆ ಶ್ರೀರಾಮ. ಸುಗ್ರೀವಲಕ್ಷ್ಮಣರೂ ಕ್ಷೇಮದಲ್ಲಿದ್ದಾರೆ. ಶ್ರೀರಾಮನು ರಾವಣನನ್ನು ಸಂಹರಿಸಿ ತನ್ನ ಉದ್ದಿಷ್ಟಕಾರ್ಯದಲ್ಲಿ ಕೃತಕೃತ್ಯನಾಗಿದ್ದಾನೆ. ವಿಭೀಷಣನ ಸಹಾಯದಿಂದ ಲಕ್ಷ್ಮಣನ ಪರಾಕ್ರಮದಿಂದ ಸುಗ್ರೀವಾದಿಗಳ ಸಹಕಾರದಿಂದ ಶ್ರೀರಾಮನು ಜಯಶಾಲಿಯಾಗಿದ್ದಾನೆ. ಅಮ್ಮ, ನನ್ನ ಭಾಗ್ಯದಿಂದ ನೀನು ಬದುಕಿರುವೆ. ನಮಗೆ ಜಯವಾಯಿತು. ಶ್ರೀರಾಮನು ಹೇಳಿಕಳಿಸಿದ ಸಂದೇಶವೇನೆಂದರೆ ''ವೈರಿಯಾದ ರಾವಣನು ಹತನಾದನು. ಲಂಕೆಯು ನಮ್ಮ ವಶವಾಯಿತು. ನಿನ್ನನ್ನು ಬಿಡಿಸಿಕೊಳ್ಳಬೇಕೆಂಬ ಸಂಕಲ್ಪದಿಂದ ನಾನು ನಿದ್ರೆಯನ್ನೂ ತೊರೆದು ಮಹಾಸಾಗರಕ್ಕೆ ಸೇತುವೆಯನ್ನು ಕಟ್ಟಿ, ರಾಕ್ಷಸರನ್ನು ಸಂಹರಿಸಿ ಲಂಕೆಯನ್ನು ವಶಪಡಿಸಿಕೊಂಡಿದ್ದೇನೆ. ಇನ್ನು ಹೆದರಬೇಡ. ವಿಭೀಷಣನು ನಿನ್ನನ್ನು ಕಂಡು ಮಾತಾಡುತ್ತಾನೆ – ಇದಿಷ್ಟು ಶ್ರೀರಾಮನ ಸಂದೇಶ'' ಎಂದನು. ಹನುಮಂತನು ಹೀಗೆಂದೊಡನೆ ಚಂದ್ರಮುಖಿಯಾದ ಜಾನಕಿಯು ಹರ್ಷಾತಿರೇಕದಿಂದ ಎದ್ದು ನಿಂತಳು. ಕಂಠವು ಬಿಗಿದು ಬಂದಿತು. ಬಾಯಿಯಿಂದ ಯಾವ ಮಾತೂ ಹೊರಡಲಿಲ್ಲ. ಹಾಗೆ ನಿಂತಿದ್ದ ದೇವಿಯನ್ನು ನೋಡಿ ಆ ಕಪಿಶ್ರೇಷ್ಠನು ''ತಾಯಿ, ಏನನ್ನು ಆಲೋಚಿಸುತ್ತಿರುವೆ? ಒಂದು ಮಾತನ್ನೂ ನನಗೆ ಹೇಳುವುದಿಲ್ಲವೇಕೆ?'' ಎಂದು ಕೇಳಿದನು. ಆಗ ಜಾನಕಿಯು ಗದ್ಗದ ಸ್ವರದಿಂದ ತೊದಲುತ್ತ ''ಹನುಮಂತ, ನನ್ನ ಪತಿಗೆ ಜಯವಾಯಿತೆಂಬ ಆನಂದದ ಸುದ್ದಿಯನ್ನು ಕೇಳಿ ನಾನು ಹರ್ಷದಿಂದ ಪರವಶಳಾದೆನು. ಮಾತೇ ಹೊರಡದಾಯಿತು. ವಾನರೋತ್ತಮ, ಈ ಪ್ರಿಯ ಸಂದೇಶವನ್ನು ತಂದಿರುವ ನಿನಗೆ ಪಾರಿತೋಷಿಕವಾಗಿ ಕೊಡಬೇಕಾದ ವಸ್ತು ಈ ಜಗತ್ತಿನಲ್ಲಿಯೇ ಇಲ್ಲ. ಈಗ ನನ್ನಲ್ಲಿ ಏನಿದೆ? ಈ ಆನಂದದ ಸುದ್ದಿಗೆ ಸಾಟಿಯಾದದ್ದು ಇನ್ನೊಂದಿಲ್ಲ'' ಎಂದಳು. ಹನುಮಂತನು ''ಅಮ್ಮ, ಪತಿಗೆ ಪ್ರಿಯವನ್ನೂ ಹಿತವನ್ನೂ ಸದಾ ಬಯಸುತ್ತಿರುವ ನಿನಗೆ ಇಷ್ಟು ಆನಂದವಾದದ್ದು

ಸಹಜವೇ ಸರಿ. ಈ ಪರಿಯಲ್ಲಿ ಸಾರವತ್ತಾಗಿಯೂ, ಸ್ನೇಹಪೂರ್ಣನಾಗಿಯೂ ಇರುವ ನಿನ್ನ ನುಡಿಗಿಂತ ಇನ್ನಾವ ಪಾರಿತೋಷಕವು ನನಗೆ ಬೇಕು? ನಿನ್ನ ನುಡಿಯಿಂದಲೇ ನನಗೆ ಸಕಲ ಸೌಭಾಗ್ಯಗಳೂ ದೊರಕಿದಂತಾದವು'' ಎಂದನು. ದೇವಿಯು ''ಆಂಜನೇಯ, ವಾಯುದೇವನಿಗೆ ಅರ್ಹನಾದ ಪುತ್ರನಾಗಿದ್ದೀಯೆ. ವಿದ್ಯೆ, ಪರಾಕ್ರಮ, ಕಾರ್ಯದಕ್ಷತೆ, ತೇಜಸ್ಸು, ತಾಳ್ಮೆ, ಧೈರ್ಯ, ವಿನಯಾದಿಗುಣಗಳು ನಿನ್ನಲ್ಲಿ ನೆಲೆಸಿಬಿಟ್ಟಿವೆ'' ಎಂದಳು. ಅದನ್ನು ಕೇಳಿ ಹನುಮಂತನು ವಿನೀತನಾಗಿ ಕೈಮುಗಿದು ''ಅಮ್ಮ, ನೀನು ಒಪ್ಪುವುದಾದರೆ ಒಂದು ವಿಷಯವನ್ನು ಅರಿಕೆ ಮಾಡುತ್ತೇನೆ. ಈ ರಾಕ್ಷಸಿಯರು ನಿನ್ನನ್ನು ಹೆದರಿಸಿ ಹಿಂಸೆ ಪಡಿಸುತ್ತಿದ್ದರಲ್ಲವೆ? ಸಾಧ್ವಿಯಾದ ನಿನ್ನನ್ನು ಆ ರೀತಿಯಲ್ಲಿ ಪೀಡಿಸಬಹುದೆ? ಕ್ರೂರಿಗಳಾದ ಕೆಟ್ಟಮೋರೆಯ ಈ ರಾಕ್ಷಸಿಯರನ್ನು ಕೊಂದು ಹಾಕುವೆನು. ಮುಷ್ಟಿಯಿಂದ ಗುದ್ದಿ ಕಾಲಿನಿಂದ ಒದೆದು ಮೊಳಕಾಲಿಂದ ತಿವಿದು ಹಲ್ಲುಗಳನ್ನು ದುರಿಸಿ ಉಗುರುಗಳಿಂದ ಪರಚಿ ತರೆಗೂದಲನ್ನು ಕಿತ್ತು ಹಾಕಿ ಚಿತ್ರಹಿಂಸೆಯಿಂದ ಇವರನ್ನು ಬಡಿದು ಸಾಯಿಸುವೆನು. ಇದೇ ನಾನು ಕೇಳಿಕೊಳ್ಳುವ ವರ! ಅನುಮತಿಯನ್ನು ಕೊಡು'' ಎಂದನು. ಧರ್ಮಾತ್ಮಳೂ ಅತ್ಯಂತ ಸಾಧುಸ್ವಭಾವದವಳೂ ಆದ ಜಾನಕಿಯು ''ಅಪ್ಪ – ಹನುಮಂತ, ಇವರೆಲ್ಲರೂ ಪ್ರಭುವಿಗೆ ಅಧೀನರಾಗಿ ನಡೆಯತಕ್ಕವರು; ವಿಧೇಯರಾಗಿ ವರ್ತಿಸುವ ದಾಸಿಯರು. ಇವರು ಒಡೆಯನ ಆಜ್ಞೆಯಂತೆ ನನ್ನನ್ನು ಹಿಂಸಿಸಿರಬಹುದು. ಇವರನ್ನು ದೂರುವುದೇಕೆ? ನನ್ನ ದುಷ್ಕರ್ಮದಿಂದ ಈ ಕಷ್ಟವು ಪ್ರಾಪ್ತವಾಯಿತು. ಹನುಮಂತ, ಜನರು ಕೆಟ್ಟವರಾಗಿರಲಿ ಒಳ್ಳೆಯವರಾಗಿರಲಿ, ವಧಾರ್ಹರೇ ಆಗಿರಲಿ, ಕರುಣೆಯನ್ನು ತೋರುವುದೇ ಸಜ್ಜನರ ಕರ್ತವ್ಯ. ಈ ಲೋಕದಲ್ಲಿ ತಪ್ಪು ಮಾಡದೇ ಇರತಕ್ಕವರು ಯಾರೂ ಇಲ್ಲ. ಆದ್ದರಿಂದ ಇವರಿಗೆ ಕೆಡಕು ಮಾಡುವುದು ಯುಕ್ತವಲ್ಲ'' ಎಂದಳು. ಅದನ್ನು ಕೇಳಿ ಮಾತಾಡುವುದರಲ್ಲಿ ನಿಪುಣನಾದ ಹನುಮಂತನು ''ದೇವಿ, ಶ್ರೀರಾಮಚಂದ್ರನಿಗೆ ಅನುರೂಪಳಾದ ಧರ್ಮಪತ್ನಿ ನೀನು. ನಿನ್ನ ದೊಡ್ಡ ಗುಣಕ್ಕೆ ಸಹಜವಾದ ಮಾತನ್ನಾಡಿದ್ದೀಯೆ. ನೀನೇ ಧನ್ಯಳು. ಈಗ ನಾನು ಶ್ರೀರಾಮನಿದ್ದಲ್ಲಿಗೆ ಹೋಗುವೆನು. ನಿನ್ನ ಸಂದೇಶವೇನು?'' ಎಂದನು. ಜಾನಕಿಯು ''ವಾನರೋತ್ತಮ, ನನ್ನ ಸ್ವಾಮಿಯನ್ನು ನೋಡಲು ಬಯಸುತ್ತೇನೆ'' ಎಂದಿಷ್ಟೇ ಹೇಳಿದಳು. ತೇಜಸ್ವಿಯಾದ ಹನುಮಂತನು ''ಆರ್ಯೆ, ಶೀಘ್ರದಲ್ಲಿಯೇ ನಿನ್ನ ಸ್ವಾಮಿಯನ್ನು ನೋಡುವೆ. ಪೂರ್ಣಚಂದ್ರಮುಖನಾದ ಶ್ರೀರಾಮನು ಲಕ್ಷ್ಮಣಸಮೇತನಾಗಿರುವುದನ್ನು ಕಾಣುವೆ'' ಎಂದು ಹೇಳಿ ಮಹಾಲಕ್ಷ್ಮಿಯಂತೆ ಕಂಗೊಳಿಸುತ್ತಿದ್ದ ಸೀತಾದೇವಿಗೆ ನಮಸ್ಕರಿಸಿ ಶ್ರೀರಾಮನಿದ್ದ ಸ್ಥಳಕ್ಕೆ ಬಂದನು.

ಹನುಮಂತನು ರಾಘವನ ಸಮೀಪಕ್ಕೆ ಬಂದು ''ಪ್ರಭು, ಯಾರಿಗೋಸ್ಕರ ಈ ಮಹೋದ್ಯೋಗದಲ್ಲಿ ತೊಡಗಿದೆಯೋ ಆ ದೇವಿಯನ್ನು ನೀನು ನೋಡಬೇಕು. ಶೋಕದಿಂದ ಬಳಲಿಬೆಂಡಾಗಿರುವ ಸೀತಾದೇವಿಗೆ ದರ್ಶನವನ್ನು ಕೊಡು. ಶ್ರೀರಾಮ, ನಿನ್ನ ವಿಜಯವಾರ್ತೆಯನ್ನು ಕೇಳಿ ಆ ತಾಯಿಗಾದ ಆನಂದಕ್ಕೆ ಪಾರವೇ ಇಲ್ಲ. ಸಂತೋಷ ಸಾಗರದಲ್ಲಿ ಮುಳುಗಿ ಹೋದಳು. ನನ್ನನ್ನು ಹಿಂದೆ ನೋಡಿದ್ದರಿಂದ ನಾನು ಹೇಳಿದ ಮಾತಿನಲ್ಲಿ ಅವಳಿಗೆ ನಂಬಿಕೆಯಾಯಿತು. ವಿಜಯಶಾಲಿಯಾದ ನನ್ನ ಸ್ವಾಮಿಯನ್ನು ನೋಡಲು ಬಯಸುತ್ತೇನೆ–ಎಂದು ಹೇಳಿ ಕಳಿಸಿದ್ದಾಳೆ'' ಎಂದನು. ಹನುಮಂತನ ನುಡಿಯುನ್ನು ಕೇಳಿದೊಡನೆ ಶ್ರೀರಾಮನು ಚಿಂತಾಕುಲನಾಗಿ ಧ್ಯಾನಸ್ಥನಾದನು. ಆತನ ಅಂತರಂಗದಲ್ಲಿ ವಿಧವಿಧವಾದ ವಿಚಾರಗಳು ತಲೆದೋರಿದವು ''ಈಗ ನಾನು ಏನು ಮಾಡಬೇಕು? ಸೀತೆಯನ್ನು ಕಾಣುವ ಬಗೆ ಹೇಗೆ? ಜಯವನ್ನು ಗಳಿಸಿ ನಾನು ಕೃತಕೃತ್ಯನಾದರೂ ಇವಳಿಗಾಗಿ ಎಷ್ಟು ಕಷ್ಟಗಳನ್ನು ಸಹಿಸಬೇಕಾಯಿತು! ಎಷ್ಟು ಜನರಿಗೆ ನನ್ನಿಂದ ಕ್ಲೇಶ ಒದಗಿತು. ಸುಮಾರು ಹತ್ತು ತಿಂಗಳಿಂದ ನಾನೂ, ನನ್ನ ತಮ್ಮ ಲಕ್ಷ್ಮಣನೂ ಎದುರಿಸಿದ ಸಮಸ್ಯೆಗಳಿಗೆ ಪಾರವೇ ಇಲ್ಲ. ಇಂಥ ಗುಣಶಾಲಿಯಾದ ತಮ್ಮನನ್ನು ಅವಳು ದುಡುಕಿ ನಿಂದಿಸಿ ಇಂತಹ ಕಷ್ಟವನ್ನು ತಂದೊಡ್ಡಿದಳು. ತಾನೂ ವಿಪತ್ತಿಗೆ ಸಿಕ್ಕಿದಳು. ವೃದ್ಧನಾದ ಜಟಾಯುವಿನ ವಧೆ ಸೀತೆಯ ನಿಮಿತ್ತದಿಂದಾಯಿತು. ವಾಲಿಯನ್ನು ನಾನು ಕೊಂದದ್ದೂ ಈಕೆಗಾಗಿಯೇ. ಸುಗ್ರೀವನು ಕಪಿಸೇನೆಯೊಡನೆ ಬಂದು ನನಗೆ ನೀಡಿದ ನೆರವಿಗೆ ಎಣೆಯುಂಟೆ? ಹನುಮಂತನ ಅದ್ಭುತನಾದ ಸಾಹಸಕೃತ್ಯವು ಇವಳಿಗಾಗಿಯೇ. ಈ ಯುದ್ಧದಲ್ಲಿ ಅಸಂಖ್ಯಾತ ಕಪಿಗಳು ನನಗೋಸ್ಕರ ಹತರಾದರು, ಎಷ್ಟು ಜನ ರಾಕ್ಷಸರು ಸತ್ತರು! ವಿಭೀಷಣನೊಬ್ಬನನ್ನು ಬಿಟ್ಟು, ರಾವಣನ ವಂಶವೇ ನಿರ್ಮೂಲವಾಯಿತಲ್ಲವೆ? ಲಕ್ಷ್ಮಣನು ಘೋರ ವಿಪತ್ತಿಗೆ ಸಿಕ್ಕಿ ನರಳಿದನು. ಇಷ್ಟೆಲ್ಲ ನಡೆದದ್ದು ಈ ಸೀತೆಗಾಗಿಯೇ. ಇವಳು ಹಠದಿಂದ ನನ್ನೊಡನೆ ಕಾಡಿಗೆ ಬಂದದ್ದೇಕೆ? ಇವಳು ಬರದಿದ್ದರೆ ಎಲ್ಲ ಅನರ್ಥಗಳೂ ತಪ್ಪುತ್ತಿದ್ದವು. ಈಗಲಾದರೂ ನಾನು ಸೀತೆಯನ್ನು ಸ್ವೀಕರಿಸುವುದು ಯುಕ್ತವೆ? ಅಯುಕ್ತವೆ? ಅವಳು ಪತಿವ್ರತೆಯೆಂಬುದೂ ಅತ್ಯಂತ ಪರಿಶುದ್ಧಳೆಂಬುದೂ ನನಗೆ ಚೆನ್ನಾಗಿ ಗೊತ್ತಿದೆ. ಇದರಲ್ಲಿ ಯಾವ ಸಂದೇಹವೂ ಇಲ್ಲವೇ ಇಲ್ಲ. ಆದರೆ ಲೋಕವು ಏನು ಹೇಳುತ್ತದೆ? ಅವಳು ಶುದ್ಧಳೆಂಬುದನ್ನು ಲೋಕವು ನಂಬುತ್ತದೆಯೆ? ತಾರೆ, ರುಮೆ, ಇವರ ಚೆಲ್ಲಾಟವನ್ನು ಕಂಡ ವಾನರರು ನಂಬುತ್ತಾರೆಯೆ? ದೂರದಲ್ಲಿರುವ ಅಯೋಧ್ಯೆಯ ಪ್ರಜೆಗಳಿಗೆ ಸೀತೆಯು ಶುದ್ಧಾತ್ಮಳೆಂಬ ವಿಶ್ವಾಸವು ಮೂಡೀತೆ? ಈಕೆಯುನ್ನು ನಾನು ಸ್ವೀಕರಿಸಿದರೆ, ''ಈ ರಾಮನು ಕೇವಲ

ಕಾಮಿಯಾದವನು. ಒಬ್ಬ ಹೆಂಗಸಿಗಾಗಿ ಮಹಾಯುದ್ಧವನ್ನೇ ನಡೆಸಿಬಿಟ್ಟನು. ಆ ಹೆಂಗಸು ತನ್ನ ಶೀಲವನ್ನು ಕಾಪಾಡಿಕೊಂಡಿದ್ದಾಳೆಯೇ ಇಲ್ಲವೆ–ಎಂಬುದನ್ನು ಕೂಡ ಗಮನಿಸಲಿಲ್ಲ. ರಾವಣನ ಮನೆಯಲ್ಲಿ ಸುಮಾರು ಒಂದು ವರ್ಷದವರೆಗಿದ್ದ ಇವನ ಹೆಂಡತಿ ತನ್ನ ಚಾರಿತ್ರ್ಯವನ್ನು ಉಳಿಸಿಕೊಂಡಿರಲು ಸಾಧ್ಯವೆ? ರಾಮನು ಅತ್ಯಂತ ಬಾಲಿಶ. ಕಾಮಾಂಧನಾಗಿ ಎಷ್ಟು ಜನರಿಗೆ ಕಷ್ಟಗಳನ್ನು ತಂದೊಡ್ಡಿದ!'' ಎಂದು ಜನರು ಆಡಿಕೊಳ್ಳಲಾರರೆ? ಈಗ ಸೀತೆಯನ್ನು ನಾನು ಪರಿತ್ಯಜಿಸಿದರೆ ಅತ್ಯಂತ ಸಾಧ್ವಿಯೂ ನನ್ನನ್ನೇ ನಂಬಿ ಕಾಡಿಗೆ ಬಂದವಳೂ ಆದ ಒಬ್ಬ ಮುಗ್ಧೆಯನ್ನು ತ್ಯಜಿಸಿಬಿಟ್ಟನಲ್ಲ ಎಂಬ ಅಪವಾದವೂ ಬರುತ್ತದೆ. ಇವಳನ್ನು ಪರಿತ್ಯಜಿಸಿದರೆ ಸುಗ್ರೀವಾದಿಗಳು ಏನೆಂದುಕೊಂಡಾರು? ಹನುಮಂತನು ಏನು ಹೇಳಿಯಾನು? ಲಕ್ಷ್ಮಣನು ಹೇಗೆ ಭಾವಿಸಬಹುದು? ನಾವು ಇಷ್ಟು ಕಷ್ಟದಿಂದ ಹೋರಾಡಿದ್ದು ಸೀತೆಯನ್ನು ತ್ಯಜಿಸುವುದಕ್ಕಾಗಿಯೇ? ಎಂದು ಕೇಳಿದರೆ ನಾನು ಯಾವ ಉತ್ತರವನ್ನು ಕೊಡಲಿ? ಸರ್ವಥಾ ನನಗೆ ಕೆಟ್ಟ ಹೆಸರು ತಪ್ಪದು. ಧರ್ಮಕ್ಕಾಗಿ, ಸತ್ಯಕ್ಕಾಗಿ ನಾನಾ ಕ್ಲೇಶಗಳಿಗೆ ಗುರಿಯಾದ ನನಗೆ ಲೋಕಾಪವಾದವು ತಪ್ಪದೇ ಹೋಯಿತು. ಮಹತ್ತರವಾದ ನನ್ನ ಸೂರ್ಯವಂಶಕ್ಕೆ, ದಶರಥ ಮಹಾರಾಜನಿಗೆ, ನಾನು ಕೆಟ್ಟ ಹೆಸರನ್ನು ತಂದೆನು'' – ಇತ್ಯಾದಿ ಆಲೋಚನೆಗಳು ಶ್ರೀರಾಮನ ಮನಸ್ಸಿನಲ್ಲಿ ಪರಂಪರೆಯಾಗಿ ಉದ್ಭವಿಸಿದವು. ಅವನು ಏನೂ ತೋರದೆ ದಿಙ್ಮೂಢನಾದನು. ಕಣ್ಣಲ್ಲಿ ನೀರು ಸುರಿಯಿತು. ಅವನು ದೀರ್ಘವಾಗಿ ನಿಟ್ಟುಸಿರು ಬಿಟ್ಟು ತಲೆಬಗ್ಗಿಸಿ ನೆಲವನ್ನು ನೋಡುತ್ತಾ ವಿಭೀಷಣನಿಗೆ ಇಂತೆಂದನು. ''ವಿಭೀಷಣ, ಸೀತೆಗೆ ಸ್ನಾನವನ್ನು ಮಾಡಿಸಿ ಸ್ವಚ್ಛವಾದ ವಸ್ತ್ರವನ್ನು ಉಡುವಂತೆ ತಿಳಿಸು. ಅಲಂಕೃತಳಾದ ಅವಳನ್ನು ನನ್ನ ಬಳಿಗೆ ಕರೆದುಕೊಂಡು ಬಾ'' ಎಂದು ಬಿಟ್ಟನು. ಅಂತೆಯೇ ವಿಭೀಷಣನು ಲಂಕೆಗೆ ಹೋಗಿ ಅಂತಃಪುರದ ಸ್ತ್ರೀಯರೊಡನೆ ಸೀತಾದೇವಿಯ ಬಳಿಗೆ ಬಂದು ''ವೈದೇಹಿ, ನಿನಗೆ ಶುಭವಾಗಲಿ. ನೀನೀಗ ಸ್ನಾನ ಮಾಡಿ ಸ್ವಚ್ಛವಾದ ಸೀರೆಯನ್ನುಟ್ಟು ಆಭರಣಗಳನ್ನು ಧರಿಸಿ ಪಲ್ಲಕ್ಕಿಯನ್ನೇರು. 'ನಿನ್ನ ಪತಿಯು ನಿನ್ನನ್ನು ನೋಡಬೇಕೆಂದಿರುವನು'' ಎಂದನು. ಆಗ ವೈದೇಹಿಯು ''ರಾಕ್ಷಸೇಂದ್ರ, ನಾನು ಸ್ನಾನ ಮಾಡದೆ ಈಗಿರುವ ಸ್ಥಿತಿಯಲ್ಲಿಯೇ, ಈ ಮಲಿನ ವಸ್ತ್ರವನ್ನು ಉಟ್ಟುಕೊಂಡೇ ನನ್ನ ಪತಿಯನ್ನು ನೋಡಲಿಚ್ಛಿಸುತ್ತೇನೆ'' ಎಂದು ತಿಳಿಸಿದಳು. ವಿಭೀಷಣನು ''ದೇವಿ, ನಮ್ಮೆಲ್ಲರಿಗೆ ಪ್ರಭುವೂ ನಿನ್ನ ಪತಿಯೂ ಆದ ಶ್ರೀರಾಮನು ಆಜ್ಞಾಪಿಸಿರುವಂತೆ ನಡೆಯುವುದು ಯುಕ್ತವಾದುದು. ನೀನು ಸ್ನಾನಮಾಡಿ ಅಲಂಕೃತಳಾಗಿಯೇ ಬರಬೇಕೆಂದು ಅವನು ಸ್ಪಷ್ಟವಾಗಿ ನಿರ್ದೇಶಿಸಿದ್ದಾನೆ'' ಎಂದನು. ಪತಿಯ ಆಜ್ಞೆಯನ್ನು ಮೀರಲು ಸೀತೆಗೆ ಧೈರ್ಯ

ವಾಗಲಿಲ್ಲ. ಪತಿಯೇ ದೇವತೆಯೆಂದು ತಿಳಿದಿದ್ದ ಆ ಸಾಧ್ವಿಯು ಚಿಂತಾಕ್ರಾಂತಳಾಗಿ 'ಆಗಲಿ' ಎಂದಳು. ವಿಭೀಷಣನು ತನ್ನ ಅಂತಃಪುರದಲ್ಲಿದ್ದ ಸ್ತ್ರೀಯರ ಮೂಲಕ ಜಾನಕಿಗೆ ಸ್ನಾನವನ್ನು ಮಾಡಿಸಿ, ದಿವ್ಯ ದುಕೂಲವನ್ನುಡಿಸಿ, ಅಲಂಕರಿಸಿ ಶ್ರೇಷ್ಠವಾದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿದನು. ಆ ವಾಹನಕ್ಕೆ ಒಂದು ಉತ್ತಮವಾದ ಪರದೆಯನ್ನು ಬಳಸಲಾಗಿತ್ತು. ಆಮೇಲೆ ವಿಭೀಷಣನೇ ಸ್ವತಃ ಎದುರಿಗೆ ನಿಂತು ರಾಕ್ಷಸಭಟರ ಕಾವಲಿನೊಡನೆ ಆ ಪಲ್ಲಕ್ಕಿಯನ್ನು ಹೊರಿಸಿಕೊಂಡು ಶ್ರೀರಾಮನ ಬಳಿಗೆ ಹೊರಟನು. ಪಲ್ಲಕ್ಕಿಯನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ವಿಭೀಷಣನು ಕಾಕುತ್ಸ್ಥನ ಬಳಿಗೆ ಹೋದನು. ಸೀತಾದೇವಿಯು ಬಂದ ವೃತ್ತಾಂತವನ್ನು ನಿವೇದಿಸಿದನು. ಆ ಮಾತನ್ನು ಕೇಳಿ ಶ್ರೀರಾಮನಿಗೆ ಹರ್ಷ, ಮರುಕ, ಪಶ್ಚಾತ್ತಾಪ, ಕರುಣೆ, ರೋಷ ಇವೆಲ್ಲವೂ ಏಕ ಕಾಲದಲ್ಲಿ ಉದಿಸಿದವು. ಕಡೆಗೆ ರೋಷವೇ ಪ್ರಬಲವಾಯಿತು. ಆತನ ಮುಖವನ್ನು ನೋಡುತ್ತಿದ್ದ ವಿಭೀಷಣನಿಗೆ ಖೇದವೂ, ಆಶ್ಚರ್ಯವೂ ಉಂಟಾದವು. ಶ್ರೀರಾಮನು ''ವಿಭೀಷಣ, ನನಗೆ ಜಯವಾಗಲೆಂದು ಹಾರೈಸುತ್ತಿದ್ದವನು ನೀನು. ವೈದೇಹಿಯು ನನ್ನೆದುರಿಗೆ ಬರಲಿ'' ಎಂದನು.

೭೫

ಶ್ರೀರಾಮನು ಸೀತಾದೇವಿಗೆ ಕಟುವಚನಗಳನ್ನಾಡುವುದು. ಸೀತಾದೇವಿಯ ಅಗ್ನಿಪ್ರವೇಶ.

ಆಗ ವೈದೇಹಿಯ ಆಗಮನಕ್ಕೆ ಸೌಕರ್ಯವನ್ನು ಕಲ್ಪಿಸುವುದಕ್ಕಾಗಿ ವಿಭೀಷಣನು ಸುತ್ತಲೂ ನೆರೆದವರನ್ನು ದೂರಸರಿಸುವಂತೆ ಸೇವಕರಿಗೆ ಆಜ್ಞಾಪಿಸಿದನು. ಒಡನೆಯೇ ರಾಜಭಟರು ಕೈಯಲ್ಲಿದ್ದ ಬೆತ್ತಗಳನ್ನು ಬೀಸುತ್ತ ದಾರಿಯಲ್ಲಿದ್ದ ವಾನರ ರಾಕ್ಷಸರಿಗೆ ದೂರಹೋಗುವಂತೆ ಎಚ್ಚರಿಕೆ ಕೊಟ್ಟರು. ಸೀತಾದೇವಿಯ ಪಲ್ಲಕ್ಕಿಯು ಬಂದುದರಿಂದ ಅವಳನ್ನು ನೋಡಲು ನುಗ್ಗಿಬರುತ್ತಿದ್ದ ಜನರಲ್ಲಿ ದೊಡ್ಡ ಗದ್ದಲ ಉಂಟಾಯಿತು. ಅದನ್ನು ಸಹಿಸಲಾರದೆ ರಾಘವನು ವಿಭೀಷಣನನ್ನು ಕುರಿತು, ''ವಿಭೀಷಣ, ಆ ಜನರನ್ನು ತಡೆಯುವುದೇಕೆ? ಅವರೆಲ್ಲರೂ ನನಗೆ ಬೇಕಾದವರು. ಹತ್ತಿರ ಬಂದು ಅವಳನ್ನು ನೋಡಲಿ. ಸ್ತ್ರೀಯರಿಗೆ ಶೀಲವೇ ಆವರಣ, ರಾಜಮರ್ಯಾದೆಗಳಲ್ಲ. ದುಃಖಕಾಲ ದಲ್ಲಿ, ವಿಪತ್ತಿನ ಸಂದರ್ಭದಲ್ಲಿ, ಸ್ವಯಂವರ ಸಭೆಯಲ್ಲಿ ಮಹಿಳೆಯರು ಪುರುಷರಿಗೆ ಕಾಣಿಸಿಕೊಂಡರೆ ಯಾವ ದೋಷವೂ ಇಲ್ಲ. ಸೀತೆಯು ಯುದ್ಧಭೂಮಿಯಲ್ಲಿದ್ದಾಳೆ. ಮಹತ್ತರವಾದ ವಿಪತ್ತಿನಲ್ಲಿದ್ದಾಳೆ. ಅವಳು ನನ್ನೆದುರಿಗೆ ಬರುವುದನ್ನು ಸರ್ವರೂ ನೋಡಲಿ. ಇವರೆಲ್ಲರೂ ನಮ್ಮ ಮಿತ್ರರೇ'' ಎಂದನು. ಆ ಮಾತನ್ನು ಕೇಳಿ

ವಿಭೀಷಣನು ಚಿಂತಾಗ್ರಸ್ತನಾದನು. ಶ್ರೀರಾಮನ ಮುಖವನ್ನೂ ಮಾತಿನ ಧಾಟಿಯನ್ನೂ ಗ್ರಹಿಸಿದ ಸುಗ್ರೀವ, ಹನುಮಂತ ಮೊದಲಾದವರು ಬಹಳ ವ್ಯಥೆಪಟ್ಟರು. ಅಣ್ಣನ ಆಶಯವೇನಿರಬಹುದೆಂದು ತಿಳಿಯಲಾರದೆ ಲಕ್ಷ್ಮಣನು ದೈನ್ಯದಿಂದ ವಿಷಣ್ಣನಾದನು. ಅಷ್ಟರಲ್ಲಿ ಸೀತಾದೇವಿಯು ಲಜ್ಜೆಯಿಂದ ತನ್ನ ಗಾತ್ರದಲ್ಲಿಯೇ ಅಡಗಿಹೋಗುವಳೋ ಎಂಬಂತೆ, ನಾಚುತ್ತ ಪತಿಯ ಸಮೀಪಕ್ಕೆ ಬಂದಳು. ಸೀರೆಯ ಸೆರಗಿನಿಂದ ಮುಖವನ್ನು ಸ್ವಲ್ಪ ಮರೆಸಿಕೊಂಡು ಹತ್ತಿರಕ್ಕೆ ಹೋಗಿ "ಆರ್ಯಪುತ್ರ'' ಎಂದಳು. ಅವಳ ಕಣ್ಣುಗಳಿಂದ ಅಶ್ರುಧಾರೆಯು ಬಳ ಬಳನೆ ಹರಿಯಿತು. ಆ ಸಾಧ್ವಿಯು ವಿಸ್ಮಯ, ಆನಂದ, ಪ್ರೇಮ – ಇವುಗಳ ಸಂಮಿಶ್ರಣದಿಂದ ಭಾವಪರವಶಳಾಗಿ ಮುಖವನ್ನೆತ್ತಿ ತನ್ನ ಸ್ವಾಮಿಯ ಮುಖವನ್ನು ನೋಡಿದಳು. ಶ್ರೀರಾಮನು ಕುಶಲಿಯಾಗಿರುವುದನ್ನು ಕಂಡು ಆನಂದದಿಂದ ಹಿಗ್ಗಿದಳು.

ಬಳಿಯಲ್ಲಿ ನಮ್ರಳಾಗಿ ನಿಂತಿದ್ದ ಮೈಥಿಲಿಯನ್ನು ನೋಡಿ ಶ್ರೀರಾಮನು ತನ್ನ ಮನೋವಿಕಾರಗಳನ್ನು ತೋಡಿಕೊಳ್ಳಲಾರಂಭಿಸಿದನು. "ಭದ್ರೆ, ರಣರಂಗದಲ್ಲಿ ನನ್ನ ಪೌರುಷವನ್ನು ಮೆರೆಸಿ ವೈರಿಯನ್ನು ಸಂಹರಿಸಿ ನನ್ನ ಕ್ರೋಧವನ್ನು ತೀರಿಸಿ ಕೊಂಡಿರುವೆನು. ನನಗಾದ ಅವಮಾನವನ್ನೂ ಆ ವೈರಿಯನ್ನೂ ಒಟ್ಟಿಗೆ ತೊಡೆದು ಹಾಕಿರುವೆನು. ನನ್ನ ಶ್ರಮವು ಫಲಿಸಿತು. ಹನುಮಂತನ ಸಮುದ್ರ ಲಂಘನವೂ ಪರಮ ಮಿತ್ರನಾದ ಸುಗ್ರೀವನ ಸಹಾಯವೂ ವೀರ ವಾನರಯೋಧರ ಪರಿಶ್ರಮವೂ ಸಾರ್ಥಕವಾಯಿತು. ಲಕ್ಷ್ಮಣನಿಂದ ನನಗಾದ ಉಪಕಾರವು ಅಷ್ಟಿಷ್ಟಲ್ಲ. ವಿಭೀಷಣನ ಸಹಾಯವೂ ಹೊಗಳತಕ್ಕದ್ದು'' ಎಂದನು. ಪತಿಯು ಹೀಗೆ ನುಡಿಯುತ್ತಿರಲು ಸೀತೆಯು ಆತನ ಆಶಯವೇನೆಂಬುದನ್ನು ಗ್ರಹಿಸಲಾರದೆ ಚಿಂತಾಕುಲಳಾದಳು. ವಾನರರೂ, ರಾಕ್ಷಸರೂ ಉತ್ಸುಕರಾಗಿ ಆಲಿಸುತ್ತಿರುವಾಗಲೇ ಶ್ರೀರಾಮನು "ಸೀತೆ, ಒಟ್ಟಿನಲ್ಲಿ ನನ್ನ ಪರಾಕ್ರಮವನ್ನು ಮೆರೆಸಿ ನಿನ್ನನ್ನು ಸೆರೆಯಿಂದ ಬಿಡಿಸಿದ್ದೇನೆ. ನನ್ನ ವಂಶಕ್ಕೆ ಬಂದ ಅಪವಾದವನ್ನೂ, ನನಗೆ ಅಂಟುತ್ತಿದ್ದ ಅಪಕೀರ್ತಿಯನ್ನೂ ನಿರ್ಮೂಲಗೊಳಿಸು ವುದಕ್ಕಾಗಿ ಈ ಅಸಾಧಾರಣವಾದ ಕಾರ್ಯವನ್ನು ಎಸಗಬೇಕಾಯಿತು. ದೈವವು ತಂದೊಡ್ಡಿದ ವಿಪತ್ತನ್ನು ಪೌರುಷದಿಂದ ಗೆದ್ದಿರುವೆನು. ಇದೆಲ್ಲವೂ ನಿನಗಾಗಿ ಅಲ್ಲ! ನಿನ್ನಿಂದ ನನಗೆ ಆಗಬೇಕಾದದ್ದು ಏನೂ ಇಲ್ಲ. ಪರಗೃಹದಲ್ಲಿ ಬಹುಕಾಲ ನೆಲೆಸಿದ್ದ ತರುಣಿಯೂ ಸುಂದರಿಯೂ ಆದ ಸ್ತ್ರೀಯನ್ನು ಯಾವ ತೇಜಸ್ವಿಯು ಮತ್ತೆ ಪರಿಗ್ರಹಿಸಿಯಾನು? ಅತ್ಯಂತ ಕಾಮಿಯೂ ದುರುಳನೂ ಆದ ರಾವಣನ ವಶದಲ್ಲಿದ್ದ ನೀನು ನಿನ್ನ ಚಾರಿತ್ರವನ್ನು ರಕ್ಷಿಸಿ ಕೊಂಡಿರುವುದು ವಿಶ್ವಾಸಾರ್ಹವಲ್ಲ. ನಿನ್ನಲ್ಲಿ ನನಗೆ ಯಾವ ಆಸಕ್ತಿಯೂ ಇಲ್ಲ. ಹತ್ತು ದಿಕ್ಕುಗಳಿವೆ. ಇಚ್ಛೆ ಬಂದಲ್ಲಿಗೆ ನೀನು

ಹೊರಟುಹೋಗಬಹುದು'' ಎಂದು ಹೇಳಿಬಿಟ್ಟನು.

ಪತಿವ್ರತಾ ಶಿರೋಮಣಿಯಾದ ಮೈಥಿಲಿಗೆ ದಿಕ್ಕು ತೋರದಾಯಿತು. ತನ್ನ ಪತಿಯು ಇಂಥ ನಿಷ್ಠುರವಾಕ್ಯಗಳನ್ನು ಆಡುವನೆಂದು ಅವಳು ಕನಸಿನಲ್ಲಿಯೂ ಎಣಿಸಿರಲಿಲ್ಲ. ಅವಳ ನೇತ್ರಗಳಿಂದ ಕಣ್ಣೀರು ಬಳಬಳ ಉದುರಿತು. ಬಿರುಗಾಳಿಗೆ ಸಿಕ್ಕಿದ ಬಳ್ಳಿಯಂತೆ ಥರಥರ ನಡುಗಿದಳು. ಮೈನವಿರೇಳಿಸುವ ಕಠೋರವಾದ ಆ ಒರಟು ಮಾತನ್ನು ಕೇಳಿ ನೆರೆದಿದ್ದ ಮಹಾಜನರೆದುರಿಗೆ ಅವಳು ಲಜ್ಜೆಯಿಂದ ಕುಸಿದು ಹೋದಳು. ಗಳಗಳನೆ ಕಣ್ಣೀರುಕೋಡಿಯನ್ನು ಹರಿಸುತ್ತಾ ಮೆಲ್ಲಗೆ ದೈನ್ಯ ಸ್ವರದಿಂದ ಪತಿಯನ್ನುದ್ದೇಶಿಸಿ ಹೀಗೆಂದಳು. ''ಕಿವಿಯನ್ನು ಸೀಳುವಂತಹ ಈ ಕಠೋರವಾದ ಮಾತನ್ನು ನೀನು ಹೇಳಬಹುದೆ? ಹೇ ವೀರಾಗ್ರಣಿ, ವಿದ್ಯಾವಿನೀತನಾದ ನೀನು ಸಂಸ್ಕೃತಿಯ ಲೇಶವೂ ಇಲ್ಲದವನು ಆಡುವ ಮಾತನ್ನು ಆಡಬಹುದೆ? ಸಂಸ್ಕೃತಿ ಹೀನಳಾದ ಬೀದಿಯ ಹೆಂಗಸಿಗೆ ಹೇಳುವ ಮಾತನ್ನು ನನಗೆ ಆಡುವೆಯಾ? ಕೀಳು ಹೆಂಗಸರ ನಡತೆಯನ್ನು ಕಂಡು ನನ್ನನ್ನು ಹೀಗೆ ಶಂಕಿಸುವುದು ನಿನಗೆ ತರವಲ್ಲ. ಓ ಮಹಾಬಾಹು, ನನ್ನ ಚಾರಿತ್ರ್ಯದ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ಈ ಶಂಕೆಯನ್ನು ದೂರಮಾಡು. ನನ್ನ ನಡತೆಯನ್ನು ನೀನು ಕಂಡವನಲ್ಲವೆ? ಇಷ್ಟು ವರ್ಷಗಳವರೆಗೆ ಅರಮನೆಯಲ್ಲಿ ಸುಖವಾಗಿದ್ದಾಗಲೂ, ಕಾಡಿನಲ್ಲಿ ನವೆಯುತ್ತಿದ್ದಾಗಲೂ ನನ್ನ ನಡತೆಯಲ್ಲಿ ಏನಾದರೂ ಬದಲಾವಣೆ ನಿನಗೆ ಕಂಡದ್ದುಂಟೆ? ಓ ನನ್ನ ಸ್ವಾಮಿಯೆ, ನಾನು ದಿಕ್ಕಿಲ್ಲದೆ ಪರಾಧೀನಳಾಗಿದ್ದಾಗ ಆ ರಾಕ್ಷಸನು ನನ್ನನ್ನು ಸ್ಪರ್ಶಿಸಿರಬಹುದು ಅಷ್ಟೆ. ಅದರಲ್ಲಿ ನನ್ನ ಇಚ್ಛೆ ಏನಿದೆ? ನನ್ನ ಹೃದಯವು ಮಾತ್ರ ಸದಾ ನಿನ್ನಲ್ಲಿಯೇ ನೆಲೆಸಿದೆ. ಆರ್ಯಪುತ್ರ, ದೀರ್ಘಕಾಲದವರೆಗೆ ನಿನ್ನ ಒಡನಾಡಿಯಾದ ನನ್ನ ಶೀಲವು ನಿನಗೆ ತಿಳಿದಿಲ್ಲವಾದರೆ, ಅಯ್ಯೋ, ನಾನು ಕೆಟ್ಟೆನು. ವಾನರೋತ್ತಮನಾದ ಹನುಮಂತನನ್ನು ಕಳಿಸಿದ್ದೆಯಲ್ಲ, ಆಗಲೇ ಈ ಮಾತನ್ನು ತಿಳಿಸಿದ್ದರೆ ಇದುವರೆಗೆ ನಾನು ಬದುಕಿರುತ್ತಲೇ ಇರಲಿಲ್ಲ. ನಿನಗೆ ಯುದ್ಧದ ಪ್ರಯಾಸವೂ ಬರುತ್ತಿರಲಿಲ್ಲ. ಹೇ ಪುರುಷೋತ್ತಮ, ಹೆಂಗಸರು ಚಂಚಲ ಸ್ವಭಾವದವರು–ಎಂಬ ನಂಬಿಕೆಯನ್ನು ಮಾತ್ರ ಮುಂದಿಟ್ಟು ಮಾತಾಡುತ್ತಿದ್ದೀಯೆ. ವಿದೇಹಾಧಿಪತಿಯೂ ವಿಖ್ಯಾತ ಗುಣಶಾಲಿಯೂ ಆದ ಜನಕಮಹಾರಾಜನ ಮಗಳು ನಾನು. ಬಾಲೆಯಾಗಿದ್ದ ನನ್ನನ್ನು ಕೈಹಿಡಿದು ಇಷ್ಟುಕಾಲವು ಸಂದರೂ ನನ್ನ ಗುಣವೇನೆಂಬುದು ನಿನ್ನ ಅರಿವಿಗೆ ಬಾರದೇ ಹೋಯಿತೆ? ಅಗ್ನಿಸಾಕ್ಷಿಕವಾಗಿ ಹಿಡಿದ ಕೈ ನಿನಗೆ ಪ್ರಮಾಣವಾಗಲಿಲ್ಲ. ನನ್ನ ಭಕ್ತಿಯನ್ನೂ, ನನ್ನ ಪ್ರೇಮವನ್ನೂ, ನನ್ನ ಗುಣಸ್ವಭಾವಗಳನ್ನೂ ಲೆಕ್ಕಿಸದೆ ಧಿಕ್ಕರಿಸಿ ಮಾತನಾಡಿದ್ದೀಯೆ'' ಎಂದು ನುಡಿದು ಬಿಕ್ಕಿ ಬಿಕ್ಕಿ ಅತ್ತಳು. ರಾಘವನ ಮುಖದಲ್ಲಿ

ಯಾವ ಬದಲಾವಣೆಯೂ ಕಾಣಲಿಲ್ಲ. ಲಕ್ಷ್ಮಣನ ಕಡೆಗೆ ತಿರುಗಿದಳು. ಅವನು ದೈನ್ಯದಿಂದ ದಕ್ಕುತೋರದೆ ನಿಂತಿದ್ದನು. ವೈಥಿಲಿಯು ''ಲಕ್ಷ್ಮಣ, ಕಡೆಯದಾಗಿ ನನಗೊಂದು ಉಪಕಾರವನ್ನು ಮಾಡು. ಒಂದು ಚಿತೆಯನ್ನು ನಿರ್ಮಿಸಿ ಕೊಡು. ಈ ಅಪವಾದವನ್ನು ಹೊತ್ತು ನಾನು ಜೀವಿಸಲಾರೆ. ನನ್ನ ಶೀಲವನ್ನು ಶಂಕಿಸಿ ನನ್ನ ಸ್ವಾಮಿಯು ಈ ಮಹಾಜನರೆದುರಿಗೆ ಪರಿತ್ಯಜಿಸಿದ ಮೇಲೆ ನನಗಿರುವ ಗತಿ ಒಂದೇ – ಅಗ್ನಿಯಲ್ಲಿ ಬೀಳುವೆನು'' ಎಂದಳು.

ಅಣ್ಣನಾಡಿದ ಮಾತು ಲಕ್ಷ್ಮಣನಿಗೆ ರುಚಿಸಲಿಲ್ಲ. ಆದರೂ ಎದುರಿಸಿ ಮಾತನಾಡದೆ ಅವನ ಮುಖವನ್ನೇ ಮತ್ತೆ ಮತ್ತೆ ನೋಡಿದನು. ರಾಘವನು ಭ್ರೂಸಂಜ್ಞೆಯಿಂದ ಚಿತೆಯನ್ನು ನಿರ್ಮಿಸುವಂತೆ ಲಕ್ಷ್ಮಣನಿಗೆ ಸೂಚಿಸಿದನು. ಶೋಕಾರ್ತನಾದ ಲಕ್ಷ್ಮಣನು ಬೇರೆದಾರಿಯಿಲ್ಲದೆ ಸಂಕಟಪಡುತ್ತಲೇ ಚಿತೆಯೊಂದನ್ನು ನಿರ್ಮಿಸಿದನು. ಅದಕ್ಕೆ ಉರಿಯನ್ನು ಹಚ್ಚುವಂತೆ ಸೀತಾದೇವಿಯು ಕೇಳಿಕೊಂಡಳು. ಬೆಂಕಿಯನ್ನು ಹತ್ತಿಸಲಾಯಿತು. ತಲೆತಗ್ಗಿಸಿ ನಿಂತಿದ್ದ ತನ್ನ ಪತಿಯನ್ನು ಸೀತಾದೇವಿಯು ಪ್ರದಕ್ಷಿಣೆ ಮಾಡಿ ವಂದಿಸಿ ಉರಿಯುತ್ತಿದ್ದ ಚಿತೆಯ ಬಳಿಗೆ ಬಂದಳು. ಕೈಮುಗಿದುಕೊಂಡು ಎಲ್ಲ ದೇವತೆಗಳಿಗೂ ಬ್ರಹ್ಮಜ್ಞಾನಿಗಳಾದ ಮಹರ್ಷಿಗಳಿಗೂ ಮನಸ್ಸಿನಲ್ಲಿಯೇ ನಮಸ್ಕರಿಸಿದಳು. ಅನಂತರ ದೇವಿಯು ಯಜ್ಞೇಶ್ವರನಿಗೆ ಕೈಮುಗಿದುಕೊಂಡು ''ನನ್ನ ಹೃದಯವು ಶ್ರೀರಾಮನನ್ನು ಬಿಟ್ಟು ಒಂದು ನಿಮಿಷವೂ ಚಲಿಸಲಿಲ್ಲವೆಂಬುದು ಸತ್ಯವಾದರೆ, ಸರ್ವಸಾಕ್ಷಿಯಾದ ಅಗ್ನಿದೇವನು ನನ್ನನ್ನು ರಕ್ಷಿಸಲಿ. ನಾನು ಎಂದಿಗೂ ದುಷ್ಟೆಯಲ್ಲ ನನ್ನ ಚಾರಿತ್ರವು ಅತ್ಯಂತ ಪರಿಶುದ್ಧವಾಗಿದೆ – ಎಂಬುದು ಸತ್ಯವಾದಲ್ಲಿ ಅಗ್ನಿದೇವನು ನನ್ನನ್ನು ರಕ್ಷಿಸಲಿ. ಶ್ರೀರಾಮನನ್ನು ಮನೋವಾಕ್ಕಾಯಗಳಿಂದಲೂ ನಾನು ಅತಿಕ್ರಮಿಸಿ ನಡೆದಿಲ್ಲವೆಂಬುದನ್ನು ಸೂರ್ಯನೂ ವಾಯುದೇವನೂ ಸಂಧ್ಯಾದೇವತೆಗಳೂ ಭೂದೇವಿಯೂ ಸಕಲದೇವತೆಗಳೂ ನಂಬಿರುವುದಾದರೆ ಅವರೆಲ್ಲರೂ ನನ್ನನ್ನು ಪಾಲಿಸಲಿ'' ಎಂದು ನುಡಿದು ಶಾಂತಚಿತ್ತಳಾಗಿ ಅಗ್ನಿಯಲ್ಲಿ ಧುಮುಕಿದಳು. ಮಹಾತ್ಮಳಾದ ಸೀತಾದೇವಿಯು ಪವಿತ್ರವಾದ ಆಜ್ಯಧಾರೆಯಂತೆ ಯಜ್ಞೇಶ್ವರನಲ್ಲಿ ಆಹುತಿಯಾಗಿ ಧುಮುಕುವುದನ್ನು ಸಕಲರೂ ವೀಕ್ಷಿಸಿದರು. ಅವರೆಲ್ಲರ ಬಾಯಿಯಿಂದ 'ಹಾ ಹಾ' ಎಂಬ ಆರ್ತನಾದವು ಉಗ್ಗಡಿಸಿತು. ರಾಕ್ಷಸ ಸ್ತ್ರೀಯರೂ ಶೋಕಾಕ್ರಾಂತರಾಗಿ ಕೂಗಿಕೊಂಡರು. ಶಾಪಗ್ರಸ್ತಳಾದ ದೇವತೆಯೊಬ್ಬಳು ಸ್ವರ್ಗದಿಂದ ಕೆಳಗೆ ಬೀಳುವಂತೆ ಸೀತಾದೇವಿಯು ಅಗ್ನಿಯಲ್ಲಿ ಧುಮುಕಿಬಿಟ್ಟಳು. ಎಲ್ಲೆಲ್ಲಿಯೂ 'ಹಾಹಾ' ಎಂಬ ಕೋಲಾಹಲ ಧ್ವನಿಯು ಕೇಳಿಸುತ್ತಿತ್ತು.

೭೬

ಬ್ರಹ್ಮಾದಿದೇವತೆಗಳ ಆಗಮನ. ಅಗ್ನಿದೇವನು ಸೀತಾದೇವಿಯನ್ನು ಶ್ರೀರಾಮನಿಗೆ ಅರ್ಪಿಸುವುದು. ಸ್ವರ್ಗದಿಂದ ದಶರಥನು ಬಂದು ಹಿತೋಕ್ತಿಗಳನ್ನಾಡುವುದು

ಜನರ ಕೋಲಾಹಲ ಧ್ವನಿಯನ್ನು ಕೇಳಿ ಶ್ರೀರಾಮನು ಮತ್ತಷ್ಟು ವಿಷಣ್ಣನಾದನು. ಆ ಧರ್ಮಾತ್ಮನ ಕಣ್ಣುಗಳಿಂದ ಕಂಬನಿ ತುಳುಕಿತು. ಅವನು ತಲೆ ಎತ್ತಲಾರದೆ ದೀನ ಮುಖನಾಗಿ ನಿಂತಿದ್ದನು. ಅಷ್ಟರಲ್ಲಿ ದೇವೇಂದ್ರನೇ ಮೊದಲಾದ ದಿಕ್ಪಾಲಕರೂ ಬ್ರಹ್ಮದೇವನೂ ತ್ರಿಣೇತ್ರನಾದ ಪರಮೇಶ್ವರನೂ ಶ್ರೀರಾಮನ ಸನ್ನಿಧಿಗೆ ಆಗಮಿಸಿದರು. ಅವರನ್ನು ನೋಡಿ ರಾಘವನು ನಮ್ರನಾಗಿ ಕೈಮುಗಿದನು. ದೇವತೆಗಳು ''ಶ್ರೀರಾಮ, ಪುರುಷೋತ್ತಮನೂ ಜ್ಞಾನಿಗಳಲ್ಲಿ ಅಗ್ರಗಣ್ಯನೂ ಆದ ನೀನು ಧರ್ಮಪತ್ನಿಯಾದ ಸೀತೆಯು ಅಗ್ನಿಯಲ್ಲಿ ಪ್ರವೇಶಿಸುತ್ತಿರುವಾಗಲೂ ಉಪೇಕ್ಷಿಸುವೆಯಲ್ಲಾ, ಇದು ಯಾವ ಪರಿ? ಸರ್ವಶಕ್ತನೂ ಸರ್ವಜ್ಞನೂ ಪರಮಾತ್ಮನೂ ಆದ ನೀನು, ಪ್ರಾಕೃತನಾದ ಒಬ್ಬ ಮಾನವನಂತೆ ವೈದೇಹಿಯನ್ನು ಕೈಬಿಡಬಹುದೆ?'' ಎಂದು ಕೇಳಿದರು. ಅದಕ್ಕೆ ರಾಘವನು ''ಇದೇನು ಹೀಗೆ ಹೇಳುವಿರಿ? ನಾನು ಒಬ್ಬ ಮನುಷ್ಯ. ದಶರಥ ಮಹಾರಾಜನ ಮಗ ಎಂದು ತಿಳಿದುಕೊಂಡಿದ್ದೇನೆ. ನೀವು ಅತಿಶಯೋಕ್ತಿಯನ್ನು ಆಡುತ್ತಿರಬಹುದೆ?'' ಎಂದನು. ಆಗ ಬ್ರಹ್ಮದೇವನು ಕಾಕುತ್ಸ್ಥನನ್ನು ಕುರಿತು ಹೀಗೆಂದನು. ''ಶ್ರೀರಾಮ, ನಿನ್ನ ನಿಜ ಸ್ವರೂಪವನ್ನು ಹೇಳುವೆನು ಕೇಳು. ನೀನು ಈ ಜಗತ್ತಿಗೆ ಆದಿಪುರುಷನಾಗಿರುವೆ. ಆದ್ಯಂತರಹಿತವೂ ಅವಿಕಾರಿಯೂ ಆದ ಬ್ರಹ್ಮವಸ್ತು ನೀನು. ದೇವದೇವನಾದ ಶ್ರೀಮನ್ನಾರಾಯಣನಾಗಿದ್ದೀಯೆ. ನಮ್ಮೆಲ್ಲರ ಪ್ರಾರ್ಥನೆಯಂತೆ ಲೋಕಾನುಗ್ರಹಕ್ಕಾಗಿ ಮಾನುಷ ದೇಹವನ್ನು ಧರಿಸಿ ಬಂದ ಸಾಕ್ಷಾತ್ ವಿಷ್ಣುವೇ ನೀನು'' ಎಂದನು.

ಅಷ್ಟರಲ್ಲಿ ಅಗ್ನಿದೇವನು ತನ್ನ ದೇವತಾಸ್ವರೂಪವನ್ನು ಧರಿಸಿ ಸೀತಾದೇವಿಯನ್ನು ತನ್ನ ಮಡಿಲಲ್ಲಿ ಕುಳ್ಳಿರಿಸಿಕೊಂಡು ಚಿತೆಯಿಂದ ಮೇಲೆದ್ದನು. ಅವನು ಜನಕರಾಜಪುತ್ರಿಯನ್ನು, ಸೋದರ ಮಾವನಂತೆ ಕಂಕುಳಲ್ಲಿ ಎತ್ತಿಕೊಂಡು ಶ್ರೀರಾಮನ ಬಳಿಗೆ ಆಗಮಿಸಿದನು. ಹೊಂಬಣ್ಣದ ಸೀರೆಯನ್ನುಟ್ಟಿದ್ದ ದೇವಿಯು ಬಾಲಸೂರ್ಯನಂತೆ ತೊಳಗುತ್ತಿದ್ದಳು. ಅವಳು ಮುಡಿದ ಹೂಗಳು ಬಾಡಿರಲಿಲ್ಲ. ತೊಟ್ಟ ಒಡವೆಗಳು ಕಂದಿರಲಿಲ್ಲ, ಉಟ್ಟ ಸೀರೆಯು ಸುಟ್ಟಿರಲಿಲ್ಲ. ಆ ಯಜ್ಞಪುರುಷನು ಸೀತಾದೇವಿಯನ್ನು ಶ್ರೀರಾಮನಿಗೆ ಅರ್ಪಿಸುತ್ತಾ ಇಂತೆಂದನು. ''ಕಾಕುತ್ಸ್ಥ, ಈ ಜಾನಕಿಯು ನಿನ್ನವಳು.

ಇವಳನ್ನು ಪರಿಗ್ರಹಿಸು. ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಸಂಕಲ್ಪದಿಂದಾಗಲಿ, ಕಣ್ಣಿನ ನೋಟದಿಂದಾಗಲಿ ಇವಳು ತನ್ನ ಚಾರಿತ್ರವನ್ನು ಅತಿಕ್ರಮಿಸಲಿಲ್ಲ. ಇವಳಲ್ಲಿ ಯಾವ ದೋಷವೂ ಇಲ್ಲ. ಲಂಕೆಯಲ್ಲಿದ್ದಾಗಲೂ ಸೀತೆಯು ನಿನ್ನನ್ನೇ ನೆನೆಯುತ್ತಾ ನೀನೇ ಪರಾಯಣನೆಂದು ನಂಬಿದ್ದಳು. ಇವಳ ಅಂತಃಕರಣವು ಅತ್ಯಂತ ಪರಿಶುದ್ಧವಾದದ್ದು, ಪತಿವ್ರತಾಶಿರೋಮಣಿಯಾದ ಇವಳನ್ನು, ಶ್ರೀರಾಮ, ಸ್ವೀಕರಿಸು. ತಿರುಗಿ ಒಂದು ಮಾತನ್ನೂ ಆಡಬೇಡ. ಇದು ನನ್ನ ಆಜ್ಞೆ'' ಎಂದನು. ಶ್ರೀರಾಮನ ಮನಸ್ಸು ಪ್ರಸನ್ನವಾಯಿತು. ಕಣ್ಣೀರು ಉಕ್ಕಿತು. ಆ ಧರ್ಮಾತ್ಮನು ಸ್ವಲ್ಪಕಾಲ ಧ್ಯಾನ ವಶನಾಗಿ ನಿಂತು ಅಗ್ನಿದೇವನಿಗೆ ಇಂತೆಂದನು. ''ಮಹಾತ್ಮ, ಸೀತೆಯ ವಿಷಯದಲ್ಲಿ ದೋಷವನ್ನು ಶಂಕಿಸುವುದು ಎಂದೆಂದಿಗೂ ಯುಕ್ತವಲ್ಲ. ರಾವಣನ ಗೃಹದಲ್ಲಿ ಈ ಸಾಧ್ವಿಯು ಧೀರ್ಘಕಾಲದವರೆಗಿದ್ದಳು. ಜಾನಕಿಯನ್ನು ನಾನು ಪರೀಕ್ಷಿಸದೆ ನೇರವಾಗಿ ಸ್ವೀಕರಿಸಿದ್ದರೆ ''ಈ ದಶರಥನ ಮಗನು ಅವಿವೇಕಿ, ಕಾಮಲಂಪಟ. ಸ್ವಲ್ಪವೂ ವಿಚಾರಿಸದೆ ಪರಗೃಹದಲ್ಲಿದ್ದ ಸ್ತ್ರೀಯನ್ನು ಬರಮಾಡಿಕೊಂಡ'' ಎಂದು ಘೋರವಾದ ಲೋಕಾಪವಾದವು ನನಗೆ ಬರುತ್ತಿತ್ತು, ಆದ್ದರಿಂದ ದೇವೋತ್ತಮನಾದ ನೀನೇ ಪ್ರತ್ಯಕ್ಷನಾಗಿ ಈ ಸತ್ಯವನ್ನು ಪ್ರಕಟಿಸಲಿ ಎಂದು ನಾನು ಸೀತೆಯನ್ನು ಉಪೇಕ್ಷಿಸಿದೆನು. ಸತ್ಯವನ್ನೇ ನಂಬಿರುವ ನಾನು ಸತ್ಯವು ಪ್ರಕಟವಾಗಲೆಂದು ಸುಮ್ಮನಿದ್ದನು. ವೈದೇಹಿಯು ಅಗ್ನಿಪ್ರವೇಶ ಮಾಡುವಾಗಲೂ – ಮೂರು ಲೋಕಗಳಿಗೂ ವಿಶ್ವಾಸವು ಮೂಡಲೆಂದು ನನ್ನ ಮನೋಯಾತನೆಯನ್ನು ಸಹಿಸಿಕೊಂಡೆನು. ಈ ದೇವಿಯು ತನ್ನ ತೇಜೋಬಲದಿಂದಲೇ ಎಲ್ಲಿದ್ದರೂ ಸುರಕ್ಷಿತಳಾಗಿರುವಳು. ತನ್ನ ಶೀಲವನ್ನು ಪಾಲಿಸಿಕೊಳ್ಳಲು ಸಮರ್ಥಳು ಎಂಬುದು ನನಗೇ ತಿಳಿದೇ ಇತ್ತು, ರಾವಣನು ಇವಳನ್ನು ಅತಿಕ್ರಮಿಸಿಯಾನೇ? ಆತನು ಮೈಥಿಲಿಯನ್ನು ಕೆಣಕಬಲ್ಲನೆಂಬುದನ್ನು ಮನಸ್ಸಿನಿಂದ ಊಹಿಸಲೂ ಶಕ್ಯವಿಲ್ಲ. ಉರಿಯುವ ಅಗ್ನಿಜ್ವಾಲೆ ಇವಳು. ಈ ಶುಭಾಂಗಿಯು ರಾವಣನ ಐಶ್ವರ್ಯಕ್ಕೆ ಮರುಳಾಗತಕ್ಕವಳಲ್ಲ. ಅಗ್ನಿದೇವ, ಸೂರ್ಯಪ್ರಭೆಯು ಸೂರ್ಯನನ್ನು ಬಿಟ್ಟು ಹೇಗೆ ಬೇರೆ ಇರಲಾರದೋ ಹಾಗೆ ಸೀತೆಯು ನನ್ನನ್ನು ಬಿಟ್ಟು ಇರತಕ್ಕವಳಲ್ಲ. ವಸ್ತುತಃ ಅವಳು ನನಗಿಂತ ಬೇರೆಯವಳೇ ಅಲ್ಲ. ಈ ಸುಶೀಲೆಯು ನನ್ನ ದೇಹದ ಒಂದು ಭಾಗವೇ ಆಗಿದ್ದಾಳೆ. ಯಾವ ಮಾನಶಾಲಿಯೂ ಕೀರ್ತಿಯನ್ನು ಹೇಗೆ ಕಳೆದುಕೊಳ್ಳಲಾರನೋ ಹಾಗೆ ನಾನು ಈ ದೇವಿಯನ್ನೆಂದಿಗೂ ಕಳೆದುಕೊಳ್ಳಲಾರೆನು. ಮಹಾತ್ಮರಾದ ನೀವೆಲ್ಲರೂ ನನ್ನ ಹಿತವನ್ನು ಬಯಸುತ್ತಿದ್ದೀರಿ. ನಿಮ್ಮ ಮಾತನ್ನು ನಾನು ಮೀರುವುದಿಲ್ಲ. ಇದೋ ನನ್ನ ಧರ್ಮಪತ್ನಿಯನ್ನು ಹೃದಯಪೂರ್ವಕವಾಗಿ ಸ್ವೀಕರಿಸುತ್ತಿದ್ದೇನೆ'' ಎಂದು ನುಡಿದು, ಕಣ್ಣೀರು ಹರಿಸುತ್ತಿದ್ದ ಸೀತಾದೇವಿಯ ಕೈಹಿಡಿದು

ತನ್ನ ಬಳಿಗೆ ಕರೆದುಕೊಂಡನು. ಬ್ರಹ್ಮಾದಿ ದೇವತೆಗಳೆಲ್ಲರೂ ಶ್ರೀರಾಮನ ಮನೋಗತವನ್ನು ತಿಳಿದು ಸಂತುಷ್ಟರಾದರು. ಲಕ್ಷ್ಮಣ, ಸುಗ್ರೀವ, ಹನುಮಂತ, ವಿಭೀಷಣಾದಿಗಳಿಗೆ ಇದರಿಂದ ಪರಮಾನಂದವಾಯಿತು.

ದೇವತೆಗಳೊಡನೆ ಬಂದಿದ್ದ ಪರಮೇಶ್ವರನು ರಾಘವನನ್ನು ಕುರಿತು ''ಮಹಾಬಾಹು, ರಾವಣನಿಂದ ಒದಗಿದ್ದ ಭಯವನ್ನು ಸಂಪೂರ್ಣವಾಗಿ ತೊಡೆದು ಹಾಕಿದ್ದೀಯೆ. ಇನ್ನು ಅಯೋಧ್ಯೆಗೆ ಹೋಗಿ ನಿನಗಾಗಿ ಕಾದಿರುವ ಭರತನನ್ನೂ ಕೌಸಲ್ಯಾದಿಗಳನ್ನೂ ಸಂತೈಸು. ಅಯೋಧ್ಯೆಯಲ್ಲಿ ನಿನ್ನ ರಾಜ್ಯವನ್ನು ಸ್ವೀಕರಿಸಿ ರಾಜ್ಯವನ್ನು ಪಾಲಿಸುತ್ತ ಧರ್ಮವನ್ನು ರಕ್ಷಿಸು. ಇದೋ ಇಲ್ಲಿ ನೋಡು. ನಿನ್ನ ತಂದೆಯಾದ ದಶರಥನು ಬಂದಿದ್ದಾನೆ!'' ಎಂದನು.

ದೇವತೆಗಳು ಸ್ವರ್ಗದಿಂದ ದಶರಥನನ್ನು ವಿಮಾನದಲ್ಲಿ ಕರೆತಂದಿದ್ದರು. ಶ್ರೀರಾಮನೂ, ಲಕ್ಷ್ಮಣನೂ, ಸೀತಾದೇವಿಯೂ ವಿಸ್ಮಿತರಾಗಿ ದಶರಥನಿಗೆ ನಮಸ್ಕರಿಸಿದರು. ದಿವ್ಯ ಪೀಠದಲ್ಲಿ ಕುಳಿತಿದ್ದ ದಶರಥನು ತನ್ನ ಪುತ್ರರನ್ನೂ ಸೊಸೆಯನ್ನೂ ನೋಡಿ ಆನಂದದಿಂದ ಹಿಗ್ಗುತ್ತಾ, ''ವತ್ಸ-ರಾಮ, ನಿನ್ನನ್ನು ಅಗಲಿದ ನನಗೆ ಈ ಸ್ವರ್ಗಭೋಗವೂ ಪ್ರಿಯವಾಗಲಿಲ್ಲ. ಈ ದಿನ ನಿನ್ನನ್ನೂ, ಲಕ್ಷ್ಮಣನನ್ನೂ, ಈ ಜನಕನಂದಿನಿಯನ್ನೂ ಕಣ್ಣಿಂದ ನೋಡಿ ನನ್ನ ದುಃಖವು ನೀಗಿತು. ಮಗನೆ, ಮಹಾತ್ಮನೂ ಸುಪುತ್ರನೂ ಆದ ನೀನು ನನ್ನ ಸತ್ಯಪ್ರತಿಜ್ಞೆಯನ್ನು ಉಳಿಸಿ ರಕ್ಷಿಸಿದ್ದೀಯೆ. ಈಗ ನೀನು ಭರತನನ್ನು ಕಂಡು ಅಯೋಧ್ಯೆಯಲ್ಲಿ ಪಟ್ಟಾಭಿಷಕ್ತನಾಗು. ಧೀರ್ಘಾಯುಸ್ಸನ್ನು ಪಡೆದು ಚಿರಂಜೀವಿಯಾಗಿ ಬಾಳು'' ಎಂದನು. ಆಗ ಶ್ರೀರಾಮನು ಬದ್ಧಾಂಜಲಿಯಾಗಿ ದಶರಥನನ್ನು ಕುರಿತು ''ತಂದೆಯೆ, ನೀನು ಧರ್ಮಸ್ವರೂಪವನ್ನು ಬಲ್ಲವನು. ಕೈಕೇಯಿಯನ್ನೂ ಭರತನನ್ನೂ ಅನುಗ್ರಹ ದೃಷ್ಟಿಯಿಂದ ನೋಡು. ಓ ಪ್ರಭು, ನೀನು ಕೈಕೇಯಿಯನ್ನು ಕುರಿತು 'ನಿನ್ನನ್ನೂ ನಿನ್ನ ಮಗನನ್ನೂ ತ್ಯಜಿಸಿದ್ದೇನೆ' ಎಂದು ಹೇಳಿದ್ದೆಯಲ್ಲವೆ? ಆ ಘೋರಶಾಪವು ಕೈಕೇಯಿಗೂ ಭರತನಿಗೂ ತಾಗದಂತೆ ಅನುಗ್ರಹಿಸು'' ಎಂದು ಬೇಡಿಕೊಂಡನು. ದಶರಥನು ''ನಿನ್ನ ಇಷ್ಟದಂತೆಯೇ ಆಗಲಿ'' ಎಂದು ಹೇಳಿ ಲಕ್ಷ್ಮಣನನ್ನು ಅಪ್ಪಿಕೊಂಡು ''ವತ್ಸ-ಲಕ್ಷ್ಮಣ, ರಾಮನನ್ನೂ ಸೀತೆಯನ್ನೂ ಭಕ್ತಿಯಿಂದ ಶಶ್ರೂಷೆ ಮಾಡಿ ನನಗೆ ಪರಮಾನಂದ ವನ್ನುಂಟು ಮಾಡಿದ್ದೀಯೆ. ರಾಮನು ಪ್ರಸನ್ನನಾದ ಮೇಲೆ ಪುಣ್ಯ, ಕೀರ್ತಿ, ಗೌರವ ಎಲ್ಲವೂ ನಿನಗೆ ದೊರೆಯುತ್ತದೆ. ಸುಮಿತ್ರೆಯು ನಿನ್ನನ್ನು ಕಂಡು ಎಷ್ಟು ಆನಂದಿಸುವಳೊ! ಲಕ್ಷ್ಮಣ, ನಿನಗೆ ಮಂಗಳವಾಗಲಿ'' ಎಂದನು. ಅನಂತರ

ಧರ್ಮಾತ್ಮನಾದ ದಶರಥನು ವೈದೇಹಿಯ ಕಡೆಗೆ ತಿರುಗಿ ''ವತ್ಸೆ–ಸೀತೆ, ರಾಮನು ನಿನ್ನನ್ನು ತ್ಯಜಿಸುತ್ತೇನೆ ಎಂದು ಹೇಳಿದುದಕ್ಕಾಗಿ ಮನಸ್ಸಿನಲ್ಲಿ ಯಾವ ಅಸಮಾಧಾನ ವನ್ನೂ ಇಟ್ಟುಕೊಳ್ಳಬೇಡ. ನೀನು ಪರಿಶುದ್ಧಳೆಂದು ತೋರಿಸುವುದಕ್ಕಾಗಿ ನಿನ್ನ ಹಿತಾಪೇಕ್ಷೆಯಿಂದಲೇ ರಾಮನು ಹಾಗೆ ಮಾಡಿದ್ದಾನೆ. ಭದ್ರೆ, ಪತಿವ್ರತೆಯೂ ಪರಮ ಸಾಧ್ವಿಯೂ ಆದ ನಿನಗೆ ರಾಮನೇ ಪರದೇವತೆ'' ಎಂದು ಹೇಳಿದನು. ಹೀಗೆ ದಶರಥನು ರಾಮಲಕ್ಷ್ಮಣರಿಗೂ ಸೊಸೆಯಾದ ಸೀತೆಗೂ ಹೇಳಿ ಆಶೀರ್ವದಿಸಿ ದಿವ್ಯಕಾಂತಿಯಿಂದ ಬೆಳಗುತ್ತ ವಿಮಾನದಲ್ಲಿ ಹೊರಟುಹೋದನು.

೭೭

ಇಂದ್ರನ ವರದಾನ. ಪುಷ್ಪಕವಿಮಾನದಲ್ಲಿ ಶ್ರೀರಾಮಾದಿಗಳು ಆಯೋಧ್ಯೆಗೆ ಹೊರಡುವುದು. ಭರದ್ವಾಜಾಶ್ರಮಕ್ಕೆ ಆಗಮನ.

ಅನಂತರ ಶ್ರೀರಾಮನನ್ನು ನೋಡಿ ದೇವೇಂದ್ರನು ''ಶ್ರೀರಾಮ, ನಿನ್ನ ಉಪಕಾರದಿಂದ ನಾವೆಲ್ಲರೂ ಸಂತುಷ್ಟರಾಗಿದ್ದೇವೆ. ನಿನ್ನ ಮನಸ್ಸಿಗೆ ಬಂದ ಯಾವುದಾದರೂ ವರವನ್ನು ಕೇಳಿಕೊ'' ಎಂದನು ಆಗ ಶ್ರೀರಾಮನು ಕೈಮುಗಿದುಕೊಂಡು ''ಸುರೇಶ್ವರ, ನನ್ನಲ್ಲಿ ನಿನಗೆ ಪ್ರೀತಿಯುಂಟಾಗಿದ್ದರೆ ನನ್ನ ಒಂದು ಕೋರಿಕೆಯನ್ನು ನಿವೇದಿಸುವೆನು. ಅದನ್ನು ಸಲ್ಲಿಸು. ಏನೆಂದರೆ, ಎಷ್ಟೋ ಮಂದಿ ವಾನರಾದಿ ಯೋಧರು ನನಗೋಸ್ಕರ ಹೋರಾಡಿ ಯಮಸದನವನ್ನು ಸೇರಿದ್ದಾರೆ. ಅವರೆಲ್ಲರೂ ಮತ್ತೆ ಬದುಕಿ ಮೇಲೇಳಲಿ. ಹೇ ಮಹಾತ್ಮ, ಈ ಯೋಧರೆಲ್ಲರೂ ದೇಹದಲ್ಲಿ ಯಾವ ಬಾಧೆಯೂ ಇಲ್ಲದೆ, ಯಾವ ಗಾಯವೂ ಇಲ್ಲದೆ, ಮೊದಲಿನ ಬಲಪರಾಕ್ರಮಗಳಿಂದ ಯುಕ್ತರಾಗಿ ತಮ್ಮ ತಮ್ಮ ಹೆಂಡತಿ ಮಕ್ಕಳೊಡನೆ ಸೇರಿಕೊಳ್ಳಬೇಕೆಂದು ನನ್ನ ಅಭಿಲಾಷೆಯಾಗಿದೆ. ಈ ವಾನರರು ನೆಲೆಸಿರುವ ಸ್ಥಳಗಳಲ್ಲಿ ಫಲ ಮೂಲಪುಷ್ಪಗಳು ಅಕಾಲದಲ್ಲಿಯೂ ಸಮೃದ್ಧವಾಗಿ ತುಂಬಿರಲಿ. ನದಿಗಳಲ್ಲಿ ತಿಳಿನೀರು ಯಾವಾಗಲೂ ಹರಿಯುತ್ತಿರಲಿ. ಓ ಮಹಾತ್ಮ, ಇದು ನನ್ನ ಕೋರಿಕೆ. ನೆರವೇರಿಸಿಕೊಡು'' ಎಂದು ಪ್ರಾರ್ಥಿಸಿದನು. ದೇವೇಂದ್ರನು ಅವನ ಕೋರಿಕೆಯನ್ನು ಕೇಳಿ ಸಂತುಷ್ಟನಾಗಿ ''ರಾಘವ, ನೀನು ಕೇಳಿದ ವರವು ಬಹಳ ದೊಡ್ಡದು. ಆದರೆ ನಾನು ಎರಡು ಮಾತಾಡತಕ್ಕವನಲ್ಲ. ಒಳ್ಳೆಯದು. ನಿನ್ನ ಇಷ್ಟವು ನೆರವೇರಲಿ'' ಎಂದನು. ಹತರಾಗಿದ್ದ ವಾನರರೆಲ್ಲರೂ ಒಡನೆಯೇ ನಿದ್ರೆಯಿಂದ ಎಚ್ಚೆತ್ತವರಂತೆ ಎದ್ದರು. ಅವರ ಮೈಮೇಲಾದ ಗಾಯಗಳೆಲ್ಲವೂ ಮಾಯವಾದವು. ಯಾವ

ಆಯಾಸವೂ ಇಲ್ಲದೆ ಉತ್ಸಾಹಗೊಂಡರು. ''ಇದೇನು!'' ಎನ್ನುತ್ತಾ ಮೇಲೆದ್ದು ಬಂದು ಶ್ರೀರಾಮನಿಗೆ ನಮಸ್ಕರಿಸಿದರು. ಆಗ ದೇವೇಂದ್ರನು ''ಶ್ರೀರಾಮ, ನೀನೀಗ ಸೀತಾ ಲಕ್ಷ್ಮಣರೊಡನೆ ಅಯೋಧ್ಯೆಗೆ ತೆರಳು. ನಿನಗೆ ಶುಭವಾಗಲಿ'' ಎಂದು ಹೇಳಿ ಬ್ರಹ್ಮಾದಿ ದೇವತೆಗಳೊಡನೆ ಹೊರಟು ಹೋದನು. ಕಾಕುತ್ಸ್ಥನು ದೇವೇಂದ್ರನನ್ನು ಬೀಳ್ಕೊಂಡು ವಾನರಸೇನೆಯು ವಿಶ್ರಮಿಸುವಂತೆ ಆಜ್ಞಾಪಿಸಿದನು.

ರಾತ್ರಿ ಕಳೆದು ಬೆಳಗಾಯಿತು. ಶ್ರೀರಾಮನು ಸುಖನಿದ್ರೆಯನ್ನು ಮಾಡಿ ಎಚ್ಚೆತ್ತನು. ಅಷ್ಟರಲ್ಲಿ ವಿಭೀಷಣನು ಬಂದು ಜಯಕಾರ ಮಾಡಿ ''ದಾಶರಥಿ, ನಿನ್ನ ಸ್ನಾನಕ್ಕಾಗಿ ನೀರು ಎಣ್ಣೆ ಮೊದಲಾದವು ಸಿದ್ಧವಾಗಿವೆ. ಅನುಲೇಪನವನ್ನೂ ವಸ್ತ್ರಾಭರಣಗಳನ್ನೂ ನಿನಗೋಸ್ಕರ ತರಿಸಿದ್ದೇನೆ. ಅರಣ್ಯದಲ್ಲಿ ಬಹುವರ್ಷ ನವೆದಿದ್ದೀಯೆ. ಶ್ರೀರಾಮ, ನನ್ನ ಈ ಸತ್ಕಾರವನ್ನು ಸ್ವೀಕರಿಸು'' ಎಂದು ಬೇಡಿಕೊಂಡನು. ಆಗ ರಾಘವನು ವಿಭೀಷಣನನ್ನು ನೋಡಿ ''ವಿಭೀಷಣ, ಸುಗ್ರೀವನೇ ಮೊದಲಾದ ವಾನರೋತ್ತಮರನ್ನು ಸ್ನಾನಾರ್ಥವಾಗಿ ಕರೆದುಕೊಂಡು ಹೋಗಿ ಸತ್ಕರಿಸು. ನನಗೆ ಯಾವ ಸತ್ಕಾರವೂ ಈಗ ಬೇಡ. ಧರ್ಮಾತ್ಮನಾದ ಭರತನು ದುಃಖದಿಂದ ತಳಮಳಿಸುತ್ತಿದ್ದಾನೆ. ಆ ರಾಜಪುತ್ರನು ನನಗೋಸ್ಕರ ವ್ರತನಿಷ್ಠೆಯಲ್ಲಿದ್ದಾನೆ. ಧರ್ಮಾತ್ಮನಾದ ಆ ಭರತನನ್ನು ನೋಡುವವರೆಗೆ ಈ ಬಗೆಯ ಸ್ನಾನವೂ ಬೇಡ, ವಸ್ತ್ರಾಭರಣಗಳೂ ಬೇಡ. ನೀನು ಬೇಸರ ಪಡಬೇಡ. ನಾನು ಹೋಗಬೇಕಾದ ದಾರಿ ಬಹುದೂರ, ದುರ್ಗಮ. ಈ ದಿನವೇ ನಾನು ಅಯೋಧ್ಯೆಗೆ ಹೊರಡುವೆನು'' ಎಂದನು. ಆಗ ವಿಭೀಷಣನು ''ರಾಜಪುತ್ರ, ಒಂದೇ ಹಗಲಿನಲ್ಲಿ ನಿನ್ನನ್ನು ಅಯೋಧ್ಯೆಗೆ ಮುಟ್ಟಿಸುವೆನು. ರಾವಣನು ಕುಬೇರನಿಂದ ಅಪಹರಿಸಿತಂದ ಪುಷ್ಪಕವಿಮಾನವು ನನ್ನ ವಶದಲ್ಲಿದೆ. ನಿಮ್ಮೆಲ್ಲರನ್ನೂ ಹೊತ್ತುಕೊಂಡು ಗಗನ ಮಾರ್ಗದಲ್ಲಿ ಆ ವಿಮಾನವು ಮಹಾವೇಗದಿಂದ ಹೋಗಿ ಅಯೋಧ್ಯೆಯನ್ನು ಸೇರುವುದು. ನಿನ್ನಿಂದ ನಾನು ಮಹತ್ತರವಾದ ಉಪಕಾರವನ್ನು ಪಡೆದಿದ್ದೇನೆ. ನಿನ್ನಲ್ಲಿರುವ ಗೌರವ ಬುದ್ಧಿಯಿಂದಲೂ ಸುಹೃದ್ಭಾವದಿಂದಲೂ ಬೇಡಿಕೊಳ್ಳುತ್ತೇನೆ. ನಾನು ನಿನ್ನ ಭೃತ್ಯ. ನನ್ನ ಪ್ರಾರ್ಥನೆಯನ್ನು ಸಲ್ಲಿಸು'' ಎಂದನು. ಆಗ ಶ್ರೀರಾಮನು ಸುಗ್ರೀವಾದಿ ವಾನರರೆಲ್ಲರೂ ಆಲಿಸುತ್ತಿರುವಾಗ ''ಲಂಕೇಶ್ವರ – ವಿಭೀಷಣ, ಅಮೂಲ್ಯವಾದ ನಿನ್ನ ಮಂತ್ರಾಲೋಚನೆಯಿಂದ ನನ್ನನ್ನು ಸತ್ಕರಿಸಿಯೇ ಇದ್ದೀಯೆ. ನಾನು ಸಂತೃಪ್ತನಾಗಿದ್ದೇನೆ. ನಿನ್ನ ಮಾತನ್ನು ನಾನು ಉಪೇಕ್ಷಿಸತಕ್ಕವನಲ್ಲ. ಆದರೆ, ವಿಭೀಷಣ, ನನ್ನ ತಮ್ಮನಾದ ಭರತನು ನನ್ನಲ್ಲಿಟ್ಟಿರುವ ಪ್ರೀತಿ ವಾತ್ಸಲ್ಯ ಗೌರವಗಳಿಂದ ನಾನು ಕರಗಿಹೋಗುತ್ತಿದ್ದೇನೆ. ನೀನು ಹೇಳಿದ ವಿಮಾನವನ್ನು

ಮೊದಲು ತರಿಸು. ಸೌಮ್ಯ, ಎಲ್ಲ ವಿಧದಲ್ಲೂ ನಾನು ಸತ್ಕೃತನಾದೆನೆಂದೇ ಭಾವಿಸು. ಆದಷ್ಟು ಬೇಗನೆ ನಾನು ಅಯೋಧ್ಯೆಗೆ ಹಿಂದಿರುಗಲೇ ಬೇಕು'' ಎಂದನು. ಆಗ ವಿಭೀಷಣನು ಪ್ರತಿಯಾಗಿ ಏನನ್ನೂ ಹೇಳಲಾರದೆ ಪುಷ್ಪಕವಿಮಾನವನ್ನು ತರಿಸಿದನು. ಆ ವಿಮಾನವನ್ನು ವಿಶ್ವಕರ್ಮನು ನಿರ್ಮಿಸಿದ್ದನು. ಅದು ಅತ್ಯಂತ ವಿಶಾಲವಾಗಿದ್ದು ಸುಂದರವಾದ ನಗರವೋ ರಾಜಾಸ್ಥಾನವೋ ಎಂಬಂತೆ ದಿವ್ಯಾಸನಗಳಿಂದ ಭೂಷಿತವಾಗಿತ್ತು. ಶ್ರೀರಾಮನು ಸೀತಾ ಸೌಮಿತ್ರಿಯರೊಡನೆ ಬಂದು ಆ ವಿಮಾನವನ್ನು ನೋಡಿ ವಿಸ್ಮಿತನಾದನು. ವಿಭೀಷಣನು ತಲೆಬಾಗಿ ನಮಸ್ಕರಿಸಿ ''ಶ್ರೀರಾಮ, ಇನ್ನು ನಾನು ಪಾಲಿಸಬೇಕಾದ ಆಜ್ಞೆಯಾವುದು''? ಎಂದು ಕೇಳಿದನು. ತೇಜೋನಿಧಿಯಾದ ರಾಘವನು ಸ್ವಲ್ಪ ಹೊತ್ತು ಆಲೋಚಿಸಿ ''ವಿಭೀಷಣ, ಈ ವಾನರ ಯೋಧರು ನನಗೋಸ್ಕರ ಬಹಳ ಶ್ರಮವನ್ನು ವಹಿಸಿದರು. ಸಾಹಸಕೃತ್ಯಗಳನ್ನು ನಡೆಸಿದರು. ದುರ್ಜಯವಾದ ಈ ಲಂಕೆಯನ್ನು ನಾನು ಜಯಿಸಿದ್ದು ಈ ವೀರಯೋಧರ ನೆರವಿನಿಂದಲೇ. ಉದಾರಿಯಾದ ನೀನು ಅನುಕಂಪದಿಂದ ಈ ವಾನರರನ್ನು ಉಪಚರಿಸು. ಉತ್ತಮ ವಸ್ತ್ರಗಳನ್ನೂ ವಿವಿಧ ರತ್ನಗಳನ್ನೂ ಇವರಿಗೆ ಕೊಟ್ಟು ಸತ್ಕರಿಸು'' ಎಂದನು. ಅಂತೆಯೇ ವಿಭೀಷಣನು ರಾಜಭಂಡಾರದಿಂದ ವಸ್ತ್ರಗಳನ್ನೂ ವಜ್ರವೈಡೂರ್ಯಾದಿಗಳನ್ನೂ ತರಿಸಿ ಎಲ್ಲ ವಾನರಯೋಧರಿಗೂ ಪಾರಿತೋಷಿಕವನ್ನಾಗಿ ಅರ್ಪಿಸಿದನು. ಅದೆಲ್ಲವನ್ನೂ ಕಣ್ಣಿಂದ ನೋಡಿದಮೇಲೆ ಶ್ರೀರಾಮನು ಪುಷ್ಪಕವಿಮಾನವನ್ನು ಹತ್ತಿದನು. ನಾಚಿಕೆಯಿಂದ ಬಳುಕುತ್ತಿದ್ದ ವೈದೇಹಿಯನ್ನು ತನ್ನ ಅಂಕದಲ್ಲಿ ಎತ್ತಿಕೊಂಡು ಲಕ್ಷ್ಮಣ ಸಮೇತನಾಗಿ ವಿಮಾನ ವನ್ನೇರಿದನು. ಅನಂತರ ಪುಷ್ಪಕವಿಮಾನದಲ್ಲಿ ನಿಂತು ಸುಗ್ರೀವನನ್ನೂ, ವಿಭೀಷಣನನು ಸಕಲ ವಾನರರನ್ನೂ ನೋಡಿ ಆದರದಿಂದ ''ಮಿತ್ರರೆ, ಮಿತ್ರನ ಕಾರ್ಯವೆಂದು ಬಗೆದು ನೀವೆಲ್ಲರೂ ನನ್ನ ಕಾರ್ಯವನ್ನು ನೆರವೇರಿಸಿಕೊಟ್ಟಿದ್ದೀರಿ. ನಿಮ್ಮಿಂದಾದ ಉಪಕಾರದ ಸ್ಮರಣೆಯು ಸದಾ ನನ್ನಲ್ಲಿ ಉಳಿದಿರುತ್ತದೆ. ಇನ್ನು ನೀವು ಯಥೇಷ್ಟವಾಗಿ ನಿಮ್ಮ ಸ್ಥಳಗಳಿಗೆ ಹೋಗಬಹುದು. ಮಿತ್ರ-ಸುಗ್ರೀವ, ಶುದ್ಧಾತ್ಮನಾದ ಸ್ನೇಹಿತನು ಏನೇನು ಮಾಡಬಹುದೋ, ಅದೆಲ್ಲವನ್ನೂ ನನಗೆ ಮಾಡಿದ್ದೀಯೆ. ನಿನ್ನಿಂದಾದ ಸಹಾಯವು ಬಹುದೊಡ್ಡದು. ಇನ್ನು ನೀನು ಸೇನಾ ಪರಿವೃತನಾಗಿ ಕಿಷ್ಕಿಂಧೆಗೆ ಹೋಗು. ವಿಭೀಷಣ, ನಾನು ಕೊಟ್ಟ ಮಾತಿನಂತೆ ನಿನಗೆ ಲಂಕಾಧಿಪತ್ಯವನ್ನು ವಹಿಸಿಕೊಟ್ಟಿ ದ್ದೇನೆ. ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಿರು. ಇಂದ್ರಾದಿ ದೇವತೆಗಳೂ ನಿನ್ನನ್ನು ಅಲ್ಲಾಡಿಸಲಾರರು. ಈಗ ನಾನು ಅಯೋಧ್ಯೆಗೆ ಪ್ರಯಾಣ ಮಾಡುವೆನು. ನೀವೆಲ್ಲರೂ ನನಗೆ ಅನುಜ್ಞೆಯನ್ನು ಕೊಡಿರಿ'' ಎಂದನು. ಆಗ ವಿಭೀಷಣನೂ ಸುಗ್ರೀವಾದಿ ವಾನರ

ನಾಯಕರೂ ಕೈಮುಗಿದುಕೊಂಡು "ಶ್ರೀರಾಮ, ನಾವೆಲ್ಲರೂ ಅಯೋಧ್ಯೆಗೆ ಬರಬೇಕೆಂದು ಆಸೆಯನ್ನಿಟ್ಟುಕೊಂಡಿದ್ದೇವೆ. ನಿನಗೆ ಪಟ್ಟಾಭಿಷೇಕವಾಗುವುದನ್ನು ಕಣ್ಣಿಂದ ನೋಡಬೇಕೆಂದು ನಿನ್ನ ಜನನಿಯಾದ ಕೌಸಲ್ಯಾದೇವಿಗೆ ಅಭಿವಾದನೆ ಮಾಡಬೇಕೆಂದೂ ನಮ್ಮ ಇಚ್ಛೆಯಾಗಿದೆ. ಅಯೋಧ್ಯಾ ನಗರದ ವೈಭವವನ್ನು ನೋಡಿಕೊಂಡು ಅನಂತರ ನಮ್ಮ ಮನೆಗಳಿಗೆ ಹಿಂದಿರುಗುವೆವು" ಎಂದು ನಿವೇದಿಸಿದರು. ಅವರೆಲ್ಲರೂ ಏಕಕಂಠದಿಂದ ಹೀಗೆ ಹೇಳಲು ಧರ್ಮಾತ್ಮನಾದ ರಾಘವನು "ಬಹಳ ಸಂತೋಷವಾಯಿತು. ಆನಂದದ ಮೇಲೆ ಆನಂದದ ಪ್ರಸಂಗ ಒದಗಿತು. ಸುಗ್ರೀವ, ಬೇಗನೆ ವಿಮಾನವನ್ನು ಹತ್ತು. ನಿನ್ನ ಸೈನಿಕರೆಲ್ಲರೂ ಹತ್ತಲಿ. ವಿಭೀಷಣ, ನಿನ್ನ ಸಚಿವರೊಡನೆ ನೀನೂ ವಿಮಾನವನ್ನೇರು" ಎಂದನು. ಆಗ ಅವರೆಲ್ಲರೂ ದಿವ್ಯವಾದ ಪುಷ್ಪಕವಿಮಾನವನ್ನು ಹತ್ತಿ ಕುಳಿತರು. ಅನಂತರ ಶ್ರೀರಾಮನು ಅನುಜ್ಞೆಯನ್ನೀಯಲು ಆ ದಿವ್ಯ ವಿಮಾನವು ಗಗನವನ್ನಡರಿತು. ಅದು ದಿವ್ಯ ವಿಮಾನವಾದ್ದರಿಂದ ಸಕಲರೂ ಇಕ್ಕಟ್ಟಿಲ್ಲದೆ ಸಂತೋಷದಿಂದ ಕುಳಿತಿದ್ದರು. ಆ ವಿಮಾನವು ಉತ್ತರಾಭಿಮುಖವಾಗಿ ಅಯೋಧ್ಯೆಯ ಕಡೆಗೆ ಹೊರಟಿತು.

ರಘುನಂದನನು ವಿಮಾನದಲ್ಲಿ ಕುಳಿತು ಸುತ್ತಲೂ ನೋಡುತ್ತ, ತನ್ನ ಬಳಿ ಕುಳಿತಿದ್ದ ಮೈಥಿಲಿಯನ್ನುದ್ದೇಶಿಸಿ ಹೀಗೆ ಹೇಳುತ್ತಿದ್ದನು. "ಮೈಥಿಲಿ, ತ್ರಿಕೂಟ ಶಿಖರದಲ್ಲಿ ವಿರಾಜಿಸುತ್ತಿರುವ ಈ ಲಂಕೆಯನ್ನು ಮತ್ತೊಮ್ಮೆ ನೋಡು. ಇಲ್ಲಿ ನೋಡು; ಭೀಕರವಾದ ಕದನವು ನಡೆದ ಸ್ಥಳವಿದು. ಅತ್ತ ನೋಡು; ಕ್ರೂರವಾದ ರಾವಣನು ಸುಟ್ಟು ಬೂದಿಯಾದ ಸ್ಥಳವದು. ಸುಂದರಿ, ನಾನು ಕುಂಭಕರ್ಣನನ್ನು ವಧಿಸಿದ ಸ್ಥಳವಿದು. ಹನುಮಂತನು ಆ ಸ್ಥಳದಲ್ಲಿ ಪ್ರಹಸ್ತನನ್ನು ಸಂಹರಿಸಿದನು. ಲಕ್ಷ್ಮಣನು ಅಲ್ಲಿ ಇಂದ್ರಜಿತುವನ್ನು ಕೊಂದಿದ್ದಾನೆ. ವಾನರವೀರರು ತಮ್ಮ ಪರಾಕ್ರಮವನ್ನು ಮೆರೆಸಿ ಹೋರಾಡಿದ ಸ್ಥಳಗಳು ಇವು. ಜಾನಕಿ, ನಾವು ಸಮುದ್ರವನ್ನು ದಾಟಿ ಬಂದು ಮೊದಲನೆಯ ರಾತ್ರಿ ಇಲ್ಲಿ ಇಳಿದುಕೊಂಡಿದ್ದೆವು. ಇದೋ, ವಿಶ್ವಕರ್ಮನ ಮಗನಾದ ನಳನು ಸಮುದ್ರಕ್ಕೆ ಕಟ್ಟಿದ ಸೇತುವೆ ಇದು. ಕೆಳಗೆ ನೋಡು. ಭೀಕರವಾದ ಸಮುದ್ರವು ಮೊರೆಯುತ್ತಿದೆ. ಇದೇ ಮೈನಾಕ ಪರ್ವತ. ಹನುಮಂತನನ್ನು ಸತ್ಕರಿಸುವುದಕ್ಕಾಗಿ ಇದು ಸಮುದ್ರದಿಂದ ಮೇಲೆದ್ದು ಬಂದಿತು. ದೇವಿ, ಅದೋ ಸೇತುನಿರ್ಮಾಣವನ್ನು ಆರಂಭಿಸಿದ ಸ್ಥಳವಿದು. ಇಲ್ಲಿಯೇ ಮಹಾಮಹಿಮನಾದ ಪರಮೇಶ್ವರನು ನನಗೆ ಪ್ರಸನ್ನನಾದನು.* ಇದು ಪೂಜ್ಯವಾದ ಕ್ಷೇತ್ರ. ಇಲ್ಲಿಯೇ

* ಶ್ರೀರಾಮನು ಅಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದನೆಂದು ಪುರಾಣಾಂತರಗಳಿಂದ ತಿಳಿದು ಬರುತ್ತದೆ. ಅದೇ ರಾಮೇಶ್ವರ.

ವಿಭೀಷಣನು ಬಂದು ನನ್ನನ್ನು ಆಶ್ರಯಿಸಿದನು. ಜಾನಕಿ, ಎದುರಿಗೆ ನೋಡು. ಬಣ್ಣ ಬಣ್ಣದ ಹೂಗಳಿಂದ ವಿರಾಜಿಸುವ ಅರಣ್ಯವು ಕಾಣಿಸುತ್ತಿದೆ. ಅಲ್ಲಿಯೇ ಸುಗ್ರೀವನ ರಾಜಧಾನಿಯಾದ ಕಿಷ್ಕಿಂಧೆ ಇದೆ. ವಾಲಿಯನ್ನು ನಾನು ಸಂಹರಿಸಿದ್ದು ಇಲ್ಲಿ'' ಎಂದನು. ಸೀತಾದೇವಿಯು ಕಿಷ್ಕಿಂಧಾನಗರವನ್ನು ನೋಡಿದೊಡನೆ ಪ್ರಣಯದಿಂದ ಸಂಕೋಚ ಪಡುತ್ತಲೇ ಪತಿಯ ಮುಖವನ್ನು ನೋಡಿ ''ಆರ್ಯಪುತ್ರ, ಈ ವಾನರೇಂದ್ರರ ಪತ್ನಿಯರೂ ನಮ್ಮೊಡನೆ ಬರಬಹುದಲ್ಲವೆ? ಅವರೂ ಅಯೋಧ್ಯೆಗೆ ಬರಲೆಂದು ನನ್ನ ಅಭಿಲಾಷೆ'' ಎಂದಳು. ಶ್ರೀರಾಮನು 'ಆಗಬಹುದು' ಎಂದು ನುಡಿದು ಕಿಷ್ಕಿಂಧೆಯ ಸಮೀಪದಲ್ಲಿ ವಿಮಾನವನ್ನು ನಿಲ್ಲಿಸಿ ಸುಗ್ರೀವನನ್ನು ಕರೆದು ''ವಾನರೇಂದ್ರ, ಸಕಲಕಪಿವೀರರೂ ತಮ್ಮ ಪತ್ನಿಯರನ್ನು ಕರೆದುಕೊಂಡು ಬರುವಂತೆ ತಿಳಿಸು. ನಿನ್ನ ಅಂತಃಪುರದ ಸ್ತ್ರೀಯರೂ ಬರಲಿ. ಅವರೆಲ್ಲರೂ ಅಯೋಧ್ಯೆಗೆ ಬರಲೆಂದು ನಾವು ಬಯಸುತ್ತೇವೆ'' ಎಂದನು. ಅದರಂತೆ ಸುಗ್ರೀವನೂ ಇತರ ವಾನರಯೋಧರೂ ತಮ್ಮ ತಮ್ಮ ಪತ್ನಿಯನ್ನು ಕರೆದುಕೊಂಡು ಬಂದರು. ಆ ಸ್ತ್ರೀಯರೆಲ್ಲರಿಗೂ ಸೀತೆಯನ್ನು ನೋಡಲೇಬೇಕೆಂದು ಮುಖ್ಯವಾದ ಬಯಕೆಯಾಗಿತ್ತು. ಎಲ್ಲರೂ ಸಂಭ್ರಮದಿಂದ ಬಂದು ವಿಮಾನವನ್ನೇರಿದ ಮೇಲೆ ಆ ಪುಷ್ಪಕವಿಮಾನವು ಋಷ್ಯಮೂಕದ ಸಮೀಪಕ್ಕೆ ಬಂದಿತು. ಶ್ರೀರಾಮನು ಸೀತಾದೇವಿಯನ್ನು ಕುರಿತು, ''ರಾಜಪುತ್ರಿ, ಅಲ್ಲಿ ನೋಡು; ಅದೇ ಋಷ್ಯಮೂಕ ಪರ್ವತ. ವಾನರೇಂದ್ರನಾದ ಸುಗ್ರೀವನನ್ನು ನಾನು ಮೊದಲು ಕಂಡದ್ದು ಇಲ್ಲಿಯೇ. ಅಲ್ಲಿ ಕಾಣುವುದೇ ತಿಳಿನೀರಿನಿಂದ ತುಂಬಿದ್ದ ಪಂಪಾಸರೋವರ. ಜಾನಕಿ, ಈ ಪಂಪಾತೀರದಲ್ಲಿ ನಿನಗೋಸ್ಕರ ನಾನು ಎಷ್ಟೆಷ್ಟು ಹಲುಬಿಗೋಳಾಡಿದೆನೋ! ಕೆಳಗೆ ನೋಡು; ಶಬರಿ ಎಂಬ ಬ್ರಹ್ಮಚಾರಿಣಿ ನನ್ನನ್ನೂ ಲಕ್ಷ್ಮಣನನ್ನೂ ಉಪಚರಿಸಿದ ಸ್ಥಳವಿದು. ಕಬಂಧನೆಂಬ ಯೋಜನ ಬಾಹುವಾದ ರಾಕ್ಷಸನನ್ನು ನಾನು ಇಲ್ಲಿ ವಧಿಸಿದೆನು. ಪ್ರಿಯೆ, ಇದೇ ಜನಸ್ಥಾನ. ಘಾತುಕನಾದ ರಾವಣನಿಗೂ ಜಟಾಯುವಿಗೂ ಕಾಳಗವು ನಡೆದದ್ದು ಅಲ್ಲಿ. 'ಕಾಂತೆ, ಇಲ್ಲಿ ನೋಡು; ಇದೇ ನಮ್ಮ ಆಶ್ರಮ. ನಮ್ಮ ಪರ್ಣಶಾಲೆ. ರಾವಣನು ನಿನ್ನನ್ನು ಅಪಹರಿಸಿದ್ದು ಇಲ್ಲಿಯೇ ಅಲ್ಲವೆ? ಅದೋ, ಗೋದಾವರೀ ನದಿಯು ಹರಿಯುತ್ತಿದೆ. ಮೈಥಿಲಿ, ಅಲ್ಲಿ ಕಾಣಿಸುತ್ತಿರುವುದು ಅಗಸ್ತ್ಯ ಮುನಿಗಳ ಆಶ್ರಮ. ಈ ಕಡೆ ನೋಡು; ಕುಲಪತಿಗಳಾದ ಅತ್ರಿಮಹರ್ಷಿಗಳ ಆಶ್ರಮ. ಸೀತೆ, ಅವರ ಧರ್ಮಪತ್ನಿಯಾದ ವೃದ್ಧತಾಪಸಿಯನ್ನು ನೀನು ಸಂದರ್ಶಿಸಿದ ಪ್ರಸಂಗವು ನೆನಪಿದೆಯೇ? ಸುಂದರಿ, ಭರತನು ನನ್ನನ್ನು ಕರೆದೊಯ್ಯಲು ಇಲ್ಲಿಗೆ ಬಂದಿದ್ದನು. ಅದು ಭರದ್ವಾಜಾಶ್ರಮ. ಈ ಕಡೆ ನೋಡು; ಭಾಗೀರಥೀ ನದಿಯು ಕಾಣಿಸುತ್ತಿದೆ. ಇದು ಶೃಂಗವೇರಪುರ. ಗುಹನು ಬಂದದ್ದು

ಇಲ್ಲಿಯೇ. ಸೀತೆ, ನೋಡು ನೋಡು. ದೂರದಲ್ಲಿ ಸರಯೂ ನದಿ ಕಾಣುತ್ತಿದೆ. ಓಹೋ, ಅಲ್ಲಿ ಕಾಣಿಸುವುದೇ ಅಯೋಧ್ಯೆ! ನನ್ನ ತಂದೆಯ ರಾಜಧಾನಿ. ವೈದೇಹಿ, ಅಯೋಧ್ಯೆಗೆ ನಮಸ್ಕರಿಸು. ಕ್ಷೇಮವಾಗಿ ಹಿಂದಿರುಗಿ ಬಂದಿದ್ದೀಯೆ'' ಎಂದು ಹೇಳಿದನು. ಅಯೋಧ್ಯೆಯ ಹೆಸರನ್ನು ಕೇಳಿದೊಡನೆ ಸಕಲವಾನರರೂ ವಿಭೀಷಣನೂ ಮೇಲಕ್ಕೆ ಎದ್ದೆದ್ದು ಕುತೂಹಲದಿಂದ ಅಯೋಧ್ಯಾ ನಗರವನ್ನು ವೀಕ್ಷಿಸಿದರು.

೭೮

ಭರದ್ವಾಜ ಮುನಿಗಳಿಂದ ಸತ್ಕಾರ. ಹನುಮಂತನು ಭರತನಿಗೆ ಶ್ರೀರಾಮನ ಆಗಮನ ವೃತ್ತಾಂತವನ್ನು ತಿಳಿಸುವುದು

ಆ ಸಮಯದಲ್ಲಿ ಪುಷ್ಪಕವಿಮಾನವು ಭರದ್ವಾಜ ಮುನಿಗಳ ಆಶ್ರಮದ ಬಳಿಗೆ ಬಂದಿತ್ತು. ಶ್ರೀರಾಮನು ವನವಾಸಕ್ಕಾಗಿ ಅಯೋಧ್ಯೆಯಿಂದ ಹೊರಟು ಹದಿನಾಲ್ಕು ವರ್ಷಗಳು ಸಂದಿದ್ದವು. ಚೈತ್ರ ಶುಕ್ಲ ಪಂಚಮಿಯ ದಿನ ಶ್ರೀರಾಮನು ಅಲ್ಲಿಗೆ ಬಂದನು. ಆ ಮಹರ್ಷಿಗಳನ್ನು ಕಂಡು ಹೋಗಬೇಕೆಂದು ವಿಮಾನದಿಂದಿಳಿದು ಆಶ್ರಮಕ್ಕೆ ತೆರಳಿ ಭರಧ್ವಾಜ ಮುನಿಗಳಿಗೆ ಭಕ್ತಿಯಿಂದ ವಂದಿಸಿದನು. ಆ ತಪಸ್ವಿಗಳನ್ನು ಕುರಿತು ''ಮಹರ್ಷಿಗಳೆ, ಅಯೋಧ್ಯೆಯ ವೃತ್ತಾಂತವು ತಮಗೆ ತಿಳಿದಿದೆಯೆ? ಪ್ರಜೆಗಳೆಲ್ಲರೂ ಕುಶಲದಿಂದ ಇದ್ದಾರೆಯೆ? ಭರತನು ಪ್ರಜಾಪಾಲನೆಯಲ್ಲಿ ನಿರತನಾಗಿರುವನೆ? ನನ್ನ ತಾಯಂದಿರೆಲ್ಲರೂ ಬದುಕಿದ್ದಾರೆಯೆ?'' ಎಂದು ಕೇಳಿದನು. ಆಗ ಭರದ್ವಾಜರು ಸಂತುಷ್ಟರಾಗಿ ''ರಘುಕುಲೋತ್ತಮ, ಅಯೋಧ್ಯೆಯಲ್ಲಿ ಎಲ್ಲವೂ ಒಳ್ಳೆಯದು. ನಿನ್ನ ತಾಯಂದಿರು ಕ್ಷೇಮದಿಂದಿದ್ದಾರೆ. ಭರತನು ಜಟೆಯನ್ನು ಧರಿಸಿ ವ್ರತನಿಷ್ಠನಾಗಿ ನಿನ್ನನ್ನೇ ಎದುರು ನೋಡುತ್ತಿದ್ದಾನೆ. ನೀನು ಕೊಟ್ಟಿದ್ದ ಪಾದುಕೆಗಳನ್ನು ಎದುರಿಗಿಟ್ಟುಕೊಂಡು ರಾಜ್ಯಪಾಲನೆಯಲ್ಲಿ ನಿರತನಾಗಿದ್ದಾನೆ. ಶ್ರೀರಾಮ, ಪಿತೃವಾಕ್ಯ ಪರಿಪಾಲನೆಗಾಗಿ ನೀನು ಕಾಲ್ನಡಿಗೆಯಲ್ಲಿ ವನವಾಸಕ್ಕೆ ಹೊರಟೆಯಷ್ಟೆ. ಕೇವಲ ಸೀತಾ ಲಕ್ಷ್ಮಣರೊಡನೆ ಬಂದಿದ್ದ ನಿನ್ನನ್ನು ನೋಡಿ ನನಗೆ ತುಂಬಾ ಮರುಕ ಉಂಟಾಯಿತು. ರಾಜಪುತ್ರನಾದ ನೀನು ಹದಿನಾಲ್ಕು ವರ್ಷಗಳ ಕಾಲ ನಾರು ಬೇರುಗಳನ್ನು ತಿಂದು ಜೀವಿಸಿರಬೇಕಾಯಿತೆ? ಎಲೈ ವೀರಾಗ್ರಣಿ, ಈಗ ವೈರಿಗಳನ್ನು ಸಂಹರಿಸಿ ಕೃತಕೃತ್ಯನಾಗಿ ಮಿತ್ರಪರಿವಾರದೊಡನೆ ಬಂದಿರುವ ನಿನ್ನನ್ನು ನೋಡಿ, ರಾಮ, ನನಗೆ ಪರಮಾನಂದವಾಗಿದೆ. ನಿನಗೊದಗಿದ ಸುಖದುಃಖಗಳು ನೀನು ನಡೆಸಿದ ಕಾರ್ಯಗಳು ಎಲ್ಲವೂ ನನಗೆ ತಪೋಬಲದಿಂದ ತಿಳಿದಿದ್ದವು. ರಾವಣನನ್ನು ಸಂಹರಿಸಿ ಸಾಧ್ವಿಯಾದ ಸೀತಾದೇವಿಯನ್ನು ಕರೆದುಕೊಂಡು ಹಿಂದಿರುಗಿದ್ದೀಯೆ. ಹೇ ಧರ್ಮಾತ್ಮ, ಈದಿನ ನನ್ನ

ಸತ್ಕಾರವನ್ನು ಸ್ವೀಕರಿಸು. ನಾಳೆ ಅಯೋಧ್ಯೆಗೆ ಹೋಗಬಹುದು'' ಎಂದು ಹೇಳಿದರು. ಶ್ರೀರಾಮನು ಹಾಗೆಯೇ ಆಗಲೆಂದು ತಲೆಬಾಗಿ ಭರದ್ವಾಜರ ಆಜ್ಞೆಯನ್ನು ಮನ್ನಿಸಿದನು. ಆ ಮಹರ್ಷಿಗಳ ತಪೋಬಲದಿಂದ ಅರಣ್ಯದಲ್ಲಿದ್ದ ಸಕಲ ವೃಕ್ಷಗಳೂ ಫಲಪುಷ್ಪಗಳಿಂದ ಶೋಭಿಸಿದವು. ಸಕಲ ವೃಕ್ಷಗಳೂ ಕಲ್ಪವೃಕ್ಷಗಳಂತಾದವು. ಎಲ್ಲ ಮರಗಳಲ್ಲಿಯೂ ಹಣ್ಣುಗಳು ತುಂಬಿದವು. ವಾನರರು ಗುಂಪುಗುಂಪಾಗಿ ಹೋಗಿ ಹಣ್ಣುಗಳನ್ನು ತಿಂದು ಜೇನನ್ನು ಕುಡಿದು ಸಂತೋಷದಿಂದ ನಲಿದಾಡಿದರು.

ಇತ್ತಲಾಗಿ ಶ್ರೀರಾಮನು ಆಂಜನೇಯನನ್ನು ಕರೆದು ''ವಾನರೋತ್ತಮ, ಅಯೋಧ್ಯೆಯ ನಮ್ಮ ಅರಮನೆಯಲ್ಲಿ ಎಲ್ಲರೂ ಕುಶಲದಿಂದಿರುವರೇ ಎಂಬುದನ್ನು ತಿಳಿದು ಬಾ. ಮೊದಲು ಶೃಂಗವೇರಪುರಕ್ಕೆ ಹೋಗಿ ನಿಷಾದರಾಜನಾದ ಗುಹನಿಗೆ ನನ್ನ ಕುಶಲವನ್ನು ತಿಳಿಸು. ಆಮೇಲೆ ನಂದಿಗ್ರಾಮಕ್ಕೆ ಹೋಗಿ ಭರತನನ್ನು ಕಂಡು ನನ್ನ ಕುಶಲವಾರ್ತೆಯನ್ನು ಅರುಹು. ನಾನು ವನವಾಸವನ್ನು ಮುಗಿಸಿ ಪತ್ನೀಸಮೇತನಾಗಿ ಲಕ್ಷ್ಮಣನೊಡನೆ ಬಂದಿದ್ದೇನೆಂದು ಹೇಳು. ಸುಗ್ರೀವನ ಸಖ್ಯ, ವಾಲಿವಧೆ, ಸೇತುನಿರ್ಮಾಣ, ರಾವಣಾದಿ ರಾಕ್ಷಸರ ಸಂಹಾರ ಮೊದಲಾದ ಎಲ್ಲ ವೃತ್ತಾಂತಗಳನ್ನೂ ತಿಳಿಸು. ಹನುಮಂತ, ಇದೆಲ್ಲವನ್ನೂ ತಿಳಿಸುವಾಗ ಭರತನ ಮುಖದಲ್ಲಿ ಯಾವ ಬದಲಾವಣೆಯಾಗುತ್ತದೆ – ಎಂಬುದನ್ನು ಸೂಕ್ಷ್ಮವಾಗಿ ಗಮನಿಸು. ಪರೇಂಗಿತವನ್ನು ತಿಳಿಯಲು ನೀನು ಸಮರ್ಥನಾಗಿದ್ದೀಯೆ. ಪಿತೃಪಿತಾಮಹ ಪರಂಪರೆಯಿಂದ ಬಂದ ಸಮೃದ್ಧವಾದ ರಾಜ್ಯವು ಭರತನಿಗೆ ದೊರಕಿದೆ. ಅದು ಯಾರ ಮನಸ್ಸನ್ನು ಆಕರ್ಷಿಸದೇ ಇದ್ದೀತು? ಸೌಮ್ಯ, ದೀರ್ಘಕಾಲದವರೆಗೆ ಆಡಳಿತವನ್ನು ನಡೆಸಿದ ಭರತನಿಗೆ ನಾನು ಬಂದ ವೃತ್ತಾಂತದಿಂದ ಸ್ವಲ್ಪವಾದರೂ ಅಸಮಾಧಾನ ವಾಗಿದ್ದರೆ ನನಗೆ ಬಂದು ತಿಳಿಸು. ಹನುಮಂತ, ಕೂಡಲೇ ನಾನು ಹೀಗೆಯೇ ಮತ್ತೆ ವನವಾಸಕ್ಕೆ ಹೊರಟುಹೋಗುವೆನು. ಭರತನೇ ರಾಜ್ಯವನ್ನು ಆಳಿಕೊಂಡಿರಲಿ'' ಎಂದನು. ಒಡನೆಯೇ ಮಾರುತಾತ್ಮಜನು ಅತಿವೇಗದಿಂದ ಧೀಂಕಿಟ್ಟು ಅಯೋಧ್ಯೆಯ ಕಡೆಗೆ ಹೊರಟನು. ಅವನು ಮಾನುಷರೂಪವನ್ನು ಧರಿಸಿ ಶೃಂಗವೇರಪುರಕ್ಕೆ ಹೋಗಿ ಗುಹನಿಗೆ ಶ್ರೀರಾಮನು ಬಂದ ಸುದ್ದಿಯನ್ನು ಹೇಳಿ ನೇರವಾಗಿ ನಂದಿಗ್ರಾಮದ ಕಡೆಗೆ ಹಾರಿದನು. ಆ ಕಪಿಕುಂಜರನು ಅಲ್ಲಿಂದ ಹಾರಿ ಹೋಗಿ ನಂದಿಗ್ರಾಮವನ್ನು ಸೇರಿ ದನು. ಭರತನು ನಾರು ಬಟ್ಟೆಯನ್ನುಟ್ಟು ಕೃಷ್ಣಾಜಿನವನ್ನು ಹೊದೆದು ತಾಪಸ ವೇಷದಲ್ಲಿದ್ದನು. ಅವನ ದೇಹವು ಕೃಶವಾಗಿತ್ತು, ತಲೆಯಲ್ಲಿ ಜಟೆಯು ಬೆಳೆದಿತ್ತು, ಫಲಮೂಲಗಳನ್ನು ತಿನ್ನುತ್ತ ದೇಹವನ್ನು ಸವೆಸುತ್ತಿದ್ದ ಆ ರಾಜಪುತ್ರನು ಒಬ್ಬ ತಪಸ್ವಿಯೇ ಆಗಿದ್ದನು. ಅವನ ಮುಖದಲ್ಲಿ ಋಷಿಸಮಾನವಾದ ತೇಜಸ್ಸು

ಕಂಗೊಳಿಸುತ್ತಿತ್ತು. ಈ ಪ್ರಕಾರವಾಗಿ ದೇಹಧಾರಿಯಾದ ಧರ್ಮವೋ ಎಂಬಂತಿದ್ದ ಭರತನನ್ನು ನೋಡಿ, ಮನುಷರೂಪವನ್ನು ಧರಿಸಿದ ಹನುಮಂತನು ಬಳಿಗೆ ಸಾರಿ ಕೈಮುಗಿದುಕೊಂಡು ಹೀಗೆಂದನು. ''ರಾಜಪುತ್ರ, ನಿನ್ನ ಅಣ್ಣನಾದ ಶ್ರೀರಾಮನು ಕುಶಲದಿಂದ ಇದ್ದಾನೆ. ಯಾವ ಸೋದರನಿಗಾಗಿ ನೀನು ಶೋಕಿಸುತ್ತಿರುವಯೋ ಆತನು ನಿನ್ನ ಕುಶಲವನ್ನು ವಿಚಾರಿಸಿದ್ದಾನೆ. ರಾಜಕುಮಾರ, ನಿನಗೆ ಸಂತೋಷದ ಸುದ್ದಿಯನ್ನು ಹೇಳುತ್ತಿದ್ದೇನೆ. ಶೋಕವನ್ನು ಪರಿತ್ಯಜಿಸು. ಇನ್ನು ಸ್ವಲ್ಪ ಕಾಲದಲ್ಲಿಯೇ ನಿನ್ನ ಅಣ್ಣನಾದ ಶ್ರೀರಾಮನೊಡನೆ ಸೇರಿಕೊಳ್ಳುವೆ. ಧರ್ಮಪತ್ನಿಯಾದ ಮೈಥಿಲಿಯನ್ನು ಅಪಹರಿಸಿದ್ದ ರಾವಣನನ್ನು ಸಂಹರಿಸಿ ಆ ದೇವಿಯಿಂದ ಸಹಿತನಾಗಿ ಲಕ್ಷ್ಮಣನೊಡನೆ ಬರುತ್ತಿದ್ದಾನೆ. ಅವನಿಗೆ ಸಹಾಯಮಾಡಿದ ಬಲಾಢ್ಯರಾದ ವಾನರ ಮಿತ್ರರೂ ಜೊತೆಗೆ ಬರುತ್ತಿದ್ದಾರೆ. ಕೀರ್ತಿಶಾಲಿಯಾದ ಸೀತಾದೇವಿಯು ದೇವೇಂದ್ರನೊಡನಿರುವ ಶಚೀದೇವಿಯಂತೆ ಶ್ರೀರಾಮನೊಡನೆ ಕ್ಷೇಮದಿಂದ ವಿರಾಜಿಸುತ್ತಿದ್ದಾಳೆ'' ಎಂದನು. ಹನುಮಂತನು ಹೀಗೆ ಹೇಳಿದುದೇ ತಡ, ಅಣ್ಣನಿಗಾಗಿ ಹಂಬಲಿಸುತ್ತಿದ್ದ ಭರತನು ಆನಂದಪರವಶನಾದನು. ಹರ್ಷಾತಿರೇಕದಿಂದ ಅವನಿಗೆ ಎಚ್ಚರದಪ್ಪಿದಂತಾಯಿತು. ಆನಂದಬಾಷ್ಪಗಳು ಭರತನ ಕಣ್ಣುಗಳಿಂದ ಬಳಬಳನೆ ಹರಿದವು. ಅವನು ಹನುಮಂತನನ್ನು ನೋಡಿ ''ಸೌಮ್ಯ, ನನ್ನಲ್ಲಿ ಕೃಪೆಯಿಟ್ಟು ಬಂದು ಈ ಸಂತೋಷದ ಸುದ್ದಿಯನ್ನು ಹೇಳಿರುವೆಯಲ್ಲ. ನೀನು ಯಾರು? ದೇವತೆಯೋ? ಮಾನವನೋ? ನಿನಗೆ ಯಾವ ಪಾರಿತೋಷಕವನ್ನೀಯಲಿ? ಸಾವಿರಾರು ಗೋವುಗಳನ್ನೂ ಗ್ರಾಮಗಳನ್ನೂ ನಿನಗೆ ಕೊಡುವೆನು. ಬ್ರಹ್ಮಚಾರಿಯಂತೆ ಕಾಣುತ್ತಿದ್ದೀಯೆ? ಸದಾಚಾರ ಸಂಪನ್ನೆಯರಾದ ಹದಿನಾರು ಮಂದಿ ಕನ್ಯೆಯರನ್ನು ಕೊಟ್ಟು ನಿನಗೆ ಮದುವೆ ಮಾಡಿಸುವೆನು! ನೀನು ಸುಖದಿಂದಿರಬಹುದು'' ಎಂದು ಉದ್ಗರಿಸಿದನು. ಭರತನ ಸಂತೋಷವನ್ನು ಹೇಳಲಳವಲ್ಲ. ಅವನು ಮತ್ತೆ ಇಂತೆಂದನು. ''ಸೌಮ್ಯ, ನನ್ನ ಅಣ್ಣನು ಘೋರವಾದ ವನವನ್ನು ಪ್ರವೇಶಿಸಿ ಬಹಳ ವರ್ಷಗಳು ಕಳೆದುಹೋದವು. ನನ್ನ ಸ್ವಾಮಿಯ ಕುಶಲ ವಾರ್ತೆಯನ್ನು ಈಗ ಕೇಳುತ್ತಿದ್ದೇನೆ. ಆಹಾ, ಮನುಷ್ಯನು ಬದುಕಿದ್ದರೆ ನೂರು ವರ್ಷಗಳ ಮೇಲಾದರೂ ಒಂದು ಸಲ ಆನಂದದ ಪ್ರಸಂಗವು ಬರುವುದು ಎಂಬ ಗಾದೆ ಸತ್ಯವಾಯಿತು'' ಎಂದನು. ಆಮೇಲೆ ಹನುಮಂತನಿಗೆ ಒಂದು ಪೀಠವನ್ನು ಕೊಟ್ಟು ಕುಳ್ಳಿರಿಸಿ ವನದಲ್ಲಿ ನಡೆದ ಚರಿತೆ ಏನೆಂಬುದನ್ನು ಹೇಳಬೇಕೆಂದು ಕೇಳಿದನು. ಹನುಮಂತನು ಎಲ್ಲ ವಿವರಗಳನ್ನೂ ತಿಳಿಸಿದನು. ಚಿತ್ರಕೂಟದಿಂದ ಭರತನು ಹಿಂದಿರುಗಿದ ಮೇಲೆ ಮುಂದೆ ನಡೆದ ವೃತ್ತಾಂತ, ರಾವಣನಿಂದ ಸೀತಾಪಹರಣ, ಸುಗ್ರೀವಸಖ್ಯ, ವಾಲಿವಧೆ, ಸುಗ್ರೀವನ ಸ್ನೇಹದಿಂದ

ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದ್ದು, ರಾವಣನ ವಧೆ, ವಿಭೀಷಣನ ಪಟ್ಟಾಭಿಷೇಕ–ಇವೆಲ್ಲವನ್ನೂ ಯಥಾವತ್ತಾಗಿ ವಿವರಿಸಿದನು. ಅಲ್ಲದೆ ಶ್ರೀರಾಮನು ವಾನರಾದಿಗಳಿಂದ ಪರಿವೃತನಾಗಿ ಪುಷ್ಪಕವಿಮಾನವನ್ನೇರಿ ಗಂಗಾತೀರಕ್ಕೆ ಬಂದು ಭರದ್ವಾಜ ಮುನಿಗಳ ಆಶ್ರಮದಲ್ಲಿ ಈಗ ಇಳಿದುಕೊಂಡಿದ್ದಾನೆ ಎಂದು ತಿಳಿಸಿ, ''ನಾಳೆ ಪುಷ್ಯನಕ್ಷತ್ರದಲ್ಲಿ ಯಾವ ಆತಂಕವೂ ಇಲ್ಲದೆ ನೀನು ಶ್ರೀರಾಮನನ್ನು ಸಂದರ್ಶಿಸಬಹುದು'' ಎಂದನು. ಭರತನೂ ಶತ್ರುಘ್ನನೂ ಇವೆಲ್ಲವನ್ನೂ ಕುತೂಹಲದಿಂದ ಆಲಿಸುತ್ತಿದ್ದರು. ಅನಂತರ ಭರತನು ಕೈಮುಗಿದುಕೊಂಡು ''ಓ ಮಹಾತ್ಮ, ಬಹುಕಾಲದ ಮೇಲೆ ನನ್ನ ಮನೋರಥವು ಸಿದ್ಧಿಸಿತು'' ಎಂದು ಹರ್ಷದಿಂದ ನುಡಿದನು.

೭೯

ಭರತ ಸಮಾಗಮ, ನಂದಿಗ್ರಾಮಕ್ಕೆ ಆಗಮನ

ಅನಂತರ ತನ್ನಂತೆಯೇ ಹರ್ಷೋಲ್ಲಸಿತನಾಗಿದ್ದ ಶತ್ರುಘ್ನನನ್ನು ನೋಡಿ ''ಶತ್ರುಘ್ನ, ಈ ಸಂತೋಷದ ಸುದ್ದಿಯನ್ನು ನಗರವಾಸಿಗಳಿಗೆ ತಿಳಿಸು. ಪೌರರೆಲ್ಲರೂ ಮನೆ ಬಾಗಿಲುಗಳನ್ನು ಅಲಂಕರಿಸಿ ದೇವತಾರ್ಚನೆಯನ್ನು ಮಾಡಲಿ. ಮಂಗಳ ವಾದ್ಯಗಳು ಭೋರ್ಗರೆಯಲಿ. ಶ್ರೀರಾಮನ ಆಗಮನವನ್ನು ಸ್ವಾಗತಿಸುವುದಕ್ಕಾಗಿ ಎಲ್ಲರೂ ಬರಲಿ'' ಎಂದನು. ಅಂತೆಯೇ ಶ್ರೀರಾಮನ ಆಗಮನ ವಾರ್ತೆಯನ್ನು ತಿಳಿದು ಮಾರನೆಯ ದಿನ ರಾಜಪತ್ನಿಯರೂ, ಅಮಾತ್ಯರೂ, ಸೈನಿಕರೂ, ಪೌರರೂ ಸಾಮಂತರಾಜರೂ ಬ್ರಾಹ್ಮಣರೂ ರಾಘವನನ್ನು ಸ್ವಾಗತಿಸುವುದಕ್ಕಾಗಿ ಹೊರಟರು. ಎಂಟು ಮಂದಿ ಸಚಿವರೂ ಆಗಮಿಸಿದರು. ದಶರಥನ ಅಂತಃಪುರ ಸ್ತ್ರೀಯರೆಲ್ಲರೂ ಕೌಸಲ್ಯೆಯನ್ನೂ, ಸುಮಿತ್ರೆಯನ್ನೂ ಮುಂದಿಟ್ಟುಕೊಂಡು ಪಲ್ಲಕ್ಕಿಯಲ್ಲಿ ಕುಳಿತು ಆಗಮಿಸಿದರು. ಸಂತುಷ್ಟಳಾದ ಕೈಕೇಯಿಯೂ ಆಗಮಿಸಿದಳು. ಅಯೋಧ್ಯಾನಗರವೇ ನಂದಿಗ್ರಾಮಕ್ಕೆ ಬಂದಂತೆ ತೋರಿತು.

ಇತ್ತಲಾಗಿ ಭರತನು ಅಣ್ಣನ ಪಾದುಕೆಗಳನ್ನು ತನ್ನ ಶಿರಸ್ಸಿನ ಮೇಲೆ ಇಟ್ಟುಕೊಂಡು ಶ್ರೀರಾಮನನ್ನು ಸ್ವಾಗತಿಸುವುದಕ್ಕಾಗಿ ಹೊರಟನು. ಶತ್ರುಘ್ನನು ಶ್ವೇತಚ್ಛತ್ರವನ್ನು ಪಾದುಕೆಗಳಮೇಲೆ ಹಿಡಿದು ಬಂದನು. ಎರಡು ಪಾರ್ಶ್ವಗಳಲ್ಲಿಯೂ ಸೇವಕರು ಬಿಳಿಯ ಚಾಮರಗಳನ್ನು ಪಾದುಕೆಗಳಿಗೆ ಬೀಸುತ್ತ ಬಂದರು. ಧರ್ಮನಿಷ್ಠನಾದ ಭರತನು ನಾರು ಬಟ್ಟೆಯನ್ನುಟ್ಟು ಕೃಷ್ಣಾಜಿನವನ್ನು ಹೊದೆದಿದ್ದನು. ಕಳೆದ ಹದಿನಾಲ್ಕು ವರ್ಷಗಳಲ್ಲಿ ಸಂತೋಷವೆಂದರೇನೆಂಬುದನ್ನು ಆದಿನವೇ ಭರತನು

ಕಂಡಿದ್ದನು. ನಂದಿಗ್ರಾಮದಿಂದ ಭರದ್ವಾಜಾಶ್ರಮದ ದಿಕ್ಕಿಗೆ ಸ್ವಲ್ಪದೂರ ಪ್ರಯಾಣ ಮಾಡಿದನು. ಶ್ರೀರಾಮನ ಸುಳಿವು ಕಾಣಲಿಲ್ಲ. ಅವನು ಹನುಮಂತನನ್ನು ನೋಡಿ ''ಏನಯ್ಯ ಇದು? ನಿನ್ನ ಕಪಿಚೇಷ್ಟೆಯನ್ನೇನೂ ತೋರಿಸಿಲ್ಲವಷ್ಟೆ? ನಾನು ಶ್ರೀರಾಮನನ್ನೂ ಕಾಣಲಿಲ್ಲ. ವಾನರರ ಸುಳಿವೂ ಇಲ್ಲ'' ಎಂದನು. ಆಗ ಹನುಮಂತನು ''ಭರತ, ಭರದ್ವಾಜಾಶ್ರಮದಲ್ಲಿ ಆ ಮಹರ್ಷಿಗಳು ಒಂದು ಔತಣಕೂಟವನ್ನೇರ್ಪಡಿಸಿದ್ದರು. ವಾನರರು ಆ ಕಾರಣದಿಂದ ತಡಮಾಡಿರಬಹುದು. ಶ್ರೀರಾಮನು ಭರದ್ವಾಜ ಮುನಿಗಳೊಡನೆ ಸಂಭಾಷಣೆಯಲ್ಲಿ ತೊಡಗಿರಬಹುದು. ಆದ್ದರಿಂದ ಸ್ವಲ್ಪ ತಡವಾಯಿತೆಂದು ತೋರುತ್ತದೆ. ಭರತ, ಅಲ್ಲಿ ನೋಡು! ಅದೇ ಪುಷ್ಪಕವಿಮಾನ! ಅದರಲ್ಲಿ ಶ್ರೀರಾಮ ಲಕ್ಷ್ಮಣರೂ ಸೀತಾದೇವಿಯೂ ಮಂಡಿಸಿದ್ದಾರೆ. ವಾನರೇಶ್ವರನಾದ ಸುಗ್ರೀವನೂ ರಾಕ್ಷಸರಾಜನಾದ ವಿಭೀಷಣನೂ ಅಲ್ಲಿದ್ದಾರೆ'' ಎಂದನು. ಶ್ರೀರಾಮನು ಬರುತ್ತಿದ್ದ ವಿಮಾನವೆಂದು ತಿಳಿದೊಡನೆ ನೆರೆದಿದ್ದ ಸಮಸ್ತರೂ ಹರ್ಷಘೋಷ ಮಾಡಿದರು. ವಿಮಾನವು ಕೆಳಗಿಳಿಯಿತು. ವಿಮಾನದ ಬಾಗಿಲಲ್ಲಿಯೇ ನಿಂತಿದ್ದ ಶ್ರೀರಾಮಚಂದ್ರನನ್ನು ಕಂಡೊಡನೆ ಭರತನು ''ಅಣ್ಣಾ ಅಣ್ಣಾ, ನಿನಗೆ ಸ್ವಾಗತ; ನನ್ನ ಮೇಲೆ ಕೃಪೆಯಿಟ್ಟು ನನಗಾಗಿ ಬಂದೆಯಲ್ಲವೆ?'' ಎಂದು ಉದ್ಗರಿಸುತ್ತಾ ಆನಂದ ಬಾಷ್ಪವನ್ನು ಸುರಿಸಿದನು. ಆಮೇಲೆ ರಾಘವನು ಭರತನನ್ನು ಒಳಗೆ ಬರಮಾಡಿಕೊಳ್ಳಲು ಭರತನು ಆನಂದದಿಂದ ಒಳಗೆ ಹೋಗಿ ಶ್ರೀರಾಮನಿಗೆ ಅಭಿವಾದನೆ ಮಾಡಿದನು. ರಾಘವನು ಪ್ರೀತಿಯಿಂದ ಎತ್ತಿ ಭರತನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಹರ್ಷದಿಂದ ಅವನನ್ನು ಅಪ್ಪಿಕೊಂಡನು. ಆಮೇಲೆ ಭರತನು ಸೀತಾದೇವಿಗೆ ಅಭಿವಾದನೆ ಮಾಡಿ ಲಕ್ಷ್ಮಣನನ್ನೂ ಆಲಿಂಗಿಸಿಕೊಂಡು ಪ್ರೀತ್ಯಾದರ ಗಳಿಂದ ಅವನ ಕುಶಲವನ್ನು ವಿಚಾರಿಸಿದನು. ಆಮೇಲೆ ಶ್ರೀರಾಮನು ಭರತನಿಗೆ ಸುಗ್ರೀವ, ಜಾಂಬವಂತ, ಅಂಗದ ಮೊದಲಾದ ಕಪಿಯೋಧರನ್ನು ಪರಿಚಯ ಮಾಡಿಕೊಟ್ಟನು. ಭರತನು ಅವರೆಲ್ಲರನ್ನೂ ಅಪ್ಪಿಕೊಂಡು ಕಾಲೋಚಿತವಾದ ಪ್ರೀತಿಯ ನುಡಿಗಳನ್ನಾಡಿದನು. ಸುಗ್ರೀವನನ್ನು ಆಲಂಗಿಸಿಕೊಂಡು ಭರತನು ''ಸುಗ್ರೀವ, ನನ್ನ ಅಣ್ಣನಿಗೆ ನೀನು ನೀಡಿದ ನೆರವು ಬಹುದೊಡ್ಡದು. ಇದುವರೆಗೆ ನಾವು ನಾಲ್ವರು ಅಣ್ಣ ತಮ್ಮಂದಿರಾಗಿದ್ದೆವು. ಈಗ ಐದನೆಯ ಸೋದರನಾಗಿ ನೀನು ನಮ್ಮಲ್ಲಿ ಸೇರಿದೆ'' ಎಂದನು. ಅನಂತರ ವಿಭೀಷಣನ ಕಡೆಗೆ ತಿರುಗಿ ಒಳ್ಳೆಯ ಮಾತುಗಳನ್ನಾಡಿ ''ವಿಭೀಷಣ, ನಮ್ಮ ಭಾಗ್ಯದಿಂದ ಶ್ರೀರಾಮನಿಗೆ ನಿನ್ನ ಸಹಾಯ ದೊರಕಿತು. ನಿನ್ನಿಂದಾದ ಉಪಕಾರವನ್ನು ನಾವು ಎಂದಿಗೂ ಮರೆಯಲಾರೆವು'' ಎಂದನು. ಅಷ್ಟರಲ್ಲಿ ಶತ್ರುಘ್ನನೂ ಸಹ ಶ್ರೀರಾಮನಿಗೂ ಜಾನಕಿಗೂ ಲಕ್ಷ್ಮಣನಿಗೂ

ಅಭಿವಾದನೆ ಮಾಡಿದನು. ಅನಂತರ ಕಪಿವೀರರನ್ನೆಲ್ಲಾ ಆದರಿಸಿ ಕುಶಲವಾರ್ತೆಯನ್ನು ಕೇಳಿದನು. ಆಮೇಲೆ ಶ್ರೀರಾಮನು ತನ್ನ ತಾಯಿಯಾದ ಕೌಸಲ್ಯೆಯ ಬಳಿಗೆ ಹೋಗಿ ವ್ಯಥೆಯಿಂದ ಕಂದಿ, ಕುಂದಿ, ಶೋಕಾಕುಲಳಾಗಿದ್ದ ಅವಳ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು. ''ಅಮ್ಮ, ನಿನ್ನ ಆಜ್ಞೆಯನ್ನುಲ್ಲಂಘಿಸಿ ನಾನು ಅಡವಿಗೆ ಹೋದದ್ದಕ್ಕಾಗಿ ನನ್ನನ್ನು ಮನ್ನಿಸು'' ಎಂದು ಹೇಳಿ ಅವಳನ್ನು ಸಂತೈಸಿದನು. ಆಮೇಲೆ ರಾಘವನು ಸುಮಿತ್ರೆಯನ್ನೂ ಕೈಕೇಯಿಯನ್ನೂ ವಂದಿಸಿ ಸಮಸ್ತ ಮಾತೆಯರಿಗೂ ಪ್ರಣಾಮಗಳನ್ನರ್ಪಿಸಿದನು. ಜಾನಕಿಯು ಕೌಸಲ್ಯೆ, ಸುಮಿತ್ರೆ, ಕೈಕೇಯಿಯರಿಗೆ ನಮಸ್ಕರಿಸಲು, ಅವರೆಲ್ಲರೂ ಆನಂದಬಾಷ್ಪಗಳನ್ನು ಸುರಿಸುತ್ತ ಜಾನಕಿಯನ್ನು ಪ್ರೀತಿಯಿಂದ ಅಪ್ಪಿಕೊಂಡರು. ಅಷ್ಟರಲ್ಲಿ ವಸಿಷ್ಠ ಮುನಿಗಳು ಕಾಣಿಸಿದರು. ಒಡನೆಯೇ ರಾಘವನು ಬಳಿಗೆ ಹೋಗಿ ಅವರ ಪಾದಗಳಿಗೆ ಅಭಿವಂದಿಸಿದನು. ಎಲ್ಲರೂ ವಿಮಾನದಿಂದ ಹೊರಗೆ ಬಂದರು. ನೆರೆದಿದ್ದ ಪೌರರೆಲ್ಲರೂ ಶ್ರೀರಾಮನಿಗೆ ಜಯವಾಗಲಿ ! ಜಯವಾಗಲಿ ! ಎಂದು ಉದ್ಘೋಷಿಸುತ್ತಾ ''ಓ ಮಹಾಬಾಹು, ನಿನಗೆ ಸುಖಾಗಮನವನ್ನು ಬಯಸುತ್ತೇವೆ'' ಎಂದರು. ಅವರೆಲ್ಲರೂ ಕೈಮುಗಿದು ನಿಂತಿರಲು ಅವರ ಅಂಜಲಿಗಳು ಅರಳುತ್ತಿರುವ ತಾವರೆಗಳಂತೆ ಗೋಚರಿಸಿದವು. ಭರತನು ಅವರೆಲ್ಲರೆದುರಿಗೆ ತಾನು ತಂದಿದ್ದ ಪಾದುಕೆಗಳನ್ನು ಶ್ರೀರಾಮನ ಪಾದಗಳಿಗೆ ತೊಡಿಸಿ ಕೈಮುಗಿದುಕೊಂಡು ''ಮಹಾರಾಜ, ನನ್ನಲ್ಲಿ ನ್ಯಾಸವಾಗಿಟ್ಟಿದ್ದ ನಿನ್ನ ರಾಜ್ಯವನ್ನು ಇದುವರೆಗೆ ರಕ್ಷಿಸಿಕೊಂಡು ಬಂದಿದ್ದೇನೆ. ಈಗ ಇದೆಲ್ಲವನ್ನೂ ನಿನಗೆ ಒಪ್ಪಿಸಿದ್ದೇನೆ. ನನ್ನ ಮನೋರಥವು ಸಿದ್ಧಿಸಿತು. ಈ ದಿನ ನನ್ನ ಜನ್ಮ ಕೃತಾರ್ಥವಾಯಿತು. ನಿನ್ನ ರಾಜಭಂಡಾರ, ರಾಜಧಾನಿ, ಚತುರಂಗಬಲ ಇವೆಲ್ಲವು ಗಳನ್ನೂ ನಿನಗೆ ಅರ್ಪಿಸಿದ್ದೇನೆ. ನಿನ್ನ ತೇಜೋಬಲದಿಂದ ರಾಜಭಂಡಾರವನ್ನು ಒಂದಕ್ಕೆ ಹತ್ತರಷ್ಟಾಗಿ ಹೆಚ್ಚಿಸಿದ್ದೇನೆ'' ಎಂದು ಭಕ್ತಿಯಿಂದ ನಿವೇದಿಸಿದನು. ಭ್ರಾತೃವತ್ಸಲನಾದ ಭರತನು ಹೀಗೆ ನುಡಿಯುವುದನ್ನು ಕಂಡು ಸುಗ್ರೀವಾದಿ ವಾನರರ ಕಣ್ಣುಗಳಿಂದ ನೀರು ಸುರಿಯಿತು. ವಿಭೀಷಣನ ನೇತ್ರಗಳು ಬಾಷ್ಪದಿಂದ ತುಳುಕಿದವು.

ಅನಂತರ ಅವರೆಲ್ಲರೂ ಪುಷ್ಪಕ ವಿಮಾನದಲ್ಲಿ ನಂದಿಗ್ರಾಮಕ್ಕೆ ಬಂದರು. ಎಲ್ಲರೂ ವಿಮಾನದಿಂದ ಕೆಳಗಿಳಿದರು. ರಾಘವನು ವಿಭೀಷಣನಿಗೆ ತನ್ನ ಇಚ್ಛೆಯನ್ನು ತಿಳಿಸಿ ಅವನ ಒಪ್ಪಿಗೆಯಿಂದ ಪುಷ್ಪಕ ವಿಮಾನವನ್ನು ಕುರಿತು ''ಎಲೈ ಪುಷ್ಪಕ ವಿಮಾನವೆ, ನಿನಗೆ ಅನುಜ್ಞೆಯನ್ನು ಕೊಟ್ಟಿದ್ದೇನೆ. ನೀನು ಹೊರಡಬಹುದು. ಕುಬೇರನ ಬಳಿಗೆ ಹೋಗಿ ಆತನಿಗೆ ವಾಹನವಾಗಿರು'' ಎಂದನು. ಅಂತೆಯೇ ಆ ದಿವ್ಯ

ವಿಮಾನವು ಉತ್ತರ ದಿಕ್ಕಿಗೆ ಪ್ರಯಾಣ ಮಾಡಿ ಕುಬೇರನಿದ್ದ ಸ್ಥಳಕ್ಕೆ ಹೊರಟು ಹೋಯಿತು. ಆಮೇಲೆ ಶ್ರೀರಾಮನು ಪುರೋಹಿತರಾದ ವಸಿಷ್ಠ ಮಹರ್ಷಿಗಳ ಪಾದಗಳನ್ನು ಮುಟ್ಟಿ ವಂದಿಸಿದನು. ಅವರಿಬ್ಬರೂ ಬೇರೆ ಬೇರೆ ಆಸನಗಳಲ್ಲಿ ಕುಳಿತರು.

೮೦

ಶ್ರೀರಾಮನ ಪಟ್ಟಾಭಿಷೇಕ. ಮಂಗಳ

ಆಗ ಭರತನು ತನ್ನ ತಲೆಯಮೇಲೆ ಕೈ ಜೋಡಿಸಿಕೊಂಡು ಮಹಾತ್ಮನಾದ ಶ್ರೀರಾಮನನ್ನು ಕುರಿತು ಇಂತೆಂದನು. ''ಶ್ರೀರಾಮ, ನನ್ನ ಮಾತೆಯ ನುಡಿಗೆ ಬೆಲೆಕೊಟ್ಟು ಗೌರವಿಸಿದ್ದಾಯಿತು. ಈ ಕೋಸಲರಾಜ್ಯವನ್ನು ನನ್ನ ವಶಕ್ಕೆ ಕೊಟ್ಟಿದ್ದೆಯಷ್ಟೆ, ಅದನ್ನು ಮತ್ತೆ ನಿನಗೆ ಅರ್ಪಿಸುತ್ತಿದ್ದೇನೆ. ಈ ರಾಜ್ಯವನ್ನು ನಡೆಸುವ ಸಾಮರ್ಥ್ಯವು ನನಗಿಲ್ಲ. ಮಹಾವೃಷಭವು ಹೊರಬಹುದಾದ ಭಾರವನ್ನು ಒಂದು ಕರು ಹೊರಬಲ್ಲದೆ? ರಾಜ್ಯಪಾಲನೆ ಎಂಬುದು ಬಹು ತೊಡಕಾದ ಕಾರ್ಯ. ಸಾಮಾನ್ಯರಿಂದ ನಿರ್ವಹಿಸಲು ಶಕ್ಯವಾದದ್ದಲ್ಲ. ಇದನ್ನು ಅತ್ಯಂತ ದಕ್ಷನಾದ ನೀನೇ ವಹಿಸಿಕೊಳ್ಳಬೇಕು. ನಮ್ಮ ತಂದೆಯಾದ ದಶರಥ ಮಹಾರಾಜನ ಇಚ್ಛೆಯು ನೀನೇ ಮಹಾರಾಜನಾಗ ಬೇಕೆಂದು ಇತ್ತಲ್ಲವೆ? ಆದ್ದರಿಂದ ತಂದೆಯ ಇಚ್ಛೆಯನ್ನೂ ನನ್ನ ನಮ್ರವಾದ ಪ್ರಾರ್ಥನೆಯನ್ನೂ ನಡೆಸಿಕೊಡು. ಶ್ರೀರಾಮ, ನೀನು ಪಟ್ಟಾಭಿಷಿಕ್ತ ನಾಗುವುದನ್ನು ಜಗತ್ತು ನೋಡಬೇಕು. ಆಕಾಶದಲ್ಲಿ ರಾರಾಜಿಸುವ ರವಿಯಂತೆ ರಾಜತೇಜಸ್ಸಿನಿಂದ ಬೆಳಗುವ ನಿನ್ನನ್ನು ಲೋಕವು ಕಾಣಬೇಕು. ಈ ರಾಜ್ಯವನ್ನು ನೀನು ವಹಿಸಿ ಕೊಂಡಾಗಲೇ ನನ್ನ ತಾಯಿಗೂ ಸಮಾಧಾನವಾಗುವುದು. ರಘುಕುಲತಿಲಕ, ಈ ಸಮಸ್ತ ರಾಜ್ಯಕ್ಕೂ ನೀನು ಪ್ರಭುವಾಗು. ಈ ರಾಜ್ಯವನ್ನು ಶಾಶ್ವತವಾಗಿ ಪಾಲಿಸುತ್ತಿರು. ನಾನು ನಿನ್ನ ಭೃತ್ಯ'' ಎಂದು ಹೇಳಿ ನಮಸ್ಕರಿಸಿದನು. ಆ ಮಾತನ್ನು ಕೇಳಿ ವಸಿಷ್ಠ ಮುನಿಗಳಿಗೆ ಹರ್ಷವಾಯಿತು. ಶ್ರೀರಾಮನು ''ವತ್ಸ, ಹಾಗೆಯೇ ಆಗಲಿ'' ಎಂದನು.

ಆಗ ಶತ್ರುಘ್ನನು ಮೃದುವಾಗಿ ಕೆಲಸಮಾಡ ಬಲ್ಲ ಕ್ಷೌರಿಕರನ್ನು ಕರೆಸಿದನು. ರಾಘವನ ಸೂಚನೆಯಂತೆ ಭರತ, ಲಕ್ಷ್ಮಣ, ಶತ್ರುಘ್ನ–ಇವರು ಜಟೆಯನ್ನು ತೆಗೆಸಿ ಕ್ಷೌರವನ್ನು ಮಾಡಿಸಿಕೊಂಡು ಸ್ನಾನ ಮಾಡಿದರು. ಸುಗ್ರೀವನೂ ವಿಭೀಷಣನೂ ಸ್ನಾನ

ಮಾಡಿದರು. ಅನಂತರ ಶ್ರೀರಾಮನು ಜಟೆಯನ್ನು ತೆಗೆಸಿ ಕ್ಷೌರಮಾಡಿಸಿ ಕ್ರಮವರಿತು ಸ್ನಾನ ಮಾಡಿದನು. ಶ್ರೇಷ್ಠವಾದ ಪೀತಾಂಬರವನ್ನುಟ್ಟು ದಿವ್ಯಗಂಧವನ್ನು ಲೇಪಿಸಿಕೊಂಡನು. ಶತ್ರುಘ್ನನು ವಿವಿಧಾಭರಣಗಳನ್ನು ತರಿಸಿ ಶ್ರೀರಾಮನಿಗೂ ಲಕ್ಷ್ಮಣನಿಗೂ ಅಲಂಕಾರ ಮಾಡಿಸಿದನು. ಆಗ ಶ್ರೀರಾಮನ ದಿವ್ಯತೇಜಸ್ಸನ್ನು ಏನೆಂದು ವರ್ಣಿಸೋಣ! ಇತ್ತಲಾಗಿ ಅಂತಃಪುರ ಸ್ತ್ರೀಯರು ತಮ್ಮ ಕೈಯಿಂದಲೇ ಜಾನಕಿಗೆ ಸ್ನಾನ ಮಾಡಿಸಿ ದಿವ್ಯ ವಸ್ತ್ರವನ್ನುಡಿಸಿ ಒಡವೆಗಳನ್ನು ತೊಡಿಸಿ ಶೃಂಗರಿಸಿದರು. ಕೌಸಲ್ಯೆಯು ಸಂತುಷ್ಟಳಾಗಿ ವಾನರಪತ್ನಿಯರೆಲ್ಲರಿಗೂ ಅಲಂಕಾರ ಮಾಡಿಸಿ ಉಪಚರಿಸಿದಳು.

ಶತ್ರುಘ್ನನ ಸೂಚನೆಯಂತೆ ಸುಮಂತ್ರನು ಸುಂದರವಾದ ಒಂದು ಮಹಾರಥಕ್ಕೆ ಅಶ್ವಗಳನ್ನು ಹೂಡಿ ತಂದು ನಿಲ್ಲಿಸಿದನು. ಸತ್ಯ ಪರಾಕ್ರಮನಾದ ಶ್ರೀರಾಮನು ಸೀತಾದೇವಿಯೊಡನೆ ರಥವನ್ನೇರಿದನು. ಸರ್ವರೂ ಕ್ರಮವರಿತು ರಾಜಧಾನಿಯಾದ ಅಯೋಧ್ಯೆಗೆ ಪ್ರಯಾಣ ಮಾಡಿದರು. ಭರತನು ಶ್ರೀರಾಮನ ರಥದ ಸಾರಥ್ಯವನ್ನು ವಹಿಸಿಕೊಂಡನು. ಅಶ್ವಗಳ ಹಗ್ಗವನ್ನು ಹಿಡಿದು ರಥವನ್ನು ನಡೆಸುತ್ತ ಬಂದನು. ಶತ್ರುಘ್ನನು ಶ್ವೇತಚ್ಛತ್ರವನ್ನು ಹಿಡಿದಿದ್ದನು. ಲಕ್ಷ್ಮಣನೂ ವಿಭೀಷಣನೂ ಚಾಮರವನ್ನು ಬೀಸುತ್ತಿದ್ದರು. ವೈಭವಗಳಿಂದ ಶೋಭಿಸುತ್ತಿದ್ದ ಆ ಮೆರವಣಿಗೆಯು ಅಯೋಧ್ಯೆಯ ಕಡೆಗೆ ಬರುತ್ತಿರಲಾಗಿ ದೇವ ಗಂಧರ್ವಾದಿಗಳು ಆಕಾಶದಲ್ಲಿ ನಿಂತು ಶ್ರೀರಾಮನ ಸದ್ಗುಣಗಳನ್ನು ಹೊಗಳಿ ಹಾಡಿದರು. ಸುಗ್ರೀವನು ಶತ್ರುಂಜಯವೆಂಬ ಮಹಾಗಜವನ್ನೇರಿ ಜೊತೆಗೆ ಬರುತ್ತಿದ್ದನು. ಎಲ್ಲೆಲ್ಲಿಯೂ ಮಂಗಳವಾದ್ಯ ಘೋಷವು ಹರಡಿತು. ಅಯೋಧ್ಯೆಯ ಮಹಾದ್ವಾರದಲ್ಲಿ ಅಷ್ಟಸಚಿವರೂ ರಘುಕುಲತಿಲಕನನ್ನು ಸ್ವಾಗತಿಸಿದರು. ಋತ್ವಿಜರು ವೇದಘೋಷವನ್ನು ಮಾಡುತ್ತಿದ್ದರು. ಕೆಲವರು ಮಂಗಳ ಸ್ತೋತ್ರಗಳನ್ನು ಪಠಿಸುತ್ತಿದ್ದರು. ಮಂಗಳಾಕ್ಷತೆಯನ್ನು ಹಿಡಿದ ಸುಮಂಗಲಿಯರು ಮೆರವಣಿಗೆಯ ಮುಂದುಗಡೆಯಿದ್ದರು. ಶ್ರೀರಾಮನು ಅಯೋಧ್ಯಾನಗರವನ್ನು ಪ್ರವೇಶಿಸಿ ತನ್ನ ತಂದೆಯ ಅರಮನೆಯ ಸಮೀಪಕ್ಕೆ ಆಗಮಿಸಿದನು. ಆ ಧರ್ಮಾತ್ಮನು ಮೊದಲು ತನ್ನ ತಂದೆಯ ಅರಮನೆಯನ್ನು ಪ್ರವೇಶಿಸಿ ಕೌಸಲ್ಯೆ, ಸುಮಿತ್ರೆ ಮತ್ತು ಕೈಕೇಯಿಯರಿಗೆ ಅಭಿವಾದನೆ ಮಾಡಿದನು. ಆಮೇಲೆ ಭರತನನ್ನು ನೋಡಿ ''ವತ್ಸ, ನಾನು ವಾಸಿಸುತ್ತಿದ್ದ ಮಹಾಭವನವುಂಟಷ್ಟೆ. ಅದನ್ನು ಸುಗ್ರೀವನಿಗೆ ತಂಗುವುದಕ್ಕಾಗಿ ಬಿಡಿಸಿಕೊಡು'' ಎಂದನು. ಹಾಗೆಯೇ ವಿಭೀಷಣಾದಿಗಳಿಗೂ ಸಮುಚಿತವಾದ ವಾಸಭವನಗಳನ್ನು ಭರತ ಶತ್ರುಘ್ನರು ಗೊತ್ತು ಮಾಡಿದರು. ಎಲ್ಲರೂ ವಿಶ್ರಮಿಸಿಕೊಂಡ ಮೇಲೆ ಭರತನು ಸುಗ್ರೀವನ ಬಳಿಗೆ ಹೋಗಿ ''ಸುಗ್ರೀವ, ನಾಳೆ ಶ್ರೀರಾಮನ

ಪಟ್ಟಾಭಿಷೇಕವು ನಡೆಯುವುದು. ಅದಕ್ಕೆ ಮಂಗಳ ಜಲವನ್ನು ತರುವುದಕ್ಕೋಸ್ಕರ ನಿನ್ನ ಭಟರಿಗೆ ಆಜ್ಞಾಪಿಸು. ಈ ಕಾರ್ಯದಲ್ಲಿ ನೀನೇ ಸಮರ್ಥ'' ಎಂದನು. ಅಂತೆಯೇ ಸುಗ್ರೀವನು ದಕ್ಷರಾದ ವಾನರ ಭಟರನ್ನು ಕರೆದು ''ನಾಲ್ಕು ಸಮುದ್ರಗಳಿಂದಲೂ ಗಂಗಾದಿ ಪವಿತ್ರ ನದಿಗಳಿಂದಲೂ ಪಟ್ಟಾಭಿಷೇಕಕ್ಕಾಗಿ ನೀವು ಜಲವನ್ನು ತರಬೇಕು. ನಾಳೆಬೆಳಗಾಗುವಷ್ಟರಲ್ಲಿ ನೀವು ಬಂದಿರಬೇಕು'' ಎಂದು ತಿಳಿಸಿದನು. ಸುಗ್ರೀವನ ಆಜ್ಞೆಯಂತೆ ವೇಗಶಾಲಿಗಳೂ ದೃಢಕಾಯರೂ ಆದ ವಾನರ ಭಟರು ಸುವರ್ಣ ಕಲಶಗಳನ್ನು ತೆಗೆದುಕೊಂಡು ಹೋಗಿ ನಾಲ್ಕು ಸಮುದ್ರಗಳಿಂದಲೂ ಪುಣ್ಯನದಿ ಗಳಿಂದಲೂ ಜಲವನ್ನು ತುಂಬಿ ತಂದರು.

ಶತ್ರುಘ್ನನು ಸಚಿವರೊಡನೆ ಹೋಗಿ ಪುರೋಹಿತರಾದ ವಸಿಷ್ಠರನ್ನು ಕುರಿತು ಶ್ರೀರಾಮನ ಪಟ್ಟಾಭಿಷೇಕವನ್ನು ವಿಧಿವತ್ತಾಗಿ ನೆರವೇರಿಸಬೇಕೆಂದು ಕೇಳಿಕೊಂಡನು. ಆಗ ಪವಿತ್ರಾತ್ಮರಾದ ವಸಿಷ್ಠ ಮುನಿಗಳು ವೇದಶಾಸ್ತ್ರಜ್ಞರಾದ ಬ್ರಾಹ್ಮಣರೊಡನೆ ಬಂದು ಶಾಸ್ತ್ರೋಕ್ತವಾಗಿ ಆರಂಭದ ವಿಧಿಗಳನ್ನು ನೆರವೇರಿಸಿದರು. ಆಮೇಲೆ ಸೀತಾಸಮೇತನಾದ ಶ್ರೀರಾಮಚಂದ್ರನನ್ನು ರತ್ನಮಯವಾದ ಪೀಠದಲ್ಲಿ ಕುಳ್ಳಿರಿಸಿದರು.

ಅನಂತರ ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ, ಕಾತ್ಯಾಯನ, ಸುಯಜ್ಞ, ಗೌತಮ ಮತ್ತು ವಿಜಯ ಎಂಬ ಮಹರ್ಷಿಗಳು ಶುದ್ಧವೂ ಸುಗಂಧಿಯೂ ಆದ ಪವಿತ್ರ ಜಲವನ್ನು ಶ್ರೀರಾಮನ ಶಿರಸ್ಸಿನಮೇಲೆ ಸುರಿದರು. ಆಮೇಲೆ ಕನ್ಯೆಯರು, ಮಂತ್ರಿಗಳು, ಯೋಧರು ಮತ್ತು ಪ್ರಜಾಪ್ರಮುಖರು ಸಂತೋಷದಿಂದ ಬಂದು ಆ ಪುರುಷೋತ್ತಮನಿಗೆ ಅಭಿಷೇಕ ಮಾಡಿದರು. ಅಂತೆಯೇ ನಾಲ್ವರು ದಿಕ್ಪಾಲಕರು ಸಮಸ್ತ ದೇವತೆಗಳೊಡನೆ ಆಕಾಶಮಾರ್ಗದಲ್ಲಿ ಬಂದು ದಿವ್ಯೌಷಧಿಗಳ ರಸಗಳಿಂದ ಸಂಮಿಳಿತವಾದ ಪುಣ್ಯಜಲದಿಂದ ಶ್ರೀರಾಮನನ್ನು ಅಭಿಷೇಕಿಸಿದರು. ಈ ವಿಧಿಗಳೆಲ್ಲವೂ ಮುಗಿದಮೇಲೆ ಆ ಸಭಾಮಂದಿರದಲ್ಲಿ ನವರತ್ನ ಖಚಿತವಾದ ಸಿಂಹಾಸನವನ್ನು ತಂದಿರಿಸಿದರು. ಮಹಾತ್ಮರಾದ ವಸಿಷ್ಠಾದಿ ಮಹರ್ಷಿಗಳು ಶಾಸ್ತ್ರೋಕ್ತವಿಧಾನದಿಂದ ಶ್ರೀರಾಮನನ್ನು ಕರೆತಂದು ಆ ದಿವ್ಯ ಸಿಂಹಾಸನದಲ್ಲಿ ಕುಳ್ಳಿರಿಸಿದರು. ರಘುವಂಶದಲ್ಲಿ ಪರಂಪರೆಯಿಂದ ಬಂದ ರತ್ನಶೋಭಿತವಾದ ಕಿರೀಟವನ್ನು ವಸಿಷ್ಠರು ಶ್ರೀರಾಮಭದ್ರನ ಶಿರಸ್ಸಿನಮೇಲಿಟ್ಟು ಪಟ್ಟಾಭಿಷೇಕದ ಇತರ ವಿಧಿಗಳನ್ನು ನಡೆಸಿದರು. ಋತ್ವಿಜರು ವಿವಿಧ ಭೂಷಣಗಳಿಂದ ಆ ರಘುಕುಲೋತ್ತಮನನ್ನು ಅಲಂಕರಿಸಿದರು. ಶತ್ರುಘ್ನನು ಶ್ವೇತಚ್ಛತ್ರವನ್ನು ಹಿಡಿದು

ನಿಂತನು. ವಾನರೇಂದ್ರನಾದ ಸುಗ್ರೀವನೂ, ರಾಕ್ಷಸೇಂದ್ರನಾದ ವಿಭೀಷಣನೂ ಎರಡು ಪಾರ್ಶ್ವಗಳಲ್ಲಿ ನಿಂತು ಚಂದ್ರಸಂಕಾಶವಾದ ಚಾಮರಗಳನ್ನು ಬೀಸುತ್ತಿದ್ದರು. ಆಗ ದೇವೇಂದ್ರನ ಪ್ರೇರಣೆಯಂತೆ ವಾಯುದೇವನು ಪ್ರತ್ಯಕ್ಷನಾಗಿ ಒಂದು ನೂರು ಚಿನ್ನದ ಕಮಲಗಳಿಂದ ಅಲಂಕೃತವಾದ ಒಂದು ಮುಕ್ತಾಹಾರವನ್ನು ಶ್ರೀರಾಮನಿಗೆ ಸಮರ್ಪಿಸಿದನು. ದೇವಗಂಧರ್ವರು ಹಾಡಿದರು. ಅಪ್ಸರೆಯರು ನೃತ್ಯ ಮಾಡಿದರು.

ಮಹಾತ್ಮನೂ, ಧರ್ಮನಿಷ್ಠನೂ, ಧೀಮಂತನೂ ಆದ ಶ್ರೀರಾಮಚಂದ್ರನು ರಾಜಾಧಿರಾಜನಾಗಿ ಪಟ್ಟಾಭಿಷಿಕ್ತನಾಗಲು ಎಲ್ಲೆಲ್ಲಿಯೂ ಶುಭಚಿಹ್ನೆಗಳು ತಲೆದೋರಿದವು. ಆ ಮಹೋತ್ಸವದಲ್ಲಿ ಶ್ರೀರಾಮನು ಗೋದಾನ, ಧನದಾನ, ವಸ್ತ್ರದಾನಾದಿಗಳನ್ನು ಯಥೇಚ್ಛವಾಗಿ ನಡೆಸಿದನು. ಸುಗ್ರೀವಾದಿ ವಾನರ ಯೋಧರಿಗೂ ವಿಭೀಷಣನಿಗೂ ಯಥೋಚಿತವಾದ ಪಾರಿತೋಷಿಕಗಳನ್ನಿತ್ತನು. ಆಮೇಲೆ ಶ್ರೀರಾಮನು ತನ್ನ ಪತ್ನಿಯಾದ ಜಾನಕಿಯ ಕೊರಳಿಗೆ ಅತ್ಯುತ್ತಮವಾದ ಒಂದು ಮುಕ್ತಾಹಾರವನ್ನು ತಾನೇ ಹಾಕಿ, ಅನರ್ಘ್ಯವಾದ ಆಭರಣಗಳನ್ನೂ ಅತ್ಯುತ್ತಮವಾದ ಎರಡು ಸೀರೆಗಳನ್ನೂ ಕೊಟ್ಟನು. ಶ್ರೀರಾಮನು ತನ್ನ ಕೊರಳಿಗೆ ಹಾಕಿದ್ದ ಮುಕ್ತಾಹಾರವನ್ನು ಜನಕನಂದಿನಿಯು ತನ್ನ ಕೈಯಲ್ಲಿ ತೆಗೆದುಕೊಂಡು, ಒಮ್ಮೆ ಶ್ರೀರಾಮನ ಮುಖವನ್ನೂ ಇನ್ನೊಮ್ಮೆ ವಾನರಯೋಧರನ್ನೂ ನೋಡುತ್ತಿದ್ದಳು. ಇಂಗಿತಜ್ಞನಾದ ಶ್ರೀರಾಮನು ದೇವಿಯ ಆಶಯವೇನೆಂಬುದನ್ನು ಗ್ರಹಿಸಿ ''ಭದ್ರೆ, ಯಾರ ವಿಷಯದಲ್ಲಿ ನೀನು ಸಂತುಷ್ಟಳಾಗಿರುವೆಯೋ ಅವನಿಗೆ ಈ ಹಾರವನ್ನು ಅರ್ಪಿಸು. ಯಾರಲ್ಲಿ ತೇಜಸ್ಸು, ಯಶಸ್ಸು, ನಯ, ವಿನಯ, ಬುದ್ಧಿ, ಪೌರುಷ, ಪರಾಕ್ರಮಾದಿಗಳು ಸದಾ ನೆಲೆಸಿವೆಯೋ ಆತನಿಗೆ ಈ ಹಾರವನ್ನು ಬಹುಮಾನವನ್ನಾಗಿ ಕೊಡು'' ಎಂದು ನುಡಿದನು. ಆ ನೀಲನೇತ್ರೆಯು ಮುಗುಳ್ನಗೆಯನ್ನು ಬೀರುತ್ತ ಹನುಮಂತನನ್ನು ತನ್ನ ಬಳಿಗೆ ಕರೆದು, ಆ ವಾನರೋತ್ತಮನಿಗೆ ತನ್ನ ದಿವ್ಯಮುಕ್ತಾಹಾರ ವನ್ನು ನೀಡಿದಳು. ಆಂಜನೇಯನು ಭಕ್ತಿಯಿಂದ ಅದನ್ನು ಸ್ವೀಕರಿಸಿದನು. ಸುವರ್ಣವರ್ಣನೂ, ವಜ್ರಕಾಯನೂ ಆದ ಹನುಮಂತನು ಆ ಮುಕ್ತಾಹಾರವನ್ನು ತನ್ನ ಕೊರಳಲ್ಲಿ ಧರಿಸಲಾಗಿ ಮುತ್ತುಗಳ ದಿವ್ಯಕಾಂತಿಯು ಜಗ್ಗೆಂದು ಮಿಂಚಿತು. ಮೇರು ಪರ್ವತದ ಮೇಲೆ ಬೆಳದಿಂಗಳು ಹರಡಿದಂತಾಯಿತು. ಈ ಪ್ರಕಾರವಾಗಿ ಅಲ್ಲಿ ನೆರೆದಿದ್ದ ಸಮಸ್ತ ವಾನರರೂ ವಿಭೀಷಣನೂ ಅವನ ಸಚಿವರೂ ಎಲ್ಲ ವಿಧಗಳಿಂದಲೂ ಸತ್ಕೃತರಾದರು. ಸಮಸ್ತರಿಗೂ ಅತ್ಯುತ್ತಮವಾದ ಭೋಜನವು ನಡೆಯಿತು. ಸಕಲಪ್ರಜೆಗಳೂ ಆ ಮಹೋತ್ಸವದಲ್ಲಿ ಭೋಜನಾದಿಗಳಿಂದ ಸಂತೃಪ್ತರಾಗಿ ಆನಂದಿಸಿದರು.

ಈ ಪಟ್ಟಾಭಿಷೇಕ ಮಹೋತ್ಸವವು ಯಶಸ್ವಿಯಾಗಿ ಪೂರ್ಣವಾದಮೇಲೆ ಎಲ್ಲ ವಾನರರೂ ಮಹಾರಾಜನಾದ ಶ್ರೀರಾಮನನ್ನು ಕಂಡು ವಂದಿಸಿ ಬೀಳ್ಕೊಂಡು ಕಿಷ್ಕಿಂಧೆ ಮುಂತಾದ ತಮ್ಮ ಸ್ಥಳಗಳಿಗೆ ತೆರಳಿದರು. ಕಪಿರಾಜನಾದ ಸುಗ್ರೀವನು ಶ್ರೀರಾಮನ ಪಟ್ಟಾಭಿಷೇಕ ವಿಧಿಯನ್ನು ನೋಡಿ ಸಂತುಷ್ಟನಾಗಿ ಅವನ ಅನುಜ್ಞೆಯನ್ನು ಪಡೆದು ತನ್ನ ಪರಿವಾರದೊಡನೆ ಕಿಷ್ಕಿಂಧೆಗೆ ತೆರಳಿದನು. ಧರ್ಮಾತ್ಮನಾದ ವಿಭೀಷಣನೂ ತನ್ನ ಸಚಿವರೊಡನೆ ರಾಘವನನ್ನು ಬೀಳ್ಕೊಂಡು, ಅವನ ಅನುಗ್ರಹದಿಂದ ಪ್ರಾಪ್ತವಾದ ಲಂಕೆಗೆ ತೆರಳಿದನು. ಇದೆಲ್ಲವೂ ಮುಗಿದಮೇಲೆ ಧೀರನಾದ ಹನುಮಂತನು ಶ್ರೀರಾಮನ ಬಳಿಗೆ ಬಂದನು. ಕಾಕುತ್ಸ್ಥನು ಆತನನ್ನು ಸ್ವಾಗತಿಸಿ ''ಆಂಜನೇಯ, ನೀನು ನಮಗೆ ಮಾಡಿದ ಉಪಕಾರವು ಬಹುದೊಡ್ಡದು. ಈ ಮಹೋಪಕಾರವನ್ನು ತೀರಿಸುವುದು ಅಶಕ್ಯವಾದದ್ದು. ಈ ವಿಷಯದಲ್ಲಿ ನಾನು ನಿನಗೆ ಋಣಿಯಾಗಿಯೇ ಇರುತ್ತೇನೆ. ಈ ಸಾಲವನ್ನು ತೀರಿಸಬೇಕೆಂದರೆ ನಿನಗೊಂದು ಮಹಾವಿಪತ್ತು ಬರಲೆಂದು ಬಯಸಿದಂತಾಗುವುದು. ಅಂತಹ ವಿಪತ್ತು ನಿನಗೆ ಎಂದೆಂದಿಗೂ ಬರುವುದೇ ಬೇಡ. ನಾನು ಸಾಲಗಾರನಾಗಿಯೇ ಉಳಿದಿರುವೆನು!'' ಎಂದು ಹೇಳಿ ಆನಂದ ಬಾಷ್ಪವನ್ನು ಸುರಿಸುತ್ತ ಹನುಮಂತನನ್ನು ಬಿಗಿಯಾಗಿ ಅಪ್ಪಿಕೊಂಡನು. ಸೀತಾದೇವಿಯು ಹನುಮಂತನಿಂದಾದ ಉಪಕಾರವನ್ನು ಸ್ಮರಿಸಿಕೊಳ್ಳುತ್ತ ಕೃತಜ್ಞತೆಯಿಂದ ಕಣ್ಣೀರು ತುಂಬಿಕೊಂಡು ಆತನಿಗೆ ಶುಭವನ್ನು ಬಯಸಿದಳು. ಆಗ ಆಂಜನೇಯನು ಕೈಮುಗಿದುಕೊಂಡು ''ಶ್ರೀರಾಮ, ನಿನ್ನ ಅನುಗ್ರಹವಿರುವಾಗ ನನಗೆ ಯಾವುದೂ ದುರ್ಲಭವಲ್ಲ. ನಾನು ನಿನ್ನ ಒಬ್ಬ ಭೃತ್ಯನೆಂದು ಸ್ವೀಕರಿಸು. ನನ್ನ ಒಂದೇ ಒಂದು ಬಯಕೆಯೆಂದರೆ ನಾನು ಸದಾ ನಿನ್ನ ನಾಮವನ್ನು ಜಪಿಸುತ್ತಿರಬೇಕು. ನಿನ್ನ ಪುಣ್ಯಕಥೆಯು ಲೋಕದಲ್ಲಿ ಹರಡಿರುವವರೆಗೆ ನಿನ್ನ ಪುಣ್ಯನಾಮವನ್ನು ಜಪಿಸುತ್ತ ನಾನು ಬದುಕಿರಬೇಕು. ಇದರ ಹೊರತು ಇನ್ನೇನನ್ನೂ ನಾನು ಬಯಸೆನು'' ಎಂದನು. ಶ್ರೀರಾಮನು 'ತಥಾಸ್ತು' ಎಂದನು.

ಈ ಪಟ್ಟಾಭಿಷೇಕ ವಿಧಿಗಳೆಲ್ಲವೂ ಮುಗಿದಮೇಲೆ ಲಕ್ಷ್ಮಣನನ್ನು ನೋಡಿ ಶ್ರೀರಾಮನು ''ತಮ್ಮ-ಲಕ್ಷ್ಮಣ, ಪ್ರಜಾಪಾಲನೆಯು ಅತ್ಯಂತ ಕ್ಲಿಷ್ಟವಾದ ಕಾರ್ಯ. ರಾಜ್ಯದ ಆಡಳಿತದಲ್ಲಿ ಸಮರ್ಥನಾದ ನಿನ್ನ ಸಹಾಯವು ಬೇಕಾಗಿದೆ. ಲಕ್ಷ್ಮಣ, ಯುವರಾಜ ಪದವಿಯನ್ನು ಸ್ವೀಕರಿಸು'' ಎಂದನು. ಲಕ್ಷ್ಮಣನು ಒಪ್ಪಲಿಲ್ಲ. ''ಮಹಾರಾಜ, ನಿನಗಾಗಿ ನನ್ನ ಸೇವೆಯು ಒಂದೇರೀತಿಯಾಗಿ ಇದ್ದೇ ಇರುವುದು. ಆದರೆ ಯುವರಾಜಪದವಿಯು ನನಗೆ ಬೇಡ. ಅದು ಹಿರಿಯನಾದ ಭರತನಿಗೆ

ಸಲ್ಲಬೇಕಾದದ್ದು'' ಎಂದುಬಿಟ್ಟನು. ಕಾಕುತ್ಸ್ಥನು ಭರತನನ್ನು ಕರೆದು ಯುವರಾಜ ಪದವಿಯನ್ನು ಸ್ವೀಕರಿಸುವಂತೆ ಹೇಳಿ ಆತನನ್ನು ಒಪ್ಪಿಸಿದನು. ಭರತನು ಯುವರಾಜ ನಾದನು.

ಹೀಗೆ ರಾಜ್ಯವನ್ನಾಳುತ್ತ ಶ್ರೀರಾಮನು ಶಾಸ್ತ್ರೋಕ್ತವಾದ ಹಲವಾರು ಯಾಗಗಳನ್ನು ನಡೆಸಿದನು. ಆಜಾನುಬಾಹುವೂ ಪ್ರತಾಪಶಾಲಿಯೂ ಆದ ಶ್ರೀರಾಮಚಂದ್ರನು ವಿಶೇಷವಾಗಿ ಲಕ್ಷ್ಮಣಸಮೇತನಾಗಿಯೇ ಇರುತ್ತ ಪ್ರಜಾಪಾಲನೆ ಯಲ್ಲಿ ನಿರತನಾಗಿದ್ದನು. ಯುವರಾಜನಾದ ಭರತನೂ ಶತ್ರುಘ್ನನೂ ರಾಜ್ಯದ ಆಡಳಿತ ಕಾರ್ಯದಲ್ಲಿ ಶ್ರೀರಾಮನಿಗೆ ವಿಧೇಯರಾಗಿ ಸಹಕರಿಸುತ್ತಿದ್ದರು. ಈ ಪ್ರಕಾರವಾಗಿ ಧರ್ಮಾತ್ಮನಾದ ಶ್ರೀರಾಮನು ರಾಜ್ಯಭಾರವನ್ನು ಮಾಡುತ್ತಿರುವಾಗ ರಾಷ್ಟ್ರದಲ್ಲಿ ಎಲ್ಲೆಲ್ಲಿಯೂ ಸಮೃದ್ಧಿಯೂ, ಸುಖಸಂತೋಷಗಳೂ ನೆಲೆಸಿದ್ದವು. ಕ್ಷಾಮದ ಭಯವಿರಲಿಲ್ಲ, ಕಳ್ಳಕಾಕರ ಹಾವಳಿ ಇರಲಿಲ್ಲ, ಪ್ರಜೆಗಳಿಗೆ ರೋಗಗಳು ಸಂಭವಿಸಲಿಲ್ಲ. ಯಾವ ಶತ್ರುಭಯವೂ ಕಾಣಿಸಲಿಲ್ಲ, ರಾಷ್ಟ್ರದಲ್ಲಿ ಸ್ತ್ರೀಯರು ವಿಧವೆಯರಾಗಿ ಶೋಕಿಸುವ ಪ್ರಸಂಗ ಬರಲಿಲ್ಲ, ಹಿರಿಯರು ಕಿರಿಯರ ಉತ್ತರಕ್ರಿಯೆ ಯನ್ನು ನಡೆಸಬೇಕಾದ ಸಂಧರ್ಭವೇ ಒದಗಲಿಲ್ಲ. ರಾಮರಾಜ್ಯದಲ್ಲಿ ಸಕಲವೂ ಸಂತೋಷದ ನೆಲೆಯಾಗಿತ್ತು, ನಿಖಿಲಪ್ರಜೆಗಳೂ ಧರ್ಮನಿಷ್ಠರಾಗಿ ಬಾಳುತ್ತಿದ್ದರು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರಾದಿಗಳು ನಿಶ್ಚಿಂತರಾಗಿಯಿಂದ ತಮ್ಮ ತಮ್ಮ ಧರ್ಮಗಳಲ್ಲಿ ನಿರತರಾಗಿದ್ದರು. ಸಕಲಪ್ರಜೆಗಳೂ ನೆಮ್ಮದಿಯಿಂದ ಬಾಳಿ ಬದುಕಿ ಮಹಾರಾಜನಾದ ಶ್ರೀರಾಮನನ್ನು ಸ್ತುತಿಸುತ್ತಿದ್ದರು. ಎಲ್ಲೆಲ್ಲಿಯೂ ರಾಮ, ರಾಮ, ರಾಮ ಎಂಬ ಹರ್ಷಧ್ವನಿಯೇ ಕೇಳಿಸುತ್ತಿತ್ತು. ಶ್ರೀರಾಮನು ಪಟ್ಟಾಭಿಷಿಕ್ತನಾಗಿ ರಾಜ್ಯವನ್ನು ಪಾಲಿಸುತ್ತಿರುವಾಗ ಸಕಲ ಪ್ರಜೆಗಳೂ ಸುಖ ಸಮೃದ್ಧಿಗಳನ್ನು ಪಡೆದು ಆನಂದದಿಂದ ಜೀವಿಸುತ್ತಿದ್ದರು.

ಈ ಪ್ರಕಾರವಾದ ಶ್ರೀರಾಮ ಚರಿತೆಯನ್ನು ವಾಲ್ಮೀಕಿ ಮಹರ್ಷಿಗಳು ರಚಿಸಿದರು. ಇದೇ ಶ್ರೀಮದ್ರಾಮಾಯಣ. ಇದನ್ನು ಯಾರು ಭಕ್ತಿಯಿಂದ ಪಠಿಸುವರೋ, ಆಲಿಸುವರೋ, ಅವರ ಎಲ್ಲ ಇಷ್ಟಾರ್ಥಗಳೂ ನೆರವೇರುವುವು. ಶ್ರೀರಾಮನು ಮಹಾವಿಷ್ಣುವಿನ ಅವತಾರ ಪುರುಷನಾದ್ದರಿಂದ ಈ ರಾಮಾಯಣವು ಶ್ರೇಷ್ಠವಾದ ಪವಿತ್ರ ಗ್ರಂಥವೆನಿಸಿದೆ. ಇದನ್ನು ಪಾರಾಯಣ ಮಾಡತಕ್ಕವರೂ ಪ್ರವಚನ ಮಾಡತಕ್ಕವರೂ ಪ್ರಚಾರಮಾಡತಕ್ಕವರೂ–ಸಮಸ್ತರೂ ಪುಣ್ಯಭಾಗಿ

ಗಳಾಗುವರು. ಶ್ರೀಮದ್ರಾಮಾಯಣವು ಯಾರ ಮನೆಯಲ್ಲಿರುವುದೋ ಆ ಮನೆಗೆ ಅನಿಷ್ಟವು ಸಂಭವಿಸದು. ಎಲ್ಲರೂ ಈ ಪುಣ್ಯ ಕೃತಿಯನ್ನೋದಿ ಧನ್ಯರಾಗಲಿ. ಎಲ್ಲಿಯವರೆಗೆ ಈ ರಾಷ್ಟ್ರದಲ್ಲಿ ನದಿಗಳು ಹರಿಯುತ್ತಿರುವುವೋ ಗಿರಿಗಳು ನಿಂತಿರುವುವೋ ಅಲ್ಲಿಯವರೆಗೆ ಶ್ರೀಮದ್ರಾಮಾಯಣವು ಧರೆಯಲ್ಲಿ ವಿರಾಜಿಸುತ್ತಿರುವುದು. ಶ್ರೀರಾಮಚಂದ್ರನಿಗೆ ಜಯವಾಗಲಿ. ಧರ್ಮಕ್ಕೆ ಜಯವಾಗಲಿ.

ಶುಭಮಸ್ತು

ಉತ್ತರಕಾಂಡ

೧

ಶ್ರೀರಾಮನನ್ನು ಅಭಿನಂದಿಸುವುದಕ್ಕಾಗಿ ಅಗಸ್ತ್ಯಾದಿ ಮುನಿಗಳ ಆಗಮನ. ಆತನ ಕೋರಿಕೆಯಂತೆ ಅಗಸ್ತ್ಯರು ಇಂದ್ರಜಿತುವೇ ಮೊದಲಾದವರ ಪೂರ್ವವೃತ್ತಾಂತವನ್ನು ಹೇಳಲಾರಂಭಿಸುವುದು. ವಿಶ್ರವಸ್ಸಿನ ಮಗನಾದ ಕುಬೇರನು ಲಂಕೆಯಲ್ಲಿ ನೆಲೆಸುವುದು.

ಈ ಪ್ರಕಾರದಲ್ಲಿ ಶ್ರೀರಾಮನು ರಾವಣಾದಿ ರಾಕ್ಷಸರನ್ನು ಸಂಹರಿಸಿ ಸೀತಾಲಕ್ಷ್ಮಣಾದಿಗಳೊಡನೆ ಅಯೋಧ್ಯೆಗೆ ಹಿಂದಿರುಗಿ ಪಟ್ಟಾಭಿಷಿಕ್ತನಾದನು. ಆತನನ್ನು ಅಭಿನಂದಿಸುವುದಕ್ಕಾಗಿ ಸಮಸ್ತ ಋಷಿಗಳೂ ಅಯೋಧ್ಯೆಗೆ ಆಗಮಿಸಿದರು. ಅಗಸ್ತ್ಯ, ಅತ್ರಿ, ವಿಶ್ವಾಮಿತ್ರ, ಭರದ್ವಾಜರೇ ಮೊದಲಾದ ಆ ಮುನಿಶ್ರೇಷ್ಠರು ಶ್ರೀರಾಮಚಂದ್ರನ ಅರಮನೆಗೆ ಆಗಮಿಸಿ ಶ್ರೀರಾಮನನ್ನು ಕಂಡರು. ಆತನು ಆ ಮುನಿಗಳೆಲ್ಲರನ್ನೂ ಆದರದಿಂದ ಬರಮಾಡಿಕೊಂಡು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದನು. ಆ ಮುನಿಗಳೆಲ್ಲರೂ ತಮಗಿತ್ತ ಆಸನಗಳಲ್ಲಿ ಮಂಡಿಸಿದರು. ಅನಂತರ ಶ್ರೀರಾಮನನ್ನು ಕುರಿತು, ''ರಘುನಂದನ, ನೀನು ದೈತ್ಯರಾಜನಾದ ರಾವಣನನ್ನು ವಧಿಸಿದೆ. ಧನುರ್ಧಾರಿಯಾಗಿ ನಿಂತ ನಿನ್ನನ್ನೆದುರಿಸಲು ಮೂರು ಲೋಕಗಳಲ್ಲಿ ಯಾರೂ ಶಕ್ತರಲ್ಲ. ದುರುಳನಾದ ರಾವಣನನ್ನು ಸಂಹರಿಸಿದ್ದು ಲೋಕದ ಭಾಗ್ಯವೇ ಸರಿ. ವೀರಾಗ್ರಣಿ, ಧರ್ಮಪತ್ನಿಯಾದ ಸೀತೆಯಿಂದೊಡಗೂಡಿ ನಿನ್ನ ಹಿತವನ್ನೇ ಬಯಸುವ ತಮ್ಮನಾದ ಲಕ್ಷ್ಮಣನಿಂದ ಸಮೇತನಾಗಿ ದಿಗ್ವಿಜಯ ಮಾಡಿ ಬಂದಿದ್ದೀಯೆ. ಈಗ ಪಟ್ಟಾಭಿಷಿಕ್ತನಾಗಿ ಪ್ರಜಾಪಾಲನೆಯಲ್ಲಿ ತೊಡಗಿದ್ದೀಯೆ. ಕುಶಲಿಯಾಗಿ ಧರ್ಮನಿಷ್ಠನಾಗಿರುವ ನಿನ್ನನ್ನು ನೋಡುವುದು ನಮ್ಮ ಪುಣ್ಯ. ಕುಂಭಕರ್ಣ, ಅತಿಕಾಯ ಮೊದಲಾದ ಮಹಾ ದೈತ್ಯರನ್ನು ಕೊಂದು ರಾಕ್ಷಸರ ಬಾಧೆಯನ್ನು ತಪ್ಪಿಸಿರುವುದು ಮಹತ್ತರವಾದ ಕಾರ್ಯವೇ ಹೌದು. ರಾಘವ, ರಾವಣಾದಿಗಳಿರಲಿ, ಮಹಾಪಾಪಿಯಾದ ಇಂದ್ರಜಿತುವಿನ ವಧೆಯಾಯಿತೆಂದು ಕೇಳಿ ನಮಗೆ ತುಂಬ ಹರ್ಷವಾಯಿತು. ಮಹಾಮಾಯಾವಿಯಾದ ಆತನನ್ನು ಲಕ್ಷ್ಮಣನು ಸಂಹರಿಸಿದನೆಂಬುದನ್ನು ತಿಳಿದು ನಾವು ಬೆಕ್ಕಸ ಬೆರಗಾಗಿದ್ದೇವೆ. ಅಂತೂ ನಿನ್ನಿಂದ ರಾಕ್ಷಸರ ಬಾಧೆ ತಪ್ಪಿತು. ನಿನಗೆ ಸದಾ ಜಯವಾಗಲಿ! ಮಂಗಳವಾಗಲಿ'' ಎಂದರು.

ಆ ಋಷಿಗಳ ಮಾತನ್ನು ಕೇಳಿ ವಿಸ್ಮಿತನಾದ ಶ್ರೀರಾಮನು ಕೈಮುಗಿದುಕೊಂಡು

ಹೀಗೆಂದನು : ''ಮಹರ್ಷಿಗಳೆ,ಅತುಲ ಪರಾಕ್ರಮಿಗಳಾದ ರಾವಣ ಕುಂಭಕರ್ಣರನ್ನು ಅತಿಕ್ರಮಿಸಿ ಆ ರಾವಣ ಪುತ್ರನನ್ನು ಹೊಗಳುವಿರಲ್ಲ, ಇದೇನು? ಮಹೋದರ, ಪ್ರಹಸ್ತ, ಅತಿಕಾಯ ಮೊದಲಾದವರು ಸಾಮಾನ್ಯಶೂರರೆ? ಅವರೆಲ್ಲರಿಗಿಂತಲೂ ಇಂದ್ರಜಿತು ಅಧಿಕನೆಂಬುದನ್ನು ಕೇಳಿ ನನಗೆ ವಿಸ್ಮಯವಾಗಿದೆ. ಆ ಮೇಘನಾದನು ತಂದೆಯಾದ ರಾವಣನಿಗಿಂತ ಬಲಶಾಲಿಯೆಂದು ನಿಮ್ಮ ಅಭಿಪ್ರಾಯವೆ? ಮುನೀಂದ್ರರೆ, ಇದೇನೂ ರಹಸ್ಯವಲ್ಲವಾದರೆ ಈ ರಾವಣಾದಿ ರಾಕ್ಷಸರ ಪ್ರಾಚೀನ ವೃತ್ತಾಂತವನ್ನು ಮೇಘನಾದನು ಅಷ್ಟು ಬಲಶಾಲಿಯೆಂಬುದಕ್ಕೆ ಕಾರಣವನ್ನು ತಿಳಿಯಲಿಚ್ಛಿಸುತ್ತೇನೆ. ಈ ವಿಚಾರವನ್ನು ಹೇಳಬೇಕು'' ಎಂದು ಪ್ರಾರ್ಥಿಸಿದನು.

ಆಗ ಮಹಾತ್ಮರಾದ ಅಗಸ್ತ್ಯ ಮುನಿಗಳು ಈ ರೀತಿಯಲ್ಲಿ ಉತ್ತರವನ್ನು ಹೇಳಿದರು : ''ಶ್ರೀರಾಮ, ಅದೆಲ್ಲವನ್ನೂ ಯಥಾಸ್ಥಿತಿಯಾಗಿ ಹೇಳುವೆನು ಕೇಳು. ರಾಘವ, ಪ್ರಜಾಪತಿಯ ಪುತ್ರನಾದ ಪುಲಸ್ತ್ಯನೆಂಬ ಮಹರ್ಷಿಯು, ಧರ್ಮಾಚರಣೆ ಗೋಸ್ಕರ ಮೇರುಗಿರಿಯ ಬಳಿಯಲ್ಲಿದ್ದ ತೃಣಬಿಂದುವೆಂಬ ರಾಜರ್ಷಿಯ ಆಶ್ರಮದ ಬಳಿ ಒಂದು ಪವಿತ್ರಸ್ಥಳದಲ್ಲಿ ತಪೋನಿಷ್ಠನಾದನು. ಆ ಸಮಯದಲ್ಲಿ ದೇವಪನ್ನಗ ಕನ್ಯೆಯರು ಇತರ ರಾಜರ್ಷಿ ಪುತ್ರಿಯರೂ ಆಶ್ರಮದ ಬಳಿಗೆ ಬಂದು ಕ್ರೀಡಿಸುತ್ತಿದ್ದರು. ಅದರಿಂದ ಪುಲಸ್ತ್ಯಮುನಿಯ ತಪಸ್ಸಿಗೆ ಅಡ್ಡಿಯಾಗುತ್ತಿತ್ತು. ಎಷ್ಟು ಹೇಳಿದರೂ ಮತ್ತೆ ಮತ್ತೆ ಬರುತ್ತಿದ್ದ ಆ ಕನ್ಯೆಯರನ್ನು ನೋಡಿ ಪುಲಸ್ತ್ಯಮುನಿಯು ಸಿಟ್ಟಿನಿಂದ ''ಎಲೈ, ಈ ಆಶ್ರಮದ ಹತ್ತಿರ ನಿಮ್ಮಲ್ಲಿ ಯಾರಾದರೂ ಮತ್ತೆ ನನಗೆ ಕಾಣಿಸಿದರೆ ಅವಳು ಗರ್ಭಿಣಿಯಾಗಿ ಬಿಡಲಿ !'' ಎಂದು ಶಪಿಸಿಬಿಟ್ಟನು. ಅದನ್ನು ತಿಳಿದು ಆ ತರುಣಿಯರು ಅಲ್ಲಿಗೆ ಬರುವುದನ್ನು ನಿಲ್ಲಿಸಿದರು. ಹೀಗಿರುವಾಗ ಒಂದು ದಿನ ತೃಣಬಿಂದುವಿನ ಮಗಳು ಪುಲಸ್ತ್ಯಮುನಿಯಿತ್ತ ಶಾಪವನ್ನರಿಯದೆ ಆತನ ಆಶ್ರಮದ ಬಳಿಗೆ ಹೋಗಿದ್ದಳು. ಪುಲಸ್ತ್ಯನಿಗೆ ಅವಳು ಗೋಚರಿಸಿದಳು. ಒಡನೆಯೇ ಅವಳ ದೇಹದಲ್ಲಿ ಒಂದು ದೊಡ್ಡ ಪರಿವರ್ತನೆಯೇ ಆಗಿ ಹೋಯಿತು. ಗರ್ಭಿಣಿಯ ಚಿಹ್ನೆಗಳೆಲ್ಲವೂ ಅವಳಲ್ಲಿ ಗೋಚರಿಸಿದವು. ಆ ಹುಡುಗಿಯು ಭೀತಳಾಗಿ ''ಎಲಾ, ನನಗೇನಾಯಿತು?' ಎಂದು ಚಿಂತಿಸುತ್ತಾ ತಂದೆಯ ಬಳಿಗೆ ಹೋಗಿ ಈ ಸಂಗತಿಯನ್ನು ನಿವೇದಿಸಿದಳು. ತೃಣ ಬಿಂದುವು ತಪೋ ಮಹಿಮಾನ್ವಿತನು. ಅವನು ತನ್ನ ದಿವ್ಯದೃಷ್ಟಿಯಿಂದ ಅದೆಲ್ಲವೂ ಪುಲಸ್ತ್ಯಮುನಿಯ ಶಾಪದಿಂದ ಆದದ್ದು ಎಂಬುದನ್ನರಿತುಕೊಂಡನು. ಆತನು ಈ ವಿಚಾರವನ್ನು ಮಗಳಿಗೆ ತಿಳಿಸಿ ಅವಳನ್ನು ಕರೆದುಕೊಂಡು ಪುಲಸ್ತ್ಯಮುನಿಯ ಬಳಿಗೆ ಹೋಗಿ ಈ ರೀತಿಯಾಗಿ ಅರಿಕೆ ಮಾಡಿಕೊಂಡನು : ''ಭಗವನ್, ಈ ಹುಡುಗಿಯು ನನ್ನ ಮಗಳು. ನೀನಿತ್ತ ಶಾಪವನ್ನರಿಯದೆ ಇಲ್ಲಿಗೆ ಬಂದು ನಿನ್ನ ದೃಷ್ಟಿಗೆ ಗೋಚರಿಸಿ ಈ

ಅವಸ್ಥೆಯನ್ನು ಪಡೆದಿದ್ದಾಳೆ. ಇವಳು ಸಮಸ್ತ ಸದ್ಗುಣಗಳಿಂದ ಭೂಷಿತಳಾದವಳು. ನಾನು ಅರ್ಪಿಸುವ ಈ ಭಿಕ್ಷೆಯನ್ನು ದಯವಿಟ್ಟು ಸ್ವೀಕರಿಸು. ಇವಳಿಗೆ ಬೇರೆ ದಾರಿಯಿಲ್ಲ. ಈಕೆ ನಿನ್ನ ಧರ್ಮಪತ್ನಿಯಾಗಲಿ'' ಎಂದನು. ಆಗ ಪುಲಸ್ತ್ಯನು ನಡೆದ ಸಂಗತಿಯೆಲ್ಲವನ್ನೂ ಜ್ಞಾನದೃಷ್ಟಿಯಿಂದರಿತು ಆ ಕನ್ಯೆಯನ್ನು ಸ್ವೀಕರಿಸಲು ಒಪ್ಪಿ 'ಆಗಲಿ' ಎಂದು ಹೇಳಿದನು. ಆಮೇಲೆ ತೃಣಬಿಂದುವು ಆ ಕನ್ಯೆಯನ್ನು ವಿಧಿವತ್ತಾಗಿ ಪುಲಸ್ತ್ಯನಿಗೆ ಮದುವೆ ಮಾಡಿಕೊಟ್ಟನು. ಅವಳ ವಿನಯಾದಿ ಸದ್ಗುಣಗಳಿಂದ ಪುಲಸ್ತ್ಯಮುನಿಯು ಪರಮ ಸಂತುಷ್ಟನಾದನು. ಒಂದು ದಿನ ಅವಳನ್ನು ನೋಡಿ ''ಸುಂದರಿ, ನಿನ್ನ ಗುಣ ಸಂಪತ್ತನ್ನು ಕಂಡು ನನಗೆ ತುಂಬ ಸಂತೋಷವಾಗಿದೆ. ಹಿಂದೆ ನಾನು ವೇದಾಧ್ಯಯನ ಮಾಡುತ್ತಿರುವಾಗ ನೀನು ಅದರ ಶ್ರವಣ ಮಾಡುತ್ತ ನನ್ನ ಕಣ್ಣಿಗೆ ಗೋಚರಿಸಿದೆ. ವಿಶೇಷವಾದ ಶ್ರವಣ ಸಮಯದಲ್ಲಿ ನೀನು ಗರ್ಭವತಿಯಾಗಿದ್ದರಿಂದ ಈ ಪುತ್ರನು ವೇದಾಧ್ಯಯನ ಸಂಪನ್ನನಾಗಲಿ. ನಿನ್ನ ಪುತ್ರನಿಗೆ 'ವಿಶ್ರವಸ್' ಎಂದು ಹೆಸರಾಗಲಿ'' ಎಂದು ನುಡಿದನು. ಪುಲಸ್ತ್ಯನ ನುಡಿಯನ್ನು ಕೇಳಿ ಆ ದೇವಿಗೆ ಪರಮಾನಂದ ವಾಯಿತು. ಸ್ವಲ್ಪ ಕಾಲದಲ್ಲಿಯೇ ತೇಜೋನ್ವಿತನಾದ ಒಬ್ಬ ಪುತ್ರನನ್ನು ಪ್ರಸವಿಸಿದಳು. ಆತನಿಗೆ ವಿಶ್ರವಸ್ ಎಂದು ಹೆಸರಾಯಿತು. ಆ ಬಾಲಕನು ವೇದಾಧ್ಯಯನಸಂಪನ್ನನೂ ತನ್ನ ತಂದೆಯಂತೆ ಮಹಾತಪಸ್ವಿಯೂ ಆದನು.

ಆ ವಿಶ್ರವಸ್ಸು ತಪೋನಿಷ್ಠನಾಗಿರಲು ಭರದ್ವಾಜ ಮಹರ್ಷಿಯು ತನ್ನ ಮಗಳಾದ ದೇವವರ್ಣಿನಿಯನ್ನು ಆತನಿಗೆ ಕೊಟ್ಟು ವಿವಾಹ ಮಾಡಿದನು. ಕಾಲಕ್ರಮದಲ್ಲಿ ವಿಶ್ರವಸ್ಸಿನ ಪತ್ನಿ ದೇವವರ್ಣಿನಿಯು ಗರ್ಭಿಣಿಯಾಗಿ ಒಬ್ಬ ಮಗನನ್ನು ಹಡೆದಳು. ಅದನ್ನು ಕೇಳಿ ಸಂಪ್ರೀತನಾದ ಪುಲಸ್ತ್ಯನು ಆಗಮಿಸಿ ಆ ಶಿಶುವಿಗೆ 'ವೈಶ್ರವಣ' ಎಂದು ನಾಮಕರಣ ಮಾಡಿದನು. ವೈಶ್ರವಣನು ಮುಂದೆ ಘೋರವಾದ ತಪಸ್ಸಿನಲ್ಲಿ ತೊಡಗಿ ಬ್ರಹ್ಮನನ್ನು ಮೆಚ್ಚಿಸಿದನು. ಪ್ರತ್ಯಕ್ಷನಾಗಿ ಬಂದ ಬ್ರಹ್ಮನನ್ನು ಕಂಡು ಈ ವೈಶ್ರವಣನು ''ಹೇ ಬ್ರಹ್ಮದೇವ, ನನ್ನ ತಪಸ್ಸಿಗೆ ಮೆಚ್ಚಿರುವೆಯಾದರೆ, ಈ ವರವನ್ನು ಅನುಗ್ರಹಿಸು. ಏನೆಂದರೆ, ಜಗತ್ತಿನಲ್ಲಿರುವ ಸಮಸ್ತ ನಿಧಿಗಳಿಗೂ ನಾನು ಅಧಿಪತಿಯಾಗಬೇಕು'' ಎಂದನು. ಆಗ ಬ್ರಹ್ಮನು ''ಒಳ್ಳೆಯದು; ನಾನೀಗ ಉತ್ತರ ದಿಕ್ಕಿನ ಅಧಿಪತಿ ಯೊಬ್ಬನನ್ನು ಸೃಜಿಸಬೇಕೆಂದು ಆಲೋಚಿಸಿದ್ದೆನು. ನೀನೇ ಉತ್ತರದ ದಿಕ್ಪಾಲಕನಾಗಿ ಸಮಸ್ತ ನಿಧಿಗಳಿಗೂ ಅಧಿಪತಿಯಾಗಿರು'' ಎಂದು ವರವನ್ನಿತ್ತನು. ಶ್ರೀರಾಮ, ಈ ಪ್ರಕಾರವಾಗಿ ವೈಶ್ರವಣನು ಇಂದ್ರ, ಯಮ, ವರುಣರೊಡನೆ ನಾಲ್ಕನೆಯ ದಿಕ್ಪಾಲಕನಾದನು. ಆತನಿಗೆ ಕುಬೇರ ಎಂದು ಇನ್ನೊಂದು ಹೆಸರು. ಇಷ್ಟಲ್ಲದೆ, ಬ್ರಹ್ಮನು ಕುಬೇರನ ಸಂಚಾರಾರ್ಥವಾಗಿ ಪುಷ್ಪಕವಿಮಾನವನ್ನು ಅನುಗ್ರಹಿಸಿದನು.

ಅನಂತರ ವೈಶ್ರವಣನು ಪರಮ ಸಂತುಷ್ಟನಾಗಿ ತಂದೆಯಾದ ವಿಶ್ರವಸ್ಸಿನ ಬಳಿಯಲ್ಲಿ ಇವೆಲ್ಲವನ್ನೂ ನಿವೇದಿಸಿ ''ಭಗವನ್, ಬ್ರಹ್ಮದೇವನು ಉತ್ತರದ ದಿಕ್ಪಾಲನು ನಾನೆಂದು ಮಾತ್ರ ಹೇಳಿದನು. ನನ್ನ ವಾಸಸ್ಥಾನ ಯಾವುದೆಂದು ತಿಳಿಸದೆ ಅಂತರ್ಹಿತನಾಗಿದ್ದಾನೆ. ಈಗ ನಾನು ಎಲ್ಲಿ ವಾಸವಾಗಿರಬೇಕು''? ಎಂದು ಕೇಳಿದನು. ಆಗ ವಿಶ್ರವಸ್ಸು ''ವತ್ಸ, ದಕ್ಷಿಣ ಸಮುದ್ರದ ನಡುವೆ ಸುಂದರವಾದ ಲಂಕೆಯೆಂಬ ನಗರವು ಇಂದ್ರನ ಅಮರಾವತಿಯಂತೆ ಅತ್ಯಂತ ಭವ್ಯವಾಗಿದೆ. ಹಿಂದೆ ಅದರಲ್ಲಿ ರಾಕ್ಷಸರಿದ್ದರು. ಅವರು ವಿಷ್ಣುವಿನ ಭಯದಿಂದ ತತ್ತರಿಸಿ ರಸಾತಳಕ್ಕೆ ಹೋಗಿಬಿಟ್ಟರು. ಈಗ ಲಂಕೆಯಲ್ಲಿ ಯಾರೂ ಇಲ್ಲ. ಮಗನೆ, ನೀನು ಆ ಲಂಕೆಗೆ ಹೋಗಿ ಸುಖವಾಗಿರು'' ಎಂದು ನುಡಿದನು.

ಅನಂತರ ವೈಶ್ರವಣನು ತಂದೆಯ ಸಲಹೆಯಂತೆ ಲಂಕಾನಗರಕ್ಕೆ ಹೋಗಿ ನೆಲಸಿದನು. ಅವನು ಪ್ರತಾಪಶಾಲಿಯಾದ್ದರಿಂದ ಬಹಳ ಜನ ಯಕ್ಷರಾಕ್ಷಸರು ಅಲ್ಲಿಗೆ ಬಂದು ನಿರ್ಭಯದಿಂದ ವಾಸಿಸತೊಡಗಿದರು. ಕೆಲವು ದಿನಗಳಲ್ಲಿಯೇ ಲಂಕೆಯು ಪ್ರಜೆಗಳಿಂದ ತುಂಬಿ ಹೃಷ್ಟ ಪುಷ್ಟವಾಗಿ ಕಂಗೊಳಿಸಿತು. ವೈಶ್ರವಣನು ಆ ಯಕ್ಷರಾಕ್ಷಸರಿಗೆ ಅಧಿಪತಿಯಾದನು. ಅವನು ಆಗಾಗ ಪುಷ್ಪಕವನ್ನೇರಿ ವಿಶ್ರವಸ್ಸಿನ ಆಶ್ರಮಕ್ಕೆ ಬಂದು ತಂದೆತಾಯಿಗಳಿಗೆ ನಮಸ್ಕರಿಸಿ ಹೋಗುತ್ತಿದ್ದನು.

೨

ಮಾಲ್ಯವಂತ, ಸುಮಾಲಿ, ಮಾಲಿಯರ ವೃತ್ತಾಂತ. ರಾವಣ, ಕುಂಭಕರ್ಣ, ವಿಭೀಷಣರ ಜನನ. ರಾವಣಾದಿಗಳ ತಪಸ್ಸು

ಆಗ ಶ್ರೀರಾಮನು ಅಗಸ್ತ್ಯ ಮಹರ್ಷಿಗಳನ್ನು ಕುರಿತು ''ಪೂಜ್ಯರೆ, ಲಂಕೆಯಲ್ಲಿ ಮೊದಲಿನಿಂದಲೂ ರಾಕ್ಷಸರು ಇದ್ದರೆ? ವಿಷ್ಣುವಿನಿಂದ ಅವರಿಗೇಕೆ ಭಯ ಒದಗಿತು?'' ಎಂದು ಕೇಳಿದನು. ಅಗಸ್ತ್ಯರು ಇಂತೆಂದರು : ''ರಾಘವ, ಇದು ಬಹುದೊಡ್ಡ ಕಥೆ. ಪ್ರಕೃತಕ್ಕೆ ಸಂಬಂಧಿಸಿದಂತೆ ಇಷ್ಟನ್ನು ಹೇಳಬಹುದು. ಲಂಕೆಯಲ್ಲಿ ಮೊದಲಿನಿಂದಲೂ ರಾಕ್ಷಸರೇ ವಾಸವಾಗಿದ್ದರು. ಅವರಲ್ಲಿ ಸುಕೇಶನೆಂಬವನು ವರಬಲಸಂಪನ್ನನೂ ಮಹಿಮಾನ್ವಿತನೂ ಆಗಿದ್ದನು. ಗ್ರಾಮಣಿ ಎಂಬ ಗಂಧರ್ವನು ತನ್ನ ಮಗಳಾದ ದೇವವತಿಯನ್ನು ಸುಕೇಶನಿಗೆ ಧಾರ್ಮಿಕ ವಿಧಿಯಿಂದ ಪಾಣಿಗ್ರಹಣ ಮಾಡಿಸಿ ಕೊಟ್ಟನು. ಸುಕೇಶನು ಆ ಪತ್ನಿಯಲ್ಲಿ ಮಾಲ್ಯವಂತ, ಸುಮಾಲಿ, ಮಾಲಿ – ಎಂಬ ಮೂರು ಮಕ್ಕಳನ್ನು ಪಡೆದನು. ಆ ಮೂವರು ಅಣ್ಣ ತಮ್ಮಂದಿರು ಮೇರು ಪರ್ವತದ

ಬಳಿ ಬ್ರಹ್ಮನನ್ನು ಕುರಿತು ಕಠಿಣವಾದ ತಪಸ್ಸನ್ನಾಚರಿಸಿದರು. ಪ್ರಸನ್ನನಾದ ಬ್ರಹ್ಮನಿಂದ ಅವರು ತಾವು ಅಸಾಧಾರಣ ಪರಾಕ್ರಮಿಗಳಾಗುವಂತೆ ವರವನ್ನು ಪಡೆದರು. ಆಮೇಲೆ ಆ ನಿಶಾಚರರು ದೇವತೆಗಳನ್ನೂ ಋಷಿಗಳನ್ನೂ ಬಾಧಿಸತೊಡಗಿದರು. ಮಾಲ್ಯವಂತನ ಮಡದಿಯಾದ ಸುಂದರಿಯೆಂಬ ಗಂಧರ್ವಿಯಲ್ಲಿ ವಿರೂಪಾಕ್ಷ ಮೊದಲಾದ ಪುತ್ರರೂ ಅನಲೆಯೆಂಬ ಪುತ್ರಿಯೂ ಜನಿಸಿದರು. ಪ್ರಹಸ್ತ, ಅಕಂಪನ ಮೊದಲಾದ ಗಂಡುಮಕ್ಕಳು ಸುಮಾಲಿಗೆ ಜನಿಸಿದರು. ಕೈಕಸಿ, ಕುಂಭೀನಸಿ ಎಂಬ ಸ್ತ್ರೀಯರೂ ಆತನ ಮಕ್ಕಳೇ. ಮಾಲಿಯ ಪುತ್ರರಾದ ಅನಿಲ, ಅನಲ, ಹರ, ಸಂಪಾತಿಯೆಂಬ ನಾಲ್ವರು ಮುಂದೆ ವಿಭೀಷಣನಿಗೆ ಅಮಾತ್ಯರಾದರು.

ಮಾಲ್ಯವದಾದಿ ರಾಕ್ಷಸರಿಂದ ಪೀಡೆಗೆ ಒಳಗಾದ ದೇವತೆಗಳ ಪ್ರಾರ್ಥನೆಯಂತೆ ವಿಷ್ಣುವು ಆ ರಾಕ್ಷಸರ ಬಾಧೆಯನ್ನು ನಿವಾರಿಸುವುದಾಗಿ ತಿಳಿಸಿದನು. ಈ ವಿಷಯವನ್ನು ತಿಳಿದು ರಾಕ್ಷಸರ ದಂಡು ದೇವಲೋಕವನ್ನು ಮುತ್ತಿತ್ತು. ಆಗ ದೇವತೆಗಳ ಮೊರೆಯನ್ನು ಕೇಳಿ ಶ್ರೀಹರಿಯು ಗರುಡನ ಮೇಲೆ ಕುಳಿತು ರಾಕ್ಷಸರ ಸಂಹಾರಕ್ಕಾಗಿ ಧಾವಿಸಿ ಬಂದನು. ರಾಘವ, ಭಗವಾನ್ ಶ್ರೀಹರಿಯೆಲ್ಲಿ? ಈ ರಾಕ್ಷಸಾಧಮರೆಲ್ಲಿ? ಅಲ್ಪಕಾಲದಲ್ಲಿಯೇ! ಶ್ರೀಹರಿಯ ಚಕ್ರಾಯುಧದಿಂದ ರಾಕ್ಷಸರು ಸತ್ತು ಸತ್ತು ಉರುಳಿದರು. ಆಗ ಸುಮಾಲಿಯು ಕ್ರೋಧದಿಂದ ರಾಕ್ಷಸರನ್ನು ಹುರಿದುಂಬಿಸುತ್ತಾ ವಿಷ್ಣುವಿನ ಮೇಲೆ ಏರಿಹೋದನು. ಆತನ ಸಾರಥಿಯನ್ನು ವಿಷ್ಣುವು ಕೊಂದು ಹಾಕಿದನು. ಅಶ್ವಗಳು ಆ ಸುಮಾಲಿಯ ರಥವನ್ನು ಎತ್ತಲೋ ಎಳೆದುಕೊಂಡು ಹೋದವು. ಆಗ ಮಾಲಿಯು ಗದೆಯನ್ನು ತುಡುಕಿ ವಿಷ್ಣುವಿನ ಮೇಲೆ ಘೋರವಾದ ಯುದ್ಧವನ್ನಾರಂಭಿಸಿದನು. ಆಗ ವಿಷ್ಣುವು ಪ್ರಯೋಗಿಸಿದ ಸುದರ್ಶನ ಚಕ್ರವು ಗಗನವನ್ನು ಬೆಳಗಿಸುತ್ತ ಭರ್ರೆಂದು ಬಂದು ಮಾಲಿಯ ತಲೆಯನ್ನು ತರಿದುರುಳಿಸಿತು.

ಮಾಲಿಯ ಮರಣವಾರ್ತೆಯನ್ನು ಕೇಳಿ ಮಾಲ್ಯವಂತನು ರೋಷಾವೇಷದಿಂದ ರಣರಂಗದಲ್ಲಿ ನುಗ್ಗಿ ಬಂದನು. ವಿಷ್ಣುವಿಗೂ ಆತನಿಗೂ ಅತ್ಯಂತ ಭೀಕರವಾದ ಯುದ್ಧ ನಡೆಯಿತು. ಆ ಸಮಯದಲ್ಲಿ ಬಲಾಢ್ಯನಾದ ಗರುಡನು 'ಕ್ರೋಧಾವಿಷ್ಟನಾಗಿ ರೆಕ್ಕೆಯನ್ನು ಬೀಸಿ ಅದರಿಂದೆದ್ದ ಬಿರುಗಾಳಿಯಿಂದಲೇ ಮಾಲ್ಯವಂತನನ್ನು ತರಗೆಲೆಯಂತೆ ದೂರಕ್ಕೆ ಹಾರಿಸಿಬಿಟ್ಟನು! ವಿಷ್ಣುವಿನೊಡನೆ ಯುದ್ಧಮಾಡಲಾರದೆ, ಸುಮಾಲಿಯೂ ಮಾಲ್ಯವಂತನೂ ಹಿಂದಿರುಗಿ ಲಂಕೆಗೆ ಬಂದು ಸೇರಿಕೊಂಡರು. ವಿಷ್ಣುವಿನ ಭಯದಿಂದ ಅವರು ದಿಕ್ಕುಗಾಣದೆ ತಮ್ಮ ಎಲ್ಲ ಪರಿವಾರದೊಂದಿಗೆ ಲಂಕೆಯನ್ನು ತೊರೆದು ಪಾತಾಳದಲ್ಲಿ ನೆಲೆಸಿದರು. ರಘುನಂದನ, ಈ ಕಾರಣದಿಂದ

ಲಂಕೆಯು ನಿರ್ಜನ ಪ್ರದೇಶವಾಗಿತ್ತು. ನಾನು ಹಿಂದೆ ಹೇಳಿದಂತೆ ಕುಬೇರನು ಅಲ್ಲಿಗೆ ಬಂದು ನೆಲೆಸಿದನು'' ಎಂದರು.

ಅನಂತರ ಶ್ರೀರಾಮನು ''ಮಹರ್ಷಿಗಳೆ, ಕುಬೇರನು ಅಲ್ಲಿಂದ ನಿರ್ಗಮಿಸಲು ಕಾರಣವೇನು? ಮತ್ತೆ ರಾವಣಾದಿಗಳು ಅಲ್ಲಿಗೆ ಹೇಗೆ ಬಂದು ನೆಲೆಸಿದರು?'' ಎಂದು ಕೇಳಿದನು. ಅಗಸ್ತ್ಯರು ಹೇಳತೊಡಗಿದರು : ''ಶ್ರೀರಾಮ, ಬಹುಕಾಲವು ಕಳೆಯಿತು. ಪಾತಾಳಕ್ಕೆ ಹೋಗಿದ್ದ ಸುಮಾಲಿಗೆ ಕೈಕಸಿ ಎಂಬ ಮಗಳಿದ್ದಳಷ್ಟೆ. ಪರಮ ಸುಂದರಿ ಯಾಗಿದ್ದ ಅವಳಿಗೆ ವರನನ್ನು ಹುಡುಕುವುದಕ್ಕಾಗಿ ಸುಮಾಲಿಯು ಭೂಲೋಕಕ್ಕೆ ಬಂದು ತಿರುಗಾಡುತ್ತಿದ್ದನು. ಆಗ ಕುಬೇರನು ಪುಷ್ಪಕ ವಿಮಾನದಲ್ಲಿ ಕುಳಿತು ಲಂಕೆಯಿಂದ ಹೊರಟು ತನ್ನ ತಂದೆಯಾದ ವಿಶ್ರವಸ್ಸಿನ ಬಳಿಗೆ ಹೋಗುತ್ತಿದ್ದುದನ್ನು ಕಂಡನು. ಸುಮಾಲಿಗೆ ತುಂಬ ಅಸೂಯೆ ಉಂಟಾಯಿತು. ತಮಗೆ ನೆಲೆಯಾಗಿದ್ದ ಲಂಕೆಯನ್ನು ಈ ಕುಬೇರನು ಆಕ್ರಮಿಸಿದನಲ್ಲವೆ? ಇದನ್ನು ಮತ್ತೆ ನಾವು ಪಡೆಯುವುದು ಹೇಗೆ? ಎಂಬ ಚಿಂತೆ ಅವನನ್ನು ಬಾಧಿಸತೊಡಗಿತು. ಆತನು ಮತ್ತೆ ಪಾತಾಳಕ್ಕೆ ಹೋಗಿ ಒಂದು ದಿನ ತನ್ನ ಮಗಳಾದ ಕೈಕಸಿಯನ್ನು ಕುರಿತು ಇಂತೆಂದನು : ''ಮಗಳೆ, ನಿನಗೆ ಯೋಗ್ಯನಾದ ವರನನ್ನು ಹುಡುಕಲು ನಾನು ಪ್ರಯತ್ನಿಸಿದ್ದು ಗೊತ್ತೇ ಇದೆ. ನಿನಗೆ ಅನುರೂಪನಾದವನು ದೊರೆಯಲೇ ಇಲ್ಲ. ಈ ದುಃಖದಿಂದ ನಾನು ಕಂಗೆಟ್ಟು ಹೋಗಿದ್ದೇನೆ. ಈಗ ನನ್ನ ಮನಸ್ಸಿಗೊಂದು ದಾರಿ ಕಾಣುತ್ತಿದೆ. ವತ್ಸೆ, ಪುಲಸ್ತ್ಯಪ್ರಜಾಪತಿಯ ಪುತ್ರನಾದ ವಿಶ್ರವಸ್ಸು ಮುನಿ ಶ್ರೇಷ್ಠನಾಗಿದ್ದಾನೆ. ಆತನು ಮಹಾತೇಜಸ್ವಿ. ಅವನನ್ನು ನೀನು ಮದುವೆಯಾಗು. ಆತನನ್ನು ವರಿಸಿದರೆ ಧನಾಧಿಪತಿಯಾದ ಕುಬೇರನಿಗೆ ಸಮಾನರಾದ ಪುತ್ರರು ನಿನಗೆ ಜನಿಸುವರು. ಆದ್ದರಿಂದ ಸಂಕೋಚವಿಲ್ಲದೆ ವಿಶ್ರವಸ್ಸನ್ನು ನೀನು ವರಿಸು'' ಎಂದು ನುಡಿದನು. ಕೈಕಸಿಯು ವಿಶ್ರವಸ್ಸು ತಪಶ್ಚರಣೆ ಮಾಡುತ್ತಿದ್ದ ಸ್ಥಳಕ್ಕೆ ತಂದೆಯ ಪ್ರೇರಣೆಯಂತೆ ಹೋದಳು. ಅಗ್ನಿಯೋ ಎಂಬಂತೆ ತೇಜಸ್ಸಿನಿಂದ ಬೆಳಗುತ್ತಿದ್ದ ವಿಶ್ರವಸ್ಸು ಅಗ್ನಿಹೋತ್ರವನ್ನು ಆಚರಿಸುತ್ತಿದ್ದನು. ಅದು ಪ್ರದೋಷಕಾಲವಾಗಿತ್ತು. ಆ ಸಮಯವು ದಾರುಣವಾದದ್ದು. ಯೋಗ್ಯವಾದ ಕಾಲವಲ್ಲ ಎಂಬುದನ್ನರಿಯದೆ, ಕೈಕಸಿಯು ನೇರವಾಗಿ ಅಲ್ಲಿಗೆ ಹೋದಳು. ಮುನಿಯೆದುರಿಗೆ ತಲೆತಗ್ಗಿಸಿ ಹೆಬ್ಬೆರಳಿನಿಂದ ನೆಲವನ್ನು ಕೆರೆಯುತ್ತ ನಿಂತುಕೊಂಡಳು. ಪರಮ ಕೃಪಾಳುವಾದ ಆ ಮುನಿಯು ಕೈಕಸಿಯನ್ನು ನೋಡಿ ''ಭದ್ರೆ, ನೀನು ಯಾರ ಮಗಳು? ಇಲ್ಲಿಗೇಕೆ ಬಂದೆ? ನನ್ನಿಂದ ಏನಾಗಬೇಕು?'' ಎಂದು ಕೇಳಿದನು. ಆಗ ಕೈಕಸಿಯು ಕೈಮುಗಿದುಕೊಂಡು ''ಮಹರ್ಷಿಗಳೆ, ನನ್ನ ತಂದೆಯ ಆಜ್ಞೆಯಿಂದಲೇ ನಾನು ಇಲ್ಲಿಗೆ ಬಂದಿದ್ದೇನೆ. ನನ್ನ

ಹೆಸರು ಕೈಕಸಿ. ನಿಮ್ಮ ತಪೋಮಹಿಮೆಯಿಂದಲೇ ನನ್ನ ಆಶಯವನ್ನು ನೀವು ಗ್ರಹಿಸಬಹುದು'' ಎಂದಳು. ಆಗ ವಿಶ್ರವಸ್ಸು ಧ್ಯಾನಾರೂಢನಾಗಿ ಎಲ್ಲವನ್ನೂ ತಿಳಿದುಕೊಂಡು, ''ಭದ್ರೆ, ನೀನು ಬಂದ ಕಾರಣವು ತಿಳಿಯಿತು. ನಿನ್ನ ಮನಸ್ಸಿನಲ್ಲಿರುವುದು ಗೊತ್ತಾಯಿತು. ನನ್ನಿಂದ ಪುತ್ರರನ್ನು ಪಡೆಯುವ ಅಭಿಲಾಷೆಯಿಂದ ಬಂದಿದ್ದೀಯೆ. ಆದರೆ ಕ್ರೂರವಾದ ಈ ಪ್ರದೋಷಕಾಲದಲ್ಲಿ ನನ್ನನ್ನು ಕಾಮಿಸಿ ಬಂದಿದ್ದೀಯೆ. ಆದ್ದರಿಂದ ಘೋರಸ್ವಭಾವದವರೂ ಕ್ರೂರಕರ್ಮಿಗಳೂ ಆದ ಪುತ್ರರನ್ನು ಪಡೆಯುವೆ'' ಎಂದು ನುಡಿದನು. ಆಗ ಕೈಕಸಿಯು ವಿಶ್ರವಸ್ಸಿಗೆ ಅಡ್ಡಬಿದ್ದು ನಮಸ್ಕರಿಸಿ ''ಭಗವನ್, ಬ್ರಹ್ಮವಾದಿಗಳಾದ ನಿಮ್ಮಿಂದ ಅಂಥ ಮಕ್ಕಳು ಜನಿಸುವುದು ನನಗೆ ಬೇಡ. ಕೆಟ್ಟ ಸ್ವಭಾವದ ಮಕ್ಕಳನ್ನು ನಾನು ಬಯಸುವುದಿಲ್ಲ'' ಎಂದು ಬೇಡಿಕೊಂಡಳು. ಆ ಮಾತಿನಿಂದ ವಿಶ್ರವಸ್ಸು ಸುಪ್ರಸನ್ನನಾಗಿ ಆಕೆಯನ್ನು ಕುರಿತು ''ಸೌಮ್ಯೆ, ನಿನ್ನಲ್ಲಿ ಜನಿಸುವ ಕಿರಿಯ ಮಗನೊಬ್ಬನು ಧರ್ಮಾತ್ಮನಾಗಿ ನನ್ನ ವಂಶಕ್ಕೆ ಅನುಗುಣವಾಗಿ ವರ್ತಿಸುವನು'' ಎಂದು ತಿಳಿಸಿದನು. ಶ್ರೀರಾಮ, ವಿಶ್ರವಸ್ಸು ಕೈಕಸಿಯನ್ನು ವಿಧಿವತ್ತಾಗಿ ಮದುವೆಯಾದನು. ಕೆಲವು ಕಾಲವು ಕಳೆಯಿತು. ಕೈಕಸಿಯು ರಾಕ್ಷಸಾಕಾರನೂ ದಾರುಣಾಕೃತಿಯೂ ಆದ ಒಬ್ಬ ಮಗನನ್ನು ಹೆತ್ತಳು. ಅವನು ಹುಟ್ಟಿದಾಗ ಮೋಡಗಳು ಕರ್ಕಶವಾಗಿ ಗುಡುಗಿದವು. ಸೂರ್ಯನು ಮಂಕಾದನು. ಭೂಮಿ ನಡುಗಿತು. ಆ ಹುಡುಗನು ದಶಕಂಠನಾಗಿ ಜನಿಸಿದ್ದರಿಂದ ದಶಕಂಠನೆಂದೇ ನಾಮಕರಣವಾಯಿತು. ಅವನ ಇನ್ನೊಂದು ಹೆಸರು ರಾವಣ. ಕೆಲವು ದಿನ ಕಳೆದ ಮೇಲೆ ಕುಂಭಕರ್ಣನು ಹುಟ್ಟಿದನು. ಅವನ ದೇಹಪ್ರಮಾಣವು ಬಹು ದೊಡ್ಡದು. ಆಮೇಲೆ ಕುರೂಪಿಯಾದ ಶೂರ್ಪಣಖೆ ಹುಟ್ಟಿದಳು. ವಿಭೀಷಣನು ಕೈಕಸಿಯ ಕಿರಿಯ ಮಗ. ಧರ್ಮಾತ್ಮ, ಆ ಸಾತ್ವಿಕನು ಜನಿಸಿದಾಗ ಪುಷ್ಪ ವೃಷ್ಟಿಯಾಯಿತು. ಗಗನದಲ್ಲಿ ದೇವದುಂದುಭಿಗಳು ಮೊಳಗಿದವು.

ವಿಶ್ರವಸ್ಸಿನ ತಪೋವನದಲ್ಲಿ ಇವರೆಲ್ಲರೂ ಬಲಸಂಪನ್ನರಾಗಿ ಬೆಳೆದರು. ಹೀಗಿರಲು ಒಂದು ಸಲ, ವೈಶ್ರವಣನು (ಕುಬೇರನು) ಎಂದಿನಂತೆ ತನ್ನ ಪುಷ್ಪಕ ವಿಮಾನವನ್ನೇರಿ ತಂದೆಯನ್ನು ಸಂದರ್ಶಿಸುವುದಕ್ಕಾಗಿ ವಿಶ್ರವಸ್ಸಿನ ತಪೋವನಕ್ಕೆ ಬಂದನು. ವೈಭವದಿಂದ ಮೆರೆಯುತ್ತಿದ್ದ ಕುಬೇರನನ್ನು ಕಂಡು ಕೈಕಸಿಯು ತನ್ನ ಮಗನಾದ ರಾವಣನನ್ನು ಕರೆದು ''ವತ್ಸ, ಆ ಕುಬೇರನನ್ನು ನೋಡು – ಎಷ್ಟು ತೇಜಸ್ವಿಯಾಗಿದ್ದಾನೆ! ಆತನು ನಿನಗೆ ಅಣ್ಣನಾಗಬೇಕು. ನೀವು ಒಬ್ಬ ತಂದೆಯ ಮಕ್ಕಳಾಗಿ ಅಣ್ಣತಮ್ಮಂದಿರಾಗಿದ್ದರೂ ನಿಮ್ಮ ಸ್ಥಿತಿ ಹೇಗಿದೆ, ನೋಡಿಕೊ. ನೀನು ನನ್ನ ಮಗನೇ ಹೌದಾದರೆ ಕುಬೇರನಿಗೆ ಸಮಾನನಾಗಬೇಕು'' ಎಂದು ಹೇಳಿಕೊಟ್ಟಳು.

ಮಾತೆಯ ಮಾತನ್ನು ಕೇಳಿ ಪ್ರತಾಪಶಾಲಿಯಾದ ರಾವಣನು ಹೀಗೆ ಪ್ರತಿಜ್ಞೆ ಮಾಡಿದನು : ''ಅಮ್ಮ, ಇದೋ ಶಪಥಮಾಡುವೆನು. ವೈಭವದಲ್ಲಿ ಕುಬೇರನಿಗೆ ಸದೃಶನು ಮಾತ್ರವೇ ಅಲ್ಲ, ಅವನಿಗಿಂತ ಅಧಿಕನಾಗುವೆನು. ನಿನ್ನ ಮನೋವ್ಯಥೆಯನ್ನು ತ್ಯಜಿಸು'' ಎಂದನು. ದುಷ್ಕರವಾದ ಆ ಸಿದ್ಧಿಯು ತಪಸ್ಸಿನಿಂದಲೇ ದೊರಕಬೇಕೆಂದು ನಿಶ್ಚಯಿಸಿ ತನ್ನ ಮೂವರು ಸೋದರರಿಗೂ ಹೇಳಿ ಹುರಿದುಂಬಿಸಿ ಅವರೊಡನೆ ತಪಸ್ಸು ಮಾಡುವುದಕ್ಕಾಗಿ ಗೋಕರ್ಣಕ್ಷೇತ್ರದ ಪವಿತ್ರಾಶ್ರಮಕ್ಕೆ ಆಗಮಿಸಿದನು. ಉಗ್ರವಾದ ನಿಲುವನ್ನು ತಳೆದ ಆ ರಾಕ್ಷಸನು ತನ್ನ ತಮ್ಮಂದಿರೊಡನೆ ಘೋರವಾದ ತಪಸ್ಸಿನಲ್ಲಿ ನಿರತನಾದನು.

೩

ರಾವಣ, ಕುಂಭಕರ್ಣ, ವಿಭೀಷಣರಿಗೆ ಬ್ರಹ್ಮನಿಂದ ವರಪ್ರಾಪ್ತಿ ಲಂಕಾನಿವಾಸ.

''ಹೀಗೆ ಬಹುಕಾಲ ತಪಸ್ಸು ಮಾಡಿದರೂ ಬ್ರಹ್ಮನು ಪ್ರತ್ಯಕ್ಷನಾಗದುದರಿಂದ ರಾವಣನು ತನ್ನ ಒಂದು ಶಿರಸ್ಸನ್ನು ಕತ್ತರಿಸಿ ಅಗ್ನಿಯಲ್ಲಿ ಹೋಮ ಮಾಡಿದನು. ಈ ಪ್ರಕಾರ ಅವನ ಒಂಬತ್ತು ಶಿರಸ್ಸುಗಳು ಅಗ್ನಿಯಲ್ಲಿ ಹುತವಾದವು. ಹಟವಾದಿಯಾದ ರಾವಣನು ಈಗಲೂ ಬ್ರಹ್ಮನು ಪ್ರತ್ಯಕ್ಷವಾಗಲಿಲ್ಲವೆಂದು ತನ್ನ ಹತ್ತನೆಯ ಶಿರಸ್ಸನ್ನೂ ಕತ್ತರಿಸಲು ಉದ್ಯುಕ್ತನಾದನು. ಅಷ್ಟರಲ್ಲಿ ಪಿತಾಮಹನು ಪ್ರತ್ಯಕ್ಷನಾಗಿ ಪ್ರೀತಿಯಿಂದ ''ದಶಗ್ರೀವ, ನಿನ್ನ ತಪಸ್ಸಿಗೆ ಮೆಚ್ಚಿದೆ. ನಿನ್ನ ಅಭೀಷ್ಟವೇನು, ಕೇಳಿಕೊ'' ಎಂದನು. ಆಗ ರಾವಣನು ಸಂತುಷ್ಟಚಿತ್ತನಾಗಿ ಬ್ರಹ್ಮದೇವನಿಗೆ ತಲೆಬಾಗಿಸಿ ವಂದಿಸಿದನು. ''ಸ್ವಾಮಿ, ಪ್ರಾಣಿಗಳಿಗೆ ಮರಣಕ್ಕಿಂತ ಹೆಚ್ಚಿನ ಭಯವಿಲ್ಲ. ಮೃತ್ಯುವಿಗೆ ಸಮಾನವಾದ ಶತ್ರುವಿಲ್ಲ. ಆದ್ದರಿಂದ ನಾನು ಮರಣರಹಿತನಾಗಬೇಕೆಂದು ವರವನ್ನು ಕೇಳಿ ಕೊಳ್ಳುತ್ತೇನೆ!'' ಎಂದನು. ಬ್ರಹ್ಮನು ''ರಾವಣ, ಯಾರಿಂದಲೂ ಮರಣವಾಗ ಬಾರದೆಂಬ ವರ ನಿನಗೆ ಲಭಿಸಲಾರದು. ಹುಟ್ಟಿದವನು ಸಾಯಲೇಬೇಕು–ಎಂಬುದು ದೈವ ನಿಯಮ. ಬೇರೊಂದು ವರವನ್ನು ಬೇಡಿಕೊ'' ಎಂದು ತಿಳಿಸಿದನು. ಬ್ರಹ್ಮನು ಹೀಗೆನ್ನಲು ರಾವಣನು ಕೈಮುಗಿದುಕೊಂಡು ''ಬ್ರಹ್ಮದೇವ, ಹಾಗಾದರೆ ಗರುಡ, ನಾಗ, ಯಕ್ಷರಿಂದಲೂ, ದೇವತೆಗಳಿಂದಲೂ, ದೈತ್ಯದಾನವರಿಂದಲೂ ನನಗೆ ಮರಣವಾಗದಂತೆ ಅನುಗ್ರಹಿಸು. ನನಗೆ ಇತರರ ಚಿಂತೆಯಿಲ್ಲ. ಮನುಷ್ಯಾದಿಗಳು ಹುಲ್ಲುಕಡ್ಡಿಗೆ ಸಮಾನ'' ಎಂದನು. ಆಗ ಬ್ರಹ್ಮನು ''ಒಳ್ಳೆಯದು ಹಾಗೆಯೇ ಆಗಲಿ.

ನಿನ್ನ ತಪಸ್ಸಿಗೆ ಸಂಪ್ರೀತನಾಗಿದ್ದೇನೆ. ಇನ್ನೊಂದು ವರವನ್ನು ಕೊಡುವೆನು ಕೇಳು. ಸೌಮ್ಯ, ಅಗ್ನಿಯಲ್ಲಿ ನೀನು ಹೋಮ ಮಾಡಿದ ಒಂಭತ್ತು ಶಿರಸ್ಸುಗಳು ಮತ್ತೆ ಹುಟ್ಟಲಿ. ನೀನು ಬಯಸಿದ ರೂಪವನ್ನು ಧರಿಸುವ ಶಕ್ತಿ ಲಭಿಸಲಿ. ನೀನು ಕಾಮರೂಪಿಯಾಗು'' ಎಂದು ನುಡಿದನು. ಬ್ರಹ್ಮನು ಹೀಗೆ ನುಡಿದೊಡನೆ ಅಗ್ನಿಯಲ್ಲಿ ಹುತವಾಗಿದ್ದ ರಾವಣನ ಒಂಬತ್ತು ಶಿರಸ್ಸುಗಳು ಮತ್ತೆ ಉದಯಿಸಿದವು. ಆಮೇಲೆ ಲೋಕ ಪಿತಾಮಹನಾದ ಬ್ರಹ್ಮನು ವಿಭೀಷಣನ ಬಳಿಗೆ ಹೋಗಿ ''ವತ್ಸ–ವಿಭೀಷಣ, ನಿನ್ನ ಧರ್ಮನಿಷ್ಠೆಯಿಂದ ಸಂತುಷ್ಟನಾಗಿದ್ದೇನೆ. ಎಲೈ ಧರ್ಮಾತ್ಮ, ವರವನ್ನು ಕೇಳಿಕೊ'' ಎಂದನು. ಗುಣಾಢ್ಯನಾದ ವಿಭೀಷಣನು ಕೈ ಮುಗಿದುಕೊಂಡು ''ದೇವ, ಲೋಕೇಶ್ವರನಾದ ನೀನು ಪ್ರಸನ್ನನಾದರೆ ನಾನು ಧನ್ಯ. ಅದೇ ನನಗೆ ವರ. ಬೇರೊಂದು ವರವನ್ನು ಕೊಡುವುದಾದರೆ ನಾನು ಕೇಳಿಕೊಳ್ಳುವ ವರವಿದು. ಏನೆಂದರೆ, ಎಂತಹ ವಿಪತ್ತಿಗೆ ಸಿಕ್ಕಿದರೂ ನನ್ನ ಬುದ್ಧಿಯು ಧರ್ಮದಲ್ಲಿ ಸ್ಥಿರವಾಗಿರಲಿ. ಹೇ ಭಗವನ್, ಬ್ರಹ್ಮಾಸ್ತ್ರಮಂತ್ರವು ನನಗೆ ಸ್ಫುರಿಸಲಿ. ನಾನು ಯಾವ ಆಶ್ರಮದಲ್ಲಿದ್ದರೂ ಅದನ್ನು ನಿಷ್ಠೆಯಿಂದ ಪರಿಪಾಲಿಸುವ ಸದ್ಬುದ್ಧಿ ನನಗೆ ಬರಲಿ. ಓ ದಯಾಳುವೇ, ಇದೇ ನಾನು ಬೇಡುವ ವರ'' ಎಂದನು. ಬ್ರಹ್ಮನಿಗೆ ಪರಮಾನಂದವಾಯಿತು. ''ವತ್ಸ–ವಿಭೀಷಣ, ನೀನು ಧರ್ಮಿಷ್ಠನಾಗಿದ್ದೀಯೆ. ನಿನ್ನ ಇಚ್ಛೆ ನೆರವೇರಲಿ. ರಾಕ್ಷಸಯೋನಿಯಲ್ಲಿ ಜನಿಸಿದ್ದರೂ ಅಧರ್ಮದ ಕಡೆಗೆ ನಿನ್ನ ಬುದ್ಧಿ ಒಲಿಯಲಿಲ್ಲ. ಆದ್ದರಿಂದ ನಿನಗೆ ಅಮರತ್ವವನ್ನು ಕೊಟ್ಟಿದ್ದೇನೆ. ಚಿರಂಜೀವಿಯಾಗು'' ಎಂದು ಹೇಳಿ ಕುಂಭಕರ್ಣ ನಿದ್ದಲ್ಲಿಗೆ ಹೋದನು. ಆಗ ದೇವತೆಗಳು ಕೃತಾಂಜಲಿಗಳಾಗಿ ಬ್ರಹ್ಮನನ್ನು ಕುರಿತು ''ಪಿತಾಮಹ, ಈ ಕುಂಭಕರ್ಣನಿಗೆ ಯಾವ ವಿಶೇಷವಾದ ವರವನ್ನೂ ಕೊಡಬಾರದು! ಈತನು ದುಷ್ಟ. ಇವನು ಭಕ್ಷಿಸಿರುವ ಋಷಿಗಳೂ, ಮನುಷ್ಯರೂ ಎಷ್ಟು ಜನರೋ. ಬ್ರಹ್ಮದೇವ, ವರಬಲವಿಲ್ಲದೆಯೇ ಈ ರಾಕ್ಷಸನು ಇಷ್ಟು ಹಾವಳಿಯನ್ನು ನಡೆಸುತ್ತಿದ್ದನು. ಇನ್ನು ವರವನ್ನು ಪಡೆದರೆ ಮೂರುಲೋಕಗಳನ್ನೂ ನುಂಗಿ ನೊಣೆದು ಬಿಡುತ್ತಾನೆ. ಈ ನೀಚನಿಗೆ ಅಜ್ಞಾನದ ಮಬ್ಬು ಕವಿಯುವಂತೆ ಮಾಡು'' ಎಂದು ಪ್ರಾರ್ಥಿಸಿದರು. ಆಗ ಬ್ರಹ್ಮನು ದೇವತೆಗಳ ಮಾತು ಸರಿಯಾಗಿದೆ ಯೆಂದು ನಿಶ್ಚಯಿಸಿ ವಾಗ್ದೇವಿಯಾದ ಸರಸ್ವತಿಯನ್ನು ಕುರಿತು ''ದೇವಿ, ನೀನು ಈ ಕುಂಭಕರ್ಣನ ಬಾಯಿಯಲ್ಲಿ ಉಪಸ್ಥಿತಳಾಗಿ ದೇವತೆಗಳ ಇಷ್ಟದಂತೆ ಅವನು ನುಡಿಯುವ ಹಾಗೆ ಮಾಡು'' ಎಂದನು. ವಾಗ್ದೇವತೆಯು ಬ್ರಹ್ಮನ ಆಜ್ಞೆಯನ್ನು ಅಂಗೀಕರಿಸಿದಳು. ಆಮೇಲೆ ಕುಂಭಕರ್ಣನ ಬಳಿಗೆ ಹೋಗಿ ''ಕುಂಭಕರ್ಣ, ನಿನಗೆ ಇಷ್ಟವಾದ ವರವನ್ನು ಕೇಳಿಕೊ'' ಎಂದನು. ಕುಂಭಕರ್ಣನು ವಾಗ್ದೇವಿಯ ಪ್ರಭಾವಕ್ಕೆ

ಒಳಗಾಗಿ ''ದೇವದೇವ, ನಿದ್ರೆಯು ತುಂಬ ಸುಖವನ್ನು ಕೊಡುವುದೆಂದು ನನಗೆ ಅನ್ನಿಸಿದೆ. ಆದ್ದರಿಂದ ಬಹುಕಾಲದವರೆಗೆ ನನಗೆ ಚೆನ್ನಾಗಿ ನಿದ್ರೆಬರುತ್ತಿರಬೇಕೆಂದು ಕೇಳಿಕೊಳ್ಳುತ್ತೇನೆ!'' ಎಂದನು. ಒಡನೆಯೇ ಬ್ರಹ್ಮನು ''ತಥಾಸ್ತು'' ಎಂದು ನುಡಿದು ಅದೃಶ್ಯನಾದನು. ಬ್ರಹ್ಮನು ಹೊರಟುಹೋದಮೇಲೆ ಕುಂಭಕರ್ಣನಿಗೆ ಜ್ಞಾನೋದಯ ವಾಯಿತು. ''ಎಲಾ, ಇದೇನು? ನನ್ನ ಬಾಯಿಯಿಂದ ಇಂಥ ಮಾತು ಹೊರಬಿತ್ತು. ಓಹೋ, ಇದೆಲ್ಲವೂ ಆ ದೇವತೆಗಳ ಚೇಷ್ಟೆ! ಅವರೇ ನನಗೆ ವ್ಯಾಮೋಹವುಂಟಾಗು ವಂತೆ ಮಾಡಿದರು'' ಎಂದು ವಿಷಣ್ಣನಾದನು.

ಅಗಸ್ತ್ಯರು ಹೇಳಿದರು: ''ಶ್ರೀರಾಮ, ರಾವಣಾದಿಗಳು ಬ್ರಹ್ಮನಿಂದ ವರವನ್ನು ಪಡೆದರೆಂದು ಸುಮಾಲಿಗೆ ತಿಳಿಯಿತು. ಅವನು ನಿರ್ಭಯನಾಗಿ ಮಾರೀಚ, ಪ್ರಹಸ್ತ, ವಿರೂಪಾಕ್ಷ, ಮಹೋದರ–ಎಂಬ ನಾಲ್ವರು ಸಚಿವರೊಡನೆ ಭೂಲೋಕಕ್ಕೆ ಬಂದು ದಶಗ್ರೀವನನ್ನು ಆಲಿಂಗಿಸಿಕೊಂಡನು. ''ವತ್ಸ–ರಾವಣ, ನಮ್ಮ ಬಹುಕಾಲದ ಮನೋರಥವು ಸಿದ್ಧಿಸಿತು. ಇದು ನಮ್ಮ ಭಾಗ್ಯ. ಲೋಕೇಶ್ವರನಾದ ಬ್ರಹ್ಮನಿಂದ ಶ್ರೇಷ್ಠವಾದ ವರವನ್ನು ಪಡೆದಿದ್ದೀಯೆ. ಇನ್ನು ವಿಷ್ಣುವಿನ ಭಯವು ತೊಲಗಿತು. ಆತನ ಭಯದಿಂದಲೇ ನಾವು ಲಂಕೆಯನ್ನು ತೊರೆದು ರಸಾತಳಕ್ಕೆ ಹೋಗಿದ್ದೆವು. ನಮ್ಮೆಲ್ಲರ ದೊಡ್ಡ ದೊಡ್ಡ ಭವನಗಳು ಲಂಕೆಯಲ್ಲೇ ಉಳಿದಿವೆ. ಆ ಲಂಕೆಯು ನಮ್ಮದು. ಈಗ ನಿಮ್ಮ ಅಣ್ಣನಾದ ಕುಬೇರನು ಅಲ್ಲಿ ನೆಲೆಸಿದ್ದಾನೆ. ಸಾಮೋಪಾಯದಿಂದ ಕುಬೇರನು ಬಗ್ಗದಿದ್ದರೆ ದಂಡೋಪಾಯದಿಂದ ಲಂಕೆಯನ್ನು ನಾವು ವಶಪಡಿಸಿಕೊಳ್ಳಬೇಕು. ಮಗು, ನೀನು ಲಂಕೇಶ್ವರನಾಗುವೆ. ಬಲಿಷ್ಠನಾದ ನೀನು ನಮ್ಮೆಲ್ಲರಿಗೂ ಅಧಿಪತಿ ಯಾಗಿ ಮೆರೆಯುವೆ'' ಎಂದು ಉಬ್ಬಿಸಿದನು. ಆಗ ರಾವಣನು ''ಮಾತಾಮಹ, ಎಷ್ಟಾದರೂ ಕುಬೇರನು ನನಗೆ ಅಣ್ಣನಾಗಬೇಕು. ಅವನನ್ನು ಓಡಿಸುವುದು ನ್ಯಾಯವಾದೀತೆ?'' ಎಂದು ಹೇಳಿ ಸುಮ್ಮನಾದನು. ಕೆಲವು ಕಾಲ ಕಳೆದಮೇಲೆ ಪ್ರಹಸ್ತನು ಬಂದು ''ವೀರಾಗ್ರೇಸರ–ದಶಗ್ರೀವ, ನಾನು ಹೇಳುವುದನ್ನು ಕೇಳು. ಶೂರರಿಗೆ ಸೌಭ್ರಾತ್ರ ಎಂಬುದೆಲ್ಲಿದೆ? ದೇವತೆಗಳು, ದೈತ್ಯರು ಅಣ್ಣತಮ್ಮಂದಿರಲ್ಲವೆ? ದೈತ್ಯರಿಗೆ ಸೇರಿದ್ದ ಈ ಲಂಕೆಯನ್ನು ವಿಷ್ಣುವು ದೇವತೆಗಳಿಗೆ ಕೊಡಲಿಲ್ಲವೆ? ಲಂಕೆ ನಮಗೆ ಸೇರಿದ ಆಸ್ತಿ. ಅದನ್ನು ದೇವತೆಗಳು ಕಿತ್ತುಕೊಂಡಿದ್ದಾರೆ. ಆದ್ದರಿಂದ ನಿನ್ನ ಅಜ್ಜನಾದ ಸುಮಾಲಿಯ ಮಾತನ್ನು ನಡೆಸು'' ಎಂದನು. ಇದೆಲ್ಲವನ್ನೂ ಕೇಳಿ ದಶಗ್ರೀವನಿಗೆ ಲಂಕೆಯ ಅಭಿಲಾಷೆ ಹುಟ್ಟಿತು. ಅವನು ಪ್ರಹಸ್ತನನ್ನು ಕುರಿತು, ''ಪ್ರಹಸ್ತ, ನೀನು ಲಂಕೆಗೆ ಹೋಗಿ ಕುಬೇರನನ್ನು ಕಂಡು ಈ ಮಾತನ್ನು ತಿಳಿಸು – ಎಲೈ ಯಕ್ಷರಾಜ, ಈ ಲಂಕಾಪುರಿಯು ಮಹಾತ್ಮರಾದ ರಾಕ್ಷಸರಿಗೆ ಸೇರಿದ್ದು. ನೀನು ಇಲ್ಲಿ ನೆಲೆಸಿರುವುದು

ಯುಕ್ತವಲ್ಲ. ಇದನ್ನು ನಿನ್ನ ತಮ್ಮನಾದ ದಶಗ್ರೀವನಿಗೆ ವಹಿಸಿಕೊಡು. ನೀನು ಧರ್ಮವನ್ನು ಪಾಲಿಸಿದಂತೆ ಆಗುತ್ತದೆ, ಈ ಮಾತನು ತಿಳಿಸು'' ಎಂದನು.

ಅನಂತರ ಪ್ರಹಸ್ತನು ಲಂಕೆಗೆ ಹೋಗಿ ಇದೆಲ್ಲವನ್ನೂ ವಿವರವಾಗಿ ಕುಬೇರನಿಗೆ ತಿಳಿಸಿದನು. ಆಗ ಕುಬೇರನು ''ಈ ಸ್ಥಳವು ಹಿಂದೆ ಶೂನ್ಯವಾಗಿತ್ತು, ಆದ್ದರಿಂದ ನನ್ನ ತಂದೆ ಈ ಲಂಕೆಯನ್ನು ನನಗೆ ವಹಿಸಿಕೊಟ್ಟಿದ್ದಾನೆ. ಆದ್ದರಿಂದ ಗುಣಸಂಪನ್ನರಾದ ಯಕ್ಷರೊಡನೆ ನಾನು ನೆಲೆಸಿದ್ದೇನೆ. ಒಳ್ಳೆಯದು. ನೀನು ದಶಗ್ರೀವನಿಗೆ ಈ ಮಾತನ್ನು ತಿಳಿಸು. ತಮ್ಮ, ಈ ಲಂಕೆ ನಿನಗೆ ಸೇರಿದ್ದು ಹೌದು. ಈ ರಾಜ್ಯವಾಗಲಿ, ಐಶ್ವರ್ಯವಾಗಲಿ ನಮ್ಮಿಬ್ಬರಿಗೂ ಸಮಾನವಾದದ್ದು. ನೀನು ಇಲ್ಲಿ ಬಂದು ನೆಲೆಸಬಹುದು'' ಎಂದನು. ಅನಂತರ ತನ್ನ ತಂದೆಯಾದ ವಿಶ್ರವಸ್ಸಿನ ಬಳಿಗೆ ಹೋಗಿ ಈ ವೃತ್ತಾಂತವನ್ನೆಲ್ಲ ಅರುಹಿಸಿದನು. ಆಗ ವಿಶ್ರವಸ್ಸು ''ವತ್ಸ–ದಶಗ್ರೀವನು ಬಂದು ಈ ವಿಷಯುವನ್ನು ಪ್ರಸ್ತಾವಿಸಿದನು. ನನ್ನ ಬುದ್ಧಿವಾದವನ್ನು ಅವನು ಕಿವಿಗೆ ಹಾಕಿಕೊಳ್ಳಲಿಲ್ಲ. ಬ್ರಹ್ಮನ ವರಬಲದಿಂದ ಆ ದುರುಳನ ತಲೆ ತಿರುಗಿದೆ. ಅವನು ಕ್ರೂರಸ್ವಭಾವದವನು. ಆದ್ದರಿಂದ ನೀನು ಲಂಕೆಯನ್ನು ತ್ಯಜಿಸಿ ಕೈಲಾಸಪರ್ವತಕ್ಕೆ ಹೊರಟುಹೋಗು. ಅದರ ಪಾರ್ಶ್ವದಲ್ಲಿ ರಮಣೀಯವಾದ ಗಂಗಾನದಿಯು ಪ್ರವಹಿಸುತ್ತದೆ. ಲಂಕೆಯನ್ನು ತ್ಯಜಿಸಿ ನಿನ್ನ ಅನುಚರರೊಡನೆ ಹೋಗಿ ಅಲಕಾವತಿ ಎಂಬ ನಗರವನ್ನು ನಿರ್ಮಿಸಿ ಅಲ್ಲಿ ವಾಸಮಾಡು'' ಎಂದನು. ವೈಶ್ರವಣನು ತಂದೆಯ ಮಾತಿಗೆ ಮನ್ನಣೆಯನ್ನಿತ್ತು ತನ್ನ ಪತ್ನೀಪುತ್ರಾದಿಗಳೊಡನೆ ನಿರ್ಗಮಿಸಿ ಕೈಲಾಸ ಪರ್ವತದ ಬಳಿಗೆ ಹೊರಟುಹೋದನು. ಹೀಗೆ ಲಂಕೆಯು ಮತ್ತೆ ತಮ್ಮ ವಶಕ್ಕೆ ಬಂದಿತೆಂದು ರಾವಣಾದಿಗಳು ಹರ್ಷದಿಂದ ಲಂಕೆಗೆ ಬಂದರು. ಆ ದಶಕಂಠನು ರಾಕ್ಷಸರಿಂದ ಪಟ್ಟಾಭಿಷಿಕ್ತನಾಗಿ ಮೆರೆಯತೊಡಗಿದನು. ಶೂನ್ಯವಾಗಿದ್ದ ಲಂಕೆಯು ಕಾರ್ಮೋಡಗಳಂತಿದ್ದ ನಿಶಾಚರದಿಂದ ಮತ್ತೆ ತುಂಬಿತು. ಕ್ರಮವಾಗಿ ಆ ನಗರಿಯು ಇಂದ್ರನ ಅಮರಾವತಿಯಂತೆ ಶೋಭಿಸತೊಡಗಿತು.

೪

ರಾವಣಾದಿಗಳ ವಿವಾಹ. ಪುಷ್ಪಕವಿಮಾನಾಪಹರಣ. ರಾವಣನು ಕೈಲಾಸ ಪರ್ವತವನ್ನೆತ್ತಲು ಪ್ರಯತ್ನಿಸುವುದು. ವೇದವತಿಯ ಶಾಪ

''ಹೀಗೆ ರಾವಣನು ರಾಕ್ಷಸೇಂದ್ರನಾಗಿ ಪಟ್ಟಾಭಿಷಿಕ್ತನಾದಮೇಲೆ ತನ್ನ ತಂಗಿಯಾದ ಶೂರ್ಪಣಖೆಯನ್ನು ವಿದ್ಯುಜ್ಜಿಹ್ವನೆಂಬ ದಾನವೇಂದ್ರನಿಗೆ ಕೊಟ್ಟು

ವಿವಾಹ ಮಾಡಿದನು. ಆಮೇಲೆ ರಾವಣನು ಒಂದು ದಿನ ಬೇಟೆಯಾಡಲು ಅರಣ್ಯಕ್ಕೆ ಹೋಗಿದ್ದಾಗ ದಿತಿಪುತ್ರನಾದ ಮಯನೆಂಬ ರಾಕ್ಷಸನನ್ನು ಕಂಡನು. ಅವನೊಡನೆ ಒಬ್ಬ ಕನ್ಯೆಯಿದ್ದಳು. ರಾವಣನು ನೀನು ಯಾರೆಂದು ಪ್ರಶ್ನಿಸಲಾಗಿ ಮಯನು ಹೀಗೆಂದನು. ''ದೈತ್ಯರಾಜ, ಹೇಮೆ ಎಂಬ ಅಪ್ಸರೆಯಲ್ಲಿ ಜನಿಸಿದ ಈ ಕನ್ಯೆ ನನ್ನ ಮಗಳು. ಇವಳಿಗೆ ಯೋಗ್ಯನಾದ ಪತಿಯನ್ನು ಅರಸುತ್ತ ತಿರುಗುತ್ತಿದ್ದೇನೆ''. ಹೀಗೆ ಮಾತಾಡುತ್ತಾ ಇರುವಾಗ ರಾವಣನು ವಿಶ್ರವಸ್ಸಿನ ಪುತ್ರನೆಂದು ತಿಳಿಯಿತು. ತನ್ನ ಮಗಳಿಗೆ ಈತನು ಯೋಗ್ಯನಾದ ಪತಿಯೆಂದು ಭಾವಿಸಿ ಅವಳನ್ನು ಪ್ರತಿಗ್ರಹಿಸುವಂತೆ ರಾವಣನನ್ನು ಕೇಳಿಕೊಂಡನು. ರಾವಣನು ಒಪ್ಪಿದನು. ಆ ಮಯಪುತ್ರಿಯ ಹೆಸರು ಮಂಡೋದರಿ. ವಿಧಿವತ್ತಾಗಿ ರಾವಣನಿಗೂ, ಮಂಡೋದರಿಗೂ ಮದುವೆಯಾಯಿತು. ಆಮೇಲೆ ದಶಗ್ರೀವನು ಮಂಡೋದರಿಯೊಡನೆ ಲಂಕೆಗೆ ಹೋದನು. ಅನಂತರ ವೈರೋಚನನ ಪುತ್ರಿಯ ಮಗಳಾದ ವಜ್ರಜ್ವಾಲೆಯನ್ನು ಕುಂಭಕರ್ಣನಿಗೂ, ಶೈಲೂಷನೆಂಬ ಗಂಧರ್ವರಾಜನ ಮಗಳಾದ ಸರಮೆಯನ್ನು ವಿಭೀಷಣನಿಗೂ ತಂದು ಕೊಂಡು ಮದುವೆ ಮಾಡಿಸಿದನು. ಹೀಗಿರಲು ಮಂಡೋದರಿಯು ಮೇಘನಾದನೆಂಬ ಪುತ್ರನನ್ನು ಪ್ರಸವಿಸಿದಳು. ಹುಟ್ಟಿದೊಡನೆ ಮೇಘವು ಗುಡುಗಿದಂತೆ ಗಟ್ಟಿಯಾಗಿ ಅಳುತ್ತಿದ್ದುದರಿಂದ ಅವನಿಗೆ ಆ ಹೆಸರು ಬಂದಿತು. ರಾಘವ, ಆ ಮೇಘನಾದನೇ ಇಂದ್ರಜಿತುವೆಂದು ವಿಖ್ಯಾತನಾದನು. ಶ್ರೀರಾಮ, ಹೀಗಿರಲು ಲೋಕೇಶ್ವರನಾದ ಬ್ರಹ್ಮನ ವಚನ ಪ್ರಭಾವದಿಂದ ಕುಂಭಕರ್ಣನಿಗೆ ನಿದ್ರಾದೇವಿಯು ಒಲಿದು ಬಂದಳು. ನಿದ್ರೆಯ ಒತ್ತಡವನ್ನು ತಡೆಯಲಾರದೆ ಕುಂಭಕರ್ಣನು ತನ್ನ ಅಣ್ಣನನ್ನು ನೋಡಿ 'ಮಹಾರಾಜ, ನಿದ್ರೆಯು ನನ್ನನ್ನು ವಿಶೇಷವಾಗಿ ಬಾಧಿಸುತ್ತಿದೆ. ನನಗಾಗಿ ಒಂದು ಶಯನಮಂದಿರವನ್ನು ನಿರ್ಮಿಸಿಕೊಡು' ಎಂದು ಕೇಳಿದನು. ಆಮೇಲೆ ರಾಕ್ಷಸರಾಜನ ಆದೇಶದಂತೆ ನಿಪುಣರಾದ ಶಿಲ್ಪಿಗಳು ಅತ್ಯಂತ ವಿಶಾಲವೂ ಭವ್ಯವೂ ಆದ ಒಂದು ಶಯನಮಂದಿರವನ್ನು ನಿರ್ಮಿಸಿದರು. ಕುಂಭಕರ್ಣನು ಅಲ್ಲಿಗೆ ಹೋಗಿ ರಾಜೋಚಿತ ವಾದ ಹಾಸಿಗೆಯಲ್ಲಿ ಪವಡಿಸಿದನು. ವರ್ಷಗಳು ಕಳೆದರೂ ಅವನಿಗೆ ಎಚ್ಚರವಾಗು ತ್ತಿರಲಿಲ್ಲ. ಯಾವಾಗಲೋ ಒಮ್ಮೆ ಎದ್ದು ಸ್ವೇಚ್ಛೆಯಿಂದ ಆಹಾರವನ್ನು ಸೇವಿಸಿ ಸ್ವಲ್ಪಹೊತ್ತಿನ ಮೇಲೆ ಮಲಗಿಬಿಡುತ್ತಿದ್ದನು. ಹೀಗಿರುವಾಗ ದಶಗ್ರೀವನು ವರಬಲದಿಂದ ದೇವರ್ಷಿ, ಯಕ್ಷ, ಗಂಧರ್ವರನ್ನು ಪೀಡಿಸುತ್ತ ಮದ್ದಾನೆಯಂತೆ ವಿಧ್ವಂಸಕ ಕೃತ್ಯದಲ್ಲಿ ನಿರತನಾದನು. ಆತನ ದುರ್ವರ್ತನೆಯು ಕುಬೇರನಿಗೆ ತಿಳಿಯಿತು. ತನ್ನ ತಮ್ಮನಾದ ರಾವಣನ ದುರ್ವರ್ತನೆಯನ್ನು ಕೇಳಿ ತುಂಬ ನೊಂದುಕೊಂಡ ವೈಶ್ರವಣನು ಅವನಿಗೆ ಬುದ್ಧಿ ಹೇಳುವುದಕ್ಕಾಗಿ ಒಬ್ಬ ದೂತನನ್ನು

ಕಳಿಸಿಕೊಟ್ಟನು. ಆ ದೂತನು ಲಂಕೆಗೆ ಬಂದು ರಾವಣನನ್ನು ಕಂಡು ಇಂತೆಂದನು. ''ರಾಕ್ಷಸೇಶ್ವರ, ನಿನ್ನ ಅಣ್ಣನಾದ ವೈಶ್ರವಣನು, ಪ್ರೀತಿ ವಿಶ್ವಾಸಗಳಿಂದ ಒಂದು ಸಂದೇಶವನ್ನು ಕಳಿಸಿದ್ದಾನೆ. ಅದೇನೆಂದರೆ, 'ತಮ್ಮ–ದಶಗ್ರೀವ, ನೀನು ಬ್ರಹ್ಮನನ್ನು ಆರಾಧಿಸಿ ವರವನ್ನು ಪಡೆದದ್ದು ಸಂತೋಷಕರವೇ ಹೌದು. ಆದರೆ ನೀನು ನಿಷ್ಕಾರಣವಾಗಿ ದೇವರ್ಷಿ ಗಂಧರ್ವಾದಿಗಳನ್ನು ಪೀಡಿಸುತ್ತಿದ್ದೀಯೆ ಎಂಬ ವಾರ್ತೆಯನ್ನು ಕೇಳಿ ನನಗೆ ದುಃಖವಾಗಿದೆ. ತಮ್ಮ, ಈ ವರ್ತನೆಯಿಂದ ನಮ್ಮ ತಂದೆಯಾದ ಮಹರ್ಷಿ ವಿಶ್ರವಸ್ಸಿಗೆ ವ್ಯಥೆಯಾಗುವುದಲ್ಲದೆ ಆ ಮಾಹಾತ್ಮನ ವಂಶಕ್ಕೆ ಕೆಟ್ಟ ಹೆಸರು ಬರುತ್ತದೆ. ಈ ಸಮಯದಲ್ಲಿ ದೇವತೆಗಳು ನಿನಗೆ ಪ್ರತೀಕಾರ ಮಾಡುವುದಕ್ಕಾಗಿ ಸನ್ನಾಹ ಮಾಡುತ್ತಿದ್ದಾರೆಂಬ ವಾರ್ತೆಯು ನನಗೆ ಮುಟ್ಟಿದೆ. ಇದೆಲ್ಲವೂ ಏಕೆ ನಡೆಯಬೇಕು? ಅಧರ್ಮದ ಕಾರ್ಯದಿಂದ ನಿಶ್ಚಯವಾಗಿಯೂ ಕೇಡು ಸಂಭವಿಸುತ್ತದೆ. ನಾನಾದರೋ ತಪಶ್ಚರಣೆಗಾಗಿ ಇದುವರೆಗೆ ಹಿಮಾಲಯ ಪ್ರಾಂತದಲ್ಲಿದ್ದೆನು. ಪರಮೇಶ್ವರನು ಉಮಾದೇವಿಯೊಡನೆ ನನಗೆ ಕಾಣಿಸಿದನು. ಆ ದೇವಿಯ ದಿವ್ಯ ತೇಜಸ್ಸಿಗೆ ಬೆರಗಾಗಿ ಅಲ್ಪಕಾಲ ಆವಳನ್ನೇ ವೀಕ್ಷಿಸಿದೆನು. ದಶಾನನ, ಈ ಅಪರಾಧದಿಂದ ನನ್ನ ಎಡಗಣ್ಣು ಸುಟ್ಟುಹೋಯಿತು. ಬಲಗಣ್ಣು ಪಿಂಗಳ (ಕಂದುಬಣ್ಣ) ವರ್ಣವನ್ನು ತಳೆಯಿತು. ನಾನು ದಿಟ್ಟಿಸಿ ನೋಡಿದ್ದು ಅಚ್ಚರಿಯಿಂದಲೇ ಹೊರತು ಇನ್ನಾವ ಭಾವನೆಯಿಂದಲೂ ಅಲ್ಲ. ಈ ಅಲ್ಪಾಪರಾಧಕ್ಕೆ ಇಂಥ ಫಲ ದೊರೆಯಿತು. ನಾನು ವಿಷಣ್ಣನಾಗಿ ನನ್ನ ತಪಸ್ಸನ್ನು ದೀರ್ಘಕಾಲದವರೆಗೆ ಮುಂದುವರೆಸಿದೆನು. ಮೌನವ್ರತವನ್ನು ಧರಿಸಿದ್ದೆನು. ಹೀಗಿರಲು ಮಹೇಶ್ವರನು ಮೆಚ್ಚಿ ಪ್ರತ್ಯಕ್ಷನಾಗಿ ಪ್ರೀತಿಯಿಂದ ಹೀಗೆಂದನು. 'ಸೌಮ್ಯ–ವೈಶ್ರವಣ, ನೀನು ಹಿಂದೆ ಉಮಾದೇವಿಯನ್ನು ದಿಟ್ಟಿಸಿನೋಡಿದ್ದರಿಂದ ನಿನ್ನ ಕಣ್ಣು ಈ ಪರಿಯಾಯಿತಲ್ಲವೆ? ಆದರೆ ನಿನ್ನ ಘೋರವಾದ ತಪಸ್ಸಿನಿಂದ ನನ್ನನ್ನು ಮೆಚ್ಚಿಸಿದ್ದೀಯೆ. ವೈಶ್ರವಣ, ನಿನ್ನ ತಪೋಮಹಿಮೆಯಿಂದ ನನ್ನನ್ನು ವಶಪಡಿಸಿಕೊಂಡಿದ್ದೀಯೆ. ಇನ್ನು ಮೇಲೆ ನನಗೆ ಮಿತ್ರನಾಗಿರು' ಎಂದು ನುಡಿದನು. ಆ ಪರಶಿವನನ್ನು ಮೆಚ್ಚಿಸುವುದು ನನ್ನ ಉದ್ದೇಶವಾಗಿತ್ತೇ ಹೊರತು ವರವನ್ನು ಬೇಡುವುದಲ್ಲ. ದಶಾನನ, ಇನ್ನು ಮೇಲೆ ನೀನು ದುರ್ಜನರ ಸಂಗವನ್ನು ಮಾಡಬೇಡ. ಅದರಿಂದ ನಮ್ಮ ಕುಲಕ್ಕೆ ಕೆಟ್ಟಹೆಸರು ಬರುತ್ತದೆ. ದೇವತೆಗಳು ನಿನ್ನನ್ನು ವಧಿಸುವುದಕ್ಕಾಗಿ ಸಂಚು ಮಾಡುತ್ತಿದ್ದಾರೆ. ಆದ್ದರಿಂದ ಈ ದುಷ್ಟವರ್ತನೆಯನ್ನು ಬಿಟ್ಟುಬಿಡು' ಮಹಾರಾಜ, ಇದೇ ನಿನ್ನ ಅಣ್ಣನು ಕಳಿಸಿರುವ ಸಂದೇಶ'' ಎಂದನು.

''ರಾಘವ, ದೂತನ ನುಡಿಯನ್ನು ಕೇಳಿ ದಶಗ್ರೀವನು ಕ್ರುದ್ಧನಾದನು.

ಕಣ್ಣುಗಳು ಕೆಂಪಡರಿದವು. ಅವನು ಕೈಗಳನ್ನು ಹೊಸೆಯುತ್ತ, ಹಲ್ಲುಗಳನ್ನು ಕಡಿಯುತ್ತ, ''ಎಲೈ ದೂತ, ನಿನ್ನ ಮಾತಿನ ಅಭಿಪ್ರಾಯವಾಯಿತು. ಇನ್ನು ಮುಗಿಯಿತು ನಿನ್ನ ಕಥೆ. ಅವನೂ ಉಳಿಯಲಾರ. ಹಣದ ಗಂಟನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಆತನು ಹೀಗೆ ಉಪದೇಶಮಾಡಿದ್ದಾನೆ. ಕುಬೇರನು ಪರಮೇಶ್ವರನ ಮಿತ್ರ ಎಂಬ ಬೂಟಾಟಿಕೆಯ ಮಾತನ್ನು ಹೇಳುವುದಕ್ಕಾಗಿಯಲ್ಲವೇ ನೀನು ಬಂದದ್ದು. ಅವನು ಅಣ್ಣನೆಂದು ತಿಳಿದು ಇದುವರೆಗೆ ಸುಮ್ಮನಿದ್ದೆನು. ದುರಹಂಕಾರದ ಈ ಸಂದೇಶವನ್ನು ಕೇಳಿದ ಮೇಲೆ ಇನ್ನು ಸುಮ್ಮನಿರಲಾರೆ'' ಎಂದು ಅಬ್ಬರಿಸಿ ಖಡ್ಗವನ್ನೆತ್ತಿ ಆ ದೂತನನ್ನು ಸಂಹರಿಸಿದನು. ಅವನ ದೇಹವನ್ನು ತಿಂದುಬಿಡಬೇಕೆಂದು ರಾಕ್ಷಸರಿಗೆ ಆಜ್ಞಾಪಿಸಿದನು. ಅನಂತರ ತ್ರೈಲೋಕ್ಯವನ್ನು ಜಯಿಸಬೇಕೆಂಬ ದುರಾಸೆಯಿಂದ ರಥವನ್ನೇರಿ ಮೊದಲು ಕುಬೇರನ ಅಲಕಾವತೀ ನಗರಕ್ಕೆ ಧಾಳಿಯಿಟ್ಟನು. ರಾವಣನ ಸೇನೆಯು ಅಲಕಾನಗರವನ್ನು ಮುತ್ತಿತು. ಆ ರಾಕ್ಷಸ ಸೈನ್ಯವು ಕುಬೇರನ ತಮ್ಮನಾದ ರಾವಣನದು ಎಂದು ತಿಳಿದಾಗ, ಯಕ್ಷರು ಯುದ್ಧ ಮಾಡದೆ ಆ ವಿಷಯವನ್ನು ಕುಬೇರನಿಗೆ ತಿಳಿಸಿದರು. ತನ್ನ ದೂತನ ವಧೆಯನ್ನೂ ಈ ಆಕ್ರಮಣವನ್ನೂ ತಿಳಿದ ಕುಬೇರನು ಯುದ್ಧ ಮಾಡುವಂತೆ ಯಕ್ಷರಿಗೆ ಅನುಮತಿಯನ್ನಿತ್ತನು. ಯಕ್ಷರಿಗೂ, ರಾಕ್ಷಸರಿಗೂ ಘೋರವಾದ ಕದನವು ತೊಡಗಿತು. ಆದರೆ ರಾವಣನ ಯುದ್ಧದ ರಭಸಕ್ಕೆ, ರಾಕ್ಷಸರನ್ನೆದುರಿಸಲಾರದೆ, ನದೀ ಪ್ರವಾಹಕ್ಕೆ ಸಿಕ್ಕಿದ ದಡಗಳಂತೆ ಯಕ್ಷರು ಕುಸಿದು ಬಿದ್ದರು. ಕುಬೇರನು ಬಲಾಢ್ಯರಾದ ಬಹುಮಂದಿ ಯಕ್ಷರನ್ನು ರಣಭೂಮಿಗೆ ಕಳಿಸಿದನು. ಅವರೆಲ್ಲರೂ ಸೋತುಹೋದರು. ವೈಶ್ರವಣನು ಮಣಿಭದ್ರನೆಂಬ ಮಹಾಪರಾಕ್ರಮಿಯಾದ ಯಕ್ಷನನ್ನು ಯುದ್ಧಭೂಮಿಗೆ ಕಳಿಸಿದನು. ಆತನು ರಾವಣನನ್ನೆದುರಿಸಲಾರದೆ ಯುದ್ಧ ಭೂಮಿಯಿಂದ ಹೊರಟು ಹೋದನು. ಅಷ್ಟರಲ್ಲಿ ಧನಾಧ್ಯಕ್ಷನಾದ ಕುಬೇರನು ರಣಭೂಮಿಗೆ ಬಂದು ರಾವಣನನ್ನೆದುರಿಸಿದನು. ಶ್ರೀರಾಮ, ಅವರಿಬ್ಬರಿಗೂ ಉಗ್ರ ಕದನವು ನಡೆಯಿತು. ಬಹಳ ಹೊತ್ತು ಇಬ್ಬರೂ ಕಾದಾಡಿದರು. ಕಡೆಗೆ ದಶಗ್ರೀವನು ಒಂದು ಮಹಾಗದೆಯನ್ನೆತ್ತಿ ಕುಬೇರನ ಶಿರಸ್ಸಿನ ಮೇಲೆ ಅಪ್ಪಳಿಸಿದನು. ಕುಬೇರನು ಮೂರ್ಛಿತನಾದನು. ಈ ಪ್ರಕಾರದಲ್ಲಿ ರಾವಣನು ಕುಬೇರನನ್ನು ಜಯಿಸಿ ಆತನ ದಿವ್ಯವಾದ ಪುಷ್ಪಕವಿಮಾನವನ್ನು ಅಪಹರಿಸಿ ದರ್ಪೋದ್ರೇಕದಿಂದ ಪುಷ್ಪಕವನ್ನೇರಿ ಕುಳಿತು ತನ್ನ ಸೈನ್ಯದೊಡನೆ ಅಲ್ಲಿಂದ ತೆರಳಿದನು.

ಅನಂತರ ರಾವಣನು ಕಾಮಗಾಮಿಯಾದ ಪುಷ್ಪಕವಿಮಾನದಲ್ಲಿ ಕುಳಿತು ಕೈಲಾಸದ ಕಡೆಗೆ ಧಾವಿಸಿದನು. ಅದರ ಸಮೀಪಕ್ಕೆ ಹೋದಾಗ ಆ ವಿಮಾನವು ಮುಂದೆ ಹೋಗದೆ ನಿಂತುಬಿಟ್ಟಿತು. ವಿಮಾನವು ಚಲಿಸದಿರಲು ಕಾರಣವೇನೆಂದು

ರಾವಣನು ವಿಚಾರಿಸುತ್ತಿರುವಾಗ ನಂದೀಶ್ವರನೆಂಬ ಪ್ರಮಥನು ಬಂದು ''ಎಲೈ ದಶಗ್ರೀವ, ತೊಲಗು ಇಲ್ಲಿಂದ. ಈ ಶೈಲದಲ್ಲಿ ಭಗವಾನ್ ಶಂಕರನು ವಿಹರಿಸುತ್ತಿದ್ದಾನೆ. ಯಾರಿಗೂ ಇಲ್ಲಿ ಪ್ರವೇಶವಿಲ್ಲ. ಹೊರಡು ಇಲ್ಲಿಂದ'' ಎಂದು ಎಚ್ಚರಿಸಿದನು. ಆ ನುಡಿಯನ್ನು ಕೇಳಿ ಕ್ರುದ್ಧನಾದ ದಶಗ್ರೀವನು ಪುಷ್ಪಕವಿಮಾನದಿಂದ ಕೆಳಗೆ ಧುಮುಕಿ 'ಯಾವನೋ ಅವನು ಶಂಕರ ಎಂಬವನು?' ಎನ್ನುತ್ತ ಬಳಿಗೆ ಹೋಗಿ ನಂದೀಶ್ವರನ ವಿಕೃತವಾದ ಮುಖವನ್ನು ನೋಡಿ 'ಹೋ ಹೋ' ಎಂದು ಗಟ್ಟಿಯಾಗಿ ನಕ್ಕನು. ''ಮಂಗನ ಮುಖದ ನೀನು ಯಾರು?'' ಎಂದು ನಂದಿಕೇಶ್ವರನನ್ನು ಅಣಕಿಸಿದನು. ಆಗ ನಂದಿಯು 'ಎಲೈ ರಾಕ್ಷಸ, ಕಪಿವೇಷಧಾರಿಯಾದ ನನ್ನನ್ನು ನೋಡಿ ನಗುವೆಯಾ? ನನ್ನಂತೆಯೇ ರೂಪವುಳ್ಳ ಕಪಿಗಳು ಜನಿಸಿ ನಿನ್ನ ಕುಲವನ್ನೇ ನಾಶಮಾಡಲಿ. ಕಪಿಗಳು ನಿನ್ನ ದುರಹಂಕಾರವನ್ನು ಇಳಿಸುವರು. ನಿನ್ನನ್ನು ನಾನೇ ಕೊಂದು ನಿರ್ನಾಮ ಮಾಡಿಯೇನು. ಆದರೆ ನಿನ್ನ ದುಷ್ಕರ್ಮಗಳಿಂದಲೇ ನೀನು ಸತ್ತು ಹೋಗಿದ್ದೀಯೆ. ಸತ್ತವನನ್ನು ಮತ್ತೆ ನಾನು ಕೊಲ್ಲಬೇಕಾದ್ದಿಲ್ಲ' ಎಂದನು. ನಂದಿಕೇಶ್ವರನು ಹೀಗೆ ನುಡಿಯಲಾಗಿ ದೇವದುಂದುಭಿಗಳು ಮೊಳಗಿದವು. ಹೂ ಮಳೆಯು ಆಕಾಶದಿಂದ ಸುರಿಯಿತು. ಬಲೋದ್ಧತನಾದ ದಶಗ್ರೀವನು ನಂದಿಯ ನುಡಿಯನ್ನು ಲೆಕ್ಕಿಸದೆ ಎಲೈ, 'ಶಿವನು ಇಲ್ಲಿ ವಿಹರಿಸುತ್ತಾನೆ ಎಂದು ಹೇಳಿದೆಯಲ್ಲ. ಈಗ ನೋಡು. ಅವನಿಗೇನಾಗುತ್ತದೆ ಎಂಬುದನ್ನು' ಎಂದು ನುಡಿದು ತನ್ನ ತೋಳ್ಗಳನ್ನು ನೀಡಿ ಕೈಲಾಸಪರ್ವತವನ್ನು ಹಿಡಿದು ಅಮುಕಿ ಮೀಟಿದನು. ಪರ್ವತವು ಅಲ್ಲಾಡಿತು! ಪರ್ವತವೇ ಕಂಪಿಸಿದ್ದರಿಂದ ಈಶ್ವರನ ಪ್ರಮಥಗಣಗಳು ತೂಗಾಡಿದವು. ಪಾರ್ವತೀ ದೇವಿಯು ಭಯದಿಂದ ಪರಮೇಶ್ವರನನ್ನು ಗಟ್ಟಿಯಾಗಿ ಅಪ್ಪಿಕೊಂಡಳು. ಆಗ ಸರ್ವದೇವೋತ್ತಮನಾದ ಶ್ರೀ ಶಂಕರನು ಪಾದಾಂಗುಷ್ಠದಿಂದ ಆ ಶೈಲವನ್ನು ಅದುಮಿದನು. ಒಡನೆಯೇ ರಾವಣನ ಭುಜಗಳು ಕೈಲಾಸಶೈಲದ ತಳದಲ್ಲಿ ಸಿಕ್ಕಿಕೊಂಡವು. ಅವನ ಸಚಿವರು ದಿಗ್ಭ್ರಾಂತರಾದರು. ದಶಗ್ರೀವನು ತೋಳ್ಗಳಿಗಾದ ಯಾತನೆಯನ್ನು ತಡೆಯಲಾರದೆ ಗಟ್ಟಿಯಾಗಿ ಅರಚಿದನು. ಅವನಿಗೆ ಏನು ಮಾಡಬೇಕೆಂದು ತೋರದೆ ದಿಕ್ಕುಗೆಟ್ಟನು. ಹೀಗೆ ಅರಚುತ್ತಿದ್ದ ತಮ್ಮ ರಾಜನನ್ನು ನೋಡಿ ಮಂತ್ರಿಗಳು ''ಮಹಾರಾಜ, ನೀಲಕಂಠನೂ ಉಮಾಪತಿಯೂ ಆದ ಆ ಮಹಾದೇವನನ್ನು ಸ್ತೋತ್ರ ಮಾಡಿ ಪ್ರಸನ್ನೀಕರಿಸು. ಅವನಲ್ಲದೆ ನಿನ್ನನ್ನು ರಕ್ಷಿಸಬಲ್ಲವರು ಇನ್ನಾರೂ ಇಲ್ಲ. ಸ್ತುತಿಗಳಿಂದ ಆ ಮಹೇಶ್ವರನಿಗೆ ಶರಣಾಗು. ಕೃಪಾನಿಧಿಯಾದ ಆ ಸ್ವಾಮಿಯು ಅನುಗ್ರಹಿಸುವನು'' ಎಂದು ಹೇಳಿದರು. ಆಗ ದಶಾನನನು ಬೇರೆ ಉಪಾಯವನ್ನು ಕಾಣದೆ ಮಹೇಶ್ವರನಿಗೆ ಶರಣಾಗಿ ವಿವಿಧ ಸಾಮಗಳಿಂದ ಆತನನ್ನು ಸ್ತುತಿಸಿದನು. ಅವನ ಭಕ್ತಿಗೆ ಪ್ರಸನ್ನನಾದ

ಭಗವಾನ್ ಶಂಕರನು ದಶಗ್ರೀವನ ತೋಳುಗಳನ್ನು ಬಿಡಿಸಿ ''ಎಲೈ ರಾಕ್ಷಸ, ನಿನ್ನ ಸ್ತುತಿಗೆ ಪ್ರಸನ್ನನಾಗಿದ್ದೇನೆ. ಈ ಶೈಲದ ಕೆಳಗೆ ಸಿಕ್ಕಿಕೊಂಡು ನೀನು ದಾರುಣವಾದ 'ರಾವ'ವನ್ನು ಮಾಡಿದ್ದೀಯೆ (ರಾವ=ಶಬ್ದ) ಆದ್ದರಿಂದ ರಾವಣನೆಂದು ನಿನ್ನ ಹೆಸರು ಪ್ರಸಿದ್ಧವಾಗುವುದು! ರಾವಣ, ನೀನಿನ್ನು ಇಲ್ಲಿಂದ ಹೊರಡಬಹುದು'' ಎಂದನು. ಲಂಕೇಶ್ವರನು ಮಹೇಶ್ವರನಿಗೆ ಭಕ್ತಿಯಿಂದ ನಮಸ್ಕರಿಸಿ ''ಸ್ವಾಮಿ, ನೀನು ಪ್ರೀತನಾಗಿರುವುದಾದರೆ ನನಗೊಂದು ವರವನ್ನು ಕೊಡು. ದೇವಾದಿಗಳಿಂದ ಮರಣವಾಗದಂತೆ ನಾನು ವರವನ್ನು ಪಡೆದಿದ್ದೇನೆ. ಕ್ಷುದ್ರರಾದ ಮಾನವರನ್ನು ನಾನು ಗಣಿಸತಕ್ಕವನೇ ಅಲ್ಲ. ಬ್ರಹ್ಮನು ಸಂಕಲ್ಪಿಸಿರುವುದಕ್ಕಿಂತ ನನಗೆ ಅಧಿಕವಾದ ಆಯುಸ್ಸನ್ನೂ ದಿವ್ಯಾಯುಧವನ್ನೂ ಅನುಗ್ರಹಿಸು'' ಎಂದನು. ಆಗ ಮಹೇಶ್ವರನು ''ಹಾಗೆಯೇ ಆಗಲಿ'' ಎಂದು ಹೇಳಿ 'ಚಂದ್ರಹಾಸ'ವೆಂಬ ಉಗ್ರವಾದ ಖಡ್ಗವನ್ನು ರಾವಣನಿಗೆ ಅನುಗ್ರಹಿಸಿದನು. ಆಮೇಲೆ ''ರಾವಣ, ಈ ಖಡ್ಗವನ್ನು ಅವಜ್ಞೆಯಿಂದ ಕಾಣಬೇಡ. ಪ್ರತಿದಿನವೂ ಇದನ್ನು ಪೂಜಿಸುತ್ತಾ ಗೌರವದಿಂದ ನೋಡಿಕೊ. ಇಲ್ಲದಿದ್ದರೆ ಅದು ಮತ್ತೆ ನನ್ನನ್ನೇ ಸೇರುವುದು'' ಎಂದನು. ಹೀಗೆ ರಾವಣನು ಚಂದ್ರಹಾಸವನ್ನು ಪಡೆದುಕೊಂಡು ಮತ್ತೆ ಪುಷ್ಪಕವಿಮಾನವನ್ನೇರಿ ಸ್ವಚ್ಛಂದವಾಗಿ ಅಲೆಯ ತೊಡಗಿದನು. ಮಹಾರಾಜ–ರಾಘವ, ಪ್ರತಾಪಶಾಲಿಯಾದ ಆ ರಾವಣನು ಹಿಮಾಲಯಪ್ರಾಂತದಲ್ಲಿ ಸಂಚರಿಸುತ್ತಿರುವಾಗ, ಕೃಷ್ಣಾಜಿನ ಜಟಾಧಾರಿಣಿಯಾಗಿ ತಪಸ್ಸು ಮಾಡುತ್ತಿದ್ದ ಒಬ್ಬ ದಿವ್ಯಸುಂದರಿಯಾದ ಕನ್ಯೆಯು ಗೋಚರಿಸಿದಳು. ಅವಳ ರೂಪಸಂಪತ್ತಿಗೆ ಮರುಳಾದ ರಾವಣನು ಅವಳನ್ನು ಸಮೀಪಿಸಿ ''ಭದ್ರೆ, ಇದೇನು? ನಿನ್ನ ತಾರುಣ್ಯಕ್ಕೆ ವಿರುದ್ಧವಾದ ತಪಸ್ಸಿನಲ್ಲಿ ತೊಡಗಿರುವೆಯಲ್ಲ? ಯಾರ ಮಗಳು ನೀನು? ನಿನ್ನನ್ನು ಭೋಗಿಸುವ ಪುರುಷನೇ ಈ ಜಗತ್ತಿನಲ್ಲಿ ಪುಣ್ಯಾತ್ಮನೆನ್ನಬೇಕು. ಏಕೆ ಈ ತಪಸ್ಸು?'' ಎಂದು ಕೇಳಿದನು. ತಪೋನಿರತಳಾದ ಆ ಕನ್ಯೆಯು ಆತನಿಗೆ ವಿಧಿವತ್ತಾಗಿ ಅತಿಥಿಸತ್ಕಾರವನ್ನಿತ್ತು ಹೀಗೆಂದಳು. ''ಅಯ್ಯಾ, ಕುಶಧ್ವಜನೆಂಬ ಬ್ರಹ್ಮರ್ಷಿಯು ನನ್ನ ತಂದೆ. ಬೃಹಸ್ಪತಿಗೆ ಸಮಾನನಾದ ತೇಜಸ್ವಿ. ಅವನು ಸದಾ ವೇದಾಧ್ಯಾಯಿಯಾಗಿದ್ದನು. ಆತನಿಗೆ ವೇದವಾಙ್ಮಯದ ಮೂರ್ತಿಸ್ವರೂಪಳಾಗಿ ನಾನು ಜನಿಸಿದೆನು. ಆದ್ದರಿಂದ ನನಗೆ ವೇದವತಿಯೆಂದು ಹೆಸರಾಯಿತು. ನಾನು ಯೌವನಕ್ಕೆ ಕಾಲಿಟ್ಟಾಗ ಅನೇಕ ಯಕ್ಷಗಂಧರ್ವಾದಿಗಳು ನನ್ನನ್ನು ಮದುವೆಯಾಗಲು ಬಯಸಿದರು. ನನ್ನ ತಂದೆಯು ಒಪ್ಪಲಿಲ್ಲ. ದೇವದೇವನಾದ ಮಹಾವಿಷ್ಣುವೇ ತನಗೆ ಅಳಿಯನಾಗಬೇಕೆಂದು ನನ್ನ ತಂದೆಯ ಇಚ್ಛೆಯಾಗಿತ್ತು. ಇದನ್ನರಿತು ದಂಭನೆಂಬ ಒಬ್ಬ ಪಾಪಿದೈತ್ಯನು, ನನ್ನ ತಂದೆಯು ನಿದ್ರಿಸುತ್ತಿದ್ದಾಗ ಅವನನ್ನು ಕೊಂದುಬಿಟ್ಟನು.

ಪತಿವ್ರತೆಯಾದ ನನ್ನ ತಾಯಿ ನನ್ನ ತಂದೆಯ ಶರೀರದೊಡನೆ ಅಗ್ನಿಯಲ್ಲಿ ಸಹಗಮನ ಮಾಡಿದಳು. ಶ್ರೀಮನ್ನಾರಾಯಣನ ವಿಷಯವಾಗಿ ನನ್ನ ತಂದೆಯು ಇಟ್ಟುಕೊಂಡಿದ್ದ ಆಸೆಯನ್ನು ಸಫಲಗೊಳಿಸುವುದಕ್ಕಾಗಿ ನಾನು ತಪಸ್ಸು ಮಾಡುತ್ತಲ್ಲಿದ್ದೇನೆ. ಆ ಮಹಾವಿಷ್ಣುವೇ ನನಗೆ ಪತಿಯೆಂದು ನಿಶ್ಚಯಿಸಿಕೊಂಡಿದ್ದೇನೆ'' ಎಂದಳು. ಅನಂತರ ''ಎಲೈ ರಾವಣ, ನನ್ನ ತಪೋಬಲದಿಂದ ನೀನು ಯಾರೆಂಬುದನ್ನು ಬಲ್ಲೆ. ಇನ್ನು ನೀನು ಹೊರಡು'' ಎಂದಳು. ರಾವಣನು ನಗುತ್ತ ಸಮೀಪಕ್ಕೆ ಬಂದು ''ಸುಂದರಿ, ನೀನು ಹೀಗೆ ಹೇಳಬಹುದೆ? ತಪಸ್ಸು ಮುದುಕರಿಗೆ ಒಪ್ಪುತ್ತದೆ! ನಿನ್ನಂತಹ ತರುಣಿಗೆ ತಪಸ್ಸೇಕೆ? ಯೌವನವನ್ನು ವ್ಯರ್ಥವಾಗಿ ಕಳೆಯಬೇಡ. ಲಂಕೇಶ್ವರನಾದ ದಶಗ್ರೀವನು ನಾನು. ನನ್ನನ್ನು ಮದುವೆಯಾಗಿ ಸಕಲಭೋಗಗಳನ್ನು ಅನುಭವಿಸು!'' ಎಂದನು. ವೇದವತಿಯು ''ಮಹಾವಿಷ್ಣುವಲ್ಲದೆ ಇನ್ನೊಬ್ಬನು ನನ್ನ ಪತಿಯಾಗಲಾರ. ನೀನು ದೂರ ಸರಿ'' ಎಂದಳು. ರಾವಣನು ''ಮುಗ್ಧೆ, ವಿಷ್ಣು ವಿಷ್ಣು ಎಂದು ಹೇಳುತ್ತೀಯಲ್ಲ, ಯಾವನವನು? ಭೋಗ ಭಾಗ್ಯದಲ್ಲಾಗಲಿ ಪರಾಕ್ರಮದಲ್ಲಾಗಲಿ ಅವನು ನನಗೆ ಸಮನಲ್ಲ. ಅವನನ್ನು ಕಾಮಿಸುವೆಯಾ?'' ಎಂದನು. ವೇದವತಿಯು ''ಹಾಗೆನ್ನಬೇಡ. ತ್ರಿಲೋಕೇಶ್ವರನಾದ ಆ ದೇವದೇವನಿಗೆ ನೀನು ಸಾಟಿಯೆ? ನೀನು ಮೂಢಾತ್ಮ'' ಎಂದು ರಾವಣನನ್ನು ತಿರಸ್ಕರಿಸಿದಳು. ಒಡನೆಯೇ ದುರುಳನಾದ ರಾವಣನು ವೇದವತಿಯ ಕೇಶಪಾಶವನ್ನು ಹಿಡಿದು ಎಳೆದನು. ಆ ತಪಸ್ವಿನಿಯು ತನ್ನ ತಪೋಮಹಿಮೆಯಿಂದ ತನ್ನ ಕೈಯನ್ನೇ ಕತ್ತಿಯಂತೆ ಬಳಸಿ ಕೇಶಪಾಶವನ್ನು ಕತ್ತರಿಸಿಕೊಂಡಳು. ಅವಳು ಸಿಟ್ಟಿನಿಂದ ಉರಿದೆದ್ದು ಹೋಮಾಗ್ನಿಯನ್ನು ಪ್ರಜ್ವಲಿಸಿ ''ಎಲೈ ದುಷ್ಟರಾಕ್ಷಸ, ನನ್ನ ತಪಃಶಕ್ತಿಯಿಂದಲೇ ನಿನ್ನನ್ನು ನಾಶಮಾಡಬಲ್ಲೆ. ಆದರೆ ತಪಸ್ಸನ್ನು ಈ ರೀತಿಯಲ್ಲಿ ವ್ಯಯಿಸುವುದಿಲ್ಲ. ನಿನ್ನ ಸ್ಪರ್ಶದಿಂದ ಅಪವಿತ್ರವಾದ ಈ ದೇಹವನ್ನು ಅಗ್ನಿಗೆ ಅರ್ಪಿಸುವೆನು. ಇನ್ನೊಂದು ಜನ್ಮವನ್ನು ತಳೆದು ನಿನಗೆ ಮೃತ್ಯುವಾಗುವೆನು'' ಎಂದು ನುಡಿಯುತ್ತಲೇ ಅಗ್ನಿಯಲ್ಲಿ ಧುಮುಕಿದಳು.

ಶ್ರೀರಾಮ, ಆ ವೇದವತಿಯೇ ಜನಕರಾಜನ ಸುತೆಯಾಗಿ ಜನಿಸಿ ನಿನಗೆ ಪತ್ನಿ ಯಾಗಿದ್ದಾಳೆ. ನೀನು ಸನಾತನನಾದ ಶ್ರೀಮನ್ನಾರಾಯಣನಾಗಿದ್ದೀಯೆ. ನಿನ್ನ ಪತ್ನಿ ಯಾದ ಜಾನಕಿ ಅಯೋನಿಜೆ. ಜನಕರಾಜನು ಯಜ್ಞಭೂಮಿಯನ್ನು ನೇಗಿಲಿನಿಂದ ಉಳುತ್ತಿರುವಾಗ ಆ ಭೂಮಿಯಲ್ಲಿ ಕಾಣಿಸಿಕೊಂಡಳು. ನೇಗಿಲಿನಿಂದಾದ ರೇಖೆಗೆ ಸೀತಾ ಎಂದು ಹೆಸರು. ಅಲ್ಲಿ ಉದ್ಭವಿಸಿದ್ದರಿಂದ ಜನಕರಾಜನು ಇವಳಿಗೆ ಸೀತೆಯೆಂದು ನಾಮಕರಣ ಮಾಡಿದ್ದಾನೆ. ಈ ಜನಕಸುತೆಯು ತನ್ನ ತಪೋಬಲದಿಂದಲೇ ರಾವಣ ನನ್ನು ಸಂಹರಿಸಿದ್ದಳು. ನಿನ್ನ ಪರಾಕ್ರಮವು ಒಂದು ನಿಮಿತ್ತವಾಯಿತು'' ಎಂದರು.

೫

ರಾವಣನು ಮರುತ್ತನನ್ನು ಜಯಿಸಲು ಹೋಗುವುದು. ಅನರಣ್ಯದ ಶಾಪ. ಯಮಲೋಕಕ್ಕೆ ಧಾಳಿ

ಅಗಸ್ತ್ಯರು ಹೇಳಿದರು : ''ಶ್ರೀರಾಮ, ವೇದವತಿಯು ಅಗ್ನಿಪ್ರವೇಶ ಮಾಡಿದ ಮೇಲೆ ರಾವಣನು ಪುಷ್ಪಕವನ್ನೇರಿ ತನ್ನ ಸಂಚಾರವನ್ನು ಮುಂದುವರೆಸಿದನು. ಆ ಸಮಯದಲ್ಲಿ ಮರುತ್ತನೆಂಬ ರಾಜನು ಉಶೀರಬೀಜವೆಂಬ ಸ್ಥಳದಲ್ಲಿ ತಪಸ್ಸು ಮಾಡುತ್ತಿದ್ದನು. ಯಜ್ಞಶಾಲೆಯಲ್ಲಿ ದೇವತೆಗಳು ಪ್ರತ್ಯಕ್ಷರಾಗಿ ಬಂದಿದ್ದರು. ಬೃಹಸ್ಪತಿಯ ಸಾಕ್ಷಾತ್ ಸೋದರನಾದ ಸಂವರ್ತನೆಂಬ ಬ್ರಹ್ಮರ್ಷಿಯು ಮರುತ್ತನಿಂದ ಯಾಗಮಾಡಿಸುತ್ತಿದ್ದನು. ರಾವಣನು ಅಲ್ಲಿಗೆ ಬಂದನೆಂದು ತಿಳಿದೊಡನೆ ದೇವತೆಗಳು ಹೆದರಿ ನವಿಲು, ಕಾಗೆ, ಹಂಸ ಮೊದಲಾದ ಪ್ರಾಣಿಗಳ ಆಕೃತಿಯನ್ನು ಧರಿಸಿ ಮರೆಯಾದರು. ರಾವಣನು ಪವಿತ್ರವಾದ ಆ ಯಜ್ಞಶಾಲೆಯನ್ನು ನಾಯಿಯಂತೆ ಪ್ರವೇಶಿಸಿದನು. ಆ ದೈತ್ಯನು ನೇರವಾಗಿ ಮರುತ್ತನ ಬಳಿಗೆ ಹೋಗಿ ''ಏ ಮರುತ್ತ, ಯುದ್ಧಕ್ಕೆ ಎದುರಾಗು. ಇಲ್ಲದಿದ್ದರೆ ಸೋತೆನು–ಎಂದು ಹೇಳು'' ಎಂದನು. ಆಗ ಮರುತ್ತನು ''ಯಾರು ನೀನು?'' ಎಂದು ಕೇಳಲಾಗಿ ರಾವಣನು ಕೇಕೆಹಾಕಿ ನಕ್ಕು, ''ನಿನ್ನ ಧೀರತನಕ್ಕೆ ಮೆಚ್ಚಿದೆನು. ದೈತ್ಯೇಶ್ವರನಾದ ರಾವಣನು ನಾನೆಂದು ತಿಳಿಯದಾಯಿತೆ? ನನ್ನ ಅಣ್ಣ ಕುಬೇರನನ್ನೇ ಗೆದ್ದು ಪುಷ್ಪಕ ವಿಮಾನವನ್ನು ಕಿತ್ತುಕೊಂಡು ಬಂದಿದ್ದೇನೆ, ನೋಡು'' ಎಂದನು. ಆಗ ಮರುತ್ತನು ಧಿಕ್ಕಾರದಿಂದ ''ಆಹಾ, ಎಷ್ಟು ಪುಣ್ಯಾತ್ಮನಯ್ಯಾ ನೀನು. ಅಣ್ಣನನ್ನು ಯುದ್ಧದಲ್ಲಿ ಗೆದ್ದಿರುವೆ. ಎಲಾ ದುರುಳ, ನಿಲ್ಲು ನಿಲ್ಲು, ''ನಿನ್ನನ್ನು ಯಮಸದನಕ್ಕೆ ದಬ್ಬುವೆನು ಎಂದು ಉತ್ತರಿಸಿ ಧನುಸ್ಸನ್ನು ತುಡುಕಿ ಶರಗಳನ್ನು ಸೆಳೆದು ಯುದ್ಧಕ್ಕೆ ಸಜ್ಜಾದನು. ಅಷ್ಟರಲ್ಲಿ ಸಂವರ್ತ ಮಹರ್ಷಿಯು ಅಡ್ಡಬಂದು ಮರುತ್ತನನ್ನು ನೋಡಿ ಪ್ರೀತಿಯಿಂದ ''ಮಹಾರಾಜ, ಈ ಸಮಯದಲ್ಲಿ ಯುದ್ಧವು ನಿನಗೆ ಯುಕ್ತವಲ್ಲ. ಈಗ ನಡೆಯುತ್ತಿರುವುದು ಮಹೇಶ್ವರದೇವತಾಕವಾದ ಯಜ್ಞ. ಇದು ಸಮಾಪ್ತವಾಗದೇ ಹೋದರೆ, ಕರ್ತನ ಕುಲವನ್ನೇ ನಾಶ ಮಾಡೀತು. ಯಜ್ಞದಲ್ಲಿ ದೀಕ್ಷಿತನಾದವನು ಕ್ರುದ್ಧನಾಗಬಾರದು. ಯುದ್ಧವು ಸಲ್ಲದು'' ಎಂದು ಬುದ್ಧಿವಾದ ಹೇಳಿದನು. ಆಗ ಮರುತ್ತರಾಜನು ಗುರುವಾಕ್ಯವನ್ನು ಗೌರವಿಸಿ ಶರಚಾಪಗಳನ್ನು ಬದಿಗಿರಿಸಿ ಶಾಂತಚಿತ್ತನಾಗಿ ಯಜ್ಞಕಾರ್ಯದಲ್ಲಿ ತೊಡಗಿದನು. ಮರುತ್ತನು ಸೋತನೆಂದು ರಾವಣನು ಸಿಂಹನಾದ ಮಾಡಿ ಅಲ್ಲಿಂದ ತೆರಳಿದನು. ಆ ರಾಕ್ಷಸನು ಹೊರಟುಹೋದ ಮೇಲೆ ದೇವತೆಗಳು ಮತ್ತೆ ಯಜ್ಞಭೂಮಿಗೆ ಬಂದರು.

ಮರುತ್ತರಾಜನ ಯಾಗವು ಸಂಪೂರ್ಣವಾಗಿ ನೆರವೇರಿತು. ಆತನಿಗೆ ಸ್ವರ್ಗವು ಲಭಿಸಿತು.

ಇತ್ತಲಾಗಿ ದಶಗ್ರೀವನು ವಿಭಿನ್ನದೇಶಗಳಿಗೆ ತೆರಳಿ ಅನೇಕ ರಾಜರನ್ನು ಕಂಡು ಯುದ್ಧಕ್ಕೆ ಆಹ್ವಾನಿಸುತ್ತಿದ್ದನು. ದುಷ್ಯಂತ, ಸುರಥ, ಗಾಧಿ, ಪುರೂರವ–ಮುಂತಾದ ಪರಾಕ್ರಮಿಗಳಾದ ಕ್ಷತ್ರಿಯರು ಮಂತ್ರಾಲೋಚನೆಯನ್ನು ಮಾಡಿ 'ಈ ರಾಕ್ಷಸನು ವರಬಲದಿಂದ ದುರ್ಜಯನಾಗಿದ್ದಾನೆ' ಎಂಬುದನ್ನು ಮನಗಂಡು ನಾವು ಸೋತೆವು ಎಂದು ಹೇಳಿಬಿಡುತ್ತಿದ್ದರು. ರಾವಣನು ಗರ್ವದಿಂದ ಇನ್ನೊಂದು ನಗರಕ್ಕೆ ಹೋಗುತ್ತ ಅನೇಕ ಸ್ಥಳಗಳಲ್ಲಿ ಸಂಚರಿಸಿ ಅಯೋಧ್ಯೆಗೆ ಬಂದನು. ಆಗ ಅನರಣ್ಯನೆಂಬ ರಾಜನು ದಕ್ಷತೆಯಿಂದ ಈ ಅಯೋಧ್ಯೆಯನ್ನು ರಕ್ಷಿಸುತ್ತಿದ್ದನು. ಅನರಣ್ಯನಿಗೂ ರಾವಣನಿಗೂ ಉಗ್ರವಾದ ಯುದ್ಧವೇ ನಡೆಯಿತು. ಭೀಕರವಾದ ಆ ಯುದ್ಧದಲ್ಲಿ ರಾವಣನು ಅನರಣ್ಯನ ತಲೆಯಮೇಲೆ ಗುದ್ದಿದನು. ಆ ನೃಪಾಲನು ವಿಹ್ವಲನಾಗಿ ತತ್ತರಿಸುತ್ತಾ ರಥದಿಂದ ಉರುಳಿಬಿದ್ದನು. ರಾವಣನು ಅಟ್ಟಹಾಸದಿಂದ ಹಂಗಿಸುತ್ತಾ ಅನರಣ್ಯನನ್ನು ನೋಡಿ ''ಈಗ ಹೇಗಾಯಿತು? ನನ್ನೊಡನೆ ಯುದ್ಧಕ್ಕೆ ಬಂದೆಯಾ? ಎಲೈ ಮೂಢ, ನನ್ನ ಬಲವೈಭವವನ್ನು ನೀನು ಕೇಳಿಲ್ಲವೆಂದು ಕಾಣುತ್ತದೆ'' ಎಂದು ಹಂಗಿಸಿದನು. ಅದಕ್ಕೆ ಅನರಣ್ಯನು ಮೇಲುಸಿರು ಬಿಡುತ್ತಾ ''ಎಲಾ ರಾಕ್ಷಸ, ನೀನಲ್ಲ ನನ್ನನ್ನು ಜಯಿಸಿದವನು. ಸುಮ್ಮನೆ ಜಂಭದ ಮಾತನ್ನಾಡುತ್ತೀಯೆ. ದೈವವು ನನ್ನನ್ನು ಕೊಂದಿತು. ನೀನು ನಿಮಿತ್ತ ಮಾತ್ರ. ನನ್ನ ಆಯುಸ್ಸು ಮುಗಿದಿರುವಾಗ ಯಾರು ಏನು ಮಾಡಿಯಾರು? ಆದರೆ, ಎಲೈ ರಾಕ್ಷಸ, ಇಲ್ಲಿ ಕೇಳು. ಇಕ್ಷ್ವಾಕುರಾಜರನ್ನು ಈ ರೀತಿಯಲ್ಲಿ ಹಂಗಿಸುವೆಯಾ? ಯುದ್ಧಮರ್ಯಾದೆಯನ್ನರಿತವನು ನಿನ್ನಂತೆ ಮಾತಾಡುವುದಿಲ್ಲ. ನಾನು ದಾನಮಾಡಿರುವೆನಾದರೆ, ತಪಸ್ಸನ್ನಾಚರಿಸಿರುವೆನಾದರೆ ಪ್ರಜೆಗಳನ್ನು ಧರ್ಮದಿಂದ ಪಾಲಿಸಿರುವುದೇ ಆದರೆ ಈಗ ನಾನು ಹೇಳುವ ಮಾತು ಸತ್ಯವಾಗಲಿ. ಮಹಾತ್ಮರಾದ ಈ ಇಕ್ಷ್ವಾಕುರಾಜರ ವಂಶದಲ್ಲಿ ಜನಿಸಿದ ರಾಜಪುತ್ರನೊಬ್ಬನು ನಿನ್ನನ್ನು ಸಂಹರಿಸಲಿ'' ಎಂದು ಶಪಿಸಿ ಮೃತನಾದನು. ಗಗನದಿಂದ ಹೂಮಳೆ ಸುರಿಯಿತು. ಅನರಣ್ಯನು ಸ್ವರ್ಗವನ್ನು ಸೇರಿದನು. ಈ ರಾಕ್ಷಸನು ಹೂಂಕರಿಸುತ್ತ ಮುಂದಕ್ಕೆ ತೆರಳಿದನು.

''ಶ್ರೀರಾಮ, ಆ ರಾಕ್ಷಸರಾಜನು ಪೃಥ್ವಿಯಲ್ಲಿದ್ದ ರಾಜರನ್ನೆಲ್ಲಾ ತಲ್ಲಣಿಸುತ್ತ ಅಲೆಯುತ್ತಿರುವಾಗ ಒಂದು ಸಲ ಗಗನಮಾರ್ಗದಲ್ಲಿ ನಾರದ ಮುನಿಗಳನ್ನು ಕಂಡನು. ರಾವಣನು ನಾರದರನ್ನು ಕುರಿತು ''ಮುನಿಗಳೆ, ನೀವು ಇತ್ತ ಬಂದುದೇಕೆ?'' ಎಂದು ಕೇಳಿದನು. ಪುಷ್ಪಕವಿಮಾನದಲ್ಲಿ ಕುಳಿತಿದ್ದ ರಾವಣನನ್ನು ನೋಡಿ ನಾರದರು,

"ರಾಕ್ಷಸೇಶ್ವರ, ನಿನ್ನ ಅದ್ಭುತ ಪರಾಕ್ರಮಗಳನ್ನು ಕಂಡು ಸಂತುಷ್ಟನಾಗಿದ್ದೇನೆ. ನೀನು ವೈರಿಗಳನ್ನು ಸದೆ ಬಡಿಯುವಾಗ ನಿನ್ನ ಶೌರ್ಯವನ್ನು ನೋಡಿ ನನಗೆ ಆನಂದವಾಗುವುದು! ನೀನು ಈ ಮಾನವರನ್ನು ಕೊಲ್ಲುವುದಾದರೂ ಏಕೆ? ಅಲ್ಪಕಾಲದಲ್ಲಿಯೇ ಸಾಯಬೇಕಾದ ಇವರು ಹೇಗಿದ್ದರೂ ಸತ್ತವರೇ. ದೇವದಾನವರಿಗೂ ಅಜೇಯನಾಗಿರುವ ನೀನು ಈ ನರಪ್ರಾಣಿಗಳನ್ನು ಕೊಲ್ಲುವುದು ಯುಕ್ತವಲ್ಲ. ಪೀಡಿಸುವುದೂ ಯುಕ್ತವಲ್ಲ. ನಾನಾ ಬಗೆಯ ದುಃಖಗಳಿಂದಲೂ, ರೋಗಗಳಿಂದಲೂ ಮುಪ್ಪಿನಿಂದಲೂ ಬಳಲುತ್ತಿರುವ ಇವರಿಗೆ ಮತ್ತೆ ನೀನೇಕೆ ಹಿಂಸೆಯನ್ನು ಕೊಡುತ್ತಿರುವೆ? ನಿನ್ನ ಪರಾಕ್ರಮಕ್ಕೆ ಇದು ಯೋಗ್ಯವಾದ ಕೆಲಸವಲ್ಲ. ಹೇಗಿದ್ದರೂ ಇವರು ಯಮಲೋಕಕ್ಕೆ ಹೋಗಿಯೇ ತೀರುವರು. ಆದ್ದರಿಂದ, ಪೌಲಸ್ತ್ಯ, ನೀನು ಯಮನ ಮೇಲೆ ಕೈಮಾಡಿ ಅವನನ್ನು ನಿಗ್ರಹಿಸು. ಯಮನನ್ನು ನೀನು ಗೆದ್ದೆಯಾದರೆ ಎಲ್ಲರನ್ನೂ ಗೆದ್ದಂತೆಯೇ!" ಎಂದರು. ಆಗ ರಾವಣನು ಗಟ್ಟಿಯಾಗಿ ನಕ್ಕು ನಾರದರಿಗೆ ನಮಸ್ಕರಿಸಿ, "ಮಹರ್ಷಿಗಳೆ, ನೀವು ಕಲಹಪ್ರಿಯರೆಂಬುದು ನನಗೆ ಗೊತ್ತು! ಈಗ ನಾನು ರಸಾತಳಕ್ಕೆ ವಿಜಯಯಾತ್ರೆಯನ್ನು ಕೈಗೊಂಡಿದ್ದೇನೆ. ರಸಾತಳವನ್ನು ಗೆದ್ದಮೇಲೆ ಸಮುದ್ರವನ್ನು ಮಥಿಸಿ ಅಮೃತವನ್ನು ಹುಟ್ಟಿಸುತ್ತೇನೆ" ಎಂದು ನುಡಿದನು. ಅದನ್ನು ಕೇಳಿ ನಾರದರು, "ಓಹೋ, ಹಾಗಿದ್ದರೆ ಇದೇಕೆ ಬೇರೆ ದಾರಿಯಲ್ಲಿ ಹೊರಟಿದ್ದೀಯೆ? ಈ ದಾರಿಯು ನೇರವಾಗಿ ಯಮರಾಜನ ನಗರಕ್ಕೆ ಹೋಗುತ್ತದೆ" ಎಂದನು. ರಾವಣನು ಖೊಕ್ಕನೆ ನಕ್ಕು "ಹಾಗಿದ್ದರೆ ಒಳ್ಳೆಯದೇ ಆಯಿತು. ನಾನು ಈಗಲೇ ಯಮನಗರಕ್ಕೆ ಧಾಳಿಯಿಟ್ಟು, ಸಕಲಪ್ರಾಣಿಗಳನ್ನೂ ಕೊಲ್ಲುವ ಯಮನನ್ನೇ ಕೊಲ್ಲುವೆನು" ಎಂದು ಹೇಳಿ, ನಾರದರಿಗೆ ವಂದಿಸಿ ತನ್ನ ಸಚಿವರೊಡನೆ ಮುಂದಕ್ಕೆ ಪ್ರಯಾಣ ಮಾಡಿದನು.

ಇತ್ತ ನಾರದರು ಧ್ಯಾನ ಸ್ತಿಮಿತರಾಗಿ ಒಂದು ಕ್ಷಣಕಾಲ ಆಲೋಚಿಸಿದರು. ಅವರು ತಮ್ಮಲ್ಲಿಯೇ "ಆಹಾ, ಏನಿದು? ಎಲ್ಲರನ್ನೂ ಸಂಹರಿಸುವ ಕಾಲಯಮನನ್ನು ಈ ರಾವಣನು ಜಯಿಸಬಲ್ಲನೆ? ಮೂರು ಲೋಕದವರೂ ಯಾವಾತನಿಗೆ ಹೆದರಿ ತತ್ತರಿಸುತ್ತಾರೋ ಅಂಥ ಯಮರಾಜನನ್ನು ಎದುರಿಸಿ ಹೋರಾಡುವುದೆಂದರೇನು? ನನಗಂತೂ ಈ ಹೊಡೆದಾಟವನ್ನು ನೋಡಬೇಕೆಂದು ಕುತೂಹಲವುಂಟಾಗಿದೆ. ಇದನ್ನು ನಾನು ಕಣ್ಣಾರೆ ನೋಡಬೇಕು" ಎಂದುಕೊಂಡು ತ್ವರೆಯಿಂದ ಯಮಲೋಕಕ್ಕೆ ತೆರಳಿದರು.

ಅವರು ರಾವಣನಿಗಿಂತ ಮೊದಲೇ ಯಮಲೋಕಕ್ಕೆ ಹೋಗಿ ಯಮಧರ್ಮನನ್ನು ಕಂಡರು. ಆತನು ನಾರದರನ್ನು ಸ್ವಾಗತಿಸಿ ಪೀಠದಲ್ಲಿ ಕುಳ್ಳಿರಿಸಿ "ದೇವರ್ಷಿಗಳೆ,

ಎಲ್ಲವೂ ಕುಶಲವಷ್ಟೆ? ಮಹಾಮಹಿಮರಾದ ನೀವು ಇಷ್ಟು ದೂರ ಆಗಮಿಸಿದ ಕಾರ್ಯಭಾರವೇನು?'' ಎಂದು ಕೇಳಿದನು. ನಾರದರು ''ಧರ್ಮರಾಜ, ಹೇಳ ಬೇಕಾದದ್ದಿದೆ. ಆಲಿಸು. ಬೇಕಾದ ಸಿದ್ಧತೆಮಾಡಿಕೊ. ರಾವಣನೆಂಬ ಒಬ್ಬ ನಿಶಾಚರ ನಿರುವನಷ್ಟೆ. ಆತನು ನಿನ್ನನ್ನು ಪರಾಜಯಗೊಳಿಸಬೇಕೆಂದು ಇಲ್ಲಿಗೆ ಬರುತ್ತಿದ್ದಾನೆ. ಈ ಸುದ್ದಿಯನ್ನು ನಿನಗೆ ತಿಳಿಸಬೇಕೆಂದು ನಾನು ತ್ವರೆಯಿಂದ ಬಂದಿದ್ದೇನೆ. ಆದರೆ ಕಾಲದಂಡವನ್ನು ಹಿಡಿದಿರುವಾಗ ನಿನಗೆ ಅವನಿಂದ ಏನಾದೀತು?'' ಎಂದರು. ಅಷ್ಟರಲ್ಲಿ ರಾವಣನ ಪುಷ್ಪಕವಿಮಾನವು ಯಮಲೋಕಕ್ಕೆ ಆಗಮಿಸಿತು.

ರಾವಣನು ಯಮನಗರಕ್ಕೆ ಬಂದು ಅಲ್ಲಿಯ ವೈಚಿತ್ರ್ಯವನ್ನು ಕಂಡನು. ಪ್ರಾಣಿವರ್ಗವು ತನ್ನ ಸುಕೃತಗಳ ಪುಣ್ಯಫಲವನ್ನೂ, ದುಷ್ಕೃತ್ಯಗಳ ದುಷ್ಫಲವನ್ನು ಅನುಭವಿಸುತ್ತಿರುವುದು ರಾವಣನಿಗೆ ಕಾಣಿಸಿತು. ಉಗ್ರಸ್ವಭಾವದವರಾದ ಯಮದೂತರು ಪಾಪಿಗಳಾದ ನಾರಕಿಗಳನ್ನು ನಾನಾಬಗೆಯಲ್ಲಿ ಹಿಂಸಿಸುತ್ತಿರುವಾಗ, ಆ ಹಿಂಸೆಯನ್ನು ತಡೆದುಕೊಳ್ಳಲಾರದೆ ಪಾಪಕರ್ಮಿಗಳು ಗಟ್ಟಿಯಾಗಿ ಅರಚುತ್ತಿದ್ದರು. ಇನ್ನೊಂದು ಕಡೆ ಪುಣ್ಯಾತ್ಮರು ತಮ್ಮ ಸುಕೃತಗಳ ಬಲದಿಂದ ಉತ್ತಮ ಭವನಗಳಲ್ಲಿ ಗೀತವಾದ್ಯಾದಿಗಳನ್ನು ಕೇಳುತ್ತ ಆನಂದಿಸುತ್ತಿದ್ದರು. ಈ ರಾಕ್ಷಸಾಧಿಪನು ಬಲಪ್ರಯೋಗದಿಂದ ಯಮದೂತರನ್ನು ತಡೆದು ಹಿಂಸೆಗೊಳಗಾಗಿದ್ದ ನರಕಿಗಳನ್ನು ಬಿಡುಗಡೆ ಮಾಡಿಸಿದನು. ಎಲ್ಲೆಲ್ಲಿಯೂ ಕೋಲಾಹಲಶಬ್ದವು ಮಸಗಿತು. ಯಮಭಟರು ಜೇನುಹುಳುಗಳಂತೆ ಪುಷ್ಪಕ ವಿಮಾನವನ್ನು ಮುತ್ತಿ ತಮ್ಮ ಆಯುಧಗಳನ್ನು ಪ್ರಯೋಗಿಸುತ್ತಿದ್ದರು. ರಾವಣನ ಸಚಿವರು ಆ ಯಮಭಟರೊಡನೆ ಹೋರಾಡತೊಡಗಿದರು. ರಾವಣನನ್ನು ಆ ಯೋಧರು ಶೂಲಗಳಿಂದ ತಿವಿದರು. ರಕ್ತ ಪ್ರವಾಹದಿಂದ ರಾವಣನ ದೇಹವು ತೊಯ್ದುಹೋಯಿತು. ಆಗ ರಾವಣನು ಕ್ರುದ್ಧನಾಗಿ ಪಾಶುಪತವೆಂಬ ದಿವ್ಯಾಸ್ತ್ರವನ್ನು ಯಮದೂತರ ಮೇಲೆ ಪ್ರಯೋಗಿಸಿ ದನು. ಅವರು ದಿಕ್ಕುಗೆಟ್ಟು ಓಡತೊಡಗಿದರು. ಭೀಮ ವಿಕ್ರಮನಾದ ಆ ದಶಗ್ರೀವನು ಭೀಷಣಧ್ವನಿಯಿಂದ ಸಿಂಹನಾದ ಮಾಡಿದನು.

ರಾಘವ, ಇದೆಲ್ಲವೂ ಯಮದೇವನಿಗೆ ತಿಳಿಯಿತು. ಕೂಡಲೇ ತೇಜೋನಿಧಿ ಯಾದ ಅಂತಕನು ಅನುಚರನಾದ ಮೃತ್ಯುವಿನೊಡನೆ ರಾವಣನಿದ್ದಲ್ಲಿಗೆ ರಥದಲ್ಲಿ ಧಾವಿಸುತ್ತ ಬಂದನು. ಯಮನ ಕಾಲದಂಡವು ಪ್ರಜ್ವಲಿಸುತ್ತ, ಕಿಡಿಯುಗುಳುತ್ತಾ ಅವನ ಪಾರ್ಶ್ವದಲ್ಲಿ ಸನ್ನಿಹಿತವಾಯಿತು. ಯಮನು ದಶಗ್ರೀವನ ಮೇಲೆ ಏರಿಹೋಗಿ ಶಕ್ತಿತೋಮರಾದಿ ಪ್ರಹರಣಗಳಿಂದ ರಾವಣನ ಅವಯವಗಳನ್ನು ಕೊಚ್ಚಿ ಕೊರೆದನು.

ಈ ರೀತಿಯಾಗಿ ರಾವಣನಿಗೂ ಯಮನಿಗೂ ಏಳುರಾತ್ರಿಗಳವರೆಗೆ ಭೀಕರ ಕದನ ನಡೆಯಿತು. ಕಡೆಯಲ್ಲಿ ಅಂತಕನು ಕ್ರೋಧಾವಿಷ್ಟನಾಗಿ ತನ್ನ ಕಾಲದಂಡವನ್ನು ಎತ್ತಿ ಹಿಡಿದು ತೂಗಿದನು. ಒಡನೆ ಆ ಭೀಕರ ಆಯುಧವು ಜ್ವಾಲಾಕರಾಳವಾಗಿ ಬೆಳಗುತ್ತ ರಾವಣನನ್ನು ಸುಟ್ಟು ಬೂದಿಮಾಡುವುದೋ ಎಂಬಂತೆ ಭುಗಿಲೆಂದಿತು. ರಣಾಂಗಣದಲ್ಲಿದ್ದ ಸಮಸ್ತರೂ ಹೆದರಿ ದಿಕ್ಕುಗೆಟ್ಟು ಓಡಿಹೋದರು. ಯಮನು ದಂಡಧಾರಿಯಾದುದನ್ನು ನೋಡಿ ದೇವತೆಗಳು ತಲ್ಲಣಿಸಿದರು. ಅಷ್ಟರಲ್ಲಿ ಬ್ರಹ್ಮದೇವನು ಪ್ರತ್ಯಕ್ಷನಾಗಿ ಬಂದು ''ವೈವಸ್ವತ, ನಿಲ್ಲು ನಿಲ್ಲು, ಬೇಡ. ಈ ಕಾಲದಂಡವನ್ನು ಈ ರಾಕ್ಷಸನ ಮೇಲೆ ಪ್ರಯೋಗಿಸಬೇಡ. ದೇವಾದಿಗಳಿಗೆ ಅವಧ್ಯನಾಗೆಂದು ರಾವಣನಿಗೆ ನಾನು ವರವನ್ನು ಕೊಟ್ಟಿದ್ದೇನೆ. ನಾನು ಕೊಟ್ಟ ವರವನ್ನು ನೀನು ಸುಳ್ಳುಮಾಡಬಾರದು. ಅದ್ವಿತೀಯವಾದ ಈ ಕಾಲದಂಡವನ್ನು ನಾನೇ ನಿರ್ಮಿಸಿದ್ದಲ್ಲವೆ? ಆದ್ದರಿಂದ, ಯಮರಾಜ, ರಾವಣನ ಮೇಲೆ ಇದನ್ನು ಪ್ರಯೋಗಿಸಬೇಡ. ಇದರ ಹೊಡೆತಕ್ಕೆ ಸಿಕ್ಕಿದವನು ಒಂದು ಕ್ಷಣವೂ ಜೀವಿಸಲಾರ. ಈ ದಂಡಾಯುಧವನ್ನು ಪ್ರಯೋಗಿಸಿದಾಗ ರಾವಣನು ಸತ್ತರೂ–ಸಾಯದಿದ್ದರೂ ಉಭಯಪ್ರಕಾರದಲ್ಲಿಯೂ ನನ್ನ ಮಾತು ಸುಳ್ಳಾಗಿಹೋದೀತು. ಆದ್ದರಿಂದ, ಯಮರಾಜ, ಇದನ್ನು ಲಂಕೇಶ್ವರನ ಮೇಲೆ ಪ್ರಯೋಗಿಸಬೇಡ'' ಎಂದನು. ಆಗ ಧರ್ಮಾತ್ಮನಾದ ಯಮನು ''ಬ್ರಹ್ಮದೇವ, ನೀನು ನಮಗೆ ಪ್ರಭುವಾಗಿದ್ದೀಯೆ. ನಿನ್ನ ಆಜ್ಞೆಯನ್ನು ನಾನು ಮೀರಲಾರೆ. ಈಗ ನಾನು ಮಾಡುವುದೇನು? ಅದೃಶ್ಯ ನಾಗುವೆನು!'' ಎಂದು ನುಡಿದು ಕೂಡಲೇ ರಥಸಹಿತವಾಗಿ ಅಂತರ್ಧಾನ ಹೊಂದಿದನು. ಬ್ರಹ್ಮನು ಅದೃಶ್ಯನಾದನು. ಆಗ ರಾವಣನು ''ಓ ಯಮನು ಸೋತು ಓಡಿಹೋದ'' ಎಂದು ಘೋಷಿಸುತ್ತಾ ತನ್ನ ಹೆಸರನ್ನು ಯಮನಗರದಲ್ಲಿ ಡಂಗುರ ಹೊಡೆಸಿ ಸಾರಿಸಿ ಯಮ ನಗರದಿಂದ ಹೊರಟುಹೋದನು. ನಾರದರು ಈ ಪ್ರಕರಣವನ್ನು ನೋಡಿ ಆನಂದಿಸುತ್ತಾ ಯಥೇಚ್ಛೆಯಾಗಿ ಹೊರಟುಹೋದರು.

೬

ಶೂರ್ಪಣಖೆಯ ಆಕ್ರೋಶ. ಕುಂಭೀನಸಿಯ ಗಂಡನಾದ ಮಧುವಿನ ಸತ್ಕಾರ. ರಂಭೆಯ ನಿಮಿತ್ತವಾಗಿ ನಳಕೂಬರನಿಂದ ಶಾಪ

ಅಗಸ್ತ್ಯರು ಹೇಳಿದರು : ''ಶ್ರೀರಾಮ, ಹೀಗೆ ರಣಶ್ಲಾಘಿಯಾದ ದಶಗ್ರೀವನು ಯಮನ ಪ್ರಹಾರಗಳಿಂದ ಜರ್ಜರಿತನಾಗಿದ್ದರೂ ಪುಷ್ಪಕವನ್ನೇರಿ ರಸಾತಳದ ಕಡೆಗೆ

ನುಗ್ಗಿದನು. ದಾರಿಯಲ್ಲಿ ನಿವಾತಕವಚರೊಡನೆ ಭೀಕರವಾದ ಯುದ್ಧವು ನಡೆಯಿತು. ಕಡೆಗೆ ಬ್ರಹ್ಮನ ಮಧ್ಯಸ್ಥ್ಯದಿಂದ ರಾವಣನೂ ನಿವಾತಕವಚರೂ ಸಖ್ಯವನ್ನು ಬೆಳೆಸಿದರು. ಆ ನಿವಾತಕವಚರಿಂದ ರಾವಣನು ನೂರಾರು ಮಾಯಾ ವಿದ್ಯೆಗಳನ್ನು ಕಲಿತು ಜಲಾಧಿಪತಿಯಾದ ವರುಣನ ನಗರದ ಕಡೆಗೆ ಪ್ರಯಾಣ ಮಾಡಿದನು. ಅಲ್ಲಿ ಸುತ್ತುತ್ತಿರುವಾಗ ಆತನನ್ನೆದುರಿಸಿದ ಕಾಲಕೇಯರೆಂಬ ರಾಕ್ಷಸರನ್ನು ರಾವಣನು ಸಂಹರಿಸಿದನು. ರಾಘವ, ಶೂರ್ಪಣಖೆಯ ಗಂಡನಾದ ವಿದ್ಯುಜ್ಜಿಹ್ವನೆಂಬ ರಾಕ್ಷಸನು ಕಾಲಕೇಯರಲ್ಲೊಬ್ಬನಾಗಿದ್ದನು. ರಾವಣನು ಅವನನ್ನೂ ಕೊಂದುಬಿಟ್ಟನು.

ಆಮೇಲೆ ದಶಗ್ರೀವನು ವರುಣನ ನಗರಕ್ಕೆ ಮುತ್ತಿಗೆ ಹಾಕಿದನು. ಆ ಸಮಯದಲ್ಲಿ ವರುಣನು ನಗರದಲ್ಲಿರಲಿಲ್ಲ. ವರುಣನ ಪುತ್ರರು ಮಹಾಪರಾಕ್ರಮದಿಂದ ರಾವಣನನ್ನೆದುರಿಸಿ ಹೋರಾಡಿದರು. ಆದರೆ ಅವರೆಲ್ಲರೂ ಪರಾಜಿತರಾದರು. ವರುಣನಿಲ್ಲವೆಂಬುದನ್ನು ಕೇಳಿದ ದಶಗ್ರೀವನು ತನ್ನ ಹೆಸರನ್ನು ವರುಣಲೋಕದಲ್ಲಿ ಘೋಷಿಸಿ ಪುಷ್ಪಕವನ್ನೇರಿ ಲಂಕಾಭಿಮುಖವಾಗಿ ಬಂದನು.

ದಾರಿಯಲ್ಲಿ ಬರುವಾಗ ದುರಾತ್ಮನಾದ ಆ ದಶಗ್ರೀವನು ಅನೇಕನಾಗಕನ್ಯೆಯರನ್ನೂ , ಮಾನುಷಸ್ತ್ರೀಯರನ್ನೂ ಯಕ್ಷದಾನವಾಂಗನೆಯರನ್ನೂ ಸೆರೆಹಿಡಿದು ಪುಷ್ಪಕವಿಮಾನದಲ್ಲಿ ತುಂಬಿದನು. ಆ ಸುಂದರಿಯರು ಶೋಕದಿಂದ ಕಳವಳಿಸುತ್ತಾ ಪುಷ್ಪಕ ವಿಮಾನದಲ್ಲಿ ಕಂಬನಿಗರೆಯುತ್ತಿದ್ದರು. ಅವರ ಆರ್ತನಾದವು ಪುಷ್ಪಕದ ತುಂಬ ಮೊಳಗುತ್ತಿತ್ತು. ಅದೊಂದನ್ನೂ ಗಮನಿಸದೆ ಆ ರಾಕ್ಷಸನು ಲಂಕಾನಗರವನ್ನು ಪ್ರವೇಶಿಸಿದನು. ಅಷ್ಟರಲ್ಲಿ ಅವನ ತಂಗಿಯಾದ ಶೂರ್ಪಣಖೆಯು ಭೀಕರಾಕೃತಿಯನ್ನು ತಳೆದು ಅಳುತ್ತಾ ಬಂದು ರಾವಣನೆದುರಿಗೆ ಅಡ್ಡ ಬಿದ್ದಳು. ರಾವಣನು ಅವಳನ್ನೆಬ್ಬಿಸಿ ಸಂತೈಸುತ್ತಾ ''ತಂಗಿ, ಇದೇನು? ಏನು ಹೇಳಬೇಕೆಂದಿರುವೆ? ತಡಮಾಡದೆ ತಿಳಿಸು'' ಎಂದು ಕೇಳಿದನು. ಅವಳ ಕಣ್ಣು ಕೆಂಪಡರಿತ್ತು. ಕಣ್ಣೀರು ಸುರಿಯುತ್ತಿತ್ತು. ಅವಳು ''ಮಹಾರಾಜ, ನನ್ನನ್ನು ವಿಧವೆಯನ್ನಾಗಿ ಮಾಡಿ ಇದೇನೆಂದು ಕೇಳುತ್ತಿರುವೆಯಾ? ಕಾಲಕೇಯರೆಂಬ ದೈತ್ಯರಲ್ಲಿ ನನ್ನ ಗಂಡನಾದ ವಿದ್ಯುಜ್ಜಿಹ್ವನೂ ಒಬ್ಬನಲ್ಲವೆ? ನನ್ನ ಪ್ರಿಯನಾದ ಪತಿಯನ್ನು ಕೊಂದು ಬಂದಿದ್ದೀಯೆ. ಅಣ್ಣನೆಂಬ ಹೆಸರಿನ ವೈರಿ ನೀನು! ನೀನೇ ನನ್ನನ್ನು ಕೆಡಿಸಿದೆ. ನಿನ್ನಿಂದ ನನಗೆ 'ಮುಂಡೆ' ಎಂಬ ಬಿರುದು ಬಂದಿತು. ನಿನ್ನ ಕೈಯಿಂದಲೇ ಅವನನ್ನು ಕೊಂದೆಯಲ್ಲಾ, ನಿನಗೆ ನಾಚಿಕೆಯಾಗದೆ?'' ಎಂದಳು. ಹೀಗೆ ಶೂರ್ಪಣಖೆಯು ಸಿಟ್ಟಿನಿಂದ ಕೂಗಾಡುತ್ತಿರಲು, ರಾವಣನು ಅವಳನ್ನು ಸಂತೈಸುತ್ತಾ ''ತಂಗಿ, ಅಳಬೇಡ; ಹೆದರಬೇಡ; ನಿನ್ನನ್ನು ಆದರದಿಂದ ನೋಡಿಕೊಳ್ಳುವೆನು. ನಿನ್ನ

ಮನಸ್ಸಿಗೆ ನೋವಾಗದಂತೆ ಪೋಷಿಸುವ ಭಾರ ನನ್ನದು. ತಂಗಿ, ನಾನು ರಣಭೂಮಿಯಲ್ಲಿ ನುಗ್ಗಿದಾಗ ನನಗೆ ಮೈಮೇಲೆ ಪ್ರಜ್ಞೆಯೇ ಇರುವುದಿಲ್ಲ. ಎದುರಿಗೆ ಬಂದವರನ್ನು ಕೊಲ್ಲುವುದೇ ನನ್ನ ಗುರಿಯಾಗಿರುತ್ತದೆ. ಯುದ್ಧದಿಂದ ಉನ್ಮತ್ತನಾದ ನನಗೆ ವಿದ್ಯುಜ್ಜಿಹ್ವನು ನಮ್ಮ ಮನೆಯ ಅಳಿಯನೆಂಬುದೇ ನೆನಪಿಗೆ ಬರಲಿಲ್ಲ! ಎತ್ತಲೋ ಗೊತ್ತಾಗದೆ ನಿನ್ನ ಗಂಡನನ್ನು ಕೊಂದುಬಿಟ್ಟೆನೆಂದು ಕಾಣುತ್ತದೆ. ತಂಗಿ, ಆದದ್ದು ಆಗಿಹೋಯಿತು. ನಮ್ಮ ಸೋದರನಾದ ಖರನು ಐಶ್ವರ್ಯಯುಕ್ತನಾಗಿದ್ದಾನೆ. ನೀನು ಅವನ ಬಳಿಯಲ್ಲಿ ವಾಸವಾಗಿರು. ಖರನು ನಮ್ಮ ಚಿಕ್ಕಮ್ಮನ ಮಗನಲ್ಲವೆ? ಅವನೀಗ ದಂಡಕಾರಣ್ಯಕ್ಕೆ ಹೋಗಿ ಅದನ್ನು ರಕ್ಷಿಸುತ್ತಿರಲಿ. ಅವನೊಡನೆ ಹದಿನಾಲ್ಕುಸಾವಿರ ರಾಕ್ಷಸ ಸೇನೆಯನ್ನು ಕಳಿಸುವೆನು. ನೀನು ಅಲ್ಲಿ ಹೋಗಿರು. ತಂಗಿ, ನಿನ್ನ ಆಜ್ಞೆಯಂತೆ ಖರನು ನಡೆದುಕೊಳ್ಳಬೇಕೆಂದು ನಿಯಮಿಸುತ್ತೇನೆ'' ಎಂದನು. ಅನಂತರ ಖರನನ್ನು ಕರೆಸಿ ಹದಿನಾಲ್ಕು ಸಾವಿರ ರಾಕ್ಷಸರೊಡನೆ ದಂಡಕಾರಣ್ಯಕ್ಕೆ ಹೋಗಿ ಕಾವಲಾಗಿರುವಂತೆ ಆಜ್ಞೆಮಾಡಿದನು. ಶೂರ್ಪಣಖೆಯು ಖರನೊಡನೆ ಹೋಗಿ ದಂಡಕಾರಣ್ಯದಲ್ಲಿ ನೆಲೆಸಿದಳು.

ಈ ಪ್ರಕಾರವಾಗಿ ರಾವಣನು ಶೂರ್ಪಣಖೆಯನ್ನು ಸಂತೈಸಿ ನಿಕುಂಭಿಳೆ ಎಂಬ ಲಂಕೆಯ ಉಪವನಕ್ಕೆ ಪರಿವಾರಸಮೇತನಾಗಿ ಹೋದನು. ಏಕೆಂದರೆ, ಅವನ ಮಗನಾದ ಮೇಘನಾದನು ಅಲ್ಲಿ ಒಂದು ಯಾಗವನ್ನು ಮಾಡಲು ತೊಡಗಿದ್ದನು. ಯಜ್ಞದೀಕ್ಷಿತನಾಗಿದ್ದ ಮಗನನ್ನು ಆಲಿಂಗಿಸಿಕೊಂಡು ''ವತ್ಸ, ಇದೇನು ಮಾಡುತ್ತಿರುವೆ?'' ಎಂದು ಕೇಳಿದನು. ಮೇಘನಾದನು ಯಜ್ಞದಲ್ಲಿ ಮೌನವ್ರತವನ್ನು ಧರಿಸಿದ್ದರಿಂದ ಅವನ ಪರವಾಗಿ ಪುರೋಹಿತನಾದ ಶುಕ್ರಾಚಾರ್ಯನು ಹೀಗೆಂದನು. ''ಮಹಾರಾಜ, ನಿನ್ನ ಮಗನು ಅಗ್ನಿಷ್ಟೋಮವೇ ಮೊದಲಾದ ಯಾಗಗಳನ್ನು ನಡೆಸಿ ಈಗ ಮಾಹೇಶ್ವರ ಯಾಗವನ್ನು ಆರಂಭಿಸಿದ್ದಾನೆ. ಈ ಯಾಗವು ಕಷ್ಟಸಾಧ್ಯವಾದದ್ದು. ಯಾಗ ಮಧ್ಯದಲ್ಲಿ ಪ್ರಸನ್ನನಾದ ಸಾಕ್ಷಾತ್ ಶಿವನು ನಿನ್ನ ಪುತ್ರನಿಗೆ ಕಾಮಗಾಮಿಯಾದ ರಥವನ್ನೂ, ತಾಮಸಿ ಎಂಬ ಮಾಯಾಶಕ್ತಿಯನ್ನೂ ಅನುಗ್ರಹಿಸಿದ್ದಾನೆ. ಈ ಮಾಯಾಶಕ್ತಿಯಿಂದ ಶತ್ರುಗಳ ಕಣ್ಣಿಗೆ ಕತ್ತಲೆ ಕವಿಯುವಂತೆ ಮಾಡಬಹುದು. ಅಸ್ತ್ರಗಳನ್ನು ಪ್ರಯೋಗಿಸತಕ್ಕವನು ಎಲ್ಲಿರುವನೆಂದು ತಿಳಿಯಲು ಸುರಾಸುರರಿಗೂ ಶಕ್ಯವಲ್ಲ. ಅಲ್ಲದೆ ಅಕ್ಷಯವಾದ ಎರಡು ಬತ್ತಳಿಕೆಗಳನ್ನೂ, ಮಂತ್ರಾಸ್ತ್ರಗಳನ್ನೂ ಮಹೇಶ್ವರನಿಂದ ವರವಾಗಿ ಪಡೆದಿದ್ದಾನೆ. ಈ ಮಾಹೇಶ್ವರ ಯಾಗವು ಈ ದಿನ ಸಮಾಪ್ತವಾಗುವುದು'' ಎಂದನು. ಆಗ ದಶಗ್ರೀವನು ''ವರವನ್ನು ಪಡೆದದ್ದು ಒಳ್ಳೆಯದಾಯಿತು. ಆದರೆ

ಯಾಗದಲ್ಲಿ ಇಂದ್ರಾದಿ ದೇವತೆಗಳನ್ನು ಪೂಜಿಸಬಾರದಾಗಿತ್ತು'' ಎಂದು ಹೇಳಿ ಅರಮನೆಗೆ ತೆರಳಿದನು.

ಅವನು ಸೆರೆಹಿಡಿದು ತಂದಿದ್ದ ಅಂಗನೆಯರು ಗೋಳಿಡುತ್ತ ಪುಷ್ಪಕವಿಮಾನದಿಂದ ಇಳಿದರು. ಧರ್ಮಾತ್ಮನಾದ ವಿಭೀಷಣನಿಗೆ ರಾವಣನ ದುರಾಚಾರವು ತಿಳಿಯಿತು. ಅವನು ರಾವಣನ ಬಳಿಗೆ ಬಂದು ''ಅಣ್ಣ, ಈ ಸ್ತ್ರೀಯರನ್ನು ಬಲಾತ್ಕಾರದಿಂದ ನೀನು ತಂದಿರುವುದು ನಮ್ಮ ಕೀರ್ತಿಗೆ ಕಳಂಕವನ್ನು ತರುತ್ತದೆ. ಈ ಅಧರ್ಮವರ್ತನೆಯಿಂದ ನಮ್ಮ ಐಶ್ವರ್ಯವೂ ಕುಲವೂ ಕ್ಷಯಿಸುತ್ತದೆ. ಧರ್ಮವನ್ನುಲ್ಲಂಘಿಸಿ ಈ ಕುಲಾಂಗನೆಯರನ್ನು ಬಲಾತ್ಕರಿಸಿ ತಂದಿದ್ದೀಯೆ. ಇಲ್ಲಿ ಏನಾಗಿದೆ ಗೊತ್ತೆ? ನಮ್ಮ ಕುಂಭೀನಸಿಯನ್ನು ಮಧುವು ಅಪಹರಿಸಿಕೊಂಡು ಹೋದನು'' ಎಂದನು. ಅದನ್ನು ಕೇಳಿ ರಾವಣನು ''ವಿಭೀಷಣ, ಏನು ನೀನು ಹೇಳುತ್ತಿರುವುದು? ನನಗೊಂದೂ ಅರ್ಥವಾಗಲಿಲ್ಲ'' ಎಂದನು. ವಿಭೀಷಣನು ಸಿಟ್ಟಿನಿಂದ ಹೀಗೆ ಉತ್ತರಿಸಿದನು. ''ಮಹಾರಾಜ, ನಿನ್ನ ಪಾಪಕರ್ಮದ ಫಲವು ಹೇಗಿದೆ ಎಂಬುದನ್ನು ನೋಡು! ನಮ್ಮ ಮಾತಾಮಹನಾದ ಸುಮಾಲಿಗೆ ಮಾಲ್ಯವಂತನು ಅಣ್ಣನಷ್ಟೆ. ಅವನು ನಮ್ಮ ತಾಯಿಗೆ ದೊಡ್ಡಪ್ಪನಾಗುತ್ತಾನೆ. ಅವನ ಮಗಳು ಅನಲೆ. ಅನಲೆಯು ನಮ್ಮ ತಾಯಿಗೆ ಸೋದರಿಯಾಗುವಳು. ಅನಲೆಯ ಮಗಳು ಕುಂಭೀನಸಿ. ನಮಗೆ ಅವಳು ಸೋದರಿಯಾಗುತ್ತಾಳೆ. ಪ್ರಬಲನಾದ ಮಧುವೆಂಬ ರಾಕ್ಷಸನು ಅವಳನ್ನು ಅಪಹರಿಸಿಕೊಂಡು ಹೋದನು. ಆ ಸಮಯದಲ್ಲಿ ನಾನು ಜಲಮಧ್ಯದಲ್ಲಿ ತಪಸ್ಸನ್ನಾಚರಿಸುತ್ತಿದ್ದೆನು. ಮೇಘನಾದನು ಯಜ್ಞಕಾರ್ಯದಲ್ಲಿ ತೊಡಗಿದ್ದನು. ಕುಂಭಕರ್ಣನು ನಿದ್ರಿಸುತ್ತಿದ್ದನು. ಅನಂತರ ಈ ವೃತ್ತಾಂತವು ನಮಗೆ ತಿಳಿಯಿತು. ಆದರೆ ಮಧುವನ್ನು ಕೊಲ್ಲುವುದು ಸರಿಯಲ್ಲವೆಂದು ಸುಮ್ಮನಾದೆವು. ಏಕೆಂದರೆ, ಅವನು ಕುಂಭೀನಸಿಯನ್ನು ಮದುವೆಯಾಗಿಬಿಟ್ಟಿದ್ದಾನೆ. ಒಟ್ಟಿನಲ್ಲಿ ಇದೆಲ್ಲವೂ ನಿನ್ನ ಪಾಪಕರ್ಮದ ಫಲ'' ಎಂದನು. ಈ ಮಾತನ್ನು ಕೇಳಿದೊಡನೆ ರಾವಣನು ರೋಷಾವಿಷ್ಟನಾಗಿ ''ಸಿದ್ಧವಾಗಲಿ ನನ್ನ ರಥ. ಈ ರಾವಣನಿಗೂ ಹೆದರದ ಮಧುವೆಂಬವನು ಯಾವನು? ಎಲ್ಲ ವೀರಯೋಧರೂ ನನ್ನೊಡನೆ ಬರಲಿ'' ಎಂದು ಅಬ್ಬರಿಸಿದನು. ಮಧುವೆಂಬ ರಾಕ್ಷಸನ ರಾಜಧಾನಿಯಾದ ಮಧುಪುರಕ್ಕೆ ದಶಗ್ರೀವನು ಹೋಗಿ ಅರಮನೆಯೊಳಗೆ ನುಗ್ಗಿದನು. ಅಲ್ಲಿಯೂ ಮಧುವು ಗೋಚರಿಸಲಿಲ್ಲ. ರಾವಣನ ತಂಗಿಯಾದ ಕುಂಭೀನಸಿಯು ಹೆದರುತ್ತ ಬಂದು ರಾವಣನ ಪಾದಗಳಿಗೆ ತಲೆಬಾಗಿ ವಂದಿಸಿದಳು. ಅವಳು ಕೈಮುಗಿದುಕೊಂಡು ''ಮಹಾರಾಜ, ಪ್ರಸನ್ನನಾಗು, ನನ್ನ ಪತಿಯನ್ನು ಕೊಲ್ಲಬೇಡ. ಕುಲಸ್ತ್ರೀಯರಿಗೆ

ವೈಧವ್ಯಕ್ಕಿಂತ ದೊಡ್ಡ ವಿಪತ್ತಿಲ್ಲ'' ಎಂದು ಪ್ರಾರ್ಥಿಸಿದಳು. ರಾವಣನು ಸಂತುಷ್ಟನಾಗಿ, ''ಒಳ್ಳೆಯದು ನಿನ್ನ ಗಂಡನೆಲ್ಲಿರುವನು ತಿಳಿಸು. ನಾನು ದೇವಲೋಕವನ್ನು ಜಯಿಸಲು ಹೊರಟಿದ್ದೇನೆ. ಅವನು ನನಗೆ ಸಹಾಯಮಾಡಲಿ. ನಿನ್ನ ಪ್ರಾರ್ಥನೆಯನ್ನು ಮನ್ನಿಸುತ್ತೇನೆ. ಮಧುವನ್ನು ಕೊಲ್ಲುವುದಿಲ್ಲ'' ಎಂದನು. ಅನಂತರ ಕುಂಭೀನಸಿಯು ಅಂತಃಪುರದಲ್ಲಿದ್ದ ಮಧುವಿಗೆ ಈ ವೃತ್ತಾಂತವನ್ನು ತಿಳಿಸಿದಳು. ಮಧುವು ಅವಳ ಮಾತಿನಂತೆ ಬಂದು ರಾಕ್ಷಸೇಂದ್ರನಾದ ರಾವಣನನ್ನು ಆದರಿಸಿ ಸತ್ಕರಿಸಿದನು.

ಶ್ರೀರಾಮ, ಅಲ್ಲಿಂದ ದಶಗ್ರೀವನು ಸೇನಾಸಹಿತನಾಗಿ ಸ್ವರ್ಗದ ಕಡೆಗೆ ಪ್ರಯಾಣಮಾಡಿದನು. ಸಂಜೆಯಾದ್ದರಿಂದ ಕೈಲಾಸದ ತಪ್ಪಲಿನಲ್ಲಿ ಸೇನೆಯನ್ನು ಬೀಡುಬಿಟ್ಟು ವಿಶ್ರಮಿಸುತ್ತಿದ್ದನು. ಆಗ ಚಂದ್ರೋದಯವಾಯಿತು. ಬೆಳದಿಂಗಳಿನಿಂದ ಕೈಲಾಸ ಶಿಖರವು ರಂಜಿಸತೊಡಗಿತು. ಅಲ್ಲಿ ವಿಹರಿಸಬೇಕೆಂದು ರಾವಣನು ಹೋಗಿ ಚಂದ್ರೋದಯದ ಸೌಂದರ್ಯವನ್ನು ಅನುಭವಿಸುತ್ತಿದ್ದನು. ಆ ಸಮಯದಲ್ಲಿ ರಂಭೆ ಎಂಬ ಅಪ್ಸರೆಯು ದಿವ್ಯಾಭರಣಭೂಷಿತೆಯಾಗಿ ಕುಬೇರಭವನಕ್ಕೆ ಹೊರಟಿದ್ದಳು. ಅತ್ಯಂತ ಮನೋಹರೆಯಾಗಿದ್ದ ಅವಳನ್ನು ನೋಡಿದಾಗ ರಾವಣನ ಮನಸ್ಸು ಕಾಮದಿಂದ ಉದ್ರಿಕ್ತವಾಯಿತು. ಕೂಡಲೆ ಮುಂದೆ ಹೋಗಿ ಅವಳನ್ನು ತಡೆದು ''ಎಲೆ ಚೆಲುವೆ, ಎಲ್ಲಿಗೆ ಹೋಗುತ್ತಿದ್ದೀಯೆ? ನಿನ್ನನ್ನು ಭೋಗಿಸುವ ಪುಣ್ಯಾತ್ಮನು ಯಾವನವನು? ಸುಂದರಿ, ನಾನು ಲಂಕೇಶ್ವರನಾದ ದಶಗ್ರೀವನೆಂದು ತಿಳಿ. ತ್ರಿಲೋಕಗಳ ಪ್ರಭು ನಾನು. ನನ್ನನ್ನು ಸೇರು'' ಎಂದನು. ರಾವಣನ ನುಡಿಯನ್ನು ಕೇಳಿ ರಂಭೆಯು ತರತರನೆ ನಡುಗಿಹೋದಳು. ಅವಳು ಕೈಮುಗಿದುಕೊಂಡು ''ಪ್ರಭು, ನನ್ನನ್ನು ಮನ್ನಿಸು. ನಾನು ನಿನಗೆ ಸೊಸೆಯಾಗಬೇಕು. ರಾಕ್ಷಸೇಶ್ವರ, ನಿನ್ನ ಅಣ್ಣನಾದ ಕುಬೇರನ ಪುತ್ರನಾದ ನಳಕೂಬರನಿಗೆ ನಾನು ಮಡದಿಯಾಗಿದ್ದೇನೆ. ಆ ಮಹಾಪುರುಷನ ಪ್ರಿಯಳಾದ ನಾನು ಧರ್ಮತಃ ನಿನಗೆ ಸೊಸೆಯಾದೆನು'' ಎಂದಳು. ಅದಕ್ಕೆ ರಾವಣನು ''ರಂಭೆ, ನೀನು ಅಪ್ಸರೆ, ಅಪ್ಸರೆಯರಿಗೆ ಒಬ್ಬನೇ ಪತಿ ಎಂಬ ನಿಯಮವೆಲ್ಲಿದೆ? ದೇವಲೋಕದ ವೇಶ್ಯೆಯಾದ ನಿನ್ನನ್ನು ಯಾರಾದರೂ ಭೋಗಿಸಬಹುದೆಂಬುದು ಅನಾದಿಯಾದ ಸಂಪ್ರದಾಯ'' ಎಂದು ಹೇಳಿ ರಂಭೆಯನ್ನು ಬಲಾತ್ಕರಿಸಿ ಭೋಗಿಸಿದನು. ಆಮೇಲೆ ರಂಭೆಯು ನಡುಗುತ್ತ ಅಂಜುತ್ತ ಕೈಮುಗಿದುಕೊಂಡು ನಳಕೂಬರನ ಬಳಿಗೆ ಹೋಗಿ ಅವನ ಪಾದಗಳ ಬಳಿ ಬಿದ್ದಳು. ರಾವಣನಿಂದ ತನಗಾದ ಬಲಾತ್ಕಾರವನ್ನು ಆತನಿಗೆ ನಿವೇದಿಸಿದಳು. ರಂಭೆಯ ಮೇಲೆ ಬಲಾತ್ಕಾರವು ನಡೆಯಿತೆಂಬುದನ್ನು ಕೇಳಿ ನಳಕೂಬರನು ಕ್ರುದ್ಧನಾದನು. ಅವನು ಧ್ಯಾನನಿಷ್ಠನಾಗಿ ರಾವಣನು ನಡೆಸಿದ ದುಷ್ಕೃತ್ಯವು ಸತ್ಯವೆಂಬುದನ್ನು ಅರಿತನು. ಅವನ

ಕಣ್ಣುಗಳು ಕೆಂಪಡರಿದವು. ಕೂಡಲೇ ಅಂಜಲಿಯಲ್ಲಿ ನೀರನ್ನು ತೆಗೆದುಕೊಂಡು "ಇನ್ನು ಮೇಲೆ ರಾವಣನು ಯಾವ ಪರಯುವತಿಯನ್ನೂ ಬಲಾತ್ಕರಿಸಕೂಡದು. ತನ್ನನ್ನು ಪ್ರೇಮಿಸದ ಯಾವ ಸ್ತ್ರೀಯನ್ನಾದರೂ ರಾವಣನು ಕಾಮಾರ್ತನಾಗಿ ಸ್ಪರ್ಶಿಸಿದರೆ, ಅವನ ತಲೆಯು ಏಳು ಸೀಳಾಗಿ ಒಡೆದು ಹೋಗಲಿ!" ಎಂದು ಶಪಿಸಿದನು. ದೇವತೆಗಳಿಗೆ ಸಂತೋಷವಾಯಿತು. ಋಷಿಗಳು ಆನಂದಿಸಿದರು. ನಳಕೂಬರನು ಮಹಾತಪಸ್ವಿಯಾದ್ದರಿಂದ ಆತನ ಶಾಪವು ಸತ್ಯವಾಗುವುದೆಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ರಾವಣನಿಗೆ ಈ ಸುದ್ದಿ ತಿಳಿಯಿತು. ಅಲ್ಲಿಂದ ಮುಂದೆ ತನ್ನನ್ನು ಕಾಮಿಸದ ಸ್ತ್ರೀಯರನ್ನು ಬಲಾತ್ಕರಿಸಿ ಭೋಗಿಸುವ ಪ್ರವೃತ್ತಿಯನ್ನು ಅವನು ತ್ಯಜಿಸಿದನು.

೭

ಸ್ವರ್ಗದ ಮೇಲೆ ಆಕ್ರಮಣ. ಮೇಘನಾದನಿಂದ ಇಂದ್ರನ ಸೆರೆ. ಇಂದ್ರನ ಬಿಡುಗಡೆ. ಇಂದ್ರಜಿತುವಿಗೆ ಬ್ರಹ್ಮನಿಂದ ವರಪ್ರಾಪ್ತಿ

"ಆಮೇಲೆ ದಶಗ್ರೀವನು ಇಂದ್ರಲೋಕದ ಕಡೆಗೆ ಸಾಗಿದನು. ರಾವಣನು ದಂಡೆತ್ತಿ ಬರುವ ಸುದ್ದಿಯನ್ನು ಕೇಳಿ ದೇವೇಂದ್ರನು ದೀನನಾಗಿ ವಿಷ್ಣುವಿನ ಬಳಿಗೆ ಹೋಗಿ ಹೀಗೆ ನಿವೇದಿಸಿದನು : "ಹೇ ಪ್ರಭು, ಬಲಾಢ್ಯನಾದ ರಾವಣನು ಯುದ್ಧಕ್ಕಾಗಿ ಬರುತ್ತಿದ್ದಾನೆ. ಆತನ ಬಲವೆಲ್ಲವೂ ಬ್ರಹ್ಮದೇವನ ವರಬಲದಿಂದ ಬಂದದ್ದು. ನೀನೇ ನನಗೆ ಆಶ್ರಯದಾತನು. ಹೇ ದೇವದೇವ, ಚಕ್ರಾಯುಧಧಾರಿಯಾಗಿ ನೀನು ರಾವಣನೊಡನೆ ಯುದ್ಧ ಮಾಡಬೇಕು"' ಎಂದನು. ಆಗ ಶ್ರೀಮನ್ನಾರಾಯಣನು, "ದೇವೇಂದ್ರ, ಹೆದರಬೇಡ. ಆ ರಾಕ್ಷಸನು ತನ್ನ ಪುತ್ರನಾದ ಮೇಘನಾದನೊಡನೆ ಬಂದಿದ್ದಾನೆ. ಈಗ ನಾನು ರಾವಣನೊಡನೆ ಹೋರಾಟಕ್ಕೆ ಇಳಿಯುವುದು ಸರಿಯಲ್ಲ. ಅವನು ವರಬಲದಿಂದ ಸುರಕ್ಷಿತನಾಗಿರುವನು. ಮುಂದೆ ನಾನೇ ಆತನನ್ನು ಕೊಲ್ಲುವೆನು. ಪ್ರಕೃತದಲ್ಲಿ ನೀನೇ ನಿರ್ಭೀತಿಯಿಂದ ಅವನೊಡನೆ ಯುದ್ಧಮಾಡು" ಎಂದು ತಿಳಿಸಿದನು. ನಿರ್ವಾಹವಿಲ್ಲದೆ ಇಂದ್ರನೇ ಸಮಸ್ತ ಸೇನೆಯೊಡನೆ ರಾವಣನೊಡನೆ ಯುದ್ಧವನ್ನಾರಂಭಿಸಿದನು. ಆ ಸಮಯದಲ್ಲಿ ಅಷ್ಟವಸುಗಳಲ್ಲೊಬ್ಬನಾದ ಸಾವಿತ್ರನು, ಸಿಂಹವು ಕ್ಷುದ್ರಮೃಗಗಳನ್ನು ತಲ್ಲಣಗೊಳಿಸುವಂತೆ ರಾಕ್ಷಸ ಸೇನೆಯನ್ನು ತಲ್ಲಣಗೊಳಿಸಿದನು. ದಶಗ್ರೀವನ ಪರವಾಗಿ ಮಹಾಪರಾಕ್ರಮಿಯಾದ ಸುಮಾಲಿಯು ಸಾವಿತ್ರನನ್ನು ಎದುರಿಸಿದನು. ಅವರಿಬ್ಬರಿಗೂ ಭೀಕರವಾದ ಕದನವು ಸಮನಿಸಿತು. ಸಾವಿತ್ರನು ಕಾಲದಂಡದಂತೆ ಪ್ರಜ್ವಲಿಸುತ್ತಿದ್ದ ತನ್ನ

ಮಹಾಗದೆಯನ್ನು ತೂಗಿ ಸುಮಾಲಿಯ ತಲೆಯ ಮೇಲೆ ಬಡಿದನು. ಸುಮಾಲಿಯು ತಲೆಯೊಡೆದು ಸತ್ತುಬಿದ್ದನು. ರಾಕ್ಷಸ ಸೇನೆಯು ದಿಕ್ಕುಗೆಟ್ಟು ಓಡತೊಡಗಿತು. ಇದನ್ನು ಮೇಘನಾದನು ನೋಡಿ ಆ ರಾಕ್ಷಸರನ್ನು ಸಂತೈಸಿ ಹಿಂದಿರುಗಿಸಿ, ತನ್ನ ದಿವ್ಯರಥವನ್ನೇರಿ ಯುದ್ಧಸನ್ನದ್ಧನಾದನು. ಆಗ ಶಚೀಪುತ್ರನೂ, ಮಹಾವೀರನೂ ಆದ ಜಯಂತನು ಒಂದು ದಿವ್ಯರಥವನ್ನೇರಿ ಮೇಘನಾದ ನನ್ನೆದುರಿಸಿದನು. ರಾವಣಪುತ್ರನಾದ ಮೇಘನಾದನ ಮಾಯೆಯಿಂದ ಎಲ್ಲೆಲ್ಲಿಯೂ ಕತ್ತಲೆಯು ಪ್ರಸರಿಸಿತು. ಜಯಂತನ ಸುತ್ತಲೂ ನೆರೆದಿದ್ದ ದೇವಯೋಧರು ಮೇಘನಾದನ ಶರಘಾತದಿಂದ ಜರ್ಜರಿತರಾಗಿ ದಿಕ್ಕುಗಾಣದೆ ವಿಷಣ್ಣರಾದರು. ಜಯಂತನು ಏನೂತೋರದೆ ಪರಿತಪಿಸುವುದನ್ನು ಕಂಡು ಅವನ ಮಾತಾಮಹನಾದ ಪುಲೋಮನೆಂಬ ದೈತ್ಯೇಂದ್ರನು ಮೊಮ್ಮಗನಾದ ಜಯಂತನನ್ನು ಎತ್ತಿಕೊಂಡು ರಣಭೂಮಿಯಿಂದ ದೂರಕ್ಕೆ ಹೊರಟುಹೋದನು. ಇತ್ತಲಾಗಿ ದೇವೇಂದ್ರನು ದಿವ್ಯವಾದ ಮಹಾರಥವನ್ನೇರಿ ಯುದ್ಧಭೂಮಿಯಲ್ಲಿ ಧುಮುಕಿದನು. ಇಂದ್ರರಕ್ಷಿತರಾದ ದೇವತೆಗಳು ತಮ್ಮ ಪರಾಕ್ರಮವನ್ನು ಮೆರೆಸಿ ರಾಕ್ಷಸ ಸೇನೆಯನ್ನು ನುಚ್ಚುನೂರು ಮಾಡಿದರು. ಆಗ ಮಹಾಬಾಹುವಾದ ದಶಗ್ರೀವನು ಇಂದ್ರ ನನ್ನೆದುರಿಸಿ ಶರಗಳ ಮಳೆಗರೆದನು. ಘನಘೋರವಾದ ಸಂಗ್ರಾಮವು ಅವರೀರ್ವರಿಗೂ ತೊಡಗಿತು.

ರಾಕ್ಷಸಸೇನೆಯು ತೆರಪಿಲ್ಲದೆ ಹತವಾಗುತ್ತಿರುವುದನ್ನು ಕಂಡು ರಾವಣನು ದೇವಸೇನೆಯ ನಡುವೆ ತನ್ನ ರಥವನ್ನು ನುಗ್ಗಿಸಿದನು. ಅವನ ಪರಾಕ್ರಮದಿಂದ ದೇವಸೇನೆಯು ತಲ್ಲಣಿಸಿತು. ಆಗ ದೇವೇಂದ್ರನು ಅಷ್ಟವಸುಗಳೇ ಮೊದಲಾದ ಯೋಧರೊಡನೆ ಸೇರಿ ಅದ್ಭುತವಾದ ಶೌರ್ಯವನ್ನು ಮೆರೆಸುತ್ತಾ ರಾವಣನಿದ್ದ ಕಡೆಗೆ ಧಾವಿಸಿದನು. ದೇವಸೇನೆಯು ರಾವಣನನ್ನು ಸುತ್ತುಗಟ್ಟಿತು. ಅದನ್ನರಿತು ರಾವಣ ಪುತ್ರನಾದ ಮೇಘನಾದನು ತನ್ನ ಮಾಯಾವಿದ್ಯೆಯಿಂದ ದೇವತೆಗಳನ್ನು ಲೆಕ್ಕಿಸದೆ ಮುನ್ನುಗ್ಗಿ ದೇವೇಂದ್ರನನ್ನು ತರುಬಿದನು. ಮಾಯಾಬಲದಿಂದ ಅದೃಶ್ಯನಾದ ರಾವಣಿಯು ಅಂತರಿಕ್ಷದಲ್ಲಿ ನಿಂತು ಘೋರಶರಗಳಿಂದ ಇಂದ್ರನನ್ನು ಬಾರಿಸತೊಡಗಿ ದನು. ಇಂದ್ರನು ಬಳಲಿ ಬೆಂಡಾದನು. ರಾವಣಿಯು ತನ್ನ ಮಾಯಾಶಕ್ತಿಯಿಂದ ದೇವರಾಜನನ್ನು ಬಂಧಿಸಿ ಎಳೆದುಕೊಂಡು ಹೋದನು. ಇತ್ತಲಾಗಿ ದೇವತೆಗಳೊಡನೆ ಹೋರಾಡುತ್ತಿದ್ದ ರಾವಣನು ಅವರಿಂದ ಪೆಟ್ಟುತಿಂದು ಹಣ್ಣಾದನು. ಅಸ್ತ್ರಗಳ ಆಘಾತದಿಂದ ಜರ್ಜರೀಕೃತಗಾತ್ರನಾದ ತಂದೆಯನ್ನು ನೋಡಿ ಮೇಘನಾದನು ಆಕಾಶದಲ್ಲಿ ನಿಂತು ''ತಂದೆಯೇ, ಲಂಕೆಗೆ ಹೋಗೋಣ ಬಾ. ಸಂಗ್ರಾಮವು ಇನ್ನು ಸಾಕು. ನಮಗೆ ಜಯವಾಯಿತು. ಇಲ್ಲಿ ನೋಡು. ದೇವೇಂದ್ರನನ್ನು ಸೆರೆಹಿಡಿದು

ತಂದಿದ್ದೇನೆ. ಇನ್ನು ಯುದ್ಧದಿಂದ ಪ್ರಯೋಜನವಿಲ್ಲ'' ಎಂದು ಕೂಗಿ ಹೇಳಿದನು. ಮಗನ ನುಡಿಯನ್ನು ಕೇಳಿ ರಾವಣನ ಮನಸ್ಸಿಗೆ ನೆಮ್ಮದಿಯಾಯಿತು. ಅವನು ಯುದ್ಧವನ್ನು ತ್ಯಜಿಸಿ ಲಂಕೆಯ ಕಡೆಗೆ ಹೊರಟನು. ಶೂರಾಗ್ರಣಿಯಾದ ರಾವಣಿಯು ಸೆರೆಯಾಳಾದ ಇಂದ್ರನನ್ನು ರಥದಲ್ಲಿ ಹೇರಿಕೊಂಡು ಲಂಕೆಗೆ ಪ್ರಯಾಣ ಮಾಡಿದನು''.

ಮೇಘನಾದನು ದೇವೇಂದ್ರನನ್ನು ಸೆರೆಹಿಡಿದನೆಂಬ ವೃತ್ತಾಂತವನ್ನು ಕೇಳಿ ಶ್ರೀರಾಮ ಲಕ್ಷ್ಮಣಾದಿಗಳು ಆಶ್ಚರ್ಯ ಚಕಿತರಾದರು. ಆಗ ಅಗಸ್ತ್ಯರು ಹೀಗೆಂದರು : ''ಶ್ರೀರಾಮ, ಮುಂದಿನ ವೃತ್ತಾಂತವನ್ನು ಕೇಳು. ರಾವಣನು ಲಂಕೆಗೆ ಹಿಂದಿರುಗಿ ಆ ಸ್ಥಾನದಲ್ಲಿ ವೈಭವದಿಂದ ಕುಳಿತಿರುವಾಗ ಬ್ರಹ್ಮದೇವನು ಗಗನದಲ್ಲಿಯೇ ನಿಂತು ಹೀಗೆಂದನು : ''ವತ್ಸ–ರಾವಣ, ರಣಭೂಮಿಯಲ್ಲಿ ನಿನ್ನ ಮಗನು ಪ್ರಕಟಿಸಿದ ಸಾಹಸವನ್ನು ಕಂಡು ಮೆಚ್ಚಿದೆನು. ನಿನಗಿಂತಲೂ ಅವನು ಶೂರನೆಂದರೂ ಸಲ್ಲುವುದು. ನಿನ್ನ ಮಗನ ವಿಕ್ರಮಾತಿಶಯವನ್ನು ಕಂಡು ಸಂತುಷ್ಟನಾಗಿದ್ದೇನೆ. ಮೇಘನಾದನು ಇನ್ನುಮೇಲೆ ಇಂದ್ರಜಿತುವೆಂಬ ಹೆಸರಿನಿಂದ ವಿಖ್ಯಾತನಾಗುವನು. ಲಂಕೇಶ್ವರ, ಈಗ ದೇವತೆಗಳೆಲ್ಲರೂ ನಿನಗೆ ಅಧೀನರಾದಂತೆಯೇ ಸರಿ. ಹೀಗಿರುವಾಗ ಇಂದ್ರನೊಬ್ಬ ನನ್ನು ಸೆರೆಯಲ್ಲಿಡುವುದೇಕೆ? ಆತನನ್ನು ಸೆರೆಯಿಂದ ಬಿಡು'' ಎಂದನು. ಆಗ ರಾವಣಸಭೆಯಲ್ಲಿದ್ದ ಮೇಘನಾದನು ''ಹೇ ಬ್ರಹ್ಮದೇವ, ಇಂದ್ರನನ್ನು ಬಿಡ ಬೇಕಾದರೆ, ನಾನು ಮರಣರಹಿತನಾಗಬೇಕೆಂಬ ವರವನ್ನು ಕೇಳಿಕೊಳ್ಳುತ್ತೇನೆ'' ಎಂದನು. ಅದಕ್ಕೆ ಪ್ರಜೇಶ್ವರನಾದ ಬ್ರಹ್ಮನು ''ಈ ಲೋಕದಲ್ಲಿ ಯಾವ ಪ್ರಾಣಿಗೂ ಮರಣವಿಲ್ಲದೆ ಇರಲು ಸಾಧ್ಯವಿಲ್ಲ. ಈ ನಿಯಮಕ್ಕೆ ವಿರುದ್ಧವಾದ ವರವನ್ನು ಕೇಳಬೇಡ'' ಎಂದನು. ಆಗ ಇಂದ್ರಜಿತುವು ''ಹಾಗಾದರೆ ಇಂದ್ರನನ್ನು ಸೆರೆಯಿಂದ ಬಿಡಲು ನಾನು ಹಾಕುವ ನಿಯಮ ಇದು. ನಾನು ಜಯಾಪೇಕ್ಷೆಯಿಂದ ಸಂಗ್ರಾಮ ಭೂಮಿಗೆ ಇಳಿಯುವ ಮುನ್ನ ಮಂತ್ರಪೂರ್ವಕವಾಗಿ ಅಗ್ನಿಗೆ ಹವಿಸ್ಸುಗಳನ್ನರ್ಪಿಸು ತ್ತೇನೆ. ಆಗ ಅಶ್ವಯುಕ್ತವಾದ ದಿವ್ಯರಥವು ನನಗೋಸ್ಕರ ಅಗ್ನಿಕುಂಡದಿಂದ ಎದ್ದು ಬರಬೇಕು! ಆ ರಥದಲ್ಲಿ ಕುಳಿತಿರುವಾಗ ಸರ್ವರಿಗೂ ನಾನು ಅವಧ್ಯನಾಗಬೇಕು. ಪಿತಾಮಹ, ಇದು ನಾನು ಕೇಳುವ ವರ'' ಎಂದನು. ಆಗ ಬ್ರಹ್ಮನು ''ಎಲೈ ವೀರನೆ, ನಿನ್ನ ಪರಾಕ್ರಮಕ್ಕೆ ಮೆಚ್ಚಿದ್ದೇನೆ. ಯಜ್ಞವು ಸಮಾಪ್ತವಾದ ಮೇಲೆ ಮಾತ್ರ ನಿನ್ನ ಅಪೇಕ್ಷೆಯಿಂದ ದಿವ್ಯರಥವು ದೊರೆಯುವುದು'' ಎಂದು ಹೇಳಿ ಅದೃಶ್ಯನಾದನು. ಅನಂತರ ಇಂದ್ರಜಿತುವು ದೇವೇಂದ್ರನನ್ನು ಸೆರೆಯಿಂದ ಬಿಟ್ಟುಬಿಟ್ಟನು. ಇಂದ್ರನು ದೀನನಾಗಿ ಹಿಂದಿರುಗಿ ಬಂದು ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮನನ್ನು ಸಂದರ್ಶಿಸಿದನು.

ತನಗೆ ಅವಮಾನಕರವಾದ ಈ ಸೋಲು ಏಕೆ ಸಂಭವಿಸಿತೆಂದು ಕೇಳಲಾಗಿ ಪಿತಾಮಹನು ಇಂತೆಂದನು. ''ದೇವೇಂದ್ರ, ನೀನು ತ್ರಿಲೋಕಾಧಿಪತಿಯಾಗಿದ್ದೀಯೆ. ಇಂದ್ರಿಯವನ್ನು ನಿಗ್ರಹಿಸಲಾರದೆ ಪಾಪಕರ್ಮವನ್ನು ಮಾಡಿದ್ದೀಯೆ. ಅದರ ಫಲ ಇದು'' ಎಂದನು. ತಾನು ಮಾಡಿದ ಪಾಪಕರ್ಮ ಯಾವುದೆಂದು ಅವನು ಚಿಂತಾಗ್ರಸ್ತನಾದಾಗ ಬ್ರಹ್ಮನು ಇಂತೆಂದನು. ''ಇಂದ್ರ, ಹಿಂದಿನದನ್ನು ನೆನಪಿಸಿಕೊ. ತೇಜೋನಿಧಿಯಾದ ಗೌತಮ ಮುನಿಯ ಆಶ್ರಮಕ್ಕೆ ಹೋಗಿ ಅಗ್ನಿಶಿಖೆಯಂತೆ ತೇಜಸ್ವಿನಿಯಾಗಿದ್ದ ಅಹಲ್ಯೆಯನ್ನು ನೋಡಿ ನೀನು ಕಾಮಾರ್ತನಾದೆ. ಗೌತಮ ಮಹರ್ಷಿಯ ಪತ್ನಿಯಾದ ಆಕೆಯ ಶೀಲವನ್ನು ವಂಚನೆಯಿಂದ ಕೆಡಿಸಿರುವೆ. ಸ್ವರ್ಗೇಶ್ವರನಾದ ನೀನು ಈ ಜಾರತನವನ್ನು ನಡೆಸಿದ್ದರಿಂದ ಕ್ರುದ್ಧನಾದ ಗೌತಮ ಮುನಿಯು ನಿನ್ನನ್ನು ಶಪಿಸಿದನು. ಅಲ್ಲಿಂದ ನಿನ್ನ ಅವನತಿ ಆರಂಭವಾಯಿತು. ಆ ಮುನಿಯು ''ಎಲೈ ವಾಸವ, ನೀನು ಧರ್ಮಕ್ಕೆ ಅಂಜದೆ ನನ್ನ ಪತ್ನಿಯನ್ನು ಅತಿಕ್ರಮಿಸಿದೆಯಾದ್ದರಿಂದ ನೀನು ಶತ್ರುಗಳಿಗೆ ಸೆರೆಯಾಗಿ ನರಳು. ತ್ರಿಲೋಕೇಶ್ವರ ನೆಂಬ ಗರ್ವದಿಂದ ನೀನು ಈ ಪಾಪಕೃತ್ಯವನ್ನು ಮಾಡಲು ಹೇಸಲಿಲ್ಲ. ಆ ತ್ರಿಲೋಕಾಧಿಪತ್ಯವು ಕೆಲವು ಕಾಲವಾದರೂ ನಿನ್ನಿಂದ ಕಳಚುವುದು. ಎಲೈ ಇಂದ್ರ, ಧರ್ಮರಕ್ಷಕನಾದ ನೀನೇ ಇಂತಹ ದುಷ್ಕೃತ್ಯವನ್ನು ನಡೆಸಿದ್ದರಿಂದ ಇದರ ಫಲವನ್ನು ನೀನು ಅನುಭವಿಸಲೇ ಬೇಕು'' ಎಂದು ಶಪಿಸಿದ್ದಾನೆ. ದೇವೇಂದ್ರ, ನೀನು ವೈಷ್ಣವಯಾಗವನ್ನು ಮಾಡಿ ಪವಿತ್ರನಾಗು. ನಿನ್ನ ಮಗನಾದ ಜಯಂತನು ಯುದ್ಧದಲ್ಲಿ ಮೃತನಾಗಿಲ್ಲ. ಚಿಂತಿಸಬೇಡ. ಅವನ ಮಾತಾಮಹನಾದ ಪುಲೋಮನು ಆತನನ್ನು ರಕ್ಷಿಸಿದ್ದಾನೆ'' ಎಂದನು. ರಾಘವ, ಇಂದ್ರಜಿತುವಿನ ಪರಾಕ್ರಮವು ಇಂತಹದು. ದೇವೇಂದ್ರನೇ ಅವನಿಗೆ ಸೋತುಹೋದನು'' ಎಂದು ಅಗಸ್ತ್ಯರು ಹೇಳಿದರು. ಅದನ್ನು ಕೇಳಿ ಶ್ರೀರಾಮ ಲಕ್ಷ್ಮಣರು 'ಅಹೋ ಅದ್ಭುತ' ಎಂದು ಉದ್ಗರಿಸಿದರು.

೮

ಕಾರ್ತವೀರ್ಯನು ರಾವಣನನ್ನು ಸೆರೆಯಲ್ಲಿಡುವುದು. ಪುಲಸ್ತ್ಯ ಮುನಿಗಳಿಂದ ರಾವಣನ ವಿಮೋಚನೆ ವಾಲಿ–ರಾವಣರ ಸಖ್ಯ

ಅನಂತರ ವಿಸ್ಮಿತನಾದ ಶ್ರೀರಾಮನು ಅಗಸ್ತ್ಯ ಮುನಿಗಳಿಗೆ ನಮಸ್ಕರಿಸಿ, ''ಮಹರ್ಷಿಗಳೆ, ಕ್ರೂರನಾದ ಆ ರಾಕ್ಷಸನು ಈ ಪ್ರಕಾರವಾಗಿ ಜನರನ್ನು ಪೀಡಿಸುತ್ತಾ ಅಲೆಯುತ್ತಿದ್ದನಷ್ಟೆ. ಅವನನ್ನೆದುರಿಸಬಲ್ಲ ಸಮರ್ಥನಾದ ಒಬ್ಬ ಕ್ಷತ್ರಿಯನೂ ಆಗ ಇರಲಿಲ್ಲವೆ? ಈ ಜಗತ್ತು ಶೂನ್ಯವಾಗಿತ್ತೆ''? ಎಂದು ಕೇಳಿದನು. ಅದನ್ನು ಕೇಳಿ

ಅಗಸ್ತ್ಯಮುನಿಗಳು ಮುಗುಳ್ನಗೆ ಬೀರುತ್ತಾ ಇಂತೆಂದರು : ''ಶ್ರೀರಾಮ, ಈ ಪೃಥ್ವಿಯು ಬಂಜೆಯಲ್ಲ. ಮುಂದಿನ ವೃತ್ತಾಂತವನ್ನು ಕೇಳು. ಆ ಸಮಯದಲ್ಲಿ ಮಾಹಿಷ್ಮತೀ ನಗರದಲ್ಲಿ ಕಾರ್ತವೀರ್ಯಾರ್ಜುನನೆಂಬ ವೀರನು ಅಪ್ರತಿಮ ತೇಜಸ್ವಿಯಾಗಿ ವಿರಾಜಿಸುತ್ತಿದ್ದನು. ಒಮ್ಮೆ ಆ ರಾಜನು ಜಲಕೇಳಿಯನ್ನಾಡಲು ತನ್ನ ಪತ್ನಿಯರೊಡನೆ ನರ್ಮದಾನದಿಗೆ ಹೋಗಿದ್ದನು. ಆ ದಿನವೇ ರಾವಣನು ಮಾಹಿಷ್ಮತಿಗೆ ಬಂದು ಅರ್ಜುನನೆಲ್ಲಿರುವನೆಂದು ವಿಚಾರಿಸಿದನು. ಚಾಣಾಕ್ಷರಾದ ಅಮಾತ್ಯರು ''ನಮ್ಮೊಡೆಯನು ನಗರದಲ್ಲಿಲ್ಲ. ಎಲ್ಲಿಗೋ ಹೋಗಿದ್ದಾನೆ'' ಎಂದಿಷ್ಟೇ ಹೇಳಿದರು. ಆಗ ರಾವಣನು ಅಲೆಯುತ್ತ ವಿಂಧ್ಯ ಶೈಲಕ್ಕೆ ಹೋದನು. ಅತ್ಯುನ್ನತವಾದ ಆ ಪರ್ವತದ ತಪ್ಪಲಿನಲ್ಲಿ ನರ್ಮದಾನದಿಯು ಹರಿಯುವೆಡೆಗೆ ರಾವಣನು ಬಂದನು. ಅವನೊಡನೆ ಪ್ರಹಸ್ತ, ಮಹೋದರ, ಧೂಮ್ರಾಕ್ಷ ಮೊದಲಾದ ಯೋಧರೂ ಆಗಮಿಸಿದ್ದರು. ರಾವಣನ ಇಚ್ಛೆಯಂತೆ ಅವರೆಲ್ಲರೂ ನರ್ಮದಾ ನದಿಯಲ್ಲಿ ಸ್ನಾನ ಮಾಡಿದರು. ದಶಗ್ರೀವನು ಸ್ನಾನಮಾಡಿ, ಶುಭ್ರವಸ್ತ್ರವನ್ನು ಧರಿಸಿ ಶಿವಪೂಜೆಯನ್ನು ಮಾಡಬೇಕೆಂದು ಸಂಕಲ್ಪಿಸಿದನು. ನದೀತೀರದಲ್ಲಿ ಮರಳಿನ ವೇದಿಕೆಯನ್ನು ರಚಿಸಿ, ತಾನು ತಂದಿದ್ದ ಸುವರ್ಣಮಯವಾದ ಶಿವಲಿಂಗವನ್ನು ಅದರಲ್ಲಿ ಸ್ಥಾಪಿಸಿ ಸಾಮಗಾನ ದಿಂದ ಪರಮೇಶ್ವರನನ್ನು ಸ್ತುತಿಸಿದನು. ಅವನ ಪರಿವಾರದವರು ಪೂಜೆಗೆ ಬೇಕಾಗುವಷ್ಟು ಹೂಗಳನ್ನೂ ಬಿಲ್ವಪತ್ರೆಗಳನ್ನೂ ತಂದಿರಿಸಿದರು. ರಾವಣನು ವಿಧಿವತ್ತಾಗಿ ಆ ಶಿವಲಿಂಗವನ್ನು ಪೂಜಿಸಿ ಭಕ್ತಿಯಿಂದ ಸ್ತುತಿಸುತ್ತಾ ನರ್ತಿಸತೊಡಗಿದನು. ಆ ಸಮಯದಲ್ಲಿ ನರ್ಮದಾ ನದಿಯ ಕೆಳದಿಕ್ಕಿನಲ್ಲಿ ಕಾರ್ತವೀರ್ಯನು ಜಲಕ್ರೀಡೆಗಾಗಿ ಆಗಮಿಸಿದ್ದನು. ಅವನು ತನ್ನ ಸಾವಿರ ತೋಳುಗಳ ಬಲವನ್ನು ಪರೀಕ್ಷಿಸಬೇಕೆಂದು ಒಮ್ಮೆ ಆ ನದೀ ಪ್ರವಾಹವನ್ನು ಕೈಗಳಿಂದ ಅಡ್ಡಗಟ್ಟಿದನು. ರಭಸದಿಂದ ಹರಿಯುತ್ತಿದ್ದ ನದಿಯ ವೇಗವು ನಿಂತಿತು. ಕಾರ್ತವೀರ್ಯನ ಬಾಹುಗಳೇ ಅಡ್ಡಗಟ್ಟೆಯಾದವು. ನದೀಪ್ರವಾಹವು ಹಿಂದಕ್ಕೆ ನುಗ್ಗಿ ಮೇಲೇರಿ ರಾವಣನು ಪೂಜಿಸಿದ ಹೂವು ಬಿಲ್ವಾದಿಗಳನ್ನು ತೇಲಿಸಿಬಿಟ್ಟವು. ಅದನ್ನು ನೋಡುತ್ತ ನಿಂತಿದ್ದ ದಶಗ್ರೀವನು ಗೊಂಕರಿಸಿ ಶುಕ ಸಾರಣರನ್ನು ಕರೆದು ''ನದಿಯು ಏಕೆ ಹಿಮ್ಮುಖವಾಗಿ ಹೀಗೆ ನುಗ್ಗಿತೆಂಬುದನ್ನು ತಿಳಿದು ಬನ್ನಿರಿ'' ಎಂದು ಆಜ್ಞಾಪಿಸಿದನು. ಅವನ ಆಜ್ಞೆಯಂತೆ ಆ ನಿಶಾಚರರು ನಭೋಮಾರ್ಗವನ್ನಡರಿ ಅರ್ಧ ಯೋಜನ ದೂರ ಪಶ್ಚಿಮಾಭಿಮುಖ ವಾಗಿ ನಡೆದರು. ಆಗ ನದೀಜಲದಲ್ಲಿ ಕ್ರೀಡಿಸುತ್ತ ಉನ್ನತಾಕಾರನಾಗಿದ್ದ ಒಬ್ಬ ಪುರುಷನನ್ನು ಕಂಡರು. ಆ ವೀರನು ತನ್ನ ಬಾಹುಗಳಿಂದ ನದಿಯುನ್ನು ಅಡ್ಡಗಟ್ಟಿರುವುದು ಅವರಿಗೆ ಕಾಣಿಸಿತು. ಶುಕ ಸಾರಣರು ಅದ್ಭುತವಾದ ಆ ದೃಶ್ಯವನ್ನು

ನೋಡಿ ಹಿಂದಿರುಗಿ ಬಂದು ರಾವಣನಿಗೆ ಅರಿಕೆಮಾಡಿದರು : ''ರಾಕ್ಷಸೇಶ್ವರ, ಒಬ್ಬಾನೊಬ್ಬ ಉನ್ನತಾಕಾರನಾದ ಪುರುಷನು ನದಿ ಪ್ರವಾಹವನ್ನು ತನ್ನ ಬಾಹುಗಳಿಂದಲೇ ಅಡ್ಡಗಟ್ಟಿ ಸ್ತ್ರೀಯರೊಡನೆ ಜಲಕೇಳಿಯನ್ನು ಆಡುತ್ತಿದ್ದಾನೆ. ಆದ್ದರಿಂದಲೇ ನದಿಯು ಹಿಮ್ಮುಖವಾಗಿ ನುಗ್ಗಿ ಬಂದಿದೆ'' ಎಂದರು. ಅದನ್ನು ಕೇಳಿ ರಾವಣನು ''ಓಹೋ ಅವನೇ ಅರ್ಜುನ!'' ಎಂದು ಉದ್ಗರಿಸಿ ಯುದ್ಧಲಾಲಸೆಯಿಂದ ಅಲ್ಲಿಗೆ ಹೊರಟೇಬಿಟ್ಟನು. ಪ್ರಹಸ್ತಾದಿಗಳೂ ಜೊತೆಗೆ ತೆರಳಿದರು. ಹೆಣ್ಣಾನೆಗಳೊಡನೆ ಮೆರೆಯುವ ಸಲಗನಂತೆ ವನಿತೆಯರೊಡಗೂಡಿ ವಿಹರಿಸುತ್ತಿದ್ದ ಕಾರ್ತವೀರ್ಯನನ್ನು ನೋಡಿ ರಾವಣನ ನೇತ್ರಗಳು ರೋಷರಕ್ತವಾದವು. ಆ ಉದ್ಧತನು ಕಾರ್ತವೀರ್ಯನ ಸಚಿವರನ್ನು ಕರೆದು ದಿಟ್ಟವಾದ ಮಾತುಗಳಿಂದ ''ಎಲೈ ಸಚಿವರೆ, ರಾವಣನೆಂಬ ರಾಕ್ಷಸರಾಜನು ಯುದ್ಧಾಪೇಕ್ಷೆಯಿಂದ ಬಂದಿರುವನೆಂದು ನಿಮ್ಮ ರಾಜನಿಗೆ ತಿಳಿಸಿರಿ'' ಎಂದನು. ಆ ಸಚಿವರು ಆಯುಧ ಧಾರಿಗಳಾಗಿ ಎದ್ದು ನಿಂತು, ''ಭಲೆ ರಾವಣ, ಭಲೆ! ಯುದ್ಧಸಮಯವು ಯಾವುದೆಂಬುದನ್ನು ಚೆನ್ನಾಗಿ ಬಲ್ಲೆ ನೀನು! ಅಂಗನೆಯರೊಡನೆ ಸಂತೋಷದಿಂದ ವಿಹರಿಸುತ್ತಿರುವ ನಮ್ಮ ಮಹಾರಾಜನೊಡನೆ ಯುದ್ಧಮಾಡಲು ಬಯಸುವೆಯಲ್ಲವೆ? ಮೂರ್ಖ, ಹೆಂಗಸರೆದುರಿಗೆ ಪರಾಕ್ರಮವನ್ನು ತೋರಿಸಲು ಬಂದೆಯಾ?'' ಎಂದು ಹಂಗಿಸಿದರು. ಆಗ ರಾವಣನ ಪರಿವಾರದವರಿಗೂ ಕಾರ್ತವೀರ್ಯನ ಸಚಿವರಿಗೂ ಹೊಡೆದಾಟವೇ ನಡೆಯಿತು. ಈ ಹೊಡೆದಾಟದ ಅಬ್ಬರವನ್ನು ಕೇಳಿ ಕಾರ್ತವೀರ್ಯನು ಇದೇನಿರಬಹುದೆಂದು ಆ ದಿಕ್ಕಿಗೆ ನೋಡುವಾಗ ಆ ಸ್ಥಳವನ್ನು ಕಾಯುತ್ತಿದ್ದ ದ್ವಾರಪಾಲಕರು ಹೋಗಿ ರಾವಣನು ಯುದ್ಧಕ್ಕೆ ಬಂದಿರುವನೆಂದು ತಿಳಿಸಿದರು. ಒಡನೆಯೇ ಕಾರ್ತವೀರ್ಯನು ಜಲಕೇಳಿಯಾಡುತ್ತಿದ್ದ ಸ್ತ್ರೀಯರಿಗೆ 'ಹೆದರಬೇಡಿರಿ' ಎಂದು ತಿಳಿಸಿ ನದಿಯಿಂದ ಮೇಲೆದ್ದು ಬಂದನು. ರೋಷದಿಂದ ಅವನ ಕಣ್ಣುಗಳು ಕೆಂಪೇರಿದವು. ಒಣಗಿದ ವಸ್ತ್ರಗಳನ್ನು ಧರಿಸಿ ಕವಚಧಾರಿಯಾದ ಕಾರ್ತವೀರ್ಯನು ತನ್ನ ಮಹಾಗದೆಯನ್ನು ತಿರುಗಿಸುತ್ತಾ ನುಗ್ಗಿಹೋಗಿ ರಾಕ್ಷಸರನ್ನು ತರುಬಿದ್ದನು. ಅದನ್ನು ಕಂಡು ಶುಕಸಾರಣಾದಿಗಳು ದೂರಸರಿದರು. ಅನಂತರ ದಶಗ್ರೀವನು ಅರ್ಜುನನ್ನೆದುರಿಸಿ ನುಗ್ಗಿಹೋದನು. ಕಾಕುತ್ಸ್ಥ, ಸಹಸ್ರಬಾಹುವಿಗೂ ವಿಂಶತಿಬಾಹುವಿಗೂ ಯುದ್ಧವು ಮಸಗಿತು. ಅವರೀರ್ವರೂ ಮೇಲೆ ನುಗ್ಗಿ ಬರುವ ಮಹಾಸಾಗರಗಳೋ ಸಿಡಿದೆರಗುವ ಪರ್ವತಗಳೋ ಕಿಡಿಗೆದರಿದ ಕಾಲಾಗ್ನಿಗಳೋ ಗುಡುಗುವ ಮೋಡಗಳೋ ಗರ್ಜಿಸುವ ಸಿಂಹಗಳೋ–ಎಂಬಂತೆ ಗದೆಗಳಿಂದ ಬಡಿದಾಡಿದರು. ಅವರೀರ್ವರ ಗದಾ ಪ್ರಹಾರಗಳಿಂದ ಧಡಧಡಿಲ್, ಛಟಛಟೀಲ್–ಎಂಬ ಭೀಕರ ಶಬ್ದಗಳು

ದಶದಿಕ್ಕುಗಳಲ್ಲಿಯೂ ಮಾರ್ದನಿಗೊಂಡವು. ಕಡೆಗೆ ಅರ್ಜುನನು ರುಷ್ಟನಾಗಿ ತನ್ನ ಸರ್ವಬಲವನ್ನೂ ವಿನಿಯೋಗಿಸಿ ರಾವಣನ ಎದೆಯ ಮೇಲೆ ಗದೆಯನ್ನಪ್ಪಳಿಸಿದನು. ರಾಘವ, ಬ್ರಹ್ಮನ ವರಬಲವು ಮಾತ್ರವೇ ರಾವಣನ ಎದೆಯನ್ನು ರಕ್ಷಿಸಿತು. ರಾವಣನು ಆ ಪ್ರಹಾರದಿಂದ ನೊಂದು ಹಿಂದಕ್ಕೆ ಸರಿದು 'ಉಸ್' ಎಂದು ಕುಳಿತುಬಿಟ್ಟನು. ಒಡನೆಯೇ ಕಾರ್ತವೀರ್ಯನು ರಭಸದಿಂದ ನುಗ್ಗಿಹೋಗಿ ತನ್ನ ಎಲ್ಲ ಬಾಹುಗಳಿಂದಲೂ ರಾವಣನನ್ನು ಬಂಧಿಸಿ ಹಿಡಿದು ಪ್ರಬಲವಾದ ಸರಪಳಿಗಳಿಂದ ಹೆಡೆಮುರಿಗೆ ಕಟ್ಟಿದನು. ದೇವತೆಗಳು ಆನಂದದಿಂದ ಕಾರ್ತವೀರ್ಯನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ಆಗ ಪ್ರಹಸ್ತನೇ ಮೊದಲಾದ ರಾಕ್ಷಸ ಯೋಧರು, ಕೂಗುತ್ತ ಕಾರ್ತವೀರ್ಯನನ್ನು ಮುತ್ತಿದರು. ವೀರಾಗ್ರಣಿಯಾದ ಕಾರ್ತವೀರ್ಯನು ಆ ರಾಕ್ಷಸರನ್ನು ಬಡಿದೋಡಿಸಿ ರಾವಣನನ್ನು ಅಮುಕಿ ಹಿಡಿದು ತನ್ನ ಪರಿವಾರ ದೊಂದಿಗೆ ಮಾಹಿಷ್ಮತೀನಗರವನ್ನು ಪ್ರವೇಶಿಸಿದನು. ರಾವಣನನ್ನು ಸೆರೆಮನೆಗೆ ನೂಕಿ ಬಾಗಿಲುಗಳನ್ನು ಭದ್ರಪಡಿಸಿ ದೊಡ್ಡ ಸೇನೆಯ ಕಾವಲನ್ನಿಟ್ಟನು.

''ಶ್ರೀರಾಮ, ಬಿರುಗಾಳಿಯನ್ನು ಸೆರೆಹಿಡಿದಂತೆ ರಾವಣನನ್ನು ಕಾರ್ತವೀರ್ಯನು ಸೆರೆಹಿಡಿದಿರುವನೆಂಬ ವಾರ್ತೆಯು ಪುಲಸ್ತ್ಯ ಮಹರ್ಷಿಗಳಿಗೆ ತಿಳಿಯಿತು. ಅವರು ರಾವಣನ ಪಿತಾಮಹರು. ಪೌತ್ರ ವಾತ್ಸಲ್ಯದಿಂದ ಆ ಮುನಿಗಳಿಗೆ ಅನುಕಂಪ ವುಂಟಾಗಿ ಹೃದಯವು ಕಲಕಿತು. ಅವರು ನೇರವಾಗಿ ಮಾಹಿಷ್ಮತೀನಗರಕ್ಕೆ ಬಂದರು. ಕಾರ್ತವೀರ್ಯನಿಗೆ ಆ ವಿಷಯವು ತಿಳಿಯಿತು. ಕರ್ಮಠನೂ, ದೇವ ಬ್ರಾಹ್ಮಣ ಭಕ್ತನೂ ಆದ ಕಾರ್ತವೀರ್ಯನು ಆ ತಪಸ್ವಿಗಳನ್ನು ಸ್ವಾಗತಿಸಿ ಅರಮನೆಗೆ ಕರೆತಂದು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಉಪಚರಿಸಿದನು. ಭಕ್ತಿಯಿಂದ ಪುಲಸ್ತ್ಯ ಮುನಿಗಳಿಗೆ ನಮಸ್ಕರಿಸಿ ''ಬ್ರಹ್ಮರ್ಷಿಗಳೆ, ತಮ್ಮ ದಿವ್ಯಪಾದಗಳಿಗೆ ವಂದಿಸುವ ಭಾಗ್ಯ ಈ ದಿನ ನನಗೆ ದೊರೆಯಿತು. ಪೂಜ್ಯರೆ, ನನ್ನಿಂದೇನಾಗಬೇಕು? ಅಪ್ಪಣೆಯಾಗಲಿ. ಈ ರಾಜ್ಯ ನಾನು ನನ್ನ ಮಕ್ಕಳು ಎಲ್ಲರೂ ತಮ್ಮವರು'' ಎಂದು ನಿವೇದಿಸಿದನು. ಆಗ ಪುಲಸ್ತ್ಯಮುನಿಗಳು ''ನರೇಂದ್ರ, ನಿನ್ನ ಪರಾಕ್ರಮಕ್ಕೆ ಎಣೆಯಿಲ್ಲ. ಅಜೇಯನೂ ರಣಮಲ್ಲನೂ ಆದ ನನ್ನ ಮೊಮ್ಮಗನನ್ನು ನೀನು ಸೆರೆಹಿಡಿದು ಬಂಧಿಸಿಬಿಟ್ಟೆಯಲ್ಲ? ನಿನ್ನ ಹೆಸರು ದಿಗಂತ ವಿಶ್ರಾಂತವಾಯಿತು. ಹೈಹಯೇಶ್ವರ, ಈಗ ನನ್ನ ಪ್ರಾರ್ಥನೆಯನ್ನು ಮನ್ನಿಸುವೆಯಾದರೆ ನನ್ನ ಪೌತ್ರನಾದ ರಾವಣನನ್ನು ಸೆರೆಯಿಂದ ಬಿಡು'' ಎಂದರು. ಆಗ, ಶ್ರೀರಾಮ, ಕಾರ್ತವೀರ್ಯನು ಪ್ರತಿಯಾಗಿ ಒಂದು ಮಾತನ್ನೂ ಆಡದೆ ಪುಲಸ್ತ್ಯರ ಆಜ್ಞೆಯನ್ನು ಶಿರಸಾವಹಿಸಿ ಸಂತೋಷದಿಂದಲೇ ರಾವಣನನ್ನು ಬಿಡುಗಡೆ ಮಾಡಿದನು. ಅಲ್ಲದೆ ದಿವ್ಯವಾದ ಪುಷ್ಪಾಭರಣಗಳಿಂದ ರಾವಣನನ್ನು ಸತ್ಕರಿಸಿದನು.

ಇನ್ನು ಮುಂದೆ ಒಬ್ಬರನೊಬ್ಬರು ಹಿಂಸಿಸಬಾರದೆಂದು ಅಗ್ನಿಸಾಕ್ಷಿಕವಾಗಿ ಸಖ್ಯವನ್ನು ಮಾಡಿಕೊಂಡನು. ಅನಂತರ ರಾವಣನೊಡನೆ ಕಾರ್ತವೀರ್ಯನು ಬ್ರಹ್ಮಪುತ್ರರಾದ ಪುಲಸ್ತ್ಯ ಮುನಿಗಳಿಗೆ ನಮಸ್ಕರಿಸಿ ''ಪೂಜ್ಯರೆ, ತಮ್ಮ ಆಜ್ಞೆಯನ್ನು ಪಾಲಿಸಿದ್ದೇನೆ'' ಎಂದು ನಿವೇದಿಸಿದನು–ರಾವಣನು ಲಜ್ಜೆಯಿಂದಲೇ ಕಾರ್ತವೀರ್ಯನೊಡನೆ ಸ್ನೇಹದ ಮಾತುಗಳನ್ನಾಡಿ, ಪುಲಸ್ತ್ಯರಿಗೆ ನಮಸ್ಕರಿಸಿ ಹೊರಟುಹೋದನು. ಪುಲಸ್ತ್ಯ ಮಹರ್ಷಿಗಳು ಹೀಗೆ ರಾವಣನನ್ನು ಬಿಡಿಸಿ ಬ್ರಹ್ಮಲೋಕಕ್ಕೆ ತೆರಳಿದರು. ಕಾರ್ತವೀರ್ಯನು ಸಮಾಧಾನದಿಂದಲೇ ಅರಮನೆಯೊಳಗೆ ಹೋದನು. ರಾಘವ, ಬಲೋದ್ಧತನಾದ ರಾವಣನು ಕಾರ್ತವೀರ್ಯನಿಂದ ಪರಾಜಿತನಾಗಿ ಸೆರೆಹಿಡಿಯಲ್ಪಟ್ಟನು. ಪುಲಸ್ತ್ಯರು ಬಂದು ಅವನನ್ನು ಬಿಡಿಸಬೇಕಾಯಿತು. ಎಂತಹ ಬಲಶಾಲಿಯಾದರೂ ಅವರಿಗಿಂತ ಬಲಿಷ್ಠರು ಲೋಕದಲ್ಲಿ ಇದ್ದೇ ಇರುತ್ತಾರೆ. ಶ್ರೇಯಸ್ಸನ್ನು ಬಯಸತಕ್ಕವನು ಎಂದಿಗೂ ಇತರರನ್ನು ಅವಮಾನ ಪಡಿಸಕೂಡದು. ರಘುನಂದನ, ಆದರೇನು? ರಾವಣನು ಮಾತ್ರ ತನ್ನ ಸೊಕ್ಕನ್ನು ಬಿಡಲಿಲ್ಲ. ರಾಜರೊಡನೆ ಹೊಡೆದಾಡುತ್ತಾ ಹಿಂಸಾಕಾರ್ಯದಲ್ಲಿ ನಿರತನಾಗಿಯೇ ಇದ್ದನು.

ಅಗಸ್ತ್ಯರು ಹೇಳಿದರು–''ರಾಘವ ಕಾರ್ತವೀರ್ಯಾರ್ಜುನನ ಸೆರೆಮನೆಯಿಂದ ಮುಕ್ತನಾದ ಮೇಲೆ ರಾವಣನು ಕದನಕುತೂಹಲದಿಂದ ಅಲೆಯುತ್ತಲೇ ಇದ್ದನು. ಹೀಗಿರಲು ವಾಲಿಪಾಲಿತವಾದ ಕಿಷ್ಕಿಂಧಾನಗರಕ್ಕೆ ಹೋಗಿ ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸಿದನು. ಆಗ ತಾರನೆಂಬ ವಾನರೋತ್ತಮನು ಬಂದು ''ರಾಕ್ಷಸೇಂದ್ರ, ನಮ್ಮ ರಾಜನಾದ ವಾಲಿಯು ಎಲ್ಲಿಯೋ ಹೊರಗಡೆ ಹೋಗಿದ್ದಾನೆ. ಇನ್ನು ಇಲ್ಲಿರುವ ವಾನರರಿಗೆ ನಿನ್ನನ್ನೆದುರಿಸುವ ಸಾಮರ್ಥ್ಯವೆಲ್ಲಿದೆ? ಬಹುಶಃ ಈಗ ವಾಲಿಯು ಸಮುದ್ರಕ್ಕೆ ಹೋಗಿ ಸಂಧ್ಯಾವಂದನೆಯನ್ನು ಆಚರಿಸುತ್ತಿರಬಹುದು. ಇನ್ನು ಸ್ವಲ್ಪಹೊತ್ತಿನಲ್ಲಿ ಅವನು ಬಂದು ಬಿಡುವನು. ಅಯ್ಯಾ ರಾವಣ, ನೀನು ಅಮೃತವನ್ನು ಕುಡಿದು ಬಂದಿದ್ದೀಯಾ? ನೀನು ವಾಲಿಯನ್ನು ಎದುರಿಸಬಲ್ಲೆಯಾ? ಬೇಗನೆ ಸಾಯಬೇಕೆಂದು ತ್ವರೆಪಡುವುದಾದರೆ ದಕ್ಷಿಣ ಸಮುದ್ರದ ಬಳಿಗೆ ಹೋಗು ! ಅಲ್ಲಿ ವಾಲಿಯನ್ನು ನೋಡಬಹುದು'' ಎಂದು ಹೇಳಿದನು. ಆ ಮಾತನ್ನು ಕೇಳಿದ ರಾವಣನು ತಾರನನ್ನು ಧಿಕ್ಕರಿಸಿ ಪುಷ್ಪಕ ವಿಮಾನವನ್ನೇರಿ ನೇರವಾಗಿ ದಕ್ಷಿಣ ಸಾಗರಕ್ಕೆ ಬಂದನು. ಅಲ್ಲಿ ಭಾಸ್ಕರನಂತೆ ಭಾಸುರನಾಗಿದ್ದ ವಾಲಿಯು ಸುವರ್ಣ ಪರ್ವತದಂತೆ ಬೆಳಗುತ್ತ ಸಂಧ್ಯೋಪಾಸನೆಯಲ್ಲಿ ನಿರತನಾಗಿದ್ದನು. ಅವನನ್ನು ನೋಡಿ ಅಂಜನಗಿರಿಯಂತೆ ಕಪ್ಪಾಗಿದ್ದ ರಾವಣನು ಪುಷ್ಪಕದಿಂದ ಇಳಿದು ವಾಲಿಯನ್ನು ಬಂಧಿಸಬೇಕೆಂದು

ಶಬ್ದವಾಗದಂತೆ ಹೆಜ್ಜೆಯಿಡುತ್ತ ವಾಲಿಯ ಹಿಂದುಗಡೆ ಹೋದನು. ವಾಲಿಯು ರಾವಣನನ್ನು ಓರೆಗಣ್ಣಿನಿಂದ ವೀಕ್ಷಿಸಿ ಅವನ ದುರುದ್ದೇಶವೇನೆಂಬುದನ್ನು ತಿಳಿದುಕೊಂಡನು. ಅವನು ಕಿಂಚಿತ್ತೂ ವಿಚಲಿತನಾಗಲಿಲ್ಲ. ಮೊಲವನ್ನು ನೋಡಿದ ಸಿಂಹವಾಗಲಿ, ಹಾವನ್ನು ನೋಡಿದ ಗರುಡನಾಗಲಿ, ದಿಗಿಲು ಪಡುವುದುಂಟೆ? ಆತನು ವೇದೋಕ್ತ ಮಂತ್ರಗಳನ್ನು ಪಠಿಸುತ್ತ ನಿಶ್ಚಲನಾಗಿ ಕುಳಿತನು. ರಾವಣನು ಕೈಗೆ ನಿಲುಕುವಷ್ಟು ಹಿಂದುಗಡೆ ಬಂದನೆಂಬುದು ಹೆಜ್ಜೆಯ ಸಪ್ಪಳದಿಂದ ವಾಲಿಗೆ ತಿಳಿಯಿತು. ಒಡನೆಯೇ ಅವನು ಹಿಂದಿರುಗಿ ನೋಡದೆ ಗಪ್ಪನೆ ಕೈಗಳನ್ನು ನೀಡಿ ಗರುಡನು ಸರ್ಪವನ್ನು ಹಿಡಿಯುವಂತೆ ಹಿಡಿದು ಬಗಲಲ್ಲಿ ಅವಚಿಕೊಂಡು ಆಕಾಶಕ್ಕೆ ನೆಗೆದನು. ದಶಗ್ರೀವನು ದಿಗ್ಭ್ರಾಂತನಾಗಿ ವಾಲಿಯನ್ನು ಉಗುರುಗಳಿಂದ ಪರಚುತ್ತಿದ್ದನು ವಾಲಿಯು ಅದೊಂದನ್ನೂ ಲಕ್ಷಿಸದೆ, ಬಿರುಗಾಳಿಯು ಮೇಘವನ್ನು ಸೆಳೆದೊಯ್ಯುವಂತೆ, ಕರಿಯ ಬಣ್ಣದ ರಾವಣನನ್ನು ಕಿಷ್ಕಿಂಧೆಯ ಕಡೆಗೆ ಒಯ್ಯುತ್ತಿದ್ದನು. ಪ್ರಹಸ್ತನೇ ಮೊದಲಾದ ರಾಕ್ಷಸರು ತಮ್ಮ ಒಡೆಯನಿಗಾದ ದುರ್ಗತಿಯನ್ನು ನೋಡಿ ಸಂಭ್ರಾಂತರಾಗಿ ವಾಲಿಯ ಹಿಂದೆ ಧಾವಿಸಿದರು. ಮಹಾವೇಗದಿಂದ ಹಾರುತ್ತಿದ್ದ ವಾಲಿಯನ್ನು ಅವರಿಗೆ ಹಿಡಿಯಲಾಗಲಿಲ್ಲ. ವಾಲಿಯು ಕಿಷ್ಕಿಂಧೆಯ ಉಪವನದಲ್ಲಿ ಇಳಿದು ಬಗಲಿನಿಂದ ರಾವಣನನ್ನು ಹೊರಗೆ ಬಿಟ್ಟು, ಅಚ್ಚರಿಗೊಂಡವನಂತೆ ''ಎಲಾ, ಯಾರು ನೀನು?'' ಎಂದು ನಗುತ್ತ ಕೇಳಿದನು. ಆಗ ರಾವಣನು ಕಣ್ಣುಗಳನ್ನು ತೊಳಲಿಸುತ್ತ ''ವಾನರೇಂದ್ರ, ನಾನು ರಾಕ್ಷಸೇಶ್ವರನಾದ ರಾವಣ. ನಿನ್ನೊಡನೆ ಯುದ್ಧ ಮಾಡುವುದಕ್ಕಾಗಿ ಬಂದು ನಿನ್ನ ಹಿಡಿತದಲ್ಲಿ ಸಿಕ್ಕಿಕೊಂಡೆನು. ಅಬ್ಬಾ, 'ನಿನ್ನ ಪರಾಕ್ರಮವೇನು? ನಿನ್ನ ಶೌರ್ಯವೇನು? ವೀರಾಗ್ರಣಿ, ನನ್ನನ್ನು ಹೊತ್ತುಕೊಂಡು ಮಹಾವೇಗದಿಂದ ಹಾರಿಬಂದೆಯಲ್ಲ, ಯಾರಿಗೆ ನಿನ್ನಷ್ಟು ಪರಾಕ್ರಮವಿದೆ? ವಾನರೇಶ್ವರ, ನಾನು ತಿಳಿವಳಿಕೆಯಿಲ್ಲದೆ ನಿನ್ನೊಡನೆ ಯುದ್ಧಕ್ಕೆ ಬಂದೆನು. ಈಗ ನಿನ್ನೊಡನೆ ಸ್ನೇಹವನ್ನು ಬೆಳೆಸಬೇಕೆಂದು ನನಗೆ ಇಚ್ಛೆಯಾಗಿದೆ. ನನ್ನ ಪ್ರಾರ್ಥನೆಯನ್ನು ಮನ್ನಿಸಿ ನನಗೆ ಮಿತ್ರನಾಗು'' ಎಂದು ಹೇಳಿದನು. ಕಪೀಶ್ವರನಾದ ವಾಲಿಗೆ ರಾವಣನ ದೈನ್ಯವನ್ನು ಕಂಡು ಮರುಕವಾಯಿತು. ಅವನು ರಾವಣನನ್ನು ಆಲಿಂಗಿಸಿದನು. ಇಬ್ಬರೂ ಅಗ್ನಿ ಸಾಕ್ಷಿಕವಾಗಿ ಸಖ್ಯವನ್ನು ಬೆಳೆಸಿದರು. ರಾವಣನು ವಾಲಿಯೊಡನೆ ಒಂದು ತಿಂಗಳು ಕಿಷ್ಕಿಂಧೆಯಲ್ಲಿ ಸುಖವಾಗಿದ್ದು ಅನಂತರ ಲಂಕೆಗೆ ತೆರಳಿದನು. ಶ್ರೀರಾಮ, ವಾಲಿಗೆ ಇಂತಹ ಅಸದೃಶವಾದ ಪರಾಕ್ರಮವಿತ್ತು, ಅವನನ್ನೂ ಸಹ ನೀನು, ಬೆಂಕಿಯು ದೀಪದ ಹುಳುವನ್ನು ಸುಡುವಂತೆ, ಸುಟ್ಟುಹಾಕಿದೆ''–ಎಂದು ಹೇಳಿದರು.

೬

ಹನುಮಂತನ ಪೂರ್ವವೃತ್ತಾಂತ

ಅನಂತರ ಶ್ರೀರಾಮನು ಅಗಸ್ತ್ಯಮುನಿಗಳಿಗೆ ಕೈಮುಗಿದು ವಿನಯದಿಂದ ''ಮಹರ್ಷಿಗಳೆ, ನೀವು ಹೇಳುವಂತೆ ವಾಲಿರಾವಣರಿಗೆ ಎಣೆಯಿಲ್ಲದ ಪರಾಕ್ರಮ ವಿತ್ತೆಂಬುದು ದಿಟ. ಆದರೆ ಅವರದು ಹನುಮಂತನ ಪರಾಕ್ರಮಕ್ಕೆ ಸಮಾನವಲ್ಲ ವೆಂದು ನನ್ನ ಅಭಿಪ್ರಾಯವಿದೆ. ಪರಾಕ್ರಮ ಒಂದೇ ಅಲ್ಲ. ಈ ಹನುಮಂತನಲ್ಲಿ ಅಸಾಧಾರಣವಾದ ಧೈರ್ಯ, ಬುದ್ಧಿ, ಕಾರ್ಯನೀತಿ, ವಿನಯ. ಪ್ರಭಾವಗಳು ನೆಲೆಸಿಬಿಟ್ಟಿವೆ. ಶತಯೋಜನವಿಸ್ತೀರ್ಣವಾದ ಮಹಾಸಾಗರವನ್ನು ಕಂಡು ಕಪಿಸೇನೆಯು ಮುಂಗಾಣದೆ ತತ್ತರಿಸಿತು. ಈ ಹನುಮಂತನು ಮಹಾಸಾಗರವನ್ನೂ ಲೆಕ್ಕಿಸದೆ ಏಕಾಕಿಯಾಗಿ ಲಂಕಾನಗರಕ್ಕೆ ಹೋಗಿ ರಾವಣನ ಅಂತಃಪುರದಲ್ಲಿ ಸುಳಿದಾಡಿ ಅವನ ಸೇನಾಪತಿಗಳನ್ನೂ, ಮಂತ್ರಿಪುತ್ರರನ್ನೂ, ಸಾವಿರಾರು ರಾಕ್ಷಸರನ್ನೂ ಸದೆಬಡಿದು ಅಕ್ಷಕುಮಾರನನ್ನು ಸಂಹರಿಸಿದನು. ಈತನು ಬ್ರಹ್ಮಾಸ್ತ್ರ ಬಂಧನದಿಂದ ತಪ್ಪಿಸಿಕೊಂಡು ರಾವಣನನ್ನು ಹೆದರಿಸಿ ಕಾಲಾಗ್ನಿಯಂತೆ ಲಂಕೆಯನ್ನು ಸುಟ್ಟುಬೂದಿ ಮಾಡಿದನು. ಆಮೇಲೆ ರಣರಂಗದಲ್ಲಿ ಈ ಹನುಮಂತನೆಸಗಿದ ಸಾಹಸ ಕೃತ್ಯಗಳು ಎಂಥಹವು! ಈತನು ಮಾಡಿದ ಸಾಹಸವನ್ನು ಯಮನಾಗಲಿ, ಇಂದ್ರನಾಗಲಿ, ಎಸಗಿದನೆಂಬುದನ್ನು ನಾವು ಕೇಳಿಲ್ಲ. ಈ ಹನುಮಂತನ ಬಾಹುಬಲದಿಂದಲೇ ನನಗೆ ಲಂಕೆಯು ವಶವಾಯಿತು. ಸೀತೆ ದೊರಕಿದಳು. ಲಕ್ಷ್ಮಣನು ಬದುಕಿದನು. ನನಗೆ ಜಯ ಸಿಕ್ಕಿತು. ರಾಜ್ಯವೂ ಮಿತ್ರರೂ ಬಂಧುಗಳೂ ನನಗೆ ಲಭಿಸಿದ್ದು ಆಂಜನೇಯನಿಂದ. ಈತನಿಲ್ಲದಿದ್ದರೆ ಲಂಕೆಗೆ ಹೋಗಿ ಸೀತೆಯ ಸುದ್ದಿಯನ್ನು ತರುವ ಧೀರನಾದರೂ ಯಾವನಿದ್ದನು? ನನಗೆ ಇನ್ನೊಂದು ಆಶ್ಚರ್ಯವನ್ನುಂಟು ಮಾಡುತ್ತಿದೆ. ಏನೆಂದರೆ, ಇವನು ಸುಗ್ರೀವನ ಪಕ್ಷದಲ್ಲಿದ್ದು ಕೊಂಡು ವಾಲಿಯ ಪೀಡೆಯನ್ನು ಏಕೆ ಸಹಿಸಿದನು? ತನ್ನ ಪ್ರಾಣಮಿತ್ರ ನಾದ ಸುಗ್ರೀವನಿಗಾಗಿ, ಕಾಳ್ಗಿಚ್ಚು ಮರವನ್ನು ಸುಡುವಂತೆ ವಾಲಿಯನ್ನು ಸುಟ್ಟು ಹಾಕಬಹುದಾಗಿತ್ತು, ಇದನ್ನು ಆಲೋಚಿಸಿದರೆ ಹನುಮಂತನಿಗೆ ತನ್ನ ಬಲವೇ ತನಗೆ ತಿಳಿದಿರಲಿಲ್ಲವೋ ಎನ್ನಿಸುತ್ತದೆ. ಮಹಾಮೇಧಾವಿಯಾದ ಈ ವಾಯುಪುತ್ರನಲ್ಲಿ ಈ ಸಂದರ್ಭ ಏಕೆ ನಡೆದಿರಬಹುದೆಂದು ವಿಸ್ಮಿತನಾಗಿದ್ದೇನೆ'' ಎಂದನು. ಈ ನುಡಿಯನ್ನು ಕೇಳಿ ಅಗಸ್ತ್ಯರು ನುಡಿದರು : ''ರಘುನಂದನ, ನೀನು ಹೇಳುವುದು ದಿಟ. ಬಲದಲ್ಲಾಗಲಿ, ಬುದ್ಧಿಯಲ್ಲಾಗಲಿ ಹನುಮಂತನಿಗೆ ಎಣೆಯಾದ ವನು ಇನ್ನೊಬ್ಬನಿಲ್ಲ. ಈತನಿಗೆ ಋಷಿಗಳಿಂದ ಒಂದು ಶಾಪವು ತಗುಲಿತು. ಆ ಶಾಪದ ಕಾರಣದಿಂದ ಈ ಬಲಾಢ್ಯನಿಗೆ ತನ್ನ ಬಲವೇ ತಿಳಿಯದಾಗಿತ್ತು'' ಎಂದರು. ಆಗ ಶ್ರೀರಾಮನು

ಕುತೂಹಲದಿಂದ ''ಈ ಹನುಮಂತನ ಪೂರ್ವ ವೃತ್ತಾಂತವೆಲ್ಲವನ್ನೂ ನನಗೆ ತಿಳಿಸಬೇಕು'' ಎಂದನು. ಅಗಸ್ತ್ಯರು ಹೇಳಿದರು. ''ಕಾಕುತ್ಸ್ಥ, ಸ್ವರ್ಣಮಯವಾದ ಮೇರುಪರ್ವತವಿದೆಯಷ್ಟೆ, ಅಲ್ಲಿ ಇವನ ತಂದೆಯಾದ ಕೇಸರಿಯು ರಾಜ್ಯಭಾರವನ್ನು ನಡೆಸುತ್ತಿದ್ದನು. ಅವನಿಗೆ ಅಂಜನೆಯೆಂಬ ಪ್ರಿಯಳಾದ ಪತ್ನಿಯಿದ್ದಳು. ವಾಯುದೇವನ ಸ್ಪರ್ಶಮಾತ್ರದಿಂದ ಆಕೆಯು ಗರ್ಭಿಣಿಯಾಗಿ ಪಿಂಗಳಕಾಯನಾದ ಈ ಮಗನನ್ನು ಹಡೆದಳು. ಒಂದು ದಿನ ಅಂಜನೆಯು ಹಣ್ಣುಗಳನ್ನು ತರುವುದಕ್ಕಾಗಿ ವನಕ್ಕೆ ಹೋಗಿದ್ದಳು. ಆಗ ಸೂರ್ಯನು ಆಕಾಶದಲ್ಲಿ ಉದಿಸಿ ಮೇಲೆದ್ದನು. ಈ ಬಾಲಕನು ಸೂರ್ಯಮಂಡಲವು ಹಣ್ಣೆಂದು ಭ್ರಮಿಸಿ ಸೂರ್ಯನ ಕಡೆಗೆ ನೆಗೆದನು. ಸೂರ್ಯನ ಉಷ್ಣತೆಯಿಂದ ಮಗನು ಸುಟ್ಟು ಹೋದಾನೆಂದು ಅಂಜಿ ವಾಯುದೇವನು ಮಂಜಿನಂತೆ ತಣ್ಣಗಾಗಿ ಬೀಸುತ್ತ ಮಗನನ್ನು ರಕ್ಷಿಸುತ್ತ ಹೋದನು. ಅಷ್ಟರಲ್ಲಿ ದೇವೇಂದ್ರನು ಐರಾವತವನ್ನೇರಿ ಈ ಬಾಲಕನ ಕಡೆಗೆ ಬರುತ್ತಿದ್ದನು. ಈತನು ಐರಾವತವನ್ನು ಹಿಡಿಯಲು ಹಾರಿಬರಲಾಗಿ ದೇವೇಂದ್ರನು ತನ್ನ ವಜ್ರಾಯುಧದಿಂದ ಹನುಮಂತನನ್ನು ಬಡಿದನು. ವಜ್ರಾಯುಧದಿಂದ ಹೊಡೆಯಲ್ಪಟ್ಟ ಈ ಬಾಲಕನು ಒಂದು ಬೆಟ್ಟದ ಮೇಲೆ ಬಿದ್ದನು. ಅವನ ಎಡದವಡೆಗೆ (ಹನು) ಪೆಟ್ಟಾಯಿತು. ಆಮೇಲೆ ಇವನು ಹನುಮಂತನೆಂದೇ ಖ್ಯಾತನಾದನು. ತನ್ನ ಮಗನನ್ನು ಹೊಡೆದುದಕ್ಕಾಗಿ ಕುಪಿತನಾದ ವಾಯುದೇವನು ಮಗನ ದೇಹವನ್ನೆತ್ತಿಕೊಂಡು ಒಂದು ಗುಹೆಯನ್ನು ಪ್ರವೇಶಿಸಿ ಬಿಟ್ಟನು. ಗಾಳಿಯು ಎಲ್ಲಿಯೂ ಬೀಸಲಿಲ್ಲ. ವಾಯುಸಂಚಾರವಿಲ್ಲದೆ ಮೂರು ಲೋಕವೂ ಕ್ಷೋಭೆಗೊಂಡಿತು. ಆಗ ಬ್ರಹ್ಮದೇವನು ದೇವಗಂಧರ್ವಾದಿಗಳಿಂದ ಸಹಿತನಾಗಿ ವಾಯುವಿದ್ದ ಗುಹೆಗೆ ಬಂದನು.

ವಜ್ರಾಯುಧದ ಹೊಡೆತದಿಂದ ಪೆಟ್ಟುತಿಂದ ಬಾಲಕನ ದೇಹವನ್ನೆತ್ತಿಕೊಂಡು ಮಾರುತನು ಗುಹೆಯಲ್ಲಿ ಕುಳಿತಿದ್ದನು. ಬ್ರಹ್ಮದೇವನು ಬಂದೊಡನೆ ಮಾರುತನು ಎದ್ದು ನಿಂತು ಭಕ್ತಿಯಿಂದ ಆತನಿಗೆ ಸಾಷ್ಟಾಂಗ ಪ್ರಣಾಮ ಮಾಡಿದನು. ಕರುಣಾಳುವಾದ ಬ್ರಹ್ಮನು ವಾಯುವಿನ ಮಗುವನ್ನು ಕೈಯಿಂದ ಸವರಿದನು. ಆ ಮಹಾಪುರುಷನ ಸ್ಪರ್ಶದಿಂದ, ರಾಘವ, ಆ ಮಗುವು ಮತ್ತೆ ಚೇತನವನ್ನು ಪಡೆಯಿತು. ಆಗ ಸಂತುಷ್ಟನಾದ ವಾಯುದೇವನು ಜಗತ್ತಿನಲ್ಲಿ ಬೀಸತೊಡಗಿದನು. ಬ್ರಹ್ಮನು ಇಂದ್ರನನ್ನು ನೋಡಿ ''ದೇವೇಂದ್ರ, ದಿಕ್ಪಾಲಕರೆ, ಲೋಕಹಿತಕರವಾದ ಒಂದು ಮಾತನ್ನು ಹೇಳುವೆನು ಕೇಳಿರಿ. ಈ ಮಗುವಿನಿಂದ ಮುಂದೆ ಒಂದು ಮಹಾಕಾರ್ಯವು ನಡೆಯಬೇಕಾಗಿದೆ. ನೀವೆಲ್ಲರೂ ಈ ಮಗುವಿಗೆ ವರವನ್ನು ಕೊಡಿರಿ. ವಾಯುವಿಗೆ ಸಂತೋಷವಾಗಲಿ'' ಎಂದು ನುಡಿದನು. ಆಗ ಇಂದ್ರನು

''ನನ್ನ ವಜ್ರಾಯುಧದ ಹೊಡೆತದಿಂದ ಈ ಮಗುವಿನ ಹನು (ದವಡೆ) ಭಗ್ನ ವಾಯಿತು. ಆದ್ದರಿಂದ ಮುಂದೆ ಇವನು ಹನುಮಂತನೆಂದು ವಿಖ್ಯಾತನಾಗಲಿ. ನನ್ನ ವಜ್ರಾಯುಧದಿಂದ ಇವನು ಅವಧ್ಯನಾಗಲಿ'' ಎಂದು ವರವನ್ನಿತ್ತನು. ಸೂರ್ಯದೇವನು, ''ನನ್ನ ತೇಜಸ್ಸಿನಲ್ಲಿ ನೂರನೆಯ ಒಂದಂಶವನ್ನು ಈ ಶಿಶುವಿಗೆ ಧಾರೆಯೆರೆಯುವೆನು. ಇವನಿಗೆ ಎಲ್ಲ ಶಾಸ್ತ್ರಗಳೂ ಸ್ವಾಧೀನವಾಗಲಿ. ವ್ಯಾಕರಣ ಶಾಸ್ತ್ರವನ್ನು ನಾನೇ ಇವನಿಗೆ ಉಪದೇಶಿಸುವೆನು. ಇವನು ವಾಗ್ಮಿಯಾಗುವನು'' ಎಂದನು. ವರುಣನು, ''ನನ್ನ ಪಾಶದಿಂದಾಗಲಿ ಜಲದಿಂದಾಗಲಿ ಈತನಿಗೆ ಮರಣವು ಸಂಭವಿಸದಿರಲಿ'' ಎಂದು ವರವನ್ನಿತ್ತನು. ಯಮನು ''ತನ್ನ ದಂಡಾಯುಧದಿಂದಲೂ ಹನುಮಂತನಿಗೆ ಸಾವು ಸಂಭವಿಸುವುದಿಲ್ಲವೆಂದೂ, ಅವನು ಸದಾ ಆರೋಗ್ಯಶಾಲಿಯಾಗಿರುವನೆಂದೂ'' ವರವನ್ನಿತ್ತನು. ಕುಬೇರನು ಈ ಹನುಮಂತನಿಗೆ ''ಯುದ್ಧದಲ್ಲಿ ಪರಾಜಯವಾಗದಿರಲಿ. ನನ್ನ ಗದೆ ಇವನನ್ನು ವಧಿಸದಿರಲಿ'' ಎಂದು ವರವನ್ನಿತ್ತನು. ಈಶಾನನು ''ನನ್ನಿಂದಾಗಲಿ, ನನ್ನ ಆಯುಧಗಳಿಂದಾಗಲಿ ಹನುಮಂತನಿಗೆ ಮೃತ್ಯು ಸಂಭವಿಸ ದಿರಲಿ'' ಎಂದು ವರವನ್ನಿತ್ತನು. ಬ್ರಹ್ಮದೇವನು ''ನನ್ನ ಬ್ರಹ್ಮಾಸ್ತ್ರವು ಇವನನ್ನು ಬಾಧಿಸದಿರಲಿ. ಇವನು ದೀರ್ಘಾಯುವೂ, ಜ್ಞಾನಿಯೂ ಆಗಲಿ'' ಎಂದನು. ಬಾಲಸೂರ್ಯನಂತಿದ್ದ ಆ ಶಿಶುವನ್ನು ನೋಡಿ ವಿಶ್ವಕರ್ಮನು ''ನಾನು ನಿರ್ಮಿಸಿದ ಯಾವ ಯಾವ ದಿವ್ಯಾಸ್ತ್ರಗಳಿವೆಯೋ ಅವೆಲ್ಲಕ್ಕೂ ಈ ಶಿಶು ಅವಧ್ಯನಾಗಿ ಚಿರಾಯು ವಾಗಲಿ'' ಎಂದನು. ಹೀಗೆ ಇತರ ದೇವತೆಗಳೂ ಬೇರೆಬೇರೆ ವರಗಳನ್ನೀಯಲು ಜಗದ್ಗುರುವಾದ ಬ್ರಹ್ಮದೇವನು ಸಂಪ್ರೀತನಾಗಿ ವಾಯುದೇವನನ್ನು ಕುರಿತು, ''ಎಲೈ ಮಾರುತ, ನಿನ್ನ ಪುತ್ರನು ವೈರಿ ಭಯಂಕರನೂ ಮಿತ್ರರಿಗೆ ಕಲ್ಯಾಣಕಾರಿಯೂ ಆಗುವನು. ಇವನು ಕಾಮರೂಪನೂ ಕಾಮಚಾರಿಯೂ ಆದ ಕಪಿಶ್ರೇಷ್ಠನಾಗುವನು. ಈತನ ಸಂಚಾರಕ್ಕೆ ತಡೆಯೇ ಇರುವುದಿಲ್ಲ. ನಿನ್ನ ಪುತ್ರನ ಕೀರ್ತಿಯು ಎಲ್ಲೆಲ್ಲಿಯೂ ಹರಡುವುದು'' ಎಂದು ನುಡಿದು ದೇವತೆಗಳೊಡನೆ ಹೊರಟು ಹೋದನು. ಇತ್ತಲಾಗಿ ವಾಯುವು ತನ್ನ ಮಗನನ್ನೆತ್ತಿಕೊಂಡು ಬಂದು ಅಂಜನಾದೇವಿಗೆ ಒಪ್ಪಿಸಿ ದೇವತೆಗಳು ಅನುಗ್ರಹಿಸಿದ ವರಗಳನ್ನು ಆಕೆಗೆ ತಿಳಿಸಿ ನಿರ್ಗಮಿಸಿದನು.

''ಶ್ರೀರಾಮ, ಹೀಗೆ ಹನುಮಂತನು ವರಗಳನ್ನು ಪಡೆದು ಬಲಾಢ್ಯನಾದನು. ಈತನು ತಾಯಿಯಾದ ಅಂಜನಾದೇವಿಯೊಡನೆ ಇರುವಾಗ ಸಮೀಪದಲ್ಲಿದ್ದ ಮಹರ್ಷಿಗಳ ಆಶ್ರಮಗಳಿಗೆ ಹೋಗಿ ನಿರ್ಭಯನಾಗಿ ತುಂಟತನದಲ್ಲಿ ತೊಡಗಿದನು. ಮುನಿಗಳ ಯಜ್ಞೋಪಕರಣಗಳನ್ನು ಒಡೆದು ಹಾಕುವುದು, ಅಗ್ನಿಹೋತ್ರದ ಅಗ್ನಿಗಳನ್ನು ಕೆದಕುವುದು, ನಾರುಬಟ್ಟೆ ಕೃಷ್ಣಾಜಿನಗಳನ್ನು ಹರಿದೆಸೆಯುವುದು—ಈ

ಬಗೆಯ ಚೇಷ್ಟೆಗಳಲ್ಲಿ ತೊಡಗಿದನು. ಋಷಿಗಳು ಇವನ ಕುಚೇಷ್ಟೆಗಳನ್ನು ಸಹಿಸಿ ಕೊಳ್ಳುತ್ತಿದ್ದರು. 'ಏನೋ ಬಾಲಕನ ಚೇಷ್ಟೆ' ಎಂದು ಸಿಟ್ಟಾಗದೆ ಸಹನೆಯಿಂದಲೇ ಇದ್ದರು. ಇವನ ತುಂಟತನವು ಅತಿಯಾಗಲಾಗಿ ಒಂದು ದಿನ ಅವರು ಸಿಟ್ಟನ್ನು ತಡೆದುಕೊಳ್ಳಲಾರದೆ ಹೋದರು. ಈತನನ್ನು ನೋಡಿ, ''ಎಲೋ ವಾನರ, ವರಬಲವಿದೆಯೆಂದು ಕೊಬ್ಬಿ ನಮ್ಮನ್ನು ಅತಿಯಾಗಿ ಪೀಡಿಸುತ್ತೀಯೆ. ನಿನ್ನ ಬಲವೆಷ್ಟೆಂಬುದೇ ನಿನಗೆ ಮರೆತು ಹೋಗಲಿ! ದೀರ್ಘಕಾಲದವರೆಗೆ ನಿನ್ನ ಸಾಮರ್ಥ್ಯದ ಅರಿವೇ ನಿನಗಾಗದು'' ಎಂದು ಶಪಿಸಿದರು. ಅನಂತರ ಕಾರುಣ್ಯದಿಂದ ''ಯಾರಾದರೂ ನಿನ್ನ ಬಲ ಕೀರ್ತಿಗಳನ್ನು ನೆನಪು ಮಾಡಿಕೊಟ್ಟಾಗ ನಿನ್ನ ಬಲವು ವರ್ಧಿಸುವುದು'' ಎಂದು ಹೇಳಿದರು. ಹೀಗೆ ಮಹರ್ಷಿಗಳ ವಾಗ್ವೀರ್ಯದಿಂದ ಹನುಮಂತನ ತೇಜಸ್ಸು, ಓಜಸ್ಸುಗಳು ಅಡಗಿದವು. ಇವನ ಸ್ವಭಾವ ಮೃದು ವಾಯಿತು. ಶಾಂತನಾಗಿ ಆಶ್ರಮಗಳಲ್ಲಿ ತಿರುಗಾಡಿಕೊಂಡಿದ್ದನು.

ಹೀಗಿರುವಾಗ ವಾಲಿ ಸುಗ್ರೀವರ ತಂದೆಯಾದ ಋಕ್ಷರಜಸ್ಸೆಂಬವನು ದೀರ್ಘಕಾಲ ಕಿಷ್ಕಿಂಧೆಯನ್ನು ಪಾಲಿಸಿ ನಿಧನ ಹೊಂದಿದನು. ಅವನ ಜ್ಯೇಷ್ಠಪುತ್ರನಾದ ವಾಲಿಯನ್ನು ಮಂತ್ರಿಗಳು ರಾಜಪದವಿಯಲ್ಲಿ ಸ್ಥಾಪಿಸಿ ಸುಗ್ರೀವನಿಗೆ ಯುವರಾಜ ಪದವಿಯನ್ನು ಕೊಡಿಸಿದರು. ಸುಗ್ರೀವನಿಗೂ ಹನುಮಂತನಿಗೂ ಬಾಲ್ಯದಿಂದಲೇ ಉತ್ತಮವಾದ ಸ್ನೇಹವು ಬೆಳೆದಿತ್ತು. ಮುಂದೆ ವಾಲಿ ಸುಗ್ರೀವರಿಗೆ ವೈರವು ಬೆಳೆದಾಗ ಈ ವಾಯುಪುತ್ರನು ಸುಗ್ರೀವನ ಜೊತೆಗೆ ಸೇರಿಕೊಂಡಿದ್ದನು. ಮುನಿಗಳ ಶಾಪದಿಂದ ತನ್ನ ಬಲವೆಷ್ಟೆಂಬುದು ಇವನಿಗೆ ತಿಳಿದಿರಲಿಲ್ಲ. ಈ ಕಪೀಂದ್ರನು ಸೂರ್ಯನಿಂದ ವ್ಯಾಕರಣಶಾಸ್ತ್ರವನ್ನು ಕಲಿತಿದ್ದಾನೆ. ಶಾಸ್ತ್ರಪಾಂಡಿತ್ಯದಲ್ಲಿಯೂ ವೇದಾರ್ಥಜ್ಞಾನ ದಲ್ಲಿಯೂ ಇವನಿಗೆ ಸಮನಾದವನು ಇನ್ನೊಬ್ಬನಿಲ್ಲ. ಪ್ರತಾಪ, ಸೌಶೀಲ್ಯ, ವಾಗ್ಮಿತೆ, ಚಾತುರ್ಯ, ವೀರ್ಯ, ಧೈರ್ಯಗಳಲ್ಲಿ ಹನುಮಂತನನ್ನು ಮೀರಿಸತಕ್ಕವರು ಈ ಜಗತ್ತಿನಲ್ಲಿಲ್ಲ'' ಎಂದರು. ಅಗಸ್ತ್ಯಮುನಿಗಳ ನುಡಿಯನ್ನು ಕೇಳಿ ಶ್ರೀರಾಮ ಲಕ್ಷ್ಮಣಾದಿ ಗಳು ವಿಸ್ಮಿತರಾದರು. ಅನಂತರ ಅಗಸ್ತ್ಯರು ''ಕಾಕುತ್ಸ್ಥ, ನಿನ್ನನ್ನು ನೋಡಿ ಅಭಿನಂದಿಸುವುದಕ್ಕಾಗಿ ನಾವು ಬಂದಿದ್ದೆವು. ನಿನ್ನೊಡನೆ ಸಂಭಾಷಿಸಿದ್ದಾಯಿತು. ಇನ್ನು ನಾವು ನಿರ್ಗಮಿಸುತ್ತೇವೆ'' ಎಂದರು. ಆಗ ಶ್ರೀರಾಮನು ಎದ್ದು ನಿಂತು ಅವರಿಗೆ ವಂದಿಸಿ ಕೈಮುಗಿದುಕೊಂಡು ''ಮಹಾತ್ಮರೆ, ನಿಮ್ಮೆಲ್ಲರ ದರ್ಶನದಿಂದ ನನ್ನ ಆರಾಧ್ಯದೇವತೆಗಳೂ, ಪಿತೃಗಳೂ, ಬಾಂಧವರೂ ಸಂತುಷ್ಟರಾದರು. ನನ್ನ ಅರಿಕೆ ಒಂದುಂಟು. ಅದನ್ನು ನೀವೆಲ್ಲರೂ ನಡೆಸಿ ಕೊಡಬೇಕು. ಈಗ ನಾನು ರಾಜ್ಯದ ಆಡಳಿತ ಸೂತ್ರವನ್ನೆ ವಹಿಸಿಕೊಂಡಿದ್ದೇನೆ. ಇದೆಲ್ಲವನ್ನೂ ಒಂದು ವ್ಯವಸ್ಥೆಗೆ

ತಂದಮೇಲೆ ತಮ್ಮೆಲ್ಲರ ಅನುಗ್ರಹದಿಂದ ಕೆಲವು ಯಜ್ಞಗಳನ್ನು ನಡೆಸಬೇಕೆಂದಿದ್ದೇನೆ. ಆ ಸಮಯದಲ್ಲಿ ತಪಸ್ವಿಗಳೂ ಶುದ್ಧಾತ್ಮರೂ ಆದ ನೀವೆಲ್ಲರೂ ಇಲ್ಲಿಗೆ ಆಗಮಿಸಿ, ನಮ್ಮನ್ನು ಅನುಗ್ರಹಿಸಬೇಕು'' ಎಂದನು. ಅಗಸ್ತ್ಯಾದಿಮುನಿಗಳು 'ತಥಾಸ್ತು' ಎಂದು ನುಡಿದು ಅಲ್ಲಿಂದ ತೆರಳಿದರು. ಶ್ರೀರಾಮನು ಹನುಮಂತನ ಬಾಲ್ಯವೃತ್ತಾಂತವನ್ನೇ ಆಶ್ಚರ್ಯದಿಂದ ಚಿಂತಿಸುತ್ತಿರಲು, ಸಂಜೆಯಾಯಿತು. ಆತನು ರಾಜಸಭೆಯನ್ನು ಅಂದಿಗೆ ಸಮಾಪ್ತಿಗೊಳಿಸಿ ಸಂಧ್ಯಾವಂದನೆಯನ್ನಾಚರಿಸಿ ಅಂತಃಪುರವನ್ನು ಪ್ರವೇಶಿಸಿದನು.

೧೦

ಪಟ್ಟಾಭಿಷೇಕಕ್ಕೆ ಬಂದಿದ್ದ ಜನಕರಾಜನೇ ಮೊದಲಾದವರು ತಮ್ಮ ಸ್ಥಳಗಳಿಗೆ ಹಿಂದಿರುಗುವುದು

ಈ ಪ್ರಕಾರವಾಗಿ ಮಹಾಬಾಹುವಾದ ಆ ರಘುಕುಲ ಶ್ರೇಷ್ಠನು ತನ್ನ ದಿನಚರ್ಯೆಯನ್ನು ನಡೆಸುತ್ತ ನಗರದ ಮತ್ತು ರಾಷ್ಟ್ರದ ಸಕಲಕಾರ್ಯಗಳನ್ನೂ ವಿಚಾರಿಸಿ ನಿರ್ವಹಿಸುತ್ತಿದ್ದನು. ಕೆಲವು ದಿನಗಳು ಕಳೆಯಲಾಗಿ, ಪಟ್ಟಾಭಿಷೇಕೋತ್ಸವಕ್ಕೆ ಬಂದಿದ್ದ ಜನಕರಾಜನು ತನ್ನ ಮಿಥಿಲಾನಗರಕ್ಕೆ ತೆರಳಲು ಅಪೇಕ್ಷಿಸಿದನು. ಶ್ರೀರಾಮನು ಆತನಿಗೆ ವಂದಿಸಿ ''ಮಹಾರಾಜ, ನಮ್ಮೆಲ್ಲರಿಗೂ ನೀನು ಆಶ್ರಯದಾತನಾಗಿದ್ದೀಯೆ. ನಿನ್ನ ತೇಜೋಬಲದಿಂದಲೇ ರಾವಣನನ್ನು ಕೊಲ್ಲಲು ನನಗೆ ಸಾಧ್ಯವಾಯಿತು. ನಿನ್ನ ಆಗಮನದಿಂದ ನಮಗೆ ಅತುಲವಾದ ಹರ್ಷವುಂಟಾಗಿದೆ. ಕಾಣಿಕೆಯಾಗಿ ಅರ್ಪಿಸುವ ಈ ಧನ ಕನಕಗಳನ್ನೂ ಸ್ವೀಕರಿಸಿ ನಿನ್ನ ರಾಜಧಾನಿಗೆ ತೆರಳಬಹುದು. ಸಹಾಯಕ್ಕಾಗಿ ಭರತನು ನಿನ್ನೊಡನೆ ಬರುವನು'' ಎಂದು ನಿವೇದಿಸಿದನು. ಜನಕರಾಜನು ''ರಾಮಚಂದ್ರ, ನಿನ್ನ ವಿನಯಾದಿಗುಣಗಳಿಂದ ಸಂಪ್ರೀತನಾಗಿದ್ದೇನೆ. ನೀನು ಕೊಟ್ಟಿರುವ ಈ ಧನಕನಕಗಳೆಲ್ಲವನ್ನೂ ನನ್ನ ಹೆಣ್ಣುಮಕ್ಕಳಿಗೆ ಕೊಟ್ಟಿದ್ದೇನೆ'' ಎಂದನು. ಅನಂತರ ಶ್ರೀರಾಮನನ್ನು ಬೀಳ್ಕೊಂಡು ಮಿಥಿಲೆಗೆ ಪ್ರಯಾಣ ಮಾಡಿದನು. ರಾಘವನು ಸೋದರ ಮಾವನಾದ ಯುಧಾಜಿತುವಿಗೆ ನಮಸ್ಕರಿಸಿ ''ಯುವರಾಜ, ನಾನೂ, ಭರತ, ಲಕ್ಷ್ಮಣ, ಶತ್ರುಘ್ನರೂ ನಿನ್ನವರು. ನಮಗೆ ಆಪದ್ಬಂಧುವಾಗಿದ್ದೀಯೆ. ಲಕ್ಷ್ಮಣನು ಪಾರಿತೋಷಿಕವಾಗಿ ಧನರತ್ನ ರಾಶಿಯನ್ನು ತೆಗೆದುಕೊಂಡು ನಿನ್ನೊಡನೆ ಬರುವನು'' ಎಂದನು. ಯುಧಾಜಿತನು, ''ರಾಘವ, ನಿನ್ನ ಸೌಶೀಲ್ಯದಿಂದ ನಾನು ಸಂತುಷ್ಟನಾಗಿದ್ದೇನೆ. ಈ ಧನರತ್ನ ರಾಶಿಗಳು ನಿನ್ನಲ್ಲಿಯೇ ಅಕ್ಷಯವಾಗಿರಲಿ'' ಎಂದು ನುಡಿದು ಶ್ರೀರಾಮಾದಿಗಳಿಂದ ಸತ್ಕೃತನಾಗಿ ಲಕ್ಷ್ಮಣನೊಡನೆ ಕೇಕಯ ರಾಜ್ಯಕ್ಕೆ ತೆರಳಿದನು. ಹೀಗೆಯೇ ಶ್ರೀರಾಮನು ಕಾಶೀ ಪತಿಯಾದ ಪ್ರತರ್ದನನೇ ಮೊದಲಾದ

ಭೂಪಾಲರನ್ನು ವಿನಯೋಕ್ತಿಗಳಿಂದ ಸತ್ಕರಿಸಿ ಬೀಳ್ಕೊಟ್ಟನು. ಅವರೆಲ್ಲರೂ ಧರ್ಮಾತ್ಮನಾದ ರಾಘವನ ಗುಣಗಳನ್ನು ಪ್ರಶಂಸೆ ಮಾಡುತ್ತ ತಮ್ಮ ತಮ್ಮ ದೇಶಗಳಿಗೆ ಪ್ರಯಾಣ ಮಾಡಿದರು.

ಆಮೇಲೆ ಶ್ರೀರಾಮನು ಸುಗ್ರೀವನಿಗೂ, ವಿಭೀಷಣನಿಗೂ ಇತರ ವಾನರರಿಗೂ ತುಂಬ ಬೆಲೆಬಾಳುವ ಪಾರಿತೋಷಿಕಗಳನ್ನಿತ್ತನು. ಅಂಗದನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತನ್ನ ಮೈಮೇಲಿದ್ದ ಅಮೂಲ್ಯವಾದ ಆಭರಣಗಳನ್ನು ಅವನಿಗೆ ತೊಡಿಸಿದನು. ಅಂತೆಯೇ ಹನುಮಂತನನ್ನೂ ಸತ್ಕರಿಸಿದನು. ಆಮೇಲೆ ಮಹಾಶೂರ ರಾದ ನಳ, ನೀಲ, ಕೇಸರಿ, ಸುಷೇಣ, ಮೈಂದ, ದ್ವಿವಿದ, ಜಾಂಬವಂತ ಮುಂತಾದ ಕಪಿಶ್ರೇಷ್ಠರನ್ನು ನೇತ್ರಗಳಿಂದ ಕುಡಿಯುವನೋ ಎಂಬಂತೆ ಪ್ರೀತಿಯಿಂದ ವೀಕ್ಷಿಸುತ್ತ ''ವೀರರೆ, ನೀವು ನನ್ನ ಮಿತ್ರರು. ನನ್ನ ಅಣ್ಣ ತಮ್ಮಂದಿರೆಂದೇ ತಿಳಿದಿದ್ದೇನೆ. ಒಂದು ಮಹಾ ಸಂಕಟದಿಂದ ನನ್ನನ್ನು ಪಾರು ಮಾಡಿದ್ದೀರಿ. ನಿಮ್ಮಂತಹ ಆಪ್ತರನ್ನು ಪಡೆದಿರುವ ಸುಗ್ರೀವ ರಾಜನೇ ಧನ್ಯ'' ಎಂದು ಹೇಳಿ, ಅವರೆಲ್ಲರನ್ನೂ ಆಲಿಂಗಿಸಿಕೊಂಡು ಬೆಲೆಬಾಳುವ ಆಭರಾಣಾದಿಗಳನ್ನು ಪಾರಿತೋಷಿಕವಾಗಿ ಕೊಟ್ಟನು. ಅವರೆಲ್ಲರೂ ಅಯೋಧ್ಯೆಗೆ ಬಂದು ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಕಳೆದಿತ್ತು, ಆದ್ದರಿಂದ ತಮ್ಮ ತಮ್ಮ ಸ್ಥಳಕ್ಕೆ ಹೋಗಲು ಅಪೇಕ್ಷಿಸಿದರು. ಶ್ರೀರಾಮಚಂದ್ರನು ಸುಗ್ರೀವನನ್ನು ಕುರಿತು ''ಸೌಮ್ಯ, ಈಗ ನೀನು ಕಿಷ್ಕಿಂಧೆಗೆ ಹೋಗಬಹುದು. ಧರ್ಮನಿಷ್ಠೆಯಿಂದ ನಿನ್ನ ರಾಜ್ಯವನ್ನು ಪಾಲಿಸುತ್ತಿರು. ಅಂಗದನನ್ನು ಪರಮಪ್ರೀತಿಯಿಂದ ನೋಡಿಕೊಳ್ಳುತ್ತಿರು. ನನಗೋಸ್ಕರ ಜೀವಿತವನ್ನೇ ಧಾರೆಯೆರೆದಿದ್ದ ಈ ವಾನರ ಶ್ರೇಷ್ಠರನ್ನು ಪ್ರೀತಿಯಿಂದ ನಡೆಸಿಕೊ. ಅವರಿಗೆ ಅಪ್ರಿಯವಾದದ್ದನ್ನು ಮಾಡಬೇಡ'' ಎಂದನು. ಸುಗ್ರೀವನನ್ನು ಮತ್ತೆ ಮತ್ತೆ ಆಲಿಂಗಿಸಿಕೊಂಡು ವಿಭೀಷಣನನ್ನು ಕುರಿತು ''ವಿಭೀಷಣ, ಲಂಕೆಯನ್ನು ಧರ್ಮದಿಂದ ಆಳುತ್ತಿರು. ನೀನು ಧರ್ಮಜ್ಞನೆಂಬುದು ನನಗೆ ವಿದಿತವಾಗಿದೆ. ವಿಭೀಷಣ, ನನ್ನನ್ನೂ ಸುಗ್ರೀವನನ್ನೂ ಸ್ಮರಿಸಿಕೊಳ್ಳುತ್ತಿರು'' ಎಂದು ನುಡಿದು ಯೋಗ್ಯವಾದ ಪಾರಿತೋಷಿಕವನ್ನರ್ಪಿಸಿದನು. ಅವರೆಲ್ಲರೂ ಶ್ರೀರಾಮನ ಸೌಶೀಲ್ಯ, ಬುದ್ಧಿ ಪರಾಕ್ರಮಗಳನ್ನು ಹೊಗಳಿದರು. ಆ ಸಮಯದಲ್ಲಿ ಹನುಮಂತನು ರಾಘವನಿಗೆ ನಮಸ್ಕರಿಸಿ ಹೀಗೆ ನಿವೇದಿಸಿದನು : ''ಮಹಾರಾಜ, ನಿನ್ನಲ್ಲಿ ನನಗಿರುವ ಪರಮಪ್ರೀತಿಯು ಶಾಶ್ವತವಾಗಿ ಉಳಿದಿರಲಿ. ನಿನ್ನಲ್ಲಿ ಅಚಲವಾದ ಭಕ್ತಿಯು ನನ್ನ ಮನಸ್ಸಿನಲ್ಲಿ ನೆಲೆಸಿರಲಿ. ಎಲ್ಲಿಯವರೆಗೆ ಶ್ರೀರಾಮ ಕಥೆಯು ಈ ಭೂಮಂಡಲದಲ್ಲಿ ಪ್ರಚುರವಾಗಿರುವುದೋ ಅಲ್ಲಿಯವರೆಗೆ ನನ್ನ ಪ್ರಾಣವು ಈ ದೇಹದಲ್ಲಿ ಉಳಿದಿರಲಿ. ನಿನ್ನ ದಿವ್ಯ ಚರಿತ್ರೆಯನ್ನು ಅಪ್ಸರೆಯರೂ ನನಗೆ ಕೇಳುವಂತೆ ಹಾಡಿಹೊಗಳುತ್ತಿರಲಿ.

ಹೇ ಸ್ವಾಮಿ–ಪುರುಷೋತ್ತಮ, ನಿನ್ನ ಚರಿತಾಮೃತವನ್ನು ಕುಡಿದು ಕುಡಿದು ನನ್ನ ಬಾಯಾರಿಕೆಯನ್ನು ನೀಗಿಕೊಳ್ಳುವೆನು'' ಎಂದನು. ಆಗ ಶ್ರೀರಾಮನು ಸಿಂಹಾಸನ ದಿಂದ ಎದ್ದು ಬಂದು ಹನುಮಂತನನ್ನು ಗಟ್ಟಿಯಾಗಿ ಅಪ್ಪಿಕೊಂಡನು. ''ಹೇ ವಾನರೋತ್ತಮ, ಹಾಗೆಯೇ ಆಗಲಿ. ನನ್ನ ಕಥೆಯು ಈ ಲೋಕದಲ್ಲಿರುವ ವರೆಗೆ ನಿನ್ನ ಕೀರ್ತಿ ಸ್ಥಿರವಾಗಿರಲಿ. ಅಲ್ಲಿಯವರೆಗೂ ನೀನು ಜೀವಂತನಾಗಿಯೇ ಇರುವೆ. ಸಂದೇಹ ವಿಲ್ಲ. ಹನುಮಂತ, ನೀನು ನನಗೆ ಮಾಡಿರುವ ಉಪಕಾರವು ಅಷ್ಟಿಷ್ಟಲ್ಲ. ಒಂದೊಂದು ಉಪಕಾರವನ್ನೂ ನಾನು ಪ್ರಾಣವನ್ನು ತೆತ್ತು ತೀರಿಸಬೇಕಾದೀತು. ಹನುಮಂತ, ನಿನ್ನ ಉಪಕಾರಗಳಿಗೆ ನಾನು ಸಾಲಗಾರನಾಗಿಯೇ ಇರುವೆನು. ಅದು ನನ್ನಲ್ಲಿಯೇ ಜೀರ್ಣವಾಗಿ ಹೋಗಲಿ. ನಿನಗೆ ಪ್ರತ್ಯುಪಕಾರ ಮಾಡುವ ಸಂಭವವೇ ಘಟಿಸದಿರಲಿ. ಏಕೆಂದರೆ, ಪ್ರತ್ಯುಪಕಾರವನ್ನು ಮಾಡಲು ಬಯಸುವುದೆಂದರೆ ನಿನಗೆ ಅಂತಹ ಒಂದು ವಿಪತ್ತು ಬರಲೆಂದು ಹಾರೈಸಿದಂತಾಗುತ್ತದೆ! ನಿನಗೆ ಅಂತಹ ಕಷ್ಟ ಬರುವುದೂ ಬೇಡ. ನಾನು ತೀರಿಸುವುದೂ ಬೇಡ'' ಎಂದು ಹೇಳಿ ತನ್ನ ಕೊರಳಲ್ಲಿ ಚಂದ್ರನಂತೆ ಬೆಳಗುತ್ತಿದ್ದ ವೈಡೂರ್ಯಖಚಿತವಾದ ಮುಕ್ತಾಹಾರವನ್ನು ಹನುಮಂತನ ಕೊರಳಿಗೆ ಹಾಕಿದನು. ಆಮೇಲೆ ಬಲಾಢ್ಯರಾದ ವಾನರರು ಎದ್ದೆದ್ದು ಬಂದು ರಾಘವನ ಪಾದಗಳಿಗೆ ವಂದಿಸಿದರು. ಧರ್ಮಾತ್ಮನಾದ ರಾಘವನು ಸುಗ್ರೀವನನ್ನೂ ವಿಭೀಷಣನನ್ನೂ ಮತ್ತೆ ದೃಢವಾಗಿ ಆಲಿಂಗಿಸಿಕೊಂಡನು. ಎಲ್ಲರ ಕಣ್ಣುಗಳೂ ಒದ್ದೆಯಾದವು. ಅವರೆಲ್ಲರೂ ಶ್ರೀರಾಮನನ್ನು ಅಗಲಿಹೋಗುವೆವೆಂದು ದುಃಖದಿಂದ ಕಂಬನಿದುಂಬಿ ದುಮ್ಮಾನ ಗೊಂಡು ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು.

೧೧

ಶ್ರೀರಾಮನು ಸೀತಾದೇವಿಯೊಂದಿಗೆ ವಿಹರಿಸುವುದು. ಗುಪ್ತಚಾರನಿಂದ ಲೋಕಾಪವಾದದ ಕಥನ

ಈ ಪ್ರಕಾರವಾಗಿ ಶ್ರೀರಾಮನು ಪಟ್ಟಾಭಿಷೇಕಕ್ಕೆ ಬಂದಿದ್ದ ಎಲ್ಲರನ್ನೂ ಕಳುಹಿಸಿ ರಾಜ್ಯಪಾಲನೆಯಲ್ಲಿ ನಿರತನಾದನು. ಹೀಗಿರಲು ಒಂದು ದಿನ ಸೋದರರೊಡನೆ ಕುಳಿತಿರುವಾಗ ಅಂತರಿಕ್ಷದಲ್ಲಿ ಮಧುರವಾದ ಒಂದು ನುಡಿ ಕೇಳಿಸಿತು. ''ಮಹಾರಾಜ, ನಾನು ಕುಬೇರಭವನದಿಂದ ಬಂದ ಪುಷ್ಪಕವಿಮಾನವೆಂದು ತಿಳಿ. ನಿನ್ನ ಆಜ್ಞೆಯಂತೆ ನಾನು ಕುಬೇರನ ಸೇವೆಗಾಗಿ ಅವನ ಬಳಿಗೆ ಹೋದೆನು. ಆತನು ನನ್ನನ್ನು ನೋಡಿ ''ಎಲೈ ಪುಷ್ಪಕವೆ, ರಾವಣನನ್ನು ಸಂಹರಿಸಿ ಶ್ರೀರಾಮನು ನಿನ್ನನ್ನು ಪಡೆದಿದ್ದಾನೆ. ದುರಾತ್ಮನಾದ ರಾವಣನು ಹತನಾದ್ದರಿಂದ ನನಗೂ ಬಹಳ

ಆನಂದವಾಗಿದೆ. ನೀನು ಶ್ರೀರಾಮನ ವಾಹನವಾಗಿ ಸೇವೆಯನ್ನು ಸಲ್ಲಿಸುತ್ತಿರು. ಇದು ನನ್ನ ಆಜ್ಞೆ'' ಎಂದು ಬಿಟ್ಟನು. ಆದ್ದರಿಂದ, ''ರಾಘವ, ಈಗ ನಿನ್ನ ಸೇವೆಗಾಗಿ ಬಂದಿದ್ದೇನೆ. ನನ್ನನ್ನು ಸ್ವೀಕರಿಸು'' ಎಂದು ಪುಷ್ಪಕವಿಮಾನ ದೇವತೆ ನುಡಿಯಿತು. ಆಗ ರಾಘವನು ''ಎಲೈ ಪುಷ್ಪಕವೆ, ಹಾಗಾದರೆ ನಿನಗೆ ಸ್ವಾಗತ. ಆದರೆ ಕುಬೇರನ ಸಂತೋಷಕ್ಕಾಗಿ ನಾನು ಸದಾಚಾರವನ್ನು ಉಲ್ಲಂಘಿಸಲಾರೆ. ಮೂಲತಃ ನೀನು ಕುಬೇರನ ಸೇವೆಯಲ್ಲಿದ್ದವನು. ರಾವಣನು ಹತನಾದ ಮೇಲೆ ನೀನು ಮತ್ತೆ ಕುಬೇರನಿಗೆ ಸೇರಬೇಕೇ ಹೊರತು ನನಗಲ್ಲ. ಮುಂದೆ ನಾನೇನಾದರೂ ನಿನ್ನನ್ನು ಸ್ಮರಿಸಿಕೊಂಡರೆ ಆಗ ಆಗಮಿಸಬಹುದು. ನಿನಗೆ ಶುಭವಾಗಲಿ'' ಎಂದು ಹೇಳಿ ಪುಷ್ಪಧೂಪಾದಿಗಳಿಂದ ಆ ವಿಮಾನವನ್ನು ಅರ್ಚಿಸಿದನು. ವಿಮಾನವು ''ಹಾಗೆಯೇ ಆಗಲಿ'' ಎಂದು ಹೇಳಿ ಕುಬೇರನ ಬಳಿಗೇ ಹೊರಟುಹೋಯಿತು.

ಶ್ರೀರಾಮನು ರಾಜ್ಯಭಾರವನ್ನು ವಹಿಸಿಕೊಂಡಮೇಲೆ ಪೌರರಿಗೆ ಅತ್ಯಂತ ಹರ್ಷವಾಯಿತು. ಎಲ್ಲೆಲ್ಲಿಯೂ ಸಂತೋಷ ಸಮಾರಂಭಗಳು ನಡೆದವು. ಜನರೆಲ್ಲರೂ ಆರೋಗ್ಯದಿಂದ ದೃಢಕಾಯರಾಗಿದ್ದರು. ಯಾರಿಗೂ ರೋಗ ರುಜಿನಾದಿಗಳ ಭಯವಿರಲಿಲ್ಲ. ರಾಜ್ಯವೆಲ್ಲವೂ ಸುಖಸಂತೋಷಗಳಿಂದ ನಲಿಯುತ್ತಿತ್ತು. ಪ್ರಜೆಗಳು ''ನಮ್ಮ ಮಹಾರಾಜನು ಚಿರಕಾಲದವರೆಗೆ ಬಾಳಲಿ'' ಎಂದು ಹೇಳಿಕೊಳ್ಳುತ್ತಿದ್ದರು.

ಹೀಗೆ ಧರ್ಮದಿಂದ ರಾಜ್ಯಪಾಲನೆಯನ್ನು ಮಾಡುತ್ತ ಶ್ರೀರಾಮನು ವಿರಾಮಕಾಲದಲ್ಲಿ ಉದ್ಯಾನವನಕ್ಕೆ ಪತ್ನಿಯಾದ ಸೀತಾದೇವಿಯೊಡನೆ ಹೋಗಿ ವಿಹರಿಸುತ್ತಿದ್ದನು. ಆ ಉದ್ಯಾನವನದಲ್ಲಿ ಬಗೆಬಗೆಯ ಹೂಗೊಂಚಲುಗಳು ಪರಿಮಳವನ್ನು ಬೀರುತ್ತಿದ್ದವು. ಕೊಳದಲ್ಲಿ ತಾವರೆ ನೈದಿಲೆಗಳು ಅರಳಿದ್ದವು. ಆ ಉಪವನವು ಇಂದ್ರನ ನಂದನವೋ ಕುಬೇರನ ಚೈತ್ರರಥವೋ ಎಂಬಂತೆ ವಿರಾಜಿಸುತ್ತಿತ್ತು. ವಿನೋದಪ್ರಿಯನಾದ ಶ್ರೀರಾಮನು ಜಾನಕಿಯೊಡನೆ ಸಂತೋಷ ದಿಂದ ವಿಹರಿಸುತ್ತ ನರ್ಮೋಕ್ತಿಗಳಿಂದ ದೇವಿಯನ್ನು ರಂಜಿಸುತ್ತ ವಿರಾಮ ಕಾಲವನ್ನು ಕಳೆಯುತ್ತಿದ್ದನು. ನೃತ್ಯಗೀತೆಗಳಲ್ಲಿ ವಿಶಾರದರಾದ ಸ್ತ್ರೀಯರು ಮಧುರಕಂಠದಿಂದ ಹಾಡುತ್ತ ಪ್ರೇಕ್ಷಣೀಯವಾದ ನರ್ತನಗಳನ್ನು ಮಾಡಿ ಈ ದಿವ್ಯ ದಂಪತಿಗಳನ್ನು ಆನಂದಗೊಳಿಸುತ್ತಿದ್ದರು. ವೈದೇಹಿಯೊಡನೆ ಕುಳಿತಿದ್ದ ಶ್ರೀರಾಮನು, ಅರುಂಧತಿ ಯೊಡನೆ ಉಪವಿಷ್ಟರಾದ ವಸಿಷ್ಠರಂತೆ ತೇಜೋವಿಶೇಷದಿಂದ ವಿರಾಜಿಸುತ್ತಿದ್ದನು. ಮಂಗಳಾಂಗಿಯಾದ ಧರ್ಮಪತ್ನಿಯನ್ನು ನೋಡಿ ನೋಡಿ ರಾಘವನಿಗೆ ಅತ್ಯಂತ ಹರ್ಷವಾಗುತ್ತಿತ್ತು. ಹೀಗಿರಲು ಒಂದು ದಿನ ಅವಳನ್ನು ನೋಡಿ ''ವೈದೇಹಿ, ನನಗೆ

ನಿನ್ನಲ್ಲಿ ಸಂತಾನಲಾಭವು ಸಮೀಪಿಸಿದೆ. ದೇವಿ, ನಿನಗೆ ಯಾವ ಬಯಕೆಯುಂಟು? ಏನಾಗಬೇಕು?'' ಎಂದು ಕೇಳಿದನು. ವೈದೇಹಿಯು ಆ ಮಾತನ್ನು ಕೇಳಿ ಲಜ್ಜೆಯಿಂದ ಮುಗುಳ್ನಗೆ ಬೀರಿದಳು. ಅನಂತರ ''ಶ್ರೀರಾಮ, ಸಕಲಭೋಗಗಳನ್ನೂ ನೀನು ಒದಗಿಸಿರುವಾಗ ನನಗೆ ಯಾವ ಬಯಕೆಯಿದ್ದೀತು? ಆದರೂ ಒಂದು ಇಚ್ಛೆ ಯುಂಟಾಗಿದೆ. ಪವಿತ್ರವಾದ ತಪೋವನಗಳನ್ನು ನೋಡಬೇಕೆಂದೂ ಮಹಾತ್ಮರಾದ ಋಷಿಗಳ ಪಾದಸಾನ್ನಿಧ್ಯದಲ್ಲಿ ಇರಬೇಕೆಂದೂ ಅಪೇಕ್ಷೆಯಾಗುತ್ತಿದೆ. ಇದೇ ನನ್ನ ಬಯಕೆ. ಪ್ರಭು, ಒಂದು ರಾತ್ರಿಯಾದರೂ ನಾನು ತಪೋವನದಲ್ಲಿರಲು ಶಕ್ಯವಾದೀತೆ?'' ಎಂದಳು. ಆಗ ಕಾಕುತ್ಸ್ಥನು ''ಓಹೋ, ಆಗಬಹುದು. ಜಾನಕಿ, ನಿಶ್ಚಿಂತಳಾಗಿರು. ತಪೋವನಕ್ಕೆ ಹೋಗಲು ಏರ್ಪಡಿಸುತ್ತೇನೆ'' ಎಂದು ನುಡಿದನು.

ಇದಾದಮೇಲೆ ಒಮ್ಮೆ ಶ್ರೀರಾಮನು ರಾಜಸಭೆಯಲ್ಲಿ ಉಪವಿಷ್ಟನಾಗಿದ್ದನು. ವಾಚಾಲರಾದ ಹಾಸ್ಯಗಾರರು ಬಗೆಬಗೆಯ ವಿನೋದಕರವಾದ ವಾರ್ತಾಲಾಪಗಳಿಂದ ಸಭೆಯನ್ನು ರಂಜಿಸುತ್ತಿದ್ದರು. ಹೀಗಿರುವಾಗ ಗುಪ್ತಚಾರನಾದ ಭದ್ರ ಎಂಬವನು ರಾಜಸಭೆಗೆ ಬಂದು ಕುಳಿತನು. ಸ್ವಲ್ಪಹೊತ್ತಿನಲ್ಲಿ ಶ್ರೀರಾಮನು ಆತನನ್ನು ತನ್ನ ಬಳಿಗೆ ಕರೆದು ಏಕಾಂತದಲ್ಲಿ ಮಾತಾಡಿದನು. ''ಭದ್ರ, ನನ್ನ ಆಜ್ಞೆಯಂತೆ ಪ್ರಜೆಗಳ ಅಭಿಪ್ರಾಯವೇನೆಂದು ತಿಳಿಯಲು ನೀನು ವಿಶೇಷವಾಗಿ ಸಂಚಾರಮಾಡಿ ಬಂದಿರುವಂತೆ ಕಾಣುತ್ತದೆ. ಅಯೋಧ್ಯೆಯಲ್ಲಿಯೂ ರಾಷ್ಟ್ರದ ಇತರ ಸ್ಥಳಗಳಲ್ಲಿಯೂ, ಪ್ರಜೆಗಳು ನನ್ನ ವಿಷಯವಾಗಿ ಏನು ಹೇಳುತ್ತಾರೆ? ಮಹಾರಾಣಿಯಾದ ಸೀತಾದೇವಿಯ ವಿಷಯದಲ್ಲಾಗಲಿ ನನ್ನ ಸಹೋದರರ ವಿಷಯದಲ್ಲಾಗಲಿ ಜನರ ಹೇಳಿಕೆ ಏನು? ಏಕೆಂದರೆ, ಹೊಸರಾಜ್ಯಭಾರವು ಆರಂಭವಾದಾಗ ರಾಜರ ವಿಷಯದಲ್ಲಿ ನಾನಾ ಬಗೆಯ ಕಿಂವದಂತಿಗಳು ಹುಟ್ಟಿಕೊಳ್ಳುತ್ತವೆ'' ಎಂದು ಕೇಳಿದನು. ಆಗ ಭದ್ರನು ವಿನಯದಿಂದ ಕೈಮುಗಿದುಕೊಂಡು ''ಮಹಾರಾಜ, ನಗರವಾಸಿಗಳೂ ರಾಜ್ಯದ ಪ್ರಜೆಗಳೂ ನಿನ್ನ ವಿಷಯದಲ್ಲಿ ಶುಭಕರವಾದ ಒಳ್ಳೆಯ ಮಾತುಗಳನ್ನಾಡು ತ್ತಿದ್ದಾರೆ. ನಿನ್ನ ಪರಾಕ್ರಮವನ್ನೂ ಪ್ರಜಾಪಾಲನೆಯಲ್ಲಿರುವ ಆದರವನ್ನೂ ವಿನಯ ಸಂಪತ್ತನ್ನೂ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ನಿನ್ನ ಸೋದರರ ವಿಷಯವಾಗಿಯೂ ಪ್ರಜೆಗಳಿಗೆ ತುಂಬ ಮೆಚ್ಚಿಗೆಯಿದೆ. ಅನಾದರದ ಒಂದು ಮಾತನ್ನೂ ನಾನು ಕೇಳಲಿಲ್ಲ'' ಎಂದನು. ಆಗ ಶ್ರೀರಾಮನು ''ಭದ್ರ, ನೀನು ಯಾವ ಸಂಕೋಚವನ್ನೂ ಪಡಬೇಕಾಗಿಲ್ಲ. ಪ್ರಜೆಗಳು ಏನು ಹೇಳುತ್ತಾರೆಂಬುದನ್ನು ಯಥಾವತ್ತಾಗಿ ತಿಳಿಸು. ಕೆಟ್ಟದನ್ನು ಹೇಳಿದರೂ ನನಗೆ ತಿಳಿಸಬೇಕಾದದ್ದು ನಿನ್ನ ಕರ್ತವ್ಯ. ನಾನು ಗೂಢಚಾರ ರನ್ನು ನಿಯೋಜಿಸಿರುವುದು ಅಂಥಹದನ್ನು ತಿಳಿಯುವುದಕ್ಕಾಗಿಯೇ. ನನ್ನ ರಾಜ್ಯಭಾರ

ದಲ್ಲಿ ಪ್ರಜೆಗಳಿಗೆ ಬೇಡವಾದ ಅಂಶವಿದ್ದಲ್ಲಿ ಅದನ್ನು ತಿಳಿದುಕೊಂಡು ನಾನು ತಿದ್ದಿಕೊಳ್ಳಬೇಕಾಗುತ್ತದೆ. ನನ್ನಲ್ಲಾಗಲಿ ನನ್ನ ಕುಟುಂಬದವರಲ್ಲಾಗಲಿ ವ್ಯಕ್ತಿಗತವಾದ ದೋಷವನ್ನು ಪ್ರಜೆಗಳು ಕಂಡರೂ ಅದು ನನಗೆ ತಿಳಿಯಬೇಕು. ಆದ್ದರಿಂದ ಕೆಟ್ಟದೇನಾದರೂ ಇದ್ದರೆ ಅದನ್ನು ನೀನು ತಿಳಿಸಲೇಬೇಕು. ಅದೇ ನನಗೆ ಮುಖ್ಯವಾದದ್ದು'' ಎಂದನು. ರಾಘವನು ನುಡಿದ ಈ ಮಾತನ್ನು ಕೇಳಿ ಭದ್ರನು ಕೈಮುಗಿದುಕೊಂಡು ನಡುಗುತ್ತ ಹೇಳಿದನು : ''ಮಹಾರಾಜ, ಜನರು ಒಳ್ಳೆಯದನ್ನೂ ಹೇಳುತ್ತಾರೆ. ಅಶುಭವಾಕ್ಯವನ್ನೂ ನುಡಿಯುತ್ತಾರೆ. ಚೌಕ, ಅಂಗಡಿ, ರಸ್ತೆ, ವನೋಪವನಗಳು ಹಳ್ಳಿಗಳು ಮುಂತಾದ ಕಡೆಗಳಲ್ಲಿ ನಾನು ಸಂಚರಿಸಿದಾಗ ಒಂದು ಅಶುಭವಾಕ್ಯವು ನನ್ನ ಕಿವಿಗೆ ಬೀಳುತ್ತಿತ್ತು'' ಎಂದು ಹೇಳಿ ಸುಮ್ಮನಾದನು. ಆಗ ಶ್ರೀರಾಮನು ಗಂಭೀರವಾದ ಮುಖಮುದ್ರೆಯನ್ನು ತಾಳಿ ''ಭದ್ರ, ಅದನ್ನು ನೀನು ಹೇಳಲೇ ಬೇಕು''– ಎಂದು ಆಜ್ಞಾಪಿಸಿದನು. ಆಗ ಭದ್ರನು ಹೆದರಿಕೆಯಿಂದ ತೊದಲುತ್ತಲೇ ''ಮಹಾರಾಜ, ಅಲ್ಲಲ್ಲಿ ನನಗೆ ಕೇಳಿಸಿದ ಮಾತು ಇದು. ''ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ರಾವಣಾದಿ ರಾಕ್ಷಸರನ್ನು ಸಂಹರಿಸಿದ್ದು ಅದ್ಭುತವಾದ ಕಾರ್ಯವೇ ಸರಿ. ನಮ್ಮ ಈ ರಾಜವಂಶದಲ್ಲಿ ಇಂಥ ಅಸಾಧಾರಣಕಾರ್ಯವನ್ನು ಯಾರೂ ಮಾಡಿದವರಿಲ್ಲ. ಇದೆಲ್ಲವೂ ನಾವು ಹೆಮ್ಮೆ ಪಡಬೇಕಾದ ಸಂಗತಿ–ಈ ಮಾತನ್ನು ಎಲ್ಲರೂ ಹೇಳುತ್ತಾರೆ. ಇದರ ಮಧ್ಯದಲ್ಲಿ ಹೀಗೆ ನುಡಿಯುವುದೂ ಉಂಟು. ಆದರೆ ರಾವಣನು ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ಹೋಗಿಬಿಟ್ಟನಲ್ಲವೆ? ಆಮೇಲೆ ರಾವಣನನ್ನು ವಧಿಸಿದ್ದೇನೋ ಸರಿಯಾಯಿತು. ಆದರೆ ಸೀತೆಯನ್ನು ಕರೆತಂದು ಅರಮನೆಗೆ ಸೇರಿಸಿಕೊಂಡು ಬಿಟ್ಟನಲ್ಲ, ಅನೇಕ ತಿಂಗಳವರೆಗೆ ರಾವಣನ ವಶದಲ್ಲಿದ್ದ ಆಕೆಯ ನಡತೆ ಶುದ್ಧವಾಗಿರಬಹುದೆ? ಸೀತೆಯ ವಿಷಯದಲ್ಲಿ ಅಷ್ಟು ವ್ಯಾಮೋಹವೇಕೆ? ಅವಳಿಂದಲೇ ತನಗೆ ಸುಖ ಎಂದು ಭಾವಿಸಿಬಿಟ್ಟಿದ್ದಾನೆ. ಪ್ರಜೆಗಳಿಗೆ ಮಾದರಿಯಾಗಿರಬೇಕಾದ ರಾಜನು ಹೀಗೆ ವರ್ತಿಸಿದರೆ ಪ್ರಜೆಗಳು ಅನುಕರಿಸುತ್ತಾರೆ. ''ಯಥಾ ರಾಜಾ ತಥಾ ಪ್ರಜಾ'' ಮಹಾರಾಜ, ಈ ರೀತಿಯಾಗಿ ಪೌರರೂ ಪ್ರಜೆಗಳೂ ಹೇಳಿಕೊಳ್ಳುತ್ತಿರುವುದನ್ನು ನಾನು ಕೇಳಿದೆ. ಇದ್ದುದನ್ನು ಅರಿಕೆಮಾಡಿದ್ದೇನೆ. ನನ್ನನ್ನು ಮನ್ನಿಸಬೇಕು'' ಎಂದು ಹೇಳಿ ಅಡ್ಡಬಿದ್ದು ನಮಸ್ಕರಿಸಿದನು. ಆಗ ಶ್ರೀರಾಮನು ದುಃಖದಿಂದ ವಿಷಣ್ಣನಾದನು. ''ಭದ್ರ, ನೀನು ಹೋಗಬಹುದು'' ಎಂದು ಅವನನ್ನು ಕಳಿಸಿಬಿಟ್ಟನು. ರಾಘವನ ಮನಸ್ಸಿನಲ್ಲಿ ನಾನಾ ಚಿಂತೆಗಳು ಏಳತೊಡಗಿದವು. ಅವನು ಕೆಲವು ಮಿತ್ರ ವರ್ಗದವರನ್ನು ಕರೆಸಿ ಗುಪ್ತಚಾರನಾದ ಭದ್ರನಾಡಿದ ಮಾತನ್ನು ಹೇಳಿ ''ಈ ವಿಷಯವಾಗಿ ನಿಮ್ಮ

ಅಭಿಪ್ರಾಯವೇನು?'' ಎಂದು ಕೇಳಿದನು. ಅವರೆಲ್ಲರೂ ಒಬ್ಬೊಬ್ಬರಾಗಿ ''ಮಹಾರಾಜ, ಭದ್ರನು ಆಡಿದ ನುಡಿ ಸತ್ಯವಾದದ್ದು. ಜನರು ಹಾಗೆ ಆಡಿಕೊಳ್ಳುತ್ತಿರುವುದು ನಿಜ. ಅದನ್ನು ನೀನು ಮನಸ್ಸಿಗೆ ಹಚ್ಚಿಕೊಳ್ಳಬೇಡ'' ಎಂದರು. ಶ್ರೀರಾಮನು ಮಿತ್ರವರ್ಗದವರನ್ನು ಕಳಿಸಿ ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಿಕೊಂಡನು. ಸಮೀಪದಲ್ಲಿದ್ದ ದ್ವಾರಪಾಲನನ್ನು ಕರೆದು ''ಎಲೈ, ಲಕ್ಷ್ಮಣನನ್ನೂ ಭರತ ಶತ್ರುಘ್ನರನ್ನೂ ಕೂಡಲೇ ಕರೆದುಕೊಂಡು ಬಾ'' ಎಂದು ಆಜ್ಞಾಪಿಸಿದನು. ಸ್ವಲ್ಪ ಕಾಲದಲ್ಲಿಯೇ ದ್ವಾರಪಾಲನ ಮಾತಿನಂತೆ ಅವರೆಲ್ಲರೂ ಬಂದು ಶ್ರೀರಾಮನನ್ನು ಕಂಡರು. ಆ ಸಮಯದಲ್ಲಿ ಆತನು ಏಕಾಂತದಲ್ಲಿ ಕುಳಿತು ವಿಷಣ್ಣನಾಗಿ ತಳಮಳಿಸುತ್ತಿದ್ದನು. ಸಕಲೇಂದ್ರಿಯಗಳೂ ವ್ಯಾಕುಲಗೊಂಡಿದ್ದವು. ಭರತನೇ ಮೊದಲಾದ ಮೂವರು ರಾಜಕುಮಾರರು ವಿಶೇಷವೇನಿರಬಹುದೆಂದು ಚಿಂತಿಸುತ್ತಲೇ ಒಳಗೆ ಬಂದರು. ಶ್ರೀರಾಮನ ಮುಖವು ರಾಹುಗ್ರಸ್ತವಾದ ಚಂದ್ರನಂತೆ ಕಾಂತಿಹೀನವಾಗಿತ್ತು, ಕಣ್ಣುಗಳಲ್ಲಿ ಕಂಬನಿ ತುಳುಕುತ್ತಿತ್ತು, ಇದನ್ನು ನೋಡಿ ಭರತಾದಿ ಸೋದರರು ಭೀತಿಯಿಂದ ದಿಗ್ಭ್ರಾಂತರಾಗಿ ಆತನ ಪಾದಗಳಿಗೆ ವಂದಿಸಿದರು. ತಮ್ಮಂದಿರನ್ನು ಕಂಡೊಡನೆ ಶ್ರೀರಾಮನ ಕಣ್ಣುಗಳಿಂದ ಕಣ್ಣೀರು ಮತ್ತಷ್ಟು ಉಕ್ಕಿ ಬಳಬಳನೆ ಸುರಿಯಿತು. ತಮ್ಮಂದಿರನ್ನು ಕೈಹಿಡಿದೆಬ್ಬಿಸಿ ಆಲಿಂಗಿಸಿಕೊಂಡು ''ಕುಳಿತುಕೊಳ್ಳಿರಿ'' ಎಂದನು. ಅನಂತರ ''ತಮ್ಮಂದಿರೆ, ನೀವೇ ನನ್ನ ಸರ್ವಸ್ವ. ನೀವೇ ನನ್ನ ಜೀವಿತ. ಎಲ್ಲರೂ ವಿದ್ಯಾವಂತರೂ ಶಾಸ್ತ್ರಾರ್ಥಗಳನ್ನು ಬಲ್ಲವರೂ ಆಗಿದ್ದೀರಿ. ಯುಕ್ತಾಯುಕ್ತ ವಿವೇಚನೆಯಲ್ಲಿ ಗಟ್ಟಿಗರಾಗಿದ್ದೀರಿ. ರಾಜಪುತ್ರರೆ, ನನಗೊಂದು ದಾರಿಯನ್ನು ತೋರಿಸಿಕೊಡಿ'' ಎಂದು ದೈನ್ಯದಿಂದ ನುಡಿದನು. ಮಹಾರಾಜನು ಏನು ಹೇಳುತ್ತಿರಬಹುದೆಂದು ಅವರು ಉದ್ವಿಗ್ನರಾಗಿ ಆಲಿಸತೊಡಗಿದರು.

೧೨

ಸೀತಾವಿಸರ್ಜನೆ. ಲಕ್ಷ್ಮಣನು ಸೀತಾದೇವಿಯನ್ನು ಗಂಗಾತೀರದ ಅರಣ್ಯಕ್ಕೆ ಕರೆದೊಯ್ಯುವುದು

ಸ್ವಲ್ಪ ಹೊತ್ತಿನ ಮೇಲೆ ಶ್ರೀರಾಮನು ಮಾತಾಡಲಾರಂಭಿಸಿದನು. ಅವನ ಬಾಯಿ ಒಣಗಿತ್ತು. ''ಭರತ, ಲಕ್ಷ್ಮಣ, ಶತ್ರುಘ್ನ, ಸಾವಧಾನದಿಂದ ಕೇಳಿರಿ. ನಗರವಾಸಿಗಳೂ ರಾಷ್ಟ್ರದ ಪ್ರಜೆಗಳೂ ನನ್ನ ಮೇಲೆ ಒಂದು ದೊಡ್ಡ ಅಪವಾದವನ್ನು ಹೊರಿಸಿ ಮಾತನ್ನಾಡುತ್ತಿದ್ದಾರೆ. ನನ್ನ ವಿಷಯದಲ್ಲಿ ಅವರ ಮನಸ್ಸಿಗೆ ಬೇಸರವಾಗಿದೆ. ಅವರ ನಿಂದೆ ಕೇವಲ ವೈಯಕ್ತಿಕವಾದರೂ ನನಗೆ ಮರ್ಮಭೇದಕವಾಗಿ ಪರಿಣಮಿಸಿದೆ.

ನಾನು ಮಹಾತ್ಮರಾದ ಇಕ್ಷ್ವಾಕುರಾಜರ ವಂಶದಲ್ಲಿ ಜನಿಸಿದವನು. ನನ್ನ ಮಡದಿಯಾದ ಸೀತೆಯು ಸಚ್ಚರಿತ್ರಕ್ಕೆ ಪ್ರಸಿದ್ಧವಾದ ಜನಕವಂಶದಲ್ಲಿ ಹುಟ್ಟಿದವಳು. ಸೌಮ್ಯ–ಲಕ್ಷ್ಮಣ, ನಾವು ಅರಣ್ಯದಲ್ಲಿದ್ದಾಗ ರಾವಣನು ಸೀತೆಯನ್ನು ಅಪಹರಿಸಿದ್ದೂ ಅನಂತರ ನಾನು ಆತನನ್ನು ವಿಧ್ವಂಸಗೊಳಿಸಿದ್ದೂ ನಿನಗೆ ಗೊತ್ತಿದೆ. ರಾವಣ ಸಂಹಾರವಾದ ಮೇಲೆ ನಡೆದ ಸಂಗತಿಯೂ ನಿನ್ನ ಕಣ್ಣಮುಂದಿದೆ. ಲಂಕೆಯಲ್ಲಿ ಕೆಲವು ದಿನಗಳವರೆಗೆ ಇದ್ದ ಜನಕಸುತೆಯನ್ನು ರಾಜಧಾನಿಗೆ ಹೇಗೆ ಕರೆದೊಯ್ಯಲೆಂದು ನನಗೆ ಅನ್ನಿಸಿತು. ಅದು ಜನಾಪವಾದದ ಭಯದಿಂದ. ನನಗೆ ಜಾನಕಿಯ ಚಾರಿತ್ರ್ಯದಲ್ಲಿ ಅಣುಮಾತ್ರವೂ ಶಂಕೆಯಿರಲಿಲ್ಲ. ವಾನರ ಸೇನೆಗೂ ರಾಕ್ಷಸರಿಗೂ ಆ ಮೂಲಕ ಜಗತ್ತಿಗೂ ನಂಬಿಕೆಯಾಗಲೆಂದು ನಾನು ಅವಳನ್ನು ಥಟ್ಟನೆ ಸ್ವೀಕರಿಸದೆ, ತಿರಸ್ಕರಿಸಿದ್ದನ್ನು ನೀನು ಬಲ್ಲೆ. ಆಗ ವೈದೇಹಿಯು ನಿನ್ನೆದುರಿಗೇ ಅಗ್ನಿಯಲ್ಲಿ ಧುಮುಕಿದಳು. ನಿನ್ನೆದುರಿಗೇ ಅಗ್ನಿದೇವನು ಮೈಥಿಲಿಯಲ್ಲಿ ಪಾಪಲೇಶವೂ ಇಲ್ಲವೆಂದು ಹೇಳಿ ತಾನೇ ಸಾಕ್ಷಾತ್ತಾಗಿ ಆ ದೇವಿಯನ್ನು ತಂದು ನನಗೊಪ್ಪಿಸಿದನು. ಅದೆಲ್ಲವನ್ನೂ ನೀನೇ ನೋಡಿದ್ದೀಯೆ. ಆಗ ಬ್ರಹ್ಮನೇ ಮೊದಲಾದ ದೇವತೆಗಳು ಪ್ರತ್ಯಕ್ಷರಾಗಿ ದೇವಿಯು ನಿರ್ದೋಷಳೆಂದು ಸಾರಿದ್ದಾರೆ. ದೇವೇಂದ್ರನು ಬಂದು ಅದೇ ಮಾತನ್ನು ತಿಳಿಸಿದ್ದಾನೆ. ಸೀತೆಯು ಪರಿಶುದ್ಧಳೆಂದೂ, ಕೀರ್ತಿಶಾಲಿನಿಯೆಂದೂ ನನ್ನ ಅಂತರಾತ್ಮಕ್ಕೆ ತಿಳಿದೇ ಇತ್ತು. ಆದರೂ ಲೋಕಾಪವಾದಕ್ಕೆ ಅಂಜಿ, ಈ ನಮ್ಮ ವಂಶಕ್ಕೆ ಕಳಂಕಲೇಶವೂ ತಗುಲಬಾರದೆಂದು ನಾನು ಅವಳನ್ನು ಮೊದಲು ತಿರಸ್ಕರಿಸಿದೆ. ಎಲ್ಲರೆದುರಿಗೆ ಅವಳ ಚಾರಿತ್ರ ಶುದ್ಧಿಯು ಪ್ರಕಟವಾಗಲೆಂಬುದೇ ನನ್ನ ಉದ್ದೇಶವಾಗಿತ್ತು. ಆದರೂ ನನ್ನ ಮೇಲೆ ಅಪವಾದ ಬಂದೇ ಬಂದಿತು. ನನ್ನ ಹೃದಯಕ್ಕೆ ಅತೀವ ವಿಷಾದವಾಗಿದೆ. ದೂರದಲ್ಲಿ ನಡೆದ ಮಹತ್ತರವಾದ ಆ ಸಂಗತಿಯನ್ನು ಈ ಪ್ರಜೆಗಳು ನಂಬದೇ ಹೋಗಿದ್ದಾರೆ. ಅದೇ ಮಾತನ್ನು ಆಡಿಕೊಳ್ಳುತ್ತಿದ್ದಾರೆಂಬುದು ನಿಶ್ಚಿತವಾಯಿತು. ಲೋಕಾಪವಾದವೆಂಬುದು ಬಹುದೊಡ್ಡದು. ರಾಜನೇ ತಪ್ಪುದಾರಿಯನ್ನು ತುಳಿದಿದ್ದಾನೆಂದು ಪ್ರಜೆಗಳು ತಿಳಿದರೆ ಧರ್ಮದ ರಕ್ಷಣೆ ಹೇಗಾಗುತ್ತದೆ? ಧರ್ಮವಿಪ್ಲವವೇ ಆಗಿಹೋದೀತು. ಪ್ರಜೆಗಳಿಗೆ ರಾಜನ ವಿಷಯದಲ್ಲಿ ಸಂಪೂರ್ಣ ವಿಶ್ವಾಸವಿರಬೇಕು''.

''ನಾನೀಗ ಶೋಕದ ಕಡಲಿನಲ್ಲಿ ಮುಳುಗಿ ಹೋಗಿದ್ದೇನೆ. ಇದಕ್ಕಿಂತಲೂ ಹೆಚ್ಚಿನ ದುಃಖ ನನಗೆ ಒದಗಿಲ್ಲ. ಈಗ ನಾನೇನು ಮಾಡಬೇಕು?'' ಎಂದು ಹಲುಬಿದನು. ತಮ್ಮಂದಿರೊಬ್ಬರೂ ಮಾತಾಡಲಿಲ್ಲ. ಅವರ ಬಾಯಿ ಕಟ್ಟಿಹೋಗಿತ್ತು. ಮೌನವು ಎಲ್ಲೆಡೆಯೂ ಆವರಿಸಿತು. ಎಲ್ಲರೂ ತಲೆತಗ್ಗಿಸಿ ಕುಳಿತಿದ್ದರು. ಅನಂತರ ರಾಘವನು ಧೈರ್ಯವನ್ನು ತಂದುಕೊಂಡು ಮನಸ್ಸನ್ನು ಗಟ್ಟಿಮಾಡಿ ತಲೆಯೆತ್ತಿದನು. ಲಕ್ಷ್ಮಣನ

ಕಡೆಗೆ ನೋಡಿ, ''ಸೌಮಿತ್ರಿ, ನಾನೊಂದು ನಿಶ್ಚಯವನ್ನು ತಳೆದಿದ್ದೇನೆ. ನೀವು ಯಾರೂ ಅಡ್ಡಬರಬಾರದು. ಈ ವಿಚಾರವು ಕೇವಲ ನನ್ನ ಸುಖ ದುಃಖಗಳಿಗೆ ಸಂಬಂಧಿಸಿದ್ದು. ಲಕ್ಷ್ಮಣ, ನಾಳೆ ಮುಂಜಾನೆ ಸುಮಂತ್ರನಿಂದೊಡಗೂಡಿದ ರಥದಲ್ಲಿ ಸೀತೆಯನ್ನು ಕರೆದೊಯ್ದು ಗಂಗೆಯ ದಡದಲ್ಲಿರುವ ಅರಣ್ಯದಲ್ಲಿ ಸೀತೆಯನ್ನು ತ್ಯಜಿಸಿಬಿಡು. ಸಮೀಪದಲ್ಲಿಯೇ ವಾಲ್ಮೀಕಿಮುನಿಗಳ ದಿವ್ಯವಾದ ಆಶ್ರಮವಿದೆ. ವಿಜನವಾದ ಸ್ಥಳದಲ್ಲಿ ಅವಳನ್ನು ವಿಸರ್ಜಿಸಿ ಕೂಡಲೇ ಹೊರಟು ಬಂದುಬಿಡು. ಲಕ್ಷ್ಮಣ, ನನಗಾಗಿ ಲೆಕ್ಕವಿಲ್ಲದಷ್ಟು ಕಷ್ಟದ ಕಾರ್ಯಗಳನ್ನು ಮಾಡಿದ್ದೀಯೆ. ಒಮ್ಮೆಯೂ ನೀನು ನನಗೆ ಎದುರು ಹೇಳಿದವನಲ್ಲ. ಸೌಮಿತ್ರಿ, ಈ ವಿಷಯದಲ್ಲಿ ಮತ್ತೆ ವಿಚಾರಮಾಡಬೇಡ. ನನ್ನ ಆಜ್ಞೆಯನ್ನು ಪಾಲಿಸು. ಗಂಗಾತೀರದಲ್ಲಿರುವ ಋಷಿಗಳ ಆಶ್ರಮವನ್ನು ನೋಡಲು ಅವಳು ಬಯಸಿದ್ದಾಳೆ. ಅವಳ ಬಯಕೆಯನ್ನು ಈ ಪ್ರಕಾರವಾಗಿ ತೀರಿಸು. ಇನ್ನು ಯಾರೂ ಮಾತಾಡಬೇಡಿ'' ಎಂದನು. ಹೀಗೆ ನುಡಿಯುವಾಗ ಶ್ರೀರಾಮನ ಮುಖದ ಮೇಲೆ ಒಂದೇ ಸಮನೆ ಕಣ್ಣೀರು ಹರಿಯುತ್ತಿತ್ತು. ಸೋದರರೊಂದಿಗೆ ಇಷ್ಟು ಮಾತನ್ನು ಹೇಳಿ ಆ ಧರ್ಮಾತ್ಮನು ಎದ್ದು ಒಳಗೆ ಹೋದನು. ಆತನು ಶೋಕಾವಿಷ್ಟಚಿತ್ತನಾಗಿ, ಬಂಧನದಲ್ಲಿ ಸಿಕ್ಕಿಕೊಂಡ ಸಲಗನಂತೆ ನಿಟ್ಟುಸಿರುಬಿಡುತ್ತ, 'ಹಾ ಸೀತೆ!' ಎಂದು ಕಣ್ಣೀರು ಸುರಿಸುತ್ತ, ಜಗತ್ತನ್ನೇ ಮರೆತಂತೆ ಇದ್ದನು.

ರಾತ್ರಿಕಳೆದು ಬೆಳಗಾಯಿತು. ದೈನ್ಯದಿಂದ ಚಿಂತಾಗ್ರಸ್ತನಾಗಿದ್ದ ಲಕ್ಷ್ಮಣನಿಗೆ ಬೇರೆ ದಾರಿಯೇನೂ ತೋರಲಿಲ್ಲ. ಅವನ ಬಾಯಿ ಒಣಗಿತ್ತು. ಅವನು ಸುಮಂತ್ರನನ್ನು ಕರೆದು ''ಸುಮಂತ್ರ, ರಥವು ಸಿದ್ಧವಾಗಲಿ. ರಾಜಭವನದಿಂದ ಉತ್ತಮವಾದ ಆಸನವನ್ನು ತಂದು ಸೀತಾದೇವಿಗೋಸ್ಕರ ಸಜ್ಜುಗೊಳಿಸು. ನಾನು ಮಹಾರಾಜನ ಆಜ್ಞೆಯಂತೆ ಸೀತಾದೇವಿಯನ್ನು ಮಹರ್ಷಿಗಳ ಆಶ್ರಮಕ್ಕೆ ಕರೆದೊಯ್ಯಬೇಕಾಗಿದೆ'' ಎಂದು ಹೇಳಿದನು. ಅಂತೆಯೇ ಸುಮಂತ್ರನು ಶ್ರೇಷ್ಠವಾದ ಸುಖಶಯ್ಯೆಯೊಂದನ್ನು ತಂದು ರಥದಲ್ಲಿ ಹಾಸಿ, ಉತ್ತಮಾಶ್ವಗಳನ್ನು ಹೂಡಿದ ರಥವನ್ನು ತಂದನು. ಅನಂತರ ಸೌಮಿತ್ರಿಯು ರಾಜಭವನಕ್ಕೆ ಹೋಗಿ ಜಾನಕಿಯನ್ನು ಸಂದರ್ಶಿಸಿ, ''ದೇವಿ, ಮಹಾರಾಜನಲ್ಲಿ ನೀನು ಒಂದು ಪ್ರಾರ್ಥನೆಯನ್ನು ಸಲ್ಲಿಸಿರುವೆಯಂತೆ. ಅದರ ಪ್ರಕಾರ ನಿನ್ನನ್ನು ಋಷಿಗಳ ಆಶ್ರಮದ ಬಳಿಗೆ ಕರೆದೊಯ್ಯಬೇಕೆಂದು ಮಹಾರಾಜನು ನನಗೆ ಆಜ್ಞಾಪಿಸಿದ್ದಾನೆ. ತಾಯಿ–ವೈದೇಹಿ, ಗಂಗಾತೀರದಲ್ಲಿರುವ ಋಷಿಗಳ ಪುಣ್ಯಾಶ್ರಮಕ್ಕೆ ನಿನ್ನನ್ನು ಕರೆದೊಯ್ಯುವೆನು'' ಎಂದು ನಿವೇದಿಸಿದನು. ಲಕ್ಷ್ಮಣನ ಮಾತನ್ನು ಕೇಳಿ ಸೀತಾದೇವಿಗೆ ಪರಮಾನಂದವಾಯಿತು. ಅವಳು ಹೊರಡಲು ನಿಶ್ಚಯಿಸಿದಳು. ಋಷಿಪತ್ನಿಯರಿಗೆ ಕಾಣಿಕೆಯೆಂದು ಅರ್ಪಿಸುವುದಕ್ಕಾಗಿ ವಿವಿಧವಸ್ತುಗಳನ್ನು ಧನವನ್ನು

ರತ್ನಾಭರಣಗಳನ್ನು ತೆಗೆದುಕೊಂಡು ಅವನ್ನು ಲಕ್ಷ್ಮಣನಿಗೆ ತೋರಿಸಿದಳು. ಲಕ್ಷ್ಮಣನು ಅವನ್ನು ರಥದಲ್ಲಿಟ್ಟನು. ರಾಜಕಾರ್ಯದಲ್ಲಿ ತೊಡಗಿರಬಹುದಾದ ಶ್ರೀರಾಮನನ್ನು ಕಾಣಲು ಇದು ಸಮಯವಲ್ಲವೆಂದುಕೊಂಡು, ಸೀತಾದೇವಿಯು ಸಂಭ್ರಮದಿಂದ ರಥವನ್ನೇರಿದಳು. ಲಕ್ಷ್ಮಣನು ಖಿನ್ನನಾಗಿ ರಥವನ್ನು ಹತ್ತಿಕುಳಿತನು. ರಥವು ಗಂಗಾತೀರದ ಕಡೆಗೆ ಹೊರಟಿತು.

ದಾರಿಯಲ್ಲಿ ಜಾನಕಿಯು ಲಕ್ಷ್ಮಣನೊಡನೆ ''ಲಕ್ಷ್ಮಣ, ನನಗೆ ದುಃಶಕುನಗಳಾಗುತ್ತಿವೆ. ಬಲಗಣ್ಣು ಹಾರುತ್ತಿದೆ. ಮೈನಡುಗುತ್ತಿದೆ. ಹೊಟ್ಟೆಯಲ್ಲಿ ಏನೋ ಸಂಕಟ; ಏನೋ ಕಳವಳ. ಎಲ್ಲವೂ ಶೂನ್ಯವಾದಂತೆ ಕಾಣುತ್ತಿದೆ! ನಿನ್ನ ಅಣ್ಣನಿಗೆ ಮಂಗಳವಾಗಲಿ! ನನ್ನ ಅತ್ತೆಯವರೆಲ್ಲರಿಗೂ ಶುಭವಾಗಲಿ! ಸಕಲ ಪ್ರಜೆಗಳಿಗೂ ಒಳ್ಳೆಯದಾಗಲಿ!'' ಎಂದು ಹೇಳಿ, ಕೈಮುಗಿದುಕೊಂಡು ಮೇಲಕ್ಕೆ ನೋಡಿ ''ಭಗವಂತ, ನಿನ್ನ ಕೃಪೆಯಿಂದ ಎಲ್ಲರಿಗೂ ಶುಭವಾಗಲಿ'' ಎಂದು ಪ್ರಾರ್ಥಿಸಿಕೊಂಡಳು. ಲಕ್ಷ್ಮಣನು ಏನೂ ತಿಳಿಯದವನಂತೆ ಮೈಥಿಲಿಗೆ ತಲೆಬಾಗಿ ವಂದಿಸಿ ''ಶುಭವಾಗಲಿ'' ಎಂದು ನುಡಿದು ಸುಮ್ಮನಾದನು. ಅವನ ಹೃದಯವು ಒಣಗಿ ಸೊರಗಿಹೋಗಿತ್ತು.

ಸಂಜೆಯಾಯಿತು. ಗೋಮತೀನದೀತೀರದಲ್ಲಿದ್ದ ಒಂದು ಋಷ್ಯಾಶ್ರಮದಲ್ಲಿ ಆ ರಾತ್ರಿ ಎಲ್ಲರೂ ಉಳಿದುಕೊಂಡರು. ಬೆಳಗಾದೊಡನೆ ಪ್ರಾತರ್ವಿಧಿಗಳನ್ನು ಮುಗಿಸಿ ಸೌಮಿತ್ರಿಯು ಸುಮಂತ್ರನನ್ನು ಕರೆದು ''ಸುಮಂತ್ರ, ರಥವನ್ನು ಹೂಡು'' ಎಂದನು. ರಥವು ವೇಗದಿಂದ ಮುಂದಕ್ಕೆ ಸಾಗಿತು. ಮಧ್ಯಾಹ್ನದ ಹೊತ್ತಿಗೆ ಭಾಗೀರಥೀನದಿಯ ಸಮೀಪಕ್ಕೆ ರಥವು ಬಂದಿತು.

ಗಂಗಾನದಿಯನ್ನು ಕಂಡೊಡನೆ ಲಕ್ಷ್ಮಣನು ಬಿಕ್ಕಿಬಿಕ್ಕಿ ಗಟ್ಟಿಯಾಗಿ ಅಳತೊಡಗಿದನು. ಲಕ್ಷ್ಮಣನು ಅಳುವುದನ್ನು ಕಂಡು ಸೀತೆಯು ''ಇದೇನು ಲಕ್ಷ್ಮಣ ಅಳುತ್ತಿರುವೆ? ಪವಿತ್ರವಾದ ಈ ಜಾಹ್ನವೀತೀರಕ್ಕೆ ಬರಬೇಕೆಂಬುದು ನನ್ನ ಬಹುಕಾಲದ ಬಯಕೆಯಾಗಿತ್ತು. ಅದು ನೆರವೇರಿತೆಂಬ ಸಂತೋಷದ ಸಮಯದಲ್ಲಿ ನೀನು ಅಳುತ್ತಿದ್ದೀಯೆ! ಯಾವಾಗಲೂ ಅಣ್ಣನ ಬಳಿ ಇರತಕ್ಕವನು ನೀನು! ಎರಡು ದಿನ ಅವನನ್ನಗಲಬೇಕಾಯಿತೆಂದು ಅಳುತ್ತಿದ್ದೀಯೆ! ನನಗೂ ಶ್ರೀರಾಮಚಂದ್ರನು ಪ್ರಾಣಕ್ಕಿಂತ ಪ್ರಿಯನಾದವನು. ನಾನು ಅಳುತ್ತಿಲ್ಲ, ನೋಡು! ಚಿಕ್ಕ ಹುಡುಗನಂತೆ ಅಳಬೇಡ ಲಕ್ಷ್ಮಣ. ಗಂಗೆಯನ್ನು ದಾಟಿಸಿ ನನಗೆ ತಪಸ್ವಿಗಳ ದರ್ಶನವನ್ನು ಮಾಡಿಸು. ಆ ತಪೋಧನರನ್ನು ಕಂಡು ನಮಸ್ಕರಿಸಿ ಈ ವಸ್ತ್ರಾಭರಣಗಳನ್ನು ಅರ್ಪಿಸುವೆನು.

ಋಷಿಪತ್ನಿಯರನ್ನು ಕಂಡು ಅವರ ಕುಶಲವನ್ನು ವಿಚಾರಿಸುವೆನು. ಒಂದು ರಾತ್ರಿ ತಪೋವನದಲ್ಲಿದ್ದು ಅವರೆಲ್ಲರಿಗೂ ಅಭಿವಾದನೆ ಮಾಡಿ, ತಿರುಗಿ ಅಯೋಧ್ಯೆಗೆ ಹೊರಟು ಬಿಡೋಣ! ನನಗೂ ಸಹ ಪದ್ಮದಳಾಯತಾಕ್ಷನಾದ ಶ್ರೀರಾಮನನ್ನು ನೋಡಲು ಮನಸ್ಸು ಹಾತೊರೆಯುತ್ತದೆ'' ಎಂದಳು. ಸೌಮಿತ್ರಿಯು ಮಾತನಾಡ ಲಾರದೆ, ಉಕ್ಕುತ್ತಿದ್ದ ಕಣ್ಣೀರನ್ನು ಒರಸಿಕೊಳ್ಳುತ್ತಿದ್ದನು. ರಥವನ್ನು ಗಂಗಾತೀರದಲ್ಲಿ ನಿಲ್ಲಿಸಿ ಕೆಳಗಿಳಿದು ನಾವಿಕರನ್ನು ಕರೆಸಿದನು. ನಾವಿಕರು ಬಂದು ಕೈಮುಗಿದು ವಿನಯದಿಂದ ''ನಾವೆಯು ಸಿದ್ಧವಾಗಿದೆ'' ಎಂದರು. ಲಕ್ಷ್ಮಣನು ಸೀತಾದೇವಿಯನ್ನು ಎಚ್ಚರಿಕೆಯಿಂದ ನಾವೆಗೆ ಹತ್ತಿಸಿ, ತಾನೂ ನಾವೆಯನ್ನೇರಿದನು. ಸುಮಂತ್ರನಿಗೆ ''ರಥಾಶ್ವಗಳನ್ನು ನೋಡಿಕೊಳ್ಳುತ್ತ ಅಲ್ಲಿಯೇ ಕಾದಿರು'' ಎಂದು ತಿಳಿಸಿ, ನಾವಿಕನಿಗೆ 'ನಡೆ' ಎಂದನು. ನಾವೆಯು ಗಂಗಾನದಿಯ ಮೇಲೆ ಸಾಗುತ್ತಿರುವಾಗ ಸೀತೆಯು ಕೈಮುಗಿದುಕೊಂಡು ''ತಾಯಿ ಭಾಗೀರಥಿ, ನಿನ್ನ ದರ್ಶನದಿಂದ ನಾನು ಧನ್ಯಳಾದೆನು'' ಎಂದಳು. ನಾವೆಯು ಆಚೆಯ ದಡವನ್ನು ಸೇರಿತು. ಲಕ್ಷ್ಮಣನು ಸೀತೆಯನ್ನು ಮೆಲ್ಲಗೆ ಇಳಿಸಿ ದಡವನ್ನೇರಿ ಸ್ವಲ್ಪದೂರ ಮುಂದಕ್ಕೆ ಕರೆದುಕೊಂಡು ಹೋದನು. ಅಲ್ಲಿ ಅವನು ಥಟ್ಟನೆ ನಿಂತು ಕೈಮುಗಿದುಕೊಂಡು ಜಾನಕಿಯನ್ನು ಕುರಿತು ಇಂತೆಂದನು. ''ದೇವಿ–ವೈದೇಹಿ, ಪ್ರಾಜ್ಞನಾದ ಮಹಾರಾಜನು ನನ್ನನ್ನು ಈ ಪ್ರಕಾರವಾಗಿ ಲೋಕನಿಂದೆಗೆ ಗುರಿ ಮಾಡಿದನು. ನನ್ನ ಎದೆಯಲ್ಲಿ ಶೂಲವನ್ನು ನೆಟ್ಟಂತಾಗಿದೆ. ಸರ್ವನಿಂದ್ಯವಾದ ಈ ಬಗೆಯ ಕಾರ್ಯದಲ್ಲಿ ಅಣ್ಣನು ನನ್ನನ್ನು ನೇಮಿಸಬಾರದಾಗಿತ್ತು. ಓ ದೇವಿ – ಅಮ್ಮಾ, ಪ್ರಸನ್ನಳಾಗು. ನನ್ನಲ್ಲಿ ಪಾಪವನ್ನೆಣಿಸಬೇಡ'' ಎಂದು ಹೇಳುತ್ತ ಲಕ್ಷ್ಮಣನು ನೆಲದಮೇಲೆ ಕುಸಿದುಬಿದ್ದನು. ಅವನು ಗಟ್ಟಿಯಾಗಿ ಅಳುತ್ತ 'ಈಗಲೇ ನನಗೆ ಸಾವು ಬರಬಾರದೇ' ಎಂದು ಹಲುಬುತ್ತಿದ್ದನು. ಅದನ್ನು ಕಂಡು ಮೈಥಿಲಿಯು ಶೋಕದಿಂದ ದಿಗ್ಭ್ರಾಂತಳಾದಳು. ಅವಳು ''ಲಕ್ಷ್ಮಣಾ, ಇದೇನೆಂದು ನನಗೆ ತಿಳಿಯದಾಗಿದೆ. ನಿನ್ನ ಮನಸ್ಸಿಗೆ ಸ್ವಲ್ಪವೂ ನೆಮ್ಮದಿ ಇಲ್ಲವೆಂಬುದು ಸ್ಪಷ್ಟವಾಗಿದೆ. ಮಹಾರಾಜನು ಕ್ಷೇಮದಿಂದಿರುವನಲ್ಲವೆ? ಮಹಾರಾಜನ ಆಣೆಯಿಟ್ಟು ಕೇಳುತ್ತೇನೆ. ನಿನಗಾದ ಕಷ್ಟವೇನೆಂಬುದನ್ನು ತಿಳಿಸಿಬಿಡು. ಇದು ನನ್ನ ಆಜ್ಞೆ'' ಎಂದಳು. ವೈದೇಹಿಯು ಹೀಗೆ ಒತ್ತಾಯ ಪಡಿಸಲು ಲಕ್ಷ್ಮಣನು ದೈನ್ಯದಿಂದ ತಲೆತಗ್ಗಿಸಿ ಕಣ್ಣೀರು ಸುರಿಸುತ್ತ ಗದ್ಗದಿಸುತ್ತ ನುಡಿದನು. ''ಜನಕಾತ್ಮಜೆ, ನಿನ್ನ ವಿಷಯವಾಗಿ ನಗರದಲ್ಲಿಯೂ ರಾಷ್ಟ್ರದಲ್ಲಿಯೂ ಹುಟ್ಟಿಕೊಂಡಿರುವ ಒಂದು ಕೆಟ್ಟ ಅಪವಾದವನ್ನು ಅಣ್ಣನು ಕೇಳಿದನಂತೆ. ಅಪವಾದವು ಹುಟ್ಟಿಕೊಂಡಿರುವುದು ನಿಜವೆಂದು ತಿಳಿದಮೇಲೆ ರಾಘವನು ತುಂಬ ಖಿನ್ನನಾಗಿ ವಿಷಯವನ್ನು ನನಗೆ ತಿಳಿಸಿ ಗೃಹದೊಳಗೆ ಹೊರಟು

ಹೋದನು. ದೇವಿ, ಆ ಕೆಟ್ಟಮಾತುಗಳನ್ನು ನಿನ್ನೆದುರಿಗೆ ನಾನು ಹೇಳಬಾರದು. ಅಜ್ಞರೂ, ಅವಿವೇಕಿಗಳೂ ಆದ ಜನರು ಹೇಳಿಕೊಳ್ಳುತ್ತಿದ್ದ ಅಪವಾದವನ್ನು ಕೇಳಿ ನನ್ನ ಅಣ್ಣನು ತುಂಬ ದುಃಖದಿಂದಲೇ ನಿನ್ನನ್ನು ತ್ಯಜಿಸಬೇಕೆಂದು ಅಪ್ಪಣೆಮಾಡಿದ್ದಾನೆ. ಲಂಕೆಯ ಬಳಿ ಅಗ್ನಿ ಸಾಕ್ಷಿಕವಾಗಿ ನನ್ನೆದುರಿಗೆ ನೀನು ನಿರ್ದೋಷಳೆಂದು ನಿಶ್ಚಿತ ವಾಗಿದೆ. ಹೀಗಿದ್ದರೂ ಮಹಾರಾಜನು ನಿನ್ನನ್ನು ತ್ಯಜಿಸಿದ್ದಾನೆ. ಜನಾಪವಾದಕ್ಕೆ ಹೆದರಿ ಹೀಗೆ ಮಾಡಿದ್ದಾನೆಯೇ ಹೊರತು ಬೇರೆಯಲ್ಲ. ಶೋಕಸಂತಪ್ತನಾಗಿ ಬೇರೊಂದು ದಾರಿಯನ್ನು ಕಾಣದೆ ಈ ರೀತಿ ಆಜ್ಞೆಮಾಡಿದನು. ಅಮ್ಮ, ಅನ್ಯಥಾ ತಿಳಿಯಬಾರದು. ಋಷ್ಯಾಶ್ರಮಗಳ ಬಳಿಯಲ್ಲಿ ನಿನ್ನನ್ನು ಬಿಟ್ಟು ಹೋಗಬೇಕಾಗಿದೆ. ಇದು ಮಹಾರಾಜನ ಆಜ್ಞೆ. ಋಷಿಗಳ ಆಶ್ರಮಕ್ಕೆ ಬರಬೇಕೆಂಬುದು ನಿನ್ನ ಬಯಕೆಯಾಗಿತ್ತಂತೆ. ಇದು ಗಂಗಾತೀರದಲ್ಲಿರುವ ಬ್ರಹ್ಮರ್ಷಿಗಳ ಪವಿತ್ರವಾದ ತಪೋವನ. ಓ ಮಂಗಳ ದೇವತೆ, ವಿಷಾದಿಸಬೇಡ. ನನ್ನ ತಂದೆಯಾದ ದಶರಥಮಹಾರಾಜನಿಗೆ ಅತ್ಯಂತಪ್ರಿಯರಾದ ವಾಲ್ಮೀಕಿ ಮಹರ್ಷಿಗಳು ಇಲ್ಲಿ ನೆಲೆಸಿದ್ದಾರೆ. ವಿಖ್ಯಾತರಾದ ಆ ಮಹಾತ್ಮರ ಪಾದದ ನೆರಳಲ್ಲಿ ನಿನಗೆ ಶಾಂತಿಯು ದೊರಕುತ್ತದೆ. ವ್ರತಶೀಲಳಾಗಿ ಮನಸ್ಸಿಗೆ ಸಮಾಧಾನ ವನ್ನು ತಂದುಕೊ. ಪತಿವ್ರತಾಧರ್ಮವನ್ನು ಪಾಲಿಸುತ್ತಾ ಶ್ರೀರಾಮನನ್ನು ಹೃದಯದಲ್ಲಿ ನೆನೆಸುತ್ತಿರು. ದೇವಿ, ಅದರಿಂದ ನಿನಗೆ ಪರಮಶ್ರೇಯಸ್ಸು ದೊರೆಯುವುದು'' ಎಂದನು.

೧೩

ಸೀತಾದೇವಿಯಿಂದ ಶ್ರೀರಾಮನಿಗೆ ಸಂದೇಶ.
ವಾಲ್ಮೀಕಿಮುನಿಗಳ ಆಶ್ರಮವನ್ನು ಸೇರಿಕೊಳ್ಳುವುದು.

ಲಕ್ಷ್ಮಣನು ವಚನವನ್ನು ಕೇಳಿ ವೈದೇಹಿಯು ದಿಗ್ಭ್ರಾಂತಳಾಗಿ ಶೋಕಾತಿರೇಕ ದಿಂದ ನೆಲದ ಮೇಲೆ ಕುಸಿದು ಹೋದಳು. ಅವಳಿಗೆ ಎಚ್ಚರದಪ್ಪಿದಂತಾಯಿತು. ಆಮೇಲೆ ಕಂಬನಿ ಮಿಡಿಯುತ್ತ ಲಕ್ಷ್ಮಣನನ್ನು ನೋಡಿ ದೈನ್ಯಸ್ವರದಿಂದ ಹೀಗೆಂದಳು. ''ಲಕ್ಷ್ಮಣ, ದುಃಖವನ್ನು ಅನುಭವಿಸುತ್ತಿರಬೇಕೆಂದೇ ಬ್ರಹ್ಮನು ನನಗೆ ಈ ದೇಹವನ್ನು ಕೊಟ್ಟಿದ್ದಾನೆ. ಈ ದೇಹವು ದುಃಖದ ಮೂರ್ತಿಯಾಗಿ ಬಿಟ್ಟಿದೆ. ನಾನು ಪೂರ್ವ ಜನ್ಮದಲ್ಲಿ ಯಾವ ಪಾಪ ಕೃತ್ಯವನ್ನು ಮಾಡಿರಬಹುದು? ಯಾವ ಸ್ತ್ರೀಯನ್ನು ಅವಳ ಗಂಡನಿಂದ ಅಗಲಿಸಿರಬಹುದು? ಇಷ್ಟೊಂದು ಪರಿಶುದ್ಧ ಚಿತ್ತಳಾಗಿ ಪಾತಿವ್ರತ್ಯವನ್ನು ಪಾಲಿಸುತ್ತಿದ್ದರೂ ಮಹಾರಾಜನು ನನ್ನನ್ನು ತ್ಯಜಿಸಿಬಿಟ್ಟನಲ್ಲ. ಹಿಂದೆ ಕಾಡಿನಲ್ಲಿ ನಾನಾ ದುಃಖಗಳಿಗೆ ಪಾತ್ರಳಾದರೂ ಶ್ರೀರಾಮನ ಪಾದಸೇವೆಮಾಡುತ್ತ ಸಂತೋಷದಿಂದಲೇ

ಇದ್ದೆನು. ಸೌಮ್ಯ, ಈಗ ನಾನು ರಾಮ ಸಾನ್ನಿಧ್ಯವಿಲ್ಲದೆ ಏಕಾಕಿನಿಯಾಗಿ ಈ ಅಡವಿಯಲ್ಲಿರುವುದು ಹೇಗೆ? ನನ್ನ ಕಷ್ಟವನ್ನು ಯಾರಲ್ಲಿ ತೋಡಿಕೊಳ್ಳಲಿ? ''ನೀನು ಯಾವ ಪಾಪ ಕೃತ್ಯವನ್ನು ಮಾಡಿದೆ? ಧರ್ಮಾತ್ಮನಾದ ರಾಮನು ನಿನ್ನನ್ನು ತ್ಯಜಿಸಲು ಕಾರಣವೇನು?'' ಎಂದು ಮುನಿಗಳು ಕೇಳಿದರೆ ನಾನು ಯಾವ ಉತ್ತರವನ್ನು ಕೊಡಲಿ? ಸೌಮಿತ್ರಿ, ಈ ಗಂಗಾಜಲದಲ್ಲಿ ಬಿದ್ದು ಜೀವವನ್ನು ತೊರೆದು ಬಿಡಲೆ? ತೊರೆದರೆ ನನ್ನ ಪತಿಯ ವಂಶವು ಇಲ್ಲಿಗೆ ಮುಗಿದು ಹೋಗುವುದಲ್ಲವೆ? ಲಕ್ಷ್ಮಣ, ನಿನಗೆ ಆಜ್ಞೆಯಾದಂತೆ ಮಾಡು. ಸದಾ ದುಃಖ ಭಾಗಿನಿಯಾದ ನನಗಾಗಿ ಮರುಕ ವೇಕೆ? ನನ್ನನ್ನು ತ್ಯಜಿಸಿಹೋಗು. ರಾಜಾಜ್ಞೆಯನ್ನು ಪಾಲಿಸು. ನಾನು ಹೇಳುವ ಈ ಮಾತನ್ನಾಲಿಸು. ನನ್ನ ಪರವಾಗಿ ಅತ್ತೆಯರೆಲ್ಲರಿಗೂ ಮಹಾರಾಜನಿಗೂ ತಲೆಬಾಗಿ ನಮಸ್ಕರಿಸಿ ಅವರೆಲ್ಲರ ಕುಶಲವನ್ನು ಹಾರೈಸಿದ್ದೇನೆಂದು ಹೇಳು. ಧರ್ಮದ ವಿಷಯದಲ್ಲಿ ಎಚ್ಚರಿಕೆಯಿಂದ ನಡೆಯುವ ನಿನ್ನ ಅಣ್ಣನಾದ ನರೇಂದ್ರನಿಗೆ ಈ ಮಾತನ್ನು ತಿಳಿಸು. ''ರಘುನಾಥ, ಸೀತೆಯು ನಿನ್ನ ವಿಷಯದಲ್ಲಿ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಳೆಂದೂ ನಿನ್ನ ಹಿತವನ್ನೇ ಕೋರುತ್ತಿದ್ದಳೆಂದೂ ನಿನಗೆ ತಿಳಿದಿದೆ. ಆದರೂ ಅಪಕೀರ್ತಿಗೆ ಹೆದರಿ ನನ್ನನ್ನು ತೊರೆದಿದ್ದೀಯೆ. ಜನರ ಕೆಟ್ಟ ನುಡಿಗಳಿಂದ ನಿನಗೆ ಬಂದಿರುವ ನಿಂದೆಯನ್ನು ನಾನಲ್ಲವೇ ಪರಿಹರಿಸಬೇಕಾದವಳು? ನನ್ನಿಂದಲ್ಲವೇ ನಿನಗೆ ಅಪಕೀರ್ತಿ ಬಂದುದು? ಪ್ರಜೆಗಳು ಹಾಗೆ ಮಾತಾಡಿಕೊಳ್ಳುವುದು ಸಹಜವೇ ಸರಿ. ರಾಜನಾದ ನೀನು ಮೊದಲು ಪ್ರಜೆಗಳ ಯೋಗಕ್ಷೇಮಕ್ಕೆ ಗಮನವಿಡ ಬೇಕಾದದ್ದು ನ್ಯಾಯವಾದದ್ದೇ ಸರಿ. ಇದು ರಾಜರ ಪರಮಧರ್ಮ. ನಿನ್ನ ವರ್ತನೆಯಿಂದ ಪ್ರಜೆಗಳು ಬೇಸರಗೊಳ್ಳುವುದು ಸರಿಯಲ್ಲ. ಜನರ ಅಪವಾದವು ಹೇಗಿದೆಯೋ ಹಾಗೆ, ಹೇ ರಘುಪತಿ, ಅದನ್ನು ನಿನಗಾಗಿ ಹೊರುವೆನು. ಹೆಂಗಸಿಗೆ ಪತಿಯೇ ದೇವತೆ. ಪತಿಯೇ ಬಂಧು, ಪತಿಯೇ ಗುರು. ಪ್ರಾಣವನ್ನಾದರೂ ಕೊಟ್ಟು ಪತಿಯ ಹಿತವನ್ನು ಕಾಪಾಡಬೇಕಾದದ್ದು ಪತ್ನಿಯ ಧರ್ಮ'' ಈ ಮಾತನ್ನು, ಲಕ್ಷ್ಮಣ, ನಾನು ಹೇಳಿದೆನೆಂದು ಶ್ರೀರಾಮನಿಗೆ ತಿಳಿಸು. ಸೌಮಿತ್ರಿ, ಈಗ ನನಗೆ ಋತುಕಾಲವು ಅತಿಕ್ರಮಿಸಿದೆ. ಇದನ್ನು ನೆನಪಿನಲ್ಲಿಡು. ನಾಳೆ ಜನರು ಇನ್ನೇನಾದರೂ ಕೆಟ್ಟ ಸುದ್ದಿಯನ್ನು ಹುಟ್ಟಿಸಬಹುದು!'' ಎಂದು ಹೇಳಿ ಗಳಗಳನೆ ಅತ್ತಳು. ಲಕ್ಷ್ಮಣನು ಈ ಮಾತನ್ನು ಕೇಳಿ ದುಃಖದಿಂದ ಕಂಗೆಟ್ಟು ಹೋದನು. ಅವನಿಗೆ ಮಾತಾಡಲು ಶಕ್ತಿಯೇ ಉಳಿಯಲಿಲ್ಲ. ಗಟ್ಟಿಯಾಗಿ ಅಳುತ್ತ ವೈದೇಹಿಗೆ ಪ್ರದಕ್ಷಿಣೆ ಮಾಡಿದನು. ಅನಂತರ ''ದೇವಿ, ಇದೇನು ಹೀಗೆ ನುಡಿಯುತ್ತೀಯೆ? ನಿನ್ನ ಪಾದಗಳನ್ನು ಮಾತ್ರ ನಾನು ನೋಡತಕ್ಕವನು'' ಎಂದು ಹೇಳಿ ನಮಸ್ಕರಿಸಿ ನೇರವಾಗಿ ಗಂಗೆಯ ಬಳಿಗೆ ಹೋದನು.

ನಾವೆಯನ್ನೇರಿ ಕೂಡಲೇ ಹೊರಡಬೇಕೆಂದು ನಾವಿಕನಿಗೆ ಆಜ್ಞಾಪಿಸಿದನು. ಲಕ್ಷ್ಮಣನು ಶೋಕದ ಹೊರೆಯನ್ನು ಹೊತ್ತು ತಲೆಯೆತ್ತಲಾರದೆ ಕಂಗೆಟ್ಟು ಕಳವಳಿಸುತ್ತಾ ನಾವೆಯಲ್ಲಿ ಆಚೆಯ ದಡವನ್ನು ಸೇರಿದನು. ತಿರುತಿರುಗಿ ಜಾನಕಿಯಿದ್ದ ಕಡೆಗೆ ನೋಡುತ್ತ ತೆರಳಿದನು. ಆಚೆಯದಡವನ್ನು ಸೇರಿ ರಥವನ್ನು ಹತ್ತಿದನು. ಸೀತಾದೇವಿಯು ದೂರದಿಂದಲೇ ರಥವನ್ನೇರಿದ ಲಕ್ಷ್ಮಣನನ್ನು ಕಂಡು ದುಃಖಭಾರ ದಿಂದ ಬಳುಕಿ 'ಹೋ' ಎಂದು ಬಾಯ್ದೆರೆದು ಅಳತೊಡಗಿದಳು. ಅಡವಿಯಲ್ಲಿದ್ದ ನವಿಲುಗಳು 'ಕೇಕಾ' ಎಂದು ಪ್ರತಿಧ್ವನಿ ಕೊಟ್ಟವು. ಆ ಸಾಧ್ವಿಯ ಕಣ್ಣೀರು ಮಳೆಗಾಲದ ಹೊಳೆಯಂತೆ ಹರಿಯಿತು.

ಹೀಗಿರುವಾಗ ಸಮಿತ್ತುಗಳನ್ನು ತರುವುದಕ್ಕಾಗಿ ಕಾಡಿಗೆ ಬಂದಿದ್ದ ಕೆಲವು ಮುನಿಪುತ್ರರು ರೋದನ ಧ್ವನಿಯನ್ನು ಕೇಳಿ ಧಾವಿಸುತ್ತ ಬಂದು ಸೀತೆಯನ್ನು ನೋಡಿದರು. ಅವರು ಓಡುತ್ತ ಸ್ವಲ್ಪದೂರದಲ್ಲಿದ್ದ ಆಶ್ರಮಕ್ಕೆ ಹೋಗಿ ವಾಲ್ಮೀಕಿ ಮಹರ್ಷಿಗಳಿಗೆ ವಂದಿಸಿ ಆಕೆ ರೋದಿಸುವ ವೃತ್ತಾಂತವನ್ನು ಅರುಹಿಸಿದರು. ''ಗುರುಗಳೆ, ಇಲ್ಲಿಯೇ ಗಂಗಾ ತೀರದಲ್ಲಿ ಒಬ್ಬ ಸ್ತ್ರೀಯು ಏಕಾಕಿನಿಯಾಗಿ ರೋದಿಸುತ್ತಿದ್ದಾಳೆ. ನಾವು ಆಕೆಯನ್ನು ಇದುವರೆಗೆ ನೋಡಿರಲಿಲ್ಲ. ಯಾವನೋ ಒಬ್ಬ ಮಹಾಪುರುಷನ ಪತ್ನಿಯಾಗಿರಬೇಕು. ಸಾಕ್ಷಾತ್ ಲಕ್ಷ್ಮೀದೇವಿಯಂತೆ ಕಾಣುತ್ತಿದ್ದಾಳೆ. ಯಾವ ಕಾರಣದಿಂದಲೋ ಏನೋ ಗಟ್ಟಿಯಾಗಿ ಬಾಯ್ಬಿಟ್ಟು ಅಳುತ್ತಿದ್ದಾಳೆ. ಗಗನದಿಂದ ಬಿದ್ದ ದೇವತೆಯಂತೆ ಇದ್ದಾಳೆ. ಆಕೆ ಮನುಷ್ಯಸ್ತ್ರೀಯಂತೆ ನಮಗೆ ತೋರುವುದಿಲ್ಲ. ಮಹಾತ್ಮರೆ, ಆ ಸಾಧ್ವಿಗೆ ಸಮಾಧಾನವನ್ನು ಹೇಳಿ ರಕ್ಷಿಸಬೇಕಾಗಿದೆ. ಪೂಜ್ಯರೆ, ನೀವೇ ಬಂದು ಆ ಸಾಧ್ವಿಯನ್ನು ನೋಡಬೇಕು'' ಎಂದರು. ಮುನಿಬಾಲಕರ ಈ ಮಾತನ್ನು ಕೇಳಿ ವಾಲ್ಮೀಕಿ ಮುನಿಗಳು ಧ್ಯಾನಾರೂಢರಾಗಿ 'ಓಹೋ, ಇದು ಹೀಗೆ' ಎಂದು ಜ್ಞಾನದೃಷ್ಟಿಯಿಂದ ನಿಶ್ಚಯಿಸಿ ತ್ವರೆಯಿಂದ ಹೊರಟರು. ಪ್ರಾಜ್ಞರಾದ ಆ ಋಷಿಗಳು ಸತ್ಕಾರವಸ್ತುಗಳನ್ನು ತೆಗೆಸಿಕೊಂಡು ಧಾವಿಸುತ್ತ ಶಿಷ್ಯರೊಡನೆ ಬಂದರು. ಶೋಕಭಾರದಿಂದ ರೋದಿಸುತ್ತಿದ್ದ ಸೀತಾದೇವಿಯನ್ನು ಕಂಡು ಅವಳ ಸಮೀಪಕ್ಕೆ ಹೋಗಿ ಮೃದು ಮಧುರ ವಾಣಿಯಿಂದ ಹೀಗೆಂದರು : ''ಹೇ ಪತಿವ್ರತೆ, ನೀನು ದಶರಥ ಮಹಾರಾಜನ ಸೊಸೆ. ಶ್ರೀರಾಮನ ಪ್ರೀತಿಯ ರಾಣಿ. ಜನಕ ಮಹಾರಾಜನ ಮಗಳು. ನೀನು ಈ ಪ್ರಕಾರದಲ್ಲಿ ಬರುವೆಯೆಂದು ತಪೋಬಲದಿಂದ ನಾನು ತಿಳಿದಿದ್ದೆನು. ಹೇ ಸಾಧ್ವೀ ಶಿರೋಮಣಿ, ನಿನ್ನ ಪರಿಶುದ್ಧ ಚಾರಿತ್ರವನ್ನು ಪೂರ್ಣವಾಗಿ ನಾನು ಬಲ್ಲೆ. ನೀನು ನಿರ್ದೋಷ ಳೆಂಬುದು ನನಗೆ ಸ್ಪಷ್ಟವಾಗಿ ತಿಳಿದಿದೆ. ಮಗಳೆ, ನನ್ನನ್ನು ವಾಲ್ಮೀಕಿ ಎನ್ನುತ್ತಾರೆ.

ಧೈರ್ಯವನ್ನು ತಂದುಕೊ. ಈಗ ನನ್ನ ಸಮೀಪದಲ್ಲಿದ್ದೀಯೆ. ಹತ್ತಿರದಲ್ಲಿ ನನ್ನ ಆಶ್ರಮವಿದೆ. ಅಲ್ಲಿ ಅನೇಕ ತಾಪಸಿಯರು ತಪೋನಿಷ್ಠರಾಗಿದ್ದಾರೆ. ಸೀತೆ, ಆ ತಾಪಸಿಯರು ನಿನ್ನನ್ನು ಮಗಳಂತೆ ನೋಡಿಕೊಳ್ಳುತ್ತಾರೆ. ಚಿಂತಿಸಬೇಡ. ನನ್ನೊಡನೆ ಆಶ್ರಮಕ್ಕೆ ಬಾ. ಈಗ ಈ ನೀರಿನಿಂದ ಮುಖವನ್ನು ತೊಳೆದುಕೊಂಡು ಈ ಹಣ್ಣು ಹಂಪಲುಗಳನ್ನು ಸೇವಿಸು. ವತ್ಸೆ, ನೀನೀಗ ನಿನ್ನ ತಂದೆಯ ಮನೆಗೆ ಬಂದಿದ್ದೀಯೆ ಎಂದು ತಿಳಿ'' ಎಂದರು.

ವಾಲ್ಮೀಕಿ ಮುನಿಗಳಾಡಿದ ಈ ವಿಸ್ಮಯಕರವಾದ ನುಡಿಯನ್ನು ಕೇಳಿ ಸೀತೆಯು ಅವರ ಪಾದಗಳಿಗೆ ತಲೆಬಾಗಿ ವಂದಿಸಿ ಕೈಮುಗಿದುಕೊಂಡು 'ಆಗಲಿ' ಎಂದಳು. ಅವಳು ಸ್ವಲ್ಪಹೊತ್ತು ಸಾಂತ್ವನವನ್ನು ತಂದುಕೊಂಡು ಆ ಮಹರ್ಷಿಗಳ ಹಿಂದೆ ತಪೋವನಕ್ಕೆ ಹೋದಳು. ಈ ಸುದ್ದಿಯೆಲ್ಲವೂ ಮುನಿಬಾಲಕರಿಂದ ತಾಪಸಿಯರಿಗೆ ತಿಳಿಯಿತು. ಅವರು ಶೀಘ್ರವಾಗಿ ಬಂದು ವಾಲ್ಮೀಕಿ ಮುನಿಗಳ ಹಿಂದೆ ಬರುತ್ತಿದ್ದ ಜಾನಕಿಯನ್ನು ಕಂಡರು. ಆ ಮಹರ್ಷಿಗಳು ''ತಾಪಸಿಯರೆ, ಇವಳು ಧರ್ಮಾತ್ಮನಾದ ಶ್ರೀರಾಮನ ಪತ್ನಿ. ಇವಳ ಹೆಸರು ಸೀತೆ. ದಶರಥ ಮಹಾರಾಜನ ಸೊಸೆ. ಜನಕ ಮಹಾರಾಜನ ಮಗಳು. ಯಾವ ಕಳಂಕವೂಯಿಲ್ಲದೆ ಮಹಾಪತಿವ್ರತೆಯಾಗಿರುವ ಈ ಸಾಧ್ವಿಯನ್ನು ಒಂದಾನೊಂದು ನಿಮಿತ್ತದಿಂದ ಶ್ರೀರಾಮನು ತ್ಯಜಿಸಿದ್ದಾನೆ. ನಾನು ಇವಳನ್ನು ಅವಶ್ಯವಾಗಿ ಸಂರಕ್ಷಿಸಬೇಕು. ನೀವು ಈ ಸೀತೆಯನ್ನು ಪರಮಪ್ರೀತಿಯಿಂದ ಮಗಳಂತೆ ನೋಡಿಕೊಳ್ಳಿರಿ. ನನ್ನಲ್ಲಿರುವ ಗೌರವದಿಂದ ಇವಳನ್ನು ಸತ್ಕರಿಸುತ್ತಿರಿ. ಈ ರಾಜಪತ್ನಿಯು ಸಾಮಾನ್ಯ ಸ್ತ್ರೀಯಲ್ಲ. ಒಂದು ದೃಷ್ಟಿಯಿಂದ ನಿಮ್ಮೆಲ್ಲರಿಗೂ ಪೂಜ್ಯಳೇ ಆಗಿದ್ದಾಳೆ'' ಎಂದರು. ಅನಂತರ ಕರುಣಾತ್ಮರಾದ ವಾಲ್ಮೀಕಿ ಮುನಿಗಳು ವೈದೇಹಿಗೆ ಮತ್ತೆಮತ್ತೆ ಧೈರ್ಯವನ್ನು ಹೇಳಿ ಸಂತೈಸಿ ಆ ತಾಪಸಿಯರ ಬಳಿಯಲ್ಲಿ ಬಿಟ್ಟು ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

೧೪

ದುರ್ವಾಸರು ಹೇಳಿದ ಭವಿಷ್ಯದ ಕಥನ. ಲಕ್ಷ್ಮಣನು ಶ್ರೀರಾಮನಿಗೆ ಹೇಳಿದ ಸಮಾಧಾನ

ಜಾನಕಿಯು ವಾಲ್ಮೀಕಿ ಮುನಿಗಳ ಸಂಗಡ ಹೋದುದನ್ನು ಲಕ್ಷ್ಮಣನು ದೂರದಲ್ಲಿ ನಿಂತು ನೋಡುತ್ತಿದ್ದನು. ದೈನ್ಯದಿಂದ ತಳಮಳಿಸುತ್ತಿದ್ದ ಲಕ್ಷ್ಮಣನಿಗೆ ಸೀತಾದೇವಿಯ ದುರವಸ್ಥೆಯನ್ನು ಕಂಡಾಗ ತಡೆಯಲಾರದಷ್ಟು ಸಂಕಟವಾಯಿತು. ಅವನು

ಸುಮಂತ್ರನನ್ನು ಕುರಿತು, ''ಸುಮಂತ್ರ, ಈಗ ನನ್ನ ಅಣ್ಣನ ಮನಸ್ಸಿಗೆ ಎಷ್ಟು ದುಃಖವಾಗಿರಬಹುದು! ಶ್ರೀರಾಮನಿಗೆ ಇದಕ್ಕಿಂತ ಶೋಕದಾಯಕವಾದದ್ದು ಯಾವುದುಂಟು? ಸಾಧ್ವೀಮಣಿಯಾದ ಈ ಧರ್ಮಪತ್ನಿಯನ್ನು ನಿಷ್ಕಾರಣವಾಗಿ ಪರಿತ್ಯಜಿಸಬೇಕಾಯಿತೆಂದು ಎಷ್ಟು ಸಂಕಟಪಡುವನೋ? ಶ್ರೀರಾಮನಿಗೂ ಸೀತಾದೇವಿಗೂ ಈ ಬಗೆಯಲ್ಲಿ ಕಷ್ಟವು ಏಕೆ ಒದಗುತ್ತಿರಬಹುದು? ಯಾವ ಪ್ರಾಚೀನಕರ್ಮವಿರಬಹುದು? ದೈವವನ್ನು ಮೀರಲು ಯಾರಿಗೂ ಸಾಧ್ಯವಿಲ್ಲವೆಂದೇ ಹೇಳಬೇಕಾಯಿತು. ಯಾವ ರಾಘವನು ಕ್ರುದ್ಧನಾದರೆ ದೇವ ಗಂಧರ್ವಾದಿಗಳನ್ನು ಸಹ ಲೆಕ್ಕಿಸದೆ ಸದೆದು ಹಾಕಬಲ್ಲನೋ ಅಂತಹ ವೀರಾಗ್ರಣಿಯು ದೈವಕ್ಕೆ ಅಧೀನನಾಗಿದ್ದಾನೆಂದರೆ ಅಚ್ಚರಿಯಲ್ಲವೆ? ಪ್ರಜೆಗಳು ಮಾತಾಡಿಕೊಳ್ಳುತ್ತಿದ್ದ ಅಪವಾದದ ನುಡಿಯನ್ನು ಕೇಳಿ ಸೀತಾದೇವಿಯನ್ನು ತೊರೆದು ಬಿಟ್ಟನಲ್ಲ. ಆ ಧರ್ಮಾತ್ಮನನ್ನು ತಡೆಯತಕ್ಕವರಾದರೂ ಯಾರು? ಸುಮಂತ್ರ, ಹಿಂದೆ ಒದಗಿದ ವನವಾಸಕ್ಕಿಂತ ಇದು ದುಃಖಕರವಾದದ್ದು. ಕೇವಲ ಅಪವಾದದ ಮಾತನ್ನು ಕೇಳಿ ಶುದ್ಧಚಾರಿತ್ರಳಾದ ಮೈಥಿಲಿಯನ್ನೇ ಪರಿತ್ಯಜಿಸುವುದು ಯುಕ್ತವೆ? ಇದು ಯಾವ ಬಗೆಯ ಧರ್ಮಪಾಲನೆಯಾಗಿರಬಹುದು!'' ಎಂದನು. ಪ್ರಾಜ್ಞನಾದ ಸುಮಂತ್ರನು ಅದೆಲ್ಲವನ್ನೂ ಶಾಂತನಾಗಿ ಕೇಳಿ ಇಂತೆಂದನು: ''ಸೌಮಿತ್ರಿ, ನಿನ್ನ ಅತ್ತಿಗೆಯಾದ ಸೀತಾದೇವಿಗೋಸ್ಕರ ನೀನು ಅತಿಯಾಗಿ ಶೋಕಿಸಬೇಡ. ತ್ರಿಕಾಲ ಜ್ಞಾನಿಗಳಾದ ಋಷಿಗಳು ಈ ವಿಷಯವನ್ನು ನಿನ್ನ ತಂದೆಯ ಎದುರಿಗೆ ಹೇಳಿದ್ದರು: ''ದಶರಥ ಮಹಾರಾಜ, ನಿನಗೆ ಅತ್ಯಂತ ಪ್ರಿಯನಾದ ರಾಮನು ಜೀವನದಲ್ಲಿ ನಾನಾದುಃಖ ಗಳನ್ನು ಅನುಭವಿಸುವನು. ಪ್ರಿಯ ಜನರಿಂದ ವಿಯುಕ್ತನಾಗುವನು. ಪತ್ನಿಯನ್ನೂ ಸಹ ತೊರೆದು ಅಸಾಧಾರಣವಾದ ಶೋಕಕ್ಕೆ ಒಳಗಾಗುವನು''–ಎಂದು. ಲಕ್ಷ್ಮಣ, ಇಷ್ಟು ಮಾತ್ರವಲ್ಲ ಈಗಲೇ ಹೇಳಿ ಬಿಡುತ್ತೇನೆ, ಕೇಳು. ಕೆಲವುಕಾಲದ ಮೇಲೆ ಅವನು ನಿನ್ನನ್ನು ತೊರೆಯುವನು! ಸೌಮಿತ್ರಿ, ಇದನ್ನು ನೀನು ಭರತ ಶತ್ರುಘ್ನರಿಗೂ ಇನ್ನಾರಿಗೂ ತಿಳಿಸಬಾರದು. ಮಹಾತ್ಮರಾದ ವಸಿಷ್ಠ ಮುನಿಗಳೆದುರಿಗೆ ದುರ್ವಾಸರೇ ದಶರಥ ರಾಜನಿಗೆ ಈ ಮಾತನ್ನು ಹೇಳಿದ್ದಾರೆ. ಆಗ ನಾನೂ ಅಲ್ಲಿ ಇದ್ದೆ. ನಿಮ್ಮ ತಂದೆಯು ಅದೆಲ್ಲವನ್ನೂ ಕೇಳಿ ನನ್ನೊಡನೆ ''ಸುಮಂತ್ರ, ಈ ವಿಷಯವನ್ನು ಯಾರೆದುರಿಗೂ ಎಲ್ಲಿಯೂ ಹೇಳಬೇಡ'' ಎಂದು ಆಜ್ಞಾಪಿಸಿದನು. ನಿನ್ನ ದುಃಖವನ್ನು ನೋಡಿ ಈ ಮಾತನ್ನು ತಿಳಿಸಿಬಿಟ್ಟೆನು. ನಿಶ್ಚಯವಾಗಿ ನೀನು ಮಾತ್ರ ಯಾರಿಗೂ ಹೇಳಬೇಡ'' ಎಂದನು. ಆಗ ಲಕ್ಷ್ಮಣನು ''ಸುಮಂತ್ರ, ದುರ್ವಾಸರಾದರೂ ನಮ್ಮ ತಂದೆಗೆ ಇದೆಲ್ಲವನ್ನೂ ಏಕೆ ಹೇಳಿದರು?'' ಎಂದು ಕೇಳಿದನು. ಆಗ ಸುಮಂತ್ರನು ಹೇಳಿದನು.

''ಲಕ್ಷ್ಮಣ, ದುರ್ವಾಸಮುನಿಗಳು ಒಮ್ಮೆ ವಸಿಷ್ಠಾಶ್ರಮದಲ್ಲಿ ತಂಗಿದ್ದರು. ಆಗ ದಶರಥ ಮಹಾರಾಜನು ನನ್ನನ್ನು ಕರೆದುಕೊಂಡು ವಸಿಷ್ಠರ ಆಶ್ರಮಕ್ಕೆ ಹೋಗಿದ್ದನು. ಅಲ್ಲಿ ಅಕಸ್ಮಾತ್ತಾಗಿ ಬಂದಿದ್ದ ದುರ್ವಾಸರನ್ನು ಕಂಡು ವಿನಯದಿಂದ ನಮಸ್ಕರಿಸಿದನು. ಅವರಿಬ್ಬರೂ ಸಂಭಾಷಣೆಯಲ್ಲಿ ತೊಡಗಿದ್ದಾಗ ನಿಮ್ಮ ತಂದೆಯು ದುರ್ವಾಸರನ್ನು ಕುರಿತು ''ಭಗವನ್, ನನ್ನ ರಾಮನ ಆಯುಸ್ಸು ಎಷ್ಟು? ಉಳಿದ ಪುತ್ರರು ಎಷ್ಟು ಕಾಲ ಬಾಳುವರು? ಅವರ ಭವಿಷ್ಯವನ್ನು ಹೇಳಬೇಕು ಎಂದು ಒತ್ತಾಯಿಸಿ ಕೇಳಿದನು.'' ಅವನ ಒತ್ತಾಯಕ್ಕೆ ಮಣಿದು ದುರ್ವಾಸರು ಇದೆಲ್ಲವನ್ನೂ ಹೇಳಬೇಕಾಯಿತು. ಲಕ್ಷ್ಮಣ, ಈಗ ಗರ್ಭಿಣಿಯಾಗಿರುವ ಸೀತಾದೇವಿಗೆ ವಾಲ್ಮೀಕಿ ಮುನಿಗಳ ಆಶ್ರಮದಲ್ಲಿ ಇಬ್ಬರು ಅವಳಿ ಜವಳಿ ಮಕ್ಕಳು ಜನಿಸುವರು. ಮುಂದೆ ಶ್ರೀರಾಮನು ಅವರಿಗೆ ಪಟ್ಟಾಭಿಷೇಕ ಮಾಡುವನು. ಇದಿಷ್ಟನ್ನು ತಿಳಿದು ನೀನು ಶಾಂತನಾಗು. ಇನ್ನೇನನ್ನೂ ಕೇಳಬೇಡ'' ಎಂದನು. ಪರಮ ವಿಸ್ಮಯಕರವಾದ ಈ ವೃತ್ತಾಂತವನ್ನು ಕೇಳಿ ಲಕ್ಷ್ಮಣನಿಗೆ ರೋಮಾಂಚವಾಯಿತು. ತನ್ನ ಶೋಕವನ್ನು ಕಷ್ಟದಿಂದ ಅದುಮಿ ಹಿಡಿದು ಅಯೋಧ್ಯೆಗೆ ಹಿಂದಿರುಗಿದನು.

ಅಂದಿನ ರಾತ್ರಿ ಲಕ್ಷ್ಮಣನು ಗೋಮತೀತೀರದಲ್ಲಿ ಕಳೆದು ಮಾರನೆಯದಿನ ಮಧ್ಯಾಹ್ನದ ಹೊತ್ತಿಗೆ ಸುಮಂತ್ರನೊಡನೆ ಅಯೋಧ್ಯೆಯನ್ನು ಸೇರಿದನು. ಆತನು ಶೋಕಾವಿಷ್ಟನಾಗಿ ''ಅಯ್ಯೋ, ನಾನು ಹೋಗಿ ಶ್ರೀರಾಮನಿಗೆ ಏನನ್ನು ಹೇಳಲಿ? ಹೇಗೆ ಮಾತಾಡಲಿ?'' ಎಂದು ಚಿಂತಾಕ್ರಾಂತನಾದನು. ಹಾಗೆ ಚಿಂತಿಸುತ್ತಲೇ ಅರಮನೆಯನ್ನು ಪ್ರವೇಶಿಸಿ ಶ್ರೀರಾಮನಿದ್ದ ಸ್ಥಳಕ್ಕೆ ನೇರವಾಗಿ ಹೋದನು. ಅಲ್ಲಿ ಶ್ರೀರಾಮನು ಶೋಕಿಸುತ್ತ ದೀನ ಮುಖನಾಗಿ ನಿಟ್ಟುಸಿರು ಬಿಡುತ್ತಾ ತಲೆತಗ್ಗಿಸಿ ತನ್ನ ಪೀಠದಲ್ಲಿ ಕುಳಿತಿದ್ದನು. ಲಕ್ಷ್ಮಣನು ಕಂಬನಿದುಂಬಿದ ಕಣ್ಣುಗಳಿಂದ ಅಣ್ಣನನ್ನು ನೋಡಿ ಅವನ ಪಾದಗಳಿಗೆ ವಂದಿಸಿದನು. ರಾಘವನು ದೈನ್ಯದಿಂದಲೇ ಲಕ್ಷ್ಮಣನ ಮುಖವನ್ನು ಸುಮ್ಮನೆ ನೋಡಿದನು. ಲಕ್ಷ್ಮಣನು ತನ್ನನ್ನು ಸಂತೈಸಿಕೊಂಡು ಕೈಮುಗಿದು ತೊದಲುತ್ತ ''ಮಹಾರಾಜ, ನಿನ್ನ ಆಜ್ಞೆಯಂತೆ ಜನಕಾತ್ಮಜೆಯನ್ನು ವಾಲ್ಮೀಕಿ ಮುನಿಗಳ ಪುಣ್ಯಾಶ್ರಮದ ಬಳಿ ವಿಸರ್ಜಿಸಿದ್ದಾಯಿತು. ಕೀರ್ತಿ ಶಾಲಿನಿಯೂ ಪರಿಶುದ್ಧಚಾರಿತ್ರಳೂ ಆದ ದೇವಿಯನ್ನು ಆಶ್ರಮದ ಬಳಿ ವಿಸರ್ಜಿಸಿ ಬಂದಿದ್ದೇನೆ. ಹೇ ಪುರುಷೋತ್ತಮ, ದುಃಖಿಸಬೇಡ. ಕಾಲದ ಮಹಿಮೆ ಇಂಥಹದು. ನಿಮ್ಮಂತಹ ಬುದ್ಧಿಶಾಲಿಗಳೂ ಧೀರಚಿತ್ತರೂ ಶೋಕಿಸಬಾರದು. ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಎಲ್ಲ ವೈಭವವೂ ಎಲ್ಲ ಸುಖ ಸಂತೋಷಗಳೂ ನಾಶದಲ್ಲಿ ಮುಗಿಯುತ್ತವೆ. ಜೀವಿತದ ಕೊನೆಯಲ್ಲಿ ಮರಣವಂತೂ ಇದ್ದೇಯಿದೆ. ರಘುಕುಲ ತಿಲಕ, ನಿನಗೆ ಸಾಂತ್ವನವನ್ನು

ಯಾರು ಹೇಳಬಲ್ಲರು? ನೀನೇ ಮನೋಬಲದಿಂದ ಮನಸ್ಸನ್ನು ನಿಗ್ರಹಿಸಿ ಶೋಕವನ್ನು ಜಯಿಸಬೇಕು. ಧೀರರಾದ ನಿನ್ನಂತಹ ಪುರುಷಶ್ರೇಷ್ಠರು ಇಂತಹ ಪ್ರಸಂಗಗಳಲ್ಲಿ ವಿಮೋಹಗೊಳ್ಳುವುದಿಲ್ಲ. ನೀನು ಹೀಗೆ ಶೋಕಾವಿಷ್ಟನಾಗಿ ಬಿಟ್ಟರೆ ಜನಾಪವಾದವು ತಪ್ಪುವುದಿಲ್ಲ. ನೀನು ಶೋಕಾವಿಷ್ಟನಾಗಿದ್ದರೆ ಯಾವ ಅಪವಾದದ ಭಯದಿಂದ ನೀನು ವೈಥಿಲಿಯನ್ನು ತ್ಯಜಿಸಿದೆಯೋ ಅದೇ ಅಪವಾದವು ಪ್ರಕಾರಾಂತರದಿಂದ ಗಂಟುಬೀಳುವುದು. ಜನರನ್ನು ಮೆಚ್ಚಿಸುವುದು ಯಾರಿಂದಲೂ ಸಾಧ್ಯವಾದ್ದಲ್ಲ. ಬೀದಿಯ ಜನರು ಆಡಿಕೊಂಡ ಮಾತನ್ನು ಕೇಳಿ, ಈತನು ಗರ್ಭಿಣಿಯಾದ ಮಡದಿಯನ್ನು ಮರುಕವಿಲ್ಲದೆ ಪರಿತ್ಯಜಿಸಿದನು ಎಂದೂ ಹೇಳಬಹುದು. ಅಂತಹ ಹುರುಳಿಲ್ಲದ ಮಾತಿಗೆ ಬೆಲೆಯನ್ನು ಕೊಡಬಾರದು. ಅಣ್ಣ – ಪುರುಷೋತ್ತಮ, ಧೈರ್ಯದಿಂದ ಸಮಾಧಾನ ತಂದುಕೊ. ಈ ಮನೋದೌರ್ಬಲ್ಯವನ್ನು ದೂರಮಾಡು. ಶೋಕಿಸಬೇಡ'' ಎಂದನು. ಮಹಾತ್ಮನಾದ ಲಕ್ಷ್ಮಣನ ನುಡಿಯನ್ನು ಕೇಳಿ ರಾಘವನು ಒಮ್ಮೆ ನಿಟ್ಟುಸಿರು ಬಿಟ್ಟು, ಪ್ರೀತಿಯಿಂದ ಲಕ್ಷ್ಮಣನ ಕೈಹಿಡಿದು ''ಲಕ್ಷ್ಮಣ, ನೀನು ಹೇಳುವುದು ಸರಿ. ನೀನಾಡಿದ ಒಳ್ಳೆಯ ಮಾತುಗಳಿಂದ ನನಗೆ ಸಮಾಧಾನವಾಯಿತು. ಸೌಮ್ಯ, ಇಂತಹ ಸಮಯದಲ್ಲಿ ಹೀಗೆ ಮಾತಾಡುವ ನಿನ್ನಂತಹ ಆಪ್ತನಾದ ಧೀಮಂತನು ದುರ್ಲಭ. ನನ್ನ ಮನಸ್ಸನ್ನು ತಿಳಿದು ವರ್ತಿಸುತ್ತಿದ್ದೀಯೆ. ಲಕ್ಷ್ಮಣ, ನಾನು ಪ್ರಜಾಕಾರ್ಯದ ಕಡೆಗೆ ಗಮನವೀಯದೆ ನಾಲ್ಕು ದಿನಗಳಾದವು. ಈ ಕರ್ತವ್ಯ ಶೂನ್ಯತೆಯಿಂದ ನನಗೆ ವ್ಯಥೆಯಾಗಿದೆ. ರಾಜ್ಯದ ಮುಖ್ಯಾಧಿಕಾರಿಗಳನ್ನೂ ಮಂತ್ರಿಗಳನ್ನೂ ಬರಮಾಡು. ಕಾರ್ಯಾರ್ಥಿಗಳಾದ ಸ್ತ್ರೀಪುರುಷರೆಲ್ಲರೂ ಬರಲಿ. ಕಳೆದ ನಾಲ್ಕು ದಿನಗಳ ಕಾರ್ಯವನ್ನು ಇಂದು ಮಾಡಿಮುಗಿಸುವೆನು'' ಎಂದು ನುಡಿದು ರಾಜಕಾರ್ಯದಲ್ಲಿ ತೊಡಗಿದನು.

೧೫

ತಪಸ್ವಿಗಳು ಲವಣಾಸುರನ ಪೀಡೆಯನ್ನು ಹೇಳಿಕೊಳ್ಳುವುದು. ಲವಣಾಸುರನ ನಿಗ್ರಹಕ್ಕಾಗಿ ಶತ್ರುಘ್ನನನ್ನು ಕಳಿಸುವುದು. ಸೌದಾಸನ ಯಜ್ಞ

ಈ ಪ್ರಕಾರವಾಗಿ ಶ್ರೀರಾಮನು ತನ್ನ ಗೃಹಕೃತ್ಯದ ಶೋಕಭಾರವನ್ನು ಕಷ್ಟದಿಂದ ಸಹಿಸಿಕೊಳ್ಳುತ್ತಾ ಪೌರ ಕಾರ್ಯದಲ್ಲಿ ನಿರತನಾಗಿ ತನ್ನ ದುಃಖವನ್ನು ಮರೆಯಲು ಯತ್ನಿಸುತ್ತಿದ್ದನು. ಹೀಗಿರಲು ಒಂದು ದಿನ ಕಾಕುತ್ಸ್ಥನು ಪ್ರಾತಃಕಾಲದಲ್ಲಿ ಧಾರ್ಮಿಕ ವಿಧಿಗಳನ್ನು ನೆರವೇರಿಸಿ ರಾಜಕಾರ್ಯದ ಸಮಯವು ಪ್ರಾಪ್ತವಾಯಿತೆಂದರಿತು ಸಭಾಂಗಣಕ್ಕೆ ಆಗಮಿಸಿದನು. ಆಗ ಸುಮಂತ್ರನು ಬಂದು ''ಮಹಾರಾಜ,

ಯಾವುದೋ ಕಷ್ಟಕ್ಕೆ ಒಳಗಾದ ತಪಸ್ವಿಗಳು ಬಂದು ಅರಮನೆಯ ಬಾಗಿಲಲ್ಲಿ ನಿಂತಿದ್ದಾರೆ. ಭಾರ್ಗವರನ್ನೂ ಚ್ಯವನರನ್ನೂ ಮುಂದೆ ಮಾಡಿಕೊಂಡು ಬಂದು ನಿನ್ನ ದರ್ಶನಕ್ಕಾಗಿ ಕಾದಿದ್ದಾರೆ'' ಎಂದು ನಿವೇದಿಸಿದನು. ಆಮೇಲೆ ಶ್ರೀರಾಮನ ಆಜ್ಞೆಯಂತೆ ದ್ವಾರಪಾಲಕರು ಹೋಗಿ ಆ ತಪಸ್ವಿಗಳಿಗೆ ವಂದಿಸಿ ವಿನಯದಿಂದ ಒಳಗೆ ಕರೆತಂದರು. ಆ ದ್ವಿಜರು ಕೆಲವು ಫಲಮೂಲಗಳನ್ನು ರಾಜನಿಗೆ ಕಾಣಿಕೆಯಾಗಿ ಅರ್ಪಿಸಿದರು. ಶ್ರೀರಾಮನು ಅದನ್ನು ಪ್ರೀತಿಯಿಂದ ಸ್ವೀಕರಿಸಿ ಆ ಋಷಿಗಳನ್ನು ಯೋಗ್ಯವಾದ ಪೀಠದಲ್ಲಿ ಕುಳ್ಳಿರಿಸಿದನು. ಅನಂತರ ಕೈಮುಗಿದುಕೊಂಡು ''ಮಹಾತ್ಮರೆ, ತಾವು ಆಗಮಿಸಿದ ಕಾರ್ಯವಾವುದು? ನನ್ನಿಂದೇನಾಗಬೇಕು? ಆಜ್ಞೆಯಾಗಲಿ'' ಎಂದು ನಿವೇದಿಸಿದನು. ಮಹಾರಾಜನ ವಿನಯದಿಂದ ಸುಪ್ರೀತರಾದ ಆ ಋಷಿಗಳು ''ನರಶ್ರೇಷ್ಠ, ಇಂತಹ ನುಡಿ ನಿನ್ನೊಬ್ಬನಿಗೇ ಮೀಸಲಾದದ್ದು. ಎಷ್ಟೋ ಜನ ಅರಸರು ನಮಗೆ ಮಾತುಕೊಟ್ಟು ಅದನ್ನು ನೆರವೇರಿಸಲಿಲ್ಲ'' ಎಂದರು. ಶ್ರೀರಾಮನು ''ಮುನಿಗಳೆ, ನನ್ನಿಂದ ಆಗಬೇಕಾದ್ದೇನೆಂಬುದನ್ನು ಹೇಳಿರಿ. ಶಂಕಿಸಬೇಡಿರಿ. ಅವಶ್ಯವಾಗಿ ನಡೆಸುವೆನು'' ಎಂದನು. ಆಗ ಚ್ಯವನ ಮುನಿಗಳು ಇಂತೆಂದರು: ''ಮಹಾರಾಜ, ನಮಗೆ ಒದಗಿರುವ ಭಯವು ಬಹುದೊಡ್ಡದು. ಹಿಂದೆ ಮಧುವೆಂಬ ಬಲಾಢ್ಯನಾದ ಅಸುರನಿದ್ದನು. ಆತನು ಧರ್ಮನಿರತನಾಗಿ ದೇವತೆಗಳಿಗೂ ಪ್ರಿಯನಾಗಿದ್ದನು. ಆ ಮಧುವು ರುದ್ರನನ್ನು ಕುರಿತು ತಪಸ್ಸು ಮಾಡಿ ಒಮದು ಅದ್ಭುತವಾದ ಶೂಲಾಯುಧವನ್ನು ಪಡೆದನು. ರುದ್ರನು ಆ ದೈತ್ಯನನ್ನು ಕುರಿತು ''ಎಲೈ ಭಕ್ತೋತ್ತಮ, ನಿನ್ನ ಆತ್ಮರಕ್ಷಣೆಗಾಗಿ ಈ ಆಯುಧವನ್ನು ಅನುಗ್ರಹಿಸಿದ್ದೇನೆ. ನೀನು ಎಲ್ಲಿಯವರೆಗೆ ಧರ್ಮನಿಷ್ಠನಾಗಿರುವೆಯೋ ಅಲ್ಲಿಯವರೆಗೆ ಇದು ನಿನ್ನ ವಶದಲ್ಲಿರುವುದು. ದೇವಬ್ರಾಹ್ಮಣರೊಡನೆ ನೀನು ವಿರೋಧವನ್ನು ಬೆಳಸಿದರೆ ಒಡನೆಯೇ ಇದು ಅದೃಶ್ಯವಾಗುವುದು'' ಎಂದು ನುಡಿದನು. ಆಗ ಮಧುವು ಮಹಾದೇವನಿಗೆ ವಂದಿಸಿ ''ಸ್ವಾಮಿ, ಈ ಆಯುಧವು ನನ್ನ ವಂಶದಲ್ಲಿ ಪರಂಪರೆಯಾಗಿ ಉಳಿಯಲಿ'' ಎಂದು ಬೇಡಿಕೊಂಡನು. ಅದಕ್ಕೆ ಮಹೇಶ್ವರನು ಅದು ಸಾಧ್ಯವಿಲ್ಲ. ಆದರೆ ಭಕ್ತೋತ್ತಮನಾದ ನಿನ್ನ ಪ್ರಾರ್ಥನೆಯನ್ನು ಪೂರ್ತಿಯಾಗಿ ತಳ್ಳಿ ಹಾಕಲಾರೆ. ನಿನ್ನ ಮಗನಿಗೆ ಮಾತ್ರ ಈ ಶೂಲವು ಸೇರುವುದು. ಇದನ್ನು ಅವನು ಕೈಯಲ್ಲಿ ಹಿಡಿದಿರುವಾಗ ಸರ್ವರಿಗೂ ಅವಧ್ಯನಾಗುವನು'' ಎಂದು ಹೇಳಿ ಅದೃಶ್ಯನಾದನು. ಹೀಗೆ ವರವನ್ನು ಪಡೆದ ಮಧುದೈತ್ಯನಿಗೆ ಕಾಲಕ್ರಮದಲ್ಲಿ ಲವಣನೆಂಬ ಪುತ್ರನು ಹುಟ್ಟಿದನು. ಆದರೆ ಅವನು ಮಹಾ ಕ್ರೂರಸ್ವಭಾವದವನೂ, ದುಷ್ಟನೂ ಆಗಿದ್ದನು. ಬಾಲ್ಯದಿಂದಲೂ ಪಾಪಕರ್ಮಗಳನ್ನೇ ಆಚರಿಸುತ್ತ ಬಂದನು. ತರುವಾಯ

ಮಧುವು ದೈವಾಧೀನನಾಗಲು ಈ ಲವಣಾಸುರನಿಗೆ ಆ ಶೂಲಾಯುಧವು ದೊರಕಿತು. ಶ್ರೀರಾಮ, ಈಗ ಲವಣಾಸುರನು ಆ ಶೂಲದ ಮಹಿಮೆಯನ್ನವಲಂಬಿಸಿ ತನ್ನ ದೌರ್ಜನ್ಯದಿಂದ ಲೋಕವನ್ನು ಪೀಡಿಸುತ್ತಿದ್ದಾನೆ. ಆತನಿಂದ ಪ್ರಜೆಗಳೆಲ್ಲರೂ ತತ್ತರಿಸಿ ಹೋಗಿದ್ದಾರೆ. ಯಾವ ಕ್ಷತ್ರಿಯನೂ ಲವಣನನ್ನೆದುರಿಸಲುಶಕ್ತನಾಗಿಲ್ಲ. ಎಲ್ಲರೂ ಅವನಿಗೆ ಹೆದರುತ್ತಾರೆ. ಈ ಸಂದರ್ಭದಲ್ಲಿ ರಾವಣನನ್ನು ಸಂಹರಿಸಿದ ನೀನೇ ನಮಗೆ ರಕ್ಷಕನಾಗುವೆ ಎಂದು ಭಾವಿಸಿ ನಿನ್ನ ಬಳಿಗೆ ಬಂದಿದ್ದೇವೆ. ನಮ್ಮ ಅಪೇಕ್ಷೆಯನ್ನು ಪೂರೈಸಿಕೊಡು'' ಎಂದರು. ಆಗ ಶ್ರೀರಾಮನು ಮುನಿಗಳಿಗೆ ಕೈಮುಗಿದು ''ಮಹರ್ಷಿಗಳೆ, ಆ ಲವಣನ ಸ್ವಭಾವ ಎಂಹದು? ಅವನಿರುವುದೆಲ್ಲಿ?'' ಎಂದು ಕೇಳಿದನು. ಆಗ ಋಷಿಗಳು ''ರಾಘವ, ತಾಪಸರನ್ನೂ ಪ್ರಜೆಗಳನ್ನೂ ಹಿಂಸಿಸುವುದೇ ಅವನ ಸ್ವಭಾವ. ಅವನಿರುವುದು ಮಧುವನದಲ್ಲಿ. ಅವನು ಬಂದರೆ ಪ್ರಳಯಕಾಲದಲ್ಲಿ ಬಾಯ್ದೆರೆದು ಬರುವ ಯಮನಂತೆ ಕಾಣಿಸುತ್ತಾನೆ. ಶೂಲಾಯುಧವನ್ನು ಕೆಲವು ವೇಳೆ ಹಿಡಿದಿರುತ್ತಾನೆ. ಕೆಲವು ವೇಳೆ ಇಲ್ಲ'' ಎಂದನು. ಆಗ ಶ್ರೀರಾಮನು ''ಮುನಿಗಳೆ, ಮುಂದಿನ ಕರ್ತವ್ಯವನ್ನು ನಾನು ನೋಡಿಕೊಳ್ಳುವೆನು. ಹೆದರಬೇಡಿರಿ'' ಎಂದು ಸಮಾಧಾನ ಪಡಿಸಿದನು. ಅನಂತರ ತನ್ನ ತಮ್ಮಂದಿರನ್ನು ನೋಡಿ ''ನಿಮ್ಮಲ್ಲಿ ಲವಣಾಸುರನನ್ನು ಸಂಹರಿಸಲು ಇಚ್ಛಿಸುವ ವೀರನು ಯಾರು? ಈ ಕಾರ್ಯವನ್ನು ಯಾರಿಗೆ ವಹಿಸೋಣ? ಭರತನಿಗೊ? ಶತ್ರುಘ್ನನಿಗೊ?'' ಎಂದನು. ಆಗ ಭರತನು ''ಆ ರಾಕ್ಷಸನನ್ನು ನಾನು ವಧಿಸುವೆನು. ಆ ಕಾರ್ಯಭಾರವು ನನಗಿರಲಿ'' ಎಂದನು. ಅಷ್ಟರಲ್ಲಿ ಶತ್ರುಘ್ನನು ತನ್ನ ಪೀಠದಿಂದ ಎದ್ದು ರಾಘವನಿಗೆ ನಮಸ್ಕರಿಸಿ ಇಂತೆಂದನು : ''ಮಹಾರಾಜ, ವೀರನಾದ ಭರತನು ಲವಣಾಸುರನನ್ನು ಸಂಹರಿಸಲು ಸಮರ್ಥನೆಂಬುದು ನಿಶ್ಚಿತ. ಆತನು ನಿನ್ನ ಮೇಲಿನ ಭಕ್ತಿಯಿಂದ ಹದಿನಾಲ್ಕು ವರ್ಷಗಳ ಕಾಲ ನವೆದು ತನ್ನ ಕರ್ತವ್ಯವನ್ನು ನೆರವೇರಿಸಿ ಕೃತಕೃತ್ಯನಾಗಿದ್ದಾನೆ. ಅಷ್ಟು ವರ್ಷಗಳವರೆಗೆ ರಾಜ್ಯಭಾರವನ್ನು ನಿರ್ವಹಿಸಿದ್ದಾನೆ. ಭರತನು ಅನುಭವಿಸಿದ ದುಃಖವು ಅಪಾರವಾದದ್ದು. ನಂದಿಗ್ರಾಮದಲ್ಲಿದ್ದಾಗ ಅವನು ಮಲಗಿದ್ದು ಮುಳ್ಳಿನ ಹಾಸಿಗೆಯಲ್ಲಿ. ನಾರು ಬಟ್ಟೆಯನ್ನುಟ್ಟು ಫಲಮೂಲಗಳನ್ನೇ ತಿನ್ನುತ್ತಾ ಘೋರ ದುಃಖವನ್ನು ಅನುಭವಿಸಿದ್ದಾನೆ. ಭರತನಿಗೆ ಇನ್ನೊಂದು ಕ್ಲೇಶವನ್ನು ಒಡ್ಡುವುದು ಬೇಡ. ಭೃತ್ಯನಾದ ನಾನಿರುವಾಗ ಅವನಿಗೇಕೆ ಈ ಶ್ರಮ?'' ಎಂದು ನಿವೇದಿಸಿದನು. ಶತ್ರುಘ್ನನ ನುಡಿಯನ್ನು ಕೇಳಿ ಸಂತುಷ್ಟನಾದ ರಾಘವನು ''ಶತ್ರುಘ್ನ, ಹಾಗೆಯೇ ಆಗಲಿ. ಪಾಪಿಯಾದ ಲವಣಾಸುರನನ್ನು ಸಂಹರಿಸಲು ನೀನು ಸಮರ್ಥನಾಗಿದ್ದೀಯೆ. ಆ ಪ್ರಾಂತದ ಪ್ರಜೆಗಳು ಬಹಳ ಕಷ್ಟವನ್ನನುಭವಿಸಿದ್ದಾರೆ. ಅವರಿಗೆ ಒಂದು ಸುರಾಜ್ಯವನ್ನು ಒದಗಿಸಿ ಕೊಡುವುದು ನನ್ನ

ಕರ್ತವ್ಯವಾಗಿದೆ. ನೀನು ಲವಣಾಸುರನನ್ನು ಸಂಹರಿಸಿದಮೇಲೆ ಆ ರಾಜ್ಯಕ್ಕೆ ಅಧಿಪತಿಯಾಗಿ ಧರ್ಮನಿಷ್ಠೆಯಿಂದ ಪ್ರಜೆಗಳನ್ನು ಪಾಲಿಸುತ್ತಿರಬೇಕು. ಬಹುಕಾಲ ದಿಂದ ಕಷ್ಟದಲ್ಲಿ ನರಳುತ್ತಿರುವ ಆ ಜನರಿಗೆ ನೀನು ಸುಖ ಸಂತೋಷಗಳನ್ನು ಒದಗಿಸಿಕೊಡಬೇಕು. ಈ ಕಾರ್ಯವನ್ನು ನಡೆಸಲು ನೀನು ದಕ್ಷನಾಗಿದ್ದೀಯೆ– ಎಂಬುದನ್ನು ನಾನು ಬಲ್ಲೆನು. ಶೂರನೂ ವಿದ್ವಾಂಸನೂ ಆದ ನೀನು ಆ ಪ್ರಾಂತಕ್ಕೆ ರಾಜನಾಗಿರು. ಆದ್ದರಿಂದ ಇದಕ್ಕೆ ಪ್ರತಿಯಾಗಿ ಹೇಳಬೇಡ. ಆ ರಾಜ್ಯವನ್ನಿತ್ತು ಈಗಲೇ ನಿನಗೆ ಪಟ್ಟಾಭಿಷೇಕ ಮಾಡುತ್ತೇನೆ. ವಸಿಷ್ಠರು ಪಟ್ಟಾಭಿಷೇಕದ ಕಾರ್ಯವನ್ನು ನಡೆಸಿಕೊಡುವರು'' ಎಂದು ತಿಳಿಸಿದನು.

ಶ್ರೀರಾಮನು ಹೀಗೆ ಪಟ್ಟಾಭಿಷೇಕದ ಮಾತನ್ನಾಡಲಾಗಿ ಶತ್ರುಘ್ನನಿಗೆ ಬಹಳ ಲಜ್ಜೆಯಾಯಿತು. ಆ ವೀರನು ಮೆಲ್ಲನೆ ಇಂತೆಂದನು: ''ಮಹಾರಾಜ, ಹಿರಿಯರಾದ ಅಣ್ಣಂದಿರಿರುವಾಗ ತಮ್ಮನಿಗೆ ಪಟ್ಟಾಭಿಷೇಕವೆಂದರೇನು? ಇದರಿಂದ ಅಧರ್ಮವು ಗಂಟು ಬೀಳದೆ ಇದ್ದೀತೆ? ಅಣ್ಣಾ, ನಿನ್ನ ಆಜ್ಞೆಯಾದರೋ ಅವಶ್ಯವಾಗಿ ಪಾಲಿಸ ಬೇಕಾದದ್ದು. ಈಗ ನಾನು ಧರ್ಮಸಂಕಟಕ್ಕೆ ಸಿಕ್ಕಿಕೊಂಡೆನು. ಭರತನು ಲವಣಾಸುರ ನನ್ನು ಕೊಲ್ಲುವೆನೆಂದು ಹೇಳಿದಾಗ ನಾನು ನಡುವೆ ಬಾಯಿಹಾಕಬಾರದಾಗಿತ್ತು'' ಎಂದನು. ಆಗ ಸಂಪ್ರೀತನಾದ ಶ್ರೀರಾಮನು ''ಶತ್ರುಘ್ನ, ವಿನಯಾನ್ವಿತವಾದ ನಿನ್ನ ನುಡಿಯೇ ನಿನಗೆ ರಕ್ಷೆಯಾಗಿರಲಿ. ನಿನಗೆ ಅಧರ್ಮವು ಗಂಟು ಬೀಳದು'' ಎಂದು ಧೈರ್ಯವನ್ನು ಹೇಳಿ ಶತ್ರುಘ್ನನ ಪಟ್ಟಾಭಿಷೇಕಕ್ಕೆ ಏರ್ಪಡಿಸಿದನು. ರಾಜಾಜ್ಞೆಯಂತೆ ವಿಧಿವತ್ತಾಗಿ ಶತ್ರುಘ್ನನ ಪಟ್ಟಾಭಿಷೇಕವು ನಡೆಯಿತು. ಲವಣಾಸುರನ ರಾಜ್ಯಕ್ಕೆ ಶತ್ರುಘ್ನನು ರಾಜನೆಂದು ಘೋಷಿಸಲಾಯಿತು. ಶ್ರೀರಾಮನ ಬಳಿಗೆ ಬಂದಿದ್ದ ಆ ಋಷಿಗಳು ಶತ್ರುಘ್ನನಿಗೆ ಅಭಿಷೇಕವಾದ್ದರಿಂದ ಲವಣಾಸುರನು ಹತನಾದನೆಂದೇ ತಿಳಿದರು. ಅನಂತರ ಶ್ರೀರಾಮನು ಶತ್ರುಘ್ನನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮೈದಡವಿ ಒಂದು ತೇಜೋವಿಶೇಷವನ್ನು ಆತನ ದೇಹಕ್ಕೆ ತುಂಬಿದನು. ಆಮೇಲೆ ''ತಮ್ಮ–ಶತ್ರುಘ್ನ, ಇಲ್ಲಿ ನೋಡು. ಈ ದಿವ್ಯಾಸ್ತ್ರವನ್ನು ನಿನಗೆ ಕೊಡುತ್ತಿದ್ದೇನೆ. ಇದರಿಂದ ನೀನು ಆ ದೈತ್ಯನನ್ನು ಸಂಹರಿಸಬಲ್ಲೆ. ಈ ಅಸ್ತ್ರವು ಸಾಕ್ಷಾತ್ ವಿಷ್ಣುವಿನಿಂದ ಪರಂಪರೆಯಾಗಿ ನನ್ನ ಕೈಗೆ ಬಂದಿದೆ. ಇದನ್ನೀಗ ನಿನಗೆ ಕೊಟ್ಟಿದ್ದೇನೆ. ಪರಮೇಶ್ವರನು ಮಧುವಿಗೆ ಕೊಟ್ಟಿದ್ದ ಘೋರವಾದ ಶೂಲಾಯುಧವು ಲವಣಾಸುರನ ವಶದಲ್ಲಿದೆ. ಅವನು ಅದನ್ನು ಹಿಡಿದು ಬಂದಾಗ ಯುದ್ಧಕ್ಕೆ ಹೋಗಬೇಡ. ಅವನ ಕೈಗೆ ಶೂಲವು ಸಿಗದಿರುವ ಸಮಯದಲ್ಲಿ ಆ ದೈತ್ಯನನ್ನು ಎದುರಿಸು. ಈ ಉಪಾಯದಿಂದ ನೀನು ಆ ಘೋರನಾದ ಲವಣಾಸುರನನ್ನು

ಸಂಹರಿಸಬಹುದು. ಈಶ್ವರನ ಶೂಲಾಯುಧಕ್ಕೆ ಇಷ್ಟೇ ಪರಿಹಾರ. ಮಹಾತ್ಮನಾದ ರುದ್ರನ ಶಕ್ತಿಯು ಅಮಿತವಾದದ್ದು. ಶೂಲವನ್ನೆದುರಿಸುವ ಸಾಹಸಕ್ಕೆ ಹೋಗಬೇಡ'' ಎಂದು ತಿಳಿಯ ಹೇಳಿದನು. ಮತ್ತೆ ಶತ್ರುಘ್ನನೊಡನೆ ''ತಮ್ಮ, ನಿನ್ನೊಡನೆ ನಾಲ್ಕು ಸಾವಿರ ಅಶ್ವಗಳೂ ಎರಡು ಸಾವಿರ ರಥಗಳೂ, ಒಂದು ನೂರು ಆನೆಗಳೂ ಹೋಗಲಿ. ದಾರಿಯು ಗಹನವಾಗಿರುವುದರಿಂದ ಸಾಕಷ್ಟು ಆಹಾರ ಸಾಮಗ್ರಿಗಳನ್ನು ಜೊತೆಗೆ ತೆಗೆದುಕೊಂಡು ಹೋಗು. ಒಂದು ಲಕ್ಷ ಸುವರ್ಣ ನಾಣ್ಯಗಳು ನಿನ್ನ ಕೈಯಲ್ಲಿರಲಿ. ನೀನು ಹೋದ ಸ್ಥಳವು ವನಪ್ರದೇಶವಾಗಿರುತ್ತದೆ. ಆದ್ದರಿಂದ ಸೈನಿಕರಿಗೆ ಬೇಕಾದ ಎಲ್ಲ ಸುಖಸಾಮಗ್ರಿಗಳೂ ಜೊತೆಯಲ್ಲಿ ಹೋಗಲಿ. ನೀನು ಸೈನ್ಯದೊಡನೆ ಈ ಋಷಿಗಳು ತೋರಿಸುವ ದಾರಿಯಲ್ಲಿ ಹೋಗು. ನೀನು ಯುದ್ಧಕ್ಕೆ ಬಂದಿರುವೆಯೆಂದು ಆ ದೈತ್ಯನಿಗೆ ತಿಳಿಯಬಾರದು. ನೀನೊಬ್ಬನೇ ಧನುಷ್ಪಾಣಿಯಾಗಿ ಹೋಗಿ, ಅವನು ಶೂಲವನ್ನು ಧರಿಸದಿರುವ ಸಮಯದಲ್ಲಿ ಯುದ್ಧಮಾಡಿ ಸಂಹರಿಸು. ಈ ಸೇನೆ ಮೊದಲಾದವುಗಳೆಲ್ಲವೂ ಮುಂದೆ ನಿನ್ನ ರಾಜ್ಯಭಾರಕ್ಕೆ ಉಪಯುಕ್ತವಾಗುತ್ತವೆ. ಈ ಸೈನಿಕರಿಂದ ದಾರಿಯಲ್ಲಿ ಯಾರಿಗೂ ತೊಂದರೆಯಾಗದಂತೆ ನೋಡಿಕೊ'' ಎಂದು ತಿಳಿಸಿದನು.

ಶತ್ರುಘ್ನನು ಶ್ರೀರಾಮನ ಇಷ್ಟದಂತೆ ಸಕಲ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು ದೊಡ್ಡ ಸೈನ್ಯವನ್ನು ಆ ದಾರಿಯಲ್ಲಿ ಮುಂದೆ ಕಳಿಸಿದನು. ಅನಂತರ ಅಂತಃಪುರಕ್ಕೆ ಹೋಗಿ ಕೌಸಲ್ಯಾ, ಸುಮಿತ್ರಾ, ಕೈಕೇಯಿಯರಿಗೆ ಅಭಿವಾದನೆ ಮಾಡಿದನು. ಆಮೇಲೆ ಶ್ರೀರಾಮನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಅನುಜ್ಞೆಯನ್ನು ಪಡೆದು ಭರತ ಲಕ್ಷ್ಮಣರಿಗೆ ವಂದಿಸಿ, ಪುರೋಹಿತರಾದ ವಸಿಷ್ಠರಿಗೆ ವಂದಿಸಿ ಸುಮುಹೂರ್ತದಲ್ಲಿ ಅಯೋಧ್ಯೆಯಿಂದ ಮಿತಪರಿವಾರದೊಡನೆ ಪ್ರಯಾಣ ಮಾಡಿದನು.

ಶತ್ರುಘ್ನನು ತನ್ನ ಸೇನೆಯನ್ನು ಮುಂದೆ ಕಳಿಸಿ, ತಾನು ತ್ವರೆಯಿಂದ ದಾರಿಹಿಡಿದು ಹೊರಟನು. ದಾರಿಯಲ್ಲಿ ಎರಡು ರಾತ್ರಿಗಳನ್ನು ಕಳೆದು ಮೂರನೆಯ ರಾತ್ರಿ ತಂಗುವುದಕ್ಕಾಗಿ ವಾಲ್ಮೀಕಿಮುನಿಗಳ ಪುಣ್ಯಾಶ್ರಮಕ್ಕೆ ಹೋದನು. ವಾಲ್ಮೀಕಿ ಮಹರ್ಷಿಗಳನ್ನು ಕಂಡು ಅಭಿವಾದನೆ ಮಾಡಿ ಕೃತಾಂಜಲಿಯಾಗಿ ''ಭಗವನ್, ಈ ದಿನ ಇಲ್ಲಿ ಇಳಿದುಕೊಳ್ಳಲು ಬಯಸುತ್ತೇನೆ. ನನ್ನ ಅಣ್ಣನ ಆಜ್ಞೆಯಂತೆ ಒಂದು ಕಾರ್ಯಕ್ಕಾಗಿ ಹೊರಟಿದ್ದೇನೆ. ನಾಳೆ ಪ್ರಾತಃಕಾಲ ಪಶ್ಚಿಮದಿಕ್ಕಿಗೆ ಪ್ರಯಾಣ ಮಾಡುವೆನು'' ಎಂದನು. ವಾಲ್ಮೀಕಿ ಮುನಿಗಳು ಶತ್ರುಘ್ನನ ಮಾತನ್ನು ಕೇಳಿ ನಕ್ಕು ''ಶತ್ರುಘ್ನ, ನಿನಗೆ ಸ್ವಾಗತ. ಈ ಆಶ್ರಮವು ರಘುಕುಲದವರಿಗೇ ಸೇರಿದ್ದು. ಯಾವ

ಸಂಕೋಚವನ್ನೂ ಇಟ್ಟುಕೊಳ್ಳದೆ ನಮ್ಮ ಆತಿಥ್ಯವನ್ನು ಸ್ವೀಕರಿಸು'' ಎಂದರು. ಅದರಂತೆ ಶತ್ರುಘ್ನನು ವಾಲ್ಮೀಕಿಮಹರ್ಷಿಗಳ ಅತಿಥಿ ಸತ್ಕಾರವನ್ನು ಸ್ವೀಕರಿಸಿ, ಆಮೇಲೆ ಸ್ವಲ್ಪಕಾಲ ವಿಶ್ರಮಿಸಿ ಆ ಮಹರ್ಷಿಗಳನ್ನು ಕುರಿತು ''ಮಹಾತ್ಮರೆ, ನಿಮ್ಮ ಆಶ್ರಮದ ಸಮೀಪದಲ್ಲಿ ಪೂರ್ವದಿಕ್ಕಿಗೆ ಯಜ್ಞೋಪಕರಣಗಳ ಸಮೃದ್ಧ ಚಿಹ್ನೆಯು ಕಾಣಿಸುವುದಲ್ಲವೆ? ಆ ಯಜ್ಞವು ಯಾರದು?'' ಎಂದು ಕೇಳಿದನು. ಆಗ ವಾಲ್ಮೀಕಿ ಮುನಿಗಳು ಇಂತೆಂದರು. ''ವತ್ಸ, ನಿಮ್ಮ ಸೂರ್ಯವಂಶದಲ್ಲಿ ಹಿಂದೆ ಸುದಾಸನೆಂಬ ಒಬ್ಬ ಭೂಪತಿ ಇದ್ದನು. ಅವನ ಮಗ ವೀರಸಹ. ಆತನಿಗೆ ಮಿತ್ರಸಹ ಎಂಬ ಇನ್ನೊಂದು ಹೆಸರಿತ್ತು, ಸೌದಾಸನೆಂದೂ ಆತನು ಪ್ರಸಿದ್ಧನಾಗಿದ್ದನು. ಸೌದಾಸನು ಯುವಕನಾಗಿದ್ದಾಗ ಅರಣ್ಯಕ್ಕೆ ಬೇಟೆಯಾಡಲು ಹೋದನು. ಅಲ್ಲಿ ಇಬ್ಬರು ರಾಕ್ಷಸರು ಕಾಣಿಸಿದರು. ಅವರಿಬ್ಬರೂ ಮೃಗಗಳನ್ನು ಕೊಂದು ತಿಂದು ಅರಣ್ಯದಲ್ಲಿ ಬಹಳ ಧಾಂದಲೆಯನ್ನು ನಡೆಸಿದ್ದರು. ಈ ವೀರಸಹನು ಅವರಲ್ಲೊಬ್ಬ ರಾಕ್ಷಸನನ್ನು ಬಾಣದಿಂದ ಹೊಡೆದು ಕೊಂದನು. ಅವನ ಗೆಳೆಯನಾದ ಇನ್ನೊಬ್ಬ ರಾಕ್ಷಸನು ಸಿಟ್ಟಿನಿಂದ ''ಎಲೈ ಪಾಪಿ, ನನ್ನ ಗೆಳೆಯನನ್ನು ಕೊಂದಿರುವೆಯಲ್ಲವೆ? ಇದಕ್ಕೆ ತಕ್ಕ ರೀತಿಯಲ್ಲಿ ಸೇಡನ್ನು ತೀರಿಸಿಕೊಳ್ಳುವೆನು'' ಎಂದು ಹೇಳಿ ಅಂತರ್ಧಾನಹೊಂದಿದನು. ಕಾಲಕ್ರಮದಲ್ಲಿ ವೀರಸಹನು ಆ ದೇಶದ ರಾಜನಾದನು. ಆತನು ಈ ಆಶ್ರಮದ ಸಮೀಪದಲ್ಲಿ ಒಂದು ಮಹಾಯಾಗವನ್ನಾರಂಭಿಸಿದನು. ವಸಿಷ್ಠರು ಅಧ್ವರ್ಯುಗಳಾಗಿದ್ದರು. ಯಾಗವು ಮುಗಿಯಲಾಗಿ ಆ ರಾಕ್ಷಸನು ಪೂರ್ವವೈರದಿಂದ ವಸಿಷ್ಠರ ವೇಷವನ್ನೇ ಧರಿಸಿ ರಾಜನ ಬಳಿಗೆ ಬಂದು ''ಸೌದಾಸ, ಯಜ್ಞವು ಸಮಾಪ್ತವಾಯಿತು. ನನಗೆ ಮಾಂಸಸಹಿತವಾದ ಭೋಜನವನ್ನು ನೀಡು. ಇದು ಹೇಗೆಂಬ ಚಿಂತೆ ಬೇಡ. ಶೀಘ್ರವಾಗಿ ನಡೆಯಲಿ'' ಎಂದನು. ಸೌದಾಸನು ಅದನ್ನು ಕೇಳಿ ವಿಸ್ಮಿತನಾದನು. ಆದರೂ ಗುರುಗಳ ಆಜ್ಞೆಯನ್ನು ಮೀರಲಾರದೆ ಮಾಂಸ ಸಹಿತವಾದ ಭೋಜನವನ್ನೇರ್ಪಡಿಸುವಂತೆ ಪಾಚಕರಿಗೆ ಆಜ್ಞಾಪಿಸಿದನು. ಆ ಸಮಯದಲ್ಲಿ ಹಿಂದೆ ಹೇಳಿದ ರಾಕ್ಷಸನು ಅಡಿಗೆಯವನ ವೇಷದಿಂದ ಪಾಕಶಾಲೆಯನ್ನು ಸೇರಿ ನರಮಾಂಸವನ್ನು ಮಿಶ್ರಮಾಡಿದನು. ಇದು ಯಾರಿಗೂ ತಿಳಿಯಲಿಲ್ಲ. ಆಮೇಲೆ ಸ್ವತಃ ವಸಿಷ್ಠ ಮುನಿಗಳಿಗೆ ಭೋಜನವನ್ನು ನೀಡುವಾಗ ಈ ನರಮಾಂಸವನ್ನು ಬಡಿಸಲಾಯಿತು. ಊಟದೆಲೆಯಲ್ಲಿ ಅದನ್ನು ಕಂಡು ವಸಿಷ್ಠ ಮುನಿಗಳು ಕ್ರೋಧಾವಿಷ್ಟರಾಗಿ ''ಎಲೈ ರಾಜ, ನನಗೆ ಈ ಬಗೆಯ ಭೋಜನವನ್ನು ಹಾಕಲಿಚ್ಛಿಸುವೆಯಾ? ನಿನಗೆ ಈ ನರಮಾಂಸವೇ ಇನ್ನುಮೇಲೆ ಭೋಜನವಾಗಲಿ!'' ಎಂದು ಶಪಿಸಿದರು. ವಸಿಷ್ಠರು ನಿಷ್ಕಾರಣವಾಗಿ ತನ್ನನ್ನು ಶಪಿಸಿದರೆಂದು ರಾಜನು

ಕೋಪಾವಿಷ್ಟನಾಗಿ "ನೀವು ಹೇಳಿದಂತೆ ಭೋಜನವನ್ನು ಸಿದ್ಧಪಡಿಸಿದ್ದೇನೆ. ಇದರಲ್ಲಿ ನನ್ನ ತಪ್ಪೇನಿದೆ?" ಎಂದು ನುಡಿದು ವಸಿಷ್ಠರನ್ನೇ ಶಪಿಸಬೇಕೆಂದು ಕೈಯಲ್ಲಿ ನೀರನ್ನು ತೆಗೆದುಕೊಂಡನು. ಅಷ್ಟರಲ್ಲಿ ಅವನ ಪತ್ನಿಯಾದ ಮದಯಂತಿಯು ಪತಿಯನ್ನು ತಡೆದು, "ಮಹಾರಾಜ, ವಸಿಷ್ಠಮುನಿಗಳು ನಮಗೆ ಗುರುಗಳು. ದೇವತಾ ಸದೃಶರಾದ ಇವರಿಗೆ ಪ್ರತಿಶಾಪವನ್ನೀಯುವುದು ಯೋಗ್ಯವಲ್ಲ" ಎಂದು ಹೇಳಿದಳು. ಆಗ ಧರ್ಮಾತ್ಮನಾದ ಸೌದಾಸನು ಮಂತ್ರತೇಜಸ್ಸಿನಿಂದ ಅನ್ವಿತವಾದ ಆ ಶಾಪಜಲವನ್ನು ತನ್ನ ಕಾಲಮೇಲೆ ಸುರಿದುಕೊಂಡನು. ಒಡನೆಯೇ ರಾಜನ ಪಾದಗಳು ಕಪ್ಪಾದವು. ರಾಜನು ತನ್ನ ಪತ್ನಿಯೊಡನೆ ವಸಿಷ್ಠರಿಗೆ ಅಡ್ಡಬಿದ್ದು ನಮಸ್ಕರಿಸಿ ನಡೆದ ಸಂಗತಿಯನ್ನು ವಿವರಿಸಿದನು. ಆ ಮಹರ್ಷಿಗಳು ಜ್ಞಾನ ದೃಷ್ಟಿಯಿಂದ ನಡೆದುದೆಲ್ಲವನ್ನೂ ತಿಳಿದು "ರಾಜೇಂದ್ರ, ಇದು ಆ ನೀಚನಾದ ರಾಕ್ಷಸನ ಮಾಯೆ. ಕ್ರೋಧವಶನಾಗಿ ನಾನು ಏನನ್ನೋ ಹೇಳಿಬಿಟ್ಟೆನು. ನನ್ನ ಶಾಪವನ್ನು ಈಗಲೇ ಹಿಂತೆಗೆದುಕೊಳ್ಳಲು ಶಕ್ಯವಿಲ್ಲ. ಇದಕ್ಕೆ ಪರಿಹಾರವೇನೆಂದರೆ, ಇನ್ನು ಹನ್ನೆರಡು ವರ್ಷಗಳಲ್ಲಿ ಈ ಶಾಪವು ಕೊನೆಗೊಳ್ಳುವುದು. ಮಹಾರಾಜ, ನಿನಗೆ ಈ ಪೂರ್ವವೃತ್ತಾಂತವು ಸ್ಮರಣೆಯಲ್ಲಿ ಉಳಿಯುವುದಿಲ್ಲ. ಸ್ಮರಣೆಯಲ್ಲಿದ್ದರೆ ನಿನಗೆ ತುಂಬ ಖೇದವಾದೀತು" ಎಂದರು. ಶತ್ರುಘ್ನ, ಪಾದಗಳು ಕಪ್ಪಾದ್ದರಿಂದ ಸೌದಾಸನಿಗೆ ಕಲ್ಮಾಷಪಾದನೆಂದು ಹೆಸರಾಯಿತು. ಅವನು ಮಾಡಿದ ಯಾಗದ ಸ್ಥಳವಿದು" ಎಂದರು. ಈ ದಾರುಣವಾದ ಕಥೆಯನ್ನು ಕೇಳಿ ಶತ್ರುಘ್ನನು ವಾಲ್ಮೀಕಿ ಮುನಿಗಳಿಗೆ ವಂದಿಸಿ ವಿಶ್ರಾಂತಿಗಾಗಿ ಪರ್ಣಶಾಲೆಯೊಳಗೆ ಹೋದನು.

೧೬

ಲವಕುಶರ ಜನನ. ಶತ್ರುಘ್ನನು ವಾಲ್ಮೀಕಿ ಮುನಿಗಳ ಆಶ್ರಮದಿಂದ ತೆರಳುವುದು. ಲವಣಾಸುರನ ವಧೆ

ಶತ್ರುಘ್ನನು ಯಾವ ರಾತ್ರಿಯಲ್ಲಿ ವಾಲ್ಮೀಕಿ ಮುನಿಗಳ ಆಶ್ರಮದಲ್ಲಿ ತಂಗಿದನೋ ಅದೇ ರಾತ್ರಿಯಲ್ಲಿ ಸೀತಾದೇವಿಯು ಇಬ್ಬರು ಗಂಡು ಮಕ್ಕಳಿಗೆ ಜನ್ಮವಿತ್ತಳು. ಅರ್ಧರಾತ್ರಿಯಲ್ಲಿ ಮುನಿಗಳ ಶಿಷ್ಯರು ಬಂದು ಈ ಶುಭಕರವಾದ ವಾರ್ತೆಯನ್ನು ವಾಲ್ಮೀಕಿ ಮುನಿಗಳಿಗೆ ಅರುಹಿದರು. ಒಡನೆಯೇ ಆ ಮುನಿಗಳು ಜಾನಕಿಯು ಇದ್ದ ಪರ್ಣಶಾಲೆಗೆ ಹೋಗಿ ತೇಜಸ್ವಿಗಳಾದ ಆ ರಾಜಪುತ್ರರನ್ನು ಕಂಡು ಆನಂದಿಸಿದರು. ಭೂತಬಾಧೆಯನ್ನೂ ರಕ್ಷೋಬಾಧೆಯನ್ನೂ ನಿವಾರಿಸುವ ರಕ್ಷೆಯನ್ನು

ಪ್ರಸವಗೃಹಕ್ಕೆ ಮಾಡಿದರು. ಅನಂತರ ಒಂದು ಹಿಡಿ ದರ್ಭೆಗಳನ್ನು ಮಧ್ಯದಲ್ಲಿ ಕತ್ತರಿಸಿದರು. ದರ್ಭೆಗಳ ಅಗ್ರಭಾಗಕ್ಕೆ ಕುಶವೆಂದೂ ಅಧೋ ಭಾಗಕ್ಕೆ ಲವವೆಂದೂ ಹೆಸರು. ಆ ಮುನಿಗಳು ಕುಶವನ್ನೂ ಲವವನ್ನೂ ಮಂತ್ರಗಳಿಂದ ಅಭಿಮಂತ್ರಿಸಿ ಆಶ್ರಮದಲ್ಲಿದ್ದ ವೃದ್ಧ ಸ್ತ್ರೀಯರ ಕೈಯಿಂದ ಆ ಇಬ್ಬರು ಮಕ್ಕಳಿಗೆ ಮಾರ್ಜನ ಮಾಡಿಸಿದರು. ಸೂತಿಕಾಗೃಹಕ್ಕೆ ತಾವು ಪ್ರವೇಶಿಸುವುದು ಯುಕ್ತವಲ್ಲವೆಂದು ಭಾವಿಸಿ ಆ ಸ್ತ್ರೀಯರಿಂದ ಮಾರ್ಜನ ಮಾಡಿಸಿದರು. ಮೊದಲು ಜನಿಸಿದ ಮಗುವನ್ನು ಕುಶದಿಂದಲೂ ಎರಡನೆಯ ಮಗುವನ್ನು ಲವದಿಂದಲೂ ಮಾರ್ಜನ ಮಾಡಿಸಿದ್ದರಿಂದ ಮುನಿಗಳ ಇಷ್ಟದಂತೆ ಆ ಶಿಶುಗಳಿಗೆ ಕ್ರಮವಾಗಿ ಕುಶ, ಲವ ಎಂದೇ ಹೆಸರಾಯಿತು. ಹೀಗೆ ಆಶ್ರಮದಲ್ಲಿ ಸಂಭ್ರಮವು ನಡೆದಾಗ ಇದೆಲ್ಲವೂ ಶತ್ರುಘ್ನನಿಗೆ ತಿಳಿಯಿತು. ಪ್ರಾಸಂಗಿಕವಾಗಿ ಶ್ರೀರಾಮನ ಹೆಸರು, ಸೀತೆಯ ಹೆಸರು, ಕುಲಗೋತ್ರಗಳ ವಿವರಣೆ ಇವೆಲ್ಲವೂ ಅವನಿಗೆ ಕೇಳಿಸಿದವು. ಸೀತಾದೇವಿಯೇ ಪ್ರಸವಿಸಿದ್ದಾಳೆಂಬ ಶುಭವಾರ್ತೆಯಿಂದ ಶತ್ರುಘ್ನನಿಗೆ ಪರಮಾನಂದವಾಯಿತು. ಆ ಮಹಾತ್ಮನು ಹರ್ಷದ ಸಂಭ್ರಮದಲ್ಲಿಯೇ ಆ ರಾತ್ರಿಯನ್ನು ಕಳೆದನು. ಬೆಳಗಾದಮೇಲೆ ಆತನು ಪ್ರಾತಃಕೃತ್ಯವನ್ನು ಮುಗಿಸಿ ಸೀತಾದೇವಿಯಿದ್ದ ಸೂತಿಕಾಗೃಹದ ಬಳಿಗೆ ಹೋಗಿ ಕೈಮುಗಿದು ''ಅಮ್ಮ, ಇದು ನಮ್ಮ ಭಾಗ್ಯ'' ಎಂದು ಉದ್ಗರಿಸಿದನು. ಅನಂತರ ವಾಲ್ಮೀಕಿ ಮುನಿಗಳಿಗೆ ನಮಸ್ಕರಿಸಿ ಬೀಳ್ಕೊಂಡು ಪಶ್ಚಿಮಾಭಿಮುಖವಾಗಿ ಪ್ರಯಾಣ ಮಾಡಿದನು. ಆಮೇಲೆ ಏಳು ದಿನಗಳ ಕಾಲ ಪ್ರಯಾಣ ಮಾಡಿ ಯಮುನಾತೀರವನ್ನು ಸೇರಿ ಋಷಿಗಳ ಆಶ್ರಮದಲ್ಲಿ ಇಳಿದುಕೊಂಡನು.

ಶತ್ರುಘ್ನನು ಆ ತಪೋವನದಲ್ಲಿದ್ದ ಚ್ಯವನಮುನಿಗಳನ್ನು ಕುರಿತು ''ಮಹರ್ಷಿಗಳೆ, ನಾನು ಶ್ರೀರಾಮನ ಆಜ್ಞೆಯಂತೆ ಲವಣಾಸುರನನ್ನು ಸಂಹರಿಸುವುದಕ್ಕಾಗಿ ಹೊರಟಿದ್ದೇನೆ. ಆತನು ಅತ್ಯಂತ ಬಲಶಾಲಿಯೆಂದೂ ಅವನೊಡನೆ ಒಂದು ಶೂಲಾಯುಧವಿದೆಯೆಂದೂ ಕೇಳಿದ್ದೇನೆ. ಅದರ ವಿವರವನ್ನು ತಿಳಿಯಬಯಸುತ್ತೇನೆ'' ಎಂದನು. ಆಗ ಚ್ಯವನರು ಹೀಗೆಂದರು : ''ರಘುನಂದನ, ಆ ದೈತ್ಯನ ಶಕ್ತಿ ಅಪಾರವಾದದ್ದು. ನಿಮ್ಮ ವಂಶಕ್ಕೆ ಸಂಬಂಧಿಸಿದ ಒಂದು ವೃತ್ತಾಂತವನ್ನು ಕೇಳು. ಅಯೋಧ್ಯೆಯಲ್ಲಿ ಹಿಂದೆ ಯುವನಾಶ್ವನ ಪುತ್ರನಾದ ಮಾಂಧಾತನೆಂಬ ವೀರನು ಅರಸನಾಗಿದ್ದನು. ಅವನ ಕೀರ್ತಿ ಎಲ್ಲೆಡೆಯೂ ಹರಡಿತ್ತು. ಆತನು ಒಮ್ಮೆ ದೇವೇಂದ್ರನನ್ನು ಗೆಲ್ಲಬೇಕೆಂದು ದೇವಲೋಕಕ್ಕೆ ಹೋದನು. ಆಗ ಇಂದ್ರನು ''ಮಾಂಧಾತ, ಮೊದಲು ಸಮಸ್ತ ಭೂಮಂಡಲವನ್ನೂ ನಿನ್ನ ವಶಕ್ಕೆ ತೆಗೆದುಕೊ. ಅದು ವಶವಾದ ಮೇಲೆ ದೇವರಾಜ್ಯವನ್ನಾಳಬಹುದು'' ಎಂದನು. ಮಾಂಧಾತನು ವಿಸ್ಮಯದಿಂದ

''ಎಲೈ ಇಂದ್ರ, ಭೂಮಂಡಲದಲ್ಲಿ ನಾನು ಗೆಲ್ಲದಿರುವ ವೀರನು ಯಾವನಿದ್ದಾನೆ? ನನ್ನ ಆಜ್ಞೆ ನಡೆಯದ ಸ್ಥಳವಾದರೂ ಯಾವುದು?'' ಎಂದು ಕೇಳಿದನು. ಆಗ ಇಂದ್ರನು ಮಧುವನದಲ್ಲಿ ಮಧುವಿನ ಮಗನಾದ ಲವಣನೆಂಬ ರಾಕ್ಷಸನಿದ್ದಾನೆ. ಅವನು ನಿನ್ನ ಆಜ್ಞೆಯನ್ನು ನಡೆಸುವುದಿಲ್ಲ'' ಎಂದನು. ಅಪ್ರಿಯವಾದ ಈ ಮಾತನ್ನು ಕೇಳಿ ಮಾಂಧಾತನಿಗೆ ನಾಚಿಕೆಯಾಯಿತು. ಅವನು ಯಾವ ಮಾತನ್ನೂ ಆಡದೆ ದೇವೇಂದ್ರನನ್ನು ಬೀಳ್ಕೊಂಡು ಮತ್ತೆ ಈ ಲೋಕಕ್ಕೆ ಬಂದನು. ಆ ವೀರನು ಸೇನಾಸಮೇತನಾಗಿ ಲವಣಾಸುರನನ್ನು ಪರಾಜಯಗೊಳಿಸಲು ಮಧುವನಕ್ಕೆ ಹೋದನು. ಲವಣಾಸುರನು ಆ ಶೂಲಾಯುಧವನ್ನು ಹಿಡಿದು ಯುದ್ಧಮಾಡಿ ವೀರಾಗ್ರಣಿಯಾದ ಮಾಂಧಾತನನ್ನು ಸಂಹರಿಸಿದ್ದಾನೆ. ಶತ್ರುಘ್ನ, ಆ ಶೂಲದ ಪ್ರಭಾವವು ಊಹಾತೀತವಾದದ್ದು. ನೀನೀಗ ಶ್ರೀರಾಮನ ಆಜ್ಞೆಯನ್ನು ನೆರವೇರಿಸಬಲ್ಲೆ. ಆ ದೈತ್ಯನು ಶೂಲವನ್ನು ಹಿಡಿಯದಿದ್ದಾಗ ಅವನನ್ನೆದುರಿಸು. ಆಗ ಮಾತ್ರ ಆತನನ್ನು ನೀನು ಸಂಹರಿಸಲು ಸಾಧ್ಯವಾಗುವುದು. ಇದೊಂದು ಪುಣ್ಯಕಾರ್ಯ. ನಿನಗೆ ವಿಜಯವಾಗುವುದು ನಿಶ್ಚಯ'' ಎಂದರು. ಮತ್ತೆ ''ಪ್ರಾತಃಕಾಲದಲ್ಲಿ ಆತನು ಶೂಲವನ್ನು ಮನೆಯಲ್ಲಿಯೇ ಇಟ್ಟು ಬೇಟೆಯಾಡಲು ಹೋಗಿರುತ್ತಾನೆ. ಆ ಸಮಯದಲ್ಲಿ ನೀನು ಕಾದಿರಬೇಕು'' ಎಂದರು.

ಬೆಳಗಾಯಿತು. ವೀರನಾದ ಶತ್ರುಘ್ನನು ಯಮುನಾ ನದಿಯನ್ನು ದಾಟಿಹೋಗಿ ಮಧುಪುರಿಯ ದ್ವಾರದಲ್ಲಿ ಧನುರ್ಧಾರಿಯಾಗಿ ನಿಂತನು. ಲವಣಾಸುರನು ಪ್ರಾತಃಕಾಲದಲ್ಲಿಯೇ ನಗರದಿಂದ ಹೊರಗೆ ಹೋಗಿ ಬೇಟೆಯಾಡಿ ತಾನು ಕೊಂದ ಪ್ರಾಣಿಗಳನ್ನು ಹೊತ್ತುಕೊಂಡು ಮಧ್ಯಾಹ್ನದ ಹೊತ್ತಿಗೆ ಆಗಮಿಸಿದನು. ಆ ರಾಕ್ಷಸನು ಧನುಷ್ಪಾಣಿಯಾಗಿ ನಿಂತಿದ್ದ ಶತ್ರುಘ್ನನನ್ನು ಕಂಡು ''ಎಲೈ, ಯಾರು ನೀನು? ಈ ಧನುಸ್ಸಿನಿಂದ ಏನು ಮಾಡುವೆ? ನಿನ್ನಂತಹ ಸಾವಿರಾರು ಧನುರ್ಧಾರಿಗಳನ್ನು ಲೀಲೆಯಿಂದ ಕೊಂದು ಬಿಟ್ಟಿದ್ದೇನೆ. ನರಾಧಮ, ಸಾಯುವುದಕ್ಕೆ ಬಂದಿದ್ದೀಯೋ ಹೇಗೆ?'' ಎಂದು ಕೇಳಿದನು. ಆ ಮಾತನ್ನು ಕೇಳಿ ರುಷ್ಟನಾದ ಶತ್ರುಘ್ನನು ''ಎಲೈ ದುರ್ಬುದ್ಧಿಯವನೆ, ನಿನ್ನೊಡನೆ ದ್ವಂದ್ವ ಯುದ್ಧವನ್ನು ಮಾಡಿ ನಿನ್ನನ್ನು ಕೊಲ್ಲುವುದಕ್ಕಾಗಿ ಬಂದಿದ್ದೇನೆ. ನಾನು ದಶರಥ ಮಹಾರಾಜನ ಪುತ್ರ. ವಿಖ್ಯಾತ ಕೀರ್ತಿಯಾದ ಶ್ರೀರಾಮನ ಸೋದರ. ಶತ್ರುಗಳನ್ನು ಮರ್ದಿಸತಕ್ಕ ಶೌರ್ಯವಿರುವುದರಿಂದ ನಾನು ಶತ್ರುಘ್ನನೆನೆಸಿಕೊಂಡಿದ್ದೇನೆ. ಸಕಲ ಜೀವರಾಶಿಗಳಿಗೂ ವೈರಿಯೂ ಪಾಪಿಯೂ ಆದ ನಿನ್ನನ್ನು ಸಂಹರಿಸುವುದು ನನ್ನ ಉದ್ದೇಶವಾಗಿದೆ'' ಎಂದನು. ಆ ಮಾತನ್ನು ಕೇಳಿ ಲವಣನು ಅಟ್ಟಹಾಸದಿಂದ ನಕ್ಕು ''ಆಹಾ, ದೈವವೇ ನಿನ್ನನ್ನು ಇಲ್ಲಿಗೆ ಕರೆತಂದಿದೆ.

ರಾಕ್ಷಸೇಶ್ವರನಾದ ರಾವಣನು ನನ್ನ ತಾಯಿಯ ಬಂಧು. ಒಬ್ಬ ಹೆಂಗಸಿನ ನಿಮಿತ್ತದಿಂದ ರಾಮನು ರಾವಣನನ್ನು ವಧಿಸಿದ್ದಾನೆ. ಅದನ್ನು ಕೇಳಿಯೂ ನಾನು ತೆಪ್ಪಗಿದ್ದೆನು. ನನ್ನ ಅಸಡ್ಡೆಯೇ ಇದಕ್ಕೆ ಕಾರಣ. ನಿಮ್ಮ ವಂಶವನ್ನು ಒಂದು ಹುಲ್ಲುಕಡ್ಡಿಗೆ ಸಮವೆಂದು ಭಾವಿಸಿರುವವನು ನಾನು. ಈಗ ನಿನ್ನನ್ನು ಕೊಂದು ನಿನ್ನ ವಂಶದವರೆಲ್ಲರನ್ನೂ ಸದೆ ಬಡಿದು ನನ್ನ ಮುಯ್ಯಿಯನ್ನು ಸಾಧಿಸಿಕೊಳ್ಳುವೆನು. ಒಂದು ಮುಹೂರ್ತ ಕಾದಿರು. ಆಯುಧ ಸನ್ನದ್ಧನಾಗಿ ಬರುವೆನು'' ಎಂದನು. ಶತ್ರುಘ್ನನು ''ಎಲೈ ರಾಕ್ಷಸ, ವೈರಿಯು ಕಣ್ಣಿಗೆ ಬಿದ್ದಮೇಲೆ ವಿವೇಕಿಯಾದವನು ಎಂದಿಗೂ ಸುಮ್ಮನಿರುವುದಿಲ್ಲ. ನಿನ್ನನ್ನು ಮುಂದಕ್ಕೆ ಬಿಡುವುದಿಲ್ಲ. ನಿನ್ನ ಪಟ್ಟಣವನ್ನು ಇಲ್ಲಿಂದಲೇ ಇನ್ನೊಮ್ಮೆ ನೋಡಿಬಿಡು. ಇನ್ನು ನೀನು ಉಳಿಯಲಾರೆ. ಈಗಲೇ ನಿನ್ನನ್ನು ಯಮನಗರಕ್ಕೆ ದಬ್ಬುವೆನು'' ಎಂದನು. ಶತ್ರುಘ್ನನ ನುಡಿಯನ್ನು ಕೇಳಿ ಲವಣನು ರುಷ್ಟನಾಗಿ 'ನಿಲ್ಲು ನಿಲ್ಲು' ಎಂದು ಗರ್ಜಿಸಿ ಕೈ ಕೈ ಹಿಸುಕಿ ''ಯುದ್ಧಕ್ಕೆ ಬಾ'' ಎಂದು ಶತ್ರುಘ್ನನನ್ನು ಆಹ್ವಾನಿಸಿದನು. ಅವನು ಮರವೊಂದನ್ನು ಕಿತ್ತು ಶತ್ರುಘ್ನನ ಎದೆಗೆ ಬೀಸಿದನು. ಶತ್ರುಘ್ನನು ತನ್ನ ಬಾಣಗಳಿಂದ ಆ ಮರವನ್ನು ಚೂರುಚೂರಾಗಿ ಕತ್ತರಿಸಿದನು. ಬಲಾಢ್ಯನಾದ ಆ ರಾಕ್ಷಸನು ಇನ್ನೂ ಕೆಲವು ಮರಗಳನ್ನೂ, ಬಂಡೆಗಳನ್ನೂ ಕಿತ್ತು ಎತ್ತಿ ಶತ್ರುಘ್ನನನ್ನು ಅಪ್ಪಳಿಸುತ್ತ ಹೋದನು. ವೀರನಾದ ಆ ರಘುನಂದನನು ಅವೆಲ್ಲವನ್ನೂ ತುಂಡರಿಸಿ ರಾಕ್ಷಸನ ಎದೆಗೆ ಗುರಿಯಿಟ್ಟು ಬಾಣ ವೃಷ್ಟಿಯನ್ನು ಸುರಿಸಿದನು. ರಾಕ್ಷಸನು ಆ ಬಾಣಗಳನ್ನು ಹಿಡಿದು ಮುರಿದೆಸೆದು ಗಟ್ಟಿಯಾಗಿ ನಕ್ಕು ಒಂದು ಮಹಾವೃಕ್ಷವನ್ನು ಹಿಡಿದೆತ್ತಿ ಶತ್ರುಘ್ನನ ತಲೆಯ ಮೇಲೆ ಬಡಿದನು. ಆ ಬಡಿತಕ್ಕೆ ಶತ್ರುಘ್ನನು ಕುಸಿದು ಬಿದ್ದು ಮೂರ್ಛೆಹೋದನು. ಅವನು ಹತನಾದನೆಂದೇ ತಿಳಿದ ಲವಣಾಸುರನು ತನ್ನ ಆಹಾರ ವಸ್ತುಗಳನ್ನು ಒಟ್ಟು ಮಾಡಿ ಹೊರಲು ಏರ್ಪಡಿಸಿಕೊಳ್ಳುತ್ತಿದ್ದನು. ಅಷ್ಟರಲ್ಲಿ ಶತ್ರುಘ್ನನು ಮೂರ್ಛೆಯಿಂದ ತಿಳಿದೆದ್ದು ಧನುಷ್ಪಾಣಿಯಾಗಿ ಪುರದ್ವಾರದಲ್ಲಿ ಅಡ್ಡಲಾಗಿ ನಿಂತನು. ಅವನನ್ನು ನೋಡಿ ಕ್ರುದ್ಧನಾದ ಲವಣಾಸುರನು ಶತ್ರುಘ್ನನನ್ನು ಗುದ್ದಬೇಕೆಂದು ತನ್ನ ಆಹಾರ ಸಾಮಗ್ರಿಯನ್ನು ಕೆಳಗಿರಿಸಿ ನುಗ್ಗಿ ಬಂದನು. ಅಷ್ಟರಲ್ಲಿ ಶತ್ರುಘ್ನನು ಶ್ರೀರಾಮನು ಕೊಟ್ಟಿದ್ದ ದಿವ್ಯಶರವನ್ನು ಕೈಗೆತ್ತಿಕೊಂಡು ಅಭಿಮಂತ್ರಿಸಿದನು. ಆ ಶರವು ಪ್ರಳಯ ಕಾಲಾಗ್ನಿಯಂತೆ ಪ್ರಜ್ವಲಿಸುತ್ತ ಕಿಡಿಗೆದರಿತು. ಶತ್ರುಘ್ನನು ಸಿಂಹನಾದ ಮಾಡಿ ಆ ದಿವ್ಯಶರವನ್ನು ಧನುಸ್ಸಿಗೆ ಹೂಡಿ ಲವಣಾಸುರನ ಎದೆಗೆ ಗುರಿಯಿಟ್ಟು ಹೊಡೆದನು. ಆ ಶರವು ಆ ದೈತ್ಯನ ಎದೆಯನ್ನು ಸೀಳಿ ರಸಾತಳಕ್ಕೆ ನುಗ್ಗಿ ಮತ್ತೆ ಶತ್ರುಘ್ನನ ಸಮೀಪಕ್ಕೆ ಬಂದು ಸೇರಿತು. ವಜ್ರಾಯುಧದಿಂದ ತಾಡಿತವಾದ ಪರ್ವತದಂತೆ ಲವಣಾಸುರನು ದೊಪ್ಪನೆ ಭೂಮಿಯ ಮೇಲೆ ಬಿದ್ದು

ರಕ್ತವನ್ನು ಕಾರಿಕೊಂಡು ಮೃತನಾದನು. ಒಡನೆಯೇ ಲವಣನ ವಶದಲ್ಲಿದ್ದ ದಿವ್ಯಶೂಲವು, ದೇವತೆಗಳು ನೋಡುತ್ತಿರುವಂತೆಯೇ ಮೇಲೆ ಹಾರಿ ರುದ್ರದೇವನ ಬಳಿಗೆ ಸಾರಿತು. ಈ ಪ್ರಕಾರವಾಗಿ ಆ ರಘುವೀರನು ಲವಣಾಸುರನನ್ನು ಸಂಹರಿಸಿ ಮೂರುಲೋಕದ ಭಯವನ್ನೂ ನಿವಾರಿಸಿದನು. ಸಕಲ ದೇವತೆಗಳೂ ಋಷಿಗಳೂ ಆ ದಶರಥ ಪುತ್ರನನ್ನು ಶ್ಲಾಘಿಸಿದರು.

೧೭

ಶತ್ರುಘ್ನನಿಂದ ಮಧುಪುರಿಯ ಪುನರ್ನಿರ್ಮಾಣ

ಲವಣಾಸುರನು ಹತನಾದ ಮೇಲೆ ಇಂದ್ರಾದಿ ದೇವತೆಗಳೂ ಶತ್ರುಘ್ನನ ಬಳಿಗೆ ಬಂದು ''ವತ್ಸ–ರಘುವೀರ, ನಮಗೆ ಬಹಳ ಸಂತೋಷವಾಯಿತು. ನಿನಗೆ ವರವನ್ನೀಯುವುದಕ್ಕಾಗಿ ಬಂದಿದ್ದೇವೆ. ಇಷ್ಟವಾದ ವರವನ್ನು ಕೇಳಿಕೊ'' ಎಂದರು. ಶತ್ರುಘ್ನನು ದೇವತೆಗಳಿಗೆ ವಂದಿಸಿ ''ಮಹಾತ್ಮರೆ, ನೀವು ಸಂಪ್ರೀತರಾದರೆ ಅದೇ ನನಗೆ ವರವೆನಿಸುತ್ತದೆ. ಈ ರಾಕ್ಷಸನ ಹಾಳು ನಗರವನ್ನು ಶ್ರೇಷ್ಠನಗರವನ್ನಾಗಿ ಮಾಡಲು ಉದ್ದೇಶಿಸಿದ್ದೇನೆ. ರಾಜಧಾನಿಗೆ ಯೋಗ್ಯವಾದ ಸ್ಥಿತಿಯನ್ನು ಈ ಪಟ್ಟಣವು ಪಡೆಯಲಿ. ಈ ಪ್ರಾಂತವು ಸುವೃಷ್ಟಿ, ಸುಭಿಕ್ಷೆಗಳಿಂದ ಸಮೃದ್ಧವಾಗಲಿ. ಇದೇ ನಾನು ಬೇಡುವ ವರ'' ಎಂದನು. ಸಂತುಷ್ಟರಾದ ದೇವತೆಗಳು ''ಶತ್ರುಘ್ನ, ಹಾಗೆಯೇ ಆಗುವುದು. ಸಂದೇಹವಿಲ್ಲ'' ಎಂದು ವರವನ್ನಿತ್ತು ಸ್ವರ್ಗಕ್ಕೆ ಹೊರಟು ಹೋದರು. ಅನಂತರ ಶತ್ರುಘ್ನನು ತನ್ನ ಸೇನೆಯನ್ನು ಅಲ್ಲಿಗೆ ಕರೆಸಿದನು. ಆ ಕಾರ್ಯದಕ್ಷನು ಶ್ರಾವಣಮಾಸ ದಲ್ಲಿ ನಗರದ ಪುನರ್ನಿರ್ಮಾಣವನ್ನು ಆರಂಭಿಸಿದನು. ಬಹಳಕಾಲ ಪರಿಶ್ರಮಿಸಿ ನಗರವನ್ನು ನಿರ್ಮಾಣ ಮಾಡಲು ಅದು ದಿವ್ಯ ಮನೋಹರವಾಯಿತು. ಮಧುಪುರಿಯು ರಾಜಧಾನಿಯಾಗಿದ್ದ ಆ ಪ್ರಾಂತವೇ ಶೂರಸೇನದೇಶ. ಹೊಲಗದ್ದೆ ಗಳು ಸಸ್ಯಗಳಿಂದ ಕಂಗೊಳಿಸಿದವು. ಕಾಲಕ್ಕೆ ಸರಿಯಾಗಿ ಮಳೆ ಬರತೊಡಗಿತು. ಲವಣಾಸುರನು ಹತನಾದದ್ದರಿಂದ ಅಲ್ಲಲ್ಲಿ ಮರೆಸಿಕೊಂಡಿದ್ದ ಪ್ರಜೆಗಳು ನಗರಕ್ಕೆ ಹಿಂದಿರುಗಿದರು. ಅದರ ಸಮೃದ್ಧಿಯನ್ನು ಕೇಳಿ ಹೊರಗಿನಿಂದ ಬಂದ ಜನರ ಸಂಖ್ಯೆ ಅಪಾರವಾಯಿತು. ನಾನಾ ಪ್ರಕಾರದ ವಾಣಿಜ್ಯವ್ಯವಹಾರಗಳು ನಡೆಯಲಾರಂಭಿಸಿ ದವು. ಲವಣಾಸುರನ ಅರಮನೆಯನ್ನು ಶತ್ರುಘ್ನನು ನಿರ್ಮಲಗೊಳಿಸಿ ವಿವಿಧ ಬಣ್ಣಗಳನ್ನು ಹಚ್ಚಿಸಿ ಉತ್ತಮ ಪಡಿಸಿದನು. ಎಲ್ಲೆಲ್ಲಿಯೂ ಹೂದೋಟಗಳೂ ಕ್ರೀಡಾಂಗಣಗಳೂ ನಿರ್ಮಿತವಾದವು. ಪ್ರಜೆಗಳು ಯಾವ ಈ ಬಾಧೆಯೂ ಇಲ್ಲದೆ

ಸುಖ ಸಮೃದ್ಧಿಗಳಿಂದ ಬಾಳತೊಡಗಿದರು. ಹೀಗೆ ಪುನರ್ನಿರ್ಮಾಣಗೊಂಡ ರಾಜಧಾನಿಯನ್ನೂ, ರಾಜ್ಯವನ್ನೂ ಕಂಡು ಶತ್ರುಘ್ನನಿಗೆ ಪರಮಾನಂದವಾಯಿತು.

ಹನ್ನೆರಡು ವರ್ಷಗಳು ಕಳೆದವು. ಆಗ ಶತ್ರುಘ್ನನಿಗೆ ಶ್ರೀರಾಮನನ್ನು ಸಂದರ್ಶಿಸ ಬೇಕೆಂಬ ಇಚ್ಛೆಯು ತೀವ್ರವಾಯಿತು.

ಅನಂತರ ಹನ್ನೆರಡನೆಯ ವರ್ಷದಲ್ಲಿ ಮಧುಪುರಿಯ ಮಹಾರಾಜನಾದ ಶತ್ರುಘ್ನನು ಅಯೋಧ್ಯೆಗೆ ಹೋಗಬೇಕೆಂದು ನಿಶ್ಚಯಿಸಿ ಮಂತ್ರಿಪುರೋಹಿತರಿಗೂ ಸೇನಾನಿಗಳಿಗೂ ತಿಳಿಸಿ ಹೊರಟನು. ತನ್ನೊಡನೆ ಕೆಲವೇ ಸೈನಿಕರನ್ನೂ ಸೇವಕರನ್ನೂ ಕರೆದೊಯ್ದನು. ದಾರಿಯಲ್ಲಿ ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಆಗಮಿಸಿ ಆ ಮಹರ್ಷಿ ಗಳ ಪಾದಗಳಿಗೆ ಅಭಿವಂದಿಸಿ ಆಶ್ರಮದವರಿತ್ತ ಸತ್ಕಾರಗಳನ್ನು ಸ್ವೀಕರಿಸಿದನು. ಆ ಮಹರ್ಷಿಗಳು ಲವಣಾಸುರನ ವಧೆಯನ್ನು ಪ್ರಸ್ತಾಪಿಸಿ ಹೀಗೆಂದರು : ''ಶತ್ರುಘ್ನ, ನೀನು ಲವಣಾಸುರನನ್ನು ಸಂಹರಿಸಿ ದುಷ್ಕರವಾದ ಒಂದು ಮಹಾಕಾರ್ಯವನ್ನು ಸಾಧಿಸಿದ್ದೀಯೆ. ನಿನ್ನ ಶೌರ್ಯದಿಂದ ಜಗತ್ತಿನ ಒಂದು ಭಯವೇ ಶಾಂತವಾಯಿತು. ಸಕಲ ಪ್ರಾಣಿಗಳಿಗೂ ಜಗತ್ತಿಗೂ ಒಳ್ಳೆಯದನ್ನು ಮಾಡಿದ್ದೀಯೆ. ವತ್ಸ, ನನ್ನ ಮನಸ್ಸಿಗೆ ಅತ್ಯಾನಂದವಾಗಿದೆ'' ಎಂದು ನುಡಿದು ಶತ್ರುಘ್ನನನ್ನು ಪ್ರೀತಿಯಿಂದ ಆಲಿಂಗಿಸಿ ಅವನ ಶಿರಸ್ಸನ್ನು ಆಘ್ರಾಣಿಸಿದರು. ಆ ರಾತ್ರಿ ಭೋಜನವಾದ ಮೇಲೆ ಶತ್ರುಘ್ನನು ತನ್ನ ಪರಿವಾರದೊಡನೆ ಕುಳಿತಿದ್ದನು. ಆಗ ಮಧುರವಾದ ಸಂಗೀತವು ಕೇಳಿಸಿತು. ಗೀತರೂಪವಾಗಿ ಶ್ರೀರಾಮನ ಚರಿತ್ರೆಯನ್ನು ಹಾಡುತ್ತಿದ್ದ ಬಾಲಕರ ಧ್ವನಿ ಕೇಳಿಸಿತು. ಸಂಸ್ಕೃತ ಭಾಷೆಯಲ್ಲಿ ರಚಿತವಾಗಿ ಕಾವ್ಯಲಕ್ಷಣಗಳಿಂದ ಯುಕ್ತವಾದ ಆ ಶ್ಲೋಕಗಳನ್ನು ಕೇಳಿ ಶತ್ರುಘ್ನನು ರೋಮಾಂಚಗೊಂಡನು. ಶ್ಲೋಕ ಬದ್ಧವಾದ ಆ ಗೀತವನ್ನು ಕೇಳುತ್ತ ಕೇಳುತ್ತ ಅವನ ಕಣ್ಣುಗಳಿಂದ ನೀರು ಒಸರಿತು. ಅವನು ಮೈಮರೆತು ಮತ್ತೆ ಮತ್ತೆ ನಿಟ್ಟುಸಿರುಬಿಟ್ಟನು. ಶತ್ರುಘ್ನನ ಪರಿವಾರದವರು ಆ ಮಧುರವಾದ ಗಾನವನ್ನು ಕೇಳಿ 'ಅಚ್ಚರಿ, ಅಚ್ಚರಿ' ಎಂದು ಉದ್ಗರಿಸಿದರು. ಅವರು ತಮ್ಮೊಳಗೆ ''ಏನಿದು? ನಾವಿರುವುದೆಲ್ಲಿ? ಕನಸು ಕಾಣುತ್ತಿದ್ದೇವೆಯೆ?'' ಎಂದು ಹೇಳಿಕೊಂಡರು. ಅವರು ಪರಮಾಶ್ಚರ್ಯದಿಂದ ಶತ್ರುಘ್ನನನ್ನು ನೋಡಿ ''ಮಹಾರಾಜ, ಈ ಶ್ಲೋಕಗಳನ್ನು ಯಾರು ಹಾಡುತ್ತಿರಬಹುದು? ವಾಲ್ಮೀಕಿ ಮುನಿಗಳನ್ನು ಕೇಳುವುದೇ ಸರಿ'' ಎಂದರು. ಶತ್ರುಘ್ನನು ಸ್ವಲ್ಪಹೊತ್ತು ಚಿಂತಿಸಿ ''ಇಂಥ ವಿಷಯವನ್ನು ನಾವು ಕೇಳುವುದು ಯುಕ್ತವಲ್ಲ. ಮುನಿಗಳ ಆಶ್ರಮದಲ್ಲಿ ಈ ಬಗೆಯ ಎಷ್ಟೋ ಆಶ್ಚರ್ಯಗಳು ಇನ್ನೂ ಇರಬಹುದು! ನಾವು ಕೇಳುವುದು ಸರಿಯಲ್ಲ'' ಎಂದು ಹೇಳಿಬಿಟ್ಟನು.

ಅನಂತರ ವಾಲ್ಮೀಕಿ ಮುನಿಗಳನ್ನು ಕಂಡು ವಂದಿಸಿ ವಿಶ್ರಮಿಸುವುದಕ್ಕಾಗಿ ತನ್ನ ಬಿಡಾರಕ್ಕೆ ತೆರಳಿದನು. ನಿದ್ರಿಸುವುದಕ್ಕಾಗಿ ಮಲಗಿದನು. ಏನು ಮಾಡಿದರೂ ನಿದ್ರೆ ಬರಲಿಲ್ಲ. ನಾನಾ ಚಿಂತೆಗಳು ಅವನ ಮನಸ್ಸನ್ನು ಕಾಡಿದವು. ಆಶ್ರಮದಲ್ಲಿ ಕೇಳಿದ ಮಧುರಗೀತವೇ ಅವನ ಕಿವಿಯಲ್ಲಿ ಸುಳಿಯುತ್ತಿತ್ತು. ಆ ಮಹಾತ್ಮನಿಗೆ ನಿದ್ರೆಯಿಲ್ಲದೆಯೇ ರಾತ್ರಿ ಕಳೆಯಿತು. ಬೆಳಗಾದ ಮೇಲೆ ಪ್ರಾತರ್ವಿಧಿಗಳನ್ನು ಮುಗಿಸಿ ಆ ರಘುನಂದನನು ವಾಲ್ಮೀಕಿ ಮುನಿಗಳನ್ನು ಕಂಡು ವಂದಿಸಿ ''ಭಗವನ್, ಶ್ರೀರಾಮನನ್ನು ಸಂದರ್ಶಿಸಲು ಅಯೋಧ್ಯೆಗೆ ಹೋಗುತ್ತಿದ್ದೇನೆ. ನನಗೆ ಅನುಮತಿಯನ್ನು ಕೊಡಬೇಕು'' ಎಂದು ಪ್ರಾರ್ಥಿಸಿದನು. ವಾಲ್ಮೀಕಿಮುನಿಗಳು ಆತನನ್ನು ಪ್ರೀತಿಯಿಂದ ಆಲಿಂಗಿಸಿ ಕಳಿಸಿಕೊಟ್ಟರು.

ಶತ್ರುಘ್ನನು ರಥವನ್ನೇರಿ ತನ್ನ ಪರಿವಾರದೊಂದಿಗೆ ಪ್ರಯಾಣ ಮಾಡಿ ಅಯೋಧ್ಯಾಪುರಿಯನ್ನು ಪ್ರವೇಶಿಸಿ ಶ್ರೀರಾಮನಿದ್ದಲ್ಲಿಗೆ ಹೋದನು. ಆಸ್ಥಾನದಲ್ಲಿ ಉಪವಿಷ್ಟನಾಗಿದ್ದ ಶ್ರೀರಾಮನನ್ನು ಕಂಡು ವಂದಿಸಿದನು. ಶ್ರೀರಾಮನು ಶತ್ರುಘ್ನನನ್ನು ಪ್ರೀತಿಯಿಂದ ಆಲಿಂಗಿಸಿ ಅವನ ಕುಶಲವನ್ನು ವಿಚಾರಿಸಿದನು. ಶತ್ರುಘ್ನನು ''ಮಹಾರಾಜ, ನಿನ್ನ ಆಜ್ಞೆಯಂತೆ ಸಕಲ ಕಾರ್ಯಗಳನ್ನೂ ನೆರವೇರಿಸಿದ್ದೇನೆ. ಲವಣಾಸುರನನ್ನು ಸಂಹರಿಸಿ ಮಧುಪುರಿಯನ್ನು ವಾಸಯೋಗ್ಯವನ್ನಾಗಿ ಮಾಡಿದ್ದೇನೆ. ಹಾಳಾಗಿದ್ದ ಆ ರಾಜ್ಯವನ್ನು ಸರಿಪಡಿಸಲು ಹನ್ನೆರಡು ವರ್ಷಕಾಲ ಹಿಡಿಯಿತು. ಇಷ್ಟು ದೀರ್ಘಕಾಲ ನಿನ್ನನ್ನು ಅಗಲಿದ್ದೆನು. ಶ್ರೀರಾಮ, ಪ್ರಸನ್ನನಾಗು. ನಿನ್ನನ್ನು ಬಿಟ್ಟಿರಲು ಮನಸ್ಸಾಗದು. ತಾಯಿಯನ್ನಗಲಿದ ಕರುವಿನಂತಾಗಿದ್ದೇನೆ. ಬಹಳ ಕಾಲ ದೂರದಲ್ಲಿರಲಾರೆ'' ಎಂದನು. ರಾಘವನು ಮುಗುಳ್ನಗೆ ಬೀರುತ್ತ ಶತ್ರುಘ್ನನನ್ನು ಆಲಿಂಗಿಸಿಕೊಂಡು ''ತಮ್ಮ, ವಿಷಾದಿಸಬೇಡ. ಇದು ಕ್ಷತ್ರಿಯೋಚಿತವಾದ ನಡವಳಿಕೆಯಲ್ಲ. ರಾಜರಾದವರು ಪ್ರಿಯಜನವಿರಹ, ಪರಸ್ಥಳವಾಸ – ಇತ್ಯಾದಿ ಕಷ್ಟಗಳಿಗೆ ಹಿಂಜರಿಯಬಾರದು. ಧರ್ಮದಿಂದ ಪ್ರಜೆಗಳನ್ನು ಪಾಲಿಸುವುದೊಂದೇ ನಮ್ಮ ಗುರಿಯಾಗಿರಬೇಕು. ಲೋಕ ಪ್ರಸಿದ್ಧವಾದ ರಘುಕುಲದಲ್ಲಿ ಜನಿಸಿದ ವೀರ ನೀನು. ಮಧುಪುರಿಯಲ್ಲಿ ನಿನ್ನ ಕಾರ್ಯವನ್ನು ನೆರವೇರಿಸುತ್ತಿರು. ಆಗಾಗ ನನ್ನನ್ನು ಕಾಣಲು ಅಯೋಧ್ಯೆಗೆ ಬರುತ್ತಿರು. ನನಗೆ ಪ್ರಾಣಪ್ರಿಯನಾದ ತಮ್ಮ ನೀನು. ನಿನ್ನನ್ನು ಅಗಲಿರಲು ನನಗೂ ದುಃಖವಾಗುವುದು. ಆದರೆ ಕ್ಷತ್ರಿಯ ಧರ್ಮವಾದ ರಾಜ್ಯಪಾಲನೆ ಯಾವ ಸ್ನೇಹಬಾಂಧವ್ಯಗಳನ್ನೂ ಹೆಚ್ಚಿನದೆಂದು ಮನ್ನಿಸುವುದಿಲ್ಲ. ಆದ್ದರಿಂದ, ವತ್ಸ, ಇನ್ನು ಏಳು ರಾತ್ರಿಗಳವರೆಗೆ ಅಯೋಧ್ಯೆಯಲ್ಲಿರು. ನಿನಗೆ ಪ್ರಿಯರಾದವರೆಲ್ಲರನ್ನೂ ಕಂಡು ಅನಂತರ ಮಧುಪುರಿಗೆ ಹೋಗು'' ಎಂದನು.

ಹೃದಯಾಂತರಾಳದಿಂದ ಬಂದ ಧರ್ಮಯುಕ್ತವಾದ ಈ ಮಾತನ್ನು ಕೇಳಿ ಶತ್ರುಘ್ನನು ದೀನವಾಣಿಯಿಂದ ''ಅಣ್ಣ, ಆಗಲಿ'' ಎಂದನು. ಅನಂತರ ಏಳು ರಾತ್ರಿಗಳ ಕಾಲ ಶತ್ರುಘ್ನನು ಅಯೋಧ್ಯೆಯಲ್ಲಿದ್ದು ಮತ್ತೆ ಪ್ರಯಾಣ ಮಾಡಲು ಸಿದ್ಧನಾದನು. ಶ್ರೀರಾಮ ಲಕ್ಷ್ಮಣ ಭರತರನ್ನು ಬೀಳ್ಕೊಂಡು ರಥವನ್ನೇರಿದನು. ಭರತ ಲಕ್ಷ್ಮಣರು ಬಹು ದೂರದವರೆಗೆ ಬಂದು ಅವನನ್ನು ಕಳಿಸಿಕೊಟ್ಟರು. ಶತ್ರುಘ್ನನು ತ್ವರೆಯಿಂದ ಮಧುಪುರಿಗೆ ತೆರಳಿದನು.

೧೮

ಶಂಬೂಕ ವಧೆ

ಶ್ರೀರಾಮನು ಶತ್ರುಘ್ನನನ್ನು ಕಳಿಸಿಕೊಟ್ಟು ಸೋದರರಾದ ಭರತ ಲಕ್ಷ್ಮಣರೊಡನೆ ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಿದ್ದನು. ಕೆಲವು ದಿನಗಳು ಕಳೆದವು. ಒಂದು ದಿನ ಆ ರಾಷ್ಟ್ರದ ಪ್ರಜೆಯಾದ ಒಬ್ಬ ವೃದ್ಧ ಬ್ರಾಹ್ಮಣನು ಮೃತನಾದ ಬಾಲಕನನ್ನು ಎತ್ತಿಕೊಂಡು ಅರಮನೆಯ ಬಾಗಿಲಿಗೆ ಬಂದನು. ಆ ವೃದ್ಧನು ಪುತ್ರವಾತ್ಸಲ್ಯದಿಂದ ಅಳುತ್ತ 'ಮಗನೇ–ಮಗನೇ,' ಎಂದು ಹಲುಬುತ್ತ ಹೀಗೆ ನುಡಿದನು. ''ಅಯ್ಯೋ, ಜನ್ಮಾಂತರದಲ್ಲಿ ನಾನು ಯಾವ ಪಾಪಕೃತ್ಯವನ್ನು ಮಾಡಿದೆನೊ? ಒಬ್ಬನೇ ಮಗನಾದ ನಿನ್ನನ್ನು ಕಳೆದುಕೊಂಡೆನಲ್ಲ, ಮಗು, ಅಕಾಲ ಮೃತ್ಯುವಿಗೆ ತುತ್ತಾಗಿ ನನಗೆ ದುಃಖವನ್ನು ತಂದೊಡ್ಡಿದೆ. ಸ್ವಲ್ಪ ದಿನಗಳಲ್ಲಿಯೇ ಪುತ್ರಶೋಕದಿಂದ ನಾನು ಸಾಯುವುದು ನಿಶ್ಚಯ. ನಿನ್ನ ತಾಯಿಯೂ ಸಾಯುವಳು. ಈ ಜನ್ಮದಲ್ಲಿ ಒಂದೇ ಒಂದು ಸುಳ್ಳನ್ನೂ ನಾನು ಹೇಳಿದವನಲ್ಲ. ಒಂದು ಪಾಪಕೃತ್ಯವನ್ನೂ ಮಾಡಿದವನಲ್ಲ. ಹೀಗಿದ್ದರೂ ನನ್ನ ಮಗನು ಏಕೆ ಸತ್ತುಹೋದನು? ಯಾರ ಪಾಪದ ಫಲ ಇದು? ಇಂಥ ಘೋರದೃಶ್ಯವನ್ನು ನಾನು ಕಂಡಿರಲಿಲ್ಲ; ಕೇಳಿರಲಿಲ್ಲ. ಈ ರಾಮನ ರಾಜ್ಯದಲ್ಲಿ ಅಕಾಲಮೃತ್ಯು ಬಂದು ಬಿಟ್ಟಿತು! ರಾಮನ ಯಾವುದೋ ದುಷ್ಕೃತ್ಯವೇ ಇದೆ. ಇವನ ರಾಜ್ಯದಲ್ಲಿ ಚಿಕ್ಕ ಹುಡುಗರಿಗೆ ಸಾವು ಬಂದಿತಲ್ಲ, ಎಲೈ ರಾಜ, ನನ್ನ ಕಷ್ಟವನ್ನು ನೋಡು. ಈ ರಾಜದ್ವಾರದಲ್ಲಿಯೇ ನನ್ನ ಹೆಂಡತಿಯೊಡನೆ ಆತ್ಮಹತ್ಯೆ ಮಾಡಿಕೊಳ್ಳುವೆನು. ಬ್ರಹ್ಮಹತ್ಯೆ ನಿನಗೆ ಗಂಟು ಬೀಳುವುದು. ರಾಜ, ನಿನ್ನ ರಾಷ್ಟ್ರದಲ್ಲಿರುವ ನಾವು ದುಷ್ಕಾಲಕ್ಕೆ ಈಡಾದೆವು. ಮಹಾತ್ಮರಾದ ಇಕ್ಷ್ವಾಕುಗಳ ರಾಜ್ಯವು ಈಗ ಅನಾಥವಾಯಿತು. ಈ ಬಾಲಕನ ಮರಣವಾದುದಕ್ಕೆ ರಾಜನೇ ಕಾರಣ. ಇಂಥ ರಾಮನು ಈ ರಾಜ್ಯಕ್ಕೆ ಅಧಿಪತಿಯಂತೆ. ರಾಜನ ತಪ್ಪಿನಿಂದ ಪ್ರಜೆಗಳು ವಿಪತ್ತಿಗೆ ಗುರಿಯಾಗುತ್ತಾರೆ. ಈ ರಾಮನ ದುಷ್ಕಾರ್ಯದಿಂದಲೋ ಅಥವಾ ಈ

ದೇಶದಲ್ಲಿ ನಡೆದ ಯಾವುದೋ ಅಧರ್ಮದಿಂದಲೋ ನನ್ನ ಮಗನು ಪ್ರಾಣವನ್ನು ತೆರಬೇಕಾಗಿ ಬಂದಿತು'' ಎಂದು ಕರುಣಸ್ವರದಿಂದ ಗೋಳಾಡತೊಡಗಿದನು.

ಬ್ರಾಹ್ಮಣನ ಈ ಕರುಣ ಪೂರಿತ ಗೋಳಾಟವು ಶ್ರೀರಾಮನಿಗೆ ತಿಳಿಯಿತು. ಅವನು ಶೋಕ ಸಂತಪ್ತನಾಗಿ ತನ್ನ ಮಂತ್ರಿಗಳನ್ನೂ ವಸಿಷ್ಠ ವಾಮದೇವರನ್ನೂ ಪೌರಪ್ರಮುಖರನ್ನೂ ಕರೆಸಿದನು. ಮಾರ್ಕಂಡೇಯ, ಗೌತಮ, ನಾರದ ಮೊದಲಾದ ದ್ವಿಜೋತ್ತಮರೂ ಆಗಮಿಸಿದರು. ಶ್ರೀರಾಮನು ವೃದ್ಧಬ್ರಾಹ್ಮಣನ ಆಕ್ಷೇಪಣೆಗಳನ್ನು ಅವರೆಲ್ಲರಿಗೆ ವಿವರಿಸಿ ಈಗ ನನ್ನ ಕರ್ತವ್ಯವೇನೆಂದು ದೈನ್ಯದಿಂದ ನುಡಿದನು. ಎಲ್ಲರೂ ಇದನ್ನು ಪರಿಶೀಲಿಸಿದ ಮೇಲೆ ನಾರದರು ಹೀಗೆಂದರು : ''ಮಹಾರಾಜ, ಆ ಬಾಲಕನಿಗೆ ಮರಣವೇಕಾಯಿತೆಂಬುದನ್ನು ಕೇಳು. ಅದನ್ನು ಕೇಳಿದಮೇಲೆ ನಿನ್ನ ಕರ್ತವ್ಯವೇನೆಂಬುದನ್ನು ವಿಚಾರಮಾಡು. ರಘುನಂದನ, ಹಿಂದೆ ಕೃತಯುಗದಲ್ಲಿ ಬ್ರಾಹ್ಮಣರು ಮಾತ್ರವೇ ತಪಸ್ಸನ್ನಾಚರಿಸುತ್ತಿದ್ದರು. ಜನರು ತೇಜಸ್ವಿಗಳೂ ಜ್ಞಾನಿಗಳೂ ಆಗಿದ್ದರು. ಅಜ್ಞಾನದ ಮುಸುಕು ಇರಲಿಲ್ಲ. ಕ್ರಮವಾಗಿ ತ್ರೇತಾಯುಗವು ಬಂದಿತು. ಈ ಯುಗದಲ್ಲಿ ದೇಹಾತ್ಮಬುದ್ಧಿಯು ಅಂಕುರಿಸಿತು. ಈ ಯುಗದಲ್ಲಿ ಕ್ಷತ್ರಿಯರಿಗೂ ತಪಸ್ಸಿನಲ್ಲಿ ಅಧಿಕಾರವುಂಟು. ಈ ಸಮಯದಲ್ಲಿ ಮನುಪ್ರಭೃತಿಗಳು ಚಾತುರ್ವರ್ಣ್ಯ ಪ್ರಯುಕ್ತವೂ ವೇದ ಸಮ್ಮತವೂ ಆದ ಆಚಾರ ಭೇದವನ್ನು ಗೊತ್ತು ಮಾಡಿದರು. ತ್ರೇತಾಯುಗದಲ್ಲಿ ಅಧರ್ಮವು ಒಂದು ಪಾದವನ್ನೂರಿತು. ಈ ಯುಗದಲ್ಲಿ ಶೂದ್ರರು ತಪಸ್ಸನ್ನಾಚರಿಸಲು ಅವಕಾಶವಿಲ್ಲ. ತಪಸ್ಸು ಶೂದ್ರನ ಸ್ವಧರ್ಮವಲ್ಲ. ಮಹಾರಾಜ, ಹೀಗಿರುವಾಗ ಈಗ ಶೂದ್ರನೊಬ್ಬನು ಕಠಿಣವಾದ ಒಂದು ತಪಸ್ಸನ್ನಾಚರಿಸುತ್ತಿದ್ದಾನೆ. ಕಲಿಯುಗದಲ್ಲಿ ಮಾತ್ರ ಶೂದ್ರಜಾತಿಯವರಿಗೆ ತಪಶ್ಚರ್ಯೆ ವಿಹಿತವಾಗಿದೆ. ಈ ತ್ರೇತಾಯುಗದಲ್ಲಿ ಶೂದ್ರನಿಗೆ ತಪಸ್ಸಿನಲ್ಲಿ ಅಧಿಕಾರವಿಲ್ಲ. ಅವಿವೇಕಿಯಾದ ಒಬ್ಬ ಶೂದ್ರನು ಈಗ ಸಶರೀರನಾಗಿ ಸ್ವರ್ಗವನ್ನು ಪಡೆಯಬೇಕೆಂಬ ಆಕಾಂಕ್ಷೆಯಿಂದ ತಪಸ್ಸಿನಲ್ಲಿ ತೊಡಗಿದ್ದಾನೆ. ಗುರೂಪದೇಶವಿಲ್ಲದೆ, ಗುರುವಿನ ಅನುಮತಿಯನ್ನೂ ಪಡೆಯದೆ ಸ್ವೇಚ್ಛೆಯಾಗಿ ನಾಮಮಂತ್ರವನ್ನು ಜಪಿಸುತ್ತ ದುರ್ಮಾರ್ಗದಲ್ಲಿ ಅವನು ತೊಡಗಿರುವುದರಿಂದ ನಿನ್ನ ರಾಜ್ಯದಲ್ಲಿ ಅಧರ್ಮವು ಪ್ರವೇಶಿಸಿದಂತಾಗಿದೆ. ನಿನ್ನ ರಾಷ್ಟ್ರದಲ್ಲಿ ಎಲ್ಲಿಯೋ ಹೀಗೆ ನಡೆಯುತ್ತಿದೆ. ಆ ದುಷ್ಕೃತ್ಯವನ್ನು ತಡೆದರೆ ಧರ್ಮ ವೃದ್ಧಿಯಾಗುವುದು. ಈ ಬಾಲಕನೂ ಜೀವಂತನಾಗಬಹುದು'' ಎಂದರು. ನಾರದರ ಈ ಮಾತನ್ನು ಸಭೆಯು ಅನುಮೋದಿಸಿತು.

ಅನಂತರ ರಾಘವನು ಸಮಾಹಿತನಾಗಿ ಲಕ್ಷ್ಮಣನನ್ನು ನೋಡಿ ''ಸೌಮ್ಯ, ಆ

ದ್ವಿಜಶ್ರೇಷ್ಠನಿಗೆ ಸಮಾಧಾನವನ್ನು ಹೇಳು. ಬಾಲಕನ ದೇಹವನ್ನು ತೈಲದ್ರೋಣಿಯಲ್ಲಿರುಸುವಂತೆ ಏರ್ಪಡಿಸು. ಅವನ ಶರೀರವು ಕೆಟ್ಟು ಶಿಥಿಲವಾಗದಂತೆ ವ್ಯವಸ್ಥೆ ಮಾಡು'' ಎಂದು ತಿಳಿಸಿ ರಾಜಸಭೆಯನ್ನು ವಿಸರ್ಜಿಸಿದನು.

ಅನಂತರ ರಾಘವನು ಪುಷ್ಪಕ ವಿಮಾನವನ್ನು ಮನಸ್ಸಿನಲ್ಲಿ ಸ್ಮರಿಸಿದನು. ಅವನ ಇಂಗಿತವನ್ನರಿತು ಕುಬೇರನ ಪುಷ್ಪಕ ವಿಮಾನವು ಉಪಸ್ಥಿತವಾಯಿತು. ಶ್ರೀರಾಮನು ಮಹರ್ಷಿಗಳಿಗೆ ಅಭಿವಂದಿಸಿ ಧನುಸ್ಸನ್ನೂ ಬತ್ತಳಿಕೆಗಳನ್ನೂ ಧರಿಸಿ ಹೊಳೆಯುವ ಖಡ್ಗವನ್ನು ಹಿಡಿದು ಪುಷ್ಪಕವನ್ನೇರಿದನು. ರಾಜಧಾನಿಯ ರಕ್ಷಣೆಗಾಗಿ ಭರತ ಲಕ್ಷ್ಮಣರನ್ನು ನೇಮಿಸಿದನು. ಆತನು ಆ ವಿಮಾನದಲ್ಲಿ ಕುಳತು ಶೂದ್ರತಪಸ್ವಿಯನ್ನು ಹುಡುಕುತ್ತಾ ಮೊದಲು ಪಶ್ಚಿಮದಿಕ್ಕಿಗೆ ಹೊರಟನು. ಅನಂತರ ಉತ್ತರದಿಕ್ಕಿಗೆ ಹೋಗಿ ಎಲ್ಲಿಯೂ ದುಷ್ಕೃತ್ಯವನ್ನು ಕಾಣದೆ ಪೂರ್ವದಿಕ್ಕನ್ನು ಶೋಧಿಸುತ್ತ ಹೋದನು. ಎಲ್ಲೆಲ್ಲಿಯೂ ಪರಿಶುದ್ಧವಾದ ಆಚಾರವು ನೆಲೆಸಿತ್ತು. ಪುಷ್ಪಕದಲ್ಲಿ ಮಂಡಿಸಿದ್ದ ಆ ವೀರನು ಅದೆಲ್ಲವನ್ನೂ ನೋಡುತ್ತ ದಕ್ಷಿಣ ದಿಕ್ಕಿಗೆ ತೆರಳಿದನು. ಅಲ್ಲಿ ಶೈವಲವೆಂಬ ಪರ್ವತದ ಉತ್ತರಪಾರ್ಶ್ವದಲ್ಲಿ ಒಂದು ದೊಡ್ಡ ಸರಸ್ಸು ಕಾಣಿಸಿತು. ಆ ಸರಸ್ಸಿನ ತೀರದಲ್ಲಿದ್ದ ಒಂದು ಮರದಲ್ಲಿ ತಲೆಕೆಳಗಾಗಿ ನೇತಾಡುತ್ತ ತಪಸ್ಸಿನಲ್ಲಿ ನಿರತನಾದ ಒಬ್ಬ ಮನುಷ್ಯನು ರಾಘವನಿಗೆ ಗೋಚರಿಸಿದನು. ಒಡನೆಯೇ ಪುಷ್ಪಕ ವಿಮಾನವನ್ನು ಕೆಳಗಿಳಿಸಿ ತಪಸ್ವಿಯ ಬಳಿಗೆ ಹೋಗಿ ''ಎಲೈ ಸೌಮ್ಯ, ದೃಢನಿಷ್ಠೆಯಿಂದ ತಪಸ್ಸಿನಲ್ಲಿ ತೊಡಗಿರುವ ನೀನು ಧನ್ಯನೇ ಸರಿ. ನಿನ್ನ ಜಾತಿಯಾವುದು? ಕೌತುಕದಿಂದ ಪ್ರಶ್ನಿಸುತ್ತಿದ್ದೇನೆ. ನಾನು ದಶರಥಪುತ್ರನಾದ ರಾಮ. ಈ ನನ್ನ ರಾಜ್ಯದಲ್ಲಿ ಧರ್ಮ ಪ್ರತಿಷ್ಠೆಗಾಗಿ ಯತ್ನಿಸುತ್ತಿದ್ದೇನೆ. ತಪಸ್ಸು ಮಾಡುತ್ತಿರುವ ನಿನ್ನ ಬಯಕೆಯಾದರೂ ಏನು? ಸತ್ಯವನ್ನು ಹೇಳು'' ಎಂದು ಕೇಳಿದನು.

ಆಗ ತಲೆಕೆಳಗಾಗಿಯೇ ನೇತಾಡುತ್ತಿದ್ದ ಆ ಪುರುಷನು ''ಮಹಾರಾಜ, ನಾನು ಶೂದ್ರಯೋನಿಯಲ್ಲಿ ಜನಿಸಿದವನು. ನನ್ನ ಹೆಸರು ಶಂಬೂಕ. ಶರೀರ ಸಹಿತನಾಗಿಯೇ ಸ್ವರ್ಗಕ್ಕೆ ಹೋಗಿ ದೇವತ್ವವನ್ನು ಪಡೆಯಬೇಕೆಂಬುದು ನನ್ನ ಅಭಿಲಾಷೆ. ನಾನು ಸುಳ್ಳು ಹೇಳುತ್ತಿಲ್ಲ, ಉಗ್ರ ತಪಸ್ಸಿನಲ್ಲಿ ತೊಡಗಿರುವ ನಾನು ಶೂದ್ರನೇ ಹೌದು'' ಎಂದನು. ಶ್ರೀರಾಮನಿಗೆ ನಾರದರು ಹೇಳಿದ ವಿಷಯವೆಲ್ಲವೂ ಸ್ಮರಣೆಗೆ ಬಂದಿತು. ''ನನ್ನ ರಾಜ್ಯದಲ್ಲಿ ಈತನು ಈ ಬಗೆಯಾದ ತಾಮಸ ತಪಸ್ಸಿನಲ್ಲಿ ತೊಡಗಿರುವುದು ಅಧರ್ಮ'' ಎಂದು ನಿಶ್ಚಯಿಸಿ ತನ್ನ ಖಡ್ಗವನ್ನು ಸೆಳೆದನು. ಆ ಕರುಣಾತ್ಮನ ಮನಸ್ಸಿನಲ್ಲಿ ದಯೆಯು ಉಂಟಾಯಿತು. ಆದರೆ ಧರ್ಮರಕ್ಷಣೆಯು ರಾಜನ

ನಿಷ್ಠುರವಾದ ಕರ್ತವ್ಯ ಎಂಬುದೂ ಹೊಳೆಯಿತು. ಇಂಥ ಅಧರ್ಮ ಕೃತ್ಯವು ನನ್ನ ರಾಷ್ಟ್ರದಲ್ಲಿ ನಡೆಯಕೂಡದೆಂಬುದೂ ಲೋಕಾಪವಾದದಿಂದ ತಾನು ಸೀತಾದೇವಿ ಯನ್ನು ತೊರೆದಿರುವುದೂ ಸ್ಮರಣೆಗೆ ಬಂದಿತು. ಜನರು ತಪ್ಪಾಗಿ ತಿಳಿದುಕೊಂಡು ಅಧರ್ಮಕ್ಕೆ ಇಳಿದಾರೆಂದು ಅಲ್ಲವೇ ನಾನು ಗರ್ಭಿಣಿಯಾಗಿದ್ದ ಜಾನಕಿಯನ್ನು ನಿರ್ದಯೆಯಿಂದ ತ್ಯಜಿಸಿಬಿಟ್ಟದ್ದು? ಹೀಗಿರುವಾಗ ಈ ಶೂದ್ರನನ್ನು ಕೊಲ್ಲುವುದಕ್ಕೆ ಹಿಂಜರಿಯುವುದೇಕೆ? ಸಾಧ್ವಿಯಾದ ಆ ದೇವಿಯನ್ನೇ ಹೊರದೂಡಿದ ನನಗೆ ಅಧರ್ಮಿಯಾದ ಈತನನ್ನು ಸಂಹರಿಸುವುದು ದೊಡ್ಡದಲ್ಲ–ಹೀಗೆಂದು ಆಲೋಚಿಸಿ ಕಡೆಗೆ ಆ ಖಡ್ಗದಿಂದ ಶಂಬೂಕನ ತಲೆಯನ್ನು ಕತ್ತರಿಸಿ ಹಾಕಿದನು. ಆಗ ದೇವಲೋಕದಿಂದ ಹೂವಿನ ಮಳೆ ಸುರಿಯಿತು. ದೇವತೆಗಳು ಪ್ರಸನ್ನರಾಗಿ ರಾಘವನ ಬಳಿಗೆ ಬಂದು ''ಸೌಮ್ಯ, ನೀನು ದೇವಕಾರ್ಯವನ್ನೇ ಮಾಡಿರುವೆ. ಈ ಶಂಬೂಕನು ಸಶರೀರನಾಗಿ ಸ್ವರ್ಗವನ್ನೇರಲು ಅನರ್ಹನು. ಶರೀರ ಸಹಿತವಾಗಿ ದೇವಲೋಕ ಪ್ರಾಪ್ತಿಯು ಎಂದಿಗೂ ಘಟಿಸತಕ್ಕದಲ್ಲ. ಈತನ ಬಯಕೆ ಸಕಲಶಾಸ್ತ್ರಗಳಿಗೂ ವಿರುದ್ಧವಾದದ್ದು. ನೀನು ಮಾಡಿದ್ದು ಒಳ್ಳೆಯದಾಯಿತು. ನಾವು ಸಂತುಷ್ಟರಾಗಿದ್ದೇವೆ. ಬೇಕಾದ ವರವನ್ನು ಕೇಳಿಕೊ'' ಎಂದರು. ಆಗ ಶ್ರೀರಾಮನು ದೇವತೆಗಳಿಗೆ ಕೈಮುಗಿದು ''ಪೂಜ್ಯರೆ, ಕ್ರೂರವಾದ ಈ ನನ್ನ ಕಾರ್ಯವು ಧರ್ಮಯುಕ್ತವೆಂದು ನೀವು ಹೇಳಿದ್ದೀರಿ. ಇದರಿಂದ ನನ್ನ ಮನಸ್ಸಿಗೆ ಸಾಂತ್ವನ ಉಂಟಾಗಿದೆ. ಆ ವೃದ್ಧ ಬ್ರಾಹ್ಮಣನ ಮಗನು ಬದುಕಲಿ. ಇದೇ ನಾನು ಕೇಳಿಕೊಳ್ಳುವ ವರ'' ಎಂದನು. ದೇವತೆಗಳು ಸಂಪ್ರೀತರಾಗಿ ''ಕಾಕುತ್ಸ್ಥ, ನೀನು ಸಮಾಧಾನಗೊಂಡು ಶಾಂತನಾಗು. ಒಬ್ಬ ತಪಸ್ವಿಯನ್ನು ಕೊಂದೆನೆಂದು ಅಳುಕಬೇಡ. ಧರ್ಮ ಸಮ್ಮತವಾದ ಕಾರ್ಯ ವನ್ನೇ ನೀನು ಮಾಡಿದ್ದೀಯೆ. ಆ ಬಾಲಕನು ಈಗಲೇ ಜೀವಂತನಾಗುವನು'' ಎಂದು ಹೇಳಿ ಅದೃಶ್ಯರಾದರು.

ಅನಂತರ ಶ್ರೀರಾಮನು ಪುಷ್ಪಕವಿಮಾನದಿಂದ ಮುಂದೆ ಹೋಗಿ ದಾರಿಯಲ್ಲಿ ಅಗಸ್ತ್ಯಮುನಿಗಳನ್ನು ಸಂದರ್ಶಿಸಿದನು. ಅಗಸ್ತ್ಯರು ಶ್ರೀರಾಮನನ್ನು ಸ್ವಾಗತಿಸಿ ಇಂತೆಂದರು: ''ರಾಘವ, ಆ ಬ್ರಾಹ್ಮಣನ ಪುತ್ರನನ್ನು ಧರ್ಮನಿಷ್ಠೆಯಿಂದಲೇ ಬದುಕಿಸಿದ್ದೀಯೆ. ಆ ಶೂದ್ರನನ್ನು ಸಂಹಾರ ಮಾಡಿದ್ದು ಯುಕ್ತವೇ ಹೌದು. ರಾಘವ, ನಿನಗೆಲ್ಲವೂ ತಿಳಿದೇ ಇದೆ. ಸಕಲ ಭೂತಗಳಿಗೂ ಸ್ವಾಮಿಯಾಗಿದ್ದೀಯೆ. ಸನಾತನನಾದ ಆದಿಪುರುಷ ನೀನು. ಈ ದಿವ್ಯಾಭರಣವನ್ನು ಸ್ವೀಕರಿಸು. ಇದು ಎಷ್ಟು ದೀಪ್ತವಾಗಿದೆ ಯೆಂಬುದನ್ನು ನೋಡು. ಇದನ್ನು ನಿನಗೆ ಕೊಡುತ್ತೇನೆ. ಸ್ವೀಕರಿಸು'' ಎಂದರು. ಆಗ ಶ್ರೀರಾಮನು ಕೃತಜ್ಞತೆಯಿಂದ ಆ ದಿವ್ಯಾಭರಣವನ್ನು ಸ್ವೀಕರಿಸಿ ಅಗಸ್ತ್ಯಮುನಿಗಳ

ಅನುಜ್ಞೆ ಪಡೆದು ಪುಷ್ಪಕವನ್ನೇರಿ ರಾಜಧಾನಿಗೆ ಹಿಂದಿರುಗಿದನು. ಮಧ್ಯಾಹ್ನದ ಸಮಯದಲ್ಲಿ ಆತನು ಅಯೋಧ್ಯೆಗೆ ಬಂದು ಪುಷ್ಪಕವಿಮಾನವನ್ನು ಹಿಂದಕ್ಕೆ ಕಳಿಸಿ ಭರತಲಕ್ಷ್ಮಣರಿಗೆ ಹೇಳಿ ಕಳಿಸಿದನು. ಅವರು ಬಂದು ರಾಘವನಿಗೆ ವಂದಿಸಿ, ಆ ಬ್ರಾಹ್ಮಣ ಪುತ್ರನು ಜೀವಂತನಾದನೆಂದೂ ವೃದ್ಧಬ್ರಾಹ್ಮಣನು ಸಂತುಷ್ಟನಾಗಿ ಶುಭವಚನಗಳನ್ನು ಹೇಳಿ ತನ್ನ ಮಗನೊಡನೆ ಮನೆಗೆ ಹೋದನೆಂದೂ ತಿಳಿಸಿದರು.

೧೯

ಅಶ್ವಮೇಧಯಾಗಕ್ಕೆ ಸಿದ್ಧತೆ

ಹೀಗಿರುವಾಗ ಒಂದು ದಿನ ರಘುನಾಥನು ಭರತಲಕ್ಷ್ಮಣರನ್ನು ಕುರಿತು ಇಂತೆಂದನು : ''ತಮ್ಮಂದಿರೆ, ಆ ದ್ವಿಜಕಾರ್ಯವನ್ನು ನೆರವೇರಿಸಿ ಬಾಲಕನನ್ನು ಬದುಕಿಸಿದ್ದಾಯಿತು. ಈ ಧರ್ಮಸೇತುವು ಅಕ್ಷಯವೂ ಅವ್ಯಯವೂ ಆದದ್ದು. ಈಗ ನಿಮ್ಮೆಲ್ಲರ ನೆರವಿನಿಂದ ರಾಜಸೂಯಯಾಗವನ್ನು ನೆರವೇರಿಸಬೇಕೆಂದಿದ್ದೇನೆ. ಇದನ್ನು ನೀವು ಆಲೋಚಿಸಿ ಯುಕ್ತವಾದ ಮಾರ್ಗವನ್ನು ತಿಳಿಸಿರಿ'' ಎಂದನು. ಆಗ ವಾಕ್ಯವಿಶಾರದನಾದ ಭರತನು ಹೀಗೆ ನುಡಿದನು : ''ಮಹಾರಾಜ, ಧರ್ಮವು ನಿನ್ನಲ್ಲಿ ನೆಲಸಿದೆ. ಕೀರ್ತಿಯು ಸ್ಥಿರವಾಗಿದೆ. ಪ್ರಜೆಗಳು ನಿನ್ನನ್ನು ತಂದೆಯಂತೆ ಭಾವಿಸಿ ಧರ್ಮನಿಷ್ಠರಾಗಿ ಸಂತೃಪ್ತಿಯಿಂದ ಬಾಳುತ್ತಿದ್ದಾರೆ. ನನಗೆ ಹೀಗೆ ತೋರುವುದು. ರಾಜಸೂಯಯಾಗವು ಬಹಳ ದೊಡ್ಡದು. ಭೂಮಂಡಲದ ರಾಜರನ್ನು ಗೆದ್ದು ಈ ಯಾಗವನ್ನು ಕೈಗೊಳ್ಳಬೇಕಾಗುವುದು. ಅವರೆಲ್ಲರನ್ನೂ ಜಯಿಸುವುದು ನಿನಗೆ ಅಸಾಧ್ಯವಾದದ್ದೇನೂ ಅಲ್ಲ. ಆದರೆ ಘೋರಯುದ್ಧವು ಸಂಭವಿಸಿ ಘರ್ಷಣೆಯುಂಟಾಗಿ ಬಹಳ ಜನರು ಪ್ರಾಣವನ್ನು ತೆರಬೇಕಾಗುವುದು. ಪುರುಷೋತ್ತಮ, ಗುಣನಿಧಿಯಾದ ನೀನು ರಾಜಸೂಯಕ್ಕಾಗಿ ಜಗತ್ತಿನಲ್ಲಿ ಇಂಥ ವಿಪ್ಲವವನ್ನುಂಟು ಮಾಡುವುದು ಸರಿಯೆಂದು ನನಗನಿಸುವುದಿಲ್ಲ. ಈ ಭೂಮಂಡಲವೆಲ್ಲವೂ ನಿನ್ನ ವಶದಲ್ಲಿಯೇ ಇದೆ. ಅಷ್ಟರಿಂದಲೇ ಸಂತೃಪ್ತನಾಗಿರುವುದು ಯುಕ್ತವೆಂದು ನನ್ನ ಅಭಿಪ್ರಾಯ'' ಎಂದನು. ಅದನ್ನು ಕೇಳಿ ಶ್ರೀರಾಮನಿಗೆ ತುಂಬ ಸಂತೋಷವಾಯಿತು. ಅವನು ಕೈಕೇಯೀ ಸುತನನ್ನು ಕುರಿತು ಇಂತೆಂದನು : ''ಭರತ, ಪ್ರಾಣಿದಯಾಪೂರ್ಣವಾದ ನಿನ್ನ ನುಡಿಯನ್ನು ಕೇಳಿ ನನಗೆ ಆನಂದವಾಯಿತು. ನಿನ್ನ ನುಡಿ ಸಾರವತ್ತಾದುದು. ನಿಜವಾಗಿ ನೀನು ಧರ್ಮಜ್ಞನೇ ಹೌದು. ಈ ಸಮಯದಲ್ಲಿ ಹೀಗೆ ಹೇಳಿದ್ದು ಒಳ್ಳೆಯದಾಯಿತು. ಲೋಕಕ್ಕೆ ಹಿಂಸೆಯಾಗುವ ಕೃತ್ಯವನ್ನು ವಿವೇಕಿಯು

ಮಾಡಬಾರದು. ಒಳ್ಳೆಯ ಮಾತನ್ನು ಕಿರಿಯರು ಹೇಳಿದರೂ ಅದನ್ನು ಗ್ರಹಿಸಬೇಕು. ರಾಜಸೂಯಯಾಗವನ್ನು ಮಾಡುವ ಉದ್ದೇಶವನ್ನು ತಳ್ಳಿಹಾಕಿದ್ದೇನೆ. ಭರತ, ಹಿತಕಾರಿಯಾದ ಶುಭವಾಕ್ಯವನ್ನೇ ನುಡಿದಿದ್ದೀಯೆ'' ಎಂದು ಹೇಳಿ ಅವನನ್ನು ಆಲಿಂಗಿಸಿಕೊಂಡನು.

ಆಗ ಸುಮಿತ್ರಾತನಯನಾದ ಲಕ್ಷ್ಮಣನು ಇದೆಲ್ಲವನ್ನೂ ಪರ್ಯಾಲೋಚಿಸಿ ಹೀಗೆ ನುಡಿದನು : ''ರಘುನಂದನ, ಅಶ್ವಮೇಧವೆಂಬ ಮಹಾಯಜ್ಞವು ಪರಮಪಾವನವಾದದ್ದು. ಹಿಂದೆ ಬ್ರಹ್ಮಹತ್ಯಾದೋಷಕ್ಕೆ ಒಳಗಾದ ಇಂದ್ರನು ಅಶ್ವಮೇಧವನ್ನಾಚರಿಸಿ ಪರಿಶುದ್ಧನಾದನೆಂದು ಕೇಳಿದ್ದೇವೆ. ವೃತ್ರನೆಂಬ ದೈತ್ಯನು ಬ್ರಾಹ್ಮಣಪುತ್ರನಾಗಿದ್ದರೂ ತನ್ನ ದುಷ್ಕೃತ್ಯಗಳಿಂದ ಅಸುರನಾಗಿದ್ದನು. ದೇವೇಂದ್ರನು ವಜ್ರಾಯುಧದಿಂದ ವೃತ್ರನನ್ನು ಕೊಂದಾಗ ಆತನಿಗೆ ಬ್ರಹ್ಮಹತ್ಯಾದೋಷವು ತಗುಲಿತು. ಆಗ ಇಂದ್ರನು ಅಶ್ವಮೇಧಯಾಗವನ್ನು ಮಾಡಿ ಆ ದೋಷದಿಂದ ವಿಮುಕ್ತನಾದನು. ಆದ್ದರಿಂದ ಮಹಾರಾಜ, ನೀನು ಅಶ್ವಮೇಧವನ್ನು ಮಾಡುವುದು ಉತ್ತಮ'' ಎಂದನು. ಶ್ರೀರಾಮನಿಗೆ ಅದು ರುಚಿಸಿತು. ಅವನು ''ಲಕ್ಷ್ಮಣ, ಈ ಯಾಗವನ್ನು ನಡೆಸುವುದರಲ್ಲಿ ನಿಪುಣರಾದ ವಸಿಷ್ಠಾದಿದ್ವಿಜೋತ್ತಮರನ್ನು ಬರಮಾಡು'' ಎಂದನು. ಹಾಗೆಯೇ ಲಕ್ಷ್ಮಣನ ಪ್ರಾರ್ಥನೆಯಂತೆ ಅವರೆಲ್ಲರೂ ಬಂದು ಅಶ್ವಮೇಧಕ್ಕೆ ಬೇಕಾದ ವಿಷಯಗಳೆಲ್ಲವನ್ನೂ ರಾಘವನಿಗೆ ತಿಳಿಸಿದರು. ಆಮೇಲೆ ಕಾಕುತ್ಸ್ಥನು ಲಕ್ಷ್ಮಣನನ್ನು ನೋಡಿ ''ಲಕ್ಷ್ಮಣ, ಮಹಾತ್ಮನಾದ ಸುಗ್ರೀವನ ಬಳಿಗೆ ದೂತರನ್ನು ಕಳಿಸು. ಈ ಮಹೋತ್ಸವದಲ್ಲಿ ಭಾಗಿಯಾಗಲು ದೊಡ್ಡ ವಾನರ ಪರಿವಾರದೊಡನೆ ಆಗಮಿಸುವಂತೆ ಹೇಳಿಕಳಿಸು. ವಿಭೀಷಣನು ತನ್ನ ಅನುಯಾಯಿಗಳಾದ ರಾಕ್ಷಸರೊಡನೆ ಬರುವಂತೆ ಆಹ್ವಾನಿಸು. ಭೂಮಂಡಲದ ಎಲ್ಲ ರಾಜರಿಗೂ ಬರುವಂತೆ ಆಹ್ವಾನವನ್ನು ನೀಡು. ಋಷಿಗಳೂ, ವಿದ್ವಾಂಸರಾದ ದ್ವಿಜರೂ, ಸಪತ್ನೀಕರಾಗಿ ಆಗಮಿಸಲಿ. ಮನೋರಂಜನೆಗಾಗಿ ನಟ ನರ್ತಕಾದಿಗಳನ್ನೂ ಕರೆಸಬೇಕು. ಗೋಮತೀತೀರದಲ್ಲಿ ಇರುವ ನೈಮಿಷಾರಣ್ಯದಲ್ಲಿ ವಿಶಾಲವಾದ ಯಜ್ಞಶಾಲೆಯು ನಿರ್ಮಿತವಾಗಲಿ. ಲಕ್ಷ್ಮಣ, ಇದಕ್ಕೆ ಸಮುಚಿತವಾದ ಆಜ್ಞೆಯನ್ನು ಹೊರಡಿಸು. ಭರತ, ಈ ಕಾರ್ಯದಲ್ಲಿ ನಿನ್ನ ನೆರವು ತುಂಬ ಆವಶ್ಯಕವಾದದ್ದು. ಆ ಮಹಾಯಾಗಕ್ಕೆ ಅಸಂಖ್ಯಾತರಾದ ಅತಿಥಿಗಳು ಆಗಮಿಸುವರು. ಅವರಿಗೆ ವಸತಿಭೋಜನಗಳ ಏರ್ಪಾಡಾಗಬೇಕು. ಆ ಕಾರ್ಯವನ್ನು ನೀನು ವಹಿಸಿಕೊ. ನೂರಾರು ಕೋಟಿ ಸುವರ್ಣನಾಣ್ಯಗಳನ್ನು ಒಯ್ಯಬೇಕಾಗುತ್ತದೆ. ಸ್ತ್ರೀಯರಿಗೂ, ವೃದ್ಧರಿಗೂ, ಬಾಲಕರಿಗೂ, ಯಾವ ತೊಂದರೆಯೂ ಆಗದಂತೆ ಸೌಕರ್ಯವನ್ನು ಕಲ್ಪಿಸಬೇಕು. ಬಡಗಿ ಮೊದಲಾದ

ಶಿಲ್ಪಿಗಳು ಬಹುಸಂಖ್ಯೆಯಲ್ಲಿ ಬೇಕಾಗುವರು. ರಕ್ಷಣೆಗಾಗಿ ಸಾಕಷ್ಟು ಸಂಖ್ಯೆಯಲ್ಲಿ ಸೈನಿಕರೂ ಹೋಗಬೇಕಾಗುತ್ತದೆ. ವೈದಿಕರು, ಅಡಿಗೆಯವರು, ಅಲ್ಲಿಗೆ ಬರಬೇಕು. ಅಲ್ಲಲ್ಲಿ ಅಂಗಡಿಗಳನ್ನು ತೆರೆಯಬೇಕು. ನಾನು ಹೇಳಿರುವುದು ಸಾಮಾನ್ಯವಾದ ದಿಕ್ಸೂಚನೆ. ಈ ಯಾಗವು ಒಂದು ಮಹತ್ತರವಾದ ಕಾರ್ಯ. ನಮ್ಮ ಎಲ್ಲ ಮಂತ್ರಿಗಳೊಡನೆ ಸಮಾಲೋಚಿಸಿ ಮುಂದಿನ ಏರ್ಪಾಡುಗಳನ್ನು ಮಾಡಿಸಿರಿ'' ಎಂದು ತಿಳಿಸಿದನು. ಅನಂತರ ಭರತನೂ, ಲಕ್ಷ್ಮಣನೂ ಸಚಿವರೊಂದಿಗೆ ಸಮಾಲೋಚಿಸಿ ಮುಂದಿನ ಏರ್ಪಾಡಿನಲ್ಲಿ ತೊಡಗಿದರು. ಸ್ವಲ್ಪ ದಿನಗಳಲ್ಲಿಯೇ ಗೋಮತೀ ತೀರದಲ್ಲಿ ಬಹುದೊಡ್ಡದಾದ ಯಜ್ಞಶಾಲೆಯ ನಿರ್ಮಾಣವಾಯಿತು. ಎಲ್ಲೆಲ್ಲಿಯೂ ಸಂಭ್ರಮವೂ ಹರ್ಷವೂ ಉತ್ಸಾಹವೂ, ಉಕ್ಕಿದವು. ಶ್ರೀರಾಮನ ಸೂಚನೆಯಂತೆ ಎಲ್ಲ ಕಾರ್ಯಗಳೂ ವ್ಯವಸ್ಥಿತವಾಗಿ ನಡೆದವು. ಸುಗ್ರೀವನು ವಾನರರೊಡನೆಯೂ ವಿಭೀಷಣನು ರಾಕ್ಷಸರೊಡನೆಯೂ ಬಂದರು. ನಾನಾದೇಶಗಳಿಂದ ರಾಜರು ಆಗಮಿಸಿದರು. ಋಷಿಗಳು, ವೈದಿಕರು ಬಂದು ಸೇರಿದರು. ಅದೊಂದು ಮಹಾ ನಗರದಂತೆ ವಿರಾಜಿಸಿತು. ಆಗಮಿಸಿದ ಯಾರಿಗೂ ಯಾವ ವಿಧವಾದ ಕ್ಲೇಶವೂ ಆಗದಂತೆ ಭರತ ಲಕ್ಷ್ಮಣರು ಮೇಲ್ವಿಚಾರಣೆಯಲ್ಲಿ ತೊಡಗಿದ್ದರು.

೨೦

ಯಾಗಕ್ಕೆ ವಾಲ್ಮೀಕಿ ಮುನಿಗಳ ಆಗಮನ. ಕುಶಲವರು ಶ್ರೀರಾಮನೆದುರಿಗೆ ರಾಮಾಯಣವನ್ನು ಹಾಡುವುದು

ಹೀಗೆ ಯಾಗೋಪಕರಣಗಳೆಲ್ಲವೂ ನ್ಯೂನತೆಯಿಲ್ಲದಂತೆ ಸಜ್ಜಾದಮೇಲೆ ಶ್ರೀರಾಮನು ಯಜ್ಞವನ್ನು ಕೈಗೊಳ್ಳುವುದಕ್ಕಾಗಿ ನೈಮಿಷಾರಣ್ಯಕ್ಕೆ ಆಗಮಿಸಿದನು. ಅಲ್ಲಿ ನಿರ್ಮಿತವಾಗಿದ್ದ ಅದ್ಭುತವಾದ ಯಜ್ಞವಾಟವನ್ನು ಕಂಡು ಆನಂದ ತುಂದಿಲನಾಗಿ ''ಆಹಾ, ಸರ್ವ ಸಮೃದ್ಧವಾಗಿದೆ. ಕಾರ್ಯದಕ್ಷರಾದ ಭರತ ಲಕ್ಷ್ಮಣರು ಕುಶಾಗ್ರಮತಿಗಳು. ರಾಜಕಾರ್ಯನಿಷ್ಠರಾದ ಸಚಿವರು ಇರುವಾಗ ಯಾವ ಕೊರತೆಯಾದೀತು?'' ಎಂದು ಹೇಳಿ ತನ್ನ ತಮ್ಮಂದಿರನ್ನೂ ಸಚಿವರನ್ನೂ ಶ್ಲಾಘಿಸಿದನು.

ಅಷ್ಟರಲ್ಲಿ ಸುಗ್ರೀವನು ಕೆಲವು ವಾನರೋತ್ತಮರೊಡನೆಯೂ ವಿಭೀಷಣನು ತನ್ನ ರಾಕ್ಷಸ ಪರಿವಾರದೊಡನೆಯೂ ಆಗಮಿಸಿದರು. ವಿವಿಧ ದೇಶಗಳಿಂದ ಋಷಿಗಳೂ ಬೇರೆ ಬೇರೆ ಅತಿಥಿಗಳೂ ಆಗಮಿಸತೊಡಗಿದರು. ಅವರೆಲ್ಲರಿಗೂ ವಸತಿ ಅನ್ನ ಪಾನಾದಿಗಳ ವ್ಯವಸ್ಥೆಯು ಉತ್ತಮರೀತಿಯಲ್ಲಿ ಸಾಗಿದವು. ಶ್ರೀರಾಮನು ಋತ್ವಿಜರ

ಸೂಚನೆಯಂತೆ ಯಾಗ ಸಂಕಲ್ಪವನ್ನು ಮಾಡಿ ಲಕ್ಷಣ ಸಂಪನ್ನವಾದ ಕೃಷ್ಣವರ್ಣದ ಉತ್ತಮಾಶ್ವವನ್ನು ಯಾಗಾರ್ಥವಾಗಿ ವಿಸರ್ಜಿಸಿದನು. ಅದರ ರಕ್ಷಣೆಗಾಗಿ ಲಕ್ಷ್ಮಣನು ಸೇನೆಯೊಂದನ್ನು ಕರೆದುಕೊಂಡು ಹೊರಟನು. ಇತ್ತಲಾಗಿ ಯಜ್ಞಮಂಟಪದಲ್ಲಿದ್ದ ರಾಘವನಿಗೆ ಸಕಲಭೂಪಾಲರೂ ಕಾಣಿಕೆಗಳನ್ನು ತಂದು ಒಪ್ಪಿಸಿದರು. ಭರತ ಶತ್ರುಘ್ನರು ಆಗಮಿಸಿದ ಅತಿಥಿಗಳಿಗೆ ಯಾವ ಕೊರತೆಯೂ ಆಗದಂತೆ ಅನ್ನ ಪಾನ ವಸ್ತ್ರಾದಿಗಳ ಏರ್ಪಾಡನ್ನು ನೋಡಿಕೊಳ್ಳುತ್ತಿದ್ದರು. ಸುಗ್ರೀವಾದಿ ವಾನರರು ವಿಭೀಷಣನೇ ಮೊದಲಾದ ರಾಕ್ಷಸಪರಿವಾರದವರೂ ಅತಿಥಿಗಳ ಪರಿಚರ್ಯೆಯಲ್ಲಿ ತೊಡಗಿದರು. ರಾಜಸಿಂಹನಾದ ಶ್ರೀರಾಮನು ಕೈಗೊಂಡ ಆ ಮಹಾಯಾಗವು ವಿಧಿವತ್ತಾಗಿ ನಡೆಯತೊಡಗಿತು. ಅಷ್ಟು ವೈಭವದ ಯಜ್ಞಕಾರ್ಯವು ಹಿಂದೆ ನಡೆದಿರಲಿಲ್ಲ, ಎಲ್ಲೆಲ್ಲಿಯೂ ಹರ್ಷ ಸಂಭ್ರಮಗಳು ಯಜ್ಞಶಾಲೆಯಲ್ಲಿ ತೋರುತ್ತಿದ್ದವು. ಊಟ ಉಪಚಾರಗಳಿಗೆ ಯಾವ ಕೊರತೆಯೂ ಇರದಂತೆ ಒಂದು ವರ್ಷಕಾಲ ಈ ಯಾಗ ಸಮಾರಂಭವು ನಡೆಯುತ್ತಲೇ ಇತ್ತು.

ಯಾಗವನ್ನು ನಡೆಸುವ ಯಜಮಾನನು ಪತ್ನೀಸಮೇತನಾಗಿರಬೇಕೆಂದು ಶಾಸ್ತ್ರವಿಧಿಯುಂಟು. ಸೀತಾದೇವಿಯನ್ನು ವಿಸರ್ಜಿಸಿದ ಮೇಲೆ ಶ್ರೀರಾಮನು ಇನ್ನೊಂದು ಮದುವೆಯನ್ನು ಮಾಡಿಕೊಳ್ಳಲಿಲ್ಲ. ಹೀಗಿರುವಾಗ ಪತ್ನೀ ಸಮೇತನಾಗ ಬೇಕೆಂಬ ವಿಧಿಯನ್ನು ಪೂರೈಸುವುದು ಹೇಗೆ? ವಸಿಷ್ಠಾದಿ ಮುನಿಗಳು ಇದೆಲ್ಲವನ್ನೂ ಪರ್ಯಾಲೋಚಿಸಿ ಸೀತಾದೇವಿಯ ಆಕೃತಿಯನ್ನೇ ಹೋಲುವ ಒಂದು ಸುವರ್ಣ ಪ್ರತಿಮೆಯನ್ನು ಮಾಡಿಸಿದ್ದರು. ಅದು ಜಾನಕಿಯ ಪ್ರತಿನಿಧಿಯಲ್ಲ, ಅವಳೇ ಆ ಪ್ರತಿಮೆಯಲ್ಲಿ ಸನ್ನಿಹಿತಳಾಗಿದ್ದಾಳೆಂಬ ಭಾವನೆಯಿಂದ ಬಳಿಯಲ್ಲಿರಿಸಿಕೊಂಡು ಶ್ರೀರಾಮನ ಯಜ್ಞಕಾರ್ಯವು ನಡೆಯುತ್ತಿತ್ತು. ಕೆಲವು ದಿನಗಳಲ್ಲಿ ಲಕ್ಷ್ಮಣನು ಅಶ್ವಸಮೇತನಾಗಿ ಎಲ್ಲೆಲ್ಲಿಯೂ ಜಯವನ್ನು ಗಳಿಸಿ ಧನ ಕನಕಗಳನ್ನು ವಾಹನಗಳ ಮೇಲೆ ಹೇರಿಸಿಕೊಂಡು ಯಶಸ್ವಿಯಾಗಿ ಹಿಂದಿರುಗಿ ಬಂದನು.

ದೀರ್ಘಕಾಲದ ಯಾಗವು ನಡೆಯುವಾಗ ವಿರಾಮ ಸಮಯದಲ್ಲಿ ಅತಿಥಿಗಳ ಮನೋರಂಜನೆಗಾಗಿ ಕೆಲವು ಕಾರ್ಯಕ್ರಮಗಳು ನಡೆಯುತ್ತಿದ್ದವು. ಸಂಗೀತ, ನೃತ್ಯ, ಕಾವ್ಯವಾಚನ–ಇತ್ಯಾದಿ ಮನೋರಂಜನಾ ಕಾರ್ಯಗಳಿಗೆ ಸೊಗಸಾದ ಏರ್ಪಾಡು ನಡೆದಿತ್ತು. ಅದ್ಭುತವಾದ ಆ ಅಶ್ವಮೇಧಯಾಗವು ನಡೆಯುತ್ತಿರುವಾಗ ವಾಲ್ಮೀಕಿ ಮಹರ್ಷಿಗಳು ಶಿಷ್ಯಸಮೇತರಾಗಿ ಆಗಮಿಸಿದರು. ಋಷಿಗಳು ವಾಸಮಾಡುತ್ತಿದ್ದ ಸ್ಥಳದ ಸಮೀಪದಲ್ಲಿಯೇ ಪ್ರತ್ಯೇಕವಾದ ಒಂದು ಪರ್ಣಶಾಲೆಯಲ್ಲಿ ಅವರು ತಂಗಿದರು. ವಾಲ್ಮೀಕಿ ಮುನಿಗಳು ಪರಮಾತ್ಮನ ಧ್ಯಾನದಲ್ಲಿ ವಿಶೇಷವಾಗಿ

ತಲ್ಲೀನರಾಗಿದ್ದರು. ಅವರು ತಮ್ಮ ಶಿಷ್ಯರಾದ ಕುಶಲವರನ್ನು ಕರೆದು, ''ಮಕ್ಕಳೆ, ನೀವೀಗ ರಾಮಾಯಣ ಕಾವ್ಯವನ್ನು ಸಮಗ್ರವಾಗಿ ಹಾಡಬೇಕು. ಋಷಿಗಳು ನೆರೆದ ಸ್ಥಳದಲ್ಲಿ, ರಸ್ತೆಗಳಲ್ಲಿ, ಜನರು ಬಯಸಿದ ಸ್ಥಳದಲ್ಲಿ ನಿಶ್ಶಂಕೆಯಿಂದ ಹೋಗಿ ಈ ಕಾವ್ಯವನ್ನು ಹಾಡಿರಿ. ಯಜ್ಞಕಾರ್ಯವು ನಡೆಯುತ್ತಿರುವ ಯಾಗ ಶಾಲೆಯಲ್ಲಿಯೂ ಸಮಯದೊರಕಿದಾಗ ಹಾಡುತ್ತಿರಿ. ಮಕ್ಕಳೆ, ರಾಜನಾದ ರಾಮನು ನಿಮ್ಮ ಗಾನವನ್ನು ಕೇಳಬೇಕೆಂದು ಹೇಳಿ ಕಳಿಸಿದರೆ ಅಲ್ಲಿಗೂ ಹೋಗಿ ನೀವು ಹಾಡಬಹುದು. ನಾನು ಕಲಿಸಿಕೊಟ್ಟಂತೆ ತಾಳಲಯ ಬದ್ಧವಾಗಿ ಮಧುರ ಸ್ವರದಿಂದ ಹಾಡಿರಿ. ಪ್ರತಿಫಲವಾಗಿ ಯಾರು ಧನವನ್ನು ಕೊಟ್ಟರೂ ಸ್ವೀಕರಿಸಬಾರದು. ಆಶ್ರಮವಾಸಿಗಳಾದ ನಮಗೆ ಹಣದಿಂದ ಆಗಬೇಕಾದ್ದೇನಿದೆ?'' ಎಂದರು. ಅನಂತರ ''ಕುಶ-ಲವರೆ, ಮಹಾರಾಜನಾದ ಶ್ರೀರಾಮನು ಒಂದು ವೇಳೆ ನೀವು ಯಾರ ಮಕ್ಕಳು-ಎಂದು ಕೇಳಿದರೆ, ನಾವು ವಾಲ್ಮೀಕಿ ಶಿಷ್ಯರು ಎಂದಿಷ್ಟೇ ಹೇಳಿರಿ'' ಎಂದು ತಿಳಿಸಿದರು. ಆ ಬಾಲಕರು ಗುರುಗಳ ಆದೇಶವನ್ನು ಶಿರಸಾವಹಿಸಿ ಮರುದಿನ ಪ್ರಾತಃಕಾಲದಿಂದ ಶ್ರೀಮದ್ರಾಮಾಯಣವನ್ನು ಅಲ್ಲಲ್ಲಿ ಹಾಡಲಾರಂಭಿಸಿದರು. ಅವರು ವೀಣೆಯನ್ನು ನುಡಿಸುತ್ತ ಮಧುರ ಕಂಠದಿಂದ ಹಾಡುತ್ತಿರುವುದನ್ನು ಕೇಳಿ ಸಕಲರೂ ವಿಸ್ಮಿತರಾಗಿ ಕೇಳತೊಡಗಿದರು. ಆ ಬಾಲಕರು ಹಾಡುತ್ತಿದ್ದ ಸ್ಥಳದಲ್ಲಿ ಜನರ ಜಾತ್ರೆಯೇ ಸೇರತೊಡಗಿತು. ಸುಂದರಾಕೃತಿಯ ಈ ಬಾಲಕರು ಯಾರಿರಬಹುದು? ಎಷ್ಟು ಸೊಗಸಾಗಿ ಹಾಡುತ್ತಾರೆ! ಅದರಲ್ಲಿಯೂ ಶ್ರೀರಾಮಚರಿತೆಯನ್ನು!'' ಎಂದು ಸಕಲ ಸ್ತ್ರೀಪುರುಷರೂ ವಿಸ್ಮಯ ಕುತೂಹಲಗಳಿಂದ ಮಾತಾಡಿಕೊಳ್ಳತೊಡಗಿದರು. ಬಾಲಕರು ಹಾಡುತ್ತಿದ್ದ ಈ ಗೀತೆಯು ಕ್ರಮೇಣ ಶ್ರೀರಾಮನ ಕಿವಿಗೆ ಬಿದ್ದಿತು. ಅವನು ಅದರಲ್ಲಿ ಕುತೂಹಲವನ್ನು ವ್ಯಕ್ತಪಡಿಸಿ, ಯಜ್ಞಕಲಾಪಗಳ ವಿರಾಮವೇಳೆಯಲ್ಲಿ ಆ ಬಾಲಕರ ಗಾನವನ್ನು ಕೇಳಬೇಕೆಂದು ನಿಶ್ಚಯಿಸಿ, ಒಂದು ಸಭೆಯನ್ನೇರ್ಪಡಿಸಿದನು. ಯಜ್ಞಕ್ಕೆ ಬಂದಿದ್ದ ರಾಜರನ್ನೂ ಶಾಸ್ತ್ರಜ್ಞರಾದ ಪಂಡಿತರನ್ನೂ ಪೌರರನ್ನೂ ಸಭೆಗೆ ಬರಮಾಡಿದನು. ಅಂತೆಯೇ ಸ್ವರ ಲಕ್ಷಣಗಳನ್ನು ಬಲ್ಲ ಸಂಗೀತ ಶಾಸ್ತ್ರಜ್ಞರು ಕಾವ್ಯಶಾಸ್ತ್ರಾದಿಗಳನ್ನು ಬಲ್ಲ ಸಹೃದಯರೂ ವಿಭಿನ್ನ ಕುಶಲ ಕಲೆಗಳಲ್ಲಿ ನಿಪುಣರೂ ಸಭೆಗೆ ಆಗಮಿಸಿದರು. ಹೀಗೆ ಸಭೆಯನ್ನು ಏರ್ಪಡಿಸಿ ಕುಶಲವರನ್ನು ಕರೆಸಿ ಸಭಾಮಧ್ಯದಲ್ಲಿ ಹಾಡುವಂತೆ ಏರ್ಪಡಿಸಿದನು. ಅತ್ಯಂತ ಸುಂದರವಾದ ಮೈಕಟ್ಟುಳ್ಳವರೂ, ತೇಜಸ್ವಿಗಳೂ ಆದ ಆ ಬಾಲಕರು ವೀಣೆಯನ್ನು ಹಿಡಿದು ಅಲ್ಲಿ ಬಂದು ಕುಳಿತರು. ಸಭೆಯಲ್ಲಿದ್ದ ಋಷಿಗಳು, ವಿದ್ವಾಂಸರು, ರಾಜರು ಎಲ್ಲರೂ ವಿಸ್ಮಯದಿಂದ ಒಮ್ಮೆ ಆ ಬಾಲಕರನ್ನೂ ಒಮ್ಮೆ ಶ್ರೀರಾಮನನ್ನೂ ನೋಡತೊಡಗಿದರು. ''ಎಲಾ, ಇದೇನು! ಈ ಬಾಲಕರು

ಆಕೃತಿಯಲ್ಲಿ ಶ್ರೀರಾಮನಂತೆಯೇ ಇದ್ದಾರೆ, ಬಿಂಬ ಪ್ರತಿಬಿಂಬಗಳಂತೆ ಕಾಣಿಸುತ್ತಿದ್ದಾರೆ. ಇವರು ಜಟೆಯನ್ನೂ ನಾರುಬಟ್ಟೆಯನ್ನೂ ಧರಿಸದೇ ಇದ್ದಿದ್ದರೆ ಶ್ರೀರಾಮನ ಮಕ್ಕಳೆಂದೇ ನಾವು ತಿಳಿದುಬಿಡುತ್ತಿದ್ದೆವು!'' ಎಂದುಕೊಳ್ಳತೊಡಗಿದರು. ಕುಶಲವರು ಶ್ರೀರಾಮನ ಒಪ್ಪಿಗೆಯನ್ನು ಪಡೆದು ವೀಣೆಯನ್ನು ನುಡಿಸುತ್ತ, ವಾಲ್ಮೀಕಿಗಳು ರಚಿಸಿದ ರಾಮಚರಿತೆಯನ್ನು ಮೊದಲಿನಿಂದ ಹಾಡಲಾರಂಭಿಸಿದರು. ಮನುಷ್ಯಲೋಕದಲ್ಲಿ ಎಂದೂ ಕೇಳದ ಮಧುರವಾದ ಗಾಂಧರ್ವ ಗಾನವು ತೊಡಗಿತು. ಶ್ರೋತೃಗಳ ಆನಂದಕ್ಕೆ ಪಾರವೇ ಇರಲಿಲ್ಲ. ರಾಮಾಯಣದಲ್ಲಿ ನಾರದ ಮುನಿಗಳಿಂದ ಉಪದಿಷ್ಟ ವಾದ ಪ್ರಥಮ ಸರ್ಗದಿಂದ ಹಿಡಿದು ಇಪ್ಪತ್ತು ಸರ್ಗಗಳನ್ನು ಕುಶಲವರು ಹಾಡಿದರು. ಶ್ರೀರಾಮನು ಏಕಾಗ್ರಚಿತ್ತದಿಂದ ಅವರ ಹಾಡನ್ನು ಕೇಳುತ್ತ ಮೈಮರೆತಿದ್ದನು. ಆ ದಿನದ ಕಾರ್ಯಕ್ರಮವು ಮುಗಿಯಿತು. ಶ್ರೀರಾಮನು ಭರತನನ್ನು ಕರೆದು ''ಭರತ, ಈ ಬಾಲಕರಿಗೆ ಹದಿನೆಂಟು ಸಾವಿರ ಚಿನ್ನದ ನಾಣ್ಯಗಳನ್ನು ಈಗಲೇ ಕೊಡು. ಇವರಿಗೆ ಇನ್ನೇನು ಸೌಕರ್ಯವು ಬೇಕೋ ಅವೆಲ್ಲವನ್ನೂ ಒದಗಿಸು'' ಎಂದು ಆಜ್ಞಾಪಿಸಿದನು. ಅಂತೆಯೇ ಭರತನು ಸುವರ್ಣ ನಾಣ್ಯಗಳನ್ನು ಹೊರಿಸಿ ತಂದು ಆ ಬಾಲಕರಿಗೆ ಕೊಡು ವುದಕ್ಕಾಗಿ ಹೋದನು. ಕುಶಲವರು ವಿಸ್ಮಿತರಾಗಿ ''ನಾವು ವನವಾಸಿಗಳು. ಕಾಡಿ ನಲ್ಲಿರುವ ಫಲಮೂಲಗಳನ್ನು ತಿನ್ನತಕ್ಕವರು. ನಮಗೆ ಈ ಸುವರ್ಣ ನಾಣ್ಯಗಳಿಂದ ಆಗಬೇಕಾದದ್ದೇನು?'' ಎಂದು ಬಿಟ್ಟರು. ಎಷ್ಟು ಹೇಳಿದರೂ ಹಣವನ್ನು ಸ್ವೀಕರಿಸ ಲಿಲ್ಲ. ಅದನ್ನು ಕೇಳಿ ಶ್ರೀರಾಮನೂ ಸಕಲ ಶ್ರೋತೃಗಳೂ ಆಶ್ಚರ್ಯ ಭರಿತರಾದರು. ರಾಘವನು ವಾತ್ಸಲ್ಯದಿಂದ ಆ ಬಾಲಕರ ಬಳಿಗೆ ಹೋಗಿ ''ಎಲೈ ಮುನಿಬಾಲಕರೆ, ನೀವು ಹಾಡಿದ ಕಾವ್ಯವನ್ನು ರಚಿಸಿದವರು ಯಾರು? ಇದು ಎಷ್ಟಿದೆ? ಕವಿಯು ಆರಿಸಿಕೊಂಡ ಕಥೆಯ ವಿಷಯವು ಎಲ್ಲಿಯವರೆಗಿದೆ? ಇದನ್ನು ನಿಮಗೆ ಕಲಿಸಿದ ನಿಮ್ಮ ಗುರುವಾದ ಮಹರ್ಷಿಯು ಎಲ್ಲಿದ್ದಾನೆ?'' ಎಂದು ಕೇಳಿದನು. ಆಗ ಕುಶಲವರು ''ಮಹಾರಾಜ, ಇದನ್ನು ರಚಿಸಿದವರು ಭಗವಾನ್ ವಾಲ್ಮೀಕಿ ಮಹರ್ಷಿಗಳು. ನಾವು ಅವರ ಶಿಷ್ಯರು. ಆ ಮುನಿಗಳು ಈ ಯಜ್ಞಕ್ಕೆ ಆಗಮಿಸಿದ್ದಾರೆ. ಪರ್ಣಶಾಲೆಯಲ್ಲಿ ತಂಗಿದ್ದಾರೆ. ಈ ಕಾವ್ಯದಲ್ಲಿ ನಿನ್ನ ಚರಿತ್ರೆಯೆಲ್ಲವೂ ಬಂದಿದೆ. ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳು ಉಂಟು. ಮಹಾರಾಜ, ನಿನಗೆ ಇದನ್ನು ಕೇಳಲು ಇಚ್ಛೆಯಿದ್ದರೆ ವಿರಾಮವೇಳೆಯಲ್ಲಿ ನಾವು ಹಾಡುತ್ತೇವೆ. ನೀನು ಸಂತೋಷದಿಂದ ಕೇಳ ಬಹುದು'' ಎಂದರು. ಶ್ರೀರಾಮನು ಒಳ್ಳೆಯದು. ಈ ಕಾವ್ಯವನ್ನು ಹಾಡಲು ಏರ್ಪಡಿಸುತ್ತೇನೆ. ಪರ್ಣಶಾಲೆಯಲ್ಲಿ ನಿಮಗೆ ಬೇಕಾದ ಎಲ್ಲ ಸಾಮಗ್ರಿಗಳನ್ನು ಒದಗಿಸಿ ಕೊಡುತ್ತೇನೆ. ಪ್ರತಿದಿನವೂ ಇಲ್ಲಿಗೆ ಬಂದು ಸಭಾಮಧ್ಯದಲ್ಲಿ ಹಾಡಿರಿ. ಮಕ್ಕಳೆ, ನನಗೆ ತುಂಬ

ಸಂತೋಷವಾಗಿದೆ. ನಿಮ್ಮ ಗುರುಗಳಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ತಿಳಿಸಿ'' ಎಂದು ನುಡಿದು ಆ ಬಾಲಕರನ್ನು ಕಳಿಸಿದನು. ಆ ಬಾಲಕರು ವಾಲ್ಮೀಕಿ ಮುನಿಗಳಿದ್ದ ಆಶ್ರಮಕ್ಕೆ ಹೋದರು. ಶ್ರೀರಾಮನು ಮನಸ್ಸಿನಲ್ಲಿ ಬಾಲಕರು ಹಾಡಿದ ವಿಷಯವನ್ನೇ ಚಿಂತಿಸುತ್ತ ತಳಮಳಗೊಂಡನು. 'ಇದೇನು ವಿಚಿತ್ರವಿರಬಹುದು?' ಎಂದುಕೊಳ್ಳುತ್ತ ಯಾಗಕಾರ್ಯದಲ್ಲಿ ತೊಡಗಿದನು.

೨೧

ಸೀತಾದೇವಿಯು ಶ್ರೀರಾಮನೆದುರಿಗೆ ಆಗಮಿಸುವುದು. ಅವಳ ಪ್ರತಿಜ್ಞೆ. ಭೂಗರ್ಭಪ್ರವೇಶ.

ಹೀಗೆ ಶ್ರೀಮದ್ರಾಮಾಯಣದ ಗಾನವನ್ನು ಪ್ರತಿದಿನ ಕೇಳುತ್ತಿದ್ದ ಶ್ರೀರಾಮನಿಗೆ ಆ ಬಾಲಕರು ಯಾರೆಂಬ ಸುಳಿವು ದೊರೆಯಿತು. ಕುಶಲವರು ಸೀತಾದೇವಿಯ ಪುತ್ರರೆಂಬುದು ನಿಶ್ಚಿತವಾಗಿ ತಿಳಿದು ಬಂದಿತು. ಆತನನ್ನು ನಾನು ಬಗೆಯ ಚಿಂತೆಗಳು ಕಾಡತೊಡಗಿದವು. ''ಈ ಬಾಲಕರು ನನ್ನ ಪುತ್ರರೆಂದು ನಿಶ್ಚಿತವಾದಮೇಲೆ ಇವರನ್ನು ಬಿಟ್ಟು, ನಾನು ಹೇಗಿರಲಿ? ಸೀತೆಯನ್ನು ದೂರೀಕರಿಸಿ ಇವರನ್ನು ಅರಮನೆಗೆ ಕರೆದೊಯ್ಯಲೆ? ತಾಯಿಯನ್ನು ಬಿಟ್ಟು ಇವರು ನನ್ನೊಡನೆ ಬಂದಾರೆ? ತಾಯಿಯೂ ಜೊತೆಗೆ ಬರಲಿ–ಎಂದರೆ, ನಾನು ಯಾವ ಉತ್ತರವನ್ನು ಕೊಡಲಿ? ಈ ಮಕ್ಕಳನ್ನು ಅನಾಥರಂತೆ ಋಷ್ಯಾಶ್ರಮದಲ್ಲಿಯೇ ಬಿಟ್ಟು ಬಿಡಲೆ?'' ಇವೇ ಮೊದಲಾದ ಬಗೆಹರಿಯದ ಚಿಂತೆಗಳಿಂದ ಶ್ರೀರಾಮನು ವ್ಯಾಕುಲನಾದನು. ಕಡೆಗೆ ಸೀತೆಯನ್ನು ಮತ್ತೆ ಸ್ವೀಕರಿಸುವುದೇ ಉತ್ತಮವೆಂದು ಅವನಿಗೆ ತೋರಿತು. ಆದರೆ ಜನಾಪವಾದಕ್ಕೆ ಉತ್ತರವೇನು? ಅದಕ್ಕಾಗಿ ಹೆದರಿಯಲ್ಲವೇ ಅವಳನ್ನು ಕಾಡುಪಾಲು ಮಾಡಿದ್ದು? ಆದ್ದರಿಂದ ''ಇಲ್ಲಿ ಸೇರಿರುವ ಮಹಾಸಭೆಯಲ್ಲಿ ಜಾನಕಿಯು ತನ್ನ ಆತ್ಮಶುದ್ಧಿಯನ್ನು ತೋರಿಸಿಕೊಡಲಿ. ಆಗ ಲೋಕಾಪವಾದವು ಹಿಂದಕ್ಕೆ ಸರಿಯುವುದು'' ಎಂದು ಆಲೋಚಿಸಿದನು. ಅನಂತರ ವಾಲ್ಮೀಕಿ ಮುನಿಗಳಿಗೆ ಈ ಪ್ರಕಾರವಾದ ಒಂದು ಸಂದೇಶವನ್ನು ರಾಜದೂತರ ಮೂಲಕ ಕಳಿಸಿಕೊಟ್ಟನು. ''ಮಹರ್ಷಿಗಳೆ, ನಿಮ್ಮ ದೂರದರ್ಶಿತ್ವವನ್ನೂ ಕಾರುಣ್ಯವನ್ನೂ ಪ್ರತ್ಯಕ್ಷವಾಗಿ ಕಂಡೆನು. ತ್ರಿಕಾಲಜ್ಞಾನಿಗಳಾದ ನಿಮಗೆ ತಿಳಿಯದ ವಿಚಾರವಾದರೂ ಏನಿದೆ? ಈಗ ನನ್ನ ಪತ್ನಿಯಾದ ಸೀತೆಯನ್ನು ಮತ್ತೆ ಸ್ವೀಕರಿಸುವುದೇ ನನಗಿರುವ ಮಾರ್ಗ. ಅವಳು ಶುದ್ಧ ಚಾರಿತ್ರಳೆಂಬ ವಿಷಯದಲ್ಲಿ ನನಗೆ ಯಾವ ಸಂದೇಹವೂ ಇಲ್ಲ, ಸಂದೇಹಲೇಶವೂ ಸಹ ನನಗೆ ಎಂದೂ ಹುಟ್ಟಿರಲಿಲ್ಲ. ಲೋಕಾಪವಾದಭಯದಿಂದ ಆ ಸಾಧ್ವಿಯನ್ನು ನಾನು

ತ್ಯಜಿಸಬೇಕಾಯಿತು. ತ್ರಿಕಾಲಜ್ಞಾನಿಗಳಾದ ನಿಮಗೆ ಗೊತ್ತಿಲ್ಲದಿರುವುದಾದರೂ ಯಾವುದು? ಈಗ ಅವಳನ್ನು ನಾನು ಸ್ವೀಕರಿಸಬೇಕಾದ ಪರಿಸ್ಥಿತಿಯುಂಟಾಯಿತು. ನನ್ನ ಕಷ್ಟವೇನೆಂಬುದು ನಿಮಗೆ ತಿಳಿದಿದೆ. ಯಾಗನಿಮಿತ್ತವಾಗಿ ಮಹಾಜನರ ಸಭೆ ನಡೆಯುತ್ತಲೇ ಇದೆ. ಈ ಸಭೆಯಲ್ಲಿ ಸೀತೆಯು ತಾನು ಶುದ್ಧ ಚಾರಿತ್ರಳೆಂದೂ ದೋಷರಹಿತಳೆಂದೂ ತೋರಿಸಿಕೊಡಲಿ. ಲೋಕಾಪವಾದಕ್ಕಾಗಿ ನಾನು ಹೆದರಬೇಕಾಯಿತು. ಈ ವಿಷಯದಲ್ಲಿ ನೀವು ಕೃಪೆಯಿಂದ ಅನುಗ್ರಹಿಸಬೇಕು. ಆಕೆಯನ್ನು ಸಭೆಗೆ ಬರಮಾಡಬೇಕು. ಸಮಸ್ತ ಸಭಾಸದರೆದುರಿಗೆ ತನ್ನ ಪರಿಶುದ್ಧತೆಯನ್ನು ತೋರಿಸಿಕೊಟ್ಟರೆ ನಾನು ಸಂತೋಷದಿಂದ ಆಕೆಯನ್ನು ಸ್ವೀಕರಿಸುವೆನು. ಮಹರ್ಷಿಗಳೆ, ಕರುಣಾತ್ಮರಾದ ನೀವು ಶೋಕಾರ್ತನಾದ ನನ್ನನ್ನು ಅನುಗ್ರಹದೃಷ್ಟಿಯಿಂದ ನೋಡಬೇಕು'' ಎಂದು ಹೇಳಿ ಕಳಿಸಿದನು. ವಾಲ್ಮೀಕಿಮುನಿಗಳು ಅದೆಲ್ಲವನ್ನೂ ಸಮಾಲೋಚಿಸಿ ''ರಾಘವ, ನಿನ್ನ ಇಷ್ಟದಂತೆ ಆಗಬಹುದು. ನಾಳೆ ಸಭೆಯನ್ನು ಸೇರಿಸು. ಸೀತಾದೇವಿಯನ್ನು ಕರೆತರುವೆನು. ಅವಳ ಶುದ್ಧ ಚಾರಿತ್ರದ ಮಹಿಮೆಯನ್ನು ಸರ್ವರೂ ಪ್ರತ್ಯಕ್ಷವಾಗಿ ನೋಡಿ ಬಿಡಲಿ'' ಎಂದು ಶಿಷ್ಯರ ಮೂಲಕ ಹೇಳಿಕಳಿಸಿದರು. ಅವರು ಸೀತಾದೇವಿಯನ್ನು ರಹಸ್ಯವಾಗಿ ತಮ್ಮೊಡನೆ ಕರೆದುಕೊಂಡು ಬಂದಿದ್ದರು.

ವಾಲ್ಮೀಕಿ ಮುನಿಗಳು ಹೇಳಿ ಕಳಿಸಿದ ನುಡಿಯನ್ನು ಕೇಳಿ ಕಾಕುತ್ಸ್ಥನಿಗೆ ಹರ್ಷವಾಯಿತು. ಆತನು ಆ ದಿನದ ಸಭೆಯಲ್ಲಿದ್ದ ಋಷಿಗಳನ್ನೂ ರಾಜರನ್ನೂ ಕುರಿತು ಇಂತೆಂದನು : ''ಪೂಜ್ಯರಾದ ಮುನಿಗಳೆ, ನೆರೆದಿರುವ ರಾಜರೆ, ಪ್ರಜೆಗಳೆ, ನಾಳೆ ಒಂದು ವಿಶೇಷ ಸಭೆಯು ಸೇರುವುದು. ನೀವೆಲ್ಲರೂ ಸಭೆಗೆ ಆಗಮಿಸಿರಿ. ಕುತೂಹಲವುಳ್ಳ ಯಾರಾದರೂ ಸಭೆಗೆ ಬರಬಹುದು. ವಾಲ್ಮೀಕಿ ಮುನಿಗಳು ನನ್ನ ಪತ್ನಿಯಾದ ಸೀತಾದೇವಿಯನ್ನು ಸಭೆಗೆ ಕರೆತರುವರು. ಅವಳು ಶಪಥಪೂರ್ವಕವಾಗಿ ತನ್ನ ಶುದ್ಧಚಾರಿತ್ರವನ್ನು ಎಲ್ಲರೆದುರಿಗೆ ಪ್ರಕಟಿಸಲಿದ್ದಾಳೆ. ಕುತೂಹಲಿಗಳಾದ ಎಲ್ಲರೂ ಅದನ್ನು ಕಣ್ಣಾರೆ ನೋಡಬಹುದು'' ಎಂದು ತಿಳಿಸಿದನು. ಆ ನುಡಿಯನ್ನು ಕೇಳಿ ಸಕಲರೂ 'ಸಾಧು, ಸಾಧು' ಎಂದು ಕೋಲಾಹಲ ಮಾಡಿದರು. ಸಭೆಯಲ್ಲಿದ್ದ ಭೂಪತಿಗಳು ಮಹಾತ್ಮನಾದ ರಾಘವನನ್ನು ಕೊಂಡಾಡಿದರು. ''ನರಶ್ರೇಷ್ಠ, ಈ ಬಗೆಯ ಸನ್ಮಾರ್ಗವು ನಿನ್ನಲ್ಲಿ ಮಾತ್ರ ಕಂಡುಬರುವುದು. ಇನ್ನೊಂದೆಡೆ ಕಾಣಸಿಗದು'' ಎಂದರು. ಪೌರರೇ ಮೊದಲಾದ ಸಕಲ ಪ್ರಜೆಗಳೂ ಆಶ್ಚರ್ಯದಿಂದ ತಮ್ಮೊಡನೆ ನಾನಾ ಪ್ರಕಾರವಾಗಿ ಮಾತಾಡಿಕೊಳ್ಳುತ್ತಿದ್ದರು. ರಾಘವನು ''ನಾಳೆ ಈ ವಿಶೇಷದ ಮಹಾಸಭೆ ಸೇರುವುದು'' ಎಂದು ಘೋಷಿಸಿ ಸಭೆಯನ್ನು ವಿಸರ್ಜಿಸಿದನು.

ಮೂರನೆಯ ದಿನ ಮಹಾರಾಜನಾದ ಶ್ರೀರಾಮನು ಯಜ್ಞಶಾಲೆಗೆ ಆಗಮಿಸಿ ಸಕಲ ಮುನಿಗಳಿಗೂ ಹೇಳಿ ಕಳಿಸಿದನು. ಅನಂತರ ವಸಿಷ್ಠ, ವಾಮದೇವ, ಜಾಬಾಲಿ, ಭರದ್ವಾಜ, ನಾರದ ಮುಂತಾದ ತಪೋನಿಧಿಗಳು ಸಭೆಗೆ ಬಂದರು. ವಾನರರೂ ವಿಭೀಷಣನೊಂದಿಗೆ ಬಂದ ರಾಕ್ಷಸರೂ ಕೌತುಕದಿಂದ ಆಗಮಿಸಿದರು. ನಾನಾ ದೇಶಗಳಿಂದ ಆಗಮಿಸಿದ್ದ ಸಕಲ ಜನರೂ ಬಂದು ನೆರೆದರು. ಅಪಾರವಾದ ಜನಸಂದಣಿ ಸೇರಿತು. ರಾಜಾಜ್ಞೆಯಂತೆ ಯಾರೂ ಸದ್ದು ಮಾಡದೆ ಕಲ್ಲಿನ ಪ್ರತಿಮೆಗಳಂತೆ ಅಚಲರಾಗಿ ಕುಳಿತಿದ್ದರು. ಸಭೆ ಸೇರಿದುದನ್ನು ಕೇಳಿ ವಾಲ್ಮೀಕಿ ಮುನಿಗಳು ಸೀತಾಸಮೇತರಾಗಿ ಆಗಮಿಸಿದರು. ಅವರ ಹಿಂದೆ ಜಾನಕಿಯು ತಲೆ ತಗ್ಗಿಸಿ ಕೈಮುಗಿದುಕೊಂಡು ಬರುತ್ತಿದ್ದಳು. ಕಣ್ಣೀರು ಹರಿಯುತ್ತಿತ್ತು, ಮನಸ್ಸು ಶ್ರೀರಾಮನನ್ನು ನೆನೆಯುತ್ತಿತ್ತು, ಕಾಷಾಯ ವಸ್ತ್ರವನ್ನುಟ್ಟಿದ್ದ ಆ ದೇವಿಯು ವಾಲ್ಮೀಕಿ ಮುನಿಗಳ ಹಿಂದೆ ಬರುತ್ತಿರುವಾಗ ಬ್ರಹ್ಮದೇವನನ್ನು ಹಿಂಬಾಲಿಸಿ ಬರುವ ವೇದಮಾತೆಯಾದ ಸಾಕ್ಷಾತ್ ಗಾಯತ್ರೀ ದೇವಿಯಂತೆ ಕಾಣಿಸಿದಳು. ಆಶ್ಚರ್ಯಕರವಾದ ದೇವಿಯ ಆಗಮನವನ್ನು ತಿಳಿದೊಡನೆ ಸಭೆಯಲ್ಲಿ ಜಯಕಾರವು ಮೊಳಗಿತು. ಸಭೆಯನ್ನು ಅತ್ತಿತ್ತ ನೋಡದೆ ಧ್ಯಾನ ಮಗ್ನಳಾಗಿ ಆ ಮಹರ್ಷಿಗಳನ್ನು ಹಿಂಬಾಲಿಸಿ ಬರುತ್ತಿದ್ದ ವೈದೇಹಿಯನ್ನು ಕಂಡೊಡನೆ ಸಭಾಸದರ ಮರುಕ ಉಕ್ಕಿತು. ಶೋಕವು ಉಮ್ಮಳಿಸಿತು. ಎಲ್ಲರ ಮನಸ್ಸೂ ಕದಡಿ ಹೋಯಿತು. 'ಅಯ್ಯೋ, ಅಯ್ಯೋ' ಎಂಬ ಉದ್ಗಾರವು ಎಲ್ಲೆಲ್ಲಿಯೂ ಹೊರಟಿತು. ಮುಂದೆ ಏನಾಗಬಹುದು–ಎಂದು ಕೌತುಕಾವಿಷ್ಟರಾದ ಸಭಾಸದರೆಲ್ಲರೂ ಶ್ರೀರಾಮನ ಕಡೆಗೂ ಸೀತಾದೇವಿಯ ಕಡೆಗೂ ನೋಡುತ್ತ ಏಕಾಗ್ರಚಿತ್ತದಿಂದ ಕುಳಿತಿದ್ದರು. ವಾಲ್ಮೀಕಿಮುನಿಗಳು ಗಾಂಭೀರ್ಯದಿಂದ ನಡೆಯುತ್ತ ಬಂದು ರಾಘವನ ಎದುರಿಗೆ ನಿಂತರು. ಅವರ ಹಿಂದೆ ಸೀತಾದೇವಿಯು ಕಣ್ಣೀರು ಸುರಿಸುತ್ತ ನಿಂತಿದ್ದಳು. ವಾಲ್ಮೀಕಿ ಮುನಿಗಳು ಶ್ರೀರಾಮನನ್ನು ಸಂಬೋಧಿಸಿ ಹೀಗೆ ನುಡಿದರು. ''ದಶರಥನಂದನ–ರಾಘವ, ಸುಶೀಲೆಯೂ ಧರ್ಮಚಾರಿಣಿಯೂ ಸಾಧ್ವೀಶಿರೋಮಣಿಯೂ ಆದ ಸೀತೆಯು ಲೋಕಾಪವಾದ ನಿಮಿತ್ತವಾಗಿ ನಿನ್ನಿಂದ ಪರಿತ್ಯಕ್ತಳಾದಳು. ಅಪವಾದವು ಎಂದಿಗೂ ತನಗೆ ಅಂಟಬಾರದು–ಎಂಬ ವ್ರತನಿಷ್ಠೆಯುಳ್ಳವನು ನೀನು. ಲೋಕಾಪವಾದಕ್ಕೆ ಹೆದರಿದವನು. ನಿನ್ನ ವ್ರತನಿಷ್ಠೆಗೆ ಬಲಿಯಾಗಿ ನೊಂದು ಕಷ್ಟದಲ್ಲಿ ಮುಳುಗಿ ಹೋದವಳು ಈ ಸಾಧ್ವಿ. ಈ ದೇವಿಯು ಪರಿಶುದ್ಧ ಚಾರಿತ್ರಳೆಂದರಿತೇ ನಾನು ಇವಳನ್ನು ನನ್ನ ಆಶ್ರಮಕ್ಕೆ ಕರೆದೊಯ್ದು ನನ್ನ ಮಗಳಂತೆ ಸಾಕಿ ಸಲಹಿದೆನು. ರಾಮಾಯಣವನ್ನು ಹಾಡಿದ ಕುಶಲವರಿಬ್ಬರೂ ಜಾನಕಿಯ ಪುತ್ರರು. ಅಶ್ವಿನೀದೇವತೆಗಳಂತಿರುವ ಈ ಬಾಲಕರು ಯಮಳರಾಗಿ

ಜನಿಸಿದ್ದಾರೆ. ಇವರು ನಿನ್ನ ಮಕ್ಕಳೇ ಎಂಬುದು ನಿಶ್ಚಯ. ರಾಮ, ನಾನು ಸತ್ಯವನ್ನೇ ನುಡಿಯುತ್ತಿದ್ದೇನೆ. ಎಂದೂ ಸುಳ್ಳಾಡಿದವನಲ್ಲ. ಎಷ್ಟೋ ಸಾವಿರ ವರ್ಷಗಳವರೆಗೆ ನಾನು ತಪಸ್ಸನ್ನಾಚರಿಸಿದ್ದೇನೆ. ಇವರು ನಿನ್ನ ಮಕ್ಕಳೆಂದು ಇನ್ನೊಮ್ಮೆ ಹೇಳುತ್ತೇನೆ. ನಿನ್ನ ಪತ್ನಿಯಾದ ಸೀತೆಯಲ್ಲಿ ದೋಷಲೇಶವೇನಾದರೂ ಇರುವುದಾದರೆ, ಇಷ್ಟು ವರ್ಷ ಮಾಡಿದ ನನ್ನ ಘೋರತಪಸ್ಸಿನ ಫಲವು ನನಗೆ ದೊರಕದೆ ಹೋಗಲಿ! ಶ್ರೀರಾಮ, ಇವಳು ಶುದ್ಧಚಾರಿತ್ರಳು. ಪತಿಯನ್ನೇ ದೇವತೆಯೆಂದು ತಿಳಿದಿರುವ ಪರಮ ಸಾಧ್ವಿ ಇವಳು. ಲೋಕಾಪವಾದಕ್ಕೆ ಅಂಜಿದ ನೀನು ಇವಳನ್ನು ಪರಿತ್ಯಜಿಸಿದ್ದೀಯೆ. ಮಹಾರಾಜ, ನಿನ್ನ ಪ್ರಿಯತಮೆಯಾದ ಸೀತೆಯು ಪರಿಶುದ್ಧಳೆಂದು ಗೊತ್ತಿದ್ದರೂ ಲೋಕಾಪವಾದದಿಂದ ನಿನ್ನ ಮನಸ್ಸು ಕಲುಷಿತವಾಯಿತು. ನಾನು ದಿವ್ಯದೃಷ್ಟಿಯಿಂದ ಇವಳ ಶುದ್ಧ ಚಾರಿತ್ರವನ್ನು ಅರಿತೇ ನನ್ನ ಆಶ್ರಮದಲ್ಲಿ ಇವಳಿಗೆ ಪ್ರವೇಶವನ್ನಿತ್ತೆನು'' ಎಂದರು. ಸಭೆಯೆಲ್ಲವೂ ಏಕಾಗ್ರಚಿತ್ತದಿಂದ ಆ ಮುನಿಗಳ ಮಾತನ್ನು ಆಲಿಸುತ್ತಿತ್ತು.

ವಾಲ್ಮೀಕಿ ಮುನಿಗಳ ನುಡಿಯನ್ನು ಏಕಚಿತ್ತದಿಂದ ಆಲಿಸಿದ ರಾಘವನು ಜಾನಕಿಯ ಕಡೆಗೆ ಒಮ್ಮೆ ದೃಷ್ಟಿಯನ್ನು ಹೊರಳಿಸಿ ಮುನಿಗಳಿಗೆ ಕೈಮುಗಿದುಕೊಂಡು ಇಂತೆಂದನು : ''ಮಹಾತ್ಮರೆ, ಧರ್ಮಜ್ಞರಾದ ನೀವು ಹೇಳುವುದು ಸತ್ಯವೇ ಸರಿ. ಪವಿತ್ರವಾದ ನಿಮ್ಮ ನುಡಿಯಲ್ಲಿ ನನಗೆ ಪೂರ್ಣವಿಶ್ವಾಸವುಂಟು. ಹಿಂದೊಮ್ಮೆ ಇಂತಹ ಸಂದರ್ಭವೇ ಒದಗಿದಾಗ ವೈದೇಹಿಯು ತನ್ನ ಶುದ್ಧ ಶೀಲವನ್ನು ಅಗ್ನಿದೇವನೆದುರಿಗೆ ತೋರಿಸಿಕೊಟ್ಟಳು. ದೇವತೆಗಳೆಲ್ಲರೂ ಬಂದು ಅವಳ ಚಾರಿತ್ರವನ್ನು ಹೊಗಳಿದರು. ನಾನು ವಾನರ ರಾಕ್ಷಸರೆದುರಿಗೆ ವೈದೇಹಿಯ ಪಾವಿತ್ರ್ಯವನ್ನು ಮನಗಂಡು ಕರೆತಂದೆನು. ಮಹರ್ಷಿಗಳೆ, ರಾಜಕಾರ್ಯದಲ್ಲಿ ನಿರತನಾದ ನಾನು ಲೋಕಾಪವಾದಕ್ಕೆ ಅಂಜಲೇಬೇಕಾಗಿದೆ. ಈ ದೇವಿಯು ನಿರ್ದೋಷಳೆಂಬುದು ನನಗೆ ತಿಳಿದಿದ್ದರೂ ರಾಜನಾದ ನಾನು ಜನರ ಕೆಟ್ಟ ಮಾತುಗಳಿಗೆ ಹೆದರಿ ಇವಳನ್ನು ತೊರೆಯಬೇಕಾಯಿತು. ಮಹರ್ಷಿಗಳೆ, ನನ್ನನ್ನು ನೀವು ಕ್ಷಮಿಸಬೇಕು. ಯಮಳರಾದ ಕುಶಲವರು ನನ್ನ ಪುತ್ರರೆಂಬುದು ನಿಶ್ಚಯವೇ ಸರಿ. ಈ ಸಭಾಮಧ್ಯದಲ್ಲಿ ಮೈಥಿಲಿಯು ಪರಿಶುದ್ಧಳೆಂದು ಸ್ಪಷ್ಟವಾದಮೇಲೆ ಅವಳನ್ನು ಪ್ರೀತಿಯಿಂದ ಅಂಗೀಕರಿಸುವೆನು. ಮಹರ್ಷಿಗಳೆ, ಇದರಲ್ಲಿ ಯಾವ ಸಂದೇಹವೂ ಇಲ್ಲ'' ಎಂದನು.

ಸೀತೆಯು ಶಪಥ ಮಾಡುವಳೆಂದು ತಿಳಿದು ಎಲ್ಲರೂ ದಿಗ್ಭ್ರಾಂತರಾದರು. ದೇವಲೋಕದಿಂದ ದೇವತೆಗಳು ಬಂದು ನೆರೆದರು. ವಾಯುವು ದಿವ್ಯ ಪರಿಮಳವನ್ನು ಸೂಸುತ್ತ ಸಭೆಯಲ್ಲಿ ಬೀಸಿತು. ವಿವಿಧ ರಾಷ್ಟ್ರಗಳಿಂದ ಬಂದಿದ್ದ ಸಮಸ್ತಜನರೂ

ಚಕಿತರಾದರು. ತಪಸ್ವಿನಿಯಂತೆ ಕಾಷಾಯ ವಸ್ತ್ರವನ್ನುಟ್ಟಿದ್ದ ಜಾನಕಿಯು ವಾಲ್ಮೀಕಿ ಮುನಿಗಳ ಅನುಮತಿಯನ್ನು ಪಡೆದು ಸಭೆಗೆ ಕೈಮುಗಿದಳು. ಕೈಮುಗಿದುಕೊಂಡೇ ತಲೆತಗ್ಗಿಸಿ ಕೆಳಗೆ ನೋಡುತ್ತ ಹೀಗೆಂದಳು : ''ಶ್ರೀರಾಮನನ್ನು ಹೊರತಾಗಿ ಇನ್ನೊಬ್ಬನನ್ನೂ ನಾನು ಮನಸ್ಸಿನಲ್ಲಿಯೂ ಚಿಂತಿಸುವುದಿಲ್ಲವೆಂಬುದು ಸತ್ಯ. ಈ ಸತ್ಯ ಬಲದಿಂದ ಮಾಧವ ಪತ್ನಿಯಾದ ಭೂದೇವಿಯು ನನ್ನನ್ನು ತನ್ನ ಗರ್ಭದಲ್ಲಿ ಸೇರಿಸಿಕೊಳ್ಳಲಿ! ಭೂಮಿಯು ನನಗೆ ರಂಧ್ರವನ್ನೀಯಲಿ! ಮನಸ್ಸಿನಿಂದ, ವಾಕ್ಕಿನಿಂದ, ಕ್ರಿಯೆಯಿಂದ ನಾನು ಶ್ರೀರಾಮನನ್ನೇ ಪೂಜಿಸುತ್ತಿರುವುದು ಸತ್ಯವಾದರೆ, ಭೂದೇವಿಯು ನನಗೆ ರಂಧ್ರವನ್ನೀಯಲಿ! ತನ್ನ ಗರ್ಭದಲ್ಲಿ ಸೇರಿಸಿಕೊಳ್ಳಲಿ! ಶ್ರೀರಾಮನನ್ನು ಹೊರತಾಗಿ ಇನ್ನೊಬ್ಬ ಪುರುಷನನ್ನು ನಾನರಿಯೆನು ಎಂಬ ನನ್ನ ನುಡಿ ಸತ್ಯವಾದರೆ, ಭೂದೇವಿಯು ನನಗೆ ರಂಧ್ರವನ್ನೀಯಲಿ. ತನ್ನ ಗರ್ಭದಲ್ಲಿ ನನ್ನನ್ನು ಸೇರಿಸಿಕೊಳ್ಳಲಿ'' ಎಂದು ಶಪಥ ಮಾಡಿದಳು. ಹೀಗೆ ಮೂರು ಸಲ ನುಡಿದೊಡನೆ ಒಂದು ಅದ್ಭುತವು ನಡೆದು ಹೋಯಿತು. ಎದುರಿಗಿದ್ದ ಭೂತಳವು ಬಿರಿಯಿತು. ಆ ರಂಧ್ರವನ್ನು ಭೇದಿಸಿಕೊಂಡು ಒಂದು ದಿವ್ಯ ಸಿಂಹಾಸನವು ಮೇಲೆದ್ದಿತು. ದಿವ್ಯದೇಹ ಧಾರಿಗಳಾದ ತಕ್ಷಕಾದಿ ನಾಗರು ತಮ್ಮ ಶಿರಸ್ಸುಗಳಿಂದ ಆ ಸಿಂಹಾಸನವನ್ನು ಹೊತ್ತಿದ್ದರು. ಸಿಂಹಾಸನದಲ್ಲಿ ದಿವ್ಯ ತೇಜಸ್ಸಿನಿಂದ ಬೆಳಗುತ್ತಿದ್ದ ಸಾಕ್ಷಾತ್ ಭೂದೇವಿಯೇ ಕುಳಿತಿದ್ದಳು. ಅವಳು ಜಾನಕಿಯನ್ನು ಅಭಿನಂದಿಸಿ ಎರಡು ಕೈಗಳಿಂದಲೂ ಆಲಿಂಗಿಸಿ ''ಮಗಳೇ, ಬಾ'' ಎಂದು ನುಡಿದು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿಕೊಂಡಳು. ಮೂಕ ವಿಸ್ಮಿತವಾದ ಜನತೆಯು ಎವೆಯಿಕ್ಕದೆ ಅದ್ಭುತವಾದ ಆ ದೃಶ್ಯವನ್ನು ನೋಡುತ್ತಿತ್ತು. ನೋಡು ನೋಡುತ್ತಿದ್ದಂತೆ ಸಿಂಹಾಸನವು ಭೂಗರ್ಭದಲ್ಲಿ ರಸಾತಳಕ್ಕೆ ಇಳಿಯತೊಡಗಿತು. ಸೀತಾದೇವಿಯು ಸಿಂಹಾಸನದಲ್ಲಿ ಕುಳಿತು ಭೂಗರ್ಭದಲ್ಲಿ ಇಳಿಯುತ್ತಿರುವಾಗ ದೇವತೆಗಳು ಅವಿಚ್ಛಿನ್ನವಾಗಿ ಹೂಮಳೆಯನ್ನು ಸುರಿಸಿದರು. ಯಜ್ಞಶಾಲೆಯಲ್ಲಿದ್ದ ಸಮಸ್ತ ಮುನಿಗಳೂ, ರಾಜರೂ, ಪೌರರೂ ಎಲ್ಲರೂ ಪರಮಾಶ್ಚರ್ಯಗೊಂಡರು. ಅವರ ವಿಸ್ಮಯಕ್ಕೆ ಪಾರವೇ ಇರಲಿಲ್ಲ. ಹರ್ಷದಿಂದ ಕೆಲವರು ಕೋಲಾಹಲವನ್ನು ಮಾಡಿದರು. ಕೆಲವರು ಶ್ರೀರಾಮನ ಮುಖವನ್ನು ನೋಡುವರು. ಕೆಲವರು ಸೀತೆಯನ್ನು ನೋಡುವರು. ಮುಂದೇನೆಂಬುದೂ ಹೊಳೆಯದೆ ಶ್ರೀರಾಮನು ದಿಕ್ಕುಗಾಣದೆ ನಿಂತಿದ್ದನು. ಸೀತೆಯು ಭೂಗರ್ಭದಲ್ಲಿ ಪ್ರವೇಶಿಸಿಬಿಟ್ಟಳು. ಭೂಮಿಯ ಬಿರುಕು ಮತ್ತೆ ಕೂಡಿಕೊಂಡಿತು. ಎಲ್ಲೆಲ್ಲಿಯೂ ಹಾಹಾಕಾರ ಮಸಗಿತು. ಸಭೆಯಲ್ಲಿದ್ದವರೆಲ್ಲರೂ ಎಚ್ಚರದಪ್ಪಿದರೋ ಭ್ರಾಂತ

ರಾದರೋ, ಹುಚ್ಚರಾದರೋ ಎಂಬಂತೆ ಕಾಣಿಸಿತು. ಸಮಸ್ತವಾನರರೂ ರಾಕ್ಷಸರೂ 'ಹೋ' ಎಂದು ಅರಚಿದರು. ಮುನಿಗಳು 'ಸಾಧು ಸಾಧು' ಎಂದು ಉಗ್ಗಡಿಸಿದರು.

೨೨

ಶ್ರೀರಾಮನ ಕ್ರೋಧ. ಯಾಗ ಪರಿಸಮಾಪ್ತಿ

ವೈದೇಹಿಯು ಭೂಗರ್ಭದಲ್ಲಿ ಇಳಿದು ಹೋಗುತ್ತಿರುವುದನ್ನು ಶ್ರೀರಾಮನು ದಿಗ್ಭ್ರಾಂತನಾಗಿ ನೋಡಿದನು. ಕಣ್ಣೀರು ಬಳಬಳನೆ ಹರಿಯುತ್ತಿತ್ತು. ಒಂದು ದೊಣ್ಣೆಯನ್ನೂರಿ ಎದ್ದು ನಿಂತು ದೀನ ಚಿತ್ತನಾಗಿ ತಲೆ ತಗ್ಗಿಸಿದನು. ಬಹಳ ಹೊತ್ತು ಕಂಬನಿ ಮಿಡಿಯುತ್ತ ಗಳಗಳನೆ ಅತ್ತುಬಿಟ್ಟನು. ಅನಂತರ ಕಣ್ಣೀರೊರೆಸಿಕೊಂಡು ಸ್ವಲ್ಪ ಹೊತ್ತು ಧ್ಯಾನಾಸಕ್ತನಾದನು. ಅವನ ಶೋಕವು ಕ್ರೋಧಕ್ಕೆ ತಿರುಗಿತು. ಮುಖವು ಕೆಂಪೇರಿತು. ಹುಬ್ಬು ಗಂಟಿಕ್ಕಿತು. ಸೀತಾದೇವಿಯು ಇಳಿದು ಹೋದ ಸ್ಥಳವನ್ನೇ ನೋಡುತ್ತ ಹೀಗೆಂದನು. ''ಸಾಕ್ಷಾತ್ ಲಕ್ಷ್ಮೀ ದೇವಿಯಂತಿದ್ದ ನನ್ನ ಸೀತೆಯು ನನ್ನ ಕಣ್ಣೆದುರಿಗೇ ಕಾಣದಾದಳು. ಮಹಾಸಾಗರದ ಆಚೆಗೆ ಲಂಕೆಯಲ್ಲಿದ್ದ ಈ ನನ್ನ ಪತ್ನಿಯನ್ನು ಬಿಡಿಸಿಕೊಂಡು ಬಂದಿದ್ದೇನೆ. ಹೀಗಿರುವಾಗ ಈ ಭೂಗರ್ಭದಿಂದ ನನ್ನ ಧರ್ಮಪತ್ನಿಯನ್ನು ತರಲಾರೆನೇ? ಹೇ ವಸುಧೆ, ದೇವಿ, ಪೂಜ್ಯಳೇ ನನ್ನ ಸೀತೆಯನ್ನು ನನಗೆ ಒಪ್ಪಿಸಿಬಿಡು. ಧರ್ಮದಿಂದ ನೀನು ನನಗೆ ಅತ್ತೆಯಾಗಿದ್ದೀಯೆ. ಕೈಮುಗಿದು ಕೇಳಿಕೊಳ್ಳುವೆನು. ನನ್ನ ಸೀತೆಯನ್ನು ನನಗೆ ಒಪ್ಪಿಸಿಬಿಡು. ಇಲ್ಲದಿದ್ದರೆ ನನ್ನ ರೋಷದ ಪ್ರಕಾರವೇನೆಂಬುದನ್ನು ತೋರಿಸಬೇಕಾದೀತು. ನನ್ನ ಸಾಮರ್ಥ್ಯವು ನಿನಗೆ ತಿಳಿದಿರಬೇಕು. ದೇವಿ, ವಸುಧೆ, ಸೀತೆಯನ್ನಾದರೂ ಒಪ್ಪಿಸು, ಇಲ್ಲವೇ ಸೀತೆಯು ಇಳಿದು ಹೋದ ಭೂಮಿಯಲ್ಲಿ ಇಳಿದು ಹೋಗುವಂತೆ ನನಗೂ ರಂಧ್ರವನ್ನು ಕಲ್ಪಿಸಿಕೊಡು. ಅವಳು ಎಲ್ಲಿದ್ದರೆ ಅಲ್ಲಿರುವೆನು. ಸೀತೆಯೊಡನೆಯೇ ಇರುವೆನು. ಅವಳನ್ನು ಬಿಟ್ಟಿರಲಾರೆ. ಭೂದೇವಿ, ಅವಳನ್ನಾದರೂ ಕರೆದುಕೊಂಡು ಬಾ. ಅವಳಿಗಾಗಿ ನಾನು ಹುಚ್ಚನಾಗಿದ್ದೇನೆ. ನನ್ನ ಕೋರಿಕೆ ಯಾವುದನ್ನೂ ನಡೆಸದಿದ್ದರೆ ಪರ್ವತಾರಣ್ಯ ಸಹಿತವಾದ ನಿನ್ನ ಸಮಸ್ತ ಭೂಭಾಗವನ್ನು ವಿಧ್ವಂಸ ಮಾಡುವೆನು! ಈ ಭೂಮಂಡಲವು ಜಲಮಯವಾಗಿ ಹೋಗಲಿ. ಜಗತ್ತೆಲ್ಲವೂ ನಾಶವಾಗಿ ಹೋಗಲಿ!'' ಎಂದು ತನ್ನ ಕೋದಂಡವನ್ನು ಸೆಳೆದು ಆರ್ಭಟಿಸಿದನು. ಈ ಪ್ರಕಾರವಾಗಿ ಕಾಕುತ್ಸ್ಥನು ರೋಷದಿಂದ ಉದ್ಗರಿಸಲು, ದೇವತೆಗಳೊಡನೆ ಬಂದು ನಿಂತಿದ್ದ ಬ್ರಹ್ಮದೇವನು ಇಂತೆಂದನು. ''ಶ್ರೀರಾಮ, ಸುಶೀಲನಾದ ನೀನು ಹೀಗೆ ರೋಷಾವಿಷ್ಟನಾಗಬಾರದು.

ನಿನ್ನ ನಿಜಸ್ವರೂಪವೇನೆಂಬುದನ್ನು ಸ್ಮರಿಸಿಕೊ. ಲೋಕ ಶಿಕ್ಷಣಕ್ಕಾಗಿ, ಲೋಕರಕ್ಷಣೆಗಾಗಿ ಅವತರಿಸಿದ ಮಹಾವಿಷ್ಣುವೇ ನೀನು. ಪ್ರಾಕೃತ ಮನುಷ್ಯನಂತೆ ಈ ಪರಿಯಲ್ಲಿ ಶೋಕಮೋಹಗಳಿಗೆ ಒಳಗಾಗಬಹುದೆ? ಹೇ ಪುರುಷೋತ್ತಮ, ಸೀತಾದೇವಿಯು ತನ್ನ ತಪೋಬಲದಿಂದ ನಾಗಲೋಕಕ್ಕೆ ತೆರಳಿದ್ದಾಳೆ. ಅವಳು ನಿನ್ನ ಪತ್ನಿಯಾದ ಲಕ್ಷ್ಮೀದೇವಿಯಲ್ಲವೆ? ವೈಕುಂಠದಲ್ಲಿ ಮತ್ತೆ ನಿಮ್ಮೀರ್ವರಿಗೆ ಸಮಾಗಮ ವಾಗುವುದು. ನಾನು ಹೇಳುವುದನ್ನು ಕೇಳು. ನಿನ್ನ ಚರಿತೆಯ ವರ್ಣನೆಯಿರುವ ಈ ರಾಮಾಯಣ ಕಾವ್ಯವನ್ನು ವಾಲ್ಮೀಕಿಮುನಿಗಳು ನನ್ನ ಪ್ರೇರಣೆಯಿಂದ ರಚಿಸಿದ್ದಾರೆ. ಇದು ಪರಮೋತ್ತಮವಾದ ಆದಿಕಾವ್ಯ. ಈ ಜಗತ್ತು ಇರುವವರೆಗೂ ನಿನ್ನ ಪವಿತ್ರ ಚರಿತೆಯು ಲೋಕದಲ್ಲಿ ಪ್ರಸಿದ್ಧವಾಗಿರುವುದು. ಇದರಲ್ಲಿರುವುದೆಲ್ಲವೂ ಸತ್ಯವೇ. ಅಜ್ಞಾನದ ಪ್ರಲಾಪ ಯಾವುದೂ ಇದರಲಿಲ್ಲ. ಇಲ್ಲಿಯ ಪರ್ಯಂತ ನಡೆದ ವೃತ್ತಾಂತದವರೆಗೆ ಮಾತ್ರ ರಾಮಾಯಣ ಕಥೆಯನ್ನು ಕುಶಲವರು ಸಭೆಯಲ್ಲಿ ಹಾಡಲಿ. ಇದಕ್ಕೆ ಮುಂದಾಗುವ ಉತ್ತರಕಾಂಡದ ಚರಿತ್ರೆಯನ್ನು ವಾಲ್ಮೀಕಿ ಮುನಿಗಳು ಜ್ಞಾನ ಬಲದಿಂದ ವಿರಚಿಸಿದ್ದಾರೆ. ಅದನ್ನು ಮಾತ್ರ ಇಲ್ಲಿ ಹಾಡಬಾರದು. ಅವಶ್ಯವೆನಿಸಿದರೆ ನೀನೊಬ್ಬನು ಮಾತ್ರ ಅಲ್ಲಿಯ ವೃತ್ತಾಂತವನ್ನು ಕೇಳಿ ತಿಳಿದುಕೊಳ್ಳಬಹುದು. ಶುಭವಾಗಲಿ!'' ಎಂದು ಹೇಳಿ ಬ್ರಹ್ಮದೇವನು ದೇವತೆಗಳೊಡನೆ ಅಂತರ್ಹಿತ ನಾದನು. ಶ್ರೀರಾಮನು ಕಷ್ಟದಿಂದ ತನ್ನ ಶೋಕ ಮೋಹ ರೋಷಗಳನ್ನು ನುಂಗಿ ಕೊಂಡನು. ವಾಲ್ಮೀಕಿ ಮುನಿಗಳನ್ನು ಕರೆದು ''ಭಗವನ್, ಬ್ರಹ್ಮದೇವನ ಆದೇಶದಂತೆ ನಾಳೆಯಿಂದ ಇಲ್ಲಿಯವರೆಗಿನ ರಾಮಾಯಣದ ವಾಚನವು ನಡೆಯಲಿ'' ಎಂದು ನಿವೇದಿಸಿದನು. ಅನಂತರ ಕುಶಲವರನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಅವರ ಶಿರಸ್ಸನ್ನು ಮತ್ತೆ ಮತ್ತೆ ಆಘ್ರಾಣಿಸಿದನು. ಅವರನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಅವರ ಮೈದಡವುತ್ತ ಕಣ್ಣೀರು ಸುರಿಸಿದನು. ಅನಂತರ ಆ ಮಕ್ಕಳನ್ನು ತನ್ನೊಡನೆ ಕರೆದುಕೊಂಡು ಸಂವಿಗ್ನ ಚಿತ್ತನಾಗಿ ಯಜ್ಞವಾಟದಲ್ಲಿದ್ದ ತನ್ನ ಪರ್ಣಶಾಲೆಗೆ ಹೋದನು. ಸೀತಾದೇವಿಯು ಭೂಗರ್ಭವನ್ನು ಪ್ರವೇಶಿಸಿದ ಮೇಲೆ ಅಶ್ವಮೇಧ ಯಾಗವು ವಿಧಿವತ್ತಾಗಿ ಸಮಾಪ್ತವಾಯಿತು. ಶ್ರೀರಾಮನು ವೈದೇಹಿಯನ್ನು ಕಾಣದೆ ಅತ್ಯಂತ ದುಃಖಿತನಾಗಿ ತನ್ನ ಪಾಲಿಗೆ ಜಗತ್ತೆಲ್ಲವೂ ಶೂನ್ಯವಾಯಿತೆಂದು ತಿಳಿದು ಕೊಂಡನು. ಶೋಕಭಾರದಿಂದ ಸಂತಪ್ತವಾದ ಅವನ ಹೃದಯಕ್ಕೆ ಶಾಂತಿಯೇ ಲಭಿಸಲಿಲ್ಲ. ಸಮಸ್ತ ಋತ್ವಿಜರಿಗೂ ಯಥೇಚ್ಛವಾಗಿ ದಕ್ಷಿಣೆಯನ್ನಿತ್ತನು. ಯಾಗಕ್ಕೆ ಬಂದ ಎಲ್ಲ ರಾಜರಿಗೂ, ವಾನರರಿಗೂ, ರಾಕ್ಷಸರಿಗೂ, ಯೋಗ್ಯವಾದ ಸನ್ಮಾನವನ್ನು ಮಾಡಿದನು. ಅಂತೆಯೇ ಯಾಗಕ್ಕೆ ಆಗಮಿಸಿದ ಸಕಲ ಸ್ತ್ರೀಪುರುಷರಿಗೂ ಕಾರ್ಯನಿರತರಾಗಿದ್ದ ಎಲ್ಲ ಸೇವಕ

ವರ್ಗದವರಿಗೂ ಪಾರಿತೋಷಿಕಗಳನ್ನಿತ್ತು ಯಜ್ಞಕಾರ್ಯವನ್ನು ಮುಗಿಸಿದನು. ಎಲ್ಲರನ್ನೂ ಕಳಿಸಿಕೊಟ್ಟ ಮೇಲೆ ಕಾಕುತ್ಸ್ಥನು ಇಬ್ಬರು ಪುತ್ರರನ್ನೂ ಕರೆದುಕೊಂಡು ಸೀತೆಯನ್ನೇ ನೆನೆಯುತ್ತ ಅಯೋಧ್ಯೆಗೆ ಬಂದನು. ಆತನು ಇನ್ನೊಬ್ಬ ಪತ್ನಿಯನ್ನು ಎಂದೂ ವರಿಸಲೇ ಇಲ್ಲ. ಮುಂದೆ ನಡೆಸಿದ ಎಲ್ಲ ಧಾರ್ಮಿಕ ಕಾರ್ಯದಲ್ಲಿಯೂ ಜಾನಕಿಯ ಸುವರ್ಣಪ್ರತಿಮೆಯನ್ನು ತನ್ನ ಜೊತೆಯಲ್ಲಿ ಇರಿಸಿಕೊಳ್ಳುತ್ತಿದ್ದನು. ರಾಜ್ಯಭಾರವನ್ನು ದಕ್ಷತೆಯಿಂದ ನಿರ್ವಹಿಸುತ್ತ ಧರ್ಮರಕ್ಷಣೆಗಾಗಿ ಶ್ರಮಿಸುತ್ತಿರಲು ಬಹಳ ಕಾಲವು ಕಳೆಯಿತು. ಆಗ ಸರಿಯಾದ ಕಾಲದಲ್ಲಿ ಮಳೆ ಬರುತ್ತಿತ್ತು. ಸುಭಿಕ್ಷವು ನೆಲೆಸಿತ್ತು. ಹೃಷ್ಟ ಪುಷ್ಟರಾದ ಪ್ರಜೆಗಳು ರಾಮರಾಜ್ಯದಲ್ಲಿ ನೆಲೆಸಿದ್ದರು. ಜನರಿಗೆ ರೋಗಬಾಧೆಯಿರಲಿಲ್ಲ. ಯಾವ ಅನರ್ಥವೂ ಸಂಭವಿಸುತ್ತಿರಲಿಲ್ಲ. ಹೀಗೆ ಕೆಲವು ಕಾಲ ಕಳೆಯಲಾಗಿ ಶ್ರೀರಾಮನ ಮಾತೆಯಾದ ಕೌಸಲ್ಯೆಯು ಕಾಲಧರ್ಮವನ್ನೈದಿದಳು. ಅಂತೆಯೇ ಸುಮಿತ್ರೆ ಕೈಕೇಯಿಯರೂ ಸಹ ಕೌಸಲ್ಯೆಯನ್ನು ಹಿಂಬಾಲಿಸಿ ಸ್ವರ್ಗಸ್ಥರಾದರು. ಆ ಮಾತೆಯರಿಗೋಸ್ಕರ ಶ್ರೀರಾಮನು ಕಾಲಕಾಲಗಳಲ್ಲಿ ಶ್ರಾದ್ಧಕ್ರಿಯೆಯನ್ನು ನಡೆಸುತ್ತ ವಿಪುಲವಾಗಿ ದಾನ ಧರ್ಮಗಳನ್ನು ಮಾಡುತ್ತಿದ್ದನು. ಭರತಾದಿಗಳು ನಡೆಸುತ್ತಿದ್ದ ಮಾತೆಯರ ಶ್ರಾದ್ಧಕ್ರಿಯೆಗಳಲ್ಲಿ ಯಾವ ಭೇದಭಾವವನ್ನೂ ಮಾಡಲಿಲ್ಲ. ಹೀಗೆ ಉಳಿದ ಕಾಲವು ಶಾಂತವಾಗಿ ಕಳೆಯಿತು.

೨೩

ಭರತನ ಪುತ್ರರಾದ ತಕ್ಷಪುಷ್ಕಲರನ್ನು ಗಂಧರ್ವರಾಜ್ಯದಲ್ಲಿ ಸ್ಥಾಪಿಸುವುದು. ಲಕ್ಷ್ಮಣನ ಪುತ್ರರಾದ ಅಂಗದ ಚಂದ್ರಕೇತುಗಳಿಗಾಗಿ ನಗರ ನಿರ್ಮಾಣ

ಆಗ ಕೇಕಯರಾಜನಾಗಿದ್ದ ಯುಧಾಜಿತನು ಕಾರ್ಯಾರ್ಥವಾಗಿ ತನ್ನ ಗುರುಗಳಾದ ಗಾರ್ಗ್ಯರನ್ನು ಅಯೋಧ್ಯೆಗೆ ಕಳಿಸಿದನು. ಅವರೊಡನೆ ನಾನಾ ಬಗೆಯ ಪಾರಿತೋಷಿಕಗಳನ್ನು ಶ್ರೀರಾಮನಿಗೋಸ್ಕರ ಕಳಿಸಿದ್ದನು. ಗಾರ್ಗ್ಯ ಮುನಿಗಳು ಅಯೋಧ್ಯೆಗೆ ಬರುವ ವೃತ್ತಾಂತವನ್ನು ಕೇಳಿ ರಾಘವನು ಸೋದರ ಸಮೇತನಾಗಿ ಹೊರಟು ಒಂದು ಹರದಾರಿದೂರದಲ್ಲಿಯೇ ಆ ಮುನಿಗಳನ್ನು ಎದುರ್ಗೊಂಡು ಅಯೋಧ್ಯೆಗೆ ಕರೆತಂದು ಸತ್ಕರಿಸಿದನು. ಅನಂತರ ಗಾರ್ಗ್ಯರನ್ನು ಕುರಿತು ''ಮಹರ್ಷಿಗಳೆ, ನನ್ನ ಮಾತುಲನು ಏನು ಹೇಳಿ ಕಳಿಸಿದ್ದಾನೆ? ತಾವು ಆಗಮಿಸಿದ ನಿಮಿತ್ತವೇನು?'' ಎಂದು ಕೇಳಲು ಗಾರ್ಗ್ಯರು ಇಂತೆಂದರು. ''ಶ್ರೀರಾಮ, ಯುಧಾಜಿತನು ಹೀಗೆ ಹೇಳಿ ಕಳಿಸಿದ್ದಾನೆ. ಏನೆಂದರೆ, ಸಿಂಧೂನದಿಯ ಎರಡು ಪಾರ್ಶ್ವಗಳಲ್ಲಿಯೂ ಸಮೃದ್ಧವಾದ ಒಂದು ದೇಶವುಂಟು. ಆ ದೇಶವನ್ನು

ಬಲಾಢ್ಯರಾದ ಕೆಲವು ಗಂಧರ್ವರು ವಶಪಡಿಸಿಕೊಂಡಿದ್ದಾರೆ. ಅವರ ರಾಜ್ಯಭಾರವು ಪ್ರಜೆಗಳಿಗೆ ದುಃಖಕರವಾಗಿದೆ. ಗಂಧರ್ವರ ಹಿಡಿತದಿಂದ ಆ ರಾಜ್ಯವನ್ನು ಬಿಡಿಸುವುದು ಪ್ರಜೆಗಳ ಸುಖಕ್ಕೆ ಅತ್ಯಾವಶ್ಯಕ. ಆ ಗಂಧರ್ವರನ್ನು ಜಯಿಸಲು ನಿನಗೆ ಮಾತ್ರ ಸಾಧ್ಯವಾಗುತ್ತದೆ. ನನ್ನ ಅಭಿಪ್ರಾಯವು ನಿನಗೆ ಮಾನ್ಯವಾದರೆ ನಡೆಸಬಹುದು– ಎಂದು ಯುಧಾಜಿತನು ಹೇಳಿದ್ದಾನೆ'' ಎಂದರು. ಸೋದರಮಾವನಾದ ಯುಧಾಜಿತನ ಈ ಸಂದೇಶವನ್ನು ಕೇಳಿ ರಘುನಾಥನು ಭರತನ ಮುಖವನ್ನು ನೋಡಿದನು. ಆ ಕಾರ್ಯಕ್ಕೆ ಭರತನೂ ಒಪ್ಪಿದನು. ಅನಂತರ ಭರತನನ್ನು ಕುರಿತು ''ಭರತ, ನಿನ್ನ ಪುತ್ರರಾದ ತಕ್ಷ ಮತ್ತು ಪುಷ್ಕಲರನ್ನು ಕರೆದುಕೊಂಡು ಹೋಗಿ ಗಂಧರ್ವರನ್ನು ಜಯಿಸು. ಧನುರ್ವಿದ್ಯಾಪರಿಣತರಾದ ಈ ಕುಮಾರರು ನಿನ್ನೊಡನೆ ಹೋಗಲಿ. ಗಂಧರ್ವರಾಜ್ಯವನ್ನು ಜಯಿಸಿದ ಮೇಲೆ ಅಲ್ಲಿ ಎರಡು ನಗರಗಳನ್ನು ಸ್ಥಾಪಿಸು. ತಕ್ಷ, ಪುಷ್ಕಲರು ಅಲ್ಲಿ ನೆಲೆಸಿ ರಾಜ್ಯದ ವ್ಯವಸ್ಥೆಯನ್ನು ನೋಡಿಕೊಳ್ಳಲಿ'' ಎಂದನು. ಅನಂತರ ಭರತನು ಗಾರ್ಗ್ಯಮುನಿಗಳೊಡನೆಯೇ ಸೇನಾಸಮೇತನಾಗಿ ತನ್ನ ಮಕ್ಕಳನ್ನೂ ಕರೆದುಕೊಂಡು ಆ ದೇಶಕ್ಕೆ ಪ್ರಯಾಣ ಮಾಡಿದನು. ಆಮೇಲೆ ಮಹಾಪರಾಕ್ರಮಿಯಾದ ಭರತನು ಗಂಧರ್ವರನ್ನು ಜಯಿಸಿ ಶ್ರೀರಾಮನ ಆಜ್ಞೆಯಂತೆ ಎರಡು ನಗರಗಳನ್ನು ನಿರ್ಮಿಸಿ ಅಲ್ಲಿ ತನ್ನ ಮಕ್ಕಳನ್ನು ಪ್ರತಿಷ್ಠಾಪಿಸಿದನು. ತಕ್ಷನು ನೆಲೆಸಿದ ನಗರಕ್ಕೆ ತಕ್ಷಶಿಲೆಯೆಂದೂ, ಪುಷ್ಕಲನಿದ್ದ ನಗರಕ್ಕೆ ಪುಷ್ಕರವೆಂದೂ ಹೆಸರಾಯಿತು. ಭರತನ ಆ ವೀರಪುತ್ರರೀರ್ವರೂ ಆ ರಾಜ್ಯವನ್ನು ಸಮೃದ್ಧಿಗೊಳಿಸಿ ಧರ್ಮದಿಂದ ಪ್ರಜಾಪಾಲನೆಯ ಕರ್ತವ್ಯದಲ್ಲಿ ನಿರತರಾದರು. ಆಮೇಲೆ ಭರತನು ಅಯೋಧ್ಯೆಗೆ ಹಿಂದಿರುಗಿ ಈ ವೃತ್ತಾಂತವೆಲ್ಲವನ್ನೂ ಶ್ರೀರಾಮನಿಗೆ ನಿವೇದಿಸಿದನು. ಶ್ರೀರಾಮನು ಸಂಪ್ರೀತನಾದನು. ಗಾರ್ಗ್ಯರು ಹೋಗಿ ನಡೆದ ವೃತ್ತಾಂತವನ್ನು ಯುಧಾಜಿತನಿಗೆ ಅರುಹಿದರು.

ಹೀಗಿರಲು ಒಂದು ದಿನ ರಾಘವನು ತನ್ನ ಪ್ರೀತಿಯ ತಮ್ಮನಾದ ಸೌಮಿತ್ರಿಯನ್ನು ಕರೆದು ಇಂತೆಂದನು. ''ವತ್ಸ–ಲಕ್ಷ್ಮಣ, ಭರತನ ಪುತ್ರರಿಗೂ ಶತ್ರುಘ್ನನ ಪುತ್ರರಿಗೂ ಒಂದು ವ್ಯವಸ್ಥೆಯನ್ನು ಕಲ್ಪಿಸಿದ್ದಾಯಿತು. ಇನ್ನು ನಿನ್ನ ಮಕ್ಕಳಾದ ಅಂಗದನಿಗೂ, ಚಂದ್ರಕೇತುವಿಗೂ ಒಂದು ವ್ಯವಸ್ಥೆಯನ್ನು ಏರ್ಪಡಿಸಬೇಕೆಂಬುದು ನನ್ನ ಅಪೇಕ್ಷೆಯಾಗಿದೆ. ವೀರಯೋಧರೂ ವಿದ್ಯಾವಂತರೂ ಆದ ನಿನ್ನ ಪುತ್ರರು ಧರ್ಮದಿಂದ ರಾಜ್ಯಪಾಲನೆಯನ್ನು ಮಾಡಲು ಸಮರ್ಥರಾಗಿದ್ದಾರೆ. ಲಕ್ಷ್ಮಣ, ಇವರೆಲ್ಲರಿಗೂ ಒಂದೊಂದು ದಾರಿಯನ್ನು ನಾವು ಕಲ್ಪಿಸಲೇಬೇಕು. ನಮ್ಮಿಂದ ಯಾವ ತಪ್ಪೂ ಆಗಬಾರದು. ಆದ್ದರಿಂದ ನಿನ್ನ ಪುತ್ರರಿಗೆ ಯೋಗ್ಯವಾದ ಒಂದು ದೇಶವನ್ನು

ಗೊತ್ತು ಮಾಡು. ಸಂಪತ್ಸಮೃದ್ಧವಾದ ರಾಜ್ಯವಾವುದೆಂಬುದನ್ನು ಹೇಳು'' ಎಂದನು. ಲಕ್ಷ್ಮಣನು ಅಣ್ಣನ ಆಜ್ಞೆಯಂತೆ ಕಾರುಪಥ-ಎಂಬ ದೇಶವು ರಮಣೀಯವಾಗಿದೆ ಯೆಂದೂ, ಅಲ್ಲಿ ತನ್ನ ಪುತ್ರರು ನೆಲೆಸಬಹುದೆಂದೂ ತಿಳಿಸಿದನು. ಭರತನೂ ಅದು ಯೋಗ್ಯವಾದ ಸ್ಥಳವೆಂದು ನಿವೇದಿಸಿದನು. ಭರತನು ಒಪ್ಪಿದ್ದರಿಂದ ಶ್ರೀರಾಮನೂ ಅದಕ್ಕೆ ಸಂಮತಿಸಿದನು. ಅಂತೆಯೇ ಕಾರುಪಥ ದೇಶದಲ್ಲಿದ್ದ ಒಂದು ನಗರಿಯಲ್ಲಿ ಅಂಗದ ಇನ್ನೊಂದರಲ್ಲಿ ಚಂದ್ರಕೇತುವು ಇರಬೇಕೆಂದು ವ್ಯವಸ್ಥೆಯಾಯಿತು. ಅಂಗದನಿದ್ದ ಪುರಕ್ಕೆ ಅಂಗದೀಯವೆಂದೂ ಚಂದ್ರಕೇತುವಿದ್ದ ನಗರಕ್ಕೆ ಚಂದ್ರಕಾಂತ ವೆಂದೂ ಹೆಸರಾಯಿತು. ಈ ಪ್ರಕಾರವಾಗಿ ಭರತ ಲಕ್ಷ್ಮಣ ಶತ್ರುಘ್ನರ ಮಕ್ಕಳಿಗೆ ಬೇರೆ ಬೇರೆ ನಗರ ರಾಜ್ಯಗಳು ಲಭಿಸಿದವು. ಶ್ರೀರಾಮನ ಆಜ್ಞೆಯಂತೆ ಅವರೆಲ್ಲರ ಪಟ್ಟಾಭಿಷೇಕ ಕಾರ್ಯಗಳು ವಿಧಿವತ್ತಾಗಿ ನೆರವೇರಿದವು. ಲಕ್ಷ್ಮಣನು ತನ್ನ ಮಕ್ಕಳ ಬಳಿ ಕೆಲವು ಕಾಲವಿದ್ದು ಅವರಿಗೆ ರಾಜಧರ್ಮವನ್ನು ವಿಸ್ತಾರವಾಗಿ ತಿಳಿಸಿ ಅಯೋಧ್ಯೆಗೆ ಬಂದನು. ಹೀಗೆ ಮೂವರು ತಮ್ಮಂದಿರೂ ಶ್ರೀರಾಮನನ್ನು ಬಿಟ್ಟಿರಲಾರದೆ ಅವನ ಬಳಿಯಲ್ಲೇ ಇದ್ದು ಆತನ ಸೇವೆಯಲ್ಲಿ ನಿರತರಾದರು. ಪ್ರೀತಿಪಾತ್ರರಾದ ಆ ತಮ್ಮಂದಿರು ಬಳಿಯಲ್ಲಿದ್ದುದರಿಂದ ಶ್ರೀರಾಮನು ಸಂತುಷ್ಟನಾಗಿದ್ದನು. ಮಕ್ಕಳಾದ ಕುಶಲವರು ಜೊತೆಗಿದ್ದರೂ ಆತನನ್ನು ಸೀತಾವಿರಹ ಜನ್ಯವಾದ ಶೋಕವು ಬಾಧಿಸುತ್ತಲೇ ಇತ್ತು.

೨೪

ಕಾಲಪುರುಷನ ಆಗಮನ. ಲಕ್ಷ್ಮಣನ ಪರಿತ್ಯಾಗ

ರಘುನಾಥನು ಧರ್ಮಮಾರ್ಗದಿಂದ ಪ್ರಜಾಪಾಲನೆಯನ್ನು ನಡೆಸುತ್ತ ತನ್ನ ಗೃಹಕೃತ್ಯದ ಕರ್ತವ್ಯವನ್ನೂ ನೋಡಿಕೊಳ್ಳುತ್ತಲೇ ಇದ್ದನು. ಹೀಗಿರುವಾಗ ಒಂದು ದಿನ ಕಾಲಪುರುಷನು ತಾಪಸವೇಷಧಾರಿಯಾಗಿ ಅರಮನೆಗೆ ಬಂದು ಲಕ್ಷ್ಮಣನನ್ನು ಕಂಡು ''ಅಯ್ಯಾ, ನಾನೊಂದು ಕಾರ್ಯಗೌರವದಿಂದ ಬಂದಿದ್ದೇನೆಂದು ಶ್ರೀರಾಮನಿಗೆ ತಿಳಿಸು. ತೇಜಸ್ವಿಯಾದ ಮಹರ್ಷಿಯೊಬ್ಬನ ದೂತನಾಗಿ ಬಂದಿದ್ದೇನೆ'' ಎಂದನು. ಸೌಮಿತ್ರಿಯು ತ್ವರೆಯಿಂದ ಹೋಗಿ ಈ ವಿಷಯವನ್ನು ಶ್ರೀರಾಮನಿಗೆ ತಿಳಿಸಿ, ರಾಘವನ ಆದೇಶದಂತೆ ಆ ತಾಪಸನನ್ನು ಒಳಗೆ ಕರೆತಂದನು. ಶ್ರೀರಾಮನು ಆ ತಪಸ್ವಿಯನ್ನು ಸತ್ಕರಿಸಿ ಕುಶಲವನ್ನು ವಿಚಾರಿಸಿ, ''ತಪಸ್ವಿಗಳೆ, ನೀವು ಯಾರ ದೂತರಾಗಿ ಬಂದಿರುವಿರೋ ಅವರು ಕಳಿಸಿದ ಸಂದೇಶವೇನು?'' ಎಂದು ಕೇಳಿದನು.

ಆ ತಾಪಸನು ''ಶ್ರೀರಾಮ, ಅದು ಏಕಾಂತದಲ್ಲಿ ಹೇಳಬೇಕಾದ ವಿಷಯ. ಈ ಸಂದೇಶವನ್ನು ಇನ್ನೊಬ್ಬರು ಕೇಳಬಾರದು. ನಮ್ಮ ಸಂಭಾಷಣೆಯನ್ನು ಯಾರಾದರೂ ಕೇಳಿದರೆ ಅಥವಾ ನೋಡಿದರೆ ಅಂಥವರಿಗೆ ಮರಣಶಿಕ್ಷೆಯನ್ನು ವಿಧಿಸಬೇಕು ಎಂದು ಆ ಮುನಿವರ್ಯನ ಆಜ್ಞೆಯಾಗಿದೆ. ಇದು ನಿನಗೆ ಸಮ್ಮತವಾದರೆ ಹೇಳುವೆನು'' ಎಂದನು. ಕಾಕುತ್ಸ್ಥನು ಹಾಗೆಯೇ ಆಗಲೆಂದು ಹೇಳಿ ಲಕ್ಷ್ಮಣನನ್ನು ಕರೆದು ''ಲಕ್ಷ್ಮಣ, ನೀನು ದ್ವಾರದಲ್ಲಿ ಕಾವಲಾಗಿ ನಿಂತಿರು. ಕಾವಲುಗಾರರನ್ನು ಕಳಿಸಿಬಿಡು. ನನಗೂ ಈ ಮುನಿಗಳಿಗೂ ನಡೆಯುವ ಸಂಭಾಷಣೆ ರಹಸ್ಯವಾದದ್ದು. ಆ ಸಮಯದಲ್ಲಿ ಯಾರನ್ನೂ ಒಳಗೆ ಬಿಡಬಾರದು. ಯಾರಾದರೂ ಒಳಗೆ ಬಂದರೆ ಮರಣದಂಡನೆಯನ್ನು ವಿಧಿಸಲಾಗುವುದು'' ಎಂದನು. ಅದರಂತೆ ಲಕ್ಷ್ಮಣನು ಬಾಗಿಲಲ್ಲಿ ಕಾವಲಾಗಿ ನಿಂತನು. ರಾಘವನು ಆ ತಾಪಸನನ್ನು ಕುರಿತು ''ಮುನಿವರ್ಯರೆ, ನಿಮ್ಮನ್ನು ಕಳಿಸಿದವರ ಸಂದೇಶವನ್ನು ನಿಶ್ಚಿಂತೆಯಿಂದ ತಿಳಿಸಿರಿ'' ಎಂದನು.

ಆ ತಾಪಸನು ಸುತ್ತಲೂ ನೋಡಿ ಶ್ರೀರಾಮನನ್ನು ಕುರಿತು ಇಂತೆಂದನು. ''ಮಹಾರಾಜ, ಸನಾತನ ಮಹರ್ಷಿಯಾದ ಬ್ರಹ್ಮದೇವನು ನನ್ನನ್ನು ಕಳಿಸಿದ್ದಾನೆ. ಹೇ ವೀರಾಗ್ರಣಿ, ನಿನ್ನ ಪೂರ್ವಾವಸ್ಥೆಯಲ್ಲಿ – ನೀನು ಪರಬ್ರಹ್ಮವೆನಿಸಿ ಸದ್ರೂಪನಾಗಿದ್ದಾಗ ನಿನ್ನ ಮಾಯೆಯಿಂದ ಜನಿಸಿದವನು ನಾನು! ನಿನ್ನ ಪುತ್ರನೇ ಸರಿ. ಸರ್ವವನ್ನೂ ಮುಗಿಸಿಬಿಡುವ ಕಾಲಪುರುಷನೇ ನಾನು! ಪಿತಾಮಹನ ಸಂದೇಶ ಹೀಗಿದೆ.. ''ಸೌಮ್ಯ–ರಾಘವ, ನೀನು ರಾವಣನನ್ನು ಸಂಹರಿಸುವುದಕ್ಕಾಗಿ ಅವತರಿಸಿದವನು.

ದಶವರ್ಷಸಹಸ್ರಾಣಿ ದಶವರ್ಷ ಶತಾನಿ ಚ ।
ವತ್ಸ್ಯಾಮಿ ಮಾನುಷೇ ಲೋಕೇ ಪಾಲಯನ್ ಪೃಥವೀಮಿಮಾಮ್॥

ಎಂದು ಹೇಳಿದ್ದೆಯಷ್ಟೆ. ಆ ಅವಧಿಯು ಸಂಪೂರ್ಣವಾಯಿತು. ಪೂರ್ವದಲ್ಲಿ ಸಕಲ ಲೋಕಗಳನ್ನೂ ಮಾಯಾಶಕ್ತಿಯಿಂದ ನೀನಾಗಿಯೇ ಉಪಸಂಹರಿಸಿ ಮಹಾಸಾಗರದಲ್ಲಿ ಮಲಗಿರುವಾಗ ನನ್ನನ್ನು ಮೊದಲು ಸೃಷ್ಟಿಸಿದೆ. ಅನಂತರ ಮಧು-ಕೈಟಭರೆಂಬ ಇಬ್ಬರು ಜೀವಿಗಳನ್ನು ನಿರ್ಮಿಸಿದ್ದೀಯೆ. ಅವರನ್ನು ಸಂಹರಿಸಿ ಈ ಭೂಮಂಡಲವನ್ನು ಸೃಷ್ಟಿಸಿರುವೆ. ನಿನ್ನ ನಾಭಿಕಮಲದಲ್ಲಿ ಜನಿಸಿದ ನನಗೆ ಸೃಷ್ಟಿ ಕಾರ್ಯದ ಭಾರವನ್ನು ವಹಿಸಿದ್ದೀಯೆ. ಇಂಥ ನೀನು ಈ ಸಮಯದಲ್ಲಿ ನಿನ್ನ ಸಂಕಲ್ಪಮಾತ್ರದಿಂದ ದಶರಥ ಪುತ್ರನಾಗಿ ಇದ್ದೀಯೆ. ನಿನ್ನ ಸಂಕಲ್ಪದಂತೆ ದುಷ್ಟ ದಂಡನೆ, ಶಿಷ್ಟರಕ್ಷಣೆಯ ಕಾರ್ಯಗಳನ್ನು ನಡೆಸಿದ್ದೀಯೆ. ಈಗ ಪುನಃ ನಿನ್ನ ದಿವ್ಯಧಾಮಕ್ಕೆ ತೆರಳಲು ಸಮಯ ಬಂದಿದೆ. ಒಂದು ವೇಳೆ ಇನ್ನೂ ಕೆಲವು ಕಾಲ ಹೀಗೆಯೇ ಇರುವ ಇಚ್ಛೆಯಿದ್ದರೆ

ಇರಬಹುದು'' –ಎಂದು ಬ್ರಹ್ಮದೇವನು ಹೇಳಿ ಕಳಿಸಿದ್ದಾನೆ'' ಎಂದನು. ಆಗ ಶ್ರೀರಾಮನು ''ಕಾಲಪುರುಷ, ಬ್ರಹ್ಮನು ಹೇಳಿ ಕಳಿಸಿರುವ ಮಾತು ಯಥಾರ್ಥವಾದದ್ದು. ಒಳ್ಳೆಯದು. ನಾನು ಎಲ್ಲಿಂದ ಬಂದೆನೋ ಅಲ್ಲಿಗೆ ಹೊರಡುವೆನು. ಈ ವಿಷಯದಲ್ಲಿ ವಿಚಾರಿಸತಕ್ಕದ್ದಿಲ್ಲ'' ಎಂದು ನುಡಿದನು.

ಹೀಗೆ ಶ್ರೀರಾಮನೂ ಕಾಲಪುರುಷನೂ ಸಂಭಾಷಿಸುತ್ತಿರುವಾಗ ರಾಘವನನ್ನು ಸಂದರ್ಶಿಸುವುದಕ್ಕಾಗಿ ದುರ್ವಾಸಮುನಿಗಳು ಆಗಮಿಸಿದರು. ಅವರು ಲಕ್ಷ್ಮಣನನ್ನು ನೋಡಿ, ''ಲಕ್ಷ್ಮಣ, ಕೂಡಲೇ ನನಗೆ ರಾಘವನ ದರ್ಶನವಾಗಬೇಕು. ನನ್ನ ಕಾರ್ಯವು ಮೀರಿಹೋಗುತ್ತಿದೆ. ತ್ವರೆಮಾಡು'' ಎಂದರು. ಲಕ್ಷ್ಮಣನು ನಮ್ರತೆಯಿಂದ ದುರ್ವಾಸರಿಗೆ ವಂದಿಸಿ, ''ಭಗವನ್, ನಿಮ್ಮ ಕಾರ್ಯವಾವುದು? ಹೇಳೋಣವಾಗಲಿ. ನಿಮ್ಮ ಕಾರ್ಯವನ್ನು ನಾನು ಮಾಡಬಹುದೆ? ಶ್ರೀರಾಮನು ಕಾರ್ಯಾಂತರದಲ್ಲಿ ವ್ಯಾಪೃತನಾಗಿದ್ದಾನೆ. ಸ್ವಲ್ಪ ಹೊತ್ತು ಕಾಯಬೇಕಾಗಿದೆ'' ಎಂದು ನಿವೇದಿಸಿದನು. ಅದನ್ನು ಕೇಳಿ ದುರ್ವಾಸರ ಸಿಟ್ಟು ನೆತ್ತಿಗೇರಿತು. ಲಕ್ಷ್ಮಣನನ್ನು ಕೆಂಗಣ್ಣಿನಿಂದ ನೋಡುತ್ತ ''ಎಲೈ ಲಕ್ಷ್ಮಣ, ಈ ಕ್ಷಣದಲ್ಲಿಯೇ ಹೋಗಿ ನಾನು ಬಂದಿದ್ದೇನೆಂದು ರಾಮನಿಗೆ ತಿಳಿಸಿಬಿಡು. ನಾನು ಕಾಯತಕ್ಕವನಲ್ಲ. ನಿಮ್ಮ ಕುಲಗೋತ್ರಗಳನ್ನೆಲ್ಲಾ ಶಪಿಸಿ ನಾಶಮಾಡಿ ಬಿಟ್ಟೇನು! ಸಿಟ್ಟನ್ನು ತಡೆದುಕೊಳ್ಳುವ ಅಭ್ಯಾಸ ನನಗಿಲ್ಲ!'' ಎಂದು ಆರ್ಭಟಿಸಿದರು. ಆ ಘೋರವಾಕ್ಯವನ್ನು ಕೇಳಿ, 'ಅವರು ಹಾಗೆ ಮಾಡತಕ್ಕವರೇ' ಎಂದು ನಿರ್ಧರಿಸಿದ ಲಕ್ಷ್ಮಣನು ''ನನ್ನೊಬ್ಬನಿಗೆ ಮರಣವಾದರೂ ಬರಲಿ. ಸರ್ವನಾಶವಾಗದಿರಲಿ'' ಎಂದು ನಿರ್ಣಯಿಸಿ ಒಳಗೆ ಹೋಗಿ ದುರ್ವಾಸರು ಬಂದಿದ್ದಾರೆಂದು ಶ್ರೀರಾಮನಿಗೆ ನಿವೇದಿಸಿದನು. ಒಡನೆಯೇ ಶ್ರೀರಾಮನು ಕಾಲಪುರುಷನನ್ನು ಕಳಿಸಿ, ಬೇಗನೆ ಹೊರಗೆ ಬಂದು ದುರ್ವಾಸರನ್ನು ಸಂದರ್ಶಿಸಿದನು. ಕೈಮುಗಿದು ಕೊಂಡು ''ನನ್ನಿಂದ ಏನಾಗಬೇಕು?'' ಎಂದು ಕೇಳಿದನು. ದುರ್ವಾಸರು ''ರಘುನಂದನ, ನಾನು ಸಂಕಲ್ಪಿಸಿದ್ದ ದೀರ್ಘಕಾಲದ ತಪೋನಿಯಮವು ಇಂದಿಗೆ ಸಮಾಪ್ತವಾಯಿತು. ನನಗೆ ಬಹಳ ಹಸಿವಾಗಿದೆ. ಸಿದ್ಧಪಡಿಸಿದ ಭೋಜನವು ಬೇಕಾಗಿದೆ'' ಎಂದರು. ರಾಘವನು ಸಂತುಷ್ಟನಾಗಿ ಆದರದಿಂದ ಭೋಜನಶಾಲೆಗೆ ಕರೆದೊಯ್ದು ಉತ್ತಮವಾದ ಭೋಜನವನ್ನು ನೀಡಿದನು. ದುರ್ವಾಸರು ಅಮೃತೋಪಮವಾದ ಅನ್ನವನ್ನು ಭುಂಜಿಸಿ ''ರಾಮ, ಊಟವು ಸೊಗಸಾಗಿತ್ತು, ತೃಪ್ತನಾದೆನು'' ಎಂದು ಹೇಳಿ ಅರಮನೆಯಿಂದ ನಿರ್ಗಮಿಸಿದರು. ಅವರು ಹೊರಟು ಹೋದಮೇಲೆ ಕಾಲಪುರುಷನು ಹಾಕಿದ್ದ ನಿಯಮವು ಸ್ಮರಣೆಗೆ ಬಂದು ಲಕ್ಷ್ಮಣಾಗ್ರಜನಿಗೆ ಅತ್ಯಂತ ದುಃಖವಾಯಿತು.

ನಿಯಮದ ಘೋರ ಪರಿಣಾಮವನ್ನು ನೆನಸಿಕೊಂಡು ಶ್ರೀರಾಮನು ಶೋಕದಿಂದ ಬೆಂದು ಹೋದನು. ದೀನ ಚಿತ್ತನಾಗಿ ತಲೆತಗ್ಗಿಸಿ ಕುಳಿತನು. ಅವನ ಬಾಯಿಯಿಂದ ಒಂದು ಮಾತೂ ಹೊರಡದಾಯಿತು. ಕಡೆಗೆ ಕಾಲಪುರುಷನು ಹೇಳಿದ ನುಡಿಗಳನ್ನು ಸ್ಮರಿಸಿಕೊಂಡು ''ಇನ್ನು ಯಾವುದೂ ಉಳಿಯುವುದಿಲ್ಲ. ಎಲ್ಲವೂ ಮುಗಿಯಿತು'' ಎಂದುಕೊಂಡನು.

ಶ್ರೀರಾಮನು ದೈನ್ಯದಿಂದ ತಲೆತಗ್ಗಿಸಿ ಕುಳಿತಿರುವುದನ್ನು ಕಂಡು ಅದರ ಕಾರಣವನ್ನು ಊಹಿಸಿ ಲಕ್ಷ್ಮಣನು ಮುಂದೆ ಬಂದು ಇಂತೆಂದನು: ''ಮಹಾರಾಜ, ನನಗೋಸ್ಕರ ದುಃಖಿಸುವುದು ತರವಲ್ಲ. ಪೂರ್ವಜನ್ಮದ ಕರ್ಮಫಲದಿಂದ ಕಾಲಗತಿಯು ಈ ಬಗೆಯಲ್ಲಿ ಪರಿಣಮಿಸುತ್ತದೆ. ಅಣ್ಣ–ರಾಘವ, ನನ್ನನ್ನು ಸಂಹರಿಸು. ಪ್ರತಿಜ್ಞೆಯನ್ನು ಪಾಲಿಸು. ಇದುವರೆಗೂ ಸತ್ಯಧರ್ಮ.ನಿರತನಾದ ನೀನು ಅನ್ಯಥಾ ಚಿಂತಿಸುವುದು ಬೇಡ. ಮಹಾರಾಜ, ನನ್ನಲ್ಲಿ ಪ್ರೀತಿಯಿರುವುದಾದರೆ, ನಾನು ನಿನ್ನ ಅನುಗ್ರಹಕ್ಕೆ ಪಾತ್ರನಾದರೆ, ನಿಶ್ಚಿಂತೆಯಿಂದ ನನ್ನನ್ನು ವಧಿಸು. ಧರ್ಮವನ್ನು ಪಾಲಿಸು'' ಎಂದನು. ಲಕ್ಷ್ಮಣನ ನುಡಿಯನ್ನು ಕೇಳಿ ಶ್ರೀರಾಮನ ಸಕಲೇಂದ್ರಿಯಗಳೂ ಉಡುಗಿಹೋದವು. ಅವನು ದುಃಖಾರ್ತನಾಗಿ ಮಂತ್ರಿಗಳನ್ನೂ ಪುರೋಹಿತರನ್ನೂ ಕರೆಸಿ ನಡೆದುದೆಲ್ಲವನ್ನೂ ತಿಳಿಸಿದನು. ದುರ್ವಾಸರ ಆಗಮನವನ್ನೂ ತಾಪಸನು ಹಾಕಿದ್ದ ನಿಯಮವನ್ನೂ ಹೇಳಿದನು. 'ಈಗ ನಾನೇನು ಮಾಡಬೇಕು'? ಎಂದು ಅವರ ಮುಖವನ್ನು ನೋಡಿದನು. ಯಾರೂ ಮಾತಾಡಲಾರದೆ ಸುಮ್ಮನಿದ್ದರು. ಸ್ವಲ್ಪಹೊತ್ತಿನ ಮೇಲೆ ವಸಿಷ್ಠರು ''ರಾಮ, ಈ ಘೋರವಾದ ಪರಿಣಾಮವು ಘಟಿಸುವುದೆಂದು ನನಗೆ ಗೊತ್ತಿತ್ತು. ರಾಮ, ಅತ್ಯಂತ ಪ್ರಿಯರಾದವರ ಪರಿತ್ಯಾಗವು ವಧೆಗೆ ಸಮಾನವೆಂದು ಶಾಸ್ತ್ರವು ಹೇಳುತ್ತದೆ. ಆದ್ದರಿಂದ, ಪುರುಷೋತ್ತಮ, ಲಕ್ಷ್ಮಣನ ಪರಿತ್ಯಾಗವು ವಧೆಗೆ ಸಮಾನವಾದ್ದರಿಂದ ನಿನ್ನ ಸತ್ಯನಿಷ್ಠೆಗೆ ಚ್ಯುತಿಯಾಗದು'' ಎಂದರು. ವಸಿಷ್ಠರ ವಚನವು ನ್ಯಾಯಸಮ್ಮತವೆಂದು ಇತರರು ಅನುಮೋದಿಸಿದರು. ಶ್ರೀರಾಮನು ಲಕ್ಷ್ಮಣನನ್ನು ಕರೆಸಿ ಸಭಾಮಧ್ಯದಲ್ಲಿ ''ಲಕ್ಷ್ಮಣ, ನಿನಗೆ ಎಲ್ಲವೂ ತಿಳಿದಿದೆ. ನನಗೆ ಬೇರೆ ದಾರಿಯಿಲ್ಲ. ಪ್ರಿಯಜನರ ಪರಿತ್ಯಾಗವು ವಧೆಗೆ ಸಮಾನವೆಂದು ಈ ಮಹರ್ಷಿಗಳು ಹೇಳಿದ್ದಾರೆ'' ಎಂದು ತೊದಲುತ್ತ ಹೇಳಿದನು. ಆಮೇಲೆ ನಡುಗುವ ಧ್ವನಿಯಿಂದ ''ಲಕ್ಷ್ಮಣ, ನಿನ್ನನ್ನು ಪರಿತ್ಯಜಿಸಿದ್ದೇನೆ'' ಎಂದು ಹೇಳಿ ಸುರಿಯುತ್ತಿದ್ದ ಕಂಬನಿಯನ್ನು ಕೈಗಳಿಂದ ಮುಚ್ಚಿಕೊಂಡನು. ಲಕ್ಷ್ಮಣನ ಕಣ್ಣಿಂದ ಕಂಬನಿ ಉಕ್ಕಿತು. ಒಡನೆಯೇ ಆತನು ಅಣ್ಣನಿಗೆ ನಮಸ್ಕರಿಸಿ ಹೊರಟುಹೋದನು. ತನ್ನ ಮನೆಯನ್ನೂ ಪ್ರವೇಶಿಸಲಿಲ್ಲ, ಪತ್ನಿಯಾದ ಊರ್ಮಿಳೆಯನ್ನೂ ಕಾಣಲಿಲ್ಲ, ನೇರವಾಗಿ ಸರಯೂನದಿಯ ಬಳಿಗೆ ಹೋಗಿ

ಶುದ್ಧಾಚಮನ ಮಾಡಿ ನದೀತೀರದಲ್ಲಿ ಕುಳಿತನು. ಧರ್ಮದೇವತೆಗೆ ಕೈಮುಗಿದು ಸಕಲೇಂದ್ರಿಯದ್ವಾರಗಳನ್ನೂ ನಿರೋಧಿಸಿ ಶ್ವಾಸೋಚ್ಛ್ವಾಸಗಳನ್ನು ನಿಗ್ರಹಿಸಿದನು. ಅವನು ಯೋಗಯುಕ್ತನಾಗಿ ಸಮಾಧಿ ಸ್ಥಿತಿಯನ್ನು ಏರಲಾಗಿ ಇಂದ್ರಾದಿದೇವತೆಗಳೂ, ದೇವರ್ಷಿಗಳೂ, ಅಪ್ಸರೆಯರೂ ಅವನ ಮೇಲೆ ಹೂಮಳೆಗರೆದರು. ದೇವೇಂದ್ರನು ಯಾವ ಮನುಜನಿಗೂ ಕಾಣಿಸದಂತೆ ಲಕ್ಷ್ಮಣನನ್ನು ಎತ್ತಿಕೊಂಡು ಸ್ವರ್ಗಲೋಕ ವನ್ನಡರಿದನು. ಈ ಪ್ರಕಾರವಾಗಿ ವಿಷ್ಣುವಿನ ಚತುರ್ಥಾಂಶವು ಭೂಲೋಕದಿಂದ ನಿರ್ಗಮಿಸಿತು.

೨೫

ಮಹಾಪ್ರಸ್ಥಾನ. ಮಂಗಳ

ಶ್ರೀರಾಮನು ಲಕ್ಷ್ಮಣನನ್ನು ವಿಸರ್ಜಿಸಿದಮೇಲೆ ಶೋಕಭಾರದಿಂದ ಕುಸಿದುಹೋದನು. ಅವನು ಮಂತ್ರಿಪುರೋಹಿತರನ್ನೂ ಪೌರರನ್ನೂ ಬರಮಾಡಿ ಅವರನ್ನು ಕುರಿತು, ''ಈ ದಿನ ಧರ್ಮ ವತ್ಸಲನಾದ ಭರತನಿಗೆ ಅಯೋಧ್ಯಾಪತಿ ಯೆಂದು ಪಟ್ಟಾಭಿಷೇಕ ಮಾಡಿ ನಾನು ಕಾಡಿಗೆ ಹೊರಟು ಹೋಗುವೆನು. ತಡ ಮಾಡದೆ ಪಟ್ಟಾಭಿಷೇಕದ ಸಾಮಗ್ರಿಗಳನ್ನು ಸಜ್ಜುಗೊಳಿಸಿರಿ. ಈ ದಿನವೇ ಲಕ್ಷ್ಮಣನು ಹೋದ ದಾರಿಯನ್ನು ಹಿಡಿಯುವೆನು'' ಎಂದನು. ಈ ಮಾತನ್ನು ಕೇಳಿ ಸಕಲ ಪ್ರಜೆಗಳೂ ಶೋಕದಿಂದ ತಲೆತಗ್ಗಿಸಿದರು. ಅವರಿಗೆ ಪ್ರಾಣವೇ ಹೋದಂತಾಯಿತು. ಭರತನು ದಿಕ್ಕುಗಾಣದೆ ''ನನಗೇಕೆ ಈ ರಾಜ್ಯ ಬೇಕು?'' ಎಂದು ನುಡಿದು ಶ್ರೀರಾಮನನ್ನು ನೋಡಿ ಇಂತೆಂದನು : ''ಮಹಾರಾಜ, ಸತ್ಯವಾಗಿ ಆಣೆಯಿಟ್ಟು ಹೇಳುತ್ತೇನೆ. ನೀನಿಲ್ಲದೆ ಸ್ವರ್ಗ ಲೋಕದ ಭೋಗವೂ ನನಗೆ ಬೇಡ. ಈ ರಾಜ್ಯವೂ ನನಗೆ ಬೇಡ. ನಿನ್ನ ಪುತ್ರರಾದ ಕುಶಲವರಿಗೆ ಪಟ್ಟಾಭಿಷೇಕ ಮಾಡು. ವೀರನಾದ ಕುಶನು ಕೋಸಲ ರಾಜ್ಯಕ್ಕೂ ಲವನು ಉತ್ತರಕೋಸಲ ರಾಜ್ಯಕ್ಕೂ ಅಧಿಪತಿಗಳಾಗಲಿ. ದೂತರು ತ್ವರೆಯಿಂದ ಹೋಗಿ ಶತ್ರುಘ್ನನನ್ನು ಕರೆತರುವಂತೆ ತಿಳಿಸು'' ಎಂದನು. ಪೌರರೆಲ್ಲರೂ ಯಾವ ಮಾತನ್ನೂ ಆಡಲಾರದೆ ಶೋಕಾವಿಷ್ಟ ರಾಗಿದ್ದರು. ವಸಿಷ್ಠಮುನಿಗಳು ''ವತ್ಸ-ರಾಮ, ಈ ಪ್ರಜೆಗಳು ಶೋಕ ಸಂತಪ್ತರಾಗಿರುವುದನ್ನು ನೋಡು. ಅವರ ಈಪ್ಸಿತವೇನೆಂಬುದನ್ನು ತಿಳಿದು ಅದರಂತೆ ಮಾಡು'' ಎಂದರು. ರಾಘವನು ಅವರ ಬಯಕೆ ಏನೆಂದು ಕೇಳಿದನು. ಆಗ ಪ್ರಜೆಗಳು ''ಮಹಾರಾಜ, ನೀನು ಎಲ್ಲಿಗೆ ಹೋಗುವೆಯೋ ಅಲ್ಲಿಗೆ ನಾವೂ ನಿನ್ನನ್ನು ಅನುಸರಿಸಿ ಬರುತ್ತೇವೆ. ಇದಕ್ಕೆ ನೀನು ಅನುಮತಿಯನ್ನು ಕೊಡಬೇಕು. ನಿನ್ನೊಡನೆ ಹೋಗಬೇಕೆಂಬುದು ನಮ್ಮ

ಅಂತರಂಗದಲ್ಲಿ ಸದಾ ನೆಲೆಸಿರುವ ಬಯಕೆ'' ಎಂದರು. ಪ್ರಜೆಗಳ ದೃಢ ಭಕ್ತಿಯನ್ನು ಕಂಡು ಶ್ರೀರಾಮನು ಅದಕ್ಕೆ ಸಮ್ಮತಿಸಿದನು.

ಅನಂತರ ಆ ದಿನವೇ ಕೋಸಲ ರಾಜ್ಯವನ್ನು ಕುಶನಿಗೂ ಉತ್ತರ ಕೋಸಲವನ್ನು ಲವನಿಗೂ ಕೊಟ್ಟು ಪಟ್ಟಗಟ್ಟಿದನು. ಆಮೇಲೆ ವೀರಾಗ್ರಣಿಗಳಾದ ಆ ಮಕ್ಕಳನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಲಿಂಗಿಸಿ ಮತ್ತೆ ಮತ್ತೆ ಅವರ ಶಿರಸ್ಸನ್ನು ಪ್ರೀತಿಯಿಂದ ಆಘ್ರಾಣಿಸಿದನು. ಅವರಿಬ್ಬರಿಗೂ ಯಥೋಚಿತವಾಗಿ ರಾಜಧರ್ಮ ವನ್ನು ಬೋಧಿಸಿ ''ಧರ್ಮ ನಿಷ್ಠೆಯಿಂದ ನಿಮ್ಮ ನಿಮ್ಮ ರಾಜ್ಯಗಳನ್ನು ಪರಿಪಾಲಿಸಿರಿ'' ಎಂದನು. ಶ್ರೀರಾಮನ ಆಜ್ಞೆಯಂತೆ ದೂತರು ಶತ್ರುಘ್ನನ ಬಳಿಗೆ ತೆರಳಿದರು.

ಆ ದೂತರು ದಾರಿಯಲ್ಲೆಲ್ಲೂ ನಿಲ್ಲದೆ ತ್ವರೆಯಿಂದ ಮಧುರೆಗೆ ಹೋಗಿ ಅಯೋಧ್ಯೆಯಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಶತ್ರುಘ್ನನಿಗೆ ತಿಳಿಸಿದರು. ಲಕ್ಷ್ಮಣನ ಪರಿತ್ಯಾಗ, ಕುಶಲವರ ಪಟ್ಟಾಭಿಷೇಕ, ಕುಶಾವತಿಯೆಂಬ ನಗರವನ್ನು ಕುಶನಿಗೆ ಗೊತ್ತು ಮಾಡಿರುವುದು, ಶ್ರಾವಸ್ತಿಯೆಂಬ ನಗರವನ್ನು ಲವನಿಗೆ ಗೊತ್ತು ಮಾಡಿರುವುದು, ಮಹಾಪ್ರಸ್ಥಾನದ ನಿಶ್ಚಯ–ಇವೆಲ್ಲವನ್ನೂ ಶತ್ರುಘ್ನನಿಗೆ ನಿವೇದಿಸಿದರು. ದೂತರ ನುಡಿಯನ್ನು ಕೇಳಿ ಶತ್ರುಘ್ನನು ಘೋರವಾದ ಮುಕ್ತಾಯದ ಕಾಲವು ಬಂದಿತೆಂದು ತಿಳಿದು ವಿಷಣ್ಣನಾದನು. ಮಂತ್ರಿಪುರೋಹಿತರನ್ನು ಬರಮಾಡಿಕೊಂಡು ತಾನು ಅಯೋಧ್ಯೆಗೆ ಹೋಗುವುದಾಗಿಯೂ ಪುನಃ ಬರುವ ಸಂಭವವಿಲ್ಲವಾಗಿಯೂ ತಿಳಿಸಿ, ತನ್ನ ಇಬ್ಬರು ಮಕ್ಕಳಿಗೆ ಪಟ್ಟಾಭಿಷೇಕ ಮಾಡಿದನು. ಹಿರಿಯನಾದ ಸುಬಾಹುವಿಗೆ ಮಧುರೆಯೂ (ಮಧುಪುರಿಯೂ) ಎರಡನೆಯ ಶತ್ರುಘಾತಿಗೆ ವೈದಿಶನಗರವೂ ಲಭಿಸಿದವು. ಸೇನೆಯನ್ನೂ ಧನಭಂಡಾರದಲ್ಲಿದ್ದ ಐಶ್ವರ್ಯವನ್ನೂ ಅವರಿಬ್ಬರಿಗೂ ಸಮವಾಗಿ ಹಂಚಿಕೊಟ್ಟು ಹಿತೋಪದೇಶವನ್ನು ಮಾಡಿ ನೇರವಾಗಿ ಅಯೋಧ್ಯೆಗೆ ಪ್ರಯಾಣ ಮಾಡಿದನು. ತೆಳುವಾದ ನಾರು ಬಟ್ಟೆಯನ್ನುಟ್ಟು ಮುನಿಜನರೊಡನೆ ಮಂಡಿಸಿದ್ದ ತೇಜೋಮೂರ್ತಿಯಾದ ಶ್ರೀರಾಮ ನನ್ನು ಸಂದರ್ಶಿಸಿ ಅಭಿವಾದನೆ ಮಾಡಿದನು. ಶ್ರೀರಾಮನನ್ನು ಕುರಿತು ''ಅಣ್ಣ, ನನ್ನ ಮಕ್ಕಳಿಗೆ ಅನುರೂಪವಾಗಿ ಪಟ್ಟಾಭಿಷೇಕವನ್ನು ಮಾಡಿಬಂದಿದ್ದೇನೆ. ನಿನ್ನನ್ನು ಹಿಂಬಾಲಿಸಲು ನಿಶ್ಚಯಿಸಿದ್ದೇನೆಂದು ತಿಳಿ. ಇದಕ್ಕೆ ಪ್ರತಿಯಾಗಿ ಒಂದು ಮಾತನ್ನೂ ನೀನು ಹೇಳಬಾರದು'' ಎಂದನು. ಶತ್ರುಘ್ನನ ದೃಢ ನಿಶ್ಚಯವನ್ನು ಕಂಡು ರಾಘವನು 'ಆಗಲಿ' ಎಂದನು. ಅಷ್ಟರಲ್ಲಿ ಕಾಮರೂಪಿಗಳಾದ ವಾನರರೂ, ಭಲ್ಲೂಕರೂ, ರಾಕ್ಷಸರೂ ಬಂದಿಳಿದರು. ವಿಭೀಷಣನೂ ಸುಗ್ರೀವನೂ ಬಂದರು. ಅವರೆಲ್ಲರಿಗೂ

ಶ್ರೀರಾಮನ ಮಹಾಪ್ರಸ್ಥಾನದ ಸುದ್ದಿ ಬಂದು ಮುಟ್ಟಿತು. ಸುಗ್ರೀವನು ''ಮಹಾರಾಜ, ವೀರನಾದ ಅಂಗದನಿಗೆ ರಾಜ್ಯದಲ್ಲಿ ಅಭಿಷೇಕ ಮಾಡಿ ಬಂದಿದ್ದೇನೆ. ನಿನ್ನ ಹಿಂದೆ ಬರಲು ನಿಶ್ಚಯಿಸಿದ್ದೇನೆ'' ಎಂದನು. ರಾಘವನು ಆ ವಾನರೇಂದ್ರನ ಸ್ನೇಹಾತಿಶಯ ವನ್ನು ಸ್ಮರಿಸಿಕೊಳ್ಳುತ್ತ ''ಮಿತ್ರ–ಸುಗ್ರೀವ, ನಿನ್ನನ್ನು ಅಗಲಿ ಹೋಗಲು ನನಗೂ ಇಷ್ಟವಿಲ್ಲ'' ಎಂದನು. ಅನಂತರ ವಿಭೀಷಣನನ್ನು ನೋಡಿ ''ವಿಭೀಷಣ, ನೀನು ಲಂಕೆಯಲ್ಲಿ ಚಿರಂಜೀವಿಯಾಗಿರುವೆ. ಚಂದ್ರಸೂರ್ಯರಿರುವವರೆಗೆ, ನನ್ನ ಕಥೆಯು ಲೋಕದಲ್ಲಿ ಪ್ರಚುರವಾಗಿರುವವರೆಗೆ, ಲಂಕೆಯ ಒಡೆತನವನ್ನು ನಡೆಸುತ್ತಿರು. ರಾಕ್ಷಸೇಂದ್ರ, ಪ್ರತಿಯಾಗಿ ಉತ್ತರವನ್ನು ಹೇಳಬೇಡ. ಇಕ್ಷ್ವಾಕುಕುಲ ದೇವತೆಯಾದ ಜಗನ್ನಾಥನನ್ನು ನೀನು ಆರಾಧಿಸುತ್ತಿರು'' ಎಂದು ಹೇಳಿದನು. ವಿಭೀಷಣನು ಶ್ರೀರಾಮನ ಆಜ್ಞೆಯನ್ನು ಪರಿಗ್ರಹಿಸಿ 'ತಥಾಸ್ತು' ಎಂದನು. ಆಮೇಲೆ ಕಾಕುತ್ಸ್ಥನು ಹನುಮಂತನ ಕಡೆಗೆ ತಿರುಗಿ ''ಆಂಜನೇಯ, ಈ ಲೋಕದಲ್ಲಿ ನನ್ನ ಕಥೆಗಳು ಪ್ರಚಾರದಲ್ಲಿರುವವರೆಗೆ ನೀನು ಜೀವಿಸಲು ಬಯಸಿದ್ದೀಯೆ. ಅದು ನೆನಪಿರಲಿ. ಪ್ರತಿಜ್ಞೆಯನ್ನು ಅಳಿಸಬೇಡ'' ಎಂದನು. ಹನುಮಂತನು ಆನಂದದಿಂದ ''ಶ್ರೀರಾಮ, ಪಾವನವಾದ ನಿನ್ನ ಕಥೆ ಲೋಕದಲ್ಲಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ನಿನ್ನನ್ನು ಸ್ಮರಿಸಿಕೊಳ್ಳುತ್ತ ಜೀವಿಸಿರುವೆನು'' ಎಂದು ವಿಜ್ಞಾಪಿಸಿದನು. ಅನಂತರ ಜಾಂಬವಂತನಿಗೂ, ಮೈಂದ ದ್ವಿವಿದರಿಗೂ ಅದೇ ಮಾತನ್ನು ತಿಳಿಸಿ ''ಮುಂದೆ ಪ್ರಳಯವಾಗುವ ಪರ್ಯಂತ ನೀವು ಜೀವಿಸಿರಿ'' ಎಂದು ಹೇಳಿದನು. ಉಳಿದ ಭಲ್ಲೂಕ ವಾನರಾದಿಗಳಿಗೆ ''ನಿಮ್ಮ ಇಷ್ಟಾನುಸಾರವಾಗಿ ನನ್ನೊಡನೆ ನೀವು ಬರಬಹುದು'' ಎಂದು ಸೂಚಿಸಿದನು.

ರಾತ್ರಿ ಕಳೆದು ಪ್ರಭಾತವಾಯಿತು. ವಸಿಷ್ಠಮಹರ್ಷಿಗಳು ಶ್ರೀರಾಮನು ಮಹಾಪ್ರಸ್ಥಾನಕ್ಕೆ ವಿಹಿತವಾದ ಸಕಲ ಧಾರ್ಮಿಕ ಕೃತ್ಯಗಳನ್ನೂ ಸಾಂಗವಾಗಿ ನಡೆಸಿದರು. ಶ್ರೀರಾಮನು ಸೂಕ್ಷ್ಮಾಂಬರಧಾರಿಯಾಗಿ ಕೈಯಲ್ಲಿ ದರ್ಭೆಗಳನ್ನು ಹಿಡಿದು ಓಂ ಕಾರವನ್ನು ಜಪಿಸುತ್ತ ಅರಮನೆಯಿಂದ ನಿರ್ಗಮಿಸಿದನು. ಯಾರೊಡನೆಯೂ ಒಂದು ಮಾತನ್ನೂ ಆಡದೆ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಪ್ರಜ್ವಲಿಸುವ ಭಾಸ್ಕರನಂತೆ ಬೆಳಗುತ್ತ ರಾಜವೀಥಿಯಲ್ಲಿ ಹೊರಟನು. ಅವನ ಎದುರುಗಡೆ ಅಗ್ನಿಹೋತ್ರವೂ ವಾಜಪೇಯದ ಛತ್ರವೂ ವಿಪ್ರರೊಡನೆ ಸಾಗಿದವು. ಭರತನೂ ಶತ್ರುಘ್ನನೂ ಪತ್ನೀ ಸಮೇತರಾಗಿ ಹೊರಟು ಶ್ರೀರಾಮನ ಹಿಂದೆ ನಡೆದರು. ಅವರೊಡನೆ ಲಕ್ಷ್ಮಣನ ಪತ್ನಿಯಾದ ಊರ್ಮಿಳೆಯೂ ಅಂತಃಪುರಸ್ತ್ರೀಯರೂ ಹೋದರು. ಮಹಾತ್ಮರಾದ ಸಕಲವಿಪ್ರರೂ ಅಗ್ನಿಹೋತ್ರದೊಡನೆ ಪತ್ನೀ

ಸಮೇತರಾಗಿ ಕಾಕುತ್ಸ್ಥನನ್ನು ಹಿಂಬಾಲಿಸಿದರು. ಆತನು ಗುಣಗಳಿಗೆ ಮುಗ್ಧರಾದ ಸಮಸ್ತ ಪ್ರಜೆಗಳೂ ಅವನ ಹಿಂದೆ ಸಾಗಿದರು. ವಾನರರೂ ಸ್ನಾನಮಾಡಿ ಆನಂದದಿಂದ ಹಿಗ್ಗುತ್ತ ಹಿಂಬಾಲಿಸಿ ನಡೆದರು. ಅಂತೆಯೇ ಭಲ್ಲೂಕರೂ ರಾಕ್ಷಸರೂ ಹೊರಟರು. ತಿರ್ಯಗ್ಜಂತುಗಳೂ ಸಹ ಶ್ರೀರಾಮನೊಡನೆ ನಡೆದವು.

ರಘುನಂದನನು ಒಂದೂವರೆ ಯೋಜನದಷ್ಟು ಪ್ರಯಾಣಮಾಡಿ ಪಶ್ಚಿಮಾಭಿಮುಖವಾಗಿದ್ದ ಸರಯೂ ನದಿಯನ್ನು ವೀಕ್ಷಿಸಿದನು. ಆ ಪುಣ್ಯನದಿಯ ಸಮೀಪಕ್ಕೆ ಅವರೆಲ್ಲರೂ ಬರಲಾಗಿ ಲೋಕಪಿತಾಮಹನಾದ ಬ್ರಹ್ಮದೇವನು ದೇವತೆಗಳಿಂದಲೂ ದೇವರ್ಷಿಗಳಿಂದಲೂ ಸಹಿತವಾಗಿ ಆಗಮಿಸಿದನು. ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸಿದರು. ಅಪ್ಸರೆಯರು ಹಾಡುತ್ತಿದ್ದರು. ಗಂಧರ್ವರು ದಿವ್ಯದುಂದುಭಿಗಳನ್ನು ನುಡಿಸುತ್ತಿದ್ದರು. ಶ್ರೀರಾಮನು ಕಾಲ್ನಡಿಗೆಯಿಂದ ಸರಯೂ ನದೀ ಜಲದಲ್ಲಿ ಇಳಿದು ಹೋದನು. ಆಗ ಬ್ರಹ್ಮದೇವನು ಅಂತರಿಕ್ಷದಲ್ಲಿ ನಿಂತು ''ಹೇ ಸ್ವಾಮಿ, ಜನರು ನಿನ್ನ ನಿಜಸ್ವರೂಪವನ್ನು ಅರಿಯರು. ಮಾಯೆಯ ಅನುಗ್ರಹವಿಲ್ಲದೆ ಈ ಜನರು ನಿನ್ನನ್ನು ಅರಿಯಲಾರರು'' ಎಂದು ವಿಜ್ಞಾಪಿಸಿದನು. ಶ್ರೀರಾಮನು ಬ್ರಹ್ಮನನ್ನು ನೋಡಿ 'ಹೇ ಬ್ರಹ್ಮದೇವ, ಇವರೆಲ್ಲರೂ ಪ್ರೀತಿಯಿಂದ ನನ್ನನ್ನು ನಂಬಿ ಬಂದವರು. ಇವರು ನನ್ನ ಭಕ್ತರು. ನನಗಾಗಿ ಸರ್ವಸ್ವವನ್ನೂ ತ್ಯಜಿಸಿದ್ದಾರೆ. ನನ್ನೊಡನೆ ಬಂದ ಈ ಸಮಸ್ತರಿಗೂ ಪುಣ್ಯಲೋಕವನ್ನು ಕರುಣಿಸು'' ಎಂದನು. ಬ್ರಹ್ಮನು ''ದೇವ, ನಿನ್ನ ಆಜ್ಞೆಯಂತಾಗಲಿ. ಇವರೆಲ್ಲರಿಗೂ ಸಾಂತಾನಿಕವೆಂಬ ಪುಣ್ಯಲೋಕವು ದೊರೆಯುವುದು'' ಎಂದನು. ಒಡನೆಯೇ ಶ್ರೀರಾಮನು ತನ್ನ ತಮ್ಮಂದಿರೊಡನೆ ಸರಯೂಜಲದಲ್ಲಿ ಮುಳುಗಿ ವೈಷ್ಣವತೇಜಸ್ಸನ್ನು ಪ್ರವೇಶಿಸಿದನು. ಯಾವ ಯಾವ ದೇವತೆಗಳಿಂದ ವಾನರರೂ ಭಲ್ಲೂಕರೂ ಜನಿಸಿದ್ದರೋ ಅವರು ತಮ್ಮ ತಮ್ಮ ದೇವತಾರೂಪದಲ್ಲಿ ಐಕ್ಯವಾದರು. ಎಲ್ಲರೂ ನೋಡುತ್ತಿರುವಾಗ ಸುಗ್ರೀವನು ಸೂರ್ಯಮಂಡಲದಲ್ಲಿ ಲೀನನಾದನು. ಇತರ ವಾನರನಾಯಕರು ಜಲದಲ್ಲಿ ಮುಳುಗಿ ತಮ್ಮ ಪಿತೃಗಳಲ್ಲಿ ಲೀನರಾದರು. ಉಳಿದವರೆಲ್ಲರಿಗೂ ಸಾಂತಾನಿಕವೆಂಬ ಪುಣ್ಯಲೋಕವು ಲಭಿಸಿತು. ಬ್ರಹ್ಮನು ಸಕಲ ದೇವತೆಗಳೊಡನೆ ತನ್ನ ಸ್ಥಳಕ್ಕೆ ನಿರ್ಗಮಿಸಿದನು.

ಉತ್ತರಕಾಂಡ ಸಹಿತವಾಗಿ ಶ್ರೀಮದ್ರಾಮಾಯಣವೆಂಬ ಪವಿತ್ರವಾದ ಇತಿಹಾಸವು ಇಲ್ಲಿಗೆ ಸಮಾಪ್ತವಾಗುತ್ತದೆ. ವಾಲ್ಮೀಕಿ ಮುನಿಗಳಿಂದ ಪ್ರಣೀತವಾದ ಈ ಆಖ್ಯಾನವು ಆಯುಷ್ಕರವೂ, ಸೌಭಾಗ್ಯದಾಯಕವೂ, ಪಾಪನಾಶಕವೂ ಆಗಿದೆ. ಇದು

ವೇದಕ್ಕೆ ಸಮಾನವಾದದ್ದು. ಇದನ್ನು ಪಠಿಸತಕ್ಕವರು ತಮ್ಮ ತಮ್ಮ ಇಷ್ಟಾರ್ಥಗಳನ್ನು ನಿಶ್ಚಯವಾಗಿಯೂ ಪಡೆಯುವರು.

ರಮ್ಯವಾಗಿದ್ದ ಅಯೋಧ್ಯಾನಗರಿಯು ಬಹುವರ್ಷಗಳವರೆಗೆ ಜನಶೂನ್ಯ ವಾಗಿತ್ತು. ಅದು ಋಷಭನೆಂಬ ರಾಜನ ಕಾಲದಲ್ಲಿ ಮತ್ತೆ ಪ್ರಜೆಗಳಿಂದ ತುಂಬಿ ಕಂಗೊಳಿಸುವುದು. ವಾಲ್ಮೀಕಿ ಮುನಿಗಳು ರಚಿಸಿದ ಈ ಆದಿಕಾವ್ಯವನ್ನು ಶ್ರದ್ಧಾಭಕ್ತಿ ಯುತರಾಗಿ ಆಲಿಸಬೇಕು. ಯಾವನು ಭಕ್ತಿಯಿಂದ ಶ್ರೀರಾಮಚರಿತವನ್ನು ನಿತ್ಯವೂ ಓದುವನೋ ಅಥವಾ ಕೇಳುವನೋ ಆತನಿಗೆ ಸಕಲ ಕಲ್ಯಾಣ ಸಂಪತ್ತುಗಳೂ ಸಿದ್ಧಿಸುತ್ತವೆ. ಈ ರೀತಿಯಲ್ಲಿ ಪುರಾತನವಾದ ಒಂದು ಪುಣ್ಯಚರಿತ್ರೆಯು ನಡೆಯಿತು. ನಿಮ್ಮೆಲ್ಲರಿಗೂ ಮಂಗಳವಾಗಲಿ.

''ಬಲಂ ವಿಷ್ಣೋಃ ಪ್ರವರ್ಧತಾಂ'' ಎಂದು ಎಲ್ಲರೂ ಶ್ರದ್ಧೆಯಿಂದ ಘೋಷಿಸಿರಿ.
ಬಲಂ ವಿಷ್ಣೋಃ ಪ್ರವರ್ಧತಾಮ್.

ಶ್ರೀರಾಮಚಂದ್ರಾರ್ಪಣಮಸ್ತು

* * *

ಯಃ ಪೃಥ್ವೀಭರವಾರಣಾಯ ದಿವಿಜೈಃ ಸಂಪ್ರಾರ್ಥಿತಶ್ಚಿನ್ಮಯಃ
ಸಂಜಾತಃ ಪೃಥಿವೀತಲೇ ರವಿಕುಲೇ ಮಾಯಾಮನುಷ್ಯೋಽವ್ಯಯಃ ।
ನಿಶ್ಚಕ್ರಂ ಹತರಾಕ್ಷಸಃ ಪುನರಗಾದ್ ಬ್ರಹ್ಮತ್ವಮಾದ್ಯಂ ಸ್ಥಿರಾಂ
ಕೀರ್ತಿಂ ಪಾಪಹರಾಂ ವಿಧಾಯ ಜಗತಾಂ ತಂ ಜಾನಕೀಶಂ ಭಜೇ ॥

ವೇದವೇದಾಂತವೇದ್ಯಾಯ ಮೇಘಶ್ಯಾಮಲಮೂರ್ತಯೇ ।
ಪುಂಸಾಂ ಮೋಹನರೂಪಾಯ ಪುಣ್ಯಶ್ಲೋಕಾಯ ಮಂಗಲಮ್ ॥

— * —

ಪರಿಶಿಷ್ಟ

ಉತ್ತರಕಾಂಡದಲ್ಲಿ ಕೆಲವು ಕಥೆಗಳು ಅನಾವಶ್ಯಕವಾಗಿ ಸೇರಿಕೊಂಡಿವೆ. ಅವು ಪ್ರಕ್ಷಿಪ್ತಗಳೆಂದು ಹೇಳಬಹುದು. ವಾಚಕರಿಗೆ ಉಪಯೋಗವಾದೀತೆಂದು ಆ ಕಥೆಗಳನ್ನು ಇಲ್ಲಿ ಸಂಗ್ರಹಿಸಿ ಬರೆಯಲಾಗಿದೆ.

ಲಕ್ಷ್ಮಣನು ಸೀತಾದೇವಿಯನ್ನು ಗಂಗಾತೀರದಲ್ಲಿ ಪರಿತ್ಯಜಿಸಿ ಬಂದು, ಶೋಕಾಕುಲನಾಗಿದ್ದ ಶ್ರೀರಾಮನಿಗೆ ಸಾಂತ್ವನದ ಮಾತುಗಳನ್ನು ಹೇಳುತ್ತಾನೆ. ಅನಂತರ ಶ್ರೀರಾಮನು ''ಲಕ್ಷ್ಮಣ, ಈಗ ನಾಲ್ಕು ದಿನಗಳಿಂದ ನಾನು ರಾಜಕಾರ್ಯದಲ್ಲಿ ತೊಡಗಿಲ್ಲ. ಇನ್ನು ಕಾರ್ಯಪ್ರವೃತ್ತನಾಗುತ್ತೇನೆ. ರಾಜನು ಕರ್ತವ್ಯವಿಮುಖನಾಗುವುದು ಅಧರ್ಮ. ಈ ವಿಷಯದಲ್ಲಿ ಒಂದು ವೃತ್ತಾಂತವು ಪ್ರಸಿದ್ಧವಾಗಿದೆ. ಅದನ್ನು ಹೇಳುತ್ತೇನೆ, ಕೇಳು'' ಎಂದು ನುಡಿದು ಮುಂದಿನ ವೃತ್ತಾಂತವನ್ನು ಹೇಳುತ್ತಾನೆ.

೧. ನೃಗರಾಜನಿಗೆ ಶಾಪ ಬಂದ ವೃತ್ತಾಂತ

ನೃಗನೆಂಬ ವಿಖ್ಯಾತನಾದ ಭೂಪಾಲನೊಬ್ಬನು ಧರ್ಮನಿಷ್ಠನೂ ದಾನಿಯೂ ಆಗಿದ್ದನು. ಅವನು ಒಮ್ಮೆ ಪುಷ್ಕರಕ್ಷೇತ್ರದಲ್ಲಿ ಬಹುಸಂಖ್ಯೆಯ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ಆ ಸಮಯದಲ್ಲಿ ಒಬ್ಬ ಬಡಬ್ರಾಹ್ಮಣನಿಗೆ ದಾನ ಮಾಡಿದ ಹಸು ತನ್ನ ಕರುವಿನೊಡನೆ ತಪ್ಪಿಸಿಕೊಂಡಿತು. ಈ ಬಡಬ್ರಾಹ್ಮಣನು ಅದನ್ನು ಹುಡುಕುತ್ತಲೇ ಇದ್ದನು. ಕೆಲವು ವರ್ಷಗಳ ಮೇಲೆ ಆ ಗೋವು ಕನಖಲವೆಂಬ ಗ್ರಾಮದಲ್ಲಿದ್ದ ಒಬ್ಬ ಬ್ರಾಹ್ಮಣನ ಮನೆಯಲ್ಲಿದ್ದುದು ಪತ್ತೆಯಾಯಿತು. ಈ ಬ್ರಾಹ್ಮಣನು ಹೋಗಿ ಮನೆಯ ಒಡೆಯನಾದ ಬ್ರಾಹ್ಮಣನನ್ನು ಕುರಿತು ''ಸೌಮ್ಯ, ಈ ಹಸುವನ್ನು ನೃಗರಾಜನು ನನಗೆ ದಾನ ಮಾಡಿದ್ದನು. ಇದು ಇತರ ಗೋವುಗಳಲ್ಲಿ ಸೇರಿ ತಪ್ಪಿಸಿಕೊಂಡಿತು. ಈ ಗೋವು ನನ್ನದು. ನನಗೆ ಕೊಡು'' ಎಂದನು. ಮನೆಯೊಡೆಯನಾದ ಬ್ರಾಹ್ಮಣನು ಒಪ್ಪಲಿಲ್ಲ. ಈ ವಿವಾದದ ಪರಿಹಾರಕ್ಕಾಗಿ ಆ ಇಬ್ಬರು ವಿಪ್ರರೂ ನೃಗರಾಜನ ಬಳಿಗೆ ಹೋದರು. ಅರಮನೆಯ ಬಾಗಿಲಲ್ಲಿ ಎಷ್ಟೋ ಹಗಲು ರಾತ್ರಿ ಕಾದರೂ ರಾಜನ ದರ್ಶನವಾಗಲಿಲ್ಲ. ಆಗ ಈ ದ್ವಿಜೋತ್ತಮರು ಬೇಸತ್ತು ಕ್ರುದ್ಧರಾಗಿ ''ಎಲೈ ನೃಗರಾಜ, ನಾವು ಕಾರ್ಯಾರ್ಥಿಗಳಾಗಿ ಬಂದು ಅನೇಕ ದಿನಗಳಾದರೂ ನಮಗೆ ದರ್ಶನವನ್ನು ಕೊಡದೇ ಇದ್ದೀಯೆ. ನೀನು ಓತಿಕೇತನಾಗಿ ಸರ್ವರಿಗೂ ಅದೃಶ್ಯನಾಗಿಯೇ ಇರು'' ಎಂದು ಶಪಿಸಿಬಿಟ್ಟರು. ನೃಗರಾಜನಿಗೆ ಇದು ಗೊತ್ತಾಗಿ

ಕ್ಷಮೆಯನ್ನು ಯಾಚಿಸಿದನು. ಆಗ ಈ ಬ್ರಾಹ್ಮಣರು ''ರಾಜ, ಮುಂದೆ ಯದುವಂಶದಲ್ಲಿ ವಾಸುದೇವನೆಂಬ ಒಬ್ಬ ಮಹಾಪುರುಷನು ಅವತರಿಸುವನು. ಅವನು ಈ ಶಾಪವನ್ನು ವಿಮೋಚನಗೊಳಿಸುವನು'' ಎಂದು ಹೇಳಿ ಹೊರಟುಹೋದರು. ಬೇರೆ ದಾರಿ ಕಾಣದೆ ಅವರಿಬ್ಬರೂ ಸೇರಿ ಆ ಗೋವನ್ನು ಇನ್ನೊಬ್ಬ ಬ್ರಾಹ್ಮಣನಿಗೆ ದಾನ ಮಾಡಿ ನಿಶ್ಚಿಂತರಾದರು!

ಇತ್ತಲಾಗಿ ನೃಗರಾಜನು ತನ್ನ ಮಗನಾದ ವಸುವಿಗೆ ರಾಜಪಟ್ಟಾಭಿಷೇಕವನ್ನು ಮಾಡಿ ''ವತ್ಸ, ಧರ್ಮನಿಷ್ಠನಾಗಿ ಪ್ರಜೆಗಳನ್ನು ಕ್ಷತ್ರಧರ್ಮದಿಂದ ಪರಿಪಾಲಿಸು. ನನಗಾಗಿ ಶೋಕಾಕುಲನಾಗಬೇಡ. ಜನ್ಮಾಂತರದಲ್ಲಿ ಮಾಡಿದ ದುಷ್ಕರ್ಮದ ಫಲವನ್ನು ನಾನು ಅನುಭವಿಸಲೇಬೇಕು'' ಎಂದು ಹಿತೋಪದೇಶವನ್ನು ಮಾಡಿದನು. ತಾನು ಶಾಪವನ್ನು ಅನುಭವಿಸುವುದಕ್ಕಾಗಿ ಉತ್ತಮವಾದ ಒಂದು ಹಳ್ಳವನ್ನು ನಿರ್ಮಿಸಿ ಅದರೊಳಗೆ ಪ್ರವೇಶಿಸಿಬಿಟ್ಟನು. ಒಡನೆಯೇ ನೃಗರಾಜನಿಗೆ ಓತಿಕೇತರೂಪವು ಬಂದಿತು. ಲಕ್ಷ್ಮಣ, ಈಗಲು ಆ ರಾಜನು ಓತಿಕೇತವಾಗಿಯೇ ಇದ್ದಾನೆ. ಆದ್ದರಿಂದ ರಾಜನು ತನ್ನ ರಾಜಧರ್ಮವನ್ನು ಎಂದೂ ಉಪೇಕ್ಷಿಸಬಾರದು.

೨. ನಿಮಿರಾಜನ ವೃತ್ತಾಂತ; ಅವನ ಮಗ ಜನಕ.

ಆಮೇಲೆ ಶ್ರೀರಾಮನು ಇನ್ನೊಂದು ಕಥೆಯನ್ನು ಹೇಳಿದನು. ಲಕ್ಷ್ಮಣ, ಇಕ್ಷ್ವಾಕುವಂಶದಲ್ಲಿ ನಿಮಿ ಎಂಬ ಒಬ್ಬ ರಾಜನಿದ್ದನು. ಆ ರಾಜರ್ಷಿಗೆ ದೀರ್ಘಸತ್ರವೆಂಬ ಯಾಗವನ್ನು ಮಾಡಲು ಇಚ್ಛೆಯಾಯಿತು. ಅವನು ಈ ಯಾಗವನ್ನು ನಡೆಸಿಕೊಡಬೇಕೆಂದು ಮೊದಲು ವಸಿಷ್ಠ ಮಹರ್ಷಿಗಳಿಗೆ ವರಣವನ್ನಿತ್ತು ಆಹ್ವಾನಿಸಿದನು. ವಸಿಷ್ಠರು ''ರಾಜ, ಇಂದ್ರನು ಒಂದು ಯಾಗಕ್ಕಾಗಿ ಮೊದಲೇ ನನಗೆ ವರಣವನ್ನಿತ್ತಿದ್ದಾನೆ. ಅದನ್ನು ಮುಗಿಸಿ ಬರುವೆನು. ನಾನು ಬರುವವರೆಗೆ ಕಾದಿರು ಎಂದು ಹೇಳಿ ಹೊರಟುಹೋದರು. ಅವರು ಬಹಳ ಕಾಲದವರೆಗೆ ಬರಲಿಲ್ಲವಾದ್ದರಿಂದ ನಿಮಿರಾಜನು ಗೌತಮಮಹರ್ಷಿಗಳಿಗೂ ಅತ್ರಿ, ಆಂಗಿರಸ ಮೊದಲಾದವರಿಗೂ ವರಣವನ್ನಿತ್ತು ಯಾಗಕಾರ್ಯವನ್ನು ನಡೆಸಬೇಕೆಂದು ಪ್ರಾರ್ಥಿಸಿದನು.

ಇಂದ್ರನ ಯಜ್ಞವು ಪೂರ್ಣವಾದಮೇಲೆ ವಸಿಷ್ಠರು ಹಿಂದಿರುಗಿ ಬಂದರು. ನಿಮಿರಾಜನು ಯಜ್ಞವನ್ನು ಆರಂಭಿಸಿದ್ದಾನೆಂದು ತಿಳಿದು ವಸಿಷ್ಠರು ಕ್ರುದ್ಧರಾದರು. ಅವರು ನಿಮಿರಾಜನನ್ನು ಕಾಣುವುದಕ್ಕಾಗಿ ಅರಮನೆಗೆ ಹೋದರು. ಸ್ವಲ್ಪ ಹೊತ್ತು ಕಾದರೂ ರಾಜನು ಬರಲಿಲ್ಲ. ಅವನು ಮಲಗಿ ನಿದ್ರಿಸುತ್ತಿದ್ದನು.

ಇದೆಲ್ಲವನ್ನೂ ತಿಳಿದು ವಸಿಷ್ಠರು ಕ್ರುದ್ಧರಾಗಿ ''ಎಲೈ ನಿಮಿಯೆ, ನನಗೆ ವರಣವನ್ನಿತ್ತು, ಬೇರೆಯವರಿಂದ ಯಾಗವನ್ನು ಮಾಡಿಸುತ್ತಿದ್ದೀಯೆ. ಮನೆಗೆ ಬಂದರೂ ದರ್ಶನವನ್ನು ಕೊಡುತ್ತಿಲ್ಲ. ನಿನ್ನ ದೇಹವು ಚೈತನ್ಯರಹಿತವಾಗಲಿ (ಸತ್ತುಹೋಗು) ಎಂದು ಶಪಿಸಿಬಿಟ್ಟರು. ಆಮೇಲೆ ಎಚ್ಚೆತ್ತು ಬಂದ ರಾಜನಿಗೆ ಈ ವಿಷಯವೆಲ್ಲವೂ ತಿಳಿಯಿತು. ಮಹಾತೇಜಸ್ವಿಯೂ ತಪಸ್ವಿಯೂ ಆಗಿದ್ದ ನಿಮಿರಾಜನೂ ರುಷ್ಟನಾಗಿ ''ಎಲೈ ಋಷಿಯೆ, ಬಹುಕಾಲವಾದರೂ ನೀನು ಬರದೇ ಹೋದ್ದರಿಂದ ನಾನು ಯಾಗವನ್ನು ನಡೆಸಿದ್ದೆನು. ಅರಮನೆಗೆ ನೀನು ಬಂದದ್ದು ನನಗೆ ತಿಳಿಯಲಿಲ್ಲ. ಈ ಅಲ್ಪ ಕಾರಣಕ್ಕಾಗಿ ನನ್ನನ್ನು ಶಪಿಸಿದೆಯಾ? ನಿನ್ನ ದೇಹವೂ ಚೈತನ್ಯರಹಿತವಾಗಲಿ (ಮೃತನಾಗು)''–ಎಂದು ಶಪಿಸಿದನು.

ಹೀಗೆ ದೇಹವನ್ನು ಕಳೆದುಕೊಂಡು ಚೈತನ್ಯಸ್ವರೂಪದಲ್ಲಿದ್ದ ವಸಿಷ್ಠರು ತಮ್ಮ ತಂದೆಯಾದ ಬ್ರಹ್ಮನ ಬಳಿಗೆ ಹೋಗಿ ಈ ವೃತ್ತಾಂತವನ್ನು ತಿಳಿಸಿದರು. ಬ್ರಹ್ಮನು ''ವಸಿಷ್ಠ, ನೀನು ಮಿತ್ರಾವರುಣರಿಂದ ವಿಸೃಷ್ಟವಾದ ರೇತಸ್ಸನ್ನು ಸೇರು. ಅನಂತರ ನೀನು ನೂತನ ದೇಹಸಹಿತನಾಗಿ ಉದ್ಭವಿಸುವೆ. ಆಗಲೂ ನೀನು ವಸಿಷ್ಠನೆಂದೂ ನನ್ನ ಪುತ್ರನೆಂದೂ ವಿಖ್ಯಾತನಾಗಿಯೇ ಇರುವೆ ಎಂದು ತಿಳಿಸಿದನು. ಆ ಸಮಯದಲ್ಲಿ ಮಿತ್ರ (ಸೂರ್ಯ), ವರುಣ–ಎಂಬ ಈರ್ವರು ಉರ್ವಶಿಯೆಂಬ ಅಪ್ಸರೆಯನ್ನು ನೋಡಿ ಕಾಮಮೋಹಿತರಾದರು. ಅವರಿಂದ ಸ್ಖಲಿಸಿದ ರೇತಸ್ಸನ್ನು ದೇವನಿರ್ಮಿತವಾದ ಒಂದು ಕುಂಭದಲ್ಲಿ ಸಂಗ್ರಹಿಸಲಾಯಿತು. ವಸಿಷ್ಠರು ಚೆತನ್ಯ ರೂಪದಿಂದ ಅದನ್ನು ಪ್ರವೇಶಿಸಿದರು. ಆ ರೇತಸ್ಸಿನಿಂದ ಮೊದಲು ಅಗಸ್ತ್ಯ ಮಹರ್ಷಿಗಳೂ ಅನಂತರ ವಸಿಷ್ಠರೂ ಜನಿಸಿದರು. ಆದ್ದರಿಂದ ಇವರಿಬ್ಬರಿಗೂ ಮೈತ್ರಾವರುಣಿಗಳೆಂಬ ಹೆಸರು ಪ್ರಾಪ್ತವಾಯಿತು. ನಮ್ಮ ವಂಶದ ಇಕ್ಷ್ವಾಕು ಮಹಾರಾಜನು ವಸಿಷ್ಠಮುನಿಗಳನ್ನು ಕುಲ ಪುರೋಹಿತರನ್ನಾಗಿ ವರಿಸಿದನು. ಅಂದಿನಿಂದ ಆ ಮಹರ್ಷಿಗಳು ನಮ್ಮ ಕುಲಗುರುಗಳಾಗಿ ನಮ್ಮ ಶ್ರೇಯಸ್ಸಿಗೆ ಕಾರಣರಾಗಿದ್ದಾರೆ.

ಲಕ್ಷ್ಮಣ, ಮಿತ್ರನು ಉರ್ವಶಿಯನ್ನು ಮೊದಲೇ ಕಾಮಿಸಿ ವರಿಸಿದ್ದರೂ ಅವಳು ವರುಣನೊಡನೆ ಮೊದಲು ಪ್ರೇಮದ ಮಾತುಗಳನ್ನಾಡಿ ಬಂದದ್ದರಿಂದ ಮಿತ್ರನು ಅವಳನ್ನು ಶಪಿಸಿದನು. ಅದರ ಪ್ರಕಾರ ಅವಳು ಭೂಲೋಕಕ್ಕೆ ಬಂದು ಮಾನವನಾದ ಪುರೂರವನೊಡನೆ ಕೆಲವು ಕಾಲ ಬಾಳಬೇಕಾಯಿತು. ಆಗ ಅವಳಲ್ಲಿ ಆಯುವೆಂಬ ಪುತ್ರನು ಹುಟ್ಟಿದನು. ಆಯುವಿನ ಮಗನೇ ಸುಪ್ರಸಿದ್ಧನಾದ ನಹುಷ.

ಲಕ್ಷ್ಮಣ, ಈಗ ನಿಮಿರಾಜನ ವೃತ್ತಾಂತವನ್ನು ಕೇಳು. ವಸಿಷ್ಠರ ಶಾಪದಿಂದ

ನಿಮಿಯು ದೇಹರಹಿತನಾದನಷ್ಟೆ. ಅವನ ದೇಹವನ್ನು ಗಂಧಮಾಲ್ಯಾದಿಗಳಿಂದ ಅಲಂಕರಿಸಿ ರಕ್ಷಿಸಿದರು. ಋತ್ವಿಜರು ಯಾಗವನ್ನು ಮುಂದುವರಿಸಿದರು. ಅದು ಸಮಾಪ್ತವಾದ ಮೇಲೆ ಸುಪ್ರೀತರಾದ ದೇವತೆಗಳು ನಿಮಿರಾಜನ ಆತ್ಮವನ್ನು ಸಂಬೋಧಿಸಿ ''ರಾಜರ್ಷಿ, ವರವನ್ನು ಕೇಳಿಕೊ. ನಿನ್ನ ಜೀವನವನ್ನು ಎಲ್ಲಿ ಸೇರಿಸೋಣ?'' ಎಂದರು. ನಿಮಿರಾಜನು ''ದೇವತೆಗಳೆ, ಸಕಲಪ್ರಾಣಿಗಳ ನೇತ್ರಗಳಲ್ಲಿ ನೆಲೆಸಬೇಕೆಂದು ನನ್ನ ಬಯಕೆ'' ಎಂದನು. 'ತಥಾಸ್ತು' ಎಂದು ನುಡಿದು ದೇವತೆಗಳು ಹೊರಟು ಹೋದರು. ನಿಮಿಯು ವಾಯುಸ್ವರೂಪದಿಂದ ಪ್ರಾಣಿಗಳ ನೇತ್ರಗಳಲ್ಲಿ ನೆಲೆಸಿದನು.

ಆತನ ದೇಹವನ್ನು ಋಷಿಗಳು ಯಜ್ಞಭೂಮಿಗೆ ತಂದು ನಿಮಿಗೆ ಪುತ್ರೋತ್ಪತ್ತಿಯಾಗಲೆಂದು ಪುತ್ರೀಯ ಮಂತ್ರ ಪೂರ್ವಕವಾಗಿ ಹೋಮ ಮಾಡಿ, ದೇಹವನ್ನು ಅರಣಿಯಿಂದ ಮಥಿಸಿದರು. ಮಥಿಸುತ್ತಿರುವಾಗ ಆ ದೇಹದಿಂದ ಮಹಾತೇಜಸ್ವಿಯಾದ ಒಬ್ಬ ಪುತ್ರನು ಜನಿಸಿದನು. ಹೀಗೆ ಮಥನದಿಂದ ಜನಿಸಿದ ಕಾರಣ ಆತನಿಗೆ ಮಿಥಿ ಎಂದೂ ಜೀವರಹಿತವಾದ ವಿದೇಹದಿಂದ ಹುಟ್ಟಿದ್ದರಿಂದ ವಿದೇಹನೆಂದೂ ಅದ್ಭುತರೀತಿಯಲ್ಲಿ ಜನನವನ್ನು ಪಡೆದದ್ದರಿಂದ ಜನಕನೆಂದೂ ಆ ಬಾಲಕನಿಗೆ ಹೆಸರು ಬಂದಿತು. ಈ ಪ್ರಕಾರದಲ್ಲಿ ಆ ವಂಶದ ಮೂಲಪುರುಷನು ಮಿಥಿ ಎಂದೂ ವಿದೇಹರಾಜನೆಂದೂ ಜನಕರಾಜನೆಂದೂ ವಿಖ್ಯಾತನಾದನು.

೩. ಯಯಾತಿ

ಮೇಲ್ಕಂಡ ವೃತ್ತಾಂತವನ್ನು ಶ್ರೀರಾಮನು ಹೇಳಲಾಗಿ ಲಕ್ಷ್ಮಣನು ''ಇದು ಅದ್ಭುತವೇ ಸರಿ. ನಿಮಿರಾಜನು ಯಜ್ಞದೀಕ್ಷಿತನಾಗಿದ್ದವನು. ಅಂಥವನು ತಾಳ್ಮೆಯಿಲ್ಲದೆ ಕೋಪಿಸಿಕೊಂಡು ವಸಿಷ್ಠಮುನಿಗಳಿಗೆ ಶಾಪವನ್ನು ಕೊಟ್ಟನಲ್ಲ!'' ಎಂದನು. ರಾಘವನು ''ಲಕ್ಷ್ಮಣ, ಎಲ್ಲರಿಗೂ ತಾಳ್ಮೆ ಇರುವುದಿಲ್ಲ. ದುಡುಕಿಬಿಡುತ್ತಾರೆ. ಕ್ಷಮೆಯೆಂಬುದು ದೊಡ್ಡಗುಣ. ಕ್ಷಮಾಶೀಲರೂ ಇರುತ್ತಾರೆ. ಈ ಕಥೆಯನ್ನು ಕೇಳು'' ಎಂದು ನುಡಿದು ಯಮಾತಿರಾಜನ ಕಥೆಯನ್ನು ಹೇಳಿದನು.

ನಹುಷನ ಮಗ ಯಯಾತಿ. ಆ ರಾಜರ್ಷಿಗೆ ಶರ್ಮಿಷ್ಠೆ, ದೇವಯಾನಿ–ಎಂಬ ಇಬ್ಬರು ಮಡದಿಯರಿದ್ದರು. ಶರ್ಮಿಷ್ಠೆಯು ವೃಷಪರ್ವನೆಂಬ ದೈತ್ಯರಾಜನ ಮಗಳು. ದೇವಯಾನಿಯು ಶುಕ್ರಚಾರ್ಯನ ಮಗಳು. ಶರ್ಮಿಷ್ಠೆಗೆ ಪೂರು ಎಂಬವನೂ

ದೇವಯಾನಿಗೆ ಯದು ಎಂಬವನೂ ಪುತ್ರರಾಗಿ ಜನಿಸಿದರು. ರಾಜನಿಗೆ ಶರ್ಮಿಷ್ಠೆಯಲ್ಲಿ ಅಧಿಕವಾದ ಪ್ರೀತಿ ಇತ್ತು. ಪೂರುವು ಅತ್ಯಂತ ಗುಣಶಾಲಿಯೂ ಆಗಿದ್ದನು. ಆದ್ದರಿಂದ ಪೂರುವಿನ ಮೇಲೆ ಯಯಾತಿಗೆ ಪ್ರೀತಿ ಹೆಚ್ಚಾಗಿತ್ತು. ಯದುವಿನಲ್ಲಿ ಅಷ್ಟು ಪ್ರೀತಿ ಇರಲಿಲ್ಲ. ಈ ಕಾರಣಗಳಿಂದ ದೇವಯಾನಿಗೆ ರಾಜನ ಮೇಲೆ ಅಸಮಾಧಾನವಿತ್ತು.

ಒಂದು ದಿನ ಯದುವಿಗೆ ಯಾವುದೋ ಕಾರಣದಿಂದ ತುಂಬ ಅಸಮಾಧಾನವಾಗಿ ತಾಯಿಯೊಡನೆ ಇಂತೆಂದನು. ''ಅಮ್ಮ, ತಂದೆಯು ನಿನ್ನ ಮೇಲೆ ಸಾಕಷ್ಟು ಪ್ರೀತಿಯನ್ನಿಟ್ಟಿಲ್ಲ. ನನ್ನನ್ನು ಉಪೇಕ್ಷೆಯಿಂದ ಕಾಣುತ್ತಿದ್ದಾನೆ. ಇದು ಯಾವ ನ್ಯಾಯ? ನೀನು ಮಹಾತ್ಮನಾದ ಶುಕ್ರಾಚಾರ್ಯನ ಮಗಳು. ಪೂರುವಿನ ತಾಯಿ ಒಬ್ಬ ದೈತ್ಯನ ಮಗಳು. ನೀನು ಈ ರೀತಿ ಕಷ್ಟವನ್ನು ಸಹಿಸಿಕೊಂಡಿದ್ದೀಯೆ. ನನಗೆ ಸಾಧ್ಯವಿಲ್ಲ. ನಾನು ಬೆಂಕಿಯಲ್ಲಿ ಬಿದ್ದು ಸಾಯುತ್ತೇನೆ!'' ಎಂದು ಪ್ರಲಾಪಿಸಿದನು. ಖಿನ್ನಳಾದ ದೇವಯಾನಿಯು ತನ್ನ ತಂದೆಯನ್ನು ಸ್ಮರಿಸಿಕೊಂಡಳು. ಮಹಾತೇಜಸ್ವಿಯಾದ ಶುಕ್ರಾಚಾರ್ಯನು ಮಗಳ ಇಂಗಿತವನ್ನು ಜ್ಞಾನದೃಷ್ಟಿಯಿಂದ ಅರಿತು ಅಲ್ಲಿಗೆ ಬಂದು 'ತನ್ನನ್ನು ಸ್ಮರಿಸಿಕೊಂಡದ್ದು ಏಕೆ?' ಎಂದು ಪ್ರಶ್ನೆ ಮಾಡಿದನು. ದೇವಯಾನಿಯು ''ತಂದೆಯೆ, ನನ್ನ ಪತಿಯಾದ ಯಯಾತಿ ರಾಜನು ಆ ಶರ್ಮಿಷ್ಠೆಯ ಜೊತೆಗೆ ಸದಾ ಇರುತ್ತಾನೆ. ನನ್ನನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ನಿನ್ನ ಮೊಮ್ಮಗನಾದ ಯದುವನ್ನು ನೋಡು. ಇವನ ಮೇಲೆ ಆ ರಾಜನಿಗೆ ಪ್ರೀತಿಯೇ ಇಲ್ಲ. ಇಂದೆಂತಹ ಜೀವನ! ನಾವಿಬ್ಬರೂ ಬೆಂಕಿಯಲ್ಲಿ ಬಿದ್ದು ಸತ್ತು ಹೋಗುತ್ತೇವೆ!'' ಎಂದು ದೂರಿದಳು. ಅದನ್ನು ಕೇಳಿ ರುಷ್ಟನಾದ ಶುಕ್ರಾಚಾರ್ಯನು ಯಯಾತಿಯನ್ನು ಕಂಡು ''ಎಲೈ ನಹುಷಪುತ್ರ, ನನ್ನ ಮಗಳನ್ನು ದೂರೀಕರಿಸಿ ಇನ್ನೊಬ್ಬಳೊಡನೆ ಸದಾ ವಿಹರಿಸುತ್ತಿದ್ದೀಯೆ. ಈ ರೀತಿಯಲ್ಲಿ ಪಕ್ಷಪಾತ ಮಾಡುವ ನೀನು ಪಾಪಿಯೇ ಸರಿ. ನನ್ನನ್ನು ಸಹ ಅಲಕ್ಷಿಸಿಬಿಟ್ಟೆಯಾ? ದುರಾತ್ಮ, ದಾರುಣವಾದ ಮುಪ್ಪು ಬಂದು ನಿನ್ನನ್ನು ಕವಿಯಲಿ!'' ಎಂದು ಶಪಿಸಿದನು.

ಯಯಾತಿಯು ಏನನ್ನೂ ಪ್ರತಿಯಾಗಿ ಹೇಳದೇ ತಾಳ್ಮೆಯಿಂದಿದ್ದನು. ಮುಪ್ಪು ಬಂದು ಮುಸುಕಿತು. ಅವನಿಗೆ ಇನ್ನೂ ಅಧಿಕವಾದ ಭೋಗಾಭಿಲಾಷೆ ಇತ್ತು. ಹಿರಿಯ ಮಗನಾದ ಯದುವನ್ನು ಕರೆದು ''ವತ್ಸ–ಯದು, ನೀನು ಧರ್ಮಜ್ಞನಾಗಿರುವೆ. ನನಗೋಸ್ಕರ ಈ ಮುಪ್ಪನ್ನು ಸ್ವೀಕರಿಸು. ನಿನ್ನ ತಾರುಣ್ಯವು ನನಗೆ ಬರಲಿ. ಇನ್ನು ಕೆಲವು ವರ್ಷಗಳವರೆಗೆ ವಿಷಯ ಭೋಗವನ್ನನುಭವಿಸಿ ಮುಪ್ಪನ್ನು ಮತ್ತೆ

ಸ್ವೀಕರಿಸುತ್ತೇನೆ. ನಿನ್ನ ತಾರುಣ್ಯವನ್ನು ಹಿಂದಿರುಗಿಸುತ್ತೇನೆ'' ಎಂದನು. ಯದುವು ತಂದೆಯ ಮಾತಿಗೆ ಒಪ್ಪಲಿಲ್ಲ. ಅವನು ತಂದೆಗೆ ''ನಿನಗೆ ಪ್ರಿಯನಾದ ಪುತ್ರನು ಪೂರು ಅಲ್ಲವೆ? ಅವನೇ ಮುಪ್ಪನ್ನು ಸ್ವೀಕರಿಸಲಿ. ಮಹಾರಾಜ, ನನ್ನನ್ನು ಉಪೇಕ್ಷಿಸಿದ್ದೀಯೆ. ನನ್ನನ್ನು ನಿನ್ನ ಹತ್ತಿರವೂ ಸೇರಿಸುತ್ತಿಲ್ಲ. ಯಾರೊಡನೆ ಕುಳಿತು ತಿಂದು ಸಂತೋಷ ಪಡುವೆಯೋ ಅವರು ಮುಪ್ಪನ್ನು ಸ್ವೀಕರಿಸಲಿ!'' ಎಂದು ಬಿಟ್ಟನು. ಆಗ ಯಯಾತಿಯು ಕಿರಿಯ ಮಗನಾದ ಪೂರುವನ್ನು ಕರೆದು ತನ್ನ ಮುಪ್ಪನ್ನು ಸ್ವೀಕರಿಸಬೇಕೆಂದು ಹೇಳಿದನು. ಪೂರುವು ಭಕ್ತಿಯಿಂದ ತಂದೆಗೆ ನಮಿಸಿ ''ಮಹಾರಾಜ, ನಾನು ಧನ್ಯನಾದೆ. ಅನುಗ್ರಹೀತನಾದೆ. ನಿನ್ನ ಆಜ್ಞೆಯನ್ನು ಪಾಲಿಸುತ್ತೇನೆ'' ಎಂದು ನಿವೇದಿಸಿದನು. ಯಯಾತಿಯು ತನ್ನ ಯೋಗಶಕ್ತಿಯಿಂದ, ಮುಪ್ಪನ್ನು ಪೂರುವಿಗೆ ಕೊಟ್ಟು ಅವನ ತಾರುಣ್ಯವನ್ನು ತಾನು ಪಡೆದನು.

ಎಷ್ಟೋ ವರ್ಷಗಳು ಉರುಳಿದವು. ವಿಷಯಭೋಗದಲ್ಲಿ ಮುಳುಗಿದ್ದ ಯಯಾತಿಗೆ ಜ್ಞಾನೋದಯವಾಯಿತು. ''ಆಹಾ! ಈ ಭೋಗವನ್ನು ಎಷ್ಟು ಅನುಭವಿಸಿದರೂ ತೃಪ್ತಿಯೇ ಆಗುವುದಿಲ್ಲ. ಬೆಂಕಿಗೆ ತುಪ್ಪವನ್ನು ಹೊಯ್ದಂತೆ ಆಗಿ ಇದು ಹೆಚ್ಚುತ್ತಲೇ ಹೋಗುತ್ತದೆ. ನಾನು ಹಿಡಿದ ದಾರಿ ತಪ್ಪಾದದ್ದು. ಪೂರುವಿಗೆ ಕಷ್ಟವನ್ನು ಕೊಟ್ಟೆ. ಇನ್ನು ಇದರ ಲಾಲಸೆ ಬೇಡ'' ಎಂದು ನಿಶ್ಚಯಿಸಿ ಪೂರುವನ್ನು ಕರೆದು ಹೀಗೆಂದನು. ''ವತ್ಸ–ಪೂರು, ನಾನು ಅವಿವೇಕದಿಂದ ನಿನಗೆ ತುಂಬ ಕಷ್ಟವನ್ನು ತಂದೊಡ್ಡಿದೆನು. ಈಗ ನಿನ್ನ ತಾರುಣ್ಯವನ್ನು ನೀನು ವಹಿಸಿಕೊ. ಮುಪ್ಪನ್ನು ನಾನು ವಹಿಸಿಕೊಳ್ಳುತ್ತೇನೆ'' ಎಂದು ಹೇಳಿ ಯೋಗಬಲದಿಂದಲೇ ತಾರುಣ್ಯವನ್ನು ಪೂರುವಿಗೆ ದಾಟಿಸಿ ಮುಪ್ಪನ್ನು ಹಿಂತೆಗೆದು ಕೊಂಡನು. ಅನಂತರ ಪೂರುವನ್ನು ಅಪ್ಪಿಕೊಂಡು ''ಮಗನೆ, ಇದುವರೆಗೆ ಮುಪ್ಪನ್ನು ಅನುಭವಿಸಿದ್ದೀಯೆ. ವ್ಯಥೆ ಪಡಬೇಡ. ಇನ್ನು ಮೇಲೆ ಸುಖವಾಗಿರು. ನನ್ನ ಆಜ್ಞೆಯನ್ನು ನಡೆಸಿದ್ದರಿಂದ ಸುಪ್ರೀತನಾಗಿದ್ದೇನೆ. ನಿನಗೆ ಈ ರಾಜ್ಯವನ್ನಿತ್ತು ಪಟ್ಟಾಭಿಷೇಕ ಮಾಡುವೆನು'' ಎಂದು ಹೇಳಿದನು. ಆಮೇಲೆ ಯದುವನ್ನು ಕರೆಸಿ ರೋಷದಿಂದ ''ಎಲೈ ಯದು, ನೀನೊಬ್ಬ ರಾಕ್ಷಸ! ದುರುಳನಾದ ನೀನು ನನಗೆ ಪುತ್ರರೂಪದಿಂದ ಹುಟ್ಟಿದ ಶತ್ರುವಾಗಿದ್ದೀಯೆ. ನನ್ನ ಮಾತನ್ನು ನಡೆಸದೆ ಹೋದದ್ದರಿಂದ ನಿನಗೆ ಈ ರಾಜ್ಯವನ್ನು ಕೊಡುವುದಿಲ್ಲ. ನಿನ್ನ ವಂಶದವರಿಗೂ ರಾಜ್ಯಭಾರದ ಯೋಗವು ದೊರೆಯದೆ ಹೋಗಲಿ!'' ಎಂದು ಶಪಿಸಿದನು. ಆಮೇಲೆ ಪೂರುವಿಗೆ ವಿಧಿಪೂರ್ವಕವಾಗಿ ಪಟ್ಟಾಭಿಷೇಕ ಮಾಡಿದನು. ಪೂರುವು ಕಾಶೀರಾಜ್ಯದ ಪ್ರತಿಷ್ಠಾನವೆಂಬ ನಗರದಲ್ಲಿ ಧರ್ಮದಿಂದ ರಾಜ್ಯ ಪಾಲನೆ ಮಾಡಿದನು.

ಲಕ್ಷ್ಮಣ, ಹೀಗೆ ಯಯಾತಿಯು ಶುಕ್ರಾಚಾರ್ಯನ ಶಾಪವನ್ನು ತಾಳ್ಮೆಯಿಂದ ಅನುಭವಿಸಿದನು. ನಿಮಿಯು ಮಾತ್ರ ವಸಿಷ್ಠರ ಶಾಪವನ್ನು ಸಹಿಸಿಕೊಳ್ಳಲಿಲ್ಲ. ನೃಗರಾಜನಲ್ಲಾದ ತಪ್ಪು ನಮ್ಮಲ್ಲಿ ಆಗದಿರಲಿ''–ಎಂದು ಶ್ರೀರಾಮನು ಹೇಳಿದನು. ಅಷ್ಟರಲ್ಲಿ ಅರುಣೋದಯವಾಯಿತು.

ಶ್ರೀರಾಮನು ಶೂದ್ರತಪಸ್ವಿಯಾದ ಶಂಬೂಕನನ್ನು ಸಂಹರಿಸಿದ ಮೇಲೆ, ಪುಷ್ಪಕವಿಮಾನದಲ್ಲಿ ಕುಳಿತು ಅಗಸ್ತ್ಯ ಮಹರ್ಷಿಗಳ ದರ್ಶನಕ್ಕಾಗಿ ದೇವತೆಗಳೊಡನೆ ಹೋಗುತ್ತಾನೆ. ಅಗಸ್ತ್ಯರು ರಾಘವನನ್ನು ಸ್ವಾಗತಿಸಿ ಒಂದು ದಿವ್ಯಾಭರಣವನ್ನು ಪಾರಿತೋಷಿಕವಾಗಿ ಕೊಡುತ್ತಾರೆ. ಅದನ್ನು ನೋಡಿ ವಿಸ್ಮಯಾವಿಷ್ಟನಾದ ಶ್ರೀರಾಮನು, ಆ ದಿವ್ಯಾಭರಣವು ಅಗಸ್ತ್ಯರಿಗೆ ಹೇಗೆ ದೊರಕಿತೆಂದು ಕುತೂಹಲದಿಂದ ಕೇಳುತ್ತಾನೆ. ಆಗ ಅಗಸ್ತ್ಯರು ಮುಂದಿನ ಕಥಾ ಪ್ರಸಂಗವನ್ನು ಹೇಳುತ್ತಾರೆ.

೪. ಅಗಸ್ತ್ಯರಿಗೆ ದಿವ್ಯಾಭರಣವು ದೊರಕಿದ ಬಗೆ

ಅಗಸ್ತ್ಯರು ಹೇಳಿದರು : ಕಾಕುತ್ಸ್ಥ, ಹಿಂದಿನ ತ್ರೇತಾಯುಗದಲ್ಲಿ ವಿಸ್ತಾರವಾದ ಈ ಅರಣ್ಯದ ಒಂದು ಪಾರ್ಶ್ವದಲ್ಲಿ ತಪಸ್ಸು ಮಾಡಿಕೊಂಡಿದ್ದೆನು. ಒಂದು ಸಲ ಅರಣ್ಯದಲ್ಲಿ ಸಂಚರಿಸುತ್ತ ಹೋದಾಗ ಒಂದು ದೊಡ್ಡ ಸರೋವರವು ಕಾಣಿಸಿತು. ಅದರ ದಡದಲ್ಲಿ ಶೂನ್ಯವಾದ ಒಂದು ಪರ್ಣಶಾಲೆಯು ಕಾಣಿಸಿತು. ನಾನು ಅದರಲ್ಲಿ ರಾತ್ರಿಯನ್ನು ಕಳೆದು ಪ್ರಾತಃಕಾಲ ಸರೋವರದ ಬಳಿಗೆ ಹೋದೆನು. ಸರಸ್ಸಿನ ನಿರ್ಮಲವಾದ ಜಲದಲ್ಲಿ ಒಂದು ಶವವು ತೇಲುತ್ತಿತ್ತು. ಅದರ ಅಂಗಗಳೆಲ್ಲವೂ ಮಾಂಸಖಂಡಗಳಿಂದ ಪುಷ್ಟವಾಗಿದ್ದವು. ಇದೇನಿರಬಹುದೆಂದು ಚಿಂತಿಸುತ್ತಿರುವಾಗ ಒಂದು ದಿವ್ಯವಿಮಾನವು ಬಂದು ಹತ್ತಿರ ನಿಂತಿತು. ಅದರಿಂದ ಒಬ್ಬ ದಿವ್ಯಪುರುಷನು ಹೊರಗೆ ಬಂದು ಕೊಳದಲ್ಲಿದ್ದ ಆ ಹೆಣವನ್ನು ಬಗೆದು ತಿನ್ನಲಾರಂಭಿಸಿದನು. ಮಾಂಸವೆಲ್ಲವನ್ನೂ ತಿಂದು ಕೈತೊಳೆದು ಆಚಮನ ಮಾಡಿ ಬಂದು ವಿಮಾನವನ್ನೇರಲು ಹೋದನು. ಆಗ ನಾನು ಹೋಗಿ ಆತನನ್ನು ಕುರಿತು ''ನೀನು ಯಾರು? ನಿಂದ್ಯವಾದ ಈ ಕಾರ್ಯವನ್ನೇಕೆ ಮಾಡುತ್ತಿದ್ದೀಯೆ?'' ಎಂದು ಕೇಳಿದೆನು. ಆತನು ನನ್ನನ್ನು ದಿಟ್ಟಿಸಿ ನೋಡಿ ಹೀಗೆಂದನು. ''ಓ ಬ್ರಹ್ಮರ್ಷಿಗಳೆ, ನಾನು ಸುದೇವನೆಂಬ ವಿದರ್ಭರಾಜನ ಮಗನಾಗಿದ್ದೆನು. ನನ್ನ ಹೆಸರು ಶ್ವೇತ. ಈ ಗೊಂಡಾರಣ್ಯಕ್ಕೆ ಬಂದು ಆ ಪರ್ಣಶಾಲೆಯಲ್ಲಿ ಬಹಳ ವರ್ಷಗಳವರೆಗೆ ಕಠೋರವಾದ ತಪಸ್ಸು ಮಾಡಿದೆನು. ಆಮೇಲೆ ನನಗೆ ಬ್ರಹ್ಮಲೋಕಪ್ರಾಪ್ತಿಯಾಯಿತು. ಅಲ್ಲಿ ನನಗೆ ತುಂಬ ಹಸಿವು

ಬಾಯಾರಿಕೆಗಳಾದವು. ನಾನು ಬ್ರಹ್ಮನನ್ನು ಕಂಡು ಕಾರಣವನ್ನು ವಿಚಾರಿಸಿದೆ. ಆ ಪಿತಾಮಹನು ಹೇಳಿದ್ದೇನೆಂದರೆ–''ಎಲೈ ಶ್ವೇತ, ನೀನು ತಪಸ್ಸನ್ನಾಚರಿಸುವಾಗ ಹಸಿವು ಬಾಯಾರಿಕೆಗಳನ್ನು ನಿಗ್ರಹಿಸಲಿಲ್ಲ. ಯಥೇಷ್ಟವಾಗಿ ರುಚಿಕರ ಆಹಾರವನ್ನು ತಿನ್ನುತ್ತಲೇ ಇದ್ದೆ. ಭಿಕ್ಷೆಗಾಗಿ ಬಂದ ಯತಿಗೆ ಭಿಕ್ಷೆಯನ್ನು ನೀಡದೆ ಕಳಿಸಿದ್ದೀಯೆ. ಅದರ ಫಲ ಇದು. ಹೋಗು; ನೀನು ತಪಸ್ಸು ಮಾಡುತ್ತಿದ್ದ ಆಶ್ರಮದ ಬಳಿ ಇರುವ ಸರಸ್ಸಿನಲ್ಲಿ ಪ್ರತಿದಿನ ಒಂದು ಹೆಣವು ತೇಲುತ್ತದೆ. ಅದನ್ನು ತಿನ್ನು!'' ಎಂದನು. ಆಮೇಲೆ ನನ್ನ ಪ್ರಾರ್ಥನೆಯನ್ನು ಮನ್ನಿಸಿ ''ಶ್ವೇತ, ಕೆಲವು ವರ್ಷಗಳ ಮೇಲೆ ಅಗಸ್ತ್ಯನೆಂಬ ಒಬ್ಬ ಮಹರ್ಷಿಯು ಬಂದು ನಿನ್ನನ್ನು ಉದ್ಧರಿಸುವನು'' ಎಂದನು. ನೀವೇ ಅಗಸ್ತ್ಯರಾಗಿರಬೇಕು. ನನ್ನನ್ನು ಉದ್ಧರಿಸುವುದಕ್ಕಾಗಿ ಬಂದಿದ್ದೀರಿ. ಸರಸ್ಸಿನಲ್ಲಿ ಕಾಣಿಸುವುದು ನನ್ನ ದೇಹ. ಅದನ್ನೇ ನಾನು ತಿನ್ನಬೇಕಾಗಿ ಬಂದಿತು! ನನ್ನ ಕರ್ಮಫಲವಿದು. ಸ್ವಾಮಿ, ಈ ಆಭರಣವನ್ನು ಸ್ವೀಕರಿಸಿ ನನ್ನನ್ನು ಈ ಕಷ್ಟದಿಂದ ಪಾರು ಮಾಡಿರಿ'' ಎಂದು ಬೇಡಿದನು. ಆತನಿಗೆ ಒಳ್ಳೆಯದಾಗಲೆಂದು ಹಾರೈಸಿ, ನಾನು ಆತನು ಕೊಟ್ಟ ಈ ಆಭರಣವನ್ನು ಸ್ವೀಕರಿಸಿದೆನು. ಸ್ವೀಕರಿಸಿದೊಡನೆ ಸರಸ್ಸಿನಲ್ಲಿ ತೇಲುತ್ತಿದ್ದ ಆತನ ಮನುಷ್ಯದೇಹವು ಅದೃಶ್ಯವಾಯಿತು. ಆ ದಿವ್ಯ ಪುರುಷನು ನನಗೆ ಪರಮಾನಂದದಿಂದ ನಮಸ್ಕರಿಸಿ, ವಿಮಾನದಲ್ಲಿ ಕುಳಿತು ಹೊರಟು ಹೋದನು. ರಾಘವ, ಈ ಪ್ರಕಾರವಾಗಿ ಈ ಆಭರಣವು ನನ್ನ ಕೈಸೇರಿತು.

೫. ದಂಡಕಾರಣ್ಯ

ಆ ಅರಣ್ಯದ ವಿಷಯವಾಗಿ ಶ್ರೀರಾಮನು ಪ್ರಶ್ನಿಸಲು, ಅಗಸ್ತ್ಯರು ಹೇಳಿದರು: ರಾಮ, ಕೃತಯುಗದಲ್ಲಿ ಧರ್ಮಪ್ರವರ್ತನೆಗಾಗಿ ಮನುವು ನಿಯಾಮಕನಾಗಿದ್ದನು. ಆತನು ತನ್ನ ಮಗನಾದ ಇಕ್ಷ್ವಾಕುವಿಗೆ ರಾಜ್ಯವನ್ನು ವಹಿಸಿ, ರಾಜಧರ್ಮವನ್ನು ಬೋಧಿಸಿ ಪ್ರಣವಾನು ಸಂಧಾನಪೂರ್ವಕವಾಗಿ ಬ್ರಹ್ಮಲೋಕವನ್ನೈದಿದನು. ಇಕ್ಷ್ವಾಕುವಿಗೆ ತೇಜಸ್ವಿಗಳಾದ ನೂರು ಮಂದಿ ಪುತ್ರರು ಜನಿಸಿದರು. ಅವರಲ್ಲಿ ಕಿರಿಯ ಮಗನು ಮೂರ್ಖನೂ ವಿದ್ಯಾವಿಹೀನನೂ ಆಗಿದ್ದನು. ಅವನ ಹೆಸರು ದಂಡ. ಆತನಿಗೆ ಇಕ್ಷ್ವಾಕುವು ವಿಂಧ್ಯಪರ್ವತದ ದಕ್ಷಿಣದಲ್ಲಿದ್ದ ಪ್ರದೇಶವನ್ನು ಕೊಟ್ಟು, ಅಧಿಪತಿಯನ್ನಾಗಿ ಮಾಡಿದನು. ದಂಡನು ಅಲ್ಲೊಂದು ನಗರವನ್ನು ಕಟ್ಟಿ, ಅದಕ್ಕೆ ಮಧುಮಂತ ಎಂದು ಹೆಸರಿಟ್ಟನು. ಆ ರಾಜನಿಗೆ ಶುಕ್ರಾಚಾರ್ಯನು ಗುರು. ದಂಡನು ರಾಜ್ಯಭಾರ ಮಾಡುತ್ತ ಒಂದು ದಿನ ವನದಲ್ಲಿ ಸಂಚರಿಸುತ್ತಿರಲು, ಸುಂದರಿಯಾದ ಒಬ್ಬ ತರುಣಿ

ಗೋಚರಿಸಿದಳು. ಆಕೆ ಯಾರೆಂದು ವಿಚಾರಿಸಿದಾಗ, ಶುಕ್ರಾಚಾರ್ಯನ ಮಗಳಾದ ಅರಜೆ ಎಂದು ಗೊತ್ತಾಯಿತು. ಮದೋನ್ಮತ್ತನಾದ ದಂಡನು ಬಲಾತ್ಕಾರದಿಂದ ಅವಳನ್ನು ಭೋಗಿಸಿದನು.

ರಘುನಂದನ, ಅರಜೆಯು ಅಳುತ್ತ ಬಂದು ತಂದೆಯ ಆಶ್ರಮದ ಬಳಿ ಕುಳಿತುಕೊಂಡಳು. ಶುಕ್ರಾಚಾರ್ಯನಿಗೆ ಈ ವಿಚಾರವು ತಿಳಿದು ರೋಷಾವಿಷ್ಟನಾದನು. ''ಈ ದಂಡನು ಗುರುವಾದ ನನ್ನನ್ನು ಲಕ್ಷಿಸದೆ ಘೋರವಾದ ಅಪರಾಧವನ್ನು ಮಾಡಿದ್ದಾನೆ. ಇನ್ನು ಏಳು ದಿನಗಳಲ್ಲಿ ಆ ಪಾಪಿಯು ಪರಿವಾರಸಹಿತನಾಗಿ ಸಾಯಲಿ! ಈ ರಾಜ್ಯದ ಮನೆ ಮಾರುಗಳೆಲ್ಲವೂ ಸುಟ್ಟು ಬೂದಿಯಾಗಲಿ!'' ಎಂದು ಶುಕ್ರನು ಶಪಿಸಿದನು. ಈ ವೃತ್ತಾಂತವು ತಿಳಿದು ಪ್ರಜೆಗಳೆಲ್ಲರೂ ಈ ರಾಜ್ಯವನ್ನು ಬಿಟ್ಟು ಹೊರಟುಹೋದರು. ದಂಡನು ಪರಿವಾರ ಸಹಿತನಾಗಿ ನಾಶವಾದನು. ಜನರಾರೂ ಇಲ್ಲದೆ ಬಹಳ ವರ್ಷಗಳಾದ್ದರಿಂದ ಈ ಪ್ರದೇಶವು ಅರಣ್ಯವಾಗಿ ಬೆಳೆದು ದಂಡಕಾರಣ್ಯವೆಂಬ ಹೆಸರನ್ನು ಪಡೆಯಿತು. ಕಾಲಕ್ರಮದಲ್ಲಿ ತಪಸ್ವಿಜನರು ಬಂದು ಇಲ್ಲಿ ನೆಲೆಸಿದ್ದರಿಂದ ಜನಸ್ಥಾನವೆಂಬ ಹೆಸರೂ ಪ್ರಚಲಿತವಾಯಿತು.

೬. ವೃತ್ರಾಸುರವಧೆ

ಲಕ್ಷ್ಮಣನು ಅಶ್ವಮೇಧಯಾಗವನ್ನು ಮಾಡಬೇಕೆಂದು ಸೂಚಿಸುತ್ತ ವೃತ್ರಾಸುರನ ವೃತ್ತಾಂತವನ್ನು ಶ್ರೀರಾಮನಿಗೆ ಹೇಳುತ್ತಾನೆ :

ರಘುನಾಥ, ಹಿಂದೆ ವೃತ್ರಾಸುರನೆಂಬವನು ಧರ್ಮನಿಷ್ಠೆಯಿಂದ ಈ ಪೃಥ್ವಿಯನ್ನು ಪಾಲಿಸುತ್ತಿದ್ದನು. ಆತನ ರಾಜ್ಯಭಾರದಲ್ಲಿ ಭೂಮಿಯು ಕಾಮಧೇನುವಾಗಿತ್ತು. ಅವನು ತನ್ನ ಮಗನಾದ ಮಧುರನನ್ನು ಪ್ರಜಾಪಾಲನೆಯ ಕಾರ್ಯದಲ್ಲಿ ನಿಯಮಿಸಿ ತಾನು ಕಠೋರವಾದ ತಪಸ್ಸಿನಲ್ಲಿ ತೊಡಗಿದನು. ದುಷ್ಟನಾದ ವೃತ್ರನು ತಪೋಬಲದಿಂದ ತನಗೆ ಇನ್ನೂ ಹೆಚ್ಚಾಗಿ ತೊಂದರೆ ಕೊಡುತ್ತಾನೆಂದು ನಿಶ್ಚಯಿಸಿ ಇಂದ್ರನು ಅದನ್ನು ಸಹಿಸಲಾರದೆ ದೇವತೆಗಳೊಡನೆ ವಿಷ್ಣುವಿನ ಬಳಿಗೆ ಹೋಗಿ ವೃತ್ರಾಸುರನನ್ನು ಕೊಲ್ಲಬೇಕೆಂದು ಬೇಡಿಕೊಂಡನು. ವಿಷ್ಣುವು ''ದೇವತೆಗಳೆ, ಒಂದು ಕಾಲದಲ್ಲಿ ವೃತ್ರನು ನನ್ನ ಅನುಗ್ರಹಕ್ಕೆ ಪಾತ್ರನಾಗಿದ್ದನು. ಅವನನ್ನು ನಾನೇ ನೇರವಾಗಿ ಕೊಲ್ಲುವುದು ಯುಕ್ತವಲ್ಲ. ನನ್ನ ತೇಜಸ್ಸಿನ ಒಂದಂಶವನ್ನು ಇಂದ್ರನಲ್ಲಿಯೂ ಅವನ ವಜ್ರಾಯುಧ ದಲ್ಲಿಯೂ ಇಡುತ್ತೇನೆ. ಭೂರಕ್ಷಣೆಗಾಗಿ ಭೂಮಿಯಲ್ಲಿಯೂ ಒಂದಂಶವನ್ನಿಟ್ಟಿರುತ್ತೇನೆ. ದೇವೇಂದ್ರ, ನೀನೇ ಹೋಗಿ ವೃತ್ರನನ್ನು ಸಂಹರಿಸು'' ಎಂದನು.

ಆಮೇಲೆ ದೇವೇಂದ್ರನು ತಪಸ್ಸು ಮಾಡುತ್ತಿದ್ದ ವೃತ್ರನಿದ್ದಲ್ಲಿಗೆ ಹೋಗಿ ವಜ್ರಾಯುಧದಿಂದ ವೃತ್ರನ ತಲೆಯ ಮೇಲೆ ಬಡಿದನು. ವೃತ್ರಾಸುರನು ಸತ್ತು ಹೋದನು. ಇಂದ್ರನ ಹಿಂದೆ ಬ್ರಹ್ಮಹತ್ಯೆಯು ಧಾವಿಸುತ್ತ ಹೋಯಿತು. ತ್ವಷ್ಟೃವೆಂಬ ಮುನಿಯು ಹೋಮ ಮಾಡಿದಾಗ ಆಹವನೀಯಾಗ್ನಿಯಿಂದ ವೃತ್ರನು ಹುಟ್ಟಿದನು. ಆದ್ದರಿಂದ ವೃತ್ರನು ಬ್ರಾಹ್ಮಣನೆಂದು ತಿಳಿಯಬೇಕು. ಆತನು ಸರ್ವಲೋಕಗಳನ್ನೂ ವಶಪಡಿಸಿಕೊಳ್ಳುತ್ತಾನೆಂದು ಇಂದ್ರನಿಗೆ ಅಸೂಯೆ ಹುಟ್ಟಿತ್ತು. ಬ್ರಹ್ಮಹತ್ಯಾ ದೋಷದಿಂದ ಆಕ್ರಾಂತನಾದ ದೇವೇಂದ್ರನು ಯಾರಿಗೂ ಕಾಣದಂತೆ ಓಡಿಹೋದನು. ಜಗತ್ತು ಅರಾಜಕವಾಯಿತು. ಮಳೆಯಿಲ್ಲದೆ ಪ್ರಾಣಿಗಳಿಗೆ ಕ್ಷೋಭೆಯುಂಟಾಯಿತು. ಇದೆಲ್ಲವನ್ನೂ ದೇವತೆಗಳು ವಿಷ್ಣುವಿನ ಬಳಿಗೆ ಮತ್ತೆ ಹೋಗಿ ನಿವೇದಿಸಿದರು. ವಿಷ್ಣುವು ''ದೇವತೆಗಳೆ, ಅಶ್ವಮೇಧಯಾಗವನ್ನು ನಡೆಸಿರಿ. ಇಂದ್ರನಿಗೆ ಬ್ರಹ್ಮಹತ್ಯಾದೋಷದ ಬಾಧೆಯಿಂದ ಬಿಡುಗಡೆಯಾಗುವುದು'' ಎಂದನು. ಅಂತೆಯೇ ದೇವತೆಗಳು ಅಶ್ವಮೇಧಯಾಗವನ್ನು ಮಾಡಿದರು. ಯಾಗವು ಸಮಾಪ್ತವಾದಮೇಲೆ ಬ್ರಹ್ಮಹತ್ಯೆಯು ಇಂದ್ರನನ್ನು ಬಿಟ್ಟು ದೇವತೆಗಳ ಬಳಿಗೆ ಬಂದು ''ಇನ್ನು ಮೇಲೆ ನಾನು ಎಲ್ಲಿರಬೇಕು?'' ಎಂದು ಕೇಳಿತು. ದೇವತೆಗಳ ಸೂಚನೆಯಂತೆ ಬ್ರಹ್ಮಹತ್ಯೆಯು ತನ್ನನ್ನು ನಾಲ್ಕು ವಿಭಾಗ ಮಾಡಿಕೊಂಡು ಮಳೆಗಾಲದಲ್ಲಿ ನೆರೆಬಂದಾಗ ನದಿಗಳಲ್ಲಿಯೂ, ಮರಳುಗಾಡಿನಲ್ಲಿಯೂ, ತಿಂಗಳಿಗೆ ಮೂರುದಿನಗಳ ವರೆಗೆ ಸ್ತ್ರೀಯರಲ್ಲಿಯೂ, ಬ್ರಾಹ್ಮಣರನ್ನು ಕೊಲ್ಲತಕ್ಕವರಲ್ಲಿಯೂ ಒಂದೊಂದು ಅಂಶದಿಂದ ನೆಲೆಸಿತು. ಹೀಗೆ ಅಶ್ವಮೇಧಯಾಗವನ್ನು ಮಾಡಿ ದೇವೇಂದ್ರನು ಬ್ರಹ್ಮಹತ್ಯಾದೋಷದಿಂದ ಮುಕ್ತನಾದನು. ಶ್ರೀರಾಮ, ಅಶ್ವಮೇಧದ ಮಹಿಮೆ ಈ ಪ್ರಕಾರವಾಗಿದೆ. ಇದನ್ನು ಮಾಡುವುದೊಳ್ಳೆಯದು – ಎಂದನು.

೭. ಇಲ, ಪುರೂರವ–ಇವರಿಬ್ಬರ ವೃತ್ತಾಂತ

ಆಗ ಶ್ರೀರಾಮನು ''ಲಕ್ಷ್ಮಣ, ನೀನು ಹೇಳಿದ್ದು ಸರಿ. ಈಗ ನಾನೊಂದು ಕಥೆಯನ್ನು ಹೇಳುತ್ತೇನೆ, ಕೇಳು'' ಎಂದು ಈ ಕಥೆಯನ್ನು ಹೇಳುತ್ತಾನೆ:

ಹಿಂದೆ ಕರ್ದಮ ಪ್ರಜಾಪತಿಯ ಪುತ್ರನಾದ ಇಲನೆಂಬ ವಿಖ್ಯಾತನಾದ ದೊರೆಯು ಬಾಹ್ಲೀಕದೇಶವನ್ನು ಪರಿಪಾಲಿಸುತ್ತಿದ್ದನು. ಧರ್ಮಾತ್ಮನೂ ಮಹಾಪರಾಕ್ರಮಿಯೂ ಆದ ಇಲನು ಒಂದು ದಿನ ಪರಿವಾರಸಹಿತನಾಗಿ ಅರಣ್ಯಕ್ಕೆ ಹೋಗಿ ಬೇಟೆಯಾಡುತ್ತಿದ್ದನು. ಅಲ್ಲಿ ತಿರುಗುತ್ತ ಕುಮಾರಸ್ವಾಮಿಯು ಜನಿಸಿದ

ಕುಮಾರಕ್ಷೇತ್ರಕ್ಕೆ ಹೋದನು. ಒಡನೆಯೇ ಅವನು ಪರಿವಾರದವರೂ ಸ್ತ್ರೀಯಾಗಿ ಬಿಟ್ಟರು! ಅದು ಪಾರ್ವತೀಪರಮೇಶ್ವರರು ವಿಹರಿಸುವ ಸ್ಥಳ. ಅಲ್ಲಿಗೆ ಹೋದವರು ಪಾರ್ವತಿಯ ಶಾಪದಿಂದ ಸ್ತ್ರೀಯರಾಗಿ ಬಿಡುತ್ತಿದ್ದರು.

ತನಗೂ ತನ್ನ ಪರಿವಾರದವರಿಗೂ ಆದ ದುರವಸ್ಥೆಯನ್ನು ಕಂಡು ಇಲನು ಶೋಕಾವಿಷ್ಟನಾದನು. ಅವನು ಕರುಣಾರ್ದ್ರ ಸ್ವರದಿಂದ ಪ್ರಾರ್ಥಿಸುತ್ತ ಪಾರ್ವತೀಪರಮೇಶ್ವರರನ್ನು ಮೊರೆಹೊಕ್ಕನು. ಅವರು ಪ್ರತ್ಯಕ್ಷರಾಗಲು ಇಲನು ಪಾರ್ವತೀ ದೇವಿಗೆ ಅಡ್ಡಬಿದ್ದು ''ತಾಯಿ, ನೀನು ಸಕಲ ವರಗಳನ್ನು ಕೊಡಲು ಶಕ್ತಳಾಗಿದ್ದೀಯೆ. ಸೌಮ್ಯದೃಷ್ಟಿಯಿಂದ ನನ್ನ ದುರವಸ್ಥೆಯನ್ನು ನೋಡಿ ಅನುಗ್ರಹಿಸು'' ಎಂದು ಬೇಡಿಕೊಂಡನು. ಆಗ ದೇವಿಯು ''ಇಲರಾಜ, ಬೇರೆ ಮಾರ್ಗವಿಲ್ಲ. ನೀನು ಒಂದು ತಿಂಗಳು ಸ್ತ್ರೀಯಾಗಿ, ಇನ್ನೊಂದು ತಿಂಗಳು ಪುರುಷನಾಗಿ ಇರುತ್ತೀಯೆ! ಹೀಗೆ ಪರಿವರ್ತನೆ ಆಗುತ್ತಿರುವುದು. ಪುರುಷನಾದಾಗ ಸ್ತ್ರೀತ್ವದ ಸ್ಮರಣೆಯಾಗುವುದಿಲ್ಲ. ಸ್ತ್ರೀಯಾಗಿದ್ದಾಗ ಪುರುಷತ್ವದ ಸ್ಮರಣೆಯಾಗುವುದಿಲ್ಲ'' ಎಂದು ಹೇಳಿ ಶಿವನೊಡನೆ ಅದೃಶ್ಯಳಾದಳು. ಈ ಪ್ರಕಾರ ಇಲನು ತ್ರಿಲೋಕಸುಂದರಿಯಾದ ನಾರಿಯಾಗಿ ಇಲಾ ಎಂಬ ಹೆಸರಿನಿಂದ ಸಂಚರಿಸುತ್ತಿದ್ದನು. ಅವನ ಪರಿವಾರದವರು ಸ್ತ್ರೀಯರಾಗಿಯೇ ಇರಬೇಕಾಯಿತು.

ಹೀಗಿರುವಾಗ ಚಂದ್ರನ ಮಗನಾದ ಬುಧನು ಇನ್ನೊಂದು ವನದಲ್ಲಿ ತಪಸ್ಸು ಮಾಡುತ್ತಿದ್ದನು. ಇಲೆಯು ಸಂಚರಿಸುತ್ತ ಅಲ್ಲಿಗೆ ಹೋದಳು. ಬುಧನು ಇವಳ ಸೌಂದರ್ಯಕ್ಕೆ ಮುಗ್ಧನಾಗಿ ತನ್ನನ್ನು ವರಿಸುವಂತೆ ಕೇಳಿದನು. ಇಲೆಯು ಒಪ್ಪಿದಳು. ಆಮೇಲೆ ಒಂದು ತಿಂಗಳಾಗಲು ಇಲೆಯು ಪುರುಷಾಕೃತಿಯನ್ನು ಪಡೆದು ಇಲರಾಜನಾದಳು! ಆತನಿಗೆ ತಾನು ಯಾರೆಂಬ ಸ್ಮರಣೆಯಾಯಿತು. ಆತನು ಬುಧನನ್ನು ಕುರಿತು ''ಮಹರ್ಷಿಗಳೆ, ನನ್ನ ಪರಿವಾರದವರು ಏನಾದರೆಂಬುದು ತಿಳಿಯುತ್ತಿಲ್ಲ. ನನ್ನ ಮಗನಾದ ಶಶಬಿಂದುವು ನನ್ನ ರಾಜ್ಯವನ್ನು ಪಾಲಿಸಲಿ. ನಾನು ನಿಮ್ಮ ಆಶ್ರಮದಲ್ಲಿಯೇ ಇರಲು ಅನುಮತಿಯನ್ನು ಕೊಡಿರಿ'' ಎಂದು ಕೇಳಿಕೊಂಡನು. ಬ್ರಹ್ಮವಾದಿಯಾದ ಬುಧನು ''ರಾಜ, ಹಾಗೆಯೇ ಮಾಡು ಇನ್ನು ಒಂದು ವರ್ಷದವರೆಗೆ ನೀನು ಇಲ್ಲಿಯೇ ನನ್ನ ಸೇವೆಯನ್ನು ಮಾಡಿಕೊಂಡಿದ್ದರೆ, ನಿನಗೆ ಶ್ರೇಯಸ್ಸನ್ನು ಉಂಟು ಮಾಡುವೆನು'' ಎಂದನು.

ಮೂರನೆಯ ತಿಂಗಳು ಇಳೆಯು ಗರ್ಭಿಣಿಯಾದಳು. ನವಮಾಸ ತುಂಬಿದ ಮೇಲೆ ಒಂದು ಗಂಡು ಮಗುವನ್ನು ಹೆತ್ತಳು. ಆ ಪುತ್ರನೇ ಪ್ರಸಿದ್ಧನಾದ

ಪುರೂರವನೆಂಬ ರಾಜನಾದನು. ಒಂದು ವರ್ಷವಾದ ಮೇಲೆ ಇಲನು ಪುರುಷನಾದ ಸಮಯದಲ್ಲಿ ಉದಾರಿಯಾದ ಬುಧನು ಕರ್ದಮ ಪ್ರಜಾಪತಿಯೇ ಮೊದಲಾದ ಮಹಾತ್ಮರನ್ನು ಸ್ಮರಿಸಿಕೊಂಡನು. ಅವರು ಪ್ರತ್ಯಕ್ಷರಾಗಲು ಇಲರಾಜನ ವೃತ್ತಾಂತವನ್ನು ತಿಳಿಸಿ, ಆತನ ಕಷ್ಟವನ್ನು ನೀಗಿಸಬೇಕೆಂದು ಪ್ರಾರ್ಥಿಸಿಕೊಂಡನು. ಆಗ ಕರ್ದಮ ಪ್ರಜಾಪತಿಯು ಸಲಹೆಯಂತೆ, ಋಷಿಗಳೆಲ್ಲರೂ ಸೇರಿ, ಅಶ್ವಮೇಧಯಾಗ ವನ್ನಾಚರಿಸಿದರು. ಯಾಗವು ಬುಧನ ಆಶ್ರಮದ ಬಳಿ ನಡೆಯಿತು. ಆ ಯಾಗದಿಂದ ಸಂತೃಪ್ತನಾದ ಶಿವನು ಪ್ರತ್ಯಕ್ಷನಾಗಿ ಋತ್ವಿಜರಾದ ಮುನಿಗಳನ್ನು ಕುರಿತು ''ನಿಮಗೆ ಬೇಕಾದ ವರವನ್ನು ಕೇಳಿಕೊಳ್ಳಿರಿ'' ಎಂದನು. ಆಗ ಮುನಿಗಳು ''ಪರಮೇಶ್ವರ, ಬಾಹ್ಲೀಕರಾಜನಾದ ಇಲನಿಗೆ ಪುರುಷತ್ವವು ಸ್ಥಿರವಾಗಿ ಉಳಿಯುವಂತೆ ಅನುಗ್ರಹಿಸು'' ಎಂದು ವರವನ್ನು ಬೇಡಿದರು. 'ತಥಾಸ್ತು' ಎಂದು ನುಡಿದು ಶಿವನು ಅಂತರ್ಹಿತನಾದನು.

ಅನಂತರ ಇಲನು ಬಾಹ್ಲೀಕದೇಶದಲ್ಲಿರಲು ಇಚ್ಛಿಸಲಿಲ್ಲ. ಅವನ ಮಗನಾದ ಶಶಬಂದುವಿಗೆ ಆ ರಾಜ್ಯವನ್ನು ವಹಿಸಿ ಮಗನಾದ ಪುರೂರವನೊಡನೆ ಪ್ರತಿಷ್ಠಾನ ವೆಂಬ ನಗರದಲ್ಲಿದ್ದು ಮಧ್ಯದೇಶಕ್ಕೆ ರಾಜನಾದನು. ಮುಂದೆ ಪುರೂರವನಿಗೆ ಆ ರಾಜ್ಯವು ಸೇರಿತು. ಅಶ್ವಮೇಧಯಾಗದ ಮಹಿಮೆಯಿಂದ ಇಲನಿಗೆ ಪುರುಷತ್ವವು ಸಿದ್ಧಿಸಿತು.

ಜನಾಪವಾದಕ್ಕೆ ಅಂಜಿ ಶ್ರೀರಾಮನು ತನ್ನ ಪತ್ನಿಯಾದ ಸೀತಾದೇವಿಯನ್ನು ಪರಿತ್ಯಜಿಸಿದ್ದು ಸರ್ವವಿದಿತ. ಗರ್ಭಿಣಿಯಾಗಿದ್ದ ಆ ಸಾಧ್ವಿಗೆ ಸಿಡಿಲಿನಂತೆ ಎರಗಿದ ಆ ವಿಪತ್ತನ್ನು ಕೇಳಿ ಕಣ್ಣೀರು ಸುರಿಸದ ಮನುಷ್ಯನಿಲ್ಲ. ಕಣ್ಣೀರು ಸುರಿಸದವನು ಮನುಷ್ಯನೂ ಅಲ್ಲ. ಆ ತಾಯಿಯ ಪರವಾಗಿ ಅನುಕಂಪೆಯ ಪ್ರವಾಹವು ಹರಿದದ್ದು ಸಹಜವೇ. ಆದರೆ ಶ್ರೀರಾಮನ ಪರಿಸ್ಥಿತಿಯನ್ನು ಚಿಂತಿಸಿ ಮರುಗಿದವರು ವಿರಳ. ತನ್ನ ಪ್ರಿಯ ಪತ್ನಿಯನ್ನು, ಕಳಂಕಲೇಶವೂ ಇಲ್ಲದ ಕಾಂತೆಯನ್ನು, ಅರಣ್ಯವಾಸದ ಸಹಭಾಗಿನಿಯನ್ನು ತಾನೇ ಹೊರದೂಡಬೇಕಾದ ದುರವಸ್ಥೆಯಿಂದ ಅವನು ಅನುಭವಿಸುತ್ತಿದ್ದ ಮನೋವ್ಯಥೆಯನ್ನೂ ಅವನ ನಿತ್ಯದ ಬಾಳನ್ನೂ ಅವನ ಕೊರಗನ್ನೂ ಪರ್ಯಾಲೋಚಿಸಿದವರು ಎಷ್ಟು ಜನರಿದ್ದಾರು? ಸಂಸಾರದ ಆಕರ್ಷಣೆ–ವಿಕರ್ಷಣೆಗಳಲ್ಲಿ, ಅನುರಾಗದ ಎಳೆದಾಟ–ಪರದಾಟಗಳಲ್ಲಿ ಶೋಕ ಸಂವೇದನೆಗಳಲ್ಲಿ ಗಂಡಸು–ಹೆಂಗಸೆಂಬ ಭೇದ ಉಂಟೇನು?

ಶ್ರೀರಾಮನ ಹೃದಯವೇದನೆಯನ್ನರಿತು ಸ್ಪಂದಿಸದ ಕವಿಗಳು ಯಾರು? ವಿಮರ್ಶಕರು ಯಾರು? ಸೂಕ್ಷ್ಮ ಸಂವೇದಿಯಾದ ಕಾಳಿದಾಸನು **''ಬುಭುಜೇ ಪೃಥಿವೀಪಾಲಃ ಪೃಥಿವೀಮೇವ ಕೇವಲಾಮ್''** ಎಂದು ರಘುವಂಶದಲ್ಲಿ ಉದ್ಗರಿಸಿದ್ದಾನೆ. **ಏವ, ಕೇವಲಾಮ್** – ಎಂಬೆರಡು ಶಬ್ದಗಳಿಂದ ಪೃಥಿವೀಪಾಲನ ವೈಯಕ್ತಿಕ ದುಃಖವನ್ನು ಅಭಿವ್ಯಂಜಿಸಿ ಸುಮ್ಮನಾಗಿದ್ದಾನೆ. ಅದನ್ನು ವಿಶದವಾಗಿ ವರ್ಣಿಸಿ ನಮ್ಮ ಹೃದಯದ ಆಳಕ್ಕೆ ತಟ್ಟಿಸಿ ಧನ್ಯನಾದವನು ಮಹಾಕವಿ ಭವಭೂತಿ. ಆತನು ಕರುಣರಸಾರ್ದ್ರವಾದ ಉತ್ತರರಾಮ ಚರಿತೆಯನ್ನು ರಚಿಸಿ, 'ಕಾವ್ಯರಸಿಕ'ರ 'ವಿಮರ್ಶಕ'ರ ಮಾನವನ್ನು ಉಳಿಸಿದ್ದಾನೆ.

ವಾಲ್ಮೀಕಿ ರಾಮಾಯಣದಷ್ಟು ಆನಂದಜನಕವಾದ ಪರಮಸುಂದರ ಮಹಾಕಾವ್ಯವು ಇನ್ನೊಂದಿಲ್ಲ. ಕಾಂತಾಸಂಮಿತೆಯಿಂದ ಇದು ನೀಡುವ ಜೀವನ ಮೌಲ್ಯದ ಅಪರಿಮಿತ ಉಪದೇಶಗಳೂ ಇನ್ನೊಂದರಲ್ಲಿಲ್ಲ. ಆದಿಯಿಂದ ಅಂತ್ಯದ ವರೆಗೂ ಓದುಗರ ಕುತೂಹಲವನ್ನು ಕೆರಳಿಸುತ್ತ, ಸಹೃದಯರ ಹೃದಯವನ್ನು ಸೂರೆಗೊಳ್ಳುವ ಇಷ್ಟು ವಿಸ್ತಾರವಾದ ಮಹಾಕಾವ್ಯವೂ ಇನ್ನೊಂದಿಲ್ಲ.

– ಪ್ರಸ್ತಾವನೆಯಿಂದ

ಪ್ರಕಾಶಕರು :

ರಾಮಾಯಣ ಪ್ರಕಾಶನ ಸಮಿತಿ

ನರಸಿಂಹರಾಜ ಕಾಲೊನಿ, ಬೆಂಗಳೂರು–560 019

ಬೆಲೆ : ರೂ. 160/–